|| ಶ್ರೀ ಲಕ್ಷ್ಮೀನೃಸಿಂಹಪರಬ್ರಹ್ಮಣೇ ನಮಃ ||

ಶ್ರೀ ಪರಾಶರ ಮಹರ್ಷಿ ಪ್ರಣೀತ

ಶ್ರೀ ವಿಷ್ಣುಪುರಾಣವು

ಕರ್ಣಾಟಕ ವಚನಕಾವ್ಯವು

ಪ್ರಚಾರಕರು
ಶ್ರೀ ಯಜ್ಞನಾರಾಯಣ ದೀಕ್ಷಿತರ್
ಶತಮಾನೋತ್ಸವ ಸಮಿತಿ
1595, ನಾಗಪ್ಪ ಬ್ಲಾಕ್, ಬೆಂಗಳೂರು-20

॥ ಶ್ರೀ ಲಕ್ಷ್ಮೀನೃಸಿಂಹಪರಬ್ರಹ್ಮಣೇ ನಮಃ ॥

ಶ್ರೀ ಪರಾಶರ ಮಹರ್ಷಿ ಪ್ರಣೀತ

ಶ್ರೀ ವಿಷ್ಣುಪುರಾಣವು

ಕರ್ಣಾಟಕ ವಚನಕಾವ್ಯವು

ಲೇಖಕರು

ಶ್ರೀ ಯಜ್ಞನಾರಾಯಣ ದೀಕ್ಷಿತರ್

ಶಾಂತಿಗ್ರಾಮ, ಹಾಸನ ಡಿಸ್ಟ್ರಿಕ್ಟ್

ಅನುಬಂಧಗಳು

ವಿದ್ವಾನ್ ಶ್ರೀನಿವಾಸ ದೇಶಿಕಾಚಾರ್

ಬೆಂಗಳೂರು

ಪ್ರಚಾರಕರು

ಸಕ್ರೇಪಟ್ಟಣದ ಶ್ರೀನಿವಾಸೈಯ್ಯಂಗಾರ್

ರಾವ್ ಬಹದ್ದೂರ್, ಬಿ.ಎ.,ಎಲ್.ಸಿ.ಇ.,

ಬೊಂಬಾಯಾಧಿಪತ್ಯದಲ್ಲಿ ಎಗ್ಸಿಕ್ಯುಟಿವ್ ಇಂಜನಿಯರಾಗಿದ್ದವರು

ಮೊದಲನೆಯ ಮುದ್ರಣ : 1928
ಎರಡನೆಯ ಮುದ್ರಣ : 1984

2000 ಪ್ರತಿಗಳು

This book is reprinted with the Financial Assistance of Rs. 5000 form TIRUMALA TIRUPATHI DEVASTHANAMS under their Scheme—Aid to Publish Religious Books.

ಬೆಲೆ ನೂವತ್ತು ರೂಪಾಯಿಗಳು

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು



॥ ಶ್ರೀರಾಮ ಪ್ರಸನ್ನ ।

ಶ್ರೀಮತೇ ಶ್ರೀವರದರಾಮಾನುಜ ಮಹಾಗುರವೇ ನಮಃ

ಶ್ರೀಮದ್ವಿಷ್ಣು ಪುರಾಣಂ

FOREWORD

PART I

1. I am writing this 'Introduction' in English also, for three reasons :

(i) This work is likely to be read by some Kannada scholars amongst Europeans also.

(ii) The patriotic reaction which has of late appeared in favour of the vernaculars, has not reached that stage of dislike for all productions in English amongst English knowing Kannadigas and there are yet some Kannadigas of my type, who have from their boyhood, due to conditions then obtaining, paid more attention to English than to vernaculars and therefore got into the habit of going through with greater avidity, literature garbed in the former than in the latter.

(iii) Finally, the subject-matter of the work is cosmopolitan and knows no artificial boundaries. I wish I had translated the whole work into English and opened to the whole world the eternal truths, embodied therein.

I feel, I must record on this occasion, the circumstances that have led me to undertake this 'kainkarya' ಕೈಂಕರ್ಯ or service, after an executive life of nearly twenty nine years in the Bombay P.W.D. This unavoidably leads me to speak briefly about my boyhood and school days. My late revered father, Sriman Vedanthachar Swami, who spent practically his whole active life in the clerical branch of the Mysore P.W.D., in the Districts of Tumkur and Bangalore, to whose personal love and care, from my eighth year when I lost my dear mother, I owe the solid foundation of my life. Having lost his father in his fifth year and with little

or no education worth the name and not having learnt Ramashabda ರಾಮಶಬ್ದ in his boyhood, he by sheer 'samskara' ಸಂಸ್ಕಾರ and the consequent association which it brings, with learned Shastris and Bhagavathars or saintly persons in towns and villages, where his life was cast, had understood the ತತ್ತ್ವಾರ್ಥ or the correct philosophical meaning of the Sri Valmiki Ramayana ಶ್ರೀ ವಾಲ್ಮೀಕಿ ರಾಮಾಯಣ, the Sri Bhagavadgita ಭಗವದ್ಗೀತ Sri Bhagavata ಭಾಗವತ the Sri Vishu Purana ವಿಷ್ಣು ಪುರಾಣ and some of the Dravida Prabandhas also. He remained unmarried after my dear mother's death, though only thirty-five and led a singularly saintly life in his own humble way and spent his retirement in the holy places in Mysore viz., Melkote, Srirangapatna, Grama, Belur, and Hampapur (Yedathore Tq.) He loved me intensely, being both father and mother to me in my boyhood and flooded me later regularly every week with the result of his studies in the Hindu sacred writings, which God has enabled me to go through leisurely in my retirement now. Such a great soul initiated me into the teachings of the Sri Bhagavadgitha ಶ್ರೀ ಭಗವದ್ಗೀತ. I believe in my ninth or tenth year and subsequnetly into, Sri Valmiki Ramayana ಶ್ರೀ ವಾಲ್ಮೀಕಿ ರಾಮಾಯಣ Sri Vishnu Purana ಶ್ರೀ ವಿಷ್ಣು ಪುರಾಣ before my sixteenth year, when I parted from his beside for higher English studies in Mysore, in the year 1895, naturally with intense grief. I am now by Divine favour in my 59th year and have while in service lived all over the Bombay Presidency, right up to British Baluchistan. Amidst all the turbulations and worries of official life, never, in my recollection, was there a day, since his initiation of me into the sacred books, when I failed to handle them and repeat at best a verse or two in them. I put this down in all humility to his very kind benedictions.

3. The second great soul who so kindly explained to me the holiness and universality of our vedic religion was the late Sriman Yogi Parthasarathi Aiyangar Swami, of Madras. This venerable saint happened to live temporarily in Tumkur, Mysore State, about the year 1889, where I providentially met him. During the interview, in presence of other visitors he so kindly expressed pointing to me, that he experienced on seeing me an inexplicable pleasure,

a pleasure which he had not felt amongst the children of his own household. He partly explained and gave me his English translations of the Mukundamala Sthothra ಮುಕುಂದ ಮಾಲ ಸ್ತೋತ್ರ by the great Kulasekharalwar ಕುಲಶೇಖರಾಳ್ವಾರ್, the Alawandar Sthothra–ಆಳ್ವಂದಾರ್ ಸ್ತೋತ್ರ by the great Yamunacharya and some part of the Sri Bhagavadgitha ಶ್ರೀ ಭಗವದ್ಗೀತ and Sri Vishnu Sahasranama Bhasya ಶ್ರೀ ವಿಷ್ಣು ಸಹಸ್ರನಾಮ ಭಾಷ್ಯ with profuse commentaries *all in English.* A study of these books under the initiation of the holy sage at an early age, viz., twenty, fortified my soul against all misrepresentations of our vedic religion and created in me a great respect for the same. This teaching was reinforced by another series of religious instructions I had from the same great saint early in 1892 when I visited Madras for the convocation, so much so, that till my retirement from the Bombay service by the end of Sept. 1924, my late revered father's weekly letters, containing the best of his religious studies and the venerable saints' teachings, were my referees in my religious studies while in active service.

4. The third person, who influenced my mind in this direction was not other than my late revered father-in-law, Sriman Kodaga Ranganna or Rangaswami Iyengar, who lived for nearly four decades in the eighties and nineties of the last century in Tumkur, Mysore State and retired from there as District Sheristadar. Though not a Sanskritist himself, he by his rare capacity of assimilating ideas, by coming in contact with many learned Pandits and his wide experience of our religious precepts and practices, had become a living encyclopedia of his day and was highly respected amongst those he lived and moved. His great benevolence, though himself a worshipper of Daridra Narayana ದರಿದ್ರ ನಾರಾಯಣ and his selfless spirit which pervaded all his actions, were object-lessons to me.

5. My late venerable father's intense love for my spiritual welfare did not end by the initiation he got me through our Swacharya ಸ್ವಾಚಾರ್ಯ the late Sriman Ramanuja Dikshitar Swami of Grama alone. He took me also about the year 1904 to Therne, near Thiruchanur (Tirupathi) where the sage, Sri Varada Ramanuja Mahadesikar, the

preceptor of the present Guru of Parakalamat at Mysore, His Holiness Sri Rangachar Swami and got me through him 'Prapathi' ಪ್ರಪತ್ತಿ or protection to my soul.

6. With this preparation for religious study and religious life, I passed nearly 29 years of executive life, without being jerked about from one civilization to another, unmoved by the passing fashions of my day and unaffected by the heterogenous surroundings I lived and moved in.

By the time I retired from service, love for money had distinctly ceased in me. The pension, God gave me, was more than the highest pay, I was entitled to, had I retired as Sub Engineer, first grade, the highest ambition of one who took up subordinate's service in British India in the nineties of the last century. Providence however, generously favoured me. I was promoted to the then Provincial Service and then soon after to the Imperial Service of Engineers and was accorded comparatively early, every honour to which the best subordinate and the best Indian officer of my rank was admitted. So, I said to myself on retiring, "I shall have no more money, i.e., "shall not render any more service *for payment* anywhere."

Being exceptionally fortunate in having come across nearly all the best European Engineers of my day, and having had rare opportunities of acquiring practical knowledge on public works of all kinds and having had energy still left in me to render a good account of my work, it would have given me intense satisfaction had a suitable opportunity been offered to me for placing, *without any remuneration*, that knowledge at the disposal of Mysore, the land of my birth and the country which gave me at its expense, all the higher general and technical education I own. Alas! I had not that satisfaction so far, but however after a six months tour in Mysore in 1925, I settled in Dharwar, a place where I started life as a subordinate and returned there to as Exec. Engineer of the District about six years before retirement. I selected it on account of its excellent climate, the facilities which it gave my sons for their education, entailing no change in universities and its proximity to Mysore, and took seriously to my studies. I found to my great satisfaction that there was a world of knowledge yet unhandled by me which could with profit engage my whole time. I went through the Sri Bhagavatha

ಶ್ರೀ ಮದ್ಭಾಗವತ twice with the help of the Kannada Prose version of the same by Sriman Alasingachar Swami of Madras. Being a constant reader of Sri Vishnu Purana ಶ್ರೀ ವಿಷ್ಣುಪುರಾಣ it struck me that both the Puranas dealt at most identically with the same subject and the latter being a compendium of the former, would if translated into vernaculars immensely benefit the lay readers, who may not find time to go through the twelve voluminous and difficult parts of the former. Similarly through the kindness of a lady relation of mine, Srimathi Sithammal of Basavangudi, Bangalore, who presented me the five parts of the Dravida Prabhandhas which are translations of our vedic texts into Tamil by our great Alwars for the benefit of the world, without any distinction of caste, creed or sex, I went through them all with the help of the Kannada rendering of the same, by the late Sriman M. B. Srinivasa Iyengar of the Mysore educational department and found myself immensely benefited. But for this venerable gentleman's troubles, it was impossible for me, a Tamilian born in Kannada Mysore and ignorant of Tamil literature to have any knowledge of the Tamil vedic texts, specially translated by the great Alwars into Tamil for the benefit of laymen like myself. Thus, I was highly impressed with the incalculable good, vernacular translations of our religious works, are likely to do to the general lay readers who have no opportunities of studying them in their originals, through their ignorance of the language and accordingly decided to bring out, to begin with, a Kannada prose edition of the Sri Vishnu Purana, to be followed by another in 'Marathi' later on, provided enquiries in Poona, Nasik, and other Marathi speaking centres revealed a real demand for the same.

By nature, I am a voracious reader of literature, both literary and technical. My taste for Kannada, Sanskrit and English are practically equal. Though retired, my avidity to read and make notes of Technical Journals on Engineering Industries and Agriculture has not abated. So, I had to hit upon a suitable 'ಪುರುಷಕಾರ' or helpmate in this holy endeavour. 'Shanthi Grama' is a village near Hassan, in Mysore where my ancestors both on my father's and mother's side lived and flourished and the descendents of

my Acharya or religious preceptor, the late Sriman Ramanuja Dikshitar Swami, still live. I wanted to do some service to my good old village. Accordingly, I suggested to his son and successor in office, Sriman Yagnya Narayana Dikshitar Swami, a Sanskrit scholar, if he could write out and give me a draft Kannada rendering of Sri Vishnu Purana ಶ್ರೀ ವಿಷ್ಣು ಪುರಾಣ, as a ಪಾರಮಾರ್ಥಿಕ ಕೈಂಕರ್ಯ or selfless service. He first hesitated and wished to try the translation of Harivamsha ಹರಿವಂಶ first, but after further consideration, he agreed. He had no regular grounding in Kannada while young, nor had he attempted such task before. But he did his very best by studying the commentaries of Sri Vishnu Chittaswami ಶ್ರೀ ವಿಷ್ಣು ಚಿತ್ತಸ್ವಾಮಿ and Sri Sridaraswami ಶ್ರೀ ಶ್ರೀಧರಸ್ವಾಮಿ and sent me all the draft translations of the six 'amshas' or parts, by about January 1927. I went through the first part and after suitable modifications, got it fair copied for print. As Dharwar summer was very severe in March, April and May last, I postponed further work till June succeeding. It was at Grama where I encamped the whole of that month, and went through the whole work, took his approval to the modifications proposed by me and despatched the manuscripts to Bangalore for print by the beginning of July 27. In referring to Sriman Yagna Narayana Dikshitar Swami's service in this connection, I must own that, to me it is an intense pleasure that my own Acharya's son, a permanent resident of my beloved village Grama and a local Sanskrit pandit, co-operated with me in the materialization of my humble idea, and to him it must be a life-long pleasure, in that his labours which are immortalized in print, will serve to spread spiritual light, among his disciples, present and future.

Now I must turn to another very important source of help, which Providence had prepared for me unawares, for carrying through my object to a successful end. Sriman Vijayaraghavachar Swami, retired Educational Inspector in Mysore, a distinguised graduate of his day, a renowned Sanskritist, a good Kannada and Tamil scholar, author of about half a dozen religious treatises and above all a devotee of God, was brought in close contact with me, in connection with a matrimonial alliance, which also was

materialized in Sri Laxmi Nrisimha's temple at Grāma in June 1927. On my casually opening this subject with him, he gave me full particulars about the intended publication and subsequently undertook to have it done under his kind supervision in Bangalore. Thus my business practically ended with supplying him with manuscript copies of the whole work, every other detail connected with the printing including looking over the proof sheets being managed by him. In addition to this he has at my special request, verified and corrected the work and amplified certain portions also. . Remembering, that he has his own cherished publication on hand, viz., the Kannada edition of Sri Vedantha Desikar's Sri Rahasyathrayasara–ಶ್ರೀ ಮದ್ರಹಸ್ಯತ್ರಯ ಸಾರ his selfless spirit, in voluntarily undertaking this additional service speaks for itself. To me, as already observed, it is a Providential arrangement, for I had no idea whatsoever, of help from this saintly quarter, when the manuscripts were in progress.

The drift of all that I have said and written above emphasizes from personal experience, the incalculable good done to the world by good translations of works in Sanskrit and in other languages into Kannada and other vernaculars and the immortal service rendered by such agencies. In thanking reverentially, according to holy tradition, all the Acharyas and venerable persons referred to above, who have so generously helped me in achieving my humble object, my mind at once goes to the great Saint Sri Nammalvar, who nearly, three thousand years ago translated into Tamil, the Four Vedas for the benefit of the world, without any distinction of caste, colour, creed or sex and I cannot do better than conclude the first part of this Introduction, in the words of the great Saint Madhurakavi Alwar ಮಧುರಕವಿ ಆಳ್ವಾರ್, devotee of Saint Sri Nammalwar :

ಪಯನನ್ರಾಕಿಲುಂ, ಪಾಂಗಲರಾಕಿಲುಂ,
ಶೆಯಲ್‌ನನ್ರಾಕತ್ತಿರುತ್ತಪ್ಪಣಿಕೊಳ್ವಾ
ಕುಯಿಲ್ನಿನ್ರಾಲ್ಪೊಳಿಲ್‌ಶೂಳ್ಕುರು ಕೂರ್ ನಂಬಿ
ಮುಯಲ್ಕಿನ್ರೇನುನ್ತನ್ಮೊಯ್‌ಕ್ಕಳಲ್ಕನ್ಬಯೇ"

Translation

With no idea of personal gain, but with the laudable object of correcting even the most indifferent person to better ways, Of Nammalwar thou hast converted many an unfit person to the Service of God and that of his devotees, O, Lord of Kurugur Nagari, thy influence is so great that even the cuckoos that enjoy their life in gardens close by, sing the same melodious songs recited by thee in thy Thiruvoimolee. For all this kindness, as a token of my utmost gratitude, pray accept my Pranamams at thy venerable feet.

RAO BAHADUR S. SRINIVASAENGAR,
RETIRED EXECUTIVE ENGINEER, (Bombay)
DHARWAR
Publisher

ಶ್ರೀರಾಮ

THE SRI VISHNU PURANA

FOREWORD

PART II

In this part, I shall briefly touch on the history of the Puranas in general, the place of the Vishnu Purana in them, the religious teachings in it, the history of the kings it deals with, as also the chronology and the geography thereof. The Vishnu Purana as stated in chapter six, amsa ಅಂಶ three thereof, and in chapter seven, skanda or part twelve of the Sri Maha Bhagavatha, is one of the eighteen recognized Puranas and a Maha Purana as well. For it deals with all the ten *'angas'* ಅಂಗಗಳು or divisions which eminent Pauraniks consider as necessary to justify such a classification viz.,—ಸರ್ಗ–Sarga creation by God, *direct*; ವಿಸರ್ಗ—Visarga creation by Chaturmukha Brahma ; ವೃತ್ತಿ—Vritti, creation of the inanimate world for the use of man and other living beings ; ರಕ್ಷೆ—rakshe, Avathars or incarnations of God ; ಮನ್ವಂತರಗಳು—Manvantharas—division of time or periods, when different Devathas Rishis etc. lived and flourished ; ವಂಶ—Vansha—the geneology of royal families, since Manu, in the past, present and future, ವಂಶಾನುಚರಿತ—Vamshanucharitha—the history of celebrated kings in each dynasty or race ; ಸಂಸ್ಥೆ—Samsthe—the destruction or marked changes in the world ; ಹೇತು—Hethu—the cause of creation, viz. the soul encumbered with sins—ಪ್ರಾರಬ್ಧಕರ್ಮ; ಅಪಾಶ್ರಯ—Apashraya—Parabrahma or the Supreme soul residing within the individual soul in the interior of creatures. For further details, the interested reader is referred to the original texts quoted above. The author of the Vishnu Purana is Parasara Maharshi, the twenty seventh Veda Vyasa, a name given to the author, who divides every ದ್ವಾಪರಯುಗ—Dwapara Yuga—the Veda into four parts, now

extant, viz. Rig, Yajur, Sama and Atharva. Of the eighteen Puranas the Brahma ಬ್ರಾಹ್ಮ—Purana is the first and is said to have preceded even the original Veda, before its division by Sriman Narayana Himself, into four parts, in tne very *first* ದ್ವಾಪರಯುಗ—Dwapara Yuga. As 'Yugas' advanced and Dharma ಧರ್ಮ sense of duty and morality and Gnana ಜ್ಞಾನ—power of realizing self and God-head, decreased, the subject matter of each Purana in every succeeding age though *same*, yet suffered in quality and dealt with fewer divisions only of Pauraniks. Therefore after a thorough examination of all the eighteen recognized Puranas, they are divided into two classes, viz. Maha—ಮಹ Puranas and Alpa—ಅಲ್ಪ Puranas, those dealing in all the ten divisions enumerated above being classified under the former and those dealing only in five divisions viz. ಸರ್ಗ-Sarga ; ವಿಸರ್ಗ-Visarga, ವಂಶ-Vamsha ; ಮನ್ವಂತರ-Manvanthara ! and ವಂಶಾನುಚರಿತ-Vamshanucharitha, under the latter. The Vishnu Purana is older than the Sri Bhagavatha, which was compiled in the twenty eighth Dwapara Yuga, by Sri Prasara Maharshi's son Sri Krishna Dwaipayana. Vedavyasa, the author of the famous, Sri Maha Bharatha of which the world-wide philosophical poem, The Lord's Song ಶ್ರೀ ಭಗವದ್ಗೀತ forms a part.

Now coming to the subject-matter dealt with in the Purana, we find it enunciated in the 'sloka' or verse that is by hoary tradition repeated by orthodox people before handling it :

"ತತ್ತ್ವೇನ ಯಶ್ಚಿದಚಿದೀಶ್ವರ ತತ್ಸ್ವಭಾವ
ಭೋಗಾಪವರ್ಗತದುಪಾಯ ಗತೀರುದಾರಃ ।
ಸಂದರ್ಶಯನ್ನಿರಮಿಮೀತ ಪುರಾಣರತ್ನಂ
ತಸ್ಮೈ ನಮೋ ಮುನಿವರಾಯ ಪರಾಶರಾಯ."

It deals with the three 'thathvas'—ತತ್ತ್ವಗಳು—"ಚಿದಚಿದೀಶ್ವರ" or ಜೀವಾತ್ಮ, ಪ್ರಕೃತಿ, ಪರಮಾತ್ಮ or the three problems, viz. Man, World and the Paramatma or the Eternal Soul or Parabrama with which every system of philosophy that is worked out completely has to deal and explains by a wealth of illustrations their respective ಸ್ವರೂಪ—Swarupa or

definition and ಸ್ವಭಾವ—Swabhava or nature with their relative relationship and means for their realization. The Bharathavarsha, which, in contradistinction to "ಭೋಗಭೂಮಿ" Bhogabhumi which the rest of the world is and which pursues after material prospeiity or wealth, includes the India of today, is specially designated "ಕರ್ಮಭೂಮಿ" Karma Bhumi or country where wealth has little attraction, the one object of birth in this land being the realization of the three problems, above-named and attainment of 'Moksha' ಮೋಕ್ಷ or complete freedom of the soul from Samsara-ಸಂಸಾರ-or incessant cycle of births and deaths. It is impressed also, that thc human body or ಮಾನುಷಜನ್ಮ is absolutely essential for the purpose and that no pains should be spared therefore for working out one's salvation or ಮೋಕ್ಷ in this life alone, lest ಸ್ಥಾವರಜನ್ಮ or the tenement of an inanimate being might overtake the Soul in case of failure. Then what are the 'Swarupa' and 'Swabhava' of the three fundamental problems, their relative relationship and means of their realization? They are as under:

(*a*) *God*, the *Internal Soul* or *Paramatma.*

He is that Being from whom, the creation, the maintenance and the destruction of the World takes place. He is the main source of Intelligence and Bliss and is both the material and instrumental cause of the world.

(*b*) *World* or Prakriti.

The World is *real* and is only a particular state or transformation of Para Brahman or Eternal-Soul and is *not* different from him. The Para Brahman possessing the forms of soul and matter ಚಿದಚಿದ್-in a *Subtle undistinguishable* or *unnamable* state, is the *cause* ಕಾರಣ and the *very same* Brahman when *transformed* into soul and matter *which are gross* ತ್ರಿಗುಣಾತ್ಮಕವಾದ ಪ್ರಕೃತಿ and can be *named separately*, is the *Effect* or ಕಾರ್ಯ— The world is created by the Intelligent God, possessed of wonderful powers. The *Suthrakara* does *not* believe in the 'Maya' philosophy put forward by Sri Shankaracharya.

(*c*) The Soul, its nature, size and relation to (*a*) Para Brahman :

Nature : The Soul is *not created* ; it is *eternal* and *immortal*. It is *not* inert but is itself, *intelligent* and is the *knower* ಸ್ವಯಂಪ್ರಕಾಶನು. Its size is *atomic* ಅಣು. It is being, intelligent, *pervasive* also, since the quality of intelligence is different from the soul just as smell is different from flower. The soul is the agent and is the sufferer owing to the limitations and environments viz. the material body and these his aspects are *not real at all*.

It is *different* from Para Brahman. *The attainment of 'Moksha'* or freedom of the individual soul from 'samsara' or endless cycle of births and deaths, is achieved through 'Gnana'–ಜ್ಞಾನ, 'Bhakti'–ಭಕ್ತಿ and Vairagya-ವೈರಾಗ್ಯ. 'Gnana is attained by the strict discharge of one's duties or ವರ್ಣಾಶ್ರಮ ಧರ್ಮಗಳು and association with 'Sadhus' or 'Yogis' or devotees of God, who are ceaselessly engaged in His services, viz 'ಧ್ಯಾನ' Dhyna or deep contemplation ಭಜನ–Bhajana–prayers in congregation, corresponding to 'ಶಾತ್ತುಮೊರೆ' amongst Sri Vaishnavas and ಕೀರ್ತನೆ–Kirthane or discourses on God with deep devotion. The pursuit of one's duties and constant association with 'Sadhus', with the help of a good Acharya or Guru who will initiate him into the three problems explained above, will unconsciously enable in due course the individual soul to realize that the relationship between the Eternal and Supreme Soul and itself is one of master and servant or 'ಶೇಷಶೇಷಿಭಾವ'. This course if persisted in, will next lead to ಭಕ್ತಿ–Bhakthi, where the individual soul *unconditionally* throws itself at the feet of the Eternal Soul, recognizes same as its only Saviour, treats and executes all duties as ordained by Him alone or 'ಆಜ್ಞಾ ಕೈಂಕರ್ಯ' with absolutely no personal interest in them or perfectly in a selfless spirit, and in short, recognizes that He is supreme and its function is one of *complete subordination*. This second stage if persisted in still further, will lead to the third stage or ವೈರಾಗ್ಯ where all desires are *dead*, and service nay selfless service *alone* remains. With this, *when*

the time comes the soul has 'ಸಮಾಶ್ರಯಣ' with the Eternal Soul and enjoys eternal Bliss and peace 'Sarupya', 'Salokya' and 'Sayujya'. This in short is what the philosophy of the three 'Thatvas' or problems of life as propounded by Sri Parasara Maharshi is.

A short review of the 'Karma' philosophy in this connection may not be out of place, especially that I have read time and again in some public utterances by highly placed educated men that the theory of a pre-ordained life which the philosophy inculcates, leads to, if accepted an inert existence, as there is no incentive to one's own exertion. This is exactly *not* the case. If this were true there was no occasion for Sri Krishna to deliver to Arjuna and through him to the world at large, the philosophy of the ಶ್ರೀ ಭಗವದ್ಗೀತೆ Sri Bhagavadgita, in the field of battle. What the philosophy really is, I shall repeat in Sri Krishna's own words: See Sri Githa, ch. 3, verse 33:

> ಸದೃಶಂಚೇಷ್ಟತೆಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ ।
> ಪ್ರಕೃತಿಂಯಾಂತಿ ಭೂತಾನಿನಿಗ್ರಹಃ ಕಿಂಕರಿಷ್ಯತಿ."

Translation

> "*Even* a 'Gnani' or yogi who has attained self-realization is perforce made to work according to his past karma; *all* beings are influenced by their past karma. What then can self-restraint do?"

It is obvious from the above, that it is impossible to be inert; one will be made to work in the direction past karma leads, *in spite of himself*. This only shows man's helplessness at times. Religion is a matter which each person has to settle for himself. It is a life study. Books are only means for acquiring religious knowledge, which has to be *verified*, *adjusted* and *consolidated* by one's own personal experience during his *whole* life time. There is no end to the acquisition of knowledge. *We live to learn.* I have found after a *thorough* test during my life time so far, that the 'karma' philosophy as expounded by Sri Krishna is *literally* and *wholly* true. If any one is sceptical about it, I would ask him to kindly note in his diary before starting work in the morning every day, his detailed programme

and then before going to bed at night, to note below his morning entry, the actual work accomplished and if any deviation, to note down the cause thereof, i.e., whether it was due to conditions written or beyond his control. If he does this accurately from day to day, there will be enough material at the end of a year, to draw correct inferences.

> "There are many things in Heaven and Earth,
> not dreamt of in our philosophy"

said Shakespeare in his Merchant of Venice. Therefore we must start with Faith. "The substance of things, hoped for, the evidence of things, not seen" in our hoary religion and test its efficacy in our life time, as may be humanly possible and not grow sceptical about well tried facts of experience, before taking sufficient pains to test the sames

These practically are the most important points, point. of the most absorbing interest dealt with, very concisely in the Purana. For expanded details, one must read the Sri Bhagavatha. There are many other instructive and readable portions in the Purana, which the reader can ascertain from the 'table of contents, where I have specially given the gist of each chapter to facilitate ready reference. Even apart from a religious view-point, the Purana is a mine of moral wealth as inculcated in the several 'Upakhyanas' or accounts of immortal Deva Bhaktas or Divine Devotees, like Prahlada, Dhruva, Prithvi, Bharatha, Saubhari, Mandhathru, Yayati and Syamantha. The incarnation and the 'Lilas' or extraordinary feats of Sri Krishna are fully dealt with also. In fact, as observed in Part I of the preface, the Purana is a compendium of the ಶ್ರೀಮದ್ಭಾಗವತ of ಶ್ರೀಕೃಷ್ಣ ದ್ವೈಪಾಯನ, ವೇದವ್ಯಾಸ—Sri Bhagavata and having preceded the latter, it served as a basis for the author's divine son to develop the same both in connotation and denotation to the form and extent in which we find the "Sri Bhagavata," today.

I feel, I must just touch in this first edition of the Purana, on the history of the time, when it was compiled, with the chronology and geography thereof from some references thereto, in parts or 'Anshas' two, three and four of the work. Mention is made of the nine Nanda Kings, Kautilya and Chandragupta, familiar names to

students of history. Again, when one reads the five 'angas' dealt with in what are classified as 'Alpa' ಅಲ್ಪ—Puranas we find that they have little connection with religion, beyond describing God's own creation ಬ್ರಹ್ಮಸೃಷ್ಟಿ or 'Sarga' and 'Visarga'. The other three parts pertain to contemporaneous history. So, it is clear that for the history of India before the pre-Buddhist period, our Puranas, Epics and Vedas are the only records the first named especially. During the last one hundred years, however, the progress in Oriental learning is no less wonderful than the developments of physical science. New realms of knowledge have been opened up. Epigraphy and numismatics have immensely contributed towards this widening, so much so that our entire outlook upon the early history of the human race is profoundly changed and modified. I am collecting materials on this most fascinating subject, which reveals the fundamental ideas upon which India's culture and civilization are built up. The Geography of Vatsyayana, as also an old map showing Ancient India are, I have learnt, available in Bhandarkar's Oriental Library, Poona. So, I shall. God willing, deal with this part of the Purana in much greater detail, in the next edition. I have only referred to it, to show how my thoughts are running and to create an interest in my readers for the subject.

As regards the probable date of the compilation of the Purana, my only authority is the late Sriman Lokamanya B.G. Tilak Maharaj's writings, which are based on astronomical and other mathematical data. It is about 3000 B.C. This point also, I shall treat in greater detail is the next edition.

Now, I must close. I am aware of the many short comings noticeable in this humble ಕೈಂಕರ್ಯ or service, undertaken as a pure work of love and trust my generous readers will view them with indulgence. Any remarks or criticisms, which they may be pleased to send me after a perusal of the work, will receive my careful attention in the next edition, God willing.

I shall pursue this work of publishing translations of the hidden literary wealth in Sanskrit and Tamil, for the benefit of the world so long as life lasts and it is my sincere wish that it may be continued thereafter also under

God's Providence. Sri Nammalvar's "Thiruvai Mulai" Dravida Upanishads have not I hear been rendered into Kannada. It is my earnest wish that the idea may be materialized. May God see to it.

With these observations, I commend this humble translation of Sri Parasara Maharshi's Sri Vishnu Purana to the kind perusal of my generous readers.

"Atchuta Priyatham"

"ಅಚ್ಯುತ ಪ್ರಿಯತಾಂ"

Dharwar — SAKREPATNA

29th January 1928 — SRINIVASA AIYANGAR

॥ ಶ್ರಿಯೈ ನಮಃ ॥

ಶ್ರೀಮತೇ ರಾಮಾನುಜಾಯನಮಃ

ಶ್ರೀ ವಿಷ್ಣುಪುರಾಣ ಕನ್ನಡ ವಚನಗಳು

ಪ್ರಸ್ತಾವನೆ ಅಥವಾ ಅವತರಣಿಕೆ

ಮೊದಲನೆಯ ಭಾಗ

ಸಾಧ್ವಿ, ಸಾಧುಗಳಿರಾ :

ಈ ಕಿಂಚಿತ್ಕೈಂಕರ್ಯವನ್ನು ದಾಸನಾದ ನಾನು ಮುಂಬೈ ಆಧಿಪತ್ಯದಲ್ಲಿ ಸುಮಾರು ಇಪ್ಪತ್ತೊಂಬತ್ತು ವರ್ಷಗಳು ಮರಹಮ್ಮತ್ ಇಲಾಖೆಯಲ್ಲಿ ಉದರ ಭರಣಾರ್ಥವಾಗಿ ದುಡಿದನಂತರ, ಕೈಯ್ಯಗೊಳ್ಳಲು ಸಹಕಾರಿಗಳಾದ ಕೆಲವು ವಿಷಯಗಳನ್ನು ಸಂಕ್ಷೇಪವಾಗಿ ಈ ಸಂದರ್ಭದಲ್ಲಿ ತಿಳಿಸಲು ಅವಶ್ಯವಿರುತ್ತದೆ. ಇದಕ್ಕೆ ಸಂಬಂಧಪಟ್ಟ ನನ್ನ ಬಾಲ್ಯವೃತ್ತಾಂತವನ್ನೂ ಸ್ವಲ್ಪಮಟ್ಟಿಗೆ ಹೇಳುವುದು ವಿಧಿಯಿಲ್ಲದೆ ಅತ್ಯಾವಶ್ಯಕವಾಗಿರುತ್ತದೆ. ದಾಸನ ತೀರ್ಥರೂಪುರವರು, ಶ್ರೀಮಾನ್ ವೇದಾಂತಾಚಾರ್ ಸ್ವಾಮಿ ಎಂಬುವರು. ಇವರಿಗೆ ಬಾಲ್ಯದಲ್ಲಿಯೇ ಪಿತೃವಿಯೋಗವಾಗಲು, ವಿದ್ಯಾಭ್ಯಾಸ ಮುಂತಾದ ಅನುಕೂಲಗಳಿಲ್ಲದೆ ಹೋಯಿತು. ಇವರ ಜೀವಮಾನಕಾಲದಲ್ಲಿ, ಮೈಸೂರು ಸಂಸ್ಥಾನದಲ್ಲಿನ, ತುಮಕೂರು, ಬೆಂಗಳೂರು ಎಂಬ ಪ್ರಾಂತ್ಯಗಳಲ್ಲಿ ಮರಹಮ್ಮತ್ ಇಲಾಖೆಯಲ್ಲಿ, ವಿಶ್ರಾಂತಿಕಾಲ ಬರುವವರೆವಿಗೂ ಕೆಲಸಮಾಡಿದರು. ಇವರಿಗೆ ಬಾಲ್ಯದಲ್ಲಿ ವಿದ್ಯಾಭ್ಯಾಸವೇನೂ ಇಲ್ಲದಿದ್ದಾಗ್ಯೂ 'ಸಂಸ್ಕಾರ' ಬಲಿಯದಿಂದ, ಇವರು ಜೀವಿಸುತ್ತಿದ್ದ ಸ್ಥಳಗಳಲ್ಲಿ ಕೆಲವು ಜ್ಞಾನಿಗಳ ಮತ್ತು ವೇದಮೂರ್ತಿಗಳಾದ ಪಂಡಿತ ಮಹನೀಯರ ಸಹವಾಸ ದೊರೆಯಿತು. ಈ ಸತ್ಸಹವಾಸದಿಂದ, ಇವರು ಶ್ರೀ ಭಗವದ್ಗೀತೆ, ಶ್ರೀ ವಾಲ್ಮೀಕಿರಾಮಾಯಣ, ಶ್ರೀ ವಿಷ್ಣುಪುರಾಣ, ಶ್ರೀಮದ್ಭಾಗವತ, ಈ ಗ್ರಂಥಗಳನ್ನು ಚನ್ನಾಗಿ ಸಂಗ್ರಹಿಸಿದುದಲ್ಲದೆ, ವಿಶ್ರಾಂತಿ ಹೊಂದಿದನಂತರ ಕೆಲವು 'ತಮಿಳು' ಗ್ರಂಥಗಳು,

ಅಂದರೆ, ರಹಸ್ಯತ್ರಯಸಾರ, ದ್ರಾವಿಡ ಪ್ರಬಂಧಗಳಲ್ಲಿ, ಪೂರ್ವಾಚಾರ್ಯರು ಕ್ರೋಡೀಕರಿಸಿ ಎಲ್ಲರೂ ನಿತ್ಯವೂ ಅನುಷ್ಠಾನಮಾಡುವುದಕ್ಕೆ ಅನುಕೂಲ ವಾಗಿರುವಂತೆ ಸಂಗ್ರಹಿಸಿರುವ, "ನಿತ್ಯಾನುಸಂಧಾನ" ಗ್ರಂಥಗಳನ್ನೂ ಭಾಷ್ಯ ಸಹಿತ ಸಂಗ್ರಹಿಸಿ, ತಪ್ಪದೆ ಪ್ರತಿದಿನವೂ ಅನುಷ್ಠಾನಮಾಡುತಿದ್ದು, ತಮ್ಮ ವಿಶ್ರಾಂತಿ ಜೀವಮಾನವನ್ನೆಲ್ಲಾ ಮೈಸೂರು ದೇಶದಲ್ಲಿನ ಕ್ಷೇತ್ರವಾಸಗಳು, ಕಾವೇರಿ ತೀರಗಳು, ಅಂದರೆ, ಮೇಲುಕೋಟೆ, ಶ್ರೀರಂಗಪಟ್ಟಣ, ಹಂಪಾಪುರ, ಎಡತೊರೆ, ಶಾಂತಿಗ್ರಾಮ, ಬೇಲೂರು, ಇಲ್ಲಿನ ದೇವರ ಸನ್ನಿಧಿಗಳಲ್ಲಿ ಕಳೆದರು. ಈ ಮಹನೀಯರಿಗೆ ತಮ್ಮ ಮೂವತ್ತೈದನೆಯ ವರ್ಷ ಸುಮಾರಿನಲ್ಲಿ ಶ್ರೀರಂಗ ಯಾತ್ರೆಗೆ ಹೋಗಿದ್ದಾಗ ಶ್ರೀರಂಗ ಕ್ಷೇತ್ರದಲ್ಲಿ, ಕ್ರಿ.ಶ. 1876ರಲ್ಲಿ, ಪತ್ನಿ ವಿಯೋಗವಾಯಿತು. ಆ ಕಾಲದಲ್ಲಿ ದಾಸನಾದ ನನಗೆ ಗರ್ಭಾಷ್ಟಮ ವಯಸ್ಸು. ಇವರು ಪೂರ್ವವಯಸ್ಸಿನಲ್ಲಿದ್ದಾಗ್ಯೂ, ಪುನರ್ವಿವಾಹ ಮುಂತಾದ ಯೋಚನೆ ಗಳನ್ನೊಂದನ್ನೂ ಮಾಡದೆ, ದೇವರು ತಮಗೆ ಅನುಗ್ರಹಿಸಿದ ನಾಲ್ಕು ಮಕ್ಕಳ ಕ್ಷೇಮಚಿಂತನೆಯನ್ನು ನೋಡಿಕೊಂಡಿರುವುದರಲ್ಲಿಯೇ ತೃಪ್ತರಾದರು. ಆದುದ ರಿಂದ ಇವರೊಬ್ಬರೇ ನನಗೆ ಬಾಲ್ಯಾರಭ್ಯ ಮಾತಾಪಿತೃಗಳಿಬ್ಬರೂ ಆಗಿ ಪರಿಣಮಿಸಿದರು. ಹಿಂದೂ ಧರ್ಮಪ್ರಕಾರ ನನಗೆ ಎಂಟನೆಯ ವರ್ಷದಲ್ಲಿ ಉಪನಯನವನ್ನೂ ಹನ್ನೊಂದನೆಯ ವರ್ಷದಲ್ಲಿ ವಿವಾಹವನ್ನೂ ಮಾಡಿ, ಅವರು ತತ್ಕಾಲದಲ್ಲಿ ವಾಸಿಸುತ್ತಿದ್ದ, ತುಮಕೂರೆಂಬ ಪಟ್ಟಣದಲ್ಲಿದ್ದ, ಸಂಸ್ಕೃತ, ಕನ್ನಡ, ಇಂಗ್ಲಿಷ್ ಪಾಠಶಾಲೆಗಳಲ್ಲಿ ನನಗೆ ವಿದ್ಯಾಭ್ಯಾಸಮಾಡಿಸಿದುದಲ್ಲದೆ, ಮನೆಯಲ್ಲಿಯೂ ಸಂಸ್ಕೃತ ಪಂಡಿತರ ಮೂಲಕ ವಿಶೇಷ ವಿದ್ಯಾಭ್ಯಾಸವನ್ನು ಮಾಡಿಸಿ, ಸುಮಾರು ದಾಸನ ಒಂಬತ್ತು ವರ್ಷ ಪ್ರಾಯದಲ್ಲಿಯೇ, ಶ್ರೀ ಭಗವದ್ಗೀತೆ ಎಂಬ ಗ್ರಂಥವನ್ನುಪದೇಶಿಸಿ, ಹದಿನೈದನೆಯ ವರ್ಷದಲ್ಲಿ ಅಂದರೆ ಕ್ರಿ.ಶ. 1885ನೆಯ ಪ್ರಾರಂಭದಲ್ಲಿ ನಾನು ವಿಶೇಷ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಹೊರಡುವುದಕ್ಕೆ ಮುಂಚೆಯೇ, ಶ್ರೀ ವಾಲ್ಮೀಕಿರಾಮಾಯಣ, ಶ್ರೀ ವಿಷ್ಣುಪುರಾಣ ಗ್ರಂಥಗಳನ್ನುಪದೇಶಮಾಡಿದರು. ಈ ಮಹನೀಯರನ್ನಗಲಿ ಮೈಸೂರಿಗೆ ಹೊರಡಲು ಅತಿ ದುಃಖಕರವಾದ ವಿಷಯವಾಯಿತು. ತದಾರಭ್ಯ, ಇವರು, ಈಗ ಇಪ್ಪತ್ತೊಂದು ವರ್ಷಗಳ ಕೆಳಗೆ, ಕ್ರಿ.ಶ. 1907ರಲ್ಲಿ ಶ್ರೀರಂಗ ಪಟ್ಟಣದಲ್ಲಿ ಶ್ರೀರಂಗನಾಥನ ಪಾದವನ್ನು ಹೊಂದುವವರಿವಿಗೂ, ತಪ್ಪದೆ ವಾರ ಕ್ಕೊಂದಾವರ್ತಿ, ಒಂದು ಶ್ರೀಮುಖವನ್ನು ಅನುಗ್ರಹಿಸುತ್ತಿದ್ದರು. ಅವುಗಳಲ್ಲಿ ಆಧ್ಯಾತ್ಮ ವಿಷಯಗಳು ವಿನಾ, ಸಾಂಸಾರಿಕ ಪ್ರಸ್ತಾಪಗಳು ಅಪರೂಪ. ದಾಸನು ಮೈಸೂರು, ಬೆಂಗಳೂರು ಪಟ್ಟಣಗಳಲ್ಲಿನ ಪ್ರೌಢವಿದ್ಯಾಶಾಲೆಗಳಲ್ಲಿನ

ಇಂಗ್ಲಿಷ್ ವಿದ್ಯೆಯನ್ನು ಮೈಸೂರು ಸರಕಾರದ ವೇತನಗಳ ಮೂಲಕ ಹೊಂದಿ, ನಂತರ ಆ ಸಹಾಯದ ದ್ವಾರವೇ, ಪುಣೆಯಲ್ಲಿ ಮರಹಮ್ಮತ್ ಇಲಾಖೆಗೆ ಸಂಬಂಧಪಟ್ಟ ಶಿಲ್ಪಶಾಸ್ತ್ರ ಕಲೆಗಳನ್ನು ಸಂಗ್ರಹಿಸಿ, ಮುಂಬೈ ಆಧಿಪತ್ಯದಲ್ಲಿಯೇ ಉದರಭರಣಾರ್ಥವಾಗಿ ದುಡಿಯಲುಪಕ್ರಮಿಸಿ, ಬ್ರಿಟಿಷ್ ಇಂಡಿಯ ದೇಶಕ್ಕೆ ವಾಯುವ್ಯ ಮೇರೆಯಾದ, ಬ್ರಿಟಿಷ್ ಬಲೂಚಿಸ್ಥಾನದವರೆವಿಗೂ ಉದ್ಯೋಗ ಕರ್ತವ್ಯ ಸಂಬಂಧದಿಂದ ಅಲೆದು, ಬಹಳ ಕಷ್ಟಗಳನ್ನನುಭವಿಸಿದುದಾಗ್ಯೂ, ಈ ಮಹನೀಯರ ಉಪದೇಶಾನುಗ್ರಹ ಬಲಿಯಗಳಿಂದ "ಶ್ಲೋಕಂ, ಶ್ಲೋಕಾರ್ಥ ಮೇವವ" ಎಂಬುವ ಪ್ರಕಾರ, ಮೇಲೆ ಹೇಳಿದ ಗ್ರಂಥಗಳ ಪಾರಾಯಣವು ಒಂದು ದಿನಸವಾದರೂ, ಇದುವರಿವಿಗೂ, ಅಂದರೆ—ದಾಸನ 58 ವರ್ಷ 4 ತಿಂಗಳು ವಯಸ್ಸಿನವರಿವಿಗೂ ತಪ್ಪಲಿಲ್ಲ. ಆದುದರಿಂದ ದಾಸನಿಗೆ ಆಧ್ಯಾತ್ಮ ವಿಷಯದಲ್ಲಿ ಆಶಕ್ತಿಯುಂಟಾಗಲು ಮಾನುಷಯೋಚನೆಯಲ್ಲಿ ದಾಸನ ಪಿತೃಗಳಾದ ಶ್ರೀಮಾನ್ ವೇದಾಂತಾಚಾರ್ಯ ಸ್ವಾಮಿಯವರ ಮಹತ್ಕೃಷಿಯೇ ಪ್ರಥಮ ಮತ್ತು ಮುಖ್ಯ ಕಾರಣ.

ಎರಡನೆಯ ಕಾರಣವು: ಶ್ರೀಮಾನ್ ಯೋಗಿ ಪಾರ್ಥಸಾರಥ್ಯೈಯ್ಯಂಗಾರ್‍ರೆಂಬ ಮಹನೀಯರು ಮದರಾಸಿನಲ್ಲಿ ಹೈಕೋರ್ಟು ವಕೀಲರಾಗಿದ್ದು, ಅನಂತರ ವಿರಕ್ತಿಯನ್ನು ಹೊಂದಿ, ನಮ್ಮ ಹಿಂದು ಮತ ಗ್ರಂಥಗಳನ್ನು ಇಂಗ್ಲಿಷ್ ಭಾಷೆಗೆ ತರ್ಜುಮೆಮಾಡಿ, ಅವುಗಳ ಅಮೌಲ್ಯವಾದ ಮಹಾತ್ಮೆಯನ್ನು ವ್ಯಕ್ತಪಡಿಸಬೇಕೆಂದು ದೀಕ್ಷೆಯನ್ನೇ ಅಂಗೀಕರಿಸಿ ಶ್ರೀ ಭಗವದ್ಗೀತೆ, ಶ್ರೀ ವಿಷ್ಣು ಸಹಸ್ರನಾಮ ಭಾಷ್ಯ, ಶ್ರೀ ಆಳವಂದಾರ್ ಸ್ತೋತ್ರ, ಶ್ರೀ ಮುಕುಂದಮಾಲಾ ಸ್ತೋತ್ರ, ಈ ಮುಂತಾದ ತತ್ವರಹಸ್ಯಗರ್ಭಿತವಾದ ಮೋಕ್ಷಗ್ರಂಥಗಳನ್ನು ಇಂಗ್ಲಿಷ್ ಭಾಷೆಗೆ ಕೆಲವನ್ನು ಪೂರ್ಣವಾಗಿಯೂ, ಕೆಲವನ್ನು ಅರ್ಥವಾಗಿಯೂ, ಪದ್ಯರೂಪವಾಗಿ ತರ್ಜುಮೆಮಾಡಿ ಕಾರ್ಯಕಾರಣಗಳಿಂದ, ಸ್ವಲ್ಪ ದಿನಗಳ ಮಟ್ಟಿಗೆ ಮೈಸೂರು ದೇಶದಲ್ಲಿನ ತುಮಕೂರೆಂಬ ಪಟ್ಟಣದಲ್ಲಿ "ನಲ್ಲಪ್ಪನ ಛತ್ರದಲ್ಲಿ" ಕ್ರಿ.ಶ. 1889ರಲ್ಲಿ ದಯಮಾಡಿಸಿದಾಗ, ದಾಸನ ಮಾವಂದಿರ ಜೊತೆಯಲ್ಲಿ, ಅವರ ಸಮಾಶ್ರಯಣವು ಲಭಿಸಿತು. ಆ ಕಾಲದಲ್ಲಿ ಇನ್ನೂ ಇತರರೂ ಇದ್ದರು. ಆ ಮಹಾನುಭಾವರು ದಾಸನನ್ನು ನೋಡಿ "ಈತನನ್ನು ನೋಡಿದರೆ ನನಗುಂಟಾಗುವ ವಾತ್ಸಲ್ಯವು ಅತಿವಿಶೇಷವಾಗಿರುತ್ತದೆ. ನಮ್ಮ ಮನೆಯ ಮಕ್ಕಳಲ್ಲಿ ಯಾರಲ್ಲಿಯೂ ಈ ಪ್ರೀತಿ ತೋರಲಿಲ್ಲ" ಎಂದು ಹೇಳಿ, ದಾಸನಿಗೆ ತಾವು ಅದುವರಿವಿಗೂ ಇಂಗ್ಲಿಷ್ ಭಾಷೆಗೆ ತರ್ಜುಮೆಮಾಡಿದ್ದ ಗ್ರಂಥಗಳನ್ನೆಲ್ಲಾ ಉಪದೇಶಮಾಡಿ, ಆ ಗ್ರಂಥಗಳನ್ನು ದಾಸನಿಗೆ ಅನುಗ್ರಹಿಸಿದರು. ಅಲ್ಲದೆ,

ದಾಸನು ಮದರಾಸಿಗೆ ಕ್ರಿ.ಶ. 1892ರ ಪ್ರಾರಂಭದಲ್ಲಿ "Convocation" ಎಂಬ "ವಿಶ್ವವಿದ್ಯಾನಿಲಯ ಸಭೆಗೆ" ಹೋಗಿದ್ದಾಗ ಪುನಃ ಆಗ ಅಲ್ಲಿ ದಯ ಮಾಡಿದ್ದ ಇದೇ ಮಹನೀಯರನ್ನು ಪುನಃ ಸೇವಿಸಿದಾಗ, ಅತಿ ಸಂತೋಷಪಟ್ಟು, ತಾವು ಈಚೆಗೆ ಮಾಡಿದ ಇಂಗ್ಲಿಷ್ ಭಾಷಾಂತರಗಳನ್ನೂ ಅನುಗ್ರಹಿಸಿದರು. ಈ ಮಹನೀಯರ ಸಮಾಶ್ರಯಣವೂ ದಾಸನ 20ರಿಂದ 22 ವರ್ಷಗಳ ಮಧ್ಯೆ ಲಭಿಸಿದುದರಿಂದಲೂ, ಆ ಉಪದೇಶದ ಪ್ರಭಾವದಿಂದಲೂ, ನಮ್ಮ ವೇದ ಸಮ್ಮತವಾದ ಆರ್ಯಮತದಲ್ಲಿ ವಿಶೇಷ ಪ್ರೀತಿಯೂ, ನಿಶ್ಚಲವಾದ ಶ್ರದ್ಧೆಯೂ ಉಂಟಾಯಿತು. ದಾಸನು ಮುಂಬೈ ಸರಕಾರದಲ್ಲಿ ಇಪ್ಪತ್ತೊಂಬತ್ತು ವರ್ಷಗಳು ಉದ್ಯೋಗಮಾಡಿದ ಕಾಲದಲ್ಲೆಲ್ಲಾ, ಈ ಮಹಾನುಭಾವರು ಅನುಗ್ರಹಿಸಿದ ಭಾಷಾಂತರಗಳೂ, ದಾಸನ ಯಜಮಾನರು ಅನುಗ್ರಹಿಸುತ್ತಿದ್ದ ಪ್ರತಿವಾರದ ಆಧ್ಯಾತ್ಮ ವಿಷಯಗರ್ಭಿತವಾದ ಶ್ರೀಮುಖಗಳೇ, ಮತವಿಷಯಗಳ ಜಿಜ್ಞಾಸಕ್ಕೆ ಬಹು ಉಪಯುಕ್ತಗಳಾದವು.

ಮೂರನೆಯ ಕಾರಣವು: ಈ ಆಧ್ಯಾತ್ಮ ವಿಷಯದಲ್ಲಿ, ದಾಸನ ಮನಸ್ಸು ಸ್ಥೈರ್ಯವನ್ನು ಹೊಂದಲು, ಮೂರನೆಯ ಕಾರಣವಾಗಿ ಪರಿಣಮಿಸಿದ್ದು, ದಾಸನ ಶ್ವಶುರರಾದ ಶ್ರೀ|| ಕೊಡಗು ರಂಗಣ್ಣನವರ (ರಂಗಸ್ವಾಮ್ಯೆಯ್ಯಂಗಾರ್ರವರು) ಸತ್ಸಹವಾಸವು. ಇವರು ತುಮಕೂರಿನಲ್ಲಿ ಸುಮಾರು ನಾಲ್ವತ್ತು ವರ್ಷಕಾಲ ಕ್ರಿ.ಶ. 1880–1920ರ ವರಿವಿಗೂ ವಾಸಮಾಡುತ್ತಿದ್ದರು. ದಾಸನ ವಿವಾಹವು ಕ್ರಿ.ಶ. 1881ರಲ್ಲಿ ಭಗವದಾಜ್ಞೆಯಾ ನೆರವೇರಿತು. ಇವರು ವಿಶ್ರಾಂತಿ ಹೊಂದುವ ವರಿವಿಗೂ, ಡಿಸ್ಟ್ರಿಕ್ಟ್ ಕಛೇರಿಯಲ್ಲಿ, ಹೆಡ್‌ರೈಟರ್, ರೆವೆನ್ಯೂ ಶಿರಸ್ತೆದಾರ್ ಕೆಲಸಗಳಲ್ಲಿದ್ದರು. ಇವರು ವಿದ್ಯಾವಂತರಲ್ಲ. ಬಹಳ ಕಷ್ಟವನ್ನು ನೋಡಿದವರು. ಬಹಳ ಶಿಷ್ಟರು, ಅನುಷ್ಠಾನಪರರು, ಭಗವತ್ಕೈಂಕರ್ಯಪರರು. ವೈದಿಕ ಕರ್ಮ ಗಳಲ್ಲಿಯೂ, ಪದ್ಧತಿಗಳಲ್ಲಿಯೂ, ವಿಶೇಷ ಅನುಭವಶಾಲಿಗಳು ; ಆದುದರಿಂದ ಜನರಲ್ಲಿ ಬಹಳ ಗಣನೆಯನ್ನು ಹೊಂದಿದ್ದರು. ಇವರಲ್ಲಿ ದ್ರವ್ಯವೆಂಬುವದು ಸ್ವಲ್ಪವೂ ಇಲ್ಲದಿದ್ದಾಗ್ಯೂ, ಪರೋಪಕಾರದಲ್ಲಿಯೂ, ಇತರರಿಗಾಗಿ ದೇಹ ಶ್ರಮಪಡುವುದರಲ್ಲಿಯೂ ನಿಸ್ಸೀಮರು, ಸ್ವಾರ್ಥತೆ ಎಂಬುವುದು ಬಹಳ ಕಡಮೆ. ಅವರು ಶಕ್ತಿಮೀರಿ ಅನ್ನದಾನ ಮಾಡುತ್ತಿದ್ದರು ; ಅಂದರೆ, ಇವರಲ್ಲಿ ಗೃಹಸ್ಥಾಶ್ರಮದಲ್ಲಿರುವ ಸಾಧುಗಳ ಲಕ್ಷಣಗಳು ಅನೇಕವಿದ್ದುವು. ಇವರ ಧರ್ಮಪತ್ನಿಯಾದ ಶ್ರೀಮತಿ ತಿಮ್ಮಮ್ಮನೆಂಬುವರು ಸಹ, "ಸಹಧರ್ಮಚರೀತವ" ಎಂಬ ಜನಕಮಹಾರಾಜನ ವಾಕ್ಯಾನುಸಾರ, ಸಮಸ್ತ ಭಾಗದಲ್ಲಿಯೂ ಪತಿಗೆ ಅನು

ರೂಪವಾದ ಧರ್ಮಪತ್ನಿಯಾಗಿದ್ದರು. ಇವರ ಸತ್ಸಹವಾಸವು ದಾಸನ ಅಧ್ಯಾತ್ಮ ವ್ಯವಸಾಯುವನ್ನು ಪುಷ್ಟೀಕರಿಸಿತು.

ನಾಲ್ಕನೆಯ ಕಾರಣವು : ದಾಸನ ಯಜಮಾನರು, ನಮ್ಮ ಸ್ವಾಚಾರ್ಯರಾದ, ಗ್ರಾಮದ ಯಜ್ಞದೀಕ್ಷಿತರು, ಶ್ರೀಮಾನ್ ರಾಮಾನುಜಾಚಾರ್ ಸ್ವಾಮಿಯವರಲ್ಲಿ ಚಕ್ರಾಂಕಿತ ಮಂತ್ರೋಪದೇಶ, ಸಮಾಶ್ರಯಣಗಳನ್ನು ಮಾಡಿಸಿದುದಲ್ಲದೆ, ಶ್ರೀ|| ಮಧುರಕವಿಯಾಳ್ವಾರವರು ರಚಿಸಿದ "ಆಚಾರ್ಯನಿಷ್ಠೆ" ಎಂಬ ಗ್ರಂಥದಲ್ಲಿ ಅಪ್ಪಣೆ ಕೊಡಿಸಿರುವ ಪ್ರಕಾರ ಸದಾಚಾರನಿಷ್ಠೆಯಲ್ಲಿ ನಿರತರಾದ, ವೈರಾಗ್ಯ ಭಾಗ್ಯರಲ್ಲಿ ನಿಸ್ಸೀಮರಾದ, ಈಗ ಶ್ರೀ|| ಪರಕಾಲ ಮಠಾಧಿಪತಿಗಳಾಗಿರುವ ಶ್ರೀ|| ರಂಗಾಚಾರ್ ಸ್ವಾಮಿಯವರಿಗೆ ಪೂರ್ವಾಶ್ರಮದಲ್ಲಿ ಭರನ್ಯಾಸನನ್ನು ದಯಪಾಲಿಸಿದ, ಶ್ರೀ|| ವರದರಾಮಾನುಜ ಮಹಾದೇಶಿಕರವರ ತಿರುವಡಿಯಲ್ಲಿ, ತಿರುಚ್ಚಾನೂರ್-ತಿರುಪತಿ-ಸಮೀಪದಲ್ಲಿರುವ "ತೇರಣಿ" ಎಂಬ ಗ್ರಾಮದಲ್ಲಿ ದಾಸನಿಗೆ "ಪ್ರಪತ್ತಿ"ಯನ್ನೂ ಕೊಡಿಸಿದರು. ಈ ಮಹಾನುಭಾವರಾದ ಆಚಾರ್ಯರ ತಪೋಬಲಿಯದ ಮಹಿಮೆಯು, ದಾಸನನ್ನು ಈ ಕ್ಷಣದವರಿಗೂ ಸಂರಕ್ಷಿಸುತ್ತಲಿದೆ.

ಮೇಲ್ಕಂಡ ನಾಲ್ಕು ಪ್ರಬಲಸಾಧನಗಳಿಂದ, ದಾಸನು, ಉದರಭರಣಾರ್ಥ ಉದ್ಯೋಗಕ್ಕಾಗಿ ಪರದೇಶಗಳಲ್ಲಿಯೂ, ನಾನಾ ಜಾತಿ ಜನರಲ್ಲಿಯೂ, ಪಾಶ್ಚಿಮಾತ್ಯರ ಸಂಘದಲ್ಲಿಯೂ, ಸೇರಬೇಕಾದ ಪ್ರಮೇಯಗಳು ಬಹಳವಾಗಿ ಸಂಭವಿಸಿದಾಗ್ಯೂ, ಆಹಾರದಲ್ಲಿಯಾಗಲಿ, ಉಡುಪಿನಲ್ಲಾಗಲಿ, ರೂಪದಲ್ಲಾಗಲಿ, ಯಾವ ವಿಧವಾದ ಬದಲಾವಣೆಯೂ, ಭಗವತ್ಕೃಪಯಾ ಉಂಟಾಗಲಿಲ್ಲವು.

ದಾಸನಾದ ನಾನು, ಕ್ರಿ.ಶ. 1924ನೆಯ ವರ್ಷದ ಸೆಪ್ಟಂಬರ್ 27ನೆಯ ತಾರೀಖಿನಿಂದ ವಿಶ್ರಾಂತಿ ಹೊಂದುವ ವೇಳೆಗೆ, ದ್ರವ್ಯಸಂಪಾದನೆಯಲ್ಲಿ ಆಶೆಯು ಸಂಪೂರ್ಣವಾಗಿ ದಾಸನನ್ನು ತ್ಯಜಿಸಿತ್ತು. ಆದರೆ ಒಂದೇ ಒಂದು ಮನೋರಥ ಮಾತ್ರ ಉಳಿದಿತ್ತು. ದಾಸನು ಮುಂಬೈ ಸರಕಾರದಲ್ಲಿ ಉದ್ಯೋಗಕ್ಕೆ ಸೇರಿದಾಗ ಇದ್ದ ಆಗಿನ ಕಾನೂನುಗಳ ಮೇರೆ, ವಿಶ್ರಾಂತಿಹೊಂದುವ ಕಾಲಕ್ಕೆ ಸಲ್ಲಬಹುದಾದ ಹೆಚ್ಚಿನ ಸಂಬಳಕ್ಕೆ ಮೀರಿದ-ಪೆನ್ಷನ್-ವಿಶ್ರಾಂತಿ ವೇತನವನ್ನೂ, ಕೆಳಗಿನ ಅಧಿಕಾರಿಗಳಲ್ಲಿಯೂ, ಮೇಲಿನ ಅಧಿಕಾರಗಳಲ್ಲಿಯೂ ಹೊಂದಬಹುದಾದ ವಿಶೇಷ ಬಹುಮಾನಗಳನ್ನೂ. ಶ್ರೀಮನ್ನಾರಾಯಣನು ದಯಪಾಲಿಸಿದುದಕ್ಕಾಗಿ ಬಹು ತೃಪ್ತಿಪಟ್ಟು, ಇವೆಲ್ಲವೂ ಘನಹೊಂದಿದ ಮೈಸೂರು ಸರಕಾರದವರು ದಾಸನಿಗೆ ದಯಪಾಲಿಸಿದ ಸುಮಾರು (1300) ಒಂದು ಸಾವಿರದ ಮುನ್ನೂರು ರೂಪಾಯಿಗಳ ವೇತನಗಳ ದ್ವಾರ ಲಭಿಸಿತೆಂದು

ಯೋಚಿಸಿ, ಅದಕ್ಕೆ ಪ್ರತಿಯಾಗಿ ದ್ರವ್ಯಾಶೆ ಸ್ವಲ್ಪವೂ ಇಲ್ಲದಹಾಗೆ, ದಾಸನು ಬಹು ಪ್ರಯಾಸದಿಂದ ಸಂಪಾದಿಸಿದ ಶಿಲ್ಪಶಾಸ್ತ್ರದ ಅನುಭವವನ್ನು ದಾಸನ ಜನ್ಮಭೂಮಿಯಾದ ಮೈಸೂರು ದೇಶಕ್ಕೆ ಕೊಡಬೇಕೆಂದಿತ್ತು. ಆದರೆ, ಭಗವದನುಗ್ರಹ ಬರಲಿಲ್ಲ.

ದಾಸನಾದ ನಾನು ವಿಶ್ರಾಂತಿಹೊಂದಿದ ತರುವಾಯ ಆರು ತಿಂಗಳಕಾಲ ಮೈಸೂರು ದೇಶದಲ್ಲಿ ಸಂಚಾರಮಾಡಿ ಕ್ರಿ. ಶ. 1925ನೆಯ ವರ್ಷದ ಜೂನ್ ತಿಂಗಳಲ್ಲಿ ಧಾರವಾಡದಲ್ಲಿ ವಾಸಿಸಲು ನಿಷ್ಕರ್ಷಿಸಿದೆನು. ಧಾರವಾಡದ ಹವೆಯು, ಬಿಸಿಲುಕಾಲದಲ್ಲಿ ವಿನಾ ಮಿಕ್ಕ ಋತುಗಳಲ್ಲೆಲ್ಲಾ ಬಹಳ ಉತ್ತಮವಾದುದು; ನನ್ನ ಸ್ವದೇಶವಾದ ಮೈಸೂರಿಗೆ ಸಮೀಪವಾದುದು; ಕರ್ಣಾಟಕ ದೇಶದಲ್ಲಿ ಸೇರಿದುದು; ನಮ್ಮ ಮಕ್ಕಳಿಗೆ ವಿದ್ಯಾನಿಲಯಗಳ ಬದಲಾವಣೆ–Change of Universities—ಇಲ್ಲದೆ ನಿರಾತಂಕವಾಗಿ ವಿದ್ಯೆಗೆ ಅನುಕೂಲವಾದುದು; ಇದಲ್ಲದೆ ನಾನು ಮೊಟ್ಟಮೊದಲು, ಕ್ರಿ.ಶ. 1896ನೆಯ ಮೇ ತಿಂಗಳಲ್ಲಿ ಉದ್ಯೋಗಕ್ಕೆ ಸೇರಿದ ಸ್ಥಳ; ನಂತರ, ಕ್ರಿ.ಶ. 1919ರಲ್ಲಿ ಪುನಃ ಅಲ್ಲಿಯೇ ಎಗ್ಜಿಕ್ಯುಟಿವ್ ಎಂಜಿನಿಯರೆಂಬ 'ಪ್ರಾಂತ ಅಧಿಕಾರಿಯಾಗಿ', ತದಾರಭ್ಯ ಮಕ್ಕಳ ವಿದ್ಯೆಗಾಗಿ ಮನೆಯವರೆಲ್ಲರೂ ಅಲ್ಲಿಯೇ ವಾಸಿಸುತ್ತಿದ್ದ ಸ್ಥಳ—ಈ ನಾನಾ ಅನುಕೂಲಗಳಿಂದ ಧಾರವಾಡ ವಾಸವು ನಿಷ್ಕರ್ಷಿಸಲ್ಪಟ್ಟಿತು—ದಾಸನು ಮೇಲೆ ಹೇಳಿದ ಪ್ರಕಾರ ವಾಸಿಸಲುಪಕ್ರಮಿಸಿದನಂತರ ಶ್ರೀಮನ್ಮಹಾಭಾಗವತವನ್ನು, ಶ್ರೀ ॥ ಆಳಶಿಂಗರಾಚಾರ್ ಸ್ವಾಮಿಯವರ, ಕನ್ನಡ ವಚನಸಹಿತ, ಎರಡಾವರ್ತಿ ಪಾರಾಯಣ ಮಾಡಿದೆನು. ಇದರಿಂದ ದಾಸನು ಅನೇಕ ವರ್ಷಗಳಿಂದ ಪಾರಾಯಣ ಮಾಡುತಿದ್ದ ಶ್ರೀ ವಿಷ್ಣುಪುರಾಣಕ್ಕೂ, ಶ್ರೀಮನ್ಮಹಾಭಾಗವತಕ್ಕೂ ವಿಷಯಾನುಕ್ರಮಣಿಕೆಯಲ್ಲಿ ಯಾವ ವ್ಯತ್ಯಾಸವೂ ಕಾಣಬರಲಿಲ್ಲ. ಶ್ರೀ ವಿಷ್ಣುಪುರಾಣದಲ್ಲಿ ಗ್ರಂಥಬಾಹುಳ್ಯ ಕಮ್ಮಿಯಾದುದರಿಂದ, ಆ ವಿಷಯಗಳೇ ಸಂಕ್ಷೇಪವಾಗಿ ಹೇಳಲ್ಪಟ್ಟಿರುತ್ತವೆ. ಈ ಗ್ರಂಥವನ್ನು "ಸಂಕ್ಷೇಪ ಮಹಾಭಾಗವತ"ವೆಂದು ಹೇಳಲು ಯಾವ ಸಂದೇಹವೂ ಕಾಣಲಿಲ್ಲ. ಇಂತಹ ಮಹಾಗ್ರಂಥವನ್ನು, ಇದುವರಿವಿಗೂ ಕನ್ನಡ ವಚನರೂಪವಾಗಿ ಯಾವ ಮಹನೀಯರೂ ಪ್ರಚಾರಪಡಿಸಿ ಇಲ್ಲವೆಂಬುವದು ತಿಳಿದು, ನಮ್ಮ ಕನ್ನಡಿಗ ಸ್ತ್ರೀ, ಪುರುಷ ಮಂಡಲಿಗೆಲ್ಲಾ ಉಪಯೋಗವಾಗಲೆಂಬ ಯೋಚನೆಯಿಂದ ಈ ಕೈಂಕರ್ಯವನ್ನು ಮಾಡಲು ಸಂಕಲ್ಪಿಸಿದೆನು.

ಭಾಷಾಂತರಗಳ ಮಹಾತ್ಮೆಯು ದಾಸನಿಗೆ ಮತ್ತೊಂದು ರೀತಿಯಲ್ಲಿ ತಿಳಿಯಬಂದಿತು. ದಾಸನಿಗೆ "ತಮಿಳು" ಭಾಷೆಯಲ್ಲಿ ಪರಿಶ್ರಮವೂ ಸ್ವಲ್ಪವೂ ಇರಲಿಲ್ಲ.

ಕನ್ನಡ ಮಿಶ್ರವಾದ ತಮಿಳು ಭಾಷೆಯನ್ನು ಮನೆಯಲ್ಲಿ, ಶ್ರೀವೈಷ್ಣವನಾದುದರಿಂದ ಮಾತನಾಡುವದು ಮಾತ್ರ ತಿಳಿಯುವದು. ಹೀಗಿರುವಲ್ಲಿ ಕೆಲವು ದಿನಗಳ ಕೆಳಗೆ ದಾಸನ ಸಂಬಂಧಿಯರಾದ, ಪ್ರಕೃತ ಬಸವನಗುಡಿ ನಿವಾಸಿಯರಾದ ಶ್ರೀಮತಿ ಸೀತಮ್ಮನೆಂಬುವರು, ಮೈಸೂರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಬಹುಕಾಲ ದೊಡ್ಡ ಉದ್ಯೋಗಗಳನ್ನು ಮಾಡಿಕೊಂಡಿದ್ದು, ವಿಶ್ರಾಂತಿಹೊಂದಿ, ಕರ್ಣಾಟಕ ದೇಶದಲ್ಲಿ ಚೇತನರ ಉಜ್ಜೀವನಾರ್ಥವಾಗಿ, ದ್ರಾವಿಡ ಪ್ರಬಂಧಗಳಲ್ಲಿನ "ನಿತ್ಯಾನುಸಂಧಾನ"ವೆಂಬ ಭಾಗಗಳಲ್ಲಿ, ಐದು ಭಾಗಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿದ ಕೃತಿಯನ್ನು ದಾಸನಿಗೆ ಅನುಗ್ರಹಿಸಿದರು. ಅದನ್ನು ಪಾರಾಯಣಮಾಡಿ ಬಹಳ ಧನ್ಯನಾದೆನು. ಆ ಮಹನೀಯರು ತೊಂದರೆ ತೆಗೆದುಕೊಳ್ಳದಪಕ್ಷ ಕನ್ನಡದೇಶದಲ್ಲಿ ಹುಟ್ಟಿದ ಶ್ರಾವಿಡಗನಾದ ದಾಸನಿಗೆ, ದ್ರಾವಿಡ ಪ್ರಬಂಧಗಳ ವಾಸನೆಯೇ ಇರುತ್ತಿರಲಿಲ್ಲ.

ಈ ಕಾರಣಗಳಿಂದ ಮೇಲೆ ಹೇಳಿದ ಭಾಷಾಂತರ ಸಂಕಲ್ಪವು ಸ್ಥಿರಪಟ್ಟಾಗ್ಯೂ, ಈ ಸತ್ಕೈಂಕರ್ಯದ ಸಂಪೂರ್ಣಭಾಗವನ್ನು ವಹಿಸಲು, ದಾಸನು ಇನ್ನೂ ಇಂಗ್ಲಿಷ್ ಭಾಷೆಯಲ್ಲಿನ ಶಿಲ್ಪಕಲಾ, ಕೈಗಾರಿಕೆ, ವ್ಯವಸಾಯ, ಮೊದಲಾದ ದೇಶಾಭಿವೃದ್ಧಿಗೆ ಅನುಕೂಲವಾದ ಗ್ರಂಥಗಳನ್ನು ಅವಲೋಕನಮಾಡುವ ಕಾರ್ಯಗಳನ್ನು ಇಟ್ಟುಕೊಂಡಿರುವದರಿಂದಲೂ, ಸಂಸ್ಕೃತ ಗ್ರಂಥಗಳನ್ನು ಭಾಷಾಂತರ ಮಾಡಲು ಬೇಕಾದ ಸಹಾಯಗಳು ಸಂಪೂರ್ಣವಾಗಿ ಧಾರವಾಡದಲ್ಲಿ ದೊರೆಯದರಿಂದಲೂ, ಆಗಲಿಲ್ಲ. ಆದರೆ ದಾಸನ ಮಾತಾಪಿತೃಗಳೂ, ಅಲ್ಲದೆ ನಮ್ಮ ಎರಡು ವಂಶಸ್ಥರೂ, ನಮ್ಮ ಸ್ವಾಚಾರ್ಯರೂ, ಅವರ ವಂಶಸ್ಥರೂ ಅನೇಕಕಾಲ ಮಂಗಳಾಶಾಸನ ಮಾಡಿದ, ಹಾಸನದ ಸಮೀಪದಲ್ಲಿರುವ "ಶಾಂತಿಗ್ರಾಮ"ದಲ್ಲಿ ಸ್ವಲ್ಪ ಕೈಂಕರ್ಯವನ್ನು ಮಾಡಬೇಕೆಂಬ ಉದ್ದೇಶವಿದ್ದುದರಿಂದ, ಅಲ್ಲಿ ದಾಸನ ಸ್ವಾಚಾರ್ಯರ ಕುಮಾರರು, ಉಭಯ ವೇದಾಂತಪ್ರವರ್ತಕರಾದ ಶ್ರೀಮಾನ್ ಯಜ್ಞನಾರಾಯಣ ದೀಕ್ಷಿತ ಸ್ವಾಮಿಯವರು ಬಿಜಮಾಡಿಸಿದ್ದುದ ಕಾರಣ ಅವರಲ್ಲಿ ಶ್ರೀ ವಿಷ್ಣುಪುರಾಣ ಗ್ರಂಥದ ಭಾಷಾಂತರದ ಪ್ರಥಮ– draft copy–ಪ್ರತಿಯನ್ನು, ಪಾರಮಾರ್ಥಿಕ ಭಾವದೊಡನೆ ಮಾಡಿಕೊಡಲು ಅನುಕೂಲವೇ ಎಂದು ಪ್ರಾರ್ಥಿಸಿದೆನು. ಅವರಿಗೆ ಇದಕ್ಕಿಂತಲೂ ಸುಲಭತರವಾದ "ಹರಿವಂಶ"ವೆಂಬ ಗ್ರಂಥದಮೇಲೆ ಅಭಿಲಾಷೆಯಿದ್ದರೂ, ದಾಸನ ಪ್ರೇರಣೆಯೂ ಭಗವದಾಜ್ಞೆಯೂ ಅವರ ಮನಸ್ಸಿನಲ್ಲಿ ಅಂಕುರಿಸಿ, ಅನಂತರ, ಆ ಕೈಂಕರ್ಯವನ್ನು ಅಂಗೀಕರಿಸಿದರು. ಆ ಪ್ರಕಾರ, ಕ್ರಿ. ಶ. 1927ನೆಯ ಜನವರಿ ತಿಂಗಳಿನಲ್ಲಿ ಅವರು ದಯಪಾಲಿಸಿದ ಭಾಷಾಂತರ ಪ್ರತಿಗಳು ದಾಸನಲ್ಲಿಗೆ ತಲಪಿದವು ಅವರು ಕನ್ನಡ

ಭಾಷೆಯನ್ನು, ಭಾಷಾ ರೀತಿಯಾಗಿ ಓದಿದವರಲ್ಲವಾದಾಗ್ಯೂ, ಇಂತಹ ಕೈಂಕರ್ಯವನ್ನು ಪ್ರಥಮತಃ ಕೈಯ್ಯಗೊಂಡಾಗ್ಯೂ, ಶ್ರೀ ವಿಷ್ಣುಚಿತ್ತಸ್ವಾಮಿ, ಶ್ರೀ ಶ್ರೀಧರಸ್ವಾಮಿ, ಈ ಇಬ್ಬರು ಮಹನೀಯರರ ವ್ಯಾಖ್ಯಾನುಸಾರವಾಗಿ, ಅವರ ಶಕ್ತ್ಯಾನುಸಾರ, ಕೈಂಕರ್ಯವನ್ನು ನೆರವೇರಿಸಿದರೆಂದು ಆ ಭಾಷಾಂತರಗಳ ಅವಲೋಕನದಿಂದ ಸ್ಪಷ್ಟವಾಯಿತು. ಅನಂತರ, ದಾಸನು ನನ್ನ ಶಕ್ತ್ಯಾನುಸಾರ ಮೊದಲನೆಯ ಅಂಶವನ್ನು ಪರಿಷ್ಕರಿಸಿ, ತಕ್ಕ ಬದಲಾವಣೆಗಳನ್ನು ಮಾಡಿ, ಛಾಪಿಸಲು ಅವಶ್ಯವಾದ ಬೇರೊಂದು ಪ್ರತಿಯನ್ನು ಮಾಡಿಸಿದೆನು. ಈ ಪ್ರಕಾರ ಮಿಕ್ಕ ಐದು ಅಂಶಗಳನ್ನು ಪರಿಷ್ಕರಿಸಲು ಧಾರವಾಡದಲ್ಲಿ ಬಿಸಿಲು, ಕಳೆದ 1927–ಮಾರ್ಚಿ, ಏಪ್ರಿಲ್, ಮೇ, ತಿಂಗಳುಗಳಲ್ಲಿ ಅತಿ ವಿಶೇಷವಾಗಿದ್ದ ನಿಮಿತ್ತ, ದಾಸನಿಗೆ ಸ್ವಲ್ಪ ದೇಹಾಯಾಸವಾದ್ದರಿಂದ, ಮಿಕ್ಕ ಕೆಲಸವನ್ನು ಜೂನ್ ತಿಂಗಳ ವರಿವಿಗೂ ನಿಲ್ಲಿಸಬೇಕಾಯಿತು. ಅನಂತರ ಆ ತಿಂಗಳಿನಲ್ಲಿ ಶಾಂತಿಗ್ರಾಮಕ್ಕೇನೇ ಒಂದು ವಿವಾಹದುದ್ದಿಶ್ಯ ಹೋದ, ದಾಸನು ಅಲ್ಲಿಯೇ ನಿಂತ, ಮಿಕ್ಕ ಐದು ಅಂಶಗಳನ್ನು ಪರಿಷ್ಕರಿಸಿ, ದಾಸನು ಮಾಡಿದ ಬದಲಾವಣೆಗಳನ್ನೆಲ್ಲಾ, ದೀಕ್ಷಿತ ಸ್ವಾಮಿಯವರಿಗೆ ಸಮರ್ಪಿಸಿ, ಅವರ ಅನುಮತಿ ಪಡೆದು, ಬೆಂಗಳೂರಿಗೆ ಗ್ರಂಥವು ಕ್ರಿ.ಶ. 1927ನೆಯ ಜೂಲೈ ತಿಂಗಳ ಪ್ರಾರಂಭದಲ್ಲಿ ಅಚ್ಚಿಸಲು ರವಾನಿಸಲ್ಪಟ್ಟಿತು. ಈ ಸದುದ್ದೇಶವನ್ನು ನೆರವೇರಿಸಲು ಪ್ರಥಮದಲ್ಲಿ ಮುಖ್ಯ ಸಹಾಯಕರಾದವರು, ನಮ್ಮ ಮುದ್ದುಗ್ರಾಮದ ನಿವಾಸಿಯರೊಬ್ಬರು, ನಮ್ಮ ಪರಮಾಪ್ತರಲ್ಲಿ ಸಾಧು ಶಿರೋಮಣಿಯೊಬ್ಬರು, ಅಲ್ಲದೆ ದಾಸನ ಸಾಕ್ಷಾತ್ ಸ್ವಾಚಾರ್ಯರ ಕುಮಾರರು, ದಾಸನ ಕುಮಾರರಿಗೆ ದೇಶಿಕರು, ಎಂಬ ಈ ಮಹತ್ತಾದ ಸಂತೋಷವು ಎಂದಿಗೂ ತಪ್ಪದು. ಶ್ರೀಮಾನ್ ಯಜ್ಞನಾರಾಯಣ ದೀಕ್ಷಿತ ಸ್ವಾಮಿಯವರಿಗಾದರೋ, ಅವರು ಮಾಡಿದ ಕೈಂಕರ್ಯವು ಈ ಅಚ್ಚು ಪುಸ್ತಕದ ಪ್ರಚಾರವಿರುವವರಿವಿಗೂ ಶಾಶ್ವತವಾಗಿರುವದಲ್ಲದೆ, ಅವರ ಶಿಷ್ಯ, ಪ್ರಶಿಷ್ಯಸಂತತಿಯವರನೇಕರು ಈ ಗ್ರಂಥವನ್ನು ಅವಲೋಕಿಸಿ, ಉಜ್ಜೀವಿಸಬಹುದೆಂಬ ಮಹತ್ತಾದ ಸಂತೋಷವು ಅವರಿಗೂ ತಪ್ಪದು.

ಸರ್ವಸ್ಮಾತ್ಪರನಾದ ಶ್ರೀಹರಿಯು ಈ ಕೈಂಕರ್ಯವನ್ನು ನಿರ್ವಿಘ್ನದಿಂದ ಪೂರ್ತಿಗೊಳಿಸಲು ದಾಸನಿಗೆ ಗೋಚರಿಸದ ಹಾಗೆ, ಮತ್ತೊಂದು ಏರ್ಪಾಡನ್ನು ಸಂಕಲ್ಪಿಸಿದ್ದುದನೆಂಬುವದು ದಾಸನಿಗೆ ಕೊನೆಗೆ ಗೋಚರವಾಯಿತು. ಅದು ಏನೆಂದರೆ: ಶ್ರೀಮಾನ್ ಚುಂಚನಕಟ್ಟೆ ಮೇಲುಕೋಟೆ ವಿಜಯರಾಘವಾಚಾರ್ ಸ್ವಾಮಿಯೆಂಬುವರು, ಪ್ರಕೃತದಲ್ಲಿ ಬೆಂಗಳೂರು ಬಸವನಗುಡಿಯಲ್ಲಿ ವಾಸಿಸುತ್ತಾರೆ. ಇವರು ಇಂಗ್ಲಿಷ್ ಭಾಷೆಯಲ್ಲಿಯೂ, ಸಂಸ್ಕೃತದಲ್ಲಿಯೂ, ಕನ್ನಡದ

ಲ್ಲಿಯೂ ಘನಪಂಡಿತರು. ತಮಿಳು ಭಾಷೆಯನ್ನೂ ತಿಳಿದವರು. ಇವರು ಮೈಸೂರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಕಾಲೇಜ್ ಪ್ರೊಫೆಸರ್, ಇನ್ಸ್ಪೆಕ್ಟರ್ ಮೊದಲಾದ ದೊಡ್ಡ ಪದವಿಗಳನ್ನನುಭವಿಸಿ, ವಿಶ್ರಾಂತಿಹೊಂದಿ, ಐದು, ಆರು ಗ್ರಂಥಗಳನ್ನು ಮುದ್ರಿಸಿ, ಭಗವತ್ಕೈಂಕರ್ಯದಲ್ಲಿಯೇ ಈಗ ನಿರತರಾಗಿರುತ್ತಾರೆ. ಇಂತಹ ಮಹನೀಯರು ಒಂದು 'ವಿವಾಹ'ವೆಂಬ ವ್ಯಾಜದಿಂದ ಈ ಗ್ರಂಥವು ಮುದ್ರಿಸುವ ವೇಳೆಗೆ ದಾಸನ ಪರಮಮಿತ್ರರಾಗಿ ಪರಿಣಮಿಸಿದರು. ಈ ವಿಷಯವು ದಾಸನ ತ್ರಿಕರಣಗಳ ಸ್ಮೃತಿಪಥದಲ್ಲಿಯೂ ಇರಲಿಲ್ಲ. ಯಾವ ವ್ಯಾಜದಿಂದ ಈ ಮಹನೀಯರ ಸಮಾಗಮವು ಲಭಿಸಿತೋ, ಆ ವಿವಾಹವೂ ಸುದ, ಕಳೆದ ಜೂನ್ ತಿಂಗಳಿನಲ್ಲಿಯೇ, ಶಾಂತಿಗ್ರಾಮದಲ್ಲಿ ಶ್ರೀ ಲಕ್ಷ್ಮೀನೃಸಿಂಹನ ಸನ್ನಿಧಿಯಲ್ಲಿ ಬಹಳ ಸಂಭ್ರಮದಿಂದ ನೆರವೇರಿತು. ಆ ಸಂದರ್ಭದಲ್ಲಿ ದಾಸನು ಕೈಂಕರ್ಯದ ವಿಷಯವಾಗಿ ಅವರಲ್ಲಿ ಪ್ರಸ್ತಾಪಿಸಿದೆನು. ಅದಕ್ಕೆ ಅವರು ಗ್ರಂಥಮುದ್ರಣೆಯ ವಿಷಯಗಳನ್ನೆಲ್ಲಾ ದಾಸನಿಗೆ ತಿಳಿಸಿದುದಲ್ಲದೆ, ಆ ಭಾರವೆಲ್ಲಾ ತಮಗಿರಲೆಂದು ಸಂತೋಷದಿಂದ ಅಂಗೀಕರಿಸಿದರು. ಇದರಿಂದ ದಾಸನು ಪುನೀತನಾದನೆಂದು ಭಾವಿಸಿದೆನು. ಇವರು ಈ ಭಾರವನ್ನೆಲ್ಲಾ ವಹಿಸಿದುದಲ್ಲದೆ, ದಾಸನ ಪ್ರಾರ್ಥನೆಯ ಪ್ರಕಾರ, ಭಾಷಾಂತರಗಳನ್ನು ಪುನಃ ಪರಿಷ್ಕರಿಸಿ, ತಪ್ಪುಗಳನ್ನು ತಿದ್ದಿ, ಕೆಲವು ಅಧ್ಯಾಹಾರಗಳನ್ನು ಸರಿಪಡಿಸಿ, ವಿಶೇಷ ವಿಷಯಗಳನ್ನು ಕ್ರೋಡೀಕರಿಸಿ ಗ್ರಂಥವನ್ನು ವಾಚಕರು ಮೋಹಿಸುವ ಹಾಗೆ ರೂಪಿಸಿರುತ್ತಾರೆ. ಈ ಮಹನೀಯರ ಪಾರಮಾರ್ಥಿಕ ಸಹಾಯವು ಶ್ರೀ ಹರಿಪ್ರೀತಿಯಾಗಲಿ ಎಂಬುವದೇ ದಾಸನ ಪ್ರಾರ್ಥನೆ.

ಮೇಲೆ ಹೇಳಿದ ಕಥೆಯಿಂದ, ಸಂಸ್ಕೃತ, ತಮಿಳು ಮುಂತಾದ ಭಾಷೆಗಳಿಂದ ತತ್ವರಹಸ್ಯಗರ್ಭಿತವಾದ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡುವದು ಲೋಕೋಜ್ಜೀವನಾರ್ಥವಾದ ಕೈಂಕರ್ಯವೆಂಬುವದು ಸ್ಥಿರಪಡುತ್ತದೆ. ಈ ಮಹತ್ಕೈಂಕರ್ಯವನ್ನು ಉಜ್ಜುಗಿಸಲು ಮೊದಲು, ಶ್ರೀಮನ್ನಾರಾಯಣನ ಮೊದಲುಗೊಂಡು ಆಚಾರ್ಯ ಪರಂಪರೆಯಾ ಪ್ರಕೃತದವರಿವಿಗೂ, ಶಿಷ್ಟಾಚಾರ ಪ್ರಕಾರ ನಮಸ್ಕರಿಸಿ, ಮೇಲೆ ಹೇಳಿದ ಮಹನೀಯರಿಗೆಲ್ಲಾ ದಾಸನ ಪ್ರಣಾಮಪೂರ್ವಕವಾದ ವಂದನೆಗಳನ್ನು, ಶ್ರೀ ಮಧುರಕವಿಯಾಳ್ವಾರವರು ಹೇಳಿರುವ ದಿವ್ಯಸೂಕ್ತಿಯ ದ್ವಾರಾ, ಅರ್ಪಿಸಿ, ಈ ಅವತರಣಿಕೆಯ ಮೊದಲನೆಯ ಭಾಗವನ್ನು ಪೂರ್ತಿಗೊಳಿಸುತ್ತೇನೆ.

"ಪಯನನ್ರಾಕಿಲುಂ, ಪಾಂಗಲರಾಕಿಲುಂ,
ಶೆಯಲ್‌ನನ್ರಾಕತ್ತಿರುತ್ತಪ್ಪಣಿಕೊಳ್ವಾ£
ಕುಯಲ್ನಿನ್ರಾಲ್ಪೊಳಿಲ್‌ಶೂಳ್ಕುರು ಕೂರ್ ನಂಬಿ
ಮುಯಲ್ಕಿನ್ರೇನುನ್ತನ್ಮೊಯ್‌ಕ್ಕಳರ್ಕನ್ಪೈಯೇ"

ಮಧುರಕವಿಯಾಳ್ವಾರ್ ತಿರುವಡಿಗಳೇ ಶರಣಂ.

"ಓ ಶಠಗೋಪಮುನಿವರ್ಯರೇ ನೀವು ಪ್ರತಿಫಲಾಕಾಂಕ್ಷೆ ಇಲ್ಲದವರಾಗಿ, ತತ್ವಹಿತ ಪುರುಷಾರ್ಥಗಳಲ್ಲಿ ಸ್ವಲ್ಪವಾದರೂ ಅಭಿರುಚಿ ಇಲ್ಲದೆ ಅನಧಿಕಾರಿಗಳಾಗಿರುವವರನ್ನೂ ಕೂಡ, ಉದಾರಭಾವದಿಂದ, ತಮ್ಮ ಶಕ್ತಿಯ ಮಾಹಾತ್ಮ್ಯೆಯಿಂದಲೂ, ತಿರುವಾಯ್ ಮೊಳಿಯ ಉಪದೇಶ ಬಲದಿಂದಲೂ, ಭಗವದ್ಭಾಗವತ ಕೈಂಕರ್ಯನಿಷ್ಠೆಯುಳ್ಳವರನ್ನಾಗಿಮಾಡಿರುತ್ತೀರಿ. ಇದೇನೂ ಆಶ್ಚರ್ಯವಲ್ಲವು. ಓ ಕುರುಗೂರೆಂಬ ತಿರುನಗರಿಯ ನಾಥರೇ, ಅಲ್ಲಿನ ಸಮೃದ್ಧಿಯಿಂದ ಶೋಭಿಸುವ ಉದ್ಯಾನವನಗಳಲ್ಲಿರುವ ಕೇವಲ ತಿರ್ಯಕ್ಕುಗಳಾದ ಕೋಕಿಲೆಗಳೂ ಕೂಡ, ತಮ್ಮ ತಿರುವಾಯ್ ಮೊಳಿಯ ದಿವ್ಯಗಾನವನ್ನೇ ಪಂಚಮಸ್ವರದಲ್ಲಿ ಹಾಡುತ್ತಾ ಇವೆ. ಅಸದೃಶ ಮಹೋಪಕಾರದ ಕೃತಜ್ಞತಾಸೂಚಕವಾಗಿ ತಮ್ಮ ದಿವ್ಯಪಾದಾರವಿಂದಗಳಲ್ಲಿ ದಾಸನಿಗೆ ನಿರತಿಶಯ ಭಕ್ತಿಯು ಸತತವಿರಲೆಂದು ಅನವರತ ಬೇಡುವೆನು" ಎಂಬವದು ಈ ಪಾಶುರದ ಅಭಿಪ್ರಾಯವು.

॥ಶ್ರಿಯೈನಮಃ॥

ಶ್ರೀಮತೇ ರಾಮಾನುಜಾಯ ನಮಃ

ಶ್ರೀ ವಿಷ್ಣುಪುರಾಣ ಕನ್ನಡ ವಚನಗಳು

ಪ್ರಸ್ತಾವನೆಯ ಎರಡನೆಯ ಭಾಗ

ಈ ಭಾಗದಲ್ಲಿ, ಪುರಾಣಪ್ರವರ್ತಕರು, ಪುರಾಣಗಳ ಲಕ್ಷಣ. ಪುರಾಣಗಳ ಸಂಖ್ಯೆ, ಶ್ರೀ ವಿಷ್ಣುಪುರಾಣದ ಮಹಾತ್ಮ್ಯೆ, ತತ್ವತ್ರಯದ ತತ್ವಾರ್ಥ ವಿಶೇಷ, ಇದರಲ್ಲಿ ವಿವರಿಸಿರುವ ವಂಶವಂಶಾನುಚರಿತಗಳು, ಆ ಕಾಲದ ಭರತ ಖಂಡದ ಭೂಗೋಳ ವರ್ಣನೆ, ಈ ವಿಷಯಗಳಲ್ಲಿ ಬಹು ಸಂಕ್ಷೇಪವಾಗಿ ವಿಚಾರಿಸುವ ಸಂಕಲ್ಪವು.

"ವ್ಯಾಸ" ಅಥವಾ 'ವೇದವ್ಯಾಸ' ಎಂಬ ಶಬ್ದಕ್ಕೆ, ವೇದವನ್ನು ವಿಭಾಗಿಸಿದವರೆಂದರ್ಥ. ಈ ಹೆಸರನ್ನು ಪಡೆದು ಪ್ರತಿ ದ್ವಾಪರಯುಗದಲ್ಲಿಯೂ ಒಬ್ಬ ಮಹರ್ಷಿಗಳು ನಾರಾಯಣಾಂಶದಿಂದವತರಿಸಿ ವೇದವನ್ನು ನಾಲ್ಕು ಭಾಗಗಳಾಗಿ ವಿಭಾಗಿಸುತ್ತಾರೆ. ಪ್ರಥಮ ದ್ವಾಪರದಲ್ಲಿ ಚತುರ್ಮುಖಸ್ವರೂಪನಾದ ಶ್ರೀಮನ್ನಾರಾಯಣನೇ, ವೇದವ್ಯಾಸಾವತಾರವನ್ನು ಮಾಡಿ ವೇದ ವಿಭಾಗಗಳನ್ನು ಮಾಡಿದನು. ಈ ವಿಭಾಗ ಮಾಡುವುದಕ್ಕೆ ಮುಂಚೆಯೇ, "ಬ್ರಾಹ್ಮ ಪುರಾಣವನ್ನು ಚತುರ್ಮುಖಬ್ರಹ್ಮನು ರಚಿಸಿದನು. ಈ ಕಾರಣದಿಂದಲೇ "ಪುರಾಣ"ಗಳೆಂಬ ಶಬ್ದವು ಪ್ರಚಾರಕ್ಕೆ ಬಂತು. ಇದುವರೆವಿಗೂ ಇಪ್ಪತ್ತೆಂಟು ದ್ವಾಪರಯುಗಗಳಾದುವು; ಆದುದರಿಂದ ವೇದವು, ಇಪ್ಪತ್ತೆಂಟಾವರ್ತಿ, ಬ್ರಹ್ಮ, ಮನು, ಶುಕ್ರ, . . . ಪರಾಶರ, ಕೃಷ್ಣದ್ವೈಪಾಯನರೆಂಬ ವೇದ ವ್ಯಾಸರಿಂದ ವಿಭಾಗಿಸಲ್ಪಟ್ಟಿರುತ್ತೆ. ಶ್ರೀ ಪರಾಶರ ಮಹರ್ಷಿಗಳು ಇಪ್ಪತ್ತೇಳನೆಯ ವೇದವ್ಯಾಸರು, ವಸಿಷ್ಠಮಹರ್ಷಿಗಳ ಮೊಮ್ಮಕ್ಕಳು. ಇವರೇ ಶ್ರೀವಿಷ್ಣು ಪುರಾಣವನ್ನು ರಚಿಸಿದರು. ಶ್ರೀಮನ್ಮಹಾಭಾಗವತವನ್ನು ರಚಿಸಿದ ಶ್ರೀಕೃಷ್ಣ ದ್ವೈಪಾಯನರೆಂಬುವರು ಇಪ್ಪತ್ತೆಂಟನೆಯ ವೇದವ್ಯಾಸರಾದುದರಿಂದ, ಶ್ರೀ ವಿಷ್ಣುಪುರಾಣವು ಶ್ರೀ ಭಾಗವತಕ್ಕಿಂತಲೂ ಪುರಾತನ ಗ್ರಂಥವೆಂತಲೂ, ಶ್ರೀ

ಕೃಷ್ಣದ್ವೈಪಾಯನರು, ಶ್ರೀ ಪರಾಶರ ಪುತ್ರರಾದುದರಿಂದಲೂ ಎರಡು ಗ್ರಂಥಗಳ ವಿಷಯಾನುಕ್ರಮಣಿಕೆಯೂ ಒಂದೇಯಾಗಿರುವುದರಿಂದಲೇ ಸಂಕ್ಷೇಪವಾಗಿದ್ದ ಶ್ರೀ ವಿಷ್ಣು ಪುರಾಣವನ್ನು, ಶ್ರೀಕೃಷ್ಣದ್ವೈಪಾಯನರು ವಿಸ್ತರಿಸಿ ರಚಿಸಿದರೆಂದೂ ತೋರುತ್ತದೆ.

ಶ್ರೀ ವಿಷ್ಣು ಪುರಾಣದಲ್ಲಿ, ವೇದವ್ಯಾಸರು ಐದು ಲಕ್ಷಣಗಳಿಂದ ಆಖ್ಯಾನ, ಉಪಾಖ್ಯಾನ, ಗಾಥಾ, ಕಲ್ಪ, ಸರ್ಗ—ಕೂಡಿದ ಪುರಾಣ ಸಂಹಿತೆಯನ್ನು ರೋಮಹರ್ಷಣನೆಂಬ ಶಿಷ್ಯನಿಗೆ ಉಪದೇಶ ಮಾಡಿದರೆಂದೂ, ಆ ರೋಮಹರ್ಷಣನೇ, ಪ್ರಖ್ಯಾತಿಯನ್ನು ಹೊಂದಿ ಸೂತಪುರಾಣೀಕರೆಂದೂ ಹೇಳಿರುತ್ತದೆ. ಅಂಶ **ಮೂರು, ಅಧ್ಯಾಯ ಆರನ್ನು ನೋಡಿ** ಶ್ರೀಮದ್ಭಾಗವತದಲ್ಲಿ ಈ ರೋಮಹರ್ಷಣರು, ಸೂತಪುರಾಣೀಕರ ತಂದೆ ಎಂದು ಹೇಳಿರುತ್ತದೆ. ದ್ವಾದಶಸ್ಕಂಧ, ಏಳನೆಯ ಅಧ್ಯಾಯ ನೋಡಿ. ಹೇಗಿದ್ದರೂ ವೇದವ್ಯಾಸರಿಂದ ಸೂತಪುರಾಣೀಕರಿಗೆ ಆಚಾರ್ಯ ರೀತಿಯಿಂದಾಗಲಿ, ಪರಮಾಚಾರ್ಯ ರೀತಿಯಿಂದಾಗಲಿ ಪುರಾಣಸಂಹಿತೆಯ ಉಪದೇಶವಾಯಿತು.

ಪುರಾಣವಿದರು, ಪುರಾಣಗಳು ಹದಿನೆಂಟೆಂದೂ, ಅವುಗಳಲ್ಲಿ ಮಹಾಪುರಾಣಗಳೆಂದೂ, ಅಲ್ಪ ಪುರಾಣಗಳೆಂದೂ ಎರಡು ಭಾಗಗಳು ಎಂಬುದಾಗಿ ನಿರ್ಣಯಿಸಿರುತ್ತಾರೆ. ಮಹಾಭಾಗವತಸ್ಕಂದ 12-ಅಧ್ಯಾಯ 8ನ್ನು ನೋಡಿ. ಮಹಾ ಪುರಾಣಗಳಲ್ಲಿ ಹತ್ತು ಅಂಗಗಳೂ, ಅಲ್ಪ ಪುರಾಣಗಳಲ್ಲಿ ಐದು ಅಂಗಗಳೂ ಇರುವುದಾಗಿ ಹೇಳಿದೆ. ಹತ್ತು ಅಂಗಗಳು ಯಾವುವೆಂದರೆ–ಸರ್ಗ ಅಥವಾ ಸ್ವಯಂ ಸೃಷ್ಟಿ, ವಿಸರ್ಗ ಅಥವಾ ಚತುರ್ಮುಖ ಬ್ರಹ್ಮಸೃಷ್ಟಿ, ವೃತ್ತಿ ಮತ್ತು ರಕ್ಷೆ ಅಂದರೆ, ಜಗತ್ಪಾಲನೆ, ಮನ್ವಂತರ, ವಂಶ, ವಂಶಾನುಚರಿತ, ಸಂಸ್ಥೆ ಹೇತು, ಅಪಾಶ್ರಯ ಇವುಗಳಲ್ಲಿ, ವೃತ್ತಿ, ಹೇತು, ಅಪಾಶ್ರಯ ಬಂಬುವೇ, ಅಚಿತ್, ಚಿತ್, ಈಶ್ವರ, ಎಂಬ ಮೂರು ತತ್ವಗಳು—ಐದು ಅಂಗಗಳ್ಯಾವುವೆಂದರೆ ಸರ್ಗ, ವಿಸರ್ಗ, ವಂಶ, ಮನ್ವಂತರಗಳು, ವಂಶಾನುಚರಿತ. ಆದುದರಿಂದ, ಅಲ್ಪ ಪುರಾಣಗಳಲ್ಲಿ, ಈ ಮೂರು ತತ್ವಗಳು ಅಂದರೆ ಅಧ್ಯಾತ್ಮ ವಿಷಯವೇ ಇಲ್ಲವೆಂಬುದಾಗಿಯೂ ಸ್ವಯಂಸೃಷ್ಟಿ, ಬ್ರಹ್ಮಸೃಷ್ಟಿ, ವಿನಾ ಮಿಕ್ಕುದೆಲ್ಲಾ ಆಯಾಕಾಲದ ಚರಿತ್ರೆಗಳೆಂಬುದಾಗಿಯೂ ಸ್ಪಷ್ಟವಾಯಿತು. ಇದರಿಂದ ಅಲ್ಪ ಪುರಾಣಕಾಲಗಳಲ್ಲಿ ದೇಶಕಾಲವರ್ತಮಾನಗಳು ಬಹಳ ಕ್ಷೀಣಿಸಿ ಹೋಗಿತ್ತೆಂದೂ ತೋರಿಬರುತ್ತದೆ. ಶ್ರೀ ವಿಷ್ಣು ಪುರಾಣವಾದರೋ ಹತ್ತು ಅಂಗಗಳುಳ್ಳದಾದುದರಿಂದ, ಮಹಾ ಪುರಾಣಗಳೊಳಗೆ ಸೇರಿರುತ್ತದೆ.

ಶ್ರೀ ವಿಷ್ಣು ಪುರಾಣದಲ್ಲಿ ಹೇಳಿರುವ ಮುಖ್ಯ ವಿಷಯಗಳ್ಯಾವವೆಂಬುದು,

ಆ ಪುರಾಣವನ್ನು ಪಾರಾಯಣಮಾಡುವುದಕ್ಕೆ ಮುಂಚೆ ಶಿಷ್ಟಾಚಾರಪ್ರಕಾರ ಪಠಿಸತಕ್ಕ ಈ ಕೆಳಗೆ ಬರೆದಿರುವ ಶ್ಲೋಕದಿಂದ ವ್ಯಕ್ತವಾಗುತ್ತೆ :

"ತತ್ತ್ವೇನಯಶ್ಚಿದ ಚಿದೀಶ್ವರತತ್ಸ್ವಭಾವ, ಭೋಗಾಪ ವರ್ಗತದುಪಾಯ ಗತೀರುದಾರಃ। ಸಂದರ್ಶಯನ್ನಿರ ಮಿಮಾತಪುರಾಣರತ್ನಂ ತಸ್ಮೈನಮೋ ಮುನಿವರಾಯ ಪರಾಶರಾಯ ॥"

ಶ್ರೀ ವಿಷ್ಣುಪುರಾಣವು "ಚಿದಚಿದೀಶ್ವರ" ಎಂಬ ಮೂರು ತತ್ವಗಳನ್ನು ವಿಶದಪಡಿಸುವುದಲ್ಲದೆ, **"ಮನಏವಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ"** ಎಂಬುವ ಮುಖ್ಯಾರ್ಥವನ್ನು ಅನೇಕ ದೃಷ್ಟಾಂತಗಳ ಮೂಲಕವಾಗಿ ಸ್ಥಿರಪಡಿಸುತ್ತದೆ. "ಮನುಷ್ಯಾಣಾಂ" ಎಂಬುವ ಪದದಿಂದ, ಈ ಆಧ್ಯಾತ್ಮ ವಿಷಯದಲ್ಲಿ ತೇರ್ಗಡೆ ಹೊಂದಲು, ಮಾನುಷ ಜನ್ಮವು ಅತ್ಯವಶ್ಯ ವೆಂದೂ ಸೂಚಿಸುತ್ತದೆ. ಶ್ರೀ ಭಗವದ್ಗೀತೆಯಲ್ಲಿಯೂ, ಶ್ರೀ ಭಾಗವತದಲ್ಲಿಯೂ, ಈ ವಿಷಯವು ಅತಿ ಸ್ಪಷ್ಟವಾಗಿರುತ್ತದೆ.

(೧) ದುರ್ಲಭಂ ಮಾನುಷಂ ಜನ್ಮ ತದಪ್ಯಧ್ರುವ ಮರ್ಥದಂ।
ತತೋಯತೇತ ಕುಶಲಂ ಕ್ಷೇಮಾಯ ಭವಮಾಶ್ರಿತಃ ॥

ಶ್ರೀ ಭಾಗವತ

ಅರ್ಥ : ಮಾನುಷಜನ್ಮವು ದೊರೆಯುವುದು ದುರ್ಲಭ ; ಆ ಜನ್ಮದಲ್ಲಿ ಮೋಕ್ಷವನ್ನು ಹೊಂದುವುದು ಬಹಳ ಅನುಮಾನಾಸ್ಪದವು. ಆದಕಾರಣ ಮನುಷ್ಯನು ಈ ಜನ್ಮವನ್ನೆತ್ತಿರುವಾಗಲೇ ತನ್ನ ಶ್ರೇಯಸ್ಸಿಗಾಗಿ ಪ್ರಯತ್ನಿಸಬೇಕು.

(೨) ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯ ತತಿಸಿದ್ಧಯೇ।
ಯತತಾಮಪಿ ಸಿದ್ಧಾನಾಂ, ಕಶ್ಚಿನ್ಮಾಂ ವೇತ್ತಿತತ್ವತಃ ॥

ಶ್ರೀ ಗೀತೆ

ಅರ್ಥ : ಅನೇಕ ಮನುಷ್ಯರಲ್ಲಿ ಯಾವನೋ ಒಬ್ಬನು ಮಾತ್ರ ಮೋಕ್ಷ ವನ್ನು ಪಡೆಯಲು ಪ್ರಯತ್ನಿಸುವನು ; ಹಾಗೆ ಪ್ರಯತ್ನಪಟ್ಟು ಸಿದ್ಧಿಹೊಂದಿದವರಲ್ಲಿ, ಒಬ್ಬನು ಮಾತ್ರ ಪರಮಾತ್ಮನಾದವನ ಸ್ವರೂಪವನ್ನು ತಿಳಿಯುವನು.

"ಬಂಧ"ವೆಂದರೆ, ಸಂಸಾರಬಂಧ; "ಮೋಕ್ಷ"ವೆಂದರೆ, ಆ ಸಂಸಾರ ಬಂಧದಿಂದ ಬಿಡುಗಡೆ. ಸಂಸಾರವು ಈ ದೇಹದಿಂದುಂಟಾಗುತ್ತದೆ. ಆದುದ ರಿಂದ, ಜನನ ಮರಣವೆಂಬ ಈ ಸಂಸಾರ ಸಾಗರವನ್ನು ದಾಟುವುದೇ "ಮೋಕ್ಷ"ವೆನಿಸುವುದು. ನೀರನ್ನು ದಾಟಲು 'ದೋಣಿ' ಅಥವಾ 'ಸೇತುವೆ' ಆವಶ್ಯಕವು. ಶಮೆ, ದಮೆ, ಅಂದರೆ, ಮನೋನಿಗ್ರಹ, ಇಂದ್ರಿಯನಿಗ್ರಹ, ಇವೇ ಸಾಧನಗಳಿಂದ ಸಂಸಾರ ಸಾಗರವನ್ನು ದಾಟಬೇಕು. ಮನೋ ನಿಗ್ರಹವೇ ಮೋಕ್ಷಕ್ಕೆ ಮುಖ್ಯ ಸಾಧನವೆಂದು ಸ್ಪಷ್ಟವಾಯಿತು. ಇದೇ ಅರ್ಥ ವನ್ನೇ ಸ್ವಲ್ಪಮಟ್ಟಿಗೆ Milton's 'Paradise Lost', book-I—ಎಂಬುವುದ ರಲ್ಲಿ ವ್ಯಕ್ತಗೊಳಿಸಿರುತ್ತದೆ.

"The Mind, in its own place, can make
"A Heaven of Hell or a Hell of Heaven."

ಇದು ಇಂಗ್ಲಿಷ್ ಭಾಗವನ್ನು ಬರೆಯುವಾಗ ಸ್ಮೃತಿಪಥಕ್ಕೆ ಬಾರದಕಾರಣ, ಇಲ್ಲಿ ಬರೆದಿರುತ್ತದೆ. ಆದುದರಿಂದ, "ಮನಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂಬ ಉಕ್ತಿಯು ಸರ್ವಜನಸಮ್ಮತವಾದುದು ಎಂದು ತೋರುತ್ತದೆ. ಹೀಗಿದ್ದಲ್ಲಿ ಇಂತಹ,

"ಚಂಚಲಂ ಹಿಮನಃಕೃಷ್ಣ ಪ್ರಮಾಥಿ ಬಲವದ್ದೃಡಂ।
ತಸ್ಯಾಹಂ ನಿಗ್ರಹಂ ಮನ್ಯೆ ವಾಯೋರಿ ವಸುದುಷ್ಕರಂ ||"

ಎಂಬುವ ಪ್ರಕಾರ ಗಾಳಿಯನ್ನು ಕಟ್ಟಿಹಾಕುವುದು ಎಷ್ಟು ಕಠಿಣವೋ, ಅಷ್ಟು ಕಠಿಣವು ಚಂಚಲವಾದ ಮನಸ್ಸನ್ನು ನಿಗ್ರಹಿಸುವುದು. ಹೀಗಿರುವಲ್ಲಿ, ನಿಗ್ರಹ ಹೇಗೆ ಎಂಬುವ ಅರ್ಜುನನ ಪ್ರಶ್ನೆಗೆ. ಶ್ರೀ ಗೀತೆಯಲ್ಲಿ, ಸ್ವಾಮಿಯು, "ಅಭ್ಯಾಸೇನತು ಕೌಂತೇಯ ವೈರಾಗ್ಯೇಣಚ ಗೃಹ್ಯತೆ" ಅಂದರೆ, ಆತ್ಮ ಪರಮಾತ್ಮ ಸ್ವರೂಪುಗಳನ್ನು ತಿಳಿಯುವುದರಿಂದಲೂ, ಭಕ್ತಿಮಾರ್ಗದಿಂದಲೂ, ವೈರಾಗ್ಯ ಅಂದರೆ ಸರ್ವಸಂಗಪರಿತ್ಯಾಗ, ಸಂಸಾರದಲ್ಲಿ **ಜಿಹಾಸೆಯಿಂ**ದಲೂ, ಮನಸ್ಸನ್ನು ನಿಗ್ರಹಿಸಬೇಕೆಂದು ಅಪ್ಪಣೆ ಕೊಡಿಸಿರುತ್ತಾನೆ. ಆದಕಾರಣ, ಆತ್ಮಸ್ವರೂಪ, ದೇಹ ಮತ್ತು ಪ್ರಕೃತಿಸ್ವರೂಪ, ಪರಮಾತ್ಮಸ್ವರೂಪ, ಇವುಗಳು ಎಂತಹವು, ಇವುಗಳಿಗೆ ಇರತಕ್ಕ ಸಂಬಂಧವೇನು, ಚೇತನಗಳಿಗೆ ಮೋಕ್ಷೋಪಾಯವೇನು ಎಂಬುವುವೇ, "ಚಿದಚಿದೀಶ್ವರ ತತ್ವಸ್ವಭಾವ" ಎಂಬು ವುದರಲ್ಲಿ ಗರ್ಭಿತವಾದ ವಿಷಯಗಳು. ಇವುಗಳನ್ನೇ ಈ ಪುರಾಣದಲ್ಲಿ ವಿಶದ ಪಡಿಸಿರುತ್ತದೆ. ಇದೇ ಇದರ ವಿಶೇಷಮಹಾತ್ಮೆ.

ಚಿದಚಿದೀಶ್ವರರೆಂಬ ಮೂರು ತತ್ವಗಳ ಸ್ವರೂಪ, ಸ್ವಭಾವಗಳನ್ನು ಸಂಕ್ಷೇಪವಾಗಿ ವಿಚಾರಿಸೋಣ:

(i) **ಚಿತ್** ಅಂದರೆ ಜೀವಾತ್ಮನು, ಚೇತನನು. ಇವನ ಸ್ವರೂಪ ಸ್ವಭಾವಗಳು ಮುಕ್ತ ಮತ್ತು ಬದ್ಧ ಎಂಬ ಎರಡು ಅವಸ್ಥೆಗಳಲ್ಲಿಯೂ ತಿಳಿಯತಕ್ಕುದು; **ಬದ್ಧದೆಶೆ** ಅಂದರೆ, ಪ್ರಕೃತಿಸಂಬಂಧವಾದ ಶರೀರದಲ್ಲಿರುವ ಸ್ಥಿತಿ : **ಮುಕ್ತದೆಶೆಯಲ್ಲಿ** ಜೀವಾತ್ಮನು, ಅಕ್ಷರಂ-ನಾಶರಹಿತನು ; ಅನಿರ್ದೇಶ್ಯಃ–ನಿರ್ಣಯಿಸಲಸಾಧ್ಯನು ; ಅವ್ಯಕ್ತಂ-ಇಂದ್ರಿಯಗಳಿಗೆ ಅಗೋಚರನು ; ಸರ್ವತ್ರಗಂ–ಎಲ್ಲೆಲ್ಲಿಯೂ ವ್ಯಾಪಿಸಿರತಕ್ಕವನು ; ಅಚಿಂತ್ಯಂ–ಚಿಂತಿಸಲಾಗದವನು ; ಅಚಲಂ-ಸ್ಥಿರಸ್ವರೂಪನು ; ಧ್ರುವಂ–ಶಾಶ್ವತನು–ಅಂದರೆ, ಜೀವನಿಗೆ ಹುಟ್ಟಿಲ್ಲ, ಬೆಳವಳಿಕೆಯಿಲ್ಲ; ಕ್ಷಯವಿಲ್ಲ ಮರಣವೂ ಇಲ್ಲ–ದೇಹಕ್ಕೆ ಮೊದಲೂ, ದೇಹವಿರುವಾಗಲೂ, ದೇಹವು ಹೋದಮೇಲೂ ಇರತಕ್ಕವನು ; ಆದುದರಿಂದ ನಿತ್ಯನೂ, ಸ್ವಯಂಪ್ರಕಾಶನೂ, ಸೂಕ್ಷ್ಮನೂ, ಆನಂದರೂಪನೂ ಆದುದರಿಂದ ವಿಕಲ್ಪಶೂನ್ಯನು ನಾನಾ ವಿಧಗಳಾದ ಶರೀರಗಳಲ್ಲಿ ಪ್ರವೇಶಿಸಿದರೂ, ಪ್ರಾಣ ಮೂಲಕವಾಗಿ ಅವುಗಳಿಗೆ ಆಧಾರಕನೇ ಹೊರತು, ವಿಕಾರಶೂನ್ಯನು, ನಿರವಯನು, ಜ್ಞಾನಾಶ್ರಯನು, ಧಾರ್ಯನು. ಈ ನಿಜವಾದ ಆತ್ಮಸ್ವರೂಪವು, ಇಂದ್ರಿಯನಿಗ್ರಹ ಅಹಂಕಾರ, ಮಮಕಾರಾದಿ ಮನೋವ್ಯಾಪಾರಗಳು ಅಡಗಿದ ಮೇಲೆ ವ್ಯಕ್ತಪಡುತ್ತದೆ. ಈ ಮನೋವ್ಯಾಪಾರಗಳು ಅಡಗುವ ಮಾರ್ಗವನ್ನು ನಿಮಿಸಿ ಇರುತ್ತದೆ.

(ii) **ಅಚಿತ್**—ಪ್ರಕೃತಿಸಂಬಂಧವಾದ ದೇಹವು. **ದೇಹಸ್ವರೂಪವು** ಯಾವುದೆಂದರೆ ದೇಹಕ್ಕೆ ಹುಟ್ಟು, ಬೆಳವಳಿಕೆ, ಕ್ಷಯ, ಮರಣ ಈ ವಿಕಾರಗಳೆಲ್ಲಾ ಉಂಟು. ಜಡಸ್ವಭಾವ ಹಸಿವು, ತೃಷ್ಣೆ, ನಿದ್ರೆ, ವ್ಯಾಧಿ, ದುಷ್ಕರ್ಮ, ದುಃಖ, ಸುಖ, ಆಲಸ್ಯ ಈ ಮೊದಲಾದ ಹೇಯಗುಣಗಳೆಲ್ಲಾ, ದೇಹಕ್ಕೆ ಸಂಬಂಧಪಟ್ಟುವು.

(iii) **ಈಶ್ವರ ಸ್ವರೂಪ ಸ್ವಭಾವಗಳು.**

(1) ಸಮಸ್ತ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನು.

(2) ಶ್ರಿಯಃಪತಿಯು ಸ್ವರೂಪ ರೂಪಾದಿಗಳಲ್ಲೂ ಲಕ್ಷ್ಮಿಯೊಂದಿಗೆ ನಿತ್ಯಯೋಗವುಳ್ಳವನು, ಷಾಡ್ಗುಣ್ಯಪರಿಪೂರ್ಣನು. ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸು. ಇವೇ ಷಾಡ್ಗುಣ್ಯಗಳು.

(3) ನಿತ್ಯ ವಿಭೂತಿನಾಯಕನು. ಪರಮಪದದಲ್ಲಿ ಶ್ರೀಮನ್ನಾರಾಯಣನು, ಶ್ರೀ ಭೂಮಿಸಮೇತನಾಗಿ ಬಿಜಯಮಾಡಿಸಿರುವವನು.

(4) ದಿವ್ಯಮಂಗಳ ವಿಗ್ರಹ ವಿಶಿಷ್ಟನು.

(5) ಜ್ಞಾನ, ಆನಂದ, ಮೊದಲಾದ ಅಸಂಖ್ಯೇಯ ಕಲ್ಯಾಣಗುಣ ವಿಶಿಷ್ಟನು, ಸರ್ವಜ್ಞನು.

(6) ಸಕಲ ಚೇತನಾಚೇತನಾನ್ತರಾತ್ಮನು.

(7) ಮೋಕ್ಷ ಹೇತುವು.

(8) ಅವಾತ್ಮ ಸಮಸ್ತ ಕಾಮನು.

(9) ಸರ್ವವ್ಯಾಪಕನು.

(10) ವಿಶ್ವರೂಪನು.

(11) ಸರ್ವಜಗತ್ಸ್ವಾಮಿ.

(12) ಸರ್ವೋಪಾಸ್ಯನು.

ಇವೇ ಮೊದಲಾದ ಅಸಂಖ್ಯಾತಸ್ವರೂಪ ಸ್ವಭಾವವುಳ್ಳವನು.

ಹಿಂದೇ ಜೀವಾತ್ಮಸ್ವರೂಪು ವಿವರಣೆಯಲ್ಲಿ ಮುಕ್ತದಶೆಯಲ್ಲಿನ ಜೀವಾತ್ಮ ಸ್ವರೂಪವನ್ನು ವಿವರಿಸಿರುತ್ತೆ. ಇಲ್ಲಿ 'ಸ್ಥೂಲ' ಅಂದರೆ **ಬದ್ಧ, ಪ್ರಕೃತಿ ಸಂಬಂಧವಾದ ದೇಹದಲ್ಲಿರುವ ಜೀವನಸ್ವರೂಪವು** ತಿಳಿಸಲ್ಪಡುತ್ತದೆ:

(i) **ಸಂಕೋಚಜ್ಞಾನವುಳ್ಳವನು**, ಅಜ್ಞನು.

(ii) ಪರಾಧೀನನು, ಅಸ್ವಾತಂತ್ರ್ಯನು, ಪರತಂತ್ರನು.

(iii) **ಅಶುದ್ಧನು.**

(iv) **ಹೇಯಗುಣ** ವಿಶಿಷ್ಟನು.

ಅಂದರೆ, ಮುಕ್ತದಶೆಯಲ್ಲಿಲ್ಲದಿದ್ದ ಹೇಯಗುಣಗಳೆಲ್ಲಾ, ಸ್ಥೂಲದಶೆಯಲ್ಲಿ, ದೇಹಸಂಬಂಧದಿಂದುಂಟಾಗಿರುತ್ತೆಂಬುವದು ಸ್ಪಷ್ಟವಾಯಿತು. ಈ ಹೇಯ ಗುಣಗಳು ದೇಹಕ್ಕೆ ಸಂಬಂಧಿಸಿರುವುವು. ಆದುದರಿಂದ ಈ ಬದ್ಧದಶೆಯಲ್ಲಿಯೇ ಈ ಹೇಯಗುಣಗಳನ್ನು ಹೋಗಲಾಡಿಸಿ, ಶುದ್ಧನಾಗಿ, ಆ ದಶೆಯಲ್ಲಿಯೂ ಉಳಿದಿದ್ದ ಪ್ರಾರಬ್ಧಕರ್ಮವನ್ನೂ ಹೋಗಲಾಡಿಸಿಕೊಂಡು, ಶ್ರೀಮನ್ನಾ ರಾಯಣನ ಸಾಯುಜ್ಯವನ್ನು ಹೊಂದುವುದೇ ಈ ಚೇತನನು ಮಾನುಷ ಜನ್ಮವನ್ನು ಎತ್ತಿದುದಕ್ಕೆ ಮುಖ್ಯೋದ್ದೇಶ. ಈ ಉದ್ದೇಶವನ್ನು ಸಫಲ ಗೊಳಿಸಲು, ಬೇಕಾದ ಸಾಧನಗಳುಂಟಾಗಿರುವುದು, ಕರ್ಮಭೂಮಿಯಾದ ಈ ಭರತವರ್ಷವು. ಅಂದರೆ, ಭರತವರ್ಷದಲ್ಲಿ ಸಾಧಾರಣವಾಗಿ ಹೇಗೆ ಆತ್ಮ

ಪರಮಾತ್ಮಸ್ವರೂಪು ವಿಚಾರದಲ್ಲಿ ಚೇತನರಿಗೆ ವಿಶೇಷ ಆಸಕ್ತಿಯೋನಶ್ವರಗಳಾದ ದ್ರವ್ಯವೇ ಮೊದಲಾದ ಐಹಿಕ ವಿಷಯಗಳಲ್ಲಿ ಹೇಗೆ ಆಸಕ್ತಿಯು ಕಮ್ಮಿಯೋ, ಹಾಗೆಯೋ, ಪಾಶ್ಚಿಮಾತ್ಯದೇಶದಲ್ಲಿ ಸಾಧಾರಣವಾಗಿ ಐಹಿಕ ವಿಷಯಗಳಲ್ಲಿ ಆಸಕ್ತಿಯು ವಿಶೇಷ, ಆತ್ಮಾನಾತ್ಮ ವಿಚಾರಗಳಲ್ಲಿ ಶ್ರದ್ಧೆ ಕಡಮೆ. ಆದುದರಿಂದ, ಇವುಗಳಿಗೆ "ಭೋಗಭೂಮಿ" ಎಂದು ಹೆಸರು. ಇದು ಸಹಜವಾದ ಸಂಗತಿಯೆಂಬುದು ಸರ್ವಜನಸಮ್ಮತವಾದ ವಿಷಯವು. ಆದ ಕಾರಣ ಈ ಪುಣ್ಯ ಕರ್ಮಭೂಮಿಯಲ್ಲಿ ಮಾನುಷಜನ್ಮವನ್ನು ಹೊಂದಿರುವವರೆಲ್ಲರೂ ಜಾಗರೂಕರಾಗಿ, ಅಜಾಗರೂಕತೆಯಿಂದ ಮುಂದೆ ಲಭಿಸತಕ್ಕ ಸ್ಥಾವರಜನ್ಮವನ್ನು ತಪ್ಪಿಸಿಕೊಳ್ಳಲೋಸುಗ, ಜ್ಞಾನ, ಭಕ್ತಿ. ವೈರಾಗ್ಯಗಳನ್ನು ಸಾಧಿಸಿ, ಪಡೆದು, ಮೋಕ್ಷವನ್ನು ಹೊಂದುವದು ಆವಶ್ಯಕವು. ಇದಕ್ಕೆ ಸಹಕಾರಿಯಾದ "ಚಿದೀಶ್ವರ" ಸಂಬಂಧವನ್ನು ತಿಳಿದು, ಮೇಲೆ ಹೇಳಿದ ಪ್ರಕಾರ ಮೋಕ್ಷವನ್ನು ಹೊಂದುವ ವಿಧಾನವನ್ನು ವಿಚಾರಿಸೋಣ :

ಚಿದೀಶ್ವರ ಪರಸ್ಪರ ಸಂಬಂಧಗಳು

ಈಶ್ವರ–ನಾರಾಯಣ	ಜೀವಾತ್ಮ
(1) ಪಿತೃ–ವಿಶೇಷ್ಯ	ಪುತ್ರ–ವಿಶೇಷಣ
(2) ರಕ್ಷಕ	ರಕ್ಷ್ಯ
(3) ಶೇಷೀ	ಶೇಷ
(4) ಭರ್ತೃ	ಭಾರ್ಯೆ

ಈ ಸಂಬಂಧವು ಬಹು ಮುಖ್ಯವಾದುದು. ಚೇತನನ ಅನನ್ಯಾರ್ಹ ಶೇಷತ್ವವನ್ನು ವ್ಯಕ್ತಪಡಿಸುತ್ತೆ. "ತ್ವಮೇವ ಶರಣಂ ಮಮ" ; "ಮಾಮೇಕಂ ಶರಣಂ ವ್ರಜ" ಎಂಬ ಉಕ್ತಿಗಳಲ್ಲಿ, ಇದೇ ಸಂಬಂಧವೇ ಗೂಢವಾಗಿದೆ. ಶ್ರೀ ಆಣ್ಡಾಳಾಳ್ವಾರವರು ಪಾಡಿದ "ತಿರುಪ್ಪಾವೈ" ಎಂಬ ಗ್ರಂಥದ ಇಪ್ಪತ್ತೊಂಬತ್ತನೆಯ ಪಾಶುರದಲ್ಲಿ, "ಉನಕ್ಕೇನಾ ಮಾಳ್ಶೆಯ್ಯೋಂ" ಎಂಬುವ ಉಕ್ತಿಯಲ್ಲಿ ಭರ್ತೃಭಾರ್ಯೆ ಸಂಬಂಧವು ಅತಿ ಪುಷ್ಟೀಕರಿಸಲ್ಪಟ್ಟಿದೆ.

(5) ಜ್ಞೇಯ–ವಿಶೇಷ್ಯ ಜ್ಞಾತೃ–ವಿಶೇಷಣ.
(6) ಸ್ವಾಮಿ ಸ್ವಂ
(7) ಆಧಾರ ಆಧೇಯ
(8) ಆತ್ಮ (ಶರೀರಿ) ಶರೀರ
(9) ಭೋಕ್ತೃ. ಭೋಗ್ಯ

ಈ ನವವಿಧ ಸಂಬಂಧಗಳು ಜೀವ ಪರಮಾತ್ಮರಿಗೆ ಇರುತ್ತೆಂಬುದು. ವೇದಗಳಿಂದಲೂ, ಶ್ರೀಮದ್ಭಾಗವತದಿಂದಲೂ, ಶ್ರೀಭಗವದ್ಗೀತೆಯಿಂದಲೂ, ಶ್ರೀವಿಷ್ಣು ಪುರಾಣವನ್ನು ಜ್ಞಾನದಿಂದ ಓದುವವರಿಂದಲೂ ಸ್ಪಷ್ಟಪಡುತ್ತೆ.

ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಸಂಪಾದಿಸಿ, ಮೋಕ್ಷವನ್ನು ಹೊಂದುವ ವಿಧಾನ—ಗೃಹಸ್ಥಾಶ್ರಮದಲ್ಲಿ ಮುಮುಕ್ಷುವಾದ ಚೇತನನಿಗೆ ಮೋಕ್ಷವನ್ನು ಕೊಡುವ ಸ್ವಾಮಿಯ ದೇವಾಲಯಕ್ಕೆ ಇರುವ ಮಹಾದ್ವಾರಕ್ಕೆ ಕಾವಲುಗಾರನೇ ಆಚಾರ್ಯನು: ಆದುದರಿಂದ ಸದಾಚಾರಶೀಲನಾದ ಆಚಾರ್ಯನನ್ನು ಚೇತನನು ಮೊದಲು ಸಂಪಾದಿಸಬೇಕು. ಸಂಪಾದಿಸಿದನಂತರ ಅವನನ್ನು ಚೆನ್ನಾಗಿ ಸೇವಿಸಿ, ಅವನನುಗ್ರಹಕ್ಕೆ ಪಾತ್ರನಾಗಿ, ನಿಷ್ಕಾಮಕರ್ಮವನ್ನು ಮಾಡುವ ಶಕ್ತಿಯನ್ನು ಸಂಪಾದಿಸಬೇಕು.

ಗೃಹಸ್ಥಾಶ್ರಮದಲ್ಲಿ ಮೋಕ್ಷಹೊಂದುವ ವಿಧಾನ— ಚೇತನನು ವರ್ಣಾಶ್ರಮಧರ್ಮಗಳನ್ನು ಸರಿಯಾಗಿ ಅನುಷ್ಠಾನಮಾಡಿ, ಅದರಲ್ಲಿ ಸ್ವಾರ್ಥತೆಯನ್ನು ಸ್ವಲ್ಪವೂ ಇಡದೆ, ಸಾತ್ವಿಕತ್ಯಾಗಮಾಡಿ ಅಂದರೆ ಹರಿ ಪ್ರೀತಿಮಾಡಿ, ಅನುಕೂಲಿಸಿದಷ್ಟು ಸಾಧುಜನರ ಸಹವಾಸದಲ್ಲಿರುವದರಿಂದ, ಕ್ರಮೇಣ ಇವನಿಗೂ ಪರಮಾತ್ಮನಿಗೂ ಇರುವ "ಶೇಷಶೇಷೀಭಾವವು" ವ್ಯಕ್ತಪಡುತ್ತದೆ. ಇದರಿಂದ, ಚೇತನನು ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಗಳಲ್ಲಿಯೂ ತಾನು ಪರಮಾತ್ಮನಿಗೆ ದಾಸಭೂತನೆಂದೂ, ತಾನು ಮಾಡುವ ಕೈಂಕರ್ಯವೆಲ್ಲಾ ಶ್ರೀಮನ್ನಾರಾಯಣನಿಗಾಗಿಯೇ ಹೊರತು, ತನಗಲ್ಲವೆಂದೂ ಸ್ಥಿರೀಕರಿಸಲ್ಪಡುತ್ತದೆ. ಈ ಅರ್ಥವನ್ನೇ ಸ್ಥಿರೀಕರಿಸುವ ಶ್ರೀ ಗೀತೆ, ಶ್ರೀ ಭಾಗವತ ಶ್ಲೋಕಗಳು ಬರೆಯಲ್ಪಟ್ಟವೆ :

ಶ್ರೀ ಗೀತಾ ಶ್ಲೋಕಗಳು

"ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿದ ದಾಸಿಯತ್ ।
ಯತ್ತಪಶ್ಯಸಿ ಕೌಂತೇಯ ತತ್ಕುರುಷ್ವಮ ದರ್ಪಣಂ ॥"

ಅ. ೯. ಶ್ಲೋ–೨೭.

"ಪತ್ರಂಪುಷ್ಪಂ ಫಲಂತೋಯಂ ಯೋಮೇಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ ॥"

ಅ. ೯. ಶ್ಲೋ-೨೬

"ಮನ್ಮನಾಭವ ಮದ್ಭಕ್ತೋ ಮದ್ಯಾಜೀಮಾಂ ನಮಸ್ಕುರು ।
ಮಾಮೇವೈಷ್ಯಸಿ ಯುಕ್ತ್ವೈವ ಮಾತ್ಮಾನಂ ಮತ್ಪರಾಯಣಃ ॥"

ಅ. ೯. ಶ್ಲೋ-೩೪

"ಮಚ್ಚಿತ್ತಾ ಮದ್ಗತಪ್ರಾಣಾಃ ಭೋಧಯನ್ತಃ ಪರಸ್ಪರಂ ।
ಕಥಯನ್ತಶ್ಚಮಾಂ ನಿತ್ಯಂ ತುಷ್ಯಂತಿ ಚರಮನ್ತಿಚ ॥"

ಅ. ೧೦. ಶ್ಲೋ-೯

ಶ್ರೀಮದ್ಭಾಗವತದಲ್ಲಿ ಸೌಭರಿಮಹರ್ಷಿಯು ಹೇಳುತ್ತಾರೆ

ಸಂಗತ್ಯಜೇತ ಮಿಥುನವ್ರತ್ ನಾಂಮುಮುಕ್ಷುಃ ಸರ್ವಾತ್ಮ
ನಾನವಿಸೃಜೇ ದ್ಬಹಿರಿಂದ್ರಿಯಾಣಿ। ಏಕಶ್ಚರನ್ರಹಸಿ ಚಿತ್ತ
ಮನಂತ ಈಶೇಯುಂ ಜೀತತದ್ವ್ರತಿಷು ಸಾಧುಷುಚೇತ್ಪ್ರಸಂಗಃ ॥

ಹೀಗೆ ಜ್ಞಾನಗರ್ಭಿತವಾದ ಕರ್ಮಯೋಗವು ಆಚಾರ್ಯಾನುಗ್ರಹದಿಂದಲೂ, ಸತ್ಸಹವಾಸದಿಂದಲೂ, ಪ್ರಜ್ವಲಿಸುತ್ತ ಬರಲು, ಆ ಬಲಿಯದಿಂದ ಭಗವತ್ಕಟಾಕ್ಷವು ಅಂಕುರಿಸಿ, ಶ್ರೀಮನ್ನಾರಾಯಣನ ಪಾದಗಳಲ್ಲಿ ಭಕ್ತಿಯುಂಟಾಗುತ್ತದೆ. ಆ ಭಕ್ತಿ ತೋರಿದ ಕೂಡಲೆ, ಸದಾಚಾರ್ಯಮುಖೇನ, ಸಮಸ್ತ ಪ್ರಾಣಿಗಳೂ ಆತ್ಮಭೂತನಾದ ಶ್ರೀಮನ್ನಾರಾಯಣನನ್ನೇ **ಸರ್ವವಿಧದಿಂದಲೂ ನಂಬಿ,** ಚೇತನನಿಗೆ, ಆತನೇ ಪ್ರಾಪ್ಯನೂ, ಪ್ರಾಪಕನೂ, ರಕ್ಷಕನೂ ಆಗಿರುವನೆಂಬ ದೃಢಭಾವದಿಂದ ಸಮಸ್ತ ಭಯವೂ ನಿವೃತ್ತವಾಗಿ, ಆತನ ಸಾನ್ನಿಧ್ಯವು ಲಭಿಸುವದು. ಇದೇ ಅರ್ಥವು ಶ್ರೀ ಗೀತೆಯಲ್ಲಿ ಈ ಕೆಳಗೆ ಬರೆದ ಶ್ಲೋಕಗಳಿಂದ ತೋರುತ್ತದೆ:

"ಅನನ್ಯಚೇತಾ ಸ್ಸತತಂ ಯೋಮಾಂಸ್ಮರತಿ ನಿತ್ಯಶಃ ।
ತಸ್ಯಾಹಂ ಸುಲಭಃಪಾರ್ಥ ನಿತ್ಯಯುಕ್ತ ಸ್ಯಯೋಗಿನಃ ॥"

ಅ. ೮. ಶ್ಲೋ-೧೪

"ಭಕ್ತ್ಯಾಮಾ ಮಭಿಜಾನಾತಿಯಾ ವಾನ್ಯಾಶ್ಚಾ ಸ್ಮಿತತ್ವತಃ ।
ತತೋಮಾಂ ತತ್ವತೋಜ್ಞಾತ್ವಾ ವಿಶತೇ ತದನಂತರಂ ॥"

ಅ. ೧೮. ಶ್ಲೋ-೫೫

**"ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಂ ।
ದದಾಮಿಬುದ್ಧಿಯೋಗಂತಂ ಯೇನ ಮಾಮುಪಯಾಂತಿತೇ॥"
"ತೇಷಾಮೇವಾ ನುಕಂಪಾರ್ಥ ಮಹಮಜ್ಞಾನಜಂತಮಃ।
ನಾಶಯಾಮ್ಯಾತ್ಮ ಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥"**

ಅ. ೧೦. ಶ್ಲೋ-೪

ಹೀಗೆ ಭಕ್ತಿಪ್ರಪತ್ತಿ ಮೂಲಕವಾಗಿ ಪರಮಾತ್ಮನನ್ನು ಧ್ಯಾನಿಸುತ್ತಾ ತತ್ಪರಾಯಣರಾಗಿರುವವರಿಗೆ, ಆತನಲ್ಲಿ ಅನನ್ಯಾರ್ಹಶೇಷತ್ವವು ಫಲಿಸಿ ಆತನ ಪರಮಾನುಗ್ರಹದಿಂದ ದಿವ್ಯಜ್ಞಾನವು ಲಭಿಸುವದು. ಈ ದಿವ್ಯಜ್ಞಾನವು ಅಭಿವೃದ್ಧಿ ಹೊಂದುತ್ತಲೆ, ಸಮಸ್ತ ಪ್ರಾರಬ್ಧ ಕರ್ಮಗಳೆಲ್ಲಾ ನಶಿಸಿ, ಪ್ರಾಪಂಚಿಕ ವಿಷಯಗಳಲ್ಲೆಲ್ಲಾ ಸಂಪೂರ್ಣ ಜಿಹಾಸೆ ವೈರಾಗ್ಯ ಉಂಟಾಗಿ, ಕಾಲನಿರೀಕ್ಷಣೆ ಮಾಡುತ್ತಾ,

**"ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂವ್ರಜ ।
ಅಹಂತ್ವಾಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿಮಾಶುಚಃ ॥"**

ಎಂಬ ಶ್ರೀ ಗೀತೆಯ ಕೊನೆಯಲ್ಲಿ ಭಗವಂತನ ವಾಗ್ದಾನಪ್ರಕಾರ, ಆ ಕಾಲಬಂದ ಒಡನೆ ಚೇತನನು ಅವನ ಸಾಯುಜ್ಯವನ್ನೇ ಹೊಂದುವನು. ಶ್ರೀ ವಿಷ್ಣುಪುರಾಣದಲ್ಲಿ ಪ್ರತಿಪಾದಿಸಿರುವ ಮುಖ್ಯ ಲೋಕೋಪಕಾರವಾದ ಪರಮತತ್ವವೇ ಇದು.

ಈ ಮೋಕ್ಷಪ್ರಕರಣದಲ್ಲಿ ಹೇಳಿರುವ, ಶ್ರೀ ಗೀತೆ, ಶ್ರೀ ಭಾಗವತ ಶ್ಲೋಕಗಳ ಭಾಷ್ಯವನ್ನು ಚನ್ನಾಗಿ ಪರಿಶೀಲಿಸಿ ಮನನಮಾಡತಕ್ಕುದು.

ಪ್ರಾರಬ್ಧ ಕರ್ಮ ವಿಷಯದಲ್ಲಿ ಕೆಲವು ವಿಪರೀತ ಅಭಿಪ್ರಾಯಗಳು ಪಾಶ್ಚಿಮಾತ್ಯ ವಿದ್ಯೆಗಳಲ್ಲಿ ವಿಶಾರದರಾದ ಕೆಲವು ಮಹನೀಯರಿಂದ ಹೊರಪಟ್ಟಿರುವುವು. ಆದಕಾರಣ ಆ ವಿಷಯದಲ್ಲಿ ಸ್ವಲ್ಪ ವಿಚಾರಮಾಡುವೆವು:

ಈ ಪ್ರಪಂಚಸೃಷ್ಟಿಯು ನಮ್ಮ ಸಿದ್ಧಾಂತರೀತ್ಯಾ, ಭಗವಲ್ಲೀಲೆಯಿಂದುಂಟಾದಾಗ್ಯೂ, ಪಾಪಕರ್ಮಗಳಿಂದ ಕಟ್ಟಲ್ಪಟ್ಟ ಜೀವರೇ ಪ್ರಪಂಚಸೃಷ್ಟಿಗೆ ಕಾರಣವು. ಏಕೆಂದರೆ, ಜೀವಾತ್ಮರು ಸೃಷ್ಟಿಗೆ ಮೊದಲು, ದೇವಾದಿ ನಾಮರೂಪಗಳಿಲ್ಲದೆ ಹಿಂದೆ ತಾವು ಅನುಭವಿಸಿ ಮಿಕ್ಕ ಕರ್ಮವಾಸನೆಯಿಂದ ಕೂಡಿರುವರು. ಹಾಗೆ ಕರ್ಮವಾಸನೆಯಿಂದ ಬದ್ಧಜೀವರೇ ಸೃಷ್ಟಿಗೆ ನಿಮಿತ್ತವಾದುದರಿಂದ, ಜೀವಗಳು "ಹೇತು"ವೆನಿಸುವುವು. ಈ ಬದ್ಧಜೀವರು ಪುನಃ ಪುನಃ ಸಂಸಾರದಲ್ಲಿಯೇ ಬಿದ್ದು ಸ್ವತಂತ್ರರಂತೆ ಪುಣ್ಯ ಪಾಪ ಕರ್ಮಗಳನ್ನು ಮಾಡುತ್ತಾರೆ. ತಾವು

ಮಾಡತಕ್ಕ ಕರ್ಮಗಳಿಗೆ ಅನುಸಾರವಾಗಿ ಫಲವನ್ನು ಅನುಭವಿಸುವರು. ಹೀಗೆ ಹೇಳುವದರಿಂದ, ಜೀವಗಳು ಹಿಂದಿನಜನ್ಮದ ಕರ್ಮಫಲವನ್ನು ಈ ಜನ್ಮದಲ್ಲಿ ಅನುಭವಿಸುವದರಿಂದ, ಮನುಷ್ಯನಿಗೆ ಉತ್ಸಾಹ ಪ್ರಯತ್ನಕಾರ್ಯ ಮುಂತಾದುವು ಗಳಿಗೆ ಕಾರಣವೇ ಇರುವದಿಲ್ಲವು. ಇಂತಹ ತತ್ವಬೋಧನೆಯಿಂದ ಪ್ರಪಂಚವು ಅಭಿವೃದ್ಧಿಹೊಂದದೆ, ಕ್ಷೀಣಿಸಲು ಮಾರ್ಗವಾಗುತ್ತೆಂಬುದಾಗಿ ಕೆಲವರು ಅಭಿಪ್ರಾಯಪಡುತ್ತಾರೆ. ಇದು ತಪ್ಪು. ಸತ್ವರಜಸ್ತಮೋಗುಣಯುಕ್ತವಾದ ಮನಸ್ಸು ಎಂದಿಗೂ ಸುಮ್ಮಗೆ ಕೂಡುವದಿಲ್ಲ. ಬೇಕಾದಷ್ಟು ಪ್ರಯತ್ನವನ್ನು ಮಾಡಿಯೇ ಮಾಡುತ್ತದೆ. ಆದರೆ ಪರಿಣಾಮವೇನೋ "ಕರ್ಮಾನುಗುಣಫಲ ಭಾಕ್" ಎಂಬ ವೇದಶ್ರುತಿಪ್ರಕಾರ, ಕರ್ಮಗಳಿಗೆ ಅನುಸಾರವಾದ ಫಲವು ದೊರೆಯುತ್ತದೆ. ಇಲ್ಲದಿದ್ದರೆ ವರ್ಣಾಶ್ರಮಧರ್ಮಪ್ರಕಾರ ನೀನು ಯುದ್ಧವನ್ನು ಮಾಡಿಯೇ ಮಾಡಬೇಕು ಎಂದೂ, ಕರ್ಮಾನುಗುಣವಾಗಿ ಆಗಬೇಕಾದ ಫಲವನ್ನು ಯಾರಿಂದಲೂ ತಪ್ಪಿಸಲಳವೆಂದೂ, ಘಂಟಾಘೋಷವಾಗಿ ಯುದ್ಧ ರಂಗದಲ್ಲಿ ಶ್ರೀ ಗೀತಾಚಾರ್ಯನು ಅರ್ಜುನನಿಗೆ ಹೇಳಲು ಕಾರಣವೇನಿತ್ತು? ಈ ವಿಷಯವು ಗ್ರಂಥಮೂಲಕ ಪರಿಷ್ಕಾರವಾಗುವದಲ್ಲ. ಪ್ರತಿಯೊಬ್ಬರೂ ತಮ್ಮ ಜೀವಮಾನಕಾಲದಲ್ಲಿ, ಇಂಗ್ಲಿಷ್ ಭಾಗದ ಪ್ರಸ್ತಾವನೆಯಲ್ಲಿ ಸೂಚಿಸಿರುವ ಮೇರೆಗೆ, ಈ ತತ್ವದ ನಿಶ್ಚಿತಾರ್ಥವನ್ನು ಪರೀಕ್ಷಿಸಿ ತಮಗೆ ತೋರಿಬಂದ ಪ್ರಕಾರ ಅನುಷ್ಠಿಸುವದು ಸಹಜ. ದಾಸನಾದ ನಾನು ನನ್ನ ಜೀವಮಾನಕಾಲದಲ್ಲಿ ಇದುವರಿವಿಗೂ ಚನ್ನಾಗಿ ಪರೀಕ್ಷಿಸಿರುತ್ತೇನೆ. ಶ್ರೀಕೃಷ್ಣ ಭಗವಂತನ ಈ ಕೆಳಗೆ ಬರೆದಿರುವ ಶ್ರೀ ಗೀತಾವಾಕ್ಯ ಸತ್ಯವೆಂದು ನನ್ನ ಮನಸ್ಸಿಗೆ ನಿಸ್ಸಂದೇಹವಾಗಿ ದೃಢಪಟ್ಟಿದೆ:

"ಸದೃಶಂ ಚೇಷ್ಟತೇಸ್ವಸ್ಯಾಃ ಪ್ರಕೃತೇ ಜ್ಞಾನವಾನಪಿ ।
ಪ್ರಕೃತಿಂ ಯಾಂತಿಭೂತಾನಿ, ನಿಗ್ರಹಃ ಕಿಂಕರಿಷ್ಯತಿ ॥"

ಇದುವರಿವಿಗೆ ಶ್ರೀ ವಿಷ್ಣುಪುರಾಣದಲ್ಲಿ ಹೇಳಿರುವ ವಿಶೇಷ ರಹಸ್ಯಗಳನ್ನೆಲ್ಲಾ ಸಂಕ್ಷೇಪವಾಗಿ ವಿಚಾರಿಸಲಾಯಿತು. ಇನ್ನು ಮುಕ್ಕುವುಗಳಿಗೆ, ಆಸಕ್ತಿಯುಳ್ಳ ವಾಚಕರು ವಿಷಯಾನುಕ್ರಮಣಿಕೆಯಲ್ಲಿ ಪ್ರತಿ ಅಧ್ಯಾಯದಲ್ಲಿನ ಸಂಕ್ಷೇಪ ವಿಷಯವನ್ನು ಓದಿನೋಡಿ, ತಮ್ಮ ಅನುಕೂಲಾನುಸಾರ, ಅವುಗಳನ್ನು ವಿಶದ ವಾಗಿ ಅವಲೋಕಿಸಬಹುದು. ಈ ಗ್ರಂಥದಲ್ಲಿ, ತಿಳಿಯಬೇಕಾದ ವಿಷಯಗಳೂ, ಜ್ಞಾನ, ಭಕ್ತಿಗರ್ಭಿತಗಳಾದ ಅನೇಕ ಉಪಾಖ್ಯಾನಗಳೂ, ಶ್ರೀ ಕೃಷ್ಣಾವತಾರದ

ಸಂಪೂರ್ಣ ಕಥೆಯೂ (ಜನೆಯ ಅಂಶ ನೋಡಿ) ಇರುತ್ತವೆ. ಇದು ಸಂಕ್ಷೇಪ "ಭಾಗವತ"ವೆಂದು ಹೇಳುವದರಲ್ಲಿ ಯಾವ ಸಂದೇಹವೂ ಇಲ್ಲವು.

ದ್ವಿತೀಯ, ಚತುರ್ಥಾಂಶಗಳಲ್ಲಿ ಕೆಲವು ಭೂಗೋಳ ವಿಷಯಗಳೂ, ಕೆಲವು ರಾಜವಂಶಗಳೂ, ಆ ವಂಶಗಳಲ್ಲಿನ ಪ್ರಸಿದ್ಧ ರಾಜರುಗಳ ವಿಷಯವೂ, ಅವುಗಳಲ್ಲಿ, "ನವನಂದರು," ಕೌಟಿಲ್ಯ, ಚಂದ್ರಗುಪ್ತ, ಯವನರು ಅಂದರೆ ಗ್ರೀಕ್‌ಜನರು ಎಂಬ ಹೆಸರುಗಳೆಲ್ಲಾ ಕಂಡುಬರುತ್ತೆ. ನಮ್ಮ ಹಿಂದಿನ ಚರಿತ್ರೆ ವಿಷಯದಲ್ಲಿ, ಈಗ ಒಂದುನೂರು ವರ್ಷಗಳಿಂದ, ಶಾಸನಗಳ ಪರೀಕ್ಷೆಯಿಂದಲೂ, ಹಳೆಯ ನಾಣ್ಯಗಳ ಪರೀಕ್ಷೆಯಿಂದಲೂ, ಅನೇಕ ವಿಷಯಗಳು ಹೊರಪಟ್ಟಿರುತ್ತವೆ; ಇನ್ನೂ ಹೊರಪಡುತ್ತಲಿವೆ. ಅಲ್ಲದೆ, ಹಿಂದುಸ್ಥಾನದ ಒಂದು ಪುರಾತನದ ಭೂಗೋಳವೂ, ಒಂದು ಪುರಾತನ ಪಠವೂ, ಪುನೆಯ ಭಂಡಾರ್‌ಕರ್ ಪುಸ್ತಕ ಭಂಡಾರ ನಿಲಯದಲ್ಲಿ ದೊರೆತಿವೆ. ಇವುಗಳನ್ನೆಲ್ಲಾ ಅವಲೋಕಿಸಿ ಇದರಿಂದ ತಿಳಿಯಬಹುದಾದ ವಿಶೇಷಾಂಶಗಳನ್ನು ಈ ಗ್ರಂಥದ ಎರಡನೆಯ ಮುದ್ರಣದಲ್ಲಿ ಉಲ್ಲೇಕಿಸಬೇಕೆಂದು ಸಂಕಲ್ಪವು. ಇದನ್ನು ನೆರವೇರಿಸುವ ಭಾರವು, ಶ್ರೀಹರಿಯನ್ನು ಅವಲಂಬಿಸಿರುತ್ತದೆ.

ಈ ಗ್ರಂಥವು ಸುಮಾರು ಕ್ರಿ.ಶ.ಕ್ಕೆ ಮೂರುಸಾವಿರ ವರ್ಷಗಳ ಮುಂಚೆ, ಬರೆಯಲ್ಪಟ್ಟಿತೆಂದು, ಗತಿಸಿದ ಶ್ರೀಮಾನ್ ಲೋಕಮಾನ್ಯರಾದ ಬಾಲಗಂಗಾಧರ ತಿಲಕ ಮಹಾರಾಜರವರ, ಭಗವದ್ಗೀತ ಪ್ರಸ್ತಾವನೆಯಿಂದಲೂ, ಅದರು ವೇದಗಳಲ್ಲಿ ಕಂಡುಬಂದ ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳಿಂದಲೂ ನಿರ್ಣಯಿಸಿ ಬರೆದ "ಬರ್‍ಯನ್" ಎಂಬ ಗ್ರಂಥದಿಂದಲೂ ತಿಳಿಯುತ್ತದೆ. ಈ ವಿಷಯವನ್ನೂ ಮುಂದಿನ ಮುದ್ರಣದಲ್ಲಿ ವಿಳಂಬವಾಗಿ ಉಲ್ಲೇಖಿಸಬೇಕೆಂಬ ಸಂಕಲ್ಪವು.

ದಾಸನಾದ ನಾನು, ಸಂಸ್ಕೃತ ಮತ್ತು ದ್ರಾವಿಡ ಭಾಷೆಗಳ ಗ್ರಂಥಗಳಲ್ಲಿರುವ ಅಮೋಘವಾದ ಭಕ್ತಿಯುಕ್ತವಾದ ವಿಷಯಗಳನ್ನು, ಈ ನನ್ನ ಪಾಂಚಭೌತಿಕ ದೇಹವಿರುವವರಿವಿಗೂ, ಕನ್ನಡಕ್ಕೆ ಭಾಷಾಂತರ ಮಾಡುವ, ಮಾಡಿಸುವ ಕೈಂಕರ್ಯದಲ್ಲಿರುವ ಹಾಗೆ ಶ್ರೀಹರಿಯು ಅನುಗ್ರಹಿಸಲಿ ಎಂಬುವದಲ್ಲದೆ, ದಾಸನ ಕಾಲಾನಂತರದಲ್ಲಿಯೂ ಈ ಕೈಂಕರ್ಯವು ನೆರವೇರುವಹಾಗೆ ಆ ಸರ್ವಸ್ವಾತ್ಮಪರನಾದ ಸ್ವಾಮಿಯು ಕರುಣಿಸಲಿ ಎಂಬುವದೇ ನನ್ನ ಹೃದಯಸಾಕ್ಷಿಯಾದ ಪ್ರಾರ್ಥನೆಯು. ಶ್ರೀ ನಮ್ಮಾಳ್ವಾರವರು ಲೋಕೋಜ್ಜೀವನಾರ್ಥವಾಗಿ ವೇದಗಳನ್ನೆಲ್ಲಾ ದ್ರಾವಿಡಭಾಷೆಯಲ್ಲಿ ಭಾಷಾಂತರಮಾಡಿರುವದು, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಭಾಷಾಂತರವಾಗಿರುವದಾಗಿ ತಿಳಿದುಬರುತ್ತೆ. ಗತಿಸಿದ, ಮೈಸೂರು

ವಿದ್ಯಾಭ್ಯಾಸದ ಇಲಾಖೆಯ ಶ್ರೀವರ್ಾ ಎಮ್. ಬಿ. ಶ್ರೀನಿವಾಸೈಯ್ಯಂಗಾರ್ ಮಹನೀಯರು ಕೈಗೊಂಡಿದ್ದ "ನಿತ್ಯಾನುಸಂಧಾನ" ಗ್ರಂಥದ ಕನ್ನಡ ಭಾಷಾಂತರ ಕೈಂಕರ್ಯವೂ ಅರ್ಧಮಾರ್ಗದಲ್ಲಿ ನಿಂತಿರುವಹಾಗೆಯೂ ತಿಳಿಯ ಬರುತ್ತೆ. ಆದುದರಿಂದ ಕೈಂಕರ್ಯರರಿಗೆ ಆಸ್ಪದಕ್ಕೇನೂ ಕೊರತೆಯಿಲ್ಲ. ಈ ಕೈಂಕರ್ಯಗಳನ್ನು ಶ್ರೀಹರಿಯ ನೆರವೇರಿಸಲಿ.

ಇದರೊಡನೆ ಈ ಪ್ರಸ್ತಾವನೆಯನ್ನು ಪೂರ್ತಿಮಾಡಿ, ಈ ಗ್ರಂಥ ಕೈಂಕರ್ಯ ವನ್ನು, ಉದಾರಮನಸ್ಕರಾದ ವಾಚಕರ ಅವಲೋಕನಾರ್ಥವಾಗಿ ಸಮರ್ಪಿ ಸುತ್ತೇನೆ.

ಸಕ್ರೆಪಟ್ಣ ಶ್ರೀನಿವಾಸೈಯ್ಯಂಗಾರ್

ಶ್ರೀ ವಿಷ್ಣುಪುರಾಣದ ಎರಡನೆಯ ಮುದ್ರಣ

ಶ್ರೀ ವಿಷ್ಣುಪುರಾಣಕ್ಕೆ ಎರಡು ಸಂಸ್ಕೃತ ವ್ಯಾಖ್ಯಾನಗಳಿವೆ. ಒಂದು ಶ್ರೀಧರ ಸ್ವಾಮಿಗಳು ಬರೆದಿರುವುದು. ಎರಡನೆಯದು ಶ್ರೀ ವಿಷ್ಣುಚಿತ್ತಸ್ವಾಮಿಗಳವರು ಬರೆದಿರುವುದು. ಶ್ರೀ ವಿಷ್ಣುಚಿತ್ತರು ಶ್ರೀರಾಮಾನುಜರ ಶಿಷ್ಯಸಂತತಿಗೆ ಸೇರಿದವರು. ಈ ಎರಡು ವ್ಯಾಖ್ಯಾನಗಳನ್ನೂ ಅನುಸರಿಸಿ ಮೊತ್ತಮೊದಲು ಕನ್ನಡ ಭಾಷೆಯಲ್ಲಿ ಪರಿವರ್ತಿಸಿದವರು ಹಾಸನ ತಾಲ್ಲೂಕು ಶಾಂತಿ ಗ್ರಾಮದಲ್ಲಿ ವಾಸವಾಗಿದ್ದ ಶ್ರೀರಾಮಾನುಜ ಸೋಮಯಾಜಿಗಳ ಕುಮಾರರಾದ ಶ್ರೀ ಯಜ್ಞನಾರಾಯಣ ದೀಕ್ಷಿತಸ್ವಾಮಿಗಳವರು. ಬರೆದುಕೊಡುವಂತೆ ಪ್ರಾರ್ಥಿಸಿದವರು ಸಕ್ಕರೆ ಪಟ್ಟಣದ ರಾವ್‌ಬಹದ್ದೂರ್ ಶ್ರೀ ಶ್ರೀನಿವಾಸೈಂಗಾರ್ ಸ್ವಾಮಿಗಳವರು. ಇವರು ಬೊಂಬಾಯಿ ಆಧಿಪತ್ಯದಲ್ಲಿ ಎಗ್ಜಿಕ್ಯುಟಿವ್ ಎಂಜಿನಿಯರ್ ಆಗಿದ್ದರು. ವಿಶ್ರಾಂತಿ ಪಡೆದ ಮೇಲೆ ಧಾರವಾಡಾದಲ್ಲಿ ನೆಲಸಿದ್ದರು. ಶಾಂತಿಗ್ರಾಮದ ಶ್ರೀ ರಾಮಾನುಜ ಸೋಮಯಾಜಿಗಳು ಇವರ ಆಚಾರ್ಯರು. ಆಚಾರ್ಯರ ಕುಮಾರರಾದ ಶ್ರೀ ಯಜ್ಞನಾರಾಯಣ ದೀಕ್ಷಿತ ಸ್ವಾಮಿಗಳಲ್ಲಿ ಪ್ರಾರ್ಥಿಸಿ ಪುರಾಣರತ್ನವನ್ನು ಕನ್ನಡ ಭಾಷೆಯಲ್ಲಿ ಗದ್ಯಶೈಲಿಯಲ್ಲಿ ತರ್ಜುಮೆಮಾಡಿಸಿದರು. ಸ್ವತಃ ತಾವೂ ಸಹ ಗ್ರಂಥವನ್ನು ಪರಿಷ್ಕರಿಸಿ ಮುದ್ರಿಸಿದರು. ಕ್ರಿಸ್ತಾಬ್ದ 1928ರಲ್ಲಿ ಕನ್ನಡ ವಚನ ಶೈಲಿಯಲ್ಲಿ ಅಚ್ಚಾದ ಪುಸ್ತಕವು ಪ್ರಕಾಶಕ್ಕೆ ಬಂದಿತು. ಪುರಾಣರತ್ನದ ಪ್ರಥಮ ಮುದ್ರಣವನ್ನು ಪ್ರಕಾಶಕ್ಕೆ ತಂದ ಕೀರ್ತಿಯು ಸಕ್ಕರೆ ಪಟ್ಟಣದ ರಾವ್‌ಬಹದ್ದೂರ್ ಶ್ರೀನಿವಾಸೈಂಗಾರ್ ಸ್ವಾಮಿಗಳವರಿಗೆ ಸಲ್ಲತಕ್ಕದ್ದಾಗಿದೆ.

ಕಳೆದ ಶ್ರೀ ದುರ್ಮತಿನಾಮಸಂವತ್ಸರದ ಫಾಲ್ಗುನ ಶುದ್ಧ ನವಮೀ ಗುರುವಾರ (ತಾ. 4-3-82) ಬೆಂಗಳೂರು ಸಿಟಿ ಜಯನಗರದಲ್ಲಿರುವ ಶ್ರೀ ಆಂಡಾಳ್ ರಂಗಮನ್ನಾರ್ ಸನ್ನಿಧಿಯಲ್ಲಿ ಶ್ರೀ ಯಜ್ಞನಾರಾಯಣ ದೀಕ್ಷಿತಸ್ವಾಮಿಗಳವರ ಶತಾಬ್ದಿ ಮಹೋತ್ಸವವನ್ನು ಅವರ ಶಿಷ್ಯ ಸಂತತಿಯವರು ಆಚರಿಸಿದರು. ಆ ಸಂದರ್ಭದಲ್ಲಿ ಅವರ ಕೃತಿಯಾದ ವಿಷ್ಣುಪುರಾಣವನ್ನು ಅನೇಕರು ಕೇಳಿದರು. ಆದರೆ ಪ್ರಥಮ ಮುದ್ರಣಕ್ಕೆ 54 ವರ್ಷಗಳು ಕಳೆದುಹೋಗಿ ಹಿಂದಿನ ಪ್ರತಿಗಳು ಲಭ್ಯವಿರಲಿಲ್ಲ. ಹೊಸದಾಗಿ ಮುದ್ರಣ ಮಾಡುವಂತೆ ಶಿಷ್ಯಸಂತತಿಯವರು ಸಲಹೆ ಇತ್ತರು. ಅಂದಿನ ಗೋಷ್ಠಿಯಲ್ಲಿ ಉಪಸ್ಥಿತರಾಗಿದ್ದ ಬೆಂಗಳೂರಿನ

ಪ್ರಸಿದ್ಧ ವಕೀಲರಾದ ಶ್ರೀಮಾನ್ ಎಸ್. ಕೆ. ವೇಂಕಟರಂಗೈಂಗಾರ್ಯರು ಪುರಾಣ ರತ್ನದ ದ್ವಿತೀಯ ಮುದ್ರಣಕ್ಕೆ ಶ್ರೀ ಬಿ. ಕೆ. ಗರುಡಾಚಾರ್ ಟ್ರಸ್ಟಿನಿಂದ **ತಮ್ಮ ಛಾರಿಟೀಸ್‌ನಿಂದ** ಉದಾರ ಧನಸಹಾಯ ಕೊಡಿಸಿಕೊಡುವು ದಾಗಿಯೂ, ಈ ಸತ್ಕಾರ್ಯವನ್ನು ಶೀಘ್ರ ಪ್ರಾರಂಭಿಸಬೇಕಾಗಿಯೂ ಉತ್ತೇಜನ ವಿತ್ತರು. ಕೂಡಲೆ ಪುರಾಣರತ್ನದ ದ್ವಿತೀಯ ಮುದ್ರಣ ಕಾರ್ಯ ಪ್ರಾರಂಭಿಸಲು ತಜ್ಞರ ಕಮಿಟಿಯೊಂದನ್ನು ಏರ್ಪಡಿಸಿ ಮುದ್ರಣ ಕಾರ್ಯ ಮುಂದುವರಿಸುವಂತೆ ಅಂದಿನ ಗೋಷ್ಠಿಯು ಅಧಿಕಾರ ನೀಡಿತು. ಶ್ರೀರಂಗಮನ್ನಾರ್ ಗೋಷ್ಠಿಯಲ್ಲಿ ಮಾತುಕೊಟ್ಟಂತೆ ಪ್ರಸಿದ್ಧ ವಕೀಲರಾದ ಶ್ರೀಮಾನ್ ಎಸ್. ಕೆ. ವೇಂಕಟ ರಂಗೈಂಗಾರ್ಯರು ಮೇಲ್ಕಂಡ ಟ್ರಸ್ಟಿನಿಂದ ಹತ್ತು ಸಾವಿರ ರೂಪಾಯಿ ನಿಧಿ ಯನ್ನು ನೀಡಿ ಮುದ್ರಣಾ ಕಾರ್ಯದ ಸಹಾಯಕ್ಕಾಗಿ ಉದಾರವಾದ ಪ್ರೋತ್ಸಾಹ ನೀಡಿದರು. ಕಮಿಟಿಗೆ ಈ ಧನ ಬಂದಮೇಲೆಯೇ ಪುರಾಣರತ್ನದ ದ್ವಿತೀಯ ಮುದ್ರಣ ಕಾರ್ಯ ಪ್ರಾರಂಭಿಸಲು ಧೈರ್ಯ ಬಂದಿತು. ಉದಾರವಾಗಿ ಸಹಾಯ ಹಸ್ತ ನೀಡಿದ ಶ್ರೀಮಾನ್ ಎಸ್.ಕೆ. ವೇಂಕಟರಂಗೈಂಗಾರ್ಯರಿಗೂ, ಅವರ ಸಂತತಿ ವರ್ಗಕ್ಕೂ ಮತ್ತು ಇತರೆ ಟ್ರಸ್ಟಿಗಳಿಗೂ ಸಹ ಪುರಾಣರತ್ನದ ಪ್ರಧಾನ ನಾಯಕನಾದ ಶ್ರೀಮನ್ನಾರಾಯಣನು ಸಕಲ ಸನ್ಮಂಗಳಗಳನ್ನು ಕರುಣಿಸಲೆಂದು ಕಮಿಟಿಯು ಆಶಿಸುತ್ತದೆ.

ಎರಡನೆಯದಾಗಿ ಪುರಾಣರತ್ನದ ದ್ವಿತೀಯ ಮುದ್ರಣಕ್ಕೆ ತಿರುಪತಿ ದೇವಸ್ಥಾನದ ಸಂಸ್ಥೆಯವರೂ ಸಹ ಉದಾರ ಧನ ಸಹಾಯ ಮಾಡಿರು ತ್ತಾರೆ. ಅವರಿಗೂ ಕಮಿಟಿಯವರು ಅನಂತ ವಂದನೆಗಳನ್ನು ಅರ್ಪಿಸಿರುತ್ತಾರೆ.

ಮೂರನೆಯದಾಗಿ ಮುದ್ರಣಕಾರ್ಯಕ್ಕೆ ಅನುಕೂಲವಾಗುವಂತೆ ಅನೇಕ ಮಹನೀಯರು ನೂರೊಂದು ರೂಪಾಯಿ ಸಹಾಯ ದ್ರವ್ಯ ನೀಡಲು ಮುಂದೆ ಬಂದಿರುತ್ತಾರೆ. ಅವರ ಹೆಸರುಗಳನ್ನು ಅಲಾಯದ ಪಟ್ಟಿಯಲ್ಲಿ ಪ್ರಕಾಶಪಡಿ ಸಿರುತ್ತೆ. ಕಮಿಟಿಯು ಅವರಿಗೂ ಧನ್ಯವಾದಗಳನ್ನರ್ಪಿಸಿರುತ್ತೆ.

ನಾಲ್ಕನೆಯದಾಗಿ ಪ್ರಥಮ ಮುದ್ರಣ ಪ್ರಕಾಶಕರಾದ ಶ್ರೀಮಾರ್ ಸಕ್ಕರೆ ಪಟ್ಟಣದ ರಾವ್ ಬಹದ್ದೂರ್ ಶ್ರೀ ಶ್ರೀನಿವಾಸೈಂಗಾರ್ ಸ್ವಾಮಿಗಳವರ ಇಬ್ಬರು ಕುಮಾರರು ಬೆಂಗಳೂರು ಮಲ್ಲೇಶ್ವರದಲ್ಲಿ ವಾಸವಾಗಿರುತ್ತಾರೆ. ಶ್ರೀಮಾರ್ ಎನ್. ಎಸ್. ಅಯ್ಯಂಗಾರ್ಯರಲ್ಲೂ ಅವರ ಸಹೋದರರಾದ ಆರ್. ಎಸ್. ಅಯ್ಯಂಗಾರ್ಯರಲ್ಲೂ ಸಹ ಕಮಿಟಿಯವರು ಪುರಾಣರತ್ನದ ದ್ವಿತೀಯ ಮುದ್ರಣವಾಗಿ ಪ್ರಸ್ತಾಪಿಸಿದರು. ಈ ಇಬ್ಬರು ಮಹನೀಯರು ಸಹ

ಉಚಿತ ಟಿಪ್ಪಣಿಯೊಡನೆ ಪುರಾಣರತ್ನವನ್ನು ಪುನರ್ಮುದ್ರಣ ಮಾಡಲು ಸೂಕ್ತ ಸಲಹೆ ಕೊಟ್ಟು ಸಮ್ಮತಿ ಸೂಚಿಸಿದರು. ಕಮಿಟಿಯವರು ಇವರಿಗೂ ಅನಂತ ವಂದನೆಗಳನ್ನರ್ಪಿಸಿರುತ್ತೆ.

ಐದನೆಯದಾಗಿ ಮುದ್ರಣಕಾರ್ಯಕ್ಕೆ ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು ಸಹ ಉದಾರವಾಗಿ ಮೂರು ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಕಮಿಟಿ ಸದಸ್ಯರೆಲ್ಲರಿಗೂ ನಮ್ಮ ಅನಂತ ವಂದನೆಗಳನ್ನು ಅರ್ಪಿಸುತ್ತೇವೆ.

ಇದೇ ಸಂದರ್ಭದಲ್ಲಿ ಶ್ರೀ ಯಜ್ಞನಾರಾಯಣ ದೀಕ್ಷಿತ ಸ್ವಾಮಿಗಳವರ ಶಿಷ್ಯಸಂತತಿಯವರು ಪುರಾಣರತ್ನದ ಪ್ರಧಾನ ಪದ್ಯಗಳಿಗೆ ಟಿಪ್ಪಣಿಯೊಂದನ್ನೂ ಬರೆಸಿ ಮುದ್ರಿಸುವುದು ಪುರಾಣರತ್ನದ ವಿಶೇಷ ತಿಳುವಳಿಕೆಗೆ ಕಾರಣವಾಗುವುದಾಗಿ ಸಲಹೆ ಇತ್ತರು. ಇದನ್ನು ನಡೆಸಿಕೊಡುವುದಾಗಿ ಕಮಿಟಿಯವರು ಗೋಷ್ಠಿಯಲ್ಲಿ ವಾಗ್ದಾನ ಮಾಡಿದರು. ಕೆಲವು ಪ್ರಧಾನ ಪದ್ಯಗಳಿಗೆ ಸೂಕ್ತ ವಿವರಣೆಯನ್ನೂ ಬರೆದುಕೊಡಬೇಕೆಂದು ಕಮಿಟಿಯವರು ದಾಸನಿಗೆ ಈ ಕಾರ್ಯಭಾರವನ್ನು ವಹಿಸಿದರು. ಅದರಂತೆ ನಮ್ಮ ಪೂರ್ವಾಚಾರ್ಯರಾದ ಶ್ರೀ ರಾಮಾನುಜರು ಗೀತಾಭಾಷ್ಯದಲ್ಲಿ ಉದಾಹರಿಸಿರುವ ಪುರಾಣರತ್ನ ಪದ್ಯಗಳನ್ನು ಆರಿಸಿ ಯಥಾಶಕ್ತಿ ಕನ್ನಡದಲ್ಲಿ ವಿವರಿಸಿರುತ್ತೆ. ಅದರಂತೆಯೇ ಶ್ರೀ ನಿಗಮಾಂತ ಮಹಾದೇಶಿಕರು ತಮ್ಮ ರಹಸ್ಯತ್ರಯಸಾರದಲ್ಲಿ ಉದಾಹರಿಸಿರುವ ಪದ್ಯಗಳಿಗೂ ಸೂಕ್ಷ್ಮ ಟಿಪ್ಪಣಿ ಕೊಡಲಾಗಿದೆ. ಅಲ್ಲದೆ ಪುರಾಣರತ್ನದಲ್ಲೇ ಶ್ರೀ ವಿಷ್ಣುಚಿತ್ತರು ಪ್ರಧಾನ ಪದ್ಯಕ್ಕೆ ಕೊಟ್ಟಿರುವ ಸಂಸ್ಕೃತ ವಿವರಣೆಯನ್ನನುಸರಿಸಿ ಕನ್ನಡದಲ್ಲಿ ವಿವರಣೆ ಕೊಡಲಾಗಿದೆ. ಅಲ್ಲದೆ ಶ್ರೀ ಸಿ. ಎಂ. ವಿಜಯರಾಘವಾಚಾರ್ಯ ಸ್ವಾಮಿಗಳು ಗೀತಾಭಾಷ್ಯಕ್ಕೂ, ರಹಸ್ಯತ್ರಯಸಾರಕ್ಕೂ ವಿಸ್ತಾರವಾಗಿ ಬರೆದಿರುವ ಕನ್ನಡ ವ್ಯಾಖ್ಯಾನದಿಂದಲೂ ಕೆಲವು ವಿಷಯಗಳನ್ನು ಸಂಗ್ರಹಿಸಲಾಗಿದೆ. ಆದರೆ ಪುರಾಣರತ್ನದಲ್ಲಿರುವ ಪದ್ಯಗಳಲ್ಲಿ ಪ್ರಧಾನ-ಅಪ್ರಧಾನವೆಂದು ವಿಂಗಡಿಸುವ ಶಕ್ತಿ ಮಿತಬುದ್ಧಿಯುಳ್ಳ ದಾಸನಿಗೆ ಸಾಲದು. ಎಲ್ಲವೂ ಪ್ರಧಾನವಾದ ಪದ್ಯಗಳೇ. ಪ್ರಥಮ ಸಂಪುಟದಲ್ಲಿ ಪುರಾಣರತ್ನದ ಬಗ್ಗೆ ಸಾಕಷ್ಟು ವಿವರಣೆ ಇದೆ. ಆಚಾರ್ಯ ಪರಿಗೃಹೀತವಾದ ಪುರಾಣರತ್ನದ ಕೆಲವು ಪದ್ಯಗಳಿಗೆ ಮಾತ್ರ ಸಣ್ಣ ಟಿಪ್ಪಣಿಗಳೊಡನೆ ಈ ದ್ವಿತೀಯ ಮುದ್ರಣದಲ್ಲಿ ಸೇರಿಸಲಾಗಿದೆ. ದ್ವಿತೀಯ ಮುದ್ರಣಕ್ಕೆ ಅವಕಾಶ ಕಲ್ಪಿಸಿಕೊಟ್ಟ ಎಲ್ಲ ಮಹನೀಯರಿಗೂ ಅನಂತ ವಂದನೆಗಳು.

ಸಜ್ಜನ ವಿಧೇಯ

ವಿದ್ವಾನ್ ಶ್ರೀನಿವಾಸದೇಶಿಕಾಚಾರ್

ಕಮಿಟಿ ಸದಸ್ಯರು

1) ಶ್ರೀ ಎ. ಶ್ರೀನಿವಾಸೈಂಗಾರ್, ಎಮ್.ಎ. ಅಧ್ಯಕ್ಷರು
2) ಶ್ರೀ ಡಾ. ಹೆಚ್. ಎನ್. ಕಸ್ತೂರಿ ರಂಗೈಂಗಾರ್ಯರು,
ಖಜಾಂಚಿ ಮತ್ತು ಉಪಾಧ್ಯಕ್ಷರು
3) ಶ್ರೀ ಎಸ್. ಸೀತಾರಾಮೈಂಗಾರ್, ಕಾರ್ಯದರ್ಶಿ
4) ಶ್ರೀ ವಿದ್ವಾನ್. ಶ್ರೀನಿವಾಸದೇಶಿಕಾಚಾರ್ಯರು
5) ಶ್ರೀ ಎಸ . ವೈ. ವೇದಾಂತ ಕೃಷ್ಣಮಾಚಾರ್ಯರು

ಶ್ರೀ ವಿಷ್ಣುಪುರಾಣ ಪೀಠಿಕಾ

ಶ್ರೀ ರಂಗೇಶ್ವರ ಪಾದಪಂಕಜದಯಾ ಸಂಸಿದ್ಧ ಮಂತ್ರೋಕ್ತಿಮಂ
ಶ್ರೀ ನಾರಾಯಣ ಸೋಮಯಾಜಿ ಚರಣ ದ್ವಂದ್ವೈಕಭಾಗ್ಯಂ ಸದಾ।
ಶ್ರೀ ರಾಮಾನುಜ ಸೋಮಯಾಜಿ ತನಯಂ ವೇದಾಂತ ವಿದ್ಯಾನಿಧಿಂ
ವಂದೇಹಂ ಗುರುಮಾಕ್ತಿಕಂ ಶಮಧನಂ ಶ್ರೀಯಜ್ಞನಾರಾಯಣಂ ||

ಶ್ರೀ ರಾಮಾನುಜರಿಗೂ ಆಚಾರ್ಯರಾದ ಶ್ರೀ ಯಾಮುನಾರ್ಯರು (ಆಳವಂದಾರ್) ವಿಷ್ಣುಪುರಾಣಕ್ಕೆ 'ಪುರಾಣರತ್ನ'ವೆಂಬ ಸಮಾಖ್ಯೆಯನ್ನು ಕೊಟ್ಟಿರುತ್ತಾರೆ. "ಸಂದರ್ಶಯನ್ನಿರಮಿಮೀತ ಪುರಾಣರತ್ನಂ" ಎಂದು. ಜಟಿಲವಾದ ವೇದದ ಅರ್ಥಗಳನ್ನು ಪ್ರಕಾಶಪಡಿಸುವುದೇ ಇತಿಹಾಸ ಮತ್ತು ಪುರಾಣಗಳ ಕೆಲಸ." "ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪ ಬೃಂಹಯೇತ್" ಎಂದು ಆರ್ಯರ ವಾಣಿ. "ವೇದೋಖಿಲಂ ಧರ್ಮಮೂಲಂ" ಎಂದು ಮಹರ್ಷಿಗಳು ಹೇಳಿರುತ್ತಾರೆ. "ಆದೌವೇಂದಾಃ ಪ್ರಮಾಣಂ" ಎಂಬುದಾಗಿ ಆಚಾರ್ಯರ ಶ್ರೀ ಸೂಕ್ತಿ. ಸ್ಮೃತಿ-ಇತಿಹಾಸ-ಪುರಾಣಗಳು ವೇದಗಳಿಗೆ ವ್ಯಾಖ್ಯಾನವಿದ್ದಂತೆ. ಅಪಾರ್ಥವನ್ನು ಕಲ್ಪಿಸುತ್ತಾರೆಂದು ಅಲ್ಪಶ್ರುತರಿಗೆ ವೇದವು ಹೆದರುತ್ತದೆ. ಇತಿಹಾಸಗಳಲ್ಲಿ ಶ್ರೀ ರಾಮಾಯಣವು ಶ್ರೇಷ್ಠವಾದುದು. "ವೇದೋಪಬೃಂಹಣಾರ್ಥಾಯ ತಾವಗ್ರಾಹಯತ ಪ್ರಭುಃ" ರಾಮಾಯಣದಲ್ಲಿ ಕಥೆಯು ಮುಖ್ಯವಲ್ಲ. ವೇದಾರ್ಥವನ್ನು ಪ್ರಕಾಶ ಪಡಿಸುವುದಕ್ಕಾಗಿ ವಾಲ್ಮೀಕಿ ಮಹರ್ಷಿಗಳು ಕುಶಲವರನ್ನು ಶಿಷ್ಯರನ್ನಾಗಿ ಅಂಗೀಕರಿಸಿದರು. ಇವರ ಮೂಲಕ ವೇದಾರ್ಥವು ಪ್ರಕಾಶಕ್ಕೆ ಬರುವುದಾಗಿಯೂ ತೃಪ್ತಿಪಟ್ಟರು.

ಸ್ಮೃತಿಗಳಿಗಿಂತ ಪುರಾಣಕ್ಕೆ ಪ್ರಾಬಲ್ಯವು. ಪುರಾಣಗಳಿಗಿಂತ ಇತಿಹಾಸಕ್ಕೆ ಪ್ರಾಬಲ್ಯವೆಂದು ವೈದಿಕರ ಸಿದ್ಧಾಂತ. ಆದರೂ ವೇದಾರ್ಥವನ್ನು ಪ್ರಕಾಶಪಡಿಸಲು ಹೊರಟ ಇತಿಹಾಸ-ಪುರಾಣಗಳ ಮಧ್ಯೆ 'ವಿಷ್ಣುಪುರಾಣ'ಕ್ಕೆ ಉನ್ನತ ಸ್ಥಾನವಿದೆ., ಯಥಾಃ—

ವೇದೇಷು ಪೌರುಷಂ ಸೂಕ್ತಂ ಧರ್ಮಶಾಸ್ತ್ರೇಷು ಮಾನವಂ।
ಭಾರತೇ ಭಗವದ್ಗೀತಾ ಪುರಾಣೇಷು ಚ ವೈಷ್ಣವಂ॥

ಎಂದು ಮಹರ್ಷಿಗಳ ಸಿದ್ಧಾಂತ.

ಲೋಕದಲ್ಲಿ ನವರತ್ನಗಳೆಂದು ಪ್ರಸಿದ್ಧಿಪಡೆದ ಅವು ಕೇವಲ ಪ್ರಾಕೃತ ಜನಗಳಿಗೆ ಮಾತ್ರ ಭೋಗ್ಯಭೂತವಾದುವು. ವೈದಿಕರಾದ ವಿಷ್ಣುಭಕ್ತರಿಗೆ ಮೂರು ರತ್ನಗಳು ಮಾತ್ರವೇ ಭೋಗ್ಯಭೂತವಾದುವು. ಅವುಗಳಲ್ಲಿ ಮೊದಲನೆಯದು ದ್ವಯವೆಂದು ಪ್ರಸಿದ್ಧವಾದ ಮಂತ್ರರತ್ನ. ಎರಡನೆಯದು ಈಗ ಪರಿಚಯವಾಗುತ್ತಿರುವ ಪುರಾಣರತ್ನ. ಮೂರನೆಯದು ಸ್ತೋತ್ರರತ್ನ. (ಆಳವಂದಾರ್ ಸ್ತೋತ್ರ). ಯಾಮುನಾರ್ಯರು ಈ ಪುರಾಣವನ್ನು ಪರಿಗ್ರಹಿಸದೇ ಹೋಗಿದ್ದರೆ ವೈದಿಕಗೋಷ್ಠಿಯಲ್ಲಿ ಈ ಪುರಾಣಕ್ಕೆ ಬೆಲೆ ಬರುತ್ತಿರಲಿಲ್ಲ.

ಪುರಾಣಗಳಲ್ಲಿ ಬರುವ ವಿಷಯಗಳೆಲ್ಲವೂ ಪ್ರಮಾಣಗಳಲ್ಲವೆಂದು ಶಿಷ್ಟರ ಅಭಿಪ್ರಾಯ. ಶ್ರೀರಾಮಾನುಜರೂ ಸಹ ಪುರಾಣಗಳ ನಿರ್ಣಯದಲ್ಲಿ ಎಚ್ಚರಿಕೆ ಇರಬೇಕೆನ್ನುತ್ತಾರೆ. ಪುರಾಣಗಳಲ್ಲಿ ಸಾತ್ವಿಕ, ರಾಜಸ, ತಾಮಸ ಎಂದು ನಾಲ್ಕು ವಿಧಗಳೆಂದು ಮಾತ್ಸ್ಯಪುರಾಣವು ಹೇಳುತ್ತದೆ. ಚತುರ್ಮುಖನಿಗೆ ಸತ್ವಗುಣೋದ್ರೇಕವಿರುವಾಗ ಹರಿಯೇ ಪರತತ್ವವೆಂದೂ, ರಜೋಗುಣದ ಆಧಿಕ್ಯವಿದ್ದಾಗ ತಾನೇ ಪರದೇವತೆಯೆಂದೂ, ತಮೋಗುಣದ ಪ್ರಾಬಲ್ಯವಿದ್ದಾಗ ಶಿವನೇ ಪರದೇವತೆಯೆಂದೂ, ಗುಣಗಳು ಮಿಶ್ರವಾದಾಗ ಪಿತೃಗಳೇ ಶ್ರೇಷ್ಠರೆಂದೂ, ಹೀಗೆ ಪರಸ್ಪರ ವಿರುದ್ಧವಾದ ಅಭಿಪ್ರಾಯಗಳು ಪುರಾಣಗಳಲ್ಲಿ ತಿಳಿದುಬರುತ್ತೆ. ಯಥಾಃ—

> ಅಗ್ನೇಃ ಶಿವಸ್ಯ ಮಾಹಾತ್ಮ್ಯಂ ತಾಮಸೇಷು ಪ್ರಕೀರ್ತ್ಯತೇ ।
> ರಾಜಸೇಷು ಚ ಮಾಹಾತ್ಮ್ಯಂ ಅಧಿಕಂ ಬ್ರಹ್ಮಣೋ ವಿದುಃ ।
> ಸಾತ್ವಿಕೇಷ್ವಥ ಕಲ್ಪೇಷು ಮಾಹಾತ್ಮ್ಯ ಮಧಿಕಂ ಹರೇಃ ॥ ಎಂದು

ಪುರಾಣಕಾರರು ಚತುರ್ಮುಖನಿಂದಲೇ ಕೇಳಿ ಪುರಾಣಗಳನ್ನು ರಚಿಸಿದರೆಂದು ವಿಷ್ಣುಪುರಾಣದಿಂದಲೇ ತಿಳಿದು ಬಂದಿದೆ. ಹೀಗಾದರೆ ವಿಷ್ಣುಪುರಾಣದ ಸ್ಥಾನವೇನು ? ಎಂದು ಶಂಕಿಸಿ ಭಗವದ್ರಾಮಾನುಜರು ತಮ್ಮ ವೇದಾರ್ಥ ಸಂಗ್ರಹದಲ್ಲಿ ಈ ರೀತಿ ನಿರ್ಣಯಿಸಿರುತ್ತಾರೆ—"ಪ್ರಾಚ್ಯೋದೀಚ್ಯ ದಾಕ್ಷಿಣಾತ್ಯ ಪಾಶ್ಚಾತ್ಯ ಸರ್ವಶಿಷ್ಟೈಃ ಸರ್ವಧರ್ಮ ಸರ್ವತತ್ವ ವ್ಯವಸ್ಥಾಯಾಂ ಇದಮೇವ ಪರ್ಯಾಪ್ತಮಿತಿ ಅವಿಗೀತ ಪರಿಗೃಹೀತಂ ವೈಷ್ಣವಂ ಚ ಪುರಾಣಂ" ಎಂದು. ಅಂದರೆ ಶಿಷ್ಟರೆಲ್ಲರೂ ಸಕಲ ಧರ್ಮಗಳ ವ್ಯವಸ್ಥೆಗೆ ಈ ಪುರಾಣವೊಂದೇ ಪರಿಪೂರ್ಣವಾಗಿದೆ ಎಂದು ಏಕಕಂಠದಿಂದ ಘೋಷಿಸಿರುತ್ತಾರೆ.

ಪರಾಶರ ಮುನಿಗಳು ಸಾತ್ವಿಕ ಕಲ್ಪದಲ್ಲುಂಟಾದ ಈ ಪುರಾಣರತ್ನದಲ್ಲಿ ವಿಷ್ಣುವೇ ಪರದೇವತೆಯೆಂದು ನಿರ್ಣಯಿಸಿರುತ್ತಾರೆ. ಚಿತ್, ಅಚಿತ್, ಈಶ್ವರ

ರೆಂಬ ಮೂರು ತತ್ವಗಳ ಸ್ವರೂಪ ಸ್ವಭಾವಗಳನ್ನು ನಿಪುಣತರವಾಗಿ ಸಿದ್ಧಾಂತಿಸಿರುತ್ತಾರೆ. ಮೋಕ್ಷವನ್ನು ಕೊಡುವವನು ಶ್ರೀವಿಷ್ಣುವೇ. ಇತರ ದೇವತೆಗಳಿಗೆ ಮೋಕ್ಷವನ್ನು ಕೊಡುವ ಸಾಮರ್ಥ್ಯವಿಲ್ಲ. ಈ ಅಭಿಪ್ರಾಯವನ್ನು "ಸ್ವಾಮಿ ದೇಶಿಕರು ತಮ್ಮ ರಹಸ್ಯತ್ರಯಸಾರದ ಪರದೇವತಾಪಾರಮಾರ್ಥ್ಯಾಧಿಕಾರದಲ್ಲಿ ಮತ್ಸ್ಯಪುರಾಣದ ಪದ್ಯವೊಂದನ್ನುದಾಹರಿಸಿ ನಿರ್ಣಯಿಸಿರುತ್ತಾರೆ ಯಥಾ :-

"ಸಾತ್ವಿಕೇಷುತು ಕಲ್ಪೇಷು ಮಾಹಾತ್ಮ್ಯ ಮಧಿಕಂ ಹರೇಃ ।
ತೇಷ್ವೇವ ಯೋಗಸಂಸಿದ್ಧಾಃ ಗಮಿಷ್ಯಂತಿ ಪರಾಂಗತಿಂ ॥"

"ಎನ್ಗೈಯಾಲೆ ಅವರ್‌ಗಳ್ ಪಕ್ಕಲ್ ಮೋಕ್ಷಂ ವಿಳಂಬಿತ್ತುಂಕಿಡೈಯಾದು." ಅಂದರೆ ವಿಷ್ಣುವಿನಿಂದ ಹೊರತು ಬ್ರಹ್ಮರುದ್ರಾದಿಗಳಿಂದ ವಿಳಂಬವಾಗಿಯೂ ಮೋಕ್ಷವು ಪ್ರಾಪ್ತವಾಗಲಾರದು ಎಂದು ಪ್ರಪನ್ನರಿಗೆ ಸಾತ್ವಿಕ ಪುರಾಣಗಳೂ, ಸಾತ್ವಿಕಸ್ಮೃತಿಗಳೂ ಉಪಾದೇಯವು. ವಿಷ್ಣುಪುರಾಣವು ಸಾತ್ವಿಕ ಪುರಾಣಗಳಲ್ಲಿ ಒಂದಾಗಿ ರತ್ನಪ್ರಾಯವಾಗಿರುತ್ತೆ. ಶ್ರೀ ಶಂಕರಭಗವತ್ಪಾದಾಚಾರ್ಯರು ಸಹ ತಮ್ಮ ಸೂತ್ರಭಾಷ್ಯದಲ್ಲಿ ಈ ಪುರಾಣದ ಪದ್ಯಗಳನ್ನು ವಿಶೇಷವಾಗಿ ಉದಾಹರಿಸಿರುತ್ತಾರೆ.

ಹದಿನೆಂಟು ಪುರಾಣಗಳಲ್ಲಿ ಸಾತ್ವಿಕ ಪುರಾಣಗಳು ಆರು. ರಾಜಸಗಳು ಆರು. ತಾಮಸಗಳು ಆರು ಎಂದು ವ್ಯಾಸಮುನಿಗಳಿಂದಲೇ ವಿಭಾಗಿಸಲ್ಪಟ್ಟಿದೆ. ಆರು ಸಾತ್ವಿಕ ಪುರಾಣಗಳಲ್ಲೂ ವಿಷ್ಣುಪುರಾಣಕ್ಕೇ ಮೊದಲ ಸ್ಥಾನ. ಸಾತ್ವಿಕ ಪುರಾಣಗಳು ಆರು :

"ವೈಷ್ಣವಂ ನಾರದೀಯಂ ಚ ತಥಾ ಭಾಗವತಂ ಶುಭಂ ।
ಗಾರುಡಂ ಚ ತಥಾ ಪಾದ್ಮಂ ವಾರಾಹಂ ಶುಭದರ್ಶನೇ ॥
ಷಡೇತಾನಿ ಪುರಾಣಾನಿ ಸಾತ್ವಿಕಾನಿ ಮತಾನಿ ವೈ ॥"

ಪಾರ್ವತೀ ಪರಮೇಶ್ವರರ ಸಂವಾದ. ಪಾರ್ವತಿಯ ಪ್ರಶ್ನೆಗೆ ಶಂಕರನು 'ಶುಭದರ್ಶನೆ' ಎಂದು ಸಂಬೋಧಿಸಿ ಹದಿನೆಂಟು ಪುರಾಣಗಳ ಪೈಕಿ ಮೇಲೆ ಹೇಳಿದ ಸಾತ್ವಿಕ ಪುರಾಣಗಳು ಆರು ಉಪಾದೇಯಗಳೆಂದು ಉಪದೇಶಿಸಿರುತ್ತಾನೆ. ಸಾತ್ವಿಕ ಪುರಾಣಗಳಲ್ಲಿ 'ವಿಷ್ಣುವೇ' ಪರದೇವತೆ ಎಂತಲೂ ಸಿದ್ಧಾಂತ.

ರಾಜಸ ಪುರಾಣಗಳು ಆರು :

"ಬ್ರಹ್ಮಾಂಡಂ ಬ್ರಹ್ಮವೈವರ್ತಂ ಮಾರ್ಕಂಡೇಯಂ ತಥೈವಚ ।
ಭವಿಷ್ಯದ್ವಾಮನಂ ಬ್ರಾಹ್ಮಂ ರಾಜಸಾನಿ ನಿಬೋಧ ಷಟ್ ॥"

ತಾಮಸ ಪುರಾಣಗಳು ಆರು :

"ಮಾತ್ಸ್ಯಂ ತಾರ್ಕ್ಷ್ಯಂ ತಥಾ ಲೈಂಗಂ ಶೈವಂ ಸ್ಕಾಂದಂ ತಥೈವಚ ।
ಆಗ್ನೇಯಂ ಚ ಷಡೇತಾನಿ ತಾಮಸಾ ನಿರಯ ಪ್ರದಾಃ ॥"

ಸಾತ್ವಿಕ ಸ್ಮೃತಿಗಳು ಆರು :

"ವಾಸಿಷ್ಟಂ ಚೈವ ಹಾರೀತಂ ವ್ಯಾಸಂ ಪಾರಾಶರಂ ತಥಾ ।
ಭಾರದ್ವಾಜಂ ಕಾಶ್ಯಪಂಚ ಸಾತ್ವಿಕಾ ಮುಕ್ತಿದಾಯಿನಃ ॥"

ಅಲ್ಲಿಗೆ ಸಾತ್ವಿಕ ಪುರಾಣಗಳೂ, ಸಾತ್ವಿಕ ಸ್ಮೃತಿಗಳೂ ಮುಮುಕ್ಷುವಿಗೆ ಗ್ರಾಹ್ಯವೆಂದು ಸಪ್ರಮಾಣವಾಗಿ ಸಿದ್ಧಾಂತಿತವಾಯಿತು.

ಪುರಾಣವೆಂದರೆ — ಪುರಾ + ನವಂ ಅಂದರೆ ಹಿಂದಿನಕಾಲದಲ್ಲಿ ಹೊಸದಾಗಿತ್ತು. ಈಗಿನ ಕಾಲಕ್ಕೆ ಹಳೆಯದು ಎಂದು ಅರ್ಥಮಾಡುತ್ತಾರೆ. ಆದರೆ ಜ್ಞಾನಿಗಳು 'ಪುರಾಪಿ + ನವಂ' ಎಂದು ವಿಗ್ರಹವಾಕ್ಯ ಮಾಡಿ ಬಹಳ ಹಳೆಯದಾದರೂ ನಿತ್ಯ ನೂತನವಾಗಿ ಪರಿಗ್ರಾಹ್ಯವೆಂದು ಅರ್ಥಮಾಡಿರುತ್ತಾರೆ. ಈ ಎರಡನೆಯ ಅರ್ಥವೇ ಸಮೀಚೀನವಾದುದು. ಪುರಾಣಗಳಲ್ಲಿ ಭರತಖಂಡವನ್ನು ಆಳಿದ ರಾಜರ ವಂಶ—ಲೋಕಸೃಷ್ಟಿ—ಯುಗವಿಭಾಗಗಳು—ಭೌಗೋಲಿಕ ವಿಷಯಗಳು—ತೀರ್ಥಗಳ ಮಾಹಾತ್ಮ್ಯ—ದೇವಕ್ಷೇತ್ರಗಳ ಮಾಹಾತ್ಮ್ಯ ಮುಂತಾದ ವಿಷಯಗಳ ವಿವರಣೆ ಹೇರಳವಾಗಿದೆ. ಅನೇಕ ನೀತಿಬೋಧಕ ಪ್ರಸಂಗಗಳೂ ಇವೆ. ಮುಖ್ಯವಾಗಿ ವಾಚಕರ ಜ್ಞಾನಾಭಿವೃದ್ಧಿಗೆ ಪುರಾಣಗಳು ಸಹಾಕಾರಿ ಅನ್ನುವುದರಲ್ಲಿ ಸಂದೇಹವಿಲ್ಲ. ಅಮರಕೋಶದಲ್ಲಿ ಪುರಾಣ ಲಕ್ಷಣವು ಹೀಗಿದೆ :

"ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನುಚರಿತಂ ಚೈವ ಪುರಾಣಂ ಪಂಚಲಕ್ಷಣಂ ॥" ಎಂದು.

ಸೃಷ್ಟಿ–ಪ್ರಳಯ–ವಂಶ–ಮನ್ವಂತರ–ವಂಶಾನುಚರಿತ ಈ ಐದು ವಿಷಯಗಳು ಪುರಾಣಗಳಲ್ಲಿರಬೇಕೆಂದು. ಪ್ರಕೃತ ವಿಷ್ಣುಪುರಾಣದಲ್ಲಿ ಈ ಐದು ಲಕ್ಷಣಗಳೂ ಇದೆ.

18 ಪುರಾಣಗಳಲ್ಲಿ ಒಟ್ಟು ನಾಲ್ಕು ಲಕ್ಷ ಶ್ಲೋಕಗಳಿವೆ. ಇದಲ್ಲದೆ ಹದಿನೆಂಟು ಉಪಪುರಾಣಗಳೂ ಉಂಟು. 18 ಪುರಾಣಗಳನ್ನು ಶ್ರೀವೇದವ್ಯಾಸರೇ ರಚಿಸಿದರೆಂದು ಮತ್ಸ್ಯಪುರಾಣವು ಹೇಳುತ್ತದೆ. ಯಥಾ :—

"ಅಷ್ಟಾದಶ ಪುರಾಣಾನಿ ಕೃತ್ವಾ ಸತ್ಯವತೀ ಸುತಃ ।
ಭಾರತಾಖ್ಯಾನ ಮಖಿಲಂ ಚಕ್ರೇತದುಪಬೃಂಹಣಂ ॥"
ಎಂದು ಮತ್ಸ್ಯ ಪು. 53-70

ಆದರೆ ಭಗವಾನ್ ವ್ಯಾಸರು ಬಹಳ ಹಿಂದೆ "ಪುರಾಣಸಂಹಿತಾ" ಎಂಬ ದೊಡ್ಡ ಗ್ರಂಥವನ್ನು ರಚಿಸಿದರೆಂದು ವಿಷ್ಣುಪುರಾಣದ ಮೂರನೇ ಅಂಶದಲ್ಲಿ ಸೂಚಿತವಾಗಿದೆ. ಯಥಾ :—

"ಆಖ್ಯಾನೈಶ್ಚಾಪ್ಯುಪಾಖ್ಯಾನೈಃ ಗಾಥಾಭಿಃ ಕಲ್ಪಶುದ್ಧಿಭಿಃ ।
ಪುರಾಣ ಸಂಹಿತಾಂ ಚಕ್ರೇ ಪುರಾಣಾರ್ಥ ವಿಶಾರದಃ ॥ ವಿ. ಪು. 3-6-15

ಅಂದರೆ ವ್ಯಾಸಮುನಿಗಳು ಅಷ್ಟಾದಶಪುರಾಣಗಳ ಸಂಗ್ರಹರೂಪವಾದ 'ಪುರಾಣ ಸಂಹಿತೆ'ಯನ್ನು ರಚಿಸಿದರೆಂದು ತಿಳಿದುಬರುತ್ತೆ. ಈ ಮೇಲಿನ ಪ್ರಮಾಣಗಳಿಂದ ವಿರುದ್ಧಾಭಿಪ್ರಾಯಗಳು ತೋರುತ್ತೆ. ಇದಕ್ಕೆ ಪರಿಹಾರವೂ ಪುರಾಣದಲ್ಲೇ ಹೇಳಿರುತ್ತೆ. ಯಾಥಾ ಮಾತ್ಸ್ಯೇ :—

"ಪುರಾಣಾಂ ಸರ್ವಶಾಸ್ತ್ರಾಣಾಂ ಪ್ರಥಮಂ ಬ್ರಹ್ಮಣಃ ಸ್ಮೃತಂ ।
ಅನಂತರಂತು ವಕ್ತ್ರೇಭ್ಯೋ ವೇದಾಸ್ತಸ್ಯ ವಿನಿರ್ಗತಾಃ ॥

"ಬ್ರಾಹ್ಮಮೇವ ಕೃತೇ ಚಾದ್ಯಂ ಪುರಾಣಂ ಶ್ರುತಿಸಂಹಿತಂ ।
ಅಷ್ಟಾದಶವಿಧಂ ಕಚ್ಚ ಶತಕೋಟಿ ಪ್ರಭೇದತಃ ॥

"ತಸ್ಮಾತ್ ತ್ರೇತಾಯುಗೇ ಪ್ರೋಕ್ತಂ ಶತಮೇಕಾದಶೋತ್ತರಂ ।
ಪುರಾಣ ಸಂಹಿತಾ ಕರ್ತಾ ದ್ವಾಪರೇ ವ್ಯಾಸ ಏವ ಹಿ ॥

"ತದರ್ಥೋಽತ್ರ ಚತುರ್ಲಕ್ಷ್ಯೈಃ ಸಂಕ್ಷೇಪೇಣ ನಿವೇಶಿತಃ ।
ಪುರಾಣಾನಿ ದಶಾಷ್ಟೌ ಚ ಸಾಂಪ್ರತಂ ತದಿಹೋಚ್ಯತೇ ॥"

ಪದ್ಯಗಳ ಅಭಿಪ್ರಾಯ ಇದು:—ಕೃತಯುಗದಲ್ಲಿ ಚತುರ್ಮುಖನು ವೇದರಚನೆಗಿಂತ ಮುಂಚೆ ಶತಕೋಟಿ ಗ್ರಂಥವಿಸ್ತಾರವಾದ ಪುರಾಣವನ್ನು ರಚಿಸಿದನು. ಇದಕ್ಕೆ ಬ್ರಾಹ್ಮಪುರಾಣವೆಂದು ಹೆಸರು. ಎರಡನೆಯ ತ್ರೇತಾಯುಗದಲ್ಲಿ ಬ್ರಹ್ಮನೇ ಮೊದಲಾದ ಹದಿನೆಂಟು ಮಂದಿ ಮುನಿಗಳು ಬ್ರಾಹ್ಮಪುರಾಣವನ್ನು ಸಂಗ್ರಹಿಸಿ ಬ್ರಾಹ್ಮ-ಪಾದ್ಮ ಮುಂತಾದ ಹದಿನೆಂಟು ಪುರಾಣಭೇದಗಳನ್ನು ರಚಿಸಿದರು. ಮೂರನೆಯ ದ್ವಾಪರದಲ್ಲಿ ಶ್ರೀಕೃಷ್ಣದ್ವೈಪಾಯನರು ಹಿಂದಿನ ಪುರಾಣಗಳನ್ನು

ಸಂಗ್ರಹಿಸಿ ನಾಲ್ಕು ಲಕ್ಷ ಪರಿಮಿತಿ ಇರುವ ಹದಿನೆಂಟು ಪುರಾಣಗಳನ್ನು ರಚಿಸಿ
ದರು. ಪ್ರತಿದ್ವಾಪರದಲ್ಲಿಯೂ ಭಗವಂತನು ವ್ಯಾಸನಾಮಾಂಕಿತದಿಂದ ಅವತರಿಸಿ
ಪುರಾಣಗಳನ್ನು ರಚಿಸುವುದಾಗಿ ಶಿಷ್ಟರ ಅಭಿಪ್ರಾಯ. ಈಗ ನಡೆದಿರುವುದು
28ನೇ ದ್ವಾಪರ ಮೊದಲನೇ ದ್ವಾಪರದಲ್ಲಿ ನಾರಾಯಣನೇ ವ್ಯಾಸನಾಗಿಯೂ,
ಎರಡನೆಯ ದ್ವಾಪರದಲ್ಲಿ ಚತುರ್ಮುಖನೇ ವ್ಯಾಸನಾಗಿಯೂ, 27ನೇ ದ್ವಾಪರ
ದಲ್ಲಿ ಪರಾಶರರೇ ವ್ಯಾಸರಾಗಿಯೂ, 28ನೇ ದ್ವಾಪರದಲ್ಲಿ ಕೃಷ್ಣದ್ವೈಪಾ
ಯನರೇ ವ್ಯಾಸರಾಗಿಯೂ ಪುರಾಣಗಳನ್ನು ರಚಿಸಿದರೆಂದು ವೈದಿಕರು
ನಿರ್ಣಯಿಸಿರುತ್ತಾರೆ. ಶ್ರೀ ವೇದವ್ಯಾಸರಿಗಿಂತ ಪರಾಶರರು ಹಿಂದಿನವರಾದುದ
ರಿಂದ (ತಂದೆಯವರೂ ಆದ್ದರಿಂದ) ಶ್ರೀ ವಿಷ್ಣುಪುರಾಣವೇ ಪುರಾಣಗಳ
ಪ್ರಥಮ ರಚನೆಯೆಂದು ಜ್ಞಾನಿಗಳೆಲ್ಲರೂ ಒಪ್ಪಿರುತ್ತಾರೆ. ಇದೇ ಸಾಂಪ್ರ
ದಾಯಿಕರ ಸಿದ್ಧಾಂತ. ಇತಿಹಾಸಕಾರರಿಗೆ ಈಚಿನ ಚರಿತ್ರೆಗಳ ಯುಗಕ್ಕಿಂತ
ಹಿಂದಿನ ಘಟನೆ ಮತ್ತು ಕಾಲಗಳ ನಿರೂಪಣೆಗೆ ಪುರಾಣಗಳೇ ಆಧಾರ. ಆಸ್ತಿಕ
ರಿಗೆ ಪುರಾಣಗಳು ಪವಿತ್ರಗ್ರಂಥ. ಅವುಗಳ ಪಾರಾಯಣ ಸದ್ಗತಿಗಳಿಗೆ ಆಧಾರ.

ವಿಷ್ಣುಪುರಾಣಕ್ಕೆ ವ್ಯಾಖ್ಯಾನವನ್ನು ಬರೆದಿರುವ ಮಹನೀಯರ ವಿಷಯವಾಗಿ
ಎರಡು ಮಾತು. ಇದಕ್ಕೆ ಎರಡು ಉದ್ದಾಮ ವ್ಯಾಖ್ಯಾನಗಳಿವೆ. ಶ್ರೀಧರಸ್ವಾಮಿ
ಗಳು ಬರೆದಿರುವ ವ್ಯಾಖ್ಯಾನಕ್ಕೆ 'ಶ್ರೀಧರೀಯ' ಎಂದು ಹೆಸರು. ವಿಷ್ಣುಚಿತ್ತರು
ಬರೆದಿರುವ ವ್ಯಾಖ್ಯಾನಕ್ಕೆ 'ವಿಷ್ಣುಚಿತ್ತೀಯ' ಎಂದು ಹೆಸರು. ಈ ಇಬ್ಬರು
ಮಹನೀಯರೂ ಈ ಪುರಾಣದಲ್ಲಿ 'ವಿಷ್ಣುವೇ' ಪರದೇವತೆಯೆಂದು ಸ್ಥಾಪಿಸಿ
ವಿಷ್ಣುಪಾರಮ್ಯವನ್ನು ಮನದಟ್ಟುಮಾಡಿಕೊಟ್ಟಿರುತ್ತಾರೆ.

ಪ್ರಕೃತ ಶ್ರೀವಿಷ್ಣುಚಿತ್ತರು ಭಗವದ್ರಾಮಾನುಜರ ತರುವಾಯ ಶಿಷ್ಯಸಂತತಿ
ಯಲ್ಲಿ ಎರಡನೆಯವರಾಗಿ 'ಎಂಗಳಾಳ್ವಾರ್' ಎಂಬ ಸಮಾಖ್ಯೆಯಿಂದ ಶ್ರೀರಂಗದ
ಆಚಾರ್ಯಪೀಠವನ್ನು ಅಲಂಕರಿಸಿದ್ದರು. ಭಗವದ್ರಾಮಾನುಜರ ಬ್ರಹ್ಮಸೂತ್ರ
ಭಾಷ್ಯಕ್ಕೆ 'ಶ್ರೀಭಾಷ್ಯ'ವೆಂದು ಪ್ರಸಿದ್ಧಿ ಇರುವುದು ಎಲ್ಲರಿಗೂ ತಿಳಿದ ವಿಷಯ.
ಶ್ರೀಭಾಷ್ಯಕ್ಕೆ 'ಶ್ರುತಪ್ರಕಾಶಿಕಾ' ಎಂಬುವುದು ಪ್ರಸಿದ್ಧವಾದ ವ್ಯಾಖ್ಯಾನ. ಈ
ವ್ಯಾಖ್ಯಾನವನ್ನು ರಚಿಸಿದವರು ಸುದರ್ಶನ ಭಟ್ಟಾರಕರು. ಇವರಿಗೂ ಆಚಾರ್ಯರು
ವಾತ್ಸ್ಯ ವರದಾಚಾರ್ಯರು(ನಡಾದೂರ ಅಮ್ಮಾಳ್) ಎಂದು ಪ್ರಸಿದ್ಧಿಪಡೆದವರು.
ಈ ವಾತ್ಸ್ಯವರದಾಚಾರ್ಯರ ಆಚಾರ್ಯರೇ ವಿಷ್ಣುಪುರಾಣ ವ್ಯಾಖ್ಯಾನದ ಕರ್ತೃ
ಗಳಾದ ಶ್ರೀವಿಷ್ಣುಚಿತ್ತರು (ಎಂಗಳಾಳ್ವಾರ್). ಇವರ ಜನ್ಮಭೂಮಿ ಶ್ವೇತಾದ್ರಿ
(ತಿರುವೆಳ್ಳರೈಕ್ಷೇತ್ರಂ) ಇವರ ಅರ್ಚಾವಿಗ್ರಹ ಈಗಲೂ ಈ ಕ್ಷೇತ್ರದಲ್ಲಿದೆ.
ಭಗವದ್ರಾಮಾನುಜರು ತಮ್ಮ ಭಾಷ್ಯಗ್ರಂಥಗಳಲ್ಲಿ ಪುರಾಣರತ್ನದ ಪದ್ಯಗಳನ್ನು

ವಿಶೇಷವಾಗಿ ಪ್ರಮಾಣಕ್ಕಾಗಿ ಎತ್ತಿದ್ದಾರೆ. ಶ್ರೀವಿಷ್ಣುಚಿತ್ತರು ಶ್ರೀಭಾಷ್ಯಾದಿ ಗ್ರಂಥಗಳನ್ನು ಅಧ್ಯಯನಮಾಡಿಯೇ ಪುರಾಣರತ್ನಕ್ಕೆ ವ್ಯಾಖ್ಯಾನಮಾಡಿರುತ್ತಾರೆ. ಭಾಷ್ಯದ ಅರ್ಥವಿವರಣೆಯೇ ಪುನಃ ಅವತರಿಸಿದಂತೆ ಶ್ರೀವಿಷ್ಣುಚಿತ್ತರ ವ್ಯಾಖ್ಯಾನವಾಗಿದೆ. ಹೀಗೆ ಯಾಮುನಾರ್ಯರು, ಭಗದ್ರಾಮಾನುಜರು, ಶ್ರೀವಿಷ್ಣುಚಿತ್ತರು, ವೇದಾಂತದೇಶಿಕರು ಮೊದಲಾದ ಜ್ಞಾನನಿಧಿಗಳಿಂದ ಪರಿಗೃಹೀತವಾದ ಪುರಾಣರತ್ನದ ಮಹಿಮೆಯನ್ನು ಮಿತವಾದ ಮಾತುಗಳಿಂದ ಹೇಳಲು ಹೊರಟರೆ ಅಪಚಾರವಾದೀತೆಂದು ವಿರಮಿಸಬೇಕಾಗಿದೆ.

ವಿದ್ವಾನ್ ಶ್ರೀನಿವಾಸ ದೇಶಿಕಾಚಾರ್

ವಿಷಯಾನುಕ್ರಮಣಿಕೆ

ಮೊದಲನೆಯ ಅಂಶವು


ಎರಡನೆಯ ಅಂಶವು

ಮೂರನೆಯ ಅಂಶವು

ನಾಲ್ಕನೆಯ ಅಂಶವು

ಐದನೆಯ ಅಂಶವು

ಆರನೆಯ ಅಂಶವು



ಯಜ್ಞನಾರಾಯಣ ದೀಕ್ಷಿತರ್
ಶಾಂತಿಗ್ರಾಮ ಹಾಸನ್ ಡಿಸ್ಟ್ರಿಕ್ಟ್

ಶ್ರಿಯೈ ನಮಃ

ಶ್ರೀ ಹಯಗ್ರೀವಾಯ ನಮಃ

ಶ್ರೀಮದ್ರಾಮಾನುಜಾಚಾರ್ಯಮಹಾಗುರವೇ ನಮಃ

ರಾಮಾನುಜಂ ಗುರುವರಂ ವಿಧಿನೋಪ್ಯವಂತಂ ವೇದಾಂತದೇಶಿಕಮಣಿಂ ಪ್ರಣಮಾಮಿ ಮೂರ್ಧ್ನಾ। ಶ್ರೀವಿಷ್ಣುಚಿತ್ತಮಮಲಂ ಯತಿಶೇಖರಂ ಚ ಶ್ರೀಮತ್ಪರಾಶರಮುನಿಂ ಭಗವಂತಮಾದ್ಯಂ॥

ಶ್ರೀ ಪರಾಶರಮಹರ್ಷಿಪ್ರಣೀತ ವಿಷ್ಣುಪುರಾಣವು

ಪ್ರಥಮಾಂಶಃ—ಪ್ರಥಮಾಧ್ಯಾಯವು

ಮುನಿಶ್ರೇಷ್ಠನಾದ ಪರಾಶರಬ್ರಹ್ಮರ್ಷಿಯನ್ನು ಶ್ರೀ ಮೈತ್ರೇಯರು ಪ್ರಶ್ನೆ ಮಾಡುತ್ತಾರೆ: "ಎಲೈ ಬ್ರಹ್ಮರ್ಷಿಯೇ! ನಿಮ್ಮ ಅನುಗ್ರಹದಿಂದ ನಾನು ಯಥಾಕ್ರಮವಾಗಿ ವೇದಗಳನ್ನೂ, ವೇದಾಂಗಗಳನ್ನೂ, ಧರ್ಮಶಾಸ್ತ್ರಗಳನ್ನೂ ಸಹ ತಿಳಿದುಕೊಂಡೆನು. ಆದರೆ ನನಗೆ ಇನ್ನೂ ಅನೇಕ ವಿಷಯಗಳು ತಿಳಿಯದೆ ಇರೋಣದರಿಂದ, ನಾನು ಕೇಳತಕ್ಕ ವಿಷಯಗಳಿಗೆ ನೀವು ಕೃಪೆಮಾಡಿ ಅಪ್ಪಣೆ ಕೊಡಿಸಬೇಕು. ಸರ್ವಜ್ಞರಾದ ಮಹರ್ಷಿಗಳೇ! ಈ ಚರಾಚರಾತ್ಮಕವಾದ ಜಗತ್ತು ಹಿಂದೆ ಯಾವ ರೀತಿ ಇತ್ತು? ಈಗ ಯಾವ ರೀತಿ ಇದೆ? ಮುಂದೆ ಯಾವ ರೀತಿ ಆಗುತ್ತದೆ? ಯಾವಾಗ ಲೀನವಾಗುತ್ತದೆ? ಎಲ್ಲಿ ನಾಶವಾಗುತ್ತದೆ? ದೇವತೆಗಳ ಉತ್ಪತ್ತಿಯು ಹೇಗೆ? ಸಮುದ್ರಗಳ, ಪರ್ವತಗಳ ಇರುವಿಕೆಯು ಹೇಗೆ? ಸೂರ್ಯಾದಿಗಳ ಸಂಸ್ಥಾನಕ್ರಮವು ಹೇಗೆ? ದೇವಾದಿಗಳ ವಂಶಗಳೂ, ಮನ್ವಂತರಗಳೂ, ಕಲ್ಪಗಳೂ, ಕಲ್ಪವಿಭಾಗಗಳೂ, ಚತುರ್ಯುಗ ಕ್ರಮಗಳೂ, ಇವುಗಳ ವೃತ್ತಾಂತಗಳೂ, ಕಲ್ಪಾಂತಸ್ವರೂಪಗಳೂ, ಯುಗಧರ್ಮಗಳೂ, ದೇವರ್ಷಿ ರಾಜರ್ಷಿ ಇವರುಗಳ ಚರಿತ್ರೆಗಳೂ, ವೇದವ್ಯಾಸರಿಂದ ಮಾಡಲ್ಪಟ್ಟ ವೇದಶಾಖಾಭೇದಗಳೂ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರುಗಳ ಧರ್ಮಗಳೇ ಮೊದಲಾದ ಬೇರೆ ಇತರ ಅನೇಕ ಧರ್ಮಗಳೂ, ಇವೆಲ್ಲವನ್ನೂ ಕೇಳಲಿಚ್ಛೆಯುಳ್ಳ ನನಗೆ ಅನುಗ್ರಹಿಸಬೇಕು." ಈ ಪ್ರಕಾರ ಮೈತ್ರೇಯರು ಕೇಳಿದುದಕ್ಕೆ ದಯಾಮನಸ್ಕರಾದ ವಸಿಷ್ಠಪೌತ್ರರಾದ ಪರಾಶರರು ಹೇಳುತ್ತಾರೆ: "ಎಲೈ ಮೈತ್ರೇಯನೇ, ನೀನು ಕೇಳಿದುದರಿಂದ ನನಗೆ ಹಿಂದಿನ ವಿಷಯಗಳೆಲ್ಲವೂ ಜ್ಞಾಪಕಕ್ಕೆ ಬಂತು. ಹಿಂದೆ ವಿಶ್ವಾಮಿತ್ರನಿಂದ ಪ್ರೇರಿತನಾದ ಒಬ್ಬ ರಾಕ್ಷಸನು ನನ್ನ ತಂದೆಯನ್ನು ತಿಂದುಹಾಕಿದನು. ಅದರಿಂದ ನನಗೆ ಬಹಳ ಕೋಪವುಂಟಾಗಿ, ಲೋಕದಲ್ಲಿ

ಒಬ್ಬ ರಾಕ್ಷಸನೂ ಇಲ್ಲದ ಹಾಗೆ 'ಅರಾಕ್ಷಸ'ಯಾಗವನ್ನು ಮಾಡಬೇಕೆಂದು ನಿಶ್ಚಯಿಸಿ, ಯಜ್ಞವನ್ನು ಮಾಡುತ್ತ ಇರುವ ಕಾಲದಲ್ಲಿ, ಅನೇಕ ರಾಕ್ಷಸರು ಸಾಯುತ್ತಬಂದರು. ಹೀಗೆ ಬಹಳ ರಾಕ್ಷಸರು ನಾಶವಾಗತಕ್ಕ ಕಾಲದಲ್ಲಿ ನಮ್ಮ ಪಿತಾಮಹನಾದ ವಸಿಷ್ಠ ಮಹರ್ಷಿಯು ನನಗೆ ಹೇಳಿದುದೇನೆಂದರೆ: ಎಲೈ ಪರಾಶರನೇ, ಈ ರಾಕ್ಷಸನಾಶಕರವಾದ ಯಜ್ಞವನ್ನು ನಿಲ್ಲಿಸು. ನೀನು ಕೋಪ ವನ್ನು ಬಿಡು. ರಾಕ್ಷಸಾಪರಾಧದಿಂದ ನಿನ್ನ ತಂದೆಯಾದ 'ಶಕ್ತಿಯು' ನಾಶ ವಾದನು ಎಂಬ ಭ್ರಾಂತಿಯನ್ನು ಬಿಡು. ರಾಕ್ಷಸರು ಅಪರಾಧವನ್ನು ಮಾಡಿದರೂ ಅದಕ್ಕೆ ಅವರಿಗೆ ಶಿಕ್ಷೆಯನ್ನು ಮಾಡಬೇಕೆಂಬ ಯೋಚನೆಯು ಯುಕ್ತವಾದುದಲ್ಲ. ಅದು ನಮಗೆ ವಿಹಿತವಾದುದೂ ಅಲ್ಲ. ಈ ರೀತಿ ಕೋಪಮಾಡುವದು ಮೂಢರಿಗೆ ಹೊರತು ನಮ್ಮಂತಹ ಜ್ಞಾನಿಗಳಿಗೆ ಸರಿಯಾದುದಲ್ಲ. ಮನುಷ್ಯನಿಗೆ ತಾನು ಮಾಡಿದ ಶುಭಾಶುಭಕರ್ಮಗಳಿಗೆ ಅನುಸಾರವಾಗಿ ಫಲಗಳು ಉಂಟಾಗುವವು. ವತ್ಸ ಪರಾಶರನೇ ! ಕೋಪವೆಂಬುವದು ತಪಸ್ಸನ್ನೂ, ಯಶಸ್ಸನ್ನೂ ನಾಶಪಡಿಸ ತಕ್ಕುದು. ಆದುದರಿಂದಲೇ ಮಹರ್ಷಿಗಳು ಕೋಪವನ್ನು ದೂರಮಾಡಿ ಉತ್ಕೃಷ್ಟ ವಾದ ವಿಷ್ಣುಪದವನ್ನು ಹೊಂದಿದರು. ಆದುದರಿಂದ ನೀನು ಕೋಪಕ್ಕೆ ಅಧೀನ ನಾಗಬೇಡ. ಈಗ ನೀನು ಮಾಡತಕ್ಕ ನಿಶಾಚರನಾಶಕರವಾದ ಯಜ್ಞವನ್ನು ನಿಲ್ಲಿಸು. ಇದರಿಂದ ನಿರಪರಾಧಿಗಳೂ, ಸಾಧುಗಳೂ ಆದ ಅನೇಕ ರಾಕ್ಷಸರು ನಾಶವಾಗುತ್ತಾರೆ; ನಮಗೆ ಯಾವ ವಿಧವಾದ ಶುಭಫಲಗಳೂ ಉಂಟಾಗು ವದಿಲ್ಲ. ಸಾಧುಗಳು ಯಾವಾಗಲೂ ಕ್ಷಮಾಸಾರರಾದವರೆಂದು ಶಾಸ್ತ್ರಗಳು ಹೇಳಿರುವ ಪ್ರಯುಕ್ತ, ನೀನೂ ಸಹ ಕ್ಷಮಾಸಾರನಾಗಿರು. ಈ ಪ್ರಕಾರ ಹೇಳಿದ ನಮ್ಮ ಪಿತಾಮಹನ ಅಪ್ಪಣೆಯ ಪ್ರಕಾರ ನನಗೆ ಕೋಪವು ಶಾಂತವಾಗಿ ನಾನು ಮಾಡುತ್ತಿದ್ದ ಯಜ್ಞವನ್ನು ಪೂರ್ತಿಮಾಡದೆ ಅಲ್ಲಿಗೇ ನಿಲ್ಲಿಸಿದೆನು. ಇದನ್ನು ನೋಡಿದ ನಮ್ಮ ಪಿತಾಮಹನಾದ ವಸಿಷ್ಠ ಬ್ರಹ್ಮರ್ಷಿಯು ಸಂತೋಷಗೊಂಡು ಹೊರಟುಹೋದನಂತರ, ಇಲ್ಲಿಗೆ ಚತುರ್ಮುಖ ಬ್ರಹ್ಮನ ಮಗನಾದ ಪುಲಸ್ತ್ಯ ಬ್ರಹ್ಮನು ಬಂದು ನನ್ನನ್ನು ನೋಡಿ, ನಾನು ಅರ್ಘ್ಯಾದಿಗಳನ್ನು ಕೊಟ್ಟು ಉಚಿ ತಾಸನದಲ್ಲಿ ಕೂಡಿಸಿದನಂತರ, ನನ್ನನ್ನು ಕುರಿತು ಆತನು ಹೇಳಿದುದೇನೆಂದರೆ: "ಎಲೈ ಪರಾಶರನೇ, ನೀನು ನಿಮ್ಮ ಪಿತಾಮಹನ ವಾಕ್ಯದಲ್ಲಿ ಗೌರವವನ್ನಿಟ್ಟು ಕೋಪವನ್ನೂ, ಯಜ್ಞವನ್ನೂ ಸಹ ನಿಲ್ಲಿಸಿರುವುದು ನನಗೆ ಬಹಳ ಸಂತೋಷವ ನ್ನುಂಟುಮಾಡಿತು. ಆಚಾರ್ಯಾಜ್ಞೆಯಿಂದ ಕ್ಷಮಾಗುಣವನ್ನು ಹೊಂದಿ, ಅಪಾರ ವಾದ ವೈರವನ್ನು ಬಿಟ್ಟುದುದರಿಂದ ಇನ್ನುಮುಂದೆ ನೀನು ಸಕಲವಾದ ಶಾಸ್ತ್ರ ಗಳನ್ನೂ ತಿಳಿಯುತ್ತೀಯೆ; ಅಲ್ಲದೆ, ನೀನು ಕ್ಷಮಾಗುಣಯುಕ್ತನಾಗಿ ನನ್ನ

ಸಂತತಿವಿಚ್ಛೇದವನ್ನು ನಿಲ್ಲಿಸಿ ನನಗೆ ಸಂತೋಷವನ್ನುಂಟುಮಾಡಿದುದರಿಂದ, ನಿನಗೆ ಒಂದು ವರವನ್ನು ಕೊಡುತ್ತೇನೆ. ಆ ವರವೇನೆಂದರೆ, ನೀನು ಮುಂದೆ ಪುರಾಣವನ್ನೂ ಸಂಹಿತೆಯನ್ನೂ ರಚಿಸುವವನಾಗು. ಅಲ್ಲದೆ, ದೇವತಾಪಾರಮಾರ್ಥ್ಯವನ್ನು ಚನ್ನಾಗಿ ತಿಳಿಯುವವನಾಗು ಮತ್ತು ಪ್ರವೃತ್ತಿಕರ್ಮಗಳನ್ನೂ ನಿವೃತ್ತಿಕರ್ಮಗಳನ್ನೂ ಸಹ ನನ್ನ ಅನುಗ್ರಹದಿಂದ ನಿಸ್ಸಂಶಯವಾಗಿ ತಿಳಿ." ಈ ಪ್ರಕಾರ ಪುಲಸ್ತ್ಯಬ್ರಹ್ಮನು ನನಗೆ ವರವನ್ನು ಕೊಟ್ಟ ಕಾಲದಲ್ಲಿ ಸಮೀಪದಲ್ಲಿದ್ದ ನಮ್ಮ ಪಿತಾಮಹನು, "ಓ ಪರಾಶರನೇ—ಈ ಪುಲಸ್ತ್ಯಬ್ರಹ್ಮನು ನಿನಗೆ ಕೊಟ್ಟ ವರವೆಲ್ಲವೂ ಸತ್ಯವಾದುದೆಂದು ತಿಳಿ. ಸಂಶಯಪಡಬೇಡ" ಎಂಬುವದಾಗಿ ನನಗೆ ಹೇಳಿ, ಅವರಿಬ್ಬರೂ ತಮ್ಮತಮ್ಮ ಸ್ಥಾನಕ್ಕೆ ಪ್ರಯಾಣಮಾಡಿದನಂತರ, ಈಚೆಗೆ ಬಹಳ ದಿನಗಳು ಕಳೆದುಹೋಗಿ ಪುರಾಣವನ್ನು ರಚಿಸದಿದ್ದ ಕಾಲದಲ್ಲಿ ನೀನು ಪ್ರಶ್ನೆ ಮಾಡಿದುದರಿಂದ ಪೂರ್ವಚರಿತ್ರೆಗಳೆಲ್ಲವೂ ನನ್ನ ನೆನಪಿಗೆ ಬಂದವು. ಅದನ್ನು ಈಗ ನಿನಗೆ ನಾನು ಹೇಳುತ್ತೇನೆ. ಚನ್ನಾಗಿ ತಿಳಿಯುವನಾಗು: ಈ ಜಗತ್ತೆಲ್ಲಾ ವಿಷ್ಣುವಿನಿಂದಲೇ ಉತ್ಪತ್ತಿ, ವಿಷ್ಣುವಿನಲ್ಲಿಯೇ ಇರುವಿಕೆ; ವಿಷ್ಣುವಿನಲ್ಲಿಯೇ ಲಯ; ಸ್ಥಿತಿ, ಸಂಯಮ, ಕರ್ತೃತ್ವ—ಈ ಮೂರೂ ಪರಮಾತ್ಮನಾದ ಶ್ರೀಮನ್ನಾರಾಯಣನಲ್ಲಿಯೇ ಇರುವದು. 'ಸ್ಥಿತಿ'ಯೆಂದರೆ, ಲೋಕಪಾಲಕರಾದ, ಸೋಮಸೂರ್ಯಾದಿ ರೂಪದಿಂದ ಜಗತ್ತನ್ನು ಪೋಷಣೆ ಮಾಡುವದು. 'ಸಂಯಮ'ವೆಂದರೆ ಅಗ್ನಿ, ಅಂತಕಾದಿ ರೂಪದಿಂದ ಸಂಹಾರ ಮಾಡುವದು. 'ಕರ್ತೃತ್ವ'ವೆಂದರೆ, ಚತುರ್ಮುಖಬ್ರಹ್ಮರೂಪದಿಂದ ಸೃಷ್ಟ್ಯಾದಿಗಳನ್ನು ಮಾಡುವದು. ಈ ಜಗತ್ತುಗಳ ಸ್ಥಿತಿ, ಸಂಯಮ, ಕರ್ತೃತ್ವಗಳಿಗೆ ಕಾರಣನೇ ಸರ್ವೇಶ್ವರನಾದ ಶ್ರೀಮನ್ನಾರಾಯಣನು" ಎಂದು ಮೈತ್ರೇಯನಿಗೆ ಪರಾಶರ ಬ್ರಹ್ಮರ್ಷಿಯು ಹೇಳಿದನು. ಅದಕ್ಕೆ ಮೈತ್ರೇಯನು ಪರಾಶರರನ್ನು ಕುರಿತು, ಮಾಡಿದ ೫೫ ಪ್ರಶ್ನೆಗಳಿಗೆ ಸದುತ್ತರವನ್ನು ಈ ವಿಷ್ಣುಪುರಾಣದಲ್ಲಿ ಪ್ರದರ್ಶನ ಮಾಡಿರುತ್ತದೆ. ಹೇಗೆಂದರೆ :

ಮೊದಲನೆಯ ಅಂಶದಲ್ಲಿ ಎಂಟು ವಿಷಯಗಳು :

(೧) ಈ ಜಗತ್ತು ಯಾವ ರೀತಿಯುಂಟಾಯಿತು? (೨) ಮುಂದೆ ಯಾವ ರೀತಿ ಇರುತ್ತದೆ? (೩) ಎಲ್ಲಿ ಲೀನವಾಗುತ್ತದೆ? (೪) ಪುನಃ ಎಲ್ಲಿ ಲಯವಾಗುತ್ತದೆ? (೫) ಪ್ರಮಾಣವಾದ ಭೂತಗಳು ಯಾವವು? (೬) ದೇವತೆಗಳ ಉತ್ಪತ್ತಿಯು ಹೇಗೆ? (೭) ಜಗತ್ತು ಯಾವ ರೂಪವಾಗಿರುವದು? (೮) ಯಾರಿಂದ ಹುಟ್ಟಿತು?

ಎರಡನೆಯ ಅಂಶದಲ್ಲಿ ನಾಲ್ಕು ವಿಷಯಗಳು:

(೧) ಸಮುದ್ರ ಪರ್ವತಾದಿಗಳ ಸಂಸ್ಥಾನ, (೨) ಭೂಲೋಕ ಸಂಸ್ಥಾನ, (೩) ಸೂರ್ಯಾದಿಗಳ ಸಂಸ್ಥಾನ, (೪) ಸಂಸ್ಥಾನ ಪ್ರಮಾಣ.

ಮೂರನೆಯ ಅಂಶದಲ್ಲಿ ಆರು ವಿಷಯಗಳು:

(೧) ದೇವಾದಿಗಳ ವಂಶ, (೨) ಮನುವಂಶ, (೩) ಮನ್ವಂತರಗಳು, (೪) ವೇದಶಾಖಾಭೇದಗಳು, (೫) ಬ್ರಾಹ್ಮಣಾದಿಗಳ ಧರ್ಮಗಳು, (೬) ಭೂತಾದಿ ಪ್ರಮಾಣ.

ನಾಲ್ಕನೆಯ ಅಂಶದಲ್ಲಿ ಒಂದೇ ವಿಷಯವು:

ದೇವರ್ಷಿ ರಾಜರ್ಷಿಗಳ ಚರಿತ್ರೆಯು, ಅವರುಗಳ ವಂಶವಿಸ್ತಾರ ಕ್ರಮ.

ಐದನೆಯ ಅಂಶದಲ್ಲಿ ಒಂದೇ ವಿಷಯವು:

ಯದುವಂಶದಲ್ಲಿ ಭೂಭಾರಹರಣಾರ್ಥವಾಗಿ, ಅವತಾರ ಮಾಡಿದ ಶ್ರೀ ಮಹಾವಿಷ್ಣುವಿನ ಚರಿತ್ರೆಯು.

ಆರನೆಯ ಅಂಶದಲ್ಲಿ ಆರು ವಿಷಯಗಳು:

(೧) ಕಲ್ಪಗಳು, (೨) ಕಲ್ಪವಿಕಲ್ಪಗಳು, (೩) ಕಲ್ಪಾಂತಸ್ವರೂಪಗಳು, (೪) ಯುಗಧರ್ಮಗಳು, (೫) ಯುಗವಿಭಾಗಗಳು, (೬) ಆಶ್ರಮಧರ್ಮ ಕ್ರಮ.

ಇಲ್ಲಿಗೆ ಸರ್ವ ಪುರಾಣಗಳಿಗೂ ಮೊದಲನೆಯದಾದ ಬ್ರಹ್ಮಾಂಡವೆಂಬ ಮಹಾ ಪುರಾಣಾಂತರ್ಗತವಾದ ಪಾರಾಶರ್ಯಸಂಹಿತಾರೂಪವಾದ ಶ್ರೀವಿಷ್ಣುಪುರಾಣದ ಮೊದಲನೆ ಅಂಶದಲ್ಲಿನ ಪ್ರಥಮಾಧ್ಯಾಯ ಸಮಾಪ್ತಃ.

ಎರಡನೆಯ ಅಧ್ಯಾಯವು

ಶ್ರೀ ಪರಾಶರ ಮಹರ್ಷಿಗಳು ಹೇಳುತ್ತಾರೆ: "ವಿಕಾರವಿಲ್ಲದವನಾಗಿಯೂ, ಕ್ಲೇಶಕರ್ಮಾದಿರಹಿತನಾಗಿಯೂ, ನಿತ್ಯನಾಗಿಯೂ, ಪರಮಾತ್ಮನಾಗಿಯೂ, ಯಾವಾಗಲೂ ಹೇಯ ಪ್ರತ್ಯನೀಕ ಕಲ್ಯಾಣಗುಣರೂಪನಾಗಿಯೂ, ಸರ್ವ ವ್ಯಾಪಕನಾಗಿಯೂ, ಸರ್ವಜಯಶಾಲಿಯಾಗಿಯೂ, ಹಿರಣ್ಯಗರ್ಭನಾಗಿಯೂ, ದುರಿತಹರನಾಗಿಯೂ, ಸುಖಕರನಾಗಿಯೂ, ಸಕಲ ಜಗತ್ತಿಗೂ ಆವಾಸಭೂತ ನಾಗಿಯೂ, ಸಂಸಾರೋತ್ತಾರಕನಾಗಿಯೂ, ಮೋಕ್ಷಪ್ರದನಾಗಿಯೂ, ಸೃಷ್ಟಿ ಸ್ಥಿತಿ ಲಯಕಾರಿಯಾಗಿಯೂ, ಕಾರಣಕಾರ್ಯದೆಶೆಗಳಲ್ಲಿ ಏಕರೂಪನಾಗಿಯೂ,

ವ್ಯಕ್ತಾವ್ಯಕ್ತ ರೂಪನಾಗಿಯೂ, ಮೂಲಭೂತನಾಗಿಯೂ ಇರುವ ಶ್ರೀಮನ್ನಾರಾಯಣನಿಗೆ ನಮಸ್ಕಾರವು. ಸರ್ವಾಧಾರನಾದ, ಸರ್ವಭೂತಾಂತರ್ಯಾಮಿಯಾದ, ಜೀವಗತ ಜ್ಞಾನಸಂಕೋಚಾದಿರಹಿತನಾದ, ಪುರುಷೋತ್ತಮನಾದ, ಜ್ಞಾನ ಸ್ವರೂಪನಾದ, ಅತ್ಯಂತ ನಿರ್ಮಲನಾದ, ನಿರಪೇಕ್ಷೆಯಿಂದ ಸ್ವಚ್ಛಂದಚಾರಿಯಾದ, ಕರ್ಮಾಧೀನವಾದ ಜನನಮರಣರಹಿತನಾದ ಶ್ರೀಮನ್ನಾರಾಯಣನಿಗೆ ನಮಸ್ಕಾರವು ಎಂದು ಪ್ರಾರ್ಥಿಸಿ ಹೇಳುತ್ತಾರೆ :

ಪೂರ್ವದಲ್ಲಿ ದಕ್ಷಬ್ರಹ್ಮನೇ ಮೊದಲಾದ ಮುನಿಶ್ರೇಷ್ಠರುಗಳು ಚತುರ್ಮುಖ ಬ್ರಹ್ಮನಿಂದ ಕೇಳಿದ ಪಾರಮಾರ್ಥ್ಯಸಂಬಂಧವಾದ ವಿಷಯಗಳನ್ನು ನರ್ಮದಾ ತೀರದಲ್ಲಿ ದಕ್ಷಬ್ರಹ್ಮನಿಂದ ಪುರುಕುತ್ಸಮಹಾರಾಜ,ಪುರುಕುತ್ಸನಿಂದ ಸಾರಸ್ವತ ನೆಂಬ ಬ್ರಾಹ್ಮಣ, ಸಾರಸ್ವತನಿಂದ ನಾನು, ಈ ಪ್ರಕಾರ ಪರಂಪರೆಯಾಗಿ ಉಪ ದೇಶವನ್ನು ಪಡೆದೆವು. ದೇವತಾಪಾರಮಾರ್ಥ್ಯ ವಿಷಯವನ್ನು ಸದಾಚಾರ್ಯ ಮುಖೇನ ಪರಂಪರಯಾ ತಿಳಿದುಕೊಳ್ಳತಕ್ಕದ್ದು. ಇದೇ ಅಭಿಪ್ರಾಯವನ್ನೇ ಪರಮಾತ್ಮನು ಅರ್ಜುನನಿಗೆ ಹೇಳಿರುವದೇನೆಂದರೆ: ಯೋಗವನ್ನು ಪೂರ್ವದಲ್ಲಿ ನಾನು ವಿವಸ್ವಂತನಿಗೆ ಹೇಳಿದೆನು, ವಿವಸ್ವಂತನು ಮನುವಿಗೆ, ಮನುವು ಇಕ್ಷ್ವಾಕುಮಹಾರಾಜನಿಗೆ ಹೇಳಿದನು. ಇತ್ಯಾದಿ ಪರಂಪರಾಕ್ರಮವನ್ನೇ ಅನೇಕ ಗ್ರಂಥಗಳು ಹೇಳುತ್ತವೆ. ಸ್ವರೂಪ, ಗುಣ, ಐಶ್ವರ್ಯಾದಿಗಳಿಂದ ಉತ್ಕೃಷ್ಟವಾದ ವಸ್ತುಗಳಿಗೆಲ್ಲಾ ಉತ್ಕೃಷ್ಟನಾದವನು ಪರಮಾತ್ಮನಾದ ಶ್ರೀಮನ್ನಾರಾಯಣನು. ಪರಮಾತ್ಮನೆಂದರೆ, ಹೊಂದುವುದಕ್ಕೆ ಯೋಗ್ಯನಾದವನು. ಆದುದರಿಂದ, ಈ ಶಬ್ದವು ನಾರಾಯಣನಿಗೇನೇ ಅನ್ವಯಿಸುತ್ತದೆ. ಮತ್ತು ಈ ಪರಮಾತ್ಮನು, ಜಾತಿ, ಗುಣ, ಕ್ರಿಯ, ದ್ರವ್ಯ, ನಾಮ ಇತ್ಯಾದಿ ಕಲ್ಪನಾಕಾರಣವಾದ ವಿಶೇಷಣ ಗಳಿಂದ ಬಿಡಲ್ಪಟ್ಟವನು. ಷಡ್ಭಾವ ವಿಕಾರಗಳಿಂದ ಬಿಡಲ್ಪಟ್ಟವನು. ಮತ್ತು ಸರ್ವವಸ್ತುಗಳಲ್ಲಿಯೂ ಸರ್ವಜಗತ್ತಿನಲ್ಲಿಯೂ ಅಂತರ್ಬಹಿರ್ವ್ಯಾಪ್ತನಾಗಿರುವ ವನು ; ಕಾಮ, ಕ್ರೋಧ, ಮೋಹ, ಹರ್ಷ, ಮಾನ, ಮದ, ಮತಿ, ವಿಷಾದವೆಂಬ ಎಂಟು ಮನಸ್ಸಿನಲ್ಲಿರತಕ್ಕ ಮಲಗಳಿಂದ ಬಿಡಲ್ಪಟ್ಟ ನಿರ್ಮಲನಾದ ವಾಸುದೇವನು ವ್ಯಕ್ತಾವ್ಯಕ್ತಸ್ವರೂಪನಾದವನು. ಇಂತಹ ಶುದ್ಧವಾದ ಶ್ರೀಮನ್ನಾರಾಯಣನನ್ನು ನಿತ್ಯಸೂರಿಗಳು ಯಾವಾಗಲೂ ನೋಡುತ್ತಿರುತ್ತಾರೆ. ಅವಾಪ್ತ ಸಮಸ್ತಕಾಮ ನಾದ ಶ್ರೀಮನ್ನಾರಾಯಣನಿಗೆ ಪ್ರಯೋಜನಾಪೇಕ್ಷೆ ಇಲ್ಲದೆ ಇರಬೇಕಾದುದು ಅವಶ್ಯಕವು. ಪ್ರಪಂಚದಲ್ಲಿ ಸಾಧಾರಣವಾಗಿ ಪ್ರಯೋಜನಾಪೇಕ್ಷೆ ಇಲ್ಲದೆಯೇ ಯಾವ ಕೆಲಸವನ್ನೂ ಮಾಡುವದಿಲ್ಲ. ಹೀಗಿದ್ದಾಗ್ಯೂ ಜಗತ್ಸೃಷ್ಟ್ಯಾದಿಗಳು ಪರಮಾತ್ಮನಿಗಾದರೋ ಪ್ರಯೋಜನವಿಲ್ಲದುದು. ಈ ಜಗತ್ಸೃಷ್ಟ್ಯಾದಿಗಳು

ಪರಮಾತ್ಮನಿಗೆ ಹುಡುಗರು ಆಟವಾಡುವ ಹಾಗೆ ಲೀಲಾವಿಭೂತಿಯಲ್ಲಿ ಚೇಷ್ಟೆಯೇ ವಿನಾ ಮತ್ತೇನೂ ಅಲ್ಲ. ಅಂದರೆ ವಿಹಾರಪ್ರಯೋಜನವುಳ್ಳವನೆಂದು ಅರ್ಥವು. ಅನೇಕ ಋಷಿಶ್ರೇಷ್ಠರುಗಳು, ಪರಬ್ರಹ್ಮನಾದ ಶ್ರೀಮನ್ನಾರಾಯಣನನ್ನು ಅನೇಕ ರೀತಿಯಾಗಿ ವರ್ಣಿಸಿರುತ್ತಾರೆ. ಹೇಗೆಂದರೆ: ಚೇತನಾಚೇತನಾತ್ಮಕನಾಗಿ ನಿತ್ಯ ನಾದವನು; ಪ್ರಪನ್ನರಾದವರಿಗೆ ಆಧಾರನು; ಅಳತೆಗೆ ಅಸಾಧ್ಯನಾದವನು; ಕಾಲದಿಂದ ಜೀರ್ಣನಾಗದೆ ಇರುವನು, ಸ್ಪಂದರಹಿತನಾದವನು; ಸತ್ವ, ರಜ, ತಮೋಗುಣಾತ್ಮಕನಾದವನು; ಆತನಿಗೆ ಹಗಲಿಲ್ಲ, ರಾತ್ರಿಯಿಲ್ಲ; ಅಂತರಿಕ್ಷ ವಿಲ್ಲ, ಭೂಮಿಯಿಲ್ಲ; ಕತ್ತಲೆಯಿಲ್ಲ, ಬೆಳಕಿಲ್ಲ; ಜಗತ್ಸೃಷ್ಟಿಕಾಲದಲ್ಲಿ ಮೊದಲಿನ ಸೃಷ್ಟಿಕಾಲವೇ ಪರಮಾತ್ಮನಿಗೆ ಉನ್ಮೇಷ, ಅಂದರೆ ಕಣ್ಣನ್ನು ಬಿಡುವಿಕೆಯು. ಜಗತ್ತಿನ ಲಯವು ಒಂದು ನಿಮಿಷಕಾಲವು. ಈ ಪ್ರಕಾರ ಪರಬ್ರಹ್ಮನಾದ ಶ್ರೀ ಮಹಾವಿಷ್ಣುವು ಕಣ್ಣುಮುಚ್ಚಿ ಕಣ್ಣುತೆರೆಯುವುದೇ ಸೃಷ್ಟಿಸ್ಥಿತಿಲಯಾದಿಗಳು. ಜಗನ್ಮಯನಾಗಿಯೂ, ಸರ್ವತಃ ಪ್ರವರ್ತಿಸತಕ್ಕವನಾಗಿಯೂ, ಸಕಲಪ್ರಾಣಿ ಗಳಿಗೂ ಸ್ವಾಮಿಯಾಗಿಯೂ, ಸರ್ವಚೇತನಸ್ವರೂಪನಾಗಿಯೂ, ಇಚ್ಛಾಮಾತ್ರ ಕಾರ್ಯಕರನಾಗಿಯೂ, ಸಂಕಲ್ಪಮಾತ್ರ ಸಾಧಕನಾಗಿಯೂ, ಸಂಕೋಚವಿಕಾಸ ಗಳಿಂದ ಪ್ರಧಾನನಾಗಿಯೂ, ಸರ್ವೇಶ್ವರನಾಗಿಯೂ, ಮಹದಾದಿ ಸ್ವರೂಪ ನಾಗಿಯೂ, ಮಹತ್ತತ್ತ್ವಾದಿಗಳಿಂದ ಸೃಷ್ಟಿಸಿದವನಾಗಿಯೂ, ಸತ್ವಗುಣದಿಂದ ಜಗತ್ಪಾಲಕನಾಗಿಯೂ, ತಮೋಗುಣದಿಂದ ಅತಿಭೀಷಣನಾಗಿ ಅಖಿಲ ಭೂತ ಗಳನ್ನು ತಿನ್ನತಕ್ಕವನಾಗಿಯೂ, ಪ್ರಳಯಕಾಲದಲ್ಲಿ ಜಗತ್ತೆಲ್ಲವನ್ನೂ ಒಂದೇ ಸಮುದ್ರವನ್ನಾಗಿ ಮಾಡತಕ್ಕವನಾಗಿಯೂ, ಕಡೆಗೆ ನಾಗಪರ್ಯಂಕದಲ್ಲಿ ಯೋಗ ನಿದ್ರೆಯಲ್ಲಿ ಮಲಗತಕ್ಕವನಾಗಿಯೂ, ನಿದ್ದೆಯಿಂದ ಎಚ್ಚರಗೊಂಡು ಪುನಃಸೃಷ್ಟಿ ಮಾಡತಕ್ಕವನಾಗಿಯೂ ಇರುವ ಶ್ರೀಮನ್ನಾರಾಯಣನೊಬ್ಬನೇ ಅನೇಕ ರೂಪ ದಿಂದ ಅನೇಕ ವ್ಯಾಪಾರಗಳನ್ನು ಮಾಡತಕ್ಕವನು. ಭಗವಂತನಾದ ಶ್ರೀಮನ್ನಾ ರಾಯಣನಿಂದಲೇ ಪಂಚಭೂತಗಳಾದ ಪೃಥಿವೀ, ಅಪ್ಪು, ತೇಜಸ್ಸು, ವಾಯು, ಆಕಾಶ ಇವುಗಳೆಲ್ಲವೂ ಉತ್ಪತ್ತಿಯಾಯಿತು. ವರದನಾಗಿಯೂ, ವರೇಣ್ಯ ನಾಗಿಯೂ ಇರುವ ಶ್ರೀಮನ್ನಾರಾಯಣನೇ ಸರ್ವಕಾರಣನಾದವನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ
ಎರಡನೆಯ ಅಧ್ಯಾಯವು ಸಂಪೂರ್ಣವು

ಮೂರನೆಯ ಅಧ್ಯಾಯವು

ಈ ಪ್ರಕಾರ ಜಗತ್ತಿನ ಪೂರ್ವಸ್ಥಿತಿ ಕ್ರಮವನ್ನು ಪರಾಶರ ಮಹರ್ಷಿಗಳು ವಿವರಿಸಿದನಂತರ ಶ್ರೀ ಮೈತ್ರೇಯ ಮಹರ್ಷಿಗಳು ಪ್ರಶ್ನಿಸುತ್ತಾರೆ: "ಎಲೈ ಪರಾಶರರೇ! ಶ್ರೀಮನ್ನಾರಾಯಣನು ನಿರ್ಗುಣನಾದವನು. ಶುದ್ಧನಾದವನೆಂಬುದಾಗಿ ನೀವು ಹೇಳಿದಿರಲ್ಲವೇ? ಹಾಗಾದರೆ ಗುಣತ್ರಯವಿಶಿಷ್ಟನಾಗಿ, ಜಗತ್ಸೃಷ್ಟ್ಯಾದಿಗಳನ್ನು ಮಾಡಿದನು ಎಂಬುದಾಗಿ ಹೇಳುವದು ಯುಕ್ತವೇ?" ಎಂದು ಪ್ರಶ್ನೆ ಮಾಡಿದುದಕ್ಕೆ ಪರಾಶರ ಬ್ರಹ್ಮರ್ಷಿಯು ಸಮಾಧಾನವನ್ನು ಹೇಳುತ್ತಾರೆ: "ಎಲೈ ಮೈತ್ರೇಯನೇ! ಭಗವಂತನಿಗೆ ಜಗತ್ಸೃಷ್ಟ್ಯಾದಿಗಳು, ಅಗ್ನಿಗೆ ಔಷ್ಣ್ಯಸ್ವಭಾವವು ಹೇಗೋ, ಹಾಗೆ ಸ್ವಾಭಾವಿಕವಾದವುಗಳು. ಶ್ರೀಮನ್ನಾರಾಯಣನು ಸೃಷ್ಟಿಕಾಲದಲ್ಲಿ ಚತುರ್ಮುಖಬ್ರಹ್ಮನಾಗಿ, ಲೋಕಪಿತಾಮಹನೆಂದು ಖ್ಯಾತಿಗೊಂಡು ಪ್ರತಿಕಲ್ಪದಲ್ಲಿಯೂ ಹುಟ್ಟುತ್ತಾನೆ ಎಂಬಿವೇ ಮೊದಲಾದ ವಾಕ್ಯಗಳು, ಔಪಚಾರಿಕಗಳು. ಸ್ವೇಚ್ಛಾಗೃಹೀತಶರೀರಕನಾದ, ಪರಮಾತ್ಮನ ದೇಹವನ್ನು ರಾತ್ರಿಕಾಲಗಳಲ್ಲಿ ಚತುರ್ಮುಖಬ್ರಹ್ಮನು ಹೊಂದಿ, ವಿಷ್ಣುವಿನಿಂದ ಏಕೀಭವಿಸಿ. ವೈಷ್ಣವ ನಿದ್ರೆಯನ್ನು ಹೊಂದುತ್ತಾನೆ. ಇಂತಹ ಚತುರ್ಮುಖಬ್ರಹ್ಮನಿಗೆ ಬ್ರಹ್ಮಮಾನದಿಂದ ನೂರು ವರ್ಷ ಆಯುಸ್ಸು. ಕಾಲಸ್ವರೂಪನಾದ ವಿಷ್ಣುವಿಗೂ ಕೂಡ, ಪರಿಮಾಣಕಾಲವು, ಬ್ರಹ್ಮರುದ್ರಾದಿಗಳಿಗೂ ಹೀಗಿರತಕ್ಕ ಕಾಲದಲ್ಲಿ ಇತರರಾದ ಚರಾಚರ ಪ್ರಾಣಿಗಳಿಗೂ, ಪರ್ವತ, ಸಮುದ್ರ ಇತ್ಯಾದಿಗಳಿಗೆ ಪರಿಣಾಮಕಾಲಗಳೆಂದು ಹೇಳಬೇಕಾದುದೇನು? ಮೂವತ್ತು ಮುಹೂರ್ತಗಳು ಅಥವಾ ಅಹೋರಾತ್ರಿ, ಎಂದರೆ ಒಂದು ದಿವಸ; ಶುಕ್ಲಕೃಷ್ಣದ್ವಿಪಕ್ಷಾತ್ಮಕವಾದುದು ಚಾಂದ್ರಮಾನ ಒಂದು ತಿಂಗಳು ಅಥವಾ ಮೂವತ್ತು ದಿವಸ; ಇಂತಹ ಆರು ತಿಂಗಳಿಗೆ ದಕ್ಷಿಣಾಯನವು, ಇನ್ನಾರು ತಿಂಗಳಿಗೆ ಉತ್ತರಾಯಣ; ಇಂತಹ ಎರಡು ಅಯನಗಳಿಗೆ ಒಂದು ವರ್ಷ. ಇದರಲ್ಲಿ ದಕ್ಷಿಣಾಯನವು ದೇವತೆಗಳಿಗೆ ರಾತ್ರಿಯೆಂತಲೂ, ಉತ್ತರಾಯಣವು ಹಗಲೆಂತಲೂ ತಿಳಿಯಬೇಕು. ಮಾನವಮಾನದ ನಮ್ಮ ಒಂದು ವರ್ಷವು ದೇವತೆಗಳಿಗೆ ಒಂದು ದಿನ; ಇಂತಹ ದಿವ್ಯಸಹಸ್ರಗಳು ಕೃತ ತ್ರೇತಾದಿ ಸಂಜ್ಞೆಯುಳ್ಳವುಗಳು. ನಾಲ್ಕು ಯುಗಗಳು ದಿವ್ಯದ್ವಾದಶಸಹಸ್ರ ವರ್ಷಗಳಿಂದ ಕೂಡಿರತಕ್ಕವುಗಳು. ಇವುಗಳಲ್ಲಿ ಕೃತಯುಗವು ನಾಲ್ಕು ಸಹಸ್ರ ವರ್ಷಗಳು, ದ್ವಾಪರವು ಮೂರು ಸಾವಿರ ವರ್ಷಗಳು, ತ್ರೇತಾಯುಗವು ಎರಡುಸಾವಿರ ವರ್ಷಗಳು, ಕಲಿಯುಗವು ಒಂದು ಸಾವಿರ ವರ್ಷಗಳು. ಈ ಯುಗಗಳ ಮಧ್ಯದ ಸಂಧ್ಯಾಂಶಗಳು ಎರಡು ಸಹಸ್ರ ವರ್ಷಗಳು. ಈ ಪ್ರಕಾರ ದಿವ್ಯದ್ವಾದಶಸಹಸ್ರ ವರ್ಷಗಳು ಸಿದ್ಧವಾದುದು. ಈ ಚತುರ್ಯುಗಗಳು ಸಹಸ್ರಾ

ವರ್ಷ ಸುತ್ತಿದರೆ, ಬ್ರಹ್ಮನಿಗೆ ಒಂದು ದಿವಸವು. ಇಂತಹೆ ಒಂದು ದಿವಸಕ್ಕೆ ಹದಿನಾಲ್ಕು ಮನ್ವಂತರಗಳು. ಪ್ರತಿಯೊಂದು ಮನ್ವಂತರವೂ, ಎಪ್ಪತ್ತೊಂದು ಸಾವಿರ ವರ್ಷಕ್ಕಿಂತಲೂ ಹೆಚ್ಚಾಗುವದು. ಹೀಗೆ ಬ್ರಹ್ಮನ ಹಗಲು ಕಳೆದು, ರಾತ್ರಿಯಾಗುವದೇ ಪ್ರಳಯವು. ಪ್ರಳಯಕಾಲದಲ್ಲಿ, ಭೂಲೋಕಾದಿಗಳು ಸುಟ್ಟು, ಜನಗಳು ಅತ್ಯಂತ ತಾಪಾರ್ತರಾಗ್ಗಿ ನಾಶವಾಗುತ್ತಾರೆ; ಅನಂತರವೆಲ್ಲವೂ ಒಂದೇ ಸಮುದ್ರವಾಗುತ್ತದೆ. ಅಂದರೆ ಜಲಮಯವಾಗುತ್ತದೆ. ಆ ಕಾಲದಲ್ಲಿ ಪರಮಾತ್ಮನಾಗಿಯೂ, ಬ್ರಹ್ಮರೂಪವಾಗಿಯೂ ಇರತಕ್ಕ ಶ್ರೀಮನ್ನಾರಾಯಣನು ಶೇಷಶಾಯಿಯಾಗಿ, ಮೂರುಲೋಕವನ್ನೂ ಗ್ರಾಸಮಾಡಿದ ನೆಪದಲ್ಲಿ ಯೋಗನಿದ್ರಾಸುಪ್ತನಾಗುತ್ತಾನೆ. ಹೀಗೆ ರಾತ್ರಿ ಕಳೆದನಂತರ ಪುನಃ ಲೋಕಗಳನ್ನು ಸೃಷ್ಟಿಸುತ್ತಾನೆ. ಈ ಪ್ರಕಾರ ಬ್ರಹ್ಮನಿಗೆ ನೂರು ವರ್ಷಗಳು ಕಳೆಯಬೇಕು; ಬ್ರಹ್ಮನ ಒಂದುನೂರು ವರ್ಷಗಳು ಕಳೆದರೆ ಪರಾರ್ಧವೆಂದು ಹೆಸರು; ಮತ್ತು ಮಹಾಕಲ್ಪವೆಂದೂ ಹೆಸರು. ಒಂದನೇ ಪರಾರ್ಧಕ್ಕೆ ಪಾದ್ಮಕಲ್ಪವೆಂದೂ, ದ್ವಿತೀಯಪರಾರ್ಧಕ್ಕೆ ವಾರಾಹಕಲ್ಪವೆಂದೂ ಹೇಳುತ್ತಾರೆ."

ಇಲ್ಲಿಗೆ ಶ್ರೀ ವಿಷ್ಣುಪುರಾಣ ಪ್ರಥಮಾಂಶದಲ್ಲಿ
ತೃತೀಯಾಧ್ಯಾಯವು ಸಮಾಪ್ತಃ

ನಾಲ್ಕನೆಯ ಅಧ್ಯಾಯವು

ಶ್ರೀ ಮೈತ್ರೇಯರು ಪ್ರಶ್ನೆ ಮಾಡುತ್ತಾರೆ: "ಎಲೈ ಪರಾಶರ ಮುನಿವರ್ಯರೇ! ಬ್ರಹ್ಮನು ರಾತ್ರಿಯಾದ ಕಾಲದಲ್ಲಿ ಮಹಾಪ್ರಳಯವನ್ನು ಮಾಡಿ ಪುನಃ ಸೃಷ್ಟಿ ಮಾಡುತ್ತಾನೆ! ಎಂಬುದಾಗಿ ಹಿಂದಿನ ಅಧ್ಯಾಯದಲ್ಲಿ ಹೇಳಿದಿರಲ್ಲವೇ, ಬ್ರಹ್ಮಾತ್ಮಕನಾದ ಶ್ರೀಮನ್ನಾರಾಯಣನು ಯಾವ ರೀತಿ ಜಗತ್ತನ್ನು ಹುಟ್ಟಿಸಿದನು. ಅದನ್ನು ನನಗೆ ವಿಸ್ತಾರವಾಗಿ ಹೇಳಬೇಕೆಂಬುದಾಗಿ ಪ್ರಾರ್ಥಿಸಿದುದಕ್ಕೆ ಪರಾಶರ ಮಹರ್ಷಿಯು ಅಪ್ಪಣೆ ಕೊಡಿಸುತ್ತಾರೆ: "ಎಲೈ ಮೈತ್ರೇಯನೇ! ಹಿಂದೆ ನಿನಗೆ ಹೇಳಿದ ಕಲ್ಪದಲ್ಲಿ, ಅಂದರೆ ಪಾದ್ಮಕಲ್ಪದಲ್ಲಿ, ನಿಶಾಸುಪ್ತನಾದ ಭಗವಂತನು ನಿದ್ರೆಯಿಂದ ಎಚ್ಚರಗೊಂಡು ಸತ್ತ್ವೋದ್ರಿಕ್ತನಾಗಿ ಲೋಕವೆಲ್ಲಾ ಶೂನ್ಯವಾಗಿರುವದನ್ನು ಕಂಡು ಪರಾರ್ಧವಾದ ಪಾದ್ಮಕಲ್ಪದಲ್ಲಿ ಮತ್ಸ್ಯಕೂರ್ಮಾದಿರೂಪಗಳಿಂದ ಪಾದ್ಮಪುರಾಣವನ್ನು ಪ್ರಕಾಶಪಡಿಸಿದನು. ನಾರಾಯಣನೆಂದರೆ ಜಲವೇ ಸ್ಥಾನವಾಗಿ ಉಳ್ಳವನು, ಅಥವಾ, ಜ್ಞಾನವೇ ಸ್ಥಾನವಾಗಿ ಉಳ್ಳವನು. ಜಗತ್ತು

ಗಳೆಲ್ಲವೂ ಎಲ್ಲಿ ನೋಡಿದಾಗ್ಯೂ ಜಲಮಯವಾಗಿರುವುದನ್ನೂ, ಭೂಮಿಯು ನೀರಿನಲ್ಲಿ ಮುಳುಗಿರುವುದನ್ನೂ, ಶ್ರೀಮನ್ನಾರಾಯಣನು ನೋಡಿ, ಉದ್ಧರಿಸ ಬೇಕೆಂಬುದಾಗಿ ಸಂಕಲ್ಪಿಸಿ, ವರಾಹಾವತಾರವನ್ನು ಹೊಂದಿದನು. ಆಗ ಸನ ಕಾದಿ ಮಹರ್ಷಿಗಳು ಯಜ್ಞಮಯನಾಗಿಯೂ, ವೇದಮಯನಾಗಿಯೂ ಇರುವ ವರಾಹರೂಪಿಯಾದ ಶ್ರೀಮನ್ನಾರಾಯಣನನ್ನು ಸ್ತೋತ್ರಮಾಡಿದರು. ಆಗ ವರಾಹಸ್ವಾಮಿಯು ಜಲವನ್ನು ಪ್ರವೇಶಮಾಡಿ ಪಾತಾಳಲೋಕದಲ್ಲಿದ್ದ ಭೂಮಿ ಯನ್ನು ಉದ್ಧರಿಸಬೇಕೆಂದು ಸಂಕಲ್ಪಿಸಿ, ಮೇಲಕ್ಕೆ ಎತ್ತಿದನು. ಆಗ ಭಕ್ತಿನಮ್ರ ಳಾದ ಭೂದೇವಿಯು ಪರಮಾತ್ಮನಾದ ಶ್ರೀಮನ್ನಾರಾಯಣನನ್ನು ಸ್ತೋತ್ರ ಮಾಡುತ್ತಾಳೆ: "ಶಂಖ, ಚಕ್ರ, ಗದಾಧೃತನಾಗಿಯೂ, ಪುಂಡರೀಕಾಕ್ಷ ನಾಗಿಯೂ ಇರತಕ್ಕ ಶ್ರೀಮನ್ನಾರಾಯಣನೇ, ನಿನಗೆ ನಮಸ್ಕಾರವು. ಪೂರ್ವ ದಲ್ಲಿಯೂ ನಿನ್ನಿಂದ ಉದ್ಧೃತಳಾದ ನಾನು ಈಗಲೂ ನಿನ್ನಿಂದಲೇ ಉದ್ಧೃತ ಳಾದೆನು. ಎಲೈ ಜನಾರ್ದನನೇ! ನಿನ್ನ ಹಾಗೆಯೇ ಇರತಕ್ಕವಳು ನಾನು. ಸಕಲಪ್ರಾಣಿಗಳಿಗೂ ಆತ್ಮನಾದವನು ನೀನೇ, ನೀನು ಪರಮಾತ್ಮನು, ಪುರುಷಾ ತ್ಮಕನು, ಅಂದರೆ ಅನಿರುದ್ಧನು, ಅಚ್ಯುತ, ಸತ್ಯವಾಸುದೇವಾಖ್ಯನು, ನೀನೇ. ಈ ಪ್ರಕಾರ ಸರ್ವವ್ಯಾಪಕನಾದ ನಿನಗೆ ನಮಸ್ಕಾರವು. ಸಕಲ ಜಗತ್ತಿಗೂ ಕಾರಣಭೂತನಾದವನು ನೀನೇ, ಸಕಲ ಭೂತಗಳನ್ನು ಕಾಪಾಡತಕ್ಕವನೂ ನೀನೇ, ಬ್ರಹ್ಮ ವಿಷ್ಣು ರುದ್ರ ರೂಪಗಳನ್ನು ಧರಿಸಿರತಕ್ಕವನೂ ನೀನೇ, ಸಕಲ ಯೋಗಿಗಳಿಂದಲೂ ಚಿಂತಿಸಲ್ಪಡತಕ್ಕವನೂ ನೀನೇ, ನಿನ್ನ ಪರಾತ್ಪರ ರೂಪವನ್ನು ಒಬ್ಬರೂ ತಿಳಿಯಲಾರರು. ನೀನು ಅನೇಕ ಅವತಾರಗಳನ್ನು ಮಾಡಿರುವದರಿಂದ, ದೇವತೆಗಳೂ ಕೂಡ ನಿನ್ನ ಅವತಾರರೂಪವನ್ನೇ ಪೂಜಿಸುತ್ತಾರೆ. ಎಲೈ ಪರಬ್ರಹ್ಮ ನಾದ ಶ್ರೀಮನ್ನಾರಾಯಣನೇ, ನಿನ್ನನ್ನೇ ಆರಾಧಿಸಿ ಮೋಕ್ಷಾಪೇಕ್ಷೆಯುಳ್ಳವರು ಮೋಕ್ಷವನ್ನು ಹೊಂದುತ್ತಾರೆ. ವಾಸುದೇವನಾದ ನಿನ್ನನ್ನು ಹೊರತು ಮೋಕ್ಷವು ಮತ್ತಾರಿಂದಲೂ ದೊರೆಯಲಾರದು. ಎಲೈ ಪರಮಾತ್ಮನೇ, ನಾನು ನಿನ್ನ ರೂಪ ವಾಗಿಯೇ ಇರತಕ್ಕವಳು, ನೀನೇ ನನಗೆ ಆಧಾರನಾದವನು, ನಿನ್ನನ್ನೇ ಆಶ್ರ ಯಿಸಿರತಕ್ಕವಳು, ನಿನ್ನಿಂದಲೇ ನನಗೆ ಲೋಕದಲ್ಲಿ ಮಾಧವೀ ಎಂಬುದಾಗಿಯೂ ಹೇಳುತ್ತಾರೆ. ಅಖಿಲಜ್ಞಾನಮಯನಾದವನೇ, ಸ್ಥೂಲಸೂಕ್ಷ್ಮಾತ್ಮಕನೇ, ನಾಶ ರಹಿತನಾದವನೇ, ವ್ಯಕ್ತನಾದವನೇ, ನೀನು ಯಾವಾಗಲೂ ಜಯಶಾಲಿ ಯಾಗಿರು. ಪರಮಾತ್ಮನೇ, ಸರ್ವಾತ್ಮನೇ, ಯಜ್ಞಪತಿಯೇ, ನೀನು ಜಯಶಾಲಿ ಯಾಗಿರು. ನೀನೇ ಯಜ್ಞಪತಿಯಾದವನು. ವಷಟ್ಕಾರರೂಪವಾದ ಮಂತ್ರಾತ್ಮನೂ ನೀನೇ, ಓಂಕಾರಸ್ವರೂಪಿಯಾದವನೂ, ತ್ರೇತಾಗ್ನಿಸ್ವರೂಪನಾದವನೂ ಸಹ

ನೀನೇ. ಎಲೈ ಪರಮಪುರುಷನೇ, ನೀನು ವೇದಾತ್ಮಕನಾದವನು, ವೇದಾಂಗರೂಪಿಯಾದವನು, ಎಲ್ಲವೂ ನೀನೇ. ಎಲೈ ಸ್ವಾಮಿಯೇ, ನಾನು ಯಾವುದನ್ನು ಹೇಳಿದೆನೋ, ಯಾವುದನ್ನು ಬಿಟ್ಟೆನೋ, ಅವೆಲ್ಲವೂ ನೀನೇ. ಓ ನಾರಾಯಣನೇ! ನಿನಗೆ ನಮಸ್ಕಾರವು. ಎಲೈ ಸ್ವಾಮಿಯೇ! ಪುನಃಪುನಃ ನಿನಗೆ ನಮಸ್ಕಾರವು." ಈ ಪ್ರಕಾರ ಭೂದೇವಿಯಿಂದ ಪ್ರಾರ್ಥಿಸಲ್ಪಟ್ಟ ಪರಮಾತ್ಮನು ಭೂದೇವಿಯನ್ನು ಕೋರೆದವಡೆಯಿಂದ ಧರಿಸಿದವನಾಗಿ, ರಸಾತಲದಿಂದ ಮೇಲಕ್ಕೆ ಬಂದ ಕಾಲದಲ್ಲಿ, ಸನಂದನಾದಿ ಮಹಾಯೋಗಿಗಳು ದಿವ್ಯಮಂಗಳರೂಪಿಯಾದ ಸ್ವಾಮಿಯನ್ನು ನೋಡಿ, ಅನೇಕ ವಿಧವಾಗಿ ಸ್ತುತಿಸುತ್ತಾರೆ: "ಎಲೈ ಕೇಶವನೇ! ಲೋಕದಲ್ಲಿರತಕ್ಕ ಈಶ್ವರರಿಗೆಲ್ಲಾ ನೀನು ಪರಮೇಶ್ವರನು. ನೀನು ಶಂಖ, ಚಕ್ರ, ಗದಾ, ಶಾರ್ಙ, ಅಸಿ ಮೊದಲಾದವುಗಳನ್ನು ಧರಿಸಿರತಕ್ಕವನು. ನಿನ್ನ ಸಾವಿರಾರು ಪಾದಗಳೇ ಸಕಲ ವೇದಗಳು. ನಿನ್ನ ಹಲ್ಲುಗಳೇ ಯಜ್ಞದ ಯೂಪಸ್ತಂಭವು. ನಿನ್ನ ಮುಖವೇ ಅಗ್ನಿಷ್ಟೋಮಾದಿ ಯಜ್ಞಗಳು. ನಿನ್ನ ನಾಲಿಗೆಯೇ ಅಗ್ನಿಗಳು. ನಿನ್ನ ದೇಹದಲ್ಲಿರತಕ್ಕ ಕೂದಲುಗಳೇ ದರ್ಭೆಗಳು. ಇಂತಹ ಯಜ್ಞಪುರುಷನು ನೀನೇ; ನಿನ್ನ ನೇತ್ರಗಳೇ ಚಂದ್ರಸೂರ್ಯರಿಂದ ಕೂಡಿದ ಯಜ್ಞಕಾಲವು. ಅನೇಕವಾದ ಸೂಕ್ತಗಳೇ ಸಟಾಕಲಾಪವು. ನಿನ್ನ ಮೂಗೇ ಯಜ್ಞದ ಹವಿಸ್ಸು. ನಿನ್ನ ಮುಖವೇ ಸ್ರುಕ್ ಮೊದಲಾದ ಯಜ್ಞಪಾತ್ರೆಗಳು. ನಿನ್ನ ಧ್ವನಿಯೇ ಸಾಮಗಾನವು. ನಿನ್ನ ಸಂಧಿಗಳೇ ಅಖಿಲ ಯಜ್ಞಗಳು. ಈ ಪ್ರಕಾರ ಅಮೋಘವಾದ ಯಜ್ಞರೂಪಿಯಾದ ವರಾಹಸ್ವಾಮಿಯೇ, ನಿರಂತರವಾಗಿ ನಮಗೆ ಪ್ರಸನ್ನನಾಗು. ಎಲೈ ಪರಮಾತ್ಮನೇ! ಪರಮಾರ್ಥನಾದವನು ನೀನೊಬ್ಬನೇ ಹೊರ್ತು ಮತ್ತಾರೂ ಇಲ್ಲವು; ಜ್ಞಾನಾತ್ಮನಾದ ನಿನ್ನ ಈ ರೂಪನ್ನು ಅಯೋಗಿಗಳು ಭ್ರಾಂತಿಜ್ಞಾನದಿಂದ ನೋಡುತ್ತಾರೆ. ಮೋಹಸಮುದ್ರದಲ್ಲಿ ಮುಳುಗಿದವರು ಅರ್ಥಭ್ರಾಂತಿಯಿಂದ ನೋಡುತ್ತಾರೆ. ಎಲೈ ಪರಮಾತ್ಮನೇ! ಭ್ರಾಂತಿರೂಪವಾದ ಬುದ್ಧಿಯನ್ನು ಕೊಡದೆ ಮೋಕ್ಷಪ್ರದವಾದ ನಿನ್ನ ಚರಣಾರವಿಂದವನ್ನು ಯಾವಾಗಲೂ ಚಿಂತಿಸತಕ್ಕವರನ್ನಾಗಿ ಮಾಡು. ನೀನು ಸತ್ವೋದ್ರಿಕ್ತನಾಗಿ ಭೂಮಿಯನ್ನು ಉದ್ಧಾರಮಾಡಿದುದರಿಂದಲೂ, ಸಕಲ ಜಗತ್ತಿಗೂ ಉಪಕಾರಿಯಾಗಿರುವುದರಿಂದಲೂ ಸಹ, ನಮ್ಮಗಳಿಗೆ ಸುಖವನ್ನುಂಟುಮಾಡು." ಈ ಪ್ರಕಾರ ಸನಕಾದಿ ಯೋಗಿಗಳಿಂದ ಸ್ತುತಿಸಲ್ಪಟ್ಟ ಪರಮಾತ್ಮನು, ಭೂದೇವಿಯನ್ನು ನೀರಿನ ಮೇಲೆ ಇರಿಸಿ, ಭೂಮಿಯನ್ನು ಒಂದೇ ಸಮನಾಗಿ ಮಾಡಿ, ಕುಲಾಚಲ ಪರ್ವತಗಳನ್ನೂ ಇರಿಸಿ, ಪ್ರಳಯಕಾಲದಲ್ಲಿ ಸುಟ್ಟುಹೋಗಿದ್ದ ಭೂರಾದಿ ಲೋಕಗಳನ್ನು ಸೃಷ್ಟಿಸಿ, ಭೂವಿಭಾಗಗಳನ್ನು ಮಾಡಿ ಸಪ್ತದ್ವೀಪ

ಗಳನ್ನು ಕಲ್ಪಿಸಿದನು. ಎಲೈ ಮೈತ್ರೇಯನೇ, ಈ ಪ್ರಕಾರ ಭಗವಂತನಾದ ಶ್ರೀಮನ್ನಾರಾಯಣನು ತನ್ನ ಅಮೋಘವಾದ ಸಂಕಲ್ಪಮಾತ್ರದಿಂದ ಜಗತ್ಸೃಷ್ಟಿಯನ್ನು ಮಾಡಿದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದ ಮೊದಲನೆಯ ಅಂಶದಲ್ಲಿ
ನಾಲ್ಕನೆಯ ಅಧ್ಯಾಯವು ಸಮಾಪ್ತಃ

ಐದನೆಯ ಅಧ್ಯಾಯವು

ಶ್ರೀ ಮೈತ್ರೇಯ ಮಹರ್ಷಿಗಳು ಪುನಃ ಪ್ರಶ್ನೆಮಾಡುತ್ತಾರೆ: "ಆಚಾರ್ಯವರ್ಯರಾದ ಪರಾಶರ ಮಹರ್ಷಿಗಳೇ! ಜಗನ್ನಾಯಕನಾದ ಶ್ರೀಮನ್ನಾರಾಯಣನು ದೇವತೆಗಳನ್ನೂ, ಋಷಿಗಳನ್ನೂ, ಪಿತೃದೇವತೆಗಳನ್ನೂ, ದಾನವರನ್ನೂ, ಮನುಷ್ಯರನ್ನೂ, ಮೃಗಾದಿಗಳನ್ನೂ, ವೃಕ್ಷಗಳನ್ನೂ, ಸ್ವರ್ಗಾದಿಗಳನ್ನೂ ಯಾವ ರೀತಿಯಿಂದ ಸೃಷ್ಟಿಸಿದನು? ಆ ಭಗವಂತನಿಗೆ ಸೃಷ್ಟಿಕಾಲದಲ್ಲಿ ಯಾವ ಗುಣಗಳು ಯಾವ ರೂಪವು ಇದ್ದವು? ಅವುಗಳೆಲ್ಲವನ್ನೂ ವಿಸ್ತಾರವಾಗಿ ನನಗೆ ಅಪ್ಪಣೆಕೊಡಿಸಿ" ಎಂಬುದಾಗಿ ಪ್ರಶ್ನೆಮಾಡಿದುದಕ್ಕೆ ಶ್ರೀ ಪರಾಶರ ಭಗವಾನ್‌ರವರು ಅಪ್ಪಣೆಕೊಡಿಸುತ್ತಾರೆ: "ಎಲೈ ಮೈತ್ರೇಯನೇ, ನೀನು ಕೇಳಿದ ವಿಷಯಗಳನ್ನು ವಿಸ್ತಾರವಾಗಿ ಹೇಳುತ್ತೇನೆ. ಸಮಾಧಾನ ಮನಸ್ಸಿನಿಂದ ಕೇಳು. ಇಚ್ಛಾಮಾತ್ರದಿಂದ ಪ್ರಭುವಾದ ಶ್ರೀಮನ್ನಾರಾಯಣನು, ಜಗತ್ತನ್ನು ಸೃಷ್ಟಿಸಬೇಕೆಂದು ಸಂಕಲ್ಪಮಾಡಿದ ಮಾತ್ರದಲ್ಲೇ ಪರಮಾತ್ಮನ ಮನಸ್ಸಿನಿಂದ ಅವಿದ್ಯೆಯೆಂಬುವದು ಹುಟ್ಟಿತು. ಇದು ಇಲ್ಲದೆಯಿದ್ದರೆ ದೇಹವುಳ್ಳವರಿಗೆ ಕರ್ತೃತ್ವ, ಭೋಕ್ತೃತ್ವಾದಿಗಳು ಸಂಭವಿಸುವುದಿಲ್ಲವಾದ್ದರಿಂದ, ಭಗವಂತನು ಮೊದಲು ಅವಿದ್ಯೆಯನ್ನು ಸೃಷ್ಟಿಸಿದನು. ಅವಿದ್ಯೆಯೆಂದರೆ ತಮ, ಮೋಹ, ಮಹಾಮೋಹ, ತಾಮಿಸ್ರಾದಿಗಳು; ತಮಸ್ಸೆಯೆಂದರೆ ದೇಹಾತ್ಮಭ್ರಾಂತಿ; ಮೋಹವೆಂದರೆ ಪುತ್ರಾದಿ ಸಂಪತ್ತುಗಳಿಗೆ ನಾನೇ ಯಜಮಾನನು ಎಂಬ ಭ್ರಾಂತಿ; ಮಹಾಮೋಹವೆಂದರೆ ಭೋಗಾಪೇಕ್ಷೆಯು; ತಾಮಿಸ್ರವೆಂದರೆ ಭೋಗದಲ್ಲಿ ವಿಘ್ನದಿಂದುಂಟಾದ ಕೋಪವು; ಅಂಧತಾಮಿಸ್ರವೆಂದರೆ, ಸಂಪಾದಿಸಿದ ವಸ್ತುಗಳನ್ನು ಕಾಪಾಡಬೇಕೆಂಬ ಅಭಿಮಾನವು; ಈ ಐದೂ ಅವಿದ್ಯಾಪರ್ವಗಳು ಎಂಬುದಾಗಿ ಹೇಳಲ್ಪಡುತ್ತವೆ. ಭಗವಂತನು ಮೊದಲು ಸ್ಥಾವರಗಳನ್ನು ಸೃಷ್ಟಿಸಿದನು; ಇದರಂತೆಯೇ ಹಿಂದಿನ ಅಧ್ಯಾಯದಲ್ಲಿ ವರಾಹಸ್ವಾಮಿಯು ಭೂಮಿಯನ್ನು

ಇಟ್ಟಕೊಡಲೇ ಭೂಮಿಯ ಮೇಲೆ ಪರ್ವತಗಳನ್ನು ಇಟ್ಟನು ಎಂಬುದಾಗಿ ಹೇಳಿರುವ ಪ್ರಕಾರ, ಸ್ಥಾವರಗಳನ್ನು ಮೊದಲು ಸೃಷ್ಟಿಸಿದನು. ತಮಾಧಿಕವಾದ ತಿರ್ಯಗ್ಜಂತುಪಶ್ವಾದಿಗಳನ್ನು ಸೃಷ್ಟಿಸಿದನು; ಇವುಗಳೆಲ್ಲವೂ, ಆರ್ಜನೆ, ರಕ್ಷಣೆ, ಕ್ಷಯ ಇತ್ಯಾದಿ ಕ್ಲೇಶಮಯವಾದವುಗಳು; ಈ ತಿರ್ಯಕ್‌ಸೃಷ್ಟ್ಯಾದಿಗಳಿಂದ ಪರಮಾತ್ಮನಿಗೆ ತೃಪ್ತಿಯಾಗದೆಯಿದ್ದುದರಿಂದ ಅನಂತರ ಸಾತ್ವಿಕಾದಿಗಳನ್ನು ಕಲ್ಪಿಸಿದನು. ಈ ಸತ್ವಾದಿಗಳು, ಸುಖಪ್ರೀತ್ಯಾದಿಗಳಿಂದ ಕೂಡಿರತಕ್ಕವುಗಳು. ಈ ಸೃಷ್ಟಿಯಲ್ಲಿ ಪರಮಾತ್ಮನಿಗೆ ಪ್ರೀತಿಯುಂಟಾಗಿ, ಆಮೇಲೆ ಮನುಷ್ಯಾದಿಗಳನ್ನು ಸೃಷ್ಟಿಸುವುದಕ್ಕೆ ಸಂಕಲ್ಪಿಸಿದನು. ಆ ಪ್ರಕಾರ, ಅಸುರರನ್ನೂ, ದೇವತೆಗಳನ್ನೂ, ಪಿತೃದೇವತೆಗಳನ್ನೂ, ಮನುಷ್ಯರನ್ನೂ ಸಹ ಸೃಷ್ಟಿಸಿದನು. ಸತ್ವೋದ್ರಿಕ್ತರಾದ ದೇವತೆಗಳು ಪರಮಾತ್ಮನ ಮುಖದಿಂದ ಹುಟ್ಟಿದವರು. ಸತ್ವಪ್ರಾಯವಾದುದೇ ಹಗಲು. ಅಸುರರು, ತಮಃಪ್ರಚುರರಾದವರು, ಪರಮಾತ್ಮನ ಜಘನದಿಂದ ಹುಟ್ಟಿದವರು. ಈ ತಮಸ್ಸೆಂಬುವದೇ ರಾತ್ರಿ. ಈ ಸುರಾಸುರರನ್ನು ಸೃಷ್ಟಿಸಿದನಂತರ, ಪಿತೃದೇವತೆಗಳನ್ನು ಸಾಯಂಸಂಧ್ಯೆ, ಅಥವಾ ಅಪರಾಹ್ಣದಲ್ಲಿ ತನ್ನ ಎರಡು ಪಾರ್ಶ್ವಗಳಿಂದ ಸೃಷ್ಟಿಸಿದನು. ರಜೋಗುಣಪ್ರಧಾನರಾದ ಮನುಷ್ಯರನ್ನು, ಪ್ರಾತಸ್ಸಂಧ್ಯೆ ಅಂದರೆ ಉಷಃಕಾಲದಲ್ಲಿ ಸೃಷ್ಟಿಸಿದನು. ಈ ರಜೋಗುಣವೇ ಪೂರ್ವಸಂಧಿಕಾಲವು; ಉತ್ತರಸಂಧಿಯೇ ಸತ್ವೋದ್ರಿಕ್ತವಾದ ಅಪರಾಹ್ಣವು. ಆದುದರಿಂದ ಪಿತೃಗಳು ಅಪರಾಹ್ಣದಲ್ಲಿ ಪೂಜ್ಯರು. ಈ ಪ್ರಕಾರ ಹಗಲು, ರಾತ್ರಿ, ಸಂಧಿಗಳೆಂಬುದಾಗಿ, ದೇವತೆಗಳು, ರಾಕ್ಷಸರು, ಮನುಷ್ಯರು, ಪಿತೃಗಳು ಇವರುಗಳಿಗೆ ಕ್ಲಿಪ್ತಮಾಡಲ್ಪಟ್ಟಿತು. ಪರಬ್ರಹ್ಮನ ಶರೀರವು ತ್ರಿಗುಣೋಪಾಯವಾದುದು; ಅನಂತರ ಯಕ್ಷರನ್ನೂ, ಸರ್ಪಗಳನ್ನೂ ಕೋಪದಿಂದ ಸೃಷ್ಟಿಸಿ, ತನ್ನ ಅಂಗದಿಂದ ಗಂಧರ್ವರನ್ನೂ, ಹೊಟ್ಟೆಯಿಂದ ಹಸುಗಳನ್ನೂ, ಕಾಲುಗಳಿಂದ ಕುದುರೆಗಳನ್ನೂ, ಆನೆ ಮೊದಲಾದ ಮೃಗಗಳನ್ನೂ, ತನ್ನ ಕೂದಲುಗಳಿಂದ ಔಷಧಿ, ಫಲಮೂಲಾದಿಗಳನ್ನೂ, ವನ್ಯ ಗ್ರಾಮ್ಯಮೃಗಗಳನ್ನೂ, ಮೊದಲಿನ ಮುಖದಿಂದ ಗಾಯತ್ರೀ, ಛಂದಸ್ಸು ಅಗ್ನಿಷ್ಟೋಮ ಋಗ್ವೇದಾದಿಗಳನ್ನೂ, ಎರಡನೆಯ ಮುಖದಿಂದ ಯಜುರ್ವೇದಾದಿಗಳನ್ನೂ, ಪಶ್ಚಿಮ ಮುಖದಿಂದ ಸಾಮವೇದಾದಿಗಳನ್ನೂ, ಉತ್ತರಮುಖದಿಂದ ಅಥರ್ವ ಛಂದಸ್ಸಾದಿಗಳನ್ನೂ ಸೃಷ್ಟಿಸಿ, ಹಿಂದಿನ ಸೃಷ್ಟಿಯಲ್ಲಿ ಹಿಂಸ್ರ, ಅಹಿಂಸ್ರ, ಮೃದು, ಕ್ರೂರ, ಧರ್ಮ, ಅಧರ್ಮ ಇತ್ಯಾದಿ ಭಾವಗಳಿಂದ ಯಾವ ಯಾವ ಪ್ರಾಣಿಗಳು ಯಾವ ರೀತಿಯಲ್ಲಾಗಿರುವವೋ ಅದೇ ಪ್ರಕಾರವಾಗಿ ಸೃಷ್ಟಿಸಿದನು. ಈ ಪ್ರಕಾರ ಪರಮಾತ್ಮನು ಅವರವರ ಕರ್ಮವಾಸನಾರೂಪವಾಗಿ ಇಂದ್ರಿಯಾದಿಗಳನ್ನೂ, ಅಮೃತ,

ಅನ್ನ, ಫಲ, ತೃಣ ಇತ್ಯಾದಿ ಭೋಗ್ಯಪದಾರ್ಥಗಳನ್ನೂ, ಪ್ರಾಣಿಗಳ ನಾಮ ರೂಪಾದಿಗಳನ್ನೂ, ಋಷಿಗಳ ನಾಮಾದಿಗಳನ್ನೂ ವೇದಾನುಸಾರ ಸೃಷ್ಟಿಮಾಡಿದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಮೊದಲನೆಯ ಅಂಶದಲ್ಲಿ
ಐದನೆಯ ಅಧ್ಯಾಯವು ಸಮಾಪ್ತಃ

ಆರನೆಯ ಅಧ್ಯಾಯವು

ಶ್ರೀ ಮೈತ್ರೇಯ ಮಹರ್ಷಿಗಳು ಪುನಃ ಪ್ರಶ್ನೆ ಮಾಡುತ್ತಾರೆ: "ಶ್ರೀ ಪರಾಶರ ಮಹರ್ಷಿಗಳೇ! ಇದುವರೆವಿಗೆ ಹೇಳಿದ ಸೃಷ್ಟಿಕ್ರಮಗಳೆಲ್ಲವೂ ತಿಳಿಯಿತು. ಆದರೆ ಆ ಭಗವಂತನು ವರ್ಣಾದಿಗಳನ್ನು ಯಾವ ರೀತಿ ಸೃಷ್ಟಿಸಿದನು? ಆ ಬ್ರಾಹ್ಮಣಾದಿ ವರ್ಣಗಳು ಯಾವ ಗುಣದಿಂದ ಕೂಡಿದವುಗಳು? ಅವರ ಕರ್ಮಗಳು ಯಾವುವು? ಇವುಗಳೆಲ್ಲವನ್ನೂ ವಿಸ್ತಾರವಾಗಿ ಅಪ್ಪಣೆಕೊಡಿಸಿ" ಎಂದು ಕೇಳಿದುದಕ್ಕೆ, ಪರಾಶರ ಮಹರ್ಷಿಗಳು ಅಪ್ಪಣೆಕೊಡಿಸುತ್ತಾರೆ: "ಎಲೈ ಮೈತ್ರೇಯನೇ, ಆ ಪರಮಾತ್ಮನು ಜಗತ್ಸೃಷ್ಟಿಯನ್ನು ಮಾಡಿದ ತನ್ನ ಮುಖದಿಂದ ಬ್ರಾಹ್ಮಣರನ್ನೂ, ವಕ್ಷಃಸ್ಥಳದಿಂದ ಕ್ಷತ್ರಿಯರನ್ನೂ, ತೊಡೆಯಿಂದ ವೈಶ್ಯರನ್ನೂ, ಕಾಲುಗಳಿಂದ ಶೂದ್ರರನ್ನೂ ಸೃಷ್ಟಿಮಾಡಿದನು. ಈ ಚಾತುರ್ವರ್ಣ್ಯಕ್ಕೂ ಯಜ್ಞಕರ್ಮದಿಂದ ಉಪಯೋಗವುಂಟು; ಯಜ್ಞಾದಿಗಳಿಂದ ಸಂತೋಷಪಟ್ಟ ದೇವತೆಗಳು ವೃಷ್ಟ್ಯಾದಿಗಳಿಂದ ಪ್ರಜೆಗಳನ್ನು ಸಂತೋಷಪಡಿಸುತ್ತಾರೆ. ಆದುದರಿಂದ, ಯಜ್ಞಾದಿಕರ್ಮಗಳು ಜನಗಳ ಮಂಗಳಕ್ಕೆ ಕಾರಣವಾದವುಗಳು. ಈ ನಾಲ್ಕು ವರ್ಣಗಳಿಗೂ ಕ್ರಮವಾಗಿ ಮುಖ್ಯ ವೃತ್ತಿಗಳು ಯಾವುವೆಂದರೆ: ವೇದಪ್ರವಚನ, ರಕ್ಷಣ, ವ್ಯಾಪಾರ, ಶುಶ್ರೂಷ. ಮೇಲೆ ನಾಲ್ಕು ವರ್ಣಗಳಿಗೂ ಯಜ್ಞವು ಸಹಾಯಕವಾದುದು ಎಂದು ಹೇಳಿದೆವಲ್ಲವೇ; ಹಾಗಾದರೆ ಶೂದ್ರನಿಗೆ ಯಜ್ಞಾಧಿಕಾರವುಂಟೇ? ಎಂದರೆ, ಶೂದ್ರನು ಬ್ರಾಹ್ಮಣಾದಿಗಳಿಗೆ ನಮಸ್ಕಾರಮಾಡುವದು, ಬ್ರಾಹ್ಮಣರಿಗೆ ಪಾಕಾದಿಗಳನ್ನು ಮಾಡುವದು, ಬ್ರಾಹ್ಮಣಾದಿಗಳ ಶುಶ್ರೂಷಣೆಯನ್ನು ಮಾಡುವದು, ಇತ್ಯಾದಿ ಧರ್ಮಗಳೆಲ್ಲವೂ, ಶೂದ್ರನಿಗೆ ಯಜ್ಞಸಮಾನವಾದುದರಿಂದ ನಾಲ್ಕು ವರ್ಣಗಳೂ ಯಜ್ಞಕರ್ಮಪ್ರಧಾನವಾದುವು. ಬ್ರಾಹ್ಮಣಾದಿಗಳಿಗೆ ಕರ್ಮೋಪಜೀವತ್ವವೆಂದರೆ ಯಜ್ಞಾದಿಕರ್ಮಗಳನ್ನು ಮಾಡುವುದೇ ಮುಖ್ಯ ವೃತ್ತಿಯು. ಇದೇ ಸನ್ಮಾರ್ಗವು.

ಯಜ್ಞಾದಿಕರ್ಮಗಳೇ ಸ್ವರ್ಗ, ಮೋಕ್ಷಸಾಧನವಾದವುಗಳು. ಬ್ರಾಹ್ಮಣಾದಿಗಳು ಯಾವ ಯಾವ ಕರ್ಮಗಳನ್ನು ಮಾಡುತ್ತಾರೋ ಅವಕ್ಕೆ ಅನುಗುಣವಾದ ಲೋಕಗಳನ್ನು ಹೊಂದುತ್ತಾರೆ. ಆದುದರಿಂದ ಬ್ರಾಹ್ಮಣರು ಶ್ರದ್ಧೆ, ಸದಾಚಾರಾದಿಗಳಿಂದ ಕೂಡಿದವರು. ಶುದ್ಧವಾದ ಮನಸ್ಸುಳ್ಳವರು. ಸರ್ವಕರ್ಮಾನುಷ್ಠಾನದಿಂದ ನಿರ್ಮಲರಾದವರು. ಈ ಶುದ್ಧತೆಯಿಂದ ಮೋಕ್ಷವನ್ನು ಹೊಂದುತ್ತಾರೆ. ತಮಸ್ಸೆಂಬುವದೇ ಅಧರ್ಮದ ಬೀಜವು. ಈ ಅಧರ್ಮದಿಂದ ರಾಗದ್ವೇಷಾದಿಗಳು ಹುಟ್ಟುತ್ತವೆ. ಈ ರಾಗಾದಿಗಳು ನಿಗ್ರಹಮಾಡಲು ಬಹಳ ಕಷ್ಟವಾದುವು. ಪುರುಷಾರ್ಥಕ್ಕೆ ಪ್ರತಿಬಂಧಕಗಳಾದ ರಾಗದ್ವೇಷಾದಿಗಳಲ್ಲಿ ಜನರು ಅಭಿಲಾಷೆಯುಕ್ತರಾಗುತ್ತಾರೆ. ಈ ರಾಗಾದಿಗಳು ಬಹು ದುಃಖಮಯವಾದುವು. ಅತ್ಯಲ್ಪಸಾರವುಳ್ಳವು, ಇವುಗಳಿಂದಲೇ ಕ್ಷುತ್ಪಿಪಾಸಾದಿಗಳು ಹುಟ್ಟುತ್ತವೆ; ಕ್ಷುತ್ಪಿಪಾಸಾದಿಗಳು ಅಧಿಕವಾದರೆ ಶೀತೋಷ್ಣಾದಿಗಳು ಹುಟ್ಟುತ್ತವೆ. ಇವುಗಳಿಂದ ಪ್ರಜೆಗಳು ದುಃಖಯುಕ್ತರಾಗುತ್ತಾರೆ; ಇಂತಹ ಪ್ರಜೆಗಳಿಗೆ ನಿರ್ಜಲವಾಗಿಯೂ, ಕ್ರಿಯಾನಿರ್ವೃತವಾಗಿಯೂ ಇರತಕ್ಕ ಪ್ರದೇಶಗಳು ಲಭ್ಯವಾಗುತ್ತವೆ. ಶೀತೋಷ್ಣಾದಿಗಳ ಪರಿಹಾರಾರ್ಥವಾಗಿ ಗೃಹ, ಗ್ರಾಮ, ನಗರ ಇತ್ಯಾದಿಗಳುಂಟಾಗುತ್ತವೆ. ಈ ಪ್ರಕಾರ ಗೃಹಾರಾಮಾದಿಗಳು ಕಲ್ಪಿತವಾದನಂತರ ಕೃಷ್ಯಾದಿಗಳು ಹುಟ್ಟಿ, ಅನೇಕ ಧಾನ್ಯಗಳಿಗೆ ಕಾರಣವಾಗುತ್ತವೆ. ಧಾನ್ಯಾದಿಗಳು 'ಗ್ರಾಮ್ಯ' 'ವನ್ಯ' ಎಂಬುದಾಗಿ ಎರಡು ವಿಧವಾದವು. ಗ್ರಾಮ್ಯವಾದ ಧಾನ್ಯಗಳು ಭತ್ತ, ಗೋಧಿ, ಎಳ್ಳು, ಉದ್ದು, ಹೆಸರು, ತೊಗರಿ, ಹುರುಳಿ, ಅವರೆ, ಕಡಲೆ, ನವಣೆ ಇತ್ಯಾದಿಗಳು. ಇವುಗಳೇ ಗ್ರಾಮ್ಯಾಹಾರಗಳು. ಇದೇ ಪ್ರಕಾರ ಫಲ, ಔಷಧಿ, ಗೆಡ್ಡೆ, ಸೊಪ್ಪು ಇತ್ಯಾದಿಗಳು ವನ್ಯಾಹಾರಗಳು. ಈ ಗ್ರಾಮ್ಯವನ್ಯಾದಿಗಳೇ ನಿತ್ಯಕರ್ಮಗಳಾದ ವೈಶ್ವದೇವಾದಿ ಪಂಚಮಹಾಯಜ್ಞಾದಿಗಳಿಗೆ ಮುಖ್ಯವಾದುವುಗಳು. ಈ ಪಂಚಮಹಾಯಜ್ಞಗಳು ಗೃಹಸ್ಥನ ಅನೇಕ ದೋಷಗಳನ್ನು ಪರಿಹಾರ ಮಾಡತಕ್ಕವುಗಳೆಂದು ಮನ್ವಾದಿ ಮಹಾತ್ಮರು ಹೇಳುತ್ತಾರೆ. ಈ ಪಂಚಮಹಾಯಜ್ಞಾದಿ ಕರ್ಮಾನುಷ್ಠಾನವನ್ನು ಪರಾವರಜ್ಞರಾದ ಮಹಾತ್ಮರು ಪ್ರತಿನಿತ್ಯವೂ ಆಚರಿಸುತ್ತಾರೆ. ಹೀಗೆ ಪ್ರತಿನಿತ್ಯವೂ ಅನುಷ್ಠಿಸುವದರಿಂದ ನಾವು ಮಾಡತಕ್ಕ ದೋಷಗಳಿಗೆಲ್ಲಾ ಶಾಂತಿಯುಂಟಾಗುವದು. ಕೆಲವರು ವೈದಿಕರು, ವೇದಗಳನ್ನೂ ದೇವತೆಗಳನ್ನೂ ಯಜ್ಞಕರ್ಮಾದಿಗಳನ್ನೂ ಸಹ ನಿಂದಿಸಿ, ಯಜ್ಞಘಾತಕರೆಂಬುದಾಗಿ ಹೇಳಿಸಿಕೊಳ್ಳುತ್ತಾರೆ. ಈ ಪ್ರಕಾರ ಬ್ರಹ್ಮನು ಸೃಷ್ಟಿಯನ್ನು ಮಾಡಿ, ದೇಶಾನುಸಾರವಾಗಿ ಧರ್ಮಗಳಿಗೆ ಎಲ್ಲೆಯನ್ನೂ, ಕಾಮ್ಯಕರ್ಮಾದಿಗಳನ್ನೂ, ವಿರಕ್ತರಾದವರಿಗೆ ನಿವೃತ್ತಿಕರ್ಮಗಳನ್ನೂ ಮಾಡಬೇಕೆಂದು ವ್ಯವಸ್ಥೆಮಾಡಿದನು. ವರ್ಣಾನುಸಾರ

ವಾಗಿ ಲೋಕಗಳ ವ್ಯವಸ್ಥೆಯನ್ನು ಮಾಡಿದನು ಅಂದರೆ, ಬ್ರಾಹ್ಮಣರಿಗೆ ಬ್ರಹ್ಮಲೋಕವೆಂಬುದಾಗಿಯೂ, ಕ್ಷತ್ರಿಯರಿಗೆ ಇಂದ್ರಲೋಕವೆಂಬುದಾಗಿಯೂ, ವೈಶ್ಯರಿಗೆ ಮರುಲ್ಲೋಕವೆಂಬುದಾಗಿಯೂ, ಶೂದ್ರರಿಗೆ ಗಂಧರ್ವಲೋಕವೆಂಬು ದಾಗಿಯೂ ವ್ಯವಸ್ಥೆಮಾಡಿದನು. ಊರ್ಧ್ವರೇತಸ್ಕರಾದ ಯತಿಗಳು ಎಲ್ಲಿರು ತ್ತಾರೋ ಅದು ಬ್ರಹ್ಮಚಾರಿಗಳಿಗೆ, ಸಪ್ತರ್ಷಿಗಳಿಗೆ ಯಾವ ಲೋಕವೋ ಅದು ವಾನಪ್ರಸ್ಥಾಶ್ರಮಿಗಳಿಗೆ, ಗೃಹಸ್ಥರಿಗೆ ಬ್ರಹ್ಮಲೋಕ, ಸನ್ಯಾಸಿಗಳಿಗೆ ವಿಷ್ಣು ಲೋಕವೂ ಸಹ ನಿಯಮಿಸಲ್ಪಟ್ಟದೆ. ಈ ಪ್ರಕಾರ ಮಹಾತ್ಮರಿಗೆ ನಿತ್ಯಸೂರಿ ಗಳಿಂದ ಸೇವಿಸಲ್ಪಡುವ ಪರಮಪದವು ಲಭಿಸುತ್ತದೆ. ಚಂದ್ರಸೂರ್ಯಾದಿಗಳು ತಮ್ಮ ತಮ್ಮ ಅಧಿಕಾರವನ್ನು ಹೊಂದಿ ಪ್ರಳಯಕಾಲದಲ್ಲಿ ಯಥಾಪ್ರಕಾರ ಹಿಂದಕ್ಕೆ ತಿರುಗಿದಾಗ್ಯೂ, ದ್ವಾದಶಾಕ್ಷರಮಂತ್ರಜ್ಞರಾದ ಮಹಾತ್ಮರು ಪರಮ ಪದದಿಂದ ಎಂದಿಗೂ ಹಿಂತಿರುಗುವುದಿಲ್ಲವು. ವೇದವನ್ನು ನಿಂದಿಸತಕ್ಕವರಿಗೂ, ಯಜ್ಞವಿಘ್ನಕಾರಿಗಳಿಗೂ, ಸ್ವಧರ್ಮಬಿಟ್ಟವರಿಗೂ, ತಾಮಿಸ್ರ, ಅಂಧತಾಮಿಸ್ರ ಮೊದಲಾದ ಘೋರವಾದ ನರಕಗಳು ಲಭಿಸುತ್ತವೆ.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಮೊದಲನೆಯ ಅಂಶದಲ್ಲಿ
ಆರನೆಯ ಅಧ್ಯಾಯವು ಸಮಾಪ್ತಃ

ಏಳನೆಯ ಅಧ್ಯಾಯವು

"ಎಲೈ ಮೈತ್ರೇಯನೇ, ಭಗವಂತನ ಮಾನಸ ಸೃಷ್ಟಿಗಳು ಹೇಳಲ್ಪಟ್ಟವು; ಆದರೆ ದೇವತೆಗಳು ಮೊದಲುಗೊಂಡು ಸ್ಥಾವರಾಂತವಾದ ಚರಾಚರ ಪ್ರಾಣಿಗಳ ಸೃಷ್ಟಿಯನ್ನು ಹೇಳಿದ ಹಾಗಾಯಿತು. ಈ ಪ್ರಕಾರ, ಸೃಷ್ಟಿಯಾದಾಗ್ಯೂ ಪ್ರಾಣಿ ಗಳು ವೃದ್ಧಿಯಾಗಲು ಅವಕಾಶವಿಲ್ಲದ ಹಾಗಾಯಿತೆಂಬುದಾಗಿ ತಿಳಿದು, ಚತುರ್ಮುಖಾತ್ಮಕನಾದ ಶ್ರೀಮನ್ನಾರಾಯಣನು, ತನಗೆ ಸಮಾನರಾದ ಮಾನಸ ಪುತ್ರರುಗಳನ್ನು ಸೃಷ್ಟಿಸಿದನು. ಅವರು ಯಾರೆಂದರೆ, ಭೃಗು, ಪುಲಸ್ತ್ಯ, ಪುಲಹ, ಕ್ರತು, ಅಂಗಿರಸ, ಮರೀಚಿ, ದಕ್ಷ, ಅತ್ರಿ, ವಸಿಷ್ಠ ಎಂಬುದಾಗಿ ಒಂಬತ್ತು ನವಬ್ರಹ್ಮರು. ಇವರುಗಳ ಪತ್ನೀರುಗಳು, ಖ್ಯಾತಿ, ಭೂತಿ, ಸಂಭೂತಿ, ಕ್ಷಮಾ, ಪ್ರೀತಿ, ಸನ್ನತಿ, ವಾರ್ಜಾ, ಅನಸೂಯಾ, ಪ್ರಸೂತಿ—ಈ ಒಂಬತ್ತು ಸ್ತ್ರೀಯರು ಗಳನ್ನು ಸೃಷ್ಟಿಸಿ, ಪ್ರಜಾಭಿವೃದ್ಧಿಗೋಸ್ಕರ ನವಬ್ರಹ್ಮರಿಗೆ ಕೊಟ್ಟು ಮದುವೆ ಮಾಡಿ, ಸನಕಾದಿಗಳನ್ನೂ ಮೊದಲೇ ಸೃಷ್ಟಿಸಿ, ಈ ಸನಕಾದಿಗಳು ಪ್ರಜಾವೃದ್ಧಿ

ಕಾರ್ಯಗಳನ್ನು ಮಾಡದೇ ಇರೋಣದರಿಂದ ಚತುರ್ಮುಖಬ್ರಹ್ಮನಿಗೆ ಬಹಳವಾದ ಕೋಪವುಂಟಾಯಿತು. ಆ ಕೋಪದಿಂದ ರುದ್ರದೇವನು ಹುಟ್ಟಿದನು. ಈ ರುದ್ರ ದೇವನು ಅರ್ಧನಾರೀನರಶರೀರವುಳ್ಳವನಾಗಿಯೂ, ಪ್ರಚಂಡನಾಗಿಯೂ, ದೊಡ್ಡ ದಾದ ದೇಹವನ್ನು ಹೊಂದಿದವನಾಗಿಯೂ ಇದ್ದನು. ಈ ರುದ್ರನನ್ನು ನೋಡಿ ಬ್ರಹ್ಮನು ಸ್ತ್ರೀತ್ವವನ್ನೂ ಪುರುಷತ್ವವನ್ನೂ ಬೇರೆಬೇರೆ ಮಾಡು ಎಂಬುದಾಗಿ ಹೇಳಿ, ಅಂತರ್ಧಾನನಾದನು. ರುದ್ರದೇವನು ಬ್ರಹ್ಮನ ಇಷ್ಟಾನುಸಾರ, ಸ್ತ್ರೀತ್ವ ವನ್ನೂ ಪುರುಷತ್ವವನ್ನೂ ಬೇರೆಬೇರೆ ಮಾಡಿ, ಪುರುಷತ್ವವನ್ನು ಹನ್ನೊಂದು ಭಾಗ ಮಾಡಿದನು. ಹೀಗೆ ರುದ್ರನು ಕ್ರೋಧದಿಂದ ಹುಟ್ಟಿದನು ಎಂಬುದಾಗಿ ತಿಳಿದು, ಸಾತ್ವಿಕದಿಂದ ಸ್ವಾಯಂಭುವ ಮನುವೆಂಬ ಮಗನನ್ನು ಸೃಷ್ಟಿಸಿ, ಪ್ರಜಾ ಸರ್ಗದಲ್ಲಿ ನಿಯಮಿಸಿದನು. ಆ ಸ್ವಾಯಂಭುವ ಮನುವಿಗೆ ಶತರೂಪಾಯೆಂಬ ಹೆಂಡತಿಯಲ್ಲಿ ಪ್ರಿಯವ್ರತ,ಉತ್ತಾನಪಾದ ಎಂಬುದಾಗಿ ಇಬ್ಬರು ಗಂಡುಮಕ್ಕಳೂ, ಪ್ರಸೂತಿ ಆಕೂತಿ ಎಂಬುದಾಗಿ ಇಬ್ಬರು ಕನ್ನಿಕೆಯರೂ ಸಹ ಹುಟ್ಟಿದರು. ಪ್ರಸೂತಿಯನ್ನು ದಕ್ಷಬ್ರಹ್ಮನಿಗೂ, ಆಕೂತಿಯನ್ನು ರುಚಿಯೆಂಬವನಿಗೂ ಕೊಟ್ಟು ವಿವಾಹ ಮಾಡಿದನು. ಆಕೂತಿ ರುಚಿ ಇವರುಗಳಿಂದ, ದಕ್ಷಿಣಾಯೆಂಬ ಪತ್ನಿ ಯಿಂದ ಕೂಡಿದ ಯಜ್ಞನೆಂಬುವನು ಹುಟ್ಟಿದನು. ಇಬ್ಬರೂ ಯಮಳರು, ಎಂದರೆ ಅವಳಿಜವಳಿ ಮಕ್ಕಳಾಗಿ ಹುಟ್ಟಿದರು. ಯಜ್ಞನಿಗೆ ದಕ್ಷಿಣಾಯೆಂಬ ಪತ್ನಿಯಲ್ಲಿ ಹನ್ನೆರಡು ಜನ ಗಂಡುಮಕ್ಕಳು ಹುಟ್ಟಿದರು. ಇವರು ಯಾಮಾ ಎಂಬ ದೇವತಾ ವಿಶೇಷರಾದರು. ಪ್ರಸೂತಿಯಲ್ಲಿ ದಕ್ಷಬ್ರಹ್ಮನಿಂದ ಇಪ್ಪತ್ತುನಾಲ್ಕು ಜನ ಕನ್ನಿಕೆ ಗಳು ಹುಟ್ಟಿದರು. ಇವರುಗಳ ಹೆಸರು: ಶ್ರದ್ಧಾ, ಲಕ್ಷ್ಮೀಃ, ಧೃತಿಃ, ತುಷ್ಟಿಃ, ಪುಷ್ಟಿಃ, ಮೇಧಾ, ಕ್ರಿಯಾ, ಬುದ್ಧಿ, ಲಜ್ಜಾ, ವಪುಃ, ಶಾಂತಿಃ, ಸಿದ್ಧಿಃ, ಕೀರ್ತಿಃ ಎಂಬ ಈ ಹದಿಮೂರು ಜನರು ಯಮಧರ್ಮರಾಜನಿಂದ ಪತ್ನಿಯರಾಗಿ ವರಿಸ ಲ್ಪಟ್ಟವರು. ಮಿಕ್ಕವರು ಖ್ಯಾತಿ, ಸತಿ, ಸಂಭೂತಿ, ಸ್ಮೃತಿ, ಪ್ರೀತಿ, ಕ್ಷಮಾ, ಸನ್ನತಿ, ಅನಸೂಯಾ, ಊರ್ಜಾ, ಸ್ವಾಹಾ, ಸ್ವಧಾ ಎಂಬ ಹನ್ನೊಂದು ಮಂದಿ ಕನ್ನಿಕೆಯರು. ಇವರುಗಳಲ್ಲಿ ಭೃಗುವು ಖ್ಯಾತಿಯನ್ನೂ, ಭವನು ಸತಿಯನ್ನೂ, ಮರೀಚಿಯು ಸಂಭೂತಿಯನ್ನೂ, ಅಂಗಿರಸನು ಸ್ಮೃತಿಯನ್ನೂ, ಪುಲಸ್ತ್ಯನು ಪ್ರೀತಿಯನ್ನೂ, ಪುಲಹನು ಕ್ಷಮೆಯನ್ನೂ, ಕ್ರತುವು ಸನ್ನತಿಯನ್ನೂ, ಅತ್ರಿಯು ಅನಸೂಯೆಯನ್ನೂ, ವಸಿಷ್ಠನು ಊರ್ಜೆಯನ್ನೂ, ವಹ್ನಿಯು ಸ್ವಾಹಾಯನ್ನೂ, ಪಿತೃಗಳು ಸ್ವಧೆಯನ್ನೂ ವಿವಾಹಮಾಡಿಕೊಂಡರು. ಧರ್ಮರಾಜನಿಗೆ ಹದಿ ಮೂರು ಜನ ಪತ್ನಿಗಳಲ್ಲಿ ಹುಟ್ಟಿದ ಮಕ್ಕಳುಗಳು ಯಾರೆಂದರೆ: ದರ್ಪ, ನಿಯಮ, ಸಂತೋಷ, ಲೋಭ, ಶೃತ, ದಂಡ, ವಯ, ವಿನಯ, ಬೋಧ,



Rao Bahadur Sakrepatna Srinivasaiyangar, B.A., L.C.E., M.I.E.
Retired Executive Engineer (1924) (Bombay) Dharwar. Publisher (1928) 1st Edition Kannada Translation of Parashara Maharshi Pranita Sri Vishnu Purana.

ಬುದ್ಧಿ, ವ್ಯವಸಾಯ, ಕ್ಷೇಮ, ಸುಖ, ಯಶಸ್ಸು ಎಂಬವರುಗಳು. ಯಮನಿಂದ ಹುಟ್ಟಿದವರು ಯಾರೆಂದರೆ: ಯಮನ ಜ್ಯೇಷ್ಠಪತ್ನಿಯಾದ ಶ್ರದ್ಧೆಯಲ್ಲಿ ಹುಟ್ಟಿದ ಕಾಮನೂ, ರತಿಯೆಂಬುವಳಿಂದ ಅಧರ್ಮನೆಂಬ ಮಗನೂ, ಅಧರ್ಮನಿಗೆ ಹಿಂಸಾ ಯೆಂಬ ಹೆಂಡತಿಯಲ್ಲಿ ಅನೃತನೆಂಬ ಮಗನೂ, ನಿಕೃತಿಯೆಂಬ ಮಗಳೂ ಸಹ ಹುಟ್ಟಿದರು. ಅನೃತಿ, ನಿಕೃತಿ ಇವರುಗಳಿಗೆ ಭಯ, ನರಕ ಎಂಬುದಾಗಿ ಇಬ್ಬರು ಗಂಡುಮಕ್ಕಳೂ, ಮಾಯಾ, ವೇದನಾ ಎಂಬ ಇಬ್ಬರು ಹೆಣ್ಣುಮಕ್ಕಳೂ ಸಹ ಹುಟ್ಟಿದರು. ಮಾಯಾ, ಭಯ, ವೇದನಾ, ನರಕ ಇವರುಗಳು ಮಿಥುನದಿಂದ, ಅಂದರೆ ಅವಳಿಜವಳಿಗಳಾಗಿ ಹುಟ್ಟಿದರು. ಮಾಯಾ, ಭಯ ಇವರುಗಳಿಂದ ಮೃತ್ಯುಯೆಂಬ ಮಗನು ಹುಟ್ಟಿದನು. ವೇದನೆಯಲ್ಲಿ ನರಕದಿಂದ ದುಃಖಯೆಂಬ ಮಗನು ಹುಟ್ಟಿದನು. ಮೃತ್ಯುವಿಗೆ ವ್ಯಾಧಿ, ಜರಾ, ತೃಷ್ಣಾ, ಶೋಕ, ಕ್ರೋಧ ಎಂಬ ಮಕ್ಕಳು ಹುಟ್ಟಿದರು. ಇವರುಗಳೆಲ್ಲರೂ ಅಧರ್ಮಲಕ್ಷಣವುಳ್ಳವರು. ಇವರುಗಳ ರೂಪಗಳು ಭಯಂಕರವಾದವುಗಳು. ಇವುಗಳೆಲ್ಲವೂ ಈ ಜಗತ್ತಿನ ಪ್ರಳಯಕ್ಕೆ ಕಾರಣಗಳಾದವುಗಳು. ದಕ್ಷ, ಮರೀಚಿ, ಅತ್ರಿ, ಭೃಗು ಮೊದಲಾದವರು, ಜಗತ್ತಿನ ನಿತ್ಯಸೃಷ್ಟಿಗೆ ಕಾರಣರಾದವರು. ಮನುಗಳೂ, ಮನುಪುತ್ರರೂ ಸಹ ಶೂರರಾಗಿಯೂ, ಸ್ವಧರ್ಮನಿರತರಾಗಿಯೂ, ಜಗತ್ತಿನ ಸ್ಥಿತಿಗೆ ಕಾರಣರಾದವರು." ಈ ಪ್ರಕಾರ ಪರಾಶರ ಮಹರ್ಷಿಯು ಹೇಳಿದುದಕ್ಕೆ ಮೈತ್ರೇಯರು ಪುನಃ ಕೇಳುತ್ತಾರೆ: "ಎಲೈ ಮಹಾತ್ಮರೇ, ನಿತ್ಯಸೃಷ್ಟಿ, ನಿತ್ಯಸ್ಥಿತಿ, ನಿತ್ಯಲಯ ಎಂಬುದಾಗಿ ಹೇಳಿದರಲ್ಲವೇ, ಇವುಗಳ ಸ್ವರೂಪವನ್ನು ವಿಸ್ತಾರವಾಗಿ ಹೇಳಬೇಕೆಂದು" ಕೇಳಿದುದಕ್ಕೆ, ಪರಾಶರರು ಹೇಳುತ್ತಾರೆ: "ಎಲೈ ಮೈತ್ರೇಯನೇ! ನಿತ್ಯಸೃಷ್ಟ್ಯಾದಿಗಳನ್ನೂ ಮೇಲೆ ಹೇಳಿದ ಮಹಾತ್ಮರ ರೂಪದಿಂದಲೇ ಪರಮಾತ್ಮನಾದ ಶ್ರೀಮನ್ನಾರಾಯಣನೇ ಮಾಡತಕ್ಕವನು. ಈ ನಿತ್ಯಪ್ರಳಯವೆಂಬುದು ನಾಲ್ಕು ವಿಧವಾಗಿರತಕ್ಕುದು. ನಿತ್ಯ, ನೈಮಿತ್ತಿಕ, ಪ್ರಾಕೃತಿಕ, ಆತ್ಯಂತಿಕವೆಂಬುವು. ನೈಮಿತ್ತಿಕವೆಂದರೆ, ಬ್ರಹ್ಮಸಂಬಂಧವಾದ ಸೃಷ್ಟ್ಯಾದಿಗಳು; ಪ್ರಾಕೃತಿಕವೆಂದರೆ, ಪ್ರಕೃತಿಸಂಬಂಧವಾದುವು; ಆತ್ಯಂತಿಕವೆಂದರೆ, ಯೋಗಿಪ್ರೋಕ್ತವಾದುವುಗಳು; ನಿತ್ಯವೆಂದರೆ, ಹಗಲೂ ರಾತ್ರಿಯಲ್ಲಿ ನಡೆಯುವ ಉತ್ಪತ್ತಿಲಯಾದಿಗಳು; ಈ ಪ್ರಕಾರ ಸರ್ವಶರೀರವಲ್ಲಿಯೂ ಇರತಕ್ಕ ಪರಮಾತ್ಮನು ವೈಷ್ಣವ ಶಕ್ತಿಯಿಂದ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುತ್ತಾನೆ. ಆದರೆ ಇಂತಹ ಪರಮಾತ್ಮನಿಗಾದರೂ 'ನ ಚ ಪುನರಾವರ್ತತೇ' ಎಂಬ ಶ್ರುತಿಪ್ರಕಾರ ಕರ್ಮಾಧೀನನಾದ ಉತ್ಪತ್ತಿ ಮೊದಲಾದ ವಿಕಾರಗಳೊಂದೂ ಇರುವದಿಲ್ಲ."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಮೊದಲನೆಯ ಅಂಶದಲ್ಲಿ
ಏಳನೆಯ ಅಧ್ಯಾಯವು ಮುಗಿಯಿತು.

ಎಂಟನೆಯ ಅಧ್ಯಾಯವು

"ಎಲೈ ಮೈತ್ರೇಯನೇ, ಇದುವರೆವಿಗೆ ಬ್ರಹ್ಮನ ತಾಮಸ ಸೃಷ್ಟಿಯನ್ನು ಹೇಳಿದೆನು. ಈಗ ರುದ್ರಸೃಷ್ಟಿಯನ್ನು ಹೇಳುತ್ತೇನೆ ಕೇಳು. ಕಲ್ಪಾದಿಯಲ್ಲಿ ಬ್ರಹ್ಮನು ತನಗೆ ಸಮಾನನಾದ ಮಗನನ್ನು ಹೊಂದಬೇಕೆಂಬುದಾಗಿ ಧ್ಯಾನ ಮಾಡಿದ ಕಾಲದಲ್ಲಿ ಬ್ರಹ್ಮನ ತೊಡೆಯಲ್ಲಿ ನೀಲಲೋಹಿತನಾದ ಮಗನು ಹುಟ್ಟಿದನು. ಹುಟ್ಟಿದ ಕಾಲದಲ್ಲಿಯೇ ಬಹಳವಾಗಿ ರೋದನಮಾಡಿದನು. ಬ್ರಹ್ಮನು ಅಳುವ ಮಗನನ್ನು "ಏತಕ್ಕೆ ಅಳುತ್ತೀಯೆ" ಎಂಬುದಾಗಿ ಕೇಳಿದುದಕ್ಕೆ, "ನನಗೆ ನಾಮಕರಣವನ್ನು ಮಾಡು" ಎಂಬುದಾಗಿ ಹೇಳಿದನು. ಅದಕ್ಕೆ ಬ್ರಹ್ಮನು, "ನಿನಗೆ ರುದ್ರನೆಂಬುದಾಗಿ ನಾಮಕರಣವನ್ನು ಮಾಡಿದ್ದೇನೆ, ನೀನು ಅಳಬೇಡ, ಧೈರ್ಯವಾಗಿರು" ಎಂಬುದಾಗಿ ಹೇಳಿದನು. ಇದಲ್ಲದೆ ಅವನಿಗೆ ಭವ, ಶರ್ವ, ಈಶಾನ, ಪಶುಪತಿ, ಭೀಮ, ಉಗ್ರ, ಮಹಾದೇವ ಎಂಬ ಇನ್ನೂ ಏಳು ನಾಮಗಳನ್ನಿಟ್ಟನು. ಈ ರುದ್ರನಿಗೆ ಸೂರ್ಯ, ಜಲ, ಮಹೀ, ವಾಯು, ವಹ್ನಿ, ಆಕಾಶ, ದೀಕ್ಷಿತ, ಬ್ರಾಹ್ಮಣ ಎಂಬ ಎಂಟು ಸ್ಥಾನಗಳು. ಆತನ ಎಂಟು ಜನ ಪತ್ನೀರುಗಳು : ಸುವರ್ಚಲಾ, ಉಷಾ, ಸುಕೇಶಿ, ದಿವಾ, ಸ್ವಾರಾ, ದಿಶಾಃ, ದೀಕ್ಷಾ, ರೋಹಿಣೀ ಎಂಬುವರಿಗೆ ಅನೇಕರು ಪುತ್ರರು ಹುಟ್ಟಿ, ಜಗತ್ತನ್ನು ತುಂಬಿದರು. ಸೂರ್ಯನಿಂದ ಶನೇಶ್ವರನೂ, ಜಲದಿಂದ ಶುಕ್ರನೂ, ಭೂಮಿಯಿಂದ ಅಂಗಾರಕನೂ, ವಾಯುವಿನಿಂದ ಮನೋಜವನೂ, ವಹ್ನಿಯಿಂದ ಸ್ಕಂದನೂ, ಆಕಾಶದಿಂದ ಸ್ವರ್ಗವೂ, ದೀಕ್ಷಿತನಾದ ಬ್ರಾಹ್ಮಣನಿಂದ ಸ್ವರ್ಗವೂ, ಚಂದ್ರನಿಂದ ಬುಧನೂ ಸಹ ಹುಟ್ಟಿದರು. ಈ ಪ್ರಕಾರ, ರುದ್ರನು ಸತೀಯೆಂಬ ಹೆಂಡತಿಯನ್ನು ದಕ್ಷಬ್ರಹ್ಮನಿಂದ ಪಡೆದು, ದಕ್ಷನ ಕೋಪದಿಂದ, ರುದ್ರನ ಪತ್ನಿಯಾದ ಸತಿಯು ಅಗ್ನಿಪ್ರವೇಶ ಮಾಡಿ, ಹಿಮವತ್ಪರ್ವತನ ಪತ್ನಿಯಾದ ಮೇನೆಯಲ್ಲಿ ಹುಟ್ಟಿದಳು. ಈ ಪಾರ್ವತಿಯನ್ನು ಪುನಃ ರುದ್ರಭಗವಂತನು ವಿವಾಹಿತನಾದನು. ಶ್ರೀಮನ್ನಾರಾಯಣನ ಪತ್ನಿಯಾದ ಲಕ್ಷ್ಮಿಯು ಭೃಗುಪುತ್ರಿಯಾಗಿ ಹುಟ್ಟಿದಳು" ಎಂದು ಅಪ್ಪಣೆ ಕೊಟ್ಟರು. ಆಗ ಮೈತ್ರೇಯರು ಪರಾಶರರನ್ನು ಕುರಿತು, "ಎಲೈ ಸ್ವಾಮಿಯೇ, ಈಗ ಲಕ್ಷ್ಮಿಯು ಅಮೃತಮಥನಕಾಲದಲ್ಲಿ ಸಮುದ್ರದಲ್ಲಿ ಹುಟ್ಟಿದಳೆಂದು ಕೇಳಿದ್ದೆನು. ಈಗ ಭೃಗುಪುತ್ರಿಯಾಗಿ ಹುಟ್ಟಿದಳೆಂದು ಹೇಳಿದರಲ್ಲಾ, ಇದು ಹೇಗೆ?" ಎಂದು ಕೇಳಿದುದಕ್ಕೆ, ಪರಾಶರಬ್ರಹ್ಮರ್ಷಿಗಳು ಹೇಳುತ್ತಾರೆ: "ಶ್ರೀಮನ್ನಾರಾಯಣನು ಹೇಗೆ ಜಗತ್ತಿಗೆ ತಂದೆಯಾಗಿರುವನೋ, ಹಾಗೆಯೇ ಈ ಲಕ್ಷ್ಮಿಯೂ ಸಹ ಜಗನ್ಮಾತೆಯಾದವಳು. ವಿಷ್ಣುವು ಹೇಗೆ ಸರ್ವವ್ಯಾಪಕನೋ ಹಾಗೆಯೇ ಈಕೆಯೂ ಸರ್ವವ್ಯಾಪಕಳಾಗಿಯೂ ವಿಷ್ಣುವಿಗೆ ಅನಪಾಯಿನಿಯಾಗಿರುವಳು;

ಹೇಗೆಂದರೆ, ಇವಳು ವಾಕ್ಯವಾಗಿಯೂ ವಿಷ್ಣುವು ಅರ್ಥವಾಗಿಯೂ, ಇವಳು ನೀತಿಯಾಗಿಯೂ ವಿಷ್ಣುವು ನಯವಾಗಿಯೂ, ಇವಳು ಬುದ್ಧಿಯಾಗಿಯೂ ಇವನು ಬೋಧಕನಾಗಿಯೂ, ಇವನು ಧರ್ಮವಾಗಿಯೂ ಇವಳು ಸತ್ಕ್ರಿಯ ಳಾಗಿಯೂ, ಇವನು ಸೃಷ್ಟನಾಗಿಯೂ ಇವಳು ಸೃಷ್ಟಿಯಾಗಿಯೂ, ಇವಳು ಭೂಮಿಯಾಗಿಯೂ ಇವನು ಭೂಧರನಾಗಿಯೂ, ಇವನು ಸಂತೋಷ ನಾಗಿಯೂ ಇವಳು ತುಷ್ಟಿಯಾಗಿಯೂ, ಇವನು ಕಾಮನಾಗಿಯೂ ಇವಳು ಇಚ್ಛೆಯಾಗಿಯೂ, ಇವನು ಯಜ್ಞವಾಗಿಯೂ ಇವಳು ದಕ್ಷಿಣೆಯಾಗಿಯೂ, ಇವಳು ಆಜ್ಯಾಹುತಿಯಾಗಿಯೂ ಅವನು ಪುರೋಡಾಶನಾಗಿಯೂ, ಇವಳು ಪತ್ನೀಶಾಲೆಯಾಗಿಯೂ ಅವನು ಪ್ರಾಗ್ವಂಶನಾಗಿಯೂ, ಇವಳು ಚಿತಿಯಾಗಿಯೂ ಅಂದರೆ ಇಷ್ಟಕಾಚಯನವೆಂಬ ಯಜ್ಞವಿಶೇಷವುಳ್ಳವಳಾಗಿಯೂ ಅವನು ಯೂಪನಾಗಿಯೂ, ಇವಳು ಇಧ್ಮವಾಗಿಯೂ ಅವನು ಕುಶನಾಗಿಯೂ, ಇವಳು ಉದ್ಗೀತಿಯಾಗಿಯೂ ಅವನು ಸಾಮರೂಪಿಯಾಗಿಯೂ, ಇವಳು ಸ್ವಾಹಾದೇವಿ ಯಾಗಿಯೂ ಅವನು ಅಗ್ನಿಯಾಗಿಯೂ, ಇವನು ಶಂಕರನಾಗಿಯೂ ಅವಳು ಗೌರಿಯಾಗಿಯೂ, ಇವನು ಸೂರ್ಯನಾಗಿಯೂ ಅವಳು ಪ್ರಭೆಯಾಗಿಯೂ, ಇವನು ಪಿತೃಗಣನಾಗಿಯೂ ಅವಳು ಸ್ವಧಾದೇವಿಯಾಗಿಯೂ, ಇವನು ಚಂದ್ರ ನಾಗಿಯೂ ಅವಳು ಕಾಂತಿಯಾಗಿಯೂ, ಇವನು ವಾಯುವಾಗಿಯೂ ಅವಳು ಧೃತಿಯಾಗಿಯೂ, ಇವನು ಸಮುದ್ರನಾಗಿಯೂ ಅವಳು ಮೇರೆಯಾಗಿಯೂ, ಇವನು ಇಂದ್ರನಾಗಿಯೂ ಅವಳು ಇಂದ್ರಾಣಿಯಾಗಿಯೂ, ಇವನು ಯಮ ನಾಗಿಯೂ ಅವಳು ಧೂಮೋರ್ಣಳಾಗಿಯೂ, ಇವನು ಕುಬೇರನಾಗಿಯೂ ಅವಳು ಬುದ್ಧಿಯಾಗಿಯೂ, ಇವನು ದೇವಸೇನಾಪತಿಯಾಗಿಯೂ ಅವಳು ದೇವಸೇನೆಯಾಗಿಯೂ, ಇವಳು ಕಾಷ್ಠೆಯಾಗಿಯೂ ಅವನು ನಿಮೇಷಣ ನಾಗಿಯೂ, ಅವನು ಮುಹೂರ್ತನಾಗಿಯೂ ಇವಳು ಕಲೆಯಾಗಿಯೂ, ಇವಳು ರಾತ್ರೆಯಾಗಿಯೂ ಅವನು ದೀಪನಾಗಿಯೂ, ಇವಳು ಬಳ್ಳಿಯಾಗಿಯೂ ಅವನು ಮರವಾಗಿಯೂ, ಇವನು ನದಸ್ವರೂಪನಾಗಿಯೂ ಅವಳು ನದೀಸ್ವರೂ ಪಾಗಿಯೂ, ಇವನು ಧ್ವಜನಾಗಿಯೂ ಅವಳು ಪತಾಕೆಯಾಗಿಯೂ, ಇವಳು ತೃಷ್ಣೆಯಾಗಿಯೂ ಅವನು ಲೋಭನಾಗಿಯೂ, ಇವಳು ರತಿಯಾಗಿಯೂ ಅವನು ರಾಗನಾಗಿಯೂ, ಇವಳು ಲಕ್ಷ್ಮಿಯಾಗಿಯೂ ಅವನು ಗೋವಿಂದ ನಾಗಿಯೂ ಇರತಕ್ಕವರು. ಮೇಲೆ ಹೇಳಿದ ದೃಷ್ಟಾಂತಗಳು ಹೇಗೆ ಒಂದಕ್ಕೊಂದು ಎಡಬಿಡದೆ ಇರತಕ್ಕವುಗಳೋ ಹಾಗೆಯೇ ಲಕ್ಷ್ಮೀನಾರಾಯಣರಿಬ್ಬರೂ ಅವಿನಾ ಭೂತರಾಗಿರತಕ್ಕವರು. ಈ ದಿವ್ಯದಂಪತಿಗಳು ಅವಿನಾಭೂತರಾದವರು ಎಂಬು

ದಾಗಿ ಎಷ್ಟು ಹೇಳಿದಾಗ್ಯೂ ಸಾಲದು. ದೇವ, ತಿರ್ಯಕ್, ಮನುಷ್ಯ ಇವರುಗಳಲ್ಲಿ ಪುಲ್ಲಿಂಗವಾಚ್ಯವಾದವುಗಳೆಲ್ಲಾ ಭಗವಂತನಾದ ಶ್ರೀಮನ್ನಾರಾಯಣನು, ಸ್ತ್ರೀಲಿಂಗವಾಚ್ಯವಾದವುಗಳೆಲ್ಲಾ ಜಗನ್ನಾಯಕಿಯಾದ ಲಕ್ಷ್ಮಿಯು. ಆದುದರಿಂದ ಇವರುಗಳಿಗೆ ಭಿನ್ನವೆಂಬುವದೇ ಇಲ್ಲವು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಮೊದಲನೆಯ ಅಂಶದಲ್ಲಿ
ಎಂಟನೆಯ ಅಧ್ಯಾಯವು ಮುಗಿಯಿತು.

ಒಂಬತ್ತನೆಯ ಅಧ್ಯಾಯವು

"ಎಲೈ ಮೈತ್ರೇಯನೇ! ಶ್ರೀ ಮಹಾಲಕ್ಷ್ಮಿಯು ಅಮೃತಮಥನದಲ್ಲಿ ಹುಟ್ಟಿದವಳೆಂಬುದಾಗಿ ಹೇಳಿದೆಯಲ್ಲವೇ. ಆ ವಿಚಾರವನ್ನು ನಾನು ಕಾಶ್ಯಪನ ತಂದೆಯಾದ ಮರೀಚಿ ಬ್ರಹ್ಮನಿಂದ ಕೇಳಿದುದನ್ನು ನಿನಗೆ ಹೇಳುತ್ತೇನೆ ಕೇಳು. ರುದ್ರದೇವನ ಅಂಶದಿಂದ ದುರ್ವಾಸಋಷಿಯು ಹುಟ್ಟಿದನು. ಈ ದುರ್ವಾಸ ಋಷಿಯು, ಭೂಮಿಯಲ್ಲಿ ಸಂಚರಿಸುತ್ತಿರುವಾಗ ಒಬ್ಬ ವಿದ್ಯಾಧರಸ್ತ್ರೀಯ ಕೈಯಲ್ಲಿದ್ದ ಪುಷ್ಪಮಾಲಿಕೆಯನ್ನು ಕಂಡನು. ಆ ಪುಷ್ಪಮಾಲಿಕೆಯು, ಸಂತಾನ ವೃಕ್ಷದ ದಿವ್ಯಕುಸುಮಗಳಿಂದ ರಚಿತವಾದುದಾಗಿ ದಿವ್ಯಪರಿಮಳದಿಂದ ಯುಕ್ತವಾದುದು, ಅತಿಸೌಮ್ಯವಾದುದು. ಇಂತಹ ಪುಷ್ಪಮಾಲಿಕೆಯನ್ನು ನೋಡಿದ ಈ ದುರ್ವಾಸಮುನಿಯು, ಆ ವಿದ್ಯಾಧರಿಯನ್ನು ಕುರಿತು, ಈ ನಿನ್ನ ಕೈಯಲ್ಲಿರುವ ಪುಷ್ಪಮಾಲಿಕೆಯನ್ನು ನನಗೆ ಕೊಡೆಂದು ಯಾಚಿಸಿದನು. ಅದನ್ನು ಕೇಳಿದ ವಿದ್ಯಾಧರಿಯು ಪರಮಾನಂದದಿಂದ ಆ ಮುನಿಗೆ ನಮಸ್ಕಾರಮಾಡಿ ಪುಷ್ಪ ಮಾಲಿಕೆಯನ್ನು ಕೊಟ್ಟಳು. ಆಗ ದುರ್ವಾಸಮುನಿಯು ಆ ಪುಷ್ಪಮಾಲಿಕೆಯನ್ನು ತನ್ನ ಶಿರಸ್ಸಿನಲ್ಲಿಟ್ಟುಕೊಂಡು ಉನ್ಮತ್ತನ ಹಾಗೆ ಸಂಚರಿಸುತ್ತಿದ್ದನು. ಆಗ ದೇವೇಂದ್ರನು ಐರಾವತವೆಂಬ ಆನೆಯಮೇಲೆ ಕುಳಿತು ಅನೇಕ ದೇವತೆಗಳೊಂದೊಡಗೂಡಿ ಬರುವದನ್ನು ಈ ದುರ್ವಾಸಮುನಿಯು ಕಂಡು, ತನ್ನ ತಲೆಯಲ್ಲಿದ್ದ ಪುಷ್ಪ ಮಾಲಿಕೆಯನ್ನು ದೇವೇಂದ್ರನಿಗೆ ಕೊಡಲು, ಆ ದೇವೇಂದ್ರನು ಆ ಪುಷ್ಪಮಾಲಿಕೆಯನ್ನು ಆನೆಯ ತಲೆಯ ಮೇಲೆ ಹಾಕಿದನು. ಕೈಲಾಸಪರ್ವತದಲ್ಲಿದ್ದ ಗಂಗಾ ನದಿಯ ಹಾಗೆ ಪ್ರಕಾಶಿಸುವ ಪುಷ್ಪಮಾಲಿಕೆಯನ್ನು ಆನೆಯು ತನ್ನ ಸೊಂಡಿಲಿನಿಂದ ತೆಗೆದು ಮೂಸಿ ನೋಡಿ ನೆಲದ ಮೇಲೆ ಹಾಕಿತು. ಇದನ್ನು ನೋಡಿದ ಭಗವಂತನಾದ ದುರ್ವಾಸಮುನಿಯು, ಕುಪಿತನಾಗಿ ದೇವೇಂದ್ರನನ್ನು ಕುರಿತು,

ಹೇಳುತ್ತಾನೆ: "ಐಶ್ವರ್ಯಮದದಿಂದ ದುಷ್ಟನಾದ, ಮೂಢನಾದ ದೇವೇಂದ್ರನೇ, ನಾನು ಕೊಟ್ಟ ಪುಷ್ಪಮಾಲಿಕೆಯು ನಿನಗೆ ಸಂಪತ್ತನ್ನುಂಟುಮಾಡತಕ್ಕದ್ದೆಂಬ ಜ್ಞಾನವಿಲ್ಲದೆ, ನಾನು ಕೊಟ್ಟದ್ದು ಮಹಾಪ್ರಸಾದವೆಂದು ಸ್ವೀಕರಿಸಿ ನನಗೆ ಅಭಿವಂದಿಸಿ ನಮಸ್ಕಾರವನ್ನೂ ಸಹ ಮಾಡದೆ, ಆ ಪುಷ್ಪಮಾಲಿಕೆಯನ್ನು ನೀನು ನಿನ್ನ ತಲೆಯಲ್ಲಿ ಧರಿಸದೆ ಇರೋಣದರಿಂದ, ಈ ನಿನ್ನ ಸಕಲೈಶ್ವರ್ಯವೂ ನಾಶವಾಗಲಿ; ಎಲೈ ದೇವೇಂದ್ರನೇ, ನನ್ನನ್ನು ನೀನು ಸಾಮಾನ್ಯನಾದ ಬ್ರಾಹ್ಮಣನೆಂಬುದಾಗಿ ಭಾವಿಸಿರುವೆಯಾದುದರಿಂದ, ನೀನು ನನಗೆ ಅವಮಾನಪಡಿಸಿದೆ; ನಾನು ಕೊಟ್ಟ ಪುಷ್ಪಮಾಲಿಕೆಯನ್ನು ನೀನು ನೆಲದ ಮೇಲೆ ಹಾಕಿದುದರಿಂದ ನೀನು ಅಲಕ್ಷ್ಮೀಕನಾಗು. ಈ ನಿನ್ನ ತ್ರೈಲೋಕ್ಯಾಧಿಪತ್ಯವು ಹಾಳಾಗಲಿ; ನನ್ನ ಕೋಪದಿಂದ ಈ ಚರಾಚರಾತ್ಮಕವಾದ ಜಗತ್ತೂ ಸಹ ಭಯಪಡುತ್ತದೆ; ಇಂತಹ ನನ್ನನ್ನು ನೀನು ದೇವರಾಜನೆಂಬ ಗರ್ವದಿಂದ ಅವಮಾನಪಡಿಸಿದೆಯಲ್ಲವೆ" ಎಂದು ಕೋಪದಿಂದ ದುರ್ವಾಸಮುನಿಯು ಶಾಪವನ್ನು ಕೊಡಲು, ಆಗ ದೇವೇಂದ್ರನು ಐರಾವತದಿಂದ ಕೆಳಕ್ಕೆ ಇಳಿದು, ಅತ್ಯಂತ ವೇಗದಿಂದ ದುರ್ವಾಸಮುನಿಯ ಸಮೀಪಕ್ಕೆ ಬಂದು, ನಮಸ್ಕಾರಾಭಿವಂದನಗಳನ್ನು ಮಾಡಿದನು. ಅದಕ್ಕೆ ದೇವೇಂದ್ರನನ್ನು ಕುರಿತು, ದುರ್ವಾಸಮುನಿಯು ಹೇಳುತ್ತಾನೆ: "ಎಲೈ ಇಂದ್ರನೇ, ನಾನು ದಯಾಶಾಲಿಯಾದವನಲ್ಲ, ನನ್ನಲ್ಲಿ ಕ್ಷಮಾಗುಣವೆಂಬುವದೂ ಇಲ್ಲ, ನಾನು ಗೌತಮರೇ ಮೊದಲಾದ ಇತರ ಮಹರ್ಷಿಗಳ ಹಾಗಲ್ಲ. ನೀನು ಗೌತಮಪತ್ನಿಯಾದ ಅಹಲ್ಯೆಯಲ್ಲಿ ರಮಿಸಿ ಪ್ರಯಾಣ ಮಾಡತಕ್ಕ ಕಾಲದಲ್ಲಿ, ಗೌತಮನು ನಿನ್ನ ಸರ್ವಾಂಗವೂ ಯೋನಿಯಾಗಲೆಂದು ಶಾಪವನ್ನು ಕೊಟ್ಟು, ನೀನು ಅಪರಾಧಕ್ಷಮಾಪಣೆಯನ್ನು ಕೇಳಿಕೊಂಡ ಕಾಲದಲ್ಲಿ ಕರುಣಾಶಾಲಿಯಾದ ಗೌತಮನು ನಿನ್ನ ಸರ್ವಾಂಗವೂ ಕಣ್ಣಾಗಲಿ ಎಂಬುದಾಗಿ ಅನುಗ್ರಹಿಸಿದನಲ್ಲಾ, ಅಂತಹ ಗೌತಮನ ಹಾಗೆ ನಾನು ಕರುಣಾಶಾಲಿಯಲ್ಲ, ನಾನು ದುರ್ವಾಸನೆಂದು ತಿಳಿ. ಎಲೈ ಇಂದ್ರನೇ, ದಯಾಸಾಗರರಾದ ವಸಿಷ್ಠಾದಿ ಬ್ರಹ್ಮರ್ಷಿಗಳು, ನಿನ್ನನ್ನು ಸ್ತೋತ್ರಮಾಡಿ ನಿನಗೆ ಗರ್ವವನ್ನು ಹೆಚ್ಚು ಮಾಡಿದುದರಿಂದ ನನ್ನನ್ನು ನೀನು ಸಾಮಾನ್ಯನಾದವನೆಂಬುದಾಗಿ ತಿಳಿದು ಅವಮಾನಮಾಡಿದೆಯಲ್ಲವೇ; ಕುಪಿತವಾದ ಜಟಾಮಂಡಲಾಲಂಕೃತವಾದ ಈ ನನ್ನ ಮುಖವನ್ನು ನೋಡಿದರೆ, ಮೂರುಲೋಕದಲ್ಲಿ ಯಾರು ತಾನೆ ಭಯಪಡುವದಿಲ್ಲವು? ಎಲೈ ಮೂಢನಾದ ಇಂದ್ರನೇ, ನಿನ್ನ ಅಪರಾಧವನ್ನು ಖಂಡಿತವಾಗಿಯೂ ಕ್ಷಮಿಸುವದಿಲ್ಲ, ಬಹಳ ಮಾತಿನಿಂದೇನು ಪ್ರಯೋಜನವು" ಎಂದು ಹೇಳಿ ದುರ್ವಾಸಮುನಿಯು ಹೊರಟುಹೋದನು. ತರುವಾಯ ದೇವೇಂದ್ರನು

ತನ್ನ ಐರಾವತವನ್ನೇರಿ ಅಮರಾವತಿಗೆ ಪ್ರಯಾಣಮಾಡಿದನು. ಅಂದಿನಿಂದ ದೇವೇಂದ್ರನ ಐಶ್ವರ್ಯಗಳೆಲ್ಲವೂ ನಾಶವಾಗುತ್ತ ಬಂದವು. ಲೋಕದಲ್ಲಿ ವೃಷ್ಟ್ಯಾದಿಗಳೂ ಇಲ್ಲದೆ, ಸಸ್ಯಾದಿಗಳೂ ಆಗದೆ, ಬ್ರಾಹ್ಮಣರು ಯಜ್ಞಾದಿ ಕರ್ಮವನ್ನು ಮಾಡದೆ, ತಪೋನಿಷ್ಠರು ತಪಸ್ಸನ್ನು ಮಾಡದೆ, ರಾಜರುಗಳು ದಾನಾದಿಗಳನ್ನು ಮಾಡದೆ, ಲೋಕವೆಲ್ಲಾ ಭಯಂಕರಸ್ಥಿತಿಗೆ ಪರಿಣಮಿಸಿತು. ಲೋಕಗಳೆಲ್ಲವೂ ನಿಸ್ಸತ್ವಗಳಾದವು. ಸತ್ವವು ಎಲ್ಲಿರುತ್ತೋ ಅಲ್ಲಿ ಸಂಪತ್ತುಗಳು ಇರುವವು. ನಿಶ್ಶ್ರೀಕರಾದವರಿಗೆ ಸತ್ವವೂ ಬಲಶೌರ್ಯಾದಿಗಳೂ ಸಹ ಎಲ್ಲಿಯವು? ಈ ಪ್ರಕಾರ ತ್ರೈಲೋಕ್ಯವೂ ನಿಶ್ಶ್ರೀಕವಾಗುತ್ತಾ ಬಂದನಂತರ ಸಂಪತ್ತಿನಿಂದ ರಹಿತರಾದ ದೈತ್ಯರು, ನಿಸ್ಸತ್ವರಾದ ದೇವತೆಗಳೊಡನೆ ಯುದ್ಧಕ್ಕೆ ಆರಂಭಿಸಿದರು. ಆ ಯುದ್ಧದಲ್ಲಿ ದೇವತೆಗಳು ಪರಾಜಿತರಾಗಲು, ತ್ರೈಲೋಕ್ಯೈಶ್ವರ್ಯಗಳೆಲ್ಲವೂ ದೈತೇಯರ ಅಧೀನವಾಯಿತು. ಆಗ ಇಂದ್ರಾದಿಗಳೆಲ್ಲರೂ ಪಿತಾಮಹನಾದ ಚತುರ್ಮುಖಬ್ರಹ್ಮನನ್ನು ಶರಣುಹೊಂದಿದರು.

ಆಗ ಬ್ರಹ್ಮನು ಇಂದ್ರಾದಿಗಳನ್ನು ಕುರಿತು: "ನೀವುಗಳೆಲ್ಲರೂ ಪರಾವರೇಶನಾಗಿಯೂ, ಅಸುರಮರ್ದನನಾಗಿಯೂ, ಉತ್ಪತ್ತಿಸ್ಥಿತಿನಾಶಗಳಿಗೆ ಕಾರಣನಾಗಿಯೂ, ಬ್ರಹ್ಮನಿಗೂ ಕೂಡ ಸ್ವಾಮಿಯಾಗಿಯೂ, ಅನಂತನಾಗಿಯೂ, ಜಯಶಾಲಿಯಾಗಿಯೂ, ಪ್ರಧಾನಪುರುಷನಾಗಿಯೂ, ಆಶ್ರಿತರ ದುಃಖವನ್ನು ಪರಿಹಾರಮಾಡತಕ್ಕವನಾಗಿಯೂ ಇರುವ ಶ್ರೀಮನ್ನಾರಾಯಣನನ್ನು ನೀವು ಶರಣುಹೊಂದಿದರೆ, ಆ ಪರಮಾತ್ಮನು ನಿಮಗೆ ಶ್ರೇಯಸ್ಸನ್ನುಂಟುಮಾಡುತ್ತಾನೆ" ಎಂದು ಹೇಳಿ, ತಾನೂ ದೇವತೆಗಳಿಂದೊಡಗೂಡಿ, ಕ್ಷೀರಸಮುದ್ರದ ಬಳಿಗೆ ಬಂದು ಪರಮಾತ್ಮನನ್ನು ಕುರಿತು ಪ್ರಾರ್ಥಿಸುತ್ತಾನೆ: "ಸರ್ವೇಶ್ವರನಾಗಿಯೂ, ಅವ್ಯಯನಾಗಿಯೂ, ಲೋಕಗಳಿಗೆ ಆಧಾರನಾಗಿಯೂ, ಭೇದಾರ್ಹನಾಗಿ ಸರ್ವವೂ ಯಾವನಿಂದ ಹುಟ್ಟಿತೋ ಅಂತಹ ಜಗತ್ಕಾರಣನಾಗಿ, ಮುಮುಕ್ಷುಗಳಾದ ಯೋಗಿಗಳಿಂದಲೂ, ಅಚಿಂತ್ಯನಾಗಿಯೂ ಇರುವ ಶ್ರೀಮನ್ನಾರಾಯಣನನ್ನು ನಮಸ್ಕರಿಸುತ್ತೇನೆ. ಸರ್ವಕ್ಕೂ ಶುದ್ಧನಾದ, ಆದಿಪುರುಷನಾದ ಲಕ್ಷ್ಮೀಪತಿಯು ನನಗೆ ಪ್ರಸನ್ನನಾಗಲಿ. ಯಾವ ನಾರಾಯಣನು ಪರಮೇಶ್ವರನಾಗಿಯೂ, ಸರ್ವಕಾರಣಭೂತನಾಗಿಯೂ ಇದ್ದಾನೆಯೋ, ಅಂತಹ ಶ್ರೀ ವಾಸುದೇವನು ನಮಗೆ ಅನುಗ್ರಹ ಮಾಡಲಿ. ಸುರೇಶ್ವರನಾಗಿಯೂ, ಭೋಕ್ತಾವಾಗಿಯೂ, ಭೋಗ್ಯಭೂತನಾಗಿಯೂ, ಸೃಷ್ಟವಾಗಿಯೂ, ಕಾರ್ಯಕರ್ತೃಸ್ವರೂಪನಾಗಿಯೂ, ಅವ್ಯಕ್ತನಾಗಿಯೂ ಇರುವ ಯಾವ ಪರಮಾತ್ಮನನ್ನು ಯೋಗಿಗಳು ಪುಣ್ಯಪಾಪಕ್ಷಯಾರ್ಥವಾಗಿ ಚಿಂತಿಸುತ್ತಾರೋ, ಅಂತಹ ಶ್ರಿಯಃಪತಿಯಾದ ಸರ್ವೇಶ್ವರ

ನನ್ನ ನಮಸ್ಕರಿಸುತ್ತೇನೆ. ನಾನೂ, ಶಂಕರನೂ, ಋಷಿಗಳೂ, ದೇವತೆಗಳೂ ಸಹ ಯಾವ ಪರಮಪದವನ್ನು ತಿಳಿಯಲಾರೆವೋ ಅಂತಹ ವಿಷ್ಣುಪದವನ್ನು ನಮಸ್ಕರಿಸುತ್ತೇನೆ. ಸರ್ವೇಶನೇ, ಸರ್ವಭೂತಾತ್ಮಕನೇ, ಸರ್ವಾಶ್ರಯನೇ, ಅಚ್ಯುತನೇ, ಪ್ರಸನ್ನನಾಗು. ನಿನ್ನ ಭಕ್ತರಾದ ನಮ್ಮಗಳಿಗೆ ದೃಷ್ಟಿಗೋಚರನಾಗು" ಈ ಪ್ರಕಾರ ಬ್ರಹ್ಮನು ಸ್ತೋತ್ರಮಾಡಿದನಂತರ ಇಂದ್ರಾದಿಗಳು ಪರಮಾತ್ಮನನ್ನು ಸ್ತುತಿಸುತ್ತಾರೆ: "ಎಲೈ ಸ್ವಾಮಿಯೇ, ಈ ಬ್ರಹ್ಮರುದ್ರಾದಿಗಳೂ ಕೂಡ ನಿನ್ನನ್ನು ನೋಡಲಾರರು; ಇಂತಹ ಜಗದ್ಧಾಮನಾದ ನಿನ್ನನ್ನು ನಮಸ್ಕರಿಸುತ್ತೇವೆ." ಅನಂತರ ಬೃಹಸ್ಪತಿಯೇ ಮೊದಲಾದ ದೇವರ್ಷಿಗಳೆಲ್ಲರೂ ಶ್ರೀಮನ್ನಾರಾಯಣನನ್ನು ಸ್ತುತಿಸುತ್ತಾರೆ: "ಹೇ ಭಗವಂತನೇ, ಭೂತಭವ್ಯಾಧಿಪತಿಯೇ, ಯಜ್ಞಮೂರ್ತಿಯೇ. ನಮ್ಮಗಳಿಗೆ ನಿನ್ನ ದರ್ಶನವನ್ನು ಕೊಡು. ಈ ಚತುರ್ಮುಖ ಬ್ರಹ್ಮನೂ, ತ್ರಿಲೋಚನನಾದ ರುದ್ರದೇವನೂ, ಈ ಸೂರ್ಯನೂ, ಈ ಅಗ್ನಿಯೂ, ಈ ಅಶ್ವಿನೀದೇವತೆಗಳೂ, ಈ ಅಷ್ಟವಸುಗಳೂ, ಈ ಮರುದ್ಗಣಗಳೂ, ಈ ಸಾಧ್ಯರೂ, ಈ ವಿಶ್ವೇದೇವರೂ, ಈ ಇಂದ್ರನೂ, ಈ ದೇವತೆಗಳೂ, ನಾನೂ, ಎಲ್ಲರೂ ದೈತ್ಯರಿಂದ ಪರಾಜಿತರಾಗಿ ನಿಶ್ಶ್ರೀಕರಾಗಿ ನಿನ್ನನ್ನು ಶರಣವನ್ನು ಹೊಂದಿದ್ದೇವೆ. ಶರಣಾಗತರಾದ ನಮ್ಮನ್ನು ಕಾಪಾಡು" ಎಂದು ಈ ಪ್ರಕಾರ ಬೃಹಸ್ಪತಿಯೇ ಮೊದಲಾದವರು, ಸರ್ವೇಶ್ವರನಾದ ಶ್ರೀಮನ್ನಾರಾಯಣನನ್ನು ಕೊಂಡಾಡಿದ ಕಾಲದಲ್ಲಿ ಭಕ್ತಾಭೀಷ್ಟಫಲಪ್ರದನಾದ ಶ್ರೀಮನ್ನಾರಾಯಣನು ಶಂಖಚಕ್ರ ದಿವ್ಯಪೀತಾಂಬರಧಾರಿಯಾಗಿ ಬ್ರಹ್ಮರುದ್ರೇಂದ್ರಾದಿ ದೇವತೆಗಳಿಗೆ ದರ್ಶನವನ್ನು ಕೊಟ್ಟನು. ಆಗ ಬ್ರಹ್ಮಾದಿಗಳು ತೇಜೋರಾಶಿಯಾದ ಶಂಖಚಕ್ರ ಗದಾಧಾರಿಯಾದ ಜಗನ್ನಾಯಕನನ್ನು ನೋಡಿ, ಸಂತುಷ್ಟಮನಸ್ಕರಾಗಿ, ಪುಂಡರೀಕಾಕ್ಷನನ್ನು ಸ್ತೋತ್ರಮಾಡುತ್ತಾರೆ: "ಎಲೈ ನಾರಾಯಣನೇ, ನಿನಗೆ ನಮಸ್ಕಾರವು, ಪುನಃಪುನಃ ನಮಸ್ಕಾರವು. ಎಲೈ ಸ್ವಾಮಿಯೇ, ನೀನೇ ಬ್ರಹ್ಮನು, ನೀನೇ ರುದ್ರನು, ಇಂದ್ರಾದಿ ಸಕಲ ದೇವತೆಗಳೂ ನೀನೇ, ಸಕಲವಾದ ಜಗತ್ತೂ ನೀನೇ, ನೀನೇ ಯಜ್ಞಮೂರ್ತಿಯು, ನೀನೇ ಓಂಕಾರ ವಷಟ್ಕಾರಗಳು, ನೀನೇ ಸರ್ವಾತ್ಮಕನು, ನೀನೇ ಜಗನ್ಮಯನಾದವನು, ನಾವುಗಳೆಲ್ಲರೂ ದೈತ್ಯರಿಂದ ಸೋತವರಾಗಿ ನಿನ್ನನ್ನು ಶರಣುಹೊಂದಿದ್ದೇವೆ; ಸರ್ವಾತ್ಮಕನಾದ ಸ್ವಾಮಿಯೇ, ನಮಗೆ ಅನುಗ್ರಹಮಾಡು. ಎಲೈ ಪರಮಾತ್ಮನೇ, ನಿನ್ನಲ್ಲಿ ಶರಣಾಗತರಾಗುವವರೆವಿಗೂ ಜನಗಳಿಗೆ ಅಪೇಕ್ಷೆಯೂ, ಮೋಹವೂ, ಸುಖವೂ, ದುಃಖವೂ ಸಹ ಉಂಟು. ಶರಣಾಗತರಾದನಂತರ ಸಕಲ ದುಃಖವೂ ನಾಶವಾಗಿ, ನಿನ್ನ ಅನುಗ್ರಹವುಂಟಾಗುವುದು." ಈ ಪ್ರಕಾರ ದೇವತೆಗಳಿಂದ ಸ್ತುತಿ

ಸಲ್ಪಟ್ಟ ಪರಮಾತ್ಮನು ಪ್ರಸನ್ನದೃಷ್ಟಿಯುಳ್ಳವನಾಗಿ, "ಎಲೈ ದೇವತೆಗಳಿರಾ! ನೀವು ದೈತ್ಯರಿಂದ ಕೂಡಿದವರಾಗಿ ಕ್ಷೀರಾಬ್ಧಿಯಲ್ಲಿ ಮಂದರಪರ್ವತವನ್ನು ಇಟ್ಟು ವಾಸುಕಿಯನ್ನು ಹಗ್ಗವಾಗಿ ಮಾಡಿಕೊಂಡು ಮಥನ ಮಾಡಿದರೆ ಅಮೃತವು ಹುಟ್ಟುತ್ತದೆ. ಅದನ್ನು ನೀವು ಪಾನಮಾಡಿದರೆ ಬಲಿಷ್ಠರಾಗಿ ದೈತ್ಯರನ್ನು ಜಯಿಸುತ್ತೀರಿ, ಆ ದೈತ್ಯರು ಅಮೃತವನ್ನು ಪಾನಮಾಡದ ಹಾಗೆ ನಾನು ನಿಮಗೆ ಸಹಾಯ ಮಾಡುತ್ತೇನೆ. ಆಗ ನೀವು ಜಯವನ್ನು ಹೊಂದುತ್ತೀರಿ" ಎಂದು ದೇವದೇವನು ಅಪ್ಪಣೆ ಕೊಡಿಸಲು, ಬ್ರಹ್ಮಾದಿಗಳೆಲ್ಲರೂ ದೈತ್ಯರಲ್ಲಿ ಹೋಗಿ, "ಎಲೈ ದೈತೇಯರೇ, ನಾವುಗಳೆಲ್ಲರೂ ಸೇರಿ ಸಮುದ್ರಮಥನವನ್ನು ಮಾಡಿ ಅಮೃತವನ್ನು ಪಡೆಯೋಣ" ಎಂಬುದಾಗಿ ದೇವತೆಗಳು ಹೇಳಿದುದಕ್ಕೆ ಭಗವತ್ ವಿಭೂತಿಯನ್ನು ತಿಳಿಯದ ದೈತೇಯರು ಈ ದೇವತೆಗಳಿಗೆ ಅಮೃತವು ಸಿಕ್ಕದ ಹಾಗೆ ನಾವೇ ಪಾನಮಾಡೋಣವೆಂಬುದಾಗಿ, ಮನಸ್ಸಿನಲ್ಲಿ ಆಲೋಚಿಸಿ, ದೇವತೆಗಳಿಂದ ಮಾಡಲ್ಪಟ್ಟ ಸಂಧಿಗೆ ಒಪ್ಪಿದವರಾಗಿ, ಮಥನಾರ್ಥವಾಗಿ ಮಂದರಪರ್ವತವನ್ನು ತೆಗೆದುಕೊಂಡು ಸಮುದ್ರದಲ್ಲಿರಿಸಿ, ಕಡೆಯುವವಕ್ಕೆ ಹಗ್ಗದ ಹಾಗೆ ವಾಸುಕಿಯನ್ನು ಕಟ್ಟಿ, ಸಮುದ್ರವನ್ನು ಮಥನಮಾಡುವುದಕ್ಕೆ ಪ್ರಾರಂಭಿಸಿದರು. ಅಸುರರು ವಾಸುಕಿಯ ಮುಖದ ಕಡೆಗೂ, ಸುರರು ಬಾಲದ ಕಡೆಗೂ ಹಿಡಿದುಕೊಂಡು ಮಥನಮಾಡುತ್ತಿರುವಾಗ, ಆ ವಾಸುಕಿಯ ಮುಖನಿಶ್ವಾಸವೆಂಬ ಬೆಂಕಿಯಿಂದ ಬಹಳ ಪರಾಕ್ರಮಿಗಳಾದ ದೈತ್ಯರೆಲ್ಲರೂ ನಿಶ್ಶಕ್ತಿಯಿಂದ ಕೂಡಿದವರಾದರು. ದೇವತೆಗಳು ಬಾಲದ ಕಡೆ ಇದ್ದುದರಿಂದ ಇವರು ನಿರಾಯಾಸರಾಗಿದ್ದರು. ಈ ಮಧ್ಯದಲ್ಲಿ ಪರಮಾತ್ಮನಾದ ಶ್ರೀಮನ್ನಾರಾಯಣನು ಕೂರ್ಮರೂಪಿಯಾಗಿ ಮಂದರಪರ್ವತವನ್ನು ಧರಿಸಿದವನಾಗಿ ಅತ್ಯಂತ ಆಯಾಸಪಟ್ಟ ವಾಸುಕಿಯನ್ನು ವಾತ್ಸಲ್ಯಾತಿಶಯದಿಂದ ನೋಡಲು, ಆ ವಾಸುಕಿಯು ಭಗವದನುಗ್ರಹಯುಕ್ತನಾದುದರಿಂದ ನಿರಾಯಾಸನಾದನು. ದೇವಾಸುರರೆಲ್ಲರೂ ಭಗವಂತನ ಚರ್ಯವನ್ನು ತಿಳಿಯದೆ ಮಥನಮಾಡುತ್ತಿರುವ ಕಾಲದಲ್ಲಿ, ಕಾಮಧೇನುವೂ, ವಾರುಣೀದೇವಿಯೂ, ಪಾರಿಜಾತಪುಷ್ಪವೂ, ಅಪ್ಸರಸ್ತ್ರೀಸಮೂಹವೂ ಸಹ ಹುಟ್ಟಿದವು. ಅನಂತರ ಚಂದ್ರನೂ, ವಿಷವೂ ಸಹ ಹುಟ್ಟಿದವು. ಈ ಎರಡನ್ನೂ ರುದ್ರದೇವನು ಪರಿಗ್ರಹಿಸಿದನು. ಆಮೇಲೆ ದಿವ್ಯಶ್ವೇತಾಂಬರಧಾರಿಯಾದ ಧನ್ವಂತರಿಯು ಅಮೃತಪೂರ್ಣವಾದ ಕಮಂಡಲವನ್ನು ಧರಿಸಿ ಹುಟ್ಟಿದನು. ಆಗ ಸಮಸ್ತ ದೈತೇಯರೂ ಬಹಳ ಸಂತೋಷದಿಂದ ಸಮಾಧಾನಮನಸ್ಕರಾದರು. ಅನಂತರ ಪ್ರಕಾಶವಾದ ಕಾಂತಿಯಿಂದ ಕೂಡಿದವಳಾಗಿಯೂ, ವಿಕಸಿತವಾದ ಕಮಲದಲ್ಲಿರತಕ್ಕವಳಾಗಿಯೂ, ಕಮಲವನ್ನು ಧರಿಸಿದವ

ಳಾಗಿಯೂ ಇರುವ ಶ್ರೀ ಮಹಾಲಕ್ಷ್ಮಿಯು ಹುಟ್ಟಿದಳು. ಆಗ ಅನೇಕ ಮಹರ್ಷಿಗಳು ಶ್ರೀಸೂಕ್ತದಿಂದ ಮಹಾಲಕ್ಷ್ಮಿಯನ್ನು ಸ್ತೋತ್ರಮಾಡಿದರು. ವಿಶ್ವಾವಸು ಮೊದಲಾದ ಗಂಧರ್ವರು ಗಾನಮಾಡಿದರು. ಘೃತಾಚೀ ಮೊದಲಾದ ಅಪ್ಸರ ಸ್ತ್ರೀಯರು ನರ್ತನಮಾಡಿದರು. ಗಂಗಾದಿ ಸಕಲ ನದಿಗಳೂ ಸ್ನಾನಾರ್ಥವಾಗಿ ಸಿದ್ಧರಾದರು. ದಿಗ್ಗಜಗಳೆಲ್ಲವೂ ನಿರ್ಮಲೋದಕದಿಂದ ಸ್ನಾನ ಮಾಡಿಸಿದವು. ಸಮುದ್ರರಾಜನು ದಿವ್ಯವಾದ ಪುಷ್ಪಮಾಲಿಕೆಯನ್ನು ಹಾಕಿದನು. ವಿಶ್ವಕರ್ಮನು ದಿವ್ಯಾಭರಣಗಳನ್ನು ಧರಿಸಲಿತ್ತನು. ಇಂತಹ ಸರ್ವಲೋಕೇಶ್ವರಿಯಾದ ಶ್ರೀ ಮಹಾಲಕ್ಷ್ಮಿಯು ದಿವ್ಯಾಂಬರಾದಿಗಳಿಂದ ಅಲಂಕೃತಳಾಗಿ ದೇವಾಸುರರೆಲ್ಲರೂ ನೋಡುವ ಹಾಗೆ ಶ್ರೀಮನ್ನಾರಾಯಣನ ವಕ್ಷಃಸ್ಥಳವನ್ನು ಹೊಂದಿದಳು. ಹರಿಯ ವಕ್ಷಃಸ್ಥಳದಲ್ಲಿರತಕ್ಕ ಶ್ರೀ ಮಹಾಲಕ್ಷ್ಮಿಯು ದೇವತೆಗಳನ್ನು ತನ್ನ ಅನುಗ್ರಹ ಮಯವಾದ ದಿವ್ಯಕಟಾಕ್ಷದಿಂದ ನೋಡಿದಳು. ವಿಷ್ಣುಪರಾಙ್ಮುಖರಾದ ದೈತ್ಯರೆಲ್ಲರೂ, ಶ್ರೀ ಮಹಾಲಕ್ಷ್ಮಿಯು ತಮ್ಮನ್ನು ನೋಡಲಿಲ್ಲವೆಂಬುದಾಗಿ ಖಿನ್ನತೆಯಿಂದ ಯುಕ್ತರಾದರು.

ಆಗ ದೈತ್ಯರೆಲ್ಲರೂ ಧನ್ವಂತರಿ ಕೈಯಲ್ಲಿರತಕ್ಕ ಅಮೃತಕಲಶವನ್ನು ಬಲಾತ್ಕಾರದಿಂದ ತೆಗೆದುಕೊಂಡರು. ಇದನ್ನು ನೋಡಿ ದೇವತೆಗಳೆಲ್ಲರೂ ಭ್ರಾಂತಚಿತ್ತರಾಗಿ ಕಣ್ಣುಬಿಡುತ್ತಾ ಇರತಕ್ಕ ಕಾಲದಲ್ಲಿ. ಭಕ್ತಪರಾಧೀನನಾದ ಶ್ರೀಮನ್ನಾರಾಯಣನು. ದೇವತೆಗಳ ಖಿನ್ನತೆಯನ್ನು ನೋಡಿದ ತಕ್ಷಣದಲ್ಲಿಯೇ ಅಸುರಮೋಹಕರವಾದ ಮೋಹಿನೀರೂಪವನ್ನು ತಾಳಿ ದೈತ್ಯರನ್ನು ಮೋಹಪಡಿಸಿ, ಅವರ ಕೈಯಲ್ಲಿದ್ದ ಅಮೃತಪಾತ್ರೆಯನ್ನು ತೆಗೆದು, ದೇವತೆಗಳ ಕೈಯಲ್ಲಿ ಕೊಟ್ಟನು. ಆ ದೇವತೆಗಳು ಭಗವತ್ಸಹಾಯದಿಂದ ಅಮೃತಪ್ರಾಶನೆಯನ್ನು ಮಾಡಿದರು. ಭಗವಂತನ ಮಾಯಾಮೋಹಿತರಾದ ದೈತ್ಯರೆಲ್ಲರೂ ದೇವತೆಗಳಲ್ಲಿ ಯುದ್ಧಮಾಡಿ ಪರಾಜಿತರಾಗಿ ಪಾತಾಳಲೋಕವನ್ನು ಹೊಂದಿದರು. ಅನಂತರ ದೇವತೆಗಳು ಶಂಖಚಕ್ರಧಾರಿಯಾದ ಪರಮಾತ್ಮನನ್ನು ಸ್ತೋತ್ರಮಾಡಿ ನಮಸ್ಕಾರವನ್ನು ಮಾಡಿದರು. ಇಂದ್ರನು ಮೊದಲಿನಂತೆ ತ್ರೈಲೋಕ್ಯೈಶ್ವರ್ಯವನ್ನು ಹೊಂದಿ ದೇವರಾಜ್ಯಾಧಿಪನಾದನು. ಬ್ರಾಹ್ಮಣಾದಿಗಳೆಲ್ಲರೂ ಯಥಾಪ್ರಕಾರ ಸ್ವಧರ್ಮನಿರತರಾದರು. ಆಗ ದೇವೇಂದ್ರನು ಪೂರ್ವದಂತೆ ಶ್ರೀಮಂತನಾಗಿ ಸಿಂಹಾಸನಗತನಾಗಿ ದೇವಾಧಿಪತ್ಯವನ್ನು ಹೊಂದಿದನು. ಇಂತಹ ಸಕಲೈಶ್ವರ್ಯವೂ, ಶ್ರೀ ಮಹಾಲಕ್ಷ್ಮಿಯು ದೇವತೆಗಳನ್ನು ಕೃಪಾಕಟಾಕ್ಷದಿಂದ ನೋಡಿದುದರ ಫಲವಾದುದರಿಂದ ಅವಳಿಂದಲೇ ಲಭ್ಯವಾದುದೆಂದು ದೇವೇಂದ್ರನು ಸ್ತೋತ್ರಮಾಡುತ್ತಾನೆ:
"ಸಕಲಲೋಕಕ್ಕೂ ತಾಯಿಯಾಗಿಯೂ, ಸಮುದ್ರದಲ್ಲಿ ಹುಟ್ಟಿದವಳಾಗಿಯೂ,

ವಿಕಸಿತವಾದ ಕಮಲದ ಹಾಗೆ ಕಣ್ಣುಗಳುಳ್ಳವಳಾಗಿಯೂ, ಕಮಲವೇ ಮನೆಯಾಗಿ ಉಳ್ಳವಳಾಗಿಯೂ, ಕಮಲದ ಹಾಗೆ ಕೈಯುಳ್ಳವಳಾಗಿಯೂ, ಕುಪಲಮುಖಿಯಾಗಿಯೂ, ಕಮಲನಾಭನ ಪತ್ನಿಯಾಗಿಯೂ ಇರುವ ಶ್ರೀ ಮಹಾಲಕ್ಷ್ಮಿಯನ್ನು ನಮಸ್ಕಾರಮಾಡುತ್ತೇನೆ. ಓ ಮಹಾಲಕ್ಷ್ಮಿಯೇ, ನೀನು ಸಕಲಸಿದ್ಧಿಯಾದವಳು, ನೀನೇ ಸ್ವಧಾಸ್ವಾಹಾಕಾರಳಾದವಳು, ನೀನೇ ಅಮೃತಳಾದವಳು, ನೀನು ಲೋಕಗಳೆಲ್ಲವನ್ನೂ ಪರಿಶುದ್ಧಮಾಡುವವಳು, ಸಂಧ್ಯಾ, ರಾತ್ರಿ, ಮೇಧಾ, ಶ್ರದ್ಧಾ, ಸರಸ್ವತೀ ಇವೆಲ್ಲವೂ ನೀನೇ. ಧರ್ಮಮೀಮಾಂಸೆಯಾದವಳೂ, ಇಂದ್ರಜಾಲಾದಿ ವಿದ್ಯೆಯೂ, ಮಂತ್ರವಿದ್ಯೆಯೂ, ಆತ್ಮವಿದ್ಯೆಯೂ ಸಹ ನೀನೇ, ಮುಕ್ತಿಫಲಪ್ರದಳಾದವಳೂ, ಆನ್ವೀಕ್ಷಕ್ಯಾದಿ ಸಕಲವಿದಾತಳೂ ನೀನೆ. ಸೌಮ್ಯಾಸೌಮ್ಯಾದಿರೂಪಗಳಿಂದ ಜಗದ್ವ್ಯಾಪಿನಿಯಾದವಳೂ ನೀನೇ. ಎಲೈ ಮಹಾದೇವಿಯೇ, ನಿನ್ನ ಅನುಗ್ರಹವು ನನಗೆ ಇಲ್ಲದುದರಿಂದ ನನ್ನ ಸಕಲೈಶ್ವರ್ಯವೂ ನಾಶವಾಗಿತ್ತು. ಈಗ ನಿನ್ನ ಕೃಪಾಕಟಾಕ್ಷವು ನನ್ನಲ್ಲಿ ಉಂಟಾದುದರಿಂದ ಈ ತ್ರೈಲೋಕ್ಯಾಧಿಪತ್ಯವೂ ನನಗೆ ಲಭಿಸಿತು. ಮನುಷ್ಯರಿಗೆ ನಿನ್ನ ವೀಕ್ಷಣೆಯಿಂದಲೇ ಸಕಲ ಸಂಪತ್ತುಗಳೂ ಉಂಟಾಗುವದು. ಎಲೈ ತಾಯಿಯೇ, ಈ ಸಕಲ ಜಗತ್ತಿಗೂ ನೀನು ತಾಯಿಯಾಗಿಯೂ, ದೇವದೇವನು ತಂದೆಯಾಗಿಯೂ, ಈ ಚರಾಚರಾತ್ಮಕವಾದ ಪ್ರಪಂಚವನ್ನು ವ್ಯಾಪಿಸಿರುತ್ತೀರಿ. ಹೇ ಜಗಜ್ಜನನಿಯೇ, ಮನುಷ್ಯರು ನಿರ್ಗುಣರಾದಾಗ್ಯೂ ನಿನ್ನಿಂದ ನೋಡಲ್ಪಟ್ಟವರಾದರೆ, ಶೀಲಾದಿ ಸದ್ಗುಣವುಳ್ಳವರೂ, ಧನಾದಿ ಸಂಪತ್ತಿನಿಂದ ಕೂಡಿದವರೂ ಆಗುತ್ತಾರೆ. ನೀನು ಯಾವ ಮನುಷ್ಯನನ್ನು ನೋಡುತ್ತೀಯೋ ಆ ಮನುಷ್ಯನೇ ಶ್ಲಾಘ್ಯನಾದವನು, ಗುಣಶಾಲಿಯಾದವನು, ಧನ್ಯನಾದವನು, ಬುದ್ಧಿಶಾಲಿಯಾದವನು, ಶೂರನಾದವನು. ಹೇ ವಿಷ್ಣುವಲ್ಲಭೆ, ನೀನು ಯಾವ ಮನುಷ್ಯನನ್ನು ನೋಡುವದಿಲ್ಲವೋ, ಆ ಮನುಷ್ಯನು ಎಷ್ಟು ಗುಣಶಾಲಿಯಾದಾಗ್ಯೂ ವೈಗುಣ್ಯವನ್ನು ಹೊಂದುತ್ತಾನೆ. ನಿನ್ನ ಗುಣಗಳನ್ನು ವರ್ಣಿಸುವದಕ್ಕೆ ಬ್ರಹ್ಮನ ನಾಲಿಗೆಗಳೂ ಶಕ್ತಿಯುಳ್ಳವಾಗಲಾರವು. ಹೇ ಲಕ್ಷ್ಮಿಯೇ, ನಮ್ಮನ್ನು ಯಾವಾಗಲೂ ಕೈಬಿಡದೆ ಅನುಗ್ರಹಮಾಡು." ಈ ಪ್ರಕಾರ ಇಂದ್ರನು ಸ್ತೋತ್ರಮಾಡಿದ ನಂತರ ಶ್ರೀ ಮಹಾಲಕ್ಷ್ಮಿಯು ಪ್ರತ್ಯಕ್ಷಳಾಗಿ ಇಂದ್ರನನ್ನು ಕುರಿತು ಅಪ್ಪಣೆ ಕೊಡಿಸುತ್ತಾಳೆ: "ಎಲೈ ಇಂದ್ರನೇ, ನಿನ್ನ ಸ್ತೋತ್ರದಿಂದ ನಾನು ಪರಿತುಷ್ಟಳಾದೆನು. ಈಗ ನಾನು ನಿನಗೆ ವರವನ್ನು ಕೊಡುವದಕ್ಕಾಗಿ ಬಂದಿದ್ದೇನೆ. ನೀನು ಇಷ್ಟವಾದ ವರವನ್ನು ಕೇಳಿಕೊ" ಎಂಬುದಾಗಿ ಲಕ್ಷ್ಮೀದೇವಿಯು ಅಪ್ಪಣೆ ಕೊಡಿಸಲು, ಆಗ ಇಂದ್ರನು ಪ್ರಾರ್ಥಿಸುತ್ತಾನೆ: "ಓ ಲೋಕಮಾತೆ, ನೀನು ನನಗೆ

ವರವನ್ನು ಕೊಡುವದಾದರೆ, ನಾನು ವರವನ್ನು ಹೊಂದಲು ಯೋಗ್ಯನಾಗಿದ್ದರೆ, ನೀನು ಯಾವಾಗಲೂ ನನ್ನನ್ನು ಬಿಡಬೇಡ, ಇದೇ ನನ್ನ ಆಶಯವು. ಓ ಅಬ್ಧಿ ಸಂಭವೇ, ನಾನು ಮಾಡಿದ ಸ್ತೋತ್ರದಿಂದ ನೀನು ತೃಪ್ತಳಾಗಿದ್ದರೆ ಈ ಮೂರು ಲೋಕವನ್ನೂ ನೀನು ಬಿಡತಕ್ಕದ್ದಲ್ಲವು, ಇದೇ ನನಗೆ ಎರಡನೆಯ ವರವು." ಈ ಪ್ರಕಾರ ಇಂದ್ರನು ಪ್ರಾರ್ಥಿಸಿದನಂತರ ಮಹಾಲಕ್ಷ್ಮಿಯು ಹೇಳುತ್ತಾಳೆ: "ಎಲೈ ಇಂದ್ರನೇ, ನಿನ್ನ ಇಷ್ಟಾನುಸಾರ ವರಗಳನ್ನು ಕೊಟ್ಟಿರುತ್ತೇನೆ! ಯಾವ ಮನುಷ್ಯನು ಸಾಯಂಪ್ರಾತಃ ಈ ಸ್ತೋತ್ರದಿಂದ ನನ್ನನ್ನು ಆರಾಧಿಸುವನೋ, ಅಂತಹವನಿಗೆ ನಾನು ಪರಾಙ್ಮುಖಳಾಗುವುದಿಲ್ಲವು." ಈ ಪ್ರಕಾರ ಶ್ರೀ ಮಹಾಲಕ್ಷ್ಮಿಯು, ದೇವರಾಜನಿಗೆ ಈ ಸ್ತೋತ್ರಮೂಲಕ ಆರಾಧಿಸಿದುದರಿಂದ ಸುಪ್ರೀತಳಾಗಿ ವರ ಗಳನ್ನು ಕೊಟ್ಟು, ಅಂತರ್ಧಾನಳಾದಳು. "ಎಲೈ ಮೈತ್ರೇಯನೇ, ಈ ಲಕ್ಷ್ಮಿಯು ಪೂರ್ವದಲ್ಲಿ ಭೃಗುವಂಶದಲ್ಲಿ ಹುಟ್ಟಿ ದೇವದಾನವ ಯತ್ನದಿಂದ ಅಮೃತಮಥನ ಕಾಲದಲ್ಲಿ ಸಮುದ್ರದಲ್ಲಿ ಹುಟ್ಟಿದಳು. ಜಗನ್ನಾಯಕನಾದ ಶ್ರೀಮನ್ನಾರಾಯಣನು ಯಾವ ಯಾವ ಕಾಲದಲ್ಲಿ ಯಾವ ಯಾವ ಅವತಾರವನ್ನು ಮಾಡುತ್ತಾನೋ, ಆಯಾ ಕಾಲದೊಳೆಲ್ಲಾ ಈ ಮಹಾಲಕ್ಷ್ಮಿಯೂ ಕೂಡ ತತ್ಸಹಾಯಿನಿಯಾಗಿ ಅವತಾರ ಮಾಡುತ್ತಾಳೆ. ಆ ಪರಮಾತ್ಮನು ಯಾವಾಗ ಸೂರ್ಯನಾಗುವನೋ ಆಗ ಲಕ್ಷ್ಮಿಯು ಕಮಲವಾಗುತ್ತಾಳೆ. ಶ್ರೀಮನ್ನಾರಾಯಣನು ಪರಶುರಾಮನಾದ ಕಾಲದಲ್ಲಿ ಇವಳು ಭೂಮಿಯಾಗುತ್ತಾಳೆ; ರಘುವಂಶದಲ್ಲಿ ರಾಮನಾಗಿ ಹುಟ್ಟಿದ ಕಾಲದಲ್ಲಿ ಇವಳು ಸೀತೆಯಾಗುವಳು; ಕೃಷ್ಣಾವತಾರ ಮಾಡಿದ ಕಾಲದಲ್ಲಿ ರುಕ್ಮಿಣಿಯಾಗುತ್ತಾಳೆ. ಇತರಾವತಾರಗಳಲ್ಲಿ ವಿಷ್ಣುವಿಗೆ ಅನಪಾಯಿನಿಯಾಗಿರು ವಳು. ಪರಮಾತ್ಮನು ದೇವತ್ವವನ್ನು ಹೊಂದಿದ ಕಾಲದಲ್ಲಿ ಇವಳೂ ದೇವತ್ವ ವನ್ನೂ, ಮನುಷ್ಯಾವತಾರದಲ್ಲಿ ಮನುಷ್ಯತ್ವವನ್ನೂ ಹೊಂದುತ್ತಾಳೆ. ಈ ಮಹಾ ಲಕ್ಷ್ಮಿಯು ವಿಷ್ಣುವಿನ ದೇಹಾನುಗುಣವಾಗಿ ಅವತಾರ ಮಾಡುತ್ತಾಳೆ. ಇಂತಹ ಮಹಾಭಾಗ್ಯಳಾದ ಶ್ರೀ ಮಹಾಲಕ್ಷ್ಮಿಯ ಸ್ತೋತ್ರವನ್ನು ಯಾರು ಹೇಳು ತ್ತಾರೋ, ಅವರ ಮೂರು ಕುಲದಲ್ಲಿಯೂ ಸಂಪತ್ತುಗಳು ಸ್ಥಿರವಾಗಿರುತ್ತವೆ. ಯಾವ ಮನುಷ್ಯನು ಈ ಮಹಾಲಕ್ಷ್ಮಿಯ ಕಥೆಯನ್ನು ಕೇಳುತ್ತಾನೋ, ಅವನ ಗೃಹದಲ್ಲಿರತಕ್ಕ ಅಮಂಗಳಗಳೆಲ್ಲವೂ ನಾಶವಾಗುತ್ತವೆ."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ
ಒಂಬತ್ತನೆಯ ಅಧ್ಯಾಯವು ಸಂಪೂರ್ಣವು.

ಹತ್ತನೆಯ ಅಧ್ಯಾಯವು

ಮೈತ್ರೇಯರು ಪುನಃ ಹೇಳುತ್ತಾರೆ: "ಎಲೈ ಪರಾಶರ ಬ್ರಹ್ಮರ್ಷಿಗಳೇ, ಈಗ ನೀವು ಹೇಳಿದ ಅನೇಕ ವಿಷಯಗಳನ್ನು ಕೇಳಿದಹಾಗಾಯಿತು. ಭೃಗುಸೃಷ್ಟ್ಯಾದಿಗಳನ್ನು ಮಾತ್ರ ಕೇಳಲಿಲ್ಲ; ಅದನ್ನು ಅಪ್ಪಣೆಕೊಡಿಸಬೇಕು" ಎಂದು ಕೇಳಿಕೊಂಡ ಕಾಲದಲ್ಲಿ ಪರಾಶರ ಭಗವಾನರು ಅಪ್ಪಣೆ ಕೊಡಿಸುತ್ತಾರೆ: "ಎಲೈ ಮೈತ್ರೇಯನೇ. ಭೃಗುಮಹರ್ಷಿಗೆ ಲಕ್ಷ್ಮಿಯು ಪುತ್ರಿಯಾಗಿ ಹುಟ್ಟಿದಳು; ಮತ್ತು ಧಾತಾ, ವಿಧಾತಾ ಎಂಬ ಇಬ್ಬರು ಗಂಡುಮಕ್ಕಳೂ ಹುಟ್ಟಿದರು. ಮೇರುವಿಗೆ ಆಯತಿ, ನಿಯತಿ ಎಂಬುದಾಗಿ ಇಬ್ಬರು ಹೆಣ್ಣುಮಕ್ಕಳು. ಆ ಇಬ್ಬರನ್ನೂ ಧಾತೃವಿಧಾತೃಗಳು ವಿವಾಹ ಮಾಡಿಕೊಂಡು, ಇವರಿಬ್ಬರಿಗೂ ಪ್ರಾಣ, ಮೃಕಂಡು ಎಂಬ ಇಬ್ಬರು ಗಂಡುಮಕ್ಕಳಾದರು. ಮೃಕಂಡುವಿಗೆ ಮಾರ್ಕಂಡೇಯನು ಹುಟ್ಟಿದನು. ಇವನಿಗೆ ವೇದಶಿರಾ ಎಂಬ ಮಗನು ಹುಟ್ಟಿದನು. ಪ್ರಾಣನಿಗೆ ದ್ಯುತಿಮಾನ್ ಎಂಬ ಮಗನೂ, ಇವನಿಗೆ ಅಜಾವಾನ್ ಎಂಬ ಮಗನೂ, ಈ ಪ್ರಕಾರ ಭಾರ್ಗವವಂಶವು ವೃದ್ಧಿಯಾಯಿತು. ಮರೀಚಿಬ್ರಹ್ಮನಿಗೆ ಸಂಭೂತಿಯ ಪತ್ನಿಯಲ್ಲಿ ಪೌರ್ಣಮಾಸ ಎಂಬ ಮಗನು ಹುಟ್ಟಿದನು. ಇವನಿಗೆ ವಿರಜಾಃ, ಪರ್ವತಃ ಎಂಬುದಾಗಿ ಇಬ್ಬರು ಪುತ್ರರಾದರು. ಮರೀಚಿಬ್ರಹ್ಮನಿಗೆ ಕಶ್ಯಪನೆಂಬ ಮಗನಾದನು. ಇವನ ವೃತ್ತಾಂತವು ಮುಂದೆ ಹೇಳಲ್ಪಡುತ್ತದೆ. ಆಂಗೀರಸನ ಪತ್ನಿಯಾದ ಸ್ಮೃತಿಯು ಸಿನೀವಾಲೀ, ಕುಹುಃ, ರಾಕಾ, ಅನುಮತಿ ಎಂಬುದಾಗಿ ನಾಲ್ಕು ಜನ ಕನ್ನಿಕೆಯರನ್ನು ಪಡೆದಳು. ಅತ್ರಿಮಹರ್ಷಿಗೆ ಅನಸೂಯೆಯಲ್ಲಿ ಸೋಮ, ದುರ್ವಾಸ, ದತ್ತಾತ್ರೇಯ ಎಂಬುದಾಗಿ ಮೂರು ಜನ ಪುತ್ರರು ಹುಟ್ಟಿದರು. ಪುಲಸ್ತ್ಯಬ್ರಹ್ಮನಿಗೆ ಪ್ರೀತಿ ಎಂಬ ಪತ್ನಿಯಲ್ಲಿ ಒಬ್ಬ ಮಗನು ಹುಟ್ಟಿದನು. ಇವನೇ ಪೂರ್ವದಲ್ಲಿ ಅಗಸ್ತ್ಯನಾಗಿದ್ದವನು. ಪುಲಹಬ್ರಹ್ಮನಿಗೆ ಕ್ಷಮಾ ಎಂಬ ಪತ್ನಿಯಲ್ಲಿ ಕರ್ದಮ, ಅರ್ವರೀವ್ವಾ, ಸಹಿಷ್ಣು ಎಂಬುದಾಗಿ ಮೂರು ಮಂದಿ ಪುತ್ರರು ಹುಟ್ಟಿದರು. ಕ್ರತುಬ್ರಹ್ಮನಿಗೆ ಸನ್ನತಿಯೆಂಬ ಪತ್ನಿಯಲ್ಲಿ ವಾಲಖಿಲ್ಯರೆಂಬ ಅರವತ್ತುಸಾವಿರ ಋಷಿಗಳು ಹುಟ್ಟಿದರು. ಈ ಮಹರ್ಷಿಗಳು ಊರ್ಧ್ವರೇತಸ್ಕರಾಗಿಯೂ, ಅಂಗುಷ್ಠಪರ್ವಮಾತ್ರದವರಾಗಿಯೂ, ಮಹಾತೇಜಸ್ವಿಗಳಾಗಿಯೂ ಇದ್ದರು. ವಸಿಷ್ಠರಿಗೆ ಊರ್ಜಾ ಎಂಬ ಪತ್ನಿಯಲ್ಲಿ ರಜಃ, ಗೋತ್ರಃ, ಊರ್ಧ್ವಬಾಹುಃ, ಸವನ, ಅನಘ, ಸುತಪಾಃ, ಶುಕ್ರಯೆಂಬುದಾಗಿ ಸಪ್ತರ್ಷಿಗಳು ಹುಟ್ಟಿದರು. ಅಗ್ನಿಯ ಪತ್ನಿಯಾದ ಸ್ವಾಹಾದೇವಿಯಲ್ಲಿ ಪಾವಕ, ಪವಮಾನ, ಶುಚಿ ಎಂಬುದಾಗಿ ಮೂರು ಜನ ಗಂಡುಮಕ್ಕಳು ಹುಟ್ಟಿದರು. ಈ ಮೂರು ಜನರಿಗೂ ಒಬ್ಬೊಬ್ಬರಿಗೆ ಹದಿನೈದು ಪ್ರಕಾರ ನಲವತ್ತೈದು ಜನ

ಪುತ್ರರು ಹುಟ್ಟಿದರು. ಅಗ್ನಿಯೊಬ್ಬ, ಇವನ ಮೂರು ಜನ ಮಕ್ಕಳು, ಇವರ ಮಕ್ಕಳು ನಲವತ್ತೈದು. ಒಟ್ಟು ನಲವತ್ತೊಂಬತ್ತು ಮಂದಿಯೂ ಅಗ್ನಿಯೆಂಬುದಾಗಿಯೇ ಹೇಳಿಸಿಕೊಳ್ಳುತ್ತಾರೆ. ಬ್ರಹ್ಮನಿಂದ ಸೃಷ್ಟರಾದ ಅಗ್ನಿಷ್ವಾತ್ತಾಃ, ಬರ್ಹಿಷದಃ ಎಂಬ ಪಿತೃದೇವತೆಗಳು ಹುಟ್ಟಿದರು. ಈ ಪಿತೃದೇವತೆಗಳಿಗೆ ಸ್ವಧಾ ಎಂಬ ಪತ್ನಿಯಲ್ಲಿ ಮೇನಾ, ವೈತರಣಿ ಎಂಬುದಾಗಿ ಇಬ್ಬರು ಕನ್ನಿಕೆಯರಾದರು. ಇವರು ವಿವಾಹಿತರಾಗದೆ ಸದಾ ಯೋಗಿಗಳಾಗಿಯೇ ಇದ್ದರು. ಈ ಪ್ರಕಾರ ದಕ್ಷಬ್ರಹ್ಮನ ಕನ್ನಿಕೆಯರ ಸಂತತಿಯನ್ನು ಹೇಳಿದಹಾಗಾಯಿತು. ಈ ಸಂತತಿಗಳನ್ನು ಕೇಳಿದವರಿಗೆ ಪುತ್ರಪ್ರಾಪ್ತ್ಯಾದಿ ಸಂಪತ್ತುಗಳುಂಟಾಗುತ್ತವೆ. ರುದ್ರದೇವನ ಪತ್ನಿಯಾದ ಸತ್ಯಾಯೆಂಬ ದಕ್ಷಬ್ರಹ್ಮನ ಮಗಳು, ಅಪ್ರೌಢಳಾದ ಕಾಲದಲ್ಲಿ ದಕ್ಷಬ್ರಹ್ಮನ ಕೋಪದಿಂದ ಅಗ್ನಿಪ್ರವೇಶ ಮಾಡಿದುದರಿಂದ ಇವಳಿಗೆ ಮಾತ್ರ ಸಂತತಿಯಾಗಲಿಲ್ಲ.

ಇಲ್ಲಿಗೆ ಶ್ರೀ ವಿಷ್ಣುಪುರಾಣದ ಮೊದಲನೆಯ ಅಂಶದಲ್ಲಿ
ಹತ್ತನೆಯ ಅಧ್ಯಾಯವು ಸಮಾಪ್ತಃ

ಹನ್ನೊಂದನೆಯ ಅಧ್ಯಾಯವು

"ಎಲೈ ಮೈತ್ರೇಯನೇ, ಸ್ವಾಯಂಭುವ ಮನುವಿಗೆ ಪ್ರಿಯವ್ರತ, ಉತ್ತಾನಪಾದ ಎಂಬ ಇಬ್ಬರು ಮಕ್ಕಳು ಇದ್ದರು ಎಂಬುದಾಗಿ ಹಿಂದೆಯೇ ಹೇಳಿದೆನು. ಉತ್ತಾನಪಾದನಿಗೆ ಸುನೀತಿ, ಸುರುಚಿಯೆಂಬುದಾಗಿ ಇಬ್ಬರು ಪತ್ನಿಯರು. ಆ ರಾಜನಿಗೆ ಸುರುಚಿಯಲ್ಲಿಯೂ ಆಕೆಯ ಪುತ್ರನಲ್ಲಿಯೂ ವಿಶೇಷ ಪ್ರೀತಿಯಿತ್ತು. ಸುನೀತಿಯೆಂಬುವವಳಿಗೆ ಧ್ರುವನೆಂಬ ಮಗನಿದ್ದನು. ಒಂದು ದಿನ ಆ ಉತ್ತಾನಪಾದರಾಜನು ಸುರುಚಿಯ ಪುತ್ರನಿಂದ ಕೂಡಿ ಸಿಂಹಾಸನದಲ್ಲಿ ಕೂತಿರುವ ಕಾಲದಲ್ಲಿ, ಧ್ರುವನು ತನ್ನ ತಮ್ಮನ ಹಾಗೆ ತಾನೂ ತಂದೆಯ ತೊಡೆಯಮೇಲೆ ಕೂಡಬೇಕೆಂಬ ಆಶೆಯಿಂದ, ತಂದೆಯ ಸಮೀಪಕ್ಕೆ ಬಂದ ಕಾಲದಲ್ಲಿ, ಸುರುಚಿಯು ಸಪತ್ನೀತನಯನಾಗಿ, ತಂದೆಯ ತೊಡೆಯ ಮೇಲೆ ಕೂಡಲು ಅರ್ಹತೆ ಇರುವ ಧ್ರುವನನ್ನು ಕುರಿತು ಹೇಳುತ್ತಾಳೆ: "ಎಲೈ ಮಗುವಾದ ಧ್ರುವನೇ, ನಿನ್ನ ಅಭಿಲಾಷೆಯು ವ್ಯರ್ಥವಾದುದು; ನೀನು ಅನ್ಯಸ್ತ್ರೀಗರ್ಭದಲ್ಲಿ ಹುಟ್ಟಿದವನು, ಇಂತಹ ನೀನು, ಉತ್ತಮೋತ್ತಮವಾಗಿಯೂ, ನಿನ್ನಿಂದ ಪಡೆಯುವುದಕ್ಕೆ ಅಸಾಧ್ಯವಾಗಿಯೂ, ಅನೇಕ ಸಾಮಂತರಾಜರುಗಳಿಂದ ನಮಸ್ಕಾರ ಹೊಂದತಕ್ಕ

ದುದಾಗಿಯೂ, ಇರುವ ಈ ಸಿಂಹಾಸನವನ್ನು ಹೆತ್ತುವದಕ್ಕೆ ಅರ್ಹನಲ್ಲ. ನೀನು ಈ ರಾಜನಿಗೆ ಮಗನಾದರೂ ನನ್ನ ಗರ್ಭದಲ್ಲಿ ಹುಟ್ಟಲಿಲ್ಲ; ಈ ಸಿಂಹಾಸನವನ್ನು ಹೆತ್ತುವ ಮನೋರಥವು ನನ್ನ ಮಗನಿಗೆ ಯೋಗ್ಯವಾದುದೇ ಹೊರ್ತು ನಿನಗೆ ಯೋಗ್ಯವಲ್ಲವು. ಆದುದರಿಂದ ನಿನ್ನ ಆಶೆಯು ನಿರರ್ಥಕವಾದುದು" ಎಂಬುದಾಗಿ, ಕ್ರೂರವಾದ ಮಾತನ್ನು ಹೇಳಲು, ಆ ಧ್ರುವನು ತಂದೆಯನ್ನು ಬಿಟ್ಟು ಸಪತ್ನೀ ವಾಕ್ಯದಿಂದ ಕುಪಿತನಾಗಿ, ತನ್ನ ತಾಯಿಯಾದ ಸುನೀತಿಯ ಮನೆಗೆ ಹೋದನು. ಆಗ ಸುನೀತಿಯು ಮಗನನ್ನು ತನ್ನ ತೊಡೆಯ ಮೇಲೆ ಕೂಡಿಸಿಕೊಂಡು, "ಎಲೈ ಮಗನೇ, ನೀನು ಏತಕ್ಕೆ ಕುಪಿತನಾಗಿರುವೆ, ಯಾರಾದರೂ ನಿನಗೆ ಅಪರಾಧವನ್ನು ಮಾಡಿದರೆ ಅಥವಾ ಅವಮಾನಪಡಿಸಿದರೆ?" ಎಂಬುದಾಗಿ ತಾಯಿಯು ಕೇಳಿದುದಕ್ಕೆ ಧ್ರುವನು ತನ್ನ ತಾಯಿಗೆ, ತಂದೆಯ ಸಾನ್ನಿಧ್ಯದಲ್ಲಿ ಆ ಸುರುಚಿಯು ಹೇಳಿದ ಮಾತುಗಳನ್ನೆಲ್ಲಾ ಹೇಳಿ, ನಿಟ್ಟುಸಿರನ್ನು ಬಿಡುತ್ತಿದ್ದನು. ಹೀಗಿರುವ ಧ್ರುವನನ್ನು ನೋಡಿ ಆಕೆಯು, "ಎಲೈ ಧ್ರುವನೇ, ಆ ಸುರುಚಿ ಗರ್ವದಿಂದ ಹೇಳಿದ ಮಾತು ಸತ್ಯವಾದುದು. ನೀನು ಅಲ್ಪಭಾಗ್ಯವುಳ್ಳವನು, ಪುಣ್ಯವಂತರಿಗೆ ಅಂತಹ ಸಿಂಹಾಸನವು ಲಭಿಸತಕ್ಕದ್ದು, ಆದುದರಿಂದ ನೀನು ಸಮಾಧಾನನಾಗು, ನಿನ್ನ ಕೋಪವು ಹೋಗುವಹಾಗೆ ಸಮಾಧಾನಮಾಡತಕ್ಕವರು ಯಾರೂ ಇಲ್ಲ, ನಾವು ಅಂತಹ ಪುಣ್ಯವನ್ನು ಮಾಡಲಿಲ್ಲ. ಆದುದರಿಂದ ವೃಥಾ ಕೋಪವೇತಕ್ಕೆ? ಎಲೈ ಮಗುವೇ, ಲೋಕದಲ್ಲಿ ಪುಣ್ಯವಂತರಿಗೆ ಈ ರಾಜಾಸನ, ಛತ್ರ, ಚಾಮರ, ಕುದುರೆ, ಆನೆ ಇತ್ಯಾದಿ ಸೌಭಾಗ್ಯವೆಲ್ಲವೂ ಉಂಟಾಗುತ್ತದೆ. ನಮ್ಮಂತಹ ಅಲ್ಪ ಪುಣ್ಯದವರಿಗೆ ಸಿಕ್ಕುವದಿಲ್ಲ. ಆ ಸುರುಚಿಯು ಜನ್ಮಾಂತರದಲ್ಲಿ ಬಹಳವಾದ ಪುಣ್ಯವನ್ನುಮಾಡಿದುದರಿಂದ ಅವಳಲ್ಲಿ ನಿಮ್ಮ ತಂದೆಯು ಸುರುಚಿಯಾಗಿದ್ದಾನೆ. ನಾನು ಆ ರೀತಿಯಾದ ಪುಣ್ಯವನ್ನು ಮಾಡಿದವಳಲ್ಲ; ಎಲೈ ಮಗನೇ, ಆ ಸುರುಚಿಯ ವಾಕ್ಯದಿಂದ ನಿನಗೆ ದುಃಖವುಂಟಾಗಿದ್ದರೆ, ನೀನೂ ಸಿಂಹಾಸನಾಧಿಪತ್ಯವನ್ನು ಹೊಂದತಕ್ಕ ಪ್ರಯತ್ನವನ್ನು ಮಾಡು" ಎಂದು ಸುನೀತಿಯು ಹೇಳಿದ ಮಾತನ್ನು ಕೇಳಿ, ಧ್ರುವನು ಹೇಳುತ್ತಾನೆ: "ಎಲೈ ತಾಯಿಯೇ, ಈಗ ನೀನು ಹೇಳಿದ ಮಾತಿನಂತೆ ಉನ್ನತಸ್ಥಾನವನ್ನು ಹೊಂದತಕ್ಕ ಪ್ರಯತ್ನವನ್ನು ಮಾಡುತ್ತೇನೆ, ಅದನ್ನು ಮಾಡಿದ ಹೊರ್ತು ನನಗೆ ಸಮಾಧಾನವಾಗಲಾರದು. ಉತ್ತಮೋತ್ತಮವಾಗಿಯೂ, ಲೋಕಗಳಿಂದ ಪೂಜಿಸಲ್ಪಡುವದಾಗಿಯೂ ಇರುವ ಸ್ಥಾನವನ್ನು ಪಡೆಯುತ್ತೇನೆ. ರಾಜನಿಗೆ ಇಷ್ಟಳಾದ ಸುರುಚಿಯ ಉದರದಲ್ಲಿ ನಾನು ಹುಟ್ಟಲಿಲ್ಲ. ವೃದ್ಧಳಾದ ನಿನ್ನ ಗರ್ಭದಲ್ಲಿ ಜನಿಸಿದ ನನ್ನ ಪ್ರಭಾವವನ್ನು ನೋಡು, ನನ್ನ ತಂದೆಯಿಂದ ಕೊಡಲ್ಪಟ್ಟ ಸಿಂಹಾಸನವನ್ನು ನನ್ನ ತಮ್ಮನು

ಅಂದರೆ ಸುರುಚಿಯ ಮಗನೇ ಹೊಂದಲಿ. ಮತ್ತೊಬ್ಬರಿಂದ ಕೊಡಲಾಗದ, ನನ್ನ ಪಿತಾಮಹನೂ ಹೊಂದದ ಸ್ಥಾನವನ್ನು, ನನ್ನ ಕಾರ್ಯಸಾಮರ್ಥ್ಯದಿಂದಲೇ ನಾನೇ ಹೊಂದುತ್ತೇನೆ" ಎಂದು ತಾಯಿಯಲ್ಲಿ ಹೇಳಿ, ತಾಯಿಯಿಂದ ಅನುಗ್ರಹ ವನ್ನು ಹೊಂದಿ, ಪ್ರಯಾಣ ಮಾಡಿ ಉದ್ಯಾನವನದ ಸಮೀಪಕ್ಕೆ ಬಂದನು. ಇವನು ಬರುವ ವೇಳೆಗೆ ಸರಿಯಾಗಿ, ಸಪ್ತರ್ಷಿಗಳು ಇವನ ಅನುಗ್ರಹಾರ್ಥವಾಗಿ ಉದ್ಯಾನವನಕ್ಕೆ ಬಂದು ಕೃಷ್ಣಾಜಿನದ ಮೇಲೆ ಕೂತಿದ್ದರು. ಆಗ, ಧ್ರುವನು ಅಭಿವಾದನಪೂರ್ವಕವಾಗಿ ಮಹರ್ಷಿಗಳಿಗೆ ನಮಸ್ಕಾರಮಾಡಿ, ಅತ್ಯಂತ ವಿನಯ ದಿಂದ ಮಹರ್ಷಿಗಳನ್ನು ಕುರಿತು, ಪ್ರಾರ್ಥಿಸುತ್ತಾನೆ: "ಹೇ ಮಹರ್ಷಿಗಳಿರಾ, ನಾನು ಉತ್ತಾನಪಾದರಾಜನಿಂದ ಸುನೀತಿಯಲ್ಲಿ ಹುಟ್ಟಿದ ಮಗನು; ನನ್ನ ಹೆಸರು ಧ್ರುವನೆಂದು ಕರೆಯುತ್ತಾರೆ. ನಾನು ಬಹಳ ಖಿನ್ನತೆಯಿಂದ ನಿಮ್ಮ ಸಮೀಪಕ್ಕೆ ಬಂದೆನೆಂದು" ಧ್ರುವನು ಹೇಳಿದುದಕ್ಕೆ ಮಹರ್ಷಿಗಳು ಹೇಳುತ್ತಾರೆ: "ಎಲೈ ಧ್ರುವನೇ, ನೀನು ಇನ್ನೂ ಐದು ವರ್ಷದ ಹುಡುಗನು, ನಿನಗೆ ಖಿನ್ನತೆ ಯುಂಟಾಗಲು ಕಾರಣವೇನು, ನೀನು ಪ್ರಾಪ್ತವಯಸ್ಕನಾಗದೇ ಇರತಕ್ಕ ಕಾಲ ದಲ್ಲಿ ಚಿಂತೆ ಎಂಬುವದು ಇಲ್ಲ; ನಿನಗೆ ಇಷ್ಟವಾದ ಪದಾರ್ಥಗಳು ಲಭ್ಯವಾಗದೇ ಇರಲೂ ಕಾರಣವೂ ಇಲ್ಲ; ನಿನ್ನ ಶರೀರದಲ್ಲಿ ರೋಗಾದಿಗಳೂ ಸಹ ಇಲ್ಲ; ಹೀಗಿದ್ದಾಗ್ಯೂ ನಿನ್ನ ಖಿನ್ನತೆಗೆ ಕಾರಣವೇನು?" ಎಂಬುದಾಗಿ ಪ್ರಶ್ನೆಮಾಡಿದ ಕಾಲದಲ್ಲಿ, ಧ್ರುವನು ತನ್ನ ಸಪತ್ನೀ ತಾಯಿಯು ಆಡಿದ ಮಾತುಗಳನ್ನು ಹೇಳಿ ದನು. ಆಗ ಮಹರ್ಷಿಗಳು ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಳ್ಳುತ್ತಾರೆ: 'ಆಹಾ! ಲೋಕದಲ್ಲಿ ಕ್ಷತ್ರಿಯ ತೇಜಸ್ಸು ಇನ್ನು ಎಷ್ಟರಮಟ್ಟಿಗೆ ಇರಬಹುದು, ಐದು ವರ್ಷದ ಹುಡುಗನಾದ ಇವನು, ಸಪತ್ನೀ ತಾಯಿಯಿಂದ ಹೇಳಲ್ಪಟ್ಟ ಮಾತಿಗೆ ಇಷ್ಟು ಉದ್ವೇಗವುಳ್ಳವನಾಗಿರುವವನಲ್ಲ.' "ಎಲೈ ಕ್ಷತ್ರಿಯಸಾದ ಧ್ರುವನೇ, ಈ ನಿನ್ನ ಉದ್ವೇಗಕ್ಕೆ ಏನು ಮಾಡಬೇಕೆಂದಿದ್ದೀಯೇ? ಅದನ್ನು ನಮಗೆ ಹೇಳು, ನಮ್ಮಿಂದ ನಿನಗೇನಾದರೂ ಸಹಾಯವಾಗಬೇಕಾದರೆ ಅದನ್ನು ಮಾಡುತ್ತೇವೆ" ಎಂದ ಮಹರ್ಷಿಗಳ ವಾಕ್ಯವನ್ನು ಆಲಿಸಿ ಧ್ರುವನು ಹೇಳು ತ್ತಾನೆ: "ಓ ಮಹರ್ಷಿಗಳಿರಾ, ನಾನು ದ್ರವ್ಯವನ್ನು ಅಪೇಕ್ಷಿಸುವುದಿಲ್ಲ, ರಾಜ್ಯ ವನ್ನೂ ಅಪೇಕ್ಷಿಸತಕ್ಕವನಲ್ಲ. ಮತ್ತೇನೆಂದರೆ: ಪೂರ್ವದಿಂದಲೂ, ಯಾರೂ ಅನುಭವಿಸದೇ ಇರತಕ್ಕ ಸ್ಥಾನವನ್ನು ಮಾತ್ರ ಅಪೇಕ್ಷಿಸುತ್ತೇನೆ. ಆ ಸ್ಥಾನವನ್ನು ಹೊಂದುವದಕ್ಕೆ ಏನುಮಾಡಬೇಕೆಂಬುವದನ್ನು ನೀವು ನನಗೆ ಆಜ್ಞಾಪಿಸಬೇಕು, ಎಲ್ಲರಿಗಿಂತಲೂ ಮೊದಲನೇದಾದ ಸ್ಥಾನವನ್ನು ಹೊಂದಬೇಕು. ಆ ರೀತಿ ನೀವು ಕೃಪೆಮಾಡಬೇಕು" ಎಂಬುದಾಗಿ ಕೇಳಿಕೊಂಡುದುದಕ್ಕೆ ಮರೀಚಿಬ್ರಹ್ಮರ್ಷಿಯು

ಹೇಳುತ್ತಾರೆ: "ಎಲೈ ಧ್ರುವನೇ, ಗೋವಿಂದನಾದ ಶ್ರೀಮನ್ನಾರಾಯಣನನ್ನು ಯಾರು ಆರಾಧಿಸುವದಿಲ್ಲವೋ ಅವರಿಗೆ ಉನ್ನತವಾದ ಸ್ಥಾನವು ಸಿಕ್ಕುವದಿಲ್ಲ; ಆದುದರಿಂದ ನೀನು ಭಗವಂತನಾದ ಶ್ರೀಮನ್ನಾರಾಯಣನನ್ನು ಆರಾಧಿಸು" ಎಂದು ಹೇಳಿದನಂತರ, ಆತ್ರಿಮಹರ್ಷಿಯು ಹೇಳುತ್ತಾರೆ: "ಎಲೈ ಧ್ರುವನೇ, ಪರಮಪುರುಷನಾದ ಶ್ರೀಮನ್ನಾರಾಯಣನು ಯಾವ ಮನುಷ್ಯನಿಂದ ಸಂತೋಷವನ್ನು ಹೊಂದುತ್ತಾನೋ, ಅಂತಹವನಿಗೆಅಕ್ಷಯವಾದ ಸ್ಥಾನವು ಸಿಕ್ಕುವದೆಂಬುದಾಗಿ ನನ್ನ ಅಭಿಪ್ರಾಯವು" ಎಂದು ಹೇಳಿದನಂತರ ಆಂಗೀರಸ ಮಹರ್ಷಿಯು ಹೇಳುತ್ತಾರೆ: "ಈ ಸಮಸ್ತವಾದ ಜಗತ್ತೂ ಯಾವ ಪರಮಾತ್ಮನಲ್ಲಿ ಲೀನವಾಗುತ್ತದೋ, ಆ ಶ್ರೀಮನ್ನಾರಾಯಣನನ್ನು ಪೂಜಿಸಿ ಉತ್ಕೃಷ್ಟವಾದ ಸ್ಥಾನವನ್ನು ಹೊಂದು" ಎಂದು ಹೇಳಿದನಂತರ, ಪುಲಹಋಷಿಯು ಹೇಳುತ್ತಾರೆ: "ಪರಬ್ರಹ್ಮನಾಗಿಯೂ, ಪರಮತೇಜೋಮಯನಾಗಿಯೂ ಇರುವ ಶ್ರೀಮನ್ನಾರಾಯಣನನ್ನು ಆರಾಧಿಸಿ ಅತಿದುರ್ಲಭವಾದ ಸ್ಥಾನವನ್ನು ಹೊಂದು" ಎಂದು ಹೇಳಿದನಂತರ ಕ್ರತು ಮಹರ್ಷಿಯು ನಿರೂಪಿಸುತ್ತಾರೆ: "ಯಜ್ಞಪುರುಷನಾಗಿಯೂ, ಯಜ್ಞರೂಪನಾಗಿಯೂ, ಯಜ್ಞಪತಿಯಾಗಿಯೂ ಇರುವ ಜನಾರ್ದನನು ಸಂತುಷ್ಟನಾದರೆ ಉತ್ಕೃಷ್ಟವಾದ ಸ್ಥಾನವನ್ನು ಕೊಡುತ್ತಾನೆ" ಎಂದು ಅನುಗ್ರಹಿಸಿದನಂತರ ಪುಲಸ್ತ್ಯಮಹರ್ಷಿಯು ಹೇಳುತ್ತಾರೆ: "ಇಂದ್ರನು ಯಾವ ಜಗತ್ಪತಿಯಾದ ಶ್ರೀಮನ್ನಾರಾಯಣನನ್ನು ಆರಾಧಿಸಿ, ಇಂದ್ರಸ್ಥಾನವನ್ನು ಹೊಂದಿದನೋ ಆ ಪರಮಾತ್ಮನನ್ನು ಆರಾಧಿಸು" ಎಂದು ಹೇಳಿದನಂತರ, ಸಪ್ತಋಷಿಗಳಲ್ಲಿ ಹಿರಿಯವನಾದ ವಸಿಷ್ಠನು, "ಎಲೈ ಧ್ರುವನೇ, ನೀನು ಸರ್ವಸ್ವಾಮಿಯಾದ ಶ್ರೀಮನ್ನಾರಾಯಣನನ್ನು ಪೂಜಿಸಿದರೆ ತ್ರೈಲೋಕ್ಯಾಂತರ್ಗತವಾದ ಉತ್ತಮೋತ್ತಮವಾದ ಸ್ಥಾನವನ್ನು ಹೊಂದುವೆ" ಎಂದು ಆಜ್ಞಾಪಿಸಿದನಂತರ, ಆ ಧ್ರುವನಿಗೆ ಪರಮಾನಂದವುಂಟಾಗಿ ಆ ಮಹರ್ಷಿಗಳನ್ನು ಕುರಿತು, "ಎಲೈ ಮಹರ್ಷಿಗಳಿರಾ, ನಿಮ್ಮ ಅಪ್ಪಣೆಯ ಪ್ರಕಾರ ಶ್ರೀಮನ್ನಾರಾಯಣನನ್ನು ಆರಾಧಿಸಬೇಕಾದರೆ, ನಾನು ಯಾವುದನ್ನು ಜಪಿಸಬೇಕು? ಯಾವುದನ್ನು ಜಪಿಸಿದರೆ ಶ್ರೀಮನ್ನಾರಾಯಣನ ಅನುಗ್ರಹವು ಉಂಟಾಗುತ್ತದೆಯೋ, ಅದನ್ನು ನೀವು ಕೃಪೆಯಿಂದ ನನಗೆ ಅನುಗ್ರಹಿಸಿ" ಎಂದು ಪ್ರಾರ್ಥಿಸಿದುದಕ್ಕೆ ಋಷಿಗಳು ಧ್ರುವನನ್ನು ಕುರಿತು "ಎಲೈ ರಾಜಪುತ್ರನೇ, ಮನುಷ್ಯನು ಮೊದಲು ಬಾಹ್ಯವಾದ ಪದಾರ್ಥಗಳಲ್ಲಿ ಮನಸ್ಸನ್ನು ಬಿಟ್ಟು, ಪರಮಾತ್ಮನಲ್ಲಿ ನಿಶ್ಚಲವಾದ ಮನಸ್ಸನ್ನಿಟ್ಟು ಏಕಾಗ್ರಚಿತ್ತನಾಗಿ ಆ ಪರಬ್ರಹ್ಮನನ್ನೇ ಧ್ಯಾನಮಾಡಬೇಕು. ಹಿರಣ್ಯಗರ್ಭನಾಗಿಯೂ, ಪರಮಪುರುಷನಾಗಿಯೂ, ವ್ಯಕ್ತಾವ್ಯಕ್ತರೂಪ

ನಾಗಿಯೂ, ಶುದ್ಧಜ್ಞಾನರೂಪನಾಗಿಯೂ ಇರುವ ಶ್ರೀವಾಸುದೇವನನ್ನು ಜಪಿಸಿ ಇಷ್ಟಾರ್ಥವನ್ನು ಹೊಂದು; ನಿನ್ನ ಪಿತಾಮಹನಾದ ಸ್ವಾಯಂಭುವ ಮನುವೂ ಕೂಡ ದ್ವಾದಶಾಕ್ಷರೀ ಎಂಬ ವಾಸುದೇವಮಂತ್ರವನ್ನು ಜಪಿಸಿ, ಶ್ರೀಮನ್ನಾರಾಯಣನನ್ನು ಸಂತೋಷಪಡಿಸಿ ಇಷ್ಟಾರ್ಥವನ್ನು ಹೊಂದಿದನು. ನೀನೂ, ಅದೇ ಪ್ರಕಾರ ವಾಸುದೇವಮಂತ್ರವನ್ನು ಜಪಿಸಿ ಇಷ್ಟಾರ್ಥವನ್ನು ಪಡಿ" ಎಂಬುದಾಗಿ ಧ್ರುವನಿಗೆ ಮಂತ್ರೋಪದೇಶವನ್ನು ಮಾಡಿದರು.

ಇಲ್ಲಿಗೆ ಶ್ರೀ ವಿಷ್ಣುಪುರಾಣ ಪ್ರಥಮಾಂಶದಲ್ಲಿ
ಹನ್ನೊಂದನೆಯ ಅಧ್ಯಾಯವು ಸಮಾಪ್ತಃ

ಹನ್ನೆರಡನೆಯ ಅಧ್ಯಾಯವು

ಅನಂತರ ಧ್ರುವನು ಮಹರ್ಷಿಗಳಿಗೆ ನಮಸ್ಕಾರಮಾಡಿ ತಾನು ಕೃತಕೃತ್ಯನಾದೆನೆಂಬುದಾಗಿ ಹರ್ಷದಿಂದ ಉದ್ಯಾನವನದಿಂದ ಹೊರಟು ಯಮುನಾತೀರದಲ್ಲಿರತಕ್ಕ ಮಧುವನಕ್ಕೆ ಪ್ರಯಾಣಮಾಡಿದನು. ಆ ಮಧುವನವು ಮಧುವೆಂಬ ರಾಕ್ಷಸನನ್ನು ಶ್ರೀಮನ್ನಾರಾಯಣನು ಸಂಹಾರಮಾಡಿದುದರಿಂದ ಆ ಸ್ಥಳವು ಮಹಾಪುಣ್ಯಸ್ಥಳವೆನಿಸಿತೆಂಬುದಾಗಿ ಹೇಳಿದುದರಿಂದ ಆ ಸ್ಥಳದಲ್ಲಿ ತಪಸ್ಸನ್ನು ಮಾಡಲುಪಕ್ರಮಿಸಿದನು. ಮರೀಚಿಯೇ ಮೊದಲಾದ ಸಪ್ತರ್ಷಿಗಳು ನಿಯಮಿಸಿದ ಪ್ರಕಾರ ಬಾಹ್ಯಾಸನದಲ್ಲಿ ಜಿತಬುದ್ಧಿಯುಳ್ಳವನಾಗಿ, ತನ್ನ ದೇಹದಲ್ಲಿ ಭಗವಂತನು ವಾಸವಾಗಿದ್ದಾನೆಂಬುದಾಗಿಯೂ, ತಾನು ಭಗವದಧೀನನಾದವನೆಂಬುದಾಗಿಯೂ ನಂಬಿದವನಾಗಿ, ಅನ್ಯವಸ್ತುವಿನಲ್ಲಿ ಮನಸ್ಸನ್ನಿಡದೆ, ಭಗವಂತನಲ್ಲೇ ಸ್ಥಿರಚಿತ್ತನಾಗಿ ತಪಸ್ಸನ್ನು ಮಾಡುತ್ತಿದ್ದನು. ಈ ಧ್ರುವನು ಒಂದೇ ಕಾಲಿನಿಂದ ನಿಂತು ಶ್ರೀ ವಾಸುದೇವನನ್ನು ಧ್ಯಾನಿಸುತ್ತಿರುವಾಗ, ಇವನ ಭಾರವನ್ನು ಸಹಿಸಲಾರದೆ ಭೂದೇವಿಯು ಅರ್ಧಭಾಗ ಬಗ್ಗಿದವಳಾದಳು. ಧ್ರುವನು ಪಾದಾಂಗುಷ್ಠದಲ್ಲಿ ನಿಂತು ಧ್ಯಾನಮಾಡತಕ್ಕ ಕಾಲದಲ್ಲಿ ಪರ್ವತಗಳಿಂದಲೂ, ವನಗಳಿಂದಲೂ, ಸಮುದ್ರಗಳಿಂದಲೂ ಕೂಡಿದ ಭೂಮಿಯು ಅಲ್ಲಾಡಿತು. ಈ ಭೂಮಿಯು ಅಲ್ಲಾಡುವಿಕೆಯಿಂದ ಸಕಲ ದೇವತೆಗಳೂ ಕ್ಷೋಭೆಯನ್ನು ಹೊಂದಿದರು. ಯಾಮಾಯೆಂಬ ದೇವತೆಗಳು, ಕೂಶ್ಮಾಂಡಾಯೆಂಬ ದೇವತೆಗಳು ಸಹ, ಇಂದ್ರನಿಂದ ಕೂಡಿದವರಾಗಿ, ಧ್ರುವನ ತಪೋಭಂಗಕ್ಕೆ ಉಪಕ್ರಮಿಸಿದರು. ಈ ಧ್ರುವನ ತಾಯಿಯಾದ ಸುನೀತಿಯ ವೇಷದಿಂದ, ದೇವತೆಗಳು ಹೇಳುತ್ತಾರೆ:

"ಅಯ್ಯಾ ಮಗನೇ, ಈ ರೀತಿ ಶರೀರವನ್ನು ಶೋಷಣೆಮಾಡುವದರಿಂದೇನೂ ಪ್ರಯೋಜನವಿಲ್ಲ. ನಾನು ಸಪತ್ನಿಯ ಬಂಧನದಲ್ಲಿರತಕ್ಕವಳು, ಈಗ ನೀನು ಮನೋರಥವೆಂಬ ಬಂಧನದಲ್ಲಿರುವೆ; ದೀನಳಾಗಿಯೂ, ಅನಾಥಳಾಗಿಯೂ, ಒಬ್ಬಳೇ ಆಗಿಯೂ, ಸಪತ್ನೀವಾಕ್ಯದಿಂದ ಗತಿಯಿಲ್ಲದವಳಾಗಿಯೂ ಇರುವ ನನಗೆ ನೀನೇ ಗತಿಯಾದವನು ; ನೀನು ಐದು ವರ್ಷದವನಾಗಿ ಈ ಕಷ್ಟತರವಾದ ತಪಸ್ಸನ್ನು ಮಾಡುವದು ನಿನಗೆ ಸರಿಯಾದುದಲ್ಲ; ಈ ಫಲವರ್ಜಿತವಾದ ಮನಃಕಷ್ಟದಿಂದ ನಿವೃತ್ತನಾಗಿ ಹುಡುಗರ ಜೊತೆಯಲ್ಲಿ ಆಟವಾಡಿಕೊಂಡು ನನಗೆ ಪ್ರೀತಿಯನ್ನುಂಟುಮಾಡುತ್ತಾ ಇರುವದೇ ಮುಖ್ಯವಾದ ಧರ್ಮವಲ್ಲವೇ ? ಈ ನನ್ನ ಮಾತು ಎಂಬ ಧರ್ಮದಲ್ಲಿ ನೀನು ದೃಷ್ಟಿಯಿಟ್ಟು ಈ ಅಧರ್ಮವಾದ ತಪಸ್ಸನ್ನು ಬಿಡು. ಹಾಗೆ ನನ್ನ ಮಾತಿನ ಪ್ರಕಾರ ತಪಸ್ಸನ್ನು ಬಿಡದೆ ಇದ್ದರೆ ನಿನ್ನ ಎದುರಿಗೆ ನಾನು ಪ್ರಾಣವನ್ನು ಬಿಡುತ್ತೇನೆ." ಈ ರೀತಿಯಲ್ಲಿ ದೇವತೆಗಳು ಸುನೀತಿರೂಪದಿಂದ ಬಹಳವಾಗಿ ಪ್ರಲಾಪಿಸುತ್ತಿದ್ದರೂ ಶ್ರೀಮನ್ನಾರಾಯಣನಲ್ಲಿ ಆಸಕ್ತನಾದ ಧ್ರುವನು, ತಾಯಿಯ ಮಾತನ್ನೂ ಕೇಳದೆ ಅನನ್ಯಮನಸ್ಸಿನಿಂದ ಭಗವಂತನನ್ನೇ ಧ್ಯಾನಿಸುತ್ತಿದ್ದನು. ಆಗ ದೇವತೆಗಳು, ಸುನೀತಿರೂಪದಿಂದ ತಪೋಭಂಗವಾಗದಿರಲು, ಭಯಂಕರವಾದ ರಾಕ್ಷಸರೂಪಿನಿಂದಲೂ, ಘೋರವಾದ ದುಸ್ವಪ್ನಗಗಳ ರೂಪಿನಿಂದಲೂ ಮಾಡಿದ ಸಿಂಹನಾದವೇ ಮೊದಲಾದ ಧ್ವನಿಗಳು ಗೋವಿಂದನಲ್ಲಿ ಆಸಕ್ತನಾದ ಧ್ರುವನಿಗೆ ಕೊಂಚವೂ ಶ್ರುತಿಗೆ ಗೋಚರವಾಗಲಿಲ್ಲ. ಈ ಧ್ರುವನು, ಪರಮಾತ್ಮನಲ್ಲಿ ಏಕಾಗ್ರಚಿತ್ತನಾಗಿದ್ದುದರಿಂದ ಅವನಿಗೆ ಭಗವಂತನೊಬ್ಬನೇ ಕಾಣಿಸಿದನೇ ಹೊರ್ತು ಮತ್ತಾವದೂ ಅವನ ದೃಷ್ಟಿಗೆ ಗೋಚರವಾಗಲಿಲ್ಲ. ಹೀಗೆ ದೇವತೆಗಳು ಎಷ್ಟು ಸಾಹಸಪಟ್ಟಾಗ್ಯೂ ಪ್ರಯೋಜನವಾಗದಿದ್ದುದರಿಂದ, ಧ್ರುವನ ತಪೋಜ್ವಾಲೆಯಿಂದ ತಾಪಿತರಾದ ದೇವತೆಗಳು ಸರ್ವಭೂತಶರಣ್ಯನಾದ ಪರಮಾತ್ಮನನ್ನು ಸ್ತೋತ್ರಮಾಡುತ್ತಾರೆ: "ಎಲೈ ಪರಮಾತ್ಮನೇ, ಧ್ರುವನ ತಪಸ್ಸಿನಿಂದ ತಪ್ತರಾಗಿ ನಿನ್ನಲ್ಲಿ ಶರಣಾಗತಿಯನ್ನು ಹೊಂದಿ ಬರುತ್ತೇವೆ. ಎಲೈ ಸ್ವಾಮಿಯೇ, ಚಂದ್ರನು ಶುಕ್ಲಪಕ್ಷದಲ್ಲಿ ಹೇಗೆ ದಿನೇ ದಿನೇ ವೃದ್ಧಿಯಾಗುವನೋ, ಅದೇ ಪ್ರಕಾರ ಧ್ರುವನು ತಪಸ್ಸಿನಿಂದ ವೃದ್ಧಿಯಾಗುತ್ತಿದಾನೆ. ಆ ಔತ್ತಾನಪಾದಿಯ ತಪಸ್ಸಿನಿಂದ ತಪ್ತರಾದ ನಮ್ಮನ್ನು ಕಾಪಾಡಿ, ಆ ಧ್ರುವನನ್ನೂ ಸಂರಕ್ಷಿಸು" ಎಂದು ಪ್ರಾರ್ಥಿಸಲಾಗಿ ಆಗ ಭಗವಂತನು ದೇವತೆಗಳನ್ನು ಕುರಿತು, "ಈ ಧ್ರುವನು ಇಂದ್ರತ್ವವನ್ನೂ, ಸೂರ್ಯತ್ವವನ್ನೂ, ವರುಣತ್ವವನ್ನೂ, ಕುಬೇರತ್ವವನ್ನೂ ಸಹ ಅಪೇಕ್ಷಿಸತಕ್ಕವನಲ್ಲವು. ಅವನು ಯಾವದನ್ನು ಕೇಳುತ್ತಾನೋ, ಅದನ್ನು ಕೊಟ್ಟು ಅವನ

ತಪಸ್ಸನ್ನು ನಿಲ್ಲಿಸುತ್ತೇನೆ. ನೀವು ಸುಖವಾಗಿ ಪ್ರಯಾಣಮಾಡಿ" ಎಂಬುದಾಗಿ ದೇವತೆಗಳಿಗೆ ಆಜ್ಞಾಪಿಸಿದನು. ಆಗ ದೇವತೆಗಳು ಸ್ವಸ್ಥಾನವನ್ನು ಹೊಂದಿದ ನಂತರ, ಭಗವಂತನು ಧ್ರುವನ ಸಮೀಪಕ್ಕೆ ಬಂದು ಧ್ರುವನನ್ನು ಕುರಿತು ಹೇಳುತ್ತಾನೆ: "ಎಲೈ ಔತ್ತಾನಪಾದಿಯೇ, ನಿನಗೆ ಮಂಗಳವಾಗಲಿ, ನಿನ್ನ ತಪಸ್ಸಿನಿಂದ ನಾನು ತೃಪ್ತನಾಗಿ ವರವನ್ನು ಕೊಡುವದಕ್ಕಾಗಿ ಬಂದಿದ್ದೇನೆ. ನೀನು ಇಷ್ಟಾರ್ಥವನ್ನು ಕೇಳಿಕೊ, ನೀನು ಬಾಹ್ಯಾರ್ಥನಿರಪೇಕ್ಷೆಯಾಗಿ ನನ್ನಲ್ಲಿ ಸ್ಥಿರವಾದ ಮನಸ್ಸಿಟ್ಟು ನನ್ನನ್ನು ಧ್ಯಾನಿಸಿದುದರಿಂದ ಬಹಳ ತೃಪ್ತನಾಗಿದೇನೆ" ಎಂಬುದಾಗಿ ಭಗವಂತನಿಂದ ಹೇಳಲ್ಪಟ್ಟ ಧ್ರುವನು ದೃಷ್ಟಿಯನ್ನು ಅಧೋಮುಖಮಾಡಿಕೊಂಡು, ಮುಂಭಾಗದಲ್ಲಿ ಚತುರ್ಭುಜದಿಂದ ಶಂಖ, ಚಕ್ರ, ಗದಾಧಾರಿಯಾದ ಪರಮಾತ್ಮನನ್ನು ಕಂಡು, ರೋಮಾಂಚಿತನಾಗಿ ಪರಮಾತ್ಮನನ್ನು ಸ್ತುತಿಸುತ್ತಾನೆ: "ಈ ಭಗವಂತನನ್ನು ನಾನು ಏನೆಂದು ಸ್ತುತಿಸಲಿ, ನನಗೆ ಸ್ತೋತ್ರ ಮಾಡುವದೆಂಬುವದೇ ಗೊತ್ತಿಲ್ಲ. ಹೇಗಾದರೂ ಆಗಲಿ, ಇವನೇ ಸರ್ವಕ್ಕೂ ಕಾರಣನಾದವನು. ಇವನನ್ನು ಶರಣಾಗತನಾಗಿ ಪ್ರಾರ್ಥಿಸುತ್ತೇನೆ. ಎಲೈ ಭಗವಂತನೇ, ನೀನು ನನ್ನ ತಪಸ್ಸಿನಿಂದ ತೃಪ್ತನಾಗಿದ್ದರೆ ಮೊದಲು ನಿನ್ನನ್ನು ಸ್ತೋತ್ರಮಾಡುವದಕ್ಕೆ ಜ್ಞಾನವನ್ನು ಕೊಡು. ಬ್ರಹ್ಮಾದಿ ವೇದತತ್ತ್ವಜ್ಞರು ನಿನ್ನನ್ನು ಸ್ತೋತ್ರಮಾಡಲು ಶಕ್ತರಾಗಲಿಲ್ಲ, ಬಾಲಕನಾದ ನನ್ನಿಂದ ಸ್ತೋತ್ರ ಮಾಡಲು ಸಾಧ್ಯವೇ? ಆದಾಗ್ಯೂ, ನಿನ್ನನ್ನು ಸ್ತುತಿಸಬೇಕೆಂದು ನನ್ನ ಮನಸ್ಸು ಕುತೂಹಲಪಡುತ್ತಿಯಾದುದರಿಂದ ಸ್ತೋತ್ರಜ್ಞಾನವನ್ನು ಕೊಡೆಂಬುದಾಗಿ ಪ್ರಾರ್ಥಿಸಿದ ಕಾಲದಲ್ಲಿ ಭಗವಂತನು ಶಂಖಪ್ರಾಂತದಿಂದ, ಅಂದರೆ ವಿದ್ಯಾಕೇಶದಿಂದ ಧ್ರುವನನ್ನು ಸ್ಪರ್ಶಮಾಡಿದನು. ಅದರಿಂದ ಧ್ರುವನು ತಕ್ಷಣವೇ ವಿಕಸಿತ ಮುಖನಾಗಿ ಭಗವಂತನಿಗೆ ನಮಸ್ಕಾರಮಾಡಿ ಸ್ತೋತ್ರಮಾಡುತ್ತಾನೆ: ಭೂಮಿ, ಆಪ, ಅಗ್ನಿ, ವಾಯು, ಅಂತರಿಕ್ಷ, ಮನಸ್ಸು, ಬುದ್ಧಿ, ಇವೆಲ್ಲವೂ ನೀನೆ. ಶುದ್ಧನಾಗಿಯೂ, ಸೂಕ್ಷ್ಮನಾಗಿಯೂ, ಅಖಿಲಜಗದ್ವ್ಯಾಪಿಯಾಗಿಯೂ, ಪ್ರಧಾನ ಪುರುಷನಾಗಿಯೂ, ಗುಣಾತ್ಮಕನಾಗಿಯೂ ಇರುವ ನಿನಗೆ ನಮಸ್ಕಾರಮಾಡುವೆನು. ಅಶೇಷ ಜಗತ್ತಿಗೆ ಪತಿಯಾದ ಬ್ರಹ್ಮಭೂತನಾದ ಪರಮೇಶ್ವರನಾದ ನಿನ್ನನ್ನೇ ಶರಣವನ್ನು ಹೊಂದಿದ್ದೇನೆ. ಯೋಗಿಚಿಂತ್ಯನಾದ ಬ್ರಹ್ಮಸಂಜ್ಞಿತನಾದ ಸರ್ವಾತ್ಮಕನಾದ ನಿನಗೆ ನಮಸ್ಕಾರ ಮಾಡುತ್ತೇನೆ. ನೀನು ಅನೇಕ ಶಿರಸ್ಸುಳ್ಳವನು, ನೀನು ಅನೇಕ ನೇತ್ರವುಳ್ಳವನು, ಅನೇಕ ಪಾದವುಳ್ಳವನು, ಸರ್ವವ್ಯಾಪಿಯಾದ ನೀನು ಚಿದಚಿದಾತ್ಮಕವಾದ ಪ್ರಪಂಚವನ್ನು ಆವರಿಸಿ ಇನ್ನೂ ಹತ್ತು ಅಂಗುಲ ಎತ್ತರವುಳ್ಳವನು, ಸರ್ವಶರೀರನಾದವನು, ಸಮ್ರಾಟ್, ವಿರಾಟ್‌ರೂಪ

ನಾದವನು, ಅಂದರೆ ಲೋಕ ಅಂತರಿಕ್ಷ ಇವುಗಳ ರೂಪನ್ನುಳ್ಳವನು, ಈ ಸಕಲ ಜಗತ್ತಿಗೂ ಅಧಿಪುರುಷನಾದವನು, ನಿನ್ನಿಂದ ಈ ಜಗತ್ತು ಉತ್ಪತ್ತಿಯಾದುದು. ಈ ಸರ್ವ ಜಗತ್ತೂ ನಿನ್ನ ರೂಪವಾಗಿಯೇ ಇದೆ. ನಿನ್ನಿಂದಲೇ ಸರ್ವ ಯಜ್ಞವೂ ನಿರ್ಮಿತವಾದುದು. ನೀನೇ ಯಜ್ಞಕ್ಕೆ ಪ್ರಧಾನವಾದ ಪೃಷದಾಜ್ಯಸ್ವರೂಪಿಯಾದ ವನು. ಪೃಷದಾಜ್ಯವೆಂದರೆ, ದಧಿಮಿಶ್ರವಾದ ಆಜ್ಯವು. ನಿನ್ನಿಂದ ವೇದ ವೇದಾಂಗಗಳೆಲ್ಲವೂ ಉತ್ಪತ್ತಿಯಾಯಿತು. ನಿನ್ನಿಂದ ಗೋವುಗಳೂ ಸಕಲ ಮೃಗ ಗಳೂ ಸಹ ಹುಟ್ಟಿದವು. ನಿನ್ನ ಮುಖದಿಂದ ಬ್ರಾಹ್ಮಣರೂ, ಬಾಹುಗಳಿಂದ ಕ್ಷತ್ರಿಯರೂ, ತೊಡೆಯಿಂದ ವೈಶ್ಯರೂ, ಪಾದಗಳಿಂದ ಶೂದ್ರರೂ, ಕಣ್ಣಿನಿಂದ ಸೂರ್ಯನೂ, ಪ್ರಾಣದಿಂದ ವಾಯುವೂ, ಮನಸ್ಸಿನಿಂದ ಚಂದ್ರನೂ, ಮುಖದಿಂದ ಅಗ್ನಿಯೂ, ನಾಸಾರಂಧ್ರದಿಂದ ಪ್ರಾಣವೂ, ನಾಭಿಯಿಂದ ಗಗನವೂ, ಶಿರಸ್ಸಿ ನಿಂದ ಸ್ವರ್ಗಲೋಕವೂ, ಕಿವಿಗಳಿಂದ ದಿಕ್ಕುಗಳೂ, ಕಾಲುಗಳಿಂದ ಭೂಮಿಯೂ ಸಹ ಹುಟ್ಟಿದವು. ಸಣ್ಣದಾದ ಆಲದ ಬೀಜವು ಮೊಳಕೆಯಾಗಿ ದೊಡ್ಡದಾದ ಮರವು ಹೇಗೆ ಆಗುತ್ತೋ ಅದೇ ಪ್ರಕಾರ, ಈ ಸಕಲ ಜಗತ್ತೆಂಬ ವೃಕ್ಷಕ್ಕೆ ಬೀಜಭೂತನಾದವನೂ ನೀನೇ. ಓ ಸರ್ವನಿಯಾಮಕನಾದ ಸ್ವಾಮಿಯೇ, ಸರ್ವಕ್ಕೂ ಕಾರಣಭೂತನಾದವನು ನೀನೇ ಹೊರ್ತು ಮತ್ತಾರೂ ಇಲ್ಲ. ಸರ್ವಾ ಧಾರನಾದ ನೀನು ನಿರವಧಿಕ ಆನಂದರೂಪನಾಗಿಯೂ, ತಾಪವನ್ನು ಪರಿಹಾರ ಮಾಡತಕ್ಕವನಾಗಿಯೂ, ಕಾರ್ಯಕಾರಣರೂಪನಾಗಿಯೂ, ಭೂತಸೂಕ್ಷ್ಮ ನಾಗಿಯೂ, ಮಹಾಭೂತರೂಪನಾಗಿಯೂ, ಭೂತಾತ್ಮಕನಾಗಿಯೂ ಇರುವ ನಿನಗೆ ನಮಸ್ಕಾರವು. ಓ ಪರಮಾತ್ಮನೇ, ಸರ್ವವ್ಯಾಪಕನಾದ ನಿನಗೆ ನನ್ನ ಮನಸ್ಸಿನಲ್ಲಿರತಕ್ಕುದನ್ನು ಹೇಳತಕ್ಕದ್ದೇನಿದೆ. ನೀನು ಸರ್ವಜ್ಞನಾದವನು. ಓ ಭಗವಂತನೇ, ನೀನು ಪ್ರತ್ಯಕ್ಷನಾದುದರಿಂದ ನನ್ನ ಮನೋರಥವು ಸಫಲ ವಾಯಿತು. ನಾನು ಮಾಡಿದ ತಪಸ್ಸೂ ಸಫಲವಾಯಿತು.

ಧ್ರುವನು ಈ ರೀತಿ ಪುರುಷಸೂಕ್ತಾನುಸಾರ ಸ್ತೋತ್ರಮಾಡಿದನಂತರ, ಭಗವಂತನು ಹೇಳುತ್ತಾನೆ: "ಓ ಧ್ರುವನೇ, ನನ್ನ ದರ್ಶನದಿಂದ ನೀನು ಮಾಡಿದ ತಪಸ್ಸು ಸಫಲವಾಯಿತು. ನನ್ನ ದರ್ಶನವು ಯಾವಾಗಲೂ ವಿಫಲವಾಗತಕ್ಕುದುದಲ್ಲವು. ಅಯ್ಯಾ ರಾಜಪುತ್ರನೇ, ನಿನಗೆ ಅಭಿಮತವಾದ ವರವನ್ನು ಬೇಡಿಕೋ. ಮನುಷ್ಯರ ದೃಷ್ಟಿಗೆ ನಾನು ಗೋಚರನಾದರೆ, ಅವರಿಗೆ ಸಕಲ ಸಂಪತ್ತೂ ಉಂಟಾಗುವದು." ಈ ರೀತಿ ಭಗವಂತನು ಹೇಳಿದನಂತರ ರಾಜಪುತ್ರನು ಹೇಳುತ್ತಾನೆ: "ಓ ಸ್ವಾಮಿಯೇ, ನೀನು ಸರ್ವಭೂತೇಶನಾಗಿಯೂ, ಸರ್ವರ ಹೃದಯಗತನಾಗಿಯೂ ಇರುವಾಗ ನಿನಗೆ ತಿಳಿಯದ ವಿಷಯವೇನೂ

ಇಲ್ಲ. ಆದಾಗ್ಯೂ ನೀನು ಕೇಳಿದುದಕ್ಕೋಸ್ಕರ ನನ್ನ ಮನೋರಥವನ್ನು ವಿಜ್ಞಾಪಿಸಿಕೊಳ್ಳುತ್ತೇನೆ. ನನ್ನ ಈ ದುರ್ವಿನೀತವಾದ ಮನಸ್ಸು ಅತಿದುರ್ಲಭವಾದುದನ್ನು ಅಪೇಕ್ಷಿಸುತ್ತದೆ. ಆದರೂ ನೀನು ಪ್ರಸನ್ನನಾದುದರಿಂದ ದುರ್ಲಭವಾದುದು ಯಾವದೂ ಇಲ್ಲ. ನನ್ನ ಸಪತ್ನೀತಾಯಿಯು ಅತಿಗರ್ವದಿಂದ ಈ ರಾಜಾಸನವು ನಿನಗೆ ಯೋಗ್ಯವಾದುದಲ್ಲವೆಂಬುದಾಗಿ ಹೇಳಿದಳಷ್ಟೆ. ಆ ಕಾರಣದಿಂದ ಓ ಅಚ್ಯುತನೇ, ಸಕಲ ಜಗತ್ತಿಗೂ ಆಧಾರವಾಗಿಯೂ, ಉತ್ತಮೋತ್ತಮವಾಗಿಯೂ, ಅವ್ಯಯವಾಗಿಯೂ ಇರುವ ಸ್ಥಾನವನ್ನು ಪ್ರಾರ್ಥಿಸುತ್ತೇನೆ" ಎಂದು ಹೇಳಲು, ಆಗ ಭಗವಂತನು, "ಎಲೈ ಧ್ರುವನೇ, ನಿನ್ನ ಪ್ರಾರ್ಥನೆಯಂತೆ ನೀನು ಉತ್ತಮಸ್ಥಾನವನ್ನು ಹೊಂದುತ್ತೀಯೆ, ಇದಕ್ಕೆ ಸಂದೇಹವಿಲ್ಲ. ನೀನು ಪೂರ್ವಜನ್ಮದಲ್ಲಿ ಒಬ್ಬ ಬ್ರಾಹ್ಮಣನಾಗಿ ಏಕಾಗ್ರಚಿತ್ತದಿಂದ ನನ್ನನ್ನು ಧ್ಯಾನಿಸಿದುದರಿಂದ ನಾನು ಪ್ರತ್ಯಕ್ಷವಾದ ಕಾಲದಲ್ಲಿ ನೀನು ಕೇಳಿದ್ದೇನೆಂದರೆ, ನಾನು ರಾಜಪುತ್ರನಾಗಿ ಹುಟ್ಟಬೇಕೆಂಬುದಾಗಿ ಕೇಳಿದ ಕಾರಣ, ಈಗ ನೀನು ಉತ್ತಾನಪಾದರಾಜನಿಗೆ ಮಗನಾಗಿ ಹುಟ್ಟಿದೆ, ಈ ಸ್ವಾಯಂಭುವಮನುವಿನ ಕುಲವು ಇತರರಿಗೆ ದುರ್ಲಭವಾದುದು. ಇಂತಹ ಕುಲದಲ್ಲಿ ಹುಟ್ಟಿದುದರಿಂದಲೂ, ನನ್ನ ಅನುಗ್ರಹವು ನಿನಗುಂಟಾದುದರಿಂದಲೂ, ನಿನ್ನ ಇಷ್ಟಾರ್ಥವು ಸಫಲವಾಯಿತು. ಯಾವ ಮನುಷ್ಯನಿಂದ ನಾನು ತೃಪ್ತನಾಗುತ್ತೇನೋ ಅಂತಹ ಮನುಷ್ಯನಿಗೆ ಮೋಕ್ಷವು ಸಿದ್ಧವಾಗುತ್ತದೆ. ಓ ಧ್ರುವನೇ, ಸ್ವರ್ಗಕ್ಕಿಂತಲೂ ಅಧಿಕ ಸ್ಥಾನವಾಗಿಯೂ, ಸರ್ವಗ್ರಹಗಳಿಗೂ ಆಶ್ರಯವಾಗಿಯೂ, ಸೂರ್ಯ, ಚಂದ್ರ, ಅಂಗಾರಕ, ಬುಧ, ಗುರು, ಶುಕ್ರ, ಶನಿ ಇವರುಗಳಿಗೂ, ಸಪ್ತರ್ಷಿಗಳಿಗೂ, ಸರ್ವದೇವತೆಗಳಿಗೂ ಕೂಡ ಮೇಲ್ಪಟ್ಟ ಸ್ಥಾನವನ್ನು ನಿನಗೆ ಕೊಟ್ಟಿದ್ದೇನೆ. ಕೆಲವರಿಗೆ ಚತುರ್ಯುಗದವರೆಗೂ, ಮತ್ತೆ ಕೆಲವರಿಗೆ ಮನ್ವಂತರದವರೆಗೂ, ಸಹ ಕ್ಲಿಪ್ತಕಾಲವಾಗಿದೆ. ನಿನಗೆ ಕಲ್ಪಾಂತದವರೆಗೂ ಕ್ಲಿಪ್ತವಾದ ಸ್ಥಾನವನ್ನು ಕೊಟ್ಟಿದ್ದೇನೆ ಅಲ್ಲದೆ ನಿನ್ನ ತಾಯಿಯಾದ ಸುನೀತಿಯು ನಿನ್ನ ಸಮೀಪದಲ್ಲಿಯೇ ನಿರ್ಮಲವಾದ ನಕ್ಷತ್ರವಾಗಿರುತ್ತಾಳೆ. ಯಾವ ಮನುಷ್ಯನು, ಸಾಯಂಪ್ರಾತಃ ನಿನ್ನನ್ನು ಕೀರ್ತನೆಮಾಡುತ್ತಾನೋ, ಅವನಿಗೆ ಮಹತ್ತರವಾದ ಪುಣ್ಯವುಂಟಾಗುತ್ತದೆ." ಈ ಪ್ರಕಾರ ಧ್ರುವನು, ದೇವದೇವನಾಗಿಯೂ, ಜಗನ್ನಾಥನಾಗಿಯೂ ಇರುವ ಶ್ರೀಜನಾರ್ದನನಿಂದ ಅತ್ಯುನ್ನತವಾದ ಸ್ಥಾನವನ್ನು ಹೊಂದಿ, ಅದ್ಯಾಪಿ ಧ್ರುವಮಂಡಲದಲ್ಲಿ ವಾಸಮಾಡುತ್ತಿದ್ದಾನೆ. ಈ ಧ್ರುವನು ಧರ್ಮಪರನಾಗಿ ದ್ವಾದಶಾಕ್ಷರಮಂತ್ರದಿಂದ ಮಹಿಮೆಯನ್ನು ಪಡೆದನು. ಇದನ್ನು ನೋಡಿದ ಅಸುರಾಚಾರ್ಯನಾದ ಶುಕ್ರಾಚಾರ್ಯನು, ಧ್ರುವನ ಮಹಿಮೆಯನ್ನು ಕುರಿತು ಹೇಳುತ್ತಾನೆ:

"ಆಹಾ! ಈ ಧ್ರುವನ ತಪಸ್ಸಿನ ಮಹಿಮೆ ಎಂತಹುದು. ಸಪ್ತರ್ಷಿಗಳೂ ಕೂಡ ಇವನನ್ನೇ ಮುಂದಿಟ್ಟುಕೊಂಡಿರುತ್ತಾರಲ್ಲ. ಇವನ ತಾಯಿಯಾದ ಸುನೀತಿಯೂ ಕೂಡ ಈ ಮಹಾನುಭಾವನಾದ ಧ್ರುವನನ್ನು ಪ್ರಸವಿಸಿದುದರಿಂದ ಅಂತರಿಕ್ಷ ದಲ್ಲಿ ಅದ್ಯಾಪಿ ಪ್ರಕಾಶಿಸುತ್ತಾಳೆ. ಈ ಧ್ರುವನ ಚರಿತ್ರೆಯನ್ನು ಕೇಳಿದವರು ಸಕಲ ಪಾಪದಿಂದ ಮುಕ್ತರಾಗಿ ಸಕಲ ಮಂಗಳವನ್ನು ಹೊಂದುತ್ತಾರೆ."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ
ಹನ್ನೆರಡನೆಯ ಅಧ್ಯಾಯವು ಸಮಾಪ್ತಃ

ಹದಿಮೂರನೆಯ ಅಧ್ಯಾಯವು

"ಎಲೈ ಮೈತ್ರೇಯನೇ, ಆ ಮಹಾತ್ಮನಾದ ಧ್ರುವನಿಂದ ಶಂಭು ಎಂಬ ಪತ್ನಿ ಯಲ್ಲಿ ಶಿಷ್ಟಿಯೆಂಬ ಮಗನು ಹುಟ್ಟಿದನು; ಶಿಷ್ಟಿಯೆಂಬುವನಿಗೆ ಸುಚ್ಛಾಯಾ ಎಂಬ ಪತ್ನಿಯಲ್ಲಿ ರಿಪು, ರಿಪುಂಜಯ, ವಿಪ್ರ, ವೃಕಲ, ವೃತತೇಜಸ ಎಂಬುದಾಗಿ ಐದು ಜನ ಪುತ್ರರು ಹುಟ್ಟಿದರು. ರಿಪುವಿಗೆ ವೀರಣರಾಜನ ಮಗಳಾದ ಪುಷ್ಕರಿಣಿ ಯಲ್ಲಿ ಸರ್ವತೇಜೋಮಯನಾದ ಚಾಕ್ಷುಷಮನುವು ಹುಟ್ಟಿದನು. ಇವನೇ ಆರನೇ ಮನ್ವಂತರಾಧಿಪನು. ವೈರಾಜನೆಂಬ ರಾಜನ ಮಗಳಾದ ನಡ್ವಲಾ ಎಂಬ ಪತ್ನಿ ಯಲ್ಲಿ ಚಾಕ್ಷುಷಮನುವಿಗೆ ಊರು, ಪೂರು, ಶತದ್ಯುಮ್ನ, ತಪಸ್ವೀ, ಸತ್ಯವಾಕ್, ಶುಚಿ, ಅಗ್ನಿಷ್ಟೋಮ, ಅತಿರಾತ್ರ, ಸುದ್ಯುಮ್ನ, ಅಭಿಮನ್ಯು ಎಂಬುದಾಗಿ ಹತ್ತು ಜನ ಮಕ್ಕಳು ಹುಟ್ಟಿದರು. ಊರು ಎಂಬುವನಿಗೆ ಅಂಗ, ಸುಮನಸ, ಸ್ವಾತಿ, ಕ್ರತು, ಅಂಗೀರಸ, ಶಿಬಿಯೆಂಬುದಾಗಿ ಆರು ಜನ ಮಕ್ಕಳು ಹುಟ್ಟಿದರು. ಅಂಗನಿಗೆ ಮೃತ್ಯುಪುತ್ರಿಯಾದ ಸುನೀಥೆಯಲ್ಲಿ ವೇನನೆಂಬುವನು ಹುಟ್ಟಿದನು. ಈ ವೇನನಿಗೆ ಬಹಳ ದಿವಸದವರೆಗೂ ಮಕ್ಕಳಿಲ್ಲದೆ ಇದ್ದುದರಿಂದ ಮಹರ್ಷಿ ಗಳು ಪ್ರಜಾರ್ಥವಾಗಿ ವೇನನ ಬಲತೋಳನ್ನು ಮಥನ ಮಾಡಿದರು. ಆಗ ಮಹಾತೇಜೋಮಯನಾದ ಪೃಥುಚಕ್ರವರ್ತಿಯು ಹುಟ್ಟಿದನು. ಈ ಪೃಥು ಚಕ್ರವರ್ತಿಯು ಪ್ರಜೆಗಳ ಹಿತಕ್ಕಾಗಿ ಭೂಮಿಯನ್ನು ಕರೆದನು." ಪರಾಶರರು ಈ ರೀತಿ ಹೇಳಿದುದನ್ನು ಕೇಳಿದ ಮೈತ್ರೇಯರು ಪ್ರಶ್ನೆಮಾಡುತ್ತಾರೆ: ವೇನನ ತೋಳನ್ನು ಮಥನಮಾಡುವುದಕ್ಕೆ ಕಾರಣವೇನೆಂಬುದಾಗಿ ಕೇಳಿದುದಕ್ಕೆ ಪರಾಶರಮಹರ್ಷಿಯು ಹೇಳುತ್ತಾರೆ: "ಮೃತ್ಯುಮಗಳಾದ ಸುನೀಥೆಯನ್ನು ವೇನನ ತಂದೆಯಾದ ಅಂಗನಿಗೆ ಕೊಟ್ಟು ವಿವಾಹವಾಯಿತು. ಈ ವೇನನು,

ಮೃತ್ಯುವಿಗೆ ಮೊಮ್ಮಗನಾದುದರಿಂದ ಇವನೂ ದುಷ್ಟನಾಗಿಯೇ ಹುಟ್ಟಿದನು. ಇವನು ರಾಜನಾದನಂತರ ತನ್ನ ದೇಶದಲ್ಲೆಲ್ಲಾ ಯಜ್ಞವನ್ನು ಮಾಡಕೂಡದು; ಹಾಗೆ ಮಾಡುವದಾದರೆ, ನಾನೇ ಯಜ್ಞಪತಿಯಾದವನು, ಸರ್ವಕರ್ಮಭೋಕ್ತ ನಾದವನೂ ನಾನೇ, ನನ್ನನ್ನೇ ಕುರಿತು ಯಜ್ಞವನ್ನು ಮಾಡಬೇಕೆಂಬುದಾಗಿ ಸಾರಿಸಿದನು. ಇದನ್ನು ಕೇಳಿದ ಮಹರ್ಷಿಗಳು ವೇನನ ಬಳಿಗೆ ಬಂದು, ರಾಜ ನನ್ನು ಪೂಜಿಸಿ, ಮಧುರವಾದ ಮಾತಿನಿಂದ ರಾಜನನ್ನು ಕುರಿತು ಹೇಳುತ್ತಾರೆ: "ಓ ರಾಜನೇ, ನಿನ್ನಲ್ಲಿ ಒಂದು ಮಾತನ್ನು ಹೇಳುತ್ತೇವೆ ಕೇಳು; ರಾಜ್ಯಕ್ಕೂ ಮತ್ತು ರಾಜನ ದೇಹಕ್ಕೂ ಕ್ಷೇಮಕರವಾದುದು, ಮೊದಲನೇದು, ಪ್ರಜಾಹಿತ ಚಿಂತನೆ. ನಾವು ಯಜ್ಞಾದಿಕರ್ಮಗಳನ್ನು ಮಾಡಿ ಸರ್ವೇಶ್ವರನಾದ ಶ್ರೀಮನ್ನಾ ರಾಯಣನನ್ನು ಪೂಜಿಸಿದರೆ ವಿಷ್ಣುವಿನ ಅಂಶವುಳ್ಳ ನಿನ್ನನ್ನೂ ಪೂಜಿಸಿದ ಹಾಗಾಯಿತು. ಯಜ್ಞಾದಿ ಕರ್ಮಗಳಿಂದ ಪರಮಾತ್ಮನು ಪ್ರೀತನಾಗಿ ನಮ್ಮಗಳ ಇಷ್ಟಾರ್ಥವನ್ನು ಕೊಡುತ್ತಾನೆ. ಯಾವ ರಾಷ್ಟ್ರದಲ್ಲಿ, ಯಜ್ಞಾದಿಗಳಿಂದ ಯಜ್ಞ ಪುರುಷನಾದ ಭಗವಂತನನ್ನು ಆರಾಧಿಸುತ್ತಾರೋ ಆ ದೇಶದ ದೊರೆಗಳಿಗೆ ಭಗವಂತನು ಸರ್ವಾರ್ಥಗಳನ್ನೂ ಕೊಡುತ್ತಾನೆ."

ಈ ಪ್ರಕಾರ ಋಷಿಗಳು ಹೇಳಲು ಆದಕ್ಕೆ ವೇನನು ಹೇಳುತ್ತಾನೆ: "ಋಷಿ ಗಳೇ, ನನಗಿಂತಲೂ ಹೆಚ್ಚಾದವನು ಯಾರೂ ಇಲ್ಲ; ಆರಾಧ್ಯನು ನನ್ನ ಹೊರ್ತು ಮತ್ತಾರೂ ಇಲ್ಲ; ನಿಮ್ಮ ಅಭಿಪ್ರಾಯದಲ್ಲಿ, ಹರಿಯೆಂಬುವನು ಯಾರು? ಬ್ರಹ್ಮ, ಜನಾರ್ದನ, ಶಂಭು, ಇಂದ್ರ, ವಾಯು, ಯಮ, ರವಿ, ಅಗ್ನಿ, ವರುಣ, ಭೂಮಿ, ಚಂದ್ರ ಇವರುಗಳೆಲ್ಲರೂ ಶಾಪಾನುಗ್ರಹಕಾರಿಗಳು. ಇಂಥವರೆಲ್ಲರೂ ರಾಜನ ದೇಹದಲ್ಲಿ ವಾಸಮಾಡುತ್ತಾರೆ. ಈ ಕಾರಣದಿಂದ ರಾಜನು ಸರ್ವದೇವ ಮಯನಾದವನು; ಇದನ್ನು ತಿಳಿದ ನಾನು, ದಾನಮಾಡಕೂಡದು, ಯಜ್ಞ ಮಾಡಕೂಡದು ಎಂಬುದಾಗಿ ಸಾರಿಸಿದೆನು. ಸ್ತ್ರೀಯರಿಗೆ ಪತಿಶುಶ್ರೂಷೆಯು ಹೇಗೆ ಪರಮಧರ್ಮವೋ ಹಾಗೆಯೇ ನಿಮಗೆ ನನ್ನ ಆಜ್ಞಾಪಾಲನವೂ ಸಹ ಪರಮ ಧರ್ಮವು." ಈ ರೀತಿ ವೇನನು ಹೇಳಲು ಆಗ ಮಹರ್ಷಿಗಳು ಹೇಳುತ್ತಾರೆ: "ಎಲೈ ಮಹಾರಾಜನೇ, ನೀನು ಧರ್ಮಕ್ಷಯವನ್ನು ಮಾಡಬೇಡ. ಲೋಕದಲ್ಲಿ ಸಕಲ ಧರ್ಮಗಳಲ್ಲಿಯೂ, ಯಜ್ಞಾದಿ ಕರ್ಮಗಳನ್ನು ಮಾಡುವದೇ ಮುಖ್ಯಧರ್ಮವು" ಎಂಬುದಾಗಿ ಮಹರ್ಷಿಗಳು ಹೇಳಲು, ವೇನನು ಮಹರ್ಷಿಗಳ ಇಷ್ಟಾನುಸಾರ ಸಮ್ಮತಿಸದೆ ತನ್ನ ಆಜ್ಞೆಯೇ ನಡೆಯಬೇಕೆಂದು ಬಾರಿಬಾರಿಗೂ ಹೇಳುತ್ತಿದ್ದನು. ಆಗ ಮಹರ್ಷಿಗಳು ಕೋಪಗೊಂಡು ಇವನು ನಾಶವಾಗಲೆಂಬುದಾಗಿ ಪರಸ್ಪರ ಮಾತನಾಡಿಕೊಂಡರು. ಯಜ್ಞೇಶನಾಗಿಯೂ, ಪ್ರಭುವಾಗಿಯೂ, ಅನಾದಿ

ನಿಧನನಾಗಿಯೂ ಇರುವ ಶ್ರೀಮನ್ನಾರಾಯಣನನ್ನು ಯಾವ ಮನುಷ್ಯನು ನಿಂದಿಸುತ್ತಾನೋ, ಅವನು ರಾಜನಾಗಲು ಅರ್ಹನಲ್ಲ. ಈ ಪ್ರಕಾರ ಮಹರ್ಷಿಗಳು ಭಗವನ್ನಿಂದೆಯಿಂದ ಮೊದಲೇ ಹತನಾದ ವೇನನನ್ನು ತಮ್ಮ ಮಂತ್ರಪೂತವಾದ ದರ್ಭೆಯಿಂದ ನಾಶಮಾಡಿದರು. ವೇದ, ದೇವತಾ ಯಜ್ಞಾದಿಗಳನ್ನು ನಿಂದೆ ಮಾಡತಕ್ಕವರನ್ನು ನಾಶಮಾಡಿದರೂ ದೋಷವಿಲ್ಲ; ವೇನನು ನಾಶವಾದ ಕೂಡಲೇ ಬಹುದೂರದಲ್ಲಿ ಸುತ್ತಲೂ ಹೆಚ್ಚಾಗಿ ಧೂಳು ಎದ್ದಿತು. ಅದನ್ನು ನೋಡಿ ಮಹರ್ಷಿಗಳು ಸಮೀಪದಲ್ಲಿರತಕ್ಕ ಜನಗಳನ್ನು ಇದೇನೆಂಬುದಾಗಿ ಕೇಳಿದುದಕ್ಕೆ ಆ ಜನರು ಹೇಳಿದ್ದೇನೆಂದರೆ: ಈಗ ರಾಜ್ಯವು ಅರಾಜಕವಾಯಿತು; ಇದರಿಂದ ಕಳ್ಳರ ಕಾಟವು ಉಂಟಾಗಿದೆ; ಈ ಧೂಳುಗಳು ಕಳ್ಳರ ಸಮೂಹದಿಂದ ಉಂಟಾದುದು ಎಂಬುದಾಗಿ ಹೇಳಿದುದರಿಂದ ಮಹರ್ಷಿಗಳು ಪರಸ್ಪರ ಆಲೋಚನೆ ಮಾಡಿಕೊಂಡು ಅಪುತ್ರನಾದ ವೇನನ ತೊಡೆಯನ್ನು ಮಥನ ಮಾಡಿದರು. ಆ ಪುರುಷನು, ಸುಟ್ಟ ಕಂಬದ ಹಾಗೆ ಕಪ್ಪಾಗಿಯೂ, ಬಹಳ ಕುಳ್ಳಾಗಿಯೂ, ಖಲ್ವಾಟನಾಗಿಯೂ, ಅಂದರೆ, ತಲೆಯಲ್ಲಿ ಕೂದಲಿಲ್ಲದವನಾಗಿಯೂ ಇದ್ದನು. ಇಂತಹ ಪುರುಷನು ಮಹರ್ಷಿಗಳನ್ನು ನಾನು ಈಗ ಏನು ಮಾಡಲಿಯೆಂದು ಕೇಳಿದುದಕ್ಕೆ ನೀನು ನಿಷಾದನಾಗುಯೆಂಬುದಾಗಿ ಹೇಳಿದರು. ಆಗ ಅವನು ಮಹರ್ಷಿಗಳ ಅಪ್ಪಣೆಯ ಪ್ರಕಾರ, ವಿಂಧ್ಯಪರ್ವತದಲ್ಲಿ ವಾಸಮಾಡತಕ್ಕ ನಿಷಾದ ಜಾತಿಯವನಾದನು. ಈ ನಿಷಾದರು ಯಾವ ಪಾಪಕರ್ಮವನ್ನೇ ಮಾಡತಕ್ಕವರು. ಈ ನಿಷಾದರೂಪಿಯಾದ ಪುರುಷನು ಹುಟ್ಟಿದುದರಿಂದ ಆ ವೇನನ ಪಾಪಗಳೆಲ್ಲವೂ ಕಳೆದುಹೋದವು. ಆಗ ಮಹರ್ಷಿಗಳು ಪುನಃ ವೇನಚಕ್ರವರ್ತಿಯ ಬಲಕಾಲನ್ನು ಮಥನ ಮಾಡಿದರು; ನಂತರ ಬಹಳ ಪರಾಕ್ರಮಶಾಲಿಯಾಗಿಯೂ, ಅಗ್ನಿಯ ಹಾಗೆ ತೇಜೋವಿಶಿಷ್ಟನಾಗಿಯೂ ಇರುವ ಮಗನು ಹುಟ್ಟಿದನು. ಇವನಿಗೆ ಪೃಥುಯೆಂಬುದಾಗಿ ಹೆಸರುಂಟಾಯಿತು. ಈ ಪೃಥುವು ಹುಟ್ಟಿದ ಕ್ಷಣವೇ ಅಂತರಿಕ್ಷದಿಂದ ಪಿನಾಕವೆಂಬ ಧನುಸ್ಸೂ, ಅನೇಕವಾದ ಬಾಣಗಳೂ, ದಿವ್ಯವಾದ ಕವಚವೂ ಸಹ ಬಿದ್ದವು. ಸಕಲ ಪ್ರಾಣಿಗಳೂ ಸಂತೋಷವನ್ನು ಹೊಂದಿದವು. ಇಂತಹ ಸತ್ಪುತ್ರನು ಹುಟ್ಟಿದುದರಿಂದ ವೇನನು ಸ್ವರ್ಗವನ್ನು ಹೊಂದಿದನು. ಪೃಥುಚಕ್ರವರ್ತಿಯ ಅಭಿಷೇಕಕ್ಕೋಸ್ಕರ ಸಮುದ್ರಗಳ, ಅನೇಕವಾದ ನದಿಗಳ, ತೀರ್ಥಾದಿಗಳನ್ನೂ ಉತ್ಕೃಷ್ಟವಾದ ರತ್ನಗಳನ್ನೂ ಸಹ ಸಿದ್ಧಮಾಡಿದರು. ಪಿತಾಮಹನಾದ ಚತುರ್ಮುಖ ಬ್ರಹ್ಮನು, ಆಂಗಿರಸರೇ ಮೊದಲಾದ ದೇವತೆಗಳಿಂದ ಕೂಡಿ ಬಂದು, ಪೃಥುಚಕ್ರವರ್ತಿಗೆ ಅಭಿಷೇಕವನ್ನು ಮಾಡಿದನು. ಪೃಥುವಿನ ಬಲಗೈಯಲ್ಲಿ ಚಕ್ರವನ್ನು ನೋಡಿ ಬ್ರಹ್ಮಾದಿಗಳು ಇವನು ವಿಷ್ಣುವಿನ ಅಂಶ

ವೆಂಬುದಾಗಿ ಸಂತೋಷವನ್ನು ಹೊಂದಿದರು. ಯಾವ ಮನುಷ್ಯನ ಕೈಯಲ್ಲಿ ವಿಷ್ಣುಚಕ್ರವು ಇರುತ್ತದೋ, ಅವನು ಚಕ್ರವರ್ತಿಯಾಗುತ್ತಾನೆ. ವೇನನಿಗೆ ಪ್ರಜಾನುರಂಜನವಿಲ್ಲದುದರಿಂದ, ಅವನು ರಾಜನಾಗಲಿಲ್ಲ. ಈಗ ಪೃಥುಚಕ್ರವರ್ತಿಯು ಪ್ರಜಾರಂಜನೆಯುಳ್ಳವನಾದುದರಿಂದ, ರಾಜನೆಂಬ ಹೆಸರನ್ನು ಸ್ಥಿರಪಡಿಸಿದನು. ಅಲ್ಲದೆ ಸಮುದ್ರವೇ ಮೊದಲಾದವುಗಳು ಸ್ಥಳವನ್ನು ಕೊಡತಕ್ಕವುಗಳಾದವು; ಪರ್ವತಗಳು ಮಾರ್ಗವನ್ನು ಕೊಟ್ಟವು; ವನದಲ್ಲಿ ಹೋಗತಕ್ಕ ಕಾಲದಲ್ಲಿ ಸಕಲ ವೃಕ್ಷಗಳೂ ನಮ್ರತೆಯಿಂದ ಇವನಿಗೆ ಧ್ವಜಭಂಗವನ್ನುಂಟುಮಾಡಲಿಲ್ಲ. ಭೂಮಿಯು ವ್ಯವಸಾಯವನ್ನು ಮಾಡದೆಯೇ ಫಲವತ್ತಾಗಿ ಸಕಲಾರ್ಥಗಳನ್ನೂ ಕೊಟ್ಟಿತು. ಗೋವುಗಳೂ ಸಹ ಇವನ ಇಷ್ಟಾರ್ಥವನ್ನು ಕರೆದವು. ಈ ಪೃಥುಚಕ್ರವರ್ತಿಯನ್ನು ಸ್ತೋತ್ರಮಾಡುವದಕ್ಕೆ ತತ್ಕಾಲದಲ್ಲಿದ್ದ ಜನಗಳಿಂದ ಆಗುವದಿಲ್ಲವೆಂಬುದಾಗಿ ಮಹರ್ಷಿಗಳು ಪಿತಾಮಹಸಂಬಂಧವಾದ ಯಜ್ಞವನ್ನು ಮಾಡಿದರು. ಯಜ್ಞದಲ್ಲಿ ಹೊಗಳುಭಟ್ಟರು ಅಂದರೆ ಸೂತಮಾಗಧರು ಹುಟ್ಟಿದರು. ಈ ಸೂತಮಾಗಧರನ್ನು ಮಹರ್ಷಿಗಳು ಈ ಪೃಥುಚಕ್ರವರ್ತಿಯನ್ನು ಸ್ತೋತ್ರಮಾಡಿರಿಯೆಂಬುದಾಗಿ ಹೇಳಿದರು. ಅದಕ್ಕೆ ಸೂತಮಾಗಧರು ಮಹರ್ಷಿಗಳನ್ನು ಕುರಿತು, "ಓ ಮಹರ್ಷಿಗಳಿರಾ, ನಾವು ಈಗ ತಾನೇ ಹುಟ್ಟಿದವರು, ನಮಗೆ ಈ ಪೃಥುಚಕ್ರವರ್ತಿಯ ಗುಣಗಳೂ, ಪರಾಕ್ರಮವೂ, ಕಾರ್ಯಗಳೂ, ಕೀರ್ತಿಯೂ ಸಹ ಯಾವದೂ ಗೊತ್ತಿಲ್ಲ. ನಾವು ಯಾವ ರೀತಿ ಸ್ತೋತ್ರಮಾಡತಕ್ಕದು" ಎಂದು ಕೇಳಲು, ಮಹರ್ಷಿಗಳು ಹೇಳುತ್ತಾರೆ: "ಹೇ ಸೂತಮಾಗಧರಾ, ಈ ಚಕ್ರವರ್ತಿಯ ಕೈಯಲ್ಲಿ ಚಕ್ರವಿರುವದರಿಂದ ವಿಷ್ಣ್ವಂಶನಾದವನು, ಅಲ್ಲದೆ ಇವನು ಮಹಾಬಲಶಾಲಿಯಾಗುವನು. ಈ ಲಕ್ಷಣವಿರುವದರಿಂದ ಮುಂದೆ ಇವನಿಗೆ ಅನೇಕ ಗುಣಗಳು ಸ್ವಾಭಾವಿಕವಾಗಿಯೇ ಉಂಟಾಗುವವು. ಈ ಕಾರಣಗಳಿಂದ ಸ್ತೋತ್ರಮಾಡಿ" ಎಂಬುದಾಗಿ ಹೇಳಲು, ಆಗ ಸೂತಮಾಗಧರು ಭವಿಷ್ಯದ್ಗುಣಗಳನ್ನು ಕೊಂಡಾಡಿದರು. ಸೂತಮಾಗಧರ ಸ್ತೋತ್ರದಿಂದ ಪೃಥುಚಕ್ರವರ್ತಿಯು ಸಂತೋಷವನ್ನು ಹೊಂದಿದವನಾಗಿ, ಸದ್ಗುಣಶಾಲಿಗಳು ನನ್ನನ್ನು ಸ್ತೋತ್ರಮಾಡಿದುದರಿಂದ ನನ್ನ ಗುಣಗಳೆಲ್ಲವೂ ಶ್ಲಾಘ್ಯವಾಗುತ್ತವೆ. ಇವರು ಯಾವ ಕೆಲಸವನ್ನು ಕುರಿತು ಸ್ತೋತ್ರಮಾಡಿದರೋ, ಯಾವದನ್ನು ಬಿಡತಕ್ಕವನೆಂಬುವದಾಗಿ ಹೇಳಿದರೋ, ಅದರಂತೆಯೇ ಮಾಡುವನೆಂದು ಪೃಥುಚಕ್ರವರ್ತಿಯು ಹೇಳಿದನು. ಸ್ತೋತ್ರಪಾಠಕರು ಯಾವ ರೀತಿ ಸ್ತೋತ್ರಮಾಡಿದರೆಂದರೆ, "ಈ ಪೃಥುಚಕ್ರವರ್ತಿಯು ಸತ್ಯವಂತನಾಗಿಯೂ, ದಾನಶೀಲನಾಗಿಯೂ, ಸತ್ಯವಾಕ್ಕುಳ್ಳವನಾಗಿಯೂ,

ಅಕಾರ್ಯದಲ್ಲಿ ಲಜ್ಜೆಯುಳ್ಳವನಾಗಿಯೂ, ಮಿತ್ರನಾಗಿಯೂ, ಕ್ಷಮಾಶೀಲನಾಗಿಯೂ, ಪರಾಕ್ರಮಶಾಲಿಯಾಗಿಯೂ, ದುಷ್ಟರನ್ನು ಶಿಕ್ಷಿಸತಕ್ಕವನಾಗಿಯೂ, ಪ್ರಿಯಭಾಷಿಯಾಗಿಯೂ, ಮಾನ್ಯನಾಗಿಯೂ, ಯಜ್ಞಶೀಲನಾಗಿಯೂ, ಬ್ರಹ್ಮಜ್ಞಾನಿಯಾಗಿಯೂ, ಸಾಧುವತ್ಸಲನಾಗಿಯೂ, ಶತ್ರುಮಿತ್ರರಲ್ಲಿ ಸಮಬುದ್ಧಿಯುಳ್ಳವನಾಗಿಯೂ, ವ್ಯವಹಾರಜ್ಞನಾಗಿಯೂ ಇರತಕ್ಕವನು" ಇತ್ಯಾದಿ ಗುಣಗಳಿಂದ ಸೂತಮಾಗಧರು ಸ್ತೋತ್ರಮಾಡಿದರು. ಪೃಥುಚಕ್ರವರ್ತಿಯು, ಭೂಮಿಯನ್ನು ಪಾಲನೆ ಮಾಡುತ್ತ, ಭೂರಿದಕ್ಷಿಣಾಸಹಿತವಾದ ಅನೇಕ ಯಜ್ಞಗಳನ್ನು ಮಾಡಿ, ರಾಜ್ಯವನ್ನು ಪರಿಪಾಲಿಸುತ್ತಿರುವಾಗ, ಪ್ರಜೆಗಳು ರಾಜನಲ್ಲಿ ಬಂದು, "ಎಲೈ ರಾಜನೇ, ನಾವು ಆಹಾರವಿಲ್ಲದೆ ಕ್ಷುಧಾರ್ತರಾಗಿ ಬಂದಿದ್ದೇವೆ; ನೀನು ಭಗವದಂಶಸಂಭೂತನಾಗಿ ಪ್ರಜಾಪಾಲನಕಾರ್ಯದಲ್ಲಿ ನಿರತನಾಗಿರುವದರಿಂದ ಕ್ಷುಧಾರ್ತರಾದ ನಮಗೆ ಜೀವನಾರ್ಥವಾಗಿ ಆಹಾರವನ್ನು ಕಲ್ಪಿಸಿಕೊಡು" ಎಂದು ಕೇಳಿಕೊಂಡದ್ದಕ್ಕೆ ಪೃಥುಚಕ್ರವರ್ತಿಯು ಪ್ರಜಾಹಿತಕ್ಕೋಸ್ಕರ ಧನುಸ್ಸನ್ನು ಧರಿಸಿ, ಈ ಭೂಮಿಯು ಪ್ರಜೆಗಳಿಗೆ ಫಲವನ್ನು ಕೊಡಲಿಲ್ಲವೆಂಬ ಕೋಪದಿಂದ, ಭೂದೇವಿಯನ್ನು ಸಂಹಾರಮಾಡಲು ಪ್ರಯಾಣಮಾಡಿದನು. ಆಗ ಭೂದೇವಿಯು, ಗೋರೂಪವನ್ನು ಧರಿಸಿ ಭಯದಿಂದ ಬ್ರಹ್ಮಲೋಕಾದಿಗಳನ್ನು ಕುರಿತು ಪ್ರಯಾಣ ಮಾಡಿದಳು. ಆ ಭೂಮಿಯು ಎಲ್ಲೆಲ್ಲಿ ಪ್ರಯಾಣ ಮಾಡಿದಳೋ ಅಲ್ಲೆಲ್ಲಾ ಪೃಥುಚಕ್ರವರ್ತಿಯು ಅವಳನ್ನೇ ಅನುಸರಿಸಿದನು. ಈ ಪ್ರಕಾರ ಧನುರ್ಧಾರಿಯಾದ ಪೃಥುಚಕ್ರವರ್ತಿಯನ್ನು ನೋಡಿ ಭೂಮಿಯು ಹೇಳಿದಳು: "ಹೇ ರಾಜನೇ, ನೀನು ಧರ್ಮಾತ್ಮನಾಗಿ ಸ್ತ್ರೀವಧೆಯನ್ನು ಮಾಡುವುದಕ್ಕೆ ಉದ್ಯುಕ್ತಪಟ್ಟಿರುವೆ"ಯೆಂಬುದಾಗಿ ಹೇಳಲು, ಅದಕ್ಕೆ ರಾಜನು, "ಎಲೈ ಭೂಮಿಯೇ, ದುಷ್ಟಳಾದ ನಿನ್ನೊಬ್ಬಳನ್ನು ನಾಶ ಮಾಡಿದರೆ ಅನೇಕರಾದ ನನ್ನ ಪ್ರಜೆಗಳು ಕ್ಷೇಮಯುಕ್ತರಾಗುತ್ತಾರೆ; ಇದರಿಂದ ನನಗೆ ವಿಶೇಷವಾದ ಪುಣ್ಯವುಂಟು" ಎಂಬುದಾಗಿ ಹೇಳಿದನು. ಅದಕ್ಕೆ ಭೂಮಿಯೂ, "ಎಲೈ ರಾಜನೇ, ಪ್ರಜೆಗಳ ಉಪಕಾರಕ್ಕೋಸ್ಕರ ನನ್ನನ್ನು ನೀನು ನಾಶಮಾಡಿದರೆ ನಿನ್ನ ಪ್ರಜೆಗಳಿಗೆ ಆಧಾರವಾಗಿರುವುದು ಯಾವುದು?" ಎಂಬುದಾಗಿ ಕೇಳಿದುದಕ್ಕೆ ರಾಜನು ಹೇಳುತ್ತಾನೆ: "ಎಲೈ ಭೂಮಿಯೇ, ನನ್ನ ಆಜ್ಞೆಗೆ ಪರಾಙ್ಮುಖಿಯಾದ ನಿನ್ನನ್ನು ಸಂಹಾರಮಾಡಿ, ನನ್ನ ಯೋಗಬಲದಿಂದ ಸಕಲಪ್ರಜೆಗಳನ್ನೂ ಧರಿಸುತ್ತೇನೆಂದು" ಪೃಥುಚಕ್ರವರ್ತಿಯು ಹೇಳಿದುದಕ್ಕೆ ಆ ಭೂಮಿಯು, ರಾಜನಿಗೆ ನಮಸ್ಕಾರ ಮಾಡಿ ಪುನಃ ಹೇಳುತ್ತಾಳೆ: "ಲೋಕದಲ್ಲಿ ಉಪಾಯದಿಂದ ಸಕಲ ಪ್ರಯೋಜನಗಳೂ ಸಿದ್ಧಿಸುತ್ತವೆ; ಆದುದರಿಂದ ನಿನಗೆ ಒಂದು ಉಪಾಯವನ್ನು ಹೇಳುತ್ತೇನೆ.

ಕೇಳು, ಸಕಲೌಷಧಿಗಳೂ ನನ್ನಲ್ಲಿ ಜೀರ್ಣವಾಗಿರುತ್ತವೆ. ಅವುಗಳನ್ನು ಕ್ಷೀರ ರೂಪಿನಿಂದ ಕರೆಯುತ್ತೇನೆ. ನನಗೆ ಒಂದು ಕರುವನ್ನು ಮಾಡಿಕೊಡು, ಸಕಲೌಷಧಿಗಳನ್ನೂ ನಿನ್ನ ಪ್ರಜೆಗಳ ಹಿತಕ್ಕಾಗಿ ಸಿದ್ಧಪಡಿಸುತ್ತೇನೆ; ನನ್ನನ್ನು ಸಮರ್ಥಳನ್ನಾಗಿ ಮಾಡು, ಉತ್ಕೃಷ್ಟವಾದ ಔಷಧಿಗಳನ್ನು ಉತ್ಪಾದನೆ ಮಾಡುತ್ತೇನೆ" ಎಂದು ಭೂಮಿಯು ಉಪಾಯವನ್ನು ಹೇಳಲು, ಆಗ ಪೃಥುಚಕ್ರವರ್ತಿಯು ಪರ್ವತಗಳನ್ನು ಅನೇಕ ಭಾಗಗಳನ್ನು ಮಾಡಿ, ಭೂಮಿಯನ್ನು ಒಂದೇ ಸಮನಾಗಿ ಮಾಡಿ ಪ್ರಜೆಗಳ ವಾಸಕ್ಕೆ ಅನುಕೂಲವುಂಟಾಗಿ ಅನೇಕ ಗ್ರಾಮಗಳೂ, ಪಟ್ಟಣಗಳೂ, ಅಂಗಡಿಬೀದಿಗಳೂ, ಇವುಗಳೆಲ್ಲವೂ ಅನುಕೂಲಿಸಿದವು. ಅನಂತರ ಪೃಥುಚಕ್ರವರ್ತಿಯು ಸ್ವಾಯಂಭುವ ಮನುವನ್ನು ಕರುವನ್ನಾಗಿ ಮಾಡಿಕೊಂಡು, ತಾನೇ ಎರಡು ಕೈಗಳಿಂದ ಹಾಲನ್ನು ಕರೆದನು. ಆ ಹಾಲು ರೂಪಿನಿಂದ ಸಕಲೌಷಧಿಗಳೂ ಪ್ರಜಾಹಿತಕ್ಕಾಗಿ ಉತ್ಪತ್ತಿಯಾದವು; ಈಗಲೂ ಅದೇ ಅನ್ನಾದಿಗಳಿಂದ ಪ್ರಜೆಗಳು ಜೀವಿಸುತ್ತಾರೆ; ತದಾಪ್ರಭೃತಿ, ಭೂಮಿಗೆ ಪೃಥುಚಕ್ರವರ್ತಿಯು ತಂದೆಯಾದನು. ಆದುದರಿಂದ ಭೂಮಿಗೆ ಪೃಥಿವೀ ಎಂಬ ಹೆಸರುಂಟಾಯಿತು. ದೇವ, ಗಂಧರ್ವ, ದಾನವ, ಯಕ್ಷ, ಪಿತೃ ಮೊದಲಾದವರಿಗೂ ಸಹ, ಅವರವರ ಆಹಾರ ಪದಾರ್ಥಗಳನ್ನು ಕರೆದು ಸಕಲ ಲೋಕಕ್ಕೂ ಸಂತೋಷವನ್ನುಂಟುಮಾಡಿದನು. ಅದು ಮೊದಲುಗೊಂಡು ವಿಷ್ಣು ಪಾದಸಮುದ್ಭವಳಾದ ಭೂಮಿಗೆ ಧಾರಿಣೀ, ಪೋಷಣೀ ಇತ್ಯಾದಿ ಹೆಸರುಗಳುಂಟಾದುವು. ಇಂತಹ ಮಹಾನುಭಾವನಾದ ಪೃಥುಚಕ್ರವರ್ತಿಯ ಚರಿತ್ರೆಯನ್ನು ಯಾರು ಕೀರ್ತನೆ ಮಾಡುತ್ತಾರೋ ಅವರಿಗೆ ಅವರ ಪಾಪಗಳೆಲ್ಲವೂ ಹೋಗಿ, ದುಃಸ್ವಪ್ನ ದೋಷಾದಿಗಳೆಲ್ಲವೂ ನಾಶವಾಗಿ, ಸಮಸ್ತ ಮಂಗಳಗಳುಂಟಾಗುತ್ತವೆ.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ
ಹದಿಮೂರನೆಯ ಅಧ್ಯಾಯವು ಸಮಾಪ್ತಃ

ಹದಿನಾಲ್ಕನೆಯ ಅಧ್ಯಾಯವು

ಪೃಥುಚಕ್ರವರ್ತಿಗೆ ಅಂತರ್ಧಿ, ವಾದೀ ಎಂಬುದಾಗಿ ಇಬ್ಬರು ಮಕ್ಕಳು ಹುಟ್ಟಿದರು. ಅಂತರ್ಧಿಗೆ ಶಿಖಂಡಿನೀ ಎಂಬ ಪತ್ನಿಯಲ್ಲಿ ಹವಿರ್ಧಾನನೆಂಬ ಮಗನು ಹುಟ್ಟಿದನು. ಹವಿರ್ಧಾನನಿಗೆ ಧಿಷಣಾನಾಮಕಳಾದ ಪತ್ನಿಯಲ್ಲಿ ಪ್ರಾಚೀನಬರ್ಹಿ, ಶುಕ್ರ, ಗಯ, ಕೃಷ್ಣ, ವೃಜಿ, ಅಜಿನ ಎಂಬುದಾಗಿ ಆರುಜನ ಗಂಡು

ಮಕ್ಕಳು ಹುಟ್ಟಿದರು. ಇವರುಗಳಲ್ಲಿ ಪ್ರಾಚೀನಬರ್ಹಿಯೆಂಬುವನು ರಾಜನಾದನು. ಪ್ರಾಚೀನಾಗ್ರಾಃ ಕುಶಾಃ ಎಂಬ ಯಜ್ಞವಿಷಯವಾದ ದರ್ಭೆಯು, ಇವನಿಂದ ಪ್ರಸಿದ್ಧಿಯಾಯಿತು. ಲೋಕದಲ್ಲಿ ಮಹಾಬಲಶಾಲಿಯಾಗಿಯೂ, ಖ್ಯಾತಿವಂತ ನಾಗಿಯೂ ಇದ್ದ ಪ್ರಾಚೀನಬರ್ಹಿಯು ಸವರ್ಣಾಯೆಂಬ ಸಮುದ್ರರಾಜನ ಮಗಳನ್ನು ವಿವಾಹ ಮಾಡಿಕೊಂಡು, ಪ್ರಚೇತಸರೆಂಬುದಾಗಿ ಹತ್ತುಜನ ಗಂಡುಮಕ್ಕಳನ್ನು ಪಡೆದನು. ಈ ಹತ್ತುಜನವೂ ಧನುರ್ವೇದದಲ್ಲಿ ಅಗ್ರಗಣ್ಯ ರಾದವರು. ಹತ್ತುಸಾವಿರ ವರ್ಷಗಳವರೆಗೂ ಸಮುದ್ರದಲ್ಲಿ ಮುಳುಗಿಕೊಂಡು ತಪಸ್ಸುಮಾಡಿದರು. ಇವರು ಏತಕ್ಕಾಗಿ ತಪಸ್ಸುಮಾಡಿದರೆಂದರೆ, ಪ್ರಾಚೀನ ಬರ್ಹಿಯು ತನ್ನ ಹತ್ತು ಜನ ಮಕ್ಕಳನ್ನು ಕುರಿತು ಹೇಳುತ್ತಾನೆ: "ಎಲೈ ಪುತ್ರರೇ, ನನಗೆ ಬ್ರಹ್ಮದೇವನು ಹೇಳಿರುವುದೇನೆಂದರೆ, ನೀನು ಲೋಕದಲ್ಲಿ ಪ್ರಜಾವೃದ್ಧಿ ಯನ್ನು ಮಾಡು ಎಂಬುದಾಗಿ ಆಜ್ಞೆ ಮಾಡಿರುವುದರಿಂದ, ನೀವು ನನ್ನ ಸಂತೋಷಕ್ಕಾಗಿ ಅತ್ಯಂತ ಜಾಗರೂಕರಾಗಿ, ಪ್ರಜಾವೃದ್ಧಿಯನ್ನು ಮಾಡಿ ಬ್ರಹ್ಮನ ಮಾತನ್ನು ಗೌರವಿಸಬೇಕೆ"ಂಬುದಾಗಿ ಪ್ರಾಚೀನಬರ್ಹಿಯು ಪ್ರಚೇತ ಸರಿಗೆ ಹೇಳಿದನು. ಅದನ್ನು ಕೇಳಿದ ಪ್ರಚೇತಸರು ತಂದೆಯನ್ನು ಕುರಿತು, "ಎಲೈ ಪ್ರಾಚೀನಬರ್ಹಿಯೇ, ನೀನು ಪ್ರಜಾವೃದ್ಧಿಯನ್ನು ಮಾಡೆಂಬುದಾಗಿ ಆಜ್ಞಾಪಿಸಿದೆಯಲ್ಲವೇ; ಯಾವ ಕೆಲಸವನ್ನು ಮಾಡಿದರೆ ಪ್ರಜಾವೃದ್ಧಿಯಾಗು ತ್ತದೆ, ಅದನ್ನು ನಮಗೆ ಹೇಳೆ"ಂಬುದಾಗಿ ಕೇಳಿದುದಕ್ಕೆ, ಪ್ರಾಚೀನಬರ್ಹಿಯು ಹೇಳುತ್ತಾನೆ: "ಪ್ರಜಾವೃದ್ಧಿಗೋಸ್ಕರ ನೀವು ವರದನಾಗಿಯೂ, ಸರ್ವೇಶ್ವರ ನಾಗಿಯೂ ಇರುವ ಶ್ರೀಮಹಾವಿಷ್ಣುವನ್ನು ಆರಾಧಿಸಿ, ಇಷ್ಟಪ್ರಾಪ್ತಿಯನ್ನು ಹೊಂದಬೇಕೆ"ಂದು ಹೇಳಿದ ತಂದೆಯ ಮಾತನ್ನು ಕೇಳಿ, ಈ ಹತ್ತುಜನ ಪ್ರಚೇತಸರು, ಸಮುದ್ರದಲ್ಲಿ ಮುಳುಗಿ ಹತ್ತುಸಾವಿರ ವರ್ಷ ತಪಸ್ಸನ್ನು ಮಾಡಿದರು. ತಪಸ್ಸುಮಾಡತಕ್ಕ ಕಾಲದಲ್ಲಿ ಭಗವಂತನನ್ನು ಸ್ತೋತ್ರ ಮಾಡುತ್ತಾರೆ: "ಸಕಲ ವಾಕ್ಯಗಳೂ ಯಾವ ಪುರುಷನಲ್ಲಿ ಶಾಶ್ವತವಾಗಿವೆಯೋ ಅಂತಹ ಅಶೇಷಜಗತ್ತಿಗೂ ಪ್ರಭುವಾದ ಶ್ರೀಮನ್ನಾರಾಯಣನನ್ನು ನಮಸ್ಕರಿಸು ತ್ತೇವೆ. ಅಪ್ರಾಕೃತ ಜ್ಯೋತಿರ್ಮಯರೂಪನಾಗಿಯೂ, ಆದಿಪುರುಷನಾಗಿಯೂ, ಸಾಮ್ಯರಹಿತನಾಗಿಯೂ, ದೇಶ, ಕಾಲ, ಪರಿಚ್ಛೇದರಹಿತನಾಗಿಯೂ, ಸರ್ವ ಜಗದ್ಬೀಜನಾಗಿಯೂ, ದೇವತೆಗಳಿಗೆ ಜೀವಭೂತನಾಗಿಯೂ, ಪಿತೃಗಳಿಗೆ ಅಮೃತಪ್ರಾಯನಾಗಿಯೂ, ಲೋಕಗಳ ಕತ್ತಲೆಯನ್ನು ನಾಶಮಾಡಿ ಬೆಳಕನ್ನು ಉಂಟುಮಾಡತಕ್ಕವನಾಗಿಯೂ, ಭೂಮ್ಯಾತ್ಮಕನಾಗಿಯೂ, ವರುಣಾತ್ಮಕ ನಾಗಿಯೂ, ಪಾವಕಾತ್ಮಕನಾಗಿಯೂ, ವಾಯ್ವಾತ್ಮಕನಾಗಿಯೂ, ವ್ಯೋಮಾ

ತ್ಮಕನಾಗಿಯೂ, ಚತುರ್ಮುಖ ಬ್ರಹ್ಮಾತ್ಮಕನಾಗಿಯೂ, ಜ್ಞಾನಮೂಲನಾಗಿಯೂ, ವಿಶ್ವಾತ್ಮಕನಾಗಿಯೂ, ಪ್ರಕೃತಿರೂಪನಾಗಿಯೂ, ಪುರುಷೋತ್ತಮನಾಗಿಯೂ, ಮುಕ್ತಸ್ವರೂಪನಾಗಿಯೂ, ಅವಿಕಾರನಾಗಿಯೂ, ಪ್ರಕೃತಿಸಂಬಂಧರಹಿತನಾಗಿಯೂ, ಸ್ವರಾಡ್ರೂಪನಾಗಿಯೂ, ಅಪ್ರತಿಹತನಾಗಿಯೂ, ಅನ್ನಪಾನಾದಿಜನ್ಯಸುಖರಹಿತನಾಗಿಯೂ ಇರುವ ಶ್ರಿಯಃಪತಿಯಾದ ಶ್ರೀಮನ್ನಾರಾಯಣನನ್ನು ಬಾರಿಬಾರಿಗೂ ನಮಸ್ಕರಿಸುತ್ತೇವೆ." ಈ ಪ್ರಕಾರ ಹತ್ತುಸಾವಿರ ವರ್ಷ ಜಲದಲ್ಲಿ ಮುಳುಗಿ ಭಗವಂತನನ್ನು ಪ್ರಾರ್ಥಿಸಲು, ಭಕ್ತಪರಾಧೀನನಾದ ಭಗವಂತನು ಪ್ರತ್ಯಕ್ಷನಾಗಲು; ಆಗ ಪ್ರಚೇತಸರು ಗರುಡಾರೂಢನಾದ ಪರಮಾತ್ಮನನ್ನು ನಮಸ್ಕಾರಮಾಡಿದನಂತರ ಭಕ್ತಿಭಾವದಿಂದ ನಮ್ರರಾದ ಪ್ರಚೇತಸರನ್ನು ಕುರಿತು ಭಗವಂತನು ಹೇಳುತ್ತಾನೆ: "ನಿಮಗೆ ಅನುಗ್ರಹಮಾಡಿ ವರವನ್ನು ಕೊಡಬೇಕೆಂದು ಬಂದಿರುತ್ತೇನೆ. ನಿಮ್ಮ ಇಷ್ಟಾರ್ಥವನ್ನು ಅಪೇಕ್ಷಿಸಿ" ಎಂಬುದಾಗಿ ಹೇಳಲು, ಆ ಪ್ರಚೇತರಸು "ಹೇ ಜಗನ್ನಾಯಕನೇ, ನಮ್ಮ ತಂದೆಯ ಆಜ್ಞೆಯಂತೆ ಪ್ರಜಾವೃದ್ಧಿಯನ್ನು ಕೊಡು" ಎಂಬುದಾಗಿ ಪ್ರಾರ್ಥಿಸಲು, ಭಗವಂತನು ಇಷ್ಟಾರ್ಥವನ್ನು ಕೊಟ್ಟು ಅಂತರ್ಧಾನನಾದನು. ಆಗ ಪ್ರಚೇತಸರು ಜಲದಿಂದ ಮೇಲಕ್ಕೆ ಬಂದರು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ
ಹದಿನಾಲ್ಕನೆಯ ಅಧ್ಯಾಯವು ಸಮಾಪ್ತಃ

ಹದಿನೈದನೆಯ ಅಧ್ಯಾಯವು

ಈ ಪ್ರಚೇತಸರು ತಪಸ್ಸು ಮಾಡತಕ್ಕ ಕಾಲದಲ್ಲಿ ನಾರದರು ಪ್ರಾಚೀನಬರ್ಹಿಗೆ ತತ್ತ್ವೋಪದೇಶ ಮಾಡಿದ್ದರಿಂದ ಪ್ರಾಚೀನಬರ್ಹಿಯು ರಾಜ್ಯವನ್ನು ಬಿಟ್ಟು ವನಕ್ಕೆ ಪ್ರಯಾಣಮಾಡಿದನು. ಆಗ ರಾಜ್ಯವು ಅರಾಜಕವಾದುದರಿಂದ ಪ್ರಜಾಕ್ಷಯವುಂಟಾಗಿ. ರಾಜ್ಯದಲ್ಲೆಲ್ಲಾ ವೃಕ್ಷಗಳೆಲ್ಲವೂ ಅಂತರಿಕ್ಷದವರೆಗೂ ಬೆಳೆದವು, ಅಂದರೆ, ರಾಜ್ಯವೆಲ್ಲವೂ ವೃಕ್ಷಾದಿಗಳಿಂದ ಆಕ್ರಮಿಸಿ ಕಾಡಾಗಿದ್ದಿತು. ಆ ಕಾಡಿನಲ್ಲಿ ವಾಯುವು ಪ್ರವೇಶಿಸಲು ಶಕ್ತನಾಗಲಿಲ್ಲ. ಹೀಗಿರತಕ್ಕ ಕಾಲದಲ್ಲಿ ಪ್ರಚೇತಸರು ತಪಸ್ಸು ಮಾಡಿ ಕೃತಾರ್ಥರಾಗಿ ಬಂದು ತಮ್ಮ ರಾಜ್ಯವನ್ನು ನೋಡಿದ ಕಾಲದಲ್ಲಿ, ರಾಜ್ಯವು ಕ್ಷೋಭೆಯುಕ್ತವಾದುದನ್ನು ಕಂಡು ಬಹಳ ಕೋಪದಿಂದ ತಮ್ಮ ಮುಖದಿಂದ ವಾಯುವನ್ನೂ, ಅಗ್ನಿಯನ್ನೂ ಹುಟ್ಟಿಸಿದರು.

ಆಗ ವಾಯುವು ರಾಜ್ಯದಲ್ಲಿದ್ದ ವಿಸ್ತೀತ ವೃಕ್ಷಗಳನ್ನು ನಿರ್ಮೂಲಮಾಡಿದನು. ಅಗ್ನಿಯು ಈ ವೃಕ್ಷಗಳೆಲ್ಲವನ್ನೂ ಸುಟ್ಟು ಬೂದಿಮಾಡಿದನು. ಇನ್ನೂ ಸ್ವಲ್ಪ ವೃಕ್ಷಗಳು ಉಳಿದಿರುವ ಕಾಲದಲ್ಲಿ ಚಂದ್ರನು ಪ್ರಚೇತಸರನ್ನು ಕುರಿತು, "ಓ ಪ್ರಚೇತಸರೇ, ನೀವು ಕೋಪವನ್ನು ಬಿಟ್ಟು ಸಮಾಧಾನಚಿತ್ತರಾಗಿರಿ, ನಿಮಗೂ ಈ ವೃಕ್ಷಗಳಿಗೂ ಸಂಧಾನವನ್ನು ಮಾಡುತ್ತೇನೆ. ಈ ವೃಕ್ಷಗಳು ಕಂದಮೂಲ ಫಲಾದಿಗಳಿಂದ ಪ್ರಜಾವೃದ್ಧಿಗೆ ಕಾರಣವಾದವು. ಈ ವೃಕ್ಷಾದಿಗಳನ್ನು ನಾಶ ಮಾಡುವುದು ಯುಕ್ತವಲ್ಲ. ಈ ವೃಕ್ಷಗಳಿಂದ ಒಬ್ಬ ಸ್ತ್ರೀಯು ಹುಟ್ಟುವಳು. ಇವಳು ನಿಮಗೆ ಪತ್ನಿಯಾಗುವಳು; ಇವಳಿಂದ ನಿಮಗೆ ಪ್ರಜಾವೃದ್ಧಿಯಾಗುವುದು. ನಿಮ್ಮ ಅರ್ಧ ತೇಜಸ್ಸಿನಿಂದಲೂ, ನನ್ನ ಅರ್ಧ ತೇಜಸ್ಸಿನಿಂದಲೂ ಇವಳಲ್ಲಿ ದಕ್ಷಬ್ರಹ್ಮನು ಹುಟ್ಟುವನು. ಮಾರಿಷಾನಾಮಕಳಾದ ವೃಕ್ಷಪುತ್ರಿಯಲ್ಲಿ ಪ್ರಜಾವೃದ್ಧಿಯು ಆಗುವುದು. ಇದಕ್ಕಾಗಿ ನಿಮಗೆ ಒಂದು ಕಥೆಯನ್ನು ಹೇಳುತ್ತೇನೆ: ಪೂರ್ವದಲ್ಲಿ ಕಂಡು ಎಂಬ ಋಷಿಯು ಗೋಮತೀ ತೀರದಲ್ಲಿ ತಪಸ್ಸುಮಾಡುತ್ತಿದ್ದನು. ಈ ಋಷಿಯ ತಪೋವಿಘ್ನಾರ್ಥವಾಗಿ ದೇವೇಂದ್ರನು ಪ್ರಮ್ಲೋಚಾ ಎಂಬ ಅಪ್ಸರಸ್ತ್ರೀಯನ್ನು ಕಳುಹಿಸಿದನು. ಆ ಪ್ರಮ್ಲೋಚೆಯು ಶುಚಿಸ್ಮಿತಳಾಗಿ, ಋಷಿಯ ತಪೋಭಂಗವನ್ನು ಮಾಡಿದಳು. ಆಗ ಋಷಿಯು ಪ್ರಮ್ಲೋಚೆಯೊಡನೆ ಅನೇಕ ವರ್ಷಗಳವರೆಗೂ ಮಂದರ ಪರ್ವತದಲ್ಲಿ ವಿಷಯಾಸಕ್ತನಾಗಿರತಕ್ಕ ಕಾಲದಲ್ಲಿ ಆ ಅಪ್ಸರಸ್ತ್ರೀಯು ಕಂಡುವನ್ನು ಕುರಿತು ಹೇಳುತ್ತಾಳೆ: "ಎಲೈ ಮಹರ್ಷಿಯೇ, ನಾನು ಬಂದು ಅನೇಕ ವರ್ಷಗಳಾಯಿತು. ನನಗೆ ಅಪ್ಪಣೆಯನ್ನು ಕೊಡು, ದೇವಲೋಕಕ್ಕೆ ಹೋಗುತ್ತೇನೆ"ಂದು ಹೇಳಲು, ಆಗ ಋಷಿಯು "ಹೇ ಮಂಗಳಾಂಗಿಯೇ, ನೀನು ಇನ್ನೂ ಸ್ವಲ್ಪ ದಿವಸ ಇಲ್ಲಿಯೇ ಇರು" ಎಂಬುದಾಗಿ ಹೇಳಲು, ಆ ಅಪ್ಸರಸ್ತ್ರೀಯು ಶಾಪಭಯದಿಂದ ಕಂಡು ಋಷಿಯೊಡನೆ ವಿಹರಿಸಿಕೊಂಡಿದ್ದಳು. ಹೀಗೆ ಪುನಃ ನೂರಾರುವರ್ಷಗಳು ಕಳೆದು ಹೋದವು. ಪುನಃ ಋಷಿಯನ್ನು ಕುರಿತು, "ಹೇ ಭಗವಂತನೇ, ನನಗೆ ಅನುಜ್ಞೆಯನ್ನು ಕೊಡು, ನಾನು ದೇವಲೋಕಕ್ಕೆ ಹೋಗುತ್ತೇನೆ" ಎಂದು ಬೇಡಿಕೊಳ್ಳಲು, ಈ ಕಂಡುಋಷಿಯು ಆ ಅಪ್ಸರಸ್ತ್ರೀಯನ್ನು ಕುರಿತು, "ಎಲೈ ಭದ್ರಾಂಗಿಯೇ, ನೀನು ಇನ್ನೂ ಕೊಂಚಕಾಲ ಇಲ್ಲಿಯೇ ಇರು" ಎಂಬುದಾಗಿ ಹೇಳಲು, ಪ್ರಮ್ಲೋಚೆಯು ಶಾಪಭೀತಳಾಗಿ ಪುನಃ ನೂರಾರು ವರ್ಷಗಳವರೆಗೂ ಋಷಿಯೊಡನೆ ಕ್ರೀಡಿಸಿದಳು. ಈ ಪ್ರಕಾರ ಕಂಡುಋಷಿಯು, ಆ ಅಪ್ಸರಸ್ತ್ರೀಯಲ್ಲಿ ಪ್ರೇಮವನ್ನು ಹೆಚ್ಚಿಸಿಕೊಂಡು, ನಾಲ್ಕಾವರ್ತಿ ಹೋಗುತ್ತೇನೆಂದು ಹೇಳಿದಾಗ್ಯೂ, ಋಷಿಯು ಅವಳನ್ನು ಬಿಡಲಾರದೆ ವಿಷಯಾಸಕ್ತನಾಗಿದ್ದನು. ಹೀಗಿರಲು,

ಒಂದಾನೊಂದು ದಿವಸ ಅತ್ಯಂತ ಆತುರನಾಗಿ ಆಶ್ರಮದಿಂದ ಹೊರಗೆ ಹೊರಟನು. ಅದನ್ನು ನೋಡಿದ ಪ್ರಮ್ಲೋಚೆಯು, "ಎಲೈ ಮಹರ್ಷಿಯೇ, ಇದೇನು ಇಷ್ಟು ಆತುರನಾಗಿ ಪ್ರಯಾಣಮಾಡುವೆ?" ಎಂದು ಪ್ರಶ್ನಿಸಲು, ಅದಕ್ಕೆ ಋಷಿಯು, "ಸಂಧ್ಯಾವಂದನೆಗೆ ಹೋಗುತ್ತೇನೆ, ಕರ್ಮಹೀನನಾಗಕೂಡದು" ಎಂಬುದಾಗಿ ಹೇಳಲು, ಆ ಮಾತಿಗೆ ಅಪ್ಸರಸ್ತ್ರೀಯು ನಕ್ಕು, "ಏನು ಮಹರ್ಷಿಯೇ, ನನ್ನೊಡನೆ ಅನೇಕ ವರ್ಷಗಳವರೆಗೂ ಭೋಗಿಸುತ್ತಲಿದ್ದು, ಸಂಧ್ಯಾವಂದನಾದಿಗಳೆಲ್ಲವನ್ನೂ ಬಿಟ್ಟು, ಈ ದಿವಸ ಮಾತ್ರ ಸಂಧ್ಯಾವಂದನೆಯನ್ನು ಮಾಡುತ್ತೇನೆಂದು ಹೇಳುವೆಯಲ್ಲಾ, ಇದೇನಾಶ್ಚರ್ಯ"ವೆಂದು ವಿಸ್ಮಿತಳಾಗಿ ಕೇಳಲು, ಆ ಮಹರ್ಷಿಯು ಹೇಳುತ್ತಾನೆ: "ನೀನು ಈ ದಿವಸ ಬೆಳಿಗ್ಗೆ ನದೀತೀರದಲ್ಲಿ ನನ್ನನ್ನು ಕಂಡು ನನ್ನ ಆಶ್ರಮವನ್ನು ನೀನು ಪ್ರವೇಶಮಾಡಿದೆ. ಈಗ ಸಂಧ್ಯಾಕಾಲವಾದುದರಿಂದ ಸಂಧ್ಯಾವಂದನೆಗೆ ಹೋಗುತ್ತೇನೆಂದು ಹೇಳಿದರೆ ನೀನು ನನ್ನನ್ನು ಹಾಸ್ಯಮಾಡಲು ಕಾರಣವೇನು" ಎಂಬುದಾಗಿ ಕೇಳಲು, ಅದಕ್ಕೆ ಪ್ರಮ್ಲೋಚೆಯು ಹೇಳುತ್ತಾಳೆ: "ಓ ಮಹರ್ಷಿಯೇ, ನಾನು ಬೆಳಿಗ್ಗೆ ಬಂದೆನೆಂದು ನೀನು ಹೇಳುವ ಮಾತು ನಿಜವು; ಆ ದಿನದಲ್ಲಿ ಇದುವರೆಗೆ ಅನೇಕ ವರ್ಷಗಳು ಕಳೆದುಹೋದವು" ಎಂಬುದಾಗಿ ಹೇಳಲು, ಅದಕ್ಕೆ ಋಷಿಯು ಬಹಳ ಗಾಬರಿಯಾಗಿ "ಏನು ನೂರಾರು ವರ್ಷಗಳು ಕಳೆದುಹೋದವೇ; ಹಾಗಾದರೆ ನೀನು ಬಂದುದು ಯಾವಾಗ, ಅದನ್ನು ಹೇಳು" ಎಂದು ಕೇಳಲು, ಅದಕ್ಕೆ ಅಪ್ಸರಸ್ತ್ರೀಯು, "ಎಲೈ ಮಹರ್ಷಿಯೇ, ನಾನು ನಿನ್ನಲ್ಲಿ ಬಂದು ಒಂಬೈನೂರು ಎಪ್ಪತ್ತು ವರ್ಷಗಳೂ ಆರು ತಿಂಗಳುಗಳೂ ಮೂರು ದಿವಸವೂ ಆದುವು. ಅನೇಕ ಶತವರ್ಷಗಳು ನನ್ನಲ್ಲಿ ನೀನು ರಮಿಸಿ, ನನ್ನ ಭೋಗಾತಿಶಯದಿಂದ ನಿನಗೆ ಒಂದು ದಿವಸದ ಹಾಗೆ ಪರಿಣಮಿಸಿತಲ್ಲವೇ! ಹೇ ಮಹರ್ಷಿಯೇ, ನಾನು ಯಾವಾಗಲೂ ಸುಳ್ಳಾಡತಕ್ಕವಳಲ್ಲ. ತತ್ರಾಪಿ ನಿನ್ನ ಸಾನ್ನಿಧ್ಯದಲ್ಲಿ ಹೇಳತಕ್ಕವಳಲ್ಲ"ವೆಂಬುದಾಗಿ ಹೇಳಿದ ಮಾತನ್ನು ಕೇಳಿದ ಕಂಡುಋಷಿಯೇ ಆಕೆಯನ್ನು ಕುರಿತು "ಹೇ ಸ್ತ್ರೀಯೆ, ನೀನು ಹೇಳಿದ ಮಾತು ನಿಜವಾಗಿರಬಹುದು. ವಿಷಯಾಸಕ್ತನಾದ ನನಗೆ ಇಷ್ಟುದಿವಸವೂ ಒಂದೇ ದಿನವಾಗಿ ಕಂಡಿತು. ಅಯ್ಯೋ ನನ್ನಂತಹ ಮೂಢನಾದವನು ಯಾರೂ ಇಲ್ಲ, ನನ್ನ ತಪಸ್ಸುಗಳೆಲ್ಲವೂ ನಷ್ಟವಾದುವು, ನನ್ನ ವಿವೇಕವೂ ನಾಶವಾಯಿತು. ಈ ಸ್ತ್ರೀಯು ನನ್ನ ಮೋಹಕ್ಕಾಗಿಯೇ ಹುಟ್ಟಿದವಳು; ಊರ್ಮಿಷಟ್ಕಾತಿಗನಾದ ಅಂದರೆ ಹಸಿವು, ಬಾಯಾರಿಕೆ, ಲೋಭ, ಮೋಹ, ಜರಾ, ಮೃತ್ಯು—ಈ ಆರನ್ನೂ ಅತಿಕ್ರಮಿಸಿದ ಪರಬ್ರಹ್ಮನನ್ನು ಧ್ಯಾನಿಸಲು ಮನೋನಿಯಮದಿಂದ ಇದ್ದ ನನ್ನ ಮನಸ್ಸನ್ನೂ ಆ ಮನ್ಮಥನು ಹಾಳುಮಾಡಿದನಲ್ಲಾ, ವೇದವೇದ್ಯ

ನಾದ ಪರಬ್ರಹ್ಮನ ಪ್ರಾಪ್ತಿಗೆ ಕಾರಣವಾದ ನನ್ನ ಮನಸ್ಸನ್ನು ಈ ಮನ್ಮಥನು ನರಕಮಾರ್ಗಕ್ಕೆ ಅಪಹರಿಸಿದನಲ್ಲಾ" ಇತ್ಯಾದಿ ಅನುತಾಪದಿಂದ ತನ್ನನ್ನು ತಾನೇ ನಿಂದಿಸಿಕೊಂಡು, ಸಮೀಪವರ್ತಿಯಾದ ಅಪ್ಸರಸ್ತ್ರೀಯನ್ನು ಕುರಿತು, "ಹೇ ಪಾಪಿಯೇ ನಡೆ, ನೀ ನೆರವೇರಿಸಿದೆ, ನೀನು ಮಾಡಬೇಕಾದ ಕೆಲಸವನ್ನು ಸಾಂಗವಾಗಿ ಮಾಡಿದೆ; ಆದರೆ ಈಗ ನನಗೆ ಉಂಟಾಗಿರುವ ಕೋಪದಿಂದ ನಿನ್ನನ್ನು ಬೂದಿಮಾಡುತ್ತಿದ್ದೆನು, ಏನು ಮಾಡುವುದು, ಅಜಿತೇಂದ್ರಿಯನಾದ ನನ್ನ ದೋಷವೇ ಹೊರ್ತು ಇನ್ನ್ಯಾರ ದೋಷವೂ ಅಲ್ಲ. ಸತ್ಪುರುಷರ ಜೊತೆಯಲ್ಲಿ ಏಳು ಹೆಜ್ಜೆಯನ್ನಿಟ್ಟರೆ ಮಿತ್ರತ್ವವುಂಟಾಗುವಲ್ಲಿ ನಿನ್ನೊಡನೆಯೇ ಬಹಳಕಾಲ ವಾಸಮಾಡಿದುದರಿಂದ ನಿನ್ನ ದೋಷವೇನೂ ಇಲ್ಲ. ಮಹಾ ಮೋಹವೆಂಬ ಪೆಟ್ಟಿಗೆ ಹಾಗೆ ಇರತಕ್ಕ ನೀನು, ಇಂದ್ರನಿಗೆ ಪ್ರಿಯವನ್ನುಂಟುಮಾಡುವುದಕ್ಕಾಗಿ ಬಂದು, ನನ್ನ ತಪಸ್ಸನ್ನು ನಾಶಮಾಡಿದೆ; ಹೋಗು" ಎಂಬುದಾಗಿ ಅವಳನ್ನು ಕಳುಹಿಸಿದನು. ಪ್ರಮ್ಲೋಚೆಯು ಭಯದಿಂದ ಕೂಡಿದವಳಾಗಿ, ಶರೀರದಲ್ಲಿ ಬೆವರುಗಳುಂಟಾಗಿ, ಮಹರ್ಷಿಯು ತನಗೆ ಶಾಪವನ್ನು ಕೊಡದೆ ಸಮಾಧಾನವನ್ನು ಹೊಂದಿದನಲ್ಲ, ಎಂಬುದಾಗಿ ತಾನೂ ಸ್ವಲ್ಪ ಧೈರ್ಯವನ್ನು ತಾಳಿ ಪ್ರಯಾಣಮಾಡಿದಳು. ಆಕಾಶಮಾರ್ಗವಾಗಿ ಪ್ರಯಾಣಮಾಡತಕ್ಕ ಕಾಲದಲ್ಲಿ, ಇವಳ ದೇಹದಿಂದ ಬಿದ್ದ ಬೆವರುಗಳು ವೃಕ್ಷಾಗ್ರದಲ್ಲಿ ಬಿದ್ದು, ಅವುಗಳೆಲ್ಲವೂ ಚಿಗುರಿದವು. ವೃಕ್ಷಗಳಿಗೆ ಚಿಗುರುಗಳೇ ಗರ್ಭವು. ಕಂಡುಋಷಿಯಿಂದ ಪ್ರಮ್ಲೋಚೆಯು ದೇಹದಲ್ಲಿದ್ದ ಗರ್ಭವು ಬೆವರಿನ ರೂಪದಿಂದ ವೃಕ್ಷಾಗ್ರದಲ್ಲಿ ಬಿದ್ದುದನ್ನು ವೃಕ್ಷಗಳು ಪರಿಗ್ರಹಿಸಿದವು. ಎಲ್ಲಾ ವೃಕ್ಷಗಳಲ್ಲಿಯೂ ಬಿದ್ದ ಬೆವರುಗಳನ್ನು ವಾಯುವು ಒಂದೇ ಕಡೆಯಲ್ಲಿ ಸೇರಿಸಿದನು. ಆ ಗರ್ಭವನ್ನು ನನ್ನ ಕಿರಣಗಳಿಂದ ಕಾಪಾಡಿದೆನು. ಆ ಗರ್ಭವು ವೃದ್ಧಿಯಾಗಿ ಮಾರಿಷಾ ಎಂಬ ಹೆಸರಿನಿಂದ ಸ್ತ್ರೀರತ್ನವಾದಳು. ಈ ಮಾರಿಷಳನ್ನೇ ವೃಕ್ಷಗಳು ನಿಮಗೆ ಪತ್ನಿಯನ್ನಾಗಿ ಕೊಡುತ್ತಾರೆ. ಆದುದರಿಂದ ನೀವು ವೃಕ್ಷಗಳಲ್ಲುಂಟಾದ ಕೋಪವನ್ನು ಬಿಡಿ, ಎಂಬುದಾಗಿ ಚಂದ್ರನು ಪ್ರಚೇತಸರಿಗೆ ಹೇಳಿದನು. ಕಂಡುಮಹರ್ಷಿಯ ತೇಜಸ್ಸಿನಿಂದ ಹುಟ್ಟಿದವಳು, ವೃಕ್ಷಗಳಿಗೆ ಪುತ್ರಿಯಾದವಳು. ನನಗೂ, ವಾಯುವಿಗೂ ಸಹ ಪ್ರೀತಿಪಾತ್ರಳು, ಪ್ರಮ್ಲೋಚಾಪ್ಸರಸ್ತ್ರೀಯ ಮಗಳು, ಇವಳಿಂದ ನೀವು ಪ್ರಜಾವೃದ್ಧಿಯನ್ನು ಮಾಡೆಂದು ಚಂದ್ರನು ಪ್ರಚೇತಸರಿಗೆ ಹೇಳಿದನು. ಅನಂತರದಲ್ಲಿ ಕಂಡುಮಹರ್ಷಿಯು. ತಾನು ಮಾಡಿದ ತಪಸ್ಸೆಲ್ಲವೂ ನಾಶವಾದವೆಂಬುದಾಗಿ ಚಿಂತೆಯಿಂದ ಶ್ರೀಮಹಾವಿಷ್ಣುವಿಗೆ ಆವಾಸಸ್ಥಾನವಾದ ಪುರುಷೋತ್ತಮಾದ್ರಿ ಎಂಬ ಪುಣ್ಯಕ್ಷೇತ್ರವನ್ನು ಹೊಂದಿ, ಅಲ್ಲಿ ಏಕಾಗ್ರಮನಸ್ಕ

ನಾಗಿ ಶ್ರೀಮಹಾವಿಷ್ಣುವಿನ ಆರಾಧನೆಯನ್ನು ಮಾಡುವದಕ್ಕೆ ಪ್ರಾರಂಭಿಸಿದನು. ಊರ್ಧ್ವಬಾಹುವಾಗಿ, ಬ್ರಹ್ಮಪಾರಮಯವಾದ ಜಪವನ್ನು ಮಾಡುತ್ತಿದ್ದನು. ಆಗ ಪ್ರಚೇತಸರು, ಚಂದ್ರನನ್ನು ಕುರಿತು, ಕಂಡುಮಹರ್ಷಿಯು ಬ್ರಹ್ಮಪಾರ ಮಯವಾದ ಸ್ತೋತ್ರವನ್ನು ಮಾಡಿದನೆಂಬುದಾಗಿ ಹೇಳಿದೆಯಲ್ಲಾ, ಸ್ತೋತ್ರಾರ್ಥವನ್ನು ಕೇಳುವದಕ್ಕೆ ಇಚ್ಛೆಯುಳ್ಳವರಾಗಿದ್ದೇವೆ, ಅದನ್ನು ಹೇಳೆಂಬುದಕ್ಕೆ ಚಂದ್ರನು ಹೇಳುತ್ತಾನೆ: "ಸಂಸಾರಮಾರ್ಗವನ್ನು ಅತಿಕ್ರಮಿಸಿ ದವನಾಗಿಯೂ, ಅಥವಾ ಪರಂಪರಯಾ ವಿಚ್ಛೇದವಿಲ್ಲದೆ ಗುರುವಿನಿಂದ ಉಪದೇಶಿಸಲ್ಪಡುವುದಕ್ಕೆ ರಹಸ್ಯವಾದ ವಸ್ತುವಾಗಿಯೂ, ಅನಂತ ಶಕ್ತಿ ಯಾಗಿಯೂ, ಅಥವಾ ಅಪರಿಮಿತ ಪರಿಮಾಣನಾಗಿಯೂ, ಅಥವಾ ಅಪಾರವಾದ ಯಜ್ಞಕರ್ಮಗಳನ್ನು ಪೂರ್ತಿ ಮಾಡತಕ್ಕವನಾಗಿಯೂ, ಬ್ರಹ್ಮರುದ್ರಾದಿಗಳಿಗೂ ಕೂಡ, ನಾರದರ ಮಾತಿನ ಪ್ರಕಾರ ಪ್ರಜಾವೃದ್ಧಿ ಕೆಲಸವನ್ನು ಬಿಟ್ಟು ಪರಮಾರ್ಥವಿಗ್ರಹನಾಗಿಯೂ, ಅಥವಾ ಪರಮಪ್ರಯೋಜನಾನಂದಸ್ವರೂಪ ನಾಗಿಯೂ, ವೇದಗಳನ್ನೂ ಬ್ರಹ್ಮಾದಿಗಳನ್ನೂ ಸಹ ಕಾಪಾಡತಕ್ಕವನಾಗಿಯೂ, ಪರಸ್ಪರ ಭಿನ್ನವಾದ ವಸ್ತುಗಳನ್ನು ಏಕಮಾಡತಕ್ಕವನಾಗಿಯೂ, ಮುಕ್ತರಿಗೆ ಆವಾಸಭೂಮಿಯಾಗಿಯೂ, ಬ್ರಹ್ಮಾಂಡ ಮೊದಲುಗೊಂಡು ಮೂಲಕಾರಣ ಪರ್ಯಂತವಾಗಿಯೂ, ಕಾರಣ ಮೂಲಾತ್ಮನಾಗಿಯೂ, ಕರ್ಮಕರ್ತೃರೂಪ ನಾಗಿಯೂ, ವೇದನಿರ್ವಾಹಕನಾಗಿಯೂ, ವೇದಾಂಗಾದಿ ಶಬ್ದಜಾತರೂಪ ನಾಗಿಯೂ, ಸರ್ವಶಬ್ದವಾಚ್ಯನಾಗಿಯೂ, ಬ್ರಹ್ಮಮನ್ವಾದಿಗಳಿಗೆ ಪತಿ ಯಾಗಿಯೂ, ನಾಶರಹಿತನಾಗಿಯೂ ಇರುವ ಪರಮಾತ್ಮನು ಯಾವಾಗ ನನಗೆ ಪ್ರತ್ಯಕ್ಷನಾಗುತ್ತಾನೋ ಆಗ ನನ್ನ ರಾಗಾದಿ ದೋಷಗಳೆಲ್ಲವೂ ಶಮನವಾಗು ತ್ತವೆ." ಈ ಪ್ರಕಾರ ಬ್ರಹ್ಮಪರಾಖ್ಯವಾದ ಸ್ತೋತ್ರದಿಂದ ಶ್ರೀಮನ್ನಾರಾಯಣ ನನ್ನು ಸ್ತೋತ್ರಮಾಡಿ, ಕಂಡುಋಷಿಯು ಪರಮಸಿದ್ಧಿಯನ್ನು ಹೊಂದಿದನು. ಈ ಪ್ರಕಾರ ಚಂದ್ರನು, ಕಂಡುಋಷಿಯ ಮಹಾತ್ಮ್ಯವನ್ನು ಪ್ರಚೇತಸರಿಗೆ ಹೇಳಿ, ಮಾರಿಷಾ ವಿಷಯವನ್ನು ಹೇಳುತ್ತಾನೆ: "ಈ ಮಾರಿಷೆಯು ಜನ್ಮಾಂತರದಲ್ಲಿ ಒಬ್ಬ ರಾಜನ ಪತ್ನಿಯಾಗಿ ಅಪುತ್ರಳಾದ ಕಾಲದಲ್ಲಿ, ಗಂಡನು ಮರಣವನ್ನು ಹೊಂದಿದನು. ಪತಿಹೀನಳಾದ ಇವಳು ಭಗವಂತನನ್ನು ಕುರಿತು ತಪಸ್ಸುಮಾಡಿ ದಳು. ಆಗ ಭಗವಂತನು ಪ್ರತ್ಯಕ್ಷನಾಗಲು, ಶ್ರೀಮನ್ನಾರಾಯಣನನ್ನು ಕುರಿತು ಪ್ರಾರ್ಥಿಸುತ್ತಾಳೆ: "ಓ ಸ್ವಾಮಿಯೇ, ಬಾಲವೈಧವ್ಯದಿಂದ ನನ್ನ ಜನ್ಮವು ನಿಷ್ಫಲವಾಯಿತು. ನಾನು ಭಾಗ್ಯಹೀನಳಾದವಳು, ನನಗೆ ಜನ್ಮಜನ್ಮದಲ್ಲಿಯೂ, ಶ್ಲಾಘ್ಯವಾದ ಪತಿಗಳುಂಟಾಗಲಿ, ನಿನ್ನ ಅನುಗ್ರಹದಿಂದ ಬ್ರಹ್ಮನಿಗೆ ಸಮನಾದ

ಮಗನು ಹುಟ್ಟಲಿ, ರೂಪುಸಂಪತ್ತುಗಳಿಂದ ಕೂಡಿದವಳಾಗಿಯೂ, ಪ್ರಿಯ ದರ್ಶನಳಾಗಿಯೂ, ಅಯೋನಿಜೆಯಾಗಿಯೂ ಹುಟ್ಟಬೇಕು" ಎಂದು ವರಗಳನ್ನು ಕೇಳಲು ; ಅದಕ್ಕೆ ಭಗವಂತನು ಹೇಳುತ್ತಾನೆ: "ಓ ಸ್ತ್ರೀಯೇ, ಇನ್ನೊಂದು ಜನ್ಮದಲ್ಲಿಯೇ ನಿನಗೆ ಹತ್ತು ಜನ ಗಂಡಂದಿರು ಆಗುತ್ತಾರೆ. ಅವರಿಂದ ನಿನಗೆ ಮಹಾತ್ಮನಾಗಿಯೂ, ಪರಾಕ್ರಮಶಾಲಿಯಾಗಿಯೂ, ಬ್ರಹ್ಮನಿಗೆ ಸಮನಾದ ಗುಣವುಳ್ಳವನಾಗಿಯೂ ಇರುವ ಮಗನನ್ನು ಹೊಂದುತ್ತೀಯೆ. ಆ ಒಬ್ಬ ಮಗ ನಿಂದ ಪ್ರಜಾವೃದ್ಧಿಯುಂಟಾಗುತ್ತದೆ. ನೀನೂ ಕೂಡ ಅಯೋನಿಜೆಯಾಗಿ ಹುಟ್ಟುತ್ತಿ." ಈ ಪ್ರಕಾರ ಭಗವಂತನು ಹೇಳಿ ಅಂತರ್ಧಾನವನ್ನು ಹೊಂದಿ ದನು. ಅವಳೇ ಈಗ ಮಾರಿಷೆಯಾಗಿ ಹುಟ್ಟಿರುತ್ತಾಳೆ. ಇವಳೇ ನಿಮಗೆ ಪತ್ನಿಯು ಎಂಬುದಾಗಿ ಚಂದ್ರನು ಹೇಳಲು, ಆಗ ಪ್ರಚೇತಸರು ಕೋಪವನ್ನು ಬಿಟ್ಟು ಸಮಾಧಾನಯುಕ್ತರಾದರು. ಚಂದ್ರನ ಅನುಮತಿ ಪ್ರಕಾರ ಈ ಹತ್ತು ಜನಗಳೂ ಮಾರಿಷೆಯನ್ನು ವಿವಾಹಮಾಡಿಕೊಂಡು, ಈ ಹತ್ತು ಜನ ಪ್ರಚೇತಸ ರಿಂದ ಮಾರಿಷೆಯಲ್ಲಿ ದಕ್ಷಬ್ರಹ್ಮನು ಹುಟ್ಟಿದನು.

ಈ ದಕ್ಷನು ತನ್ನ ಮನಸ್ಸಿನಿಂದ ಚರಾಚರಾತ್ಮಕವಾದ ಪುತ್ರರನ್ನು ಸೃಷ್ಟಿ ಮಾಡಿದನು. ಐವತ್ತು ಜನ ಹೆಣ್ಣುಮಕ್ಕಳನ್ನೂ ಸೃಷ್ಟಿಸಿದನು. ಐವತ್ತು ಕನ್ನಿಕೆ ಗಳಲ್ಲಿ, ಯಮನಿಗೆ ಹತ್ತು ಕನ್ನಿಕೆಗಳನ್ನೂ, ಕಾಶ್ಯಪರಿಗೆ ಹದಿಮೂರು ಕನ್ನಿಕೆ ಗಳನ್ನೂ, ಚಂದ್ರನಿಗೆ ಇಪ್ಪತ್ತೇಳು ಕನ್ನಿಕೆಗಳನ್ನೂ ಕೊಟ್ಟನು. ಈ ಐವತ್ತು ಕನ್ನಿಕೆಗಳಲ್ಲಿ ದೇವತೆಗಳೂ, ದೈತ್ಯರುಗಳೂ, ಸರ್ಪಗಳೂ, ಗೋವುಗಳೂ, ಪಕ್ಷಿ ಗಳೂ, ಗಂಧರ್ವರೂ, ಅಪ್ಸರಸ್ತ್ರೀಯರುಗಳೂ ಸಹ ಹುಟ್ಟಿದರು. ಅದುವರೆಗೆ ಸಂಕಲ್ಪಮಾತ್ರದಿಂದಲೂ, ದರ್ಶನಮಾತ್ರದಿಂದಲೂ ಸಹ ಹುಟ್ಟುತ್ತಿದ್ದರು. ಅಲ್ಲಿಂದೀಚೆಗೆ ಪ್ರಜೆಗಳು ಸ್ತ್ರೀಸಂಭೋಗದಿಂದಲೇ ಹುಟ್ಟುವದು ಪ್ರಾರಂಭವಾಯಿ ತೆಂಬುದಾಗಿ ಪರಾಶರರು ಹೇಳಲು, ಮೈತ್ರೇಯರು ಪ್ರಶ್ನೆಮಾಡುತ್ತಾರೆ: "ಹೇ ಪರಾಶರಮಹರ್ಷಿಗಳೇ, ಈ ದಕ್ಷಬ್ರಹ್ಮನು ಪೂರ್ವದಲ್ಲಿ ಬ್ರಹ್ಮನ ಅಂಗುಷ್ಠದಿಂದ ಹುಟ್ಟಿದನೆಂಬುದಾಗಿ ಕೇಳಿದ್ದೆನು. ಈಗ ಪ್ರಚೇತಸರಿಂದ ಹುಟ್ಟಿದನು ; ಚಂದ್ರನಿಗೆ ದೌಹಿತ್ರನಾಗಿದ್ದವನು ಪುನಃ ಮಗಳನ್ನು ಕೊಟ್ಟು ಮಾವನಾದನೆಂಬುವದೇನಾ ಶ್ಚರ್ಯವು? ಈ ನನ್ನ ಸಂಶಯವನ್ನು ಹೋಗಲಾಡಿಸೆ"ಂಬುದಾಗಿ ಕೇಳಿದುದಕ್ಕೆ ಪರಾಶರಮಹರ್ಷಿಯು ಅಪ್ಪಣೆಕೊಡಿಸುತ್ತಾರೆ: "ಎಲೈ ಮೈತ್ರೇಯನೇ, ಉತ್ಪತ್ತಿ ನಿರೋಧಾದಿಗಳು ಪ್ರಾಣಿಗಳಿಗೆ ನಿತ್ಯವಾಗಿರುವದು. ಈ ವಿಷಯದಲ್ಲಿ ಋಷಿಗಳು ಸಂಶಯಪಡುವುದಿಲ್ಲವು. ಪ್ರತಿಯುಗದಲ್ಲಿಯೂ ದಕ್ಷಾದಿಗಳು ಹುಟ್ಟುತ್ತಾರೆ. ಹಿಂದೆ ಸ್ವಾಯಂಭುವಮನುವಿನ ಕಾಲ; ಈಗ ಚಾಕ್ಷುಷಮನುವಿನ ಕಾಲ;

ಪೂರ್ವದಲ್ಲಿ ಮಹಾತ್ಮರಿಗೆ ಜ್ಯೇಷ್ಠ್ಯ, ಕಾನಿಷ್ಠ್ಯವೆಂಬುವದು ಇರಲಿಲ್ಲ. ಅವರಿಗೆ ತಪಃ ಪ್ರಭಾವವೇ ಕಾರಣವೆಂದು ಹೇಳಿದುದಕ್ಕೆ, ಮೈತ್ರೇಯರು,"ಓ ಮಹಾತ್ಮನೇ, ದೇವದಾನವ ಗಂಧರ್ವಾದಿಗಳ ಉತ್ಪತ್ತಿಯನ್ನು ವಿಸ್ತಾರವಾಗಿ ನನಗೆ ಹೇಳ ಬೇಕೆ"ಂದು ಪ್ರಾರ್ಥಿಸಿದರು. ಆದಕ್ಕೆ ಪರಾಶರರು ಅಪ್ಪಣೆಕೊಡಿಸುತ್ತಾರೆ: "ಎಲೈ ಮೈತ್ರೇಯನೇ, ಪ್ರಜಾವೃದ್ಧಿಯನ್ನು ಮಾಡು ಎಂಬುದಾಗಿ ಬ್ರಹ್ಮನಿಂದ ಆಜ್ಞಪ್ತನಾದ ದಕ್ಷಬ್ರಹ್ಮನು, ಮನಸ್ಸಿನಿಂದಲೇ ದೇವಾದಿಗಳನ್ನು ಸೃಷ್ಟಿಸಿದನು. ಹೀಗೆ ಸೃಷ್ಟಿಸಿದಾಗ್ಯೂ ಪ್ರಜೆಗಳು ವೃದ್ಧಿಯಾಗಲಿಲ್ಲ. ಇದನ್ನು ನೋಡಿ ದಕ್ಷನು, ಹೀಗಾದರೆ ಪ್ರಜಾವೃದ್ಧಿಯಾಗುವದಿಲ್ಲ, ಆದುದರಿಂದ ಮೈಥುನಧರ್ಮದಿಂದಲೇ ಪ್ರಜೆಗಳನ್ನು ಸೃಷ್ಟಿಸಬೇಕೆಂದು ಯೋಚಿಸಿ, ಅಸಿಕ್ನೀಯೆಂಬ ಸ್ತ್ರೀಯನ್ನು ವಿವಾಹ ಮಾಡಿಕೊಂಡು ಇವಳಲ್ಲಿ ಐದುಸಾವಿರ ಪುತ್ರರನ್ನು ಪಡೆದು, ನೀವು ಪ್ರಜಾವೃದ್ಧಿ ಮಾಡಿ ಎಂಬುದಾಗಿ ಮಕ್ಕಳಿಗೆ ಆಜ್ಞಾಪಿಸಿದನು. ತಂದೆಯ ಅಪ್ಪಣೆಯ ಪ್ರಕಾರ ತಪಸ್ಸಿಗೆ ಹೋಗುವ ಕಾಲದಲ್ಲಿ ಇವರನ್ನು ನಾರದರು ನೋಡಿ, "ಎಲೈ ಮಕ್ಕಳುಗಳಿರಾ, ನಿಮ್ಮ ಪ್ರಯತ್ನವನ್ನು ನೋಡಿದರೆ ಪ್ರಜಾವೃದ್ಧಿಗೆ ಪ್ರಯತ್ನಪಡುವ ಹಾಗಿದೆ, ನೀವು ಇನ್ನೂ ಚಿಕ್ಕ ಹುಡುಗರು, ನಿಮಗೆ ಲೋಕಜ್ಞಾನವೇ ಇಲ್ಲ. ಇಂತಹ ನಿಮಗೆ ಪ್ರಜಾವೃದ್ಧಿ, ತಪಸ್ಸು ಪ್ರಯೋಜನವಿಲ್ಲ. ಮೋಕ್ಷಮಾರ್ಗವನ್ನು ಬಿಟ್ಟು ಸಂಸಾರದುಃಖಮಯವಾದ ಪ್ರಜಾವೃದ್ಧಿಯಿಂದ ಏನು ಪ್ರಯೋಜನ? ಇವೆಲ್ಲವೂ ವ್ಯರ್ಥವಾದುವೆ"ಂದು ಹೇಳಿದ ಮಾತನ್ನು ಕೇಳಿ, ಆ ದಕ್ಷಪುತ್ರರು, ತಾವು ಮಾಡುತ್ತಿದ್ದ ಪ್ರಜಾವೃದ್ಧಿಗೆ ಕಾರಣವಾದ ತಪಸ್ಸನ್ನು ಬಿಟ್ಟು, ದಿಕ್ಕು ದಿಕ್ಕುಗಳಿಗೆ ಓಡಿಹೋದರು. ಪುನಃ ಹಿಂತಿರುಗಲೇ ಇಲ್ಲ. ದಕ್ಷಬ್ರಹ್ಮನು ತಪಸ್ಸಿಗೆ ಹೋದ ತನ್ನ ಮಕ್ಕಳು ಬಾರದೇ ಇದ್ದುದರಿಂದ, ಪುನಃ ತನ್ನ ಪತ್ನಿಯಾದ ವೀರಣರಾಜನ ಮಗಳಾದ ಅಸಿಕ್ನಿಯಲ್ಲಿ ಒಂದುಸಾವಿರ ಪುತ್ರರನ್ನು ಪಡೆದನು. ಇವರೂ ಸನ್ನಿಬ್ಬನಿಗೇ ಪರಬ್ರಹ್ಮನಲ್ಲ, ನಿನಗೂ ಸಹ ಅವನೇ ಪರಬ್ರಹ್ಮನು, 'ಧಾತಾ ವಿಧಾತಾ ಪರಮೇಶ್ವರಃ', ಇವೆಲ್ಲವೂ ಶ್ರೀಮನ್ನಾರಾಯಣನೇ ಕೂಡ. ನಾರದರ ಮಾತಿನ ಪ್ರಕಾರ ಪ್ರಜಾವೃದ್ಧಿ ಕೆಲಸವನ್ನು ಬಿಟ್ಟು ಅಣ್ಣಂದಿರ ಹಾಗೆ ಲೋಕಜ್ಞಾನಾರ್ಥವಾಗಿ ಹೊರಟುಹೋದರು. ಇವರೂ ಸಹ ಹಿಂತಿರುಗದೆ ಇದ್ದುದರಿಂದ ದಕ್ಷಬ್ರಹ್ಮನು ನಾರದರಿಗೆ ಶಾಪವನ್ನು ಕೊಟ್ಟು, ಪುನಃ ಅರವತ್ತು ಹೆಣ್ಣುಮಕ್ಕಳನ್ನು ಪಡೆದು ಯಮನಿಗೆ ಹತ್ತು, ಕಾಶ್ಯಪರಿಗೆ ಹದಿಮೂರು, ಚಂದ್ರನಿಗೆ ಇಪ್ಪತ್ತೇಳು, ಅರಿಷ್ಟನೇಮಿಗೆ ನಾಲ್ಕು, ಬಹುಪುತ್ರನಿಗೆ ಎರಡು, ಅಂಗಿರಸನಿಗೆ ಎರಡು, ಕೃಶಾಶ್ವನಿಗೆ ಎರಡು, ಈ ಪ್ರಕಾರ ಮಕ್ಕಳನ್ನು ವಿವಾಹಮಾಡಿಕೊಟ್ಟನು. ಯಮನ ಹತ್ತುಜನ ಪತ್ನೀರುಗಳ ಹೆಸರುಗಳು,

ಅರುಂಧತೀವಸು, ಜಾಮಿಾ, ಲಂಘಾ, ಭಾನುಮರುದ್ವತೀ, ಸಂಕಲ್ಪಾ, ಮುಹುರ್ತಾ, ಸಾಧ್ಯಾ, ವಿಶ್ವಾ, ಭಾಮಿನೀ ಎಂಬುವು. ಇವರಲ್ಲಿ ವಿಶ್ವಾ ಎಂಬುವಳಿಗೆ ವಿಶ್ವೇದೇವರು, ಸಾಧ್ಯಾ ಎಂಬುವಳಿಗೆ ಸಾಧ್ಯರು, ಮರುದ್ವತಿಗೆ ಮರುತ್ವಂತರು, ವಸುವಿಗೆ ಅಷ್ಟವಸುಗಳು, ಮುಹುರ್ತಿಗೆ ಮುಹುರ್ತಗಳು, ಭಾನು ವಿಗೆ ಭಾನುಗಳು, ಲಂಘಾ ಎಂಬುವಳಿಗೆ ಘೋಷಮೆ, ಜಾಮಿಾ ಎಂಬುವಳಿಗೆ ನಾಗವೀಥಿಯು, ಅರುಂಧತಿಯಲ್ಲಿ ಭೂಮಿಯಲ್ಲಿರತಕ್ಕ ವಸ್ತುಗಳೆಲ್ಲವೂ ಹುಟ್ಟಿ ದುವು. ಅಷ್ಟವಸುಗಳು, ಆಪ, ಧ್ರುವ, ಸೋಮ, ಅಗ್ನಿ, ವಾಯು, ಪ್ರತ್ಯೂಷ, ಪ್ರಭಾಸ, ಧರ್ಮ ಎಂಬುವರು. ಆತನ ಪುತ್ರರು, ಸ್ತಬ್ಧ, ಶ್ರಮ, ಶ್ರಾಂತ, ಧುನಿ ಎಂಬುವರು. ಧ್ರುವನ ಮಕ್ಕಳು, ತಾಲಿ, ಲೋಕಪ್ರತಾಲನ. ಸೋಮನಿಗೆ ವರ್ಚ ಎಂಬುವನು ಮಗನು. ಧರ್ಮನಿಗೆ ದ್ರವಿಣ, ಹುತ, ಹವ್ಯವಹ ಎಂಬುವರು. ಘರ್ಷನಿಗೆ ಶಿಶಿರ, ಪ್ರಾಣ, ರಮಣ ಎಂಬುವರು. ಅನಿಲನಿಗೆ ಅವಿಜ್ಞಾತ, ಗತಿ ಎಂಬುವರು. ಅಗ್ನಿಗೆ ಕುಮಾರನೆಂಬುವನು. ಪ್ರತ್ಯೂಷನಿಗೆ ದೇವಲನೆಂಬ ಋಷಿ, ದೇವಲಋಷಿಗೆ ತಾಪಮಾರ್ವಾ, ಮನೀಷೀ ಎಂಬುವರು. ಪ್ರಭಾಸನಿಗೆ ವಿಶ್ವಕರ್ಮ ನೆಂಬುವನು. ಇವನು ದೇವತೆಗಳಿಗೆ ಶಿಲ್ಪಿಯು, ದೇವತೆಗಳಿಗೆ ಆಭರಣಗಳನ್ನೂ ವಿಮಾನಾದಿಗಳನ್ನೂ ಸಹ ಮಾಡತಕ್ಕವನು. ಇವನ ತಮ್ಮಂದಿರುಗಳು, ಅಜೈತ ಪಾದ, ಅಹಿರ್ಬುಧ್ನ್ಯ, ತ್ವಷ್ಟಾರುದ್ರ ಎಂಬುವರು. ತ್ವಷ್ಟಬ್ರಹ್ಮನ ಮಕ್ಕಳು ವಿಶ್ವ ರೂಪ, ರುದ್ರ, ಹರ, ಬಹುರೂಪ, ತ್ರ್ಯಂಬಕ, ವೃಷಾಕಪಿ, ಶಂಭುಕಪರ್ದೀ, ರೈವತ, ಮೃಗವ್ಯಾಧ, ಶರ್ವ, ಕಪಾಲಿನಿ ಎಂಬ ಹನ್ನೊಂದು ಮಂದಿ. ಕಾಶ್ಯಪನ ಪತ್ನೀರು, ಅದಿತಿ, ದಿತಿ, ದನು, ಅರಿಷಾ, ಸುರಸಾ, ಕಷಾ, ಸುರಭಿ, ವಿನತಾ, ತಾಮ್ರಾ, ಕ್ರೋಧವಶಾ, ಇಲಾ, ಕದ್ರೂ ಎಂಬ ಹದಿಮೂರು ಜನರು. ಇವರ ಮಕ್ಕಳು: ಅದಿತಿಯಲ್ಲಿ ಅರ್ಯಮಾ, ಧಾತಾ, ತ್ವಷ್ಟಾ, ಪೂಷಾ, ವಿವಸ್ವಾನ್, ಸವಿತಾ, ಪುತ್ರ, ವರುಣ, ಅಂಶು, ಭಗ, ವಿಷ್ಣು, ಶತ್ರ ಎಂಬ ದ್ವಾದಶಾದಿತ್ಯ ರಾದರು. ಇವರು ಚಾಕ್ಷುಷಮನ್ವಂತರದಲ್ಲಿ ತುಷಿತಾ ಎಂಬ ದೇವತೆಗಳಾಗಿದ್ದರು. ವೈವಸ್ವತಮನ್ವಂತರದಲ್ಲಿ ದ್ವಾದಶಾದಿತ್ಯರಾದರು. ಅರಿಷ್ಟನೇಮಿಯ ನಾಲ್ಕುಜನ ಪತ್ನಿಯರಲ್ಲಿ ಹದಿನಾರು ಜನ ಪುತ್ರರೂ, ಬಹುಪುತ್ರನಿಗೆ ಇಬ್ಬರು ಪತ್ನಿಯರಲ್ಲಿ ನಾಲ್ಕುಜನ ಪುತ್ರರೂ, ಅಂಗಿರಸನಿಗೆ ಇಬ್ಬರು ಪತ್ನಿಯರಲ್ಲಿ ಪ್ರತ್ಯಂಗಿರಸರೂ, ಭೃಶಾಶ್ವನಿಗೆ ದೇವಪ್ರಹರಣರೂ, ಕಾಶ್ಯಪನ ಪತ್ನಿಯಾದ ದಿತಿಗೆ ಹಿರಣ್ಯಕಶಿಪು, ಹಿರಣ್ಯಾಕ್ಷ ಎಂಬ ಇಬ್ಬರು ಪುತ್ರರೂ, ಸಿಂಹಿಕಾ ಎಂಬ ಮಗಳೂ ಸಹ ಹುಟ್ಟಿದರು. ಹಿರಣ್ಯಕಶಿಪುವಿಗೆ ಪ್ರಹ್ಲಾದ, ಅನುಹ್ಲಾದ, ಹ್ಲಾದ, ಸಂಹ್ಲಾದ ಎಂಬುದಾಗಿ ನಾಲ್ಕುಜನ ಪುತ್ರರಾದರು. ಈ ನಾಲ್ಕುಜನರಲ್ಲಿ ಪ್ರಹ್ಲಾದನೆಂಬು

ವನು, ಶ್ರೀಮಹಾವಿಷ್ಣುವಿನಲ್ಲಿ ಪರಮಭಕ್ತಿಯುಳ್ಳವನು, ಪ್ರಹ್ಲಾದನ ಹೃದಯದಲ್ಲಿ ಭಗವಂತನು ವಾಸಮಾಡುತ್ತಿದ್ದುದರಿಂದ, ತಂದೆಯಾದ ಕಶಿಪುವು, ಇವನನ್ನು ಬೆಂಕಿಗೆ ಹಾಕಿದರೂ ಸುಡಲಿಲ್ಲ, ಸಮುದ್ರದಲ್ಲಿ ಹಾಕಿದರೂ ಮುಳುಗಲಿಲ್ಲ, ಅನೇಕ ಶಸ್ತ್ರಗಳಿಂದ ಹೊಡೆದರೂ, ಹಾವುಗಳಿಂದ ಕಚ್ಚಿಸಿದರೂ ಸಾಯಲಿಲ್ಲ. ಇಂತಹ ಪರಮಭಕ್ತನಾದ ಪ್ರಹ್ಲಾದನು ಧರ್ಮಾತ್ಮನಾಗಿಯೂ, ಸತ್ಯಶೌಚಾದಿ ಗುಣನಿಧಿಯಾಗಿಯೂ ಇದ್ದನು. ಲೋಕದಲ್ಲಿ ಸತ್ಪುರುಷರಿಗೆಲ್ಲಾ ಈ ಪ್ರಹ್ಲಾದನೇ ಉಪಮಾನನಾಗಿದ್ದನು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ
ಹದಿನೈದನೆಯ ಅಧ್ಯಾಯವು ಸಮಾಪ್ತಃ

ಹದಿನಾರನೆಯ ಅಧ್ಯಾಯವು

ಮೈತ್ರೇಯರು ಪುನಃ ಕೇಳುತ್ತಾರೆ: "ಹೇ ಪರಾಶರರೇ, ನೀವು ಮನುಷ್ಯರ ವಂಶವನ್ನೂ, ಈ ಜಗತ್ತಿಗೆ ವಿಷ್ಣುವೇ ಕಾರಣನೆಂಬ ವಿಷಯವನ್ನೂ ಸಹ ಹೇಳಿದಿರಿ. ಪ್ರಹ್ಲಾದನ ವಿಷಯವಾಗಿ, ಅಗ್ನಿಯಿಂದಲೂ, ಶಸ್ತ್ರಗಳಿಂದಲೂ, ಸಮುದ್ರದಿಂದಲೂ ನಾಶವಾಗಲಿಲ್ಲವೆಂಬುದಾಗಿ ಹೇಳಿದಿರಲ್ಲವೇ, ಶ್ರೀಮಹಾವಿಷ್ಣುವಿಗೆ ಭಕ್ತನಾಗಿಯೂ, ತೇಜಸ್ವಿಯಾಗಿಯೂ ಇರುವ ಪ್ರಹ್ಲಾದನಿಗೆ ಅವನ ತಂದೆಯು ಏತಕ್ಕೋಸ್ಕರ ಬೆಂಕಿಯಲ್ಲಿ ಹಾಕಿದನು? ಸಮುದ್ರ, ಶಸ್ತ್ರ, ವಿಷ, ಮಾಯಾ ಇತ್ಯಾದಿಗಳಿಂದ ಏತಕ್ಕೆ ತೊಂದರೆಪಡಿಸಿದನು? ಆ ಮಹಾತ್ಮನ ವಿಷಯವನ್ನು ವಿಸ್ತಾರವಾಗಿ ನನಗೆ ಅಪ್ಪಣೆ ಕೊಡಿಸಬೇಕು. ಹಿರಣ್ಯಕಶಿಪುವು ಅನೇಕ ತೊಂದರೆಗಳನ್ನು ಮಾಡಿದಾಗ್ಯೂ ಪ್ರಹ್ಲಾದನು ಸಾಯದಿರಲು ಕಾರಣ ವೇನು? ಧರ್ಮಪರನಾಗಿಯೂ, ಶ್ರೀಕೇಶವನ ಆರಾಧನೆಯಲ್ಲಿ ನಿರತನಾಗಿಯೂ, ಮಹಾಭಾಗ್ಯಶಾಲಿಯಾಗಿಯೂ, ನಿರ್ಮತ್ಸರನಾಗಿಯೂ ಪ್ರಹ್ಲಾದನು ಇದ್ದಾಗ್ಯೂ, ದೈತ್ಯೋತ್ತಮನಾದ ಹಿರಣ್ಯಕಶಿಪುವು ಏತಕ್ಕೋಸ್ಕರ ಅವನನ್ನು ಹಿಂಸಿಸಿದನು" ಎಂಬ ವಿಷಯಗಳನ್ನು ಸವಿಸ್ತಾರವಾಗಿ ಕೇಳಲಿಚ್ಛೆಯುಳ್ಳವನಾಗಿದ್ದೇನೆ ಎಂದು ಹೇಳಿದನು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ
ಹದಿನಾರನೆಯ ಅಧ್ಯಾಯವು ಸಮಾಪ್ತಃ

ಹದಿನೇಳನೆಯ ಅಧ್ಯಾಯವು

ಶ್ರೀ ಪರಾಶರರು ಹೇಳುತ್ತಾರೆ: "ಎಲೈ ಮೈತ್ರೇಯನೇ, ಆ ಮಹಾತ್ಮನಾದ ಪ್ರಹ್ಲಾದನ ಚರಿತ್ರೆಯನ್ನು ಹೇಳುತ್ತೇನೆ ಕೇಳು. ದಿತಿದೇವಿಗೆ ಪುತ್ರನಾದ ಹಿರಣ್ಯಕಶಿಪುವು, ಬ್ರಹ್ಮದೇವರ ವರದಿಂದ ಕೊಬ್ಬಿದವನಾಗಿ ಮೂರು ಲೋಕವನ್ನೂ ತನ್ನ ಅಧೀನ ಮಾಡಿಕೊಂಡು ತಾನೇ ಇಂದ್ರನಾಗಿಯೂ, ಸೂರ್ಯನಾಗಿಯೂ, ವಾಯು. ಅಗ್ನಿ, ವರುಣ, ಚಂದ್ರ, ಕುಬೇರ, ಯಮನಾಗಿಯೂ, ಅನೇಕ ಯಜ್ಞ ಭಾಗವನ್ನು ಭುಂಜಿಸತಕ್ಕವನಾಗಿಯೂ ಇದ್ದನು. ಇವನ ಭಯದಿಂದ ಇಂದ್ರಾದಿಗಳು ಸ್ವರ್ಗಲೋಕವನ್ನು ಬಿಟ್ಟು ಮಾನುಷರೂಪದಿಂದ ಭೂಮಿಯಲ್ಲಿ ಅಲೆದಾಡುತ್ತಿದ್ದರು. ಹಿರಣ್ಯಕಶಿಪುವು, ತ್ರೈಲೋಕ್ಯಸಾಮ್ರಾಜ್ಯದರ್ಪಿತನಾಗಿ, ಗಂಧರ್ವರಿಂದ ಗಾನಮಾಡಿಸಿಕೊಂಡು ವಿಷಯೋಪಭೋಗಗಳನ್ನು ಅನುಭವಿಸುತ್ತ, ಪಾನಾಸಕ್ತನಾದ ಇವನನ್ನು ಸಿದ್ಧ, ಸಾಧ್ಯಾದಿಗಳೆಲ್ಲರೂ ಸ್ತೋತ್ರಮಾಡುತ್ತಿದ್ದರು. ಅವನ ಮಗನಾದ ಪ್ರಹ್ಲಾದನು, ಆಚಾರ್ಯಗೃಹದಲ್ಲಿ ಬಾಲಕನಾಗಿದ್ದುದರಿಂದ ಬಾಲಪಾಠವನ್ನು ಅಭ್ಯಾಸಮಾಡುತ್ತಿದ್ದನು. ಒಂದಾನೊಂದು ದಿವಸ ಗುರುವಿನ ಜೊತೆಯಲ್ಲಿ, ಪಾನಾಸಕ್ತನಾದ ಹಿರಣ್ಯಕಶಿಪುವಿನ ಬಳಿಗೆ ಬಂದು, ತಂದೆಗೆ ನಮಸ್ಕಾರ ಮಾಡಿದನು. ಹಿರಣ್ಯಕಶಿಪುವು, ನಮಸ್ಕಾರ ಮಾಡುತ್ತಿರುವ ಮಗನನ್ನು ನೋಡಿ, "ಎಲೈ ಪ್ರಹ್ಲಾದನೇ, ನೀನು ಇದುವರೆಗೆ ಅಭ್ಯಾಸಮಾಡಿದ ವಿದ್ಯದಲ್ಲಿ ಯಾವುದಾದರೂ ಒಂದು ಸಾರವಾದ ವಿಷಯವನ್ನು ಹೇಳು" ಎಂಬುದಾಗಿ ಮಗನಿಗೆ ಆಜ್ಞಾಪಿಸಲು, ಆಗ ಪ್ರಹ್ಲಾದನು ಹೇಳುತ್ತಾನೆ: "ಓ ತಂದೆಯೇ, ನಿಮ್ಮ ಅಪ್ಪಣೆಯ ಪ್ರಕಾರ ಸಾರವಾದ ವಿಷಯವನ್ನು ಹೇಳುತ್ತೇನೆ, ನೀವು ಸಮಾಧಾನಚಿತ್ತದಿಂದ ಕೇಳಿ: ದೇಶ, ಕಾಲ, ಪರಿಚ್ಛೇದರಹಿತನಾದ, ಜನ್ಮಶೂನ್ಯನಾದ, ನಾಶಶೂನ್ಯನಾದ, ಸರ್ವಕಾರಣಕಾರಣನಾದ ಶ್ರೀಮನ್ನಾರಾಯಣನನ್ನು ನಮಸ್ಕರಿಸುತ್ತೇನೆ"ಂದ ಮಾತ್ರವೇ, ಕಶಿಪುವು ಕೋಪಾವಿಷ್ಟನಾಗಿ ಆ ಪ್ರಹ್ಲಾದನ ಗುರುವನ್ನು ನೋಡಿ ಹೇಳುತ್ತಾನೆ: "ದುರ್ಮತಿಯಾದ ಎಲೈ ಬ್ರಾಹ್ಮಣಾಧಮನೇ, ನನ್ನ ಶತ್ರುವನ್ನು ಸ್ತೋತ್ರಮಾಡುವ ಅಸಾರವಾದ ವಿಷಯವನ್ನು ಈ ಬಾಲಕನಿಗೆ ಹೇಳಿಕೊಟ್ಟೆಯಾ?" ಎಂದು ಗುರುವನ್ನು ಧಿಕ್ಕಾರಮಾಡಿ ಕೇಳಲು. ಅದಕ್ಕೆ ಗುರುವು, "ಹೇ ದೈತ್ಯೇಶ್ವರನೇ, ಈ ನಿನ್ನ ಹುಡುಗನು ನಾನು ಹೇಳಿಕೊಟ್ಟುದುದನ್ನು ಹೇಳತಕ್ಕವನಲ್ಲ, ಆದುದರಿಂದ ಕೋಪಕ್ಕೆ ಕಾರಣವಿಲ್ಲ" ಎಂಬುದಾಗಿ ಹೇಳಲು, ಅದಕ್ಕೆ ಹಿರಣ್ಯಕಶಿಪುವು ಪ್ರಹ್ಲಾದನನ್ನು ಕುರಿತು, "ಓ ವತ್ಸನಾದ ಪ್ರಹ್ಲಾದನೇ, ನೀನು ಯಾರಿಂದ ಈ ರೀತಿಯಾಗಿ ಉಪದೇಶಿಸಲ್ಪಟ್ಟೆ? ಈ ಗುರುವು ನಾನು ಹೇಳಿಕೊಟ್ಟವನಲ್ಲವೆಂದು ಹೇಳುತ್ತಾನೆ" ಎಂಬುದಾಗಿ

ಕೇಳಲು, ಅದಕ್ಕೆ ಪ್ರಹ್ಲಾದನು, "ಎಲೈ ದೈತ್ಯಾಧಿಪನೇ, ಸಕಲ ಜಗತ್ತಿಗೂ ಉಪದೇಶ ಮಾಡುವವನು ಶ್ರೀಮನ್ನಾರಾಯಣನೇ ಹೊರ್ತು ಮತ್ಯಾರೂ ಇಲ್ಲ" ಎಂದು ಹೇಳಿದನು. ಅದಕ್ಕೆ ಹಿರಣ್ಯಕಶಿಪುವು "ದುರ್ಬುದ್ಧಿಯಾದ ಪ್ರಹ್ಲಾದನೇ, ಸಕಲ ಜಗತ್ತಿಗೂ ಅಧಿಪತಿಯಾದ ನನ್ನ ಮುಂದೆ, ವಿಷ್ಣುವೆಂಬುವನು ಯಾರೆಂದು" ಪ್ರಹ್ಲಾದನನ್ನು ಕೇಳಲು, "ಆ ವಿಷ್ಣುವು ಶಬ್ದಗೋಚರನಾದವನಲ್ಲ, ಯೋಗಿ ಧ್ಯೇಯನಾದವನು, ಈ ಜಗತ್ತೇ ನಾರಾಯಣರೂಪವು, ನಾರಾಯಣನೇ ಜಗದ್ರೂಪನಾದವನೆಂದು" ಹೇಳಿದನು. ಕಶಿಪುವು "ಪರಮೇಶ್ವರನಾದವನೇ ನಾನು, ನನ್ನ ಮುಂದೆ ಅಜ್ಞನಾದ ನೀನು ಅವನನ್ನೇ ಪುನಃ ಹೇಳುತ್ತೀಯೆ" ಎನಲು, ಪ್ರಹ್ಲಾದನು, "ಓ ತಂದೆಯೇ, ಆ ಶ್ರೀಮಹಾವಿಷ್ಣುವು ನನ್ನೊಬ್ಬನಿಗೇ ಪರಬ್ರಹ್ಮ ನಲ್ಲ. ನಿನಗೂ ಸಹ ಅವನೇ ಪರಬ್ರಹ್ಮನು. 'ಧಾತಾ ವಿಧಾತಾ ಪರಮೇಶ್ವರಃ' ಇವೆಲ್ಲವೂ ಶ್ರೀಮನ್ನಾರಾಯಣನೇ. ವೃಥಾ ಏತಕ್ಕೆ ಕೋಪಿಸುವೆ" ಎಂದು ಹೇಳಿದನು. ಅದಕ್ಕೆ ಕಶಿಪುವು, "ಈ ದುರ್ಬುದ್ಧಿಯುಳ್ಳ ಪ್ರಹ್ಲಾದನ ಹೃದಯದಲ್ಲಿ, ಪಾಪಿಷ್ಠನಾದ ವಿಷ್ಣುವು ಪ್ರವೇಶಿಸಿರಬಹುದೆಂದನಲು", ಪ್ರಹ್ಲಾದನು, "ಓ ತಂದೆಯೇ, ನನ್ನ ಒಬ್ಬನ ಹೃದಯವನ್ನು ಮಾತ್ರ ಪ್ರವೇಶಿಸಿದನೆಂಬುದಾಗಿ ಹೇಳಬೇಡ, ನಿನ್ನಲ್ಲಿಯೂ, ಸಕಲ ಜಗತ್ತಿನಲ್ಲಿಯೂ ಸಹ ಇರುವನು, ನಿನ್ನನ್ನೂ ನನ್ನನ್ನೂ ಎಲ್ಲರನ್ನೂ ಪ್ರೇರಿಸತಕ್ಕವನೇ ಆ ಮಹಾವಿಷ್ಣುವು" ಎಂದು ಹೇಳಿದನು. ಅದಕ್ಕೆ ಹಿರಣ್ಯಕಶಿಪುವು, "ಈ ದುಷ್ಟನಾದ ಪ್ರಹ್ಲಾದನು ಹೊರಟುಹೋಗಲಿ, ಇನ್ನೂ ಗುರುವಿನಲ್ಲಿ ಚೆನ್ನಾಗಿ ಶಿಕ್ಷಿಸಲ್ಪಡಲಿ, ಇವನು ಯಾರ ದುರ್ಬುದ್ಧಿಯಿಂದ ಶತ್ರುಪಕ್ಷವನ್ನು ಸ್ತೋತ್ರ ಮಾಡುತ್ತಾನೋ, ಅದೆಲ್ಲವನ್ನೂ ತಪ್ಪಿಸಿ" ಎಂಬುದಾಗಿ ಹೇಳಲು, ದೈತ್ಯರು ಪ್ರಹ್ಲಾದನನ್ನು ಗುರುವಿನ ಮನೆಗೆ ಕಳುಹಿಸಿದರು. ಪ್ರಹ್ಲಾದನು ಗುರುಶುಶ್ರೂಷೆಯನ್ನು ಮಾಡುತ್ತಾ, ವಿದ್ಯಾಭ್ಯಾಸ ಮಾಡಿ ಕೊಂಡಿದ್ದನು. ಹೀಗೆ, ಕೆಲವು ಕಾಲ ಕಳೆದನಂತರ, ಹಿರಣ್ಯಕಶಿಪುವು ಮಗನನ್ನು ಕರೆಸಿ ಸಾರವಾದ ವಿಷಯವನ್ನು ಹೇಳು ಎಂಬುದಾಗಿ ಆಜ್ಞಾಪಿಸಲು, ಪ್ರಹ್ಲಾದನು ಹೇಳುತ್ತಾನೆ:

"ಸಕಲ ಚರಾಚರಕ್ಕೂ ಕಾರಣನಾದ ಶ್ರೀಮಹಾವಿಷ್ಣುವು ಪ್ರಸನ್ನನಾಗಲಿ" ಎನಲು, ಹಿರಣ್ಯಕಶಿಪುವು, ಈ ದುರಾತ್ಮನಾದ ಪ್ರಹ್ಲಾದನನ್ನು ಸಂಹಾರಮಾಡಿ ಎಂಬುದಾಗಿ ಆಜ್ಞಾಪಿಸಲು, ದೈತ್ಯರು ಆಯುಧಗಳನ್ನು ಧರಿಸಿಕೊಂಡು ಸಿದ್ಧರಾದ ಕಾಲದಲ್ಲಿ, ಪ್ರಹ್ಲಾದನು ಹೇಳುತ್ತಾನೆ: "ಶ್ರೀಮಹಾವಿಷ್ಣುವು ಶಸ್ತ್ರಗಳಲ್ಲಿಯೂ, ನಿಮ್ಮಲ್ಲಿಯೂ, ನನ್ನಲ್ಲಿಯೂ ಸಹ ಇರುವನು. ಆದುದರಿಂದ ನಿಮ್ಮಗಳ ಆಯುಧಗಳು ನನ್ನನ್ನು ಆಕ್ರಮಿಸಲಾರದು" ಎನಲು, ದೈತ್ಯರು ಶಸ್ತ್ರಗಳಿಂದ

ಇವನನ್ನು ಹೊಡೆದರು. ಹೀಗೆ ಶಸ್ತ್ರಗಳಿಂದ ಹೊಡೆದಾಗ್ಯೂ, ಮಹಾತ್ಮನಾದ ಪ್ರಹ್ಲಾದನು ಸ್ವಲ್ಪವೂ ವೇದನೆಯನ್ನು ಹೊಂದಲಿಲ್ಲ. ಇದನ್ನು ನೋಡಿದ ಹಿರಣ್ಯಕಶಿಪುವು ಪ್ರಹ್ಲಾದನನ್ನು ಕುರಿತು, ಎಲೈ ದುರ್ಬುದ್ಧಿಯೇ, ಈಗಲೂ ಶತ್ರುಪಕ್ಷವನ್ನು ಆಶ್ರಯಿಸದಿದ್ದರೆ ನಿನಗೆ ಅಭಯವನ್ನು ಕೊಡುತ್ತೇನೆಂಬುದಾಗಿ ಹೇಳಲು, ಪ್ರಹ್ಲಾದನು "ಓ ತಂದೆಯೇ, ಭಯಗಳನ್ನು ಅಪಹಾರಮಾಡತಕ್ಕ ಅನಂತನಾದ ಶ್ರೀಮಹಾವಿಷ್ಣುವು ನನ್ನ ಮನಸ್ಸಿನಲ್ಲಿರುವಾಗ, ನನಗೆ ಭಯವೆಲ್ಲಿಯದು? ಆ ಪರಮಪುರುಷನನ್ನು ಸ್ಮರಣೆಮಾಡಿದ ಮಾತ್ರಕ್ಕೆ ಜ್ವರಾದಿ ಸಕಲ ಭಯವೂ ನಾಶವಾಗುತ್ತದೆ. ಆದುದರಿಂದ ನಿನ್ನ ಅಭಯಪ್ರದಾನದಿಂದ ಪ್ರಯೋಜನವೇನು?" ಎಂದೆನಲು, ಹಿರಣ್ಯಕಶಿಪುವು, "ಹೇ ಸರ್ಪಗಳಿರಾ! ಈ ದುರಾಚಾರನಾದ ಪ್ರಹ್ಲಾದನನ್ನು ಕಚ್ಚಿ, ನಾಶಮಾಡಿ" ಎಂಬುದಾಗಿ ಸರ್ಪಗಳಿಗೆ ಆಜ್ಞಾಪಿಸಲು, ಆಗ ತಕ್ಷಕಾದಿ ಮಹಾಸರ್ಪಗಳು ಪ್ರಹ್ಲಾದನ ಸರ್ವಾಂಗಗಳನ್ನೂ ಕಚ್ಚಿದವು. ಮಹಾವಿಷಭರಿತವಾದ ಸರ್ಪಗಳು ಕಚ್ಚಿದಾಗ್ಯೂ ವಿಷ್ಣುಮನಸ್ಕನಾದ ಪ್ರಹ್ಲಾದನಿಗೆ ಸ್ವಲ್ಪವೂ ಬಾಧೆಯಾಗದೆ ಆಹ್ಲಾದದಿಂದ ಕೂಡಿದ್ದನು. ಆಗ ಸರ್ಪಗಳು ಹಿರಣ್ಯಕಶಿಪುವನ್ನು ಕುರಿತು ಹೇಳುತ್ತವೆ: "ಹೇ ದೈತ್ಯೇಂದ್ರನೇ, ಈ ಪ್ರಹ್ಲಾದನನ್ನು ಕಚ್ಚಿದುದರಿಂದ ನಮ್ಮ ಹಲ್ಲುಗಳು ಮುರಿದುಹೋದವೇ ಹೊರ್ತು ಈ ಪ್ರಹ್ಲಾದನಿಗೆ ಸ್ವಲ್ಪವೂ ಬಾಧೆಯಾಗಲಿಲ್ಲ. ಇವನಿಗೆ ಇನ್ನೇನಾದರೂ ಬೇರೆ ಉಪಾಯವನ್ನು ಮಾಡಬೇಕು" ಎಂಬುದಾಗಿ ಹೇಳಿದವು. ಅದಕ್ಕೆ ಹಿರಣ್ಯಕಶಿಪುವು, "ಹೇ! ದಿಗ್ಗಜಗಳಿರಾ, ನಿಮ್ಮ ದಂತಗಳಿಂದ ಈ ಪ್ರಹ್ಲಾದನನ್ನು ಸಂಹಾರಮಾಡಿ" ಎಂದಾಜ್ಞಾಪಿಸಲು, ಆ ದಿಗ್ಗಜಗಳು ಪರ್ವತಶಿಖರದಂತೆ ಇರುವ ದಂತಗಳಿಂದ ಪ್ರಹ್ಲಾದನನ್ನು ತಿವಿಯಲು, ದಿಗ್ಗಜಗಳ ದಂತಗಳು ಮುರಿದು ಹೋದವಲ್ಲದೆ ಆನೆಗಳ ವಕ್ಷಃಸ್ಥಲವೂ ಸಹ ಒಡೆದುಹೋದವು. ಇದನ್ನು ನೋಡಿದ ಪ್ರಹ್ಲಾದನು, ತಂದೆಯನ್ನು ಕುರಿತು, "ಎಲೈ ತಂದೆಯೇ, ಆ ಶ್ರೀಮಹಾವಿಷ್ಣುವಿನ ಪ್ರಭಾವವು ಹೇಗಿದೆ? ನಿನ್ನ ದಿಗ್ಗಜಗಳ ಹಲ್ಲುಗಳೆಲ್ಲವೂ ಮುರಿದುಹೋದುದರಿಂದ ನನ್ನ ಬಲವು ಹೆಚ್ಚಾಯಿತು. ಈ ಬಲವು ಮಹಾ ವಿಪತ್ತುಗಳನ್ನು ಪರಿಹಾರಮಾಡತಕ್ಕ ಶ್ರೀಮನ್ನಾರಾಯಣನ ಪ್ರಭಾವದಿಂದ ಉಂಟಾದ ಬಲವೇ ಹೊರ್ತು, ಬೇರೆ ಯಾವ ಕಾರಣವೂ ಇಲ್ಲ"ವೆಂದೆನಲು, ಹಿರಣ್ಯಕಶಿಪುವು, "ದೈತ್ಯರೇ, ನೀವು ಅಗ್ನಿಯನ್ನು ಸಿದ್ಧಮಾಡಿ. ಓ ವಾಯುವೇ, ನೀನು ಅಗ್ನಿಯನ್ನು ಜ್ವಲಿಸು, ಈ ಪಾಪಿಷ್ಠನನ್ನು ಸುಡಿರಿ" ಎಂಬುದಾಗಿ ಆಜ್ಞಾಪಿಸಲು, ಆ ಅಸುರರು ಅಸುರೇಂದ್ರಪುತ್ರನನ್ನು ಬೆಂಕಿಯಿಂದ ಸುಟ್ಟರು. ಇದಕ್ಕೆ ಪ್ರಹ್ಲಾದನು: "ಓ ತಂದೆಯೇ, ನೀನು ಬೆಂಕಿಯಿಂದ ಸುಟ್ಟಿದ್ದು, ನನ್ನನ್ನು

ಕಮಲದಲ್ಲಿ ಕೂರಿಸಿದ ಹಾಗಾಯಿತಲ್ಲದೆ, ಸಮಸ್ತ ದಿಕ್ಕುಗಳೂ ಸಹ ಶೀತಳವೆ ಎಂದರೆ, ಎಲ್ಲೆಲ್ಲಿಯೂ ತಣ್ಣಗಿದೆ ಎಂದು ಹೇಳಲು, ಪುರೋಹಿತರಾಗಿಯೂ, ಮಹಾತ್ಮರಾಗಿಯೂ ಇರುವ ಶುಕ್ರಾಚಾರ್ಯರ ಮಕ್ಕಳು ಹಿರಣ್ಯಕಶಿಪುವನ್ನು ಕುರಿತು ಹೇಳುತ್ತಾರೆ: "ಹೇ! ದೈತ್ಯಾಧೀಶನೇ, ನಿನ್ನ ಮಗನಾದ ಪ್ರಹ್ಲಾದನಲ್ಲಿ ಉಂಟಾದ ಕೋಪವನ್ನು ಬಿಡು. ಸಮಾಧಾನನಾಗು, ಔರಸನಾದ ಇವನಲ್ಲಿ ಕೋಪವನ್ನು ಮಾಡಬೇಡ. ಈ ನಿನ್ನ ಮಗನನ್ನು ನಾವು ಶಿಕ್ಷಿಸಿ, ಸರಿಯಾದ ಬುದ್ಧಿಯನ್ನು ಹೇಳುತ್ತೇವೆ. ಆಗಲೂ, ಇವನು ಶತ್ರುಪಕ್ಷವನ್ನೇ ಆಶ್ರಯಿಸಿದ ಪಕ್ಷದಲ್ಲಿ, ನೀನು ಶಿಕ್ಷಿಸಬಹುದು. ಬಾಲ್ಯವಾದುದರಿಂದ ಸರ್ವದೋಷಾಸ್ಪದವಾಯಿತೆಂದು" ಸಮಾಧಾನವನ್ನು ಹೇಳಿ, ಬೆಂಕಿಯಲ್ಲಿ ನಿಂತಿದ್ದ ಪ್ರಹ್ಲಾದನನ್ನು ಕರೆದುಕೊಂಡು, ತಮ್ಮ ಮನೆಗೆ ಹೋದರು. ಪ್ರಹ್ಲಾದನು ಗುರುವಿನ ಗೃಹದಲ್ಲಿ ವಾಸ ಮಾಡಿಕೊಂಡು ಗುರುವು ಮನೆಯಲ್ಲಿಲ್ಲದಿದ್ದಾಗ ಸಹಾಧ್ಯಾಯಿಗಳಾದ ದೈತ್ಯಪುತ್ರರಿಗೆ ತತ್ತ್ವೋಪದೇಶವನ್ನು ಮಾಡುತ್ತಾನೆ: "ಹೇ ದೈತ್ಯಪುತ್ರರುಗಳಿರಾ, ನಿಮಗೆ ಪರಮಾರ್ಥವಾದ ವಿಷಯವನ್ನು ಹೇಳುತ್ತೇನೆ. ಸಮಾಧಾನಚಿತ್ತರಾಗಿ ಕೇಳಿ. ಮನುಷ್ಯನಾದವನು ಜನ್ಮವನ್ನೆತ್ತಿ ಬಾಲ್ಯ, ಯೌವನ, ವಾರ್ಧಕಾವಸ್ಥೆಗಳನ್ನು ಹೊಂದಿದನಂತರ, ಮೃತಿಯನ್ನು ಹೊಂದುತ್ತಾನೆ. ಇದೆಲ್ಲವೂ ನಮ್ಮಗಳ ಪ್ರತ್ಯಕ್ಷದಲ್ಲಿ ನಡೆಯುವುದನ್ನು ನೋಡುತ್ತಿದ್ದೇವೆ, ಸತ್ತವನು ಪುನಃ ಹುಟ್ಟುತ್ತಾನೆ, ಪ್ರಾಣಿಗಳಿಗೆ ಜನನ, ಮರಣ, ಇವುಗಳೇ ಸ್ವಾಭಾವಿಕಗಳಾಗಿವೆ. ಆದುದರಿಂದ ಇವುಗಳು ದುಃಖಮಯವಾದುವು. ಹಸಿವು, ಬಾಯಾರಿಕೆ, ಶೀತ ಇತ್ಯಾದಿಗಳು ಉಪಶಮನವಾದರೆ ಇದೇ ಸುಖವೆಂಬುದಾಗಿ ಭ್ರಾಂತರಾಗುತ್ತಾರೆ. ಮೋಹಪಾಶದಿಂದ ಬದ್ಧರಾದ ಕಾಮಿಗಳಿಗೆ ಪ್ರಣಯಕೋಪಯುಕ್ತರಾದ ತರುಣಿಯರ ಕಾಲು ಗೆಜ್ಜೆಗಳ ಶಬ್ದದಿಂದ ಕೂಡಿದ ಕಾಲಿನ ಪ್ರಹಾರವೂ ಕೂಡ, ಸುಖರೂಪವಾಗಿಯೇ ಪರಿಣಮಿಸುತ್ತದೆ. ಶ್ಲೇಷ್ಮಾದಿಗಳಿಂದ ಯುಕ್ತವಾದ ದೇಹಕ್ಕೆ ಆಭರಣಾದಿ ಸೌಭಾಗ್ಯಗಳೇ ಗುಣಗಳೆಂಬುದಾಗಿ ಭ್ರಾಂತರಾಗಿರುತ್ತಾರೆ. ಮಾಂಸಾದಿಗಳಿಂದ ಕೂಡಿದ ಈ ದೇಹದಲ್ಲಿ ಮಮಕಾರಯುಕ್ತನಾದವನೇ ನರಕಕ್ಕೆ ಹೋಗತಕ್ಕವನು. ಧನ, ಅಶ್ವ, ಗಜ, ಭೃತ್ಯ ಇತ್ಯಾದಿಗಳು ಸುಖರೂಪಾಗಿದ್ದರೂ, ಪಾಲನಾದಿ ಕ್ಲೇಶಯುಕ್ತವಾದುವು. ಹೆಂಡತಿ, ಪುತ್ರ ಮುಂತಾದ ಬಂಧುಗಳೂ ದುಃಖಾವಹವಾದುವು. ಮನೆಯಲ್ಲಿ ಧನಕನಕಾದಿಗಳು ಇರತಕ್ಕ ಕಾಲದಲ್ಲಿ, ಮನುಷ್ಯನು ದೇಶಾಂತರ ಪ್ರಯಾಣಮಾಡಿದಾಗ್ಯೂ ಅವನ ಮನಸ್ಸಿನಲ್ಲಿ, ನಮ್ಮ ಮನೆಯಲ್ಲಿರತಕ್ಕ ವಸ್ತುಗಳೆಲ್ಲಿ ಬೆಂಕಿಯಿಂದ ಸುಡಲ್ಪಡುವುವೋ, ಕಳ್ಳರು ಅಪಹರಿಸುತ್ತಾರೋ ಇತ್ಯಾದಿ ದುಃಖದಿಂದ ಕೂಡಿರುವವನಾಗುತ್ತಾನೆ.

ಧನಾದಿಗಳು ಮನೆಯಲ್ಲಿ ನಿಶ್ಚಲವಾಗಿದ್ದಾಗ್ಯೂ, ಇವನ ಮನಸ್ಸು ನಿಶ್ಚಲವಾಗದೆ, ನಾರಕಿಯಾಗುತ್ತಾನೆ. ಜನನ, ಮರಣ, ಯಾತನ, ಗರ್ಭಗತ ಕಾಲಗಳಲ್ಲಿಯೂ ಸಂಸಾರವೆಂಬುವುದು ಸಹ ದುಃಖಾಧಿಕ್ಯತೆಯುಳ್ಳದ್ದು. ನಿರಂತರ ದುಃಖಮಯವಾದುದು. ಬಾಲ್ಯದಲ್ಲಿ ಆಟದಲ್ಲಿ ಆಸಕ್ತಿಯೂ, ಯೌವನದಲ್ಲಿ ವಿಷಯಾಸಕ್ತತೆಯೂ, ವಾರ್ಧಕದಲ್ಲಿ ಅಶಕ್ತತೆಯೂ ಸ್ವಭಾವವಾದುವು. ಆದುದರಿಂದ ಬಾಲ್ಯದಲ್ಲಿಯೇ ವಿವೇಕವನ್ನು ಅಭ್ಯಾಸಮಾಡುವುದಕ್ಕೆ ಪ್ರಯತ್ನಿಸಬೇಕು. ನೀವು ಹುಡುಗರಾದುದರಿಂದ ನಿಮಗೆ ವಿವೇಕೋದಯಕ್ಕಾಗಿ ಪರಮಾರ್ಥವನ್ನು ಹೇಳಿರುತ್ತೇನೆ. ನನ್ನ ಮಾತಿನಲ್ಲಿ ನಿಮಗೆ ನಂಬಿಕೆಯಿದ್ದರೆ ಮುಕ್ತಿಪ್ರದನಾದ ಶ್ರೀಮಹಾವಿಷ್ಣುವನ್ನು ಸ್ಮರಿಸಿ, ಹಾಗೆ ಸ್ಮರಣೆ ಮಾಡುವುದರಿಂದ ಆಯಾಸವೂ ಪಾಪಕ್ಷಯವೂ ಆಗಿ, ಮಂಗಳ ಉಂಟಾಗುವುದು. ಸರ್ವಭೂತಸ್ಥನಾದ ಪರಮಾತ್ಮನನ್ನು ಧ್ಯಾನಿಸಿದರೆ ಸಕಲ ಕ್ಲೇಶಗಳೂ ನಾಶವಾಗುತ್ತವೆ. ಆ ಕೇಶವನನ್ನು ಧ್ಯಾನಮಾಡತಕ್ಕವನು ಬ್ರಹ್ಮರುದ್ರಾದಿಗಳಿಂದಲೂ ಪರಿಹಾರ ಮಾಡಲಸಾಧ್ಯವಾದ ದುಃಖಾದಿಗಳಿಂದ ಬಿಡಲ್ಪಟ್ಟವನಾಗಿ ಮೋಕ್ಷವನ್ನು ಹೊಂದುವನು. ಇದೇ ಪರಮಾರ್ಥವು. ಹೇ ದೈತ್ಯಬಾಲಕರೇ, ಈ ಅಸಾರವಾದ ಸಂಸಾರವನ್ನು ಬಿಟ್ಟು ಸರ್ವಸಮನಾದ ಶ್ರೀಹರಿಯನ್ನು ಧ್ಯಾನ ಮಾಡಿ. ಆ ಪರಮಾತ್ಮನು ಪ್ರಸನ್ನನಾದರೆ ಅಲಭ್ಯವಾದ ವಸ್ತುವು ಯಾವುದೂ ಇಲ್ಲ. ನಿವಾಸವೃಕ್ಷನಾದ ಶ್ರೀನಿವಾಸನನ್ನು ಆಶ್ರಯಿಸಿ ಅಪಾರವಾದ ಮೋಕ್ಷಫಲವನ್ನು ಅನುಭವಿಸಿ."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ
ಹದಿನೇಳನೆಯ ಅಧ್ಯಾಯವು ಸಮಾಪ್ತಃ

ಹದಿನೆಂಟನೆಯ ಅಧ್ಯಾಯವು

ಈ ಪ್ರಕಾರ ಪ್ರಹ್ಲಾದನು, ದೈತ್ಯಪುತ್ರರಿಗೆ ತತ್ತ್ವೋಪದೇಶ ಮಾಡಲು, ಆ ಹುಡುಗರು ಎಲ್ಲವನ್ನೂ ಕೇಳಿ, ದೈತ್ಯಪತಿಯ ಭಯದಿಂದ ಓಡಿಹೋಗಿ ಹಿರಣ್ಯಕಶಿಪುವನ್ನು ಕುರಿತು, ನಿಮ್ಮ ಪ್ರಹ್ಲಾದನು ನಮ್ಮ ಗುರುವು ಮನೆಯಲ್ಲಿಲ್ಲದಾಗ ವಿಷ್ಣುವನ್ನೇ ಧ್ಯಾನಿಸಿ, ಅರಾಧಿಸಿ, ನಮಿಸಿ ಎಂಬುದಾಗಿ ನಮಗೆ ಬೋಧಿಸಿದನೆಂಬುದಾಗಿ ಹೇಳಲು, ಇದನ್ನು ಕೇಳಿದ ಕಶಿಪುವು ಕ್ರೋಧಯುಕ್ತನಾಗಿ, ಅಡಿಗೆಯವರನ್ನು ಕರೆದು ಹೇಳುತ್ತಾನೆ: "ಈ ಪ್ರಹ್ಲಾದನು ತಾನು ಕೆಡುವ

ದಲ್ಲದೆ ಇತರ ಬಾಲಕರನ್ನೂ ಸಹ ದುರ್ಬೋಧನೆಯನ್ನು ಮಾಡಿ ಕೆಡಿಸುತ್ತಾನೆ. ಆದುದರಿಂದ ಇವನನ್ನು ಕೊಲ್ಲುವ ಹಾಗೆ ಆಹಾರಪದಾರ್ಥಗಳಿಗೆಲ್ಲಾ ವಿಷವನ್ನು ಹಾಕಿ ಕೊಡಿ, ಪಾಪಾತ್ಮನು ನಾಶವಾಗಲಿ" ಎಂಬುದಾಗಿ ಆಜ್ಞಾಪಿಸಲು, ಇವನ ಆಜ್ಞಾನುಸಾರ ಅಡಿಗೆಯವರು ಪದಾರ್ಥಗಳಿಗೆ ವಿಷವನ್ನು ಬೆರಸಿ ಪ್ರಹ್ಲಾದನಿಗೆ ಕೊಟ್ಟರು. ಪ್ರಹ್ಲಾದನು ಭಗವಂತನಿಗೆ ನಿವೇದನಮಾಡಿ, ಎಲ್ಲವನ್ನೂ ಭುಂಜಿಸಿ ಸ್ವಸ್ಥಹೃದಯನಾದನು. ವಿಷವೆಲ್ಲವೂ ಜೀರ್ಣವಾಯಿತು. ಅಡಿಗೆಯವರು ಗಾಬರಿಪಟ್ಟು ಭಯದಿಂದ ದೈತ್ಯರಾಜನ ಸಮೀಪಕ್ಕೆ ಬಂದು ಓ ಸ್ವಾಮಿ, ನಿಮ್ಮ ಪ್ರಹ್ಲಾದನಿಗೆ ವಿಷಮಿಶ್ರವಾದ ಅನ್ನವನ್ನು ಕೊಟ್ಟಾಗ್ಯೂ ಘೋರವಾದ ವಿಷವೆಲ್ಲವೂ ಜೀರ್ಣವಾಯಿತೆಂಬುವ ಮಾತನ್ನು ಕೇಳಿದ ಹಿರಣ್ಯಕಶಿಪುವು ಪುರೋಹಿತನನ್ನು ಕುರಿತು, "ಓ ಬ್ರಾಹ್ಮಣೋತ್ತಮರೇ, ಈ ದುರಾತ್ಮನಾದ ಪ್ರಹ್ಲಾದನನ್ನು ಕೊಲ್ಲುವ ಹಾಗೆ ಕೃತ್ಯವನ್ನು ಮಾಡಿ" ಎಂಬುದಾಗಿ ಆಜ್ಞಾಪಿಸಲು; ಪುರೋಹಿತರು ಪ್ರಹ್ಲಾದನ ಸಮೀಪಕ್ಕೆ ಬಂದು, "ಎಲೈ ಪ್ರಹ್ಲಾದನೇ, ಆಯುಷ್ಮಂತನೇ, ನೀನು ಬ್ರಹ್ಮನ ಕುಲದಲ್ಲಿ ಹುಟ್ಟಿ ದೈತ್ಯರಾಜನಾದ ಹಿರಣ್ಯಕಶಿಪುವಿಗೆ ಮಗನಾಗಿ, ನಿಮ್ಮ ತಂದೆಯು ಹೇಗೆ ಮೂರು ಲೋಕಕ್ಕೂ ಅಧಿಪತಿಯಾಗಿರುತ್ತಾನೋ ಅದೇ ಪ್ರಕಾರ ನೀನೂ ಇರುವದಲ್ಲದೇ ದೇವತೆಗಳಿಂದಲೋ, ವಿಷ್ಣುವಿನಿಂದಲೋ, ದುರ್ಬೋಧಿತನಾಗಿ, ಈ ಪ್ರಕಾರ ನೀನು ತಂದೆಗೆ ವಿರೋಧವಾಗಿರುವುದು ಯುಕ್ತವಲ್ಲ. ಈಗಲೂ ಶತ್ರುಪಕ್ಷಸ್ತೋತ್ರವನ್ನು ಬಿಟ್ಟು ಉತ್ತಮ ಗುರುವಾದ ತಂದೆಯನ್ನು ಶುಶ್ರೂಷೆ ಮಾಡಿಕೊಂಡಿರುವುದು ಉತ್ತಮವಾದುದು" ಎಂಬ ಬುದ್ಧಿವಾದಗಳನ್ನು ಹೇಳಿದುದಕ್ಕೆ ಪ್ರಹ್ಲಾದನು, "ಪುರೋಹಿತರೇ, ನೀವು ಹೇಳಿದ ಪ್ರಕಾರ ಈ ನಮ್ಮ ಕುಲವು ಶ್ಲಾಘ್ಯವಾದುದು, ಈ ಮೂರು ಲೋಕವೂ ಮರೀಚಿಬ್ರಹ್ಮನಿಗೆ ಅಧೀನವಾಗಿರುವುವು, ಈ ನಮ್ಮ ತಂದೆಯು ಜಗತ್ತಿನಲ್ಲಿ ಉತ್ಕೃಷ್ಟವಾದ ಕೆಲಸವನ್ನು ಮಾಡಿದವನು, ನೀವು ಹೇಳಿದ ಹಾಗೆ ಇವನೇ ಪರಮಗುರುವು, ಇತ್ಯಾದಿ ನೀವು ಹೇಳಿದ ಮಾತುಗಳೆಲ್ಲವೂ ನಿಜವಾದುವು, ಈ ವಿಷಯದಲ್ಲಿ ನನಗೆ ಭ್ರಾಂತಿ ಎಂಬುವುದು ಸ್ವಲ್ಪವೂ ಇಲ್ಲವು. ಆದರೆ ನೀವು ಅನಂತನಿಂದ ಬೋಧಿಸಲ್ಪಟ್ಟೆಯೋ ಎಂಬುದಾಗಿ ಹೇಳಿದರಲ್ಲಾ, ಆ ವಿಷಯ ಮಾತ್ರ ಹಾಸ್ಯಾಸ್ಪದವಾದುದು. ನೀವುಗಳು ನನಗೆ ಗುರುಗಳು ಆದಾಗ್ಯೂ ನಿಮಗೆ ವಿಜ್ಞಾಪಿಸುತ್ತೇನೆ: ಧರ್ಮ, ಅರ್ಥ, ಕಾಮ, ಮೋಕ್ಷವೆಂಬುದಾಗಿ ನಾಲ್ಕು ಪುರುಷಾರ್ಥಗಳುಂಟು. ಈ ನಾಲ್ಕೂ ಪರಮಾತ್ಮನಿಂದಲೇ ಉಂಟಾದುವು. ಮರೀಚಿ ಬ್ರಹ್ಮನೇ ಮೊದಲಾದ ಮಹಾತ್ಮರು ಅನಂತನಿಂದಲೇ ಧರ್ಮಾದಿ ಚತುಷ್ಟಯ ಪುರುಷಾರ್ಥವನ್ನು ಹೊಂದಿದರು.

ಸಕಲವೂ ಅನಂತನಿಂದಲೇ ಉಂಟಾದುದು, ಮೋಕ್ಷಾದ್ಯೈಶ್ವರ್ಯಗಳೆಲ್ಲವೂ ಶ್ರೀಮನ್ನಾರಾಯಣನ ಆರಾಧನೆಯಿಂದಲೇ ಸಿದ್ಧಿಸಬೇಕು. ಬಹಳವಾಗಿ ಹೇಳು ವುದರಿಂದ ಪ್ರಯೋಜನವೇನು, ಹೇಗಾದರೂ ನೀವು ಪೂಜ್ಯರು, ನಾನು ಅಲ್ಪಜ್ಞನು, ನಾನು ಹೇಳಿದ್ದು ಸಾಧುವೊ ಅಸಾಧುವೊ? ಶ್ರೀಮನ್ನಾರಾಯಣ ನೊಬ್ಬನೇ ಜಗತ್ತಿಗೆ ಪತಿಯಾದವನು, ಸೃಷ್ಟಿ, ಸ್ಥಿತಿ, ಸಂಹಾರಕಾರಕನು, ಸಕಲ ಪ್ರಾಣಿಗಳ ಹೃದಯದಲ್ಲೂ ಅವನೇ ಇರುವನು, ಭೋಕ್ತೃವಾದವನೂ, ಜಗದೀಶ್ವರನಾದವನೂ ಸಹ ಆ ಶ್ರೀಮಹಾವಿಷ್ಣುವೇ" ಎಂಬುದಾಗಿ ಹೇಳಲು, ಪುರೋಹಿತರು ಪ್ರಹ್ಲಾದನಿಗೆ ಹೇಳುತ್ತಾರೆ: "ಎಲೈ ಮೂರ್ಖನೇ, ನೀನು ಬೆಂಕಿ ಯಿಂದ ಸುಡುತ್ತಿದ್ದುದನ್ನು ತಪ್ಪಿಸಿ, ನಿನ್ನ ಸಂರಕ್ಷಣೆಯನ್ನು ಮಾಡಬೇಕೆಂದು ನಾವು ಎಷ್ಟು ಬುದ್ಧಿವಾದವನ್ನು ಹೇಳಿದಾಗ್ಯೂ ನಿನ್ನ ದುಃಸ್ವಭಾವವನ್ನು ಬಿಡಲಿಲ್ಲ, ಈಗ ನಿನ್ನ ಸಂಹಾರವನ್ನು ಮಾಡುವ ಕೃತ್ಯಗಳನ್ನು ಮಾಡುತ್ತೇನೆ ಎಂಬುದಾಗಿ ಹೇಳಲು, ಅದಕ್ಕೆ ಸಮಾಧಾನವಾಗಿ ಪ್ರಹ್ಲಾದನು ಹೇಳುತ್ತಾನೆ: "ನನ್ನನ್ನು ರಕ್ಷಿಸುವುದಕ್ಕೆ ನೀವು ಯಾರು? ಸಂಹಾರಮಾಡುವುದಕ್ಕೆ ನೀವು ಯಾರು? ಸಂರಕ್ಷಕನೂ ಸಂಹಾರಕನೂ ಆದವನು ಶ್ರಿಯಃಪತಿಯೊಬ್ಬನೇ. ಕರ್ಮಾನುಸಾರ ಪ್ರಾಣಿಗಳು ಹುಟ್ಟುವುದೂ, ಗತಿಸಾಧನವೂ ಉಂಟಾಗುತ್ತವೆ. ಆದುದರಿಂದ ಸತ್ಕರ್ಮಾಚರಣೆಯೇ ಸಾಧುವಾದುದೆನಲು, ದೈತ್ಯಪುರೋಹಿತರು, ಕ್ರೋಧಾವಿಷ್ಟರಾಗಿ ಕೃತ್ಯವನ್ನು ಮಾಡಿದರು. ಆ ಕೃತ್ಯದಿಂದ ಭಯಂಕರವಾದ ಒಂದು ಭೂತವು ಹುಟ್ಟಿ ಶೂಲಪಾಣಿಯಾಗಿ ಪ್ರಹ್ಲಾದನ ಬಳಿಗೆ ಬಂದು ಶೂಲ ದಿಂದ ಹೊಡೆಯಲು, ಶೂಲವು ಚೂರುಚೂರಾಗಿ ಭೂಮಿಯಲ್ಲಿ ಬಿದ್ದಿತು. ಅನಪಾಯಿಯಾದ ಭಗವಂತನು ಹೃದಯದಲ್ಲಿರುವಾಗ ವಜ್ರವೇ ಒಡೆದು ಹೋಗುವಾಗ ಈ ಅಲ್ಪವಾದ ಶೂಲಗಳ ಪಾಡು ಹೇಳಬೇಕೆ? ಪಾಪರಹಿತ ನಾದ ಪ್ರಹ್ಲಾದನಿಗೆ, ಪಾಪಿಗಳಾದ ಪುರೋಹಿತರಿಂದ ಮಾಡಲ್ಪಟ್ಟ ಭೂತವು ಏನು ಮಾಡಲೂ ಸಾಧ್ಯವಿಲ್ಲದೇ ಪುರೋಹಿತರನ್ನೇ ಹೊಡೆದು ಭೂತವು ನಾಶವಾಯಿತು. ಭೂತದಿಂದ ಹೊಡೆಯಲ್ಪಟ್ಟ ಪುರೋಹಿತರನ್ನು ಶ್ರೀಮನ್ನಾ ರಾಯಣನು ಸಂರಕ್ಷಿಸಲೆಂಬುದಾಗಿ ಪ್ರಹ್ಲಾದನು ಹೇಳಿದನು: "ಓ ಸರ್ವ ವ್ಯಾಪಿಯೇ, ಜಗದ್ರೂಪನೇ, ಓ ಜನಾರ್ದನನೇ, ಈ ಪುರೋಹಿತರಾದ ಬ್ರಾಹ್ಮಣ ರನ್ನು ಭೂತದಿಂದ ಬಿಡುಗಡೆಮಾಡು. ನೀನು ಸರ್ವವ್ಯಾಪಿಯಾಗಿಯೂ, ಸರ್ವ ಭೂತಾಂತರಾತ್ಮಕನಾಗಿಯೂ ಇದ್ದುದೇ ಆದರೆ, ಈ ಪುರೋಹಿತರನ್ನು ಕಾಪಾಡು. ನಾನು ಯಾವ ಪ್ರಕಾರ ನಿನ್ನ ಅನುಗ್ರಹದಿಂದ ಬೆಂಕಿ, ವಿಷ, ದಿಗ್ಗಜ, ಸರ್ಪ, ಸಮುದ್ರ, ಪರ್ವತ ಇತ್ಯಾದಿ ಬಾಧೆಗಳಿಂದ ಸುಖವನ್ನು ಹೊಂದಿ

ದೆನೋ, ಅದೇ ಪ್ರಕಾರ ಈ ಬ್ರಾಹ್ಮಣರನ್ನು ಸಂರಕ್ಷಿಸು. ಈ ಪ್ರಕಾರ ಪ್ರಹ್ಲಾದನು ಭಗವಂತನನ್ನು ಸ್ತೋತ್ರಮಾಡಲು, ಆ ಪುರೋಹಿತರು ನಿರಾಮಯರಾಗಿ ಪೂರ್ವದಂತೆ ಎದ್ದು ವಿನಯಾನ್ವಿತರಾಗಿ ಪ್ರಹ್ಲಾದನನ್ನು ಆಶೀರ್ವದಿಸುತ್ತಾರೆ: ಓ ಪ್ರಹ್ಲಾದ, ಅಪ್ರತಿಹತನಾಗಿಯೂ, ಪುತ್ರ, ಮಿತ್ರ, ಧನ, ಐಶ್ವರ್ಯ ಇತ್ಯಾದಿ ಸಂಪದ್ಯುಕ್ತನಾಗಿಯೂ ಇರು" ಎಂಬುದಾಗಿ ಹೇಳಿ ದೈತ್ಯರಾಜನ ಸಮೀಪಕ್ಕೆ ಬಂದು ನಡೆದ ವೃತ್ತಾಂತವೆಲ್ಲವನ್ನೂ ಹೇಳಿದರು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ
ಹದಿನೆಂಟನೆಯ ಅಧ್ಯಾಯವು ಸಮಾಪ್ತಃ

ಹತ್ತೊಂಬತ್ತನೆಯ ಅಧ್ಯಾಯವು

ಹಿರಣ್ಯಕಶಿಪುವು, ಪುರೋಹಿತರಿಂದ ಮಾಡಲ್ಪಟ್ಟ ಅಭಿಚಾರಕ ಕೃತ್ಯವು ನಿಷ್ಫಲವಾದುದನ್ನು ಕೇಳಿ, ಸತ್ತುಹೋಗಿದ್ದ ಪುರೋಹಿತರನ್ನು ಬದುಕಿಸಿದ ಪ್ರಭಾವವನ್ನು ಕೇಳಬೇಕೆಂಬುದಾಗಿ ಪ್ರಹ್ಲಾದನನ್ನು ಕುರಿತು: "ಹೇ ಪ್ರಹ್ಲಾದ, ನಿನ್ನ ಚೇಷ್ಟೆಯನ್ನು ನೋಡಿದರೆ ಬಹಳ ಪ್ರಭಾವವುಳ್ಳವನಾಗಿದ್ದೀ, ಈ ಪ್ರಭಾವವು ಏನಾದರೂ ಮಂತ್ರತಂತ್ರಗಳಿಂದ ಕಲಿತದ್ದೋ ಅಥವಾ ನಿನ್ನ ಸ್ವಭಾವವೋ?" ಎಂಬುದಾಗಿ ಕೇಳಲು, ಆಗ ಪ್ರಹ್ಲಾದನು ತಂದೆಯ ಕಾಲುಗಳನ್ನು ಹಿಡಿದು ನಮಸ್ಕಾರ ಮಾಡಿ ಹೇಳುತ್ತಾನೆ: "ಓ ತಂದೆಯೇ, ಮಂತ್ರತಂತ್ರಗಳನ್ನೂ ಕಲಿತವನಲ್ಲ, ನನ್ನ ಸ್ವಭಾವವೂ ಅಲ್ಲ, ಮತ್ತೇನೆಂದರೆ, ಯಾರ ಯಾರ ಮನಸ್ಸಿನಲ್ಲಿ ಅಚ್ಯುತನು ವಾಸಮಾಡುವನೋ ಅವರೆಲ್ಲರಿಗೂ ಇದು ಸಹಜವಾಗಿಯೇ ಇದೆ. ಯಾವ ಮನುಷ್ಯನು ಕರ್ಮದಿಂದ, ಮನಸ್ಸಿನಿಂದ, ವಾಕ್ಕಿನಿಂದ ಪರಪೀಡೆಯನ್ನು ಮಾಡುತ್ತಾನೋ ಅವನಿಗೆ ಬೀಜಾನುಸಾರ ಜನ್ಮಪ್ರಾಪ್ತಿಯೂ, ಬಹಳ ವಾದ ಅಶುಭವೂ ಉಂಟಾಗುವುದು. ನಾನಾದರೋ ಪಾಪಮಾಡತಕ್ಕವನಲ್ಲ, ಚಿಂತಿಸತಕ್ಕವನಲ್ಲ, ಯಾವಾಗಲೂ ಕೇಶವನನ್ನೇ ಚಿಂತಿಸತಕ್ಕವನು" ಎಂಬ ಮಾತನ್ನು ಕೇಳಿ, ದೈತ್ಯೇಂದ್ರನು ಉಪ್ಪರಿಗೆಯ ಮೇಲೆ ಇದ್ದ ದೂತರನ್ನು ಕುರಿತು: "ಈ ದುಷ್ಟನಾದ ಪ್ರಹ್ಲಾದನನ್ನು ಉಪ್ಪರಿಗೆಯ ಮೇಲಿಂದ ಕೆಳಕ್ಕೆ ಹಾಕಿ, ಇವನ ದೇಹವೆಲ್ಲವೂ ಚೂರುಚೂರಾಗಿ ಹೋಗಲಿ" ಎಂದು ಆಜ್ಞಾಪಿಸಲು, ಆ ದೂತರು ಈ ಪ್ರಹ್ಲಾದನನ್ನು ಹಿಡಿದು ಉಪ್ಪರಿಗೆಯ ಮೇಲಿಂದ ಎತ್ತಿ ಹಾಕಿದರು. ಆಗ ಪ್ರಹ್ಲಾದನು, ಹೃದಯದಲ್ಲಿರುವ ಹರಿಯನ್ನು ಹೊತ್ತು

ಕೊಂಡು ಕೆಳಕ್ಕೆ ಬೀಳತಕ್ಕ ಕಾಲದಲ್ಲಿ ಭೂದೇವಿಯು ಭಕ್ತಿಯುಕ್ತನಾದ ಪ್ರಹ್ಲಾದನನ್ನು ಅಪ್ಪಿಕೊಂಡಳು. ಇದನ್ನು ನೋಡಿದ ಹಿರಣ್ಯಕಶಿಪುವು ಮಹಾ ಕೋಪಿಷ್ಟನಾಗಿ ಮಾಯಾವಿಶಾರದನಾದ ಶಂಬರಾಸುರರನ್ನು ಕುರಿತು, "ಹೇ ಶಂಬರಾಸುರನೇ, ಈ ದುರಾತ್ಮನಾದ ಪ್ರಹ್ಲಾದನು, ನಾವು ಏನು ಮಾಡಿದಾಗ್ಯೂ ಸಾಯಲಿಲ್ಲ, ನೀನಾದರೂ ಮಾಯೆಯಿಂದ ಇವನನ್ನು ನಾಶಮಾಡು" ಎಂದು ಹೇಳಲು, "ದೈತ್ಯಪತಿಯೇ, ನಿನ್ನ ಅಪ್ಪಣೆಪ್ರಕಾರ ಇವನಿಗೆ ಅನೇಕ ಮಾಯೆಗಳನ್ನು ಮಾಡಿ, ಸಂಹಾರಮಾಡುತ್ತೇನೆ, ನನ್ನ ಮಾಯಾ ಪ್ರಭಾವವನ್ನು ನೋಡು" ಎಂಬುದಾಗಿ ಹೇಳಿ, ಪ್ರಹ್ಲಾದನ ಮೇಲೆ ಅನೇಕವಾದ ಮಾಯಗಳನ್ನು ಕಲ್ಪಿಸಿ ಪ್ರಹ್ಲಾದನನ್ನು ಸಂಹರಿಸಬೇಕೆಂದು ಪ್ರಯತ್ನಿಸಿದ ಕಾಲದಲ್ಲಿ, ಪ್ರಹ್ಲಾದನು ಮಧುಸೂದನನನ್ನು ಸ್ಮರಣೆಮಾಡಲು, ಭಗವಂತನು ಪ್ರಹ್ಲಾದನ ಸಂರಕ್ಷಣಾರ್ಥ ವಾಗಿ ಸುದರ್ಶನವೆಂಬ ಚಕ್ರವನ್ನು ಕಳುಹಿಸಿದನು.

ಈ ಸುದರ್ಶನವು ಶಂಬರಾಸುರನಿಂದ ಮಾಡಲ್ಪಟ್ಟ ಸಾವಿರಾರು ಮಾಯೆ ಗಳನ್ನೂ ನಾಶಮಾಡಿತು. ಮಾಯೆಯಿಂದಲೂ ನಾಶವಾಗದಿರತಕ್ಕ ಪ್ರಹ್ಲಾದ ನನ್ನು ನೋಡಿ ದೈತ್ಯೇಂದ್ರನು, ವಾಯುವನ್ನು ಕುರಿತು, ಈ ಪ್ರಹ್ಲಾದನನ್ನು ಎತ್ತಿಕೊಂಡು ಹೋಗಿ ನಾಶಮಾಡು ಎಂಬುದಾಗಿ ಆಜ್ಞಾಪಿಸಲು, ಆ ವಾಯುವು ಪ್ರಹ್ಲಾದನ ಶರೀರವನ್ನು ಪ್ರವೇಶಿಸಿ, ಶೀತ, ಗಾಳಿ ಇತ್ಯಾದಿಗಳಿಂದ ಪೀಡಿಸಲು; ಪ್ರಹ್ಲಾದನು ಧರಣೀಧರನನ್ನು ಧ್ಯಾನಿಸಲು; ಭಗವಂತನು ವಾಯುವಿನ ಮೇಲೆ ಕೋಪಿಸಿಕೊಳ್ಳಲು, ವಾಯುವು ಪ್ರಹ್ಲಾದನ ದೇಹವನ್ನು ಬಿಟ್ಟು ಕ್ಷೀಣನಾದನು. ಅನಂತರ ಪ್ರಹ್ಲಾದನು ಗುರುವಿನ ಮನೆಗೆ ಹೋಗಿ, ಆಚಾರ್ಯನಾದ ಶುಕ್ರಾ ಚಾರ್ಯನಿಂದ ನೀತಿಶಾಸ್ತ್ರವೇ ಮೊದಲಾದ ಸಕಲ ಶಾಸ್ತ್ರಗಳನ್ನೂ ಅಭ್ಯಾಸಮಾಡಿ ದನು. ಶುಕ್ರಾಚಾರ್ಯನು ಹಿರಣ್ಯಕಶಿಪುವಿನ ಸಮೀಪಕ್ಕೆ ಬಂದು, "ಎಲೈ ದೈತ್ಯೇಂದ್ರನೇ, ನಿನ್ನ ಮಗನು ನನ್ನಿಂದ ದಂಡನೀತ್ಯಾದಿ ಸಕಲ ಶಾಸ್ತ್ರಗಳನ್ನೂ ಅಭ್ಯಾಸಮಾಡುತ್ತಾನೆ" ಎಂಬುದಾಗಿ ಹೇಳಲು, ಹಿರಣ್ಯಕಶಿಪುವು ಪ್ರಹ್ಲಾದ ನನ್ನು ಕರೆಸಿ, "ಎಲೈ ಪ್ರಹ್ಲಾದನೇ, ಮಿತ್ರರಲ್ಲಿ ಯಾವ ರೀತಿ ಇರಬೇಕು, ಶತ್ರು ಪಕ್ಷದಲ್ಲಿ ಯಾವ ರೀತಿ ಇರಬೇಕು, ಮಧ್ಯಸ್ಥರಲ್ಲಿ ಯಾವ ರೀತಿ ಇರಬೇಕು, ಮಂತ್ರಿಗಳಲ್ಲಿ ಯಾವ ರೀತಿ ಇರಬೇಕು, ಚಾರರುಗಳಲ್ಲಿ, ಪ್ರಜೆಗಳಲ್ಲಿ ಯಾವ ರೀತಿ ಇರಬೇಕು, ಈ ದಂಡನೀತ್ಯಾದಿ ಶಾಸ್ತ್ರಗಳಲ್ಲದೆ ಇತರ ಶಾಸ್ತ್ರಗಳನ್ನು ಅಭ್ಯಾಸ ಮಾಡಿದ್ದರೆ, ಅದನ್ನೂ ಸಹ ಹೇಳು" ಎಂಬುದಾಗಿ ಆಜ್ಞಾಪಿಸಲು ಪ್ರಹ್ಲಾದನು ತಂದೆಗೆ ನಮಸ್ಕಾರಮಾಡಿ ಅತ್ಯಂತ ವಿನಯದಿಂದ ಹೇಳುತ್ತಾನೆ: "ಓ ತಂದೆಯೇ, ನಮ್ಮ ಗುರುವಾದ ಶುಕ್ರಾಚಾರ್ಯರು ನನಗೆ ಸಕಲ ಶಾಸ್ತ್ರವನ್ನೂ

ಅಭ್ಯಾಸ ಮಾಡಿಸಿದರು, ಆದರೆ ಇದೆಲ್ಲವೂ ಸಚ್ಛಾಸ್ತ್ರವೆಂಬುದಾಗಿ ತಿಳಿಯಬೇಡ. ಸಾಮ, ದಾನ, ಭೇದ, ದಂಡವೆಂಬುವುಗಳೆಲ್ಲವೂ ಮಿತ್ರಾದಿಗಳ ಸಾಧನದಲ್ಲಿ ಅವಶ್ಯಕವಾದುವು. ನನಗೆ ಇವೆಲ್ಲವೂ ಸಮಿಾಚೀನವಾದುವುವಲ್ಲವು. ಆದರೆ ಇತರ ಶಾಸ್ತ್ರವನ್ನು ಅಭ್ಯಾಸಮಾಡಿದ್ದರೆ ಹೇಳೆಂಬುದಾಗಿ ನೀನು ಆಜ್ಞಾಪಿಸಿದುದರಿಂದ ನಿನ್ನ ಅಪ್ಪಣೆಯ ಪ್ರಕಾರ ಹೇಳುತ್ತೇನೆ: ಕೋಪಿಸಬೇಡ; ಸರ್ವಭೂತಾತ್ಮಕನಾದ ಜಗನ್ಮಯನಾದ ಜಗನ್ನಾಥನಾದ ಶ್ರೀಮನ್ನಾರಾಯಣನಲ್ಲಿ ಮಿತ್ರಾಮಿತ್ರತೆ ಎಂಬುವದೆಲ್ಲಿ? ಭಗವಂತನಾದ ವಿಷ್ಣುವು ನಿನ್ನಲ್ಲಿಯೂ, ನನ್ನಲ್ಲಿಯೂ ಸಹ ಇರುವನು; ಸರ್ವತ್ರ ಮಿತ್ರನಾಗಿಯೇ ಇರುವನು, ಅರ್ಥಶಾಸ್ತ್ರ, ಐಂದ್ರಜಾಲಿಕಾದಿ ಶಿಲ್ಪಿವಿದ್ಯಗಳೆಲ್ಲವೂ, ದೇಹಾಯಾಸದ ಕರ್ಮಗಳು. ಭಕ್ತಿಪ್ರಪತ್ಯಾದಿಗಳೇ ಮೋಕ್ಷಶಾಸ್ತ್ರಗಳು. ಇದೇ ಪರಮಾರ್ಥವಾದುದು, ಇದೇ ಸಾರವಾದುದೆಂಬುದಾಗಿಯೂ, ಉತ್ತಮವಾದುದೆಂಬುದಾಗಿಯೂ ನಾನು ತಿಳಿದುಕೊಂಡಿದ್ದೇನೆ. ಹೇ ಮಹಾಭಾಗ್ಯಶಾಲಿಯಾದವನೇ, ನಾನು ಹೇಳುವುದನ್ನು ಕೇಳು: ರಾಜ್ಯ ಧನಾದಿಗಳನ್ನು ಸರ್ವರೂ ಅಪೇಕ್ಷಿಸುತ್ತಾರೆ. ಈ ಎರಡೂ ಇದ್ದಾಗ್ಯೂ, ಭಗವದನುಗ್ರಹಕ್ಕೆ ಪಾತ್ರನಾಗಬೇಕೇ ಹೊರ್ತು, ಅರ್ಥಶಾಸ್ತ್ರಾದಿಗಳು ಪ್ರಯೋಜನಕಾರಿಗಳಲ್ಲ; ಭಗವಂತನಾದ ಪರಮಾತ್ಮನನ್ನು ತಿಳಿದರೆ, ಅನಾದಿಯಾದ ಪರಮೇಶ್ವರನು ನಮಗೆ ಪ್ರಸನ್ನನಾಗಿ ನಮ್ಮ ಕ್ಲೇಶಗಳನ್ನು ಪರಿಹಾರ ಮಾಡುತ್ತಾನೆ" ಎನಲು, ಹಿರಣ್ಯಕಶಿಪುವು ಈ ಮಾತುಗಳನ್ನು ಕೇಳಿ ಮಹಾಕೋಪದಿಂದ ಪ್ರಹ್ಲಾದನ ವಕ್ಷಃಸ್ಥಳಕ್ಕೆ ಕಾಲಿನಿಂದೊದ್ದು, ದೂತರನ್ನು ಕುರಿತು, "ಈ ಪ್ರಹ್ಲಾದನನ್ನು ನಾಗಪಾಶಗಳಿಂದ ಕಟ್ಟಿ, ಸಮುದ್ರದಲ್ಲಿ ಹಾಕಿ" ಎಂಬುದಾಗಿ ಆಜ್ಞಾಪಿಸಿದನು. "ಇವನನ್ನು ಸಮುದ್ರಕ್ಕೆ ಹಾಕದೆ ಇದ್ದರೆ ಲೋಕದಲ್ಲಿ ಎಲ್ಲರಿಗೂ ಇದೇ ದುರ್ಬುದ್ಧಿಯನ್ನು ಉಪದೇಶಮಾಡುತ್ತಾನೆಯಾದುದರಿಂದ ಈ ನೀಚನು ಜಗತ್ತಿನಲ್ಲಿರಕೂಡದು" ಎಂಬುದಾಗಿ ಹೇಳಲು, ದೂತರು ಜಾಗ್ರತೆಯಾಗಿ ಬಂದು, ಪ್ರಹ್ಲಾದನನ್ನು ನಾಗಪಾಶಗಳಿಂದ ಕಟ್ಟಿ ಸಮುದ್ರದಲ್ಲಿ ಹಾಕಿದರು. ಆಗ ಸಮುದ್ರರಾಜನು ತನ್ನ ಅಲೆಗಳಿಂದ ಪ್ರಹ್ಲಾದನನ್ನು ದಡಕ್ಕೆ ಹಾಕಿದನು. ಪುನಃ ಬದುಕಿಬಂದ ಪ್ರಹ್ಲಾದನನ್ನು ನೋಡಿ, ದೂತರಿಗೆ, "ಇವನನ್ನು ನಾಗಪಾಶಗಳಿಂದ ಕಟ್ಟಿ ಸಮುದ್ರದಲ್ಲಿ ಹಾಕಿ ಇವನ ಮೇಲೆ ಅನೇಕ ಪರ್ವತಗಳನ್ನೊಟ್ಟಿ ಮೇಲಕ್ಕೆ ಬರದ ಹಾಗೆ ಮಾಡಿ. ಇವನು ಏನು ಮಾಡಿದರೂ ಸಾಯಲಿಲ್ಲ. ಹೀಗೆ ಮಾಡಿದರೆ ಸಾವಿರಾರು ವರ್ಷ ಸಮುದ್ರದಲ್ಲಿ ಮುಳುಗಿ ನಾಶವಾಗಲಿ" ಎಂಬುದಾಗಿ ಆಜ್ಞಾಪಿಸಲು, ದೂತರು ದೈತ್ಯರಾಜನ ಅಪ್ಪಣೆಯ ಪ್ರಕಾರ ಸಮುದ್ರದಲ್ಲಿ

ಹಾಕಿ ಅವನ ಮೇಲೆ ಒಂದು ಯೋಜನದವರೆಗೂ ಪರ್ವತಗಳನ್ನು ಒಟ್ಟಿದರು.

ಆಗ ಪ್ರಹ್ಲಾದನು ಸಮುದ್ರದಲ್ಲಿ ಮುಳುಗಿಕೊಂಡು ಆಹ್ನಿಕ ವೇಳೆಯಲ್ಲಿ ಭಗವಂತನಾದ ಅಚ್ಯುತನನ್ನು ಕುರಿತು ಸ್ತೋತ್ರಮಾಡುತ್ತಾನೆ: "ಓ ಪುಂಡರೀ ಕಾಕ್ಷನೇ, ಪುರುಷೋತ್ತಮನೇ, ಸರ್ವಲೋಕಮಯನೇ, ತೀಕ್ಷ್ಣವಾದ ಚಕ್ರವನ್ನು ಧರಿಸಿದವನೇ, ನಿನಗೆ ನಮಸ್ಕಾರವು. ತಪಸ್ಸು, ವೇದ, ಇವುಗಳಲ್ಲಿ ಇಷ್ಟವುಳ್ಳ ದೇವನೂ, ಗೋಬ್ರಾಹ್ಮಣರಿಗೆ ಹಿತನಾದವನೂ, ಜಗತ್ತಿಗೆ ಹಿತನಾದವನೂ ಆಗಿರುವ ಗೋವಿಂದನಿಗೆ ನಮಸ್ಕಾರವು. ಹೇ ಅಚ್ಯುತನೇ, ಬ್ರಹ್ಮರುದ್ರಾದಿ ಪಿಪೀಲಿಕ ಪರ್ಯಂತವಾಗಿಯೂ ಇರತಕ್ಕ ಪ್ರಾಣಿಗಳಿಗೆ ನೀನೇ ಪರಮಾರ್ಥನಾದವನು, ಸರ್ವಕರ್ಮಭೋಕ್ತಾವಾದವನೂ, ಸಮಸ್ತಕರ್ಮಗಳಿಗೂ ಉಪಕರಣನಾದವನೂ, ಸರ್ವಕರ್ಮಫಲವೂ ಸಹ ನೀನೇ, ಯೋಗಿಗಳೆಲ್ಲರೂ ನಿನ್ನನ್ನೇ ಧ್ಯಾನಿಸುತ್ತಾರೆ. ಯಜ್ಞಾದಿ ಕರ್ಮಗಳನ್ನು ನಿನಗೋಸ್ಕರವಾಗಿಯೂ ಮಾಡುತ್ತಾರೆ. ಹವ್ಯಕವ್ಯಭೋಕ್ತಾವಾಗಿ ಪಿತೃದೇವತಾಸ್ವರೂಪನಾದವನು ನೀನೊಬ್ಬನೇ. ವಾಙ್ಮನಸಾದಿಗಳಿಗೂ ಗೋಚರವಾಗದೇ ಇರುವ, ಜ್ಞಾನಿಗಳಿಗೂ ಅಪರಿಚ್ಛೇದ್ಯವಾದ ವೈಷ್ಣವಶಕ್ತಿಯುಳ್ಳವನನ್ನು ನಮಸ್ಕರಿಸುತ್ತೇನೆ. ವಾಸುದೇವನಾದ ಭಗವಂತನ ಪಾದಗಳಿಗೆ ಪದೇಪದೇ ನಮಸ್ಕರಿಸುತ್ತೇನೆ. ದೇವತೆಗಳು ನಿನ್ನ ಅವತಾರರೂಪಗಳನ್ನು ಅರ್ಚಿಸುತ್ತಾರೆ. ಅವರೂ ಸಹ ಪರಮರೂಪವನ್ನು ನೋಡದೇ ಇರತಕ್ಕವರು. ಅಂತಹ ಪರಮ ರೂಪಧಾರಿಯಾದ ನಿನಗೆ ನಮಸ್ಕಾರವು. ಒಳಗೆ ಕೂತುಕೊಂಡು ಸಕಲ ಜಗತ್ತಿನ ಶುಭಾಶುಭಗಳನ್ನು ನೋಡತಕ್ಕ ಸರ್ವಸಾಕ್ಷಿಯಾದ ನಿನಗೆ ನಮಸ್ಕಾರವು. ಸರ್ವತ್ರ ನೀನು ಇರತಕ್ಕವನಾದುದರಿಂದ ನಿನಗೆ ಅನಂತನೆಂದು ಹೆಸರು. ನೀನು ನನ್ನಲ್ಲಿರುವುದೂ, ನಾನು ನಿನ್ನಲ್ಲಿರುವುದೂ ಸರ್ವವೂ ನೀನೇ. ಈ ಪ್ರಕಾರ ನಾನಾರೂಪ, ನಾನಾ ನಾಮಗಳಿಂದ ಕೂಡಿದ ಶ್ರೀಮಹಾವಿಷ್ಣುವಾದ ನೀನು, ನನಗೆ ಪ್ರಸನ್ನನಾಗು" ಎಂಬುದಾಗಿ ಪ್ರಾರ್ಥಿಸಿದನು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ
ಹತ್ತೊಂಬತ್ತನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತನೆಯ ಅಧ್ಯಾಯವು

ಈ ಪ್ರಕಾರ ಪ್ರಹ್ಲಾದನು ತಾನು ಪ್ರಹ್ಲಾದನು ಎಂಬುವುದನ್ನು ಮರೆತು, ಅಚ್ಯುತಶರೀರವಾಗಿ ತಾನೂ ಕಾರ್ಯರೂಪವಾಗಿ ಪ್ರಕಾರರೂಪ ವಿಷ್ಣುವಾಚಿ

ಯಾದುದರಿಂದ ಆ ಅಚ್ಯುತನೇ ತಾನು ಎಂಬಂತೆ ಭಗವಂತನನ್ನು ಚಿಂತಿಸು ತ್ತಿದ್ದನು. ತನ್ನನ್ನೇ ಮರೆತು ತಾನೇ ಅವ್ಯಯನಾದವನು, ನಿತ್ಯನಾದ ಪರಮಾತ್ಮ ನೆಂದು ಚಿಂತಿಸುತ್ತಿದ್ದನು. ಯೋಗಪ್ರಭಾವದಿಂದ ನಾಗಪಾಶಗಳೆಲ್ಲವೂ ಚೂರು ಚೂರಾಗಿ ಒಡೆದುಹೋದವು. ಸಮುದ್ರನು ಕ್ಷೋಭತ್ವವನ್ನು ಹೊಂದಿದನು. ಪರ್ವತಗಳಿಂದಲೂ ಕಾಡುಗಳಿಂದಲೂ ಕೂಡಿದ ಭೂಮಿಯು ಅಲ್ಲಾಡಿತು. ದೈತ್ಯರು ಪ್ರಹ್ಲಾದನ ಮೇಲೆ ಹಾಕಿದ ಪರ್ವತಗಳು ಚಲನವಾದುವು. ಆಗ ಪ್ರಹ್ಲಾದನು ಭೂಮಿಗೆ ಬಂದು, ಆಗ ತಾನು ಪ್ರಹ್ಲಾದನೆಂದು ಸ್ಮರಿಸಿ, ಪುನಃ ಭಗವಂತನನ್ನು ಕುರಿತು, "ಓ ಪರಮಾರ್ಥನಾದವನೇ, ಸ್ಥೂಲಸೂಕ್ಷ್ಮಾತ್ಮಕನಾದ ವನೇ, ವ್ಯಕ್ತಾವ್ಯಕ್ತನಾದವನೇ, ಸರ್ವೇಶ್ವರನೇ, ನಿರ್ಲೇಪನೇ, ಗುಣಾಧಾರನೇ, ವೈಶ್ವಾನರಮೂರ್ತಿಯೇ, ಚತುರ್ವ್ಯೂಹಾತ್ಮಕನೇ, ವಿಭವನೇ, ಪರರೂಪನೇ, ಕರಾಳರೂಪನೇ, ಸೌಮ್ಯರೂಪನೇ, ಸದ್ಭಾವನೇ, ಸತ್ಪದಾರ್ಥನೇ, ವಿಶ್ವಕಾರಣ ವಾದ ಶ್ರೀವಾಸುದೇವನೇ, ನಿನಗೆ ನಮಸ್ಕಾರವು" ಎಂದು ಭಗವಂತನನ್ನು ಸ್ತೋತ್ರಮಾಡಲು, ಪರಮಾತ್ಮನಾದ ಶ್ರೀಮನ್ನಾರಾಯಣನು ಪ್ರತ್ಯಕ್ಷನಾದನು. ಆಗ ಪ್ರಹ್ಲಾದನು, ಎದುರಿಗೆ ಪೀತಾಂಬರಧಾರಿಯಾದ ಶ್ರೀಹರಿಯನ್ನು ಕಂಡು, ಸಂಭ್ರಮದಿಂದ ಶ್ರೀಮಹಾವಿಷ್ಣುವಿಗೆ ನಮಸ್ಕಾರವಾಗಲಿ ಎಂಬುದಾಗಿ ಒಂದು ಸಲ ಹೇಳಿದನು: "ಓ ದೇವನೇ, ಪ್ರಪನ್ನದುಃಖಪರಿಹಾರನೇ, ಕೇಶವನೇ, ಅನುಗ್ರಹಿಸು. ನಿನ್ನ ಕೃಪಾಕಟಾಕ್ಷದಿಂದ ನನ್ನನ್ನು ಪರಿಪಾಲಿಸು" ಎಂದು ಸ್ತುತಿಸಲು; ಭಗವಂತನು ಪ್ರಹ್ಲಾದನನ್ನು ಕುರಿತು, "ಎಲೈ ಪ್ರಹ್ಲಾದನೇ, ಭಕ್ತಿಯಿಂದ ಪ್ರಣಾಮವನ್ನು ಮಾಡಿದ ನಿನಗೆ ನಾನು ಪ್ರಸನ್ನನಾಗಿದ್ದೇನೆ. ನನ್ನಿಂದ ನಿನ್ನ ಇಷ್ಟಾರ್ಥವನ್ನು ಹೊಂದಬಹುದು" ಎಂದನುಗ್ರಹಿಸಲು, ಪ್ರಹ್ಲಾದನು, "ಓ ನಾಥ, ಓ ಅಚ್ಯುತ, ಯಾವ ಯಾವ ಯೋನಿಗಳಲ್ಲಿ ಜನ್ಮ ವನ್ನೆತ್ತುವೆನೋ ಆಯಾ ಜನ್ಮಗಳಲ್ಲಿ ನಿನ್ನಲ್ಲಿ ನಿಶ್ಚಲವಾದ ಭಕ್ತಿಯು ನನಗೆ ಇರಲಿ; ಅವಿವೇಕಿಗಳಿಗೆ ವಿಷಯೋಪಭೋಗಗಳಲ್ಲಿ ಯಾವ ಪ್ರೀತಿ ಇರುತ್ತದೆಯೋ, ನಿನ್ನನ್ನೇ ಸ್ಮರಿಸತಕ್ಕ ನನಗೆ ನಿನ್ನಲ್ಲಿ ಅಂತಹ ಪ್ರೀತಿಯು, ಈ ನನ್ನ ಹೃದಯ ವನ್ನು ಬಿಟ್ಟುಹೋಗದಹಾಗೆ ಮಾಡು" ಎಂದು ಪ್ರಾರ್ಥಿಸಿದನು. ಅದಕ್ಕೆ ಭಗವಂತನು, "ಓ ಪ್ರಹ್ಲಾದನೇ, ನಿನಗೆ ನನ್ನಲ್ಲಿ ಭಕ್ತಿಯು ಇದ್ದೇ ಇರುವುದು, ಮುಂದೆಯೂ ಇದೇ ರೀತಿ ಇರುತ್ತದೆ. ನಿನಗೆ ಇಷ್ಟವಾದುದನ್ನು ಕೇಳಿಕೋ" ಎಂದು ಅನುಗ್ರಹಿಸಲು; ಅದಕ್ಕೆ ಪ್ರಹ್ಲಾದನು, "ಓ ಸ್ವಾಮಿಯೇ, ನಿನ್ನ ಸ್ತೋತ್ರಮಾಡುವುದರಿಂದ ನನ್ನಲ್ಲಿ ನಮ್ಮ ತಂದೆಗೆ ದ್ವೇಷ ಉಂಟಾಯಿತು, ಆ ದ್ವೇಷದಿಂದ ಅವನಿಗುಂಟಾದ ಪಾಪವನ್ನು ಪರಿಹಾರಮಾಡು; ನನ್ನ ತಂದೆಯು

ನನಗೆ ಅಗ್ನಿ, ವಿಷ, ಜಲ, ಪರ್ವತ, ಮಾಯಾ ಇತ್ಯಾದಿಗಳಿಂದ ಬಾಧೆಯನ್ನುಂಟು ಮಾಡಬೇಕೆಂದು ಅನೇಕ ಕಾರ್ಯಗಳನ್ನು ಮಾಡಿದನು. ಅದೆಲ್ಲವೂ ನನಗೆ ನಿನ್ನ ಅನುಗ್ರಹದಿಂದ ಪರಿಹರವಾದಾಗ್ಯೂ, ನನ್ನ ತಂದೆಯು ನಿನ್ನ ಪ್ರಭಾವದಿಂದ ಪಾಪದಿಂದ ಮುಕ್ತನಾಗಲಿ" ಎಂದು ಪ್ರಾರ್ಥಿಸಲು, ಅದಕ್ಕೆ ಭಗವಂತನು, "ಎಲೈ ಪ್ರಹ್ಲಾದನೇ, ನನ್ನ ಅನುಗ್ರಹದಿಂದ ಎಲ್ಲವೂ ಆಗುತ್ತದೆ. ನಿನಗೆ ಇನ್ನೊಂದು ವರವನ್ನು ಕೊಡುತ್ತೇನೆ ಕೇಳು" ಎಂದು ಹೇಳಿದನು. ಅದಕ್ಕೆ ಪ್ರಹ್ಲಾದನು, "ನಾನು ಕೃತಕೃತ್ಯನಾದೆನು, ಯಾವಾಗಲೂ ನಿನ್ನಲ್ಲಿ ನಿಶ್ಚಲವಾದ ಭಕ್ತಿಯುಂಟಾಗಲಿ" ಎಂದು ಪ್ರಾರ್ಥಿಸಿದನು. ಅದಕ್ಕೆ ಭಗವಂತನು, "ಓ ಪ್ರಹ್ಲಾದನೇ, ನಿನಗೆ ನನ್ನಲ್ಲಿ ಯಾವ ರೀತಿ ನಿಶ್ಚಲವಾದ ಭಕ್ತಿಯು ಇದೆಯೋ, ಅದಕ್ಕೆ ಅನುಗುಣವಾಗಿ ನನ್ನ ಅನುಗ್ರಹದಿಂದ ನಿನಗೆ ಮೋಕ್ಷವುಂಟಾಗುತ್ತದೆ" ಎಂದು ಅನುಗ್ರಹಿಸಿ ಅಂತರ್ಧಾನವನ್ನು ಹೊಂದಿದನು. ಪ್ರಹ್ಲಾದನು, ತಂದೆಯ ಬಳಿಗೆ ಬಂದು, ಪಾದವಂದನಾದಿಗಳನ್ನು ಮಾಡಿದನು. ಹಿರಣ್ಯಕಶಿಪುವು ಮಗನನ್ನು ನೋಡಿ ಆಲಿಂಗನ ಆಘ್ರಾಣಾದಿಗಳನ್ನು ಮಾಡಿ "ಎಲೈ ಮಗುವೇ, ನೀನು ಬದುಕಿ ಬಂದೆಯಾ !" ಎಂಬುದಾಗಿ ಕಣ್ಣಿನಲ್ಲಿ ನೀರನ್ನು ಸುರಿಸುತ್ತ ಪ್ರಹ್ಲಾದನನ್ನು ನೋಡಿ ಪ್ರೀತಿಯುಕ್ತನಾದನು. ಪ್ರಹ್ಲಾದನು ತಂದೆಯ ಮತ್ತು ಆಚಾರ್ಯನ ಶುಶ್ರೂಷೆಯನ್ನು ಮಾಡಿಕೊಂಡಿದ್ದನು. ಹೀಗೆ ಕೆಲವು ಕಾಲ ಕಳೆದ ನಂತರ ಹಿರಣ್ಯಕಶಿಪುವು, ಕ್ರೋಧದಿಂದ ಪ್ರಹ್ಲಾದನನ್ನು ಹೊಡೆಯುವುದಕ್ಕೆ ಕತ್ತಿಯನ್ನು ತೆಗೆದುಕೊಂಡ ಕಾಲದಲ್ಲಿ ಶ್ರೀಮಹಾವಿಷ್ಣುವು ನರಸಿಂಹರೂಪಿನಿಂದ ಹಿರಣ್ಯಕಶಿಪುವನ್ನು ಲೋಕಾಂತರವನ್ನು ಹೊಂದಿಸಿದ ನಂತರ ಪ್ರಹ್ಲಾದನು ದೈತ್ಯರಾಜನಾಗಿ, ರಾಜ್ಯಸಂಪತ್ತನ್ನೂ ಕರ್ಮಸಿದ್ಧಿಯನ್ನೂ ಪುತ್ರಪೌತ್ರಾದಿ ಸಂಪತ್ತುಗಳನ್ನೂ ಹೊಂದಿ ಬಹುಕಾಲ ರಾಜ್ಯಪರಿಪಾಲನೆಯನ್ನು ಮಾಡಿ ಭಗವಂತನನ್ನು ಧ್ಯಾನಿಸುತ್ತ ಪರಮಪದವನ್ನು ಹೊಂದಿದನು. ಭಗವದ್ಭಕ್ತನಾದ ಮಹಾಪ್ರಭಾವನಾದ ಪ್ರಹ್ಲಾದನ ಚರಿತ್ರೆಯನ್ನು ಯಾರು ಕೇಳುತ್ತಾರೋ, ಅವರ ಸಕಲ ಪಾಪಗಳೂ ಪರಿಹಾರವಾಗುತ್ತವೆ. ಪೌರ್ಣಮಾಸ್ಯೆಯಲ್ಲಿಯಾಗಲಿ ಅಮಾವಾಸ್ಯೆಯಲ್ಲಿಯಾಗಲಿ, ದ್ವಾದಶಿಯಲ್ಲಿಯಾಗಲಿ, ಅಷ್ಟಮಿಯಲ್ಲಿಯಾಗಲಿ, ಈ ಚರಿತ್ರೆಯನ್ನು ಪಠಣಮಾಡಿದವರಿಗೆ ಸರ್ವಸಿದ್ಧಿಯುಂಟಾಗುತ್ತದೆ. ಪ್ರಹ್ಲಾದನು ಯಾವ ರೀತಿ ಸಕಲಾಪತ್ತುಗಳಿಂದ ಮುಕ್ತನಾದನೋ, ಅದೇ ಪ್ರಕಾರ ಅವರು ವಿಪತ್ತುಗಳಿಂದ ಮುಕ್ತರಾಗುತ್ತಾರೆ." ಈ ಪ್ರಕಾರ ಪರಾಶರ ಮಹರ್ಷಿಗಳು ಅಪ್ಪಣೆ ಕೊಡಿಸಿದರು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ
ಇಪ್ಪತ್ತನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತೊಂದನೆಯ ಅಧ್ಯಾಯವು

ಶ್ರೀ ಪರಾಶರ ಮಹರ್ಷಿಗಳು ಪುನಃ ಹೇಳುತ್ತಾರೆ: "ಪ್ರಹ್ಲಾದನಿಗೆ ಶಿಬಿ, ಬಾಷ್ಕಲ, ವಿರೋಚನ ಎಂಬುದಾಗಿ ಮೂರು ಜನ ಗಂಡುಮಕ್ಕಳು; ವಿರೋಚನ ನಿಗೆ ಬಲಿ ಎಂಬ ಮಗನು, ಬಲಿಗೆ ನೂರು ಜನ ಮಕ್ಕಳು, ಇವರುಗಳಲ್ಲಿ ಬಾಣ ನೆಂಬುವನೇ ಜ್ಯೇಷ್ಠನು; ಹಿರಣ್ಯಾಕ್ಷನ ಮಕ್ಕಳು, ಜರ್ಝರ, ಶಕುನಿ, ಭೂತ ಸಂತಾಪನ, ಮಹಾನಾಭ, ಕಾಲನಾಭ ಎಂಬುದಾಗಿ. ಇವರು ಮಹಾಬಲಶಾಲಿ ಗಳು. ದನು ಎಂಬುವನಿಗೆ ದ್ವಿಮೂರ್ಧಾ, ಶಂಬರ, ಅಯೋಮುಖ, ಶಂಕುಶಿರ, ಕಪಿಲ, ಶಂಕರ, ಏಕವಕ್ತ್ರ, ಕಾರಕ, ಸ್ವರ್ಭಾನು, ವೃಷಪರ್ವ, ಪುಲೋಮ ಎಂಬ ಪುತ್ರರು; ಸ್ವರ್ಭಾನುವಿಗೆ ಶರ್ಮಿಷ್ಠೆ ಎಂಬ ಕನ್ನಿಕೆಯು, ವೈಶ್ವಾನರನಿಗೆ ಪುಲೋಮ, ಕಾಲಕ ಎಂಬುದಾಗಿ ಇಬ್ಬರು ಕನ್ನಿಕೆಯರು; ಇವರಿಬ್ಬರನ್ನೂ ಮರೀಚಿ ಎಂಬುವನು ಪರಿಗ್ರಹಿಸಿ, ಅರವತ್ತುಸಾವಿರ ಮಕ್ಕಳನ್ನು ಪಡೆದನು. ಇವರುಗಳು ಪೌಲೋಮರೆಂದೂ, ಕಾಲಿಕೇಯರೆಂದೂ ಹೆಸರನ್ನು ಪಡೆದವರು. ಹಿರಣ್ಯಕಶಿಪುವಿನ ತಂಗಿಯಾದ ಸಿಂಹಿಕಾ ಎಂಬುವಳಲ್ಲಿ ಪ್ರಚಿತ್ತಿ ಎಂಬುವನಿಗೆ ತ್ರ್ಯಂಶ, ಶಲ್ಯ, ನಭ, ವಾತಾಪಿ, ನಮುನ, ಇಲ್ವಲ, ಖಸ್ಯಮ, ಅಂಧಕ, ನರಕ, ಕಾಲನಾಭ ಎಂಬುವರು ಮಕ್ಕಳು. ಇವರುಗಳು ದಾನವಶ್ರೇಷ್ಠರು, ದನುವಂಶ ವೃದ್ಧಿಕಾರರು. ಇವರುಗಳ ಮಕ್ಕಳುಗಳು, ಸಾವಿರಾರು ಶಾಖೆಗಳಾಗಿ ವೃದ್ಧಿ ಯಾದರು. ಪ್ರಹ್ಲಾದನ ಕುಲದಲ್ಲಿ ನಿವಾತಕವಚರೆಂಬ ದೈತ್ಯರು ಹುಟ್ಟಿ, ತಪಸ್ಸುಗಳಿಂದ ಪರಾಕ್ರಮವನ್ನು ಪಡೆದರು. ಕಾಶ್ಯಪರ ಪತ್ನಿಯಾದ ತಾಮ್ರಾ ಎಂಬುವಳಲ್ಲಿ ಶುಕೀ, ಶ್ಯೇನೀ ಭಾಸೀ, ಸುಗ್ರೀವಿ, ಶುಚಿ, ಗೃಧ್ರಿಕಾ ಎಂಬ ಆರು ಜನ ಹೆಣ್ಣುಮಕ್ಕಳು ಹುಟ್ಟಿದರು. ಶುಕೀ ಎಂಬುವಳು ಗೂಬೆ, ಕಾಗೆ ಇವುಗಳನ್ನೂ, ಶ್ಯೇನೀ ಎಂಬುವಳು ಗಿಡಗಳನ್ನೂ, ಭಾಸೀ ಭಾಸ ಎಂಬುವಳು ಪಕ್ಷಿಗಳನ್ನೂ, ಗೃಧ್ರಿಕೆಯು ಹದ್ದುಗಳನ್ನೂ. ಶುಚಿಯು ಪಕ್ಷಿಗಳನ್ನೂ, ಸುಗ್ರೀವಿಯು ಕುದುರೆ, ಕತ್ತೆಗಳನ್ನೂ, ವಿನತಾ ಎಂಬುವಳು ಗರುಡ, ಅರುಣ ಎಂಬುವರನ್ನೂ, ಸುರಸಾ ಎಂಬುವಳು ತಕ್ಷಕನೇ ಮೊದಲಾದ ಸರ್ಪ ಗಳನ್ನೂ, ಗಾವಃ ಎಂಬುವಳು ಹಸುಗಳನ್ನೂ, ಎಮ್ಮೆಗಳನ್ನೂ, ಇರಾ ಎಂಬು ವಳು ವೃಕ್ಷಗಳನ್ನೂ, ಬಳ್ಳಿಗಳನ್ನೂ, ಖಷಾ ಎಂಬುವಳು ಯಕ್ಷರನ್ನೂ. ಅರಿಷ್ಟಾ ಎಂಬುವಳು ಗಂಧರ್ವರನ್ನೂ ಪಡೆದು ಈ ಪ್ರಕಾರ ಕಾಶ್ಯಪರ ಪತ್ನಿಯರು ಜಗತ್ಸೃಷ್ಟಿಯನ್ನು ವೃದ್ಧಿ ಮಾಡಿದರು. ಹೀಗೆ ಎಲ್ಲವೂ ಕಾಶ್ಯಪರಿಂದ ಹುಟ್ಟಿದುವು. ಈ ಪ್ರಕಾರ ಸ್ವಾರೋಚಿಷ ಮನ್ವಂತರದಲ್ಲಿ ಪ್ರಜಾಸೃಷ್ಟಿಯನ್ನು ಮಾಡಿದರು. ಮುಂದೆ ವೈವಸ್ವತ ಮನ್ವಂತರದಲ್ಲಿ ಚತುರ್ಮುಖ ಬ್ರಹ್ಮನು, ಸಪ್ತರ್ಷಿಗಳನ್ನು

ಪುತ್ರರನ್ನಾಗಿಟ್ಟುಕೊಂಡು ಪ್ರಜಾಸೃಷ್ಟಿಯನ್ನು ಮಾಡುವನು. ದಿತಿಯು ತನ್ನ ಮಕ್ಕಳು ನಷ್ಟವಾದುದನ್ನು ನೋಡಿ, ಪತಿಯಾದ ಕಾಶ್ಯಪರ ಬಳಿಗೆ ಬಂದು ಅವರನ್ನು ಸಂತೋಷಪಡಿಸಲು, ಆಗ ಅವರು ತನ್ನ ಪತ್ನಿಯಂ ಕುರಿತು ನೀನು ಇಷ್ಟವಾದ ವರವನ್ನು ಕೇಳು ಎಂಬುದಾಗಿ ಹೇಳಲು; ಅದಕ್ಕೆ ದಿತಿಯು ಇಂದ್ರನನ್ನು ಸಂಹಾರಮಾಡತಕ್ಕ ಸಮರ್ಥನಾದ ಮಗನನ್ನು ಕೊಡು ಎಂಬುದಾಗಿ ವರವನ್ನು ಪ್ರಾರ್ಥಿಸಲು, ಅದೇ ಪ್ರಕಾರ ವರವನ್ನು ಕೊಟ್ಟು ಇಂದ್ರನನ್ನು ಜಯಿಸುವ ಮಗನನ್ನು ಅಪೇಕ್ಷಿಸಿದುದರಿಂದ ಯಾವಾಗಲೂ ಶುಚಿರ್ಭೂತಳಾಗಿಯೇ ಇರಬೇಕು ಎಂದು ಕಾಶ್ಯಪನು ಹೇಳಲು, ದಿತಿಯು ಗರ್ಭವನ್ನು ಧರಿಸಿ ಶುಚಿರ್ಭೂತಳಾಗಿಯೇ ಇರುತ್ತಿದ್ದಳು. ದೇವೇಂದ್ರನು ತನಗೆ ಈ ಗರ್ಭವು ಮೃತ್ಯುವೆಂಬುದಾಗಿ ತಿಳಿದು ದಿತಿಯ ಶುಶ್ರೂಷೆಯನ್ನುಮಾಡುತ್ತಿದ್ದನು. ದಿತಿಯು ಯಾವಾಗ ಶುಚಿಯಾಗಿರುವುದಿಲ್ಲವೆಂಬುದನ್ನೇ ನಿರೀಕ್ಷಿಸುತ್ತಿರುವಾಗ, ಒಂದಾನೊಂದು ದಿವಸ ದಿತಿಯು ಪಾದಶೌಚವನ್ನು ಮಾಡದೇ ಮಲಗಿಕೊಂಡ ಕಾಲದಲ್ಲಿ ದೇವೇಂದ್ರನು ಅವಳ ದೇಹವನ್ನು ಪ್ರವೇಶಮಾಡಿ, ವಜ್ರಾಯುಧದಿಂದ ಗರ್ಭವನ್ನು ಏಳು ಭಾಗವಾಗಿ ಕತ್ತರಿಸಿದನು. ಆ ಗರ್ಭವು ರೋದನಮಾಡಲು ಆರಂಭಿಸಿದ ಕಾಲದಲ್ಲಿ, ನೀನು ಅಳಬೇಡವೆಂಬುದಾಗಿ ಗರ್ಭಕ್ಕೆ ಹೇಳಿ, ಪುನಃ ಒಂದೊಂದು ಭಾಗವನ್ನು ಏಳು ಏಳು ಭಾಗಗಳಾಗಿ ಮಾಡಿದನು. ಈ ನಲವತ್ತೊಂಬತ್ತು ಭಾಗಗಳೂ ಮರುತ್ತುಗಳಾಗಿ ಹುಟ್ಟಿ, ದೇವೇಂದ್ರನಿಗೆ ಸಹಾಯಕರಾದರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ
ಇಪ್ಪತ್ತೊಂದನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತೆರಡನೆಯ ಅಧ್ಯಾಯವು

ಶ್ರೀ ಪರಾಶರರು ಹೇಳುತ್ತಾರೆ: "ಪೂರ್ವದಲ್ಲಿ ಮಹರ್ಷಿಗಳಿಂದ ಪೃಥುಚಕ್ರವರ್ತಿಗೆ ಅಭಿಷೇಕಮಾಡಿದನಂತರ, ಬ್ರಹ್ಮನು ರಾಜ್ಯವಿಭಾಗವನ್ನು ಮುಂದೆ ಹೇಳುವ ಪ್ರಕಾರ ಮಾಡಿದನು. ನಕ್ಷತ್ರಗಳಿಗೆಲ್ಲಾ ಚಂದ್ರನೂ, ಯಜ್ಞಗಳಿಗೂ ತಪಸ್ಸುಗಳಿಗೂ ಬ್ರಹ್ಮನೂ, ರಾಜರುಗಳಿಗೆ ಕುಬೇರನೂ, ಎಳ್ಳಿಗೆ ವರುಣನೂ, ದ್ವಾದಶಾದಿತ್ಯರಿಗೆ ವಿಷ್ಣುವೂ, ಅಷ್ಟವಸುಗಳಿಗೆ ಅಗ್ನಿಯೂ, ನವಬ್ರಹ್ಮರಿಗೆ ದಕ್ಷನೂ, ಸಪ್ತಮರುತ್ತುಗಳಿಗೆ ಇಂದ್ರನೂ, ದೈತ್ಯದಾನವರಿಗೆ ಪ್ರಹ್ಲಾದನೂ, ಪಿತೃಗಳಿಗೆ ಯಮಧರ್ಮರಾಜನೂ, ಆನೆಗಳಿಗೆ ಐರಾವತವೂ, ಪಕ್ಷಿಗಳಿಗೆ ಗರುಡನೂ, ಸರ್ಪಗಳಿಗೆ ವಾಸುಕಿಯೂ, ಕುದುರೆಗಳಿಗೆ ಉಚ್ಚೈಶ್ರವಸ್ಸೂ, ಹಸುಗಳಿಗೆ ವೃಷಭವೂ, ಮೃಗಗಳಿಗೆ ಸಿಂಹವೂ, ವಿಷಜಂತುಗಳಿಗೆ ಆದಿಶೇಷನೂ,

ಸ್ಥಾವರಗಳಿಗೆ ಹಿಮಾಲಯವೂ, ಋಷಿಗಳಿಗೆ ಕಪಿಲಮಹರ್ಷಿಯೂ, ವೃಕ್ಷಗಳಿಗೆ ಆಲದ ಮರವೂ, ಈ ಪ್ರಕಾರ ಆಧಿಪತ್ಯವನ್ನು ವಿಭಾಗಮಾಡಿ, ಉಪದಿಕ್ಪಾಲಕರನ್ನೂ ಸ್ಥಾಪನೆಮಾಡಿದನು. ಪೂರ್ವದಿಕ್ಕಿಗೆ ವೈರಾಜನ ಮಗನಾದ ಸುಧನ್ವನನ್ನೂ, ದಕ್ಷಿಣದಿಕ್ಕಿಗೆ ಕರ್ದಮನ ಮಗನಾದ ಶಂಖಪದನನ್ನೂ, ಪಶ್ಚಿಮದಿಕ್ಕಿಗೆ ರಜಸನ ಮಗನಾದ ಕೇತುಮಂತನನ್ನೂ, ಉತ್ತರದಿಕ್ಕಿಗೆ ಪರ್ಜನ್ಯನ ಮಗನಾದ ಹಿರಣ್ಯರೋಮನನ್ನೂ ಅಭಿಷೇಚಿಸಿ ಅವರುಗಳಿಂದ ಸಪ್ತದ್ವೀಪದಿಂದ ಯುಕ್ತವಾದ ಭೂಮಿಯನ್ನು ಅದ್ಯಾಪಿಧರ್ಮದಿಂದ ಪರಿಪಾಲಿಸುತ್ತಿದ್ದು, ಇವರುಗಳೆಲ್ಲರೂ ಶ್ರೀಮಹಾವಿಷ್ಣುವಿನ ವಿಭೂತಿಭೂತರಾದರು. ಲೋಕದಲ್ಲಿದ್ದ ಈಗ ಇರುವ ಮುಂದೆ ಆಗತಕ್ಕ ತೇಜಸ್ವಿಗಳೆಲ್ಲರೂ ಶ್ರೀಮನ್ನಾರಾಯಣನ ಅಂಶಭೂತರು. ಸರ್ವೇಶ್ವರನಾದ ಶ್ರೀಹರಿಯ ಸಾಮರ್ಥ್ಯದಿಂದಲೇ ರಾಜ್ಯಪಾಲನಾದಿ ಶಕ್ತಿಯುಂಟಾಗತಕ್ಕದ್ದು. ಮರೀಚಿಬ್ರಹ್ಮನೇ ಮೊದಲಾದವರನ್ನು ರಜೋಗುಣಯುಕ್ತನಾಗಿ ಸೃಷ್ಟಿಮಾಡಿದನು. ಮನ್ವಾದಿರೂಪದಿಂದ ಜಗತ್ಪಾಲನಾದಿಗಳನ್ನು ಸತ್ವಗುಣಯುಕ್ತನಾಗಿ ಪರಿಪಾಲಿಸುವನು. ರುದ್ರಸ್ವರೂಪನಾದ ಭಗವಂತನು ತಾಮಸಗುಣಯುಕ್ತನಾಗಿ ಅಗ್ನ್ಯಂತಕಾದಿ ರೂಪದಿಂದ ಸಂಹಾರವನ್ನು ಮಾಡುವನು. ಈ ಪ್ರಕಾರ ವಿಭಾಗವನ್ನು ಮಾಡಿದ ಶ್ರೀಮನ್ನಾರಾಯಣನು, ಸೃಷ್ಟಿ ಸ್ಥಿತಿ ಸಂಹಾರಾದಿಗಳನ್ನು ಮಾಡತಕ್ಕವರೆಲ್ಲರೂ ಶ್ರೀಹರಿ ತೇಜಸ್ಸಿನಿಂದ ಕೂಡಿದವರು. ಮುಕ್ತಸ್ವರೂಪವೇ ಪರಬ್ರಹ್ಮಸಮಾನತ್ವವು. ಮುಕ್ತಿಕಾಮನಾದ ಯೋಗಿಗೆ ಪ್ರಾಣಾಯಾಮಾದಿಗಳೇ ಸಾಧನವಾದುವು. ದೇಹಾತ್ಮವಿವೇಕತ್ವವೂ, ಪದಾರ್ಥಶುದ್ಧಿಯೂ ಸಹ ಉಂಟಾಗುವದೇ ಪರಮಂ ಪದಂ, ಇದೇ ಒಂದನೆಯ ಭಾಗವು. ಯೋಗಿಗೆ ಅಭ್ಯಾಸದಿಂದ ಸಾಧ್ಯವಾದುದು ಯಾವದೋ ಅದೇ ಪರಬ್ರಹ್ಮವು, ಇದೇ ಎರಡನೆಯ ಭಾಗವು. ಸಾಧ್ಯಸಾಧನಭಾವದಿಂದ ಸುರನರಾದಿ ದ್ವೈತರ ಹಿತತಜ್ಞಾನವೇ ಅದ್ವೈತಜ್ಞಾನವು, ಇದೇ ಮೂರನೆಯ ಭಾಗವು. ಆತ್ಮಾವಲೋಕರೂಪವಾದ ಜ್ಞಾನವೇ ನಾಲ್ಕನೆಯ ಭಾಗವು. ಹೀಗೆ ಜ್ಞಾನಭೂತನಾದ ಬ್ರಹ್ಮವು ನಾಲ್ಕು ವಿಧವಾಗಿರುವುದು. ಸಿದ್ಧಸಮಾಧಿಯನ್ನು ಹೊಂದಿದ ಜ್ಞಾನಿಗೆ, ಪರಬ್ರಹ್ಮನು ಸಾಧನಾನುಷ್ಠಾನರಹಿತನಾದವನು, ರೂಪವರ್ಣಾದಿಗಳಿಗೆ ಅಗೋಚರಸ್ವರೂಪನಾದವನು, ಅಸಂಕುಚಿತನಾದವನು, ಸಾಮ್ಯರಹಿತನು, ಅಪಕ್ಷಯಾದಿರಹಿತನಾದವನು, ಸತ್ವಗುಣಪ್ರಧಾನನಾದವನು, ಪ್ರಶಾಂತನಾದವನು, ಕರ್ಮರಹಿತನಾದವನು, ಈ ಪ್ರಕಾರವಿರುವನೇ ವಿಷ್ಣುರೂಪವಾದ ಪರಬ್ರಹ್ಮನು. ತಚ್ಛಬ್ದವಾಚ್ಯನಾದ ವಿಷ್ಣುವಿನ ಜ್ಞಾನವೇ ಮೋಕ್ಷವಾಗುತ್ತದೆ. ಅನ್ಯಜ್ಞಾನಕ್ಕೆ ಕಡೆಯಾದುದು ಪರಮಾತ್ಮಸ್ವರೂಪವು. ಇದರ ಬಲದಿಂದ ಯೋಗಿಗಳು ಉಪಾಧಿಗಳಿಂದ ಬಿಡಲ್ಪಡುತ್ತಾರೆ. ಈ ಪ್ರಕಾರ ನಿರ್ಮಲವಾಗಿಯೂ,

ನಿತ್ಯನಾಗಿಯೂ, ವ್ಯಾಪಕನಾಗಿಯೂ ಇರುವ ವಿಷ್ಣುವೇ ಉತ್ಕೃಷ್ಟವಾದ ಸ್ಥಾನ. ಇಂತಹ ಸ್ಥಾನವನ್ನು ಹೊಂದಿದ ಯೋಗಿಗಳು ಪುನಃ ಹಿಂತಿರುಗುವದಿಲ್ಲ. ಪರಬ್ರಹ್ಮನಿಗೆ ಮೂರ್ತ ಅಮೂರ್ತವೆಂಬುದಾಗಿ ಎರಡು ರೂಪಗಳು. ಮೂರ್ತವೆಂದರೆ ಸಶರೀರವಾದ ಬ್ರಹ್ಮಾದಿ ಜೀವಜಂತುಗಳು; ಅಮೂರ್ತವೆಂದರೆ ಮುಕ್ತರೂಪವು. ಈ ಎರಡು ರೂಪಗಳೂ ಪರಬ್ರಹ್ಮನ ಶಕ್ತಿ ಎಂಬುದಾಗಿ ಹೇಳಲ್ಪಡುತ್ತದೆ. ಈ ಶಕ್ತಿಯು ಒಂದೇ ಕಡೆಯಲ್ಲಿರುವ ಅಗ್ನಿಯು ಬೆಳಕನ್ನು ಯಾವ ಪ್ರಕಾರ ವಿಸ್ತರಿಸಿರುತ್ತದೆಯೋ ಅದೇ ರೀತಿಯಲ್ಲಿ ಭಗವಚ್ಛಕ್ತಿಯೂ ಇರುವದು. ಬ್ರಹ್ಮರುದ್ರರಿಗೆ ಶರೀರತ್ವದಿಂದ ಶಕ್ತಿತ್ವವುಂಟಾಗಿದೆ. ಈ ಶಕ್ತಿಯು ವಿಷ್ಣುವಿನ ಅಂಶದಿಂದ ಪ್ರಾಪ್ತವಾದುದು. ಬ್ರಹ್ಮರುದ್ರರುಗಳಿಗಿಂತ ದೇವಾದಿಗಳು ಜ್ಞಾನಶಕ್ತಿಗಳಲ್ಲಿ ಕಮ್ಮಿಯಾದವರು. ಶ್ರೀಮಹಾವಿಷ್ಣುವು ಸರ್ವಶಕ್ತಿಮಯವಾದವನು; ಕ್ಷರಾಕ್ಷರಮಯನಾದವನು. ಅಸ್ತ್ರಭೂಷಣ ಸ್ವರೂಪದಿಂದ ಯುಕ್ತನಾದ ಶ್ರೀಮನ್ನಾರಾಯಣನು ಸಕಲ ಜಗತ್ತನ್ನೂ ಧರಿಸಿರುವನು." ಈ ಪ್ರಕಾರ ಪರಾಶರರು ಹೇಳುತ್ತಿರುವಾಗ ಮೈತ್ರೇಯರು ಕೇಳುತ್ತಾರೆ: "ಸ್ವಾಮಿ, ಪರಾಶರ ಮಹರ್ಷಿಗಳೇ, ಅಸ್ತ್ರಭೂಷಣಸ್ವರೂಪದಿಂದ ಜಗತ್ತನ್ನೂ ಧರಿಸಿರುವನೆಂಬುದಾಗಿ ಹೇಳಿದಿರಲ್ಲಾ ಅಸ್ತ್ರಭೂಷಣವಿಚಾರವನ್ನು ವಿಸ್ತಾರವಾಗಿ ಕೇಳಲಿಚ್ಛೈಸುತ್ತೇನೆ, ಹೇಳಬೇಕು" ಎಂದು ಪ್ರಾರ್ಥಿಸಲು; ಪರಾಶರ ಭಗವಾನ್‌ರವರು ಹೇಳುತ್ತಾರೆ: "ಎಲೈ ಮೈತ್ರೇಯನೇ, ಪೂರ್ವದಲ್ಲಿ ವಸಿಷ್ಠ ಬ್ರಹ್ಮರ್ಷಿಯು ನನಗೆ ಉಪದೇಶ ಮಾಡಿದುದನ್ನು, ಈಗ ನಿನಗೆ ಹೇಳುತ್ತೇನೆ ಕೇಳು" ಎಂದು ಶ್ರೀಮಹಾವಿಷ್ಣುವಿಗೆ ನಮಸ್ಕಾರಮಾಡಿ, "ಮಣಿಯು ಯಾವ ಪ್ರಕಾರ ನಿರ್ಮಲವಾದುದೋ ಅದೇ ಪ್ರಕಾರ ಈ ಜಗತ್ತಿಗೆ ಜೀವಾತ್ಮನು ಶುದ್ಧನಾದ ಪುರುಷನೆಂಬ ಸ್ವರೂಪವನ್ನು ತೋರಿಸುವುದಕ್ಕೋಸ್ಕರ ಕೌಸ್ತುಭರತ್ನವನ್ನು ಭಗವಂತನು ಧರಿಸಿರುವನು. ಶ್ರೀವತ್ಸವೆಂಬುವದು ಎದೆಯ ಕೂದಲಿನ ಸುಳಿಯು; ಈ ಚಿಹ್ನೆಯು ಶ್ರೀಮಹಾಲಕ್ಷ್ಮಿಯ ಆವಾಸಸ್ಥಾನವು. ಈ ಸ್ಥಾನವು ಅಮೃತಮಯವಾದುದರಿಂದ ಸರ್ವ ಜಗತ್ಸೃಷ್ಟಿಗೆ ಹೇತುಭೂತವಾದ ಪ್ರಧಾನವು. ಬುದ್ಧಿ ಎಂದರೆ ಮಹತ್ತತ್ವವನ್ನು ಗದೆಯಾಗಿ ಧರಿಸಿರುತ್ತಾನೆ. ಸ್ಥಿರಭಾವದಿಂದ ಬುದ್ಧಿಯು ಗದೆಗೆ ಹೋಲಿಸಲ್ಪಟ್ಟಿರುವುದು. ಭೂತಾದಿಯನ್ನೂ ಇಂದ್ರಿಯಾದಿಗಳನ್ನೂ ಸಹ ಶಂಖ, ಶಾರ್ಙ್ಗಗಳಾಗಿ ಧರಿಸಿರುತ್ತಾನೆ. ಮನಸ್ಸಿಗಿಂತಲೂ ವೇಗವಾದ ಚಕ್ರವನ್ನು ಕೈಯಲ್ಲಿ ಧರಿಸಿರುವದು ಸಾತ್ವಿಕಾಹಂಕಾರವನ್ನು ಸೂಚಿಸುವುದು. ವೈಜಯಂತೀಯೆಂಬ ವನಮಾಲೆಯು, ಮಾಣಿಕ್ಯ, ಮರಕತ, ಇಂದ್ರನೀಲ, ವಜ್ರ, ಸುವರ್ಣಾದಿ ಪಂಚರೂಪದಿಂದ, ಸ್ಥೂಲ ಸೂಕ್ಷ್ಮ ಭೂತವಿಕಾರತೆಯನ್ನು ಎಂದರೆ ಪಂಚತನ್ಮಾತ್ರೆಗಳನ್ನು ಸೂಚಿಸುವದು. ಬುದ್ಧಿಕರ್ಮಾತ್ಮಕವಾದ ಸಕಲೇಂದ್ರಿಯಗಳನ್ನೂ ಶರರೂಪದಿಂದ

ಧರಿಸಿರುವನು. ಆತನು ಧರಿಸಿರುವ ಕತ್ತಿಯೇ ವಿದ್ಯಾರೂಪವಾದ ಜ್ಞಾನವು. ಆ ಕತ್ತಿಯ ಒರೆಯೇ ಜ್ಞಾನವನ್ನು ಮುಚ್ಚುವ ಅವಿದ್ಯೆಯು. ಈ ಪ್ರಕಾರ ಭಗವಂತನು ಅಸ್ತ್ರಭೂಷಣಸ್ವರೂಪವನ್ನು ಪ್ರಾಣಿಗಳ ಶ್ರೇಯಸ್ಸಿಗೋಸ್ಕರ ಧರಿಸಿರುವನು. ಹೀಗೆ ಸ್ವಾಮಿಯು ಸಕಲ ವಿಕಾರಹೊಂದುವ ಅಚಿತ್ತನ್ನೂ, ಸಕಲ ಚಿತ್ತುಗಳನ್ನೂ ಈ ಅಸ್ತ್ರಭೂಷಣದಿಂದ ಧರಿಸಿರುವನು. ವಿದ್ಯಾ, ಅವಿದ್ಯಾ, ಸತ್, ಅಸತ್ ಇತ್ಯಾದಿಗಳೆಲ್ಲವೂ ಶ್ರೀಮಧುಸೂದನನಲ್ಲಿಯೇ ಇರುವವು. ಭಗವಂತನು ಕಲಾ, ಕಾಷ್ಠಾದಿ ಕಾಲಸ್ವರೂಪನಾದವನು. ಭೂಲೋಕ, ಭುವರ್ಲೋಕಾದಿ ಸಪ್ತ ಲೋಕಗಳ ಸ್ವಾಮಿಯಾದವನು. ಆಕಾರರಹಿತನಾದ ಪುರುಷನು. ಆದಿ ಮಧ್ಯಾಂತರಹಿತನಾದ ಒಬ್ಬನೇ ನಾರಾಯಣನು. ದೇವ, ಮನುಷ್ಯ, ಪಶ್ವಾದಿ ರೂಪಗಳಿಂದ ಸರ್ವೇಶ್ವರನಾದವನು. ಋಗ್ಯಜುಸ್ಸಾಮ ಅಥರ್ವಣ ವೇದಗಳೂ, ವೇದಾಂಗಗಳೂ ಮತ್ತು ಸಕಲ ಶಾಸ್ತ್ರಗಳೂ, ಅಂದರೆ, ಭಾರತವೇ ಮೊದಲಾದ ಇತಿಹಾಸಗಳೂ, ಆಯುರ್ವೇದ ಧನುರ್ವೇದ ಮೊದಲಾದ ಉಪವೇದಗಳೂ, ಜಗತ್ಪ್ರಸಿದ್ಧವಾದ ವೇದಾಂತ ಶಾಸ್ತ್ರವೂ, ಸಮಸ್ತ ವೇದಾಂಗಗಳೂ, ಮನು ಮೊದಲಾದವರಿಂದ ಮಾಡಲ್ಪಟ್ಟ ಧರ್ಮಶಾಸ್ತ್ರಗಳೂ, ಪುರಾಣಗಳೂ, ಸೂಕ್ತ ಸಮೂಹಗಳೂ, ಕಾವ್ಯಗಳೂ, ಉಪನ್ಯಾಸಗಳೂ, ಸಮಸ್ತ ಗೀತಗಳೂ, ಶಬ್ದ ಮೂರ್ತಿಧರನಾದ ಶ್ರೀಮಹಾವಿಷ್ಣುವಿನಿಂದಲೇ ಹುಟ್ಟಿದುವು. ಮೂರ್ತಿಯಾಗಿಯೂ ಅಮೂರ್ತಿಯಾಗಿಯೂ, ಈ ಜಗತ್ತಿನಲ್ಲಿರುವ ಸಕಲ ವಸ್ತುಗಳೂ ಶ್ರೀಮಹಾವಿಷ್ಣುವಿನ ಅಂಶವಾಗಿಯೇ ಇರುವುವು. ಸಕಲ ಜಗತ್ತಿಗೂ ಕಾರ್ಯಕಾರಣನಾಗಿರುವನೇ ಶ್ರೀಮಹಾವಿಷ್ಣುವು ಎಂಬುದಾಗಿ ಯಾವ ಮನುಷ್ಯನು ತಿಳಿದಿರುತ್ತಾನೋ, ಅವನ ಹೃದ್ರೋಗಗಳಾದ ರಾಗದ್ವೇಷಾದಿಗಳೆಲ್ಲವೂ ನಾಶವಾಗುತ್ತವೆ. ಈ ಪ್ರಕಾರ, ಪ್ರಥಮಾಂಶಾರ್ಥವನ್ನು ವಿಸ್ತಾರವಾಗಿ ನಿನಗೆ ಹೇಳಿದ ಹಾಗಾಯಿತು. ಇವನ್ನು ಕೇಳತಕ್ಕವರೆಲ್ಲರೂ ಪಾಪಗಳಿಂದ ಮುಕ್ತರಾಗುತ್ತಾರೆಯಲ್ಲದೆ, ಅವರಿಗೆ ಹನ್ನೆರಡು ವರ್ಷಕ್ಕೊಂದಾವರ್ತಿ ಲಭಿಸುವ ಕಾರ್ತೀಕ ಪುಷ್ಕರ ಸ್ನಾನಫಲವು ಲಭಿಸುತ್ತದೆ. ದೇವಋಷಿ, ಪಿತೃಗಂಧರ್ವರೆಲ್ಲರೂ ಅವರಿಗೆ ಸಮಸ್ತ ವರಗಳನ್ನೂ ಕೊಡುತ್ತಾರೆ."

ಇಲ್ಲಿಗೆ ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು.
ಇಂತು ಶ್ರೀ ಪರಾಶರಮುನಿ ವಿರಚಿತವಾದ ವಿಷ್ಣುಪರತ್ವ
ನಿರ್ಣಾಯಕವೆಂಬ ಶ್ರೀ ವಿಷ್ಣುಪುರಾಣದಲ್ಲಿ
ಪ್ರಥಮಾಂಶವು ಸಮಾಪ್ತಃ
ಶ್ರೀವಾಸುದೇವಾರ್ಪಣಮಸ್ತು

ಶ್ರಿಯೈ ನಮಃ

ಶ್ರೀಕೃಷ್ಣಾಯ ಪರಬ್ರಹ್ಮಣೇ ನಮಃ

ಶ್ರೀಹಯಗ್ರೀವಾಯ ನಮಃ

ಶ್ರೀಮತೇ ನಿಗಮಾಂತಮಹಾಗುರವೇ ನಮಃ

ಶ್ರೀಮದ್ರಾಮಾನುಜಾಚಾರ್ಯಾಯ ಯಜ್ವನೇ ದೇಶಿಕಾಯ ಮೇ ।
ಋಣತ್ರಯವಿಮುಕ್ತಾಯ ತಾತಪಾದಾಯ ತೇ ನಮಃ ॥

ಶ್ರೀ ವಿಷ್ಣು ಪುರಾಣದಲ್ಲಿ ದ್ವಿತೀಯ ಅಂಶವು ಪ್ರಾರಂಭಃ

ಪ್ರಥಮಾಧ್ಯಾಯವು

ಮೈತ್ರೇಯರು ಪರಾಶರ ಬ್ರಹ್ಮರ್ಷಿಗಳನ್ನು ಕೇಳುತ್ತಾರೆ: "ಹೇ ಸ್ವಾಮಿಯೇ, ನಿಮ್ಮಿಂದ ನಾನು ಜಗತ್ಸೃಷ್ಟಿಕ್ರಮವನ್ನೂ, ವಿಷ್ಣುಸರ್ವೋತ್ಕೃಷ್ಟತೆಯನ್ನೂ ಸಹ ಕೇಳಿದೆನು. ಆದಾಗ್ಯೂ ಇನ್ನೂ ಕೇಳಲಿಚ್ಛೆಯುಳ್ಳವನಾಗಿದ್ದೇನೆ. ಸ್ವಾಯಂಭುವ ಮನುವಿಗೆ ಮಗನಾದ ಉತ್ತಾನಪಾದರಾಯ, ಧ್ರುವ ಇವರುಗಳ ಸಂತತಿಯನ್ನು ಕೇಳಿದೆನು. ಆದರೆ ಉತ್ತಾನಪಾದರಾಯನಿಗೆ ಅಣ್ಣನಾದ ಪ್ರಿಯವ್ರತನ ಸಂತತಿಯನ್ನು ಕೇಳಲು ಅಪೇಕ್ಷೆಯುಳ್ಳ ನನಗೆ ನೀನು ಅನುಗ್ರಹ ಮಾಡಿ ಅಪ್ಪಣೆ ಕೊಡಿಸಬೇಕೆಂದು" ಪ್ರಾರ್ಥಿಸಲು; ಶಿಷ್ಯಾನುಕಂಪಿಯಾದ ಪರಾಶರ ಮಹರ್ಷಿಗಳು ಹೇಳುತ್ತಾರೆ: "ಓ ಮೈತ್ರೇಯನೇ, ಪ್ರಿಯವ್ರತನು ಕರ್ದಮಬ್ರಹ್ಮನ ಮಗಳನ್ನು ವಿವಾಹ ಮಾಡಿಕೊಂಡು, ಅವಳಲ್ಲಿ ಹತ್ತುಮಂದಿ ಪುತ್ರರುಗಳನ್ನುಪಡೆದನು. ಅಗ್ನೀಧ್ರ, ಅಗ್ನಿಬಾಹು, ವಪುಷ್ಮಾನ್, ದ್ಯುತಿಮಾನ್, ಮೇಧಾ, ಮೇಧಾತಿಥಿ, ಭವ್ಯ, ಸವನ, ಸತ್ಯನಾಮಾ ಎಂಬ ಪುತ್ರರು. ಇವರುಗಳಲ್ಲಿ ಮೇಧಾದಿ ಮೂರು ಮಂದಿ ಪುತ್ರರು ಯೋಗಾಸಕ್ತರಾಗಿ ರಾಜ್ಯಾದಿ ಭೋಗಗಳಲ್ಲಿ ಮನಸ್ಸನ್ನಿಡಲಿಲ್ಲ. ಉಳಿದ ಏಳು ಜನಗಳು ಮಮಕಾರರಹಿತರಾಗಿ ಸರ್ವಕಾಲದಲ್ಲಿಯೂ ಅಫಲಾಕಾಂಕ್ಷಿಗಳಾಗಿ, ಯಥೋಚಿತ ಕರ್ಮಗಳನ್ನು ಮಾಡಿಕೊಂಡಿದ್ದರು. ಪ್ರಿಯವ್ರತನು ಭೂಮಿಯನ್ನು ಏಳು ದ್ವೀಪಗಳನ್ನಾಗಿ ಭಾಗಿಸಿ ಏಳು ಜನ ಪುತ್ರರಿಗೆ ಕೊಟ್ಟನು. ಅವರುಗಳಲ್ಲಿ ಅಗ್ನೀಧ್ರನಿಗೆ ಜಂಬೂ ದ್ವೀಪವನ್ನೂ, ಮೇಧಾತಿಥಿಗೆ ಪ್ಲಕ್ಷ ದ್ವೀಪವನ್ನೂ, ವಪುಷ್ಮಂತನಿಗೆ ಶಾಲ್ಮಲಿ

ದ್ವೀಪವನ್ನೂ, ಜ್ಯೋತಿಷ್ಮಂತನಿಗೆ ಕುಶದ್ವೀಪವನ್ನೂ, ದ್ಯುಮಂತನಿಗೆ ಕ್ರೌಂಚ ದ್ವೀಪವನ್ನೂ, ಭವ್ಯನಿಗೆ ಶಾಕದ್ವೀಪವನ್ನೂ, ಸವನಿಗೆ ಪುಷ್ಕರದ್ವೀಪವನ್ನೂ ಕೊಟ್ಟು ಪಟ್ಟಾಭಿಷೇಕ ಮಾಡಿದನು. ಜಂಬೂದ್ವೀಪಾಧಿಪನಾದ ಅಗ್ನೀಧ್ರನಿಗೆ ನಾಭಿ, ಕಿಂಪುರುಷ, ಹರಿವರ್ಷ, ಇಳಾವೃತ, ರಮ್ಯ, ಹಿರಣ್ವಾನ್, ಕುರು, ಭದ್ರಾಶ್ವ, ಕೇತುಮಾಲಿ ಎಂಬುದಾಗಿ ಒಂಬತ್ತು ಜನ ಪುತ್ರರು ಹುಟ್ಟಿದರು. ಇವರುಗಳಲ್ಲಿ ನಾಭಿ ಎಂಬುವನಿಗೆ ಹಿಮವತ್ಪರ್ವತದ ದಕ್ಷಿಣಭಾಗವನ್ನೂ, ಕಿಂಪುರುಷನಿಗೆ ಉತ್ತರಭಾಗವನ್ನೂ, ಹರಿವರ್ಷನಿಗೆ ಪೂರ್ವಭಾಗವನ್ನೂ, ಇಳಾವೃತನಿಗೆ ಪಶ್ಚಿಮಭಾಗವನ್ನೂ, ರಮ್ಯನಿಗೆ ಭೂಮಿಯ ಮಧ್ಯಭಾಗದಲ್ಲಿರುವ ಮೇರು ಪರ್ವತದ ಇಳಾವೃತ ವರ್ಷಕ್ಕೆ ಉತ್ತರಭಾಗದಲ್ಲಿರುವ ನೀಲಾಚಲ ಭಾಗ ವನ್ನೂ, ಹಿರಣ್ವನಿಗೆ ಇದಕ್ಕೆ ಉತ್ತರಭಾಗದಲ್ಲಿರುವ ಶ್ವೇತಪರ್ವತದ ಭಾಗ ವನ್ನೂ, ಕುರು ಎಂಬುವನಿಗೆ ಇದಕ್ಕೆ ಉತ್ತರಭಾಗದಲ್ಲಿರುವ ಗಂಧಮಾದನ ಪರ್ವತದ ಭಾಗವನ್ನೂ, ಭದ್ರಾಶ್ವನಿಗೆ ಮೇರುಪರ್ವತದ ಪೂರ್ವಭಾಗವನ್ನೂ ಸಹ, ಅಗ್ನೀಧ್ರನು ಪುತ್ರರಿಗೆ ಭಾಗಮಾಡಿಕೊಟ್ಟು ಕೇತುಮಾಲನಿಗೆ ಮೇರು ಪರ್ವತದ ಪಶ್ಚಿಮದಲ್ಲಿರುವ ಗಂಧಮಾದನ ಮಧ್ಯಭಾಗವನ್ನೂ ಕೊಟ್ಟು ಆಯಾ ಭಾಗಗಳಲ್ಲಿ ಅವರಿಗೆ ಅಭಿಷೇಕಮಾಡಿದನಂತರ ಸಾಲಿಗ್ರಾಮವೆಂಬ ಪುಣ್ಯ ಸ್ಥಳಕ್ಕೆ ತಪಸ್ಸಿಗೋಸ್ಕರ ಪ್ರಯಾಣ ಮಾಡಿದನು. ಕಿಂಪುರುಷಾದಿ ವರ್ಷಗಳ ರಾಜ್ಯದಲ್ಲಿ ವ್ಯವಸಾಯವನ್ನು ಮಾಡದೆ ಸಕಲ ಸಿದ್ಧಿಯೂ ಉಂಟಾಗುತ್ತಿತ್ತು. ಪ್ರಯತ್ನವಿಲ್ಲದೆ ಸುಖಾದಿಗಳೂ ಸಹ ಲಭ್ಯವಾಗುತ್ತಿದ್ದವು. ಅಲ್ಲದೆ ಜರಾ ಮೃತ್ಯು ಇವುಗಳ ಭಯವೂ ಕೂಡ ಇರಲಿಲ್ಲ. ವರ್ಣಾಶ್ರಮಧರ್ಮಾಧರ್ಮಗಳೂ ಸಹ ಇರಲಿಲ್ಲ. ಧರ್ಮಾಧರ್ಮಗಳಿಗೆ ವೃದ್ಧಿಕ್ಷಯಾದಿಗಳು ಇಲ್ಲದೆ ಇದ್ದುದರಿಂದ ದೇಹಾದಿಗಳಿಗೂ ಸಹ ಹ್ರಾಸವೃದ್ಧ್ಯಾದಿಗಳಿಲ್ಲ. ಹೀಗಿದ್ದುದರಿಂದ ಇವರುಗಳಿಗೆ ಯುಗಾವಸ್ಥೆಯೂ ಸಹ ಇರಲಿಲ್ಲ. ನಾಭಿ ಎಂಬುವನಿಗೆ ಮೇರುದೇವಿ ಎಂಬ ಪತ್ನಿಯಲ್ಲಿ ಋಷಭನೆಂಬ ಮಗನೂ, ಋಷಭನಿಗೆ ಭರತನೆಂಬುವನೂ ಕ್ರಮವಾಗಿ ಹುಟ್ಟಿದರು. ಋಷಭನು ಭರತನಿಗೆ ರಾಜ್ಯಾಭಿಷೇಕವನ್ನು ಮಾಡಿ, ಅನೇಕ ಯಜ್ಞಾದಿಗಳನ್ನೂ ನಡೆಸಿ, ತಪಸ್ಸಿಗೆ ಪುಲಹಬ್ರಹ್ಮನ ಆಶ್ರಮಕ್ಕೆ ಪ್ರಯಾಣ ಮಾಡಿ, ಬಹುಕಾಲ ಅನಶನ ಮತಾದಿಗಳಿಂದ ತಪಸ್ಸನ್ನು ಮಾಡಿ ಮಹಾ ಪ್ರಸ್ಥಾನವನ್ನು ಹೊಂದಿದನು. ಅನಂತರ ಭರತನು ರಾಜ್ಯಪರಿಪಾಲನ ಮಾಡು ತ್ತಿದ್ದುದರಿಂದ ಭಾರತವರ್ಷವೆಂಬುದಾಗಿ ಲೋಕದಲ್ಲಿ ಪ್ರಖ್ಯಾತಿಯಾಯಿತು. ಭರತನಿಗೆ ಸುಮತಿ ಎಂಬ ಪರಮಧಾರ್ಮಿಕನಾದ ಮಗನು ಹುಟ್ಟಿದನು."

"ಭರತನು ಅನೇಕ ಯಜ್ಞಗಳನ್ನು ಮಾಡಿ, ರಾಜ್ಯವನ್ನು ಮಗನಿಗೆ ಕೊಟ್ಟು

ಸಾಲಿಗ್ರಾಮ ಕ್ಷೇತ್ರದಲ್ಲಿ ಯೋಗಾಸಕ್ತನಾಗಿ ದೇಹವನ್ನು ಬಿಟ್ಟು, ಯೋಗಿ ಶ್ರೇಷ್ಠರಾದ ಬ್ರಾಹ್ಮಣರ ಕುಲದಲ್ಲಿ ಪುನಃ ಹುಟ್ಟಿದನು. ಎಲೈ ಮೈತ್ರೇಯನೇ, ಬ್ರಾಹ್ಮಣಕುಲದಲ್ಲಿ ಹುಟ್ಟಿದ ಭರತನ ಚರಿತ್ರೆಯನ್ನು ಮುಂದೆ ಪ್ರಕರಣಾನುಸಾರ ವಿಸ್ತಾರವಾಗಿ ಹೇಳುತ್ತೇನೆ. ಸುಮತಿ ಎಂಬುವನಿಗೆ ಇಂದ್ರದ್ಯುಮ್ನನೆಂಬ ಮಗನು ಹುಟ್ಟಿದನು. ಇವನಿಗೆ ಪರಮೇಷ್ಠಿ ಎಂಬ ಮಗನೂ, ಪರಮೇಷ್ಠಿಗೆ ಪ್ರತಿಹಾರನೂ, ಪ್ರತಿಹಾರನಿಗೆ ಭುವನೂ, ಭುವನಿಗೆ ನೀತಿಯೂ, ನೀತಿಗೆ ಪ್ರಸ್ಥಾವನೂ, ಪ್ರಸ್ಥಾವನಿಗೆ ಪೃಥುವೂ, ಪೃಥುವಿಗೆ ನತ್ತನೂ, ನತ್ತನಿಗೆ ಗಯನೂ, ಗಯನಿಗೆ ವಿರೋಹಣನೂ, ವಿರೋಹಣನಿಗೆ ಧೀಮಂತನೂ ಸಹ ಹುಟ್ಟಿದರು. ಈ ಪ್ರಕಾರ ಇವರುಗಳಿಂದ ಭಾರತವರ್ಷವು ಪರಿಪಾಲಿಸಲ್ಪಟ್ಟಿತು. ಭರತನಿಂದ ಪೃಥ್ವಿಗೆ ಭೂಃ ಎಂಬುದಾಗಿ ಹೆಸರುಂಟಾಯಿತು. ತದಾಪ್ರಭೃತಿ ಭರತಪುತ್ರರಿಂದ ಪಾಲಿಸಲ್ಪಟ್ಟದುದರಿಂದ ಭಾರತೀಭೂಮಿಯೆಂದು ಖ್ಯಾತಿಗೊಂಡಿತು. ಈ ಭಾರತವರ್ಷವು ಒಂಬತ್ತು ವಿಧವಾಯಿತು. ಈ ಒಂಬತ್ತು ವಿಧವೂ ಮೂರನೆಯ ಅಧ್ಯಾಯದಲ್ಲಿ ಹೇಳಲ್ಪಡುತ್ತದೆ. ಈ ಪ್ರಕಾರ ಸ್ವಾಯಂಭುವ ಮನುವಿನ ಕಾಲವು ಕೃತ, ತ್ರೇತಾ, ದ್ವಾಪರ, ಕಲಿ ಈ ನಾಲ್ಕು ಯುಗಗಳು. ಇಪ್ಪತ್ತೊಂದು ಸಲ ತಿರುಗಿತು. ಇದೇ ಮೊದಲನೇ ಮನ್ವಂತರವು. ಇದೇ ಪ್ರಿಯವ್ರತ ವಂಶಾನುವರ್ಣನೆ.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಪ್ರಥಮ ಅಧ್ಯಾಯವು ಸಮಾಪ್ತಃ

ಎರಡನೆಯ ಅಧ್ಯಾಯವು

ಮೈತ್ರೇಯರು ಹೇಳುತ್ತಾರೆ: "ಓ ಪರಾಶರ ಮಹರ್ಷಿಯೇ, ಈಗ ನಿಮ್ಮಿಂದ ಸ್ವಾಯಂಭುವ ಮನುವಿನ ಸರ್ಗವನ್ನು ಕೇಳಿದೆನು. ಈ ಭೂಮಂಡಲದಲ್ಲಿರತಕ್ಕ ಸಮುದ್ರಗಳೂ, ಪರ್ವತಗಳೂ, ದ್ವೀಪಾಂತಗಳೂ, ವನಗಳೂ, ನದಿಗಳೂ, ಪಟ್ಟಣಗಳೂ ಸಹ ಎಲ್ಲಿ ಎಲ್ಲಿರುತ್ತವೆ? ಎಷ್ಟು ಪ್ರಮಾಣಗಳು? ಅವುಗಳ ಆಧಾರವೇನು? ಇವುಗಳೆಲ್ಲವನ್ನೂ ನನಗೆ ಅರುಹಬೇಕು" ಎಂಬುದಾಗಿ ಕೇಳಲು, ಅದಕ್ಕೆ ಪರಾಶರರು ಹೇಳುತ್ತಾರೆ: "ಎಲೈ ಮೈತ್ರೇಯನೇ, ನೀನು ಕೇಳಿದ ವಿಷಯಗಳನ್ನು ಸಂಕ್ಷೇಪವಾಗಿ ಹೇಳುತ್ತೇನೆ ಕೇಳು: ವಿಸ್ತಾರವಾಗಿ ಹೇಳಬೇಕಾದರೆ ನೂರಾರುವರ್ಷಗಳಾದಾಗ್ಯೂ ಆಗಲಾರದು. ಜಂಬೂ, ಪ್ಲಕ್ಷ,

ಶಾಲ್ಮಲ, ಕುಶ, ಕ್ರೌಂಚ, ಶಾಕ, ಪುಷ್ಕರ ಈ ಏಳು ದ್ವೀಪಗಳೂ, ಲವಣ, ಇಕ್ಷು, ಸುರಾ, ಸರ್ಪಿ, ದಧಿ, ಕ್ಷೀರ, ಜಲ ಈ ಏಳು ಸಮುದ್ರಗಳಿಂದ ಕೂಡಿರುತ್ತವೆ. ಸಪ್ತದ್ವೀಪಗಳಲ್ಲಿ ಮಧ್ಯದಲ್ಲಿರುವದೇ ಜಂಬೂದ್ವೀಪವು. ಈ ದ್ವೀಪಮಧ್ಯದಲ್ಲಿ ಕನಕಮಯವಾದ ಮೇರುಪರ್ವತವಿದೆ. ಈ ಮೇರುಪರ್ವತ ಎಂಬತ್ತುನಾಲ್ಕು ಸಾವಿರ ಯೋಜನ ಎತ್ತರವುಳ್ಳದ್ದು. ಕೆಳಭಾಗದಲ್ಲಿ ಹದಿನಾರು ಸಾವಿರ ಯೋಜನ ಅಗಲ. ಶಿರೋಭಾಗದಲ್ಲಿ ಮೂವತ್ತುಸಾವಿರ ಯೋಜನ ವಿಸ್ತಾರ. ಮೂಲಭಾಗವು ಹದಿನಾರು ಸಾವಿರ ಯೋಜನವುಳ್ಳದ್ದಾಗಿದೆ. ಆದುದರಿಂದ ತಲೆಯ ಕಡೆ ವಿಸ್ತಾರವಾಗಿಯೂ, ಕೆಳಭಾಗದಲ್ಲಿ ಕಮ್ಮಿಯಾದುದರಿಂದಲೂ, ಭೂಮಿಯೆಂಬ ಕಮಲಕ್ಕೆ ಕರ್ಣಿಕಾಕಾರವುಳ್ಳದ್ದಾಗಿದೆ. ಈ ಮೇರುಪರ್ವತಕ್ಕೆ ದಕ್ಷಿಣದಲ್ಲಿ ಹಿಮವತ್ಪರ್ವತವೂ, ಹೇಮಕೂಟಾದ್ರಿಯೂ, ನೀಲಪರ್ವತವೂ ಸಹ ಇವೆ. ಮತ್ತು ನಿಷಧ, ಶ್ವೇತ, ಶೃಂಗಿ ಎಂಬ ಪರ್ವತಗಳು ಇರುತ್ತವೆ. ಇವುಗಳೆಲ್ಲವೂ ವರ್ಷಗಳೆಂಬ ಹೆಸರಿನಿಂದ ಕೂಡಿರತಕ್ಕವುಗಳು. ನಿಷಧ, ನೀಲಪರ್ವತಗಳು, ಪೂರ್ವ-ಪಶ್ಚಿಮ ಎರಡುಲಕ್ಷಯೋಜನವುಳ್ಳದಾಗಿದೆ. ದಕ್ಷಿಣೋತ್ತರ ಸ್ವಲ್ಪ ಕಮ್ಮಿಯಾಗಿ ಏಳುಸಾವಿರ ಯೋಜನವುಳ್ಳದು. ಹೇಮಕೂಟ, ಶ್ವೇತ ಇವುಗಳು ತೊಂಬತ್ತುಸಾವಿರ ಯೋಜನವುಳ್ಳವುಗಳು. ಮೇರುಪರ್ವತಕ್ಕೆ ದಕ್ಷಿಣಭಾಗದಲ್ಲಿ ಭಾರತವರ್ಷ, ಕಿಂಪುರುಷವರ್ಷ, ಹರಿವರ್ಷಗಳಿರುವವು. ಉತ್ತರಭಾಗದಲ್ಲಿ ರಮ್ಯಕವರ್ಷ, ಹಿರಣ್ಮಯವರ್ಷ, ಪುರುವರ್ಷ ಸಹ ಇರುತ್ತದೆ. ಪ್ರತಿಯೊಂದು ವರ್ಷವೂ ಒಂಬತ್ತುಸಾವಿರ ಯೋಜನವುಳ್ಳದ್ದು. ಇವುಗಳೆಲ್ಲವೂ ಮೇರುಪರ್ವತಕ್ಕೆ ಸುತ್ತಲೂ ಇರತಕ್ಕವುಗಳು. ಮೇರುಪರ್ವತದ ದಾರ್ಢ್ಯತೆಗೋಸ್ಕರ ಈ ಪರ್ವತಗಳು ಭಗವಂತನಿಂದ ರಚಿಸಲ್ಪಟ್ಟವು. ಅವುಗಳು ಯಾವುವೆಂದರೆ, ಪೂರ್ವದಲ್ಲಿ ಮಂದರಪರ್ವತವೂ, ದಕ್ಷಿಣದಲ್ಲಿ ಗಂಧಮಾದನ ಪರ್ವತವೂ, ಪಶ್ಚಿಮದಲ್ಲಿ ವಿಮಲಪರ್ವತವೂ, ಉತ್ತರದಲ್ಲಿ ಸುಪಾರ್ಶ್ವಪರ್ವತವೂ ಸಹ. ಈ ಪರ್ವತಗಳು ಹತ್ತುಸಾವಿರ ಯೋಜನವುಳ್ಳವುಗಳು. ಈ ನಾಲ್ಕು ಪರ್ವತಗಳಲ್ಲಿಯೂ ಕದಂಬ, ಜಂಬೂ, ಪಿಪ್ಪಲ, ವಟವೃಕ್ಷಗಳು ಕ್ರಮವಾಗಿ ಧ್ವಜದಹಾಗೆ ಪ್ರಕಾಶಿಸುತ್ತ ಸಾವಿರದನೂರು ಯೋಜನ ವಿಸ್ತಾರವುಳ್ಳದ್ದಾಗಿವೆ. ಜಂಬೂದ್ವೀಪವೆಂದು ಹೆಸರುಂಟಾಗಲು, ಈ ದ್ವೀಪದಲ್ಲಿ ನೇರಲೆಹಣ್ಣುಗಳು ಆನೆ ಪ್ರಮಾಣದಷ್ಟು ದಪ್ಪವುಳ್ಳುದಾಗಿ ಪರ್ವತದ ಮೇಲೆ ಬಿದ್ದು ಒಡೆದುಹೋಗಿ ಆ ರಸವು ನದಿಯಹಾಗೆ ಹರಿದು ಜಂಬೂನದಿಯೆಂಬುದಾಗಿ ಖ್ಯಾತಿಯನ್ನು ಪಡೆದಿರುತ್ತದೆ. ಜಂಬೂದ್ವೀಪವಾಸಿಗಳು ಈ ನೀರನ್ನೇ ಪಾನಮಾಡಿಕೊಂಡು ವಾಸಿಸುತ್ತಾರೆ. ಇವರುಗಳಿಗೆ ದೇಹದಲ್ಲಿ ಬೆವರು, ದುರ್ಗಂಧ, ವೃದ್ಧಾಪ್ಯ, ಇಂದ್ರಿಯ

ವೈಕಲ್ಯ ಇತ್ಯಾದಿಗಳು ಯಾವುದೂ ಇಲ್ಲದೆ ಸ್ವಸ್ಥಮನಸ್ಕರಾಗಿರುತ್ತಾರೆ. ಈ ನದಿಯ ದಡದಲ್ಲಿರತಕ್ಕ ಮಣ್ಣುಗಳು ಈ ನೀರಿನಲ್ಲಿ ಬೆರೆತು, ಸುಖವಾದ ಗಾಳಿಯ ಸಂಪರ್ಕದಿಂದ ಜಾಂಬೂನದವೆಂಬ ಚಿನ್ನವಾಗುತ್ತದೆ. ಇದೇ ಚಿನ್ನ ದಿಂದ ಸಿದ್ಧರು ಆಭರಣಗಳನ್ನು ಮಾಡಿಕೊಳ್ಳುತ್ತಾರೆ. ಮೇರುಪರ್ವತಕ್ಕೆ ಪೂರ್ವದಲ್ಲಿ ಚೈತ್ರರಥವೆಂಬ ವನವೂ, ದಕ್ಷಿಣದಲ್ಲಿ ಗಂಧಮಾದನ ವನವೂ, ಪಶ್ಚಿಮದಲ್ಲಿ ವೈಭ್ರಾಜವೆಂಬ ವನವೂ, ಉತ್ತರದಲ್ಲಿ ನಂದನವೆಂಬ ವನವೂ ಇರುತ್ತವೆ. ಇದೇ ಕ್ರಮದಲ್ಲಿ ಅರುಣೋದ, ಮಹಾಭದ್ರ, ಸಿತೋದ, ಮಾನಸ ವೆಂಬುದಾಗಿ ದೇವಭೋಗ್ಯಗಳಾದ ನಾಲ್ಕು ಸರೋವರಗಳು ಇರುತ್ತವೆ. ಮೇರು ಪರ್ವತಕ್ಕೆ ಪೂರ್ವಭಾಗದಲ್ಲಿ ಅಲಂಕಾರಪ್ರಾಯವಾಗಿ, ಸಿತಾಂಭ, ಕುಮುದ್ವಾನ್, ಕುರರೀ, ಮಾಲ್ಯವಾನ್, ವೈಕಂಕ ಪ್ರಮುಖಗಳಾದ ಪರ್ವತಗಳು ಇರುತ್ತವೆ. ದಕ್ಷಿಣಭಾಗದಲ್ಲಿ ನಿಷಧವೇ ಮೊದಲಾದ ಪರ್ವತಗಳೂ, ಪಶ್ಚಿಮದಲ್ಲಿ ಜಾರುಧಿ ಮೊದಲಾದ ಪರ್ವತಗಳೂ, ಉತ್ತರಭಾಗದಲ್ಲಿ ಶಂಖಕೂಟ, ಋಷಭ, ಹಂಸ ನಾಗ, ಕಾಳಾಂಜನಾದಿ ಪರ್ವತಗಳೂ ಇರುವವು. ಮೇರುಪರ್ವತದ ಉಪರಿಭಾಗ ದಲ್ಲಿ ಹದಿನಾಲ್ಕುಸಾವಿರ ಯೋಜನ ದೂರವುಳ್ಳ ಬ್ರಹ್ಮನ ಪಟ್ಟಣವಿರುವುದು. ಬ್ರಹ್ಮಲೋಕದ ಸುತ್ತಲೂ ಇಂದ್ರಾದಿ ಅಷ್ಟದಿಕ್ಪಾಲಕರ ಪಟ್ಟಣಗಳಿರುವುವು. ವಿಷ್ಣುಪಾದದಿಂದ ಹುಟ್ಟಿದ ಗಂಗೆಯು, ಚಂದ್ರಮಂಡಲವನ್ನು ತೋಯಿಸಿ, ಬ್ರಹ್ಮನ ಪಟ್ಟಣದ ಸುತ್ತಲೂ ಪ್ರವಹಿಸಿ, ಸ್ವರ್ಗಲೋಕಕ್ಕೆ ಬೀಳುತ್ತದೆ. ಅನಂತರ ಗಂಗೆಯು, ಸೀತಾ, ಅಲಕನಂದಾ, ಚಕ್ಷುಃ, ಭದ್ರಾ ಎಂಬುದಾಗಿ ನಾಲ್ಕು ಭಾಗವಾಗಿ, ಸೀತಾ ಎಂಬ ಗಂಗೆಯು ಬ್ರಹ್ಮನ ಮನೆಯಿಂದ ಹೊರಟು ಅನೇಕ ಪರ್ವತಗಳ ಮೇಲೆ ಬಿದ್ದು, ಮೇರುಪರ್ವತದ ಪೂರ್ವಭಾಗದಲ್ಲಿ ಪ್ರವ ಹಿಸುವುದು. ಅಲಕನಂದ ಗಂಗೆಯು ದಕ್ಷಿಣ ಭಾಗದಲ್ಲಿ ಪ್ರವಹಿಸುವುದು. ಚಕ್ಷುರ್ಗಂಗೆಯು ಪಶ್ಚಿಮಪರ್ವತಗಳಲ್ಲಿ ಪ್ರವಹಿಸಿ, ಕೇತುಮಾಲಾ ವರ್ಷವನ್ನು ಆಕ್ರಮಿಸಿ, ಸಮುದ್ರವನ್ನು ಸೇರುವುದು. ಭದ್ರಾಗಂಗೆಯು ಉತ್ತರಭಾಗದಲ್ಲಿ ಕುರುವರ್ಷವನ್ನು ಆಕ್ರಮಿಸಿ, ಸಮುದ್ರವನ್ನು ಸೇರುತ್ತದೆ. ಜಂಬೂದ್ವೀಪವೆಂಬ ಪದ್ಮಕ್ಕೆ ಭಾರತ, ಕುರು, ಭದ್ರಾಶ್ವ, ಕೇತುಮಾಲಾವೆಂಬ ಪರ್ವತಗಳು ಎಲ್ಲೆಯ ಹಾಗಿರತಕ್ಕವುಗಳು. ಮೇರುಪರ್ವತಕ್ಕೆ ನಾಲ್ಕು ದಿಕ್ಕುಗಳಲ್ಲಿಯೂ, ಎರಡೆರಡು ಪರ್ವತಗಳು ಎಲ್ಲೆಯಾಗಿ ಸ್ಥಾಪಿಸಲ್ಪಟ್ಟಿವೆ. ಗಂಧಮಾದನ, ಕೈಲಾಸ, ನಿಷಧ, ಪಾರಿಯಾತ್ರ, ತ್ರಿಶೃಂಗ, ಜಾರುಧಿ ಈ ಕುಲಾಚಲಪರ್ವತಗಳು, ಭೂಮಂಡಲದ ಎಲ್ಲೆಗಳು. ಈ ಪರ್ವತಗಳೆಲ್ಲವೂ ಅತ್ಯಂತ ಮನೋಹರವಾದವುಗಳು. ಮೇರು ವಿನ ಮಧ್ಯದಲ್ಲಿ ದ್ರೋಣೀ ಎಂಬ ಗುಹೆಯಿರುವುದು. ಈ ಗುಹೆಯು ಅಣಿಮಾದಿ

ಐಶ್ವರ್ಯಯುಕ್ತರಾದ ಸಿದ್ಧಚಾರಣರಿಂದ ಸೇವಿಸಲ್ಪಡುವುದು. ಮತ್ತು ರಮ್ಯವಾದ ಉದ್ಯಾನವನಗಳೂ ಇರುತ್ತವೆ. ಪರ್ವತದ ತಪ್ಪಲಿನಲ್ಲಿ ಗಂಧರ್ವ, ಯಕ್ಷ, ರಾಕ್ಷಸ, ದೈತ್ಯ, ದಾನವರುಗಳು ಅಹೋರಾತ್ರಿ ವಿಹರಿಸುತ್ತಾರೆ. ಇದು ಭೂಲೋಕಕ್ಕೆ ಸ್ವರ್ಗಪ್ರಾಯವಾಗಿ, ಧರ್ಮಿಷ್ಠರಿಂದ ಸೇವಿಸಲ್ಪಡುವುದು. ಭದ್ರಾಶ್ವದಲ್ಲಿ ಹಯಗ್ರೀವರೂಪಿಯಾದ ಭಗವಂತನು ವಾಸಮಾಡುತ್ತಾನೆ. ಕೇತುಮೂಲದಲ್ಲಿ ವರಾಹರೂಪಿಯಾಗಿಯೂ, ಭಾರತವರ್ಷದಲ್ಲಿ ಕೂರ್ಮರೂಪಿಯಾಗಿಯೂ, ಕುರುವರ್ಷದಲ್ಲಿ ಮತ್ಸ್ಯರೂಪಿಯಾಗಿಯೂ, ಸರ್ವತ್ರ ವಿಶ್ವರೂಪಿಯಾಗಿಯೂ, ಸರ್ವಜಗತ್ತಿಗೂ ಆಧಾರಭೂತನಾಗಿಯೂ ಭಗವಂತನಾದ ಶ್ರೀಮನ್ನಾರಾಯಣನು ವಾಸಮಾಡುತ್ತಾನೆ. ಕಿಂಪುರುಷಾದಿವರ್ಷಗಳಲ್ಲಿ ಶೋಕ, ಆಯಾಸ, ಉದ್ವೇಗ, ಹಸಿವು, ಭಯ ಇತ್ಯಾದಿಗಳು ಯಾವುವೂ ಇಲ್ಲದೆ, ಪ್ರಜೆಗಳು ನಿರಾತಂಕರಾಗಿಯೂ, ಸ್ವಸ್ಥರಾಗಿಯೂ, ದುಃಖರಹಿತರಾಗಿಯೂ, ಹತ್ತುಹನ್ನೆರಡುಸಾವಿರ ವರ್ಷ ಆಯುಸ್ಸುಳ್ಳವರಾಗಿಯೂ ಇದ್ದರು. ಈ ವರ್ಷಗಳಲ್ಲಿ ಮಳೆಯು ವರ್ಷಿಸುವುದಿಲ್ಲವು. ಕೃತ ತ್ರೇತಾದಿ ಕಲ್ಪನೆಯೂ ಇರುವುದಿಲ್ಲವು. ನವವರ್ಷಗಳಲ್ಲಿ ಸಪ್ತಕುಲಾಚಲಪರ್ವತಗಳಿಂದ ಅನೇಕ ನದಿಗಳು ಹುಟ್ಟಿ ಪ್ರವಹಿಸುತ್ತವೆ.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಎರಡನೆಯ ಅಧ್ಯಾಯವು ಸಮಾಪ್ತಃ

ಮೂರನೆಯ ಅಧ್ಯಾಯವು

ಪುರಾತನವಾದ ಸಮುದ್ರಕ್ಕೆ ಉತ್ತರಭಾಗವಾಗಿಯೂ, ಹಿಮವತ್ಪರ್ವತಕ್ಕೆ ದಕ್ಷಿಣಭಾಗವಾಗಿಯೂ ಇರತಕ್ಕ ಈ ಭಾರತವರ್ಷವು ಒಂಬತ್ತು ಸಾವಿರ ಯೋಜನ ವಿಸ್ತಾರವುಳ್ಳದು. ಇದು ಕರ್ಮಭೂಮಿಯಾಗಿ ಮೋಕ್ಷಾಪೇಕ್ಷಿಗಳಿಗೆ ಪ್ರಧಾನ ಭೂಮಿಯಾಗಿರುವುದು. ಈ ಭಾರತವರ್ಷವು ಮಹೇಂದ್ರ, ಮಲಯ, ಶುಕ್ತಿಮಾನ್, ಋಕ್ಷ, ವಿಂಧ್ಯ, ಪಾರಿಯಾತ್ರಗಳೆಂಬ ಕುಲಾಚಲ ಪರ್ವತಗಳಿಂದ ಕೂಡಿರುವುದು. ಈ ಭಾರತವರ್ಷದಲ್ಲಿರುವ ಜನಗಳು ಮೋಕ್ಷ, ನರಕ, ಸ್ವರ್ಗ ಇತ್ಯಾದಿಗಳನ್ನು ಹೊಂದುವರು. ಮನುಷ್ಯರಿಗೆ ಈ ಕರ್ಮಭೂಮಿ ಬಿಟ್ಟರೆ ಮೋಕ್ಷಾದಿಗಳನ್ನು ಹೊಂದಲು ಬೇರೆ ಅವಕಾಶವಿರುವುದಿಲ್ಲ. ಈ ಭಾರತವರ್ಷವು ಇಂದ್ರದ್ವೀಪ, ಕಶೇರು, ತಾಮ್ರಪರ್ಣಿ, ಗಭಸ್ತಿಮಾನ್, ನಾಗದ್ವೀಪ, ಸೌಮ್ಯ, ಗಂಧರ್ವ, ವಾರುಣ ಎಂಬ ಒಂಬತ್ತು ಉಪದ್ವೀಪಗಳಾಗಿ ವಿಭಾಗಿಸ

ಲ್ಪಟ್ಟಿವೆ. ಪೂರ್ವಭಾಗದಲ್ಲಿ ಕಿರಾತರೂ, ಪಶ್ಚಿಮಭಾಗದಲ್ಲಿ ಯವನರೂ, ಮಧ್ಯಭಾಗದಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರುಗಳೂ ವಾಸಮಾಡುತ್ತಾರೆ. ಯಜ್ಞ, ಯುದ್ಧ, ವ್ಯಾಪಾರ, ವ್ಯವಸಾಯವೇ ಅವರಿಗೆ ಮುಖ್ಯವೃತ್ತಿಗಳು. ಶತದ್ರೂ, ಚಂದ್ರಭಾಗಾ ಎಂಬ ನದಿಗಳು ಹಿಮವತ್ಪಾದದಲ್ಲಿ ಹುಟ್ಟುತ್ತವೆ. ಪಾರಿಯಾತ್ರಪರ್ವತದಲ್ಲಿ ವೇದಸ್ಮೃತಿಯೇ ಮೊದಲಾದ ನದಿಗಳೂ, ವಿಂಧ್ಯ ಪರ್ವತದಲ್ಲಿ ನರ್ಮದಾ, ಸುರಸಾ ಮೊದಲಾದ ನದಿಗಳೂ, ಋಕ್ಷಪರ್ವತದಲ್ಲಿ ತಾಪೀ, ಪಯೋಷ್ಣೀ ಮೊದಲಾದ ನದಿಗಳೂ, ಸಹ್ಯಪರ್ವತದಲ್ಲಿ ಗೋದಾವರೀ, ಭೀಮರಥೀ, ಕೃಷ್ಣವೇಣೀ ಮೊದಲಾದ ನದಿಗಳೂ, ಮಲಯಪರ್ವತದಲ್ಲಿ ಕೃತಮಾಲಾ, ತಾಮ್ರಪರ್ಣೀ ಮೊದಲಾದ ನದಿಗಳೂ, ಮಹೇಂದ್ರಪರ್ವತದಲ್ಲಿ ತ್ರಿಸಾಮಾ, ಋಷಿಕುಲ್ಯಾ ಮೊದಲಾದ ನದಿಗಳೂ ಸಹ ಹುಟ್ಟುತ್ತವೆ. ಈ ನದಿಗಳಿಗೆ ಉಪನದಿಗಳು ಅನೇಕವಿರುತ್ತವೆ. ಜಂಬೂದ್ವೀಪದ ಪೂರ್ವಕ್ಕೆ ಕುರು ಪಾಂಚಾಲ, ದಕ್ಷಿಣಕ್ಕೆ ಆಂಧ್ರ, ಕಳಿಂಗ, ಮಾಗಧ, ಪಶ್ಚಿಮಕ್ಕೆ ಸೌರಾಷ್ಟ್ರ, ಬರ್ಬರ, ಉತ್ತರಕ್ಕೆ ಸೌವೀರ, ಸೈಂಧವ, ಹೂಣ, ಸಾಲ್ವ, ಕೋಸಲ, ಮಧ್ಯ ದಲ್ಲಿ ಮದ್ರಾ, ಅಂಬಿಷ್ಠವೆಂಬ ದೇಶಗಳು ಇರುತ್ತವೆ. ಈ ದೇಶಗಳೆಲ್ಲವೂ ಅನೇಕ ಸಂಪತ್ತುಗಳಿಂದ ಕೂಡಿರತಕ್ಕವುಗಳು. ಈ ಭಾರತವರ್ಷದಲ್ಲಿ ಕೃತ, ತ್ರೇತಾ, ದ್ವಾಪರ, ಕಲಿ ಎಂಬ ನಾಲ್ಕು ಯುಗಗಳಿವೆ. ಈ ಯುಗಗಳಲ್ಲಿ ಯತಿ ಗಳು ತಪಸ್ಸನ್ನು ಮಾಡುತ್ತಾರೆ. ಗೃಹಸ್ಥಾಶ್ರಮಿಗಳು ಯಜ್ಞಗಳನ್ನೂ ಆದರ ದಿಂದ ದಾನಾದಿಗಳನ್ನೂ ಮಾಡುತ್ತಾರೆ. ಜಂಬೂದ್ವೀಪದಲ್ಲಿ ಶ್ರೀಮಹಾ ವಿಷ್ಣುವು ಯಜ್ಞಾದಿಗಳಿಂದ ಆರಾಧಿಸಲ್ಪಡುತ್ತಾನೆ. ಈ ದ್ವೀಪದಲ್ಲಿ ಭಾರತ ವರ್ಷವೇ ಶ್ರೇಷ್ಠವಾದುದು. ಇದೇ ಕರ್ಮಭೂಮಿಯು, ಉಳಿದವುಗಳೆಲ್ಲವೂ ಭೋಗಭೂಮಿಗಳು. ಈ ಭಾರತವರ್ಷದಲ್ಲಿ ಮನುಷ್ಯಜನ್ಮವು ಪುಣ್ಯವಿಶೇಷ ದಿಂದ ಕದಾಚಿತ್ತಾಗಿ ಲಭಿಸುತ್ತದೆ. ದೇವತೆಗಳು ಈ ಭರತಭೂಮಿಯಲ್ಲಿ ಹುಟ್ಟಿದ ಮನುಷ್ಯರನ್ನು ತಮಗಿಂತಲೂ ಅಧಿಕರಾದವರೆಂಬುದಾಗಿ ಸ್ತುತಿಸುತ್ತಾರೆ. ಈ ಭಾರತವರ್ಷವು ಸ್ವರ್ಗಾಪವರ್ಗಗಳಿಗೆ ಮಾರ್ಗವಾದುದು. ಈ ಕರ್ಮಭೂಮಿಯಲ್ಲಿ ಬ್ರಾಹ್ಮಣರು ಯಜ್ಞಾದಿಕರ್ಮಗಳನ್ನು ಮಾಡಿ, ಕರ್ಮಫಲವನ್ನು ಶ್ರೀಮಹಾ ವಿಷ್ಣುವಿನಲ್ಲಿ ಅರ್ಪಿಸಿ, ನಿರ್ಮಲರಾಗಿ ವಿಷ್ಣುಪದವನ್ನು ಹೊಂದುತ್ತಾರೆ. ಆದುದ ರಿಂದ ಈ ಭಾರತವರ್ಷದಲ್ಲಿ ಹುಟ್ಟಿದ ಜನರು ಧನ್ಯರಾದವರು. ಜಂಬೂದ್ವೀಪವನ್ನು ಲವಣಸಮುದ್ರವು ಲಕ್ಷ ಯೋಜನ ವಿಸ್ತಾರದಿಂದ ಆವರಿಸಿಕೊಂಡಿದೆ.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಮೂರನೆಯ ಅಧ್ಯಾಯವು ಸಮಾಪ್ತಃ

ನಾಲ್ಕನೆಯ ಅಧ್ಯಾಯವು

"ಜಂಬೂದ್ವೀಪಕ್ಕೆ ಎರಡರಷ್ಟು ಪ್ಲಕ್ಷದ್ವೀಪವಿರುತ್ತದೆ. ಈ ದ್ವೀಪಕ್ಕೆ ಶಾಂತಹಯ, ಶಿಶಿರ, ಸುಖೋದಯ, ಆನಂದ, ಶಿವ, ಕ್ಷೇಮಕ, ಧ್ರುವ ಎಂಬುದಾಗಿ ಏಳು ಜನರು ಅಧಿಪತಿಗಳು, ಈ ಸಂಜ್ಞೆಗಳಿಂದಲೇ, ಪರ್ವತಗಳೂ ವರ್ಷಗಳೂ ಸಹ ಉಂಟಾಗಿವೆ. ಇವುಗಳಲ್ಲಿ ವಾಸಮಾಡುವ ಜನಗಳು ದೇವತೆಗಳಿಂದಲೂ, ಗಂಧರ್ವರಿಂದಲೂ ಕೂಡಿ ವಿಹರಿಸುತ್ತಾರೆ. ಈ ದ್ವೀಪದಲ್ಲಿ ಅನುತಪ್ತಾ, ಶಿಖೀ, ವಿಪಾಪಾ, ತ್ರಿದಿವಾ, ಕ್ಲಮಾ, ಅಮೃತಾ, ಸುಕೃತಾ ಎಂಬ ಏಳು ನದಿಗಳು ಸಮುದ್ರವನ್ನು ಸೇರುತ್ತವೆ. ಅನೇಕ ಉಪನದಿಗಳೂ, ಗುಡ್ಡಗಳೂ ವಿಪರೀತವಾಗಿರುತ್ತವೆ. ಈ ಪ್ಲಕ್ಷದ್ವೀಪದಲ್ಲಿ ಕೃತಾದಿ ಕಲ್ಪಾಂತಾವಸ್ಥೆಗಳು ಇರುವುದಿಲ್ಲ. ಯಾವಾಗಲೂ ತ್ರೇತಾಯುಗದ ಸಾಮ್ಯವನ್ನೇ ಹೊಂದಿರುತ್ತದೆ. ಜನಗಳು ಐದುಸಾವಿರ ವರ್ಷ ನಿರಾಮಯರಾಗಿರುತ್ತಾರೆ. ಆರ್ಯಕಃ, ಕುರರಾಃ, ವಿದಿಶ್ಯಾಃ, ಭಾವಿನಃ ಎಂಬುವರೇ ಈ ದ್ವೀಪಕ್ಕೆ ಬ್ರಹ್ಮಕ್ಷತ್ರಾದಿ ನಾಲ್ಕು ವರ್ಣದವರು. ಧರ್ಮಿಷ್ಠರಾಗಿ ವಾಸಿಸುತ್ತಾರೆ. ಈ ಪ್ಲಕ್ಷದ್ವೀಪದ ಮಧ್ಯದಲ್ಲಿ, ಜಂಬೂವೃಕ್ಷದ ಪ್ರಮಾಣವುಳ್ಳ ಪ್ಲಕ್ಷವೆಂಬ ವೃಕ್ಷವಿರುತ್ತದೆ. ಆದುದರಿಂದ ಇದಕ್ಕೆ ಪ್ಲಕ್ಷದ್ವೀಪವೆಂಬ ಹೆಸರುಂಟಾಯಿತು. ಈ ದ್ವೀಪದಲ್ಲಿ ಆರ್ಯಕಾದಿ ವರ್ಣದವರು ಸೋಮರೂಪಿಯಾದ ಶ್ರೀಮನ್ನಾರಾಯಣನನ್ನು ಆರಾಧಿಸುತ್ತಾರೆ. ಈ ಪ್ರಕಾರ ಸಂಕ್ಷೇಪವಾಗಿ ಪ್ಲಕ್ಷದ್ವೀಪದ ವೃತ್ತಾಂತವನ್ನು ಹೇಳಿದೆನು, ಮುಂದೆ ಶಾಲ್ಮಲೀದ್ವೀಪದ ವೃತ್ತಾಂತವನ್ನು ಹೇಳುತ್ತೇನೆ. ಶಾಲ್ಮಲೀದ್ವೀಪಕ್ಕೆ ವಪುಷ್ಮಾನ್ ಎಂಬುವನು ಅಧಿಪತಿಯು. ಇವನಿಗೆ ಶ್ವೇತ, ಹರಿತ, ಜೀಮೂತ, ರೋಹಿತ, ವೈದ್ಯುತ, ಮಾನಸ, ಸುಪ್ರಭ ಎಂಬುದಾಗಿ ಏಳು ಜನ ಪುತ್ರರು. ಈ ದ್ವೀಪಕ್ಕೆ ಇವರೇ ಅಧಿಪತಿಗಳು. ಇದು ಪ್ಲಕ್ಷದ್ವೀಪಕ್ಕೆ ಎರಡರಷ್ಟು ವಿಸ್ತಾರವುಳ್ಳದ್ದಾಗಿದೆ. ಈ ಶಾಲ್ಮಲೀ ದ್ವೀಪದಲ್ಲಿ ಕುಮುದ, ಉನ್ನರ, ಬಲಾಹತ, ದ್ರೋಣ, ಕಂಕ, ಮಹಿಷ, ಕಕುದ್ಮಾನ್ ಎಂಬ ಏಳು ಪರ್ವತಗಳಿವೆ. ಯೋನಿ, ತೋಯಾ, ವಿತೃಷ್ಣಾ, ಚಂದ್ರಾ, ಶುಕ್ಲಾ, ವಿಮೋಚನೀ, ನಿವೃತ್ತಿ ಎಂಬ ಏಳು ನದಿಗಳು. ಈ ಹೆಸರುಗಳನ್ನು ಉಚ್ಚರಿಸಿದ ಮಾತ್ರಕ್ಕೆ ಸಕಲ ಪಾಪಗಳೂ ಪರಿಹಾರವಾಗುವುವು. ರಾಜ್ಯಾಧಿಪರ ಹೆಸರಿನಿಂದಲೇ ವರ್ಷಗಳ ಹೆಸರುಗಳು. ಶಾಲ್ಮಲೀ ದ್ವೀಪದಲ್ಲಿ ಕಪಿಲ, ಅರುಣ, ಪೀತ, ಕೃಷ್ಣಾ ಎಂಬುವರೇ ಬ್ರಾಹ್ಮಣಾದಿ ನಾಲ್ಕು ವರ್ಣದವರು. ಇವರು ವಾಯುಭೂತನಾದ ಶ್ರೀಮಹಾವಿಷ್ಣುವನ್ನು ಪೂಜಿಸುತ್ತಾರೆ. ಈ ದ್ವೀಪವು ಸುರಾ ಸಮುದ್ರದಿಂದ ಆವರಿಸಲ್ಪಟ್ಟಿದೆ. ಕುಶದ್ವೀಪವೂ ಸಹ ಸುರಾ ಸಮುದ್ರದಿಂದಲೇ ಆವರಿಸಲ್ಪಟ್ಟಿದೆ. ಕುಶದ್ವೀಪವು ಶಾಲ್ಮಲೀ ದ್ವೀಪದ ಎರಡರಷ್ಟು

ವಿಸ್ತಾರವುಳ್ಳುದಾಗಿದೆ. ಈ ದ್ವೀಪಕ್ಕೆ ಉದ್ಭಿದ, ವೇಣುಮಾನ್, ಸ್ವೈರಥ, ಲಂಬನ, ಧೃತಿ, ಪ್ರಭಾಕರ, ಕಪಿಲ ಎಂಬ ಅಧಿಪತಿಗಳು. ವರ್ಷಗಳೂ ಕೂಡ ಈ ಸಂಜ್ಞೆಯಿಂದಲೇ ಕೂಡಿರತಕ್ಕವುಗಳು. ಈ ದ್ವೀಪದಲ್ಲಿ ಜನರು ದೈತ್ಯ, ದಾನವ, ಗಂಧರ್ವ, ಯಕ್ಷ, ಕಿಂಪುರುಷ ಇವರುಗಳಿಂದ ಕೂಡಿರುತ್ತಾರೆ. ದಮನ, ಶುಷ್ಮಿಣ, ಸ್ನೇಹಾ, ಮಂದೇಹಾ ಎಂಬ ನಾಲ್ಕು ವರ್ಣದವರಾಗಿರುತ್ತಾರೆ. ಸ್ವಕರ್ಮನಿರತ ರಾಗಿ, ಬ್ರಹ್ಮರೂಪಿಯಾದ ಜನಾರ್ದನನನ್ನು ಯಜ್ಞಾದಿಗಳಿಂದ ಪೂಜಿಸುತ್ತಾರೆ. ವಿದ್ರುಮ, ಹೇಮಶೈಲ, ದ್ಯುತಿಮಾನ್, ಪುಷ್ಪವಾನ್, ಕುಶೇಶಯ, ಹರಿ, ಮಂಥರ ಎಂಬುದಾಗಿ ಏಳು ಕುಲಾಚಲಗಳು. ಧೂತಪಾಪಾ, ಶಿವಾ, ಪವಿತ್ರಾ, ಸುಮತಿ, ವಿದ್ಯುದಂಭಾ, ಮಹೀ, ಸರ್ವಪಾಪಹರಾ ಎಂಬುದಾಗಿ ಏಳು ನದಿಗಳು ಹರಿಯುತ್ತವೆ. ಇದಲ್ಲದೆ ಉಪನದಿಗಳು ಅನೇಕವಿರುತ್ತವೆ. ಕುಶಸ್ತಂಭದಿಂದ ಇದಕ್ಕೆ ಕುಶದ್ವೀಪವೆಂದು ಹೆಸರಾಯಿತು. ಕ್ರೌಂಚದ್ವೀಪವು ಘೃತಸಮುದ್ರದಿಂದ ಪರಿವೃತವಾಗಿ ಕುಶದ್ವೀಪಕ್ಕೆ ದ್ವಿಗುಣವಾದ ವಿಸ್ತಾರವುಳ್ಳದ್ದಾಗಿದೆ. ಈ ಕ್ರೌಂಚ ದ್ವೀಪಕ್ಕೆ ಕುಶಲ, ಮನುಗ, ಉಷ್ಣ, ಸಿವರ, ಅಂಧಕಾರಕ, ಮುನಿ, ದುಂದುಭಿ ಎಂಬುದಾಗಿ ಏಳುಮಂದಿ ಅಧಿಪತಿಗಳು. ಇವರುಗಳ ಹೆಸರಿನಿಂದಲೇ ವರ್ಷಗಳು ಹುಟ್ಟಿರುತ್ತವೆ. ಕ್ರೌಂಚ, ವಾಮನ, ಅರ್ಧಕಾರಕ, ರತ್ನಶೈಲ, ಸ್ವಾಹಿನೀ, ಹಯ, ಸನ್ನಿಭ ಎಂಬುದಾಗಿ ಪರ್ವತಗಳ ಹೆಸರುಗಳು. ಇಲ್ಲಿನ ಜನರು ನಿರಾತಂಕ ರಾಗಿ ದೇವತೆಗಳಿಂದ ಕೂಡಿರುವ, ಪುಷ್ಕರಾ, ಪುಷ್ಕಲಾ, ಧನ್ಯಾ, ತಿಷ್ಯಾ ಎಂಬ ನಾಲ್ಕು ವರ್ಣದವರು. ಗೌರೀ, ಕುಮುದ್ವತೀ, ಸಂಧ್ಯಾರಾತ್ರಿ, ಮನೋಜವಾ, ಖ್ಯಾತಿ, ಪುಂಡರೀಕಾ ಎಂಬ ಏಳು ನದಿಗಳಿವೆ. ರುದ್ರರೂಪಿಯಾದ ಶ್ರೀಮನ್ನಾರಾ ಯಣನನ್ನು ಯಜ್ಞಾದಿಕರ್ಮಗಳಿಂದ ಆರಾಧಿಸುತ್ತಾರೆ. ಶಾಕದ್ವೀಪವು ದಧಿ ಸಮುದ್ರದಿಂದ ಆವೃತವಾಗಿದೆ. ಕ್ರೌಂಚದ್ವೀಪದ ಎರಡರಷ್ಟು ಉಳ್ಳದ್ದು. ಇದಕ್ಕೆ ಜಲದ, ಕುಮಾರ, ಸುಕುಮಾರ, ಮರೀಚಕ, ಕುಸಿ, ಮೋದ, ಸುಮೋದ, ಮಹಾದ್ರುಮರೆಂಬ ಏಳು ಜನ ಅಧಿಪತಿಗಳು. ಉದಯಗಿರಿ, ಜಲಧಾರ, ರೈವತಕ, ಶ್ಯಾಮ, ಅಂಭೋಗಿರಿ, ಅಂಬಿಕೇಯ, ಕೇಸರಿ ಎಂಬ ಏಳು ಕುಲಾಚಲಗಳು. ಸುಕುಮಾರೀ, ಕುಮಾರೀ, ನಳಿನೀ, ವೇಣುಕೀ, ಇಕ್ಷು, ಧೇನುಕಾ, ಗಭಸ್ತಿ ಎಂಬ ಏಳು ನದಿಗಳು. ಇವುಗಳಲ್ಲದೆ ಇನ್ನೂ ಅನೇಕ ಕ್ಷುದ್ರನದಿಗಳೂ, ಪರ್ವತ ಗಳೂ ಸಹ ಇರುತ್ತವೆ. ವಂಗಾ, ಮಾಗಧಾ, ಮಾನಸಾ, ಮಂದಗಾ ಎಂಬ ನಾಲ್ಕು ವರ್ಣದವರು ಸೂರ್ಯರೂಪನಾದ ಶ್ರೀಮಹಾವಿಷ್ಣುವನ್ನು ಸತ್ಕರ್ಮ ಗಳಿಂದ ಆರಾಧಿಸುತ್ತಾರೆ. ಪುಷ್ಕರದ್ವೀಪವು ಕ್ಷೀರಸಮುದ್ರದಿಂದ ಆವರಿಸಲ್ಪಟ್ಟು, ಶಾಕದ್ವೀಪಕ್ಕೆ ದ್ವಿಗುಣವಿಸ್ತಾರವುಳ್ಳದ್ದಾಗಿದೆ. ಇಲ್ಲಿಗೆ ಮಹಾಪೀತನೆಂಬುವನು

ಅಧಿಪತಿಯು. ಇಲ್ಲಿನ ಜನರು ಹತ್ತುಸಾವಿರ ವರ್ಷ ಬದುಕುತ್ತಾರೆ. ಅಲ್ಲದೆ ರೋಗರಹಿತರಾಗಿಯೂ, ದುಃಖರಹಿತರಾಗಿಯೂ, ರಾಗದ್ವೇಷಾದಿ ಮುಕ್ತ ರಾಗಿಯೂ, ಅಧಮೋತ್ತಮರಹಿತರಾಗಿಯೂ, ವಧ್ಯವಧಿಕರಿಲ್ಲದವರಾಗಿಯೂ, ಈರ್ಷ್ಯಾಸೂಯಾದಿರಹಿತರಾಗಿಯೂ, ದೇವತೆಗಳಿಂದ ಅಭೇದರಾಗಿಯೂ, ವಾಸ ಮಾಡಿಕೊಂಡು, ಭೂಮಿಗೆ ಸ್ವರ್ಗಲೋಕದಂತಿರುವ ಪುಷ್ಕರದ್ವೀಪದಲ್ಲಿ ದೊಡ್ಡ ಒಂದು ಆಲದಮರದಲ್ಲಿ ವಾಸಿಸುವ ಪರಬ್ರಹ್ಮಸಾದ ಶ್ರೀಮನ್ನಾರಾಯಣನನ್ನು ಆರಾಧಿಸುತ್ತಲಿರುತ್ತಾರೆ. ಸ್ವಾದೂದಕ ಸಮುದ್ರದಿಂದ ಪರಿವೃತವಾಗಿದೆ. ಈ ಪ್ರಕಾರ ಸಪ್ತಸಮುದ್ರಗಳು ಸಪ್ತದ್ವೀಪಗಳಿಂದ ಕೂಡಿವೆ. ಈ ಸಮುದ್ರಗಳಲ್ಲಿ ನೀರು ಯಾವಾಗಲೂ ಒಂದೇ ಸಮನಾಗಿರುತ್ತದೆ. ಚಂದ್ರನ ಉದಯಾಸ್ತಮಾನ ಕಾಲಗಳಲ್ಲಿ ಮಾತ್ರ ಸಮುದ್ರದ ಜಲವು ಹ್ರಾಸವೃದ್ಧಿಗಳನ್ನು ಹೊಂದುತ್ತದೆ. ಶುಕ್ಲಪಕ್ಷದಲ್ಲಿ ನಲವತ್ತೆರಡೂವರೆ ಗೇಣುಪ್ರಮಾಣ ಬಲವು ವೃದ್ಧಿಯಾಗುತ್ತದೆ. ಕೃಷ್ಣಪಕ್ಷದಲ್ಲಿ ಅಷ್ಟೇ ಕ್ಷಯವಾಗುವುದು. ಪುಷ್ಕರದ್ವೀಪದ ಜನರು ಯಾವಾಗಲೂ ಷಡ್ರಸಯುಕ್ತವಾದ ಅನ್ನವನ್ನೇ ಭುಜಿಸುತ್ತಾರೆ. ಸ್ವಾದೂದಕ ಸಮುದ್ರದಿಂದ ಮುಂದಕ್ಕೆ, ಸುವರ್ಣವಿಕಾರವಾದ ಭೂಮಿಯು ಕಾಣುತ್ತದೆ. ಈ ಭೂಮಿಯಲ್ಲಿ ಯಾವ ಜಂತುಗಳೂ ವಾಸಮಾಡುವುದಿಲ್ಲ. ಮಹಾಯೋಗಿಗಳಿಂದ ಮಾತ್ರ ಸೇವಿಸಲ್ಪಡುತ್ತದೆ. ಲೋಕಾಲೋಕವೆಂಬ ಪರ್ವತವು ಸ್ವರ್ಣಭೂಮಿಯಿಂದಾಚೆಗೆ ಇದೆ. ಈ ಪರ್ವತವು ಹತ್ತುಸಾವಿರ ಯೋಜನ ವಿಸ್ತಾರವೂ, ವಿಸ್ತಾರದಷ್ಟೇ ಎತ್ತರವಾಗಿರುವುದು. ಸಪ್ತದ್ವೀಪ, ಸಪ್ತಸಮುದ್ರ, ಕಾಂಚಿನಭೂಮಿ, ಲೋಕಾ ಲೋಕಪರ್ವತ ಇವುಗಳೆಲ್ಲವೂ ಸೇರಿ ಒಟ್ಟು ವಿಸ್ತೀರ್ಣ ಅಂಡಕಟಾಹಾಂತದ ವರೆಗೂ ಐವತ್ತು ಕೋಟಿ ಯೋಜನಗಳು. ಬಾಹಿರಾವರಣವು ಅಷ್ಟೇ ವಿಸ್ತಾರ ವಾಗಿದೆ. ಲೋಕಾಲೋಕ ಪರ್ವತದಿಂದಾಚೆಗೆ ತಮೋಗರ್ತವಿರುವುದು. ಅಂಡ ಕಟಾಹವೆಂಬುದು ಇದರವರೆಗೂ ವ್ಯಾಪಿಸಿರುವುದು. ಅಲ್ಲಿಂದ ಮುಂದಕ್ಕೆ ಮಹಾ ಪುರುಷನಿವಾಸಭೂತವಾದ ವೈಕುಂಠವಿರುವುದು. ಈ ಭೂಮಿಯೇ ಸರ್ವಾಧಾರಕ ವಾದುದು."

ಇಲ್ಲಿಗೆ ಶ್ರೀವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ನಾಲ್ಕನೆಯ ಅಧ್ಯಾಯವು ಸಮಾಪ್ತಃ

ಐದನೆಯ ಅಧ್ಯಾಯವು

"ಎಲೈ ಮೈತ್ರೇಯನೆ, ಇದುವರೆಗೆ ಭೂಮಿಯ ವಿಸ್ತಾರವನ್ನು ಹೇಳಿದೆನು. ಭೂಮಿಯೇ ಪ್ರಾಸಾದಪ್ರಾಯವಾಗಿರುವ, ಅತಲ, ವಿತಲ, ನಿತಲ, ಸುತಲ,

ಮಹಾತಲ, ರಸಾತಲ, ಪಾತಾಳವೆಂಬುದಾಗಿ ಏಳು ಲೋಕಗಳು. ಈ ಏಳು ಲೋಕಗಳೂ, ಹತ್ತುಹತ್ತು ಸಾವಿರ ಯೋಜನ ವಿಸ್ತಾರವಾದುವು. ಶುಕ್ಲ, ಕೃಷ್ಣ, ಅರುಣ, ಪೀತ, ಶರ್ಕರ ಎಂಬ ಬಣ್ಣಗಳುಳ್ಳುವು. ಈ ಲೋಕಗಳಲ್ಲಿ ದೈತ್ಯ, ದಾನವ, ನಾಗ, ಸಂಘಗಳು ವಾಸಿಸುತ್ತಾರೆ. ನಾರದರು ದೇವಲೋಕದಲ್ಲಿ, ದೇವತೆಗಳ ಮಧ್ಯದಲ್ಲಿ ಸ್ವರ್ಗಲೋಕಕ್ಕಿಂತಲೂ, ಪಾತಾಳಲೋಕವು ರಮಣೀಯವಾದುದೆಂದು ಹೇಳುತ್ತಿದ್ದರು. ಆಹ್ಲಾದಕರಗಳಾದ ನಾಗರತ್ನಗಳು ಮಹಾತೇಜಸ್ಸಿನಿಂದ ಕೂಡಿದವುಗಳು. ಅಲ್ಲದೆ, ದಾನವಕನ್ನಿಕೆಗಳಿಂದ ಒಪ್ಪುವ ಪಾತಾಳಲೋಕವು ಮೋಕ್ಷಹೊಂದಿದವರ ಮನಸ್ಸನ್ನು ಕೂಡ ಆಕರ್ಷಿಸುವುದು. ಮನೋಹರವಾದ ಉದ್ಯಾನವನಗಳೂ, ನದಿಗಳೂ, ಸರೋವರಗಳೂ ಸಹ ಇರುವುವು. ವೀಣಾಮೃದಂಗಾದಿ ವಾದ್ಯಧ್ವನಿಗಳೂ ಇರುವುವು. ಪಾತಾಳ ಲೋಕದ ಅಧೋಭಾಗದಲ್ಲಿ, ಶ್ರೀಮನ್ನಾರಾಯಣನ ಶೇಷಾಖ್ಯವಾದ ತಮೋ ಶರೀರವಿರುವುದು. ಶೇಷನ ಗುಣಗಳನ್ನು ವರ್ಣಿಸಲು ದೈತ್ಯದಾನವರಿಗೂ ಆಗಲಾರದು. ದೇವದೇವರ್ಷಿಪೂಜಿತನಾದ ಈ ಅನಂತನು ಸಹಸ್ರಶಿರಸ್ಕನಾಗಿ, ಸಾವಿರ ಹೆಡೆಗಳಿಂದ ಕೂಡಿದವನಾಗಿ, ನಾನಾರತ್ನಗಳಿಂದ ವ್ಯಾಪ್ತನಾಗಿ, ಲೋಕಹಿತಾರ್ಥಕ್ಕಾಗಿ ಅಸುರರನ್ನೂ ನಿಸ್ತೇಜಸ್ಕರನ್ನಾಗಿ ಮಾಡುತ್ತಾ ಪತ್ನೀಯುಕ್ತನಾಗಿರುವನು. ಪ್ರಳಯಕಾಲದಲ್ಲಿ ಅನಂತನ ಮುಖದಿಂದ ಸಂಕರ್ಷಣಾತ್ಮಕನಾದ ರುದ್ರನು ಹೊರಟು, ಮೂರು ಲೋಕವನ್ನೂ ನಾಶಮಾಡುತ್ತಾನೆ. ಸಮಸ್ತ ದೇವತೆಗಳಿಂದ ಪೂಜಿತನಾದ ಆದಿಶೇಷನು ಭೂಮಂಡಲವನ್ನು ಶಿರಸ್ಸಿನಲ್ಲಿ ಧರಿಸಿರುವನು. ಆದಿಶೇಷನ ರೂಪವನ್ನು ಬಣ್ಣಿಸಲು ದೇವತೆಗಳಿಗೂ ಅಸಾಧ್ಯ. ಸಕಲ ಭೂಮಂಡಲವೂ, ಆದಿಶೇಷನಿಗೆ ಪುಷ್ಪಮಾಲಿಕೆಯ ಹಾಗೆ ಒಪ್ಪಿರಲು, ಇವನ ಪರಾಕ್ರಮವನ್ನು ಯಾರು ತಾನೇ ವರ್ಣಿಸಬಲ್ಲರು. ಆದಿಶೇಷನು ಆಕಳಿಕೆಯನ್ನು ಬಿಟ್ಟ ಮಾತ್ರಕ್ಕೆ ಭೂಮಿಯು ಅಲುಗಿಹೋಗುವುದು. ಆದಿಶೇಷನ ಗುಣಗಳ ಅಂತ್ಯವನ್ನು ಯಾರೂ ಕಾಣದಿರುವುದರಿಂದ ಇವನಿಗೆ ಅನಂತನೆಂದು ಹೆಸರುಂಟಾಯಿತು. ಪೂರ್ವೀಕನಾದ ಗರ್ಗಋಷಿಯು ಜ್ಞಾನದಿಂದ ಆದಿಶೇಷನ ಗುಣಗಳನ್ನು ತಿಳಿದು, ಸಕಲರಿಗೂ ಹೇಳಿರುತ್ತಾನೆ. ಆದಿಶೇಷನಿಂದ ಸಕಲ ಭೂಮಂಡಲವೂ, ಪುಷ್ಪಮಾಲಿಕೆಯಂತೆ ಧರಿಸಲ್ಪಟ್ಟಿದೆ.”

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಐದನೆಯ ಅಧ್ಯಾಯವು ಸಮಾಪ್ತಃ

ಆರನೆಯ ಅಧ್ಯಾಯವು

"ಎಲೈ ಮೈತ್ರೇಯನೇ, ಇನ್ನು ಪಾಪಿಗಳು ನರಕಕ್ಕೆ ಹೋಗುವ ವಿಷಯವನ್ನೂ, ನರಕಗಳ ಸ್ಥಿತಿಯನ್ನೂ ಹೇಳುತ್ತೇನೆ. ರೌರವ, ಸೂಕರ, ರೋಧ, ತಾಲ, ವಿಶಸನ, ಮಹಾಜ್ವಾಲ, ತಪ್ತಕುಂಭ, ಲವಣ, ವಿಲೋಹಿತ, ರುಧಿರಾಂಭ, ವೈತರಣಿ, ಕ್ರಿಮಿಶ, ಕ್ರಿಮಿಭೋಜನ, ಅಸಿಪತ್ರವನ, ಕೃಷ್ಣ, ಲಾಲಾಭಕ್ಷ, ಪೂಯವಹ, ವಹ್ನಿಜ್ವಾಲಾ, ಅಧಃ, ಶಿರಾಃ, ಸಂದಂಶ, ಕೃಷ್ಣಸೂತ್ರ, ತಮ, ವೀಚಿ, ಶ್ವಭೋಜನ ಇವೇ ಮೊದಲಾದ ಮಹಾಭಯಂಕರಗಳಾದ ಅನೇಕ ನರಕಗಳಿರುತ್ತವೆ. ಶಸ್ತ್ರದಿಂದ ಹೊಡೆದವರೂ, ಬೆಂಕಿಹಾಕಿದವರೂ, ಭಯವನ್ನುಂಟುಮಾಡಿದವರೂ ನರಕದಲ್ಲಿ ಬೀಳುತ್ತಾರೆ. ಪಕ್ಷಪಾತದಿಂದ ಸಾಕ್ಷಿಹೇಳತಕ್ಕವರೂ, ಸುಳ್ಳುಗಾರರೂ ರೌರವನರಕವನ್ನು ಹೊಂದುತ್ತಾರೆ. ಭ್ರೂಣಹತ್ಯೆಯನ್ನು ಮಾಡಿದವರೂ, ಗೋಹತ್ಯವನ್ನು ಮಾಡಿದವರೂ, ಇತರರ ಶ್ವಾಸವನ್ನು ತಡೆದವರೂ ರೋಧ ನರಕವನ್ನು ಪಡೆಯುತ್ತಾರೆ. ಸುರಾಪಾನ ಮಾಡತಕ್ಕವರೂ, ಬ್ರಹ್ಮಹತ್ಯೆಯನ್ನು ಮಾಡಿದವರೂ, ಚಿನ್ನವನ್ನು ಕದ್ದವರೂ, ಇವರುಗಳ ಸಹವಾಸವನ್ನು ಮಾಡತಕ್ಕವರೂ ಸೂಕರನರಕವನ್ನು ಹೊಂದುವರು. ಕ್ಷತ್ರಿಯ ವೈಶ್ಯರನ್ನು ನಾಶಮಾಡತಕ್ಕವರೂ, ಗುರುಪತ್ನೀಗಮನಮಾಡಿದವರೂ, ಯುದ್ಧಮಾಡದಿರತಕ್ಕ ಭಟರನ್ನು ಕೊಲ್ಲುವವರೂ ತಪ್ತಕುಂಭನರಕವನ್ನು ಸೇರುವರು. ಹೆಂಡತಿಯನ್ನು ಮಾರುವವರೂ, ಕಾರಾಗೃಹದಿಂದ ರಕ್ಷಿಸಿದವರೂ, ಅಶ್ವವಿಕ್ರಯವನ್ನು ಮಾಡತಕ್ಕವರೂ, ಆಶ್ರಿತರ ಪರಿತ್ಯಾಗಮಾಡತಕ್ಕವರೂ ತಪ್ತಲೋಹವೆಂಬ ನರಕವನ್ನು ಹೊಂದುತ್ತಾರೆ. ಸೊಸೆಯಲ್ಲಿ ರಮಿಸಿದವರೂ, ಮಗಳಲ್ಲಿ ರಮಿಸಿದವರೂ ಮಹಾಜ್ವಾಲವೆಂಬ ನರಕದಲ್ಲಿ ಬೀಳುತ್ತಾರೆ. ಆಚಾರ್ಯರನ್ನು ಅವಮಾನಪಡಿಸಿದವರೂ, ತಿರಸ್ಕಾರಮಾಡಿದವರೂ, ವೇದವನ್ನು ದೂಷಿಸತಕ್ಕವರೂ, ವೇದವಿಕ್ರಯಿಗಳೂ, ಅಗಮ್ಯಾಗಮನಮಾಡಿದವರೂ ಸಹ ಲವಣಲಂಬ ನರಕವನ್ನು ಹೊಂದುವರು. ಕಳ್ಳತನವನ್ನು ಮಾಡುವವರೂ, ಸದಾಚಾರವನ್ನು ನಿಂದಿಸತಕ್ಕವರೂ ಸಹ ವಿಲೋಹವೆಂಬ ನರಕವನ್ನು ಹೊಂದುತ್ತಾರೆ. ದೇವ, ಬ್ರಾಹ್ಮಣ, ಪಿತೃ ಇವರುಗಳನ್ನು ದ್ವೇಷಿಸತಕ್ಕವರೂ ಕ್ರಿಮಿಭಕ್ಷವೆಂಬ ನರಕದಲ್ಲಿ ಬೀಳುತ್ತಾರೆ. ಪಿತೃಗಳನ್ನೂ, ದೇವತೆಗಳನ್ನೂ ಅತಿಥಿಗಳನ್ನೂ ಬಿಟ್ಟು ಊಟಮಾಡತಕ್ಕವರು ಲಾಲಾಭಕ್ಷವೆಂಬ ನರಕವನ್ನು ಹೊಂದುತ್ತಾರೆ. ಬಾಣಗಳನ್ನೂ, ಕತ್ತಿಗಳನ್ನೂ ಮಾಡತಕ್ಕವರು ವಿಶಸನವೆಂಬ ನರಕದಲ್ಲಿ ಬೀಳುತ್ತಾರೆ. ಮ್ಲೇಂಛಾದಿಗಳಿಂದ ಪರಿಗ್ರಹಮಾಡತಕ್ಕವರು ಅಧೋಮುಖವೆಂಬ ನರಕದಲ್ಲಿ ಬೀಳುತ್ತಾರೆ. ಶೂದ್ರಾದಿಗಳಿಂದ ಕರ್ಮಮಾಡಿಸತಕ್ಕವರೂ,

ನಕ್ಷತ್ರಜೀವಿಗಳೂ, ಒಬ್ಬೊಬ್ಬರೇ ಮೃಷ್ಟಾನ್ನಭೋಜನಮಾಡತಕ್ಕವರೂ ಸಹ ಪೂಯುವಹವೆಂಬ ನರಕದಲ್ಲಿ ಬೀಳುತ್ತಾರೆ. ಹಾಲು, ಜೇನುತುಪ್ಪ ಮೊದಲಾದ ರಸವಿಕ್ರಯಮಾಡತಕ್ಕ, ಮಾಂಸ, ತಿಲ, ಲವಣ ಮೊದಲಾದುವುಗಳನ್ನು ವಿಕ್ರಯಿಸತಕ್ಕ ಬ್ರಾಹ್ಮಣರೂ ಸಹ ಪೂಯುವಹವೆಂಬ ನರಕದಲ್ಲಿ ಬೀಳುತ್ತಾರೆ. ನಾಟಕಗಳಲ್ಲಿ ವೇಷವನ್ನು ಹಾಕತಕ್ಕವರೂ, ಕುಂಡಗೋಳಕರ ಅನ್ನವನ್ನು ತಿನ್ನತಕ್ಕವರೂ, ವಿಷವನ್ನು ಕೊಡತಕ್ಕವರೂ, ಜಾಣಿಯಿಂದ ಆರ್ಜಿತವಾದ ಧನದಿಂದ ಜೀವಿಸತಕ್ಕವರೂ, ಪರ್ವಕಾಲದಲ್ಲಿ ತೈಲಾಭ್ಯಂಗನ, ಸ್ತ್ರೀ ಸಂಭೋಗಾದಿಗಳನ್ನು ಮಾಡತಕ್ಕವರೂ, ಮನೆಗೆ ಬೆಂಕಿಯನ್ನು ಹಾಕತಕ್ಕವರೂ ಸಹ ರುಧಿರಾಪವೆಂಬ ನರಕದಲ್ಲಿ ಬೀಳುತ್ತಾರೆ. ಯಜ್ಞವಿಘ್ನವನ್ನು ಮಾಡತಕ್ಕವರೂ, ಗ್ರಾಮನಾಶವನ್ನು ಮಾಡತಕ್ಕವರೂ ವೈತರಣೀಯೆಂಬ ನರಕವನ್ನು ಹೊಂದುತ್ತಾರೆ. ಧನಯೌವನಗರ್ಭಿತರಾಗಿ, ಸದಾಚಾರಗಳನ್ನತಿಕ್ರಮಿಸಿ, ಶೌಚಹೀನರಾದವರೂ, ಇಂದ್ರಜಾಲಾದಿವಿದ್ಯಗಳಿಂದ ಜೀವಿಸತಕ್ಕವರೂ, ನಿರರ್ಥಕವಾಗಿ ವನವನ್ನು ನಾಶಮಾಡತಕ್ಕವರೂ ಸಹ ಅಸಿಪತ್ರವೆಂಬ ನರಕವನ್ನು ಹೊಂದುತ್ತಾರೆ. ಮೃಗಗಳನ್ನೂ, ಆಡನ್ನೂ ಸಹ ತಿನ್ನತಕ್ಕವರು ವಹ್ನಿಜ್ವಾಲೆಯೆಂಬ ನರಕದಲ್ಲಿ ಬೀಳುತ್ತಾರೆ. ವ್ರತಲೋಪವನ್ನು ಮಾಡತಕ್ಕವರೂ, ಆಶ್ರಮಭ್ರಷ್ಟರಾದವರೂ ಸಹ ಸಂದಂಶವೆಂಬ ನರಕವನ್ನು ಹೊಂದುತ್ತಾರೆ. ದಿವಾಸ್ವಪ್ನಗಳಲ್ಲಿ ವೀರ್ಯಸ್ಖಲನೆಮಾಡಿದವರೂ, ಪುತ್ರರಿಂದ ಅಧ್ಯಯನಮಾಡಿಸತಕ್ಕವರೂ ಸಹ ಶ್ವಭೋಜನವೆಂಬ ನರಕವನ್ನು ಹೊಂದುತ್ತಾರೆ. ಹೀಗೆ ಅನೇಕ ನರಕಗಳಿರುತ್ತವೆ. ಪಾಪಿಗಳು ಮೇಲೆ ಹೇಳಿದ ನರಕಗಳನ್ನನುಭವಿಸಿ, ತಚ್ಛೇಷದಿಂದ ಸರ್ವನರಕಗಳನ್ನೂ ಅನುಭವಿಸುತ್ತಾರೆ. ದುಷ್ಕೃತ್ಯಗಳನ್ನು ಮಾಡಿದ ಪಾಪಿಗಳು ಯಾತನೆಗಳನ್ನು ಅನುಭವಿಸುತ್ತಾರೆ. ವರ್ಣಾಶ್ರಮ ವಿರುದ್ಧಕಾರ್ಯಗಳನ್ನು ಮಾಡತಕ್ಕವರೂ ನರಕಯಾತನೆಯನ್ನು ಅನುಭವಿಸುತ್ತಾರೆ. ನಾರಕಿಗಳಾದ ಪಾಪಿಗಳನ್ನು ನೋಡಿದ ದೇವತೆಗಳಿಗೆ ಪುಣ್ಯಕ್ಷಯವುಂಟಾಗಿ, ಪಾಪವು ಸಂಭವಿಸುತ್ತದೆಂಬ ಶಂಕೆಯುಂಟಾಗಿ ಸ್ವರ್ಗಲೋಕವಾಸಿಗಳು ಕೂಡ ಸೌಖ್ಯವಾಗಿರಲಾರರು. ಹೀಗೆ ಪಾಪಿಗಳು ನಾನಾವಿಧಗಳಾದ ನರಕಗಳನ್ನನುಭವಿಸಿ, ತಚ್ಛೇಷದಿಂದ ತಾಮಸಾದಿ ಗುಣಯುಕ್ತರಾಗಿ, ಸ್ಥಾವರಾದಿ ಜನ್ಮಗಳನ್ನು ಮೋಕ್ಷಪರ್ಯಂತವಾಗಿ ಕ್ರಮಶಃ ಹೊಂದುತ್ತಾರೆ. ಮತ್ಸ್ಯಾದಿ ಜನ್ಮಗಳನ್ನೆತ್ತಿದ್ದರೂ, ಪುಣ್ಯವಿಶೇಷದಿಂದ ಮೋಕ್ಷವನ್ನು ಹೊಂದಬಹುದು. ಕ್ರಿಮಿಗಳ ಗುಣಕ್ಕಿಂತಲೂ ಸ್ಥಾವರಗುಣಗಳು ಸಾವಿರಪಾಲು ಹೆಚ್ಚು. ಇದೇ ಕ್ರಮದಲ್ಲಿ ಮತ್ಸ್ಯ, ಪಕ್ಷಿ, ಪಶು, ನರ ಇವುಗಳು ಸಹ ಗುಣಾಧಿಕ್ಯವುಳ್ಳವುಗಳು.

ಮನುಷ್ಯಜನ್ಮವು ಮೋಕ್ಷಾರ್ಹವಾದುದು. ಮನುಷ್ಯರು ಗುರು, ಲಾಘವ ಕರ್ಮಗಳಿಂದ ಅಂದರೆ ಪುಣ್ಯಬಾಹುಳ್ಯದಿಂದ ಮೋಕ್ಷವನ್ನು ಹೊಂದಬಹುದು. ಸಂಸಾರದಲ್ಲಿ, ಜೀವಬಾಹುಳ್ಯದಿಂದ ಮೋಕ್ಷವು ದುರ್ಲಭವಾಗುವುದರಿಂದ ತಿರ್ಯಗ್ಯೋನಿಗತರಾದ ಪಕ್ಷ್ಯಾದಿಗಳಿಗೂ ಮೋಕ್ಷಸಿದ್ಧಿಯು ಎಂಬ ಅಭಿಪ್ರಾಯದಿಂದ ಹೇಳಲ್ಪಟ್ಟಿತು. ಸ್ವರ್ಗಲೋಕದಲ್ಲಿ ಎಷ್ಟು ಜನರು ಇರುತ್ತಾರೋ, ನರಕದಲ್ಲಿಯೂ ಅಷ್ಟೇ ಜನರು ಇದ್ದಾರೆ. ಪಾಪವನ್ನು ಮಾಡಿ, ಪ್ರಾಯಶ್ಚಿತ್ತವನ್ನು ಯಾರು ಮಾಡಿಕೊಳ್ಳದೇ ಇರುತ್ತಾರೋ, ಅವರು ನರಕವನ್ನು ಹೊಂದುತ್ತಾರೆ. ಪಾಪಾನುಸಾರವಾದ ಪ್ರಾಯಶ್ಚಿತ್ತವು ಮಹರ್ಷಿಗಳಿಂದ ಹೇಳಲ್ಪಟ್ಟಿದೆ. ಇವು ಬಹಳ ಕಠಿನವಾದುವು ಮತ್ತು ಪ್ರಾಣಾಂತಿಕವಾದವುಗಳು. ಮಹತ್ತರವಾದ ಪಾಪವನ್ನು ಬುದ್ಧಿಪೂರ್ವಕವಾಗಿ ಮಾಡಿದರೂ, ಅಲ್ಪವಾದ ಪಾಪವನ್ನು ಅಜ್ಞಾನದಿಂದ ಮಾಡಿದರೂ, ಪ್ರಾಯಶ್ಚಿತ್ತವುಂಟು. ಅಜ್ಞಾನದಿಂದ ಬ್ರಹ್ಮಹತ್ಯವನ್ನು ಮಾಡಿದರೆ, ಹನ್ನೆರಡುವರ್ಷಕಾಲ ಪ್ರಾಯಶ್ಚಿತ್ತವೂ, ಬುದ್ಧಿಪೂರ್ವಕ ಮಾಡಿದರೆ ಇಪ್ಪತ್ತುನಾಲ್ಕುವರ್ಷಕಾಲ ಪ್ರಾಯಶ್ಚಿತ್ತ ಮಾಡಬೇಕು. ಕೇವಲ ಅನುಗ್ರಹಪಾತ್ರನಾಗಿದ್ದರೆ ನಾಲ್ಕನೇ ಒಂದು ಭಾಗವನ್ನಾದರೂ ಮಾಡಬೇಕು. ಅಜ್ಞಾನದಿಂದ ಉಂಟಾದ ಮಹಾಪಾತಕಗಳಿಂದ ಮೂರುವರ್ಷ ಪ್ರಾಯಶ್ಚಿತ್ತದಿಂದ ಪಾಪಮುಕ್ತನಾಗುತ್ತಾನೆ. ಬುದ್ಧಿಪೂರ್ವಕವಾದ ಮಹಾಪಾತಕವು, ಆರುವರ್ಷ ಪ್ರಾಯಶ್ಚಿತ್ತವನ್ನು ಮಾಡಿದರೆ, ಸಂವ್ಯವಹಾರಾದಿಗಳು ಉಂಟಾಗಬಹುದೇ ಹೊರ್ತು ನರಕಯಾತನೆಯು ತಪ್ಪಲಾರದು. ಪಾಪಾನುಸಾರವಾದ ಪ್ರಾಯಶ್ಚಿತ್ತಗಳು, ಗುರು, ಲಘು ತಾರತಮ್ಯದಿಂದ ಮಹರ್ಷಿಗಳಿಂದ ವಿಧಿಸಲ್ಪಟ್ಟಿವೆ. ಆದುದರಿಂದ ಕರ್ಮಮಯವಾದ ಪ್ರಾಯಶ್ಚಿತ್ತಗಳಿಂದ ನಿಶ್ಶೇಷವಾಗಿ ಪಾಪಕ್ಷಯವಾಗುವುದಿಲ್ಲ. ನಿಶ್ಶೇಷವಾಗಿ ಪಾಪಕ್ಷಯವಾಗತಕ್ಕ ಪ್ರಾಯಶ್ಚಿತ್ತಗಳು ದುಷ್ಕರಗಳಾದುದರಿಂದ, ಶ್ರೀಕೃಷ್ಣಭಕ್ತಿ ಪ್ರಾಯಶ್ಚಿತ್ತವೇ ಶ್ರೇಷ್ಠವಾದುದೆಂದು ಸರ್ವೋಪನಿಷತ್ತುಗಳಲ್ಲಿಯೂ, ಸ್ಮೃತೀತಿಹಾಸ ಪುರಾಣಗಳಲ್ಲಿಯೂ ಸಹ ಹೇಳಲ್ಪಟ್ಟಿದೆ. ಉಪವಾಸ, ಯಜ್ಞಕರ್ಮ, ದಾನಾದಿಗಳನ್ನು ಮಾಡತಕ್ಕವರಿಗೂ ಸಹ ಶ್ರೀಕೃಷ್ಣಾನುಸ್ಮರಣವೇ ಸಕಲ ಪ್ರಾಯಶ್ಚಿತ್ತವು. ಯಾವ ಮನುಷ್ಯನು ಪಾಪವನ್ನು ಮಾಡಿ ಅನಂತರ ಅದಕ್ಕಾಗಿ ಸಂತಾಪಿಸುತ್ತಾನೋ, ಅವನು ಒಂದಾವರ್ತಿ ಹರಿಸ್ಮರಣೆಯನ್ನು ಮಾಡಿದರೆ, ಅದೇ ಸಕಲ ಪ್ರಾಯಶ್ಚಿತ್ತವು. ಹೀಗಿರುವಾಗ ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲಗಳಲ್ಲಿ ಶ್ರೀಕೃಷ್ಣಸ್ಮರಣೆಯನ್ನು ಮಾಡತಕ್ಕವನು ಕ್ಷಣದಲ್ಲಿ ಸಕಲಪಾಪಮುಕ್ತನಾಗಿ ಮೋಕ್ಷವನ್ನು ಹೊಂದುತ್ತಾನೆ. ವಿಷ್ಣುಸ್ಮರಣೆಯಿಂದ, ಸಕಲಕ್ಲೇಶಮುಕ್ತನಾಗಿ,

ಮೋಕ್ಷವನ್ನು ಪಡೆಯುತ್ತಾನೆ. ಮೋಕ್ಷಾಪೇಕ್ಷೆಯುಳ್ಳವನಿಗೆ ಸ್ವರ್ಗಾದಿಗಳು ವಿಘ್ನಕಾರಿಯಾದವುಗಳು. ಹಿಂತಿರುಗಿಬರತಕ್ಕ ಸ್ವರ್ಗಲೋಕಗಮನವೆಲ್ಲಿ? ಪುನರಾವೃತ್ತಿರಹಿತವಾದ ವಾಸುದೇವಮಂತ್ರವೆಂಬ ಬೀಜವೆಲ್ಲಿ? ಒಂದಕ್ಕೊಂದು ಅರ್ಥಾರ್ಥಸಂಬಂಧವಿಲ್ಲ. ಆದುದರಿಂದ ಅಹೋರಾತ್ರಿಗಳಲ್ಲಿ ಶ್ರೀಮನ್ನಾರಾಯಣನ ಸ್ಮರಣೆಯನ್ನು ಮಾಡತಕ್ಕವರಿಗೆ ನರಕಯಾತನೆಯಿಲ್ಲವು. ಸ್ವರ್ಗವು ಮನಸ್ಸಿಗೆ ಪ್ರೀತಿಕರವಾದುದು. ನರಕವು ಮನಸ್ಸಿಗೆ ದುಃಖಕರವಾದುದು. ಇವೆರಡೂ ಪಾಪಪುಣ್ಯರೂಪವಾದವುಗಳು. ಆದುದರಿಂದ ಸ್ವರ್ಗನರಕಾದಿಗಳು ಅನಿಯತವಾದುವು. ಅನ್ನಪಾನಾದಿ ಒಂದು ವಸ್ತುವೇ, ಸುಖ, ದುಃಖ ಈರ್ಷ್ಯಾದಿಗಳಿಗೆ ಕಾರಣವಾಗುತ್ತದೆ. ಕೋಪಾನುಗ್ರಹಗಳಿಗೆ ಸುಖದುಃಖಗಳೇ ಕಾರಣವು. ಆದುದರಿಂದ ದುಃಖಾತ್ಮಕವಾದುದೂ, ಸುಖಾತ್ಮಕವಾದುದೂ ಸಹ ಯಾವುದೂ ಇಲ್ಲವು. ಮನಸ್ಸಿಗೆ ಪರಿಣಾಮಾವಸ್ಥೆಯನ್ನುಂಟುಮಾಡುವುದೇ ಸುಖದುಃಖಾದಿಗಳ ಲಕ್ಷಣ. ಅಂದರೆ ಮನೋವ್ಯಾಪಾರವು ಪ್ರಸಂಗಾನುಸಾರ, ವಿಷಯಸಂಬಂಧಗಳಿಂದ ಕಟ್ಟುಬೀಳುವುದು. ವಿಷಯನಿವೃತ್ತಿಯೇ ಮೋಕ್ಷಕಾರಣವು. ಆದುದರಿಂದ ಮನಸ್ಸು ಬಂಧಮೋಕ್ಷಗಳಿಗೆ ಕಾರಣವಾದುದು. ಹೀಗಿರುವುದರಿಂದ ಜ್ಞಾನವೇ ಪರಬ್ರಹ್ಮನು, ಎಲ್ಲವೂ ಬ್ರಹ್ಮಮಯವಾದುವು. ಆದುದರಿಂದ ಮೋಕ್ಷಸಾಧನವಾದ ವಿದ್ಯೆಯನ್ನೂ, ಫಲರಹಿತವಾದ ಕರ್ಮಾನುಷ್ಠಾನಭೂತವಾದ ಅವಿದ್ಯೆಯನ್ನೂ, ಈ ವಿದ್ಯಾಸಂಬಂಧವಾದ ಜ್ಞಾನವನ್ನೇ ನೀನು ಯಾವಾಗಲೂ ಧರಿಸು" ಎಂಬುದಾಗಿ ಮೈತ್ರೇಯನಿಗೆ ಹೇಳಿದನು. "ಎಲೈ ಮೈತ್ರೇಯನೇ, ನೀನು ಕೇಳಿದ ಪ್ರಕಾರ ಭೂಮಂಡಲವನ್ನೂ, ಪಾತಾಳಾದಿ ಲೋಕಗಳನ್ನೂ, ನರಕಗಳನ್ನೂ, ಸಮುದ್ರ, ಪರ್ವತ, ದ್ವೀಪ, ವರ್ಷ, ನದಿ ಇವುಗಳನ್ನೂ ಸಹ ಸಂಕ್ಷೇಪವಾಗಿ ಹೇಳಿದೆನು. ಪುನಃ ಯಾವುದನ್ನು ಕೇಳುತ್ತೀಯೆ?" ಎಂಬುದಾಗಿ ಶ್ರೀ ಪರಾಶರಮಹರ್ಷಿಗಳು ಅಪ್ಪಣೆಕೊಟ್ಟರು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಆರನೆಯ ಅಧ್ಯಾಯವು ಸಮಾಪ್ತಃ

ಏಳನೆಯ ಅಧ್ಯಾಯವು

ಅದಕ್ಕೆ ಮೈತ್ರೇಯರು "ಓ ಪರಾಶರ ಮಹರ್ಷಿಗಳೇ, ಇದುವರೆಗೆ ನೀವು ಹೇಳಿದ ವಿಷಯಗಳಲ್ಲಿ ಭುವರ್ಲೋಕಾದಿ ವಿಷಯವು ಬರಲಿಲ್ಲವಾದುದರಿಂದ, ಅದನ್ನೂ ಗ್ರಹಸ್ಥಾನಾದಿ ವಿಷಯಗಳನ್ನೂ ಅಪ್ಪಣೆಕೊಡಿಸಬೇಕೆಂದು" ಕೇಳಲು,

ಪರಾಶರ ಮಹರ್ಷಿಗಳು ಹೇಳುತ್ತಾರೆ: "ಎಲೈ ಮೈತ್ರೇಯನೇ, ಸೂರ್ಯಚಂದ್ರರ ಕಿರಣಗಳು ಎಲ್ಲಿಯವರೆಗೆ ಹರಡುತ್ತವೋ ಅಲ್ಲಿಯವರೆಗೂ ಭೂಮಿಯ ವಿಸ್ತಾರವಿರುವುದು. ಭುವರ್ಲೋಕವೂ ಸಹ ಭೂಮಿಯಷ್ಟೆ? ವ್ಯಾಸಮಂಡಲ ದಿಂದ ಹೆಚ್ಚು ವಿಸ್ತಾರವುಳ್ಳದ್ದು. ಭೂಮಿಗೆ ಒಂದು ಲಕ್ಷ ಯೋಜನ ದೂರ ದಲ್ಲಿ ಸೂರ್ಯಮಂಡಲವಿರುವುದು. ಸೂರ್ಯಮಂಡಲಕ್ಕೆ ಲಕ್ಷಯೋಜನ ದೂರದಲ್ಲಿ ಚಂದ್ರಮಂಡಲವಿರುವುದು. ಇದಕ್ಕೆ ಲಕ್ಷಯೋಜನ ದೂರದಲ್ಲಿ ನಕ್ಷತ್ರಮಂಡಲ ವಿರುವುದು. ಈ ನಕ್ಷತ್ರಮಂಡಲಕ್ಕೆ ಎರಡು ಲಕ್ಷ ಯೋಜನ ದೂರದಲ್ಲಿ ಬುಧ ಮಂಡಲವೂ, ಇದಕ್ಕೆ ಎರಡು ಲಕ್ಷ ಯೋಜನ ದೂರದಲ್ಲಿ ಶುಕ್ರಮಂಡಲವೂ. ಇದಕ್ಕೆ ಎರಡು ಲಕ್ಷ ಯೋಜನ ದೂರದಲ್ಲಿ ಅಂಗಾರಕಮಂಡಲವೂ, ಇದಕ್ಕೆ ಲಕ್ಷದ್ವಯ ದೂರದಲ್ಲಿ ಶನಿಮಂಡಲವೂ, ಇದಕ್ಕೆ ಒಂದು ಲಕ್ಷ ಯೋಜನ ದೂರದಲ್ಲಿ ಬೃಹಸ್ಪತಿ ಮಂಡಲವೂ. ಇದಕ್ಕೆ ಒಂದು ಲಕ್ಷ ಯೋಜನ ದೂರದಲ್ಲಿ ಸಪ್ತರ್ಷಿಮಂಡಲವೂ, ಇದಕ್ಕೆ ಲಕ್ಷಯೋಜನ ದೂರದಲ್ಲಿ ಸಪ್ತಮಂಡಲಕ್ಕೂ ಸ್ತಂಭಪ್ರಾಯವಾದ ಧ್ರುವಮಂಡಲವಿರುವುದು. ಯಜ್ಞಕರ್ಮಗಳನ್ನು ಮಾಡತಕ್ಕ ಭಾರತವರ್ಷಕ್ಕೆ ಭೋಗಭೂಮಿಯಾದ ಸ್ವರ್ಗಲೋಕಾದಿ ಮೂರು ಲೋಕಗಳ ರಕ್ಷಣಾರ್ಥವಾಗಿ ಧ್ರುವಮಂಡಲವಿರುವುದು. ಭೂಮಿಗೂ ಧ್ರುವಮಂಡಲಕ್ಕೂ ಹದಿನೈದು ಲಕ್ಷ ಯೋಜನ ದೂರವು. ಧ್ರುವಮಂಡಲಕ್ಕಿಂತ ಮೇಲೆ, ಒಂದು ಕೋಟಿ ಯೋಜನ ದೂರದಲ್ಲಿ ಮಹರ್ಲೋಕವಿರುವುದು. ಈ ಲೋಕದಲ್ಲಿ ಕಲ್ಪಾಂತದವರೆಗೂ, ಎಂದರೆ ಮನ್ವಂತರಕಲ್ಪದವರೆಗೂ ವಾಸಮಾಡಿ ನಂತರ ಜನೋಲೋಕವನ್ನು ಹೊಂದುತ್ತಾರೆ. ಜನೋಲೋಕವು ಎರಡು ಕೋಟಿ ಯೋಜನ ದೂರದಲ್ಲಿರುವುದು. ಈ ಲೋಕದಲ್ಲಿ ನಿರ್ಮಲಚಿತ್ತರಾದ ಬ್ರಹ್ಮ ಪುತ್ರರಾದ ಸನಕಾದಿಗಳು ವಾಸಿಸುತ್ತಾರೆ. ಜನೋಲೋಕಕ್ಕೆ ನಾಲ್ಕರಷ್ಟು ದೂರದಲ್ಲಿ ತಪೋಲೋಕವಿರುವುದು. ಈ ಲೋಕದಲ್ಲಿ ವೈರಾಜರೆಂಬ ದೇವತೆ ಗಳು ವಾಸಮಾಡುತ್ತಾರೆ. ತಪೋಲೋಕಕ್ಕಿಂತ ಆರರಷ್ಟು ದೂರದಲ್ಲಿ ಸತ್ಯ ಲೋಕವು ಪ್ರಕಾಶಿಸುವುದು. ನಾಲ್ಕು ಕೋಟಿ, ಆರು ಕೋಟಿ ಎಂಬ ಗಣನೆಯು ಭೂಲೋಕದಿಂದ ಗಣನೆಮಾಡತಕ್ಕದ್ದು. ಬ್ರಹ್ಮಲೋಕವನ್ನು ಹೊಂದಿ ದವರು ಪುನಃ ಹಿಂತಿರುಗದಿರುವುದರಿಂದ, ಬ್ರಹ್ಮಲೋಕವೆಂಬ ಹೆಸರುಂಟಾ ಯಿತು. ಕಾಲಪುರುಷನಿಂದ ಸಂಚರಿಸುವುದಕ್ಕೆ ಯೋಗ್ಯವಾದ ಭೂಲೋಕದ ವಿಸ್ತಾರವನ್ನು ಹಿಂದೆಯೇ ಹೇಳಿದೆನು. ಭೂಲೋಕ, ಭುವರ್ಲೋಕ, ಸ್ವರ್ಗ ಲೋಕಗಳು ಪ್ರತಿ ಕಲ್ಪದಲ್ಲಿಯೂ ಮಾಡತಕ್ಕವುಗಳಾದುದರಿಂದ, ಇವುಗಳಿಗೆ ಕೃತಕವೆಂಬುದಾಗಿ ಹೇಳಲ್ಪಡುತ್ತವೆ. ಜನೋಲೋಕ, ತಪೋಲೋಕ, ಸತ್ಯ

ಲೋಕಗಳು ಪ್ರತಿಕಲ್ಪದಲ್ಲಿಯೂ ಮಾಡಲ್ಪಡದಿರುವುದರಿಂದ, ಅಕೃತಕವೆಂಬು ದಾಗಿ ಹೇಳಲ್ಪಡುತ್ತವೆ. ಈ ಕೃತಕಾಕೃತಕ ಲೋಕಗಳ ಮಧ್ಯದಲ್ಲಿ ಮಹ ರ್ಲೋಕವಿರುವದು. ಇದು ಕಲ್ಪಾಂತ್ಯದಲ್ಲಿ ಶೂನ್ಯವಾಗುವುದು. ಈ ಪ್ರಕಾರ ಏಳು ಲೋಕಗಳ ವಿಷಯವನ್ನು ಹೇಳಿದ ಹಾಗಾಯಿತು. ಚತುರ್ದಶಭುವನಾ ತ್ಮಕವಾದ ಅಂಡಕಟಾಹದಮೇಲೆ, ಕೆಳಗೆ ಎಲ್ಲಾ ಭಾಗವೂ ಜಲದಿಂದ ವ್ಯಾಪ್ತ ವಾಗಿದೆ. ಜಲವು ಅಗ್ನಿಯಿಂದಲೂ, ಅಗ್ನಿಯು ವಾಯುವಿನಿಂದಲೂ, ವಾಯುವು ಆಕಾಶದಿಂದಲೂ, ಆಕಾಶವು ಮಹಾಭೂತದಿಂದಲೂ ಪರಿವೇಷ್ಟಿತವಾಗಿರು ವುದು. ಮಹಾಭೂತವು ಅನಂತನಿಂದ ಆವರಿಸಲ್ಪಟ್ಟಿರುವುದು. ಅನಂತನಾದ ಶ್ರೀಮನ್ನಾರಾಯಣನ ಗುಣಗಳನ್ನು ಸಂಖ್ಯೆಮಾಡಲು ಆಗುವುದಿಲ್ಲ. ಸಪ್ತಾ ವರಣದಿಂದ ವ್ಯಾಪ್ತವಾದ ಸಮಸ್ತ ಜಗತ್ತಿಗೂ ಶ್ರೀಮನ್ನಾರಾಯಣನೇ ಕರ್ತನು. ಉತ್ಕೃಷ್ಟವಾದ ಪ್ರಕೃತಿಯು, ಅಂಡಗಳು ಅಸಂಖ್ಯಾತವಾಗಿ ಪ್ರಧಾನ ಪುರುಷನಲ್ಲಿರುವುವು. ವೃಕ್ಷವು ಆದಿಬೀಜದಿಂದ ಉಂಟಾದುದು. ವೃಕ್ಷದಿಂದಲೇ ಅನೇಕ ಬೀಜಗಳುಂಟಾಗಿ ತನ್ಮೂಲಕ ಅನೇಕ ವೃಕ್ಷಗಳು ಹುಟ್ಟುವ ಹಾಗೆ, ಅವ್ಯಾಕೃತಶರೀರಕನಾದ ಪರಮಾತ್ಮನಿಂದ ಮಹದಾದಿ ವಿಶೇಷಾಂತವಾಗಿ ಅಂದರೆ ಪೃಥಿವ್ಯಂತವಾಗಿ, ದೇವಾದಿಗಳು ಹುಟ್ಟಿ, ದೇವತೆಗಳಿಗೆ ಪುತ್ರರು ಹುಟ್ಟು ವುದೂ, ಇವರಿಗೆ ಇತರ ಪುತ್ರರು ಹುಟ್ಟುವುದೂ, ಈ ಪ್ರಕಾರ ಬೀಜವೃಕ್ಷ ಪ್ರರೋಹದಿಂದ, ಭೂತವರ್ಗಕ್ಕೆ ಕಾರಣಭೂತನಾದವನು, ಭಗವಂತನಾದ (ಜಗತ್ಕಾರಣನಾದ) ಶ್ರೀಹರಿಯು. ಈ ಶ್ರೀಮಹಾವಿಷ್ಣುವೇ ಪರಬ್ರಹ್ಮನಾದ ವನು. ಇವನ ಸ್ಥಾನವೇ ಪರಮಪದವು. ಈ ಜಗತ್ತುಗಳಿಗೆ ವ್ಯಕ್ತರೂಪನಾದ ವನೂ ಶ್ರೀಮನ್ನಾರಾಯಣನೇ. ಯಜ್ಞರೂಪನಾದವನೂ, ಯಜ್ಞಕರ್ತನೂ, ಯಜ್ಞಫಲನಾದವನೂ, ಯಜ್ಞಸಾಧನವಾದ ಸ್ರುಕ್‌ಸ್ರುವಾದಿಗಳೂ ಸಹ ಶ್ರೀಮನ್ನಾರಾಯಣನೇ. ಶ್ರೀಮನ್ನಾರಾಯಣನಾತ್ಮಕವಲ್ಲದ ವಸ್ತುವು ಯಾವುದೂ ಇಲ್ಲವು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಏಳನೆಯ ಅಧ್ಯಾಯವು ಸಮಾಪ್ತಃ

ಎಂಟನೆಯ ಅಧ್ಯಾಯವು

"ಓ ಮೈತ್ರೇಯನೇ, ಬ್ರಹ್ಮಾಂಡಸಂಸ್ಥಾನವನ್ನು ಇದುವರೆಗೆ ಹೇಳಿದೆನು. ಮುಂದೆ ಸೂರ್ಯಾದಿಗಳ ಸ್ಥಾನ, ಪ್ರಮಾಣಗಳನ್ನು ಹೇಳುತ್ತೇನೆ. ಸೂರ್ಯನ ರಥವು ಒಂಬತ್ತುಸಾವಿರ ಯೋಜನ ವಿಸ್ತಾರವುಳ್ಳದು. ಈಷಾದಂಡವು

(ಮೂಕೀಪುರ) ಹದಿನೆಂಟು ಯೋಜನ ವಿಸ್ತಾರವಿರುವುದು. ಅಕ್ಷವು ಐವತ್ತು ಸಾವಿರ ಯೋಜನ ವಿಸ್ತಾರವಾಗಿ ಈ ಅಕ್ಷದಲ್ಲಿ ಚಕ್ರವು ಸ್ಥಾಪಿತವಾಗಿರುವುದು. ಅಕ್ಷವೆಂದರೆ ರಥಾವಯವ. ತ್ರಿನಾಭಿಗಳುಳ್ಳುದಾಗಿಯೂ, ಅಂದರೆ ಪೂರ್ವಾಹ್ನ, ಅಪರಾಹ್ನ, ಮಧ್ಯಾಹ್ನವೆಂಬ ಮೂರು ನಾಭಿಯುಕ್ತವಾಗಿಯೂ, ಸಂವತ್ಸರ, ಪರಿವತ್ಸರ, ಇಡಾವತ್ಸರ, ಅನುವತ್ಸರ, ಇದ್ವತ್ಸರ ಎಂಬ ಐದು ಸಂವತ್ಸರಾತ್ಮಕ ವಾದ ಅರೆಗಳುಳ್ಳುದಾಗಿಯೂ, ಅಂದರೆ ಚಕ್ರದ ಕಾಲುಗಳುಳ್ಳುದಾಗಿಯೂ, ಆರು ಋತುಗಳೇ ನೇಮಿ(ಚಕ್ರದ ಬಳೆ)ಯಾಗಿಯೂ, ಈ ಅವಯವಗಳಿಂದ ಕೂಡಿದ, ಮಧ್ಯಭಾಗದಲ್ಲಿ ಕಾಲಾತ್ಮಕವಾದ ಚಕ್ರವು ಸ್ಥಾಪಿತವಾಗಿದೆ. ಸೂರ್ಯನ ರಥಕ್ಕೆ ಗಾಯತ್ರೀ, ಬೃಹತೀ, ಉಷ್ಣಿಕ್, ಜಗತೀ, ತ್ರಿಷ್ಟುಪ್, ಅನುಷ್ಟುಪ್, ಪಂಕ್ತಿಃ ಎಂಬುದಾಗಿ ಏಳು ಛಂದಸ್ಸುಗಳೇ ಏಳು ಕುದುರೆಗಳು. ಸೂರ್ಯನ ರಥಕ್ಕೆ ಹ್ರಸ್ವಾಕ್ಷ, ದೀರ್ಘಾಕ್ಷವೆಂಬುದಾಗಿ ಎರಡು ಅಕ್ಷಗಳು. ಹ್ರಸ್ವಾಕ್ಷವು ನಲವತ್ತೈದೂವರೆಸಾವಿರಯೋಜನ ವಿಸ್ತಾರವುಳ್ಳುದು. ಇದು ರಥದ ಕೆಳಭಾಗದ ಅವಯವ. ದೀರ್ಘಾಕ್ಷವೆಂದರೆ ಮೇಲುಭಾಗ. ದೀರ್ಘಾಕ್ಷವು ಮೇರುಪರ್ವತ ದಿಂದ ಮಾನಸಪರ್ವತದವರೆಗೆ ಎಷ್ಟು ದೂರವಿರುವುದೋ, ಅಷ್ಟು ವಿಸ್ತಾರ ವಾಗಿರುವುದು. ಈ ಎರಡು ಅಕ್ಷಗಳು ಉದಗಯನ, ದಕ್ಷಿಣಾಯನಗಳು. ಇಂಥಾ ರಥವನ್ನು ಎಳೆಯುವುದಕ್ಕೂ, ನಿಲ್ಲಿಸುವುದಕ್ಕೂ ಧ್ರುವನು ಹಗ್ಗವನ್ನು ಹಿಡಿದಿರುತ್ತಾನೆ. ಹ್ರಸ್ವಾಕ್ಷದ ಮೇಲೆ ಹತ್ತುಸಾವಿರಯೋಜನವುಳ್ಳ ರಥವು ಇದೆ, ಊರ್ಧ್ವಾಕ್ಷವೆಂಬುದು. ವಾಯ್ವಾತ್ಮಕವಾದ ಹಗ್ಗವನ್ನು ಹಿಡಿದಿರುವ ಧ್ರುವನು ರಥಕ್ಕೆ ಆಧಾರನಾಗಿರುವನು. ಹೀಗೆ ಉಭಯಾಕ್ಷಗಳಿಂದ ಕೂಡಿದ ರಥವು ನಡೆಯುವಾಗ, ದಕ್ಷಿಣಭಾಗದಲ್ಲಿ ಕಟ್ಟಿರತಕ್ಕ ಹಗ್ಗಗಳಿಂದ ಧ್ರುವನು ಉತ್ತರಾಯಣದಲ್ಲಿ, ಮೇರುಪರ್ವತಕ್ಕೆ ಅಭಿಮುಖವಾಗಿ ಎಳೆಯುತ್ತಾನೆ. ದಕ್ಷಿಣಾಯನದಲ್ಲಿ, ಉತ್ತರಭಾಗದ ಹಗ್ಗಗಳನ್ನು ಎಳೆಯುತ್ತಾನೆ. ಈ ಪ್ರಕಾರ ಸರ್ವಾಧಾರಭೂತನಾದ ಧ್ರುವನಿಂದ ರಥವು ತಿರುಗಿಸಲ್ಪಡುವುದಾಗಿದೆ. ಜಂಬೂ ದ್ವೀಪದ ಮಧ್ಯದಲ್ಲಿ ಮೇರುಪರ್ವತವೂ, ಇದಕ್ಕೆ ಮೇಲುಭಾಗದಲ್ಲಿ ಹದಿನೈದು ಲಕ್ಷ ಯೋಜನಗಳ ಅಂತರದಲ್ಲಿ ಧ್ರುವನೂ ಇರುವರು. ಮೇರುಪರ್ವತದ ಮೇಲು ಭಾಗದಲ್ಲಿ ಹದಿನಾರುಸಾವಿರಯೋಜನ ವಿಸ್ತಾರವುಳ್ಳ 'ಮಹಾಕ್ಷ'ದ ಮೂಲ ಸ್ಥಾನವಿರುವುದು. ಮೂಲಸ್ಥಾನದಲ್ಲಿ ಒಂದೇ ಚಕ್ರವಿರುವುದು. ಮಹಾಕ್ಷದಲ್ಲಿ ನೂರೆಂಬತ್ತುಮೂರು ಮಂಡಲರೇಖೆ ಇರುವುದು. ಸೂರ್ಯನು ತಿರುಗುವಾಗ, ದಿನಕ್ಕೆ ಒಂದು ರೇಖೆಯಂತೆ, ರೇಖಾಮಂಡಲವೂ ತಿರುಗುವುದು. ಮಂಡಲದ ರೇಖೆಯು ಪೂರ್ತಿಯಾಗಿ ತಿರುಗಿದರೆ, ಒಂದು ಅಯನವಾಗುವುದು. ಮಂಡಲದ

ರೇಖೆಗಳು ಕಾಣದಹಾಗೆ ತಿರುಗಿ, ಪುನಃ ರೇಖಾಮಂಡಲವು ಕಂಡರೆ, ಅದೊಂದು ಅಯನ. ಅಂದರೆ ಒಂದು ಅಯನದಲ್ಲಿ ರೇಖಾಮಂಡಲದ ರೇಖೆಗಳು ಕಾಣುವುದು. ಮತ್ತೊಂದು ಅಯನದಲ್ಲಿ ಅವು ಕಾಣುವುದಿಲ್ಲ. ಈ ಪ್ರಕಾರ ಧ್ರುವನ ಹಗ್ಗಗಳ ವಶದಿಂದಲೂ, ನಕ್ಷತ್ರಸಮೂಹಗಳಿಂದಲೂ ಕೂಡಿದ ಸೂರ್ಯನ ರಥವು, ಪ್ರತಿದಿನವೂ, ಪಶ್ಚಿಮಾಭಿಮುಖವಾಗಿ, ಒಂದಾವರ್ತಿ ಮೇರುಪರ್ವತವನ್ನು ಪ್ರದಕ್ಷಿಣೆಮಾಡುತ್ತಾ, ನಕ್ಷತ್ರಚಕ್ರಮಾರ್ಗದಿಂದ ಸ್ವಲ್ಪಸ್ವಲ್ಪವಾಗಿ ಸಂಚರಿಸುವುದು. ಈ ಪ್ರಕಾರ ದಕ್ಷಿಣಾಯನ, ಉತ್ತರಾಯಣಗಳ ಛಾಯಾದರ್ಶನಗಳಿಂದ ಅಯನಸಿದ್ಧಾಂತವುಂಟಾಗುವುದು. ನಕ್ಷತ್ರಚಕ್ರವು ಸೂರ್ಯನಿಗೆ ಚಕ್ರಾಕಾರವಾಗಿರುವುದು. ಅಶ್ವಿನ್ಯಾದಿ ಇಪ್ಪತ್ತೇಳು ನಕ್ಷತ್ರಗಳಿಂದ ಕೂಡಿದ ಜ್ಯೋತಿರ್ಮಂಡಲವು, ಮೇಷಾದಿರಾಶಿಗಳಿಂದ ಹನ್ನೆರಡು ಭಾಗವಾಗಿ ವಿಭಾಗಿಸಲ್ಪಟ್ಟಿದೆ. ಅಶ್ವಿನ್ಯಾದಿ ಇಪ್ಪತ್ತೇಳು ನಕ್ಷತ್ರಗಳನ್ನು ಎರಡೂಕಾಲಾಗಿ ಭಾಗಮಾಡಿದರೆ, ಮೇಷಾದಿ ಒಂದೊಂದು ರಾಶಿಗಳಾಗುತ್ತವೆ. ಧನುರ್ಮಾಸ, ಮಕರಮಾಸಗಳ ಸಂಧಿಯಲ್ಲಿ ಉತ್ತರಾಯಣವು ಉಪಕ್ರಮವಾಗುತ್ತದೆ. ಹೀಗೆಯೇ, ಮಿಥುನ, ಕರ್ಕಟ ಸಂಧಿಯಲ್ಲಿ ದಕ್ಷಿಣಾಯನವು ಪ್ರಾರಂಭವಾಗುವುದು. ನಕ್ಷತ್ರಚಕ್ರವು ದಕ್ಷಿಣಭಾಗದಲ್ಲಿ ಸ್ವಲ್ಪ ಬಗ್ಗಿ, ಉತ್ತರಭಾಗವು ಸ್ವಲ್ಪ ಎತ್ತರವಾಗಿರುತ್ತದೆ. ಪೂರ್ವಾಭಿಮುಖದಲ್ಲಿ ಪ್ರದಕ್ಷಿಣೆಯಾಗಿ ಇಡಲ್ಪಟ್ಟಿರುವ, ಅಶ್ವಿನ್ಯಾದಿ ನಕ್ಷತ್ರಗಳಲ್ಲಿ ಉತ್ತರಾಷಾಢಾ ನಕ್ಷತ್ರದ ಎರಡನೆಯ ಪಾದದಿಂದ ಕೂಡಿ, ಹದಿಮೂರು ನಕ್ಷತ್ರಗಳು ಉತ್ತರಾಯಣದಲ್ಲಿ ಸೇರುತ್ತವೆ. ಪುನರ್ವಸು ನಕ್ಷತ್ರದ ಅಂತ್ಯಪಾದದಿಂದ ಕೂಡಿ, ಹದಿಮೂರು ನಕ್ಷತ್ರಗಳು ದಕ್ಷಿಣಾಯನದಲ್ಲಿ ಸೇರುತ್ತವೆ. ಆಯಾಯಾ ದೇಶದಲ್ಲಿ ಚಕ್ರಾರ್ಧದ ದರ್ಶನ, ಆದರ್ಶನ ಇವುಗಳಿಂದ ಆರು ರಾಶಿಗಳಿಂದ, ಉದಯ, ಅಸ್ತಮಿತಗಳು ಉಂಟಾಗುತ್ತವೆ, ಅಂದರೆ ಸೂರ್ಯನಿಂದ ಉದಯಕಾಲದಲ್ಲಿ, ಯಾವ ರಾಶಿಯು ಆಕ್ರಮಿಸಲ್ಪಡುತ್ತದೆಯೋ, ಅಲ್ಲಿಂದ ಆರು ರಾಶಿಗಳವರೆಗೂ ಹಗಲು, ಇತರ ಆರು ರಾಶಿಗಳ ದರ್ಶನವು ರಾತ್ರಿಕಾಲವಾಗುವುದು. ಈ ಪ್ರಕಾರ ಸೂರ್ಯನ ರಥ ಸ್ಥಿತಿ, ಗಮನಗಳು. ಚತುರ್ಮುಖಬ್ರಹ್ಮನ ಮುಂದುಗಡೆ ಪೂರ್ವದಿಕ್ಕು ಇರುವುದು. ಅಲ್ಲಿ ಇಂದ್ರನ ಪಟ್ಟಣವಿರುವುದು. ಬ್ರಹ್ಮನ ಹಿಂಭಾಗವೇ ಪಶ್ಚಿಮದಿಕ್ಕು. ಅಲ್ಲಿ ವರುಣನ ಪಟ್ಟಣವಿರುವುದು. ಬ್ರಹ್ಮನ ಬಲಭಾಗವು ದಕ್ಷಿಣದಿಕ್ಕು. ಅಲ್ಲಿ ಯಮನ ಪಟ್ಟಣವಿರುವುದು. ಬ್ರಹ್ಮನ ಎಡಭಾಗವು ಉತ್ತರ ದಿಕ್ಕು. ಅಲ್ಲಿ ಸೋಮನ ಪಟ್ಟಣವಿರುವುದು. ಇಂದ್ರ, ವರುಣ, ಯಮ, ಸೋಮ ಇವರ ಪಟ್ಟಣಗಳಿಗೆ ಕ್ರಮವಾಗಿ ವಸ್ವೌಕಸಾರಪುರಿ, ಸಂಯನೀಪುರಿ, ಸುಖಾಪುರಿ, ವಿಭಾವರೀಪುರಿ ಎಂದು ಹೆಸರುಗಳು. ಸೂರ್ಯನು

ಜ್ಯೋತಿಶ್ಚಕ್ರದಿಂದ ಕೂಡಿದವನಾಗಿ, ದಿವಾರಾತ್ರಿಗಳಿಗೆ ಕಾರಣನಾಗಿರುತ್ತಾನೆ. ಯೋಗಿಗಳಿಗೆ ಮುಕ್ತಿದಾಯಕನಾಗಿರುವನು. ಸೂರ್ಯನಿಗೆ ಉದಯ, ಅಸ್ತಮಯ ಗಳೆಂಬುವು ಇಲ್ಲವು. ನಮಗೆ ಮಧ್ಯಾಹ್ನಕಾಲದಲ್ಲಿ ಯಾವ ರೀತಿಯಾಗಿ ತೀಕ್ಷ್ಣ ನಾಗಿ ಕಾಣುತ್ತಾನೋ ಅದೇ ರೀತಿ ಸರ್ವಕಾಲಗಳಲ್ಲಿಯೂ ಇರುವನು. ದೇಶ ಭೇದಗಳಿಂದ, ಕಾಣದೇ ಇರತಕ್ಕ ಕಾಲದಲ್ಲಿ ಅಸ್ತಮಯವೆಂಬುದಾಗಿಯೂ, ಕಣ್ಣಿಗೆ ಕಾಣಿಸುವ ಕಾಲದಲ್ಲಿ ಉದಯವೆಂಬುದಾಗಿಯೂ ವ್ಯವಹಾರವುಂಟಾ ಗಿದೆ. ಸೂರ್ಯನು ಅಮರಾವತೀ ಪಟ್ಟಣದಲ್ಲಿ, ಮಧ್ಯಾಹ್ನಕಾಲದಲ್ಲಿರುವಾಗ, ಸಂಯಮನೀ ಪಟ್ಟಣಕ್ಕೆ ಉದಯವಾಗುವುದು. ಸುಖಾಪುರಿಯಲ್ಲಿ ಅರ್ಧ ರಾತ್ರಿಯೂ, ವಿಭಾವರೀ ಪಟ್ಟಣದಲ್ಲಿ ಅಸ್ತಮಯಕಾಲವೂ ಆಗಿರುವುದು. ಸೂರ್ಯನು ಭೂಮಿಗೆ ಬಹುದೂರದಲ್ಲಿರುವುದರಿಂದ ಈ ದೇಶಗಳಿಗೆ ವ್ಯತ್ಯಾಸ ವಾದ ಕಾಲದಿಂದ ಕೆಂಪು, ಬಿಳುಪು ಮೊದಲಾದ ಬಣ್ಣಗಳಿಂದ ಪ್ರಕಾಶಿಸುತ್ತಾನೆ. ಹಗಲು ಸೂರ್ಯನಲ್ಲಿ, ಅಗ್ನಿಯ ನಾಲ್ಕನೆಯ ಒಂದು ಭಾಗವಿರುತ್ತದೆ. ರಾತ್ರಿ ಕಾಲದಲ್ಲಿ ಸೂರ್ಯನ ನಾಲ್ಕನೆಯ ಒಂದು ಭಾಗವು ಅಗ್ನಿಯಲ್ಲಿರುತ್ತದೆ. ಆದುದ ರಿಂದ ಸೂರ್ಯಾಗ್ನಿಗಳ ಪ್ರಕಾಶೋಷ್ಣಾದಿಗಳು ಹಗಲುರಾತ್ರಿಗಳಿಗೆ ಪ್ರಕಾಶ ವನ್ನುಂಟುಮಾಡುತ್ತವೆ. ಸೂರ್ಯನು ಪುಷ್ಕರದ್ವೀಪದ ಮಧ್ಯದಿಂದ, ಭೂಮಿ ಯಲ್ಲಿ ಸಂಚರಿಸುವಾಗ, ಭೂಮಿಯು ಒಂದು ದಿನದಲ್ಲಿ ಮುವ್ವತ್ತು ಭಾಗದಿಂದ ಮುವ್ವತ್ತು ಮುಹೂರ್ತಗಳುಂಟಾಗುವುವು. ಸೂರ್ಯನು ಅಯನಗತಿಯಿಂದಲೂ, ರಾಶ್ಯಂತರಗತಿಯಿಂದಲೂ, ದೀರ್ಘ ಹ್ರಸ್ವ ಮಂದವಾದ ಗಮನಗಳುಳ್ಳವನಾಗು ತ್ತಾನೆ. ಆದುದರಿಂದ ಉಷಾ, ರಾತ್ರಿ, ಹಗಲು ಎಂಬ ವಿವೇಚನೆಯುಂಟಾಗು ವುದು. ರಾತ್ರಿಹಗಲುಗಳ ಸಂಧಿಕಾಲವು ಉಷಃಕಾಲವು. ಪರಮದಾರುಣವಾದ ಸಂಧ್ಯಾಕಾಲದಲ್ಲಿ ಮಂದೇಹಾ ನಾಮಕರಾದ ರಾಕ್ಷಸರು ಭಯಂಕರರಾಗಿ ಸೂರ್ಯ ನನ್ನು ತಿನ್ನಲಪೇಕ್ಷಿಸುತ್ತಾರೆ. ಇವರು ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ಸೂರ್ಯನಲ್ಲಿ ಯುದ್ಧಮಾಡಬೇಕೆಂಬ ವರವನ್ನು ಕೋರಿದರು. ಅದಕ್ಕೆ ಬ್ರಹ್ಮನು ಅವರ ಶರೀರಗಳು ಅಕ್ಷಯವಾಗಿರುವಂತೆ ವರವನ್ನೂ, ಪ್ರತಿನಿತ್ಯವೂ ಅವರಿಗೆ ಮರಣವುಂಟಾಗುವಂತೆ ಶಾಪವನ್ನೂ ಕೊಟ್ಟನು. ಆದುದರಿಂದ ಈ ರಾಕ್ಷಸರಿಗೂ, ಸೂರ್ಯನಿಗೂ ಪ್ರತಿನಿತ್ಯದಲ್ಲೂ ಯುದ್ಧವು ನಡೆಯುವುದು. ಈ ಯುದ್ಧಕಾಲ ದಲ್ಲಿ ಬ್ರಾಹ್ಮಣರು ಜಲವನ್ನು ಗಾಯತ್ರಿಯಿಂದ ಅಭಿಮಂತ್ರಿಸಿ, ರಾಕ್ಷಸರಮೇಲೆ ಬಿಡುವರು. ವಜ್ರಭೂತವಾದ ಮಂತ್ರೋದಕದಿಂದ ರಾಕ್ಷಸರು ನಾಶಹೊಂದು ತ್ತಾರೆ. ಅನಂತರ ಬ್ರಾಹ್ಮಣರು ಅಗ್ನಿಹೋತ್ರವನ್ನು ಮಾಡಿ, ಮೊದಲು ಸೂರ್ಯ ನಿಗೆ ಹೋಮವನ್ನು ಕೊಡುತ್ತಾರೆ. ಈ ಹೋಮದಿಂದ ಸೂರ್ಯನಿಗೆ ತೇಜಸ್ಸು

ವೃದ್ಧಿಯಾಗಿ ಸಂಚರಿಸುವನು. ಓಂಕಾರರೂಪಿಯಾದ ಶ್ರೀಮನ್ನಾರಾಯಣನನ್ನು ಉಚ್ಚರಿಸುವುದರಿಂದ ರಾಕ್ಷಸರು ನಾಶಹೊಂದುತ್ತಾರೆ. ಆದುದರಿಂದ ಬ್ರಾಹ್ಮಣರು ಸಂಧ್ಯೋಪಾಸನಕರ್ಮವನ್ನು ಬಿಡಕೂಡದು. ಸೂರ್ಯೋದಯದ ಮೊದಲುಗೊಂಡು, ಮೂರು ಮುಹೂರ್ತಗಳು ಪ್ರಾತಃಕಾಲವೆಂಬುದಾಗಿಯೂ, ಅನಂತರ ಮೂರು ಮುಹೂರ್ತಗಳು ಸಂಗಮಕಾಲವೆಂಬುದಾಗಿಯೂ, ಆಮೇಲೆ ಮೂರು ಮುಹೂರ್ತಗಳು ಮಧ್ಯಾಹ್ನಕಾಲವೆಂಬುದಾಗಿಯೂ, ಅನಂತರ ಮೂರು ಮುಹೂರ್ತಗಳು ಅಪರಾಹ್ಣವೆಂಬುದಾಗಿಯೂ, ಉಳಿದ ಮೂರು ಮುಹೂರ್ತಗಳು ಸಾಯಾಹ್ನವೆಂಬುದಾಗಿಯೂ, ಒಂದು ದಿವಸಕ್ಕೆ ಐದು ಸಂಧಿಕಾಲಗಳಾಗಿವೆ. ಹಗಲಿಗೆ ಹದಿನೈದು ಮುಹೂರ್ತಗಳು. ಒಂದು ಮುಹೂರ್ತಕ್ಕೆ ಎರಡು ಗಳಿಗೆಗಳು. ಈ ಪ್ರಕಾರ ಒಂದು ದಿನಕ್ಕೆ ಮುವ್ವತ್ತು ಮುಹೂರ್ತಗಳು. ದಿನಗಳು ಹದಿನೈದಕ್ಕೆ ಒಂದು ಪಕ್ಷ. ಎರಡು ಪಕ್ಷಗಳಿಗೆ ಒಂದು ಮಾಸ. ಎರಡು ಮಾಸಗಳಿಗೆ ಒಂದು ಋತು. ಮೂರು ಋತುಗಳು ಒಂದು ಅಯನ. ಎರಡು ಅಯನಗಳು ಒಂದು ವರ್ಷವು. ವರ್ಷವು ಸಾವನ, ಸೌರ, ಚಾಂದ್ರ, ನಾಕ್ಷತ್ರವೆಂಬುದಾಗಿ ನಾಲ್ಕು ವಿಧ ಮಾನಗಳಿಂದ ಕೂಡಿರುವುದು. ಅಮಾವಾಸೆಯಿಂದ ಅಮಾವಾಸೆಯ ವರೆಗೂ ಚಾಂದ್ರಮಾನವೆಂಬುದಾಗಿಯೂ, ಮುವ್ವತ್ತು ದಿವಸಗಳಿಗೆ ಸಾವನ ಮಾಸವೆಂಬುದಾಗಿಯೂ, ಸಂಕ್ರಮಣಾನುಸಾರ ಸೌರಮಾಸವೆಂಬುದಾಗಿಯೂ, ಚಂದ್ರಮಂಡಲದಿಂದ ನಾಕ್ಷತ್ರಮಾಸವೆಂಬುದಾಗಿಯೂ ಸಹ ನಾಲ್ಕು ವಿಧವಾಗಿವೆ. ಸಂವತ್ಸರಗಳು ಐದು ವಿಧವಾದುದನ್ನು ಹಿಂದೆಯೇ ಹೇಳಿರುತ್ತದೆ. ನಾಲ್ಕು ರೀತಿಯಾದ ಮಾಸಗಳು ಒಂದೇ ವರ್ಷದಲ್ಲಿ ಸೇರಿರುತ್ತವೆ. ಶುಕ್ಲ ಪ್ರತಿಪತ್ತಿನಲ್ಲಿ ಒಂದೇ ನಕ್ಷತ್ರದಲ್ಲಿ, ಸೂರ್ಯನು ಚಂದ್ರನಿಂದ ಕೂಡಿದ್ದರೆ, ಅದೇ ಸಂಕ್ರಾಂತಿಯೆಂಬುವದು. ಸೌರಮಾನರೀತ್ಯಾ ಒಂದು ವರ್ಷಕ್ಕೆ ಆರು ದಿನಗಳು ಕಮ್ಮಿಯಾಗಿ ತೋರುವುವು. ಚಾಂದ್ರಮಾನರೀತ್ಯಾ ಆರು ದಿನಗಳು ಹೆಚ್ಚಾಗಿ ತೋರುವುವು. ಕೃತ್ತಿಕಾನಕ್ಷತ್ರದ ಆದಿಭಾಗದಲ್ಲಿಯೂ, ಮೇಷರಾಶಿಯ ಅಂತ್ಯ ಭಾಗದಲ್ಲಿಯೂ, ವಿಶಾಖಾನಕ್ಷತ್ರದ ನಾಲ್ಕನೆಯ ಅಂಶದಲ್ಲಿಯೂ, ವೃಶ್ಚಿಕ ರಾಶಿಯ ಆದ್ಯಂಶದಲ್ಲಿಯೂ, ಸೂರ್ಯನು ಯಾವಾಗ ಸಂಚರಿಸುವನೋ, ಆಗ ಚಂದ್ರನು ಕೃತ್ತಿಕಾನಕ್ಷತ್ರದ ಶಿರೋಭಾಗದಲ್ಲಿರುತ್ತಾನೆ. ಇವಕ್ಕೆ ವಿಷುವತ್ಪುಣ್ಯ ಕಾಲವೆಂಬುದಾಗಿ ಹೇಳಲ್ಪಡುವುದು. ಈ ಪುಣ್ಯಕಾಲದಲ್ಲಿ ಬ್ರಾಹ್ಮಣರಿಗೂ, ಪಿತೃಗಳಿಗೂ, ದೇವತೆಗಳಿಗೂ ದಾನಾದಿಗಳನ್ನು ಕೊಟ್ಟವನು ಕೃತಕೃತ್ಯನಾಗುತ್ತಾನೆ. ಚಂದ್ರನು ಕಳಾಹೀನನಾದ ಕಾಲದಲ್ಲಿ, ಅನುಮತಿ ಎಂದು ಹೆಸರು. ಇದೇ ಅಮಾವಾಸ್ಯೆಯು. ಚಂದ್ರನು ಪೂರ್ಣಕಳಾಯುಕ್ತನಾದ ಕಾಲಕ್ಕೆ ರಾಕಾ

ಎಂದು ಹೆಸರು. ಇದೇ ಪೌರ್ಣಮಾಸ್ಯೆಯು. ತಪೋಮಾಸ, ತಪಸ್ಯಮಾಸ, ಮಧುಮಾಸ, ಮಾಧವಮಾಸ, ಶುಕ್ರಮಾಸ, ಶುಚಿಮಾಸಗಳೆಂದು, ಮಾಘಾದಿ ಆಷಾಢಾಂತವಾಗಿ ಆರು ಮಾಸಗಳು, ಉತ್ತರಾಯಣವು. ನಭೋಮಾಸ, ನಭ್ಯಮಾಸ, ಇಷಮಾಸ, ಊರ್ಜಮಾಸ, ಸಹೋಮಾಸ, ಸಹಸ್ಯಮಾಸ ಗಳೆಂಬುದಾಗಿ, ಶ್ರಾವಣಾದಿ ಪುಷ್ಯಾಂತದವರೆಗೂ ಆರು ಮಾಸಗಳು, ದಕ್ಷಿಣಾಯನವು. ಇಪ್ಪತ್ತೇಳು ನಕ್ಷತ್ರಗಳು ಒಂಬತ್ತು ವೀಧಿಗಳಾಗಿ ಭಾವಿಸಿದರೆ, ಅವುಗಳಲ್ಲಿ ಯಮನಿಗೆ ಮೂರು ವೀಧಿಗಳು. ಒಂಬತ್ತು ವೀಧಿಗಳ ಹೆಸರುಗಳು ಯಾವುವೆಂದರೆ: ನಾಗವೀಧೀ, ಗಜವೀಧೀ, ಐರಾವತೀವೀಧಿ ಎಂಬ ಮೂರು ವೀಧಿಗಳು ಉತ್ತರಭಾಗದಲ್ಲಿರುವುವು. ಆರ್ಷಭವೀಧೀ, ಗೋವೀಧೀ, ಜರದ್ಗವ ವೀಧೀ ಎಂಬ ಮೂರು ವೀಧಿಗಳು ಮಧ್ಯದಲ್ಲಿರುವುವು. ಅಜವೀಧೀ, ಮೃಗ ವೀಧೀ, ವೈಶ್ವಾನರವೀಧೀ ಎಂಬ ಮೂರು ವೀಧಿಗಳು ದಕ್ಷಿಣಭಾಗದಲ್ಲಿರು ವುವು. ಇವುಗಳಲ್ಲಿ ಮೃಗವೀಧಿಯು ಪಿತೃಗಳ ವೀಧಿಯಾಗಿರುತ್ತದೆ. ಈ ವೀಧಿ ಯಲ್ಲಿ ಅಗ್ನಿಹೋತ್ರಾದಿ ಕರ್ಮಗಳಿಂದ, ಮಹಾತ್ಮರಾದ ಋಷಿಗಳು ವಾಸಿ ಸುತ್ತಾರೆ. ನಾಗವೀಧಿಗೆ ಉತ್ತರಭಾಗವಾಗಿಯೂ, ಸಪ್ತರ್ಷಿಗಳಿಗೆ ದಕ್ಷಿಣ ವಾಗಿಯೂ ಇರುವ ಸ್ಥಳವು ದೇವಯಾನಮಾರ್ಗವು. ಇಲ್ಲಿ ಜಿತೇಂದ್ರಿಯ ರಾದ ಬ್ರಹ್ಮಚಾರಿಗಳು ವಾಸಿಸುತ್ತಾರೆ. ಸೂರ್ಯನ ಉತ್ತರಕ್ಕಿರುವ ಮಾರ್ಗ ದಲ್ಲಿ, ಎಂಬತ್ತೆಂಟುಸಾವಿರ ಮಹರ್ಷಿಗಳು, ಬ್ರಹ್ಮಕಲ್ಪದವರೆಗೂ ಇರು ತ್ತಾರೆ. ಅಲ್ಲದೆ ಲೋಭೇರ್ಷ್ಯಾದಿಗಳಿಂದ ಬಿಡಲ್ಪಟ್ಟವರಾದ್ದರಿಂದ ಮೋಕ್ಷ ವನ್ನು ಹೊಂದುತ್ತಾರೆ. ಬ್ರಹ್ಮಹತ್ಯ, ಅಶ್ವಮೇಧ ಈ ಪಾಪಪುಣ್ಯಗಳನ್ನು ಮಾಡಿದವನು, ಪ್ರಳಯಕಾಲದವರೆಗೂ, ಪಾಪಪುಣ್ಯಗಳನ್ನು ಅನುಭವಿಸು ತ್ತಾನೆ. ಸಪ್ತರ್ಷಿಮಂಡಲಕ್ಕೆ ಉತ್ತರಭಾಗದಲ್ಲಿ ಧ್ರುವನು ಇರುತ್ತಾನೆ. ಈ ಸ್ಥಳವೇ ವಿಷ್ಣುಪದವು. ಸಕಲ ದೋಷಗಳಿಂದ ಮುಕ್ತರಾದ ಮಹಾತ್ಮರು ವಿಷ್ಣು ಲೋಕವನ್ನು ಹೊಂದುತ್ತಾರೆ. ಇದೇ ಪರಮಪದವು. ಸಕಲಜ್ಯೋತಿರ್ಮಂಡಲವೂ ಧ್ರುವನ ಅಧೀನದಲ್ಲಿರುವುದು. ಜ್ಯೋತಿರ್ಮಂಡಲಕ್ಕೆ ಮೇಘಗಳು ಅಧೀನವಾಗಿರು ವುವು. ಮೇಘಗಳಿಗೆ ವೃಷ್ಟಿಯು ಅಧೀನವಾದುದು. ವೃಷ್ಟಿಗೆ ಪೋಷಣೆಯು ಅಧೀನವಾಗಿರುವುದು. ಪೋಷಣೆಯು ದೇವತೆಗಳ ಅಧೀನವಾದುದು. ದೇವತೆಗಳು ಆಜ್ಯಾಹುತಿಗೆ ಅಧೀನರು. ಆಜ್ಯಾಹುತಿಯು ದೇವತೆಗಳಿಗೆ ಪುಷ್ಟಿಕರವಾದುದು. ದೇವತೆಗಳಿಂದ ಸೃಷ್ಟ್ಯಾದಿಗಳಿಗೆ ಕಾರಣವಾಗುವುದು. ಈ ರೀತಿಯಾಗಿ ಸರ್ವಕ್ಕೂ ವಿಷ್ಣುಪದವೇ ಕಾರಣವಾಗಿರುವುದು. ಈ ವಿಷ್ಣುಪದದ ಮಾರ್ಗದಿಂದ, ಸರ್ವಪಾಪ ಹರಳಾದ ಗಂಗೆಯು ಪ್ರವಹಿಸುವಳು. ಈ ಗಂಗೆಯನ್ನು ಧ್ರುವನು ಭಕ್ತಿಯಿಂದ

ಅಹೋರಾತ್ರಿಗಳಲ್ಲಿ ಶಿರಸ್ಸಿನಲ್ಲಿ ಧರಿಸಿರುವನು. ಸಪ್ತರ್ಷಿಗಳು ಅಘಮರ್ಷಣ ಸೂಕ್ತದಿಂದ ಸ್ನಾನಮಾಡಿ, ಗಂಗೆಗೆ ಕಾಂತಿಯನ್ನು ವೃದ್ಧಿಮಾಡಿದರು. ಭಗವತ್ ಭಾಗವತಸಂಬಂಧದಿಂದ, ತೇಜೋವಿಶಿಷ್ಟಳಾದ ಗಂಗೆಯು, ಲೋಕಪಾವನಾರ್ಥವಾಗಿ, ಮೇರುಪರ್ವತದಲ್ಲಿ ಬಿದ್ದು, ಚಂದ್ರಮಂಡಲವನ್ನು ಆಕ್ರಮಿಸಿ ನಾಲ್ಕುಭಾಗವಾಗಿ ಪ್ರವಹಿಸಿದಳು. ಅಲಕನಂದಾ ಎಂಬ ಹೆಸರಿನಿಂದ ಭಾಗವಾದ ಗಂಗೆಯನ್ನು ರುದ್ರಭಗವಂತನು ಬಹುಕಾಲ ಶಿರಸ್ಸಿನಲ್ಲಿ ಧರಿಸಿದನು. ಅನಂತರ ರುದ್ರನ ಜಟಾಮಂಡಲದಿಂದ ಹೊರಟು, ಸಗರಪುತ್ರರನ್ನು ಪುನೀತರನ್ನಾಗಿ ಮಾಡಿ, ಸ್ವರ್ಗಲೋಕವನ್ನು ಹೊಂದಿಸಿದಳು. ಗಂಗಾಜಲದಲ್ಲಿ ಸ್ನಾನಮಾಡತಕ್ಕವರು ಸಕಲ ಪಾಪಗಳಿಂದಲೂ ಮುಕ್ತರಾಗುತ್ತಾರೆ. ಗಂಗೋದಕದಿಂದ ಪಿತೃಗಳಿಗೆ ತರ್ಪಣಾದಿಗಳನ್ನು ಮಾಡಿದರೆ ಪಿತೃಗಳು ಅಪೂರ್ವ ಪುಣ್ಯವಿಶೇಷವನ್ನು ಕೊಡುತ್ತಾರೆ. ಯಜ್ಞಾದಿ ಕರ್ಮಗಳಿಂದ ಯಜ್ಞೇಶನಾದ ಅಚ್ಯುತನನ್ನು ಆರಾಧಿಸಿ, ಗಂಗಾಜಲದಲ್ಲಿ ಅವಭೃತವನ್ನು ಮಾಡಿದರೆ, ಪುನರಾವರ್ತಿರಹಿತವಾದ ಲೋಕವನ್ನು ಹೊಂದುತ್ತಾರೆ. ವೇದಪ್ರತಿಪಾದ್ಯಳಾದ ಗಂಗೆಯನ್ನು ದೃಷ್ಟಿಸಿದರೂ, ಸ್ಪರ್ಶಮಾಡಿದರೂ, ಪಾನಮಾಡಿದರೂ, ಸ್ನಾನಮಾಡಿದರೂ ಅನೇಕ ಫಲಗಳು ಪ್ರಾಪ್ತವಾಗುವುವು. ನೂರಾರು ಯೋಜನ ದೂರದಲ್ಲಿರತಕ್ಕವರು ಗಂಗಾ, ಗಂಗಾ, ಗಂಗಾ ಎಂದು ಮೂರಾವರ್ತಿ ಉಚ್ಚರಿಸಿದರೆ ಮೂರು ಜನ್ಮಗಳಲ್ಲಿ ಮಾಡಿದ ಪಾಪಗಳು ನಾಶಹೊಂದುತ್ತವೆ. ಗಂಗೆಯು ಮೂರು ಲೋಕಗಳ ಪಾವನಾರ್ಥವಾಗಿಯೇ ಶ್ರೀಮನ್ನಾರಾಯಣನ ಅಂಗುಷ್ಠದಿಂದ ಹುಟ್ಟಿದವಳು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಎಂಟನೆಯ ಅಧ್ಯಾಯವು ಸಮಾಪ್ತಃ

ಒಂಬತ್ತನೆಯ ಅಧ್ಯಾಯವು

"ತಾರಾಮಯವಾದ, ಭಗವದಾತ್ಮಕವಾದ, ಶಿಂಶುಮಾರಾಕೃತಿಯ ಪುಚ್ಛದಲ್ಲಿ ಧ್ರುವನು ಇರುವನು. ಶಿಂಶುಧ್ರುವನು ಶಿಂಶುಮಾರವಶದಿಂದ, ಗ್ರಹಗಳನ್ನು ತಿರುಗಿಸುತ್ತಾನೆ. ಹೀಗೆ ತಿರುಗತಕ್ಕ ಧ್ರುವನನ್ನು ಅನುಸರಿಸಿ ನಕ್ಷತ್ರಗಳು ಚಕ್ರಾಕಾರವಾಗಿ ತಿರುಗುತ್ತವೆ. ಗ್ರಹಗಳಿಂದ ಕೂಡಿದ ನಕ್ಷತ್ರಮಂಡಲವು, ವಾಯುವೆಂಬ ಪಾಶದಿಂದ, ಧ್ರುವನಲ್ಲಿ ಕಟ್ಟಲ್ಪಟ್ಟಿರುವುದರಿಂದ ಜ್ಯೋತಿಶ್ಚಕ್ರಗಳು ತಿರುಗುತ್ತವೆ. ಶಿಂಶುಮಾರರೂಪಿಯಾದ ಶ್ರೀಮನ್ನಾರಾಯಣನು, ಧ್ರುವನಿಗೆ ಆಧಾರನಾಗಿ, ಸಕಲ ಜ್ಯೋತಿರ್ಮಂಡಲವನ್ನು ಧರಿಸಿರುವನು. ಉತ್ತಾನಪಾದ

ರಾಯನ ಮಗನಾದ ಧ್ರುವನು, ಜಗತ್ಪತಿಯಾದ ಶ್ರೀಮನ್ನಾರಾಯಣನನ್ನು ಆರಾಧಿಸಿ, ಶಿಂಶುಮಾರಪುಚ್ಛದಲ್ಲಿ ಪ್ರತಿಷ್ಠಿತನಾದನು. ಶಿಂಶುಮಾರಚಕ್ರಕ್ಕೆ ಸರ್ವಾಧ್ಯಕ್ಷನಾದ ಶ್ರೀಮನ್ನಾರಾಯಣನು ಆಧಾರನು. ಶಿಂಶುಮಾರವು ಧ್ರುವನಿಗೆ ಆಧಾರವು. ಧ್ರುವನು ಸೂರ್ಯಾದಿಗಳಿಗೆ ಆಧಾರನು. ಸೂರ್ಯನು ಎಂಟು ತಿಂಗಳು ಮಳೆಯನ್ನು ವರ್ಷಿಸುತ್ತಾನೆ. ಮಳೆಯಿಂದ ಅನ್ನವು ಉತ್ಪತ್ತಿಯಾಗುವುದು. ಅನ್ನದಿಂದ ಅಖಿಲ ಜಗತ್ತೂ ಹುಟ್ಟುವುದು. ಸೂರ್ಯನು ತನ್ನ ತೀಕ್ಷ್ಣವಾದ ಕಿರಣಗಳಿಂದ ಜಗತ್ತಿನ ಜಲವನ್ನು ಆಕರ್ಷಿಸಿ, ಚಂದ್ರನಲ್ಲಿ ಬಿಡುತ್ತಾನೆ. ಚಂದ್ರನು ಮೇಘಗಳಲ್ಲಿ ಬಿಡುತ್ತಾನೆ. ಮೇಘಗಳು ವಾಯುವಿನ ಸಹಾಯದಿಂದ ಭೂಮಿಯಲ್ಲಿ ಬಿಡುತ್ತವೆ. ಈ ಪ್ರಕಾರ ನಿರ್ಮಲವಾದ ನೀರಿನಲ್ಲಿ ಅನೇಕ ಪ್ರಾಣಿಗಳು ಉತ್ಪತ್ತಿಯಾಗುತ್ತವೆ. ಸೂರ್ಯನು ಆಕಾಶಗಂಗಾಜಲವನ್ನು ತೆಗೆದು, ತನ್ನ ಕಿರಣಗಳಿಂದ ಭೂಮಿಗೆ ಬಿಡುತ್ತಾನೆ. ಈ ಜಲದ ಸ್ನಾನಪಾನಾದಿಗಳಿಂದ ಜನರು ಪಾಪಗಳಿಂದ ಬಿಡಲ್ಪಡುತ್ತಾರೆ. ಈ ಪ್ರಕಾರ ಸೂರ್ಯನು ನಾನಾವಿಧವಾಗಿ ಲೋಕವನ್ನು ಕಾಪಾಡುತ್ತಾನೆ. ಮೇಘಗಳಿಂದ ಬಿಡಲ್ಪಟ್ಟ ಜಲದಿಂದ, ಪ್ರಾಣಿಗಳ ಜೀವನಾರ್ಥವಾಗಿ, ಓಷಧಿಗಳು ಹುಟ್ಟುತ್ತವೆ. ಶಾಸ್ತ್ರಗಳೇ ದೃಷ್ಟಿಯಾಗಿ ಉಳ್ಳ ಬ್ರಾಹ್ಮಣರು, ಧ್ಯಾನಗಳಿಂದ ಪ್ರತಿದಿನವೂ ಯಜ್ಞಾದಿಕರ್ಮಗಳನ್ನು ಮಾಡಿ, ದೇವತೆಗಳನ್ನು ಸಂತೋಷಪಡಿಸುತ್ತಾರೆ. ಹೀಗೆ ಯಜ್ಞಗಳೂ, ವೇದಗಳೂ, ಬ್ರಾಹ್ಮಣಾದಿಗಳೂ, ದೇವತೆಗಳೂ, ಪಶುಪಕ್ಷಿಮೃಗಗಳೂ ಸಹ ವೃಷ್ಟಿಯ ಆಧಾರವುಳ್ಳವರಾಗಿದ್ದಾರೆ. ವೃಷ್ಟಿಗೆ ಸೂರ್ಯನು ಆಧಾರನಾದವನು. ಸೂರ್ಯನಿಗೆ ಧ್ರುವನೂ, ಧ್ರುವನಿಗೆ ಶಿಂಶುಮಾರವೂ, ಶಿಂಶುಮಾರಕ್ಕೆ ಶ್ರೀಮನ್ನಾರಾಯಣನೂ ಆಶ್ರಯರಾಗಿರುವರು. ಆದಿಭೂತನಾಗಿಯೂ, ಸನಾತನನಾಗಿಯೂ, ಸರ್ವಭೂತಾಧಿಪತಿಯಾಗಿಯೂ ಇರುವ ಶ್ರೀಮನ್ನಾರಾಯಣನು ಶಿಂಶುಮಾರದ ಹೃದಯದಲ್ಲಿ ವಾಸವಾಗಿರುತ್ತಾನೆ."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಒಂಬತ್ತನೆಯ ಅಧ್ಯಾಯವು ಸಮಾಪ್ತಃ

ಹತ್ತನೆಯ ಅಧ್ಯಾಯವು

"ಉತ್ತರಾಯಣ, ದಕ್ಷಿಣಾಯನ ಮಧ್ಯಸ್ಥವಾದ ಪ್ರದೇಶವು, ಎಂಟುನೂರ ಮೂರು ಮಂಡಲಗಳಾಗಿ ಭಾಗಿಸಲ್ಪಟ್ಟಿದೆ. ಈ ಮಂಡಲಗಳಲ್ಲಿ ಸೂರ್ಯನು ಒಂದು ವರ್ಷದಲ್ಲಿ ಹತ್ತುವುದು, ಇಳಿಯುವುದು ಈ ಪ್ರಕಾರ ಸಂಚರಿಸುವನು.

ಆರೋಹಣವು ಉತ್ತರಾಯಣವೆಂತಲೂ, ಅವರೋಹಣವು ದಕ್ಷಿಣಾಯನವೆಂತಲೂ ಹೇಳಿರುತ್ತದೆ. ಸೂರ್ಯನ ರಥವು ದೇವತೆಗಳಿಂದಲೂ, ಋಷಿಗಳಿಂದಲೂ, ಗಂಧರ್ವರಿಂದಲೂ, ಅಪ್ಸರಸ್ತ್ರೀಯರಿಂದಲೂ, ಯಕ್ಷರಿಂದಲೂ, ಸರ್ಪಗಳಿಂದಲೂ, ರಾಕ್ಷಸರಿಂದಲೂ ಸಹ ಕೂಡಿರುವುದು. ಮಧುನಾಮಕವಾದ ಚೈತ್ರಮಾಸದಲ್ಲಿ, ಧಾತಾನಾಮಕನಾದ ಸೂರ್ಯನೂ, ಕೃತಸ್ಥಲಾ ಎಂಬ ಅಪ್ಸರಸ್ತ್ರೀಯೂ, ಪುಲಸ್ತ್ಯಬ್ರಹ್ಮನೂ, ವಾಸುಕಿಯೂ, ರಥಭೃತ್ ಎಂಬ ಯಕ್ಷನೂ, ಹೇತಿ ಎಂಬ ರಾಕ್ಷಸನೂ, ಈ ಏಳು ಜನಗಳು ವಾಸಮಾಡುತ್ತಾರೆ. ಇವರು ಮಾಸಾಧಿಕಾರಿಗಳು. ಮಾಧವನಾಮಕನಾದ, ವೈಶಾಖಮಾಸದಲ್ಲಿ ಅರ್ಯಮಾನಾಮಕನಾದ ಸೂರ್ಯನೂ, ಪುಲಹಬ್ರಹ್ಮನೂ, ರಥೌಜಾನಾಮಕನಾದ ಯಕ್ಷನೂ, ಪುಂಜಿಕಸ್ಥಲಾ ಎಂಬ ಅಪ್ಸರಸ್ತ್ರೀಯೂ, ಪ್ರಹೇತಿ ಎಂಬ ರಾಕ್ಷಸನೂ, ಕಚ್ಛವೀರನೆಂಬ ಸರ್ಪವೂ, ನಾರದನೂ ಸಹ ಮಾಸಾಧಿಕಾರಿಗಳು. ಶುಕ್ರನಾಮಕವಾದ ಜ್ಯೇಷ್ಠಮಾಸಕ್ಕೆ ಮಿತ್ರನೆಂಬ ಸೂರ್ಯನೂ, ಅತ್ರಿಋಷಿಯೂ, ತಕ್ಷಕನೆಂಬ ಸರ್ಪವೂ, ಪೌರುಷೇಯನೆಂಬ ರಾಕ್ಷಸನೂ, ಮೇನಕಾ ಎಂಬ ಅಪ್ಸರಸ್ತ್ರೀಯೂ, ರಥಸ್ವನ ಎಂಬ ಯಕ್ಷನೂ ಸಹ ಮಾಸಾಧಿಕಾರಿಗಳಾಗಿ ರಥದಲ್ಲಿ ವಾಸಮಾಡುತ್ತಾರೆ. ಶುಚಿನಾಮಕವಾದ ಆಷಾಢಮಾಸದಲ್ಲಿ ವರುಣನಾಮಕನಾದ ಸೂರ್ಯನೂ, ವಸಿಷ್ಠಋಷಿಯೂ, ರಂಭಾನಾಮಕಳಾದ ಅಪ್ಸರೆಯೂ (ಸಹಜನ್ಯಯೆಂಬುದಾಗಿಯೂ ಸಹ ಹೇಳಲ್ಪಡುತ್ತಾಳೆ), ಹೂ ಹೂ ಎಂಬ ಸರ್ಪವೂ, ರಥನೆಂಬ ರಾಕ್ಷಸನೂ, ಚಿತ್ರನೆಂಬ ಯಕ್ಷನೂ ಮಾಸಾಧಿಕಾರಿಗಳು. ನಭನಾಮಕವಾದ ಶ್ರಾವಣಮಾಸಕ್ಕೆ ಇಂದ್ರನಾಮಕನಾದ ಸೂರ್ಯನೂ, ವಿಶ್ವಾವಸುವೆಂಬ ಯಕ್ಷನೂ, ಸ್ರೋತಾನಾಮಕವಾದ ಸರ್ಪವೂ, ಏಲಾಪುತ್ರನೆಂಬ ರಾಕ್ಷಸನೂ, ಅಂಗೀರಸಋಷಿಯೂ, ಪ್ರಮ್ಲೋಚಾ ಎಂಬ ಅಪ್ಸರೆಯೂ ಮಾಸಾಧಿಕಾರಿಗಳು. ನಭಸ್ಯನಾಮಕವಾದ ಭಾದ್ರಪದಮಾಸಕ್ಕೆ ವಿವಸ್ವಾನ್ ನಾಮಕನಾದ ಸೂರ್ಯನೂ, ಉಗ್ರಸೇನನೆಂಬ ಗಂಧರ್ವನೂ, ಭೃಗುಋಷಿಯೂ, ಆಪೂರಣನೆಂಬ ಯಕ್ಷನೂ, ಅನುಮ್ಲೋಚಾ ಎಂಬ ಅಪ್ಸರೆಯೂ, ಶಂಖಪಾಲನೆಂಬ ಸರ್ಪವೂ, ವ್ಯಾಘ್ರನೆಂಬ ರಾಕ್ಷಸನೂ ಮಾಸಾಧಿಕಾರಿಗಳು. ಇಷನಾಮಕವಾದ ಆಶ್ವೀಜಮಾಸಕ್ಕೆ ಪೂಷಾನಾಮಕನಾದ ಸೂರ್ಯನೂ, ವಸುರುಚಿಯೆಂಬ ಗಂಧರ್ವನೂ, ವಾತನೆಂಬ ರಾಕ್ಷಸನೂ, ಗೌತಮಋಷಿಯೂ, ಧನಂಜಯನೆಂಬ ಸರ್ಪವೂ, ಸುಷೇಣನೆಂಬ ಯಕ್ಷನೂ, ಘೃತಾಚೀ ಎಂಬ ಅಪ್ಸರೆಯೂ, ಮಾಸಾಧಿಕಾರಿಗಳು. ಊರ್ಜನಾಮಕವಾದ ಕಾರ್ತೀಕಮಾಸಕ್ಕೆ ಪರ್ಜ್ಯನ್ಯನಾಮಕನಾದ ಸೂರ್ಯನೂ, ವಿಶ್ವಾವಸುವೆಂಬ ಗಂಧರ್ವನೂ, ಭರದ್ವಾಜಋಷಿಯೂ, ಐರಾವತ

ನೆಂಬ ಸರ್ಪವೂ, ವಿಶ್ವಾಚೀ ಎಂಬ ಅಪ್ಸರೆಯೂ, ಸೇನಜಿತ್ ಎಂಬ ಯಕ್ಷನೂ, ಚಾಪನೆಂಬ ರಾಕ್ಷಸನೂ ಮಾಸಾಧಿಕಾರಿಗಳು. ಸಹನಾಮಕವಾದ ಮಾರ್ಗಶಿರ ಮಾಸಕ್ಕೆ ಅಂಶನೆಂಬ ಸೂರ್ಯನೂ, ತಾರ್ಕ್ಷ್ಯನೆಂಬ ಯಕ್ಷನೂ, ಮಹಾ ಪದ್ಮನೆಂಬ ಸರ್ಪವೂ, ಚಿತ್ರಸೇನನೆಂಬ ಗಂಧರ್ವನೂ, ವಿದ್ಯುತ್ ಎಂಬ ರಾಕ್ಷಸನೂ, ಕಾಶ್ಯಪ ಋಷಿಯೂ, ಊರ್ವಶೀಯೆಂಬ ಅಪ್ಸರೆಯೂ ಮಾಸಾಧಿಪತಿಗಳು. ಸಹಸ್ಯನಾಮಕವಾದ ಪುಷ್ಯಮಾಸಕ್ಕೆ ಭಗನಾಮಕ ನಾದ ಸೂರ್ಯನೂ, ಕ್ರತುಋಷಿಯೂ, ಊರ್ಣಾಯುವೆಂಬ ಗಂಧರ್ವನೂ, ಸ್ಫೂರ್ಜನೆಂಬ ರಾಕ್ಷಸನೂ, ಕರ್ಕೋಟಕವೆಂಬ ಸರ್ಪವೂ, ಅರಿಷ್ಟನೇಮಿಯೆಂಬ ಯಕ್ಷನೂ, ಪೂರ್ವಚಿತ್ತಿಯೆಂಬ ಅಪ್ಸರೆಯೂ ಮಾಸಾಧಿಕಾರಿಗಳು. ತಪೋಮಾಸ ನಾಮಕವಾದ ಮಾಘಮಾಸಕ್ಕೆ ತ್ವಷ್ಟಾನಾಮಕನಾದ ಸೂರ್ಯನೂ, ಜಮದಗ್ನಿ ಋಷಿಯೂ, ಕಂಬಳನೆಂಬ ಸರ್ಪವೂ, ತಿಲೋತ್ತಮಾಯೆಂಬ ಅಪ್ಸರೆಯೂ, ಬ್ರಹ್ಮೋಪೇತನೆಂಬ ರಾಕ್ಷಸನೂ, ಋತಜಿತ್ತೆಂಬ ಯಕ್ಷನೂ, ಧೃತರಾಷ್ಟ್ರನೆಂಬ ಗಂಧರ್ವನೂ ಮಾಸಾಧಿಪತಿಗಳು. ತಪಸ್ಯಮಾಸವೆಂಬ ಫಾಲ್ಗುಣಮಾಸಕ್ಕೆ ವಿಷ್ಣುವೆಂಬ ಸೂರ್ಯನೂ, ಅಶ್ವತರನೆಂಬ ಸರ್ಪವೂ, ಸೂರ್ಯವರ್ಚಾ ಎಂಬ ಗಂಧರ್ವನೂ, ಸತ್ಯಜಿತ್ತೆಂಬ ಯಕ್ಷನೂ, ಯಜ್ಞೋಪೇತನೆಂಬ ರಾಕ್ಷಸನೂ, ರಂಭಾಯೆಂಬ ಅಪ್ಸರಸ್ತ್ರೀಯೂ, ವಿಶ್ವಾಮಿತ್ರಋಷಿಯೂ ಮಾಸಾಧಿಪತಿಗಳು. ಈ ಪ್ರಕಾರ ಸೂರ್ಯಮಂಡಲದಲ್ಲಿ ವಿಷ್ಣುಶಕ್ತಿಯುಕ್ತರಾಗಿ ಸೂರ್ಯನನ್ನು ಋಷಿ ಗಳು ಸ್ತೋತ್ರಮಾಡುತ್ತಾರೆ. ಗಂಧರ್ವರು ಗಾನಮಾಡುತ್ತಾರೆ. ಅಪ್ಸರ ಸ್ತ್ರೀಯರುಗಳು ನರ್ತನಮಾಡುತ್ತಾರೆ. ರಾಕ್ಷಸರು ಅನುಚರರಾಗಿರುತ್ತಾರೆ. ಸರ್ಪಗಳು ಹೊರುತ್ತವೆ. ಯಕ್ಷರು ಕುದುರೆಗಳನ್ನು ಕಟ್ಟುತ್ತಾರೆ. ಈ ಪ್ರಕಾರ ಮಾಸಾಧಿಕಾರಿಗಳಲ್ಲದೆ ಇನ್ನೂ ಅನೇಕರಾದ ವಾಲಖಿಲ್ಯಾದಿ ಮಹರ್ಷಿಗಳು ಸೂರ್ಯನ ಸುತ್ತಲೂ ಲೋಕಪ್ರಕಾಶನಾರ್ಥವಾಗಿ ಉಪಾಸನೆ ಮಾಡುತ್ತಾರೆ. ಸಪ್ತಗಣಯುಕ್ತನಾದ ಸೂರ್ಯನು ಆಯಾಯಾ ಕಾಲಗಳಲ್ಲಿ ಹಿಮ, ಉಷ್ಣ, ಜಲ, ವೃಷ್ಟಿ ಇವುಗಳಿಗೆ ಕಾರಣನಾಗಿರುತ್ತಾನೆ."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಹತ್ತನೆಯ ಅಧ್ಯಾಯವು ಸಮಾಪ್ತಃ

ಹನ್ನೊಂದನೆಯ ಅಧ್ಯಾಯವು

ಮೈತ್ರೇಯಮಹರ್ಷಿಯು ಪುನಃ ಪ್ರಶ್ನೆಮಾಡುತ್ತಾರೆ: "ಓ ಪರಾಶರನೇ, ಸೂರ್ಯಮಂಡಲದಲ್ಲಿರುವ ಸಪ್ತಗಣಗಳನ್ನೂ, ಹಿಮ, ವಾರಿ, ಉಷ್ಣ ಇವುಗಳ

ಕಾರಣವನ್ನೂ, ಗಂಧರ್ವ, ಉರಗ, ರಾಕ್ಷಸ, ಋಷಿ ಇವರುಗಳ ವ್ಯಾಪಾರವನ್ನೂ ಸಹ ನೀನು ತಿಳಿಸಿದೆ. ಆದರೆ ಸೂರ್ಯನು ಮಾಡತಕ್ಕ ಕೆಲಸವನ್ನು ಹೇಳಲಿಲ್ಲ. ಸಪ್ತಗಣಗಳಿಂದ ವೃಷ್ಟಿಯು ವರ್ಷಿಸಿದಾಗ್ಯೂ, ಸೂರ್ಯನಿಂದ ವರ್ಷಿಸಿತೆಂಬ ಪ್ರತೀತಿಯುಂಟಾಗಲು ಕಾರಣವೇನು?" ಎಂದು ಕೇಳಲು, ಅದಕ್ಕೆ ಪರಾಶರ ಮಹರ್ಷಿಗಳು ಹೇಳುತ್ತಾರೆ: "ಎಲೈ ಮೈತ್ರೇಯನೇ, ಸೂರ್ಯನ ರಥದಲ್ಲಿ ಸಪ್ತ ಗಣಗಳಿದ್ದಾಗ್ಯೂ, ಸೂರ್ಯನೇ ಪ್ರಧಾನಾಧಿಕನಾದವನು. ಸೂರ್ಯನು ವಿಷ್ಣುಶಕ್ತಿ ಯಿಂದ ಕೂಡಿದವನಾಗಿಯೂ, ಋಗ್ಯಜುಸ್ಸಾಮರೂಪಿಯಾಗಿಯೂ ಜಗದ್ವ್ಯಾಪಾರವನ್ನು ನಡೆಸುತ್ತಾನೆ. ಸೂರ್ಯನು ಮಾಸಮಾಸಗಳಲ್ಲಿ ಮಾಡತಕ್ಕ ಶಕ್ತಿ ಯೆಲ್ಲವೂ, ಶ್ರೀ ಮಹಾವಿಷ್ಣುವಿನ ಸಂಬಂಧದಿಂದಲೇ ನಡೆಯುವುದು. ಸೂರ್ಯಾಂತರ್ವರ್ತಿಯಾದ ಪರಮಾತ್ಮನನ್ನು ಪೂರ್ವಾಹ್ಣದಲ್ಲಿ ಋಗ್ವೇದವೂ, ಮಧ್ಯಾಹ್ನದಲ್ಲಿ ಯಜುರ್ವೇದವೂ, ಸಾಯಾಹ್ನದಲ್ಲಿ ಸಾಮವೇದವೂ ಸ್ತೋತ್ರ ಮಾಡುತ್ತವೆ. ಆತನಿಗೆ ವೇದಗಳೇ ಅಂಗವಾಗಿರುತ್ತವೆ. ಪರಮಾತ್ಮನ ಶಕ್ತಿಯು ಸೂರ್ಯನಲ್ಲಿದ್ದುಕೊಂಡು ಸೂರ್ಯನನ್ನು ವ್ಯಾಪಾರಾದ್ಯವಸ್ಥೆಯನ್ನು ಹೊಂದು ವಂತೆ ಮಾಡುತ್ತದೆ. ಬ್ರಹ್ಮ, ರುದ್ರ, ವಿಷ್ಣು ಇವರುಗಳೂ ತ್ರಯೀಮಯರಾದ ವರು. ಬ್ರಹ್ಮನು ಸೃಷ್ಟಿಮಾಡತಕ್ಕ ಕಾಲದಲ್ಲಿ ಋಗ್ವೇದಮಯನಾಗಿಯೂ, ವಿಷ್ಣುವು ಪಾಲನೆಯನ್ನು ಮಾಡುವ ಕಾಲದಲ್ಲಿ ಯಜುರ್ವೇದಮಯನಾಗಿಯೂ, ರುದ್ರನು ಸಂಹಾರಕಾಲದಲ್ಲಿ ಸಾಮಮಯನಾಗಿಯೂ ಇರುವನು. ಈ ಪ್ರಕಾರ ಸಾತ್ವಿಕವಾದ ವಿಷ್ಣುಶಕ್ತಿಯು ಸೂರ್ಯನನ್ನು ಪ್ರಕಾಶಪಡಿಸುತ್ತದೆ. ವಿಷ್ಣು ಶಕ್ತಿಯಿಂದ ಕೂಡಿದ ಸೂರ್ಯನು ಜಗತ್ತಿನ ಕತ್ತಲೆಯನ್ನು ನಾಶಮಾಡುತ್ತಾನೆ. ಆದುದರಿಂದಲೇ ಸೂರ್ಯನನ್ನು ದೇವ, ಗಂಧರ್ವ, ನಾಗ, ಯಕ್ಷ, ಋಷಿ, ಅಪ್ಸರಸ್ತ್ರೀಯರು ಸೇವಿಸುತ್ತಾರೆ. ವಿಷ್ಣ್ವಂತರ್ಯಾಮಿಯಾದ ಸೂರ್ಯನು ಪಿತೃ, ದೇವ, ಮನುಷ್ಯಾದಿಗಳನ್ನು ಪ್ರೀತಿಸುತ್ತಾ ಅಹೋರಾತ್ರಿಗಳಿಗೆ ಕಾರಣನಾಗಿರು ವನು. ಚಂದ್ರನು ಶುಕ್ಲಪ್ರತಿಪದಾದಿ ಹದಿನೈದು ದಿನಗಳಲ್ಲಿ ಸೂರ್ಯರಶ್ಮಿಯಿಂದ ಅಮೃತಮಯವಾದ ಕಲೆಗಳನ್ನು ಪಾನಮಾಡುತ್ತಾನೆ. ಈ ಅಮೃತಕಲೆಗಳು ಕೃಷ್ಣಪಕ್ಷದಲ್ಲಿ ದೇವತೆಗಳಿಂದ ಪಾನಮಾಡಲ್ಪಡುತ್ತವೆ. ಆದುದರಿಂದ ಕೃಷ್ಣಪಕ್ಷ ದಲ್ಲಿ ಕಲಾಹೀನನಾಗುವನು. ಪಿತೃದೇವತೆಗಳಿಗೆ ಚಂದ್ರನಿಂದ ಪಾನಮಾಡಲು ಸಿಕ್ಕುವುದಿಲ್ಲವಾದುದರಿಂದ, ಅವರು ಸೂರ್ಯನಿಂದ ತರ್ಪಣವನ್ನು ಹೊಂದುತ್ತಾರೆ. ಹೀಗಿರುವುದರಿಂದ, ಅಮಾವಾದಸೇ ಪಿತೃಗಳಿಗೆ ತರ್ಪಣವನ್ನು ಮಾಡತಕ್ಕದ್ದು ಅವಶ್ಯಕವಾಗಿರುತ್ತದೆ. ಸೂರ್ಯನು ಕಿರಣಗಳಿಂದ ಭೂಮಿಯಲ್ಲಿರತಕ್ಕ ಜಲವನ್ನು ಪಾನಮಾಡಿ ಪುನಃ ಜನಗಳ ಪುಷ್ಟಿಗೋಸ್ಕರ, ಸಸ್ಯಾಭಿವೃದ್ಧಿಗಾಗಿ ವರ್ಷಿಸು

ತ್ತಾನೆ. ಇದರಿಂದ ಸಕಲ ಪ್ರಾಣಿಗಳೂ ತೃಪ್ತಿಹೊಂದುತ್ತವೆ. ಸೂರ್ಯನು ದೇವತೆಗಳಿಗೆ ಹದಿನೈದು ದಿವಸಕ್ಕೊಂದಾವರ್ತಿಯೂ, ಪಿತೃಗಳಿಗೆ ಮಾಸಕ್ಕೊಂದಾವರ್ತಿಯೂ, ಮನುಷ್ಯರಿಗೆ ಪ್ರತ್ಯಹಸ್ಸಿನಲ್ಲಿಯೂ ಸಹ ತೃಪ್ತಿಯನ್ನು ಉಂಟುಮಾಡುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಹನ್ನೊಂದನೆಯ ಅಧ್ಯಾಯವು ಸಮಾಪ್ತಃ

ಹನ್ನೆರಡನೆಯ ಅಧ್ಯಾಯವು

ಚಂದ್ರನು, ಮೂರು ಚಕ್ರಗಳು ಹತ್ತು ಬಿಳೀ ಕುದುರೆಗಳು ಇರುವ ರಥದಲ್ಲಿ ಸಂಚರಿಸುತ್ತಾನೆ. ಸೂರ್ಯನಿಗೆ ಯಾವ ಪ್ರಕಾರ ಹ್ರಾಸವೃದ್ಧಿಗಳುಂಟಾಗುವುವೊ, ಅದೇ ಪ್ರಕಾರ ಚಂದ್ರನಿಗೂ ಉಂಟಾಗುವುವು. ಚಂದ್ರನ ಕಲೆಗಳನ್ನು ಹದಿನೈದು ದಿನಗಳಲ್ಲಿ ದೇವತೆಗಳು ಪಾನಮಾಡಿದರು. ಇನ್ನೊಂದು ಕಲೆಯು ಉಳಿದುದನ್ನು ಮಾತ್ರ, ಸೂರ್ಯನು ಸುಷುಮ್ನಾ ಎಂಬ ಕಿರಣದಿಂದ, ದೇವತೆಗಳಿಂದ ಪಾನಮಾಡಿದ ಕಲೆಗಳನ್ನು, ಪ್ರತಿದಿನವೂ ವೃದ್ಧಿಪಡಿಸುತ್ತಾನೆ. ದೇವತೆಗಳಿಗೆ ಅಮೃತವೇ ಆಹಾರವಾದುದರಿಂದ, ಅಮೃತಮಯವಾದ ಚಂದ್ರನ ಕಲೆಗಳನ್ನು ಆಹಾರಾರ್ಥವಾಗಿ ಸೇವಿಸುತ್ತಾರೆ. ಕಲಾಹೀನನಾದ ಚಂದ್ರನು, ಎರಡು ಕಲೆಗಳಿಂದ ಮಾತ್ರ ಉಳಿದವನಾಗಿ, ಸೂರ್ಯಮಂಡಲವನ್ನು ಪ್ರವೇಶಿಸಿ, ಅಮಾ ಎಂಬ ಸೂರ್ಯನ ಕಿರಣದಲ್ಲಿ ವಾಸಮಾಡುತ್ತಾನೆ. ಆದುದರಿಂದ ಅಮಾವಾಸ್ಯಾ ಎಂಬುದಾಗಿ ಹೆಸರುಂಟಾಯಿತು. ಚಂದ್ರನು ಅಮಾವಾಸ್ಯೆಯ ದಿನ ಅಹೋರಾತ್ರಿಗಳಲ್ಲಿ ನೀರನ್ನು ಪ್ರವೇಶಮಾಡಿ, ಮಾರನೆಯ ದಿವಸ ವೀರತ್ಸನಾಮಕವಾದ, ಗುಂಪಾದ ಬಳ್ಳಿಯನ್ನು ಪ್ರವೇಶಿಸುತ್ತಾನೆ. ಇದಕ್ಕೆ ಸೋಮಲತೆ ಎಂಬ ಹೆಸರುಂಟಾಗಿದೆ. ಸೋಮಲತೆಯಲ್ಲಿ ಚಂದ್ರನಿರುವಾಗ, ಆ ಲತೆಯಲ್ಲಿ ಒಂದೆಲೆಯನ್ನು ಕಿತ್ತರೂ, ಅವರಿಗೆ ಬ್ರಹ್ಮಹತ್ಯದೋಷವು ಪ್ರಾಪ್ತವಾಗುತ್ತದೆ. ಚಂದ್ರನು ಸೂರ್ಯಕಿರಣಗಳಿಂದ ದಿನೇದಿನೇ ಶುಕ್ಲಪಕ್ಷದಲ್ಲಿ ವೃದ್ಧಿಯಾಗಿ, ಸಸ್ಯ, ಮನುಷ್ಯ, ಪಶುಪಕ್ಷಿಗಳನ್ನು ಆಹ್ಲಾದಾದಿಗಳಿಂದ ಪೋಷಿಸುತ್ತಾನೆ. ಚಂದ್ರನ ಮಗನಾದ ಬುಧನು, ಹೊಂಬಣ್ಣವಾದ, ಎಂಟು ಕುದುರೆಗಳಿಂದ ಕೂಡಿದ, ವಾಯು, ಅಗ್ನಿಗಳಿಂದ ಉತ್ಪತ್ತಿಯಾದ ರಥದಲ್ಲಿ ಸಂಚರಿಸುವನು. ಇದೇ ಪ್ರಕಾರ ನವಗ್ರಹಗಳು ಧ್ರುವನ ಪಾಶಾನುಸಾರ ಸಂಚರಿಸುತ್ತಾರೆ. ಎಷ್ಟು ನಕ್ಷತ್ರಗಳಿವೆಯೋ ಅಷ್ಟು ಪಾಶಗಳಿಂದ ಧ್ರುವನು ಉಚಿತ ಕಾಲಭಾರದಿಂದ ಚರಿಸಲ್ಪಡುತ್ತಾನೆ. ಈ ಪ್ರಕಾರ ನಿನಗೆ ಸಕಲ ಭೂಮಂಡಲ, ಜ್ಯೋತಿರ್ಮಂಡಲ

ಗಳ ವಿಷಯಗಳನ್ನು ಸಂಕ್ಷೇಪವಾಗಿ ಹೇಳಿದೆನು. ಭೂಮಿಯು ಭಗವದಂಶದಿಂದ ಪದ್ಮಾಕಾರವಾಗಿರುವುದು. ಜ್ಯೋತಿರ್ಮಂಡಲವೇ ಶ್ರೀಮಹಾವಿಷ್ಣುವು. ಸಕಲ ಭುವನಗಳೂ ವಿಷ್ಣುಸ್ವರೂಪವು. ಗಿರಿಗಳೂ, ನದಿಗಳೂ, ಸಮುದ್ರಗಳೂ ಸಹ ಶ್ರೀಮನ್ನಾರಾಯಣನ ಸ್ವರೂಪವಾದವುಗಳು. ಭಗವಂತನಾದ ಶ್ರೀಮನ್ನಾರಾಯಣನು ಜ್ಞಾನಸ್ವರೂಪನಾಗಿರುವನು ಎಂಬುದಾಗಿ ತಿಳಿ. ಅಣುವಾಗಿಯೂ, ಸೂಕ್ಷ್ಮನಾಗಿಯೂ, ಮಹತ್ತಾಗಿಯೂ, ಆದಿಮಧ್ಯಾಂತರಹಿತನಾಗಿಯೂ, ಸದೈಕರೂಪನಾಗಿಯೂ ಇರುವ ಶ್ರೀ ವಾಸುದೇವನ ಹೊರತಾಗಿ, ಇನ್ನಾವ ವಸ್ತುವೂ ಇಲ್ಲ. ಸರ್ವವೂ ವಾಸುದೇವಮಯವಾದುದು. ಎಲೈ ಮೈತ್ರೇಯನೇ, ನೀನು ಕೇಳಿದ ಪ್ರಕಾರ ಸಕಲಭುವನ ವೃತ್ತಾಂತವನ್ನೂ ನಿನಗೆ ತಿಳಿಸಿದೆನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಹನ್ನೆರಡನೆಯ ಅಧ್ಯಾಯವು ಸಮಾಪ್ತಃ
ಭುವನಕೋಶಸ್ಸಮಾಪ್ತಃ

ಹದಿಮೂರನೆಯ ಅಧ್ಯಾಯವು

ಮೈತ್ರೇಯರು ಪುನಃ ಕೇಳುತ್ತಾರೆ: "ಪರಾಶರ ಮಹರ್ಷಿಗಳೇ, ನಾನು ಕೇಳಿದ ಭೂಮಿ, ನದಿ, ಗ್ರಹಗಳ ಸ್ಥಾನಪ್ರಮಾಣಾದಿಗಳೆಲ್ಲವನ್ನೂ ನಿಮ್ಮಿಂದ ಕೇಳಿದ ಹಾಗಾಯಿತು. ನೀವು ಹಿಂದೆ ಭರತನ ವಿಷಯವನ್ನು ಹೇಳುತ್ತೇನೆಂದು ಆಜ್ಞಾಪಿಸಿದ ಪ್ರಕಾರ, ಭರತನ ಚರಿತ್ರೆಯನ್ನು ಕೇಳಲಪೇಕ್ಷೆಯುಳ್ಳ ನನಗೆ, ಅನುಗ್ರಹಿಸಬೇಕೆಂಬುದಾಗಿ" ಪ್ರಾರ್ಥಿಸಲು, ದಯಾರಸವಿಶಿಷ್ಟರಾದ ಪರಾಶರ ಮಹರ್ಷಿಗಳು ಹೇಳುತ್ತಾರೆ: "ಎಲೈ ಮೈತ್ರೇಯನೇ, ಕೇಳು, ಭರತರಾಜನು ಸಾಲಗ್ರಾಮವೆಂಬ ಪುಣ್ಯಸ್ಥಳದಲ್ಲಿ, ಭಗವಂತನಾದ ಶ್ರೀಮನ್ನಾರಾಯಣನಲ್ಲಿ ದೃಢಮನಸ್ಕನಾಗಿ, ಬಹುಕಾಲ ವಾಸಮಾಡಿಕೊಂಡು, ಅಹಿಂಸಾ ಮೊದಲಾದ ಗುಣಗಳಿಗೆ ಆಶ್ರಯನಾಗಿ, ಭಗವಂತನಲ್ಲಿ ಪರಾಕಾಷ್ಠೆಯುಳ್ಳ ಭಕ್ತಿಯಿಂದ, ಯಜ್ಞೇಶನೇ, ಅಚ್ಯುತನೇ, ಗೋವಿಂದನೇ, ಮಾಧವನೇ, ಅನಂತನೇ, ಕೇಶವನೇ, ಕೃಷ್ಣನೇ, ವಿಷ್ಣುವೇ, ಹೃಷೀಕೇಶನೇ, ವಾಸುದೇವನೇ, ನಿನಗೆ ನಮಸ್ಕಾರವಾಗಲಿ. ಈ ಪ್ರಕಾರ ಭಗವನ್ನಾಮಸಂಕೀರ್ತನೆಯನ್ನು ಮಾಡುತ್ತಾ, ನಿರಂತರವೂ ಭಗವತ್ಸಂಬಂಧವಾದ ಕೆಲಸಗಳನ್ನೇ ಮಾಡುತ್ತಾ, ಯೋಗನಿಷ್ಠನಾಗಿದ್ದನು. ಈ ಭರತನು ಒಂದಾನೊಂದು ದಿವಸ ಸ್ನಾನಾರ್ಥವಾಗಿ ಮಹಾನದಿಗೆ ಹೋಗಿ, ಸ್ನಾನವನ್ನು ಮಾಡಿ, ನಿತ್ಯಕರ್ಮಗಳನ್ನು ಮಾಡುತ್ತಿರುವ

ಕಾಲದಲ್ಲಿ, ಪೂರ್ಣಗರ್ಭವನ್ನು ಧರಿಸಿದ ಜಿಂಕೆಯು, ನೀರನ್ನು ಕುಡಿಯುವುದಕ್ಕಾಗಿ, ಭರತನಿದ್ದ ಸ್ಥಳಕ್ಕೆ ಬಂದು ನೀರನ್ನು ಕುಡಿದು, ಹಿಂತಿರುಗಿದ ಕಾಲದಲ್ಲಿ, ಸಿಂಹದ ನಾದವನ್ನು ಕೇಳಿ ಹೆದರಿ ಗಾಬರಿಯಿಂದ ಓಡಲುಪಕ್ರಮಿಸಿದ ಕಾಲದಲ್ಲಿ, ಗರ್ಭವು ಜಲದಲ್ಲಿ ಬಿದ್ದಿತು. ಜಿಂಕೆಯ ಮರಿಯನ್ನು ಭರತನು ಕಂಡು ಕನಿಕರದಿಂದ ಎತ್ತಿಕೊಂಡನು. ಅಷ್ಟರೊಳಗೆ ಅದರ ತಾಯಿಯು ಕೆಳಗೆ ಬಿದ್ದು ಸತ್ತುಹೋಯಿತು. ತಬ್ಬಲಿಯಾದ ಆ ಜಿಂಕೆಯ ಮರಿಯನ್ನು ತನ್ನ ಆಶ್ರಮಕ್ಕೆ ತಂದು, ಪ್ರತಿದಿನವೂ ಪೋಷಣೆ ಮಾಡುತ್ತಿದ್ದನು. ಅದು ಭರತನಾದ ರಾಜರ್ಷಿಯಿಂದ ಪೋಷಿಸಲ್ಪಟ್ಟು, ಆಶ್ರಮದ ಸುತ್ತಲೂ ಸಂಚರಿಸಿ ಹುಲ್ಲನ್ನು ಮೇಯುತ್ತಿತ್ತು, ಆಶ್ರಮದಿಂದ ಸ್ವಲ್ಪ ದೂರ ಹೋಗಿ ಹುಲಿಗಳ ಭಯದಿಂದ ಪುನಃ ಆಶ್ರಮಕ್ಕೆ ಬರುತ್ತಾ ಆತನಿಗೆ ಸಂತೋಷವನ್ನುಂಟುಮಾಡುತ್ತಿತ್ತು. ರಾಜ್ಯಭೋಗಗಳನ್ನೂ, ಇಷ್ಟಬಾಂಧವರನ್ನೂ ತ್ಯಜಿಸಿ ಯೋಗಾಸಕ್ತನಾಗಿದ್ದ ಈ ಭರತನಿಗೆ, ಜಿಂಕೆಯ ಮರಿಯಲ್ಲಿ ಪ್ರೀತಿಯು ಹೆಚ್ಚುತ್ತಾ, ಮರಿಯನ್ನು ಕಾಣದಿರುವಾಗ, ತನ್ನ ಜಿಂಕೆಯ ಮರಿಯನ್ನು ವ್ಯಾಘ್ರಸಿಂಹಾದಿಗಳು ಎಲ್ಲಿ ತಿಂದುಬಿಟ್ಟುವೋ ಎಂಬ ಭ್ರಾಂತಿಯಿಂದ ಯೋಗವನ್ನು ಬಿಟ್ಟು, ಮರಿಯನ್ನು ಹುಡುಕುತ್ತಾ, ತನ್ನ ಮರಿಯು ಕ್ಷೇಮದಿಂದ ಬಂದು, ತನ್ನ ಲಾಲನೆಯನ್ನು ಹೊಂದಿ, ತನಗೆ ಸಂತೋಷವುಂಟುಮಾಡತಕ್ಕದ್ದನ್ನು ಎಂದಿಗೆ ನೋಡುವೆನೆಂಬುದಾಗಿ ಭರತನು ಭ್ರಾಂತನಾಗುತ್ತಿದ್ದನು. ಸದಾ ಮೃಗಾಸಕ್ತನಾದ ಭರತನು, ಮೃಗವನ್ನು ಸ್ಮರಿಸುತ್ತಾ ದೇಹವನ್ನು ಬಿಟ್ಟನು. ಮನುಷ್ಯನು ಮರಣಕಾಲದಲ್ಲಿ ಯಾವ ಆಸೆಯನ್ನು ಹೊಂದಿರುತ್ತಾನೋ ಅದೇ ಆಸೆಯಿಂದಲೇ ಜನ್ಮವುಂಟಾಗುವುದು. ಭರತನಿಗೆ ಪುನಃ ಮೃಗಜನ್ಮವುಂಟಾಗಿ, ಅರಣ್ಯದಲ್ಲಿ ವಾಸಮಾಡುತ್ತಾ, ಸಾಲಗ್ರಾಮ ಪುಣ್ಯಸ್ಥಳವನ್ನು ಹೊಂದಿದನು. ಹೀಗೆ ಕೊಂಚಕಾಲ ವಾಸಮಾಡಿಕೊಂಡು ಮೃಗಜನ್ಮವನ್ನು ಬಿಟ್ಟು, ಸದಾಚಾರನಿಷ್ಠರಾದ ಶುದ್ಧಯೋಗಿಗಳಾದ ಬ್ರಾಹ್ಮಣನಾಗಿ ಹುಟ್ಟಿ, ಗುರುಕುಲದಲ್ಲಿ ವಿದ್ಯಾಭ್ಯಾಸಮಾಡತಕ್ಕ ಕಾಲದಲ್ಲಿ, ಕೇವಲ ಜಡವಾಕ್ಯದಿಂದ ಕೂಡಿದ್ದನು. ಜನಗಳು ಇವನನ್ನು ನೋಡಿ, ಶುದ್ಧ ಜಡಸ್ವಭಾವವುಳ್ಳವನೆಂದು ತಿರಸ್ಕರಿಸುತ್ತಿದ್ದರು. ಭರತನು ಅಂತಃಜ್ಞಾನನಿಷ್ಠನಾಗಿ, ಬಹಿಃ ಹುಚ್ಚನಂತೆ ತಿರುಗುತ್ತಾ, ಸಿಕ್ಕಿದ ಕಡೆಯಲ್ಲಿ ತಿನ್ನುತ್ತಾ ಇದ್ದನು. ಇವನ ತಂದೆಯ ಮರಣಾನಂತರ, ಇವನ ಅಣ್ಣತಮ್ಮಂದಿರು ವ್ಯವಸಾಯದ ಕೆಲಸಕ್ಕೆ ಇವನನ್ನು ನೇಮಿಸಿದರು. ಆ ಕೆಲಸವನ್ನು ಸಹ ವಕ್ರತೆಯಿಂದ ಮಾಡುತ್ತಿದ್ದನು. ಈ ಪ್ರಕಾರ ಜಡಸ್ವಭಾವವುಳ್ಳವನಾಗಿದ್ದ ಈ ಭರತನನ್ನು, ಸೌವೀರರಾಜನ ಸಾರಥಿಯು ಕಾಳಿಕಾದೇವಿಗೆ ಬಲಿಯನ್ನು ಕೊಡ

ಬೇಕೆಂದು ಕರೆದುಕೊಂಡು ಹೋಗಿ ಸಾಯಂಕಾಲದ ಸಮಯದಲ್ಲಿ ಅಲಂಕಾರ ಮಾಡಿ, ದೇವಿಯ ಮುಂದೆ ಮಲಗಿಸಿ, ಕತ್ತಿಯನ್ನು ಎತ್ತಿದ ಕಾಲದಲ್ಲಿ, ಕಾಳಿಕಾ ದೇವಿಯು ಪರಮಯೋಗಿಯಾದ ಭರತನು ಮಲಗಿರುವುದನ್ನು ಕಂಡು, ಜಾಗ್ರತೆ ಯಾಗಿ ಸಾರಥಿಯ ಬಳಿಗೆ ಬಂದು, ಅವನ ಕೈಯಲ್ಲಿದ್ದ ಕತ್ತಿಯನ್ನು ಕಿತ್ತು ಕೊಂಡು, ಸಾರಥಿಯನ್ನೇ ನಾಶಮಾಡಿ, ತನ್ನ ಪರಿವಾರದೊಡನೆ ಕೂಡಿ, ಆ ಧೂರ್ತನ ರಕ್ತವನ್ನು ಪಾನಮಾಡಿದಳು. ಭರತನು ಮಹಾಯೋಗಿಯಾಗಿ, ಹುಚ್ಚನಂತೆ ತಿರುಗುತ್ತಿದ್ದ ಕಾಲದಲ್ಲಿ, ಸೌವೀರರಾಜನು ಧರ್ಮವನ್ನು ಕೇಳು ವುದಕ್ಕೆ, ಕಪಿಲಮಹರ್ಷಿಯ ಆಶ್ರಮಕ್ಕೆ ಹೋಗಬೇಕೆಂದು, ಪಲ್ಲಕ್ಕಿಯನ್ನು ಹೊರತಕ್ಕ ದೂತರಿಗೆ, ಪಲ್ಲಕ್ಕಿಯನ್ನು ತೆಗೆದುಕೊಂಡು ಬರಲು ಆಜ್ಞಾಪಿಸಿದನು. ಪಲ್ಲಕ್ಕಿಯನ್ನು ಹೊರುವುದಕ್ಕೆ ಒಬ್ಬನು ಸಾಲದಿದ್ದುದರಿಂದ, ದೂತರು ಹುಚ್ಚ ನಂತೆ ತಿರುಗುತ್ತಿದ್ದ ಭರತನನ್ನು ಕರೆದುಕೊಂಡು ಹೋದರು. ಆಗ ಸೌವೀರ ರಾಜನು ಪಲ್ಲಕ್ಕಿಯಲ್ಲಿ ಕೂರಲು, ದೂತರು ಪಲ್ಲಕ್ಕಿಯನ್ನು ಹೊತ್ತುಕೊಂಡು ಹೊರಟರು. ಜಡಭರತನು ಪಲ್ಲಕ್ಕಿಯನ್ನು ಹೊತ್ತು ಸ್ವಲ್ಪ ದೂರ ಓಡುವುದೂ, ವಕ್ರವಾಗಿ ನಡೆಯುವುದೂ, ಈ ರೀತಿಯಾಗಿ ಸಂಚರಿಸಿದನು. ಇದನ್ನು ನೋಡಿದ ರಾಜನು, ದೂತರಿಗೆ ಸರಿಯಾಗಿ ನಡೆಯಿರೆಂದಾಜ್ಞಾಪಿಸಲು, ಅವರು ಭರತನ ಗಮನವನ್ನು ಕುರಿತು ರಾಜನಿಗೆ ಹೇಳಿದರು. ರಾಜನು ಜಡಭರತನನ್ನು ಕುರಿತು "ಎಲೈ ಜಡಪ್ರಕೃತಿಯೇ, ನೀನು ಕೃಶನಲ್ಲ, ದೃಢಕಾಯನು. ಹೀಗಿರಲು ಈ ರೀತಿ ವಕ್ರವಾಗಿಯೂ, ಹುಚ್ಚನ ಹಾಗೆಯೂ ಏತಕ್ಕೆ ಹೋಗುವೆ? ಅಥವಾ ಪಲ್ಲಕ್ಕಿ ಯನ್ನು ಕೊಂಚದೂರ ಹೊತ್ತುದುದಕ್ಕೆ ಆಯಾಸವುಂಟಾಗಿ ಹೀಗೆ ನಡೆಯು ತ್ತೀಯೋ?" ಎಂಬುದಾಗಿ ಕೇಳಲು, ಬ್ರಾಹ್ಮಣನಾದ ಭರತನು ರಾಜನನ್ನು ಕುರಿತು "ಎಲೈ ರಾಜನೇ, ನಾನು ಸ್ಥೂಲಶರೀರನಲ್ಲ, ಪಲ್ಲಕ್ಕಿಯನ್ನೂ ಹೊತ್ತಿಲ್ಲ, ನನಗೆ ಆಯಾಸವೂ ಇಲ್ಲ" ಎಂಬುದಾಗಿ ಹೇಳಲು, ಅದಕ್ಕೆ ರಾಜನು "ಎಲೈ ಜಡಪ್ರಕೃತಿಯೇ, ನೀನು ಸುಳ್ಳನ್ನೇ ಹೇಳುತ್ತಿರುವೆ. ನೀನು ಪ್ರತ್ಯಕ್ಷದಲ್ಲಿ ಸ್ಥೂಲ ದೇಹವುಳ್ಳವನಾಗಿ ಕಾಣುತ್ತೀಯೆ. ನನ್ನ ಪಲ್ಲಕ್ಕಿಯು ನಿನ್ನ ಹೆಗಲಮೇಲಿರು ವುದು. ಭಾರವನ್ನು ಹೊರುವಾಗ ಮನುಷ್ಯರು ಆಯಾಸಪಡುತ್ತಾರೆ. ಇವೆಲ್ಲವೂ ಕಣ್ಣೆದುರಿಗೆ ಕಾಣುತ್ತಿರುವಾಗ, ನೀನು ಯಾವುದೂ ಇಲ್ಲವೆಂದು ಹೇಳುತ್ತಿರುವೆ ಯಲ್ಲಾ" ಎಂಬುದಾಗಿ ಹೇಳಲು, ಭರತನು ಹೇಳುತ್ತಾನೆ: "ಎಲೈ ರಾಜನೇ, ಪ್ರತ್ಯಕ್ಷದಲ್ಲಿ ಯಾವುದು ಕಣ್ಣಿಗೆ ಕಾಣುತ್ತದೆಂಬುದನ್ನು ಹೇಳು. ನಾನು ಬಲಿಷ್ಠನೋ? ಅಬಲನೋ? ಆಮೇಲೆ ನೀನು ಪಲ್ಲಕ್ಕಿಯನ್ನು ಹೊತ್ತಿರುವೆಂದು ಹೇಳಿದೆ. ನಿನ್ನಲ್ಲಿ ಪಲ್ಲಕ್ಕಿ ಇದೆ ಎಂದು ಹೇಳಿದೆಯಲ್ಲಾ, ಅವೆಲ್ಲವೂ ಸುಳ್ಳು.

ನನ್ನ ಮಾತನ್ನು ಕೇಳು. ನನ್ನ ಕಾಲುಗಳು ಭೂಮಿಯಲ್ಲಿವೆ. ಕಾಲುಗಳ ಮೇಲೆ ಮಂಡಿಗಳಿವೆ. ಮಂಡಿಗಳ ಮೇಲೆ ತೊಡೆಗಳಿವೆ. ತೊಡೆಗಳ ಮೇಲೆ ಹೊಟ್ಟೆಯಿದೆ. ಹೊಟ್ಟೆಯ ಮೇಲೆ ವಕ್ಷಃಸ್ಥಳವಿದೆ. ವಕ್ಷದ ಮೇಲೆ ತೋಳುಗಳಿರುವುವು. ಅವುಗಳ ಮೇಲೆ ಕಂಠವಿದೆ. ಕಂಠದ ಮೇಲೆ ಪಲ್ಲಕ್ಕಿಯಿರುವುದು. ಪಲ್ಲಕ್ಕಿಯ ಮೇಲೆ ನಿನ್ನ ದೇಹವಿರುವುದು. ನೀನು ಪಲ್ಲಕ್ಕಿಯಲ್ಲಿರುವೆ. ನಾನು ಭೂಮಿಯಲ್ಲಿರುವೆನು. ಹೀಗಿರಲು ನೀನು ಹೇಳಿದ ಮಾತುಗಳು ಮಿಥ್ಯವಲ್ಲವೇ? ನಾನು, ನೀನು ಎಂಬುವು ಪ್ರಾಣಿಗಳಿಗೆ ಗುಣಪ್ರವಾಹದಂತಿರುವುವು. ಗುಣಗಳು ಕರ್ಮಾಧೀನವಾದುವು. ಸಕಲ ಪ್ರಾಣಿಗಳಲ್ಲಿಯೂ ಸಂಚಿತಕರ್ಮಾಧೀನವಾದ ಗುಣಗಳಿರುವುವು. ಆತ್ಮನಿಗೆ ದೃಶ್ಯತ್ವ, ವಾಹಕತ್ವಗಳಿಲ್ಲ. ಆತ್ಮನು ಶುದ್ಧನಾಗಿಯೂ, ಕರ್ಮರಹಿತನಾಗಿಯೂ, ಅವಿನಾಶಿಯೂ, ತ್ರಿಗುಣರಹಿತನೂ, ದೇಹದಿಂದ ವೃದ್ಧಿಹ್ರಾಸಗಳಿಲ್ಲದವನೂ ಆಗಿರುವನು. ಸಕಲ ಜಂತುಗಳಲ್ಲಿಯೂ ಆತ್ಮನು ಒಂದೇಸಮನಾಗಿರುವನು. ನಿನ್ನಲ್ಲಿಯೂ, ನನ್ನಲ್ಲಿಯೂ ಇರತಕ್ಕ ಆತ್ಮನು ಒಬ್ಬನೇ, ಒಂದೇಸಮನಾಗಿರುವನು. ಹೀಗಿರುವಲ್ಲಿ ನಾನು ಸ್ಥೂಲನಾದವನೆಂಬುದಾಗಿ ಯಾವ ಯುಕ್ತಿಯಿಂದ ಹೇಳಿದೆ? ಹೆಗಲಿನಲ್ಲಿರತಕ್ಕ ಪಲ್ಲಕ್ಕಿ ಭಾರವೆಂದರೆ, ನನಗೂ ಭಾರವಾಗಬೇಕು, ನಿನಗೂ ಭಾರವಾಗಬೇಕು, ಸರ್ವಪ್ರಾಣಿಗಳಿಗೂ ಭಾರವಾಗಬೇಕು. ಯಾವಾಗ ಭಾರವಿಲ್ಲವೋ ಆಗ ಆಯಾಸವೂ ಇಲ್ಲ. ಸರ್ವದೇಹಗಳೂ ಭೌತಿಕವಾದುದರಿಂದ, ಆತ್ಮರು ಸಮಾನನಾದವರು. ಈ ನಿನ್ನ ಪಲ್ಲಕ್ಕಿಯು ಹೇಗೆ ವಾಸ್ತವವಾಗಿಯೂ ನಿನ್ನದಲ್ಲವೋ ಹಾಗೆಯೇ ನಿನ್ನ ದೇಹವು ನಿನ್ನದಲ್ಲವು." ಹೀಗೆ ಹೇಳಿ ಭರತನು ಪಲ್ಲಕ್ಕಿಯನ್ನು ಹೊತ್ತುಕೊಂಡು ಸುಮ್ಮನಾದನು. ಆಗ ರಾಜನು ಪಲ್ಲಕ್ಕಿಯಿಂದಿಳಿದು, ಭರತನ ಎರಡು ಕಾಲುಗಳನ್ನು ಹಿಡಿದು ಆತನನ್ನು ಕುರಿತು "ಎಲೈ ಜ್ಞಾನಿಯೇ, ನೀನು ಪಲ್ಲಕ್ಕಿಯನ್ನು ಬಿಟ್ಟು ನನ್ನನ್ನು ಅನುಗ್ರಹಿಸು. ಜಡರೂಪವನ್ನು ಧರಿಸಿದ ನೀನು ಯಾರು? ಇಲ್ಲಿಗೆ ಬರಲು ಕಾರಣವೇನು? ನಿನ್ನಿಂದ ಕೇಳಿ ತಿಳಿಯಲಪೇಕ್ಷೆಯುಳ್ಳ ನನಗೆ ವಿಸ್ತಾರವಾಗಿ ಹೇಳೆಂದು" ಪ್ರಾರ್ಥಿಸಲು, ಭರತನು ಹೇಳುತ್ತಾನೆ: "ಎಲೈ ರಾಜನೇ, ಕೇಳು, ನಾನಾರೆಂಬುದನ್ನು ಹೇಳಲೆನಗೆ ಸಾಧ್ಯವಿಲ್ಲ. ಪುರುಷನು ಸರ್ವದೇಶಗಳಿಗೂ ಸುಖಾದಿಗಳಿಗಾಗಿ, ಗಮನಕಾರ್ಯವನ್ನು ನಡೆಸುತ್ತಾನೆ. ಸುಖಾದಿಗಳು ಅಂದರೆ ಧರ್ಮಾಧರ್ಮಗಳು. ಧರ್ಮಾಧರ್ಮಗಳ ಆರ್ಜನೆಗೆ ದೇಹಾದಿಗಳು ಕಾರಣವಾಗಿವೆ" ಎಂದು ಭರತನು ಹೇಳಲು, ರಾಜನು "ಎಲೈ ಬ್ರಾಹ್ಮಣೋತ್ತಮನೇ, ಧರ್ಮಾಧರ್ಮಗಳು ಸರ್ವಕಾರ್ಯಕಾರಣವೆಂಬುದರಲ್ಲಿ ಸಂದೇಹವಿಲ್ಲ. ಉಪಭೋಗನಿಮಿತ್ತವಾಗಿ, ಒಂದು ದೇಹವು ಮತ್ತೊಂದು ದೇಹ

ವನ್ನು ಹೊಂದುವುದು. ಆದರೆ ನೀನಾರೆಂಬುದಾಗಿ ಕೇಳಿದುದಕ್ಕೆ ಹೇಳುವುದಕ್ಕಾಗುವುದಿಲ್ಲವೆಂದು ನೀನು ಹೇಳಿದೆ. ಅದನ್ನೇ ಕೇಳಬೇಕೆಂಬ ಅಪೇಕ್ಷೆಯುಂಟಾಗಿದೆ" ಎಂದು ಹೇಳಲು, ಬ್ರಾಹ್ಮಣನು ಹೇಳುತ್ತಾನೆ: "'ಅಹಂ' ಎಂಬ ಶಬ್ದವು ಆತ್ಮನಲ್ಲಿ ದೋಷಾವಹವಾಗಲಾರದು. ಆತ್ಮನಲ್ಲಿ ಆತ್ಮಜ್ಞಾನಾದಿಗಳು ಭ್ರಾಂತಿಯುಳ್ಳವು. ಆದುದರಿಂದ ನಾನು ಯಾರೆಂಬುದನ್ನು ಹೇಳಲಾಗುವುದಿಲ್ಲವೆಂದನು. ಓ ರಾಜನೇ, ನಾಲಿಗೆಯು, ನಾನು ಇಂತಹವನೆಂಬುದನ್ನು ಹೇಳುತ್ತದೆ. ಹೀಗೆ ಹೇಳುವಿಕೆಯು, ವಾಗಿಂದ್ರಿಯದಿಂದುಂಟಾದುದೋ ಅಥವಾ ಆತ್ಮನಿಂದುಂಟಾದುದೋ ? ಆತ್ಮವು ವಾಗಿಂದ್ರಿಯದ ಮೂಲಕ ಹೇಳಬಹುದು. ಸರ್ವದೇಹಗಳಲ್ಲಿಯೂ, ಆತ್ಮನು ಒಬ್ಬನೇ ಸಾಕ್ಷಿಭೂತನಾಗಿರುವನು. ಹೀಗಿರುವಲ್ಲಿ ನೀನು ಯಾರೆಂಬುವ ನಿನ್ನ ಮಾತು ನಿಷ್ಫಲವಾದುದು. ನೀನು ರಾಜನು, ಇದು ನಿನ್ನ ಪಲ್ಲಕ್ಕಿ, ನಾವು ಪಲ್ಲಕ್ಕಿಯನ್ನು ಹೊರತಕ್ಕವರು, ಈ ರಾಜ್ಯವೂ ನಿನ್ನದು ಎಂಬ ವಾಕ್ಯಗಳು ಅನಿತ್ಯವಾದುವು. ಪಲ್ಲಕ್ಕಿಯು ವೃಕ್ಷದಿಂದ ಹುಟ್ಟಿದುದು. ನೀನು ಪಲ್ಲಕ್ಕಿಯಲ್ಲಿರುವಾಗ, ನಿನ್ನ ಪ್ರಜೆಗಳು—ಮಹಾರಾಜನು ವೃಕ್ಷಾರೂಢನಾಗಿದಾನೆಂದು ಹೇಳುತ್ತಾರೆಯೋ ? ಇದು ನಿನ್ನ ಕಣ್ಣೆದುರಿಗೆ ಹೇಗೆ ಅನಿತ್ಯವಾಗಿ ಕಾಣುವುದೋ, ಹಾಗೆಯೇ ಸರ್ವವೂ ಅನಿತ್ಯವಾದುದು. ಪುರುಷನು, ಸ್ತ್ರೀಯರು, ಪಶು, ಪಕ್ಷಿ, ಮೃಗಾದಿಗಳೂ, ಸಸ್ಯಜಾತಿಯೂ, ದೇಹದಿಂದ ಸಂಜ್ಞಾಭೇದಗಳನ್ನು ಹೊಂದಿರುತ್ತವೆ. ಇವೆಲ್ಲವೂ ಕರ್ಮಾಧೀನವಾಗಿರುವುವು. ನೀನು ಲೋಕಾಧಿಪತಿಯೆಂದು ಹೇಳಲೇ, ನಿಮ್ಮ ತಂದೆಗೆ ನೀನು ಮಗನೆಂದು ಹೇಳಲೇ, ಶತ್ರುವಿಗೆ ಶತ್ರುವೆಂಬುದಾಗಿ ಹೇಳಲೇ, ನಿನ್ನ ಹೆಂಡತಿಗೆ ನೀನು ಗಂಡನೆಂದು ಹೇಳಲೇ, ನಿನ್ನ ಮಗನಿಗೆ ನೀನು ತಂದೆಯೆಂದು ಹೇಳಲೇ, ನಿನ್ನನ್ನು ಯಾರೆಂಬುದಾಗಿ ಹೇಳಲಿ ? ಇದೇ ಪ್ರಕಾರ ನನ್ನನ್ನೂ ಇಂಥವನೆಂದು ಹೇಳುವುದಕ್ಕಾಗಲಾರದು. ಹಿಂದೆ ಹೇಳಿದ ಪ್ರಕಾರ ಮನುಷ್ಯಜನ್ಮವನ್ನೆತ್ತಿದವನು, ಸದಾಚಾರಾನುಗ್ರಹದಿಂದ, ತತ್ತ್ವಜ್ಞಾನವನ್ನು ಹೊಂದಿ, ಪರಬ್ರಹ್ಮನಾದ ಶ್ರೀಮನ್ನಾರಾಯಣನ ಚರಣಾರವಿಂದವನ್ನು ಹೊಂದಬೇಕು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಹದಿಮೂರನೆಯ ಅಧ್ಯಾಯವು ಸಮಾಪ್ತಃ

ಹದಿನಾಲ್ಕನೆಯ ಅಧ್ಯಾಯವು

ಈ ಪ್ರಕಾರ ಭರತನು ಹೇಳಿದನಂತರ, ಸೌವೀರರಾಜನು ನಮ್ರತೆಯಿಂದ ಕೂಡಿದವನಾಗಿ, ಭರತರಾಜರ್ಷಿಯನ್ನು ಕುರಿತು ಹೇಳುತ್ತಾನೆ: "ಓ ಬ್ರಾಹ್ಮ

ಣೋತ್ತಮನೇ, ನೀನು ಅನುಗ್ರಹಿಸಿದ, ಪರಮಾರ್ಥವಾದ ವಾಕ್ಯವನ್ನು ಕೇಳಿ ನನ್ನ ಮನಸ್ಸು ಆನಂದವನ್ನು ಹೊಂದಿತು. ನಾನು ಕಪಿಲಮಹರ್ಷಿಯ ಸಾನ್ನಿಧ್ಯ ದಲ್ಲಿ ತತ್ತ್ವಜ್ಞಾನವನ್ನು ತಿಳಿದುಕೊಳ್ಳಬೇಕೆಂದು ಹೊರಟವನು. ನನ್ನ ಭಾಗ್ಯ ವಿಶೇಷದಿಂದ, ಅರ್ಧದಾರಿಯಲ್ಲಿಯೇ ನಿನ್ನಿಂದ ತತ್ತ್ವಜ್ಞಾನವನ್ನು ತಿಳಿದೆನು. ಕಪಿಲಮಹರ್ಷಿಯು ಶ್ರೀಮನ್ನಾರಾಯಣನ ಅಂಶದಿಂದಲೇ, ಜಗನ್ಮೋಹನಾಶ ನಾರ್ಥವಾಗಿ ಭೂಮಿಯಲ್ಲಿ ಅವತರಿಸಿರುವನು. ಅಂತಹ ಕಪಿಲಮಹರ್ಷಿಯು ನೀನೇ ಆಗಿರಬಹುದು. ನನ್ನ ಹಿತಕ್ಶ್ರೇಯಸ್ಕರವಾಗಿ, ತತ್ತ್ವಜ್ಞಾನಸಮುದ್ರನಾದ ನೀನು, ಪರಮಾರ್ಥವಾದ ವಿಷಯವನ್ನು ಅನುಗ್ರಹಿಸು" ಎಂದು ಕೇಳಿಕೊಳ್ಳಲು; ಭರತನು ಆತನನ್ನು ಕುರಿತು, "ಹೇ ಭೂಪನೇ, ಪರಮಾರ್ಥವನ್ನು ಕೇಳಲು ಇಚ್ಛೆ ಯುಳ್ಳವನಾಗಿರುವೆಯೋ? ಲೋಕದಲ್ಲಿ ದೇವತಾರಾಧನೆಯನ್ನು ಮಾಡಿ, ಪುತ್ರ, ಧನ ಮೊದಲಾದ ಸಂಪತ್ತುಗಳನ್ನು ಪಡೆಯುತ್ತಾರೆ. ಇದು ಪರಮಾರ್ಥವಾದು ದಲ್ಲ. ಫಲಾಪೇಕ್ಷೆಯಿಂದ ಯಜ್ಞಾದಿಕರ್ಮಗಳನ್ನು ಮಾಡಿ, ಸ್ವರ್ಗಭೋಗಾದಿ ಗಳನ್ನು ಹೊಂದುತ್ತಾರೆ. ಇದೂ ಕೂಡ ಪರಮಾರ್ಥವಾದುದಲ್ಲ. ಹಾಗಾದರೆ, ಪರಮಾರ್ಥವಾದುದಾವುದೆಂದರೆ, ಯೋಗಯುಕ್ತನಾಗಿ ಪರಮಾತ್ಮನಾದ ಶ್ರೀಮನ್ನಾರಾಯಣನನ್ನು ಧ್ಯಾನಮಾಡುವುದೇ ಶ್ರೇಯಸ್ಕರವಾದ ಪರಮಾರ್ಥವು. ಪರಮಾತ್ಮ ಜೀವಾತ್ಮರುಗಳ ಸೇರುವಿಕೆಗೆ ಪರಮಾರ್ಥವೆಂದು ಹೇಳುತ್ತಾರೆ. ಒಬ್ಬನೇ ಆಗಿಯೂ, ಸರ್ವವ್ಯಾಪಿಯಾಗಿಯೂ, ನಿರ್ಗುಣನಾಗಿಯೂ ಎಂದರೆ ಹೇಯಗುಣರಹಿತನಾಗಿಯೂ, ಪರಪ್ರಕೃತಿಯಾಗಿಯೂ, ಜನ್ಮವೃದ್ಧ್ಯಾದಿರಹಿತ ನಾಗಿಯೂ, ನಾಶರಹಿತನಾಗಿಯೂ, ಪರಮಜ್ಞಾನಮಯನಾಗಿಯೂ, ವಿಭು ವಾಗಿಯೂ ಇರುವ ಶ್ರೀಮನ್ನಾರಾಯಣನೇ ಪರಮಾರ್ಥವೆಂಬುದಾಗಿ ಜ್ಞಾನಿ ಗಳು ಹೇಳುತ್ತಾರೆ. ಕೊಳಲೆಂಬುವುದು ಬಿದಿರಿನಿಂದ ಮಾಡಲ್ಪಟ್ಟ ಗಾನ ಸಾಮಗ್ರಿಯು. ಇದರಲ್ಲಿ ಅನೇಕ ರಂಧ್ರಗಳಿರುವುವು. ಅವುಗಳಲ್ಲೆಲ್ಲಾ ಗಾಳಿ ಯೆಂಬ ಒಂದೇ ಪದಾರ್ಥವು ವ್ಯಾಪಿಸಿ, ಷಡ್ಜ, ಮಧ್ಯ, ಗಾಂಧಾರವೇ ಮೊದ ಲಾದ ಸ್ವರಗಳನ್ನು ಹುಟ್ಟಿಸುವಂತೆ, ಇವನು ದೇವತೆಯು, ಇವನು ಮನುಷ್ಯನು, ಇದು ಪಶುವು, ಇದು ಮೃಗವು, ಇವೇ ಮೊದಲಾದುವುಗಳು, ಪರಮಾತ್ಮನೊಬ್ಬ ನಿಂದ ವ್ಯಾಪಿಸಿದ್ದರೂ, ಶರೀರಭೇದಗಳಿಂದ ನಾನಾಪ್ರಕಾರವಾಗಿರುವುವು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಹದಿನಾಲ್ಕನೆಯ ಅಧ್ಯಾಯವು ಸಮಾಪ್ತಃ

ಹದಿನೈದನೆಯ ಅಧ್ಯಾಯವು

"ಎಲೈ ರಾಜನೇ, ಕೇಳು. ಪೂರ್ವದಲ್ಲಿ ಋಭುವೆಂಬುವರು ಹೇಳಿದುದನ್ನು ಹೇಳುತ್ತೇನೆ. ಚತುರ್ಮುಖಬ್ರಹ್ಮನ ಪುತ್ರರಾದ ಋಭು ಎಂಬುವರು ಸ್ವಭಾವತಃ ಜ್ಞಾನಿಯು. ಪುಲಸ್ತ್ಯಬ್ರಹ್ಮನ ಮಗನಾದ ನಿದಾಘನು ಈತನಿಗೆ ಶಿಷ್ಯನಾದನು. ಋಭುವು ನಿದಾಘನಿಗೆ ತತ್ತ್ವೋಪದೇಶವನ್ನುಮಾಡಿದರು. ಈ ತತ್ತ್ವೋಪದೇಶ ದಿಂದ ನಿದಾಘನಿಗೆ ಅಧ್ಯಾತ್ಮಶಾಸ್ತ್ರದಲ್ಲಿ ಅಭಿರುಚಿಯು ಸ್ಥಿರವಾಗಲಿಲ್ಲ. ಇವನಿಗೆ ತತ್ತ್ವಜ್ಞಾನವು ತಿಳಿಯಲು ಇನ್ನೂ ಕೆಲವು ಕಾಲ ಬೇಕೆಂದು ತಿಳಿದು ಋಭುವು ಸುಮ್ಮನಾದರು. ನಿದಾಘನು ದೇವಿಕಾ ಎಂಬ ನದಿಯ ತೀರದಲ್ಲಿ, ಪುಲಸ್ತ್ಯಬ್ರಹ್ಮ ನಿಂದ ನಿರ್ಮಿತವಾದ ವೀರನಗರವೆಂಬ ಪಟ್ಟಣದಲ್ಲಿ ವಾಸಮಾಡಿಕೊಂಡಿದ್ದನು. ಬಹುಕಾಲ ಕಳೆದನಂತರ, ಶಿಷ್ಯನಾದ ನಿದಾಘನನ್ನು ನೋಡಲಪೇಕ್ಷೆಯಿಂದ, ಋಭುವು ನಿದಾಘನ ಮನೆಗೆ ಬಂದು ಬಾಗಿಲಲ್ಲಿ ಕೂತಿದ್ದರು. ನಿದಾಘನು ವೈಶ್ವದೇವವನ್ನು ಮಾಡಿ, ಬಾಗಿಲಿಗೆ ಬಂದು, ಅತಿಥಿಯಾಗಿ ಬಂದ ಋಭುವನ್ನು ನೋಡಿ, ಬಹು ಆನಂದದಿಂದ ಒಳಗೆ ಬರಮಾಡಿಕೊಂಡು, ಅರ್ಘ್ಯಪಾದ್ಯಾದಿಗಳ ನ್ನರ್ಪಿಸಿ, ಭೋಜನಕ್ಕೇಳಬೇಕೆಂದು ಪ್ರಾರ್ಥಿಸಲು, ಋಭುವು ಆತನನ್ನು ಕುರಿತು "ಎಲೈ ಬ್ರಾಹ್ಮಣಶ್ರೇಷ್ಠನೇ, ನನಗೆ ಕದಾನ್ನಗಳಲ್ಲಿ ಪ್ರೀತಿಯಿಲ್ಲ" ಎಂಬುದಾಗಿ ಹೇಳಲು; ನಿದಾಘನು ಋಭುವನ್ನು ಕುರಿತು ಹೇಳುತ್ತಾನೆ: "ನನ್ನ ಮನೆಯಲ್ಲಿ ಅಕ್ಕಿಯಿಂದ ಮಾಡಿದ ಪದಾರ್ಥಗಳೂ, ಕಂದಮೂಲಾದಿಗಳಿಂದ ಮಾಡಿದ ಪದಾರ್ಥಗಳೂ ಸಹ ಇರುವುವು. ಇವುಗಳಲ್ಲಿ ನಿನಗೆ ಇಷ್ಟವಾದುದನ್ನು ಭುಂಜಿಸ ಬಹುದೆಂದು" ಹೇಳಲು, ಋಭುವು "ನೀನು ಹೇಳಿದುದೆಲ್ಲವೂ ಕದನ್ನವು. ನನಗೆ ಮೃಷ್ಟಾನ್ನವನ್ನಿಡು. ಮೃಷ್ಟಾನ್ನವೆಂದರೆ, ಗೋಧಿ ಮೊದಲಾದವುಗಳಿಂದ ಮಾಡಲ್ಪಟ್ಟ, ಮಧುರವಾದ ಪದಾರ್ಥಗಳು, ಮೊಸರು, ಹಾಲು ಮೊದಲಾದವು" ಎಂದು ಹೇಳಲು; ನಿದಾಘನು ತನ್ನ ಪತ್ನಿಯನ್ನು ಕುರಿತು, "ಎಲೌ ಶ್ಲಾಘ್ಯ ಪ್ರಿಯೇ, ನಮ್ಮ ಮನೆಯಲ್ಲಿ ಭಕ್ಷ್ಯಾದಿಗಳಿಗೆ ಉಪಸಾಧನ ಪದಾರ್ಥಗಳಿದ್ದರೆ, ಅದನ್ನು ಮಾಡಿ ಬ್ರಾಹ್ಮಣನಿಗೆ ಊಟಮಾಡಿಸು" ಎಂದನು. ಆಕೆಯು ಪತಿಯ ಆಜ್ಞೆಯ ಪ್ರಕಾರ, ಮೃಷ್ಟಾನ್ನವನ್ನು ಸಿದ್ಧಪಡಿಸಿ, ಋಭುವಿಗೆ ಊಟಮಾಡಿಸಿ ದಳು. ಭೋಜನಾನಂತರದಲ್ಲಿ, ನಿದಾಘನು ಋಭುವನ್ನು ಕುರಿತು, "ಎಲೈ ಬ್ರಾಹ್ಮಣೋತ್ತಮನೇ, ನಮ್ಮ ಮನೆಯ ಊಟದಿಂದ ನಿನಗೆ ತೃಪ್ತಿಯಾಯಿತೇ? ನಮ್ಮ ಉಪಚಾರದಿಂದ ನಿನ್ನ ಮನಸ್ಸು ಸ್ವಸ್ಥವಾಯಿತೇ? ನೀನು ಎಲ್ಲಿ ವಾಸ ವಾಗಿರುವೆ? ಎಲ್ಲಿಂದ ಬಂದೆ? ಎಲ್ಲಿಗೆ ಪ್ರಯಾಣಮಾಡುವೆ?" ಎಂದು ಕುಶಲ ಪ್ರಶ್ನೆ ಮಾಡಿದನು. ಅದಕ್ಕೆ ಋಭುವು "ಹಸಿವಾದವನಿಗೆ ಊಟ ಹಾಕಿದರೆ, ಅವನಿಗೆ ಹಸಿವು ಹೋಗಿ ತೃಪ್ತಿಯುಂಟಾಗುವುದು. ನನಗೆ ಹಸಿವು ಇಲ್ಲದುದರಿಂದ

ತೃಪ್ತಿಯೂ ಇಲ್ಲ. ಹೀಗಿರಲು, ತೃಪ್ತಿಯಾಯಿತೇ ಎಂದು ನನ್ನನ್ನು ಏಕೆ ಕೇಳುವೆ? ಜಠರಾಗ್ನಿಯಿಂದ ಊಟ ಮಾಡಿದ ಪದಾರ್ಥಗಳು ಜೀರ್ಣಿಸಿದರೆ ಪುನಃ ಹಸಿವುಂಟಾಗುವುದು. ನೀರು ಕ್ಷಯವಾದರೆ ಬಾಯಾರಿಕೆಯುಂಟಾಗುವುದು. ಇದು ಮನುಷ್ಯನಿಗೆ ಸಹಜವಾಗಿರುವುದು. ನನಗಾದರೋ ಧರ್ಮಾಖ್ಯವಾದ ದೇಹದಲ್ಲಿ ಎಂದರೆ ಶೋಕ, ಮೋಹಾದಿಗಳಿಲ್ಲದಿರುವ ನನ್ನ ದೇಹದಲ್ಲಿ ಕ್ಷುತ್ಪಿಪಾಸಾದಿಗಳುಂಟಾಗುವುದಿಲ್ಲ. ಪುನಃಸ್ವಸ್ಥತೆಯೇ ನನಗೆ ತೃಪ್ತಿ. ವಾಸವೆಲ್ಲಿ, ಎಲ್ಲಿಂದ ಬಂದೆ, ಎಲ್ಲಿಗೆ ಹೋಗುವೆ ಎಂಬುದಾಗಿ ನನ್ನನ್ನು ಕೇಳಿದುದರಿಂದ ಹೇಳುವೆನು ಕೇಳು. ಜೀವಾತ್ಮನು ಅತಿಸೂಕ್ಷ್ಮವಾಗಿ ಸರ್ವ ಅಚೇತನವಸ್ತುವನ್ನು ತನ್ನ ಧರ್ಮಜ್ಞಾನದಿಂದ ವ್ಯಾಪಿಸುವುದರಿಂದ, ನಿನ್ನ ಪ್ರಶ್ನೆಗೆ ಇದೇ ಉತ್ತರವಾಗಿದೆ. ನೀನೂ, ನಾನೂ, ಸಮಸ್ತ ವಸ್ತುಗಳೂ, ಗಮನ, ಆಗಮನ, ವಾಸ ಈ ಭೇದಗಳೊಂದೂ ಸ್ಥಿರವಾದವುಗಳಲ್ಲ. ನಿನ್ನ ಮನೆಯು ಜೀರ್ಣವಾದರೆ, ಮತ್ತೊಂದು ಮನೆಯಲ್ಲಿ ವಾಸ ಮಾಡುವಂತೆ, ಜೀವಾತ್ಮನು ಉಪಭೋಗನಿಮಿತ್ತದಿಂದ ಸರ್ವತ್ರಗಮನಾಗಮನದಿಂದ ಕೂಡಿರುವನು. ಮೃಷ್ಟಾನ್ನ, ಅಮೃಷ್ಟಾನ್ನವೆಂಬ ಜಿಜ್ಞಾಸೆಯುಂಟಾದುದರಿಂದ, ಅದನ್ನು ಹೇಳುತ್ತೇನೆ ಕೇಳು. ಹಸಿವಿನಿಂದ ಕೂಡಿದವನಿಗೆ, ಕುಲ್ಮಾಷಾಧಿಕವಾದ, ಎಂದರೆ ಅಲಸಂದಿ ಮೊದಲಾದವುಗಳಿಂದಾದ ಆಹಾರವೇ ರುಚಿಯಾಗಿ ಮೃಷ್ಟಾನ್ನವಾಗುವುದು. ಹಸಿವಿಲ್ಲದಿರುವವನಿಗೆ ಭಕ್ಷ್ಯಾದಿಗಳಿಂದ ಯುಕ್ತವಾದ ಮೃಷ್ಟಾನ್ನವೂ ಕೂಡ ರುಚಿಸದೆ ಉದ್ವೇಗಕ್ಕೆ ಕಾರಣವಾಗುವುದು. ಆದುದರಿಂದ ರುಚಿಕಾರಕವಾದ ಅನ್ನವು ಯಾವುದೂ ಇಲ್ಲ. ಅಕ್ಕಿ, ಗೋಧವೆ, ಘೃತ, ದಧಿ, ಕ್ಷೀರ ಇವುಗಳೆಲ್ಲವೂ, ಪಾರ್ಥಿವವಾದ ಸೂಕ್ಷ್ಮ ಪದಾರ್ಥಗಳು. ಆದುದರಿಂದ ನೀನೂ ಇದೇ ಪ್ರಕಾರ ಪಾರಮಾರ್ಥಿಕ ಬುದ್ಧಿಯಿಂದ ಭುಂಜಿಸತಕ್ಕದ್ದು." ಈ ಪ್ರಕಾರ ಪಾರಮಾರ್ಥವಾದ ವಿಷಯವನ್ನು ಹೇಳಿದ ಋಭುವಿನ ಮಾತನ್ನು ಕೇಳಿ ನಿದಾಘನು ಹೇಳುತ್ತಾನೆ: "ಎಲೈ ಬ್ರಾಹ್ಮಣಶ್ರೇಷ್ಠರೇ, ನಿಮ್ಮ ಪಾರಮಾರ್ಥಿಕ ಬೋಧೆಯಿಂದ ನನ್ನ ಮೋಹಾದಿಗಳೆಲ್ಲವೂ ತೊಲಗಿದುವು. ನೀವು ಯಾರೆಂಬುವುದನ್ನು ಹೇಳಿ" ಎಂದು ಪ್ರಾರ್ಥಿಸಲು; ಋಭುವು ಆತನನ್ನು ಕುರಿತು "ನಾನು ಋಭುವು. ನಿನಗೆ ಆಚಾರ್ಯನು. ನಿನಗೆ ತತ್ತ್ವಜ್ಞಾನವನ್ನು ಹೇಳಿ ಪರಮಾರ್ಥವನ್ನು ಬೋಧಿಸಲು ಇಲ್ಲಿಗೆ ಬಂದೆನು. ವಾಸುದೇವಾಖ್ಯನಾದ ಪರಮಾತ್ಮನ ಸ್ವರೂಪವಾದ ಅಂತರ್ಯಾಮಿತ್ವದಿಂದ ಎಲ್ಲವೂ ಬ್ರಹ್ಮಾತ್ಮಕವಾಗಿರುವುದು. ಆದುದರಿಂದ ಭೇದವೆಂಬುವುದೇ ಇಲ್ಲ." ಹೀಗೆ ಉಪದೇಶಿಸಿ ನಿದಾಘನಿಂದ ಪೂಜಿಸಲ್ಪಟ್ಟವನಾಗಿ ಋಭುವು ಹೊರಟುಹೋದರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಹದಿನೈದನೆಯ ಅಧ್ಯಾಯವು ಸಮಾಪ್ತಃ

ಹದಿನಾರನೆಯ ಅಧ್ಯಾಯವು

"ಋಭುವು ಅನೇಕ ದಿನಗಳನಂತರ, ಪುನಃ ನಿದಾಘನಿಗೆ ತತ್ತ್ವೋಪದೇಶ ಮಾಡಲು, ನಿದಾಘನ ಊರಿಗೆ ಬಂದರು. ಊರಿಗೆ ಸ್ವಲ್ಪ ದೂರದಲ್ಲಿಯೇ ನಿದಾಘನನ್ನು ಕಂಡರು. ನಿದಾಘನು ಸಮಿತ್ಕುಶಾದಿಗಳನ್ನು ಹೊತ್ತು ಹಸಿವಿನಿಂದ ಕೂಡಿ ಒಬ್ಬನೇ ಬರುವುದನ್ನು ಕಂಡು, ಆತನ ಸಮೀಪಕ್ಕೆ ಹೋಗಿ, ತನ್ನ ಆಚಾರ್ಯತ್ವವನ್ನು ಮರೆಮಾಚಿಕೊಳ್ಳುವುದಕ್ಕಾಗಿ, ಅಭಿವಾದನೆಯನ್ನು ಮಾಡಿ, "ಓ ಬ್ರಾಹ್ಮಣನೇ, ನೀನು ಒಬ್ಬನೇ ಏಕಾಂಗಿಯಾಗಿರಲು ಕಾರಣವೇನು?" ಎಂದು ಕೇಳಲು; ನಿದಾಘನು "ಎಲೈ ಬ್ರಾಹ್ಮಣನೇ, ಈ ಪಟ್ಟಣದ ರಾಜನು ಜನಸಮ್ಮರ್ದದಿಂದ ಕೂಡಿ ಪಟ್ಟಣವನ್ನು ಸೇರಲಿ ಎಂದು ಕಾದುಕೊಂಡಿರುವೆನು" ಎಂದನು. ಆಗ ಋಭುವು ಆತನನ್ನು ಕುರಿತು, "ಎಲೈ ನಿದಾಘನೇ, ಇಲ್ಲಿ ರಾಜನು ಯಾರು? ಜನರು ಯಾರೆಂದು" ಕೇಳಿದನು. ಅದಕ್ಕೆ ನಿದಾಘನು, ಪರ್ವತದಂತೆ ಎತ್ತರವಾದ ಆನೆಯಮೇಲೆ ಕೂತಿರುವವನೇ ರಾಜನು. ಸುತ್ತಲೂ ಇರುವವರೇ ಪರಿಜನಗಳೆಂದು ಹೇಳಲು; ಋಭುವು ಕೇಳುತ್ತಾನೆ: "ಎಲೈ ನಿದಾಘನೇ, ನೀನು ಗಜ, ರಾಜ ಇವರೀರ್ವರನ್ನೂ ಏಕಕಾಲದಲ್ಲಿ ಕಾಣಿಸಿದುದರಿಂದ, ಇದರಲ್ಲಿ ರಾಜನು ಯಾರು? ಆನೆಯು ಯಾವುದು ಎಂಬ ವಿವೇಚನೆಯು ನನಗೆ ತಿಳಿಯಲಿಲ್ಲ. ಆದುದರಿಂದ ಇವರಿಬ್ಬರಲ್ಲಿ ಆನೆಯು ಯಾವುದು? ರಾಜನು ಯಾವನೆಂಬುದನ್ನು ವಿಶದವಾಗಿ ತಿಳಿಸೆಂದು" ಕೇಳಿದರು. ನಿದಾಘನು "ಅಯ್ಯಾ ಬ್ರಾಹ್ಮಣನೇ, ನಿನಗೆ ಗಜಕ್ಕೂ ರಾಜನಿಗೂ ವ್ಯತ್ಯಾಸವೇ ತಿಳಿಯದೋ? ಹಾಗಾದರೆ ಕೇಳು. ಆನೆಯು ಕೆಳಗೆ ಇರುವುದು. ಅದರ ಮೇಲೆ ಇರುವವನೇ ರಾಜನು. ವಾಹ್ಯವಾಹಕಸಂಬಂಧವೇ ನಿನಗೆ ತಿಳಿಯುವುದಿಲ್ಲವೇ?" ಎಂದು ಕೇಳಲು, ಋಭುವು, "ಅಯ್ಯಾ ನಿದಾಘನೇ, ನನಗೆ ಕೆಳಗೆ-ಮೇಲೆ ಎಂಬ ವಿವೇಕವು ಗೊತ್ತಿಲ್ಲವಾದುದರಿಂದ, ತಿಳಿಯುವ ಹಾಗೆ ಸ್ಪಷ್ಟವಾಗಿ ಹೇಳೆನ್ನಲು" ನಿದಾಘನು "ಎಲೈ ಬ್ರಾಹ್ಮಣನೇ, ನಾನು ಯಾವ ರೀತಿ ಮೇಲೆ ಕೂತಿರುವೆನೋ, ಅದೇ ಪ್ರಕಾರ ರಾಜನು ಮೇಲೆ ಇರುತ್ತಾನೆ. ನೀನು ಕೆಳಗೆ ಇರುವಂತೆ ಆನೆಯು ಕೆಳಗೆ ಇರುವುದು. ನಿನ್ನ ತಿಳಿವಳಿಕೆಗೋಸ್ಕರ ದೃಷ್ಟಾಂತವನ್ನು ಹೇಳಿರುವೆ" ಎಂದನು. ಆಗ ಋಭುವು ನಿದಾಘನನ್ನು ಕುರಿತು "ನೀನು ರಾಜನ ಹಾಗೆ, ನಾನು ಆನೆಯ ಹಾಗೆ ಎಂಬುವುದನ್ನು ತಿಳಿದೆನು. ಆದರೆ ನೀನು ಯಾರು? ನಾನು ಯಾರು ಎಂಬುವುದನ್ನು ಹೇಳೆಂದು" ಕೇಳಲು, ನಿದಾಘನು ತ್ವರಾನ್ವಿತನಾಗಿ ಬಂದು ಋಭುವಿನ ಕಾಲುಗಳನ್ನು ಹಿಡಿದುಕೊಂಡು, "ಎಲೈ ಬ್ರಾಹ್ಮಣಶ್ರೇಷ್ಠರೇ, ನೀವು ನನಗೆ ಆಚಾರ್ಯರಾದ ಋಭುವೇ ಸರಿ. ಹಾಗಿಲ್ಲದಿದ್ದರೆ, ಈ

ರೀತಿ ಅದ್ವೈತಭಾವವನ್ನು ಮತ್ಯಾರೂ ಹೇಳಲಾರರು" ಎನ್ನಲು, ಆಗ ಋಭುವು "ಎಲೈ ನಿದಾಘನೇ, ನಿನಗೆ ತತ್ವೋಪದೇಶವನ್ನು ಮಾಡುವುದಕ್ಕಾಗಿಯೇ ಇಲ್ಲಿಗೆ ಬಂದೆನು. ಎಲ್ಲಾ ರಾಜ, ಗಜರೂಪವಾದ ಆತ್ಮರುಗಳೆಲ್ಲಾ ಜ್ಞಾನೈಕಾಕಾರತೆಯಿಂದ ಒಂದೇ ಎಂಬ ಅದ್ವೈತಜ್ಞಾನವು ನಿನಗುಂಟಾಯಿತು" ಎಂದು ಆತನನ್ನು ಹರಸಿ ಸ್ವಸ್ಥಾನವನ್ನು ಸೇರಿದನು. ಈ ವಿಷಯವನ್ನು ಭರತರಾಜರ್ಷಿಯು ಸೌವೀರರಾಜನಿಗೆ ತಿಳಿಯುವಂತೆ ಹೇಳಿ ಬ್ರಾಹ್ಮಣ ಜನ್ಮದಿಂದಲೇ ಮೋಕ್ಷವನ್ನು ಹೊಂದಿದನು. ಆದುದರಿಂದ ಓ ಧರ್ಮಜ್ಞನಾದ ಸೌವೀರಾಧಿಪತಿಯೇ, ಎಲ್ಲಾದರಲ್ಲೂ ಇರುವ ಆತ್ಮರುಗಳೂ ಜ್ಞಾನೈಕಾಕಾರತೆಯಿಂದ ಏಕರೂಪವಾಗಿರುವುದರಿಂದ, ನಿನ್ನಲ್ಲೂ, ನಿನ್ನ ಶತ್ರುವಿನಲ್ಲೂ, ನಿನ್ನ ಬಂಧುವರ್ಗದಲ್ಲೂ ಸಮನಾಗಿರಪ್ಪ. ಒಂದೇ ಆಕಾಶವಾದುದು, ಕಪ್ಪುನೀಲ ಮೊದಲಾದ ಭೇದಗಳಿಂದ ಹೇಗೆ ಬೇರೆ ಬೇರೆಯಾಗಿ ತೋರುತ್ತದೋ, ಹಾಗೆಯೇ ಜ್ಞಾನೈಕಾಕಾರತೆಯಿಂದ ಏಕಸ್ವರೂಪವಾದ ಆತ್ಮವರ್ಗವೂ, ಭ್ರಾಂತದೃಷ್ಟಿಯುಳ್ಳವರಿಂದ ಬೇರೆಬೇರೆಯಾಗಿ ಊಹಿಸಲ್ಪಡುತ್ತದೆ. ಇಲ್ಲಿ ಯಾವುದು ಇದೆ ಎಂದು ಹೇಳಿಸಿಕೊಳ್ಳುತ್ತದೆಯೋ ಅವೆಲ್ಲವೂ ಅಚ್ಯುತಾತ್ಮಕವಾದುದು. ಆತನಿಗಿಂತಲೂ ಶ್ರೇಷ್ಠವಾದುದಾಗಿ ಹಾಗೆ ಸರ್ವಕ್ಕೂ ಆತ್ಮವಾಗಿರುವುದು ಯಾವುದೂ ಇಲ್ಲವೆಂದು ತಿಳಿ. ಹಾಗೆ ಅಚ್ಯುತಾತ್ಮಕನಾದ ನಾನೂ, ಅಚ್ಯುತಾತ್ಮಕನಾದ ನೀನೂ ಮತ್ತು ಎಲ್ಲಾ ಅಚ್ಯುತಾತ್ಮಕವಾದ ಆತ್ಮವರ್ಗವೂ ಎಲ್ಲಾ ಜ್ಞಾನಸ್ವರೂಪವುಳ್ಳದಾಗಿ ಒಂದೇ ವಿಧವಾದುದು. ಆದುದರಿಂದ ಎಲ್ಲವೂ ಭೇದಾಭೇದವಾದುವೆಂಬ ಮೋಹಬುದ್ಧಿಯನ್ನು ತ್ಯಜಿಸಯ್ಯಾ" ಎಂದು ತನ್ನ ಅಮೋಘವಾದ ಉಪದೇಶವನ್ನು ಶ್ರೀ ಭರತಮುನಿಯು ಮುಗಿಸಿದನು.

ಎಂಬಲ್ಲಿಗೆ, ಶ್ರೀ ವಿಷ್ಣುಪುರಾಣದಲ್ಲಿ ದ್ವಿತೀಯಾಂಶದಲ್ಲಿ
ಹದಿನಾರನೆಯ ಅಧ್ಯಾಯವೂ, ದ್ವಿತೀಯಾಂಶವೂ ಸಹ
ಸಮಾಪ್ತವಾದುವು.

ಶ್ರಿಯೈ ನಮಃ

ಶ್ರೀಕೃಷ್ಣಾಯ ಪರಬ್ರಹ್ಮಣೇ ನಮಃ

ಶ್ರೀಹಯಗ್ರೀವಾಯ ನಮಃ

ಶ್ರೀಮತೇ ನಿಗಮಾಂತಮಹಾಗುರವೇ ನಮಃ

ಶ್ರೀಮದ್ರಾಮಾನುಜಾರ್ಯಾಯ ಯಜ್ವನೇ ದೇಶಿಕಾಯ ಮೇ ।
ಋಣತ್ರಯವಿಮುಕ್ತಾಯ ತಾತಪಾದಾಯಿತೇ ನಮಃ ॥

ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶವು ಪ್ರಾರಂಭವು

ಪ್ರಥಮಾಧ್ಯಾಯವು

ಮೈತ್ರೇಯರು ಪರಾಶರರನ್ನು ಕೇಳುತ್ತಾರೆ:

"ಓ ಭಗವಾನ್‌ರವರೇ! ನೀವು ಇದುವರೆಗೆ ಹೇಳಿದ ಭೂಮಿ, ಸಮುದ್ರಾದಿಗಳ ಸಂಸ್ಥಾನಗಳೆಲ್ಲವನ್ನೂ ಕೇಳಿದೆನು. ಮನ್ವಂತರಗಳನ್ನೂ, ಮನ್ವಂತರಾಧಿಪತಿಗಳನ್ನೂ ಸಹ ಕೇಳಲಪೇಕ್ಷೆಯುಳ್ಳ ನನ್ನಲ್ಲಿ ಅನುಗ್ರಹಿಸಿ, ಅಪ್ಪಣೆ ಕೊಡಿಸಬೇಕೆಂದು" ಪ್ರಾರ್ಥಿಸಲು; ಪರಾಶರರು ಹೇಳುತ್ತಾರೆ:

"ಎಲೈ ಮೈತ್ರೇಯನೇ, ಹಿಂದೆ ಕಳೆದುಹೋದ ಮತ್ತು ಮುಂದೆ ಬರತಕ್ಕ ಮನ್ವಂತರಗಳನ್ನು ಹೇಳುವೆನು ಕೇಳು: ಮೊದಲು ಕಲ್ಪಾದಿಕಲ್ಪಮಧ್ಯದಲ್ಲಿದ್ದ, ಸ್ವಾಯಂಭುವ, ಅನಂತರ ಸ್ವಾರೋಚಿಷವೆಂಬ ಎರಡು ಮನ್ವಂತರಗಳಲ್ಲಿದ್ದ ದೇವತೆಗಳನ್ನೂ, ಋಷಿಗಳನ್ನೂ ಸಹ ಹೇಳಿದೆನಲ್ಲದೆ, ಉತ್ತಮ, ತಾಮಸ, ರೈವತ, ಚಾಕ್ಷುಷವೆಂಬ ಮನ್ವಂತರಗಳನ್ನೂ ಸಹ ವಿವರಿಸಿದೆನು. ಈಗ ಸೂರ್ಯನ ಮಗನಾದ ವೈವಸ್ವತಮನ್ವಂತರದಲ್ಲಿ ವಸು, ರುದ್ರ, ಆದಿತ್ಯರುಗಳೂ, ದೇವತೆಗಳೂ, ಪುರಂದರನಾಮಕನಾದ ಇಂದ್ರನೂ, ವಸಿಷ್ಠ, ಕಾಶ್ಯಪ, ಅತ್ರಿ, ಜಮದಗ್ನಿ, ಗೌತಮ, ವಿಶ್ವಾಮಿತ್ರ, ಭರದ್ವಾಜರೆಂಬ ಸಪ್ತರ್ಷಿಗಳೂ, ಇಕ್ಷ್ವಾಕು, ನೃಗ, ಧೃಷ್ಟ, ಶರ್ಯಾತಿ, ನರಿಷ್ಯಂತ, ನಾಭಾಗ, ಅರಿಷ್ಟ, ಕರೂಷ, ವೃಷಧ್ರರೆಂಬ ಒಂಬತ್ತು ಜನ ಪುತ್ರರೂ ಸಹ ಇದ್ದರು. ಇವರು ವಿಷ್ಣುಶಕ್ತಿಯಿಂದ ಮಹಾತೇಜಸ್ಕರಾಗಿಯೂ, ಸತ್ವೋದ್ರಿಕ್ತರಾಗಿಯೂ ಇದ್ದರು. ವಿಷ್ಣುಶಕ್ತಿಯು ಪ್ರತಿಮನ್ವಂತರ

ದಲ್ಲಿಯೂ ಪ್ರಧಾನ ದೇವತೆಯಾಗಿರುವುದು; ಸ್ವಾಯಂಭುವ ಮನ್ವಂತರ ದಲ್ಲಿ ಯಜ್ಞರೂಪಿಯಾಗಿಯೂ, ಸ್ವಾರೋಚಿಷ ಮನ್ವಂತರದಲ್ಲಿ ಅಜಿತರೂಪಿ ಯಾಗಿಯೂ, ಉತ್ತಮ ಮನ್ವಂತರದಲ್ಲಿ ಸತ್ಯರೂಪಿಯಾಗಿಯೂ, ತಾಮಸ ಮನ್ವಂತರದಲ್ಲಿ ಹರಿರೂಪಿಯಾಗಿಯೂ, ರೈವತ ಮನ್ವಂತರದಲ್ಲಿ ಮಾನಸ ರೂಪಿಯಾಗಿಯೂ, ಚಾಕ್ಷುಷ ಮನ್ವಂತರದಲ್ಲಿ ವೈಕುಂಠರೂಪಿಯಾಗಿಯೂ, ವೈವಸ್ವತ ಮನ್ವಂತರದಲ್ಲಿ ವಾಮನರೂಪಿಯಾಗಿಯೂ, ತ್ರಿವಿಕ್ರಮಾವತಾರ ದಿಂದ ಪುರಂದರನಾಮಕನಾದ ಇಂದ್ರನಿಗೆ ದೇವರಾಜ್ಯವನ್ನು ಕೊಟ್ಟವನಾಗಿಯೂ, ಈ ಪ್ರಕಾರ ಏಳು ಮನ್ವಂತರಗಳಲ್ಲಿ ಏಳುರೂಪಿಯಾಗಿ, ಶ್ರೀಮನ್ನಾರಾಯಣನು, ಲೋಕಗಳ ಸೃಷ್ಟ್ಯಾದಿಗಳನ್ನು ಮಾಡಿ, ಸಕಲ ಜಗತ್ತನ್ನೂ ವ್ಯಾಪಿಸಿರುವುದ ರಿಂದ ವಿಷ್ಣುವೆಂಬ ಹೆಸರನ್ನು ಪಡೆದನು. ಸಕಲ ದೇವಬ್ರಾಹ್ಮಣರ ತೇಜಸ್ಸು ಗಳೆಲ್ಲವೂ ಶ್ರೀಮನ್ನಾರಾಯಣನ ಶಕ್ತಿಯಿಂದ ಕೂಡಿರತಕ್ಕವುಗಳು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶದಲ್ಲಿ
ಮೊದಲನೆಯ ಅಧ್ಯಾಯವು ಸಮಾಪ್ತಃ

ಎರಡನೆಯ ಅಧ್ಯಾಯವು

ಮೈತ್ರೇಯರು ಪರಾಶರಮಹರ್ಷಿಗಳನ್ನು ಪುನಃ ಪ್ರಶ್ನೆ ಮಾಡುತ್ತಾರೆ: "ಸ್ವಾಮಿಾ, ಇದುವರೆಗೆ ಹೇಳಿದ ಸಪ್ತಮನ್ವಂತರಗಳನ್ನು ಕೇಳಿದೆನು. ಮುಂದೆ ಬರುವ ಮನ್ವಂತರಗಳನ್ನು ವಿಸ್ತಾರವಾಗಿ ನನಗೆ ಅನುಗ್ರಹಿಸಿ" ಎಂದು ಕೇಳಿ ಕೊಳ್ಳಲು, ಪರಾಶರಭಗವಾನ್‌ರವರು ಹೇಳುತ್ತಾರೆ: "ಎಲೈ ಮೈತ್ರೇಯನೇ, ಸೂರ್ಯನ ಪತ್ನಿಯಾದ ಸಂಜ್ಞೆಯೆಂಬುವಳು, ವಿಶ್ವಕರ್ಮನ ಮಗಳು. ಇವಳಿಗೆ ಮನು, ಯಮ ಎಂಬ ಇಬ್ಬರು ಗಂಡುಮಕ್ಕಳೂ, ಯಮಿಾ ಎಂಬೊಬ್ಬ ಮಗಳೂ ಇದ್ದರು. ಸಂಜ್ಞೆಯು ತನ್ನ ಪತಿಯಾದ ಸೂರ್ಯನ ತಾಪವನ್ನು ಸಹಿಸಲಾರದೆ, ತನ್ನ ಪ್ರತಿಬಿಂಬವಾದ ಛಾಯಾ ಎಂಬುವಳನ್ನು ತನ್ನ ಸ್ಥಾನ ದಲ್ಲಿರಿಸಿ, ತಪಸ್ಸಿಗೆ ಹೊರಟುಹೋದಳು. ತದಾಪ್ರಭೃತಿ ಸೂರ್ಯನ ಪತ್ನಿಗೆ ಛಾಯಾ ಎಂಬುದಾಗಿ ಪ್ರತೀತಿಯುಂಟಾಯಿತು. ಛಾಯೆಯಲ್ಲಿ ಶನೈಶ್ಚರ, ಮನು, ತಪತಿ ಎಂಬುದಾಗಿ ಮೂವರು ಪುತ್ರರು ಹುಟ್ಟಿದರು. ಛಾಯೆಗೆ ಯಮನಲ್ಲಿ ಪಕ್ಷಪಾತವುಂಟಾಗಿ ಯಮನಿಗೆ, ನಿನ್ನ ಕಾಲುಗಳು ಬಿದ್ದುಹೋಗ ಲೆಂಬುದಾಗಿ ಶಾಪವನ್ನು ಕೊಟ್ಟಳು. ಆಗ ಸೂರ್ಯನೂ, ಯಮನೂ ಸಹ

ಅವಳು ಶಾಪವನ್ನು ಕೊಟ್ಟಿದ್ದುದನ್ನು ನೋಡಿ, ನಿಷ್ಕರುಣೆಯಾದುದರಿಂದ ಸಂಜ್ಞೆಯಲ್ಲವೆಂದು ತಿಳಿದು, ಸೂರ್ಯನು ಛಾಯೆಯನ್ನು ಕುರಿತು, "ನೀನು ಯಾರು ? ನಿಜಸ್ಥಿತಿಯನ್ನು ಹೇಳು" ಎಂಬುದಾಗಿ ಕೇಳಲು ; ಛಾಯೆಯು "ನಾನು ನಿನ್ನ ಪತ್ನಿಯಾದ ಸಂಜ್ಞೆಯಲ್ಲವು. ಸಂಜ್ಞಾಪ್ರತಿಕೃತಳಾದ ಛಾಯೆ" ಎಂದು ಹೇಳಿದಳು. ಆಗ ಸೂರ್ಯನು ಹೆಣ್ಣು ಕುದುರೆಯ ರೂಪದಿಂದ ತಪಸ್ಸು ಮಾಡುತ್ತಿದ್ದ ಸಂಜ್ಞೆಯನ್ನು ಯೋಗದೃಷ್ಟಿಯಿಂದ ಅರಿತವನಾಗಿ, ತಾನೂ ಗಂಡುಕುದುರೆಯ ರೂಪದಿಂದ ಅವಳಲ್ಲಿಗೆ ಬಂದು, ಅವಳಲ್ಲಿ ಅಶ್ವಿನೀದೇವತೆ ಗಳನ್ನೂ, ರೇವಂತನನ್ನೂ ಸಹ ಪಡೆದನು. ಅನಂತರ ಸಂಜ್ಞೆಯನ್ನು ಕರೆದು ಕೊಂಡು ಸ್ವಸ್ಥಾನಕ್ಕೆ ಬಂದನು. ವಿಶ್ವಕರ್ಮನು, ತನ್ನ ಮಗಳಾದ ಸಂಜ್ಞೆಯು, ಸೂರ್ಯನ ತಾಪವನ್ನು ಸಹಿಸಲಾರಳೆಂಬುದಾಗಿ ತಿಳಿದು, ಸೂರ್ಯನ ತಾಪವನ್ನು ಕಡಿಮೆ ಮಾಡಿದನು ಅಂದರೆ ಹೆಚ್ಚಾದ ಕಾಂತಿಯನ್ನು ತೆಗೆದು ಹಾಕಿದನು. ತೆಗೆದುಹಾಕಿದ ಕಾಂತಿಯಿಂದ ಶ್ರೀ ಮಹಾವಿಷ್ಣುವಿಗೆ ಚಕ್ರ ವನ್ನೂ, ರುದ್ರನಿಗೆ ತ್ರಿಶೂಲವನ್ನೂ, ಕುಬೇರನಿಗೆ ಪುಷ್ಪಕವನ್ನೂ, ಗುಹನೆಂಬ ಯಕ್ಷನಿಗೆ ಶಕ್ತಿಯನ್ನೂ, ಇತರ ದೇವತೆಗಳಿಗೆ ಆಯುಧಗಳನ್ನೂ ಸಹ ಮಾಡಿ ಕೊಟ್ಟನು. ಛಾಯಾಪುತ್ರನಾದ ಎರಡನೆಯ ಮನುವೆಂಬುವನು, ಸಾವರ್ಣಿ ಎಂಬುದಾಗಿ ಎಂಟನೆಯ ಮನುವು. ವೈವಸ್ವತಮನುವಾದನಂತರ ಸಾವರ್ಣಿ ಮನ್ವಂತರವು ನಡೆಯುವುದು. ಸಾವರ್ಣಿ ಮನ್ವಂತರದಲ್ಲಿ ಸುತಪಾ, ಅಮಿ ತಾಭಾ ಮೊದಲಾದ ರಾಕ್ಷಸರೂ, ದೀಪ್ತಿಮಾನ್, ಗಾಲವ, ರಾಮ, ಕೃಪ, ದ್ರೌಣಿ, ನನ್ನ ಮಗನಾದ ವ್ಯಾಸನೂ, ಋಷ್ಯಶೃಂಗನೂ ಮೊದಲಾದ ಸಪ್ತರ್ಷಿ ಗಳೂ, ವಿರೋಚನನ ಮಗನಾದ ಬಲಿಯೂ, ಇಂದ್ರನೂ ಸಹ ಆಗುವರು. ವಿರಜಾ ಶರ್ವರೀ ನಿರ್ಮೋಕಾ ಎಂಬುದಾಗಿ ಸಾವರ್ಣಿಗೆ ಪುತ್ರರುಗಳು ನರೇಶ್ವರ ರಾಗುತ್ತಾರೆ. ಒಂಬತ್ತನೆಯ ಮನ್ವಂತರಕ್ಕೆ ದಕ್ಷಸಾವರ್ಣಿ ಮನು ಎಂಬುದಾಗಿ ಮನ್ವಂತರಾಧಿಪತಿಯೂ, ಪಾರಾ, ಮರೀಚಿ, ಗರ್ಭಾ ಮೊದಲಾದ ದೇವತೆ ಗಳೂ, ಮಹಾವೀರ್ಯನಾಮಕನಾದ ಇಂದ್ರನೂ, ಸವನ, ದ್ಯುತಿಮಾನ್, ಹವ್ಯ, ವಸು, ಮೇಧಾತಿಥಿಃ, ಜ್ಯೋತಿಷ್ಮಾನ್, ಸತ್ಯನೆಂಬುದಾಗಿ ಸಪ್ತರ್ಷಿಗಳೂ, ಧೃತ ಕೇತು, ದೀಪ್ತಕೇತು, ಪಂಚಹಸ್ತ, ಪೃಥುಶ್ರವಾ ಎಂಬುದಾಗಿ ದಕ್ಷಸಾವರ್ಣಿಗೆ ಪುತ್ರರೂ ಸಹ ಆಗುತ್ತಾರೆ. ಹತ್ತನೆಯ ಮನ್ವಂತರಕ್ಕೆ ಬ್ರಹ್ಮಸಾವರ್ಣಿ ಎಂಬು ವನು ಮನ್ವಂತರಾಧಿಪತಿಯೂ, ಸುಧಾಪಾ, ವೀರುಧಾ ಮೊದಲಾದ ದೇವತೆ ಗಳೂ, ಶಾಂತಿನಾಮಕನಾದ ಇಂದ್ರನೂ, ಹವಿಷ್ಮಾನ್, ಸುಕೃತ, ಸತ್ಯ, ತಪೋ ಮೂರ್ತಿ, ನಾಭಾಗಾ, ಪ್ರತಿಮಾಚಾ, ಸತ್ಯಕೇತು, ಸುಕ್ಷೇತ್ರ, ಉತ್ತಮಾಜಾ,

ಭೂರಿಷೇಣಾದಿ ಹತ್ತು ಜನ ಪುತ್ರರೂ ಹುಟ್ಟುವರು. ಹನ್ನೊಂದನೆಯ ಮನ್ವಂತರಕ್ಕೆ ಧರ್ಮಸಾವರ್ಣಿ ಎಂಬುದಾಗಿ ಮನ್ವಂತರಾಧಿಪತಿಯೂ, ವಿಹಂಗಮಾ, ಕಾಮಗಮಾ, ನಿರ್ವಾಣಾ, ರುಚಿ ಮೊದಲಾದ ದೇವತೆಗಳೂ, ವೃಷಾನಾಮಕನಾದ ಇಂದ್ರನೂ, ನಿಶ್ಚರ, ಅಗ್ನಿತೇಜಾ, ವಪುಷ್ಮಾನ್, ಘೃಣಿ, ಆರುಣಿ, ಹವಿಷ್ಮಾನ್, ಅನಘಾ ಎಂಬ ಸಪ್ತರ್ಷಿಗಳೂ, ಸರ್ವತ್ರಗಾ, ಸ್ವಧರ್ಮಾ, ದೇವಾನೀಕನೇ ಮೊದಲಾದ ಪುತ್ರರೂ ಸಹ ಆಗುವರು. ಹನ್ನೆರಡನೆಯ ಮನ್ವಂತರಕ್ಕೆ ರುದ್ರಪುತ್ರನಾದ ಸಾವರ್ಣಿ ಎಂಬುವನು ಮನ್ವಂತರಾಧಿಪತಿಯೂ, ಋತುಧಾಮಾನಾಮಕನಾದ ಇಂದ್ರನೂ, ಹರಿತಾ, ರೋಹಿತಾ, ಸುಕರ್ಮಾಣರೆಂಬ ದೇವತೆಗಳೂ, ತಪಸ್ವೀ, ಸುತಪಾ, ತಪೋಮೂರ್ತಿ, ತಪೋರತಿ, ತಪೋಧೃತಿ, ಧೃತಿ ಮೊದಲಾದ ಸಪ್ತರ್ಷಿಗಳೂ, ದೇವವಾನ್, ಉಪದೇವ, ದೇವಶ್ರೇಷ್ಠನೇ ಮೊದಲಾದ ಪುತ್ರರುಗಳೂ ಸಹ ಆಗುವರು. ಹದಿಮೂರನೆಯ ಮನ್ವಂತರಕ್ಕೆ ತಾಚ್ಯನೆಂಬುವನು ಮನ್ವಂತರಾಧಿಪತಿಯು. ಸುತ್ರಾಮಾ, ಸುಧರ್ಮಾ, ಸುಕರ್ಮಾಣರೆಂಬುದಾಗಿ ದೇವತೆಗಳೂ, ದಿವ ಎಂಬ ಇಂದ್ರನೂ, ನಿರ್ಮೋಹ, ತತ್ತ್ವದರ್ಶೀ, ನಿಷ್ಪ್ರಕಂಪ್ಯ, ನಿರುತ್ಸುಕ, ಧೃತಿಮಾನ್, ಅವ್ಯಯರೆಂಬುದಾಗಿ ಸಪ್ತರ್ಷಿಗಳೂ, ಚಿತ್ರಸೇನ, ವಿಚಿತ್ರಾದಿ ಪುತ್ರರೂ ಸಹ ಆಗುವರು. ಹದಿನಾಲ್ಕನೆಯ ಮನ್ವಂತರಕ್ಕೆ ಭೌಮನೆಂಬುವನು ಮನ್ವಂತರಾಧಿಪತಿಯೂ, ಶುಚಿನಾಮಕನಾದ ಇಂದ್ರನೂ, ಚಾಕ್ಷುಷಾಃ, ಪವಿತ್ರ, ಕನಿಷ್ಠ, ಭ್ರಾಜಿತ ಎಂಬ ದೇವತೆಗಳೂ, ಅಗ್ನಿ, ಬಾಹು, ಶುಚಿ, ಶುಕ್ರ, ಮಾಗಧ, ಆಗ್ನೀಧ್ರ, ಯುಕ್ತ, ಜಿತ ಇವರುಗಳು ಸಪ್ತರ್ಷಿಗಳೂ, ಉರು, ಗಂಭೀರ ಮೊದಲಾದ ಮನುಪುತ್ರರೂ ಸಹ ಆಗುವರು. ಈ ಪ್ರಕಾರ ಹದಿನಾಲ್ಕು ಮನ್ವಂತರಗಳನ್ನೂ, ದೇವತೆಗಳನ್ನೂ, ಋಷಿಗಳನ್ನೂ, ರಾಜರುಗಳನ್ನೂ ಸಹ ಹೇಳಿದಹಾಗಾಯಿತು. ಕಲಿಯುಗದ ಅಂತ್ಯದಲ್ಲಿ ವೇದಗಳು ಕ್ಷೀಣವಾಗುವವು, ಆಗ ಸಪ್ತರ್ಷಿಗಳು ಭೂಮಿಯಲ್ಲಿ ಅಂದರೆ ಕೃತಯುಗಾರಂಭದಲ್ಲಿ, ವೇದಗಳನ್ನು ಅಧ್ಯಯನಾದಿಗಳಿಂದ ವೃದ್ಧಿಪಡಿಸುತ್ತಾರೆ. ಪ್ರತಿ ಮನ್ವಂತರದಲ್ಲಿಯೂ ಸ್ಮೃತಿಗಳನ್ನು ಮನ್ವಂತರಾಧಿಪತಿಗಳು ಕಲ್ಪಿಸುತ್ತಾರೆ. ಪ್ರತಿ ಮನ್ವಂತರದಲ್ಲಿಯೂ ದೇವತೆಗಳು ಯಜ್ಞಾದಿಕರ್ಮಗಳನ್ನು ಭುಂಜಿಸುತ್ತಾರೆ. ಪ್ರತಿ ಮನ್ವಂತರಾಧಿಪತಿಗಳ ಪುತ್ರರೇ ಭೂಮಿಯನ್ನು ಪರಿಪಾಲಿಸುತ್ತಾರೆ. ಹದಿನಾಲ್ಕು ಮನ್ವಂತರಗಳೂ ಸಾವಿರಾವರ್ತಿ ಸುತ್ತಿದರೆ ಒಂದು ಕಲ್ಪವಾಗುವುದು. ಇದೇ ಬ್ರಹ್ಮನಿಗೆ ಹಗಲು, ಕಲ್ಪಪ್ರಮಾಣದಷ್ಟೇ ರಾತ್ರಿ ಸಹ ಆಗುವುದು. ರಾತ್ರಿಕಾಲದಲ್ಲಿ ಬ್ರಹ್ಮನು ಮಲಗುತ್ತಾನೆ. ಚತುರ್ಮುಖಬ್ರಹ್ಮಾತ್ಮಕನಾದ ಶ್ರೀಮನ್ನಾರಾಯಣನು ಮೂರುಲೋಕವನ್ನೂ ಗ್ರಾಸಮಾಡಿ, ಅನಂತರ ಯೋಗ

ನಿದ್ರೆಯಿಂದ ಎಚ್ಚರಗೊಂಡು, ಯಥಾಪ್ರಕಾರ ಸೃಷ್ಟಿಕ್ರಮವನ್ನು ಮಾಡುವನು. ಚತುರ್ಯುಗದಲ್ಲಿಯೂ, ಶ್ರೀಮನ್ನಾರಾಯಣನು ಸ್ಥಿತಿ ವ್ಯಾಪಾರಾದಿ ಲಕ್ಷಣ ಯುಕ್ತನಾಗಿ ಯುಗವ್ಯವಸ್ಥೆಯನ್ನು ಮಾಡುತ್ತಾನೆ. ಕೃತಯುಗದಲ್ಲಿ ಭಗವಂತನು ಕಪಿಲಮಹರ್ಷಿಯ ಸ್ವರೂಪವನ್ನು ಧರಿಸಿ, ಸಕಲ ಪ್ರಾಣಿಗಳಿಗೂ ಜ್ಞಾನೋಪ ದೇಶವನ್ನು ಮಾಡುವನು. ತ್ರೇತಾಯುಗದಲ್ಲಿ ಶ್ರೀರಾಮರೂಪವನ್ನು ಧರಿಸಿ ದುಷ್ಟನಿಗ್ರಹವನ್ನು ಮಾಡಿ ಜಗತ್ತನ್ನು ಕಾಪಾಡುವನು. ದ್ವಾಪರಯುಗದಲ್ಲಿ ವೇದವ್ಯಾಸರೂಪವನ್ನು ಧರಿಸಿ, ವೇದವನ್ನು ನಾಲ್ಕು ಭಾಗಮಾಡಿ ಜನಗಳನ್ನು ಕಾಪಾಡುವನು. ಕಲಿಯುಗದಲ್ಲಿ ಕಲ್ಕ್ಯಸ್ವರೂಪನಾಗಿ, ದುರ್ಮಾರ್ಗಪ್ರವರ್ತಕ ರನ್ನು ನಾಶಮಾಡಿ, ಧರ್ಮಸ್ಥಾಪನೆಯನ್ನು ಮಾಡುವನು. ಈ ಪ್ರಕಾರ ಸಕಲ ಜಗತ್ತನ್ನೂ ಪರಿಪಾಲಿಸುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶದಲ್ಲಿ
ಎರಡನೆಯ ಅಧ್ಯಾಯವು ಸಮಾಪ್ತಃ

ಮೂರನೆಯ ಅಧ್ಯಾಯವು

ಮೈತ್ರೇಯನು ಪರಾಶರರನ್ನು ಕೇಳುತ್ತಾನೆ: "ಎಲೈ ಭಗವಂತನೇ, ನೀನು ಅಪ್ಪಣೆ ಕೊಡಿಸಿದ ಮನ್ವಂತರಗಳನ್ನೂ, ಮನ್ವಂತರಾಧಿಪತಿಗಳನ್ನೂ ಸಹ ಕೇಳಿದೆನು. ಈಗ ವೇದವ್ಯಾಸರೂಪದಿಂದ ವೇದಶಾಖಾಭೇದಗಳನ್ನು ಮಾಡಿದ ವಿಷಯವನ್ನೂ ವೇದವ್ಯಾಸರೂಪನಾದ ಶ್ರೀಮನ್ನಾರಾಯಣನು ಯಾವಯಾವ ಯುಗದಲ್ಲಿ ಯಾವಯಾವ ರೂಪವನ್ನು ಧರಿಸಿದನೆಂಬುದನ್ನೂ ಸಹ ನನಗೆ ಅನುಗ್ರಹಿಸೆಂಬುದಾಗಿ" ಕೇಳಲು, ಪರಾಶರಮಹರ್ಷಿಯು ಹೇಳುತ್ತಾನೆ: "ಎಲೈ ಮೈತ್ರೇಯನೇ, ವೇದವೆಂಬ ವೃಕ್ಷವು ಸಾವಿರಾರು ಕೊಂಬೆಗಳಿಂದ ಕೂಡಿರುವುದು ; ಇವುಗಳನ್ನು ವಿಸ್ತಾರವಾಗಿ ಹೇಳುವುದಕ್ಕೆ ಸಾಧ್ಯವಾಗಲಾರದು. ಆದುದರಿಂದ ಸಂಕ್ಷೇಪವಾಗಿ ಹೇಳುತ್ತೇನೆ ಕೇಳು—ಪ್ರತಿ ದ್ವಾಪರಯುಗದಲ್ಲಿಯೂ ಶ್ರೀಮನ್ನಾ ರಾಯಣನು ವೇದವ್ಯಾಸರೂಪದಿಂದ ವೇದವನ್ನು ಅನೇಕ ವಿಧಗಳನ್ನಾಗಿ, ಜಗದ್ಧಿ ತಾರ್ಥವಾಗಿ ಭಾಗಮಾಡುತ್ತಾನೆ. ಮನುಷ್ಯರಿಗೆ ಅಲ್ಪವಾದ ಆಯುಸ್ಸೂ, ವೀರ್ಯವೂ, ತೇಜಸ್ಸೂ ಸಹ ಉಂಟಾಗುವುದರಿಂದ, ಇವರ ಉಜ್ಜೀವನಾರ್ಥವಾಗಿ, ವೇದವಿಭೇದಗಳನ್ನು ಕಲ್ಪಿಸಿಕೊಟ್ಟು, ಇದರಿಂದ ವೇದವ್ಯಾಸರೆಂಬ ಹೆಸರನ್ನು ಪಡೆದಿರುತ್ತಾನೆ. ಇದುವರೆಗೆ ಇಪ್ಪತ್ತೆಂಟಾವರ್ತಿ ವೇದವ್ಯಾಸಾವತಾರವು

ಕಳೆದುಹೋಯಿತು. ಆದುದರಿಂದ ದ್ವಾಪರಯುಗವೂ ಸಹ ಇಪ್ಪತ್ತೆಂಟಾವರ್ತಿ ಕಳೆದುಹೋದ ಹಾಗಾಯಿತು. ಮೊದಲನೆಯ ದ್ವಾಪರದಲ್ಲಿ ಶ್ರೀಮನ್ನಾರಾಯಣನೇ ವೇದವಿಭಾಗವನ್ನು ಮಾಡಿದನು. ಎರಡನೆಯ ದ್ವಾಪರದಲ್ಲಿ ಚತುರ್ಮುಖ ಬ್ರಹ್ಮಾತ್ಮಕನಾದ ವ್ಯಾಸನೂ, ಮೂರನೆಯ ದ್ವಾಪರದಲ್ಲಿ ಶುಕ್ರಾಚಾರ್ಯರೂಪಿಯಾದ ವ್ಯಾಸನೂ, ನಾಲ್ಕನೆಯ ದ್ವಾಪರದಲ್ಲಿ ಬೃಹಸ್ಪತಿರೂಪಿಯಾಗಿಯೂ, ಅನಂತರ ಸೂರ್ಯರೂಪಿಯಾಗಿಯೂ, ಆರನೆಯ ದ್ವಾಪರದಲ್ಲಿ ಮೃತ್ಯುರೂಪಿಯಾಗಿಯೂ, ಏಳನೆಯ ದ್ವಾಪರದಲ್ಲಿ ಇಂದ್ರನಾಗಿಯೂ, ಎಂಟನೆಯ ದ್ವಾಪರದಲ್ಲಿ ವಸಿಷ್ಠನಾಗಿಯೂ, ಒಂಬತ್ತನೆಯ ದ್ವಾಪರದಲ್ಲಿ ಸಾರಸ್ವತನಾಗಿಯೂ, ಹತ್ತರಲ್ಲಿ ತ್ರಿಧಾಮನಾಗಿಯೂ, ಹನ್ನೊಂದರಲ್ಲಿ ತ್ರಿವೃಷನಾಗಿಯೂ, ಅನಂತರ ಭರದ್ವಾಜನಾಗಿಯೂ, ಆಮೇಲೆ ಅಂತರಿಕ್ಷನಾಗಿಯೂ, ಹದಿನಾಲ್ಕರಲ್ಲಿ ಧರ್ಮಿಯಾಗಿಯೂ, ಹದಿನೈದರಲ್ಲಿ ತ್ರ್ಯಯಾರುಣಿಯಾಗಿಯೂ, ಹದಿನಾರರಲ್ಲಿ ಧನಂಜಯನಾಗಿಯೂ, ಹದಿನೇಳರಲ್ಲಿ ಕೃತಂಜಯನಾಗಿಯೂ, ಹದಿನೆಂಟರಲ್ಲಿ ಸಂಜಯನಾಗಿಯೂ, ನಂತರ ಭರದ್ವಾಜನೂ, ಭರದ್ವಾಜನಿಂದ ಗೌತಮನೂ, ಗೌತಮನಿಂದ ಉತ್ತಮನಾಗಿಯೂ, ಹರ್ಯಾತ್ಮಕನಾಗಿಯೂ, ಹರ್ಯಾತ್ಮಕನಿಂದ ವೇನನೂ, ವೇನನಿಂದ ವಾಜಿಶ್ರವನೂ, ವಾಜಿಶ್ರವನಿಂದ ಸೋಮಶುಷ್ಮಾಯಣನೂ, ಇವನಿಂದ ತೃಣಬಿಂದುವೂ, ತೃಣಬಿಂದುವಿನಿಂದ ಋಕ್ಷನೂ, ಇವನಿಂದ ಭಾರ್ಗವನೂ, ಭಾರ್ಗವನಿಂದ ವಾಲ್ಮೀಕಿಯೂ, ವಾಲ್ಮೀಕಿಯಿಂದ ನನ್ನ ತಂದೆಯಾದ ಶಕ್ತಿಯೂ, ಶಕ್ತಿಯಿಂದ ಪರಾಶರನಾದ ನಾನೂ, ನನ್ನಿಂದ ದ್ವೈಪಾಯನನೂ, ಈ ಪ್ರಕಾರ ಇಪ್ಪತ್ತೆಂಟು ವೇದವ್ಯಾಸ ಅವತಾರಗಳು ನಡೆದಿರುವುವು. ಮುಂದಿನ ದ್ವಾಪರದಲ್ಲಿ ದ್ರೋಣಪುತ್ರನಾದ ಅಶ್ವತ್ಥಾಮನು ವೇದವ್ಯಾಸನಾಗುತ್ತಾನೆ. ನನ್ನ ಮಗನಾದ ಕೃಷ್ಣದ್ವೈಪಾಯನು ವ್ಯಾಸರೂಪದಿಂದ, ಪ್ರಣವಾಕ್ಷರವು ಅವಿನಾಶಿಯಾದುದೆಂದು ಸ್ಥಾಪಿಸುವನು. ಪ್ರಣವಾಕ್ಷರವು ಬ್ರಹ್ಮಶಬ್ದಕ್ಕೆ ಮೊದಲನೆಯ ಅಕ್ಷರವಾಗಿರುವುದು. ಬ್ರಹ್ಮನೆಂದರೆ ಅಪರಿಚ್ಛಿನ್ನನಾಗಿರುವುದರಿಂದಲೂ, ವೇದಗಳ ಬೃಂಹಣದಿಂದಲೂ, ಬ್ರಹ್ಮನೆಂಬ ಶಬ್ದವುಂಟಾಯಿತು. ಆದುದರಿಂದ ಬ್ರಹ್ಮಶಬ್ದವು ಪ್ರಣವಾಕ್ಷರದಲ್ಲಿರತಕ್ಕುದಾಗಿದೆ. ಇಂತಹ ಋಗ್ಯಜುಸ್ಸಾಮಾಥರ್ವರೂಪಿಯಾದ ಬ್ರಹ್ಮನಿಗೆ ನಮಸ್ಕಾರವು. ಜಗತ್ತಿನ ಪ್ರಳಯ ಉತ್ಪತ್ತಿಗಳಿಗೆ ಕಾರಣನಾಗಿಯೂ, ಪರಮಗುಹ್ಯನಾಗಿಯೂ ಇರುವ ಶಬ್ದಾತ್ಮಕನಾದ ಪರಬ್ರಹ್ಮನಿಗೆ ನಮಸ್ಕಾರವು. ಅಪಾರನಾಗಿಯೂ, ಅಕ್ಷಯನಾಗಿಯೂ, ಜಗತ್ಸಂಮೋಹಕ್ಕೆ ಆಲಯನಾಗಿಯೂ, ಪ್ರಕಾಶ, ಪ್ರವೃತ್ತಿ ಇವುಗಳಿಂದ ಪುರುಷಾರ್ಥಪ್ರಯೋಜನ

ನಾಗಿಯೂ, ಶಮದಮಾತ್ಮಕರಾದ ಯೋಗಿಗಳಿಗೆ ಗತಿಯಾಗಿಯೂ, ಶಾಶ್ವತ ನಾಗಿಯೂ ಇರುವ ಪರಬ್ರಹ್ಮನಿಗೆ ನಮಸ್ಕಾರವು. ಋಗ್ವೇದಮಯನಾಗಿಯೂ, ಯಜುರ್ವೇದ, ಸಾಮವೇದಮಯನಾಗಿಯೂ ಇರುವ ವಾಸುದೇವಾತ್ಮಕನಾದ ಪರಮಾತ್ಮನಿಗೆ ನಮಸ್ಕಾರವು. ಈ ಪ್ರಕಾರ ಶ್ರೀಮನ್ನಾರಾಯಣನು ಅಪಾರ ವಾದ ವೇದಸ್ವರೂಪನಾದವನು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶದಲ್ಲಿ
ಮೂರನೆಯ ಅಧ್ಯಾಯವು ಸಮಾಪ್ತಃ

ನಾಲ್ಕನೆಯ ಅಧ್ಯಾಯವು

ವೇದವು ಋಗ್ವೇದಾದಿ ಸಂಜ್ಞೆಗಳಿಂದ ನಾಲ್ಕು ಭಾಗಗಳಾಗಿರುವುವು. ಈ ನಾಲ್ಕು ಭಾಗಗಳೂ ಸಾವಿರಾರು ಶಾಖೆಗಳಿಂದ ಕೂಡಿರತಕ್ಕವುಗಳು. ವೇದಗಳ ನಾಲ್ಕು ಭಾಗಗಳಿಂದ ಯಜ್ಞಗಳು ಹತ್ತು ಭಾಗಗಳಾಗಿ ವಿಭಾಗಿಸಲ್ಪಟ್ಟವು. ಅವು ಯಾವುವೆಂದರೆ, ಅಗ್ನಿಹೋತ್ರ, ದರ್ಶಪೂರ್ಣಮಾಸ, ಚಾತುರ್ಮಾಸ್ಯ, ಪಶುಬಂಧ, ಸೋಮ ಎಂಬುದಾಗಿ ಐದು ವಿಧಗಳು. ಇವುಗಳೇ ಪ್ರಕೃತಿ ವಿಕೃತಿ ಗಳಾಗಿ ಹತ್ತು ಭಾಗಗಳಾಗಿರುವುವು. ಅಥವಾ ದೇವಯಜ್ಞ, ಪಿತೃಯಜ್ಞ, ಭೂತಯಜ್ಞ, ಮನುಷ್ಯಯಜ್ಞ, ಬ್ರಹ್ಮಯಜ್ಞಗಳೆಂಬುದಾಗಿ ಹತ್ತು ವಿಧಗಳು. ಇಪ್ಪತ್ತೆಂಟನೆಯ ದ್ವಾಪರಯುಗದಲ್ಲಿ, ಶ್ರೀಮನ್ನಾರಾಯಣನು ನನ್ನ ಮಗನಾದ ವೇದವ್ಯಾಸರೂಪಿನಿಂದ ಬಂದು ವೇದವನ್ನು ನಾಲ್ಕು ಭಾಗ ಮಾಡಿದನು. ಇಪ್ಪತ್ತೇಳನೆಯ ದ್ವಾಪರದಲ್ಲಿಯೂ ಸಹ ನಾನೂ ಇದೇ ಪ್ರಕಾರ ವೇದಭಾಗ ವನ್ನು ಮಾಡಿದೆನು. ಕೃಷ್ಣದ್ವೈಪಾಯನನಾದ ವೇದವ್ಯಾಸನನ್ನು ಪ್ರಭುವಾದ ಶ್ರೀಮನ್ನಾರಾಯಣನೆಂದು ತಿಳಿ. ನಾರಾಯಣಾಂಶತ್ವವು ಇಲ್ಲದಿದ್ದರೆ, ಯಾರಾ ದರೂ ಮಹಾಭಾರತವನ್ನು ಮಾಡುತ್ತಿದ್ದರೇ? ಮಹಾತ್ಮನಾದ ನನ್ನ ಮಗ ನಾದ ವೇದವ್ಯಾಸನಿಂದ, ದ್ವಾಪರಯುಗದಲ್ಲಿ ವೇದವಿಭೇದಗಳನ್ನು ಮಾಡಿದ ವಿಷಯವನ್ನು ಹೇಳುತ್ತೇನೆ ಕೇಳು. ಚತುರ್ಮುಖಬ್ರಹ್ಮನಿಂದ ಪ್ರೇರಿತನಾದ ವೇದವ್ಯಾಸ ಋಷಿಯು, ವೇದವನ್ನು ನಾಲ್ಕು ಭಾಗ ಮಾಡಿ ಋಗ್ವೇದ ಭಾಗವನ್ನು ಪೈಲ ಋಷಿಗೂ, ಯಜುರ್ವೇದವನ್ನು ವೈಶಂಪಾಯನ ಋಷಿಗೂ, ಸಾಮವೇದವನ್ನು ಜೈಮಿನಿಗೂ, ಅಥರ್ವ ವೇದವನ್ನು ಸುಮಂತುವಿಗೂ, ಇತಿಹಾಸ ಪುರಾಣಗಳನ್ನು ರೋಮಹರ್ಷಣನಾಮಕನಾದ ಸೂತ ಪುರಾಣೀಕ

ಋಷಿಗೂ ಕೊಟ್ಟನು. ಒಂದೇ ವೇದವಾದ ಯಜುರ್ವೇದವನ್ನು ನಾಲ್ಕು ಭಾಗ ಮಾಡಿದುದರಿಂದ ನಾಲ್ಕು ಹೋತ್ರಾತ್ಮಕವಾಗಿ ಯಜ್ಞಗಳುಂಟಾದವು. ಯಜುರ್ವೇದದಿಂದ ಅಧ್ವರ್ಯುವನ್ನೂ, ಋಗ್ವೇದದಿಂದ ಹೌತೃವನ್ನೂ, ಸಾಮವೇದದಿಂದ ಔದ್ಗಾತೃವನ್ನೂ, ಅದರ ವೇದದಿಂದ ಬ್ರಹ್ಮತ್ವವನ್ನೂ ನಾಲ್ಕು ವಿಧವಾಗಿ ಕಲ್ಪಿಸಿದನು. ವೇದವೆಂಬ ಒಂದೇ ವೃಕ್ಷದಿಂದ ನಾಲ್ಕು ವೇದಕಾನನಗಳಾದುವು. ಪೈಲ ಋಷಿಯು ಋಗ್ವೇದವನ್ನು ನಾಲ್ಕು ಭಾಗ ಮಾಡಿ, ಮೊದಲನೆಯ ಭಾಗವನ್ನು ಇಂದ್ರಪ್ರಮತಿಗೂ, ಬಾಷ್ಕಲನಿಗೂ ಕೊಟ್ಟನು. ಬಾಷ್ಕಲನು ನಾಲ್ಕು ಭಾಗವನ್ನು ಮಾಡಿ ಶಿಷ್ಯರಾದ ಬೋಧ್ಯಾಗ್ನಿಗಳಿಗೆ ಉಪದೇಶ ಮಾಡಿದನು. ಬೋಧ್ಯಾಗ್ನಿ, ಮೂಢಕ, ಯಾಜ್ಞವಲ್ಕ್ಯ, ಪರಾಶರ ಇವರು ನಾಲ್ಕು ಜನಗಳೂ, ಬಾಷ್ಕಲ ಋಷಿಯಿಂದ ಉಪದೇಶ ಮೂಲಕ ಪರಿಗ್ರಹಿಸಿದ್ದ ವೇದಭಾಗಗಳನ್ನು, ಅನೇಕ ಶಾಖೋಪಶಾಖೆಗಳಾಗಿ ಭಾಗಿಸಿ, ಶಿಷ್ಯಪ್ರಶಿಷ್ಯರಿಗೆ ಉಪದೇಶ ಮಾಡಿದರು. ಇಂದ್ರಪ್ರಮಿತೆಯು ಒಂದು ಸಂಹಿತೆಯನ್ನು ತನ್ನ ಮಗನಾದ ಮಾಂಡೂಕೇಯನಿಗೆ ಉಪದೇಶ ಮಾಡಿದನು. ವೇದಮಿತ್ರನಾದ ಶಾಕಲ್ಯನು ಒಂದು ಸಂಹಿತೆಯನ್ನು ಐದು ಭಾಗ ಮಾಡಿ, ಮುದ್ಗಲ, ಗೋಮುಖ, ವಾತ್ಸ್ಯ, ಶಾಲೇಯ, ಶೈಶಿರ ಎಂಬೀ ಐದು ಜನ ಶಿಷ್ಯರಿಗೆ ಉಪದೇಶ ಮಾಡಿದನು. ಶಾಕಪೂರ್ಣ ಋಷಿಯು ಒಂದು ಸಂಹಿತೆಯನ್ನು ಮೂರು ಭಾಗ ಮಾಡಿ ನಿರುಕ್ತವೆಂಬ ವೇದಶಬ್ದಾರ್ಥವನ್ನು ಪ್ರಕಾಶಪಡಿಸುವ ವೇದಾಂಗವನ್ನು ಕಲ್ಪಿಸಿ, ನಿರುಕ್ತನೆಂಬ ಶಿಷ್ಯನಿಗೆ ಉಪದೇಶ ಮಾಡಿದನು. ಈ ಪ್ರಕಾರ ಅನುಶಾಖೆಗಳೂ ಸಹ ಉಂಟಾದವು. ಹೀಗೆ ಮೇಲೆ ಹೇಳಿದವರೆಲ್ಲರೂ ಬಹ್ವೃಚರುಗಳು, ಅಂದರೆ ಋಗ್ವೇದಗಳನ್ನು ಶಾಖೆಗಳನ್ನಾಗಿಯೂ, ಅನುಶಾಖೆಗಳನ್ನಾಗಿಯೂ ಮಾಡಿದವರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶದಲ್ಲಿ
ನಾಲ್ಕನೆಯ ಅಧ್ಯಾಯವು ಸಮಾಪ್ತಃ

ಐದನೆಯ ಅಧ್ಯಾಯವು

"ವೇದವ್ಯಾಸ ಋಷಿಯ ಶಿಷ್ಯನಾದ ವೈಶಂಪಾಯ ಮುನೀಶ್ವರನು ಯಜುರ್ವೇದವೆಂಬ ವೃಕ್ಷಕ್ಕೆ ಇಪ್ಪತ್ತೇಳು ಶಾಖೆಗಳನ್ನು ಮಾಡಿ ಶಿಷ್ಯರಿಗೆ ಉಪದೇಶ ಮಾಡಿದನು. ಬ್ರಹ್ಮರಾತನ ಮಗನಾದ ಯಾಜ್ಞವಲ್ಕ್ಯಮುನಿಯು ವೈಶಂಪಾ

ಯನ ಋಷಿಗೆ ಶಿಷ್ಯನಾಗಿ ಗುರುಸೇವೆಯನ್ನು ಮಾಡಿಕೊಂಡಿದ್ದನು. ಪೂರ್ವದಲ್ಲಿ ಋಷಿಗಳು ಮೇರುಪರ್ವತದಲ್ಲಿ ಸಭೆಯನ್ನು ಮಾಡಿಕೊಂಡು ಆ ಸಭೆಗೆ ಪ್ರತಿಯೊಬ್ಬ ಋಷಿಯೂ ಬರಬೇಕು, ಹಾಗೆ ಏಳು ದಿವಸದಲ್ಲಿ ಬಾರದೇ ಇದ್ದರೆ ಅವನಿಗೆ ಬ್ರಹ್ಮಹತ್ಯಾದೋಷವುಂಟಾಗುವುದೆಂದು ನಿಶ್ಚಯಿಸಿದ್ದರು. ವೈಶಂಪಾಯನ ಋಷಿಯು ಈ ನಿಬಂಧನೆಯನ್ನು ಅತಿಕ್ರಮಿಸಿದನು. ಇದರಿಂದ ಬ್ರಹ್ಮಹತ್ಯಾದೋಷವುಂಟಾಯಿತು. ಅಲ್ಲದೆ ವೈಶಂಪಾಯನ ಋಷಿಯು ತನ್ನ ಆಜ್ಞೆಯನ್ನು ಅತಿಕ್ರಮಿಸಿದ ತಂಗೀ ಮಗನನ್ನು ಕಾಲಿನಿಂದ ಒದ್ದುದರಿಂದ ಹುಡುಗನು ಸತ್ತುಹೋದನು. ಆಗ ವೈಶಂಪಾಯ ಮುನೀಂದ್ರನಿಗೆ ಎರಡು ವಿಧವಾಗಿ ಬ್ರಹ್ಮಹತ್ಯಾದೋಷವುಂಟಾಯಿತು. ವೈಶಂಪಾಯನು ಶಿಷ್ಯರನ್ನು ಕುರಿತು ನನ್ನ ಬ್ರಹ್ಮತ್ಯಾನಿವಾರಣಾರ್ಥವಾಗಿ ನೀವು ವ್ರತವನ್ನು ಆಚರಿಸಿ ಎಂದು ಆಜ್ಞಾಪಿಸಲು, ಯಾಜ್ಞವಲ್ಕ್ಯನು ಗುರುವಿಗೆ ಹೇಳುತ್ತಾನೆ: "ಓ ಗುರುವಾದ ವೈಶಂಪಾಯ ಮುನೀಂದ್ರನೇ, ಅಲ್ಪತೇಜಸ್ವಿಗಳಾದ ಶಿಷ್ಯರಿಂದ ಸಹಿತವಾಗಿ ಈ ವ್ರತವನ್ನು ಹೇಗೆ ಆಚರಿಸಲಿ?" ಎಂಬುದಾಗಿ ಕೇಳಲು; ಆ ಮಾತಿಗೆ ವೈಶಂಪಾಯನು ಕೋಪಿಸಿಕೊಂಡು ಶಿಷ್ಯನಾದ ಯಾಜ್ಞವಲ್ಕ್ಯನನ್ನು ಕುರಿತು ಹೇಳುತ್ತಾನೆ: "ಎಲೈ ಯಾಜ್ಞವಲ್ಕ್ಯನೇ, ನೀನು ನನ್ನ ಮಾತಿಗೆ ವ್ಯತಿರಿಕ್ತವಾಗಿ ಹೇಳುವೆ. ನನ್ನ ಆಜ್ಞಾಭಂಗವನ್ನು ಮಾಡಿದ್ದುದರಿಂದ ನಿನ್ನ ಶಿಷ್ಯತ್ವವು ನನಗೆ ಬೇಕಾಗಿರುವುದಿಲ್ಲ. ಇದುವರೆಗೆ ನನ್ನಿಂದ ಅಭ್ಯಾಸಮಾಡಿದ ವಿದ್ಯೆಯನ್ನು ಕೊಟ್ಟುಬಿಡು. ನೀನು ಗುರುವಿಗೆ ಅವಮಾನ ಮಾಡತಕ್ಕವನೆ" ಎಂಬುದಾಗಿ ಹೇಳಲು; ಯಾಜ್ಞವಲ್ಕ್ಯನೂ ಸಹ ಕೋಪಿಸಿಕೊಂಡು, "ಆಚಾರ್ಯನೇ, ನಿನ್ನಲ್ಲಿ ಭಕ್ತ್ಯತಿಶಯದಿಂದ ನಾನು ಹೇಳಿದ ಮಾತಿಗೆ ನಿನಗೆ ಆಗ್ರಹವುಂಟಾಗಿ ವಿದ್ಯೆಯನ್ನು ಹಿಂತಿರುಗಿ ಕೊಡು ಎಂಬುದಾಗಿ ಹೇಳಿದ್ದುದರಿಂದ ನಿನ್ನ ಗುರುತ್ವವೂ ಸಹ ನನಗೆ ಅವಶ್ಯಕವಿಲ್ಲಾ" ಎಂಬುದಾಗಿ ಬಾಯಿಯಲ್ಲಿ ಬೆರಳು ಹಾಕಿ ತಾನು ಅಭ್ಯಾಸಮಾಡಿದ್ದ ವೇದವೆಲ್ಲವನ್ನೂ ವಮನಮಾಡಿ ಸ್ವೇಚ್ಛೆಯಿಂದ ಹೊರಟುಹೋದನು. ಆಗ ಋಷಿಗಳು ತಿತ್ತಿರಿಪಕ್ಷಿರೂಪದಿಂದ ಯಾಜ್ಞವಲ್ಕ್ಯನು ವಮನಮಾಡಿದ್ದ ವೇದಗಳನ್ನು ಪರಿಗ್ರಹಿಸಿದರು. ಇದರಿಂದ ಯಜುರ್ವೇದಿಗಳಿಗೆ ತೈತ್ತರೀಯರೆಂಬುದಾಗಿ ಹೆಸರುಂಟಾಯಿತು. ವೈಶಂಪಾಯನಿಂದ ಆಜ್ಞಪ್ತರಾದ ಶಿಷ್ಯರು ಬ್ರಹ್ಮಹತ್ಯಾನಿವೃತ್ಯರ್ಥವಾದ ವ್ರತವನ್ನು ಆಚರಿಸಿ, ವೈಶಂಪಾಯನನ್ನು ಬ್ರಹ್ಮಹತ್ಯಾದೋಷದಿಂದ ಮುಕ್ತನನ್ನಾಗಿ ಮಾಡಿದರು. ಅನಂತರದಲ್ಲಿ ಯಾಜ್ಞವಲ್ಕ್ಯನು ಯಜುರ್ವೇದಾಧ್ಯಯನದಲ್ಲಿ ಅಭಿಲಾಷೆಯುಳ್ಳವನಾಗಿ ಸೂರ್ಯನನ್ನು ಪ್ರಾರ್ಥಿಸುತ್ತಾನೆ: "ಮಹಾ ತೇಜಸ್ವಿಯಾಗಿಯೂ,

ಋಗ್ಯಜುಸ್ಸಾಮಭೂತನಾಗಿಯೂ, ಮುಕ್ತಿದ್ವಾರನಾಗಿಯೂ ಇರುವ ಸೂರ್ಯನಿಗೆ ನಮಸ್ಕಾರವು. ಅಗ್ನಿಷ್ಟೋಮರೂಪನಾಗಿಯೂ, ಜಗತ್ಕಾರಣನಾಗಿಯೂ, ಸುಷುಮ್ನಾನಾಮಕವಾದ ಕಿರಣವನ್ನು ಧರಿಸಿದವನಾಗಿಯೂ, ಯೋಗಿಧ್ಯೇಯನಾಗಿಯೂ, ವಿಶ್ವರೂಪಿಯಾಗಿಯೂ, ಮೋಕ್ಷರೂಪಿಯಾಗಿಯೂ, ತ್ರಿಕಾಲಭೂತನಾಗಿಯೂ, ಲೋಕಗಳ ಕತ್ತಲೆಯನ್ನು ಪರಿಹಾರಮಾಡುವವನಾಗಿಯೂ, ಕಿರಣಗಳಿಂದ ಲೋಕಗಳನ್ನು ಪವಿತ್ರ ಮಾಡುವವನಾಗಿಯೂ, ಕರ್ಮಸಾಕ್ಷಿಯಾಗಿಯೂ, ಜಗತ್ತಿಗೆ ನೇತ್ರನಾಗಿಯೂ ಇರುವ ಸೂರ್ಯನನ್ನು ನಮಸ್ಕರಿಸುತ್ತೇನೆ." ಈ ಪ್ರಕಾರ ಸೂರ್ಯನನ್ನು ಪ್ರಾರ್ಥಿಸಲು ಸೂರ್ಯನು ಪ್ರತ್ಯಕ್ಷನಾಗಿ, "ಎಲೈ ಯಾಜ್ಞವಲ್ಕ್ಯನೇ, ನಿನ್ನ ಇಷ್ಟಾರ್ಥವನ್ನು ಅಪೇಕ್ಷಿಸು" ಎಂಬುದಾಗಿ ಹೇಳಲು ಆದಕ್ಕೆ ಯಾಜ್ಞವಲ್ಕ್ಯನು "ಓ ಭಗವಂತನೆ, ವೈಶಂಪಾಯಮುನೀಂದ್ರನಿಗೆ ತಿಳಿಯದಿರತಕ್ಕ ಯಜುರ್ವೇದವನ್ನು ನನಗೆ ಕೊಡು" ಎಂಬುದಾಗಿ ಪ್ರಾರ್ಥಿಸಲು; ಸೂರ್ಯನು ಅದೇ ಪ್ರಕಾರ ವರವನ್ನು ಕೊಟ್ಟನು. ಯಾಜ್ಞವಲ್ಕ್ಯನು ಸೂರ್ಯನಿಂದ ಅಯಾತಯಾಮಸಂಜ್ಞೆಗಳಾದ ಯಜುರ್ವೇದಗಳನ್ನು ಪಡೆದು, ಹದಿನೈದು ಭಾಗಗಳನ್ನು ಮಾಡಿ ಕಣ್ವಾದಿಋಷಿಗಳಿಗೆ ಉಪದೇಶ ಮಾಡಿದನು. ಸೂರ್ಯನು ಕುದುರೆಯ ರೂಪದಿಂದ ಯಾಜ್ಞವಲ್ಕ್ಯನಿಗೆ ವರವನ್ನು ಕೊಟ್ಟುದರಿಂದ ಈ ವೇದವನ್ನು ಅಧ್ಯಯನ ಮಾಡಿದ ಶಾಖಾಪ್ರವರ್ತಕರಿಗೆ ವಾಜಿನರೆಂಬ ಹೆಸರು ಪ್ರಖ್ಯಾತವಾಯಿತು. ಇದರಿಂದ ವಾಜಸನೇಯಶಾಖಾದವರು ಪ್ರವರ್ತಕರಾದರು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶದಲ್ಲಿ
ಐದನೆಯ ಅಧ್ಯಾಯವು ಸಮಾಪ್ತಃ

ಆರನೆಯ ಅಧ್ಯಾಯವು

"ವ್ಯಾಸಶಿಷ್ಯನಾದ ಜೈಮುನಿಯು ಸಾಮವೇದವನ್ನು ಪರಿಗ್ರಹಿಸಿ ತನ್ನ ಮಗನಾದ ಸುಮಂತುವಿಗೂ ಸುಮಂತುಮಗನಾದ ಸುತ್ವನಿಗೂ ಸಹ, ಸಾಮವೇದವನ್ನು ಎರಡು ಸಂಹಿತೆಯಾಗಿ ಮಾಡಿ ಇಬ್ಬರಿಗೂ ಒಂದೊಂದು ಸಂಹಿತೆಯನ್ನು ಉಪದೇಶಮಾಡಿದನು. ಸುತ್ವನು ತನ್ನ ಮಗನಾದ ಸುಕರ್ಮನೆಂಬುವನಿಗೆ ಸಹಸ್ರ ಸಂಹಿತೆಯನ್ನು ಮಾಡಿ ಉಪದೇಶ ಮಾಡಿದನು. ಸುಕರ್ಮನು ಕೌಸಲ್ಯ ಪೌಷ್ಟಿಂಜಿ ಎಂಬ ಇಬ್ಬರು ಶಿಷ್ಯರಿಗೆ ಉಪದೇಶ ಮಾಡಿದನು. ಪೌಷ್ಟಿಂಜಿಯು

ಐನೂರು ಜನ ಶಿಷ್ಯರಿಗೆ ಸಹಸ್ರ ಶಾಖೆಯನ್ನು ಉಪದೇಶ ಮಾಡಿದನು. ಇವರುಗಳೆಲ್ಲರೂ ಸಾಮಗರು. ಹಿರಣ್ಯನಾಭನಾದ ಕೌಸಲ್ಯನು ಅಧ್ಯಯನ ಮಾಡಿದ ಒಂದು ಸಂಹಿತೆಯನ್ನು ಇಪ್ಪತ್ತುನಾಲ್ಕು ಸಂಹಿತೆಯನ್ನಾಗಿ ಮಾಡಿ ಲೋಕಾಕ್ಷಿ, ಕಾಮುದೀ, ಕಕ್ಷೀವಾನ್, ಲಾಂಗಲಿ ಇವರುಗಳಿಗೆ ಉಪದೇಶ ಮಾಡಿದನು. ಇವರುಗಳೆಲ್ಲರೂ ಶಾಖೋಪಶಾಖೆಗಳಾಗಿ ಸಾಮಗಾಯನರು ಆದರು. ವೇದವ್ಯಾಸ ಶಿಷ್ಯನಾದ ಸುಮಂತುವು ಅಥರ್ವವೇದವನ್ನು ಅಧ್ಯಯನಮಾಡಿ ಕಬಂಧನೆಂಬ ಶಿಷ್ಯನಿಗೆ ಉಪದೇಶ ಮಾಡಿದನು. ಕಬಂಧನು ದೇವದರ್ಶನೆಂಬ ಶಿಷ್ಯನಿಗೂ ದೇವದರ್ಶನು ಪಥ್ಯನೆಂಬುವನಿಗೂ ಸಹ ಪರಂಪರೆಯಾಗಿ ಉಪದೇಶ ಮಾಡಿದರು. ದೇವದರ್ಶನಿಗೆ ಮೇಧ, ಬ್ರಹ್ಮ, ಬಲಿ, ಶೌಲ್ಕಾಯನಿ, ಪಿಪ್ಪಲಾದ ಮೊದಲಾದವರು ಶಿಷ್ಯರಾಗಿ, ಅಥರ್ವ ಶಾಖೆಯನ್ನು ವೃದ್ಧಿಪಡಿಸಿದರು. ಪಥ್ಯನು ಜಾಬಾಲಿ, ಕುಮುದ, ಶೌನಕ ಇವರುಗಳಿಗೆ ಉಪದೇಶ ಮಾಡಿದನು. ಶೌನಕನು ತಾನು ಅಧ್ಯಯನ ಮಾಡಿದ ಸಂಹಿತೆಯನ್ನು ಎರಡು ಭಾಗಮಾಡಿ ಬಭ್ರು, ಸೈಂಧವರೆಂಬ ಶಿಷ್ಯರಿಗೆ ಉಪದೇಶ ಮಾಡಿದನು. ಸೈಂಧವನು ಮುಂಜಿಕೇಶನಿಗೆ ಉಪದೇಶ ಮಾಡಿದನು. ಮುಂಜಿಕೇಶಿಯು ಅದನ್ನು ಎರಡು ಭಾಗ ಮಾಡಿದನು. ಅಥರ್ವವೇದವು ನಕ್ಷತ್ರಕಲ್ಪವೆಂಬುದಾಗಿಯೂ, ವೈತಾನಕಲ್ಪವೆಂಬುದಾಗಿಯೂ, ಸಂಹಿತಾಕಲ್ಪವೆಂಬುದಾಗಿಯೂ, ಶಾಂತಿಕಲ್ಪವೆಂಬುದಾಗಿಯೂ, ಆಭಿಚಾರಕ ಕಲ್ಪವೆಂಬುದಾಗಿಯೂ ಐದು ಕಲ್ಪಗಳಾಗಿ ಅನೇಕ ಸಂಹಿತಾಭೇದಗಳಾದವು. ವೇದವ್ಯಾಸರು ಆಖ್ಯಾನ, ಉಪಾಖ್ಯಾನ, ಗಾಥಾ, ಕಲ್ಪ ಮುಂತಾದ ಐದು ಲಕ್ಷಣಗಳಿಂದ ಕೂಡಿದ ಪುರಾಣಸಂಹಿತೆಯನ್ನು ರೋಮಹರ್ಷಣನೆಂಬ ಶಿಷ್ಯನಿಗೆ ಉಪದೇಶಮಾಡಿದರು. ಇವರೇ ಸೂತಪುರಾಣೀಕರೆಂಬ ಪ್ರಖ್ಯಾತವಾದ ಹೆಸರನ್ನು ಪಡೆದವರು. ಸೂತಪುರಾಣೀಕರಿಗೆ ಸುಮತಿ, ಅಗ್ನಿವರ್ಚಾ, ಮಿತ್ರಾಯು, ಶಾಂಸಪಾಯನ, ಅಕೃತವ್ರಣ, ಸಾವರ್ಣಿ ಎಂಬುದಾಗಿ ಆರು ಜನ ಶಿಷ್ಯರಾದರು. ಇವರು ಆರು ಸಂಹಿತೆಯನ್ನು ಪರಿಗ್ರಹಿಸಿದರು. ಅಕೃತವ್ರಣ ಸಂಜ್ಞೆಯನ್ನು ಪಡೆದ ಕಾಶ್ಯಪನೂ, ಸಾವರ್ಣಿಯೂ, ಶಾಂಸಪಾಯನನೂ, ರೋಮಹರ್ಷಿಣಿಕನೂ ಸಹ ನಾಲ್ಕು ಜನಗಳೂ ನಾಲ್ಕು ಪುರಾಣಸಂಹಿತೆಯನ್ನು ಮಾಡಿದರು. ಇವುಗಳೇ ಪುರಾಣಗಳಿಗೆ ಮೂಲವಾದುವುಗಳು. ಸಕಲಪುರಾಣಗಳಿಗೂ ಬ್ರಾಹ್ಮಪುರಾಣವೇ ಮೊದಲನೆಯದು. ಬ್ರಾಹ್ಮಪುರಾಣವು ಹತ್ತುಸಾವಿರ ಶ್ಲೋಕಗಳಿಂದ ಯುಕ್ತವಾದುದು. ಪಾದ್ಮಪುರಾಣವು ಐವತ್ತೈದುಸಾವಿರ ಗ್ರಂಥವೂ, ವಿಷ್ಣುಪುರಾಣವು ಕೆಲವರು ಎಂಟುಸಾವಿರ ಗ್ರಂಥವೆಂತಲೂ, ಮತ್ತೆ ಕೆಲವರು ಆರುಸಾವಿರ ಗ್ರಂಥವೆಂತಲೂ ಸಹ ಹೇಳುತ್ತಾರೆ. ಶೈವಪುರಾಣವು ಇಪ್ಪತ್ತುನಾಲ್ಕು

ಸಾವಿರ ಶ್ಲೋಕವುಳ್ಳದೆಂತಲೂ, ಭಾಗವತಪುರಾಣವು ಹದಿನೆಂಟುಸಾವಿರ ಗ್ರಂಥವೆಂಬುದಾಗಿಯೂ, ನಾರದೀಯವು ಇಪ್ಪತ್ತೈದುಸಾವಿರ ಗ್ರಂಥವೆಂಬುದಾಗಿಯೂ, ಮಾರ್ಕಂಡೇಯಪುರಾಣವು ಮೂವತ್ತೆರಡುಸಾವಿರ ಗ್ರಂಥವೆಂಬುದಾಗಿಯೂ, ಆಗ್ನೇಯಪುರಾಣವು ಹದಿನೆಂಟುಸಾವಿರ ಗ್ರಂಥವೆಂಬುದಾಗಿಯೂ, ಭವಿಷ್ಯತ್ಪುರಾಣವು ಮೂವತ್ತೊಂದುಸಾವಿರ ಗ್ರಂಥವೆಂಬುದಾಗಿಯೂ, ಬ್ರಹ್ಮಕೈವರ್ತವು ಹನ್ನೆರಡುಸಾವಿರ ಗ್ರಂಥವೆಂತಲೂ, ಲೈಂಗಪುರಾಣವು ಹನ್ನೊಂದುಸಾವಿರ ಗ್ರಂಥವೆಂಬುದಾಗಿಯೂ, ವಾರಾಹಪುರಾಣವು ಇಪ್ಪತ್ತನಾಲ್ಕುಸಾವಿರ ಗ್ರಂಥವೆಂಬುದಾಗಿಯೂ, ಸ್ಕಾಂದಪುರಾಣವು ಒಂದುಲಕ್ಷ ಗ್ರಂಥವೆಂಬುದಾಗಿಯೂ, ವಾಮನಪುರಾಣ ಹದಿನಾಲ್ಕುಸಾವಿರ ಗ್ರಂಥವೆಂತಲೂ, ಕೌರ್ಮಪುರಾಣವು ಆರುಸಾವಿರ ಗ್ರಂಥವೆಂಬುದಾಗಿಯೂ, ಮಾತ್ಸ್ಯಪುರಾಣವು ಹದಿನಾಲ್ಕುಸಾವಿರ ಗ್ರಂಥವೆಂಬುದಾಗಿಯೂ, ಗರುಡಪುರಾಣವು ಹನ್ನೆರಡು ಸಾವಿರ ಗ್ರಂಥವೆಂಬುದಾಗಿಯೂ, ಬ್ರಹ್ಮಾಂಡಪುರಾಣವು ಹನ್ನೆರಡುಸಾವಿರದ ಇನ್ನೂರು ಗ್ರಂಥಗಳೆಂಬುದಾಗಿಯೂ ಈ ಪ್ರಕಾರ ಹದಿನೆಂಟು ಪುರಾಣಗಳು ನಿಯತವಾದವುಗಳು. ಪುರಾಣಗಳು ಸೃಷ್ಟಿ, ಪ್ರಳಯ, ವಂಶ, ಮನ್ವಂತರ, ಅನುವಂಶವೆಂಬುದಾಗಿ ಐದು ಲಕ್ಷಣಗಳಿಂದ ಕೂಡಿರತಕ್ಕುವುಗಳು. ಸಕಲ ಪುರಾಣಗಳಲ್ಲಿಯೂ ಶ್ರೀ ಮಹಾವಿಷ್ಣುವೇ ಪರಬ್ರಹ್ಮನಾಗಿರುವನು ಎಂದು ಹೇಳಿರುತ್ತದೆ. ನಾಲ್ಕು ವೇದಗಳೂ, ಆರು ಅಂಗಗಳೂ, ಮೀಮಾಂಸಾ, ನ್ಯಾಯ, ಪುರಾಣ, ಧರ್ಮಶಾಸ್ತ್ರಗಳೆಂಬುದಾಗಿ ಹದಿನಾಲ್ಕು ವಿದ್ಯೆಗಳು. ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಅರ್ಥಶಾಸ್ತ್ರ ಈ ನಾಲ್ಕು ಉಪವೇದಗಳು. ಈ ಪ್ರಕಾರ ಹದಿನೆಂಟು ವಿದ್ಯೆಗಳೆಂದು ಪ್ರಖ್ಯಾತವಾಗಿರುವುದು. ಬ್ರಹ್ಮರ್ಷಿ, ದೇವರ್ಷಿ, ರಾಜರ್ಷಿ ಇವರುಗಳಿಂದ ವೇದವು ಶಾಖೋಪಶಾಖೆಗಳಾದುವು. ವೇದಸಂಬಂಧವಾಗಿ ನೀನು ಕೇಳಿದ ವಿಷಯಗಳನ್ನು ಹೇಳಿರುತ್ತೇನೆಂಬುದಾಗಿ" ಪರಾಶರಬ್ರಹ್ಮರ್ಷಿಯು ಮೈತ್ರೇಯರಿಗೆ ಹೇಳಿದರು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶದಲ್ಲಿ
ಆರನೆಯ ಅಧ್ಯಾಯವು ಸಮಾಪ್ತಃ

ಏಳನೆಯ ಅಧ್ಯಾಯವು

ಮೈತ್ರೇಯರು ಪರಾಶರರನ್ನು ಪ್ರಶ್ನಿಸುತ್ತಾರೆ: "ಓ ಪರಾಶರರೇ, ನಾನು ಕೇಳಿದಹಾಗೆ ನೀವು ಅನೇಕ ವಿಷಯಗಳನ್ನು ಕೃಪೆಗೈದಿರಿ. ಮನುಷ್ಯರು ಯಾವ

ಕೆಲಸವನ್ನು ಮಾಡಿದರೆ ಯಮನಿಗೆ ಅಧೀನರಾಗುವುದಿಲ್ಲ, ಅದನ್ನು ನನಗೆ ಹೇಳಬೇಕೆಂದು" ಪ್ರಾರ್ಥಿಸಲು, ಪರಾಶರಮಹರ್ಷಿಗಳು ಹೇಳುತ್ತಾರೆ: "ಎಲೈ ಮೈತ್ರೇಯನೇ, ನೀನು ಕೇಳಿದ ಪ್ರಶ್ನೆಯನ್ನೇ ನಕುಲನು ಭೀಷ್ಮರನ್ನು ಕುರಿತು ಕೇಳಿದನು. ಭೀಷ್ಮರು ಹೇಳಿದುದನ್ನೇ ನಾನೂ ಹೇಳುವೆನು ಕೇಳು. ಭೀಷ್ಮರು ನಕುಲನಿಗೆ ಏನು ಹೇಳಿದರೆಂದರೆ, ಎಲೈ ನಕುಲನೇ, ಪೂರ್ವದಲ್ಲಿ ನನ್ನ ಸ್ನೇಹಿತನಾದ ಕಳಿಂಗನೆಂಬ ಋಷಿಯು ನನಗೆ ರಹಸ್ಯವಾಗಿ ನನ್ನ ಕಿವಿಯಲ್ಲಿ ಯಮ ಕಿಂಕರರ ಸಂವಾದವನ್ನು ಹೇಳಿದನು. ಯಮನು ತನ್ನ ಕಿಂಕರರಿಗೆ ಹೇಳುತ್ತಾನೆ: ಹೇ ಕಿಂಕರರೇ, ಮಧುಸೂದನನಾದ ಶ್ರೀಮನ್ನಾರಾಯಣನಲ್ಲಿ ಯಾರು ಪ್ರಪನ್ನರಾಗಿರುತ್ತಾರೋ ಅವರನ್ನು ಬಿಟ್ಟುಬಿಡಿ. ಅವರ ಸಮೀಪಕ್ಕೆ ಹೋಗಬೇಡಿ. ನಾನು ವಿಷ್ಣುಭಕ್ತರಲ್ಲದವರಿಗೆ ಮಾತ್ರ ಪ್ರಭುವಾದವನು, ನಾನು ಚತುರ್ಮುಖ ಬ್ರಹ್ಮನಿಂದ ಯಮನಾಗಿ ನಿಯಮಿಸಲ್ಪಟ್ಟಿರುವೆನು. ಶ್ರೀಹರಿಯೆಂಬ ಗುರುವಿಗೆ ಅಧೀನನಾಗಿರುವೆನು. ನಾನು ಸ್ವತಂತ್ರನಾದವನಲ್ಲ. ಶ್ರೀ ಮಹಾವಿಷ್ಣುವೇ ನನಗೆ ಶಿಕ್ಷಕನಾಗಿರುವನು. ಕಾರಣರೂಪವಾದ ಚಿನ್ನವೆಂಬ ಒಂದೇ ಪದಾರ್ಥವು ಹೇಗೆ ನಾನಾ ವಿಧವಾದ ಕಾರ್ಯರೂಪವಾದ ಆಭರಣಗಳ ಹೆಸರನ್ನು ಹೊಂದಿದ್ದರೂ ಎಲ್ಲಾ ಒಂದೇ ಎನಿಸುತ್ತದೋ ಅದೇ ಪ್ರಕಾರ ಕಾರಣನಾದ ಶ್ರೀಮನ್ನಾರಾಯಣನೊಬ್ಬನೇ ಕಾರ್ಯವಾದ ಸುರ, ನರ, ಪಶು, ತಿರ್ಯಕ್ ಇತ್ಯಾದಿ ಭಿನ್ನ ಪದಾರ್ಥಗಳ ಹೆಸರುಗಳನ್ನು ಪಡೆದಿದ್ದರೂ ತದಾತ್ಮಕನಾಗಿ ಒಬ್ಬನೇ ಆಗಿರುವನು. ಇಂತಹ ಶ್ರೀಮನ್ನಾರಾಯಣನ ಸಂಕಲ್ಪಮೂಲಕ ಉಂಟಾದ ಗುಣವಿಷಮಭಾವದಿಂದ ಉತ್ಪನ್ನರಾದ ದೇವತೆ ಮೊದಲಾದವರು ಅಂತಹ ಗುಣಕ್ಷೋಭದಿಂದಲೇ ಪರಮಾತ್ಮನಾದ ಶ್ರೀಮನ್ನಾರಾಯಣನಲ್ಲಿ ಆತನ ಶರೀರ ರೂಪದಲ್ಲಿ ಏಕೀಭವಿಸುತ್ತಾರೆ. ದೇವತೆಗಳಿಂದ ಪೂಜಿಸಲ್ಪಟ್ಟ ಪಾದಕಮಲವುಳ್ಳ ಶ್ರೀಮನ್ನಾರಾಯಣನನ್ನು ಯಾವ ಮನುಷ್ಯನು ಪರಮಾರ್ಥದಿಂದ ನಮಸ್ಕರಿಸುತ್ತಾನೋ ಆ ಮನುಷ್ಯನು ಸಕಲಪಾಪಗಳಿಂದ ಮುಕ್ತನಾಗುವನು. ಅಂತಹ ಮಹಾತ್ಮರ ಸಮೀಪಕ್ಕೆ ಹೋಗಬೇಡವೆಂದು ಯಮನು ದೂತನಿಗೆ ಆಜ್ಞಾಪಿಸಿದನು. ಇದನ್ನು ಕೇಳಿದ ಯಮದೂತನು, ಯಮಧರ್ಮರಾಜನನ್ನು ಕುರಿತು ಪ್ರಶ್ನೆಮಾಡುತ್ತಾನೆ: "ಓ ಸ್ವಾಮಿಯೇ! ವಿಷ್ಣುಭಕ್ತರ ಸಮೀಪಕ್ಕೆ ಹೋಗಬೇಡವೆಂಬುದಾಗಿ ಆಜ್ಞಾಪಿಸಿದೆ; ವಿಷ್ಣುಭಕ್ತರು ಯಾವ ಚಿಹ್ನೆಯಿಂದ ಕೂಡಿರುತ್ತಾರೆ? ವೈಷ್ಣವ ಚಿಹ್ನೆಯು ನಮಗೆ ತಿಳಿಯದಿದ್ದರೆ, ವಿಷ್ಣುಭಕ್ತರ ಸಮೀಪಕ್ಕೆ ಹೋಗಬೇಕಾಗುವುದು. ಈ ಕಾರಣದಿಂದ ವೈಷ್ಣವ ಚಿಹ್ನೆಯನ್ನು ಹೇಳು" ಎಂದು ಪ್ರಾರ್ಥಿಸಲು, ಯಮಧರ್ಮರಾಜನು ಹೇಳುತ್ತಾನೆ: "ಎಲೈ ದೂತನೇ,

ಯಾವ ಮನುಷ್ಯನು ವರ್ಣಾಶ್ರಮಧರ್ಮದಿಂದ ಚಲಿಸುವುದಿಲ್ಲವೋ, ಯಾರು ಶತ್ರುಮಿತ್ರರಲ್ಲಿ ಸಮಬುದ್ಧಿಯುಳ್ಳವರೋ, ಯಾರು ಪರಸ್ವತ್ತನ್ನು ಅಪಹರಿಸುವುದಿಲ್ಲವೋ, ಅಂತಹ ಶುದ್ಧಮನಸ್ಕರು ಯಾರೋ ಅವರು ವಿಷ್ಣುಭಕ್ತರೆಂದು ತಿಳಿ. ನಿರ್ಮಲಮನಸ್ಕರಾಗಿಯೂ, ಅಸೂಯಾರಹಿತರಾಗಿಯೂ, ಪ್ರಶಾಂತರಾಗಿಯೂ, ಶುಚಿಯಾಗಿಯೂ ಇರುವ ಮನುಷ್ಯರ ಹೃದಯದಲ್ಲಿ ವಾಸುದೇವನು ಇರುವನು. ಇವರೂ ಸಹ ವಿಷ್ಣುಭಕ್ತರೆಂದು ತಿಳಿ. ಯಮನಿಯಮಾದಿಗಳಿಂದ ಪಾಪರಹಿತರಾಗಿಯೂ, ಪ್ರತಿನಿತ್ಯದಲ್ಲಿಯೂ ಅಚ್ಯುತನಲ್ಲಿ ಭಕ್ತಿಯುಕ್ತರಾಗಿಯೂ, ಮದಮಾತ್ಸರ್ಯರಹಿತರಾಗಿಯೂ ಇರುವ ವಿಷ್ಣುಭಕ್ತರನ್ನು ದೂರಮಾಡು. ಯಾರೂ ಇಲ್ಲದಿರತಕ್ಕ ಸಮಯದಲ್ಲಿಯೂ ಇತರರ ಚಿನ್ನವನ್ನು ತೃಣಪ್ರಾಯವಾಗಿ ತಿಳಿಯುವನೋ, ಯಾವ ಮನುಷ್ಯನು ಪರಮಪುರುಷನಾದ ಶ್ರೀ ಮಹಾವಿಷ್ಣುವಿನಲ್ಲಿ ನಿಶ್ಚಲವಾದ ಮನಸ್ಸುಳ್ಳವನೋ, ಅವನು ವಿಷ್ಣುಭಕ್ತನೆಂದು ತಿಳಿ. ಪರಸ್ವತ್ತನ್ನು ಅಪಹಾರಮಾಡುವವನೂ, ಪ್ರಾಣಿಗಳನ್ನು ಹಿಂಸಿಸತಕ್ಕವನೂ, ಸುಳ್ಳು ಹೇಳತಕ್ಕವನೂ, ಕ್ರೂರವಾಕ್ಯಗಳನ್ನು ಆಡತಕ್ಕವನೂ, ಅಶುಭಮತಿಯಾದವನೂ, ದುಷ್ಟಸಹವಾಸವನ್ನು ಮಾಡತಕ್ಕವನೂ, ಪ್ರತಿದಿನವೂ ಪಾಪಾಸಕ್ತನಾಗಿರುವವನೂ ಸಹ, ನರಪಶುವೆಂಬುದಾಗಿ ತಿಳಿ. ವಾಸುದೇವನೇ ಸರ್ವೇಶ್ವರನು, ತಾನು ಭಗವದಧೀನನು ಎಂಬುದಾಗಿಯೂ ಈ ರೀತಿ ಯಾರು ತಿಳಿದುಕೊಂಡಿರುತ್ತಾರೋ, ಅವರನ್ನು ದೂರವಾಗಿ ಬಿಡು. ಓ ಕಮಲನೇತ್ರನೇ, ಓ ವಾಸುದೇವನೇ, ಓ ಶ್ರೀಮಹಾವಿಷ್ಣುವೇ, ಓ ಭೂಧರನೇ, ಅಚ್ಯುತನೇ, ಶಂಖಚಕ್ರಪಾಣಿಯೇ, ನೀನು ರಕ್ಷಕನಾಗಿರು ಎಂಬುದಾಗಿ ಯಾರು ಹೇಳುತ್ತಲಿರುವರೋ ಅಂತಹ ಪಾಪರಹಿತರಾದ ಭಕ್ತರನ್ನು ದೂರಮಾಡುವ ಯಾವ ಮನುಷ್ಯನ ಮನಸ್ಸಿನಲ್ಲಿ ವಾಸುದೇವನು ವಾಸಮಾಡುತ್ತಾನೋ ಅವನಿಗೆ ಭಗವಂತನ ದೃಷ್ಟಿಪಾತವೆಂಬ ಚಕ್ರವು, ಸುತ್ತಲೂ ತಿರುಗುವುದು. ಅಂತಹ ಭಾಗವತೋತ್ತಮರುಗಳ ಸಮೀಪಕ್ಕೆ ನಾನೂ ಸಹ ಹೋಗಲಾಗುವುದಿಲ್ಲ." ಈ ಪ್ರಕಾರ ಯಮ-ದೂತರ ಸಂವಾದವನ್ನು ನಾನು ಕೇಳಿದುದರಿಂದ ಅದನ್ನೇ ನಿನಗೆ ಹೇಳಿರುವೆನೆಂಬುದಾಗಿ" ಕಳಿಂಗನು ಭೀಷ್ಮರಿಗೆ ಹೇಳಿದುದನ್ನು ಭೀಷ್ಮರು ನಕುಲನಿಗೆ ಹೇಳಿದರು. ವಿಷ್ಣು ಒಬ್ಬನು ಹೊರ್ತು ಮತ್ಯಾರೂ ಸಂಸಾರಬಂಧವನ್ನು ಬಿಡಿಸಲಾರರು." ಈ ಪ್ರಕಾರ ಪರಾಶರಮಹರ್ಷಿಯು ಮೈತ್ರೇಯನಿಗೆ ಹೇಳಿದರು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶದಲ್ಲಿ
ಏಳನೆಯ ಅಧ್ಯಾಯವು ಸಮಾಪ್ತಃ

ಎಂಟನೆಯ ಅಧ್ಯಾಯವು

ಮೈತ್ರೇಯನು ಪುನಃ ಕೇಳುತ್ತಾನೆ: "ಭಗವಾನರಾದ ಪರಾಶರರೇ, ಸಂಸಾರದಲ್ಲಿ ಬದ್ಧರಾದವರು ಭಗವಂತನಾದ ಶ್ರೀಮನ್ನಾರಾಯಣನನ್ನು ಯಾವ ರೀತಿ ಆರಾಧಿಸುತ್ತಾರೆ? ಆರಾಧನೆಯಿಂದ ಪ್ರೀತನಾದ ಭಗವಂತನು ಅವರಿಗೆ ಯಾವ ಫಲವನ್ನು ಕೊಡುತ್ತಾನೆ? ಎಂಬುವುದನ್ನು ಹೇಳು" ಎಂಬುದಾಗಿ ಕೇಳಲು; ಪರಾಶರರು ಮೈತ್ರೇಯರಿಗೆ ಹೇಳುತ್ತಾರೆ: "ಎಲೈ ಮೈತ್ರೇಯನೇ, ಪೂರ್ವದಲ್ಲಿ ಸಗರಚಕ್ರವರ್ತಿಗೆ ಔರ್ವಋಷಿಯು ಉಪದೇಶಮಾಡಿದುದನ್ನೇ ನಿನಗೆ ಹೇಳುತ್ತೇನೆ. ಸಗರಚಕ್ರವರ್ತಿಯು ಔರ್ವಮಹರ್ಷಿಗೆ ನಮಸ್ಕಾರಮಾಡಿ ಮಹರ್ಷಿಯನ್ನು ಕೇಳುವನು. ಶ್ರೀ ಮಹಾವಿಷ್ಣುವಿನ ಆರಾಧನೋಪಾಯವನ್ನೂ, ಅವನು ಕೊಡತಕ್ಕ ಫಲವನ್ನೂ ಸಹ ನನಗೆ ತಿಳಿಸು ಎಂದು ಕೇಳಲು, ಔರ್ವಋಷಿಯು ಹೇಳುತ್ತಾನೆ: ಮನುಷ್ಯನು ಶ್ರೀ ಮಹಾವಿಷ್ಣುವನ್ನು ಆರಾಧಿಸಿದರೆ ಭೂಮಿಯಲ್ಲಿ ಇಷ್ಟಾರ್ಥವನ್ನು ಹೊಂದಿ, ಅನಂತರ ಬ್ರಹ್ಮಲೋಕವನ್ನು ಹೊಂದುತ್ತಾನೆ. ಆತನನ್ನು ಆರಾಧಿಸಿ ಯಾವುದನ್ನು ಅಪೇಕ್ಷಿಸಿದರೂ ಅದನ್ನು ಕೊಡುವನು. ವರ್ಣಾಶ್ರಮಾಚಾರವುಳ್ಳ ಪುರುಷನು ಆತನನ್ನು ಆರಾಧಿಸಿದರೆ ಆತನಿಗೆ ಅದಕ್ಕಿಂತಲೂ ಸಂತೋಷಕರವಾದ ವಿಷಯವಿರುವುದಿಲ್ಲ. ಇಂದ್ರಾದಿಗಳನ್ನು ಕುರಿತು ಯಜ್ಞಮಾಡಿದರೂ ಸರ್ವಭೂತಾತ್ಮಕನಾದ ವಿಷ್ಣುವನ್ನೇ ಆರಾಧಿಸಿದ ಹಾಗೆ ಆಗುವುದು. ಆದುದರಿಂದ ವರ್ಣಾಶ್ರಮಧರ್ಮಗಳ ಆಚರಣೆಯಿಂದ ಭಗವಂತನನ್ನು ಆರಾಧಿಸಬೇಕು. ಬ್ರಾಹ್ಮಣನೂ, ಕ್ಷತ್ರಿಯನೂ, ವೈಶ್ಯನೂ, ಶೂದ್ರನೂ ಸಹ ವರ್ಣಾಶ್ರಮಧರ್ಮಗಳ ಅನುಸಾರವಾಗಿ ಭಗವಂತನನ್ನು ಆರಾಧಿಸಬೇಕು. ಪರಾಪವಾದವನ್ನೂ, ಪಿಶುನತ್ವವನ್ನೂ, ಸುಳ್ಳಾಡುವುದನ್ನೂ ಸಹ ಮಾಡದಿದ್ದರೆ ಕೇಶವನು ಸಂತೋಷಿಸುವನು. ಯಾವ ಮನುಷ್ಯನು ಪರದ್ರವ್ಯ, ಪರಸ್ತ್ರೀ, ಪರಹಿಂಸೆ ಇವುಗಳಲ್ಲಿ ವಿಮುಖನಾಗಿರುತ್ತಾನೋ ಅವನನ್ನು ಕಂಡರೆ ಕೇಶವನು ಪ್ರೀತಿಸುವನು. ಯಾವ ಮನುಷ್ಯನು ದೇವತೆಗಳನ್ನೂ, ಬ್ರಾಹ್ಮಣರನ್ನೂ, ಗುರುಗಳನ್ನೂ ಸದಾ ಶುಶ್ರೂಷೆಯನ್ನು ಮಾಡುತ್ತಿರುವನೋ ಅವನಿಂದ ಭಗವಂತನು ಸಂತೋಷವನ್ನು ಹೊಂದುತ್ತಾನೆ. ಯಾವ ಮನುಷ್ಯನು ಪುತ್ರನನ್ನು ಪ್ರೀತಿಸುವ ಹಾಗೆ ಸಕಲಪ್ರಾಣಿಗಳಲ್ಲಿಯೂ ಪ್ರೀತಿಯುಕ್ತನಾಗಿರುವನೋ ಅವನನ್ನು ಪರಮಾತ್ಮನು ಪ್ರೀತಿಸುತ್ತಾನೆ. ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟ ವರ್ಣಾಶ್ರಮಧರ್ಮಗಳನ್ನು ಯಾರು ನಿಯತವಾಗಿ ಆಚರಿಸಿ, ಭಗವಂತನನ್ನು ಕರ್ಮಾನುಷ್ಠಾನಮೂಲಕ ಆರಾಧಿಸುತ್ತಾರೋ ಅವರಿಗೆ ಮೋಕ್ಷವುಂಟಾಗುವುದು. ವರ್ಣಗಳ ಧರ್ಮಗಳೂ, ಆಶ್ರಮಧರ್ಮಗಳೂ ಸಹ ಯಾವುವೆಂದರೆ: ಮೊದಲು

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ವರ್ಣಗಳ ಧರ್ಮಗಳನ್ನು ಹೇಳುತ್ತೇನೆ ಕೇಳು. ಬ್ರಾಹ್ಮಣನು ಪ್ರತಿನಿತ್ಯವೂ ಔಪಾಸನ, ಅಗ್ನಿಹೋತ್ರಗಳನ್ನು ಮಾಡಬೇಕು. ದಾನವನ್ನು ಕೊಡುವುದೂ, ಯಜ್ಞಗಳನ್ನು ಮಾಡುವುದೂ, ವೇದಾಧ್ಯಯನವನ್ನು ಮಾಡುವುದೂ, ತರ್ಪಣಾದಿಗಳನ್ನು ಮಾಡುವುದೂ, ಇವುಗಳೆಲ್ಲವೂ ಬ್ರಾಹ್ಮಣನಿಗೆ ನಿಯತವಾದ ಧರ್ಮಗಳು. ಜೀವನಕ್ಕಾಗಿ ಅನ್ಯರಿಂದ ಯಜ್ಞ ಮಾಡಿಸಬಹುದು. ಅನ್ಯರನ್ನು ವೇದಾಧ್ಯಯನ ಮಾಡಿಸಬಹುದು. ನ್ಯಾಯವಾಗಿ ಶುಕ್ಲಾರ್ಥದಿಂದ ಪರಿಗ್ರಹಿಸಬಹುದು. (ಶುಕ್ಲಾರ್ಥವೆಂದರೆ ಪಿತ್ರಾದಿಗಳಿಂದ ಕ್ರಮಾಗತವಾದ ಧನವು ಅಥವಾ ಶುದ್ಧವಾದ ಧನವು) ಮತ್ತೊಬ್ಬನು ಸಂತೋಷದಿಂದ ಕೊಡತಕ್ಕ ಧನವೂ, ಹೆಂಡತಿಯಿಂದ ಬಂದ ಧನವೂ, ಇವುಗಳೆಲ್ಲವೂ ಶುದ್ಧವಾದ ಧನವು. ಇವುಗಳನ್ನು ಪರಿಗ್ರಹಿಸುವುದೂ ಸಹ ಯಥೋಕ್ತವಾದ ಧರ್ಮಗಳು. ಸಮಸ್ತ ಭೂತಗಳಲ್ಲಿಯೂ ಹಿತವಾಗಿರುವುದೇ ಬ್ರಾಹ್ಮಣನಿಗೆ ಉತ್ತಮವಾದ ಧನವು. ಕಲ್ಲಿನಲ್ಲಿಯೂ ರತ್ನದಲ್ಲಿಯೂ ಒಂದೇ ಸಮನಾಗಿರುವಿಕೆಯೂ, ಋತುಕಾಲದಲ್ಲಿ ಮಾತ್ರ ಪತ್ನಿಯಲ್ಲಿ ಭೋಗಾಸಕ್ತನಾಗಿರುವುದೂ, (ರಜಸ್ವಲೆಯಾದ ಮೊದಲುಗೊಂಡು ಹದಿನಾರು ದಿವಸದವರೆಗೂ ಋತುಕಾಲವೆಂಬುದಾಗಿ ಹೇಳುವುದು.) ಈ ಹದಿನಾರು ದಿವಸಗಳಲ್ಲಿ ಮೊದಲು ನಾಲ್ಕು ದಿವಸ ಬಿಟ್ಟು ಉಳಿದ ಹನ್ನೆರಡು ದಿವಸಗಳಲ್ಲಿಯೂ ೬-೮-೧೦-೧೨-೧೪-೧೬ ಈ ದಿವಸಗಳಲ್ಲಿ ಮಾತ್ರ ಪತ್ನಿಯಲ್ಲಿ ರಮಿಸುವುದೂ, ಇವುಗಳೆಲ್ಲವೂ ಬ್ರಾಹ್ಮಣ ಧರ್ಮಗಳು. ಕ್ಷತ್ರಿಯನು ಬ್ರಾಹ್ಮಣರಿಗೆ ಯಥೇಚ್ಛವಾಗಿ ಧನವನ್ನು ಕೊಡುವುದೂ, ಅನೇಕ ಯಜ್ಞಗಳನ್ನು ಮಾಡುವುದೂ, ವೇದಾಧ್ಯಯನ ಮಾಡುವುದೂ ಸಹ ಕ್ಷತ್ರಿಯನ ಧರ್ಮಗಳು. ಯುದ್ಧಾಸಕ್ತರಾಗಿರುವುದೂ, ಭೂಮಿಯನ್ನು ಪರಿಪಾಲಿಸುವುದೂ, ದುಷ್ಟರನ್ನು ಶಿಕ್ಷಿಸುವುದೂ, ಶಿಷ್ಟರನ್ನುಪರಿಪಾಲಿಸುವುದೂ,ವರ್ಣಸಂಸ್ಥೆಯನ್ನು ಮಾಡುವುದೂ ಸಹ ಕ್ಷತ್ರಿಯನ ಧರ್ಮಗಳು. ಇವುಗಳಲ್ಲಿ ಭೂಮಿಪಾಲನವೇ ರಾಜರಿಗೆ ಮುಖ್ಯಧರ್ಮವು. ವೈಶ್ಯನಿಗೆ ಗೋರಕ್ಷಣೆಯನ್ನು ಮಾಡುವುದೂ, ವ್ಯಾಪಾರಮಾಡುವುದೂ, ವ್ಯವಸಾಯವನ್ನು ಮಾಡುವುದೂ, ವೇದಾಧ್ಯಯನವನ್ನು ಮಾಡುವುದೂ, ದಾನವನ್ನು ಕೊಡುವುದೂ, ಯಜ್ಞವನ್ನು ಮಾಡುವುದೂ ಸಹ ಮುಖ್ಯಧರ್ಮಗಳು. ಶೂದ್ರನಿಗೆ ಬ್ರಾಹ್ಮಣಾದಿ ಮೂರು ವರ್ಣಗಳ ಶುಶ್ರೂಷೆಯನ್ನು ಮಾಡುವುದೂ, ಶುಶ್ರೂಷೆಯಿಂದ ಬಂದ ಧನದಿಂದ ಕುಟುಂಬಭರಣ ಮಾಡುವುದೂ, ಆಪತ್ಕಾಲದಲ್ಲಿ ಹೊಲಿಯುವ ಕಾರುಕರ್ಮದಿಂದ ಜೀವಿಸುವುದೂ (ಕಾರುಕರ್ಮವೆಂದರೆ ಇತರ ಕೈಗಾರಿಕೆ ಕೆಲಸಗಳು) ಧರ್ಮಗಳು. ಈತನಿಗೆ ನಮಸ್ಕಾರವೇ ಪಂಚಮಹಾ

ಯಜ್ಞಾನುಷ್ಠಾನವು. ಇವು ಶೂದ್ರನ ಮುಖ್ಯ ಧರ್ಮಗಳು. ಇವುಗಳೆಲ್ಲವೂ ಆ ನಾಲ್ಕು ವರ್ಣದವರ ಧರ್ಮಗಳು. ನಾಲ್ಕು ವರ್ಣಗಳಿಗೂ ಸಾಮಾನ್ಯ ಧರ್ಮಗಳು ಯಾವುವೆಂದರೆ: ಸೇವಕರನ್ನು ಇಟ್ಟುಕೊಳ್ಳುವುದೂ, ಸ್ವಸ್ತ್ರೀಯಲ್ಲಿ ಮೇಲೆ ಹೇಳಿದ ಹಾಗೆ ಋತುಕಾಲಗಮನವೂ, ಸರ್ವಪ್ರಾಣಿಗಳಲ್ಲಿ ದಯಾಪರನಾಗಿರುವುದೂ, ಸತ್ಯವಂತನಾಗಿರುವುದೂ, ಶೌಚಾಚಾರಯುಕ್ತನಾಗಿರುವುದೂ, ಕೆಲಸಗಳನ್ನು ಹೆಚ್ಚಾಗಿ ಮಾಡದಿರುವಿಕೆಯೂ, ಸ್ರಕ್ಚಂದನಾದಿಗಳನ್ನು ಸೇವಿಸುವುದೂ, ಪ್ರಿಯವಾದಿಯಾಗಿರುವುದೂ, ಅಸೂಯಾರಹಿತನಾಗಿರುವುದೂ, ಇವೆಲ್ಲಾ ಸಾಮಾನ್ಯ ಧರ್ಮಗಳು. ಆಪದ್ಧರ್ಮಗಳು ಯಾವುವೆಂದರೆ: ಬ್ರಾಹ್ಮಣನಿಗೆ ಕ್ಷತ್ರಿಯ ಧರ್ಮವೂ, ಕ್ಷತ್ರಿಯನಿಗೆ ವೈಶ್ಯಧರ್ಮವೂ, ವೈಶ್ಯನಿಗೆ ಶೂದ್ರಧರ್ಮವೂ ಸಹ ನಾಲ್ಕುವರ್ಣದವರಿಗೆ ಆಪದ್ಧರ್ಮವು. ಶೂದ್ರನ ಆಪದ್ಧರ್ಮವನ್ನು ಮೇಲೆ ಹೇಳಿರುತ್ತದೆ. ಶಕ್ತರಾದ ಬ್ರಾಹ್ಮಣ ರಾಜರುಗಳಿಗೆ ಆಪದ್ಧರ್ಮವಿರುವುದಿಲ್ಲ. ಅಶಕ್ತರಾದವರಿಗೆ ಮಾತ್ರ ಆಪದ್ಧರ್ಮಗಳು. ಆದುದರಿಂದ ಕರ್ಮಸಂಕರವನ್ನು ಮಾಡಕೂಡದು. ಎಲೈ ಸಗರನೇ, ಈ ಪ್ರಕಾರ ವರ್ಣಧರ್ಮಗಳು ನನ್ನಿಂದ ಹೇಳಲ್ಪಟ್ಟವು. ಮುಂದೆ ಆಶ್ರಮಧರ್ಮವನ್ನು ಹೇಳುತ್ತೇನೆ ಕೇಳು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶದಲ್ಲಿ
ಎಂಟನೆಯ ಅಧ್ಯಾಯವು ಸಮಾಪ್ತಃ

ಒಂಬತ್ತನೆಯ ಅಧ್ಯಾಯವು

"ಏಳನೆಯ ವರ್ಷದಲ್ಲಿ ಬ್ರಾಹ್ಮಣನು ಮಗನಿಗೆ ಉಪನಯನವನ್ನು ಮಾಡಿ ವೇದಾಧ್ಯಯನಕ್ಕೋಸ್ಕರ ಗುರುವಿನ ಬಳಿಗೆ ಕಳುಹಿಸಬೇಕು. ಉಪನಯನವೆಂದರೆ ಆಚಾರ್ಯನ ಸಮೀಪದಲ್ಲಿರುವುದು. ಬ್ರಹ್ಮಚಾರಿಯು ಆಚಾರ್ಯನ ಮನೆಯಲ್ಲಿ ವಾಸಮಾಡುತ್ತಾ, ಶೌಚಾಚಾರಯುಕ್ತನಾಗಿಯೂ, ಆಚಾರ್ಯನ ಶುಶ್ರೂಷೆಯನ್ನು ಮಾಡತಕ್ಕವನಾಗಿಯೂ, ವ್ರತಗಳನ್ನು ಆಚರಿಸತಕ್ಕವನಾಗಿಯೂ ವೇದಾಧ್ಯಯನವನ್ನು ಮಾಡಬೇಕು. ಸಾಯಂ ಪ್ರಾತಃ ಅಗ್ನಿಕಾರ್ಯವನ್ನು ಮಾಡಿ, ಗುರುವಿಗೆ ಅಭಿವಾದನೆಯನ್ನು ಮಾಡಬೇಕು. ಆಚಾರ್ಯನು ಕೂತುಕೊಂಡಿದ್ದರೆ ತಾನೂ ಕೂಡುವುದು, ನಿಂತರೆ ನಿಲ್ಲುವುದು, ಓಡಿದರೆ ಓಡುವುದು. ಆಚಾರ್ಯನು ಕೂಡುವ ಆಸನದಲ್ಲಿ ಕೂತುಕೊಳ್ಳಕೂಡದು. ಆಚಾರ್ಯನಿಗೆ ಪ್ರತಿಕೂಲವನ್ನಾಚರಿಸಕೂಡದು. ಆಚಾರ್ಯನನ್ನು ಪಾಠವನ್ನು ಹೇಳಿಕೊಡು

ಎಂಬುದಾಗಿ ಕೇಳದೆ ಆಚಾರ್ಯನು ವೇದವನ್ನು ಯಾವಾಗ ಹೇಳಿಕೊಡುತ್ತಾನೋ ಆಗಲೇ ಅಧ್ಯಯನ ಮಾಡಬೇಕು. ಭಿಕ್ಷಾನ್ನವನ್ನು ತೆಗೆದುಕೊಂಡು ಬಂದು ಆಚಾರ್ಯನಿಗೆ ಹೇಳಿ ಅವನಿಂದ ಅಪ್ಪಣೆಯನ್ನು ಪಡೆದು ಅನ್ನವನ್ನು ಭುಂಜಿಸಬೇಕು. ಆಚಾರ್ಯನಿಗಿಂತಲೂ ಮೊದಲೇ ಅವಗಾಹನಸ್ನಾನಮಾಡಿ ಆಚಾರ್ಯನಿಗೆ ಉಪಯುಕ್ತವಾದ ಸಮಿದ್ದರ್ಭಜಲಾದಿಗಳನ್ನು ಕಾಲೋಚಿತವಾದ ಕರ್ಮಗಳಿಗೆ ಸಿದ್ಧಪಡಿಸಬೇಕು. ಈ ರೀತಿ ಬ್ರಹ್ಮಚರ್ಯದಿಂದ ವೇದಾಧ್ಯಯನ ಮಾಡಿ, ವೇದಾರ್ಥವನ್ನು ತಿಳಿದುಕೊಂಡು ಬ್ರಹ್ಮಚರ್ಯದಲ್ಲಿ ನಿಯಮದಿಂದ ಕೂಡಿದವನಾಗಿ, ಗುರುದಕ್ಷಿಣೆಯನ್ನು ಕೊಟ್ಟು, ಆಚಾರ್ಯನ ಆಜ್ಞೆಯನ್ನು ಹೊಂದಿ, ಗೃಹಸ್ಥಾಶ್ರಮವನ್ನು ಪಡೆಯಬೇಕು. ಸತ್ಕುಲಪ್ರಸೂತಳಾದ ಕನ್ನಿಕೆಯನ್ನು ವಿಧಿಗನುಸಾರವಾಗಿ ವಿವಾಹಮಾಡಿಕೊಂಡು, ಯಥಾಕ್ರಮವಾಗಿ ಧನಾರ್ಜನೆಯನ್ನು ಮಾಡಿಕೊಂಡು, ಗೃಹಸ್ಥಾಶ್ರಮಿಯಾಗಿ ತರ್ಪಣದಿಂದ ಪಿತೃಗಳನ್ನೂ, ಯಜ್ಞಗಳಿಂದ ದೇವತೆಗಳನ್ನೂ, ಅನ್ನದಿಂದ ಅತಿಥಿಗಳನ್ನೂ, ವೇದಾಧ್ಯಯನದಿಂದ ಋಷಿಗಳನ್ನೂ, ಪುತ್ರೋತ್ಪತ್ತಿಯಿಂದ ರಾಜನನ್ನೂ ಸಹ ಪೂಜಿಸಬೇಕು. ವೈಶ್ವದೇವದಿಂದ ಭೂತಗಳನ್ನೂ, ವಾತ್ಸಲ್ಯದಿಂದ ಜಗತ್ತನ್ನೂ ಸಹ ಪೂಜಿಸುವುದರಿಂದ ಪುರುಷನು ಉತ್ಕೃಷ್ಟವಾದ ಲೋಕವನ್ನು ಪಡೆಯುತ್ತಾನೆ. ಅತಿಥಿಯು ಗೃಹಸ್ಥನ ಮನೆಗೆ ಬಂದರೆ ಭೋಜನಾದಿಗಳಿಂದ ಸತ್ಕರಿಸಬೇಕು. ಅತಿಥಿಯನ್ನು ಸತ್ಕರಿಸದಿದ್ದರೆ ಅತಿಥಿಯಾದವನು ತನ್ನ ಪಾಪಗಳನ್ನು ಗೃಹಸ್ಥನಿಗೆ ಕೊಟ್ಟು, ಗೃಹಸ್ಥನ ಪುಣ್ಯಗಳನ್ನು ತೆಗೆದುಕೊಂಡು ಹೋಗುವನು. ಎಲ್ಲಾ ಆಶ್ರಮಕ್ಕೂ ಗೃಹಸ್ಥಾಶ್ರಮವೇ ಶ್ರೇಷ್ಠವಾದುದು. ಈ ರೀತಿ ಗೃಹಸ್ಥಾಶ್ರಮದ ವಿಧ್ಯುಕ್ತವಾದ ಕರ್ಮಗಳನ್ನು ಮಾಡಿ, ವೃದ್ಧಾಪ್ಯ ಒದಗಿದ ಕಾಲದಲ್ಲಿ ಪುತ್ರರಲ್ಲಿ ಹೆಂಡತಿಯನ್ನು ಬಿಟ್ಟು ಅಥವಾ ಜೊತೆಯಲ್ಲಿ ಕರೆದುಕೊಂಡು ವಾನಪ್ರಸ್ಥಾಶ್ರಮಕ್ಕಾಗಿ ವನಕ್ಕೆ ಪ್ರಯಾಣಮಾಡಬೇಕು. ವನದಲ್ಲಿ ವಾಸಮಾಡುವ ಕಾಲದಲ್ಲಿ ಫಲಮೂಲಾದಿಗಳೇ ಆಹಾರವಾಗಿರಬೇಕು. ಜಟಾಧರನಾಗಿಯೂ, ಭೂಮಿಯಲ್ಲಿ ಮಲಗತಕ್ಕವನಾಗಿಯೂ, ನಿಃಸ್ಪೃಹನಾಗಿಯೂ, ಚರ್ಮ ಹುಲ್ಲು ಇವುಗಳೇ ವಸ್ತ್ರವಾಗುಳ್ಳವನಾಗಿಯೂ, ಮೂರು ಕಾಲದಲ್ಲಿ ಸ್ನಾನಮಾಡತಕ್ಕವನಾಗಿಯೂ, ದೇವತಾರ್ಚನೆಯನ್ನು ಮಾಡತಕ್ಕವನಾಗಿಯೂ, ಅಭ್ಯಾಗತರನ್ನು ಸತ್ಕರಿಸುವನಾಗಿಯೂ, ಶೀತೋಷ್ಣಗಳನ್ನು ಸಹಿಸತಕ್ಕವನಾಗಿಯೂ ಇರಬೇಕು. ಹೀಗೆ ಇರತಕ್ಕವನು ಸಕಲ ದೋಷಮುಕ್ತನಾಗಿ ಶಾಶ್ವತವಾದ ಲೋಕವನ್ನು ಹೊಂದುವನು. ಸನ್ಯಾಸಿಯಾಗಬೇಕೆಂಬುವನು ಪುತ್ರ, ಧನ, ಹೆಂಡತಿ ಇವರುಗಳಲ್ಲಿ ಅಭಿಮಾನವನ್ನು ಬಿಟ್ಟು ಮದಮಾತ್ಸರ್ಯರಹಿತನಾಗಿ ಸಮಸ್ತ ಪ್ರಾಣಿಗಳಲ್ಲೂ ಒಂದೇ ಸಮನಾಗಿ,

ಯಾವ ಜಂತುಗಳಿಗೂ ದ್ರೋಹಮಾಡದಿರತಕ್ಕವನಾಗಿ, ಸರ್ವಸಂಗಪರಿತ್ಯಾಗ ಮಾಡಿದವನಾಗಿ ಹಳ್ಳಿಗಳಲ್ಲಿ ಒಂದು ರಾತ್ರಿಯೂ, ಪಟ್ಟಣದಲ್ಲಿ ಐದು ರಾತ್ರಿಯೂ ವಾಸಮಾಡತಕ್ಕವನಾಗಿ ಭಿಕ್ಷಾರ್ಥವಾಗಿ ಮನೆಮನೆಗಳನ್ನು ತಿರುಗುತ್ತಾ ಕಾಮ ಕ್ರೋಧಾದಿಗಳನ್ನು ಬಿಟ್ಟವನಾಗಿರಬೇಕು. ಈ ರೀತಿ ಸನ್ಯಾಸಿಯಾದವನು ಮೋಕ್ಷವನ್ನು ಹೊಂದುತ್ತಾನೆ. ಈ ಪ್ರಕಾರ ನಾಲ್ಕು ಆಶ್ರಮದವರೂ ವಿದ್ಯಾನು ಸಾರವಾಗಿ ಪರಮಾತ್ಮನಾದ ಶ್ರೀಮನ್ನಾರಾಯಣನನ್ನು ಆರಾಧಿಸಿ ಮುಕ್ತರಾಗು ತ್ತಾರೆ."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಮೂರನೆಯ ಅಂಶದಲ್ಲಿ
ಒಂಬತ್ತನೆಯ ಅಧ್ಯಾಯವು ಸಮಾಪ್ತಃ

ಹತ್ತನೆಯ ಅಧ್ಯಾಯವು

"ಸಗರ ಚಕ್ರವರ್ತಿಯು ಔರ್ವ ಋಷಿಯನ್ನು ಕುರಿತು ಕೇಳುತ್ತಾನೆ: "ಓ! ಮಹರ್ಷಿಯೇ ನೀನು ಅಪ್ಪಣೆಕೊಡಿಸಿದ ವರ್ಣಾಶ್ರಮಧರ್ಮಗಳನ್ನು ಕೇಳಿದೆನು. ಪುರುಷನಿಗೆ ಕರ್ಮಗಳನ್ನು ಮಾಡತಕ್ಕ ವಿಧಿಗಳನ್ನು ಅಪ್ಪಣೆ ಕೊಡಿಸು" ಎಂಬು ದಾಗಿ ಕೇಳಲು, ಔರ್ವ ಋಷಿಯು ಹೇಳುತ್ತಾನೆ: "ಎಲೈ ಸಗರನೇ, ಪುರುಷನಿಗೆ ಪುತ್ರೋತ್ಪತ್ತಿಯಾದರೆ ಮಗನು ಹುಟ್ಟಿದ ಕಾಲದಲ್ಲಿ ಜಾತಕರ್ಮವನ್ನು ಮಾಡಿ, ನಾಂದಿಯನ್ನೂ ಸಹ ಮಾಡಬೇಕು. ಆಮೇಲೆ ಹತ್ತನೆಯ ದಿವಸ ನಾಮಕರಣ ವನ್ನು ಮಾಡಬೇಕು. ಬ್ರಾಹ್ಮಣರು ಶರ್ಮಾಂತವಾಗಿಯೂ, ಕ್ಷತ್ರಿಯರು ವರ್ಮಾಂತ ವಾಗಿಯೂ, ವೈಶ್ಯರು ಗುಪ್ತಾಂತವಾಗಿಯೂ, ಶೂದ್ರನು ದಾಸಾಂತವಾಗಿಯೂ, ಸಹ ನಾಮಕರಣವನ್ನು ಮಾಡುವರು. ಹೆಸರನ್ನಿಡಬೇಕಾದರೆ ಅರ್ಥವಿಲ್ಲದ ಪದಗಳನ್ನೂ, ನಾಚಿಕೆಯನ್ನುಂಟುಮಾಡುವ ಪದಗಳನ್ನೂ, ಅಪಶಬ್ದಗಳನ್ನೂ, ಅಮಂಗಳಕರವಾದ ಪದಗಳನ್ನೂ, ಜುಗುಪ್ಸೆಯುಂಟುಮಾಡುವ ಪದಗಳನ್ನೂ ಸಹ ನಾಮಕರಣ ಮಾಡಕೂಡದು. ಬಹಳ ದೀರ್ಘವಾದ ಹೆಸರನ್ನೂ, ಬಹಳ ಚಿಕ್ಕದಾದ ಹೆಸರನ್ನೂ, ಗುರ್ವಕ್ಷರದಿಂದ ಕೂಡಿದ ಹೆಸರನ್ನೂ ಇಡಕೂಡದು. ಸಮಾಕ್ಷರದಿಂದಲೂ ಸುಖೋಚ್ಚಾರಣೆಯಿಂದಲೂ ಕೂಡಿದ ಹೆಸರುಗಳನ್ನೇ ನಾಮಕರಣ ಮಾಡಬೇಕು. ಅನಂತರ ಉಪನೀತನಾಗಿ ಗುರುವಿನ ಸಮೀಪದಲ್ಲಿ ವಿದ್ಯಾಕಾಲಕ್ಷೇಪವನ್ನು ಮಾಡಬೇಕು. ಆಮೇಲೆ ವಿವಾಹಿತನಾಗಬಹುದು. ಅಥವಾ ಯಾವಜ್ಜೀವವೂ ಬ್ರಹ್ಮಚರ್ಯದಲ್ಲಿಯೇ ಇರಬಹುದು. ವಿವಾಹವನ್ನು

ಮಾಡಿಕೊಳ್ಳಬೇಕಾದರೆ ತನ್ನ ವಯಸ್ಸಿನಲ್ಲಿ ಮೂರನೆ ಒಂದು ಭಾಗ ವಯಸ್ಸುಳ್ಳ ಕನ್ನಿಕೆಯನ್ನು ಪಾಣಿಗ್ರಹಣ ಮಾಡಿಕೊಳ್ಳಬೇಕು. ಬಹಳವಾದ ಕೂದಲುಳ್ಳವಳನ್ನೂ, ಸ್ವಲ್ಪವೂ ಕೂದಲು ಇಲ್ಲದೇ ಇರತಕ್ಕವಳನ್ನೂ, ಬಹಳ ಕಪ್ಪಾಗಿರುವವಳನ್ನೂ, ಬಹಳ ಕೆಂಪಾಗಿರುವವಳನ್ನೂ, ಅಧಿಕಾಂಗಿಯಾದವಳನ್ನೂ, ಅಂಗಹೀನಳಾದವಳನ್ನೂ, ಅವಿಶುದ್ಧಳಾದವಳನ್ನೂ, ದುಷ್ಕುಲಪ್ರಸೂತಳನ್ನೂ, ರೋಗಿಯಾದವಳನ್ನೂ, ದುಷ್ಟಳಾದವಳನ್ನೂ, ದುಷ್ಟವಾಕ್ಯವುಳ್ಳವಳನ್ನೂ, ನಿಂದ್ಯಳಾದವಳನ್ನೂ, ಕೃಶಳಾದವಳನ್ನೂ, ಕಾಕಧ್ವನಿಯುಳ್ಳವಳನ್ನೂ, ಬಹಳ ಕುಳ್ಳಾದವಳನ್ನೂ, ಬಹಳ ಉದ್ದವಾದವಳನ್ನೂ ಸಹ ವಿವಾಹಮಾಡಿಕೊಳ್ಳಕೂಡದು. ಮಾತೃಸಂಬಂಧದಲ್ಲಿ ಐದು ತಲೆಯು ಕಳೆದನಂತರವೂ ಪಿತೃಸಂಬಂಧದ ಏಳು ತಲೆಯು ಕಳೆದನಂತರವೂ ಸಹ ವಿವಾಹವನ್ನು ಮಾಡಿಕೊಳ್ಳಬಹುದು. ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಅಸುರ, ಗಾಂಧರ್ವ, ರಾಕ್ಷಸ, ಪೈಶಾಚವೆಂಬುದಾಗಿ ವಿವಾಹವು ಎಂಟು ವಿಧವಾಗಿರುವುದು. ಬ್ರಾಹ್ಮಣನನ್ನು ಕರೆದು ಕನ್ನಿಕೆಯನ್ನು ಕೊಡುವುದು ಬ್ರಾಹ್ಮವಿವಾಹವು. ಯಜ್ಞದಲ್ಲಿ ಋತ್ವಿಕನಾಗಿರುವವನಿಗೆ ಕೊಡುವುದು ದೈವವಿವಾಹವು, ವರನಿಂದ ಎರಡು ಗೋವುಗಳನ್ನು ತೆಗೆದುಕೊಂಡು ಕೊಡುವುದು ಆರ್ಷವೆಂತಲೂ, ಕನ್ಯಾವರರಿಬ್ಬರೂ ಒಂದೇ ವಿಧವಾದ ಧರ್ಮಾಚರಣೆಯನ್ನು ಮಾಡಿಕೊಂಡು ಇರುವುದಕ್ಕೆ ಪ್ರಾಜಾಪತ್ಯವೆಂತಲೂ, ಧನವನ್ನು ತೆಗೆದುಕೊಂಡು ಕನ್ನಿಕೆಯನ್ನು ಕೊಡುವುದು ಅಸುರವೆಂತಲೂ, ಸಮಯಾನುಸಾರ ಕನ್ಯಾವರರಿಬ್ಬರೇ ಅನುಮೋದನೆಯಿಂದ ಮಾಡಿಕೊಳ್ಳುವುದಕ್ಕೆ ಗಾಂಧರ್ವವೆಂತಲೂ, ಯುದ್ಧಾದಿಗಳಿಂದ ಬಲಾತ್ಕಾರವಾಗಿ ಮಾಡಿಕೊಂಡರೆ ರಾಕ್ಷಸವೆಂತಲೂ, ಹಟದಿಂದ ಕನ್ಯಾಪರಿಗ್ರಹ ಮಾಡುವುದು ಪೈಶಾಚವೆಂತಲೂ ಸಹ ಹೇಳಲ್ಪಟ್ಟಿರುತ್ತದೆ. ಆದುದರಿಂದ ಸಹಧರ್ಮಚಾರಿಣಿಯಾದ ಸ್ತ್ರೀಯನ್ನು ವಿವಾಹಮಾಡಿಕೊಳ್ಳಬೇಕು. ಎಂಟುವಿಧವಿವಾಹಗಳಲ್ಲಿ ವಂಶಕ್ರಮದಲ್ಲಿ ಯಾವಯಾವ ಧರ್ಮಗಳು ಆಚರಿಸಲ್ಪಟ್ಟಿವೆಯೋ ಆ ಧರ್ಮವನ್ನೇ ಅನುಸರಿಸಬೇಕು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶದಲ್ಲಿ
ಹತ್ತನೆಯ ಅಧ್ಯಾಯವು ಸಮಾಪ್ತಃ

ಹನ್ನೊಂದನೆಯ ಅಧ್ಯಾಯವು

"ಎಲೈ ಸಗರನೇ, ಸದಾಚಾರಲಕ್ಷಣವನ್ನೂ ಸದಾಚಾರದಿಂದ ಉಂಟಾಗತಕ್ಕ ಫಲವನ್ನೂ ಸಹ ಹೇಳುತ್ತೇನೆ ಕೇಳು. ದೋಷರಹಿತರಾದ ಸತ್ಪುರುಷರು ಯಾವ

ಯಾವ ಧರ್ಮಗಳನ್ನು ಆಚರಿಸುತ್ತಾರೋ ಅವೆಲ್ಲವೂ ಸದಾಚಾರವೆಂಬುದಾಗಿ ಹೇಳಲ್ಪಡುವುದು. ಸಪ್ತರ್ಷಿಗಳೂ, ಹದಿನಾಲ್ಕು ಮನುಗಳೂ ಸಹ ಸದಾಚಾರವನ್ನು ಹೇಳತಕ್ಕವರು ಮತ್ತು ಮಾಡತಕ್ಕವರು. ಬ್ರಾಹ್ಮ ಮುಹೂರ್ತದಲ್ಲಿ ಬ್ರಾಹ್ಮಣನು ನಿದ್ರೆಯಿಂದ ಎಚ್ಚರಗೊಂಡು, ಮನಸ್ಸಿನಲ್ಲಿ ಧರ್ಮವನ್ನು ಧ್ಯಾನ ಮಾಡಿ, ಭಗವದ್ಧ್ಯಾನವನ್ನು ಸಹ ಮಾಡಿ ಕಾಲಕ್ಕೆ ಸರಿಯಾಗಿ ಎದ್ದು ಮೂತ್ರ ವಿಸರ್ಜನೆಯನ್ನು ನೈಋತ್ಯ ದಿಕ್ಕಿನಲ್ಲಿಯಾಗಲಿ, ಗೃಹದ ಸಮೀಪದಲ್ಲಿ ಒಂದು ಧನುಸ್ಸಿನಷ್ಟು ದೂರ ಹೋಗಿ, ವಿಸರ್ಜನೆಯನ್ನು ಮಾಡಬೇಕು. ಆತ್ಮಚ್ಛಾಯೆಯಲ್ಲಿಯೂ, ವೃಕ್ಷಚ್ಛಾಯೆಯಲ್ಲಿಯೂ, ಗೋಶಾಲೆಯಲ್ಲಿಯೂ, ಸೂರ್ಯನ ಅಭಿಮುಖವಾಗಿಯೂ, ಆಚಾರ್ಯನ ಮತ್ತು ಬ್ರಾಹ್ಮಣರ ಅಭಿಮುಖವಾಗಿಯೂ, ವೈರುಗಳ ಮಧ್ಯದಲ್ಲಿಯೂ, ಜನಗಳು ತಿರುಗಾಡುವ ದಾರಿಯಲ್ಲಿಯೂ, ನದ್ಯಾದಿ ತೀರ್ಥಗಳಲ್ಲಿಯೂ, ಜಲದಲ್ಲಿಯೂ, ಶ್ಮಶಾನದಲ್ಲಿಯೂ ಸಹ ಮೂತ್ರಪುರೀಷಗಳನ್ನು ವಿಸರ್ಜನೆ ಮಾಡಕೂಡದು. ಹಗಲಿನಲ್ಲಿ ಉತ್ತರಾಭಿಮುಖವಾಗಿಯೂ, ರಾತ್ರಿಯಲ್ಲಿ ದಕ್ಷಿಣಾಭಿಮುಖವಾಗಿಯೂ ವಿಸರ್ಜನೆಯನ್ನು ಮಾಡಬೇಕು. ನೆಲದ ಮೇಲೆ ಹುಲ್ಲನ್ನು ಹಾಕಿಕೊಂಡು, ವಸ್ತ್ರವನ್ನು ತಲೆಗೆ ಸುತ್ತಿ ಬಹಳ ಹೊತ್ತು ಕೂಡದೇ ಮೌನವಾಗಿ ಮೂತ್ರಪುರೀಷಗಳನ್ನು ವಿಸರ್ಜನೆ ಮಾಡಬೇಕು. ವಲ್ಮೀಕಮಣ್ಣಿನಿಂದಲೂ, ಮೂಷಕದಿಂದ ಕೀಳಲ್ಪಟ್ಟ ಮಣ್ಣಿನಿಂದಲೂ, ಜಲದಲ್ಲಿರತಕ್ಕ ಮಣ್ಣಿನಿಂದಲೂ, ಇತರರು ಶೌಚ ಮಾಡಿ ಅವಶಿಷ್ಟವಾದ ಮಣ್ಣಿನಿಂದಲೂ, ಪ್ರಾಣಿಗಳಿಂದ ಕೂಡಿರುವ ಮಣ್ಣಿನಿಂದಲೂ, ಉತ್ತ ಮಣ್ಣಿನಿಂದಲೂ ಸಹ ಶೌಚವನ್ನು ಮಾಡಕೂಡದು. ಲಿಂಗಸ್ಥಾನಕ್ಕೆ ಒಂದಾವರ್ತಿ ಮಣ್ಣಿನಿಂದ ಶೌಚಮಾಡುವುದೂ,ಪೃಷ್ಠಕ್ಕೆ ಮೂರಾವರ್ತಿಯೂ, ಎಡಗೈಗೆ ಹತ್ತಾವರ್ತಿಯೂ, ಬಲಗೆಗ್ಗೆ ಏಳಾವರ್ತಿಯೂ ಮಣ್ಣಿನಿಂದ ಶೌಚವನ್ನು ಮಾಡಬೇಕು. ಆಮೇಲೆ ಬಾಯನ್ನು ನೀರಿನಿಂದ ಚನ್ನಾಗಿ ತೊಳೆದು, ಆಚಮನವನ್ನು ಮಾಡಬೇಕು. ಪುನಃ ಕಾಲುಗಳನ್ನು ಮಣ್ಣಿನಿಂದ ಶೌಚ ಮಾಡಬೇಕು. ಪುನಃ ಆಚಮನವನ್ನು ಮಾಡಬೇಕು. ನದೀತಟಾಕ ಇವುಗಳಲ್ಲಿ ಸ್ನಾನಮಾಡಿ ಶುದ್ಧವಸ್ತ್ರವನ್ನು ಧರಿಸಿ ಊರ್ಧ್ವಪುಂಡ್ರಗಳನ್ನು ಧಾರಣೆಮಾಡಿ ನಿತ್ಯಕರ್ಮಗಳಾದ ಸಂಧ್ಯಾವಂದನ, ಔಪಾಸನ, ಅಗ್ನಿಹೋತ್ರ, ಭಗವದಾರಾಧನೆ, ಮಾಧ್ಯಾಹ್ನಿಕ, ವೈಶ್ವದೇವ, ಪಂಚಮಹಾಯಜ್ಞಗಳನ್ನು ಮಾಡಬೇಕು. ವೈಶ್ವದೇವಾನಂತರ ಹಾಲು ಕರೆಯುವಷ್ಟು ಹೊತ್ತು ಬಾಗಿಲಲ್ಲಿ ಅತಿಥಿಗಳನ್ನು ನಿರೀಕ್ಷಿಸಿ ಅತಿಥಿಯಾದವನು ಬಂದರೆ ಅವನಿಗೆ ಪಾದಶೌಚಾದಿಗಳನ್ನು ಮಾಡಿ ಶ್ರದ್ಧೆಯಿಂದ ಅನ್ನವನ್ನು ಹಾಕಿ, ಭೋಜನಾನಂತರ ಕುಶಲಪ್ರಶ್ನೆಗಳನ್ನು ಮಾಡಿ, ಅವನು ಪ್ರಯಾಣ

ಮಾಡತಕ್ಕ ಕಾಲದಲ್ಲಿ ಸ್ವಲ್ಪ ದೂರ ಅನುಸರಿಸಿ ಕಳುಹಿಸಿಕೊಡಬೇಕು. ಅತಿಥಿಯಾಗಿ ಬಂದವನಿಗೆ ಸತ್ಕಾರ ಮಾಡದಿದ್ದರೆ ಅಂದರೆ ಅವನ ಆಸೆಯನ್ನು ತೀರಿಸದಿದ್ದರೆ ತನ್ನ ಪಾಪವನ್ನು ಮನೆಯ ಯಜಮಾನನಿಗೆ ಕೊಟ್ಟು ಯಜಮಾನನ ಪುಣ್ಯವನ್ನು ತೆಗೆದುಕೊಳ್ಳುತ್ತಾನೆ. ಈ ರೀತಿ ಗೃಹಸ್ಥನು ಅತಿಥಿ, ಅಭ್ಯಾಗತ, ಸನ್ಯಾಸಿ, ಬ್ರಹ್ಮಚಾರಿ ಇವರುಗಳನ್ನು ಸತ್ಕರಿಸಬೇಕು. ವಿವಾಹಿತಳಾದ ಕನ್ನಿಕೆಯನ್ನೂ, ದುಃಖಿಯಾದವಳನ್ನೂ, ಗರ್ಭಿಣಿಯನ್ನೂ, ವೃದ್ಧರನ್ನೂ, ಬಾಲಕರನ್ನೂ ಸಹ ಮೊದಲು ಭೋಜನ ಮಾಡಿಸಿ ಅನಂತರ ಗೃಹಸ್ಥನು ಊಟ ಮಾಡಬೇಕು. ಸ್ನಾನವಿಲ್ಲದೆ ಊಟಮಾಡಿದರೆ ಮಲವನ್ನೇ ಊಟಮಾಡಿದ ಹಾಗಾಗುವುದು. ಜಪವಿಲ್ಲದೆ ಊಟಮಾಡಿದರೆ ರಕ್ತಾದಿಗಳನ್ನೇ ಮಾಡಿದ ಹಾಗಾಗುವುದು, ವೈಶ್ವದೇವವಿಲ್ಲದ ಅನ್ನವನ್ನು ಭುಂಜಿಸಿದರೆ ಮೂತ್ರಾದಿಗಳನ್ನು ಪಾನಮಾಡಿದ ಹಾಗಾಗುವುದು. ಊಟಮಾಡತಕ್ಕವನು, ವಸ್ತ್ರದ್ವಯವನ್ನು ಧರಿಸಿದವನಾಗಿಯೂ, ಆರ್ದ್ರವಾದ ಪಾಣಿಪಾದಗಳುಳ್ಳವನಾಗಿಯೂ, ಪೂರ್ವಾಭಿಮುಖವಾಗಿಯಾಗಲೀ ಉತ್ತರಾಭಿಮುಖವಾಗಿಯಾಗಲೀ ಭೋಜನವನ್ನು ಮಾಡಬೇಕು. ಶುದ್ಧವಾದ ಅನ್ನವನ್ನು ಪರಿಷೇಚನಾದಿಗಳಿಂದ ಸಂಸ್ಕಾರಮಾಡಿ ಮೌನವಾಗಿಯೂ, ಕೋಪರಹಿತನಾಗಿಯೂ, ತ್ವರೆಯಿಲ್ಲದವನಾಗಿಯೂ ಊಟಮಾಡಬೇಕು. ಊಟಮಾಡುವ ಕಾಲದಲ್ಲಿ, ಮೊದಲು, ಸ್ವಲ್ಪ ನೀರಾಗಿರತಕ್ಕ ಪದಾರ್ಥಗಳನ್ನೂ ಮಧ್ಯದಲ್ಲಿ ಕಠಿಣವಾದ ಪದಾರ್ಥಗಳನ್ನೂ ಅಂತ್ಯದಲ್ಲಿ ಜಲವಾದ ಪದಾರ್ಥವನ್ನೂ ಸಹ ಭೋಜನ ಮಾಡಬೇಕು. ಭೋಜನದ ಮೊದಲುಗೊಂಡು ಅಂತ್ಯದವರೆಗೂ ಗೋವಿಂದನನ್ನು ಧ್ಯಾನಿಸುತ್ತಿರಬೇಕು. ಊಟವಾದನಂತರ ಸಚ್ಛಾಸ್ತ್ರಾವಲೋಕನದಿಂದಲೂ, ಸತ್ಕಥಾಶ್ರವಣದಿಂದಲೂ ಹಗಲನ್ನು ಕಳೆದು, ಸಾಯಂಸಂಧ್ಯಾವಂದನೆಯನ್ನೂ, ಅಗ್ನಿಹೋತ್ರಾದಿಗಳನ್ನೂ ಸಹ ಮಾಡಿ ವೈಶ್ವದೇವವನ್ನು ಮಾಡಿ ಅತಿಥಿಸತ್ಕಾರಾನಂತರ ಊಟಮಾಡಬೇಕು. ಅನಂತರದಲ್ಲಿ ದಂತಮಯವಾಗಿಯೂ ಅಥವಾ ದಾರುಮಯವಾಗಿಯೂ, ವಿಸ್ತಾರವಿಲ್ಲದ್ದಾಗಿಯೂ, ಹರಿಯದೇ ಇರತಕ್ಕದ್ದಾಗಿಯೂ, ಮಲಿನವಿಲ್ಲದ್ದಾಗಿಯೂ, ಹಳ್ಳತಿಟ್ಟು ಇಲ್ಲದ್ದಾಗಿಯೂ, ಕ್ರಿಮಿಕೀಟಾದಿರಹಿತವಾದದ್ದಾಗಿಯೂ ಹಾಸದಿರತಕ್ಕ ಹಾಸಿಗೆಯ ಪೂರ್ವದಿಕ್ಕು ಅಥವಾ ದಕ್ಷಿಣದಿಕ್ಕು ಈ ಎರಡೇ ಕಡೆಗೆ ಶಿರಸ್ಸನ್ನು ಮಾಡಿ ಮಲಗಬೇಕು. ಯಾವಾಗಲೂ ಮಲಗಿರತಕ್ಕವನಿಗೆ ರೋಗವು ಹೆಚ್ಚುವುದು. ಸ್ವಸ್ತ್ರೀಯಲ್ಲಿ ಋತುಕಾಲದಲ್ಲಿಯೂ, ಪುನ್ನಾಮನಕ್ಷತ್ರದಿಂದ ಕೂಡಿದ ಶುಭಕಾಲದಲ್ಲಿಯೂ, ಯುಗ್ಮವಾದ ರಾತ್ರಿಗಳಲ್ಲಿಯೂ ರಮಿಸಬೇಕು. ಅನುಕೂಲವಿಲ್ಲದವಳಾಗಿಯೂ, ಆತುರಳಾಗಿಯೂ, ರಜಸ್ವಲೆಯಾಗಿಯೂ, ಇಷ್ಟವಿಲ್ಲದವ

ಳಾಗಿಯೂ, ಕುಪಿತಳಾಗಿಯೂ, ಅನ್ಯಾಪೇಕ್ಷೆಯಲ್ಲಿರತಕ್ಕವಳಾಗಿಯೂ, ಹಸಿವಿನಿಂದ ಯುಕ್ತಳಾಗಿಯೂ, ಹೆಚ್ಚಾಗಿ ಊಟಮಾಡಿರತಕ್ಕವಳಾಗಿಯೂ ಇರುವ ಸ್ವಸ್ತ್ರೀಯಲ್ಲಿ ರಮಿಸಕೂಡದು. ಪುರುಷನು ಶುದ್ಧಮನಸ್ಕನಾಗಿಯೂ, ಸ್ರಕ್ ಚಂದನಾಲಂಕೃತನಾಗಿಯೂ, ಸಂತೋಷಮನಸ್ಕನಾಗಿಯೂ, ಅಪೇಕ್ಷೆಯುಕ್ತನಾಗಿಯೂ, ಅನುರಾಗಯುಕ್ತನಾಗಿಯೂ ಸಹ ಹೆಂಡತಿಯನ್ನು ಹೊಂದಬೇಕು. ಕೃಷ್ಣಪಕ್ಷದ ಚತುರ್ದಶೀ, ಅಷ್ಟಮಿ, ಅಮಾವಾಸ್ಯಾ, ಪೂರ್ಣಿಮಾ, ಸಂಕ್ರಾಂತಿ ಈ ತಿಥಿಗಳಲ್ಲಿ ತೈಲಾಭ್ಯಂಜನಗಳನ್ನೂ ಸ್ತ್ರೀಯನ್ನೂ ಸಹ ಪರಿಗ್ರಹಿಸಕೂಡದು. ಪರಿಗ್ರಹಿಸಿದರೆ ವಿಣ್ಮೂತ್ರಭೋಜನವೆಂಬ ನರಕವನ್ನು ಹೊಂದುವನು. ಪರಸ್ತ್ರೀಗಮನವನ್ನು ಮನಸ್ಸಿನಿಂದಲೂ ಮಾಡಕೂಡದು. ಗಮನಮಾಡಿದರೆ ಸತ್ತಮೇಲೆ ಭಯಂಕರಗಳಾದ ನರಕಗಳನ್ನು ಹೊಂದಿ ಕ್ರಿಮಿಕೀಟಾದಿ ಜನ್ಮಗಳನ್ನು ಹೊಂದುವರು. ಪರಸ್ತ್ರೀಗಮನಮಾಡಿದ ಪುರುಷನಿಗೆ ಇಹದಲ್ಲಿ ಪರದಲ್ಲಿ ಸಹ ಭಯವುಂಟಾಗುವುದು. ಇವುಗಳನ್ನು ತಿಳಿದು ಪುರುಷನು ಸ್ವಸ್ತ್ರೀಯಲ್ಲಿಯೂ ಕೂಡ ಕ್ಲಿಪ್ತವಾದ ಕಾಲಗಳಲ್ಲಿ ಕ್ರೀಡಿಸಿದರೆ ಅನೇಕ ಸುಖಗಳಿಂದ ಯುಕ್ತನಾಗುವನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶದಲ್ಲಿ
ಹನ್ನೊಂದನೆಯ ಅಧ್ಯಾಯವು ಸಮಾಪ್ತಃ

ಹನ್ನೆರಡನೆಯ ಅಧ್ಯಾಯವು

"ಬ್ರಾಹ್ಮಣನು ದೇವತೆಗಳನ್ನೂ, ಬ್ರಾಹ್ಮಣರನ್ನೂ, ಗೋವುಗಳನ್ನೂ, ವೃದ್ಧರನ್ನೂ, ಆಚಾರ್ಯರನ್ನೂ ಸಹ ಪೂಜಿಸುತ್ತಿರಬೇಕು. ಪ್ರತಿದಿನವೂ ಸಾಯಂ ಪ್ರಾತಃ, ಸಂಧ್ಯಾಗ್ನಿಹೋತ್ರಾದಿಗಳನ್ನು ಆಚರಿಸಬೇಕು. ಸದಾ ಶುದ್ಧವಸ್ತ್ರಗಳನ್ನೂ, ವಿಷ್ಣುಕ್ರಾಂತ್ಯಾದಿ ಔಷಧಿಗಳನ್ನೂ, ಗರುಡಮಣಿ, ಮರಕತಮಣಿಗಳನ್ನೂ ಸಹ ಧರಿಸಿರಬೇಕು. ಮನೋಹರವಾದ ಕೇಶಾದಿಗಳಿಂದ ಅಲಂಕೃತನಾಗಿರಬೇಕು. ಯಾವಾಗಲೂ ಪರಸ್ವತ್ತನ್ನು ಅಪಹಾರಮಾಡದವನಾಗಿಯೂ, ಸುಳ್ಳನ್ನು ಹೇಳದಿರತಕ್ಕವನಾಗಿಯೂ, ಪರದೋಷಗಳನ್ನು ಎಣಿಸದಿರತಕ್ಕವನಾಗಿಯೂ, ಪರಸ್ತ್ರೀಯನ್ನು ನೋಡದವನಾಗಿಯೂ, ದ್ವೇಷವಿಲ್ಲದವನಾಗಿಯೂ, ದುಷ್ಟವಾಹನಾರೋಹಣ ಮಾಡದಿರುವನಾಗಿಯೂ ಇರಬೇಕು. ಪತಿತ, ಉನ್ಮತ್ತ, ಕೀಟಕ, ಕ್ಷುದ್ರ, ವ್ಯಯಶೀಲ ಇವರುಗಳ ಸಹವಾಸವನ್ನು ಮಾಡಕೂಡದು. ಒಬ್ಬನೇ ದಾರಿಯನ್ನು ನಡೆಯಕೂಡದು. ಸುಟ್ಟುಹೋದ ಮನೆಯನ್ನು ಪ್ರವೇಶಮಾಡುವುದೂ, ಮರದ ತುದಿಯನ್ನು ಹತ್ತುವುದೂ, ಹಲ್ಲುಗಳನ್ನು ಒಂದಕ್ಕೆ

ಒಂದು ಉಜ್ಜುವುದೂ, ಮೂಗನ್ನು ಎಳೆಯುವುದೂ, ಗಟ್ಟಿಯಾಗಿ ನಗುವುದೂ, ಗಟ್ಟಿಯಾಗಿ ಉಸುರುಬಿಡುವುದೂ, ಉಗುರಿನಿಂದ ಊಟಮಾಡುವುದೂ, ಉಗುರಿನಿಂದ ಕಡ್ಡಿಯನ್ನು ಮುರಿಯುವುದೂ ನೆಲವನ್ನು ಕೆರಿಯುವುದೂ, ಮಿಾಸೆಯಿಂದ ಊಟಮಾಡುವುದೂ, ಅಶುಚಿಯಾದ ಪದಾರ್ಥಗಳನ್ನು ನೋಡುವುದೂ, ನಗ್ನಳಾದ ಪತ್ನಿಯನ್ನೂ, ಉದಯಾಸ್ತಮಕಾಲದಲ್ಲಿ ಸೂರ್ಯನನ್ನು ನೋಡುವುದೂ ಸಹ ನಿಂದಿತವಾದವುಗಳು. ಶವವನ್ನು ನೋಡಿ ಜಿಗುಪ್ಸೆಯನ್ನೂ ಹೊಂದಕೂಡದು. ನಾಲ್ಕು ಬೀದಿಗಳು ಕೂಡಿದ ಸ್ಥಳವನ್ನೂ, ಜಗಲೀ ಹಾಕಿರತಕ್ಕ ಪೂಜ್ಯವಾದ ಮರವನ್ನೂ ಸ್ಮಶಾನವನ್ನೂ ದುಷ್ಟಸ್ತ್ರೀಸಾಮಿಾಪ್ಯವನ್ನೂ ರಾತ್ರಿಕಾಲದಲ್ಲಿ ತ್ಯಜಿಸತಕ್ಕದ್ದು. ಪೂಜ್ಯವಾದ ದೇವ, ಬ್ರಾಹ್ಮಣ ಇವರುಗಳ ಛಾಯೆಯನ್ನು ತುಳಿಯಕೂಡದು. ಒಬ್ಬನೇ ಕಾಡಿನಲ್ಲಿ ಸಂಚರಿಸಬಾರದು. ಶೂನ್ಯವಾದ ಗೃಹದಲ್ಲಿ ವಾಸಮಾಡಕೂಡದು. ಕೂದಲು, ಮೂಳೆ, ಮುಳ್ಳು, ಅಮೇಧ್ಯ, ಬಲಿ, ಬೂದಿ ಇವುಗಳನ್ನು ಮುಟ್ಟಕೂಡದು. ನಗ್ನನಾಗಿ ಸ್ನಾನಮಾಡುವುದೂ, ಮಲಗುವುದೂ ಸಹ ನಿಂದ್ಯವಾದದ್ದು. ಕಚ್ಚೆಯನ್ನು ಬಿಚ್ಚಿ ಆಚಮನಮಾಡುವುದೂ ಮತ್ತು ಸಂಧ್ಯಾದಿ ಕರ್ಮಗಳನ್ನು ಮಾಡುವುದೂ ಸಹ ನಿಷಿದ್ಧವಾದವುಗಳು. ಅಸಮಂಜಸವಾದ ಸ್ವಭಾವವುಳ್ಳವರ ಜೊತೆಯಲ್ಲಿರಕೂಡದು. ಯೋಗ್ಯವಾದವರಲ್ಲಿ ವಿರೋಧವೂ, ಅಧಮರ ಸಹವಾಸವೂ ಸಹ ಕೂಡದು. ನಿಂತು ಮೂತ್ರವಿಸರ್ಜನೆಯನ್ನು ಮಾಡುವುದೂ, ಮೂತ್ರಪುರೀಷಾದಿಗಳನ್ನು ದಾಟುವುದೂ, ಕೂದಲನ್ನು ಒದರುವುದೂ, ನಿಂತುಕೊಂಡು ಆಚಮನವನ್ನು ಮಾಡುವುದೂ, ದೇವಾಲಯಾದಿಗಳನ್ನು ಅಪ್ರದಕ್ಷಿಣೆ ಮಾಡುವುದೂ, ಸ್ತ್ರೀಯರನ್ನು ಅವಮಾನಪಡಿಸುವುದೂ, ಸ್ತ್ರೀಯರಲ್ಲಿ ವಿಶೇಷ ವಿಶ್ವಾಸವಿಡುವುದೂ, ಧಿಕ್ಕರಿಸುವುದೂ ಸಹ ನಿಷಿದ್ಧವಾದುವು. ದೇವಾಲಯದಲ್ಲಿ ನಮಸ್ಕಾರಮಾಡುವುದೂ, ಕಾಲಕ್ಕೆ ಸರಿಯಾಗಿ ಕರ್ಮಗಳನ್ನು ಮಾಡುವುದೂ, ದೀನರನ್ನು ಉದ್ಧಾರಮಾಡುವುದೂ, ಸತ್ಪುರುಷರನ್ನು ಸೇವಿಸುವುದೂ, ಶಾಸ್ತ್ರಜ್ಞರನ್ನು ಅಭಿವಂದಿಸುವುದೂ, ದೇವರ್ಷಿಗಳನ್ನು ಪೂಜಿಸುವುದೂ, ಪಿತೃಗಳಿಗೆ ಪಿಂಡೋದಕಾದಿಗಳನ್ನು ಕೊಡುವುದೂ, ಅತಿಥಿಗಳನ್ನು ಸತ್ಕರಿಸುವುದೂ ಸಹ ಇವುಗಳೆಲ್ಲವೂ ಉತ್ತಮವಾದ ಲೋಕಗಳನ್ನು ಕೊಡತಕ್ಕವುಗಳು. ಹಿತವಾಗಿಯೂ, ಮಿತವಾಗಿಯೂ, ಪ್ರಿಯವಾಗಿಯೂ ಮಾತನಾಡತಕ್ಕವನು ಉತ್ತಮಲೋಕವನ್ನು ಹೊಂದುತ್ತಾನೆ. ಧೀಮಂತನಾಗಿಯೂ, ಲಜ್ಜಾಯುಕ್ತನಾಗಿಯೂ, ಕ್ಷಮಾಯುಕ್ತನಾಗಿಯೂ, ಆಸ್ತಿಕನಾಗಿಯೂ, ವಿನಯಗುಣಯುಕ್ತನಾಗಿಯೂ, ವಿದ್ಯಾವಂತರನ್ನೂ ಬಂಧುಜನರನ್ನೂ ವೃದ್ಧರನ್ನೂ ಸಹ

ಸತ್ಕರಿಸುವನಾಗಿಯೂ ಇರುವವರು ಉತ್ತಮಲೋಕವನ್ನು ಹೊಂದುವರು. ಅಕಾಲದಲ್ಲಿ ಮೇಘಗರ್ಜನೆಯಾದ ಕಾಲದಲ್ಲಿಯೂ, ಪರ್ವಕಾಲಗಳಲ್ಲಿಯೂ, ಆಶೌಚಕಾಲಗಳಲ್ಲಿಯೂ, ಗ್ರಹಣಕಾಲಗಳಲ್ಲಿಯೂ ಸಹ ಅನಾಧ್ಯಾಯವೆಂಬುದಾಗಿ ತಿಳಿದು ಕಾಲೋಚಿತಕರ್ಮಗಳನ್ನು ಮಾಡುವವನೂ ಸಹ ಉತ್ತಮವಾದ ಲೋಕವನ್ನು ಹೊಂದುವನು. ಮಳೆ ಬಿಸಿಲು ಕಾಲಗಳಲ್ಲಿ ಛತ್ರಿಯನ್ನೂ, ರಾತ್ರಿ ಕಾಲದಲ್ಲಿಯೂ ಕಾಡಿನಲ್ಲಿಯೂ ದಂಡವನ್ನೂ, ಸದಾ ಪಾದರಕ್ಷೆಯನ್ನೂ ಶರೀರಸೌಖ್ಯಾರ್ಥವಾಗಿ ಧರಿಸಬೇಕು. ಸದಾಚಾರರಹಿತನಾಗಿರುವನಿಗೂ, ಪ್ರಾಜ್ಞನಾದವನಿಗೂ, ವಿದ್ಯಾವಿನಯಸಂಪನ್ನನಾದವನಿಗೂ, ಪ್ರಿಯವಾದಿಯಾದವನಿಗೂ, ಮಿತ್ರಭಾವದಿಂದ ಇರತಕ್ಕವನಿಗೂ ಸಹ ಮೋಕ್ಷವು ಸಿದ್ಧವಾಗಿರುವುದು. ಪರಪ್ರೀತಿ ಉಂಟಾಗುವ ಹಾಗೆ ಸತ್ಯವನ್ನು ಹೇಳಬೇಕು. ಸತ್ಯದಿಂದ ಪರರಿಗೆ ದುಃಖ ಉಂಟಾಗುವುದಾದರೆ ಸತ್ಯವನ್ನೂ ಅನೃತವನ್ನೂ ಸಹ ಹೇಳದೆ ಮೌನವಾಗಿರಬೇಕು. ಪ್ರಾಣಿಗಳಿಗೆ ಉಪಕಾರವಾದ ಮಾತುಗಳನ್ನೇ ಹೇಳಬೇಕು. ಅತ್ಯಂತ ಅಪ್ರಿಯವಾದರೂ ತುಂಬಾ ಹಿತವಾದುದೇ ಆದರೆ ಅದನ್ನು ಹೇಳುವುದು ಶ್ರೇಯಸ್ಕರವು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶದಲ್ಲಿ
ಹನ್ನೆರಡನೆಯ ಅಧ್ಯಾಯವು ಸಮಾಪ್ತಃ

ಹದಿಮೂರನೆಯ ಅಧ್ಯಾಯವು

ಪುತ್ರೋತ್ಪತ್ತಿಯಾದಕಾಲದಲ್ಲಿ ತಂದೆಯು ಸಚೇಲಸ್ನಾನಮಾಡಿ ಎಂದರೆ ಧರಿಸಿದ ಬಟ್ಟೆಗಳೊಂದಿಗೆ ಸ್ನಾನಮಾಡಿ ಜಾತಕರ್ಮವನ್ನು ಮಾಡಬೇಕು. ಜಾತಕರ್ಮಾಂಗವಾಗಿ ಅಭ್ಯುದಯಶ್ರಾದ್ಧವನ್ನು ಮಾಡಬೇಕು. ಈ ಅಭ್ಯುದಯ ಶ್ರಾದ್ಧವನ್ನು ಕನ್ಯಾಪುತ್ರವಿವಾಹಗಳಲ್ಲಿಯೂ, ಗೃಹಪ್ರವೇಶದಲ್ಲಿಯೂ, ನಾಮಕರಣದಲ್ಲಿಯೂ, ಚೌಲೋಪನಯನದಲ್ಲಿಯೂ, ಪುಂಸವನಸೀಮಂತೋನ್ನಯನದಲ್ಲಿಯೂ, ಇತರ ಶುಭಕರ್ಮಗಳಲ್ಲಿಯೂ ಸಹ ಮಾಡಬೇಕು. ನಾಂದೀಮುಖದಿಂದ ಪಿತೃಗಳು ತೃಪ್ತಿಯನ್ನು ಹೊಂದುವರು. ವೃದ್ಧಿಕರ್ಮಗಳಲ್ಲಿ ಪಿತೃಕರ್ಮವನ್ನು ಹೇಳಿದೆನು. ಮುಂದೆ ಪ್ರೇತಕರ್ಮಗಳನ್ನು ಹೇಳುವೆನು. ಪ್ರಾಣಹೋದ ದೇಹವನ್ನು ಸ್ನಾನ ಮಾಡಿಸಿ, ತುಳಸೀಪುಷ್ಪಾದಿಗಳಿಂದ ಅಲಂಕರಿಸಿ, ದೇಹವನ್ನು ವಿಧ್ಯುಕ್ತವಾದ ಅಗ್ನಿಯಿಂದ ದಹಿಸಿ, ಗ್ರಾಮಾದ್ಬಹಿಯಲ್ಲಿ ಸಚೇಲಸ್ನಾನಮಾಡಿ ದಕ್ಷಿಣಾಭಿಮುಖವಾಗಿ ಬಂಧುಜನಗಳ ಸಹಿತ ಉದಕಾಂಜಲಿಯನ್ನು ಮಾಡಬೇಕು.

ನಕ್ಷತ್ರದರ್ಶನಾನಂತರ ಗ್ರಾಮವನ್ನು ಪ್ರವೇಶಿಸಿ, ಶವಸಂಬಂಧವಾದ ಆಶೌಚಾದಿಗಳನ್ನು ಅನುಭವಿಸುತ್ತಾ ಭೂಮಿಯಲ್ಲಿ ಮಲಗತಕ್ಕದ್ದು. ಹತ್ತುದಿವಸದ ವರೆಗೆ ಪ್ರತಿದಿನವೂ ಪಿಂಡಗಳನ್ನು ಪ್ರೇತನಿಗೆ ಕೊಡಬೇಕು. ಬಂಧುವರ್ಗದಿಂದ ಕೂಡಿ ಹಗಲು ಭೋಜನವನ್ನು ಮಾಡಬೇಕು. ನಾಲ್ಕನೆಯ ದಿವಸ ಅಸ್ಥಿ ಸಂಚಯನವನ್ನು ನಡೆಸಬೇಕು. ಅಸ್ಥಿಸಂಚಯನಕ್ಕೆ ಮೊದಲು ಸಪಿಂಡವನ್ನೂ ಸಹ ಮುಟ್ಟಕೂಡದು. ಬಾಲಕನೂ, ದೇಶಾಂತರದಲ್ಲಿರತಕ್ಕವನೂ, ಪತಿತನಾದವನೂ, ಋಷಿಯಾದವನೂ, ಜಲ, ಅಗ್ನಿ, ಉದ್ಬಂಧನ ಇವುಗಳಿಂದಲೂ ಸಹ ಸತ್ತವನಿಗೆ, ಸದ್ಯಃಶೌಚವು. ಆಶೌಚಾನುಷ್ಠಾನಕಾಲದಲ್ಲಿ ದಾನ, ಪ್ರತಿಗ್ರಹ, ಯಜ್ಞ, ವೇದಾಧ್ಯಯನಾದಿಗಳನ್ನು ಮಾಡಕೂಡದು. ಬ್ರಾಹ್ಮಣನಿಗೆ ಹತ್ತು ದಿವಸ ಆಶೌಚವೂ, ಕ್ಷತ್ರಿಯನಿಗೆ ಹನ್ನೆರಡು ದಿವಸವೂ, ವೈಶ್ಯನಿಗೆ ಹದಿನೈದು ದಿವಸವೂ, ಶೂದ್ರನಿಗೆ ಮಾಸವೂ ಸಹ ಆಶೌಚವು ವಿಧಿಸಲ್ಪಟ್ಟಿರುವುದು. ಹನ್ನೊಂದನೆಯ ದಿವಸ ಬೆಸಸಂಖ್ಯೆಯಿಂದ ಬ್ರಾಹ್ಮಣರನ್ನು ಭೋಜನಮಾಡಿಸಬೇಕು. ಬ್ರಾಹ್ಮಣರು ಏಳುವುದಕ್ಕಿಂತ ಮುಂಚೆಯೇ ಪ್ರೇತನಿಗೋಸ್ಕರ ಪಿಂಡವನ್ನು ಕೊಡಬೇಕು. ಈ ರೀತಿ ಏಕೋದ್ದಿಷ್ಟವಾದನಂತರ ಶುದ್ಧರಾಗುವರು. ಏಕೋದ್ದಿಷ್ಟ ಮೊದಲುಗೊಂಡು ಸಪಿಂಡೀಕರಣಾಂತವಾಗಿ ಏಕೋದ್ದಿಷ್ಟವಿಧಿಯಿಂದಲೇ ಶ್ರಾದ್ಧಗಳನ್ನು ಮಾಡಬೇಕು. ಸಪಿಂಡೀಕರಣ ವರ್ಷಾಂತ್ಯದಲ್ಲಿಯಾಗಲೀ ಆರನೆಯ ತಿಂಗಳಲ್ಲಿಯಾಗಲೀ ಹನ್ನೆರಡನೆಯ ದಿವಸದಲ್ಲಿಯಾಗಲೀ ಮಾಡಬೇಕು. ಸಪಿಂಡೀಕರಣಕ್ಕೆ ಪುತ್ರನೂ ಅಥವಾ ಪೌತ್ರನೂ, ಪ್ರಪೌತ್ರನೂ, ಅಣ್ಣತಮ್ಮಂದಿರೂ, ಇವರ ಮಕ್ಕಳೂ, ಸಪಿಂಡರೂ ಸಹ ಕರ್ಮಾಧಿಕಾರಿಗಳು. ಇವರುಗಳು ಪೂರ್ವಪೂರ್ವಾಭಾವದಿಂದ ಮಾಡಬೇಕು. ದಶರಾತ್ರಿ ಜ್ಞಾತಿಗಳು ಇಲ್ಲದಿದ್ದರೆ ತ್ರಿರಾತ್ರಿ ಜ್ಞಾತಿಗಳು ಮಾಡತಕ್ಕದ್ದು. ಸರ್ವಾಭಾವವಾದರೆ ರಾಜನೇ ಕರ್ಮಾಧಿಕಾರಿಯಾಗುವನು. ಕರ್ಮಗಳು ಉತ್ತಮಾಧಮ ಮಧ್ಯಮಗಳು ಎಂಬುದಾಗಿ ಮೂರು ವಿಧವಾಗಿರುವುವು. ದಾಹ, ಪ್ರಭೃತಿ, ಆಶೌಚಾಂತ ಕರ್ಮಗಳು ಉತ್ತಮವಾದವುಗಳು. ಸಪಿಂಡೀಕರಣ ಮಧ್ಯಮವಾದುದು. ಮಾಸಿಕಾದಿಗಳು ಅಧಮವಾದುದು. ಅಂದರೆ ಆದಿ, ಮಧ್ಯ, ಅಂತ್ಯಗಳೆಂದು ಅಭಿಪ್ರಾಯವು. ಈ ರೀತಿಯಲ್ಲಿ ಸ್ತ್ರೀಪುರುಷರಿಗೆಲ್ಲರಿಗೂ ಕ್ರಿಯೆಗಳು ಆವಶ್ಯಕವಾದವುಗಳು. ಅನಂತರ ಯಾವ ಯಾವ ಕಾಲದಲ್ಲಿ ವಿಧಿವತ್ತಾಗಿ ಯಾವ ಕರ್ಮಗಳನ್ನು ಮಾಡಬೇಕೋ ಅವುಗಳನ್ನು ಹೇಳುತ್ತೇನೆ."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಮೂರನೆಯ ಅಂಶದಲ್ಲಿ
ಹದಿಮೂರನೆಯ ಅಧ್ಯಾಯವು ಸಮಾಪ್ತಃ

ಹದಿನಾಲ್ಕನೆಯ ಅಧ್ಯಾಯವು

"ಬ್ರಾಹ್ಮಣನು ಶ್ರದ್ಧಾನ್ವಿತನಾಗಿ ಬ್ರಹ್ಮೇಂದ್ರಾದಿಗಳನ್ನು ತರ್ಪಣಾದಿ ಶ್ರಾದ್ಧಗಳಿಂದ ತೃಪ್ತಿಪಡಿಸಬೇಕು. ಹೇಮಂತ, ಶಿಶಿರ ಋತುಗಳಲ್ಲಿ ಅಷ್ಟಕಾ ಶ್ರಾದ್ಧವನ್ನೂ, ವ್ಯತೀಪಾತ, ಅಯನ, ವಿಷ್ಣುವತ್ಪುಣ್ಯಕಾಲ, ಸೂರ್ಯಚಂದ್ರ ಗ್ರಹಣ, ಸಂಕ್ರಾಂತಿ, ಹೊಸಪ್ಪೈರು ಬಂದ ಕಾಲ, ಅಮಾವಾಸ್ಯಾ ಈ ಕಾಲಗಳಲ್ಲಿ ಶ್ರಾದ್ಧವನ್ನು ಮಾಡಿ ಪಿತೃಗಳನ್ನು ತೃಪ್ತಿಪಡಿಸಬೇಕು. ಅಕ್ಷತದಿಗೆ, ಕಾರ್ತೀಕ ಶುದ್ಧ ನವಮಿ, ಭಾದ್ರಪದ ಬಹುಳ ತ್ರಯೋದಶಿ, ಮಾಘಶುದ್ಧ ಪೂರ್ಣಿಮಾ ಇವುಗಳು ಯುಗಾದಿಗಳು ಎಂಬುದಾಗಿ ಹೇಳಲ್ಪಟ್ಟಿವೆ. ಯುಗಾದಿಗಳಲ್ಲಿಯೂ ಪಿತೃಗಳಿಗೆ ಶ್ರಾದ್ಧವನ್ನು ಮಾಡಬೇಕು. ಗಂಗಾ, ಶತದ್ರೂ, ಯಮುನಾ, ಸರಸ್ವತೀ, ಗೋಮತೀ ಇವೇ ಮೊದಲಾದ ಮಹಾನದಿಗಳಲ್ಲಿ ಸ್ನಾನಮಾಡಿ ತೀರ್ಥಶ್ರಾದ್ಧಗಳನ್ನು ಮಾಡಬೇಕು. ನಮ್ಮ ಕುಲದಲ್ಲಿ ಹುಟ್ಟಿದವರಾಗಿ ವಿತ್ತ ಶಾಠ್ಯವಿಲ್ಲದೆ ಪಿಂಡಗಳನ್ನು ಯಾರು ಕೊಡುತ್ತಾರೋ ಅವರೇ ಧನ್ಯರೆಂದು ಪಿತೃಗಳು ಹೇಳುತ್ತಾರೆ. ಶ್ರಾದ್ಧಗಳಲ್ಲಿ ರತ್ನ, ವಸ್ತ್ರ, ಮಹಾಯಾನ ಇತ್ಯಾದಿ ಗಳನ್ನು ಪಿತೃಗಳನ್ನುದ್ದೇಶಿಸಿ ಯಾವ ಮನುಷ್ಯನು ದಾನವನ್ನು ಮಾಡು ತ್ತಾನೋ ಅವನೇ ಧನ್ಯನಾಗುವನು. ಪ್ರತಿಶ್ರಾದ್ಧಗಳಲ್ಲಿಯೂ ಬ್ರಾಹ್ಮಣರನ್ನು ಭೋಜನಮಾಡಿಸಬೇಕು. ಅನ್ನಶ್ರಾದ್ಧವನ್ನು ಮಾಡುವುದಕ್ಕೆ ಅಶಕ್ತನಾದರೆ ಧಾನ್ಯರೂಪವಾದ ಆಮಶ್ರಾದ್ಧವನ್ನು ಮಾಡಬೇಕು. ಇದಕ್ಕೂ ಅಶಕ್ತನಾದರೆ ತಿಲಾಂಜಲಿ ಶ್ರಾದ್ಧವನ್ನು ಮಾಡಬೇಕು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಮೂರನೆಯ ಅಂಶದಲ್ಲಿ
ಹದಿನಾಲ್ಕನೆಯ ಅಧ್ಯಾಯವು ಸಮಾಪ್ತಃ

ಹದಿನೈದನೆಯ ಅಧ್ಯಾಯವು

ಶ್ರಾದ್ಧಗಳಲ್ಲಿ ಬ್ರಾಹ್ಮಣ ಭೋಜನವೇ ಮುಖ್ಯವಾದುದು. ವೇದಸಂಪನ್ನ ನಾದ ಬ್ರಾಹ್ಮಣನೂ, ಯೋಗಿಯಾದವನೂ, ಋತ್ವಿಕನೂ, ತಂಗೀ ಮಗನೂ, ದೌಹಿತ್ರನೂ, ಅಳಿಯನೂ, ಹೆಣ್ಣು ಕೊಟ್ಟ ಮಾವನೂ, ಸೋದರಮಾವನೂ, ತಪೋನಿಷ್ಠನಾದವನೂ, ಶಿಷ್ಯನೂ, ಮಾತಾಪಿತೃಬಂಧುಗಳೂ ಸಹ ಇವರು ಗಳನ್ನು ಶ್ರಾದ್ಧದಲ್ಲಿ ಭೋಜನಮಾಡಿಸಬೇಕು. ಮಿತ್ರದ್ರೋಹಿಯೂ, ಕಪ್ಪು ಉಗುರುಗಳುಳ್ಳವನೂ, ಕಪ್ಪಾದ ಹಲ್ಲುಳ್ಳವನೂ, ಕನ್ಯಾದೂಷಿಯೂ, ವೇದ

ರಹಿತನೂ, ಸೋಮವಿಕ್ರಯಿಯೂ, ಮಹಾಪಾತಕಿಯೂ, ಕಳ್ಳತನವನ್ನು ಮಾಡುವನೂ, ದುರ್ಜನನೂ, ಗ್ರಾಮಯಾಚಕನೂ, ಸಂಬಳದಿಂದ ವೇದವನ್ನು ಹೇಳತಕ್ಕವನೂ, ಮಾತಾಪಿತೃದೂಷಕನೂ, ವೃಷಲೀಪತಿಯೂ, ಭದ್ರಕಾಳ್ಯಾದಿ ಕ್ಷುದ್ರದೇವತಾರಾಧಕನೂ ಸಹ ಶ್ರಾದ್ಧದಲ್ಲಿ ಅನರ್ಹರಾದವರು. ಪೂರ್ವ ದಿನದಲ್ಲಿಯೇ ಬ್ರಾಹ್ಮಣರನ್ನು ವರಿಸಬೇಕು: ಪೈತೃಕಮಾಡುವವನು, ಮೂರು ದಿನ ಬ್ರಹ್ಮಚರ್ಯದಲ್ಲಿದ್ದುಕೊಂಡು ದೇಹಾಯಾಸಕರವಾದ ಕೆಲಸಗಳನ್ನು ಮಾಡದೆ ಬ್ರಾಹ್ಮಣರಿಗೆ ಪಾದಶೌಚಾದಿಗಳನ್ನು ಮಾಡಿ ಆಸನದಲ್ಲಿ ಕೂಡಿಸ ಬೇಕು. ಪಿತೃಗಳಿಗೆ ಮೂರು ಜನರನ್ನೂ, ವಿಶ್ವೇದೇವತೆಗಳಿಗೆ ಇಬ್ಬರನ್ನೂ, ವಿಷ್ಣುಗೆ ಒಬ್ಬನನ್ನೂ ಭೋಜನಮಾಡಿಸಬೇಕು ಅಥವಾ ಮೂರು ಸ್ಥಾನಗಳಿಗೂ, ಒಬ್ಬೊಬ್ಬರನ್ನೇ ಕೂಡಿಸಬಹುದು. ಪಿತೃಸ್ಥಾನದಲ್ಲಿ ಬ್ರಾಹ್ಮಣರನ್ನು ಉತ್ತರಾಭಿ ಮುಖವಾಗಿ ಭೋಜನ ಮಾಡಿಸಬೇಕು. ಸರ್ವತ್ರ ಒಂದೇ ಪಾಕವನ್ನು ಮಾಡ ಬೇಕು. ಬ್ರಾಹ್ಮಣರಿಗೆ ಆಸನಾರ್ಥವಾಗಿ ದರ್ಭೆಗಳನ್ನು ಕೊಡುವುದು, ಅನಂತರ ಅರ್ಘ್ಯ, ಆವಾಹನೆಗಳನ್ನು ಮಾಡಬೇಕು. ದೇವತೆಗಳಿಗೆ ಯವೋದಕವನ್ನೂ, ಪಿತೃಗಳಿಗೆ ತಿಲೋದಕವನ್ನೂ, ವಿಶ್ವೇದೇವ ವಿಷ್ಣುಗಳಿಗೆ ಉಪವೀತಿಯಿಂದಲೂ, ಪಿತೃಗಳಿಗೆ ಪ್ರಾಚೀನಾವೀತಿಯಿಂದಲೂ, ಗಂಧಪುಷ್ಪ ಧೂಪದೀಪ ವಸ್ತ್ರಗಳನ್ನು ಕೊಡಬೇಕು. ಭೋಜನಕಾಲಕ್ಕೆ ಸರಿಯಾಗಿ ಅತಿಥಿಯು ಬಂದಲ್ಲಿ ಅವನನ್ನೂ ಸಹ ಶ್ರಾದ್ಧದಲ್ಲಿ ಭೋಜನಮಾಡಿಸಬೇಕು. ಯೋಗಿಗಳಾದ ಮಹಾತ್ಮರು ಮನುಷ್ಯರ ಉಪಕಾರಾರ್ಥವಾಗಿ ನಾನಾರೂಪಗಳಿಂದ ಭೂಮಿಯಲ್ಲಿ ಸಂಚರಿಸುತ್ತಾರೆ. ಆದುದ ರಿಂದ ಅತಿಥಿಗಳನ್ನು ಶ್ರಾದ್ಧದಲ್ಲಿ ಭೋಜನಮಾಡಿಸದಿದ್ದರೆ ಶ್ರಾದ್ಧಕರ್ಮವು ನಾಶವಾಗುವುದು. ಅಗ್ನಿಯಲ್ಲಿ ಶುದ್ಧಾನ್ನವನ್ನು ಹೋಮಮಾಡಿ ಕವ್ಯವಾಹನ ನಿಗೂ ಪಿತೃಗಳಿಗೂ ಹೋಮಮಾಡಿ, ಹೋಮಶೇಷವನ್ನು ಪಿತೃಸ್ಥಾನ ಪಾತ್ರೆ ಯಲ್ಲಿ ಹಾಕಬೇಕು. ಅನಂತರ ಬ್ರಾಹ್ಮಣರನ್ನು, ನಿಷ್ಠುರೋಕ್ತಿಗಳಿಲ್ಲದ ಉಪ ಚಾರೋಕ್ತಿಗಳಿಂದ ಆದರಿಸಿ, ಭೋಜನ ಮಾಡಿಸಬೇಕು. ಬ್ರಾಹ್ಮಣರು ಮೌನ ವಾಗಿ ಭೋಜನಮಾಡಬೇಕು. ಭೋಜನಮಾಡತಕ್ಕ ಕಾಲದಲ್ಲಿ ರಕ್ಷೋಘ್ನ ಮಂತ್ರಗಳನ್ನೂ, ಪಿತೃಸೂಕ್ತಗಳನ್ನೂ ಸಹ ಪಠನೆ ಮಾಡಬೇಕು. ವಿಪ್ರ ದೇಹಸ್ಥರಾದ ಪಿತೃಪಿತಾಮಹ ಪ್ರಪಿತಾಮಹರು ತೃಪ್ತಿಯನ್ನು ಹೊಂದಲಿ ಎಂಬುದಾಗಿಯೂ, ಹೋಮಸ್ಥಾನದಲ್ಲಿ ಬಂದ ಪಿತ್ರಾದಿಗಳು ತೃಪ್ತಿಯನ್ನು ಹೊಂದಲಿ. ಪಿಂಡಗಳಲ್ಲಿ ಆವಾಹಿತರಾದ ಪಿತೃಗಳು ತೃಪ್ತರಾಗಲಿ ಎಂಬು ದಾಗಿಯೂ ಪಿತೃಗಳನ್ನು ಪ್ರಾರ್ಥನೆಮಾಡಿ, ಹವ್ಯಕವ್ಯಭೋಕ್ತಾವಾಗಿಯೂ, ಅವ್ಯಯನಾಗಿ ಸರ್ವೇಶ್ವರನಾಗಿಯೂ, ಹರಿಯಾಗಿಯೂ ಇರುವ ಯಜ್ಞೇಶ್ವರನು

ಇಲ್ಲಿ ಇರುವುದರಿಂದ ಸಾನ್ನಿಧ್ಯವಿಶೇಷದಿಂದ ರಾಕ್ಷಸರೂ, ಅಸುರರೂ ಸಹ ಓಡಿ ಹೋಗಲಿ ಎಂಬುದಾಗಿ ಭಗವಂತನನ್ನು ಪ್ರಾರ್ಥಿಸಿದನಂತರ, ಬ್ರಾಹ್ಮಣ ಭೋಜನವಾದಮೇಲೆ ಬ್ರಾಹ್ಮಣರ ಮುಂಭಾಗದಲ್ಲಿ ವಿಕರವನ್ನು ಹಾಕಿ ತೃಪ್ತ ರಾದೆವು ಎಂಬುದಾಗಿ ಬ್ರಾಹ್ಮಣರಿಂದ ಅನುಜ್ಞೆಯನ್ನು ಪಡೆದು, ಉತ್ತರಾ ಪೋಶನಾದಿಗಳನ್ನು ಕೊಡಬೇಕು. ಆಮೇಲೆ ದರ್ಭೆಯನ್ನು ಹಾಸಿ, ಮೊದಲು ಪಿತೃಪಿಂಡವನ್ನೂ, ಪಿತಾಮಹಪಿಂಡವನ್ನೂ, ಪ್ರಪಿತಾಮಹಪಿಂಡವನ್ನೂ ಇಟ್ಟು ತಿಲೋದಕಸೇಚನೆಯನ್ನು ಮಾಡಿ, ಬ್ರಾಹ್ಮಣರಿಗೆ ದಕ್ಷಿಣಾತಾಂಬೂಲಗಳನ್ನು ಕೊಟ್ಟು ಅವರಿಂದ ಅನುಗ್ರಹವನ್ನು ಪಡೆದು, ಉಪಚಾರೋಕ್ತಿಗಳನ್ನು ಹೇಳಿ, ಬಾಗಿಲುವರೆಗೂ ಅನುಸರಿಸಿ ಕಳುಹಿಸಿ ಕೊಡಬೇಕು. ಆಮೇಲೆ ವೈಶ್ವ ದೇವಾದಿಗಳನ್ನು ಮಾಡಿ, ಇಷ್ಟಜನರಿಂದ ಕೂಡಿ ಭೋಜನಮಾಡಬೇಕು. ಈ ರೀತಿಯಲ್ಲಿ ಶಿಷ್ಟನಾದವನು ಪೈತೃಕಕರ್ಮವನ್ನು ಮಾಡಿದರೆ ಪಿತೃಪಿತಾ ಮಹಾದಿಗಳು ಸಂತುಷ್ಟಮನಸ್ಕರಾಗಿ ಇವನಿಗೆ ಇಷ್ಟಾರ್ಥಗಳನ್ನು ಕೊಡುತ್ತಾರೆ. ದೌಹಿತ್ರನೂ, ಕುತುಪಕಾಲವೂ ಅಂದರೆ ಅಪರಾಹ್ಣಕಾಲವೂ, ಎಳ್ಳೂ, ಈ ಮೂರೂ, ಶ್ರಾದ್ಧದಲ್ಲಿ ಪ್ರಶಸ್ತವಾದವುಗಳು. ಮತ್ತು ಶ್ರಾದ್ಧದಲ್ಲಿ ರಜತಪಾತ್ರ ದಾನವು ಪ್ರಶಸ್ತವಾದುದು. ಅಶಕ್ತನಾದರೆ ರಜತಪಾತ್ರೆಯೆಂಬುದಾಗಿ ಬೆಳ್ಳೀ ಶಬ್ದವನ್ನಾದರೂ ಉಚ್ಚರಿಸಬೇಕು. ಶ್ರಾದ್ಧಕಾಲದಲ್ಲಿ ಶ್ರಾದ್ಧಕರ್ತೃವು ಕೋಪ, ಆತುರ, ಬೇರೆ ಕಡೆಗೆ ಹೋಗಿಬರೋಣ ಇವುಗಳನ್ನು ತ್ಯಜಿಸತಕ್ಕದ್ದು. ಭೋಕ್ತರು ಗಳಿಗೂ ಕೂಡ ಈ ಮೂರು ಪ್ರಶಸ್ತವಾದವುಗಳಲ್ಲ. ಪಿತೃಗಣಕ್ಕೆ ಚಂದ್ರನೇ ಆಧಾರನು, ಚಂದ್ರನಿಗೆ ಯೋಗವು ಆಧಾರವಾದುದು. ಆದುದರಿಂದ ಶ್ರಾದ್ಧದಲ್ಲಿ, ಯೋಗಿಯಾದವನನ್ನೇ ಭೋಜನಮಾಡಿಸಬೇಕು. ಇದೇ ಧರ್ಮವನ್ನೇ ಶಂತನು ಚಕ್ರವರ್ತಿಯು ಭೀಷ್ಮನಿಗೆ ಉಪದೇಶಮಾಡಿದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಮೂರನೆಯ ಅಂಶದಲ್ಲಿ
ಹದಿನೈದನೆಯ ಅಧ್ಯಾಯವು ಸಮಾಪ್ತಃ

ಹದಿನಾರನೆಯ ಅಧ್ಯಾಯವು

"ಶ್ರಾದ್ಧದಲ್ಲಿ ಪಿತೃಗಳಿಗೆ ಅಕ್ಕಿಯಿಂದ ಮಾಡಿದ ಅನ್ನವು ಒಂದು ತಿಂಗಳು ತೃಪ್ತಿಯನ್ನುಂಟುಮಾಡುವುದು. ಮತ್ಸ್ಯವು ಎರಡು ತಿಂಗಳೂ ಜಿಂಕೆ ಮೊದಲಾದ ಮಾಂಸಗಳು ಹನ್ನೊಂದು ತಿಂಗಳವರೆಗೂ, ಹಾಲು ಒಂದು ವರ್ಷ ಪರಿಯಂತರವೂ

ಸಹ ತೃಪ್ತಿಯನ್ನುಂಟುಮಾಡುವುದು. ಆದುದರಿಂದ ಶ್ರಾದ್ಧದಲ್ಲಿ ಹಾಲು ಮುಖ್ಯವಾದ ಪದಾರ್ಥವಾಗಿರುವುದು. ಯಾವ ಮನುಷ್ಯನು ಗಯಾಶ್ರಾದ್ಧವನ್ನು ಮಾಡುತ್ತಾನೋ ಅವನ ಜನ್ಮವು ಸಫಲವಾದುದು. ಅಕ್ಕಿ, ನವಣೆ, ಹೆಸರು, ಗೋಧಿನೆ, ಎಳ್ಳು, ಅವರೇಬೇಳೆ, ಸಾಸಿವೆ ಇವೇ ಮೊದಲಾದ ಪದಾರ್ಥಗಳು ಶ್ರಾದ್ಧಾರ್ಹವಾದವುಗಳು. ಕಹಿಸೋರೇಕಾಯಿ, ಬೆಳ್ಳುಳ್ಳಿಗೆಡ್ಡೆ, ಈರುಳ್ಳಿಗೆಡ್ಡೆ, ಮೂಲಂಗಿ, ಪ್ರತ್ಯಕ್ಷಲವಣ ಇವೇ ಮೊದಲಾದವುಗಳು ಶ್ರಾದ್ಧದಲ್ಲಿ ನಿಷಿದ್ಧವಾದವುಗಳು. ಮೃಗ, ಮಹಿಷೀ ಇವುಗಳ ಹಾಲೂ ಸಹ ಶ್ರಾದ್ಧಾರ್ಹವಾದವುಗಳಲ್ಲ. ಶ್ರಾದ್ಧಕಾಲದಲ್ಲಿ ಪಾಪಿ, ಪಾಷಂಡಿ, ನಪುಂಸಕ, ನಾಯಿ, ಬೆಕ್ಕು, ರೋಗಿ, ಚಂಡಾಲ, ಮೃತಾಶೌಚಸ್ಥ, ನರಿ, ವಾನರ ಇವೇ ಮೊದಲಾದವುಗಳನ್ನು ನೋಡಕೂಡದು. ಆದುದರಿಂದ ಶ್ರಾದ್ಧಕಾಲಗಳಲ್ಲಿ ತೆರೆಯನ್ನು ಹಾಕಿರಬೇಕು. ಶ್ರಾದ್ಧದಲ್ಲಿ ಎಳ್ಳನ್ನು ಉಪಯೋಗಿಸುವುದರಿಂದ ರಾಕ್ಷಸಬಾಧೆಯುಂಟಾಗುವುದಿಲ್ಲ. ಶ್ರಾದ್ಧಾನ್ನದಲ್ಲಿ ಕೂದಲು, ಹುಳು, ರಸವಿಲ್ಲದ ಪದಾರ್ಥಗಳು ಸಹ ಇದ್ದರೆ ಆ ಅನ್ನವನ್ನು ತ್ಯಾಗಮಾಡಬೇಕು. ಪಿತೃಗಳನ್ನುದ್ದೇಶಿಸಿ ನಾಮ, ಗೋತ್ರ ಉಚ್ಚಾರಣೆಯಿಂದ ಕೊಡಲ್ಪಟ್ಟ ಅನ್ನವು ಲೋಕಾಂತರದಲ್ಲಿರತಕ್ಕ ಪಿತೃಗಳಿಗೆ ಆಹಾರವಾಗಿ ಪರಿಣಮಿಸುವುದು. ಪಿತೃಗಳು ಸ್ವರ್ಗಲೋಕದಲ್ಲಿದ್ದರೆ ಅಮೃತವಾಗುವುದು. ಮನುಷ್ಯಜನ್ಮದಲ್ಲಿದ್ದರೆ ಅನ್ನವಾಗುವುದು. ತಿರ್ಯಗ್ಜಂತುಗಳಲ್ಲಿದ್ದರೆ ಹುಲ್ಲಾಗುವುದು. ಈ ಕಾರಣಗಳಿಂದ ಶ್ರಾದ್ಧದಲ್ಲಿ ಶುದ್ಧವಾದ ಅನ್ನವನ್ನು ಕೊಡಬೇಕು. ಪೂರ್ವದಲ್ಲಿ ಹಿಮವತ್ಪಾರ್ಶ್ವದಲ್ಲಿರತಕ್ಕ ಕಲಾಪವೆಂಬ ಗ್ರಾಮದಲ್ಲಿ ಪಿತೃಗಳು ಇಕ್ಷ್ವಾಕು ಮಹಾರಾಜನನ್ನು ಕುರಿತು, ನಮ್ಮ ವಂಶದಲ್ಲಿ ಸನ್ಮಾರ್ಗಪ್ರವರ್ತಕನಾಗಿ ಗಯಾಶ್ರಾದ್ಧವನ್ನು ಮಾಡಿ ನಮಗೆ ಪಿಂಡವನ್ನು ಕೊಡುತ್ತಾನೆಯೇ? ಕ್ಲಿಪ್ತಕಾಲಗಳಲ್ಲಿ ಶ್ರಾದ್ಧಮಾಡಿ ಶ್ರಾದ್ಧದಲ್ಲಿ ಹಾಲು, ತುಪ್ಪ ಮೊದಲಾದ ಪದಾರ್ಥಗಳನ್ನು ಕೊಡುತ್ತಾನೆಯೇ? ಹತ್ತು ವರ್ಷದ ಕನ್ನಿಕೆಯನ್ನು ಪರಿಗ್ರಹಿಸುತ್ತಾನೆಯೇ? ನೀಲವಾದ ವೃಷೋತ್ಸರ್ಜನೆಯನ್ನು ಮಾಡುತ್ತಾನೆಯೇ? ಯಥಾವಿಧಿಯಾದ ದಕ್ಷಿಣೆಯಿಂದ ಕೂಡಿದ ಯಜ್ಞವನ್ನು ಮಾಡುತ್ತಾನೆಯೇ? ಎಂಬುದಾಗಿ ನಾವು ಕಾದುಕೊಂಡಿರುತ್ತೇವೆ ಎಂಬುದಾಗಿ ಹೇಳಿದರು. ಪಿತೃಗಳನ್ನು ಉದ್ದೇಶಿಸಿ ಇವುಗಳೆಲ್ಲವನ್ನೂ ಅವಶ್ಯಕವಾಗಿ ಅನುಷ್ಠಿಸಬೇಕು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಮೂರನೆಯ ಅಂಶದಲ್ಲಿ
ಹದಿನಾರನೆಯ ಅಧ್ಯಾಯವು ಸಮಾಪ್ತಃ

ಹದಿನೇಳನೆಯ ಅಧ್ಯಾಯವು

"ಎಲೈ ಮೈತ್ರೇಯನೇ, ಔರ್ವಋಷಿಯು ಸಗರಚಕ್ರವರ್ತಿಗೆ ಹೇಳಿದ ವರ್ಣಾಶ್ರಮಾಚಾರಧರ್ಮಗಳನ್ನು ನಿನಗೆ ಹೇಳಿದಹಾಗಾಯಿತು. ಸದಾಚಾರವನ್ನು ಅತಿಕ್ರಮಿಸಿದವನು ಯಾವಾಗಲೂ ಒಳ್ಳೇತನವನ್ನು ಹೊಂದುವುದಿಲ್ಲ." ಮೈತ್ರೇಯರು ಪರಾಶರರನ್ನು ಕೇಳುತ್ತಾರೆ, "ಓ ಪರಾಶರಮಹರ್ಷಿಗಳೇ, 'ನಗ್ನ' ಅಂದರೇನು? ನಗ್ನಲಕ್ಷಣ ಯಾವುದು, ನಗ್ನಸ್ವರೂಪವನ್ನು ಅಪ್ಪಣೆ ಕೊಡಿಸಿ" ಎಂಬುದಾಗಿ ಕೇಳಲು, ಪರಾಶರರು ಮೈತ್ರೇಯರಿಗೆ ಹೇಳುತ್ತಾರೆ: "ವೇದಾಧ್ಯಯನವನ್ನು ಯಾವ ಮನುಷ್ಯನು ಮಾಡುವುದಿಲ್ಲವೋ ಅವನು ಪಾತಕಿಯಾದವನು, 'ನಗ್ನ'ನು ಎಂಬುದಾಗಿ ಹೇಳಲ್ಪಡುತ್ತಾನೆ. ತ್ರಯೀ ಎಂದು ಹೇಳಿಸಿಕೊಳ್ಳುವ ಋಗ್ಯಜುಸ್ಸಾಮವೇದವು, ಸರ್ವವರ್ಣಕ್ಕೂ ಮುಖ್ಯವಾದುದು. ವಸ್ತ್ರದ ಹಾಗೆ ಆವರಣವೂ ಅಲ್ಲದೆ ಸರ್ವದುಃಖನಿವಾರಕವಾದುದು. ಸರ್ವಕರ್ಮಸಾಧನವಾದುದು. ಇಂತಹ ವೇದವನ್ನು ಅಧ್ಯಯನ ಮಾಡದವನು 'ನಗ್ನ'ನು. 'ನಗ್ನ'ನ ವಿಷಯವಾಗಿ ನಮ್ಮ ಪಿತಾಮಹನಾದ ವಸಿಷ್ಠಬ್ರಹ್ಮರ್ಷಿಯು ಭೀಷ್ಮನಿಗೆ ಏನು ಹೇಳಿದನೋ ಅದನ್ನು ಹೇಳುತ್ತೇನೆ ಕೇಳು. ಪೂರ್ವದಲ್ಲಿ ದೇವತೆಗಳಿಗೂ ರಾಕ್ಷಸರಿಗೂ ಬಹುಕಾಲ ಯುದ್ಧವು ನಡೆಯಿತು. ಹ್ರಾದನಾಮಕನೇ ಮೊದಲಾದ ರಾಕ್ಷಸರು ಯುದ್ಧದಲ್ಲಿ ಗೆದ್ದರು. ಆಗ ದೇವತೆಗಳು ಕ್ಷೀರಸಮುದ್ರದ ಬಳಿಗೆ ಹೋಗಿ ಶ್ರೀಮಹಾವಿಷ್ಣುವನ್ನು ಕುರಿತು ಪ್ರಾರ್ಥಿಸುತ್ತಾರೆ; "ಸಕಲಪ್ರಾಣಿಗಳಿಂದಲೂ ಶ್ರೀಮಹಾವಿಷ್ಣುವೇ ಆರಾಧಿಸಲ್ಪಡುವನು. ಶ್ರೀಮನ್ನಾರಾಯಣನಿಂದಲೇ ಸಕಲ ಪ್ರಾಣಿಗಳಿಗೂ ಸೃಷ್ಟಿಸ್ಥಿತ್ಯಾದಿಗಳುಂಟಾಗುವುದು. ಶತ್ರುಗಳಿಂದ ನಿರ್ವೀರ್ಯರಾದ ನಾವು ಪರಮಾತ್ಮನಾದ ನಿನ್ನನ್ನು ಸ್ತುತಿಸುತ್ತೇವೆ. ಭೂಮಿಯೂ, ಜಲವೂ, ಅಗ್ನಿಯೂ, ವಾಯುವೂ, ಆಕಾಶವೂ, ಪರಮಪುರುಷನೂ, ಸರ್ವಕಾರಣನೂ, ಮೂರ್ತಾಮೂರ್ತಸ್ವರೂಪನಾದವನೂ ಸಹ ನೀನೇ. ಬ್ರಹ್ಮಾದಿ ಸ್ತಂಭ ಪರ್ಯಂತವಾಗಿ ಬ್ರಹ್ಮವಾಚ್ಯನಾದ ನಿನಗೇ ನಮಸ್ಕಾರವು. ಓ ಗೋವಿಂದ, ದೈತ್ಯಾತ್ಮಕನಾದ ನಿನಗೇ ನಮಸ್ಕಾರವು. ಅಲ್ಪಜ್ಞರು ನಿನ್ನನ್ನು ಶಬ್ದಾದಿಲೋಭಿಯಾದವನೆಂಬುದಾಗಿ ಹೇಳುವುದರಿಂದ ಅಂತಹ ಯಕ್ಷಾತ್ಮಕನಾದ ನಿನಗೇ ನಮಸ್ಕಾರವು. ನಿನ್ನಲ್ಲಿ ಕ್ರೌರ್ಯರೂಪವೂ, ಭಯಂಕರವಾದ ಮಾಯಾಮಯರೂಪವೂ ಸಹ ಇರುವುದರಿಂದ ನಿಶಾಚರಾತ್ಮಕನಾದ ನಿನಗೇ ನಮಸ್ಕಾರವು. ಸ್ವರ್ಗದಲ್ಲಿರತಕ್ಕವರ ಮತ್ತು ಧರ್ಮಿಷ್ಠರ ಫಲವು ನಿನ್ನಲ್ಲಿರುವುದರಿಂದ ಧರ್ಮಾತ್ಮಕನಾದ ನಿನಗೇ ನಮಸ್ಕಾರವು. ಭಕ್ತನಾದವರಿಗೆ ನಿನ್ನ ರೂಪವು ಸಿದ್ಧವಾಗುವುದರಿಂದ ಸಿದ್ಧಾತ್ಮಕನಾದ ನಿನಗೇ ನಮಸ್ಕಾರವು. ನಾಗಾತ್ಮಕ

ನಾದ, ಅದೋಷ, ಅಕಲ್ಮಷ ಇತ್ಯಾದಿಗಳನ್ನು ನೀನು ತಿಳಿದವನಾದುದರಿಂದ ಋಷಿ ರೂಪನಾದ, ಮಹಾಪ್ರಳಯಕಾಲದಲ್ಲಿ ಸಕಲ ಜಗತ್ತನ್ನೂ ನಾಶಮಾಡತಕ್ಕವನಾದುದರಿಂದ ಮೃತ್ಯುರೂಪನಾದ, ಸಕಲಪ್ರಾಣಿಗಳನ್ನೂ ತಿಂದು ಪ್ರಳಯಕಾಲದಲ್ಲಿ ನರ್ತನಮಾಡುವುದರಿಂದ ರುದ್ರರೂಪನೂ ಸಹ ಆಗಿರುವ ನಿನಗೇ ನಮಸ್ಕಾರವು. ಪಶ್ವಾತ್ಮಕನಾಗಿಯೂ, ಮುಖ್ಯಾತ್ಮಕನಾಗಿಯೂ, ಸರ್ವಾತ್ಮಕನಾಗಿಯೂ, ಶುದ್ಧಾತಿಶುದ್ಧನಾಗಿಯೂ, ಪರಮರ್ಷಿಗಳಿಗೆ ಕಾಣತಕ್ಕವನಾಗಿಯೂ ಇರುವ ನಿನಗೇ ನಮಸ್ಕಾರವು." ಈ ಪ್ರಕಾರ ದೇವತೆಗಳು ಭಗವಂತನನ್ನು ಸ್ತೋತ್ರಮಾಡಲು ಭಗವಂತನು ಪ್ರತ್ಯಕ್ಷನಾದನು. ಆಗ ದೇವತೆಗಳು ಶಂಖಚಕ್ರಪಾಣಿಯಾಗಿಯೂ, ಗರುಡಾರೂಢನಾಗಿಯೂ ಇರುವ ಶ್ರೀಮನ್ನಾರಾಯಣನನ್ನು ನೋಡಿ, "ಭಗವಂತನೇ, ದೈತ್ಯಭಯಾರ್ದಿತರಾಗಿಯೂ ಶರಣಾಗತರಾಗಿಯೂ ಇರುವ ನಮ್ಮಗಳಿಗೆ ಪ್ರಸನ್ನನಾಗು. ಹ್ರಾದನೇ ಮೊದಲಾದ ದೈತ್ಯರಿಂದ ನಮ್ಮಗಳ ಸ್ಥಾನವು ಅಪಹರಿಸಲ್ಪಟ್ಟಿರುವುದು. ನೀನೂ ನಾವೂ ಎಲ್ಲಾ ಶರೀರಾತ್ಮಭಾವದಿಂದ ಒಂದೇ ಆಗಿರುತ್ತೇವೆ. ಆದುದರಿಂದ ನಿನಗೇ ನಮಸ್ಕಾರವು. ನಿನ್ನ ಮಾರ್ಗವನ್ನು ಹುಡುಕಲು ವರ್ಣಾಶ್ರಮಧರ್ಮನಿರತರಾದ ಮಹರ್ಷಿಗಳಿಂದಲೂ ಕೂಡ ಅಸಾಧ್ಯವಾದುದು. ಓ ಭಗವಂತನೇ, ದೈತ್ಯರನ್ನು ನಾವು ಯಾವ ರೀತಿ ನಾಶಮಾಡಬೇಕು, ಅದಕ್ಕೆ ಉಪಾಯವನ್ನು ಹೇಳು" ಎಂದು ದೇವತೆಗಳು ಪ್ರಾರ್ಥಿಸಲು ಭಗವಂತನು ಹೇಳುತ್ತಾನೆ: "ಮಾಯಾಮೋಹವೆಂಬ ಶರೀರವುಳ್ಳವನಾಗಿ ವೇದಮಾರ್ಗಬಹಿಷ್ಕೃತರಾದ ದೈತ್ಯರನ್ನು ನಾಶಮಾಡುವೆನು. ನಿಮ್ಮಗಳ ಸುಖಾರ್ಥವಾಗಿ ಮಾಯಾಮೋಹನು ನಿಮ್ಮ ಮುಂದೆಯೇ ಹೊರಟುಬರುವನು. ನೀವು ನಿರ್ಭಯರಾಗಿ ಪ್ರಯಾಣಮಾಡಿ" ಎಂಬುದಾಗಿ ಆಜ್ಞಾಪಿಸಲು, ದೇವತೆಗಳು ಸ್ವಸ್ಥಾನವನ್ನು ಕುರಿತು ಪ್ರಯಾಣಮಾಡಿದರು. ಮಾಯಾಮೋಹನೂ ಕೂಡ ದೇವತೆಗಳೊಂದಿಗೇನೇ ಪ್ರಯಾಣಮಾಡಿದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶದಲ್ಲಿ
ಹದಿನೇಳನೆಯ ಅಧ್ಯಾಯವು ಸಮಾಪ್ತಃ

ಹದಿನೆಂಟನೆಯ ಅಧ್ಯಾಯವು

"ಮಾಯಾಮೋಹನು ನರ್ಮದಾತೀರದಲ್ಲಿ ತಪೋನಿಷ್ಠರಾದ ದೈತ್ಯರನ್ನು ನೋಡಿ, ದಿಗಂಬರನಾಗಿಯೂ, ಮುಂಡನಾಗಿಯೂ, ನವಿಲುಗರಿಯನ್ನು ಧರಿಸಿದವ

ನಾಗಿಯೂ ಸಹ ದೈತ್ಯರನ್ನು ಕುರಿತು ಕೇಳುತ್ತಾನೆ: “ಎಲೈ ದೈತ್ಯೇಶ್ವರಗಳಿರಾ, ನೀವು ಯಾತಕ್ಕೋಸ್ಕರ ತಪಸ್ಸನ್ನು ಮಾಡುತ್ತೀರಿ? ನೀವು ಐಹಿಕಫಲವನ್ನು ಅಪೇಕ್ಷಿಸುವಿರೋ? ಪಾರಮಾರ್ಥಿಕಫಲವನ್ನು ಅಪೇಕ್ಷಿಸುವಿರೋ?” ಎಂಬುದಾಗಿ ಕೇಳಲು; ಅಸುರರು ಮಾಯಾಮೋಹನನ್ನು ಕುರಿತು ಹೇಳುತ್ತಾರೆ: “ನಾವು ಪರಲೋಕಭೋಗಾರ್ಥವಾಗಿಯೇ ತಪಸ್ಸನ್ನು ಮಾಡುತ್ತೇವೆ” ಎಂಬುದಾಗಿ ಹೇಳಿದರು. ಆ ಮಾತಿಗೆ ಮಾಯಾಮೋಹನು, “ನೀವು ಮೋಕ್ಷವನ್ನು ಹೊಂದ ಬೇಕಾದರೆ ನಾನು ಹೇಳತಕ್ಕ ಮಾತನ್ನು ಕೇಳಿ. ನೀವು ಈ ರೀತಿ ತಪಸ್ಸುಮಾಡಿ ದರೆ ನಿಮಗೆ ಮೋಕ್ಷವು ಸಿಕ್ಕುವುದಿಲ್ಲ. ಈ ಧರ್ಮವು ನಿಮಗೆ ಅರ್ಹವಾದುದಲ್ಲ. ಇದಕ್ಕಿಂತಲೂ ಬೇರೆ ಧರ್ಮವನ್ನು ಆಶ್ರಯಿಸಿ, ಇಲ್ಲಿರುವ ಹಾಗೆಯೇ ಸ್ವರ್ಗ ಲೋಕವನ್ನು ಹೊಂದಬಹುದು. ಈ ಪ್ರಕಾರ ಯುಕ್ತಿವಾಕ್ಯಗಳಿಂದ ವೇದ ಮಾರ್ಗಾನುಸಾರವಾಗಿ ತಪೋನಿಷ್ಠರಾಗಿದ್ದ ಅಸುರರನ್ನು ಮೋಹಗೊಳಿಸಿ ವೇದ ಮಾರ್ಗಬಹಿಷ್ಕೃತರನ್ನಾಗಿ ಮಾಡಿ, ತಪೋಭಂಗವನ್ನು ಮಾಡಿದನು. ಇದರಿಂದ ವೇದೋಕ್ತಕರ್ಮಗಳನ್ನು ಬಿಟ್ಟವನು ಮೋಕ್ಷವನ್ನು ಪಡೆಯುವುದಿಲ್ಲವೆಂಬ ಅಭಿ ಪ್ರಾಯ. ಈ ಪ್ರಕಾರ ಮಾಯಾಮೋಹನ ವಾಕ್ಯದಿಂದ ಮೋಹಿತರಾದ ದೈತ್ಯರು ವೇದಮಾರ್ಗವನ್ನು ಬಿಟ್ಟು ಧರ್ಮವನ್ನು ಅಧರ್ಮವೆಂಬುದಾಗಿಯೂ, ಒಳ್ಳೇದನ್ನು ಕೆಟ್ಟುದು ಎಂಬುದಾಗಿಯೂ, ಸತ್ಕಾರ್ಯವನ್ನು ಅಸತ್ಕಾರ್ಯವೆಂತಲೂ ಸಹ ತಿಳಿದು ಮಾಯಾಮೋಹನ ಮೋಹಕರವಾದ ಮಾತಿನ ಪ್ರಕಾರ ಅಧರ್ಮನಿರತರಾದರು. ಪಶುಹಿಂಸಾದಿ ದುಷ್ಟಧರ್ಮದಲ್ಲಿ ಆಸಕ್ತರಾದರು. ಜಗತ್ತು ಅನಾಧಾರ ವಾದುದೆಂತಲೂ, ಭ್ರಾಂತಿಜ್ಞಾನಮಯವಾದುದೆಂತಲೂ, ಅನಾದಿದುಷ್ಟವಾದು ದೆಂತಲೂ ಸಹ ತಿಳಿದರು. ಈ ಪ್ರಕಾರ ಮಾಯಾಮೋಹನಿಂದ ಹೇಳಲ್ಪಟ್ಟ ಪ್ರತಿ ವಾಕ್ಯದಿಂದಲೂ ಮೋಹವನ್ನು ಹೊಂದಿ ಕೆಲವರು ವೇದನಿಂದಕರಾದರು; ಮತ್ತೆ ಕೆಲವರು ಯಜ್ಞಗಳನ್ನು ನಿಂದಿಸತಕ್ಕವರಾದರು; ಇನ್ನು ಕೆಲವರು ಬ್ರಾಹ್ಮಣ ರನ್ನು ದ್ವೇಷಿಸತಕ್ಕವರಾದರು; ಯಜ್ಞದಲ್ಲಿ ಪಶುವನ್ನು ಹಿಂಸೆಮಾಡಿದರೆ ಪಶು ವಿಗೆ ಸ್ವರ್ಗಲೋಕವುಂಟಾಗುವ ಪಕ್ಷದಲ್ಲಿ ಯಜಮಾನನು ಯಜ್ಞದಲ್ಲಿ ತಂದೆ ಯನ್ನೇ ಪಶುವಾಗಿ ಮಾಡಿಕೊಂಡು ಯಾತಕ್ಕೆ ಹಿಂಸಿಸಬಾರದು? ಲೋಕಾಂತರ ದಲ್ಲಿರತಕ್ಕ ಪಿತೃಗಳಿಗೆ ಶ್ರಾದ್ಧದಲ್ಲಿ ಬ್ರಾಹ್ಮಣನಿಗೆ ಅನ್ನವನ್ನು ಹಾಕಿದರೆ ತನ್ಮೂಲಕ ಪಿತೃಗಳಿಗೆ ತೃಪ್ತಿಯುಂಟಾಗುವುದೆಂಬ ಶಾಸ್ತ್ರವಚನರೀತ್ಯಾ ತಂದೆಯಾದವನು ಪರಸ್ಥಳಕ್ಕೆ ಅನ್ನವನ್ನು ಹೊತ್ತುಕೊಂಡು ಹೋಗುವುದಕ್ಕಿಂತಲೂ, ಪರಸ್ಥಳದಲ್ಲಿರ ತಕ್ಕ ತಂದೆಗೆ ಪುತ್ರಾದಿಗಳು ಊರಲ್ಲಿ ಶ್ರಾದ್ಧವನ್ನು ಮಾಡಿ ಮತ್ತೊಬ್ಬನಿಗೆ ಅನ್ನವನ್ನುಹಾಕಿದರೆ ಪರಸ್ಥಳದಲ್ಲಿರತಕ್ಕ ತಂದೆಗೆ ತೃಪ್ತಿಯುಂಟಾಗಬೇಕಾಯಿತಷ್ಟೆ.

ಇದರಿಂದ ಅನ್ನದ ಭಾರವನ್ನು ಹೊತ್ತುಕೊಂಡು ಹೋಗತಕ್ಕ ಅವಶ್ಯಕವೇ ಇಲ್ಲ. ಈ ರೀತಿ ವೇದವಾಕ್ಯಗಳೆಲ್ಲವೂ, ನಂಬಿಕೆಯನ್ನುಂಟುಮಾಡುವುದೆಂಬ ವಾಕ್ಯಗಳೆಲ್ಲವೂ ಬಾಲಭಾಷೆಯಾದುದು. ಆದುದರಿಂದ ಪೂರ್ವೋಕ್ತ ಧರ್ಮಗಳಲ್ಲಿ ನೀವು ಉಪೇಕ್ಷೆಯಾಗಿರುವುದು ಯುಕ್ತವಾದುದು ಎಂದು ಹೇಳಲು ಅಸುರರು ಈ ಪ್ರಕಾರ ಮಾಯಾಮೋಹವಾಕ್ಯದಿಂದ ಮೋಹಿತರಾಗಿ ವೇದೋಕ್ತವಾದ ಕರ್ಮಗಳನ್ನು ಬಿಟ್ಟು ನಿರ್ವೀರ್ಯರಾದರು. ಆಗ ದೇವತೆಗಳು ಅಸುರರೊಂದಿಗೆ ಯುದ್ಧಮಾಡಿ ಅಸುರರನ್ನು ಸೋಲಿಸಿ ಓಡಿಸಿದರು. ಇದರಿಂದ ವರ್ಣಾಶ್ರಮಧರ್ಮ ವಿರುದ್ಧನಾದವನಿಗೆ ಭಗವದನುಗ್ರಹವುಂಟಾಗುವುದಿಲ್ಲ. ವರ್ಣಾಶ್ರಮವ್ಯತಿರಿಕ್ತನಾದವನೇ 'ನಗ್ನ'ನು ಎಂಬುದಾಗಿ ಹೇಳಿಸಿಕೊಳ್ಳುವನು. ನಿತ್ಯವಾಗಿಯೂ ವಿಹಿತವಾಗಿಯೂ ಇರತಕ್ಕ ಕರ್ಮಗಳನ್ನು ಬಿಟ್ಟವನು ಪತಿತನಾಗುವನು. ಒಂದು ದಿವಸ ಕರ್ಮವನ್ನು ಬಿಟ್ಟವನು ಪ್ರಾಯಶ್ಚಿತ್ತವನ್ನು ಮಾಡಿಕೊಂಡರೆ ಶುದ್ಧನಾಗುವನು. ಏಳು ದಿವಸ ಕರ್ಮತ್ಯಾಗಿಯಾದವನು ಅಬ್ರಾಹ್ಮಣನಾಗುತ್ತಾನೆ. ಅಂಥಾ ಕರ್ಮಭ್ರಷ್ಟನನ್ನು ಸ್ಪರ್ಶಮಾಡಿದರೂ, ಮಾತನಾಡಿಸಿದರೂ ಸಹ ಸಚೇಲಸ್ನಾನವನ್ನು ಮಾಡಬೇಕು. ಕರ್ಮಭ್ರಷ್ಟನಿಗೆ ಆಸನೋಪಚಾರಾದಿಗಳನ್ನು ಮಾಡಿದವನು ನರಕಕ್ಕೆ ಹೋಗುವನು. ಆದುದರಿಂದ ನಗ್ನನನ್ನೂ, ನಗ್ನಳಾದ ಸ್ತ್ರೀಯನ್ನೂ ಸಹ ಆಲಾಪಸ್ಪರ್ಶನಾದಿಗಳನ್ನು ಮಾಡಕೂಡದು. ನಗ್ನರಾದವರನ್ನು ಶ್ರಾದ್ಧಕಾಲಗಳಲ್ಲಿ ನೋಡಿದರೆ ಶ್ರಾದ್ಧವು ಪಿತೃಗಳಿಗೆ ಪ್ರೀತಿಕರವಾಗಲಾರದು. ಇದಕ್ಕಾಗಿ ಒಂದು ಇತಿಹಾಸವನ್ನು ಹೇಳುತ್ತೇನೆ ಕೇಳು: ಪೂರ್ವದಲ್ಲಿ ಶತಧನು ಎಂಬೊಬ್ಬ ರಾಜನಿದ್ದನು. ಅವನಿಗೆ ಪತಿಧರ್ಮಪರಾಯಣಳಾಗಿಯೂ, ಪತಿವ್ರತೆಯಾಗಿಯೂ, ಸತ್ಯಶೌಚದಯಾವಂತಳಾಗಿಯೂ, ಸರ್ವಲಕ್ಷಣಸಂಪನ್ನಳಾಗಿಯೂ ಇರುವ ಶೈಬ್ಯಳೆಂಬ ಪತ್ನಿಯಿದ್ದಳು. ಅವಳು ಯಾವಾಗಲೂ ಸಮಾಧಿನಿಷ್ಠಳಾಗಿ ಹೋಮ, ಜಪ, ದಾನ, ಉಪವಾಸ, ಭಕ್ತಿ, ಪೂಜೆ ಇವುಗಳಿಂದ ಭಗವಂತನಾದ ಶ್ರೀಮನ್ನಾರಾಯಣನನ್ನು ಆರಾಧಿಸುತ್ತಿದ್ದಳು. ಒಂದಾನೊಂದು ದಿವಸ ದಂಪತಿಗಳಿಬ್ಬರೂ ಗಂಗಾನದಿಯಲ್ಲಿ ಸ್ನಾನಮಾಡಿ ಕಾರ್ತೀಕಮಾಸದಲ್ಲಿ ಉಪವಾಸವ್ರತನಿಷ್ಠರಾಗಿದ್ದ ಕಾಲದಲ್ಲಿ ಒಬ್ಬ ಪಾಷಂಡಿಯು ಇವರ ಸಮೀಪಕ್ಕೆ ಬಂದನು. ಇವನು ರಾಜನಿಗೆ ಸ್ನೇಹಿತನಾಗಿದ್ದುದರಿಂದ ರಾಜನು ಇವನೊಡನೆ ಆಲಾಪಾದಿಗಳನ್ನು ಮಾಡಿದನು. ರಾಜಪತ್ನಿಯಾದ ಶೈಬ್ಯೆಯು ಉಪವಾಸವ್ರತಗಳಿಂದ ವಾಙ್ನಿಯಮವುಳ್ಳವಳಾಗಿ ಪಾಷಂಡಿಯನ್ನು ನೋಡಿದುದರಿಂದ ಅವನಲ್ಲಿ ಮಾತನಾಡದೇ ಸೂರ್ಯದರ್ಶನವನ್ನು ಮಾಡಿದಳು. ಈ ಪ್ರಕಾರ ದಂಪತಿಗಳಿಬ್ಬರೂ ವಿಷ್ಣ್ವಾರಾಧನೆಯನ್ನು ಮಾಡಿಕೊಂಡಿರತಕ್ಕ ಕಾಲದಲ್ಲಿ ರಾಜನು ಲೋಕಾಂತರ

ವನ್ನು ಹೊಂದಿದನು. ಆಗ ಪತ್ನಿಯಾದ ಶೈಬ್ಯೆಯು ಗಂಡನ ಜೊತೆಯಲ್ಲಿ ಸಹಗಮನಮಾಡಿದಳು. ಶತಧನ್ವರಾಜನು ಪಾಷಂಡನ ಜೊತೆಯಲ್ಲಿ ಸಲ್ಲಾಪ ಮಾಡಿದ ಅಪಚಾರದಿಂದ ನಾಯಿಯಾಗಿ ಹುಟ್ಟಿದನು. ಶೈಬ್ಯೆಯು ಪಾಷಂಡ ಸಲ್ಲಾಪಿಯಾದ ರಾಜನ ಸಮೀಪದಲ್ಲಿದ್ದುದರಿಂದ ಕಾಶೀರಾಜನ ಮಗಳಾಗಿ ಹುಟ್ಟಿದಳು. ಸರ್ವಜ್ಞಾನಸಂಪನ್ನಳಾದ ಸರ್ವಲಕ್ಷಣಯುಕ್ತಳಾದ ಮಗಳನ್ನು ಜೊತೆಯಲ್ಲಿ ಕರೆದುಕೊಂಡು ವರಾನ್ವೇಷಣಕ್ಕಾಗಿ ಕಾಶೀರಾಜನು ಪ್ರಯಾಣ ಮಾಡಿ, ದಾರಿಯಲ್ಲಿ ಹೋಗತಕ್ಕ ಕಾಲದಲ್ಲಿ, ವಿದಿಶವೆಂಬ ಪಟ್ಟಣವನ್ನು ನೋಡಿದನು. ಇವನ ಮಗಳು ಪಟ್ಟಣ ಸಮೀಪದಲ್ಲಿರತಕ್ಕ ನಾಯಿಯನ್ನು ನೋಡಿ, ಜ್ಞಾನದೃಷ್ಟಿಯಿಂದ, ಹಿಂದಿನ ಜನ್ಮದಲ್ಲಿ ಈ ನಾಯಿಯು ತನಗೆ ಪತಿಯಾಗಿದ್ದುದನ್ನು ತಿಳಿದು, ಆ ನಾಯಿಗೆ ಇವಳು ಒಳ್ಳೆಯ ಆಹಾರವನ್ನು ಕೊಟ್ಟಳು. ನಾಯಿಯು ತನಗೆ ಇಷ್ಟವಾದ ಆಹಾರವನ್ನು ಕೊಟ್ಟುದರಿಂದ ಜಾತಿಸ್ವಭಾವ ಯುಕ್ತವಾಗಿ ಇವಳಲ್ಲಿ ವಿಲಾಸಚೇಷ್ಟೆಗಳನ್ನು ಮಾಡಲಾರಂಭಿಸಿತು. ಆಗ ರಾಜಪುತ್ರಿಯು ಲಜ್ಜಾನ್ವಿತಳಾಗಿ ದುಷ್ಟಯೋನಿಯಲ್ಲಿ ಹುಟ್ಟಿದ ಪತಿಯನ್ನು ಕುರಿತು ಹೇಳುತ್ತಾಳೆ: "ನೀನು ದಾಕ್ಷಿಣ್ಯಯುಕ್ತನಾಗಿ ಪಾಷಂಡನಲ್ಲಿ ಆಲಾಪಾದಿಗಳನ್ನು ಮಾಡಿದುದರಿಂದ ನೀಚಜನ್ಮವನ್ನು ಹೊಂದಿರುವುದು ನಿನಗೆ ಸ್ಮರಣೆಯಿಲ್ಲವೇ?" ಎಂಬುದಾಗಿ ರಾಜಕನ್ನಿಕೆಯು ಕೇಳಲು; ನಾಯಿಗೆ ಪೂರ್ವಸ್ಮರಣೆಯುಂಟಾಗಿ, ಅದರಿಂದ ಮನಸ್ಸಿಗೆ ಬಹಳ ವಿಷಾದವನ್ನು ಹೊಂದಿ, ಪಟ್ಟಣದ ಹೊರಗೆ ಇರತಕ್ಕ ಪರ್ವತವನ್ನು ಹತ್ತಿ, ಕೆಳಕ್ಕೆ ಬಿದ್ದು ಪ್ರಾಣವನ್ನು ಬಿಟ್ಟಿತು. ಆಗ ನಾಯಿಜನ್ಮವು ಹೋಗಿ ನರೀಜನ್ಮವುಂಟಾಯಿತು. ಆಗ ಕನ್ನಿಕೆಯು ನರೀಜನ್ಮವನ್ನೆತ್ತಿರುವ ತನ್ನ ಪತ್ನಿಯನ್ನು ಕಂಡು, ನೀನು ನಾಯಿಯ ಜನ್ಮದಲ್ಲಿ ನಾನು ಹೇಳಿದ ಮಾತು ಅಂದರೆ ಪಾಷಂಡಾಲಾಪದ ವೃತ್ತಾಂತವನ್ನು ಮರೆತಿರುವೆ ಎಂಬುದಾಗಿ ಹೇಳಲು; ಶತಧನ್ವರಾಜನು ಖೇದದಿಂದ ನರೀಜನ್ಮವನ್ನು ಬಿಟ್ಟು ವೃಕಜನ್ಮವನ್ನು ಹೊಂದಿದನು. ಆಮೇಲೆ ಗೃಧ್ರಜನ್ಮವನ್ನೂ, ಕಾಕಜನ್ಮವನ್ನೂ, ಮಯೂರಜನ್ಮವನ್ನೂ ಸಹ ಕ್ರಮವಾಗಿ ಹೊಂದಿದನು. ಪ್ರತಿಜನ್ಮದಲ್ಲಿಯೂ ರಾಜಕನ್ನಿಕೆಯು ಜನ್ಮಾಂತರದ ವೃತ್ತಾಂತವನ್ನು ಜ್ಞಾಪಿಸುತ್ತಿದ್ದುದರಿಂದ, ಜನ್ಮಗಳು ಜಾಗ್ರತೆಯಾಗಿ ಕಳೆದವು. ನವಿಲುಜನ್ಮದಲ್ಲಿರತಕ್ಕ ಪತಿಯನ್ನು ನೋಡಿ ನವಿಲಿಗೆ ಇಷ್ಟವಾದ ಆಹಾರಗಳನ್ನು ಕೊಡುತ್ತಾ, ಸಾಕಿಕೊಂಡಿದ್ದಳು. ಹೀಗಿರುವಾಗ ಜನಕರಾಜನು ಅಶ್ವಮೇಧಯಜ್ಞವನ್ನು ಮಾಡಿ, ಅವಭೃತಸ್ನಾನಮಾಡತಕ್ಕ ಕಾಲದಲ್ಲಿ ಕಾಶೀರಾಜನ ಮಗಳು ಪತಿಯಾದ ನವಿಲನ್ನು ಜೊತೆಯಲ್ಲಿ ಕರೆದುಕೊಂಡು ತಾನೂ ಅವಭೃತಸ್ನಾನಮಾಡಿ ನವಿಲನ್ನೂ ಸಹ ಸ್ನಾನಮಾಡಿಸಿದಳು.

ಯಜ್ಞದಲ್ಲಿ ಅವಭೃತಸ್ನಾನವನ್ನು ಮಾಡಿದ ಮಹಿಮೆಯಿಂದ ನವಿಲುಜನ್ಮವು ಹೋಗಿ ಜನಕರಾಜನ ಮಗನಾಗಿ ಹುಟ್ಟಿದನು. ಆಗ ಕನ್ನಿಕೆಯು ತಂದೆಯಾದ ಕಾಶೀರಾಜನನ್ನು ಸ್ವಯಂವರಕ್ಕೆ ಪ್ರೇರಿಸಿದಳು. ರಾಜನು ಮಗಳ ಇಷ್ಟಾನುಸಾರ ಸ್ವಯಂವರವನ್ನು ಕಲ್ಪಿಸಿದನು. ಸ್ವಯಂವರಕ್ಕೆ ಅನೇಕ ರಾಜಪುತ್ರರು ಬಂದಿದ್ದರು. ಜನಕರಾಜನ ಮಗನೂ ಸಹ ಬಂದನು. ಇವಳು ಪುಷ್ಪಮಾಲಿಕೆಯನ್ನು ತೆಗೆದು ಕೊಂಡು ಸಖಿಯರ ಜೊತೆಯಲ್ಲಿ ಸ್ವಯಂವರಮಂಟಪಕ್ಕೆ ಬಂದು ಸಕಲ ರಾಜ ಪುತ್ರರನ್ನೂ ನೋಡಿ ಜನಕರಾಜನ ಮಗನಿಗೆ ಮಾಲಿಕೆಯನ್ನು ಹಾಕಿ ಪತಿಯಾಗಿ ವರಿಸಿದಳು. ಆಗ ದಂಪತಿಗಳಿಬ್ಬರೂ ಅನೇಕ ಭೋಗಗಳನ್ನು ಅನುಭವಿಸುತ್ತಾ ಇರತಕ್ಕ ಕಾಲದಲ್ಲಿ ಜನಕನು ಲೋಕಾಂತರವನ್ನು ಹೊಂದಿದನು. ಆಗ ವಿದೇಹ ದೇಶಕ್ಕೆ ಇವನೇ ರಾಜನಾಗಿ ಅನೇಕ ಯಜ್ಞಗಳನ್ನು ಮಾಡಿ ಅನೇಕ ದಾನಗಳನ್ನೂ ಸಹ ಕೊಟ್ಟು ಶತ್ರುಗಳನ್ನು ಜಯಿಸಿ ಪುತ್ರಸಂಪತ್ತನ್ನು ಹೊಂದಿ, ಪತ್ನಿಯಿಂದ ಕೂಡಿ ಶಾಶ್ವತಲೋಕವನ್ನು ಹೊಂದಿದನು. ಷಂಡಪಾಷಂಡ ಪತಿತರನ್ನು ನೋಡಿ ಸಂಭಾಷಣೆ ಮಾಡಿದುದಕ್ಕೆ ಅನೇಕ ದುಷ್ಟಜನ್ಮಗಳುಂಟಾದುವು. ಈ ಕಾರಣ ದಿಂದ ಈ ಇತಿಹಾಸವನ್ನು ಹೇಳಿದೆನು. ಸಾಮಾನ್ಯಕಾಲದಲ್ಲಿಯೇ ಕರ್ಮಭ್ರಷ್ಟ ರನ್ನೇ ನೋಡಕೂಡದು. ಶ್ರಾದ್ಧಾದಿಪುಣ್ಯದಿವಸಗಳಲ್ಲಿ ಹೇಳುವುದೇನಿದೆ? ಕರ್ಮ ಭ್ರಷ್ಟರನ್ನೂ, ಪಾಪವನ್ನು ಮುಚ್ಚಿಕೊಳ್ಳುವವರನ್ನೂ, ಎದುರಿಗೆ ಒಳ್ಳೇ ಮಾತ ನಾಡಿ ಪರೋಕ್ಷದಲ್ಲಿ ಕೆಟ್ಟುದನ್ನು ಮಾಡುವವರನ್ನೂ ಸಹ ದೂರವಾಗಿ ಪರಿ ತ್ಯಾಗ ಮಾಡಬೇಕು. ವರ್ಣಾಶ್ರಮಧರ್ಮವನ್ನು ಪರಿತ್ಯಾಗಮಾಡಿದ ಪಾಪಿಗಳ ಸಮೀಪದಲ್ಲಿ ಮಾತನಾಡುವವನು ನರಕವನ್ನು ಹೊಂದುತ್ತಾನೆ.

ಎಂಬಲ್ಲಿಗೆ, ಶ್ರೀ ವಿಷ್ಣುಪುರಾಣದಲ್ಲಿ ತೃತೀಯಾಂಶದಲ್ಲಿ
ಹದಿನೆಂಟನೆಯ ಅಧ್ಯಾಯವೂ, ತೃತೀಯಾಂಶವೂ ಸಹ ಸಮಾಪ್ತವಾದುವು

ಶ್ರಿಯೈ ನಮಃ

ಶ್ರೀಕೃಷ್ಣಾಯ ಪರಬ್ರಹ್ಮಣೇ ನಮಃ

ಶ್ರೀ ಹಯಗ್ರೀವಾಯ ನಮಃ

ಶ್ರೀಮದ್ರಾಮಾನುಜಾರ್ಯ್ಯಾಯ ಯಜ್ವನೇ ದೇಶಿಕಾಯ ಮೇ ।
ಋಣತ್ರಯವಿಮುಕ್ತಾಯ ತಾತಪಾದಾಯಿತೇ ನಮಃ ॥

ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶವು ಪ್ರಾರಂಭವು

ಪ್ರಥಮಾಧ್ಯಾಯವು

ಮೈತ್ರೇಯರು ಪರಾಶರರನ್ನು ಕೇಳುತ್ತಾರೆ:

"ಓ ಪರಾಶರಬ್ರಹ್ಮರ್ಷಿಗಳೇ! ಮನುಷ್ಯರು ಮಾಡತಕ್ಕ ನಿತ್ಯನೈಮಿತ್ತಿಕ ಕರ್ಮಗಳನ್ನೂ, ವರ್ಣಾಶ್ರಮಧರ್ಮಗಳನ್ನೂ ಸಹ ತಮ್ಮಿಂದ ಕೇಳಿದಹಾಗಾಯಿತು. ಈಗ ರಾಜರುಗಳ ವಂಶಗಳನ್ನು ಕೇಳುವುದಕ್ಕೆ ಕುತೂಹಲವುಳ್ಳವನಾಗಿರುತ್ತೇನೆ. ನೀವು ಕೃಪೆಯಿಂದ ಅಪ್ಪಣೆಕೊಡಿಸಬೇಕೆಂದು" ಪ್ರಾರ್ಥಿಸಲು, ಪರಾಶರ ಮಹರ್ಷಿಗಳು ಹೇಳುತ್ತಾರೆ: "ಎಲೈ ಮೈತ್ರೇಯನೇ, ಕೇಳು. ಬ್ರಹ್ಮನೇ ಮೊದಲಾದ ಮಾನವವಂಶವು ಶೂರರಾಗಿಯೂ, ಉತ್ಸಾಹಶಾಲಿಗಳಾಗಿಯೂ, ಯಜ್ಞಶೀಲರಾಗಿಯೂ ಇರತಕ್ಕ ರಾಜರುಗಳಿಂದ ಅಲಂಕೃತವಾದುದು. ಈ ವಂಶದಲ್ಲಿ ಮೊದಲಿಂದ ಇರುವ ರಾಜರುಗಳ ಹೆಸರನ್ನು ಪಾಪಪರಿಹಾರಾರ್ಥವಾಗಿ ಹೇಳುತ್ತೇನೆ ಕೇಳು. ಸಕಲ ಜಗತ್ತಿಗೂ ಅನಾದಿಭೂತನಾಗಿಯೂ, ಋಗ್ಯಜುಸ್ಸಾಮಮಯನಾಗಿಯೂ ಇರುವ ಶ್ರೀ ಮಹಾವಿಷ್ಣುವಿನಿಂದ ಹಿರಣ್ಯಗರ್ಭಾಖ್ಯನಾದ ಚತುರ್ಮುಖಬ್ರಹ್ಮನು ಹುಟ್ಟಿದನು. ಚತುರ್ಮುಖಬ್ರಹ್ಮನ ದಕ್ಷಿಣಪಾದಾಂಗುಷ್ಠದಿಂದ ದಕ್ಷಬ್ರಹ್ಮನೂ, ಇವನಿಂದ ಅದಿತಿಯೂ, ಅದಿತಿಯಿಂದ ಸೂರ್ಯನೂ, ಸೂರ್ಯನಿಂದ ವೈವಸ್ವತ ಮನುವೂ, ಮನುವಿನಿಂದ ಇಕ್ಷ್ವಾಕು, ನೃಗ, ಧೃಷ್ಟ, ಶರ್ಯಾತಿ, ನರಿಷ್ಯಂತ, ನಾಭಾಗ, ದಿಷ್ಟ, ಕರೂಶ, ಪೃಷಧ್ರರೆಂಬುದಾಗಿ ಒಂಬತ್ತು ಜನ ಪುತ್ರರೂ ಸಹ ಹುಟ್ಟಿದರು. ಈ ಒಂಬತ್ತು ಜನ ಪುತ್ರರು ಹುಟ್ಟುವುದಕ್ಕೆ ಮುಂಚೆ ಮನುವು ಪುತ್ರಾಪೇಕ್ಷೆಯಿಂದ ಮೈತ್ರಾವರುಣೇಷ್ಟಿಯನ್ನು ಮಾಡಿದನು. ಈ ಮೈತ್ರಾವರುಣೇಷ್ಟಿಯಲ್ಲಿ ಹೋತೃ ಎಂಬ ಋತ್ವಿಕನ ಸಂಕಲ್ಪ ವ್ಯತ್ಯಾಸದ

ಅಪಚಾರದಿಂದ ಪುತ್ರನಾಗುವುದು ತಪ್ಪಿ ಇಳಾ ಎಂಬ ಮಗಳು ಹುಟ್ಟಿದಳು. ಆಗ ವೈವಸ್ವತಮನುವು ಪುತ್ರಾಪೇಕ್ಷೆಯಿಂದ ಮಾಡಿದ ಇಷ್ಟಿಯಲ್ಲಿ ಮಗಳು ಹುಟ್ಟಿದ ಳೆಂಬುದಾಗಿ ಭಿನ್ನಮನಸ್ಕನಾದ ಕಾಲದಲ್ಲಿ, ಮಿತ್ರಾವರುಣರು ಹೆಣ್ಣು ಮಗಳನ್ನು ಸುದ್ಯುಮ್ನನೆಂಬ ಗಂಡುಮಗನನ್ನಾಗಿ ಮಾಡಿ ಮನುವಿಗೆ ಪ್ರೀತಿಯನ್ನುಂಟು ಮಾಡಿದರು. ಸುದ್ಯುಮ್ನನು ಒಂದಾನೊಂದು ದಿವಸ ರುದ್ರಭಗವಂತನ ಕ್ರೀಡಾ ವನಕ್ಕೆ ಹೋದುದರಿಂದ, ರುದ್ರದೇವನ ಕೋಪದಿಂದ ಪುನಃ ಸ್ತ್ರೀಯಾಗಿ ಬುಧನ ಆಶ್ರಮದಲ್ಲಿ ಸಂಚರಿಸುತ್ತಿದ್ದ ಕಾಲದಲ್ಲಿ ಇವಳನ್ನು ನೋಡಿ ಬುಧನು ಕಾಮಮೋಹಿತನಾಗಿ ಇಳಾದೇವಿಯಲ್ಲಿ ಪುರೂರವನಾಮಕನಾದ ಮಗನನ್ನು ಪಡೆದನು. ಅನಂತರದಲ್ಲಿ ಮಹಾತೇಜಸ್ವಿಗಳಾದ ಮಹರ್ಷಿಗಳು ಇಳಾದೇವಿ ಯನ್ನು ಪುನಃ ಪುರುಷನನ್ನಾಗಿ ಮಾಡಬೇಕೆಂದು ನಿಶ್ಚಯಿಸಿ ಯಜ್ಞವನ್ನು ಮಾಡಿದರು. ಯಜ್ಞದಲ್ಲಿ ಯಜ್ಞಮಯನಾಗಿಯೂ, ವೇದಮಯನಾಗಿಯೂ, ಮನೋಮಯನಾಗಿಯೂ, ಜ್ಞಾನಮಯನಾಗಿಯೂ, ಅಮೃತಮಯ ನಾಗಿಯೂ ಇರುವ ಶ್ರೀಮನ್ನಾರಾಯಣನು ಪ್ರತ್ಯಕ್ಷನಾಗಿ ಮಹರ್ಷಿಗಳ ಇಷ್ಟಾನುಸಾರ ಇಳಾದೇವಿಯನ್ನು ಸುದ್ಯುಮ್ನನನ್ನಾಗಿ ಮಾಡಿ ಅಂತರ್ಧಾನ ನಾದನು. ಸುದ್ಯುಮ್ನನಿಗೆ ಉತ್ಕಲ, ಗಯ, ವಿನತರೆಂಬುದಾಗಿ ಮೂರು ಜನ ಪುತ್ರರು ಹುಟ್ಟಿದರು. ಸುದ್ಯುಮ್ನನು ಮೊದಲು ಸ್ತ್ರೀಯಾದುದರಿಂದ ರಾಜ್ಯವನ್ನು ಹೊಂದಲಿಲ್ಲ. ಮನುಚಕ್ರವರ್ತಿಯು, ವಸಿಷ್ಠರ ಅಪ್ಪಣೆಯ ಪ್ರಕಾರ ಸುದ್ಯುಮ್ನನಿಗೆ ಪ್ರತಿಷ್ಠಾನವೆಂಬ ನಗರವನ್ನು ಕೊಟ್ಟನು. ಈ ನಗರ ವನ್ನು ಸುದ್ಯುಮ್ನನು ತನ್ನ ಮಗನಾದ ಪುರೂರವನಿಗೆ ಕೊಟ್ಟನು. ಮನುಪುತ್ರ ನಾದ ವೃಷಧ್ರು ಎಂಬುವನು ಗೋಹತ್ಯವನ್ನು ಮಾಡಿದುದರಿಂದ ಶೂದ್ರತ್ವವನ್ನು ಹೊಂದಿದನು. ಕರೂಶನೆಂಬ ಮನುವಿನ ಮಗನಿಂದ ಕಾರೂಶರು ಉತ್ಪನ್ನರಾದರು. ನಾಭಾಗನು ತನ್ನ ಕರ್ಮದಿಂದ ವೈಶ್ಯನಾದನು. ನಾಭಾಗನು ವೈಶ್ಯನಾಗುವುದ ಕ್ಕಿಂತ ಮುಂಚೆ ಇವನಿಗೆ ಬಲಂಧನನೆಂಬ ಮಗನು ಹುಟ್ಟಿದನು. ಬಲಂಧನನಿಗೆ ವತ್ಸಪ್ರೀತಿಯೆಂಬುವನೂ, ವತ್ಸಪ್ರೀತಿಗೆ ಪ್ರಾಂಶುವೂ, ಪ್ರಾಂಶುವಿಗೆ ಪ್ರಜಾ ಪತಿಯೂ, ಪ್ರಜಾಪತಿಗೆ ಖನಿಮಿತ್ರನೂ, ಖನಿಮಿತ್ರನಿಗೆ ಚಕ್ಷುಷನೂ, ಚಕ್ಷುಷನಿಗೆ ವಿಂಶನೂ, ವಿಂಶನಿಗೆ ವಿವಿಂಶಕನೂ, ವಿವಿಂಶಕನಿಗೆ ಖನಿನೇತ್ರನೂ, ಇವನಿಗೆ ಅತಿವಿಭೂತಿಯೂ, ಇವನಿಂದ ಕರಂದಮನೂ, ಇವನಿಂದ ಅವಿಕ್ಷಿತ್ ಎಂಬುವನೂ, ಇವನಿಂದ ಮಹಾಪರಾಕ್ರಮಿಯಾದ ಮರುತ್ತನೂ ಸಹ ಹುಟ್ಟಿದರು. ಮರುತ್ತ ಚಕ್ರವರ್ತಿಗೆ ನರಿಷ್ಯಂತನೂ, ಇವನಿಗೆ ದಮನೂ, ದಮನಿಗೆ ರಾಜವರ್ಧನನೂ, ಇವನಿಗೆ ಸುವೃದ್ಧಿಯೂ, ಸುವೃದ್ಧಿಗೆ ಕೇವಲನೂ, ಕೇವಲನಿಗೆ ಸುಧೃತಿಯೂ,

ಇವನಿಗೆ ನರನೂ, ನರನಿಗೆ ಚಂದ್ರನೂ, ಚಂದ್ರನಿಗೆ ಕೇವಲನೂ, ಕೇವಲನಿಗೆ ಬಂಧುಮಾನನೂ, ಇವನಿಗೆ ವೇಗವಂತನೂ, ಇವನಿಗೆ ಬುಧನೂ, ಬುಧನಿಗೆ ತೃಣಬಿಂದುವೂ, ತೃಣಬಿಂದುವಿಗೆ ಇಲಬಿಲಾ ಎಂಬ ಮಗಳೂ, ತೃಣಬಿಂದುವಿಗೆ ಅಲಂಬು ಸಾನಾ ಮಕ್ಕಳಾದ ಅಪ್ಸರಸ್ತ್ರೀಯಲ್ಲಿ ವಿಶಾಲ ಎಂಬ ಮಗನೂ ಸಹ ಹುಟ್ಟಿದರು. ವಿಶಾಲನು ವೈಶಾಲೀ ಎಂಬ ಪಟ್ಟಣವನ್ನು ನಿರ್ಮಿಸಿದನು. ವಿಶಾಲನಿಗೆ ಹೇಮಚಂದ್ರನೂ, ಇವನಿಗೆ ಚಂದ್ರನೂ, ಚಂದ್ರನಿಗೆ ಧೂಮ್ರಾಕ್ಷನೂ, ಧೂಮ್ರಾಕ್ಷನಿಗೆ ಸೃಂಜಯನೂ, ಸೃಂಜಯನಿಗೆ ಸಹದೇವನೂ, ಸಹದೇವನಿಗೆ ಕೃಶಾಶ್ವನೂ, ಕೃಶಾಶ್ವನಿಗೆ ಸೋಮದತ್ತನೂ, ಸೋಮದತ್ತನಿಗೆ ಜನಮೇಜಯನೂ, ಇವನಿಗೆ ಸುಮತಿಯೂ ಸಹ ಹುಟ್ಟಿದರು. ಇವರುಗಳೆಲ್ಲರೂ ವೈಶಾಲರೆಂಬುದಾಗಿ ಪ್ರಖ್ಯಾತರಾದ ಮಹಾಪರಾಕ್ರಮಶಾಲಿಗಳಾದ ರಾಜರುಗಳಾಗಿದ್ದರು. ಮನುಪುತ್ರನಾದ ಶರ್ಯಾತಿಗೆ ಸುಕನ್ಯಾ ಎಂಬ ಮಗಳು ಹುಟ್ಟಿದಳು. ಇವಳನ್ನು ಚ್ಯವನ ಋಷಿಯು ಪಾಣಿಗ್ರಹಣ ಮಾಡಿಕೊಂಡನು. ಶರ್ಯಾತಿಗೆ ಪರಮಧಾರ್ಮಿಕನಾದ ಆನರ್ತನೆಂಬ ಮಗನೂ, ಆನರ್ತನಿಗೆ ರೇವತನೆಂಬ ಮಗನೂ ಸಹ ಹುಟ್ಟಿದರು. ರೇವತನಿಗೆ ರೈವತನೂ, ಇವನಿಗೆ ಕಕುದ್ಮೀ ಮೊದಲಾದ ನೂರುಜನ ಪುತ್ರರೂ, ಅಲ್ಲದೆ ರೇವತೀ ಎಂಬ ಮಗಳೂ ಸಹ ಹುಟ್ಟಿದರು. ರೈವತನು ತನ್ನ ಮಗಳಾದ ರೇವತಿಯನ್ನು ಕರೆದುಕೊಂಡು ಇವಳಿಗೆ ಅನುರೂಪನಾದ ಪತಿಯು ಯಾರು ಎಂಬುದಾಗಿ ಬ್ರಹ್ಮನನ್ನು ಕೇಳುವುದಕ್ಕೆ ಬ್ರಹ್ಮಲೋಕಕ್ಕೆ ಪ್ರಯಾಣಮಾಡತಕ್ಕ ಕಾಲದಲ್ಲಿ ದಾರಿಯಲ್ಲಿ ಗಂಧರ್ವರು ಗಾನಮಾಡುತ್ತಿದ್ದರು. ರೈವತನು ಗಾನವನ್ನು ಕೇಳುತ್ತಿರುವ ಕಾಲದಲ್ಲಿ ಅನೇಕ ಯುಗಗಳು ಕಳೆದು ಹೋದವು. ರೈವತನಿಗೆ ಮಾತ್ರ ಮುಹೂರ್ತಪ್ರಾಯವಾಯಿತು. ಅನಂತರ ಗಾನ ಮುಗಿದಮೇಲೆ ಬ್ರಹ್ಮನನ್ನು ಮಗಳಿಗೆ ಯೋಗ್ಯನಾದ ವರನು ಯಾರೆಂಬುದಾಗಿ ಕೇಳಿದನು. ಅದಕ್ಕೆ ಬ್ರಹ್ಮನು "ನೀನು ಯಾರಿಗೆ ಕೊಡಬೇಕೆಂಬುದಾಗಿ ನಿನಗೆ ಅಪೇಕ್ಷೆ ಇದೆ ಅದನ್ನು ಹೇಳು" ಎಂದು ರೈವತನನ್ನು ಕೇಳಲು; ಅದಕ್ಕೆ ರೈವತನು ತನ್ನ ಮನಸ್ಸಿನಲ್ಲಿದ್ದ ವರಗಳನ್ನೆಲ್ಲಾ ಹೇಳಿ, ಈ ಪೈಕಿ ಯಾರಿಗೆ ಕೊಡಬಹುದು ನೀನು ಹೇಳೆಂಬುದಾಗಿ ಬ್ರಹ್ಮನಿಗೆ ಕೇಳಲು; ಅದಕ್ಕೆ ಬ್ರಹ್ಮನು ರೈವತನನ್ನು ಕುರಿತು, ನೀನು ಗಂಧರ್ವರ ಗಾನವನ್ನು ಕೇಳುತ್ತಿದ್ದುದರಿಂದ ಅನೇಕ ಚತುರ್ಯುಗಗಳು ಕಳೆದುಹೋದುವು; ಆದುದರಿಂದ ನೀನು ಹೇಳಿದ ವರಗಳು ಪುತ್ರಪೌತ್ರ ಪ್ರಪೌತ್ರರುಗಳ ಸಂತತಿಗಳೂ ಕೂಡ ಭೂಲೋಕದಲ್ಲಿರುವುದಿಲ್ಲ. ಈಗ ಭೂಲೋಕದಲ್ಲಿ ಇಪ್ಪತ್ತೆಂಟನೆಯ ಚತುರ್ಯುಗವೂ ಸಹ ಮುಗಿಯುತ್ತಾಬಂದಿರುತ್ತದೆ, ಕಲಿಯುಗವೂ ಸಹ ಸಮೀಪಿಸುತ್ತಾ ಬಂದಿರುತ್ತೆ. ಆದುದರಿಂದ ಈ ನಿನ್ನ ಕನ್ಯಾರತ್ನ

ವನ್ನು ಮತ್ತ್ಯಾರಿಗಾದರೂ ನೀನೊಬ್ಬನೇ ಕೊಡಬೇಕು, ನಿನ್ನ ಬಂಧುಗಳು ಯಾರೂ ಇಲ್ಲವೆಂದು ಬ್ರಹ್ಮನು ಹೇಳಲು; ಅದಕ್ಕೆ ರೈವತನು ಹೇಳುತ್ತಾನೆ: "ಹಾಗಾದರೆ ಈ ಕನ್ಯಾರತ್ನವನ್ನು ಯಾರಿಗೆ ಕೊಡಲಿ ನೀನು ಹೇಳು" ಎಂಬುದಾಗಿ ಕೇಳಲು; ಆ ಮಾತಿಗೆ ಬ್ರಹ್ಮನು ಹೇಳುತ್ತಾನೆ: "ಎಲೈ ರೈವತನೇ ಕೇಳು, ಪರಮಾತ್ಮನಾಗಿಯೂ, ಆದಿಮಧ್ಯಾಂತರಹಿತನಾಗಿಯೂ, ಸನಾತನನಾಗಿಯೂ, ಸೃಷ್ಟಿಸ್ಥಿತಿಗಳಿಗೆ ಕಾರಣನಾಗಿಯೂ ಇರುವ ಶ್ರೀಮನ್ನಾರಾಯಣನ ಆಜ್ಞಾನುಸಾರ ನಾನು ಸೃಷ್ಟಿವ್ಯಾಪಾರವನ್ನು ಮಾಡತಕ್ಕವನಾಗಿದ್ದೇನೆ. ಪರಮಾತ್ಮನಾದ ಅಚ್ಯುತನು ನನ್ನ ರೂಪಿನಿಂದ ಸೃಷ್ಟಿಯನ್ನೂ, ರುದ್ರರೂಪಿನಿಂದ ನಾಶವನ್ನೂ, ಸ್ವಸ್ವರೂಪದಿಂದ ಪಾಲನೆಯನ್ನೂ ಸಹ ಮಾಡತಕ್ಕವನಾಗಿದ್ದಾನೆ. ಇಂದ್ರಾದಿ ರೂಪದಿಂದ ಜಗತ್ಪಾಲನನಾಗಿಯೂ, ಸೂರ್ಯಾದಿರೂಪದಿಂದ ತಮೋಹರನಾಗಿಯೂ, ಪಾಕಾದಿಗಳಿಗೆ ಅಗ್ನಿರೂಪನಾಗಿಯೂ, ವಾಯುರೂಪದಿಂದ ಜಗದ್ವ್ಯಾಪಾರನಾಗಿಯೂ, ಲೋಕಗಳಿಗೆ ತೃಪ್ತಿಯನ್ನುಂಟುಮಾಡುವ ಜಲಾನ್ನರೂಪಿಯಾಗಿಯೂ ಸಹ ಇರುವ ಶ್ರೀಮನ್ನಾರಾಯಣನು, ಭೂಮಿಯಲ್ಲಿ ಪೂರ್ವದಲ್ಲಿ ಕುಶಸ್ಥಲೀ ಎಂಬ ಸ್ಥಳದಲ್ಲಿ ಈಗ ದ್ವಾರಕಾ ಎಂಬ ಪಟ್ಟಣವಿರುವುದು. ಆ ದ್ವಾರಕಾಪಟ್ಟಣದಲ್ಲಿ ಬಲರಾಮನು ಅವತಾರಮಾಡಿರುತ್ತಾನೆ. ಆ ಕೇಶವಾಂಶನಾಗಿ ಬಲರಾಮನಿಗೆ ನಿನ್ನ ಮಗಳನ್ನು ವಿವಾಹಮಾಡಿಕೊಡು ಎಂಬುದಾಗಿ ಆಜ್ಞಾಪಿಸಲು, ರೈವತನು ಬ್ರಹ್ಮನ ಆಜ್ಞಾನುಸಾರ ಭೂಮಿಗೆ ಬಂದು ಹ್ರಸ್ವಾಕಾರವುಳ್ಳವರಾಗಿಯೂ, ಅಲ್ಪವೀರ್ಯರಾಗಿಯೂ, ಅಲ್ಪಾಯುಷ್ಕರಾಗಿಯೂ ಇರುವ ಜನರನ್ನು ನೋಡಿ, ದ್ವಾರಕಾಪಟ್ಟಣಕ್ಕೆ ಬಂದು ಬಲರಾಮನಿಗೆ ತನ್ನ ಮಗಳನ್ನು ವಿವಾಹ ಮಾಡಿಕೊಟ್ಟನು. ಆಗ ಬಲರಾಮನು ರೇವತಿಯು ಬಹಳ ಎತ್ತರವಾಗಿರುವುದನ್ನು ನೋಡಿ ತನ್ನ ಹಲಾಯುಧದಿಂದ ಎಳೆದು ತತ್ಕಾಲೀನರಾದ ಸ್ತ್ರೀಯರ ಹಾಗೆ ಮಾಡಿದನು. ಅನಂತರ ರೈವತನು ಹಿಮಾಚಲಕ್ಕೆ ತಪಸ್ಸಿಗೆ ಪ್ರಯಾಣಮಾಡಿದನು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಮೊದಲನೆಯ ಅಧ್ಯಾಯವು ಸಮಾಪ್ತಃ

ಎರಡನೆಯ ಅಧ್ಯಾಯವು

ರೈವತನು ಬ್ರಹ್ಮಲೋಕದಿಂದ ಬರುವ ವೇಳೆಗೆ ಇವನ ಪಟ್ಟಣವಾದ ಕುಶಸ್ಥಲಿಯನ್ನು ವಿರುದ್ಧಲಕ್ಷಣೆಯಿಂದ ಕೂಡಿದ ಪುಣ್ಯಜನರಾದ ರಾಕ್ಷಸರು ಆಕ್ರಮಿಸಿ

ಕಕುದ್ಮೀ ಮೊದಲಾದ ರೈವತನ ನೂರುಜನ ಮಕ್ಕಳನ್ನೂ ಓಡಿಸಿದ್ದರು. ಕಕುದ್ಮಿ ಯವರ ಸಂತತಿಯು ವಿಸ್ತಾರವಾಗಿ ಬೆಳೆದು ಸಮಸ್ತ ದಿಕ್ಕುಗಳಲ್ಲಿಯೂ ರಾಜ ರಾದರು. ಧೃಷ್ಟನಿಗೆ ಧಾರ್ಷ್ಟಕರೆಂಬ ಕ್ಷತ್ರಿಯರು ಹುಟ್ಟಿದರು. ನಾಭಾಗನಿಗೆ ಅಂಬರೀಷನೂ ಅಂಬರೀಷನಿಗೆ ವಿರೂಪನೂ ವಿರೂಪನಿಗೆ ಪೃಷದಶ್ವನೂ ಪೃಷದಶ್ವ ನಿಗೆ ರಥೀತರನೂ ಸಹ ಹುಟ್ಟಿದರು. ಇವರು ಕ್ಷತ್ರಪ್ರಸೂತರಾದಾಗ್ಯೂ ತಪೋ ಮಹಿಮೆಯಿಂದ ಬ್ರಾಹ್ಮಣರಾಗಿ ಆಂಗೀರಸಗೋತ್ರರ್ಷಿಗಳಾದರು. ಇಕ್ಷ್ವಾಕುವಿಗೆ ವಿಕುಕ್ಷಿಯು ಹುಟ್ಟಿದನು. ಇಕ್ಷ್ವಾಕುಮಹಾರಾಜನು ಶ್ರಾದ್ಧವನ್ನು ಮಾಡಲು ಉದ್ಯುಕ್ತಪಟ್ಟು ಮಗನಿಗೆ ಶ್ರಾದ್ಧಾರ್ಹವಾದ ಮಾಂಸವನ್ನು ತರಲು ಅಪ್ಪಣೆ ಮಾಡಿದನು. ಅದೇ ಪ್ರಕಾರ ವಿಕುಕ್ಷಿಯು ಕಾಡಿಗೆ ಹೋಗಿ ಅನೇಕ ಮೃಗಗಳನ್ನು ಹೊಡೆದು, ಅತ್ಯಂತ ಆಯಾಸವುಳ್ಳವನಾಗಿ ಕ್ಷುತ್ಪಿಪಾಸಾದಿಪೀಡಿತನಾಗಿ ಶ್ರಾದ್ಧ ಯೋಗ್ಯವಾದ ಮಾಂಸದಲ್ಲಿ ಮೊಲದ ಮಾಂಸವನ್ನು ತೆಗೆದುಕೊಂಡು ತಿಂದು, ನೀರನ್ನು ಕುಡಿದು, ಆಯಾಸ ಪರಿಹಾರಮಾಡಿಕೊಂಡು ಉಳಿದ ಮಾಂಸಗಳನ್ನು ತೆಗೆದುಕೊಂಡು ಬಂದು ತಂದೆಗೆ ಕೊಟ್ಟನು. ಆಗ ಇಕ್ಷ್ವಾಕುವು ಮಾಂಸಗಳನ್ನು ಶುದ್ಧಿಮಾಡುವುದಕ್ಕಾಗಿ ವಸಿಷ್ಠರಿಗೆ ಹೇಳಿದನು. ವಸಿಷ್ಠರು ಮಾಂಸಗಳನ್ನು ಪ್ರೋಕ್ಷಣಾದಿಗಳಿಂದ ಶುದ್ಧಿಮಾಡುವುದಕ್ಕೆ ಪ್ರಾರಂಭಿಸಿದ ಕಾಲದಲ್ಲಿ ಮಾಂಸ ಗಳು ತಿಂದು ಮಿಕ್ಕಿದ್ದರಿಂದ ಅಪರಿಶುದ್ಧವಾದುವು ಎಂದು ತಿಳಿದು ದುರಾತ್ಮನಾದ ನಿನ್ನ ಮಗನು ಮೊಲದ ಮಾಂಸವನ್ನು ತಿಂದು ಉಳಿದ ಶೇಷವನ್ನು ಶ್ರಾದ್ಧಕ್ಕೆ ತಂದಿರುತ್ತಾನೆಂಬುದಾಗಿ ಇಕ್ಷ್ವಾಕುಮಹಾರಾಜನಿಗೆ ವಸಿಷ್ಠನು ಹೇಳಲು, ರಾಜನು ಕೋಪಿಸಿಕೊಂಡು ಮಗನನ್ನು ಪರಿತ್ಯಾಗಮಾಡಿದನು. ಆಗ ವಸಿಷ್ಠನೂ ಕೂಡ ವಿಕು ಕ್ಷಿಗೆ ಶಶಾದನಾಗು ಎಂದು ಶಾಪವನ್ನು ಸಹ ಕೊಟ್ಟನು. ಇಕ್ಷ್ವಾಕುವು ಲೋಕಾಂತರ ವನ್ನು ಹೊಂದಿದನಂತರ ಶಶಾದನೇ ರಾಜನಾದನು. ಶಶಾದನಿಗೆ ಪುರಂಜಯ ನೆಂಬ ಪುತ್ರನು ಹುಟ್ಟಿದನು. ಪುರಂಜಯನು ರಾಜ್ಯಪರಿಪಾಲನೆ ಮಾಡುವ ಕಾಲದಲ್ಲಿ ದೇವಲೋಕದಲ್ಲಿ ದೇವತೆಗಳಿಗೂ ರಾಕ್ಷಸರಿಗೂ ಯುದ್ಧವುಂಟಾಗಿ ಯುದ್ಧದಲ್ಲಿ ದೇವತೆಗಳು ಪರಾಜಿತರಾಗಿ ಶ್ರೀಮನ್ನಾರಾಯಣನನ್ನು ಆರಾಧಿಸಲು, ಅನಾದಿನಿಧನನಾದ ಸಕಲಜಗತ್ಪರಾಯಣನಾದ ನಾರಾಯಣನು, ದೇವತೆಗಳಿಗೆ ಪ್ರತ್ಯಕ್ಷನಾಗಿ, "ಎಲೈ ದೇವತೆಗಳಿರಾ ! ನಿಮ್ಮ ಇಷ್ಟಾನುಸಾರ ದೈತ್ಯವಿನಾಶಾರ್ಥ ವಾಗಿ ಭೂಲೋಕದಲ್ಲಿರುವ ಪುರಂಜಯರಾಜನ ದೇಹದಲ್ಲಿ ಅಂತಃಪ್ರವಿಷ್ಟನಾಗಿ ನಿಮ್ಮ ಇಷ್ಟಾರ್ಥವನ್ನು ನೆರವೇರಿಸುತ್ತೇನೆ; ಆದುದರಿಂದ ನೀವು ಪುರಂಜಯನನ್ನು ಪ್ರಾರ್ಥಿಸಿ" ಎಂದು ಆಜ್ಞಾಪಿಸಲು; ದೇವತೆಗಳು ಭಗವಂತನ ಆಜ್ಞಾನುಸಾರ ಭೂಲೋಕಕ್ಕೆ ಬಂದು, ಪುರಂಜಯನನ್ನು ಕುರಿತು "ಎಲೈ ಕ್ಷತ್ರಿಯಶ್ರೇಷ್ಠನೇ,

ನಾವು ದೈತ್ಯರಿಂದ ಯುದ್ಧಮಾಡಬೇಕಾಗಿರುವುದರಿಂದ ಈ ಯುದ್ಧಕ್ಕೆ ನೀನು ಸಹಾಯಕನಾಗಬೇಕೆಂದು ಕೇಳಲು ; ಅದಕ್ಕೆ ಪುರಂಜಯನು ದೇವತೆಗಳಿಗೆ ಹೇಳುತ್ತಾನೆ: "ದೇವತೆಗಳಿರಾ ! ನಿಮ್ಮ ರಾಜನಾದ ತ್ರೈಲೋಕ್ಯಾಧಿಪತಿಯಾದ ಇಂದ್ರನು ನನ್ನನ್ನು ತನ್ನ ಹೆಗಲಿನ ಮೇಲೆ ಕೂರಿಸಿಕೊಳ್ಳುವುದಾದರೆ, ನಾನು ದೈತ್ಯರನ್ನು ನಾಶಮಾಡುತ್ತೇನೆ" ಎಂಬುದಾಗಿ ಹೇಳಲು ; ಆ ಮಾತಿಗೆ ಇಂದ್ರನು ಅನುಮೋದಿಸಿ ಪುರಂಜಯನನ್ನು ದೇವಲೋಕಕ್ಕೆ ಕರೆದುಕೊಂಡು ಹೋದಮೇಲೆ ಇಂದ್ರನು ವೃಷಭನಾದನು. ಆಗ ಪುರಂಜಯನು ವೃಷಭರೂಪಿಯಾದ ಇಂದ್ರನ ಹೆಗಲಿನ ಮೇಲೆ ಕೂತುಕೊಂಡು ಭಗವದ್ಭಕ್ತಿಯುಕ್ತನಾಗಿ ಯುದ್ಧದಲ್ಲಿ ಅಸುರರನ್ನು ಸೋಲಿಸಿದನು. ಎತ್ತಿನ ಹೆಗಲಿಗೆ ಕಕುತ್ ಎಂದು ಹೆಸರು. ಕಕುತ್ತಿನಲ್ಲಿ ಕೂತುಕೊಂಡಿದ್ದುದರಿಂದ ಪುರಂಜಯನಿಗೆ ಕಕುತ್ಸ್ಥನೆಂದು ಹೆಸರಾಯಿತು. ಕಕುತ್ಸ್ಥನಿಗೆ ಅನೇನಸನೂ, ಅನೇನಸನಿಗೆ ಪೃಥು ಎಂಬುವನೂ, ಪೃಥುವಿಗೆ ವಿಶ್ವರಾಶ್ವನೂ, ವಿಶ್ವರಾಶ್ವನಿಗೆ ಯುವನಾಶ್ವನೂ, ಇವನಿಗೆ ಶಾಬಸ್ತನೂ, ಶಾಬಸ್ತನಿಗೆ ಬೃಹದಶ್ವನೂ, ಬೃಹದಶ್ವನಿಗೆ ಕುವಲಯಾಶ್ವನೂ ಸಹ ಹುಟ್ಟಿದರು. ಕುವಲಯಾಶ್ವನು ತನ್ನ ಇಪ್ಪತ್ತೊಂದುಸಾವಿರ ಪುತ್ರರಿಂದ ಯುಕ್ತನಾಗಿ ಉದಂಕಮಹರ್ಷಿಗೆ ಅಪಕಾರಿಯಾದ ದುಂದುನಾಮಕನಾದ ರಾಕ್ಷಸನನ್ನು ಸಂಹಾರಮಾಡಿದನು. ಆದುದರಿಂದ ಇವನಿಗೆ ದುಂದುಮಾರನೆಂದು ಪ್ರಖ್ಯಾತವಾದ ಹೆಸರುಂಟಾಯಿತು. ದುಂದುಮಾರನ ಉಸುರಿನಿಂದ ಪುತ್ರರುಗಳೆಲ್ಲರೂ ಸುಟ್ಟುಹೋದರು. ಇವರುಗಳಲ್ಲಿ ದೃಢಾಶ್ವ, ಚಂದ್ರಾಶ್ವ, ಕಪಿಲಾಶ್ವರೆಂಬ ಮೂರುಜನ ಪುತ್ರರು ಮಾತ್ರ ಉಳಿದರು. ದೃಢಾಶ್ವನಿಂದ ಹರ್ಯಶ್ವನೂ, ಹರ್ಯಶ್ವನಿಂದ ನಿಕುಂಭನೂ, ಇವನಿಂದ ಅಮಿತಾಶ್ವನೂ, ಅಮಿತಾಶ್ವನಿಂದ ಕುಶಾಶ್ವನೂ, ಕುಶಾಶ್ವನಿಂದ ಪ್ರಸೇನಜಿತ್ತೂ, ಇವನಿಂದ ಯುವನಾಶ್ವನೂ ಸಹ ಹುಟ್ಟಿದರು. ಯುವನಾಶ್ವನಿಗೆ ಮಕ್ಕಳಿಲ್ಲದೆ ಇದ್ದುದರಿಂದ ಖಿನ್ನಮನಸ್ಕನಾಗಿ ಮಹರ್ಷಿಗಳ ಆಶ್ರಮದಲ್ಲಿ ವಾಸಮಾಡಿಕೊಂಡಿದ್ದನು. ಆಗ ಮಹರ್ಷಿಗಳು ಕೃಪಾನ್ವಿತರಾಗಿ ಇವನಿಗೆ ಪುತ್ರಪ್ರಾಪ್ತಿಯುಂಟಾಗುವುದಕ್ಕಾಗಿ ಇಷ್ಟಿಯನ್ನು ಮಾಡಿ, ಇಷ್ಟಿಯಲ್ಲಿ ಮಂತ್ರಪೂತವಾದ ಜಲದಿಂದ ಪೂರಿತವಾದ ಕಲಶವನ್ನು ರಾಜನ ಪತ್ನಿಗೆ ಕೊಡಬೇಕೆಂದು ವೇದಿಮಧ್ಯದಲ್ಲಿರಿಸಿ, ಅರ್ಧರಾತ್ರಿಕಾಲವಾದುದರಿಂದ ಮಹರ್ಷಿಗಳು ಮಲಗಿಕೊಂಡರು. ಆ ಸಮಯದಲ್ಲಿ ಯುವನಾಶ್ವರಾಜನು ಬಹಳ ಬಾಯಾರಿಕೆಯಿಂದ ಯಜ್ಞಶಾಲೆಗೆ ಪ್ರವೇಶಮಾಡಿ ಮಹರ್ಷಿಗಳು ನಿದ್ರಾಪರವಶರಾಗಿರುವುದನ್ನು ನೋಡಿ ಎಚ್ಚರಮಾಡಬಾರದೆಂದು ಯೋಚಿಸಿ ರಾಜನು ಅಪರಿಮಿತ ಮಹಾತ್ಮ್ಯವುಳ್ಳ ಕಲಶೋದಕವನ್ನು ಪಾನಮಾಡಿದನು. ಅನಂತರ

ಮಹರ್ಷಿಗಳು ಎಚ್ಚರಗೊಂಡು, ಕಲಶವು ನಿರ್ಜಲವಾದುದನ್ನು ಕಂಡು, ಮಂತ್ರಪೂತವಾದ ಜಲವನ್ನು ಯಾರು ಪಾನಮಾಡಿದರು? ಈ ಜಲವನ್ನು ರಾಜಪತ್ನಿಯು ಪಾನಮಾಡಿದ್ದರೆ ಅಮಿತಬಲಪರಾಕ್ರಮಿಯಾದ ಮಗನು ಹುಟ್ಟುತ್ತಿದ್ದನು ಎಂಬುದಾಗಿ ಮಹರ್ಷಿಗಳು ಹೇಳಿದ ಮಾತನ್ನು ಕೇಳಿ ಯುವನಾಶ್ವರಾಜನು ಇದನ್ನು ತಿಳಿಯದೇ ತಾನೇ ಪಾನಮಾಡಿದನೆಂದು ಹೇಳಿದನು.

ತದಾಪ್ರಭೃತಿ ರಾಜನು ಗರ್ಭವನ್ನು ಧರಿಸಿದನು. ಈ ರೀತಿ ಗರ್ಭವು ದಿನೇ ದಿನೇ ವೃದ್ಧಿಯಾಗಿ ನಿಯತಕಾಲಕ್ಕೆ ಸರಿಯಾಗಿ ಗರ್ಭವು ತನ್ನ ಬಲಕಾಲಿನ ಅಂಗುಷ್ಠದಿಂದ ರಾಜನ ಹೊಟ್ಟೆಯನ್ನು ಒಡೆದು ಹೊರಕ್ಕೆ ಬಂತು. ಇದರಿಂದ ರಾಜನು ಲೋಕಾಂತರವನ್ನು ಹೊಂದಿದನು. ಸ್ತನ್ಯವಿಲ್ಲದುದರಿಂದ ಈ ಶಿಶುವನ್ನು ಯಾರು ಪೋಷಿಸತಕ್ಕವರೆಂದು ಮಹರ್ಷಿಗಳು ಯೋಚಿಸಲು; ಆಗ ದೇವರಾಜನಾದ ಇಂದ್ರನು ನಾನು ಪೋಷಿಸುತ್ತೇನೆಂದು ಹೇಳಿ, ಶಿಶುವಿನ ಬಾಯಲ್ಲಿ ಅಮೃತಮಯವಾದ ಬೆರಳನ್ನು ಇಡಲು, ಒಂದೇ ದಿವಸದಲ್ಲಿಯೇ ವೃದ್ಧಿಯಾದನು. ಇವನೇ ಮಾಂಧಾತೃ ಚಕ್ರವರ್ತಿಯು. ಈ ಮಾಂಧಾತೃವು ಚಕ್ರವರ್ತಿಯಾಗಿ ಸಪ್ತದ್ವೀಪದಿಂದ ಕೂಡಿದ ಭೂಮಿಯನ್ನು ಪರಿಪಾಲಿಸಿದನು. ಸೂರ್ಯನ ಉದಯಾಸ್ತಗಳು ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೂ, ಮಾಂಧಾತೃ ರಾಜ್ಯವು ವ್ಯಾಪಿಸಿತ್ತು. ಮಾಂಧಾತೃ ಚಕ್ರವರ್ತಿಯು ಶಶಿಬಿಂದು ಮಗಳಾದ ಇಂದುಮತಿಯನ್ನು ವಿವಾಹಮಾಡಿಕೊಂಡು ಅವಳಿಂದ ಪುರುಕುತ್ಸ, ಅಂಬರೀಷ, ಮುಚುಕುಂದರೆಂಬುದಾಗಿ ಮೂರುಜನ ಪುತ್ರರನ್ನೂ, ಐವತ್ತು ಹೆಣ್ಣುಮಕ್ಕಳನ್ನೂ ಸಹ ಪಡೆದನು. ಹೀಗಿರುವ ಕಾಲದಲ್ಲಿ ಸೌಭರಿಯೆಂಬ ಋಷಿಯು ನೀರಿನಲ್ಲಿ ಮುಳುಗಿ ತಪಸ್ಸುಮಾಡುತ್ತಿದ್ದನು. ಈ ಪ್ರಕಾರ ಹನ್ನೆರಡುವರ್ಷಕಾಲ ವಾಸಮಾಡಿದನು. ಜಲದಲ್ಲಿ ವಾಸಮಾಡತಕ್ಕ ಕಾಲದಲ್ಲಿ ಸಂಮದನೆಂಬ ಮೀನಾಧಿಪನು, ಅನೇಕ ಪುತ್ರಪೌತ್ರದೌಹಿತ್ರಪ್ರಪೌತ್ರಗಳಾದ ಮೀನುಗಳಿಂದ ಕೂಡಿ ಸಂಚರಿಸುವ ಕಾಲದಲ್ಲಿ ಮರಿಗಳು ಸಂಮದನ ತಲೆಯ ಮೇಲೆ, ಬಾಲದ ಮೇಲೆ, ಶರೀರದ ಮೇಲೆ ಕ್ರೀಡಿಸುತ್ತಿದ್ದುವು. ಈ ವಿನೋದಗಳನ್ನು ನೋಡಿದ ಸೌಭರಿ ಋಷಿಯು ತಪಸ್ಸನ್ನು ಬಿಟ್ಟು ಸಂಮದನ ವಿಹಾರದಲ್ಲಿ ಅಭಿರುಚಿಯುಳ್ಳವನಾಗಿ ತಾನೂ ಕೂಡ ಇದೇ ಪ್ರಕಾರ ಪುತ್ರಪೌತ್ರಾದಿಗಳಿಂದ ವಿಹಾರವನ್ನು ಅನುಭವಿಸಬೇಕೆಂದು ಆಲೋಚಿಸಿ ಜಲದಿಂದ ಮೇಲಕ್ಕೆ ಬಂದು, ಕನ್ಯಾರ್ಥವಾಗಿ ಮಾಂಧಾತೃ ಚಕ್ರವರ್ತಿಯ ಮನೆಗೆ ಬಂದು, ಚಕ್ರವರ್ತಿಯಿಂದ ಸನ್ಮಾನವನ್ನು ಹೊಂದಿ, ಉಚಿತಾಸನದಲ್ಲಿ ಕೂತುಕೊಂಡು, ಮಾಂಧಾತೃ ಚಕ್ರವರ್ತಿಗೆ ಹೇಳುತ್ತಾನೆ: "ಓ ಚಕ್ರವರ್ತಿಯೇ, ನಾನು

ಸಂಸಾರಸುಖವನ್ನು ಅನುಭವಿಸಲಪೇಕ್ಷೆಯಿಂದ ನಿನ್ನಲ್ಲಿ ಕನ್ಯಾರ್ಥವಾಗಿ ಬಂದಿರುತ್ತೇನೆ; ನನ್ನ ಅಪೇಕ್ಷೆಯನ್ನು ಭಂಗಮಾಡದೆ ನನ್ನ ಯಾಚನೆಯನ್ನು ಸಾರ್ಥಕಗೊಳಿಸು; ಈ ನಿನ್ನ ಕುಲವು ಯಾಚಕರಿಗೆ ದಾನಕೊಡುವುದರಲ್ಲಿ ಬದ್ಧದೀಕ್ಷೆಯುಳ್ಳುದು; ನಿನಗೆ ಐವತ್ತು ಹೆಣ್ಣುಮಕ್ಕಳು ಇರುವುದರಿಂದ ಇವರಲ್ಲಿ ಒಬ್ಬಳನ್ನು ನನಗೆ ಕೊಡು; ನೀನು ಕೊಡದಿದ್ದರೆ ನನಗೆ ಯಾಚ್ಞಾಭಂಗವೂ, ದುಃಖವೂ ಸಹ ಆಗುವುದು" ಈ ಪ್ರಕಾರ ಹೇಳಿದ ಸೌಭರಿಯ ಮಾತನ್ನು ಕೇಳಿ ಮಾಂಧಾತೃಚಕ್ರವರ್ತಿಯು ಜರ್ಝರಿತದೇಹವುಳ್ಳ ಸೌಭರಿಯನ್ನು ನೋಡಿ ಶಾಪಭೀತನಾಗಿ ಬಗ್ಗಿದ ಮುಖವುಳ್ಳವನಾದನು. ಇದನ್ನು ನೋಡಿದ ಸೌಭರಿಯು "ಓ ಚಕ್ರವರ್ತಿಯೇ, ನೀನು ಮುಖವನ್ನು ಬಗ್ಗಿಸಲು ಕಾರಣವೇನು? ನಾನು ಹೇಳಿದ ಮಾತುಗಳು ಅಸಹ್ಯವಾದವುಗಳಲ್ಲ. ನಿನ್ನ ಅಧೀನದಲ್ಲಿರತಕ್ಕ ಕನ್ಯಾರತ್ನವನ್ನು ಕೊಟ್ಟರೆ ನಾನು ಕೃತಾರ್ಥನಾಗುವೆನೆಂಬುದಾಗಿ" ಹೇಳಲು; ಆ ಮಾತಿಗೆ ರಾಜನು ಉತ್ತರವನ್ನು ಹೇಳುತ್ತಾನೆ: "ಭಗವಂತನೇ, ನಮ್ಮ ವಂಶದಲ್ಲಿ ಪದ್ಧತಿಯೇನೆಂದರೆ, ಕನ್ನಿಕೆಯು ಯಾವ ವರನನ್ನು ಅಪೇಕ್ಷಿಸುತ್ತಾಳೋ ಆ ವರನಿಗೆ ಕೊಟ್ಟು ವಿವಾಹಮಾಡಿಕೊಡುವ ಪದ್ಧತಿಯಿರುವುದು; ಇದಕ್ಕೆ ವಿರುದ್ಧವಾಗಿ ನಿಮ್ಮ ಯಾಚನೆಯು ಇರುವುದರಿಂದ ಮನಸ್ಸಿನಲ್ಲಿ ಯೋಚನೆಯುಂಟಾಗಿ ತಲೆಯನ್ನು ಬಗ್ಗಿಸಿದೆನು." ಈ ರೀತಿ ರಾಜನು ಹೇಳಲು, ಸೌಭರಿಯು ಮನಸ್ಸಿನಲ್ಲಿ ಯೋಚಿಸುತ್ತಾನೆ: ಈ ರಾಜನು ಹೇಳಿದ ವಾಕ್ಯವು ನನ್ನ ಯಾಚನೆಯನ್ನು ಉಪಾಯದಿಂದ ತಪ್ಪಿಸಬೇಕೆಂದು ಹೇಳಿದ ಮಾತಾಗಿದೆ; ನಾನು ವೃದ್ಧನಾದುದರಿಂದ ಸ್ತ್ರೀಯರೇ ಮೋಹಿಸುವುದಿಲ್ಲ. ಹೀಗಿರುವಲ್ಲಿ ಕನ್ನಿಕೆಯು ಮೋಹಿಸುವುದುಂಟೇ? ಎಂಬ ಯೋಚನೆಯಿಂದ ರಾಜನು ಉಪಾಯವನ್ನು ಹೇಳಿರುವನು; ಒಳ್ಳೇದು! ಇದಕ್ಕೆ ನಾನೂ ಒಂದು ಉಪಾಯವನ್ನು ಮಾಡುತ್ತೇನೆ. ಈ ರೀತಿ ಆಲೋಚಿಸಿ ರಾಜನಿಗೆ ಹೇಳುತ್ತಾನೆ: "ಓ ಮಹಾರಾಜನೇ, ನೀನು ಹೇಳಿದ ಪ್ರಕಾರ ಕನ್ಯಾಂತಃಪುರಕ್ಕೆ ನನ್ನನ್ನು ಕಳುಹಿಸು; ಕನ್ನಿಕೆಯು ನನ್ನನ್ನು ಅಪೇಕ್ಷಿಸಿದರೆ ನನಗೆ ಕನ್ಯೆಯನ್ನು ಕೊಡಬಹುದು" ಎಂದು ಹೇಳಿ ಋಷಿಯು ಸುಮ್ಮನಾದನು. ರಾಜನು ಶಾಪಭೀತನಾಗಿ ಮಹರ್ಷಿಯನ್ನು ಅಂತಃಪುರಕ್ಕೆ ಕಳುಹಿಸಿದನು. ಆಗ ಮಹರ್ಷಿಯು ಅಂತಃಪುರವನ್ನು ಪ್ರವೇಶಿಸುವ ಕಾಲದಲ್ಲಿ ಜೀರ್ಣವಾದ ದೇಹವನ್ನು ಕಮನೀಯರೂಪವನ್ನಾಗಿ ಮಾಡಿಕೊಂಡು, ಕನ್ನಿಕೆಯರನ್ನು ನೋಡಿ ಹೇಳುತ್ತಾನೆ: "ನಿಮ್ಮ ತಂದೆಯಾದ ಮಾಂಧಾತೃ ಮಹಾರಾಜನು ನನಗೆ ಹೇಳಿರುವುದೇನೆಂದರೆ: ಅಂತಃಪುರದಲ್ಲಿರತಕ್ಕ ಐವತ್ತು ಕನ್ನಿಕೆಗಳಲ್ಲಿ ಯಾರು ನಿನ್ನನ್ನು ಅಪೇಕ್ಷಿಸುತ್ತಾರೋ ಅವರನ್ನು

ನಿನಗೆ ವಿವಾಹಮಾಡಿಕೊಡುತ್ತೇನೆಂದು ಹೇಳಿರುತ್ತಾನೆ; ಆದುದರಿಂದ ನಿಮಗೆ ನನ್ನನ್ನು ವರಿಸಲು ಅಪೇಕ್ಷೆಯಿದ್ದರೆ ವರಿಸಬಹುದೆಂದು" ಹೇಳಿದನು. ಇದನ್ನು ಕೇಳಿದ ಐವತ್ತು ಜನ ಕನ್ನಿಕೆಯರೂ ಕಮನೀಯರೂಪನಾದ ಮಹರ್ಷಿಯನ್ನು ನೋಡಿ ಮೋಹಯುಕ್ತರಾಗಿ, ಹೆಣ್ಣಾನೆಗಳು ಗಂಡಾನೆಯನ್ನು ಅನುಸರಿಸುವಂತೆ ಮನ್ಮಥಾವಿಷ್ಟರಾಗಿ, ನಾನು ಮೊದಲು ತಾನು ಮೊದಲು ಎಂದು ಐವತ್ತು ಕನ್ನಿಕೆಯರೂ ಸೌಭರಿ ಋಷಿಯನ್ನು ವರಿಸಿದರು. ಅಲ್ಲದೆ ಕನ್ನಿಕೆಯರೂ ದೇವಗಂಧರ್ವಾದಿಗಳಿಗೂ ಕೂಡ ಮೋಹಕರವಾದ ಸೌಂದರ್ಯವುಳ್ಳ ಸೌಭರಿಮಹರ್ಷಿಯನ್ನು ನೋಡಿ ಪರಸ್ಪರ ತಾವುಗಳು ಹೇಳುತ್ತಾರೆ: ಎಲೈ ತಂಗಿಯೇ, ಇವನು ನಿನಗೆ ಅನುರೂಪನಾದ ವರನಲ್ಲ, ನನಗೆ ಅನುರೂಪನು. ನಾನು ಮೊದಲು ವರಿಸಿದೆನು. ನಾನೇ ಮೊದಲು ವರಿಸಿರುವೆನು ಎಂದು ಪರಸ್ಪರ ಪ್ರೇಮಕಲಹಯುಕ್ತರಾದರು. ಆಗ ಸೌಭರಿಯು ನಡೆದ ವೃತ್ತಾಂತವನ್ನು ರಾಜನಿಗೆ ತಿಳಿಸಿದನು. ಆಗ ಮಾಂಧಾತೃವು ಸೌಭರಿಯು ಹೇಳಿದ ಮಾತನ್ನು ಕೇಳಿ ಆಶ್ಚರ್ಯಯುಕ್ತನಾಗಿ, ಇದೇನು ಹೀಗಾಯಿತು? ಏನು ಮಾಡಲಿ? ಈ ಋಷಿಗೆ ನಾನು ಏನು ಹೇಳಿದೆನು ಎಂಬುದಾಗಿ ವ್ಯಾಕುಲಯುಕ್ತನಾಗಿ ತನಗೆ ಇಷ್ಟವಿಲ್ಲದಿದ್ದಾಗ್ಯೂ ಬಹಳ ಪ್ರಯಾಸದಿಂದ ಕನ್ನಿಕೆಯರನ್ನು ಕೊಡುವುದಕ್ಕೆ ಅನುಮೋದಿಸಿದನು. ಅನಂತರದಲ್ಲಿ ಸೌಭರಿಯು ಮಾಂಧಾತೃರಾಜನ ಐವತ್ತು ಜನ ಪುತ್ರಿಯರನ್ನು ವಿಧಿವತ್ತಾಗಿ ಪಾಣಿಗ್ರಹಣಮಾಡಿಕೊಂಡು, ಪತ್ನಿಗಳಿಂದ ಕೂಡಿದವನಾಗಿ ತನ್ನ ಆಶ್ರಮಕ್ಕೆ ಬಂದನು. ಅನಂತರ ಸೌಭರಿಯು ಬೇರೆ ಒಬ್ಬ ವಿಶ್ವಕರ್ಮನನ್ನು ಕರೆದು, ವಿಶ್ವಕರ್ಮನಿಗೆ ಹೇಳುತ್ತಾನೆ: "ಎಲೈ ವಿಶ್ವಕರ್ಮನೇ! ಈ ನನ್ನ ಐವತ್ತು ಜನ ಪತ್ನಿಯರುಗಳಿಗೂ ಬೇರೆಬೇರೆ ಮನೆಗಳನ್ನೂ, ಸರೋವರಗಳನ್ನೂ, ಉದ್ಯಾನವನಗಳನ್ನೂ, ಉಪ್ಪರಿಗೆಗಳನ್ನೂ ಸಹ ಸಿದ್ಧಮಾಡು. ಅನೇಕ ಮಹಡಿಗಳಿಂದ ಕೂಡಿದುದಾಗಿಯೂ, ಉತ್ಕೃಷ್ಟವಾದ ಶಯ್ಯಾಸನಾದಿಗಳಿಂದ ಅಲಂಕೃತವಾದುದಾಗಿಯೂ, ದೇವತೆಗಳಿಗೂ ಸಹ ದುರ್ಲಭವಾದ ಭೋಗಸ್ಥಾನವುಳ್ಳುದಾಗಿಯೂ ಸಹ ಇರುವ ಹಾಗೆ ಸಿದ್ಧಮಾಡು" ಎಂಬುದಾಗಿ ಆಜ್ಞಾಪಿಸಿದನು. ವಿಶ್ವಕರ್ಮನು ಮಹರ್ಷಿಯ ಅಪ್ಪಣೆಪ್ರಕಾರ ಸಕಲವನ್ನೂ ಸಿದ್ಧಪಡಿಸಿದನು. ಅದನ್ನು ನೋಡಿದ ಪರಮರ್ಷಿಯು ಅತ್ಯಾನಂದಪಟ್ಟವನಾಗಿ ಪ್ರತಿ ಗೃಹದಲ್ಲೂ ಒಬ್ಬೊಬ್ಬ ಸ್ತ್ರೀಯನ್ನಿರಿಸಿ, ಪ್ರತ್ಯಹಸ್ಸಿನಲ್ಲಿಯೂ ಭಕ್ಷ್ಯಭೋಜ್ಯಾದಿಗಳಿಂದ ರಾಜಪುತ್ರಿಯರುಗಳು ಭೋಜನಮಾಡುತ್ತಾ, ಕಮಲಗಳಿಂದಲೂ ಹಂಸಕಾರಂಡವಾದಿ ಪಕ್ಷಿಗಳಿಂದಲೂ ಅಲಂಕೃತವಾದ ಸರೋವರದಲ್ಲಿ ವಿಹರಿಸುತ್ತಾ, ಉದ್ಯಾನವನಗಳಲ್ಲಿ ಸಂಚರಿಸುತ್ತಾ, ದೇವಭೋಗನಿರತ

ರಾಗಿದ್ದರು. ಹೀಗಿರತಕ್ಕಕಾಲದಲ್ಲಿ ಒಂದಾನೊಂದು ದಿವಸ ಮಾಂಧಾತೃರಾಜನು ಪುತ್ರಿಯರುಗಳನ್ನು ಸ್ಮರಿಸಿಕೊಂಡು ಸುಖದಿಂದಿರುವರೋ ಅಥವಾ ಕಷ್ಟಪಡುವರೋ ನೋಡಿಕೊಂಡು ಬರಬೇಕೆಂದು ಸೌಭರಿಯ ಆಶ್ರಮವನ್ನು ಪ್ರವೇಶ ಮಾಡಿ, ಇದೇನು? ದೇವಲೋಕದ ನಂದನವನಕ್ಕೆ ಬಂದೆನೇ ಎಂಬುದಾಗಿ ಭ್ರಾಂತಿಪಟ್ಟು ಸ್ಫಟಿಕಶಿಲೆಯಿಂದ ಮಾಡಿದ ಉಪ್ಪರಿಗೆಗಳಿಂದಲೂ, ಮನೋಹರವಾದ ಸರೋವರದಿಂದಲೂ, ದಿವ್ಯೋದ್ಯಾನವನದಿಂದ ಕೂಡಿದ ಮನೆಗಳನ್ನೂ ನೋಡಿ ವಿಸ್ಮಿತನಾಗಿ, ಒಂದು ಗೃಹವನ್ನು ಪ್ರವೇಶಿಸಿ, ಮಹಡಿಯ ಮೇಲೆ ಸಂತೋಷಭರಿತಳಾದ ಪುತ್ರಿಯನ್ನು ಕಂಡು ಆಲಿಂಗನಾಘ್ರಾಣಗಳನ್ನು ಮಾಡಿದ ನಂತರ, ಮಗಳಿಂದ ಪೂಜಿಸಲ್ಪಟ್ಟವನಾಗಿ ಉಚಿತವಾದ ಆಸನದಲ್ಲಿ ಕುಳಿತು, ಆನಂದಬಾಷ್ಪನೇತ್ರನಾಗಿ ಮಗಳನ್ನು ಕೇಳುತ್ತಾನೆ: "ಪುತ್ರಿ ವತ್ಸೇ, ನೀನು ಸುಖವಾಗಿರುವೆಯಾ? ಅಥವಾ ಕಷ್ಟವೇನಾದರೂ ಉಂಟೇ? ನಿನ್ನ ಪತಿಯು ನಿನ್ನನ್ನು ಕಂಡರೆ ಪ್ರೀತಿಯುಕ್ತನಾಗಿರುತ್ತಾನೆಯೇ? ನಮ್ಮಗಳನ್ನು ಸ್ಮರಿಸುವೆಯಾ?" ಈ ರೀತಿ ಪ್ರಶ್ನೆಮಾಡಲು ಮಗಳು ಹೇಳುತ್ತಾಳೆ: "ತಾತನೇ, ಅತ್ಯಂತ ರಮಣೀಯವಾದ ಮನೆಯೂ, ಅತಿಮನೋಹರವಾದ ಉದ್ಯಾನವನವೂ, ಅತಿ ಗಂಭೀರವಾದ ಪಕ್ಷಿಧ್ವನಿಯೂ, ವಿಕಸಿತವಾದ ಕಮಲಗಳಿಂದ ಕೂಡಿದ ಸರೋವರವೂ, ಮನೋನುಕೂಲವಾದ ಭಕ್ಷ್ಯಭೋಜ್ಯಾದಿಗಳೂ, ದಿವ್ಯವಾದ ವಸ್ತ್ರಭೂಷಣ ಪುಷ್ಪಗಂಧಾದಿಗಳೂ ಭೋಗಾರ್ಹವಾದ ಮೃದುಶಯ್ಯಾಸನಾದಿಗಳೂ, ಸರ್ವಸಂಪತ್ತುಗಳೂ ಸಹ ಇರುವುದರಿಂದ ಗಾರ್ಹಸ್ಥ್ಯಸೌಖ್ಯಕ್ಕೆ ಕುಂದಕವಿರುವುದಿಲ್ಲ. ಇಷ್ಟು ಸೌಖ್ಯವಿದ್ದಾಗ್ಯೂ ತಂದೆಯ ಮನೆಯನ್ನು ಸ್ಮರಿಸದೇ ಇರುವುದುಂಟೆ? ಮಹಾನುಭಾವನಾದ ಪತಿಯ ಪ್ರಭಾವದಿಂದ ಸಕಲಸೌಖ್ಯವೂ ಸಿದ್ಧವಾಗಿರುವುದು. ಹೀಗಿದ್ದಾಗ್ಯೂ ನನಗೆ ಒಂದು ದುಃಖವಿರುವುದು, ಅದೇನೆಂದರೆ: ನನ್ನ ಪತಿಯು ಐವತ್ತುಜನ ಪತ್ನಿಯರನ್ನು ಪಡೆದು ನನ್ನ ತಂಗಿಗಳ ಮನೆಗೆ ಹೋಗದೆ ನನ್ನ ಮನೆಯಲ್ಲಿಯೇ ಇರುವುದರಿಂದ ಈ ಭೋಗಗಳು ನನ್ನ ತಂಗಿಯರುಗಳಿಗೆ ಲಭ್ಯವಾಗಲಿಲ್ಲವೆಂಬುವುದೊಂದೇ ದುಃಖವೇ ಹೊರ್ತು ಬೇರೆ ಇಲ್ಲ." ಈ ರೀತಿಯಲ್ಲಿ ಹೇಳಿದ ಮಗಳ ಮಾತನ್ನು ಕೇಳಿ ರಾಜನು ಮತ್ತೊಂದು ಮಗಳ ಮನೆಗೆ ಹೋಗಿ ಮಗಳನ್ನು ಕುಶಲಪ್ರಶ್ನೆ ಮಾಡಿ, ಮೊದಲಿನಂತೆ ಪ್ರಶ್ನೆ ಮಾಡಲು, ಅವಳೂ ಸಹ ಅಕ್ಕನು ಹೇಳಿದ ಪ್ರಕಾರ ತಾನೂ ಕೂಡ ಸರ್ವಸಂಪದ್ಯುಕ್ತಳಾಗಿರುವುದನ್ನು ತಂದೆಗೆ ಹೇಳಿ ತನ್ನ ಪತಿಯಾದ ಸೌಭರಿಯು ಯಾವಾಗಲೂ ತನ್ನಲ್ಲಿಯೇ ಇರುವುದರಿಂದ ಇತರ ಅಕ್ಕತಂಗಿಯರುಗಳಿಗೆ ಈ ಭೋಗವಿಲ್ಲವೆಂಬುವುದೊಂದೇ ತನಗೆ ದುಃಖವೆಂದು ಹೇಳಿದಳು. ಮಾಂಧಾತನು

ಪ್ರತಿ ಮಗಳ ಮನೆಯಲ್ಲಿಯೂ ಇದೇ ರೀತಿಯಾಗಿ ಕೇಳಿ ಪರಮಾಶ್ಚರ್ಯ ಯುಕ್ತನಾಗಿ ಏಕಾಂತದಲ್ಲಿರತಕ್ಕ ಸೌಭರಿಯನ್ನು ನೋಡಿ, ಸೌಭರಿಗೆ ಪೂಜೆ ಯನ್ನು ಮಾಡಿ, ಓ ಭಗವಂತನಾದ ಸೌಭರಿಯೆ, ನಿನ್ನ ಪ್ರಭಾವವು ಅತ್ಯಂತ ಆಶ್ಚರ್ಯಕರವಾದುದು, ಈ ಪ್ರಭಾವವು ಮತ್ತಾರಿಗೂ ಲಭಿಸಲಾರದು ಎಂಬು ದಾಗಿ ಹೇಳಿ, ಸೌಭರಿಯಿಂದ ಸತ್ಕಾರವನ್ನು ಹೊಂದಿ, ಸ್ವಲ್ಪಕಾಲ ಅಲ್ಲಿಯೇ ವಾಸವಾಗಿದ್ದು, ಭೋಗಗಳನ್ನು ಅನುಭವಿಸಿ, ತನ್ನ ಪಟ್ಟಣಕ್ಕೆ ಬಂದನು. ಅನಂತರ ಸ್ವಲ್ಪಕಾಲ ಕಳೆದನಂತರ, ಸೌಭರಿಯು ಐವತ್ತು ಪತ್ನಿಯರುಗಳಿಂದ ನೂರೈವತ್ತು ಪುತ್ರರನ್ನು ಪಡೆದು, ಪುತ್ರರು ಯಾವಾಗ ನಡೆಯುತ್ತಾರೆ; ಎಷ್ಟು ದಿವಸಗಳಲ್ಲಿ ಯೌವನಶಾಲಿಗಳಾಗುತ್ತಾರೆ; ಇವರಿಗೆ ಪುತ್ರಪ್ರಾಪ್ತಿ ಯಾವಾಗ ಉಂಟಾಗುವುದು; ಇವರ ಮಕ್ಕಳನ್ನು ಯಾವಾಗ ನೋಡುತ್ತೇನೆ; ಇತ್ಯಾದಿ ಮೋಹಪರವಶನಾಗಿ ಚಿಂತಿಸುತ್ತಿದ್ದನು. ಆಹೊ, ಆಶ್ಚರ್ಯ ! ನನ್ನ ಮನೋರಥವು ಎಷ್ಟು ವಿಸ್ತಾರವಾಗಿದೆ, ಪುರುಷರ ಅಭಿಲಾಷೆಗೆ ಸಮಾಪ್ತಿಯೇ ಇರುವುದಿಲ್ಲ. ಸಾವಿರಾರು ವರ್ಷಗಳಾದಾಗ್ಯೂ, ಮನೋರಥವು ಪೂರ್ತಿಯಾಗುವುದಿಲ್ಲ. ಮನೋಭಿಲಾಷೆಗಳು ಪೂರ್ತಿಯಾದಾಗ್ಯೂ ಪುನಃಪುನಃ ಮನೋರಥವು ಹೊಸ ಹೊಸದಾಗಿ ಹುಟ್ಟುತ್ತಲೇ ಇರುವುದು. ನನಗೆ ನೂರೈವತ್ತು ಪುತ್ರರು ಹುಟ್ಟಿ ದರು. ವೃದ್ಧಿಯಾದರು, ವಿವಾಹಿತರಾದರು, ಪುತ್ರವಂತರಾದರು. ಇವರುಗಳ ಪುತ್ರರನ್ನೂ ಸಹ ನೋಡಬೇಕೆಂದು ನನ್ನ ಮನೋರಥವಿರುವುದು. ಪೌತ್ರರನ್ನೂ ಸಹ ನೋಡಿದಮೇಲೆ ಮತ್ಯಾವ ಅಭಿಲಾಷೆಯುಂಟಾಗುವುದೋ ? ಇವುಗಳೆಲ್ಲ ವನ್ನೂ ನೋಡಿದರೆ ಮರಣಾಂತವಾಗಿ ಮನೋರಥಗಳು ಪೂರ್ತಿಯಾಗಲಾರವು. ಆದುದರಿಂದ ಪಾರಮಾರ್ಥವಿಷಯಕ್ಕೆ ಅವಕಾಶವೇ ಇರುವುದಿಲ್ಲ. ಜಲದಲ್ಲಿ ವಾಸಮಾಡತಕ್ಕ ಕಾಲದಲ್ಲಿ ಮತ್ಸ್ಯವು ನನ್ನ ತಪೋಭಂಗಕ್ಕೆ ಕಾರಣವಾಗಿ ಅಲ್ಪಸುಖಾಪೇಕ್ಷೆಯಿಂದ ನಾನು ದಾರಪರಿಗ್ರಹಮಾಡಿ, ತಪಸ್ಸನ್ನೆಲ್ಲಾ ನಾಶ ಮಾಡಿಕೊಂಡನು. ಯೋಗಿಗಳಿಗೆ ನಿಸ್ಸಂಗದಿಂದ ಮೋಕ್ಷವಾಗುವುದು. ಸಂಗದಿಂದ ಅನೇಕ ದೋಷಗಳುಂಟಾಗುವುದು. ಈ ಕಾರಣಗಳಿಂದ ನಾನು ತಪಸ್ಸನ್ನು ಮಾಡಿ ಪರಮಾತ್ಮನಾದ ಶ್ರೀಮನ್ನಾರಾಯಣನ ಚರಣಾರವಿಂದವನ್ನು ಹೊಂದುವೆನು. ಈ ಪ್ರಕಾರ ಸೌಭರಿಯು ಮನಸ್ಸಿನಲ್ಲಿ ಆಲೋಚಿಸಿ ಸಕಲಸಂಪತ್ತುಗಳನ್ನೂ ಪುತ್ರರಲ್ಲಿ ಬಿಟ್ಟು, ಸಕಲಭಾರ್ಯಾಸಹಿತನಾಗಿ, ವನವನ್ನು ಪ್ರವೇಶಮಾಡಿ, ವನದಲ್ಲಿ ವೈಖಾ ನಸವೃತ್ತಿಯಿಂದ ಭಗವಂತನನ್ನು ಆರಾಧಿಸಿ, ಸಕಲಪಾಪಮುಕ್ತನಾಗಿ, ಪರಿಪಕ್ವ ವಾದ ಮನಸ್ಸಿನಿಂದ ಅಖಿಲಕರ್ಮಕಲಾಪವಾದ, ಮರಣರಹಿತವಾದ, ಅವಿ ಕಾರವಾದ, ಯಾವಾಗಲೂ ಹುಟ್ಟದಿರತಕ್ಕ ಅಚ್ಯುತನ ಪದವನ್ನು ಹೊಂದಿದನು.

ಮಾಂಧಾತ್ರೋಪಾಖ್ಯಾನವನ್ನೂ, ಸೌಭರಿವೃತ್ತಾಂತವನ್ನೂ ಸಹ ಕೇಳಿದವರಿಗೂ ಹೇಳಿದವರಿಗೂ ಸಹ ಸಕಲ ಇಷ್ಟಾರ್ಥವುಂಟಾಗುವುದು.”

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಎರಡನೆಯ ಅಧ್ಯಾಯವು ಸಮಾಪ್ತಃ

ಮೂರನೆಯ ಅಧ್ಯಾಯವು

“ಮಾಂಧಾತೃಚಕ್ರವರ್ತಿಯ ಪುತ್ರಸಂತತಿಯನ್ನು ಹೇಳುತ್ತೇನೆ: ಮಾಂಧಾತೃ ಪುತ್ರನಾದ ಅಂಬರೀಷನಿಗೆ ಯುವನಾಶ್ವನೂ, ಯುವನಾಶ್ವನಿಗೆ ಹರಿತನೂ, ಹರಿತನಿಗೆ ಆಂಗೀರಸನಾಮಕರಾದ ಹಾರೀತರೂ ಸಹ ಹುಟ್ಟಿದರು. ಇವರುಗಳು ಗೋತ್ರಪ್ರವರ ಋಷಿಗಳಾದರು. ರಸಾತಲದಲ್ಲಿ ಮೌನೇಯನಾಮಕರಾದ ಗಂಧರ್ವರು ವಾಸಮಾಡುತ್ತಿದ್ದರು. ಆರುಕೋಟಿಸಂಖ್ಯಾಕರಾದ ಮೌನೇಯ ಗಂಧರ್ವರು ಸರ್ಪಗಳ ಕುಲವನ್ನು ನಾಶಮಾಡಿ, ಅನೇಕ ರತ್ನಗಳನ್ನು ಅಪಹರಿಸಿ ರತ್ನಾಧಿಪತಿಗಳಾದರು. ಗಂಧರ್ವರ ಪರಾಕ್ರಮದಿಂದ ಹತಶೇಷರಾದ ಸರ್ಪೇಶ್ವರರು, ಭಗವಂತನಾದ ಶ್ರೀಮನ್ನಾರಾಯಣನನ್ನು ಸ್ತೋತ್ರಮಾಡಲು, ಸ್ತೋತ್ರಾವಸಾನ ದಲ್ಲಿ ಅಶೇಷದೇವೇಶನಾದ, ಪುಂಡರೀಕನಯನನಾದ, ಕ್ಷೀರಾಬ್ಧಿಶಾಯಿಯಾದ ಶ್ರೀಮನ್ನಾರಾಯಣನು ಯೋಗನಿದ್ರೆಯಿಂದ ಎಚ್ಚರಗೊಂಡು, ಸರ್ಪೇಶ್ವರನನ್ನು ಕುರಿತು ಹೇಳುತ್ತಾನೆ: “ಎಲೈ ಸರ್ಪಶ್ರೇಷ್ಠರೇ! ನಿಮಗೆ ಗಂಧರ್ವರಿಂದ ಉಂಟಾಗಿರತಕ್ಕ ಭಯವನ್ನು ನಾನು ಮಾಂಧಾತೃಪುತ್ರನಾದ ಪುರುಕುತ್ಸನ ದೇಹದಲ್ಲಿ ಪ್ರವೇಶಿಸಿ, ಪುರುಕುತ್ಸನ ಮೂಲಕ ಪರಿಹಾರಮಾಡುತ್ತೇನೆಂಬುದಾಗಿ” ಹೇಳಿದ ಭಗವಂತನ ಮಾತನ್ನು ಕೇಳಿ, ನಾಗಗಳು ಶ್ರೀಮನ್ನಾರಾಯಣನಿಗೆ ನಮಸ್ಕಾರಮಾಡಿ, ಪುನಃ ನಾಗಲೋಕವನ್ನು ಹೊಂದಿ, ನಾಗೇಂದ್ರನಿಗೆ ತಂಗಿ ಯಾದ ಪುರುಕುತ್ಸವಿನ ಪತ್ನಿಯಾದ ನರ್ಮದಾ ಎಂಬುವಳಿಗೆ ಪುರುಕುತ್ಸನನ್ನು ನಾಗಲೋಕಕ್ಕೆ ಕರೆದುಕೊಂಡುಬರುವ ಹಾಗೆ ಪ್ರೇರಿಸಿದರು. ನರ್ಮದೆಯು ಭ್ರಾತೃಕಾರ್ಯಾರ್ಥವಾಗಿ ಪತಿಯಾದ ಪುರುಕುತ್ಸನನ್ನು ನಾಗಲೋಕಕ್ಕೆ ಕರೆದು ಕೊಂಡು ಬಂದಳು. ಆಗ ಪುರುಕುತ್ಸನು ಭಗವತ್ತೇಜೋವಿಶಿಷ್ಟನಾಗಿ, ಗಂಧರ್ವ ರನ್ನು ನಾಶಮಾಡಿ, ನಾಗೇಂದ್ರನಿಗೆ ಸಂತೋಷವನ್ನುಂಟುಮಾಡಿ, ತನ್ನ ಪಟ್ಟಣಕ್ಕೆ ಹಿಂತಿರುಗಿದನು. ಸರ್ವನಾಗಾಧಿಪತಿಗಳು ನರ್ಮದೆಗೆ ವರವನ್ನು

ಕೊಡುತ್ತಾರೆ: "ಓ ನರ್ಮದೆಯೇ, ನಿನ್ನನ್ನು ಯಾರು ಪ್ರತಿದಿವಸವೂ ಸ್ಮರಿಸುತ್ತಾರೆಯೋ, ಅವರಿಗೆ ಸರ್ಪಭಯವಿರುವುದಿಲ್ಲ. ಹಗಲು, ರಾತ್ರಿ, ಕತ್ತಲೆ, ಕಾಡು ಇತ್ಯಾದಿ ಸ್ಥಳಗಳಲ್ಲಿ ನರ್ಮದೆಯನ್ನು ಧ್ಯಾನಮಾಡಿದವರಿಗೆ ಸರ್ಪಭಯವಿರುವುದಿಲ್ಲ. ಒಂದುವೇಳೆ ಸರ್ಪದಷ್ಟವಾದರೂ ವಿಷವು ವ್ಯಾಪಿಸುವುದಿಲ್ಲ. ಈ ರೀತಿ ವರವನ್ನು ಕೊಟ್ಟುದು ಅಲ್ಲದೇ, ಪುರುಕುತ್ಸನ ಸಂತತಿಯು ವಿಚ್ಛೇದವಾಗುವುದಿಲ್ಲವೆಂದು ನರ್ಮದೆಗೆ ನಾಗೇಂದ್ರನು ವರವನ್ನು ಕೊಟ್ಟನು. ಪುರುಕುತ್ಸನಿಗೆ ನರ್ಮದೆಯಲ್ಲಿ ತ್ರಸದಸ್ಯನು ಹುಟ್ಟಿದನು. ತ್ರಸದಸ್ಯನಿಗೆ ಅನರಣ್ಯನು ಹುಟ್ಟಿದನು. ಅನರಣ್ಯನು ರಾವಣನ ದಿಗ್ವಿಜಯದಲ್ಲಿ ಲೋಕಾಂತರವನ್ನು ಹೊಂದಿದನು. ಅನರಣ್ಯನಿಗೆ ಪೃಷದಶ್ವನೂ, ಇವನಿಗೆ ಹರ್ಯಶ್ವನೂ, ಹರ್ಯಶ್ವನಿಗೆ ಹಸ್ತನೂ, ಹಸ್ತನಿಗೆ ವಸುಮನಸನೂ, ಇವನಿಗೆ ತ್ರಿಧನ್ವನೂ, ತ್ರಿಧನ್ವನಿಗೆ ತ್ರೈಯ್ಯಾರುಣಿಯೂ, ತ್ರೈಯ್ಯಾರುಣಿಗೆ ಸತ್ಯವ್ರತನೂ ಸಹ ಹುಟ್ಟಿದರು. ಈ ಸತ್ಯವ್ರತನಿಗೆ ತ್ರಿಶಂಕು ಎಂಬುದಾಗಿ ಹೆಸರು. ತ್ರಿಶಂಕುವೆಂದರೆ ಮೂರು ವಿಧವಾದ ದೋಷಗಳುಳ್ಳವನು. ಅವು ಯಾವುವೆಂದರೆ, ಸತ್ಯವ್ರತನು ವಿವಾಹಯೋಗ್ಯಳಾದ ಕನ್ನಿಕೆಯನ್ನು ಅಪಹಾರಮಾಡಿದುದರಿಂದ ತಂದೆಗೆ ಕೋಪವುಂಟಾಗಿ ಬ್ರಾಹ್ಮಣಕನ್ನಿಕೆಯನ್ನು ತೆಗೆದುಕೊಂಡು ಹೋದ ಅಪರಾಧಕ್ಷಮಾಪಣೆಯನ್ನು ಕೇಳು ಎಂಬುದಾಗಿ ತಂದೆಯು ಹೇಳಿದ ಮಾತನ್ನು ಕೇಳದೆ ಇದ್ದುದರಿಂದ ತಂದೆಯು ಚಂಡಾಲನಾಗು ಎಂದು ಶಾಪವನ್ನು ಕೊಟ್ಟನು, ಇದೊಂದು ದೋಷ; ಗುರುವಾದ ವಸಿಷ್ಠ ಮಹರ್ಷಿಯ ಹಸುವನ್ನು ನಾಶಮಾಡಿದುದೊಂದು ದೋಷ; ಮಾಂಸವನ್ನು ಪ್ರೋಕ್ಷಣೆಮಾಡದೆ ತಿಂದುದೊಂದು ದೋಷ; ಈ ಮೂರು ದೋಷಗಳಿಂದ ಕೂಡಿರುವನಾದುದರಿಂದ ಇವನಿಗೆ ತ್ರಿಶಂಕು ಎಂಬ ಹೆಸರುಂಟಾಯಿತು. ತಂದೆಯ ಶಾಪದಿಂದ ಚಂಡಾಲನಾದನು. ಚಂಡಾಲದೋಷನಿವೃತ್ತ್ಯರ್ಥವಾಗಿ ಜಾಹ್ನವೀ ತೀರದಲ್ಲಿ ಹನ್ನೆರಡು ವರ್ಷಗಳ ಕಾಲ ಆಲದಮರದಲ್ಲಿ ವಾಸಮಾಡುತ್ತಾ, ಮೃಗ ಮಾಂಸವನ್ನು ತಿನ್ನುತ್ತಿದ್ದನು. ಈ ತ್ರಿಶಂಕುವು ವಿಶ್ವಾಮಿತ್ರನ ಅನುಗ್ರಹಕ್ಕೆ ಪಾತ್ರನಾಗಿ ವಿಶ್ವಾಮಿತ್ರನಿಂದ ಸಶರೀರಸ್ವರ್ಗವನ್ನು ಹೊಂದಿದನು. ತ್ರಿಶಂಕುವಿಗೆ ಹರಿಶ್ಚಂದ್ರನೂ, ಹರಿಶ್ಚಂದ್ರನಿಗೆ ರೋಹಿತಾಶ್ವನೂ, ರೋಹಿತಾಶ್ವನಿಗೆ ಹರಿತನೂ, ಇವನಿಗೆ ಚಂಚು ಎಂಬುವನೂ, ಚಂಚುವಿಗೆ ವಿಜಯವಸುದೇವರೂ, ವಿಜಯನಿಗೆ ರುರುಕನೂ, ರುರುಕನಿಂದ ವೃಕನೂ, ವೃಕನಿಂದ ಬಾಹುವೂ ಸಹ ಹುಟ್ಟಿದರು. ಬಾಹುವು ಹೈಹಯ, ತಾಳಜಂಘರೆಂಬ ಕ್ಷತ್ರಿಯರಿಂದ ಪರಾಜಿತನಾಗಿ ಗರ್ಭಿಣಿಯಾದ ಪತ್ನಿಯಿಂದ ಕೂಡಿ ಕಾಡಿಗೆ ಪ್ರಯಾಣ ಮಾಡಿದನು. ಬಾಹುವಿನ ಎರಡನೆಯ ಹೆಂಡತಿಗೆ ಅಸಮಾಧಾನವುಂಟಾಗಿ ಗರ್ಭವು ನಾಶವಾಗುವ ಹಾಗೆ

ವಿಷವನ್ನು ಕೊಟ್ಟಳು. ಗರ್ಭವು ಏಳುವರ್ಷಕಾಲ ಹೊಟ್ಟೆಯಲ್ಲಿಯೇ ಇತ್ತು. ಬಾಹುವು ವೃದ್ಧಾಪ್ಯದಿಂದ ಔರ್ವಋಷಿಯ ಆಶ್ರಮದ ಸಮೀಪದಲ್ಲಿ ಲೋಕಾಂತರವನ್ನು ಹೊಂದಿದನು. ಇವನ ಹೆಂಡತಿಯೂ ಸಹ ಗಂಡನ ಜೊತೆಯಲ್ಲಿ ಪ್ರಾಣವನ್ನು ಬಿಡಬೇಕೆಂದು ಚಿತೆಯನ್ನು ಮಾಡಿ ಸಹಗಮನಕ್ಕೆ ಉದ್ಯುಕ್ತಳಾದಳು. ಇದನ್ನು ನೋಡಿ ಔರ್ವಋಷಿಯು ಇವಳ ಸಮೀಪಕ್ಕೆ ಬಂದು, ಓ ಸ್ತ್ರೀಯೇ! ನಿನ್ನ ಗರ್ಭವು ಅಖಿಲಭೂಮಂಡಲಪತಿಯೂ, ಅತಿವೀರ್ಯಪರಾಕ್ರಮವೂ, ಅನೇಕ ಯಜ್ಞಕರ್ತೃವೂ, ಶತ್ರುಪಕ್ಷಕ್ಷಯಕಾರಕವೂ, ಚಕ್ರವರ್ತಿಯೂ ಸಹ ಆಗುವುದು. ಆದುದರಿಂದ ನೀನು ಈ ಸಾಹಸಕೃತ್ಯವನ್ನು ಮಾಡಬೇಡವೆಂದು ತಡೆದು ಅವಳನ್ನು ತನ್ನ ಆಶ್ರಮಕ್ಕೆ ಕರೆದುಕೊಂಡು ಬಂದನು. ಸ್ವಲ್ಪ ದಿವಸವಾದನಂತರ ಗರ (ವಿಷ) ಸಹಿತನಾದ ಆ ತೇಜಸ್ವಿಯಾದ ಬಾಲಕನು ಹುಟ್ಟಿದನು. ಬಾಲಕನಿಗೆ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಿ ವಿಷಸಹಿತನಾಗಿ ಹುಟ್ಟಿದುದರಿಂದ ಸಗರನೆಂದು ನಾಮಕರಣವನ್ನು ಮಾಡಿದನು. ಅನಂತರ ಉಪನಯನ ಸಂಸ್ಕಾರವನ್ನು ಮಾಡಿ, ಸಕಲವೇದಗಳನ್ನೂ ವೇದಾಂಗಗಳನ್ನೂ ಉಪವೇದಗಳನ್ನೂ ಸಹ ಅಭ್ಯಾಸಮಾಡಿಸಿದನು. ಸಗರನು ಅಸ್ತ್ರಶಸ್ತ್ರಾದಿ ಸಕಲವಿದ್ಯಾಪಾರಂಗತನಾಗಿ ಒಂದಾನೊಂದು ದಿವಸ ತನ್ನ ತಾಯಿಯನ್ನು ಕೇಳುತ್ತಾನೆ: "ಅಮ್ಮಾ, ನಮ್ಮ ತಂದೆ ಯಾರು? ಎಲ್ಲಿರುವನು?" ಎಂದು ಕೇಳಲು, ತಾಯಿಯು ನಡೆದ ವೃತ್ತಾಂತವೆಲ್ಲವನ್ನೂ ಹೇಳಿದಳು. ಅದನ್ನು ಕೇಳಿ ತನ್ನ ಪಿತೃರಾಜ್ಯವನ್ನು ಅಪಹಾರಮಾಡಿದ ಹೈಹಯಾದಿಗಳನ್ನು ನಾಶಮಾಡಿ ರಾಜ್ಯವನ್ನು ಹೊಂದಬೇಕೆಂದು ಪ್ರತಿಜ್ಞೆಮಾಡಿ ಹೈಹಯ ತಾಳಜಂಘರನ್ನು ನಾಶಮಾಡಿದನು. ಶಕ, ಯವನ, ಕಾಂಭೋಜ, ಪೌರಹ, ಪಪ್ಲವ ಇವರುಗಳನ್ನೂ ಸಹ ಹೊಡೆಯತಕ್ಕ ಕಾಲದಲ್ಲಿ ಇವರು ಸಗರನ ಹೊಡೆತವನ್ನು ತಡೆಯಲಾರದೆ ವಸಿಷ್ಠರನ್ನು ಮರೆಹೊಕ್ಕರು. ಆಗ ವಸಿಷ್ಠರು ಜೀವನ್ಮೃತರಾದ ಶಕಾದಿಗಳನ್ನು ನೋಡಿ, ಸಗರನಿಗೆ ಹೇಳುತ್ತಾರೆ: "ಓ ವತ್ಸನಾದ ಸಗರನೇ, ಪ್ರಾಣಮಾತ್ರ ಉಳಿದ ಅವಶಿಷ್ಟರಾದ ಇವರನ್ನು ಕೊಲ್ಲುವುದು ಧರ್ಮವಲ್ಲವೆಂಬುದಾಗಿ" ಹೇಳಲು, ಸಗರನು ಗುರುವಚನವನ್ನು ಅಭಿನಂದಿಸಿ, ಶಕಾದಿಗಳಿಗೆ ವಿಕಾರವೇಷವನ್ನು ಕಲ್ಪಿಸಿದನು. ಯವನರಿಗೆ ತಲೆಯಲ್ಲಿ ಕೇಶವನ್ನು ಇಡಕೂಡದೆಂತಲೂ, ಶಕರಿಗೆ ಅರ್ಧಮುಂಡ ತಲೆಯುಳ್ಳವರಾಗಿರಬೇಕೆಂತಲೂ, ಪಾರದರು ಕೇಶವನ್ನು ತೆಗೆಯಕೂಡದೆಂತಲೂ, ಪಪ್ಲವರು ಮೀಸೆಯನ್ನಿಡಬೇಕೆಂತಲೂ, ಇವರುಗಳು ವೇದಾಧ್ಯಯನವನ್ನೂ, ವೇದೋಕ್ತಕರ್ಮಗಳನ್ನೂ ಸಹ ಮಾಡದೆ ಇರಬೇಕೆಂತಲೂ ಸಹ ಕಟ್ಟುಮಾಡಿದನು. ಶಕಾದಿಗಳು ಆತ್ಮಧರ್ಮಪರಿತ್ಯಾಗ ಮಾಡಿದುದರಿಂದ ಬ್ರಾಹ್ಮಣ್ಯದಿಂದ ಬಿಡಲ್ಪಟ್ಟವರಾಗಿ ಮ್ಲೇಂಛತ್ವವನ್ನು ಹೊಂದಿ

ದರು. ಸಗರನು ಪಿತೃರಾಜ್ಯವನ್ನು ಪಡೆದು ಸಪ್ತದ್ವೀಪ ಪರಿವೃತವಾದ ಭೂಮಿಗೆ ಚಕ್ರವರ್ತಿಯಾಗಿ ರಾಜ್ಯವನ್ನು ಪರಿಪಾಲಿಸಿದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಮೂರನೆಯ ಅಧ್ಯಾಯವು ಸಮಾಪ್ತಃ

ನಾಲ್ಕನೆಯ ಅಧ್ಯಾಯವು

"ಕಾಶ್ಯಪನ ಮಗಳಾದ ಸುಮತಿಯೂ, ವಿದರ್ಭರಾಜನ ಮಗಳಾದ ಕೇಶಿನಿಯೂ ಸಹ ಸಗರನಿಗೆ ಪತ್ನಿಯರಾದರು. ಸಗರನಿಗೆ ಬಹಳ ದಿವಸದವರೆಗೆ ಮಕ್ಕಳಿಲ್ಲದೆ ಇದ್ದುದರಿಂದ ಕೇಶಿನೀ ಸುಮತಿಗಳಿಬ್ಬರೂ ಔರ್ವ ಋಷಿಯನ್ನು ಆರಾಧಿಸಿದರು. ಆಗ ಆ ಋಷಿಯು ದಯಾಪರನಾಗಿ ವರವನ್ನು ಕೊಟ್ಟನು. ಒಬ್ಬಳು ವಂಶಕರನಾದ ಮಗನನ್ನೂ ಮತ್ತೊಬ್ಬಳು ಅರವತ್ತುಸಾವಿರ ಮಕ್ಕಳನ್ನೂ ಸಹ ಪಡೆಯುತ್ತೀರಿ ಎಂಬುದಾಗಿ ಹೇಳಲು, ಕೇಶಿನೀ ಸುಮತಿಗಳು ವಂಶಕರನಾದ ಮಗನನ್ನು ಯಾರು ಪ್ರಸವಿಸುವರು, ಅರವತ್ತುಸಾವಿರ ಮಕ್ಕಳುಗಳನ್ನು ಯಾರು ಪ್ರಸವಿಸುವರೆಂದು ಋಷಿಯನ್ನು ಕೇಳಲು, ಆ ಮಾತಿಗೆ ಋಷಿಯು ನಿಮಗೆ ಯಾವುದು ಇಷ್ಟವೋ ಅದನ್ನು ಹೇಳಿ ಎನಲು, ಕೇಶಿನಿಯು ವಂಶಕರನಾದ ಮಗನೊಬ್ಬನೇ ಸಾಕೆಂಬುದಾಗಿಯೂ, ಸುಮತಿಯು ಅರವತ್ತುಸಾವಿರ ಮಕ್ಕಳುಗಳು ಆಗಬೇಕೆಂತಲೂ ಸಹ ಅಪೇಕ್ಷಿಸಿದರು. ಅದೇ ಪ್ರಕಾರ ಋಷಿಯು ಅನುಮೋದಿಸಲು, ಕೇಶಿನಿಯು ಅಸಮಂಜನನ್ನು ಪ್ರಸವಿಸಿದಳು. ಕಾಶ್ಯಪನ ಮಗಳಾದ ಸುಮತಿಯು ಅರವತ್ತುಸಾವಿರ ಮಕ್ಕಳನ್ನು ಪ್ರಸವಿಸಿದಳು. ಅಸಮಂಜನಿಗೆ ಅಂಶುಮಂತನು ಹುಟ್ಟಿದನು. ಅಸಮಂಜನು ಬಾಲ್ಯದಿಂದಲೂ ದುರ್ಮಾರ್ಗಪ್ರವರ್ತಕನಾದುದರಿಂದ ಇವನನ್ನು ತಂದೆಯು ಪರಿತ್ಯಾಗಮಾಡಿದನು. ಅರವತ್ತುಸಾವಿರ ಮಕ್ಕಳುಗಳೂ ಸಹ ಅಸಮಂಜಸವಾದ ಕೆಲಸವನ್ನು ಅನುಸರಿಸಿದರು. ಇವರಿಂದ ಲೋಕದಲ್ಲಿ ದುರ್ಮಾರ್ಗಪ್ರವರ್ತನೆಯು ಹೆಚ್ಚಾಗುವುದೆಂದು ತಿಳಿದು ದೇವತೆಗಳು ಪುರುಷೋತ್ತಮನಾದ ಶ್ರೀಮನ್ನಾರಾಯಣನ ಅಂಶದಲ್ಲಿ ಅವತಾರಮಾಡಿದ ಕಪಿಲಮಹರ್ಷಿಯನ್ನು ನಮಸ್ಕಾರಮಾಡಿ ಸಗರಪುತ್ರರ ವಿಷಯವನ್ನು ವಿಜ್ಞಾಪಿಸಲು ಆ ಮಾತಿಗೆ ಕಪಿಲಮಹರ್ಷಿಯು ಸಗರಪುತ್ರರು ಇನ್ನು ಸ್ವಲ್ಪ ದಿವಸಗಳಲ್ಲಿ ನಾಶವಾಗುವರೆಂದು ದೇವತೆಗಳಿಗೆ ಹೇಳಿಕಳುಹಿಸಿದನು. ಇಷ್ಟರಲ್ಲಿಯೇ ಸಗರನು ಅಶ್ವಮೇಧ

ಯಾಗವನ್ನು ಮಾಡಲಾರಂಭಿಸಿ ಕುದುರೆಯನ್ನು ಬಿಟ್ಟು, ಈ ಕುದುರೆಯನ್ನು ಯಾರು ಕಟ್ಟುವರೋ ಅವರನ್ನು ಯುದ್ಧದಲ್ಲಿ ಜಯಿಸಿ ಕುದುರೆಯನ್ನು ತೆಗೆದು ಕೊಂಡು ಬಂದು ಅನಂತರ ಅಶ್ವಮೇಧಯಜ್ಞವನ್ನು ಮಾಡುವ ಪದ್ಧತಿಪ್ರಕಾರ ಕುದುರೆಯನ್ನು ಬಿಟ್ಟನು. ಈ ಕುದುರೆಯನ್ನು ಯಾರೋ ಪಾತಾಳಲೋಕಕ್ಕೆ ತೆಗೆದುಕೊಂಡು ಹೋಗಿ, ಕಪಿಲಮಹರ್ಷಿಯ ಆಶ್ರಮದ ಹಿಂಭಾಗದಲ್ಲಿರಿಸಿದರು. ಸಗರಪುತ್ರರು ಕುದುರೆಯನ್ನು ಹುಡುಕಿಕೊಂಡು ಅದರ ಹೆಜ್ಜೆಯನ್ನನುಸರಿಸಿ ಭೂಮಿಯನ್ನು ಅಗೆದು, ಪಾತಾಳಲೋಕವನ್ನು ಪ್ರವೇಶಮಾಡಿ, ಕುದುರೆಯನ್ನು ಕಂಡು, ಸಮೀಪದಲ್ಲಿ ಭಗವಂತನಾದ ಸೂರ್ಯಪ್ರಕಾಶನಾದ ಸಮಸ್ತ ದಿಕ್ಕು ಗಳನ್ನೂ ಪ್ರಕಾಶಪಡಿಸುವ ಕಪಿಲಮಹರ್ಷಿಯನ್ನು ನೋಡಿ, ಈ ದುಷ್ಟನು ನಮ್ಮ ಕುದುರೆಯನ್ನು ಕದ್ದಿರುತ್ತಾನೆ. ನಮಗೆ ಅಪಕಾರಿಯಾದವನು, ಯಜ್ಞ ವಿಘ್ನವನ್ನು ಮಾಡಿದವನು; ಇವನನ್ನು ಹೊಡೆಯಿರಿ, ಎಂಬುದಾಗಿ ಗರ್ಜನೆ ಮಾಡುತ್ತ, ಕಪಿಲಮಹರ್ಷಿಯ ಸಮೀಪಕ್ಕೆ ಬಂದರು. ಆಗ ಕಪಿಲಮಹ ರ್ಷಿಯು ಕೋಪದಿಂದ ಕಣ್ಣನ್ನು ಬಿಟ್ಟನು. ಕಣ್ಣಿನಿಂದ ಅಗ್ನಿಯು ಹೊರಟು ಸಗರಪುತ್ರರನ್ನು ಭಸ್ಮಮಾಡಿತು. ಸಗರಚಕ್ರವರ್ತಿಯು ಕುದುರೆಯನ್ನು ತರು ವುದಕ್ಕೋಸ್ಕರ ಹೋದ ತನ್ನ ಮಕ್ಕಳು ಕಪಿಲಮಹರ್ಷಿಯ ಕೋಪಾಗ್ನಿಯಿಂದ ಹತರಾದುದನ್ನು ತಿಳಿದು ಅಸಮಂಜನ ಮಗನಾದ ಅಂಶುಮಂತನನ್ನು ಕುದುರೆ ಯನ್ನು ತರುವುದಕ್ಕೋಸ್ಕರ ನಿಯಮಿಸಿದನು. ಅಂಶುಮಂತನು ಸಗರಪುತ್ರರು ಹೋದ ಮಾರ್ಗದಲ್ಲಿ ಪ್ರಯಾಣಮಾಡಿ, ಕಪಿಲಋಷಿಯನ್ನು ಕಂಡು ಭಕ್ತಿನಮ್ರ ನಾಗಿ ಮಹರ್ಷಿಗೆ ಪ್ರಣಾಮಾದಿಗಳನ್ನು ಮಾಡಿದನು. ಆಗ ಮಹರ್ಷಿಯು ಅಂಶುಮಂತನಿಗೆ ಹೇಳುತ್ತಾನೆ: "ಎಲೈ ಅಂಶುಮಂತನೇ, ಈ ಕುದುರೆಯನ್ನು ತೆಗೆದುಕೊಂಡು ಹೋಗಿ ನಿಮ್ಮ ಪಿತಾಮಹನ ಯಜ್ಞವನ್ನು ಪೂರ್ತಿಮಾಡು. ನಿನಗೆ ಏನು ಬೇಕು ಆ ವರವನ್ನು ಕೊಡುತ್ತೇನೆ, ಅಪೇಕ್ಷಿಸು" ಎಂದು ಹೇಳಲು, ಅಂಶುಮಂತನು ಭಸ್ಮರಾದ ಪಿತೃಗಳಿಗೆ ಸ್ವರ್ಗಪ್ರಾಪ್ತಿಯುಂಟಾಗುವ ಹಾಗೆ ವರವನ್ನು ಕೊಡಬೇಕೆಂದು ಪ್ರಾರ್ಥಿಸಲು; ಕಪಿಲಮಹರ್ಷಿಯು ನಿನ್ನ ಮುಮ್ಮಗನು ದೇವಲೋಕದಿಂದ ಗಂಗೆಯನ್ನು ತಂದು ಗಂಗೋದಕವನ್ನು ಭಸ್ಮ ರಾಶಿಯ ಮೇಲೆ ಬಿಡುವುದರಿಂದ ಸ್ವರ್ಗಪ್ರಾಪ್ತಿಯಾಗುವುದೆಂದು ಹೇಳಿ, ಕಪಿಲಮಹರ್ಷಿಯು ಅಂಶುಮಂತನನ್ನು ಕಳುಹಿಸಿದನು. ಅಂಶುಮಂತನು ಕುದುರೆಯನ್ನು ತೆಗೆದುಕೊಂಡು ಮಹರ್ಷಿಗೆ ಪ್ರಣಾಮವನ್ನು ಮಾಡಿ, ಸಗರ ಚಕ್ರವರ್ತಿಯ ಸಮೀಪಕ್ಕೆ ಬಂದು ಅಶ್ವಮೇಧಯಾಗವನ್ನು ಪೂರ್ತಿಗೊಳಿಸಿದನು. ಸಗರನ ಪುತ್ರರಿಂದ ಸಮುದ್ರರಾಜನು ವೃದ್ಧಿಯಾದುದರಿಂದ ಸಮುದ್ರನೂ ಕೂಡ

ಸಗರಚಕ್ರವರ್ತಿಗೆ ಮಗನ ಭಾವವನ್ನು ಹೊಂದಿದನು. ಅಂಶುಮಂತನಿಂದ ದಿಲೀಪನೂ, ದಿಲೀಪನಿಂದ ಭಗೀರಥನೂ ಹುಟ್ಟಿದರು. ಭಗೀರಥನು ಸ್ವರ್ಗಲೋಕದಿಂದ ಭೂಲೋಕಕ್ಕೆ ಗಂಗೆಯನ್ನು ತೆಗೆದುಕೊಂಡುಬಂದುದರಿಂದ ಗಂಗೆಗೆ ಭಾಗೀರಥೀ ಎಂಬುದಾಗಿ ಹೆಸರುಂಟಾಯಿತು. ಭಗೀರಥನಿಂದ ಸುಹೋತ್ರನೂ, ಸುಹೋತ್ರನಿಂದ ನಾಭಾಗನೂ, ಇವನಿಂದ ಅಂಬರೀಷನೂ, ಅಂಬರೀಷನಿಂದ ಸಿಂಧುದ್ವೀಪನೂ, ಇವನಿಂದ ಅಯುತಾಯುವೂ, ಇವನಿಂದ ಋತುಪರ್ಣನೂ ಸಹ ಹುಟ್ಟಿದರು. ಋತುಪರ್ಣನು, ನಳಚಕ್ರವರ್ತಿ ಸಹಾಯಕ್ಕಾಗಿ ಅಕ್ಷಹೃದಯವನ್ನು ತಿಳಿಸಿದನು. ಋತುಪರ್ಣನಿಂದ ಸರ್ವಕಾಮನೂ, ಇವನಿಂದ ಸುದಾಸನೂ, ಸುದಾಸನಿಂದ ಸೌದಾಸನೂ ಹುಟ್ಟಿದರು. ಈ ಸೌದಾಸನಿಗೆ ಮಿತ್ರಸಹ ಎಂಬುದಾಗಿಯೂ ಸಹ ಹೇಳುತ್ತಾರೆ. ಸೌದಾಸನು ಬೇಟೆಗೋಸ್ಕರ ಕಾಡಿನಲ್ಲಿ ತಿರುಗಾಡತಕ್ಕ ಕಾಲದಲ್ಲಿ ಎರಡು ಹುಲಿಗಳನ್ನು ಕಂಡನು. ಆ ಹುಲಿಗಳು ಕಾಡಿನಲ್ಲಿ ಒಂದು ಮೃಗವೂ ಇಲ್ಲದಂತೆ ಮಾಡಿದ್ದವು. ಅವುಗಳಲ್ಲಿ ಒಂದು ಹುಲಿಯನ್ನು ಸೌದಾಸನು ಬಾಣಗಳಿಂದ ಸಂಹರಿಸಿದನು. ಸತ್ತುಹೋದ ಹುಲಿಯು ಮಹಾಭಯಂಕರನಾದ ರಾಕ್ಷಸನಾದನು. ಮತ್ತೊಂದು ಹುಲಿಯು ನಿನಗೆ ಪ್ರತಿಕ್ರಿಯೆಯನ್ನು ಮಾಡುತ್ತೇನೆಂದು ಹೇಳಿ, ಅಂತರ್ಧಾನವನ್ನು ಹೊಂದಿತು. ಆಗ ಸೌದಾಸನು ಸ್ವಲ್ಪ ದಿವಸ ಕಳೆದನಂತರ ಯಜ್ಞವನ್ನು ಮಾಡಿದನು. ಯಜ್ಞದ ಮಧ್ಯದಲ್ಲಿ ಆಚಾರ್ಯರಾದ ವಸಿಷ್ಠಮಹರ್ಷಿಯು ವಿರಾಮಕಾಲವಾದುದರಿಂದ ಹೊರಗೆ ಸ್ವಲ್ಪಹೊತ್ತು ಸಂಚಾರಮಾಡಿಕೊಂಡು ಬರಬೇಕೆಂದು ಹೊರಟುಹೋದರು. ಆ ಕಾಲದಲ್ಲಿ ರಾಕ್ಷಸನು ವಸಿಷ್ಠವೇಷದಿಂದ ಯಜ್ಞಶಾಲೆಗೆ ಬಂದು ಸೌದಾಸನಿಗೆ ಹೇಳುತ್ತಾನೆ: ಎಲೈ ಸೌದಾಸನೇ? ಯಜ್ಞವೆಲ್ಲವೂ ಪೂರ್ತಿಯಾದನಂತರ ನನಗೆ ನರಮಾಂಸವನ್ನು ಕೊಡಬೇಕೆಂದು ಹೇಳಿ ನಾನು ಪುನಃ ಜಾಗ್ರತೆಯಾಗಿ ಬರುತ್ತೇನೆ—ಅಷ್ಟುಹೊತ್ತಿಗೆ ಸಿದ್ಧಪಡಿಸೆಂದು ಹೇಳಿ ಹೊರಟುಹೋದನು. ಪುನಃ ರಾಕ್ಷಸನು ಅಡಿಗೆಯವನ ವೇಷದಿಂದ ಮಾನುಷಮಾಂಸವನ್ನು ರಾಜಾಜ್ಞೆಯಿಂದ ಸಿದ್ಧಮಾಡಿ ರಾಜನ ಬಳಿಯಲ್ಲಿ ತಂದಿರಿಸಿದನು. ಆಗ ಸೌದಾಸನು ಹಿರಣ್ಯಪಾತ್ರೆಯಲ್ಲಿದ್ದ ಮಾಂಸವನ್ನು ತೆಗೆದುಕೊಂಡು ವಸಿಷ್ಠನ ಆಗಮನವನ್ನೇ ಕಾದುಕೊಂಡಿದ್ದ ಕಾಲದಲ್ಲಿ ವಸಿಷ್ಠನು ಬಂದನು. ಆಗ ವಸಿಷ್ಠನಿಗೆ ಮಾಂಸವನ್ನು ಕೊಡಲು, ವಸಿಷ್ಠನು ಈ ದುಷ್ಟನಾದ ರಾಜನು ದುಃಸ್ವಭಾವದಿಂದ ಮಾಂಸವನ್ನು ನನಗೆ ಕೊಡಲು ಕಾರಣವೇನೆಂದು ಧ್ಯಾನಪರನಾಗಿ, ನರಮಾಂಸವೆಂದು ತಿಳಿದು ಕೋಪಯುಕ್ತನಾಗಿ, ಶಾಪೋದಕವನ್ನು ತೆಗೆದುಕೊಂಡು, ಎಲೈ ಸೌದಾಸನೇ, ನಮ್ಮಂತಹ ತಪೋನಿಧಿ

ಗಳಿಗೆ ನರಮಾಂಸವನ್ನು ಕೊಟ್ಟುದರಿಂದ ನೀನು ರಾಕ್ಷಸನಾಗು ಎಂಬುದಾಗಿ ಹೇಳಲು, ಅದಕ್ಕೆ ಸೌದಾಸನು, ಓ ಸ್ವಾಮಿಯೇ, ನೀನು ನರಮಾಂಸವನ್ನು ನನಗೆ ಕೊಡು ಎಂಬುದಾಗಿ ಹೇಳಿದುದರಿಂದ ಸಿದ್ಧಪಡಿಸಿದೆನೆಂದು ಹೇಳಲು; ವಸಿಷ್ಠನು, ಏನಂದೇ, ನಾನು ನಿನಗೆ ಹೇಳಿದೆನೇ? ಎಂದು ಗಾಬರಿಯುಕ್ತನಾಗಿ, ಪುನಃ ಸಮಾಧಿಯಿಂದ ರಾಕ್ಷಸನು ಮಾಡಿದ ಮಾಯೆಯು ಎಂದು ತಿಳಿದು, ಇದನ್ನು ಸೌದಾಸನಿಗೆ ಹೇಳಿದನು. ಆಗ ಸೌದಾಸನು ನಿರಪರಾಧಿಯಾದ ನನಗೆ ಶಾಪವನ್ನು ಕೊಟ್ಟೆಯಲ್ಲಾ ಎಂದು ಆಗ್ರಹಪಟ್ಟು ತಾನೂ ಕೂಡ ವಸಿಷ್ಠನಿಗೆ ಶಾಪೋದಕವನ್ನು ತೆಗೆದುಕೊಂಡು ಶಾಪವನ್ನು ಕೊಡಲು ಉದ್ಯುಕ್ತಪಟ್ಟಕಾಲ ದಲ್ಲಿ ಸೌದಾಸನ ಪತ್ನಿಯಾದ ಮದಯಂತಿಯು ಆತುರದಿಂದ ಪತಿಯ ಸಮೀ ಪಕ್ಕೆ ಬಂದು ಆಚಾರ್ಯನಿಗೆ ಶಾಪವನ್ನು ಕೊಡುವುದು ಅನುಚಿತವೆಂದು ಪತಿಗೆ ಸಮಾಧಾನವನ್ನು ಮಾಡಿದಳು. ಸೌದಾಸನು ಪತ್ನಿಯ ಇಷ್ಟದ ಪ್ರಕಾರ ವಸಿಷ್ಠನಿಗೆ ಶಾಪವನ್ನು ಕೊಡದೆ ಶಾಪೋದಕವನ್ನು ನೆಲದ ಮೇಲೆ ಹಾಕಿದರೆ ಪೈರುಗಳು ನಾಶವಾಗುವುದೆಂತಲೂ, ಅಂತರಿಕ್ಷದಲ್ಲಿ ಹಾಕಿದರೆ ಮೇಘಗಳು ನಾಶವಾಗುವುದೆಂತಲೂ ಯೋಚಿಸಿ, ತನ್ನ ಕಾಲ ಮೇಲೆ ಶಾಪೋದಕವನ್ನು ಹಾಕಿಕೊಂಡನು. ಆಗ ಅವನ ಕಾಲುಗಳು ಕಲ್ಮಷಯುಕ್ತವಾದವು—ಆದ್ದರಿಂದ ಅವನಿಗೆ ಕಲ್ಮಾಷಪಾದರಾಜನೆಂದು ಪ್ರಖ್ಯಾತಿಯುಂಟಾಯಿತು. ವಸಿಷ್ಠಋಷಿಯು ರಾಜನಿಗೆ ನಿಷ್ಕಾರಣವಾಗಿ ರಾಕ್ಷಸತ್ವಶಾಪವನ್ನು ಕೊಟ್ಟೆನೆಂದು ಕನಿಕರದಿಂದ ಅನುಗ್ರಹಪೂರ್ವಕವಾಗಿ, ಎಲೈ ಸೌದಾಸನೇ, ನೀನು ಹನ್ನೆರಡು ವರ್ಷಗಳ ಕಾಲ ಮಾತ್ರ ನರಮಾಂಸವನ್ನು ತಿನ್ನುತ್ತಿರು ಎಂದು ಅನುಗ್ರಹಮಾಡಿದನು.

ಮರುದಿವಸಗಳಮೇಲೆ ಭೋಜನಕಾಲದಲ್ಲಿ ಕಲ್ಮಾಷಪಾದನು ರಾಕ್ಷಸನಾಗಿ ಕಾಡಿನಲ್ಲಿ ತಿರುಗಾಡುತ್ತಾ ಮಾನುಷಮಾಂಸವನ್ನು ತಿನ್ನುತ್ತಾ ಇರತಕ್ಕ ಕಾಲ ದಲ್ಲಿ, ಒಂದಾನೊಂದು ದಿವಸ ಒಬ್ಬ ಬ್ರಾಹ್ಮಣನು ಪತ್ನಿಗೆ ಋತುಕಾಲವಾದುದ ರಿಂದ ಪತ್ನಿಯಲ್ಲಿ ಕ್ರೀಡಿಸುವ ಕಾಲದಲ್ಲಿ ಕಲ್ಮಾಷಪಾದನು ಭಯಂಕರವಾದ ರಾಕ್ಷಸವೇಷದಿಂದ ದಂಪತಿಗಳ ಸಮೀಪಕ್ಕೆ ಬರಲು ಬ್ರಾಹ್ಮಣದಂಪತಿಗಳು ಭಯದಿಂದ ಕ್ರೀಡೆಯನ್ನು ಬಿಟ್ಟು ಓಡಿದರು. ಆಗ ಕಲ್ಮಾಷನು ಓಡಿ ಬ್ರಾಹ್ಮಣ ನನ್ನು ಹಿಡಿದುಕೊಂಡನು. ಆಗ ಬ್ರಾಹ್ಮಣಸ್ತ್ರೀಯು, ಎಲೈ ಕಲ್ಮಾಷಪಾದ ರಾಜನೇ! ಸೌದಾಸನೇ, ಇಕ್ಷ್ವಾಕುಕುಲತಿಲಕನೇ! ಅನುಗ್ರಹಮಾಡು. ಹೇ ಮಿತ್ರಸಖನೇ! ಸ್ತ್ರೀಧರ್ಮಸುಖಾಜ್ಞನಾದವನೇ! ನಾನು ಅಕೃತಾರ್ಥಳಾಗಿರು ವುದರಿಂದ ನನ್ನ ಪತಿಯನ್ನು ಹಿಂಸೆಮಾಡಬೇಡವೆಂದು ಅನೇಕ ಪ್ರಕಾರವಾಗಿ ರೋದನಮಾಡಿದಾಗ್ಯೂ ಕಾಡಿನಲ್ಲಿ ಹುಲಿಯು ಪಶುಗಳನ್ನು ತಿನ್ನುವ ಹಾಗೆ

ಕಲ್ಮಾಷನು ಬ್ರಾಹ್ಮಣನನ್ನು ತಿಂದನು. ಅನಂತರ ಬ್ರಾಹ್ಮಣಸ್ತ್ರೀಯು ಮಹಾ ದುಃಖದಿಂದ ಕೋಪಗೊಂಡು ಈ ಕಲ್ಮಾಷನನ್ನು ಶಪಿಸಿದಳು. "ನಾನು ಯಾವ ಪ್ರಕಾರ ಕಾಮದಲ್ಲಿ ಅತೃಪ್ತಳಾಗಿ ಪತಿದುಃಖವನ್ನು ಹೊಂದಿದೆನೋ ಅದೇ ಪ್ರಕಾರ ನೀನೂ ಪತ್ನಿಯೊಡನೆ ಭೋಗಿಸುವ ಕಾಲದಲ್ಲಿ ಮರಣವನ್ನುಹೊಂದು" ಎಂದು ಶಾಪವನ್ನು ಕೊಟ್ಟು ಅಗ್ನಿಪ್ರವೇಶಮಾಡಿದಳು. ಈ ಪ್ರಕಾರ ಸೌದಾಸ ನಿಗೆ ಹನ್ನೆರಡು ವರ್ಷ ಕಳೆದವು. ಶಾಪನಿವೃತ್ತಿಯಾಗಿ ಬಂದನಂತರ ಮದ ಯಂತಿಯು ಪತಿಯ ಸಮೀಪಕ್ಕೆ ಬಂದಕಾಲದಲ್ಲಿ ಸೌದಾಸನು ಸ್ತ್ರೀಭೋಗವನ್ನು ಬಿಟ್ಟನು. ಸೌದಾಸನು ತನಗೆ ಸಂತಾನವಿಲ್ಲದುದರಿಂದ ವಸಿಷ್ಠನನ್ನು ಸಂತಾನಕ್ಕೆ ಅನುಗ್ರಹಿಸೆಂದು ಪ್ರಾರ್ಥಿಸಲು, ಆತನು ಮದಯಂತಿಗೆ ರಾಜನ ಇಷ್ಟಾನುಸಾರ ಗರ್ಭೋತ್ಪತ್ತಿಗೆ ಕರ್ಮವನ್ನು ಮಾಡಿದನು. ಕರ್ಮಾನುಸಾರ ಮದಯಂತಿಯು ಗರ್ಭವನ್ನು ಧರಿಸಿದಳು. ಏಳು ವರ್ಷಗಳಾದಾಗ್ಯೂ ಗರ್ಭವು ಜನನವಾಗದೆ ಇದ್ದುದರಿಂದ, ಮದಯಂತಿಯು ಒಂದು ಕಲ್ಲನ್ನು ತೆಗೆದುಕೊಂಡು ಹೊಟ್ಟೆ ಯನ್ನು ಹೊಡೆದುಕೊಂಡಳು. ಆ ಹೊಡೆತದಿಂದ ಗರ್ಭವು ಹೊರಕ್ಕೆ ಬಂದು ಗಂಡುಮಗುವಾಯಿತು. ಕಲ್ಲಿನಿಂದ ಹುಟ್ಟಿದುದರಿಂದ ಅಶ್ಮಕನೆಂದು ಹೆಸ ರಾಯಿತು. ಅಶ್ಮಕನಿಗೆ ಮೂಲಕನು ಹುಟ್ಟಿದನು. ಪರಶುರಾಮನು ಕ್ಷತ್ರಿಯ ರನ್ನು ಸಂಹಾರಮಾಡಿಕೊಂಡು ಬರುವಾಗ ಮೂಲಕನನ್ನು ವಿವಸ್ತ್ರರಾದ ಸ್ತ್ರೀಯರು ಸುತ್ತಲೂ ನಿಂತುಕೊಂಡು ಇವನನ್ನು ಕಾಪಾಡಿದುದರಿಂದ ಮೂಲಕ ನನ್ನು ನಾರೀಕವಚನೆಂದು ಹೇಳುತ್ತಾರೆ. ಮೂಲಕನಿಂದ ದಶರಥನೂ, ದಶರಥ ನಿಂದ ಇಲಬಿಲನೂ, ಇವನಿಂದ ವಿಶ್ವಸಹನೂ, ಇವನಿಂದ ಖಟ್ವಾಂಗನೂ ಸಹ ಹುಟ್ಟಿದರು. ಖಟ್ವಾಂಗ ಮಹಾರಾಜನು ರಾಜ್ಯಪರಿಪಾಲನೆಮಾಡತಕ್ಕ ಕಾಲ ದಲ್ಲಿ, ಸ್ವರ್ಗಲೋಕದಲ್ಲಿ ದೇವಾಸುರಯುದ್ಧವುಂಟಾಗಿ, ದೇವತೆಗಳ ಯಾಚನಾ ಪ್ರಕಾರ ಖಟ್ವಾಂಗರಾಜರ್ಷಿಯು ದೇವಲೋಕಕ್ಕೆ ಹೋಗಿ ಅಸುರರನ್ನು ಯುದ್ಧ ದಲ್ಲಿ ಸೋಲಿಸಿದನು. ಆಗ ದೇವತೆಗಳಿಗೆ ಸಂತೋಷವುಂಟಾಗಿ ದೇವತೆಗಳು ಖಟ್ವಾಂಗನಿಗೆ ವರವನ್ನು ಕೇಳು, ಕೊಡುತ್ತೇವೆಂದು ಹೇಳಲು; ಖಟ್ವಾಂಗನು ದೇವತೆಗಳನ್ನು ಕುರಿತು ಹೇಳುತ್ತಾನೆ: ನೀವು ಅವಶ್ಯವಾಗಿ ನನಗೆ ವರವನ್ನು ಕೊಡುವುದಾದರೆ, ನಾನು ಇನ್ನೆಷ್ಟು ದಿವಸ ಬದುಕುವೆನು, ನನ್ನ ಆಯುಸ್ಸನ್ನು ಹೇಳಿಯೆನಲು; ದೇವತೆಗಳು ನಿನ್ನ ಆಯುಸ್ಸು ಇನ್ನೊಂದು ಮುಹೂರ್ತಕಾಲ ಮಾತ್ರವಿರುವುದೆಂದು ಹೇಳಲು; ಖಟ್ವಾಂಗನು ದೇವತೆಗಳಿಂದ ವರವನ್ನು ಅಪೇಕ್ಷಿಸದೇ ಬಹುತ್ವರೆಯಾಗಿ ವಿಮಾನದಿಂದ ಭೂಲೋಕಕ್ಕೆ ಬಂದು, ಬ್ರಾಹ್ಮಣರಿಗಿಂತಲೂ ಪ್ರಿಯತಮವಾದ ವಸ್ತುವು ನನಗೆ ಬೇರೆ ಇಲ್ಲ. ಸ್ವಧರ್ಮ

ವನ್ನು ಒಂದು ಕ್ಷಣವೂ ಅತಿಕ್ರಮಿಸಲಿಲ್ಲ. ಅಚ್ಯುತನಾದ ಶ್ರೀಮನ್ನಾರಾಯಣ ನನ್ನು ಹೊರ್ತು ಪರಬ್ರಹ್ಮನಿಲ್ಲ. ಅಂತಹ ಪರಬ್ರಹ್ಮನಾಗಿಯೂ, ದೇವಮುನಿ ಜನರಿಂದ ಧ್ಯಾನಿಸಲ್ಪಡತಕ್ಕವನಾಗಿಯೂ ಇರುವ ಭಗವಂತನಾದ ಶ್ರೀಮನ್ನಾ ರಾಯಣನನ್ನು ಧ್ಯಾನಿಸುತ್ತೇನೆಂಬುದಾಗಿ, ಆಚಾರ್ಯನಲ್ಲಿಯೂ, ಅಶರೀರನಾದ ಭಗವಂತನಾದ ವಾಸುದೇವಾಖ್ಯನಾದ ಪರಮಾತ್ಮನಲ್ಲಿ, ಆತ್ಮವನ್ನು ಸೇರಿಸಿ ಆತನೊಂದಿಗೆ ಸದಾ ಇರುವ ಸ್ಥಿತಿಯನ್ನು ಹೊಂದಿದನು. ಲೋಕದಲ್ಲಿ ಸಪ್ತರ್ಷಿ ಗಳು ಖಟ್ವಾಂಗರಾಜರ್ಷಿಗೆ ಸಮಾನನಾದವನು ಭೂಮಿಯಲ್ಲಿ ಯಾರೂ ಇಲ್ಲವೆಂದು ಹೊಗಳಿದರು. ಸ್ವರ್ಗಲೋಕದಿಂದ ಒಂದು ನಿಮಿಷದಲ್ಲಿ ಮರ್ತ್ಯ ಲೋಕಕ್ಕೆ ಒಂದು ಮುಹೂರ್ತಕಾಲದಲ್ಲಿಯೇ ಶ್ರೀಮನ್ನಾರಾಯಣನ ಪಾದಾರ ವಿಂದವನ್ನು ಸೇರಿದುದರಿಂದ ಸಕಲಜನಸ್ತುತ್ಯನಾದನು. ಖಟ್ವಾಂಗನಿಂದ ದೀರ್ಘ ಬಾಹುವೂ, ಇವನಿಂದ ರಘುವೂ, ರಘುವಿನಿಂದ ಅಜನೂ, ಅಜನಿಂದ ದಶರಥನೂ ಸಹ ಹುಟ್ಟಿದರು. ದಶರಥನಿಗೆ ಪದ್ಮನಾಭನಾದ ಶ್ರೀಮನ್ನಾರಾ ಯಣನು ಜಗತ್ತನ್ನು ಪರಿಪಾಲಿಸುವುದಕ್ಕಾಗಿ ರಾಮಲಕ್ಷ್ಮಣ ಭರತಶತ್ರುಘ್ನ ರೂಪದಿಂದ ನಾಲ್ಕು ಜನ ಪುತ್ರರಾಗಿ ಅವತಾರಮಾಡಿದನು. ರಾಮನು ಬಾಲ್ಯ ದಲ್ಲಿಯೇ ವಿಶ್ವಾಮಿತ್ರಮಹರ್ಷಿಯ ಯಜ್ಞವನ್ನು ರಕ್ಷಿಸುವುದಕ್ಕಾಗಿ ಪ್ರಯಾಣ ಮಾಡತಕ್ಕ ದಾರಿಯಲ್ಲಿಯೇ ತಾಟಕಿಯನ್ನು ಸಂಹಾರಮಾಗಿ ಯಜ್ಞದಲ್ಲಿ ಸುಬಾಹು ಮೊದಲಾದ ರಾಕ್ಷಸರನ್ನು ಕೊಂದು, ಮಾರೀಚನನ್ನು ಓಡಿಸಿ, ಸಮುದ್ರದಲ್ಲಿ ಕೆಡಹಿದನು. ದರ್ಶನಮಾತ್ರದಿಂದಲೆ ಅಹಲ್ಯೆಯನ್ನು ಪಾಪರಹಿತ ಳನ್ನಾಗಿ ಮಾಡಿ, ಜನಕಗೃಹದಲ್ಲಿ ಮಾಹೇಶ್ವರಧನುಸ್ಸನ್ನು ಅನಾಯಾಸದಿಂದ ಮುರಿದು, ಅಯೋನಿಜಳಾದ ಸೀತೆಯನ್ನು ಪಡೆದು, ಸಕಲ ಕ್ಷತ್ರಿಯರನ್ನು ನಾಶ ಮಾಡಿದ ಪರಶುರಾಮನ ಪರಾಕ್ರಮಭಂಗವನ್ನು ಮಾಡಿ, ಪಿತೃವಾಕ್ಯದಿಂದ ರಾಜ್ಯದಲ್ಲಿ ಆಸೆಯಿಲ್ಲದೆ ಭ್ರಾತೃಭಾರ್ಯಾಸಹಿತನಾಗಿ ವನವನ್ನು ಪ್ರವೇಶಮಾಡಿ, ಖರ, ದೂಷಣ, ಕಬಂಧ, ವಾಲಿಗಳನ್ನು ಸಂಹಾರಮಾಡಿ, ಸಮುದ್ರದಲ್ಲಿ ಸೇತುವೆಯನ್ನು ನಿರ್ಮಿಸಿ, ಸಕಲರಾಕ್ಷಸಕುಲಕ್ಷಯವನ್ನು ಮಾಡಿ, ರಾವಣ ನಿಂದ ಅಪಹೃತಳಾದ, ರಾವಣವಧೆಯಿಂದ ನಿಷ್ಕಳಂಕಳಾದ, ಅಗ್ನಿಪ್ರವೇಶದಿಂದ ಶುದ್ಧಳಾದ, ಬ್ರಹ್ಮರುದ್ರೇಂದ್ರಸಂಸ್ತೂಯಮಾನಳಾದ, ಜನಕರಾಜಪುತ್ರಿ ಯಾದ ಸೀತಾದೇವಿಯನ್ನು ಕರೆದುಕೊಂಡು ಅಯೋಧ್ಯಾಪಟ್ಟಣವನ್ನು ಪ್ರವೇಶ ಮಾಡಿದನು. ಎಲೈ ಮೈತ್ರೇಯನೇ, ಶ್ರೀ ಸೀತಾರಾಮರ ಪಟ್ಟಾಭಿಷೇಕಮಂಗಳ ವನ್ನು ಹೇಳುವುದಕ್ಕೆ ನೂರಾರು ವರ್ಷಗಳಿದ್ದಾಗ್ಯೂ ಪೂರ್ತಿಯಾಗುವುದಿಲ್ಲ. ಆದರೂ, ಸಂಕ್ಷೇಪವಾಗಿ ಹೇಳುತ್ತೇನೆ ಕೇಳು. ಲಕ್ಷ್ಮಣ ಭರತ ಶತ್ರುಘ್ನ

ವಿಭೀಷಣ ಸುಗ್ರೀವ ಅಂಗದ ಜಾಂಬವ್ಯದ್ಧನುಮತ್ಪ್ರಭೃತಿಗಳಿಂದ ಛತ್ರಚಾಮರಾದಿ ಸಂಸೇವ್ಯನಾಗಿ ಬ್ರಹ್ಮೇಂದ್ರಾಗ್ನಿ, ಯಮ, ನಿಋುಋುತಿ, ವರುಣ, ವಾಯು, ಕುಬೇರ, ಈಶಾನರಿಂದಲೂ, ಸಕಲದೇವತೆಗಳಿಂದಲೂ ವಸಿಷ್ಠ ವಾಮದೇವ ವಾಲ್ಮೀಕಿ ಮಾರ್ಕಂಡೇಯ ವಿಶ್ವಾಮಿತ್ರ ಭರದ್ವಾಜ ಅಗಸ್ತ್ಯರೇ ಮೊದಲಾದ ಋಷಿಗಳಿಂದ, ಋಗ್ಯಜುಸ್ಸಾಮಾದಿಗಳಿಂದ ಸಂಸ್ತೂಯಮಾನನಾಗಿ, ನೃತ್ತಗೀತ ವಾದ್ಯಾದಿ ಅಖಿಲಮಂಗಳವಾದ್ಯಗಳಿಂದಲೂ, ವೀಣಾವೇಣುಮೃದಂಗಭೇರೀ ಪಟಹ ಶಂಖ ಕಾಹಳಾದಿಶಬ್ದಗಳಿಂದಲೂ, ಸಕಲಪ್ರಾಣಿಗಳ ಮಧ್ಯದಲ್ಲಿ ಸಕಲ ಲೋಕಸಂರಕ್ಷಣಾರ್ಥವಾಗಿ ಅಭಿಷಿಕ್ತನಾದ, ದಾಶರಥಿಯಾದ, ಕೋಸಲೇಂದ್ರ ನಾದ, ರಘುಕುಲತಿಲಕನಾದ, ಜಾನಕೀಪ್ರಿಯನಾದ, ಭ್ರಾತೃತ್ರಯಪ್ರಿಯನಾದ, ಶ್ರೀರಾಮನು, ಸಿಂಹಾಸನಗತನಾಗಿ ಹನ್ನೊಂದುಸಾವಿರ ವರ್ಷ ರಾಜ್ಯಪರಿಪಾಲನೆ ಯನ್ನು ಮಾಡಿದನು. ಭರತನು ಮೂರುಕೋಟಿ ಗಂಧರ್ವರನ್ನು ಯುದ್ಧದಲ್ಲಿ ಸೋಲಿಸಿದನು. ಶತ್ರುಘ್ನನಿಂದ ಮಹಾಬಲಶಾಲಿಯಾದ ಮಧುಪುತ್ರನಾದ ಲವಣಾಸುರನು ಹತನಾದನು. ಈ ಪ್ರಕಾರ ಅತಿಬಲಪರಾಕ್ರಮದಿಂದ ಸಕಲ ಲೋಕಸಂರಕ್ಷಣೆಯನ್ನು ಮಾಡಿ, ರಾಮಲಕ್ಷ್ಮಣ ಭರತಶತ್ರುಘ್ನರು ಪುನಃ ವೈಕುಂಠಲೋಕವನ್ನು ಹೊಂದಿದರು. ಅಲ್ಲದೆ ಕೋಸಲದೇಶದ ಜನಗಳೂ ಸಹ ಶ್ರೀರಾಮನಲ್ಲಿ ಭಕ್ತಿಯುಕ್ತರಾದ್ದರಿಂದ ವೈಕುಂಠಲೋಕವನ್ನು ಹೊಂದಿದರು. ಮಹಾದುಷ್ಟಸಂಹಾರಿಯಾದ ಶ್ರೀರಾಮನಿಗೆ ಕುಶ, ಲವರೆಂಬುದಾಗಿ ಇಬ್ಬರು ಪುತ್ರರೂ, ಲಕ್ಷ್ಮಣನಿಗೆ ಅಂಗದ, ಚಂದ್ರಕೇತುರೆಂಬ ಇಬ್ಬರೂ, ಭರತನಿಗೆ ತಕ್ಷಕ, ಪುಷ್ಕಲರೂ ಶತ್ರುಘ್ನನಿಗೆ ಸುಬಾಹು, ಶೂರಸೇನರೂ ಸಹ ಹುಟ್ಟಿದರು. ಕುಶನಿಂದ ಅತಿಥಿಯೂ, ಅತಿಥಿಯಿಂದ ನಿಷಧನೂ, ನಿಷಧನಿಂದ ಅನಲನೂ, ಅನಲನಿಂದ ನಭಸನೂ, ನಭಸನಿಂದ ಪುಂಡರೀಕನೂ, ಪುಂಡರೀಕನಿಂದ ಕ್ಷೇಮ ಧನ್ವನೂ, ಇವನಿಂದ ದೇವಾನೀಕನೂ, ಇವನಿಂದ ಅಹೀನನೂ, ಇವನಿಂದ ಗುರುವೂ, ಗುರುವಿನಿಂದ ಪಾರಿಯಾತ್ರನೂ, ಪಾರಿಯಾತ್ರನಿಂದ ಬಲನೂ, ಬಲನಿಂದ ಛಲನೂ, ಛಲನಿಂದ ಉತ್ಕನೂ, ಉತ್ಕನಿಂದ ವಜ್ರನಾಭನೂ, ಇವನಿಂದ ಶಂಖಣನೂ, ಅವನಿಂದ ವ್ಯುಷಿತಾಶ್ವನೂ, ಅವನಿಂದ ವಿಶ್ವಸಹನೂ, ಅವನಿಂದ ಹಿರಣ್ಯನಾಭನೂ, ಹಿರಣ್ಯನಾಭನಿಂದ ಪುಷ್ಯನೂ, ಪುಷ್ಯನಿಂದ ಧ್ರುವ ಸಂಧಿಯೂ, ಅವನಿಂದ ಸುದರ್ಶನನೂ, ಸುದರ್ಶನನಿಂದ ಅಗ್ನಿವರ್ಣನೂ, ಅವನಿಂದ ಶೀಘ್ರಗನೂ, ಶೀಘ್ರಗನಿಂದ ಮರುವೂ ಸಹ ಹುಟ್ಟಿದರು. ಮರುವು ಅದ್ಯಾಪಿ ಕಲಾಪಗ್ರಾಮದಲ್ಲಿ ಯೋಗಾಸಕ್ತನಾಗಿರುವನು. ಮುಂದಿನ ಯುಗ ದಲ್ಲಿಯೂ ಸೂರ್ಯವಂಶವು ನಡೆಯುವುದು. ಮರುವಿನಿಂದ ಪ್ರಸುಶುಕ್ರನೂ,

ಅವನಿಂದ ಸುಸಂಧಿಯೂ, ಅವನಿಂದ ಅಮರ್ಷನೂ, ಅಮರ್ಷನಿಂದ ಸಹಸ್ವನೂ, ಸಹಸ್ವನಿಂದ ವಿಶ್ವಭವನೂ, ಅವನಿಂದ ಬೃಹದ್ಬಲನೂ ಸಹ ಹುಟ್ಟಿದರು. ಬೃಹದ್ಬಲನು ಭಾರತಯುದ್ಧದಲ್ಲಿ ಅರ್ಜುನನ ಮಗನಾದ ಅಭಿಮನ್ಯುವಿನಿಂದ ಲಯವಾದನು. ಇಕ್ಷ್ವಾಕುವಂಶೋತ್ಪನ್ನರಾದ ಈ ರಾಜರುಗಳು ಪ್ರಧಾನರಾದವರು. ಇವರುಗಳ ಚರಿತ್ರೆಯನ್ನು ಪಠನಮಾಡತಕ್ಕವರು ಇಹಲೋಕದಲ್ಲಿ ಅನೇಕ ಸೌಖ್ಯಗಳನ್ನು ಹೊಂದಿದನಂತರ ಸ್ವರ್ಗಲೋಕವನ್ನು ಹೊಂದುತ್ತಾರೆ."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ನಾಲ್ಕನೆಯ ಅಧ್ಯಾಯವು ಸಮಾಪ್ತಃ

ಐದನೆಯ ಅಧ್ಯಾಯವು

"ಇಕ್ಷ್ವಾಕುಮಗನಾದ ನಿಮಿಚಕ್ರವರ್ತಿಯು ವರ್ಷಪರ್ಯಂತರ ನಡೆಯಬೇಕಾದ ಸತ್ರಯಾಗವನ್ನು ಮಾಡಬೇಕೆಂದು ವಸಿಷ್ಠನನ್ನು ಹೋತೃವಾಗಿ ವರಿಸಿದನು. ಆಗ ವಸಿಷ್ಠನು ನಿಮಿಚಕ್ರವರ್ತಿಯನ್ನು ಕುರಿತು ಹೇಳುತ್ತಾನೆ: ಎಲೈ ನಿಮಿಯೇ, ದೇವೇಂದ್ರನು ಐದುನೂರು ವರ್ಷಗಳ ಕಾಲ ನಡೆಯತಕ್ಕ ಯಜ್ಞವನ್ನು ಮಾಡುವನು. ನಾನು ಆ ಯಜ್ಞಕ್ಕೆ ಹೋತೃವಾಗಿ ವರಿಸಿದ್ದೇನೆ. ಆದುದರಿಂದ ಇಂದ್ರನ ಯಜ್ಞವನ್ನು ಪೂರ್ತಿಮಾಡಿ ನಾನು ಮಾಡತಕ್ಕ ಯಜ್ಞಕ್ಕೆ ಬರುತ್ತೇನೆಂದು ಹೇಳಲು, ನಿಮಿಚಕ್ರವರ್ತಿ ಬಹುಕಾಲ ವಿಳಂಬವಾಗುವುದೆಂದು ಮನಸ್ಸಿನಲ್ಲಿ ಯೋಚಿಸಿ, ವಸಿಷ್ಠನಿಗೆ ಪ್ರತ್ಯುತ್ತರವನ್ನು ಹೇಳದೆ, ಸುಮ್ಮನಾದನು. ವಸಿಷ್ಠನು, ತಾನು ಹೇಳಿದ ಮಾತಿಗೆ ನಿಮಿಯು ಒಪ್ಪಿದನೆಂದು ತಿಳಿದುಕೊಂಡು ದೇವೇಂದ್ರನ ಯಾಗಕ್ಕೆ ಪ್ರಯಾಣಮಾಡಿದನು. ಅನಂತರ ನಿಮಿಯು ಗೌತಮಾದಿ ಮಹರ್ಷಿಗಳಿಂದ ಯಜ್ಞವನ್ನು ಮಾಡಿದನು. ಇಂದ್ರನ ಯಜ್ಞವು ಪೂರ್ತಿಯಾದನುತರ ವಸಿಷ್ಠಮುನಿಯು ನಿಮಿಯ ಯಜ್ಞಕ್ಕೆ ಹೋಗಬೇಕೆಂದು ತ್ವರೆಯಿಂದ ಬಂದನು. ಆ ವೇಳೆಗೆ ನಿಮಿಯು ಒಂದು ವರ್ಷಕಾಲ ನಿದ್ರೆಯಿಲ್ಲದೆ ಇದ್ದುದರಿಂದ ಮಲಗಿಕೊಂಡಿದ್ದನು. ಆಗ ವಸಿಷ್ಠಮುನಿಯು ಬಂದು ನೋಡಿ, ಯಜ್ಞವು ಗೌತಮಮುನಿಯಿಂದ ಪೂರ್ತಿಯಾದುದನ್ನು ತಿಳಿದು, ಯಜ್ಞಕರ್ಮಾಂಗಗಳನ್ನ ಗೌತಮಮುನಿಗೆ ಕೊಟ್ಟನೆಂದೂ ಸಹ ತಿಳಿದು, ನನಗೆ ನಿಮಿಯು ಹೇಳಿ, ಈಗ ನನ್ನನ್ನು ಉದಾಸೀನಮಾಡಿ, ಯಜ್ಞವನ್ನು ಮಾಡಿದನೆಂದು ಕೋಪಿಸಿದ ನಿಮಿಯ ದೇಹವು ಬಿದ್ದುಹೋಗಲಿ ಎಂಬುದಾಗಿ ಶಾಪ

ವನ್ನು ಕೊಟ್ಟನು. ನಿಮಿಯು ಎಚ್ಚರಗೊಂಡು ನಿದ್ರಾಸಕ್ತನಾದ ನನ್ನನ್ನು ಮಾತನಾಡಿಸದೆ ನನಗೆ ಶಾಪವನ್ನು ಕೊಟ್ಟ ದುಷ್ಟಗುರುವಾದ ವಸಿಷ್ಠನ ದೇಹವೂ ಕೂಡ ಬಿದ್ದುಹೋಗಲಿ ಎಂದು ಪ್ರತಿಶಾಪವನ್ನು ಕೊಟ್ಟು, ದೇಹವನ್ನು ಬಿಟ್ಟನು. ನಿಮಿಯ ಶಾಪದಿಂದ ವಸಿಷ್ಠನ ಪ್ರಾಣವೂ ಮಿತ್ರಾವರುಣರ ತೇಜಸ್ಸಿನಲ್ಲಿ ಹೋಗಿ ಸೇರಿತು. ಮಿತ್ರಾವರುಣರಿಬ್ಬರೂ ಊರ್ವಶಿಯನ್ನು ನೋಡಿ ಅವಳಲ್ಲಿ ರೇತಸ್ಸನ್ನು ಬಿಟ್ಟದುದರಿಂದ ಪುನಃ ವಸಿಷ್ಠನು ಮತ್ತೊಂದು ದೇಹವನ್ನು ಹೊಂದಿದನು. ನಿಮಿಯ ದೇಹವನ್ನು ತೈಲಗಂಧಾದಿಗಳಿಂದ ಸಂಸ್ಕಾರಮಾಡುತ್ತಿದ್ದುದರಿಂದ, ಕ್ಲೇಶಾದಿದೋಷಗಳುಂಟಾಗಲಿಲ್ಲ. ಅದರಿಂದ ಸದ್ಯಃ ಪ್ರಾಣವು ಹೋಗಿರಲಿಲ್ಲ. ಯಜ್ಞಸಮಾಪ್ತಿಯಾದಕಾಲದಲ್ಲಿ ಭಾಗಾರ್ಥವಾಗಿ ದೇವತೆಗಳು ಬಂದಿದ್ದರು. ಆಗ ಗೌತಮಾದಿಗಳು ದೇವತೆಗಳನ್ನು ಕುರಿತು ಯಜಮಾನನಿಗೆ ವರವನ್ನು ಕೊಡಿ ಎಂದು ಹೇಳಿದರು. ಇದನ್ನು ಕೇಳಿದ ದೇವತೆಗಳು ನಿಮಿಯನ್ನು ಕುರಿತು ನಿನಗೆ ಬೇಕಾದ ವರವನ್ನು ಕೇಳು ಎನಲು, ನಿಮಿಯು ಹೇಳುತ್ತಾನೆ: "ಓ ದೇವತೆಗಳಿರಾ! ನೀವು ಸಮಸ್ತಸಂಸಾರದುಃಖವನ್ನು ಪಂಹಾರಮಾಡತಕ್ಕವರು; ನನಗೆ ದೇಹದಲ್ಲಿ ಅಭಿರುಚಿಯಿಲ್ಲ; ದೇಹವಿಲ್ಲದೆ ಸಕಲಜನಗಳ ನೇತ್ರಗಳಲ್ಲಿರುವ ಹಾಗೆ ವರವನ್ನು ಕೊಡಿ ಎನಲು, ದೇವತೆಗಳು ಸಕಲಪ್ರಾಣಿಗಳ ನೇತ್ರಗಳಲ್ಲಿಯೂ ನೀನು ವಾಸಮಾಡೆಂದು ವರವನ್ನು ಕೊಟ್ಟರು. ಅದೇ ಪ್ರಕಾರ ನಿಮಿಯು ಸಕಲ ಪ್ರಾಣಿಗಳ ನೇತ್ರಗಳಲ್ಲಿ ವಾಸಮಾಡಿದನು. ತದಾಪ್ರಭೃತಿ ಪ್ರಾಣಿಗಳಿಗೆ ಉನ್ಮೇಷ ನಿಮೇಷಗಳುಂಟಾದವು. ನಿಮಿ ಎಂದರೆ, 'ಕಣ್ಣಿನ ರೆಪ್ಪೆ', ನಿಮಿಯು ಕಣ್ಣುಗಳಲ್ಲಿ ವಾಸಮಾಡುವುದರಿಂದ ನಿಮಿಷರೆಂದು ಮನುಷ್ಯರಿಗೆ ಹೆಸರುಂಟಾಯಿತು. ದೇವತೆಗಳಿಗೆ ಅನಿಮಿಷರೆಂದು ಹೆಸರು. ನಿಮಿಗೆ ಪುತ್ರನಿಲ್ಲದುದರಿಂದ ಅರಾಜಕವಾಯಿತೆಂದು ಮಹರ್ಷಿಗಳು ಯೋಚಿಸಿ, ಅರಣಿಯನ್ನು ಮಥನಮಾಡಿದರು. ಅನಂತರ ಕುಮಾರನು ಹುಟ್ಟಿದನು. ಅವನಿಗೆ ಜನಕನೆಂದು ನಾಮಕರಣ ಮಾಡಿದನು. ವಿದೇಹನಾದ ನಿಮಿಗೆ ಪುತ್ರನಾದುದರಿಂದ ವೈದೇಹನೆಂದೂ ಮಥನದಿಂದ ಹುಟ್ಟಿದುದರಿಂದ ಮಿಥಿಯೆಂಬುದಾಗಿಯೂ ಸಹ ಹೆಸರುಂಟಾಯಿತು. ಜನಕನಿಗೆ ಉದಾವಸುವೂ, ಉದಾವಸುವಿನಿಂದ ನಂದಿವರ್ಧನನೂ, ಅವನಿದ ಸುಕೇತುವೂ, ಅವನಿಂದ ದೇವರಾತನೂ, ದೇವರಾತನಿಂದ ಬೃಹದುಕ್ಥನೂ, ಅವನಿಂದ ಮಹಾವೀರ್ಯನೂ, ಮಹಾವೀರ್ಯನಿಂದ ಸುಧೃತಿಯೂ, ಸುಧೃತಿಯಿಂದ ಧೃಷ್ಟಕೇತುವೂ, ಅವನಿಂದ ಹರ್ಯಶ್ವನೂ, ಹರ್ಯಶ್ವನಿಂದ ಮರುವು, ಮರುವಿನಿಂದ ಪ್ರತೀಕನೂ, ಪ್ರತೀಕನಿಂದ ಕೃತಿರಥನೂ, ಇವನಿಂದ ದೇವಮೀಢನೂ, ದೇವಮೀಢನಿಂದ ವಿಬುಧನೂ, ವಿಬುಧನಿಂದ ಮಹಾಧೃತಿಯೂ ಇವನಿಂದ ಕೃತ

ರಾತನೂ, ಇವನಿಂದ ಮಹಾರೋಮನೂ, ಮಹಾರೋಮನಿಂದ ಸ್ವರ್ಣ ರೋಮನೂ, ಇವನಿಂದ ಹ್ರಸ್ವರೋಮನೂ, ಹ್ರಸ್ವರೋಮನಿಂದ ಸೀರಧ್ವಜನೂ, ಸೀರಧ್ವಜನ ತಮ್ಮನಾದ ಸಾಂಕಾಶ್ಯಾಧಿಪತಿಯಾದ ಕುಶಧ್ವಜನೂ ಹುಟ್ಟಿದರು. ಸೀರಧ್ವಜನು ಪುತ್ರಾರ್ಥವಾಗಿ ಯಜ್ಞಭೂಮಿಯನ್ನು ಉಳುತ್ತಿರುವಾಗ ಲಾಂಗಲ ತುದಿಯಿಂದ ಸೀತೆಯೆಂಬ ಮಗಳು ಹುಟ್ಟಿದಳು. ಸೀರಧ್ವಜನಿಂದ ಭಾನು ಮಂತನೂ, ಇವನಿಂದ ಶತದ್ಯುಮ್ನನೂ, ಇವನಿಂದ ಶುಚಿಯೂ, ಇವನಿಂದ ಊರ್ಜನೂ, ಇವನಿಂದ ಶತಧ್ವಜನೂ, ಇವನಿಂದ ಕೃತಿಯೂ, ಕೃತಿಯಿಂದ ರಂಜನನೂ, ರಂಜನನಿಂದ ಪುರಜಿತ್ತೂ, ಇವನಿಂದ ಅರಿಷ್ಟನೇಮಿಯೂ, ಅವನಿಂದ ಶೃತಾಯುವೂ, ಅವನಿಂದ ಸುಪಾರ್ಶ್ವನೂ, ಅವನಿಂದ ಸೃಂಜಯನೂ, ಅನಂತರ ಕ್ಷೇಮಾವಿಯೂ, ಆಮೇಲೆ ಅನೇನಸನೂ, ಅವನಿಂದ ಭೌಮರಥನೂ, ಅವನಿಂದ ಸತ್ಯರಥನೂ, ಅನಂತರ ಉಪಗುವೂ, ಇವನಿಂದ ಉಪಗುಪ್ತನೂ, ಅವನಿಗೆ ಸ್ವಾಗತನೂ, ಅವನಿಂದ ಸ್ವಾಂಗನೂ, ಅನಂತರ ಸ್ವಾಪನೂ, ಇವನಿಂದ ಸುವರ್ಚನೂ, ಆಮೇಲೆ ಸುಭಾಷನೂ, ಸುಭಾಷನಿಂದ ಸುಶ್ರುತನೂ, ಇವನಿಂದ ಜಯನೂ, ಜಯನಿಗೆ ವಿಜಯನೂ, ಇವನಿಗೆ ಋತನೂ, ಋತನಿಗೆ ಸುನಯನೂ, ಸುನಯನಿಂದ ವೀತಹವ್ಯನೂ, ವೀತಹವ್ಯನಿಂದ ಧೃತಿಯೂ, ಧೃತಿಯಿಂದ ಬಹುಳಾಶ್ವನೂ, ಇವನಿಗೆ ಕೃತಿಯೂ ಸಹ ಹುಟ್ಟಿದರು. ಕೃತಿಗೆ ಜನಕ ಸಂತತಿಯು ನಿಂತಿರುವುದು. ಇವರುಗಳೆಲ್ಲರೂ, ಮೈಥಿಲರು ಈ ರಾಜರುಗಳೆಲ್ಲರೂ ಪ್ರಾಯಿಕವಾಗಿ ಆತ್ಮವಿದ್ಯೆಯನ್ನು ಆಶ್ರಯಿಸಿರತಕ್ಕವರು, ಎಂದರೆ ಬ್ರಹ್ಮ ವಿತ್ತುಗಳು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಐದನೆಯ ಅಧ್ಯಾಯವು ಸಮಾಪ್ತಃ

ಆರನೆಯ ಅಧ್ಯಾಯವು

ಮೈತ್ರೇಯರು ಪರಾಶರರನ್ನು ಪುನಃ ಕೇಳುತ್ತಾರೆ: "ಓ ಭಗವಂತನೇ, ನೀನು ಹೇಳಿದ ಸೂರ್ಯವಂಶವನ್ನು ವಿಸ್ತಾರವಾಗಿ ಕೇಳಿದೆನು, ಸೋಮವಂಶ ವನ್ನು ಕೇಳಲಪೇಕ್ಷೆಯುಳ್ಳ ನನಗೆ ಚಂದ್ರವಂಶವನ್ನು ಕುರಿತು ಹೇಳು" ಎನಲು ; ಪರಾಶರರು ಹೇಳುತ್ತಾರೆ: "ಎಲೈ ಮೈತ್ರೇಯನೇ, ಚಂದ್ರವಂಶೋತ್ಪನ್ನರಾದ, ಮಹಾಖ್ಯಾತಿವಂತರಾದ, ಚಕ್ರವರ್ತಿಗಳಾದ ರಾಜರುಗಳ ಚರಿತ್ರೆಯನ್ನು ಹೇಳು

ತ್ತೇನೆ ಕೇಳು: ಚಂದ್ರವಂಶವು ಅತಿಬಲಪರಾಕ್ರಮಿಗಳಾಗಿಯೂ, ಅತಿಕಾಂತಿಯುಕ್ತರಾಗಿಯೂ, ಸಚ್ಛೀಲರಾಗಿಯೂ, ಸದ್ವ್ಯಾಪಾರವುಳ್ಳವರಾಗಿಯೂ, ಅತಿಗುಣಾನ್ವಿತರಾಗಿಯೂ ಇರುವ ನಹುಷ, ಯಯಾತಿ, ಕಾರ್ತವೀರ್ಯಾರ್ಜುನಾದಿಚಕ್ರವರ್ತಿಗಳಿಂದ ಅಲಂಕೃತವಾದುದು. ಇದನ್ನು ಹೇಳುತ್ತೇನೆ ಕೇಳು. ಅಖಿಲಜಗತ್ಸೃಷ್ಟಿಕರ್ತನಾದ ಶ್ರೀಮನ್ನಾರಾಯಣನ ನಾಭಿಕಮಲದಿಂದ ಚತುರ್ಮುಖಬ್ರಹ್ಮನು ಹುಟ್ಟಿದನು. ಇವನಿಂದ ಅತ್ರಿಋಷಿಯೂ, ಅತ್ರಿಯಿಂದ ಚಂದ್ರನೂಸಹ ಹುಟ್ಟಿದರು. ಬ್ರಹ್ಮನು ಚಂದ್ರನನ್ನು ಸಕಲಪೈರುಗಳಿಗೂ, ಬ್ರಾಹ್ಮಣರಿಗೂ, ನಕ್ಷತ್ರಗಳಿಗೂ ಸಹ ಅಧಿಪತಿಯನ್ನಾಗಿ ಮಾಡಿದನು. ಚಂದ್ರನು ರಾಜಸೂಯಯಾಗವನ್ನು ಮಾಡಿ ಯಜ್ಞಪ್ರಭಾವದಿಂದ ಉತ್ಕೃಷ್ಟವಾದ ಆಧಿಪತ್ಯವನ್ನುಹೊಂದಿ, ಮದವಿಶಿಷ್ಟನಾದನು. ಮದಾತಿರೇಕದಿಂದ ಸಕಲ ದೇವಗುರುವಾದಬೃಹಸ್ಪತಿಯ ಪತ್ನಿಯಾದ ತಾರೆಯನ್ನು ಅಪಹರಿಸಿದನು. ಬೃಹಸ್ಪತಿಯು ಬ್ರಹ್ಮನಬಳಿಗೆ ಬಂದು ಚಂದ್ರನು ತನ್ನ ಪತ್ನಿಯನ್ನು ಅಪಹರಿಸಿದ ವೃತ್ತಾಂತವನ್ನುಹೇಳಲು, ಬ್ರಹ್ಮನು ಚಂದ್ರನಿಗೆ ತಾರೆಯನ್ನು ಬೃಹಸ್ಪತಿಗೆ ಕಳುಹಿಸೆಂದುಹೇಳಿದರೂ, ಅನೇಕ ದೇವತೆಗಳೂ ದೇವರ್ಷಿಗಳೂ ಸಹ ಹೇಳಿದಾಗ್ಯೂ, ಚಂದ್ರನು ತಾರೆಯನ್ನು ಕಳುಹಿಸಿಕೊಡಲಿಲ್ಲ. ಚಂದ್ರನಿಗೂ ಬೃಹಸ್ಪತಿಗೂದ್ವೇಷವುಂಟಾಯಿತು. ಶುಕ್ರಾಚಾರ್ಯನು ಚಂದ್ರನಿಗೆ ಸಹಾಯಕನಾದನು. ಭಗವಂತನಾದ ರುದ್ರದೇವನು, ಅಂಗೀರಸಋಷಿಯಿಂದ ವಿದ್ಯೆಯನ್ನು ಕಲಿತುದರಿಂದ ಗುರುಪುತ್ರನಾದ ಬೃಹಸ್ಪತಿಗೆ ಸಹಾಯಕನಾದನು. ಶುಕ್ರಾಚಾರ್ಯನುಚಂದ್ರನಿಗೆ ಸಹಾಯಕನಾದುದರಿಂದ ಶುಕ್ರನ ಶಿಷ್ಯರಾದ ಜಂಭಾ ಕುಂಭರೇಮೊದಲಾದ ದೈತ್ಯಸಮೂಹವು, ಚಂದ್ರನ ಬಳಿಗೆ ಬಂದು ಯುದ್ಧೋದ್ಯೋಗಿಗಳಾದರು. ಬೃಹಸ್ಪತಿಗೆ ಇಂದ್ರನು ಸಕಲದೇವತೆಗಳಿಂದ ಕೂಡಿ ಸಹಾಯಕನಾದನು. ಈ ಪ್ರಕಾರ ಬೃಹಸ್ಪತಿ ಶುಕ್ರರಿಗೆ ತಾರಾನಿಮಿತ್ತವಾಗಿ ಅತ್ಯಂತಘೋರವಾದ ತಾರಕಾಮಯವೆಂಬ ಯುದ್ಧವು ನಡೆಯಿತು. ಈ ಯುದ್ಧದಲ್ಲಿರುದ್ರೇಂದ್ರಾದಿ ದೇವತೆಗಳು ಶುಕ್ರಾಚಾರ್ಯನ ಸೈನ್ಯದಮೇಲೆ ಅಮೋಘವಾದಬಾಣಗಳನ್ನು ಬಿಟ್ಟರು. ಅಸುರರೂ ಕೂಡ ದೇವತೆಗಳ ಮೇಲೆ ಬಾಣವರ್ಷವನ್ನು ವರ್ಷಿಸಿದರು. ಈ ಘೋರವಾದ ದೇವಾಸುರರ ಯುದ್ಧವು ಲೋಕಗಳಿಗೆಭಯವನ್ನುಂಟುಮಾಡಿತು. ಜಗತ್ಪ್ರಧಾನದೇವತೆಯು ಯುದ್ಧಭಯದಿಂದಬ್ರಹ್ಮದೇವನನ್ನು ಶರಣುಹೊಂದಿ ದೇವಾಸುರರ ಯುದ್ಧವನ್ನು ಶಮನಮಾಡಬೇಕೆಂದು ಬ್ರಹ್ಮನನ್ನು ಪ್ರಾರ್ಥಿಸಲು, ಆಗ ಬ್ರಹ್ಮದೇವನು ಶುಕ್ರಾಚಾರ್ಯನನ್ನೂ ಶಂಕರನನ್ನೂ ಅಸುರರನ್ನೂ ದೇವತೆಗಳನ್ನೂ ಸಹ ಸಮಾಧಾನಪಡಿಸಿ,

ಬೃಹಸ್ಪತಿಗೆ ತಾರಾದೇವಿಯನ್ನು ಕೊಡಿಸಿದನು. ಆಗ ತಾರೆಯು ಗರ್ಭಿಣಿಯಾಗಿರುವುದನ್ನು ಕಂಡು, ಬೃಹಸ್ಪತಿಯು ತಾರೆಗೆ ಹೇಳುತ್ತಾನೆ: "ಓ ತಾರೆಯೇ ! ಈ ಗರ್ಭವು ನನ್ನ ಬೀಜೋತ್ಪನ್ನವಾದುದಲ್ಲ. ಆದುದರಿಂದ ಗರ್ಭವನ್ನು ವಿಸರ್ಜನೆಮಾಡು" ಎನಲು, ತಾರೆಯು ಪತಿವ್ರತೆಯಾದುದರಿಂದ ಪತಿಯ ಇಚ್ಛಾನುಸಾರ ಗರ್ಭವನ್ನು ಕಾಜೀಹುಲ್ಲಿನ ಪೊದರೆಯಲ್ಲಿ ಹಾಕಿದಳು. ಗರ್ಭವು ಹುಟ್ಟಿದಮಾತ್ರಕ್ಕೆ ಮಹಾತೇಜಸ್ವಿಯಾಗಿ ದೇವತೆಗಳ ತೇಜಸ್ಸನ್ನೂ ಕಡಿಮೆ ಮಾಡಿತು. ಶಿಶುವನ್ನು ದೇವತೆಗಳು ನೋಡಿ ಆದರ ತೇಜಸ್ಸು ಬೃಹಸ್ಪತಿಯನ್ನೂ ಚಂದ್ರನನ್ನೂ ಸಹ ಅನುಸರಿಸಿತ್ತು. ಇದರಿಂದ ದೇವತೆಗಳಿಗೆ ಯಾರ ಮಗನೆಂದು ಸಂದೇಹವುಂಟಾಗಿ ತಾರೆಯನ್ನು ಕೇಳುತ್ತಾರೆ: ತಾರೆಯೇ, ನೀನು ಸತ್ಯವಾಗಿ ಹೇಳು, ಈ ಶಿಶುವು ಚಂದ್ರನಿಂದ ಹುಟ್ಟಿದನೋ, ಬೃಹಸ್ಪತಿಯಿಂದ ಹುಟ್ಟಿದನೋ ಎಂದು ಕೇಳಲು, ತಾರೆಯು ನಾಚಿಕೆಯಿಂದ ದೇವತೆಗಳಿಗೆ ಪ್ರತ್ಯುತ್ತರವನ್ನು ಹೇಳಲಿಲ್ಲ. ದೇವತೆಗಳು ಎಷ್ಟು ವಿಧವಾಗಿ ಕೇಳಿದಾಗ್ಯೂ ಹೇಳದೇ ಇದ್ದುದರಿಂದ ಕುಮಾರನು, "ಓ ದುಷ್ಟಳಾದ ತಾಯಿಯೇ ! ದೇವತೆಗಳು ಎಷ್ಟು ವಿಧವಾಗಿ ಕೇಳಿದಾಗ್ಯೂ ನನ್ನ ತಂದೆಯನ್ನು ನೀನು ಹೇಳದೆ ಇರೋಣದರಿಂದ ನಿನಗೆ ಶಿಕ್ಷೆಯನ್ನು ಮಾಡುತ್ತೇನೆ; ನಿನ್ನ ಲಜ್ಜೆಯು ವೃಥಾ ಸುಳ್ಳಾದುದು; ವ್ಯಭಿಚಾರದಿಂದ ದುಷ್ಟಳಾದ ನೀನು ಮೂಗಿಯಾಗೆಂದು" ಶಾಪವನ್ನು ಕೊಟ್ಟನು. ಆಗ ಬ್ರಹ್ಮನು ಬಂದು ಕುಮಾರನನ್ನು ಸಮಾಧಾನಪಡಿಸಿ, ತಾರೆಯನ್ನು ಕೇಳುತ್ತಾನೆ: "ಎಲೈ ತಾರೆಯೇ ! ಈ ಕುಮಾರನು ಯಾರ ಮಗನು, ಚಂದ್ರನ ಮಗನೋ ಅಥವಾ ಬೃಹಸ್ಪತಿಯ ಮಗನೋ ?" ಎಂಬುದಾಗಿ ಕೇಳಲು, ಲಜ್ಜೆಯಿಂದ ತಾರೆಯು ಚಂದ್ರನ ಮಗನೆಂದು ಹೇಳಿದಳು. ಆಗ ಚಂದ್ರನು ಮಹಾಕಾಂತಿಯುಕ್ತನಾದ ಕುಮಾರನಿಗೆ ಬುಧನೆಂದು ನಾಮಕರಣ ಮಾಡಿದನು. ಬುಧನಿಂದ ಇಳಾದೇವಿಯಲ್ಲಿ ಪೂರೂರವಸ್ಸು ಹುಟ್ಟಿದ ಕಥೆಯನ್ನು ಹಿಂದೆಯೇ ಹೇಳಿರುವೆನು. ಪುರೂರವಸ್ಸು ಅತಿದಾನಶೀಲನಾಗಿಯೂ, ಅತಿಯಜ್ಞಶೀಲನಾಗಿಯೂ, ಅತಿತೇಜಸ್ವಿಯಾಗಿಯೂ, ಸತ್ಯವಾದಿಯಾಗಿಯೂ, ಅತಿಸೌಂದರ್ಯವಂತನಾಗಿಯೂ, ಮನಸ್ವಿಯಾಗಿಯೂ ಇದ್ದನು. ಊರ್ವಶಿಯು ಮಿತ್ರಾವರುಣರ ಶಾಪದಿಂದ ಭೂಲೋಕದಲ್ಲಿ ವಾಸಮಾಡಬೇಕೆಂದು ಭೂಮಿಗೆ ಬಂದು, ಪುರೂರವಸ್ಸನ್ನು ಕಂಡು ಸ್ವರ್ಗಸುಖಾಭಿಲಾಷೆಯನ್ನು ಬಿಟ್ಟು, ಪುರೂರವಸ್ಸಿನಲ್ಲಿ ಮೋಹವುಂಟಾಗಿ, ಅವನ ಸಮೀಪಕ್ಕೆ ಬಂದಳು. ಪುರೂರವಸ್ಸು ಅತಿಶಯವಾದ ಕಾಂತಿ, ಸೌಕುಮಾರ್ಯ, ಲಾವಣ್ಯ, ಗತಿವಿಲಾಸ, ಹಾಸಾದಿ ಗುಣವಿಶಿಷ್ಟಳಾದ ಊರ್ವಶಿಯನ್ನು ನೋಡಿ, ಅವಳಲ್ಲಿ ಮನಸ್ಸನ್ನಿಟ್ಟನು. ಪರಸ್ಪರ

ಇವರಿಬ್ಬರೂ ಒಂದೇ ಮನಸ್ಕರಾದುದರಿಂದ ಇತರ ಪ್ರಯೋಜನವೆಲ್ಲವನ್ನೂ ಬಿಟ್ಟರು. ಆಗ ರಾಜನು ಧೈರ್ಯವಾಗಿ, "ಎಲೈ ಕೋಮಲಾಂಗಿಯೇ, ನಿನ್ನ ಸೌಂದರ್ಯಕ್ಕೆ ಮೋಹಗೊಂಡು ಕಾಮಬಾಣಾರ್ದಿತನಾಗಿರುವೆನು. ನೀನು ಪ್ರಸನ್ನಳಾಗು, ನನ್ನಲ್ಲಿ ಅನುರಾಗಯುಕ್ತಳಾಗು" ಎಂಬುದಾಗಿ ಹೇಳಲು, ಊರ್ವಶಿಯು ಹೇಳುತ್ತಾಳೆ: "ಎಲೈ ಚಕ್ರವರ್ತಿಯೇ! ನಿನ್ನ ಇಷ್ಟಾನುಸಾರ ಪ್ರಸನ್ನಳಾಗಿರುವೆನು; ಆದರೆ ನನಗೊಂದು ವ್ರತವಿರುವುದು, ಅದನ್ನು ನಡೆಸುವು ದಾದರೆ ನಿನಗೆ ಇಷ್ಟಳಾಗುವೆನು" ಎನಲು; ಪುರೂರವಸ್ಸು ನಿನ್ನ ವ್ರತವೇನೆಂದು ಕೇಳಲು, ಅದಕ್ಕೆ ಊರ್ವಶಿಯು "ಎಲೈ ಚಕ್ರವರ್ತಿಯೇ! ನನಗೆ ಎರಡು ಆಡುಗಳಿರುವುದು; ಅವು ನನಗೆ ಪುತ್ರನ ಹಾಗೇ ಇರತಕ್ಕವುಗಳು; ಅವುಗಳು ಯಾವಾಗಲೂ ನನ್ನ ಹಾಸಿಗೆಯ ಸಮೀಪದಲ್ಲಿಯೇ ಇರಬೇಕು; ನೀನು ನಿರ್ವಸ್ತ್ರನಾಗಿ ಯಾವಾಗಲೂ ನನ್ನನ್ನು ನೋಡಕೂಡದು; ನಾನು ಘೃತವನ್ನು ಹೊರ್ತು ಮತ್ಯಾವ ಆಹಾರವನ್ನೂ ಸೇವಿಸುವುದಿಲ್ಲ. ಇಷ್ಟೇ ನನ್ನ ವ್ರತವು" ಎಂದು ಹೇಳಲು; ಪುರೂರವಸ್ಸು ಊರ್ವಶಿಯ ವ್ರತವನ್ನು ನಡೆಸುವುದಾಗಿ ಅನುಮೋದಿಸಿ, ಅವಳೊಡನೆ ರಾಜನು ಅಲಕಾವತೀಪಟ್ಟಣದಲ್ಲಿಯೂ, ಚೈತ್ರ ರಥಾದಿ ದೇವೋದ್ಯಾನಗಳಲ್ಲಿಯೂ, ಕಮಲಗಳಿಂದ ಅಲಂಕೃತವಾದ ಮಾನಸ ಸರೋವರದಲ್ಲಿಯೂ, ಅತಿರಮಣೀಯವಾದ ಸ್ಥಳಗಳಲ್ಲಿಯೂ ಸಹ ಕ್ರೀಡಿಸುತ್ತಾ, ಅರವತ್ತೊಂದು ವರ್ಷಗಳ ಕಾಲ ಸುಖವನ್ನು ಅನುಭವಿಸಿದನು. ಊರ್ವಶಿಯು ರಾಜನೊಡನೆ ಭೋಗವನ್ನು ಅನುಭವಿಸುತ್ತಾ, ಸ್ವರ್ಗಸುಖವನ್ನೂ ಸಹ ತಿರಸ್ಕಾರಮಾಡಿದ್ದಳು. ರಾಜನೂ ಸಹ ಅದೇ ಪ್ರಕಾರ ಸ್ವರ್ಗಲೋಕದಲ್ಲಿ ಅಪ್ಸರಸ್ತ್ರೀಯರು ಗಂಧರ್ವರು ಇವರುಗಳನ್ನು ತಿರಸ್ಕಾರ ಮಾಡಿದ್ದನು. ಊರ್ವಶೀ ಪುರೂರವಸ್ಸುಗಳ ಪ್ರತಿಜ್ಞೆಯನ್ನು ತಿಳಿದಿದ್ದ ವಿಶ್ವಾವಸುವೆಂಬ ಗಂಧರ್ವನು ಇತರ ಗಂಧರ್ವರಿಂದ ಕೂಡಿ, ರಾತ್ರಿಯಲ್ಲಿ ಊರ್ವಶೀ ಹಾಸಿಗೆಯ ಸಮೀಪದಲ್ಲಿದ್ದ ಒಂದು ಆಡನ್ನು ಅಪಹಾರಮಾಡಿ, ಅಂತರಿಕ್ಷದಲ್ಲಿ ಪ್ರಯಾಣ ಮಾಡುವ ಕಾಲದಲ್ಲಿ, ಆಡು ಗಟ್ಟಿಯಾಗಿ ರೋದನಮಾಡಲಾರಂಭಿಸಿತು. ರೋದನವನ್ನು ಕೇಳಿದ ಊರ್ವಶಿಯು ಗಾಬರಿಯಾಗಿ ಎದ್ದು, ಅನಾಥಳಾದ ನನ್ನ ಮಗನನ್ನು ಯಾರೋ ಅಪಹರಿಸಿಕೊಂಡು ಹೋಗುತ್ತಾರೆ, ನನಗೆ ರಕ್ಷಕರು ಯಾರೂ ಇಲ್ಲ, ಎಂಬುದಾಗಿ ಆರ್ತಧ್ವನಿಯಿಂದ ಕೂಗಲು, ರಾಜನು ನಗ್ನನಾಗಿದ್ದುದರಿಂದ ಹೋಗಲಿಲ್ಲ. ಆಗ ಗಂಧರ್ವರು ಮತ್ತೊಂದು ಆಡನ್ನೂ ಸಹ ಹೊತ್ತುಕೊಂಡು ಹೋದರು. ಊರ್ವಶಿಯು ಅದನ್ನೂ ನೋಡಿ ಅಯ್ಯೋ! ಇನ್ನೊಬ್ಬ ಮಗನನ್ನೂ ಅಪಹರಿಸಿದರಲ್ಲಾ, ಏನು ಮಾಡಲಿ, ಅನಾಥಳಾಗಿರುವೆ

ನಲ್ಲಾ ; ಗಂಡನಿಲ್ಲದವಳಾಗಿರುವೆನಲ್ಲಾ ; ಅನಾಮಧೇಯನಾದ ಪುರುಷನನ್ನು ಆಶ್ರಯಿಸಿದೆನಲ್ಲಾ ; ಎಂದು ನಾನಾ ವಿಧವಾಗಿ ಪ್ರಲಾಪಿಸುತ್ತಿದ್ದ ಕಾಲದಲ್ಲಿ, ರಾಜನಾದ ಪುರೂರವಸ್ಸು ಊರ್ವಶಿಯ ರೋದನವನ್ನು ಸಹಿಸಲಾರದೆ ಕತ್ತಲೆಯಾಗಿರುವುದರಿಂದ, ದಿಗಂಬರನಾಗಿ, ಕತ್ತಿಯನ್ನು ತೆಗೆದುಕೊಂಡು, "ಎಲೈ ದುಷ್ಟನೇ ! ನಿಲ್ಲು" ಎಂದು ಕೂಗುತ್ತಾ ಓಡಿದನು. ಆಗ ಗಂಧರ್ವರು ಮಹಾ ಪ್ರಕಾಶವಾದ ಮಿಂಚನ್ನುಂಟುಮಾಡಿದರು. ಆ ಬೆಳಕಿನಲ್ಲಿ ಊರ್ವಶಿಯು ದಿಗಂಬರನಾದ ಪುರೂರವಸ್ಸನ್ನು ಕಂಡು, ತನ್ನ ಪ್ರತಿಜ್ಞೆಯು ಭಂಗವಾಯಿತೆಂದು ಅಂತರ್ಧಾನಳಾದಳು. ರಾಜನು ಎರಡು ಆಡುಗಳನ್ನೂ ತೆಗೆದುಕೊಂಡು ಬಂದು, ಸಂತೋಷಯುಕ್ತನಾಗಿ ಹಾಸಿಗೆಯನ್ನು ನೋಡಲು ಊರ್ವಶಿಯು ಇರಲಿಲ್ಲ. ಆಗ ರಾಜನು ತಾನು ನಿರ್ವಸ್ತ್ರನಾದುದನ್ನು ಕಂಡು ಮರೆಯಾದಳೆಂದು ತಿಳಿದು ತನ್ನ ಪ್ರತಿಜ್ಞೆಯು ಭಂಗವಾಯಿತೆಂದೂ ಸಹ ತಿಳಿದವನಾಗಿ ಊರ್ವಶಿಯನ್ನು ಹುಡುಕುವುದಕ್ಕೆ ದಿಗಂಬರನಾಗಿ ಹುಚ್ಚನ ಹಾಗೆ ಪ್ರಯಾಣಮಾಡಿದನು. ಕುರುಕ್ಷೇತ್ರದಲ್ಲಿ ಕಮಲಸರೋವರದಲ್ಲಿ ಇತರ ನಾಲ್ಕುಜನ ಅಪ್ಸರಸ್ತ್ರೀಯರ ಕೂಡ ವಿಹರಿಸುತ್ತಿದ್ದ ಊರ್ವಶಿಯನ್ನು ಕಂಡು ಹುಚ್ಚನ ಹಾಗೆ, "ಎಲೈ ಹೆಂಡತಿಯೇ, ಮನಸ್ವಿಯೇ ಘೋರಳೇ ಕಪಟವಾಕ್ಯಳೇ, ನಿಲ್ಲು" ಎಂದನು.

ಆಗ ಊರ್ವಶಿಯು "ಎಲೈ ರಾಜನೇ, ಹುಚ್ಚನಹಾಗೆ ಮಾತಾಡಬೇಡ. ಈಗ ನಾನು ಗರ್ಭಿಣಿಯಾಗಿರುವೆನು. ಇನ್ನೊಂದು ವರ್ಷಕಾಲ ಕಳೆದನಂತರ ಇಲ್ಲಿಗೆ ಬಂದು ನಿನ್ನ ಮಗನನ್ನು ಕರೆದುಕೊಂಡು ಹೋಗು, ನಾನು ಒಂದು ರಾತ್ರಿ ನಿನ್ನೊಡನೇ ಇರುವೆನು" ಎಂದು ಹೇಳಲು; ರಾಜನು ಸಂತೋಷಭರಿತನಾಗಿ ಸ್ವಸ್ಥಾನವನ್ನು ಹೊಂದಿದನು. ಅನಂತರ ಊರ್ವಶಿಯು ಸಹಚಾರಿಣಿಗಳಾದ ಅಪ್ಸರಸ್ತ್ರೀಯರಿಗೆ ಪುರುಷೋತ್ಕೃಷ್ಟನಾದ ಪುರೂರವಸ್ಸಿನ ಜೊತೆಯಲ್ಲಿ ಇದುವರೆಗೂ ವಾಸಮಾಡಿದೆನೆಂದು ಹೇಳಲು; ಅಪ್ಸರಸ್ತ್ರೀಯರು ಆ ರಾಜನ ರೂಪವನ್ನು ನೋಡಿದರೆ ನಮಗೂ ಅವನ ಜೊತೆಯಲ್ಲಿರಬೇಕೆಂದು ಅಭಿಲಾಷೆಯು ಉಂಟಾಗಿದೆ ಎಂಬುದಾಗಿ ಹೇಳಿದರು. ಆ ವೇಳೆಗೆ ಒಂದು ವರ್ಷ ಕಳೆದುದರಿಂದ ಪುರೂರವಸ್ಸು ಅಲ್ಲಿಗೆ ಬಂದನು. ಆಗ ಊರ್ವಶಿಯು ಆಯುಷ್ಮಂತನಾದ ಮಗನನ್ನು ರಾಜನಿಗೆ ಕೊಟ್ಟಳು. ಕೊಟ್ಟನಂತರ ಒಂದು ರಾತ್ರಿ ಪುರೂರವಸ್ಸಿನಲ್ಲಿ ವಿಹರಿಸಿ, ಐದು ಮಕ್ಕಳನ್ನು ಪ್ರಸವಿಸುವುದಕ್ಕೋಸ್ಕರ ಗರ್ಭವನ್ನು ಧರಿಸಿದಳು. ಅಂದರೆ, ಊರ್ವಶೀಜೊತೆಯಲ್ಲಿದ್ದ ನಾಲ್ಕುಜನ ಸ್ತ್ರೀಯರೂ ಸೇರಿ ಊರ್ವಶಿಯೂ ಗರ್ಭವನ್ನು ಧರಿಸಿದಳು. ಐದುಜನ ಅಪ್ಸರಸ್ತ್ರೀಯರೂ ಗರ್ಭವನ್ನು ಧರಿಸಿ ಅಪ್ಸರಸ್ತ್ರೀಯರು ಪುರೂರವನನ್ನು ಕುರಿತು ಹೇಳುತ್ತಾರೆ: "ಓ ರಾಜನೇ, ನಮ್ಮಗಳ

ಸಂತೋಷಾರ್ಥವಾಗಿ ಗಂಧರ್ವರು ನಿನಗೆ ವರವನ್ನು ಕೊಡುತ್ತಾರೆ, ನೀನು ಇಷ್ಟವಾದುದನ್ನು ಅಪೇಕ್ಷಿಸೆಂದು" ಹೇಳಲು, ಆ ಮಾತಿಗೆ ರಾಜನು ಹೇಳುತ್ತಾನೆ: "ನಾನು ಶತ್ರುಗಳನ್ನು ಜಯಿಸಿರುವೆನು, ಇಂದ್ರಿಯಸಾಮರ್ಥ್ಯದಿಂದ ಕೂಡಿರುವೆನು, ಬಂಧುಗಳುಳ್ಳವನಾಗಿರುವೆನು, ಅಪರಿಮಿತೈಶ್ವರ್ಯದಲ್ಲಿರುವೆನು, ಆದುದರಿಂದ ನನಗೆ ಯಾವುದೂ ಬೇಕಾಗಿಲ್ಲ. ಆದರೆ ನಿರಂತರವೂ ಊರ್ವಶಿಯ ಸಹವಾಸದಲ್ಲಿರಬೇಕೆಂಬ ವರವು ಒಂದೇ ಬೇಕಾಗಿದೆ" ಎಂಬುದಾಗಿ ಹೇಳಲು, ಗಂಧರ್ವರು ರಾಜನಿಗೆ ಅಗ್ನಿಸ್ಥಾಲಿಯನ್ನು ಕೊಟ್ಟು, ಹೇಳುತ್ತಾರೆ: "ಓ ರಾಜನೇ, ವೇದಾನುಸಾರವಾದ ಈ ಅಗ್ನಿಯನ್ನು ತೆಗೆದುಕೊಂಡು ಹೋಗಿ, ಮೂರು ಭಾಗಮಾಡಿ, ಊರ್ವಶೀಸಾಲೋಕ್ಯತ್ವವನ್ನು ಹೊಂದುವುದಕ್ಕೋಸ್ಕರ ಯಜ್ಞವನ್ನು ಮಾಡು. ಅದರಿಂದ ನಿನಗೆ ಊರ್ವಶೀ ಸಾಲೋಕ್ಯವುಂಟಾಗುವುದೆಂಬುದಾಗಿ" ಹೇಳಲು; ಪುರೂರವಸ್ಸು ಗಂಧರ್ವರ ಮಾತಿನ ಪ್ರಕಾರ ಅಗ್ನಿಸ್ಥಾಲಿಯನ್ನು ತೆಗೆದುಕೊಂಡು, ತನ್ನ ಪಟ್ಟಣಕ್ಕೆ ಪ್ರಯಾಣಮಾಡಿಬರತಕ್ಕ ದಾರಿಯಲ್ಲಿ, ಒಂದು ಕಾಡಿನಲ್ಲಿ ಯೋಚಿಸುತ್ತಾನೆ. ನನಗೆ ಮೂಢತನವುಂಟಾಯಿತು, ಅಗ್ನಿಸ್ಥಾಲಿಯನ್ನು ಊರ್ವಶಿಯು ಎಂಬುದಾಗಿ ಭ್ರಾಂತಿಪಟ್ಟು, ಅಗ್ನಿಸ್ಥಾಲಿಯನ್ನು ಕಾಡಿನಲ್ಲಿ ಬಿಟ್ಟು, ತನ್ನ ಪಟ್ಟಣಕ್ಕೆ ಬಂದನು. ಅನಂತರ ರಾತ್ರಿ ಮಲಗಿಕೊಂಡು ಅರ್ಧರಾತ್ರಿಸಮಯದಲ್ಲಿ ಎಚ್ಚರಗೊಂಡು, ಯೋಚಿಸುತ್ತಾನೆ. ಗಂಧರ್ವರು ಊರ್ವಶೀಸಾಲೋಕ್ಯವುಂಟಾಗುವುದಕೋಸ್ಕರ ಅಗ್ನಿಸ್ಥಾಲಿಯನ್ನು ಕೊಟ್ಟರೆ, ನಾನು ಕಾಡಿನಲ್ಲಿ ಬಿಟ್ಟುಬಂದೆನು ಎಂದು ಪುನಃ ಅಲ್ಲಿಂದ ಹೊರಟು ಕಾಡಿಗೆ ಬಂದು ಅಗ್ನಿಸ್ಥಾಲಿಯನ್ನು ಇಟ್ಟಿದ್ದ ಸ್ಥಳವನ್ನು ನೋಡಲು, ಅಗ್ನಿಸ್ಥಾಲಿಯು ಹೋಗಿ ಶಮೀಗರ್ಭವಾದ ಅಶ್ವತ್ಥ ಮರದ ತುಂಡಾಗಿರುವುದನ್ನು ನೋಡಿ ಚಿಂತಾಸಕ್ತನಾದನು. ನಾನು ಅಗ್ನಿಸ್ಥಾಲಿಯನ್ನಿಟ್ಟರೆ ಅದು ಶಮೀಗರ್ಭವಾಯಿತು ಎಂದು ಯೋಚಿಸಿ, ಈ ಶಮೀಗರ್ಭವನ್ನೇ ತೆಗೆದುಕೊಂಡು ಹೋಗಿ, ಮಥನ ಮಾಡಿ, ಅದರಲ್ಲಿ ಉತ್ಪನ್ನವಾದ ಅಗ್ನಿಯಲ್ಲಿ ಯಜ್ಞವನ್ನು ಮಾಡುತ್ತೇನೆಂದು ಆಲೋಚಿಸಿ, ಶಮೀಗರ್ಭವನ್ನು ತೆಗೆದುಕೊಂಡು, ಊರಿಗೆ ಬಂದು, ಅರಣಿಯನ್ನು ಮಾಡಿದನು. ಗಾಯತ್ರೀ ಪಠನಮಾಡುತ್ತಾ, ಅರಣಿಯನ್ನು ಮಾಡಿದುದರಿಂದ ಗಾಯತ್ರಿಯು ಎಷ್ಟು ಅಕ್ಷರ ಸಂಖ್ಯೆಯುಳ್ಳುದೋ ಅಷ್ಟು ಅಂಗುಲ ಉದ್ದನಾದ ಅರಣಿಯಾಯಿತು. ಅಂದರೆ, ಅರಣಿಯು ಇಪ್ಪತ್ತುನಾಲ್ಕು ಅಂಗುಲವುಳ್ಳುದಾಯಿತು. ಈ ಪ್ರಕಾರವಿದ್ದ ಅರಣಿಯನ್ನು ಮಥನಮಾಡಿ ಅಗ್ನಿಯನ್ನು ಉತ್ಪತ್ತಿಮಾಡಿ, ಅಗ್ನಿಯನ್ನು ಮೂರು ಭಾಗಮಾಡಿ, ವೇದಾನುಸಾರ ಹೋಮ ಮಾಡಿದನು. ಇದರಿಂದ ಪುರೂರವಸ್ಸು

ಊರ್ವಶೀಸಾಲೋಕ್ಯವನ್ನು ಹೊಂದಿ, ಆನಂದವನ್ನು ಹೊಂದಿದನು. ಮೊದಲು ಒಂದೇ ಅಗ್ನಿಯು ಇದ್ದುದು ಪುರೂರವಸ್ಸಿನಿಂದ ಈಚೆಗೆ ತ್ರೇತಾಗ್ನಿಗಳಾದವು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಆರನೆಯ ಅಧ್ಯಾಯವು ಸಮಾಪ್ತಃ

ಏಳನೆಯ ಅಧ್ಯಾಯವು

"ಪುರೂರವಸ್ಸಿಗೆ ಆಯು, ಆವಸು, ವಿಶ್ವಾವಸು, ಶ್ರುತಾಯು, ಶತಾಯು, ಅಯುತಾಯುರೆಂಬುದಾಗಿ ಆರು ಜನ ಪುತ್ರರು ಹುಟ್ಟಿದರು. ಆವಸುವಿನಿಂದ ಭೀಮನೂ, ಭೀಮನಿಂದ ಕಾಂಚನನೂ, ಕಾಂಚನನಿಂದ ಸುಹೋತ್ರನೂ, ಅವನಿಂದ ಜಹ್ನುವೂ ಸಹ ಹುಟ್ಟಿದರು. ಈ ಜಹ್ನುಋಷಿಯು ಯಜ್ಞಮಾಡತಕ್ಕ ಕಾಲದಲ್ಲಿ ಯಜ್ಞಶಾಲೆಗೆ ಗಂಗಾನದಿಯು ಪ್ರವೇಶಮಾಡಲು ಜಹ್ನುಋಷಿಯು ಕೋಪಿಸಿಕೊಂಡು ಭಗವಂತನಾದ ಯಜ್ಞಪುರುಷನನ್ನು ಸಮಾಧಿಯಿಂದ ಮನಸ್ಸಿನಲ್ಲಿ ಧರಿಸಿ ಗಂಗಾನದಿಯನ್ನು ಪಾನಮಾಡಿದನು ಅನಂತರದಲ್ಲಿ ದೇವತೆಗಳು ಜಹ್ನುಋಷಿಯನ್ನು ಪ್ರಾರ್ಥಿಸಲು ಋಷಿಯು ಗಂಗಾನದಿಯನ್ನು ಕಳುಹಿಸಲು, ದೇವತೆಗಳು ಋಷಿಗೆ ಗಂಗೆಯು ಮಗಳಾಗಿರಲೆಂದು ಹೇಳಿದರು. ತದಾಪ್ರಭೃತಿ ಜಾಹ್ನವೀ ಎಂಬುದಾಗಿ ಗಂಗೆಗೆ ಹೆಸರುಂಟಾಯಿತು. ಜಹ್ನುವಿಗೆ ಸುಮಂತುವೂ, ಸುಮಂತುವಿಗೆ ಅಜಕನೂ, ಅವನಿಂದ ಬಲಾಕಾಶ್ವನೂ, ಅವನಿಂದ ಕುಶನೂ, ಕುಶನಿಂದ ಕುಶಾಂಬ ಕುಶನಾಭ ಅಧೂರ್ತರಜಸ ವಸುಗಳೆಂಬುದಾಗಿ ನಾಲ್ವರೂ ಹುಟ್ಟಿದರು. ಕುಶಾಂಬನು ತನಗೆ ಇಂದ್ರಸಮಾನನಾದ ಮಗನಾಗಬೇಕೆಂದು ತಪಸ್ಸುಮಾಡಲು, ಇಂದ್ರನೇ ಮಗನಾಗಿ ಹುಟ್ಟಿದನು. ಅವನಿಗೆ ಗಾಧಿಯೆಂಬುದಾಗಿ ನಾಮಕರಣ ಮಾಡಿದನು. ಗಾಧಿಯು ಸತ್ಯವತೀಯೆಂಬ ಮಗಳನ್ನು ಪಡೆದನು. ಭೃಗುವಂಶೋತ್ಪನ್ನನಾದ ಋಚೀಕನು ಗಾಧಿಯ ಬಳಿಗೆ ಬಂದು ಸತ್ಯವತಿಯನ್ನು ನನಗೆ ಕೊಡು ಎಂಬುದಾಗಿ ಕೇಳಿದುದಕ್ಕೆ ಗಾಧಿಯು ಅತಿ ಕೋಪಿಷ್ಠನಾಗಿಯೂ, ಅತಿವೃದ್ಧನಾಗಿಯೂ ಇರುವ ಋಚೀಕನಿಗೆ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ ಋಚೀಕನಿಗೆ ಹೇಳುತ್ತಾನೆ: ಎಲೈ ಬ್ರಾಹ್ಮಣನೇ, ನನ್ನ ಮಗಳಾದ ಸತ್ಯವತಿಯನ್ನು ನಿನಗೆ ಕೊಡಬೇಕಾದರೆ, ಚಂದ್ರನ ಕಾಂತಿಗೆ ಸದೃಶವಾಗಿಯೂ, ಒಂದು ಕಡೆ ಕಿವಿಯು ಶ್ಯಾಮವರ್ಣವಾಗಿಯೂ, ಮಹಾವೇಗದಿಂದ ಕೂಡಿರುವುದಾಗಿಯೂ ಇರುವ ಒಂದು ಸಾವಿರ ಕುದುರೆಗಳನ್ನು ಕೊಟ್ಟರೆ

ನನ್ನ ಮಗಳನ್ನು ಕೊಡುತ್ತೇನೆಂದು ಹೇಳಿದನು. ಆ ಮಾತಿಗೆ ಋಚಿಕನು ಅನು ನೋದಿಸಿ ವರುಣನಿಂದ ಸಹಸ್ರಾಶ್ವಗಳನ್ನು ತೆಗೆದುಕೊಂಡುಬಂದು, ಗಾಧಿಗೆ ಕೊಟ್ಟು, ಸತ್ಯವತಿಯನ್ನು ವಿವಾಹಮಾಡಿಕೊಂಡನು. ಋಚಿಕನು ಪುತ್ರಾರ್ಥ ವಾಗಿ ಮಂತ್ರಸಿದ್ಧವಾದ ಚರುವನ್ನು ಮಾಡಿ, ಸತ್ಯವತಿಯ ಅಪೇಕ್ಷೆ ಪ್ರಕಾರ ಅವಳ ತಾಯಿಗೂ ಕ್ಷತ್ರಪುತ್ರನು ಹುಟ್ಟುವಹಾಗೆ ಚರುವನ್ನು ಮಾಡಿ, ಎರಡು ಚರುವನ್ನೂ ಇಟ್ಟು, ಸಮಿದ್ದರ್ಭಾದಿಗಳಿಗೆ ಹೋಗುವ ಕಾಲದಲ್ಲಿ ಪತ್ನಿಯಾದ ಸತ್ಯವತಿಗೆ ಬ್ರಾಹ್ಮಣಚರುವನ್ನು ನೀನು ಸ್ವೀಕರಿಸು, ಕ್ಷತ್ರಚರುವನ್ನು ನಿಮ್ಮ ತಾಯಿಯು ತೆಗೆದುಕೊಳ್ಳಲಿ ಎಂದು ಹೇಳಿ ಹೊರಟುಹೋದನು. ಅನಂತರ ಇವರು ಚರುವನ್ನು ಸೇವಿಸುವ ಕಾಲದಲ್ಲಿ ಸತ್ಯವತಿಗೆ ತಾಯಿಯು ಹೇಳುತ್ತಾಳೆ: "ಓ ಪುತ್ರಿಯೇ! ಬ್ರಾಹ್ಮಣಚರುವನ್ನು ನನಗೆ ಕೊಡು, ಕ್ಷತ್ರಚರುವನ್ನು ನೀನು ಸೇವಿಸು; ಈ ಚರುವಿನಿಂದ ಹುಟ್ಟಿದ ಮಗನು ಅಖಿಲಭೂಮಂಡಲಕ್ಕೂ ಅಧಿಪತಿ ಯಾಗುವುದರಿಂದ ನೀನು ಅನೇಕ ಭೋಗಗಳನ್ನು ಅನುಭವಿಸಬಹುದೆಂದು" ತಾಯಿಯು ಹೇಳಲು ಆ ಮಾತಿಗೆ ಸತ್ಯವತಿಯು ಇಷ್ಟಪಟ್ಟು ಕ್ಷತ್ರಚರುವನ್ನು ತಾನೂ, ಬ್ರಹ್ಮಚರುವನ್ನು ತಾಯಿಯೂ ಸಹ ಸೇವನೆಮಾಡಿದರು. ಅನಂತರ ಋಚಿಕನು ವನದಿಂದ ಮನೆಗೆ ಬಂದು ಸತ್ಯವತಿಯನ್ನು ನೋಡಿ, "ಎಲೈ ಪಾಪಿಯೆ, ನೀನು ಅಕಾರ್ಯವನ್ನು ಮಾಡಿರುವೆ, ನಿನ್ನನ್ನು ನೋಡಿದರೆ ಮಹಾರೌದ್ರವಾದ ಶರೀರವನ್ನು ಧರಿಸಿರುವೆ; ನಿಮ್ಮ ತಾಯಿಗೆ ಮಾಡಿದ ಚರುವನ್ನು ಸೇವಿಸಿರುವೆ; ಇದು ಅಯುಕ್ತವಾಯಿತು. ನೀನು ಬ್ರಹ್ಮಚರುವನ್ನು ಸೇವಿಸಿದ್ದರೆ ಅಖಿಲಶಾಂತಿ, ಜ್ಞಾನಾದಿಗುಣಸಂಪದ್ಯುಕ್ತನಾದ ಪುತ್ರನು ಹುಟ್ಟುತ್ತಿದ್ದನು. ಈಗ ಅದಕ್ಕೆ ವ್ಯತಿರಿಕ್ತವಾದ ಅತ್ಯಂತ ರೌದ್ರಾಸ್ತ್ರಗಳನ್ನು ಧರಿಸುವ-ಕ್ಷತ್ರಿಯನಾದ ಮಗನು ಹುಟ್ಟುವನು" ಎಂದು ಹೇಳಲು, ಆ ಮಾತನ್ನು ಕೇಳಿದ ಸತ್ಯವತಿಯು ಪತಿಯ ಪಾದವನ್ನು ಹಿಡಿದು ನೀನು ಆಗ್ರಹಪಡದೇ ಅನುಗ್ರಹಮಾಡು, ನನ್ನ ಅವಿಜ್ಞತೆ ಯನ್ನು ಕ್ಷಮಿಸು, ರೌದ್ರನಾದ ಕ್ಷತ್ರಿಯಪುತ್ರನು ಆಗದಹಾಗೆ ಮಾಡು, ಕ್ಷತ್ರಿಯ ನಾದರೂ ಶಿಷ್ಟನಾಗಿರುವ ಹಾಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಲು, ಋಚಿಕನು ನಿನ್ನ ಇಚ್ಛಾನುಸಾರವಾಗಲೆಂದು ಅನುಗ್ರಹಮಾಡಿದನು. ಅನಂತರ ಸತ್ಯವತಿಯು ಜಮದಗ್ನಿಯನ್ನು ಪ್ರಸವಿಸಿದಳು. ಅವಳ ತಾಯಿಯು ವಿಶ್ವಾಮಿತ್ರನನ್ನು ಪಡೆದಳು. ಸತ್ಯವತಿಯು ಕೌಶಿಕೀನದಿಯಾದಳು. ಜಮದಗ್ನಿಯು ಇಕ್ಷ್ವಾಕು ವಂಶೋತ್ಪನ್ನನಾದ ರೇಣುರಾಜನ ಮಗಳಾದ ರೇಣುಕೆಯನ್ನು ವಿವಾಹಮಾಡಿ ಕೊಂಡು ಅವಳಲ್ಲಿ ಸಮಸ್ತ ಕ್ಷತ್ರಿಯರನ್ನು ನಾಶಮಾಡುವ, ಸಕಲಲೋಕಕ್ಕೂ ಗುರುವಾದ ಶ್ರೀಮನ್ನಾರಾಯಣನ ಅಂಶನಾದ ಪರಶುರಾಮನನ್ನು ಪಡೆದನು.

ವಿಶ್ವಾಮಿತ್ರನಿಗೆ ತಂಗಿ ಮಗನಾದ ಶುನಶ್ಶೇಫನನ್ನು ದೇವತೆಗಳು ಪುತ್ರನನ್ನಾಗಿ ಕೊಟ್ಟದುದರಿಂದ, ದೇವರಾತನೆಂಬ ಹೆಸರನ್ನು ಶುನಶ್ಶೇಫನು ಪಡೆದನು. ವಿಶ್ವಾಮಿತ್ರನಿಗೆ ಮಧುಚ್ಛಂದ, ಧನಂಜಯ, ಕೃತದೇವ, ಅಷ್ಟಕ, ಕಚ್ಛಪ, ಹರಿತಾಖ್ಯರೆಂಬ ಪುತ್ರರು ಹುಟ್ಟಿದರು. ಇದರಿಂದ ಕೌಶಿಕಗೋತ್ರವು ಬಹು ವಿಸ್ತಾರವನ್ನು ಹೊಂದಿತು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಏಳನೆಯ ಅಧ್ಯಾಯವು ಸಮಾಪ್ತಃ

ಎಂಟನೆಯ ಅಧ್ಯಾಯವು

"ಪುರೂರವಸ್ಸಿಗೆ ಜ್ಯೇಷ್ಠಪುತ್ರನಾದ ಆಯುವು ರಾಹುವಿನ ಮಗಳನ್ನು ವಿವಾಹ ಮಾಡಿಕೊಂಡು ಅವಳಲ್ಲಿ ನಹುಷ, ಕ್ಷತ್ರವೃದ್ಧ, ರಂಭ, ರಜಿ, ಅನೇನಾಃ ಎಂಬುದಾಗಿ ಐದು ಜನ ಪುತ್ರರನ್ನು ಪಡೆದನು. ಕ್ಷತ್ರವೃದ್ಧನಿಂದ ಸುಹೋತ್ರನೂ, ಇವನಿಂದ ಕಾಶ್ಯಪ, ಕಾಶ, ಗೃತ್ಸಮದರೆಂಬ ಮೂರುಜನ ಪುತ್ರರೂ, ಗೃತ್ಸಮದನಿಂದ ಶೌನಕಮಹರ್ಷಿಯೂ, ಕಾಶ್ಯಪನಿಂದ ಕಾಶೇಯನೆಂಬ ಕಾಶೀರಾಜನೂ, ಇವನಿಂದ ರಾಷ್ಟ್ರನೂ, ರಾಷ್ಟ್ರನಿಂದ ದೀರ್ಘತಪನೂ, ಇವನಿಂದ ಧನ್ವಂತರಿಯೂ ಸಹ ಹುಟ್ಟಿದರು. ಧನ್ವಂತರಿಗೆ ಶ್ರೀಮನ್ನಾರಾಯಣನು ಹಿಂದಿನ ಜನ್ಮದಲ್ಲಿ ಅಂದರೆ, ಕ್ಷೀರಸಮುದ್ರದಲ್ಲಿ ಹುಟ್ಟಿದ ಕಾಲದಲ್ಲಿ ಹೇಳಿದ್ದೇನೆಂದರೆ, ನೀನು ಕಾಶೀರಾಜನ ಗೋತ್ರದಲ್ಲಿ ಹುಟ್ಟಿ, ಕಾಯ, ಬಾಲ, ಗೃಹ, ಊರ್ಧ್ವಾಂಗ, ಶಲ್ಯ, ದಂಷ್ಟ್ರ, ಜರಾ, ವಿಷ ಎಂಬ ಈ ಎಂಟು ಚಿಕಿತ್ಸೆಗಳು ಅಂಗವಾಗಿಯುಳ್ಳ ಆಯುರ್ವೇದವನ್ನು ಮಾಡಿ, ಯಜ್ಞಭಾಗವನ್ನೂ ಸಹ ಹೊಂದುವೆಯೆಂದು ವರವನ್ನು ಕೊಟ್ಟಿದ್ದನು. ಧನ್ವಂತರಿಗೆ ಕೇತುಮಂತನೂ, ಇವನಿಂದ ಭೀಮರಥನೂ, ಇವನಿಂದ ದಿವೋದಾಸನೂ, ಇವನಿಗೆ ಪ್ರತರ್ದನನೂ ಸಹ ಹುಟ್ಟಿದರು. ಪ್ರತರ್ದನನು ಅನೇಕ ಶತ್ರುಗಳನ್ನು ಜಯಿಸಿದುದರಿಂದ ಇವನಿಗೆ ಶತ್ರುಜಿತ್ ಎಂಬ ಹೆಸರೂ ಸಹ ಉಂಟಾಯಿತು. ಇವನಿಗೆ ವತ್ಸನೂ ಹುಟ್ಟಿದನು. ವತ್ಸನು ಬಹಳ ಸತ್ಯಪರನಾದುದರಿಂದ, ಇವನಿಗೆ ಋತಧ್ವಜನೆಂಬ ಸಂಜ್ಞೆಯುಂಟಾಯಿತು. ಇವನು ಕುವಲಯವೆಂಬ ಕುದುರೆಯನ್ನು ಪಡೆದುದರಿಂದ ಕುವಲಯಾಶ್ವನೆಂಬುದಾಗಿ ಲೋಕದಲ್ಲಿ ಪ್ರಖ್ಯಾತಿಯಾಯಿತು. ವತ್ಸನಿಗೆ ಅಲರ್ಕನು ಹುಟ್ಟಿದನು. ಈ ಅಲರ್ಕನು ಅರವತ್ತುಸಾವಿರದ ಆರುನೂರು ವರ್ಷ ರಾಜ್ಯಪರಿಪಾಲನೆ

ಮಾಡಿದುದರಿಂದ ಅಲರ್ಕನಂತೆ ರಾಜ್ಯಪರಿಪಾಲನೆ ಮಾಡಿದವನು ಇನ್ನ್ಯಾರೂ ಇಲ್ಲವೆಂಬುದಾಗಿ ಹೆಸರನ್ನು ಪಡೆದನು. ಅಲರ್ಕನಿಗೆ ಸನ್ನತಿಯೂ, ಸನ್ನತಿಗೆ ಸುನೀತನೂ, ಇವನಿಗೆ ಸುಕೇತುವೂ, ಇವನಿಂದ ಧರ್ಮಕೇತುವೂ, ಇವನಿಂದ ಸತ್ಯಕೇತುವೂ, ಇವನಿಗೆ ವಿಭುವೂ, ವಿಭುವಿಗೆ ಸ್ವವಿಭುವೂ, ಇವನಿಗೆ ಸುಕುಮಾರನೂ, ಇವನಿಗೆ ದೃಷ್ಟಕೇತುವೂ, ಅವನಿಂದ ವೀತಿಹೋತ್ರನೂ, ಅನಂತರ ಭಾರ್ಗನೂ, ಭಾರ್ಗನಿಂದ ಭಾರ್ಗಭೂಮಿಯೂ ಸಹ ಹುಟ್ಟಿದರು. ಇವರುಗಳೆಲ್ಲರೂ ಕಾಶ್ಯಪರಾಜರುಗಳು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಎಂಟನೆಯ ಅಧ್ಯಾಯವು ಸಮಾಪ್ತಃ

ಒಂಬತ್ತನೆಯ ಅಧ್ಯಾಯವು

"ರಜಿಯೆಂಬುವನಿಗೆ ಮಹಾಪರಾಕ್ರಮಿಗಳಾದ ಐನೂರು ಜನ ಪುತ್ರರು ಹುಟ್ಟಿದರು. ದೇವಾಸುರರ ಯುದ್ಧದಲ್ಲಿ ಪರಸ್ಪರ ಜಯಾಪೇಕ್ಷಿಗಳಾದ ದೇವಾಸುರರು ಬ್ರಹ್ಮನ ಸಮೀಪಕ್ಕೆ ಹೋಗಿ ಯಾವ ಪಕ್ಷದವರು ಜಯಿಸುತ್ತಾರೆಂದು ಕೇಳಲು ಅದಕ್ಕೆ ಬ್ರಹ್ಮನು ಹೇಳುತ್ತಾನೆ: ರಜಿಯು ಯಾವ ಕಡೆಗೆ ಸಹಾಯಕನಾಗಿ ಬರುತ್ತಾನೋ ಆ ಪಕ್ಷವು ಜಯವನ್ನು ಹೊಂದುವುದೆಂದು ಹೇಳಲು ; ದೈತ್ಯರು ರಜೀ ಸಮೀಪಕ್ಕೆ ಬಂದು ನೀನು ನಮಗೆ ಯುದ್ಧಸಹಾಯವನ್ನು ಮಾಡಬೇಕೆಂದು ಕೇಳಿಕೊಂಡಿದ್ದುದಕ್ಕೆ ರಜಿಯು ಹೇಳಿದ್ದೇನೆಂದರೆ, ಯುದ್ಧದಲ್ಲಿ ದೇವತೆಗಳನ್ನು ಗೆದ್ದರೆ ಇಂದ್ರತ್ವವನ್ನು ನನಗೆ ಕೊಡುವುದಾದರೆ ನಿಮಗೆ ಸಹಾಯಕನಾಗುವೆನೆಂದು ಹೇಳಲು, ಆ ಮಾತಿಗೆ ಅಸುರರು ಹೇಳಿದ್ದೇನೆಂದರೆ, ನಾವು ಹೇಳುವುದೊಂದು ಮಾಡುವುದೊಂದು ಮಾಡತಕ್ಕವರಲ್ಲ. ನಮಗೆ ಇಂದ್ರನು ಪ್ರಹ್ಲಾದನೇ ಹೊರ್ತು ಮತ್ತ್ಯಾರೂ ಇಲ್ಲವೆಂಬುದಾಗಿ ಹೇಳಿ ಹೊರಟುಹೋದರು. ಆಗ ದೇವತೆಗಳು ರಜಿಯ ಬಳಿಗೆ ಬಂದು ಯುದ್ಧಸಹಾಯಕನಾಗೆಂದು ಕೇಳಿಕೊಳ್ಳಲು, ರಜಿಯು ರಾಕ್ಷಸರಿಗೆ ಹೇಳಿದಂತೆಯೇ ಹೇಳಿದನು. ಆ ಮಾತಿಗೆ ದೇವತೆಗಳು ಒಪ್ಪಿಕೊಂಡು ರಜಿಯನ್ನು ಕರೆದುಕೊಂಡು ಹೋಗಿ ಯುದ್ಧವನ್ನು ಮಾಡಿದರು. ಯುದ್ಧದಲ್ಲಿ ರಜಿಯಿಂದ ಅಸುರರು ಪರಾಜಿತರಾದರು. ಆಗ ದೇವೇಂದ್ರನು ರಜಿಯ ಕಾಲುಗಳಲ್ಲಿ ತಲೆಯನ್ನಿಟ್ಟು ನಮಸ್ಕಾರಮಾಡುತ್ತಾ ಹೇಳುತ್ತಾನೆ: "ಎಲೈ ರಜಿಯೆ ! ನೀನು ನಮ್ಮನ್ನು ಭಯದಿಂದ ಕಾಪಾಡಿದುದರಿಂದ ನಮಗೆ ತಂದೆಯಾಗಿ

ಇರುವೆ. ಸಮಸ್ತಲೋಕಗಳಿಗೂ ನೀನು ಉತ್ತಮೋತ್ತಮನಾದವನು, ನಿನ್ನ ಮಗನಾದ ನಾನು ತ್ರಿಲೋಕೇಂದ್ರನಾಗಿರುವೆನು. ಮಗನು ಇಂದ್ರನಾದರೆ ತಂದೆಗೆ ಸಂತೋಷವಲ್ಲವೆ?" ಈ ರೀತಿ ವಿನಯದಿಂದ ಪ್ರಾರ್ಥಿಸಲು, ರಜಿಯು ಇಂದ್ರನ ಮಾತಿಗೆ ನಗುತ್ತಾ, ಒಳ್ಳೇದು ಹಾಗೇ ಆಗಲಿ. ನೀನು ನನಗೆ ನಮಸ್ಕಾರ ಮಾಡಿ ಶರಣಾಗತನಾದುದರಿಂದ, ನಿನ್ನ ರಾಜ್ಯವನ್ನು ತೆಗೆದುಕೊಳ್ಳುವುದು ರಾಜಧರ್ಮವಲ್ಲ. ನಿನ್ನ ಯುಕ್ತಿವಾಕ್ಯಗಳಿಗೆ ನಾನು ಅಂಜತಕ್ಕವನಲ್ಲ, ಹೋಗು! ಇಂದ್ರಾಧಿಪತ್ಯವನ್ನು ಮಾಡೆಂದು ಹೇಳಿ, ರಜಿಯು ತನ್ನ ಪಟ್ಟಣಕ್ಕೆ ಬಂದನು. ಕೆಲವು ಕಾಲ ಕಳೆದನಂತರ ರಜಿಯು ಲೋಕಾಂತರವನ್ನು ಹೊಂದಿದನು. ಆಮೇಲೆ ನಾರದನು ರಜಿಯ ಪುತ್ರರ ಸಮೀಪಕ್ಕೆ ಬಂದು, ಇಂದ್ರತ್ವವು ನಿಮಗೆ ಪಿತ್ರಾರ್ಜಿತವಾದುದು. ಅದನ್ನು ನೀವು ಹೊಂದಬಹುದೆಂದು ಹೇಳಲು; ನಾರದನಿಂದ ಪ್ರೇರಿತರಾದ ರಜಿಯ ಪುತ್ರರು ಇಂದ್ರನಲ್ಲಿಗೆ ಹೋಗಿ, ದೇವರಾಜ್ಯವನ್ನು ಯಾಚನೆ ಮಾಡಿದರು. ಆ ಮಾತಿಗೆ ಇಂದ್ರನು ಕೊಡದೇ ಇದ್ದುದರಿಂದ, ರಜಿಯ ಪುತ್ರರು ಇಂದ್ರನನ್ನು ಸೋಲಿಸಿ, ದೇವರಾಜ್ಯಾಧಿಪತ್ಯವನ್ನು ಹೊಂದಿದರು. ಈ ಪ್ರಕಾರ ಕೆಲವು ಕಾಲ ಕಳೆದನಂತರ ಶತಕ್ರತುವು ಅಂತರಂಗದಲ್ಲಿ ಪುರೋಹಿತನಾದ ಬೃಹಸ್ಪತಿಗೆ ಹೇಳುತ್ತಾನೆ: "ಓ ಬೃಹಸ್ಪತಿಯೇ! ನೀನು ನನಗೆ ಇಷ್ಟನಾಗಿದ್ದಾಗ್ಯೂ ರಾಜ್ಯವು ಹೋದಲಾಗಾಯಿತು ಇದುವರೆಗೆ ನನಗೆ ಕ್ಷುತ್ಪರಿಹಾರಾರ್ಥವಾಗಿ ಒಂದು ದಿವಸವಾದರೂ ಬದರೀಫಲದ ಪ್ರಮಾಣದಷ್ಟು ಪುರೋಡಾಶವನ್ನೂ ಕೊಡ, ಅಂದರೆ, ಯಜ್ಞಭಾಗವನ್ನು ಕೊಡಲಿಲ್ಲವೆಂಬುದಾಗಿ" ಹೇಳಲು; ಅದಕ್ಕೆ ಬೃಹಸ್ಪತಿಯು ಇಂದ್ರನಿಗೆ ಹೇಳುತ್ತಾನೆ: "ಎಲೈ ಇಂದ್ರನೇ, ಈಗ ನೀನು ಹೇಳಿದ ಮಾತನ್ನು ಮೊದಲೇ ಹೇಳಿದ್ದರೆ ಅನುಕೂಲಮಾಡುತ್ತಿದ್ದೆನು. ಆದರೆ ಇನ್ನು ಸ್ವಲ್ಪ ದಿವಸ ಸುಮ್ಮನಿದ್ದರೆ, ನಿನಗೆ ರಾಜ್ಯಾಧಿಪತ್ಯವು ಬರುವ ಹಾಗೆ ಮಾಡುತ್ತೇನೆಂದು ಹೇಳಿಕಳುಹಿಸಿದನು. ಅನಂತರ ಬೃಹಸ್ಪತಿಯು ರಜಿಯ ಪುತ್ರರಿಗೆ ಬುದ್ಧಿಮೋಹಕರವಾದ ಆಭಿಚಾರಕರ್ಮವನ್ನು ಮಾಡಿ ಇಂದ್ರನ ತೇಜೋಭಿವೃದ್ಧಿಕರ್ಮವನ್ನೂ ಸಹ ಮಾಡಿದನು. ರಜೀಪುತ್ರರು ಬೃಹಸ್ಪತಿಯಿಂದ ಮಾಡಿದ ಆಭಿಚಾರಕರ್ಮದಿಂದ ಬುದ್ಧಿಮೋಹವನ್ನು ಹೊಂದಿದವರಾಗಿ ವೇದವಾದಪರಾಙ್ಮುಖರಾಗಿ ಧರ್ಮತ್ಯಾಗಿಗಳಾದರು. ಆಗ ಶುಕ್ರನು ಧರ್ಮಪರಾಙ್ಮುಖರಾದ ರಜೀಪುತ್ರರನ್ನು ಸೋಲಿಸಿ, ಪುನಃ ಇಂದ್ರತ್ವವನ್ನು ಹೊಂದಿದನು. ಈ ಚರಿತ್ರೆಯನ್ನು ಕೇಳಿದ ಪುರುಷನು ಯಾವಾಗಲೂ ದೌರಾತ್ಮ್ಯವನ್ನು ಹೊಂದುವದಿಲ್ಲ. ರಂಭನು ಅಪುತ್ರವಂತನಾದನು. ಕ್ಷತ್ರವೃದ್ಧಸುತನು ಪ್ರತಿಕ್ಷತ್ರನು. ಇವನಿಗೆ ಸೃಂಜಯನು, ಇವನಿಗೆ ಜಯನು, ಜಯನಿಂದ ವಿಜಯನೂ, ಇವನಿಂದ

ಕೃತನೂ, ಕೃತನಿಂದ ಹರ್ಯ್ಯಧನನೂ, ಅವನಿಂದ ಸಹದೇವನೂ, ಇವನಿಂದ ಆದೀನನೂ, ಅನಂತರ ಜಯತ್ಸೇನನೂ, ಆಮೇಲೆ ಸಂಕೃತಿಯೂ, ಇವನಿಂದ ಕ್ಷತ್ರಧರ್ಮನೂ ಸಹ ಹುಟ್ಟಿದರು.”

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಒಂಬತ್ತನೆಯ ಅಧ್ಯಾಯವು ಸಮಾಪ್ತಃ

ಹತ್ತನೆಯ ಅಧ್ಯಾಯವು

“ನಹುಷನಿಗೆ ಯತಿ, ಯಯಾತಿ, ಸಂಯಾತಿ, ಆಯಾತಿ, ವಿಯಾತಿ, ಕೃತಿಗಳೆಂಬುದಾಗಿ ಆರುಜನ ಪುತ್ರರು ಹುಟ್ಟಿದರು. ಯತಿಯು ರಾಜ್ಯವನ್ನು ಅಪೇಕ್ಷಿಸಲಿಲ್ಲ, ಯಯಾತಿಯು ರಾಜನಾದನು. ಈ ಯಯಾತಿಯು ಶುಕ್ರಾಚಾರ್ಯನ ಮಗಳಾದ ದೇವಯಾನಿಯನ್ನೂ, ವೃಷಪರ್ವನ ಮಗಳಾದ ಶರ್ಮಿಷ್ಠೆಯನ್ನೂ ಸಹ ವಿವಾಹಮಾಡಿಕೊಂಡನು. ದೇವಯಾನಿಯು ಯದುವನ್ನೂ, ದುರ್ವಸುವನ್ನೂ ಸಹ ಪಡೆದಳು. ಶರ್ಮಿಷ್ಠೆಯು ದ್ರುಹ್ಯನನ್ನೂ ಅನುವನ್ನೂ ಪೂರುವನ್ನೂ ಸಹ ಪಡೆದಳು. ಯಯಾತಿಯು ಶರ್ಮಿಷ್ಠೆಯಲ್ಲಿ ಅತ್ಯಂತ ಪ್ರೀತಿಯಾಗಿದ್ದುದರಿಂದ, ಶರ್ಮಿಷ್ಠೆಯು ದೇವಯಾನಿಯನ್ನು ತನ್ನ ದಾಸಿಯ ಹಾಗೆ ಭಾವಿಸಿದ್ದುದರಿಂದ ದೇವಯಾನಿಯು ತಂದೆಗೆ ಈ ವೃತ್ತಾಂತವನ್ನು ಹೇಳಲು ; ಶುಕ್ರಾಚಾರ್ಯನು ಯಯಾತಿಗೆ ಅಕಾಲದಲ್ಲಿಯೇ ವೃದ್ಧಾಪ್ಯವುಂಟಾಗಲಿ ಎಂದು ಶಾಪವನ್ನು ಕೊಟ್ಟನು. ಆಗ ಯಯಾತಿಯು ಶುಕ್ರಾಚಾರ್ಯನನ್ನು ಕ್ಷಮಾಪಣೆ ಕೇಳಲು, ಶುಕ್ರಾಚಾರ್ಯನು ನಿನ್ನ ವೃದ್ಧಾಪ್ಯವನ್ನು ಯಾರಾದರೂ ತೆಗೆದುಕೊಂಡರೆ, ವೃದ್ಧಾಪ್ಯವು ಹೋಗಲಿ ಎಂದು ಅನುಗ್ರಹಮಾಡಿದನು. ಆಗ ಯಯಾತಿಯು ಯದುವಿಗೆ ನನ್ನ ವೃದ್ಧಾಪ್ಯವನ್ನು ತೆಗೆದುಕೊಂಡು ನಿನ್ನ ಯೌವನವನ್ನು ನನಗೆ ಕೊಡು ಎಂಬುದಾಗಿ ಕೇಳಲು, ಆ ಮಾತಿಗೆ ಯದುವು ಸಮ್ಮತಿಸಿದ ಕಾರಣ ಯಯಾತಿಯು ಮಗನಿಗೆ ರಾಜ್ಯಾರ್ಹನಾಗಬೇಡವೆಂದು ಶಪಿಸಿದನು. ಶಾಪವು ಯದುವಿನ ಸಂತತಿಗೇ ಅನ್ವಯಿಸುವುದು. ಅನಂತರ ರಾಜನು ದುರ್ವಸುವನ್ನೂ, ದ್ರುಹ್ಯಮನುವನ್ನೂ ಸಹ ವೃದ್ಧಾಪ್ಯವನ್ನು ತೆಗೆದುಕೊಂಡು ಯೌವನವನ್ನು ಕೊಡಿ ಎಂಬುದಾಗಿ ಕೇಳಲು; ಅವರೂ ಸಹ ವೃದ್ಧಾಪ್ಯವನ್ನು ತೆಗೆದುಕೊಳ್ಳಲು ಸಮ್ಮತಿಸದಿರಲು, ಅವರಿಗೂ ಶಾಪವನ್ನು ಕೊಟ್ಟನು. ಆಮೇಲೆ ಶರ್ಮಿಷ್ಠೆಯ ಕನಿಷ್ಠಮಗನಾದ ಪೂರುವನ್ನು ಕೇಳಲು ; ಪೂರುವು ತಂದೆಯ ಆಜ್ಞೆಯ ಪ್ರಕಾರ,

ಯೌವನವನ್ನು ತಂದೆಗೆ ಕೊಟ್ಟು, ಅವನಿಂದ ಮಹಾಪ್ರಸಾದರೂಪವಾದ ವೃದ್ಧಾಪ್ಯವನ್ನು ತೆಗೆದುಕೊಂಡನು ; ಅನಂತರ ಪೂರುವು ಯೌವನವನ್ನು ಹೊಂದಿ ಧರ್ಮಕ್ಕೆ ವಿರುದ್ಧವಿಲ್ಲದಂತೆ ವಿಷಯಾಸಕ್ತನಾಗಿ ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದನು. ಪ್ರತಿದಿನವೂ ಪೂರುವು ದೇವಯಾನೆಯಿಂದಲೂ ಶರ್ಮಿಷ್ಠೆಯಿಂದಲೂ ಕಾಮೋಪಭೋಗವನ್ನು ಅನುಭವಿಸುತ್ತಾ ಅದನ್ನೇ ಅತಿರಮ್ಯವಾದುದೆಂದು ತಿಳಿದಿದ್ದನು. ಅಗ್ನಿಯು ಹವಿಸ್ಸಿನಿಂದ ಯಾವ ಪ್ರಕಾರ ವೃದ್ಧಿಯಾಗುವುದೋ ಅದೇ ರೀತಿ ಕಾಮವು ಉಪಭೋಗದಿಂದ ವೃದ್ಧಿಯಾಗುವುದು. ಕಾಮಕ್ಕೆ ಅಂತ್ಯವೇ ಇರುವುದಿಲ್ಲ. ಭೂಮಿಯಲ್ಲಿ ಯಾವ ಮನುಷ್ಯನಿಗೆ ಧನ, ಧಾನ್ಯ, ಸ್ತ್ರೀ, ಪಶು ಇವುಗಳು ಇರುವುದೋ, ಅವನು ಆಸೆಯನ್ನು ಬಿಡಬೇಕು. ಮನುಷ್ಯನಿಗೆ ಸಕಲ ಪ್ರಾಣಿಗಳಲ್ಲಿಯೂ ಸಮದೃಷ್ಟಿಯು ಯಾವಾಗ ಉಂಟಾಗುವುದಿಲ್ಲವೊ ಅದುವರೆಗೆ ಸಮಸ್ತ ದಿಕ್ಕುಗಳೂ ಸುಖಮಯವಾದುದೆಂದು ಭಾವಿಸುತ್ತಾನೆ. ದುರ್ಮತಿಗಳಿಂದ ಪರಿಹರಿಸುವುದಕ್ಕಾಗಿರತಕ್ಕ ಆಸೆಯು ಅವರ ದೇಹವು ಜೀರ್ಣವಾದರೂ, ಜೀರ್ಣವಾಗುವುದಿಲ್ಲ. ಆದುದರಿಂದ ಪ್ರಾಜ್ಞನಾದವನು ಆಸೆಯನ್ನು ಬಿಡಬೇಕು. ತಲೆಯ ಕೂದಲು ಜೀರ್ಣವಾದರೂ, ಹಲ್ಲುಗಳು ಬಿದ್ದುಹೋದರೂ ಕೂಡ ಧನಾಸೆಯೂ, ಪ್ರಾಣಾಸೆಯೂ ಸಹ ಜೀರ್ಣವಾಗುವುದಿಲ್ಲ. ನಾನು ಸಾವಿರಾರು ವರ್ಷಗಳು ಭೋಗಪಟ್ಟವನಾದಾಗ್ಯೂ ಇನ್ನೂ ನನಗೆ ಕಾಮದಲ್ಲಿ ಆಸೆಯು ತಪ್ಪಲಿಲ್ಲ. ಆದುದರಿಂದ ಈ ಕಾಮಾಸೆಯನ್ನು ಬಿಟ್ಟು, ಪರಬ್ರಹ್ಮನಲ್ಲಿ ಮನಸ್ಸಿಡಬೇಕೆಂದು ಯೋಚಿಸಿ, ಮಗನಾದ ಪೂರುವಿಗೆ ಯೌವನವನ್ನು ಕೊಟ್ಟು, ವೃದ್ಧಾಪ್ಯವನ್ನು ತಾನು ತೆಗೆದುಕೊಂಡು ಪೂರುವಿಗೆ ರಾಜ್ಯಾಭಿಷೇಕವನ್ನು ಮಾಡಿ ತಪಸ್ಸಿಗೋಸ್ಕರ ವನಕ್ಕೆ ಪ್ರಯಾಣಮಾಡಲು ನಿಶ್ಚಯಿಸಿ, ಮಗನಾದ ದುರ್ವಸುವಿಗೆ ಪೂರ್ವ ದಕ್ಷಿಣ ದೇಶಗಳನ್ನೂ, ದ್ರುಹ್ಯನಿಗೆ ಪಶ್ಚಿಮದೇಶವನ್ನೂ, ಅನುವಿಗೆ ಉತ್ತರದೇಶವನ್ನೂ ಸಹ ಕೊಟ್ಟು ಪೂರುವನ್ನು ಸಕಲ ದಿಕ್ಕುಗಳಿಗೂ, ಅಧಿಪತಿಯನ್ನಾಗಿ ಮಾಡಿ, ವನಕ್ಕೆ ಪ್ರಯಾಣಮಾಡಿದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಹತ್ತನೆಯ ಅಧ್ಯಾಯವು ಸಮಾಪ್ತಃ

ಹನ್ನೊಂದನೆಯ ಅಧ್ಯಾಯವು

"ಅನಂತರದಲ್ಲಿ ಯಯಾತಿಯ ಜ್ಯೇಷ್ಠಪುತ್ರನಾದ ಯದುವಿನ ವಂಶವನ್ನು ಹೇಳುತ್ತೇನೆ ಕೇಳು: ಯದುವಂಶದಲ್ಲಿ ಪರಮಾತ್ಮನಾದ ಶ್ರೀಮನ್ನಾರಾಯಣನು

ಕೃಷ್ಣನಾಗಿ ಅವತಾರಮಾಡಿದುದರಿಂದ ಈ ಯದುವಂಶ ಚರಿತ್ರೆಯನ್ನು ಕೇಳಿದ ಮನುಷ್ಯನು ಸರ್ವಪಾಪವಿನಿರ್ಮುಕ್ತನಾಗುತ್ತಾನೆ. ಯದುವಿಗೆ ಸಹಸ್ರಜಿತ್, ಕ್ರೋಷ್ಟು, ನಳ, ನಹುಷರೆಂಬುದಾಗಿ ನಾಲ್ಕುಜನ ಪುತ್ರರು. ಸಹಸ್ರಜಿತ್ತಿನಿಂದ ಶತಜಿತ್ತು ಇವನಿಗೆ ಹೈಹಯ, ಹೇಹಯ, ವೇಣುಹಯರೆಂಬುದಾಗಿ ಪುತ್ರರು. ಹೈಹಯನಿಗೆ ಧರ್ಮನೂ, ಧರ್ಮನಿಗೆ ಧರ್ಮನೇತ್ರನೂ, ಇವನಿಗೆ ಕುಂತಿಯೂ, ಕುಂತಿಗೆ ಸಹಜಿತ್, ಇವನಿಗೆ ಮಹಿಷ್ಮಂತನೂ ಸಹ ಹುಟ್ಟಿದರು. ಮಹಿಷ್ಮಂತನು ಮಾಹಿಷ್ಮತೀ ಎಂಬ ನಗರವನ್ನು ನಿರ್ಮಿಸಿದನು. ಮಹಿಷ್ಮಂತನಿಗೆ ಭದ್ರ ಶ್ರೇಣಿಯೂ, ಇವನಿಗೆ ದುರ್ದಮನೂ, ಇವನಿಗೆ ಧನಕನೂ, ಧನಕನಿಂದ ಕೃತ ವೀರ್ಯ, ಕೃತಾಗ್ನಿ, ಕೃತಧರ್ಮ, ಕೃತೌಜರೆಂಬ ನಾಲ್ಕುಜನ ಪುತ್ರರೂ, ಕೃತ ವೀರ್ಯನಿಗೆ ಸಹಸ್ರಬಾಹುಗಳಿಂದ ಯುಕ್ತನಾದ ಅರ್ಜುನನೂ ಸಹ ಹುಟ್ಟಿದರು. ಈ ಅರ್ಜುನನು ಅತ್ರಿಕುಲದಲ್ಲಿ ಭಗವದಂಶದಿಂದ ಅವತಾರಮಾಡಿದ ದತ್ತಾತ್ರೇಯ ನನ್ನು ಆರಾಧಿಸಿ, ಬಾಹುಸಹಸ್ರವನ್ನೂ, ಅಧರ್ಮಸೇವಾನಿವಾರಣವನ್ನೂ, ಸ್ವಧರ್ಮಸೇವತ್ವವನ್ನೂ, ಯುದ್ಧದಲ್ಲಿ ಪೃಥಿವೀಜಯವನ್ನೂ, ಧರ್ಮದಿಂದ ಪಾಲನೆಯನ್ನೂ, ಶತ್ರುಗಳಿಗೆ ಅಪಜಯವನ್ನೂ ಅಖಿಲಜಗತ್ತಿಗೂ ಪ್ರಖ್ಯಾತ ಪುರುಷನಿಂದ ಮರಣವನ್ನೂ ಸಹ ವರವಾಗಿ ಹೊಂದಿದನು. ಈ ವರಬಲದಿಂದ ಕಾರ್ತವೀರ್ಯಾರ್ಜುನನು ಸಪ್ತದ್ವೀಪಪರಿವೃತವಾದ ಭೂಮಿಯನ್ನು ಪರಿಪಾಲಿಸಿ ದನು. ಅದಲ್ಲದೆ, ಹತ್ತುಸಾವಿರ ಯಜ್ಞಗಳನ್ನು ಮಾಡಿದನು. ಯಜ್ಞದಾನ, ತಪಸ್ಸು, ವಿನಯ, ವಿದ್ಯಾ ಇವುಗಳಿಂದ ಕಾರ್ತವೀರ್ಯಾರ್ಜುನನಿಗೆ ಸಮಾನ ನಾದವನು ಲೋಕದಲ್ಲಿ ಯಾರೂ ಇಲ್ಲವೆಂದು ಹೆಸರನ್ನು ಪಡೆದನು. ಇವನ ರಾಜ್ಯ ದಲ್ಲಿ ಪರಸ್ವತ್ತನ್ನು ಅಪಹರಿಸುವುದೆಂಬುವುದೇ ಇರಲಿಲ್ಲ. ಇವನು ಎಂಬತ್ತೈದು ಸಾವಿರ ವರ್ಷಗಳ ಪರ್ಯಂತ ಬಲಪರಾಕ್ರಮಯುಕ್ತನಾಗಿ ರಾಜ್ಯಪಾಲನೆಯನ್ನು ಮಾಡಿದನು. ಈ ಕಾರ್ತವೀರ್ಯಾರ್ಜುನನು ಒಂದಾನೊಂದು ದಿವಸ ಮಾಹಿಷ್ಮತೀ ಪಟ್ಟಣದಲ್ಲಿ ನರ್ಮದಾನದಿಯಲ್ಲಿ ಸ್ತ್ರೀಯರೊಡನೆ ಜಲಕ್ರೀಡೆಯಾಡುವ ಕಾಲ ದಲ್ಲಿ, ಲಂಕಾಧಿಪತಿಯಾದ ರಾವಣನು ಚಕ್ರವರ್ತಿಯನ್ನು ಜಯಿಸಬೇಕೆಂದು ಬಂದ ಕಾಲದಲ್ಲಿ ಕಾರ್ತವೀರ್ಯಾರ್ಜುನನಿಂದ ಪಶುವಿನ ಹಾಗೆ ರಾವಣನು ಕಾರಾ ಗೃಹದಲ್ಲಿ ಬಂಧಿಸಲ್ಪಟ್ಟನು. ಅನಂತರ ಕಾರ್ತವೀರ್ಯಾರ್ಜುನನು ಎಂಬತ್ತೈದು ಸಾವಿರ ವರ್ಷಗಳು ಕಳೆದನಂತರ ಶ್ರೀಮನ್ನಾರಾಯಣಾಂಶದಿಂದ ಅವತರಿಸಿ ಪರಶು ರಾಮನಿಂದ ಸಂಹೃತನಾದನು. ಕಾರ್ತವೀರ್ಯಾರ್ಜುನನಿಗೆ ಶೂರ, ಶೂರಸೇನ, ವೃಷಸೇನ, ಮಧು, ಜಯಧ್ವಜರೇ ಮೊದಲಾದ ನೂರುಜನ ಪುತ್ರರು ಹುಟ್ಟಿದರು. ಜಯಧ್ವಜನಿಂದ ತಾಳಜಂಘನೂ, ಇವನಿಗೆ ತಾಳಜಂಘರೇ ಮೊದಲಾದ ನೂರು

ಜನ ಪುತ್ರರೂ ಹುಟ್ಟಿದರು. ಇವರುಗಳಲ್ಲಿ ವೀತಿಹೋತ್ರನೇ ಜ್ಯೇಷ್ಠನಾದವನು. ವೀತಿಹೊತ್ರನಿಗೆ ಭರತನೂ, ಭರತನಿಗೆ ವೃಷನೂ, ವೃಷನಿಗೆ ಮಧುವೂ, ಇವನಿಗೆ ವೃಷ್ಣಿಯೇ ಮೊದಲಾದ ನೂರುಜನ ಪುತ್ರರೂ ಸಹ ಹುಟ್ಟಿದರು. ಇವನ ವಂಶದಲ್ಲಿ ಹುಟ್ಟಿದವರೆಲ್ಲರೂ ವೃಷ್ಣಿಗಳೆಂದು ಹೆಸರನ್ನು ಹೊಂದಿದರು. ಯದುವಂಶದಲ್ಲಿ ಹುಟ್ಟಿದುದರಿಂದ ಯಾದವರೆಂದು ಸಂಜ್ಞೆಯುಂಟಾಯಿತು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಹನ್ನೊಂದನೆಯ ಅಧ್ಯಾಯವು ಸಮಾಪ್ತಃ

ಹನ್ನೆರಡನೆಯ ಅಧ್ಯಾಯವು

"ಯದುಪುತ್ರನಾದ ಕ್ರೋಷ್ಟುವಿಗೆ ಧ್ವಜನಿಯೂ, ಇವನಿಗೆ ಸ್ವಾತಿಯೂ, ಸ್ವಾತಿಗೆ ರುಶಂಕುವೂ, ರುಶಂಕುವಿಗೆ ಚಿತ್ರರಥನೂ, ಇವನಿಗೆ ಶಶಿಬಿಂದುವೂ ಸಹ ಹುಟ್ಟಿದರು. ಶಶಿಬಿಂದುವು ಹದಿನಾಲ್ಕು ಮಹಾರತ್ನಗಳಿಗೆ ಈಶನಾಗಿಯೂ, ಚಕ್ರವರ್ತಿಯಾಗಿಯೂ ಸಹ ಇದ್ದನು. ಹದಿನಾಲ್ಕು ರತ್ನಗಳು ಯಾವುವೆಂದರೆ, ಚಕ್ರ, ರಥ, ಮಣಿ, ಖಡ್ಗ, ಚರ್ಮ, ಧ್ವಜ, ನಿಧಿ ಈ ಏಳೂ ನಿರ್ಜೀವರತ್ನಗಳು; ಭಾರ್ಯೆ, ಪುರೋಹಿತ, ಸೇನಾಪತಿ, ಶಿಲ್ಪಿಕಾರ, ಪದಾತಿ, ಕುದುರೆ, ಆನೆ ಈ ಏಳೂ ಜೀವರತ್ನಗಳು; ಈ ಹದಿನಾಲ್ಕು ರತ್ನಗಳುಳ್ಳವನೇ ಚಕ್ರವರ್ತಿಯು. ಶಶಿಬಿಂದುವಿಗೆ ಒಂದು ಲಕ್ಷ ಪತ್ನಿಗಳಿದ್ದರು. ಹತ್ತು ಲಕ್ಷ ಪುತ್ರರೂ ಸಹ ಹುಟ್ಟಿದರು. ಇವರುಗಳಲ್ಲಿ ಪೃಥಶ್ರವ, ಪೃಥುಕರ್ಮ, ಪೃಥುಕೀರ್ತಿ, ಪೃಥುಯಶಾಃ, ಪೃಥುಜಯ, ಪೃಥುದಾನರೆಂದು ಆರು ಜನ ಪುತ್ರರು ಮುಖ್ಯರಾದವರು. ಪೃಥುಶ್ರವನಿಗೆ ಪೃಥುತಮನೂ, ಇವನಿಗೆ ಉಶನನೂ, ಇವನಿಗೆ ಶಿತವುವೂ, ಇವನಿಗೆ ರುಕ್ಮಕವಚನೂ, ಅನಂತರ ಪರಾವೃತನೂ, ಇವನಿಗೆ ರುಕ್ಮೇಷು, ಪೃಥುರುಕ್ಮ, ಜ್ಯಾಮಘ, ಪ್ರಥಿತ, ಹರಿತರೆಂಬುದಾಗಿ ಐದುಜನ ಪುತ್ರರು ಹುಟ್ಟಿದರು. ಶೈಬ್ಯೆಗೆ ಪತಿಯಾದ ಜ್ಯಾಮಘನು ಅಪುತ್ರವಂತನಾಗಿಯೂ, ಏಕಪತ್ನೀವ್ರತಸ್ಥನಾಗಿಯೂ ಇದ್ದ ಕಾಲದಲ್ಲಿ ಪತ್ನಿಯಾದ ಶೈಬ್ಯೆಯು ಪತಿಯನ್ನು ಕುರಿತು, ನಿನಗೆ ಪುತ್ರನು ಹುಟ್ಟುವನೆಂದು ಹೇಳಿದಳು. ಈ ಕಾರಣದಿಂದ ಜ್ಯಾಮಘನು ಲೋಕದಲ್ಲಿ ಸ್ತ್ರೀವಶ್ಯರಾಗದಿರತಕ್ಕವರಿಗೆ ಪ್ರಧಾನನಾದವನೆಂದು ಪ್ರಖ್ಯಾತಿಯನ್ನು ಹೊಂದಿದನು. ಇವನು ಘೋರವಾದ ಯುದ್ಧವನ್ನು ಮಾಡಿ ಶತ್ರುಗಳನ್ನು ಗೆದ್ದನು. ಆಗ ಶತ್ರುಗಳ ಪತ್ನೀಪುತ್ರಾದಿಗಳು ದಿಕ್ಕುದಿಕ್ಕುಗಳಿಗೆ ಓಡಿ

ಹೋಗತಕ್ಕ ಕಾಲದಲ್ಲಿ ಅಮ್ಮಾ, ಅಣ್ಣಾ, ಅಕ್ಕಾ ಎಂಬುದಾಗಿ ರೋದನಮಾಡಿಕೊಂಡು ಹೋಗತಕ್ಕ ಒಂದು ಕನ್ಯಾರತ್ನವನ್ನು ಕಂಡು ಅವಳನ್ನು ನೋಡಿ ಜ್ಯಾಮಘನು ಅನುರಾಗಯುಕ್ತನಾಗಿ, ವಂಧ್ಯಾಭರ್ತೃವಾದ ನನಗೆ, ಈಗ ದೈವಯೋಗದಿಂದ ಈ ಕನ್ಯಾರತ್ನವು ಪುತ್ರಾರ್ಥವಾಗಿ ದೊರಕಿದಳು. ಇವಳನ್ನು ವಿವಾಹಮಾಡಿಕೊಳ್ಳುತ್ತೇನೆ ಅಥವಾ ಇವಳನ್ನು ರಥದಲ್ಲಿ ಕೂರಿಸಿಕೊಂಡು ಊರಿಗೆ ಹೋಗಿ ಶೈಬ್ಯೆಗೆ ಹೇಳಿ, ಅವಳ ಇಷ್ಟದ ಪ್ರಕಾರ ವಿವಾಹವನ್ನು ಮಾಡಿಕೊಳ್ಳುತ್ತೇನೆಂದು ಯೋಚಿಸಿ, ಕನ್ಯಾರತ್ನವನ್ನು ರಥದಲ್ಲಿ ಕೂರಿಸಿಕೊಂಡು ತನ್ನ ಪಟ್ಟಣಕ್ಕೆ ಪ್ರಯಾಣ ಮಾಡಿದನು. ಅನಂತರ ಜಯಶಾಲಿಯಾಗಿ ಬಂದ ಜ್ಯಾಮಘನನ್ನು ಪತ್ನಿಯಾದ ಶೈಬ್ಯೆಯು ಸಮಸ್ತ ಪರಿವಾರದೊಡನೆ ಎದುರುಗೊಂಡು, ಪತಿಯನ್ನು ನೋಡಿ ಸಂತೋಷಪಟ್ಟು, ಪತಿಯ ಎಡಭಾಗದಲ್ಲಿರುವ ಕನ್ಯಾರತ್ನವನ್ನು ನೋಡಿದವಳಾಗಿ ಅಸೂಯೆಯಿಂದ ಪತಿಯನ್ನು ಕುರಿತು, ಈ ಕನ್ನಿಕೆಯು ಯಾರೆಂಬುದಾಗಿ ಕೇಳಲು, ಅದಕ್ಕೆ ರಾಜನು ನಿನ್ನ ಸೊಸೆ ಎಂದನು. ಆ ಮಾತಿಗೆ ಶೈಬ್ಯೆಯು ನಾನು ಪುತ್ರನನ್ನು ಪಡೆದಿಲ್ಲ; ನಿನಗೆ ಮತ್ತೊಬ್ಬ ಹೆಂಡತಿಯಿಲ್ಲ, ನನಗೆ ಸೊಸೆ ಎಂಬುವುದು ಹೇಗೆ? ಎಂದು ಶೈಬ್ಯೆಯು ಕೇಳಲು, ಆ ಮಾತಿಗೆ ಜ್ಯಾಮಘನು ಪತ್ನಿಯಾದ ಶೈಬ್ಯೆಗೆ ದುರುಕ್ತಿ ಪರಿಹಾರವಾದ ಮಾತನ್ನು ಹೇಳುತ್ತಾನೆ: "ಎಲೈ ಶೈಬ್ಯೆಯೇ! ನೀನು ಹಿಂದೆ ನನಗೆ ಮಗನು ಹುಟ್ಟುವನೆಂದು ಹೇಳಿದುದರಿಂದ ಸೊಸೆಯನ್ನು ಸಂಪಾದಿಸಿಕೊಂಡು ಬಂದಿರುವೆನು" ಎಂದು ಹೇಳಲು. ಅದಕ್ಕೆ ರಾಜಪತ್ನಿಯು ಹಾಗೆಯೇ ಆಗಲಿ ಎಂದು ಪತಿಯೊಡನೇ ಸ್ವಗೃಹವನ್ನು ಹೊಂದಿ ಸ್ವಲ್ಪದಿವಸದಲ್ಲಿಯೇ ಗರ್ಭವನ್ನು ಧರಿಸಿ ಕಾಲದಲ್ಲಿ ಮಗನನ್ನು ಪ್ರಸವಿಸಿದಳು. ಜ್ಯಾಮಘನು ಪರಮಾನಂದಭರಿತನಾಗಿ ವಿದರ್ಭನೆಂಬುದಾಗಿ ನಾಮಕರಣಮಾಡಿದನು. ಅನಂತರ ವಿದರ್ಭನಿಗೆ ಸ್ನುಷೆಯನ್ನು ವಿವಾಹಮಾಡಿದನು. ವಿದರ್ಭನಿಂದ ಕ್ರಥ, ಕೈಶಿಕ, ರೋಮಪಾದರೆಂಬುದಾಗಿ ಮೂರುಜನ ಪುತ್ರರು ಹುಟ್ಟಿದರು. ರೋಮಪಾದನಿಂದ ಬಭ್ರುವೂ, ಬಭ್ರುವಿನಿಂದ ಧೃತಿಯೂ, ಧೃತಿಯಿಂದ ಕೈಶಿಕನೂ, ಇವನಿಂದ ಚೇದಿಯೂ ಹುಟ್ಟಿದರು. ಸ್ನುಷಾಪುತ್ರನಾದ ಕ್ರಥನಿಂದ ಕುಂತಿಯೂ, ಕುಂತಿಯಿಂದ ವೃಷ್ಣಿಯೂ, ವೃಷ್ಣಿಯಿಂದ ನಿಧೃತಿಯೂ, ನಿಧೃತಿಯಿಂದ ದಶಾರ್ಹನೂ, ಅವನಿಂದ ವ್ಯೋಮನೂ, ವ್ಯೋಮನಿಂದ ಜೀಮೂತನೂ, ಅನಂತರ ವಿಕೃತಿಯೂ, ಆಮೇಲೆ ಭೀಮರಥನೂ, ಇವನಿಂದ ನವರಥನೂ, ನವರಥನಿಗೆ ದಶರಥನೂ, ದಶರಥನಿಂದ ಶಕುನಿಯೂ, ಇವನಿಂದ ಕರಂಭಿಯೂ, ಕರಂಭಿಯಿಂದ ದೇವರಾತನೂ, ಇವನಿಂದ ದೇವಕ್ಷತ್ರನೂ, ಇವನಿಗೆ ಮಧುವೂ, ಮಧು

ವಿಗೆ ಕುಮಾರವಂಶನೂ, ಇವನಿಂದ ಅನುವೂ, ಅನುವಿನಿಂದ ಪುರುಮಿತ್ರನೂ, ಅನಂತರ ಅಂಶುವೂ, ಇವನಿಂದ ಸತ್ವತನೂ ಸಹ ಹುಟ್ಟಿದರು. ಈ ಪ್ರಕಾರ ಜ್ಯಾಮಘನ ಸಂತತಿಯು ವೃದ್ಧಿಯಾಯಿತು. ಜ್ಯಾಮಘನ ಸಂತತಿಯನ್ನು ಕೇಳಿದರೆ ಸಕಲ ಪಾಪಪರಿಹಾರವಾಗುವುದು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಹನ್ನೆರಡನೆಯ ಅಧ್ಯಾಯವು ಸಮಾಪ್ತಃ

ಹದಿಮೂರನೆಯ ಅಧ್ಯಾಯವು

"ಸತ್ವತನಿಗೆ ಭಜನ, ಭಜಮಾನ ದಿವ್ಯಾಂಧಕ, ದೇವಾಪೃಥ, ಮಹಾಭೋಜ, ವೃಷ್ಣಿಗಳೆಂಬುದಾಗಿ ಪುತ್ರರು ಹುಟ್ಟಿದರು. ಭಜಮಾನನಿಗೆ ನಿಮಿ, ಕೃಕಣ, ಶತಜಿತ್, ಸಹಸ್ರಜಿತ್, ಅಯುತತ್‌ರೆಂಬ ಪುತ್ರರು ಹುಟ್ಟಿದರು. ದೇವಾಪೃಥನಿಗೆ ಬಭ್ರುವು ಹುಟ್ಟಿದನು. ಇವನಿಂದ ಎಂಟುಸಾವಿರದ ಅರವತ್ತಾರು ಶಿಷ್ಯರು ಮೋಕ್ಷವನ್ನು ಹೊಂದಿದರು. ವೃಷ್ಣಿಗೆ ಸುಮಿತ್ರ, ಯುಧಾಜಿತ್‌ರೆಂದು ಇಬ್ಬರು ಪುತ್ರರು ಹುಟ್ಟಿದರು. ಸುಮಿತ್ರನಿಂದ ಅನಮಿತ್ರನೂ, ಇವನಿಂದ ನಿಘ್ನನೂ, ನಿಘ್ನನಿಗೆ ಪ್ರಸೇನ ಸತ್ರಾಜಿತರೂ ಸಹ ಹುಟ್ಟಿದರು. ಸತ್ರಾಜಿತನಿಗೆ ಸೂರ್ಯನು ಸ್ನೇಹಿತನಾಗಿದ್ದನು. ಒಂದಾನೊಂದು ದಿವಸ ಸತ್ರಾಜಿತನು ಸಮುದ್ರತೀರಕ್ಕೆ ಬಂದು, ಅಲ್ಲಿ ಸೂರ್ಯನನ್ನು ಸ್ತೋತ್ರಮಾಡಿದುದರಿಂದ ಸೂರ್ಯನು ಪ್ರತ್ಯಕ್ಷವಾಗಿ ಬಂದುದನ್ನು ನೋಡಿ, ಸೂರ್ಯನನ್ನು ಕುರಿತು ಹೇಳುತ್ತಾನೆ: "ಓ ಸೂರ್ಯನೇ! ನೀನು ಅಂತರಿಕ್ಷದಲ್ಲಿ ಹೇಗೆ ಅಗ್ನಿಪಿಂಡದಂತೆ ಕಾಣುತ್ತಿರುವೆಯೋ ಇಲ್ಲಿಯೂ ಹಾಗೆಯೇ ಕಾಣುವೆ. ಪರಂತು, ಪ್ರಸಾದಾಭಿಮುಖನಾಗಿ ಕಾಣುವುದಿಲ್ಲ. ಆದುದರಿಂದ ಅನುಗ್ರಹ ರೂಪವನ್ನು ತೋರಿಸೆಂದು" ಕೇಳಲು; ಸೂರ್ಯನು ಕಂಠದಲ್ಲಿದ್ದ ಸ್ಯಮಂತಕ ಮಣಿಯನ್ನು ತೆಗೆದು ಮುಚ್ಚಿಟ್ಟು, ಸೌಮ್ಯರೂಪನಾಗಿ ಸತ್ರಾಜಿತನಿಗೆ ದರ್ಶನವನ್ನು ಕೊಟ್ಟನು. ಆಗ ಸತ್ರಾಜಿತನು ಹ್ರಸ್ವಶರೀರನಾದ ಸೂರ್ಯನನ್ನು ನೋಡಿ, ನಮಸ್ಕಾರಮಾಡಿ, ಸ್ತೋತ್ರಮಾಡಲು, ಸೂರ್ಯನು, "ನಿನಗೆ ಇಷ್ಟವಾದ ವರವನ್ನು ಕೇಳೆನಲು"; ಸತ್ರಾಜಿತನು "ಸ್ಯಮಂತಕಮಣಿಯನ್ನು ಕೊಡು" ಎಂಬುದಾಗಿ ಪ್ರಾರ್ಥಿಸಲು; ಸೂರ್ಯನು ಆ ಮಣಿಯನ್ನು ಕೊಟ್ಟನು. ಸತ್ರಾಜಿತನು ಸ್ಯಮಂತಕಮಣಿಯನ್ನು ತನ್ನ ಕಂಠದಲ್ಲಿ ಧರಿಸಿ ಸೂರ್ಯನಂತೆ ಪ್ರಕಾಶಮಾನನಾಗಿ ದ್ವಾರಕಾಪಟ್ಟಣವನ್ನು ಪ್ರವೇಶಮಾಡಲು, ಪಟ್ಟಣವಾಸಿ

ಗಳಾದ ಜನಗಳು ಸೂರ್ಯನಂತೆ ಬರುತ್ತಿರುವ ಸತ್ರಾಜಿತನನ್ನು ನೋಡಿ, ಭಗವಂತನಾಗಿಯೂ, ಆದಿಪುರುಷನಾಗಿಯೂ, ಪುರುಷೋತ್ತಮನಾಗಿಯೂ, ಭೂಭಾರಪರಿಹಾರಾರ್ಥವಾಗಿ ಅವತರಿಸಿದವನಾಗಿಯೂ ಇರುವ ಮಾನುಷರೂಪಿ ಯಾದ ಶ್ರೀಮನ್ನಾರಾಯಣಾಂಶದಿಂದ ಅವತರಿಸಿದ ಶ್ರೀಕೃಷ್ಣನ ಸಮೀಪಕ್ಕೆ ಬಂದು ನಮಸ್ಕಾರ ಮಾಡಿ, "ಓ ಕೃಷ್ಣನೇ! ನಿನ್ನನ್ನು ನೋಡುವುದಕ್ಕೋಸ್ಕರ ಸೂರ್ಯನು ಬರುತ್ತಿರುವನೆಂದು" ಹೇಳಲು; ಅದಕ್ಕೆ ಭಗವಂತನಾದ ವಾಸು ದೇವನು ಜನಗಳಿಗೆ ಹೇಳಿದ್ದೇನೆಂದರೆ: ಈಗ ಬರುವವನು ಸೂರ್ಯನಲ್ಲ, ಸತ್ರಾಜಿತನು; ಇವನು ಸೂರ್ಯನಿಂದ ಸ್ಯಮಂತಕವೆಂಬ ಮಹಾರತ್ನವನ್ನು ತೆಗೆದುಕೊಂಡು ಧರಿಸುತ್ತ ಬರುವನು, ಆದುದರಿಂದ ನೀವು ಧೈರ್ಯವಾಗಿ ನೋಡ ಬಹುದೆಂದು" ಹೇಳಲು; ಜನಗಳು ಭಗವಂತನ ಮಾತಿನ ಪ್ರಕಾರ ಸತ್ರಾಜಿತ ನನ್ನು ನೋಡಿದರು. ಸತ್ರಾಜಿತನು ರತ್ನವನ್ನು ತೆಗೆದುಕೊಂಡು ಮನೆಗೆ ಬಂದನು. ಸ್ಯಮಂತಕರತ್ನವು ಪ್ರತಿದಿನವೂ (೫೦ ಮಣ) ಚಿನ್ನವನ್ನು ಕೊಡುತ್ತಿತ್ತು. ಮಣಿಪ್ರಭಾವದಿಂದ ಸಕಲ ದೇಶಗಳೂ ಅನಾವೃಷ್ಟ್ಯಾದಿ ಭಯವು ಇಲ್ಲದಿದ್ದವು. ಭಗವಂತನಾದ ವಾಸುದೇವನು ಸ್ಯಮಂತಕಮಣಿಯು ದೊರೆಯಾದ ಉಗ್ರಸೇನ ನಲ್ಲಿರುವುದಕ್ಕೆ ಯೋಗ್ಯವಾದುದೆಂದು ಮನಸ್ಸಿನಲ್ಲಿ ಯೋಚಿಸಿದನು. ಆ ಮಣಿ ಯನ್ನು ಬಲಾತ್ಕಾರವಾಗಿ ತೆಗೆದುಕೊಳ್ಳಲು ಶಕ್ತನಾದಾಗ್ಯೂ, ತನ್ನ ವಂಶದಲ್ಲಿ ಹುಟ್ಟಿದ ಸತ್ರಾಜಿತನನ್ನು ನಾಶಮಾಡುವುದಕ್ಕೆ ಹಿಂತೆಗೆದನು. ಸತ್ರಾಜಿತನೂ ಕೂಡ ಸ್ಯಮಂತಕಮಣಿಯಲ್ಲಿ ಆಶೆಯುಳ್ಳವನಾದುದರಿಂದ ಆ ರತ್ನವನ್ನು ಶ್ರೀಕೃಷ್ಣನು ಎಲ್ಲಿ ಕೇಳುತ್ತಾನೋ ಎಂಬ ಭಯದಿಂದ ರತ್ನವನ್ನು ತನ್ನ ತಮ್ಮ ನಾದ ಪ್ರಸೇನನಿಗೆ ಕೊಟ್ಟನು. ಮಣಿಯನ್ನು ಶುಚಿಯಾಗಿ ಧರಿಸಿದರೆ ಎಂಟು ಭಾರ ಚಿನ್ನವನ್ನು ಕೊಡುತ್ತದೆ. ಅಶುಚಿಯಾಗಿ ಧರಿಸಿದರೆ ಧರಿಸಿದವನನ್ನು ಕೊಲ್ಲುವುದು. ಈ ವಿಷಯವನ್ನು ತಿಳಿಯದ ಪ್ರಸೇನನು, ರತ್ನವನ್ನು ಕಂಠದಲ್ಲಿ ಧರಿಸಿ ಬೇಟೆಗಾಗಿ ಕಾಡಿಗೆ ಹೋದಕಾಲದಲ್ಲಿ ಸಿಂಹವು ಪ್ರಸೇನನನ್ನುಕೊಂದು ಸ್ಯಮಂತಕ ಮಣಿಯನ್ನು ಬಾಯಲ್ಲಿ ಕಚ್ಚಿಕೊಂಡು ಪ್ರಯಾಣಮಾಡತಕ್ಕ ಕಾಲದಲ್ಲಿ ಜಾಂಬ ವಂತನು ಸಿಂಹವನ್ನು ಕೊಂದು ಮಣಿಯನ್ನು ತೆಗೆದುಕೊಂಡು ತನ್ನ ಬಿಲವನ್ನು ಪ್ರವೇಶಿಸಿ, ಸುಕುಮಾರನಾಮಕನಾದ ತನ್ನ ಬಾಲಕನಿಗೆ ಆಡುವುದಕ್ಕೆ ಕೊಟ್ಟನು. ಬೇಟೆಗೆ ಹೋದ ಪ್ರಸೇನನು ಬಾರದೇ ಇದ್ದುದರಿಂದ ಸತ್ರಾಜಿತನು ಸ್ಯಮಂತಕ ಮಣಿಯನ್ನು ಕೃಷ್ಣನು ಪ್ರಸೇನನನ್ನು ಸಂಹರಿಸಿ ತೆಗೆದುಕೊಂಡನೆಂದು ಹೇಳಿ ದುದಕ್ಕೆ, ಸಕಲ ಯಾದವರು ಪರಸ್ಪರ ಕೃಷ್ಣನು ರತ್ನವನ್ನು ಅಪಹರಿಸಿದನೆಂದು ಮಾತನಾಡುತ್ತಿದ್ದುದನ್ನು ಕೇಳಿ, ಕೃಷ್ಣನು ತನಗೆ ವೃಥಾಪವಾದ ಉಂಟಾಯಿ

ತೆಂದು ಸಕಲಯಾದವಸೈನ್ಯ ಪರಿವೃತನಾಗಿ ಪ್ರಸೇನನು ಹೋದ ದಾರಿಯನ್ನು ಅನುಸರಿಸಿ, ಪ್ರಯಾಣಮಾಡತಕ್ಕ ಕಾಲದಲ್ಲಿ ದಾರಿಯಲ್ಲಿ ಕುದುರೆಸಹಿತ ಸತ್ತು ಬಿದ್ದಿದ್ದ ಪ್ರಸೇನನನ್ನು ನೋಡಿ, ಪ್ರಾಯಿಕವಾಗಿ ಸಿಂಹದಿಂದ ಸತ್ತಿರಬಹುದೆಂದು ಯೋಚಿಸಿ ಸಿಂಹದ ಹೆಜ್ಜೆಯನ್ನು ಅನುಸರಿಸಿ, ಸ್ವಲ್ಪ ದೂರದಲ್ಲಿಯೇ ಜಾಂಬವಂತ ನಿಂದ ಸಂಹರಿಸಲ್ಪಟ್ಟ ಸಿಂಹವನ್ನು ಕಂಡು ಇದು ಕರಡಿಯಿಂದ ನಾಶವಾಯಿತೆಂದು ತಿಳಿದು ಕರಡಿಹೆಜ್ಜೆಯನ್ನು ಅನುಸರಿಸಿ, ಬಿಲದ್ವಾರದ ಸಮೀಪಕ್ಕೆ ಬಂದು, ದೂರ ದಲ್ಲಿಯೇ ಸಕಲ ಸೈನ್ಯವನ್ನು ನಿಲ್ಲಿಸಿ, ಒಬ್ಬನೇ ಬಿಲವನ್ನು ಪ್ರವೇಶಿಸಿದನು. ಅಲ್ಲಿ ದಾಸಿಯು ಬಾಲಕನನ್ನು ಆಡಿಸುತ್ತಾ, ಬಾಲಕನೆ, ಸಿಂಹವು ಪ್ರಸೇನನನ್ನು ಕೊಂದಿತು. ಸಿಂಹವನ್ನು ಜಾಂಬವಂತನು ಕೊಂದು ತಂದ ಈ ಸ್ಯಮಂತಕಮಣಿಯು ನಿನಗಾಗಿರುವುದು, ಅಳಬೇಡ ಮಗುವೇ ಇತ್ಯಾದಿ ಮಾತುಗಳನ್ನು ಹೇಳಲಾಗಿ ಅವನ್ನು ಕೇಳಿದ ಶ್ರೀಕೃಷ್ಣನು, ಸುಕುಮಾರನ ಕೈಯಲ್ಲಿ ಪ್ರಕಾಶಿಸುವ ಸ್ಯಮಂತಕ ವನ್ನು ಕಂಡನು. ಆಗ ದಾಸಿಯು ರತ್ನದಲ್ಲಿಯೇ ದೃಷ್ಟಿಯಿಟ್ಟು ಬರುತ್ತಿದ್ದ ಅಪೂರ್ವಪುರುಷನನ್ನು ನೋಡಿ, ಧಾತ್ರಿಯು ಕಾಪಾಡು, ಕಾಪಾಡು ಎಂಬುದಾಗಿ ಆರ್ತಧ್ವನಿಯಿಂದ ಕೂಗಲು; ಧ್ವನಿಯನ್ನು ಕೇಳಿ ಜಾಂಬವಂತನು ಕೋಪದಿಂದ ಧಾತ್ರಿಯ ಬಳಿಗೆ ಬಂದು, ಶ್ರೀಕೃಷ್ಣನನ್ನು ನೋಡಿ ಕೃಷ್ಣನೊಡನೆ ಇಪ್ಪತ್ತೊಂದು ದಿವಸದವರೆಗೂ ಯುದ್ಧಮಾಡಿದನು. ಬಿಲದ ಹೊರಗೆ ಇದ್ದ ಯಾದವಸೈನ್ಯವು ಏಳೆಂಟು ದಿವಸದವರೆಗೂ ನೋಡಿ ಕೃಷ್ಣನು ಬರದೇ ಇರೋಣದರಿಂದ ಕೃಷ್ಣನು ಸತ್ತುಹೋಗಿರಬಹುದೆಂದು ತಿಳಿದು, ದ್ವಾರಕಾಪಟ್ಟಣಕ್ಕೆ ಬಂದು, ಕೃಷ್ಣನು ಸತ್ತುಹೋದನೆಂದು ಹೇಳಿತು. ಆಗ ಕೃಷ್ಣನ ಬಂಧುಗಳು ದುಃಖಿತರಾಗಿ ಉತ್ತರ ಕ್ರಿಯೆಗಳನ್ನು ಮಾಡಿದರು. ಯುದ್ಧಮಾಡುತ್ತಿದ್ದ ಕೃಷ್ಣನಿಗೆ ಬಂಧುಗಳು ಮಾಡಿದ ಪಿಂಡೋದಕಾದಿಗಳು ಬಲವನ್ನುಂಟುಮಾಡಿದವು. ಜಾಂಬವಂತನಿಗೆ ಅನ್ನಆಹಾ ರಾದಿಗಳು ಇಲ್ಲದುದರಿಂದಲೂ, ಕೃಷ್ಣನ ಪ್ರಹಾರವು ಹೆಚ್ಚಾದುದರಿಂದಲೂ ಕ್ಷೀಣ ನಾಗುತ್ತಾ ಬಂದನು. ಇದರಿಂದ ಜಾಂಬವಂತನು ಭಗವಂತನಿಂದ ಸೋತವನಾಗಿ ಶ್ರೀಕೃಷ್ಣನಿಗೆ ನಮಸ್ಕಾರಮಾಡಿ ಹೇಳುತ್ತಾನೆ: "ಓ ಸ್ವಾಮಿಯೇ! ನೀನು ಸುರ, ಅಸುರ, ಗಂಧರ್ವ, ದೇವತೆಗಳಿಂದಲೂ ಜಯಿಸಲಸಾಧ್ಯನಾದವನು, ಅವನಿ ಗತರಾದ ಮನುಷ್ಯರ ವಿಷಯವನ್ನು ಹೇಳತಕ್ಕದ್ದೇನಿದೆ! ಅದರಲ್ಲಿಯೂ ತಿರ್ಯ ಗ್ಜಾತಿಗಳಾದ ಅಲ್ಪಪರಾಕ್ರಮಿಗಳಾದ ನಮ್ಮಂತಹ ಪಾಮರರು ನಿನ್ನನ್ನು ಜಯಿಸ ಬಲ್ಲರೆ? ನಮ್ಮ ಸ್ವಾಮಿಯಾದ ಶ್ರೀರಾಮನಂತೆ, ನೀನು ಸಕಲಜಗತ್ಕರ್ತನಾದ ಶ್ರೀಮನ್ನಾರಾಯಣನ ಅಂಶದಿಂದ ಅವತರಿಸಿರುವವನು" ಎಂಬುದಾಗಿ ಹೇಳಲು; ಭಗವಂತನು, "ಎಲೈ ಜಾಂಬವಂತನೇ! ನೀನು ಹೇಳಿದ ಪ್ರಕಾರ ಅಖಿಲಭೂಭಾರ

ಪರಿಹಾರಾರ್ಥವಾಗಿ ನಾನು ಅವತಾರ ಮಾಡಿದ್ದೇನೆಂದು ಹೇಳಿ, ತನ್ನ ಅಮೃತ ಮಯವಾದ ಹಸ್ತದಿಂದ ಜಾಂಬವಂತನ ಶರೀರವನ್ನು ಸ್ಪರ್ಶಮಾಡಲು, ಜಾಂಬ ವಂತನಿಗೆ ಯುದ್ಧಾಯಾಸವು ಪರಿಹಾರವಾದುದರಿಂದ, ಭಗವಂತನಿಗೆ ನಮಸ್ಕಾರ ಮಾಡಿ, ಪ್ರಾರ್ಥಿಸಿ, ತನ್ನ ಮಗಳಾದ ಜಾಂಬವತಿಯನ್ನು ಭಗವಂತನಿಗೆ ಕೊಟ್ಟು, ಮಣಿರತ್ನವನ್ನೂ ಸಹ ಕೊಟ್ಟನು. ಶ್ರೀಕೃಷ್ಣನು ಮಣಿಯನ್ನು ತೆಗೆದುಕೊಳ್ಳಲು ಇಷ್ಟವಿಲ್ಲದಿದ್ದರೂ, ಅಪವಾದಪರಿಹಾರಾರ್ಥವಾಗಿ ಸ್ವೀಕರಿಸಿ, ಜಾಂಬವತೀ ಸಹಿತನಾಗಿ ದ್ವಾರಕಾನಗರಿಗೆ ಬಂದನು. ಭಗವಂತನಾದ ಶ್ರೀಕೃಷ್ಣನ ಆಗಮನ ದಿಂದ ದ್ವಾರಕಾವಾಸಿ ಜನರು ವೃದ್ಧನು ಯೌವನವನ್ನು ಹೊಂದಿದ ಹಾಗೆ, ಪರಮಾನಂದಭರಿತರಾಗಿ ಶ್ರೀಕೃಷ್ಣನನ್ನು ಪೂಜಿಸಿದರು. ಅನಂತರ ವಾಸುದೇವನು ನಡೆದ ವೃತ್ತಾಂತವನ್ನು ಸವಿಸ್ತಾರವಾಗಿ ಯಾದವ ಸಮೂಹದಲ್ಲಿ ತಿಳಿಸಿ, ಸ್ಯಮಂತಕಮಣಿಯನ್ನು ಸತ್ರಾಜಿತನಿಗೆ ಕೊಟ್ಟು, ಅಪವಾದದಿಂದ ಪರಿಶುದ್ಧ ನಾದನು. ಆಗ ಸತ್ರಾಜಿತನು ಶ್ರೀಕೃಷ್ಣನಮೇಲೆ ವೃಥಾಪವಾದವನ್ನು ಹೇಳಿದೆನಲ್ಲಾ ಎಂದು ಖಿನ್ನತೆಯನ್ನು ಹೊಂದಿ, ತನ್ನ ಮಗಳಾದ ಸತ್ಯಭಾಮೆಯನ್ನು ಕೃಷ್ಣನಿಗೆ ವಿವಾಹ ಮಾಡಿಕೊಟ್ಟನು. ಸತ್ಯಭಾಮೆಯನ್ನು ಅಕ್ರೂರ, ಕೃತವರ್ಮ, ಶತಧನ್ವರೇ ಮೊದಲಾದ ಕೆಲವು ಯಾದವರು ನಮಗೆ ಕೊಡು ಎಂಬುದಾಗಿ ಕೇಳಿದಾಗ್ಯೂ ಸತ್ರಾಜಿತನು ಕೊಡದೆ ಶ್ರೀಕೃಷ್ಣನಿಗೆ ಕೊಟ್ಟುದರಿಂದ ಅಕ್ರೂರಾದಿಗಳಿಗೆ ಸತ್ರಾಜಿತ ನಲ್ಲಿ ವೈರವುಂಟಾಗಿ, ಶತಧನ್ವನಿಗೆ ಅಕ್ರೂರನು ಹೇಳುತ್ತಾನೆ: "ಈ ಸತ್ರಾಜಿತನು ದುರಾತ್ಮನಾದವನು; ನಾವುಗಳು ಸತ್ಯಭಾಮೆಯನ್ನು ಕೇಳಿದಾಗ್ಯೂ ನಮಗೆ ಕೊಡದೆ ಕೃಷ್ಣನಿಗೆ ಕೊಟ್ಟನು; ಆದುದರಿಂದ ಸತ್ರಾಜಿತನನ್ನು ಕೊಲ್ಲಬೇಕೆಂದು ಹೇಳಲು, ಶತಧನ್ವನು ಅಕ್ರೂರಾದಿಗಳ ಮಾತಿನ ಪ್ರಕಾರ ಅರಗಿನ ಮನೆಯಲ್ಲಿ ಪಾಂಡವರು ದಗ್ಧರಾದರೆಂದು ತಿಳಿದು. ಪಾಂಡವರ ಸಂರಕ್ಷಣಾರ್ಥವಾಗಿಯೂ, ದುರ್ಯೋಧನನ ಪ್ರಯತ್ನವನ್ನು ನಿಷ್ಫಲವಾಗಿ ಮಾಡುವುದಕ್ಕೂ ಸಹ ಪರಮಾತ್ಮ ನಾದ ಶ್ರೀಕೃಷ್ಣನು ಹಸ್ತಿನಾಪತಿಗೆ ಪ್ರಯಾಣಮಾಡಿದ ಕಾಲದಲ್ಲಿ, ಸತ್ರಾಜಿತನು ನಿದ್ರೆಯಿಂದ ಮಲಗಿರುವ ವೇಳೆಯಲ್ಲಿ, ಶತಧನ್ವನು ಸತ್ರಾಜಿತನನ್ನು ಸಂಹಾರ ಮಾಡಿ ಮಣಿಯನ್ನು ತೆಗೆದುಕೊಂಡು ಹೋದನು. ಈ ವೃತ್ತಾಂತವನ್ನು ಕೇಳಿದ ಸತ್ಯಭಾಮೆಯು ದುಃಖಕೋಪಗಳಿಂದ ಕೂಡಿದವಳಾಗಿ, ತಕ್ಷಣವೇ ರಥಾರೂಢ ಳಾಗಿ ಹಸ್ತಿನಾಪತಿಗೆ ಬಂದು ಪತಿಯಾದ ಶ್ರೀಕೃಷ್ಣನಿಗೆ ಸಕಲ ವೃತ್ತಾಂತವನ್ನು ಹೇಳಿ, ದುಃಖಿಸಿದಳು. ಶ್ರೀಕೃಷ್ಣನು ಸತ್ಯಭಾಮೆಯಿಂದ ನಡೆದ ವೃತ್ತಾಂತವನ್ನು ತಿಳಿದು, ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಸತ್ಯಭಾಮೆಗೆ ಹೇಳುತ್ತಾನೆ: "ಓ ಸತ್ಯಭಾಮೆಯೇ, ಆ ದುರಾತ್ಮನಾದ ಶತಧನ್ವನು ಮಾಡಿದ ಕೃತ್ಯವನ್ನು

ಸಹಿಸಲಾರೆನೆಂದು” ಹೇಳಿ, ಸತ್ಯಭಾಮಾ ಸಮನ್ವಿತನಾಗಿ ದ್ವಾರಕೆಗೆ ಬಂದು, ಬಲರಾಮನನ್ನು ಕುರಿತು ಕೃಷ್ಣನು ಹೇಳುತ್ತಾನೆ: “ಅಣ್ಣಾ, ಬೇಟೆಗೆ ಹೋದ ಪ್ರಸೇನನನ್ನು ಮೃಗಪತಿಯು ಸಂಹರಿಸಿತು, ಶತಧನ್ವನು ಈ ಸತ್ರಾಜಿತನನ್ನು ಸಂಹಾರಮಾಡಿದನು. ಇವರಿಬ್ಬರೂ ನಾಶವಾದುದರಿಂದ ಸ್ಯಮಂತಕಮಣಿಯು ನಮ್ಮಿಬ್ಬರಿಗೂ ಸಮಾನವಾಗಿರುವುದು. ಆದುದರಿಂದ ನೀನು ರಥಾರೂಢನಾಗಿ ಪ್ರಯಾಣಮಾಡಿ ಶತಧನ್ವನನ್ನು ಸಂಹರಿಸುವುದಕ್ಕೆ ಪ್ರಯತ್ನಿಸು” ಎಂಬುದಾಗಿ ಹೇಳಲು, ಬಲಭದ್ರನು ಕೃಷ್ಣನ ಮಾತಿಗೆ ಅನುಮೋದಿಸಿದನು. ಈ ಸಂಗತಿ ಯನ್ನು ತಿಳಿದ ಶತಧನ್ವನು ಕೃತವರ್ಮನಿಗೆ ಯುದ್ಧಕ್ಕೆ ಸಹಾಯಕನಾಗೆಂದು ಹೇಳಲು, ಕೃತವರ್ಮನು ಬಲದೇವ ವಾಸುದೇವರಲ್ಲಿ ನಾನು ದ್ವೇಷವನ್ನು ಸಂಪಾದಿ ಸುವುದಿಲ್ಲವೆಂದು ಶತಧನ್ವನಿಗೆ ಹೇಳಿ, ಕೃತವರ್ಮನು ಅಕ್ರೂರನನ್ನು ಬಲರಾಮ ನೊಂದಿಗೆ ಯುದ್ಧಕ್ಕೆ ಪ್ರೇರಿಸಲು; ಅಕ್ರೂರನು ಹೇಳಿದ್ದೇನೆಂದರೆ, “ಭಗವಂತ ನಾದ ಶ್ರೀಮನ್ನಾರಾಯಣನು ಪಾದಪ್ರಹಾರಮಾಡಿದ ಮಾತ್ರಕ್ಕೆ ಸಕಲ ದೈತ್ಯ ಸ್ತ್ರೀಯರು ವೈಧವ್ಯವನ್ನು ಹೊಂದಿದರು. ಪ್ರಬಲ ಶತ್ರುಸಮೂಹವನ್ನು ನಾಶ ಮಾಡತಕ್ಕ ಚಕ್ರವನ್ನು ಧರಿಸಿರುವ ಶ್ರೀಕೃಷ್ಣನ ಮುಂಭಾಗದಲ್ಲಿ ನಿಲ್ಲಲು ಅಮರಾಧಿಪತಿಗಳೂ ಕೂಡ ಶಕ್ತರಾಗುವುದಿಲ್ಲ. ಹೀಗಿರುವಾಗ ನಾನು ಬಲರಾಮ ವಾಸುದೇವರಲ್ಲಿ ಶರಣಾಗತನಾಗದೇ ಯುದ್ಧಮಾಡುವುದುಂಟೆ?” ಎಂದು ಹೇಳಿದ ಮಾತನ್ನು ಕೇಳಿ, ಶತಧನ್ವನು ಅಕ್ರೂರನಿಗೆ ಹೇಳುತ್ತಾನೆ: “ಅಕ್ರೂರನೇ, ನೀನು ನನಗೆ ಯುದ್ಧಸಹಾಯಕನಾಗದೇ ಇದ್ದರೂ ಚಿಂತೆಯಿಲ್ಲ; ಈ ಸ್ಯಮಂತಕರತ್ನ ವನ್ನಾದರೂ ಗೋಪ್ಯವಾಗಿಟ್ಟು ರಕ್ಷಿಸೆಂದು” ಹೇಳಲು; ಆ ಮಾತಿಗೆ ಅಕ್ರೂರನು ಹಾಗೇ ಆಗಲೆಂದು ಹೇಳಿ ಮಣಿಯನ್ನು ತೆಗೆದುಕೊಂಡನು. ಅನಂತರ ಶತಧನ್ವನು ಮಹಾವೇಗವುಳ್ಳ ಕುದುರೆಯನ್ನು ಹತ್ತಿಕೊಂಡು ಓಡಿದನು. ಆಗ ಬಲದೇವ ವಾಸುದೇವರೂ ಸಹ ಸೈನ್ಯ, ಸುಗ್ರೀವ, ಮೇಘಪುಷ್ಪ, ವಲಾಹಕವೆಂಬ ನಾಲ್ಕು ಕುದುರೆಗಳಿಂದ ಕಟ್ಟಿದ ರಥದಲ್ಲಿ ಕೂತುಕೊಂಡು, ಶತಧನ್ವನನ್ನು ಅನುಸರಿಸಿದರು. ಶತಧನ್ವನು ನೂರಾರು ಯೋಜನ ದೂರ ಪ್ರಯಾಣಮಾಡಿದುದರಿಂದ ಕುದುರೆಗೆ ಬಹಳ ಆಯಾಸವುಂಟಾಗಿ ಮಿಥಿಲಾಪಟ್ಟಣದ ಸಮೀಪದ ವನದಲ್ಲಿ ಕೆಳಗೆ ಬಿದ್ದು, ಕುದುರೆಯು ಮರಣವನ್ನು ಹೊಂದಿತು. ಆಗ ಶತಧನ್ವನು ಕುದುರೆಯಿಲ್ಲದೆ ಕಾಲಿನಿಂದಲೇ ಓಡಲಾರಂಭಿಸಿದನು. ಆಗ ಶ್ರೀಕೃಷ್ಣನು ಬಲರಾಮನನ್ನು ಕುರಿತು, “ಅಣ್ಣಾ, ಈ ದುರಾಚಾರನಾದ ಶತಧನ್ವನು ಪದಾತಿಯಾಗಿ ಓಡುವುದರಿಂದ ನಾನೂ ಸಹ ಪದಾತಿಯಾಗಿ ಇವನನ್ನು ಸಂಹರಿಸಿ ಬರುವೆನು. ಈ ಭೂಭಾಗವು ಅನೇಕ ದೋಷಗಳಿಂದಲೂ ಭಯದಿಂದಲೂ ಸಹ ಕೂಡಿರುವುದರಿಂದ ನಮ್ಮ

ಕುದುರೆಗಳು ಈ ಸ್ಥಳವನ್ನು ದಾಟಲಾರವು. ಆದುದರಿಂದ ನೀನು ಇಲ್ಲಿಯೇ ರಥದಲ್ಲಿರು ಎಂದು ಹೇಳಿ, ಶತಧನ್ವನನ್ನು ಎರಡು ಯೋಜನ ದೂರ ಅನುಸರಿಸಿ, ಚಕ್ರದಿಂದ ಶತಧನ್ವನ ಶಿರಸ್ಸನ್ನು ಅಪಹರಿಸಿದನು. ಅನಂತರ ಅವನ ವಸ್ತ್ರವನ್ನೆಲ್ಲಾ ಬಿಚ್ಚಿನೋಡಿದಾಗ್ಯೂ, ಸ್ಯಮಂತಕರತ್ನವು ದೊರಕದೇ ಇದ್ದುದರಿಂದ ಶ್ರೀಕೃಷ್ಣನು ಬಲರಾಮನ ಬಳಿಗೆ ಬಂದು, "ಬಲಭದ್ರ! ಪಾಪಾಚಾರನಾದ ಶತಧನ್ವನನ್ನು ಸಂಹರಿಸಿದುದು ನಿಷ್ಫಲವಾಯಿತು. ಅಖಿಲಜಗತ್ಸಾರವಾದ ರತ್ನವು ಮಾತ್ರ ಸಿಕ್ಕಲಿಲ್ಲವೆಂಬುದಾಗಿ ಹೇಳಲು; ಬಲರಾಮನಿಗೆ ಕೋಪವುಂಟಾಗಿ ಕೃಷ್ಣನಿಗೆ ಹೇಳುತ್ತಾನೆ. "ಕೃಷ್ಣಾ! ನಿನ್ನಂತಹ ವಂಚಕನು ಯಾರೂ ಇಲ್ಲವು. ಮೊದಲು ನೀನು ರತ್ನವನ್ನು ಇಬ್ಬರೂ ಸಮಭಾಗಮಾಡಿಕೊಳ್ಳೋಣವೆಂದು ಹೇಳಿ, ಈಗ ನನಗೆ ಭಾಗವನ್ನು ಕೊಡಬೇಕೆಂದು ವಂಚನೆಯಿಂದ, ರತ್ನವೇ ಸಿಕ್ಕಲಿಲ್ಲವೆಂದು ಹೇಳುವೆ; ನೀನು ತಮ್ಮನಾದುದರಿಂದ ನಿನ್ನ ವಂಚನೆಯನ್ನು ಕ್ಷಮಿಸಿರುವೆನು. ಆದುದರಿಂದ ನಿನ್ನ ದಾರಿಯನ್ನು ಅನುಸರಿಸು; ನಾನು ನಿನ್ನೊಡನೆ ಸೇರುವುದಿಲ್ಲ, ದ್ವಾರಕೆಗೂ ಬರುವುದಿಲ್ಲ, ನಿನಗೋಸ್ಕರ ನನ್ನ ಬಂಧುಗಳನ್ನೆಲ್ಲಾ ತೊರೆದಿರುವೆನೆಂದು ಹೇಳಿ, ಕೃಷ್ಣನು ಎಷ್ಟು ವಿಧವಾಗಿ ಬೇಡಿಕೊಂಡರೂ ಸಮಾಧಾನನಾಗದೆ, ಬಲರಾಮನು ಮಿಥಿಲಾಪಟ್ಟಣವನ್ನು ಪ್ರವೇಶಿಸಿ, ಜನಕರಾಜನಿಂದ ಪೂಜಿಸಲ್ಪಟ್ಟವನಾಗಿ, ಅಲ್ಲಿಯೇ ವಾಸವಾಗಿದ್ದನು. ಕೃಷ್ಣನು ದ್ವಾರಕಾನಗರಿಗೆ ಬಂದನು. ಬಲರಾಮನು ಜನಕರಾಜನ ಗೃಹದಲ್ಲಿರುವ ಕಾಲದಲ್ಲಿ ಧೃತರಾಷ್ಟ್ರನ ಮಗನಾದ ದುರ್ಯೋಧನನು, ಬಲರಾಮನಿಂದ ಗದಾಯುದ್ಧವನ್ನು ಅಭ್ಯಾಸಮಾಡಿದನು. ಮೂರು ವರ್ಷಗಳ ಕಾಲ ಕಳೆದನಂತರ, ಬಭ್ರು, ಉಗ್ರಸೇನರೇ ಮೊದಲಾದ ಯಾದವರುಗಳು ಬಲರಾಮನ ಬಳಿಗೆ ಬಂದು, ರತ್ನವು ಕೃಷ್ಣನಿಗೆ ಸಿಕ್ಕಲಿಲ್ಲವಾಗಿ ಹೇಳಿ, ದ್ವಾರಕಾನಗರಿಗೆ ಬಲರಾಮನನ್ನು ಕರೆದುಕೊಂಡು ಬಂದರು. ಅನಂತರ ಅಕ್ರೂರನು ಉತ್ತಮವಾದ ಸ್ಯಮಂತಕಮಣಿಪ್ರಭಾವದಿಂದ ಉನ್ನತವಾದ ಸುವರ್ಣದಿಂದ ಭಗವದ್ಧ್ಯಾನಪರನಾಗಿ ಅನೇಕಯಜ್ಞಗಳನ್ನು ಮಾಡಿದನು. ಈ ಪ್ರಕಾರ ಅರವತ್ತೆರಡು ವರ್ಷಗಳವರೆಗೂ, ದ್ವಾರಕೆಯಲ್ಲಿ ಮಣಿಪ್ರಭಾವದಿಂದ ದುರ್ಭಿಕ್ಷ, ಮಾರಿಕಾ, ಮರಣಾದಿ ಭಯವಿಲ್ಲದೆ ಸುಭಿಕ್ಷವಾಗಿತ್ತು. ಅನಂತರ ಅಕ್ರೂರಪಕ್ಷದವರಾದ ಭೋಜಾದಿಗಳಿಂದ ಸತ್ವತನ ಪ್ರಪೌತ್ರನಾದ, ಶತ್ರುಘ್ನನು ನಾಶವಾಗಲು, ಭೋಜಾದಿಗಳಿಂದ ಪರಿವೃತನಾದ ಅಕ್ರೂರನು ದ್ವಾರಕಾಪಟ್ಟಣವನ್ನು ಬಿಟ್ಟು ಹೊರಟುಹೋದನು. ಅನಂತರ ದ್ವಾರಕೆಯಲ್ಲಿ ದುರ್ಭಿಕ್ಷಮಾರಿಕಾದ್ಯುಪದ್ರವಗಳುಂಟಾದವು. ಇದನ್ನು ನೋಡಿ ಬಲಭದ್ರ ಉಗ್ರಸೇನರೇ ಮೊದಲಾದ ಯಾದವರು ಮಂತ್ರಾಲೋಚನೆಯನ್ನು ಮಾಡಿದರು. ಗರುಡಧ್ವಜನಾದ

ಶ್ರೀಕೃಷ್ಣನು ಹಠಾತ್ತಾಗಿ ಈ ರೀತಿ ಉಪದ್ರವಗಳುಂಟಾಗಲು ಕಾರಣವೇನೆಂದು ಕೇಳಲು, ಅಂಧಕನೆಂಬ ಯದುವೃದ್ಧನು ಹೇಳುತ್ತಾನೆ: "ಕೃಷ್ಣಾ! ಅಕ್ರೂರನ ತಂದೆಯಾದ ಶ್ವಫಲ್ಗನು ಎಲ್ಲಿರುವನೋ ಅಲ್ಲಿ ಅನಾವೃಷ್ಟ್ಯಾದಿ ಭಯಗಳಿರುವುದಿಲ್ಲ; ಹಿಂದೆ ಕಾಶೀರಾಜನ ದೇಶದಲ್ಲಿ ಅನಾವೃಷ್ಟ್ಯಾದಿ ಭಯವುಂಟಾದ ಕಾಲದಲ್ಲಿ ಕಾಶೀರಾಜನು ಶ್ವಫಲ್ಗನನ್ನು ಕರೆದುಕೊಂಡು ಹೋದ ಕಾಲದಲ್ಲಿ ವಿಪರೀತವಾದ ವೃಷ್ಟ್ಯಾದಿಗಳುಂಟಾಗಿ ದುರ್ಭಿಕ್ಷವು ನಿವಾರಣೆಯಾಯಿತು. ಕಾಶೀರಾಜನ ಪತ್ನಿಯು ಗರ್ಭವನ್ನು ಧರಿಸಿ, ಹನ್ನೆರಡು ವರ್ಷಗಳು ಕಳೆದಾಗ್ಯೂ, ಗರ್ಭವು ಜನನವಾಗದಿರುವುದನ್ನು ನೋಡಿ ರಾಜನು ಪತ್ನಿಯ ಗರ್ಭದಲ್ಲಿರತಕ್ಕ ಮಗಳನ್ನು ಕೇಳುತ್ತಾನೆ: "ಹೇ ಪುತ್ರಿ! ನೀನು ಇಷ್ಟು ದಿವಸವಾದಾಗ್ಯೂ ಹೊರಗೆ ಬರದೇ ಇರಲು ಕಾರಣವೇನು? ನಿನ್ನ ತಾಯಿಗೆ ಹೆಚ್ಚಾಗಿ ತೊಂದರೆ ಮಾಡಲು ಕಾರಣವೇನು?" ಎಂಬುದಾಗಿ ಕೇಳಲು, ಗರ್ಭವು ಹೇಳುತ್ತದೆ: ಇನ್ನು ಮೂರು ವರ್ಷಗಳ ಕಾಲ ನೀನು ಪ್ರತಿದಿನವೂ ಒಂದೊಂದು ಗೋವನ್ನು ಬ್ರಾಹ್ಮಣನಿಗೆ ದಾನವನ್ನು ಕೊಟ್ಟರೆ, ನಾನು ಹೊರಗೆ ಬರುವೆನೆಂದು ಹೇಳಲು, ರಾಜನು ಗರ್ಭದ ಇಷ್ಟಾನುಸಾರ ಪ್ರತಿದಿನವೂ ಗೋದಾನವನ್ನು ಮಾಡುತ್ತಿದ್ದನು. ಹೀಗೆ ಮೂರು ವರ್ಷಗಳು ಕಳೆದನಂತರ ರಾಜಪತ್ನಿಯು ಕನ್ಯಾರತ್ನವನ್ನು ಪಡೆದಳು. "ಆಗ ಪುತ್ರಿಗೆ ರಾಜನು ಗಾಂದಿನೀ ಎಂಬುದಾಗಿ ನಾಮಕರಣ ಮಾಡಿದನು. ಗಾಂದಿನಿಯನ್ನು ಶ್ವಫಲ್ಗನಿಗೆ ಕೊಟ್ಟು ವಿವಾಹಮಾಡಿದನು. ಗಾಂದಿನಿಯಲ್ಲಿ ಶ್ವಫಲ್ಗನಿಂದ ಅಕ್ರೂರನು ಹುಟ್ಟಿದನು. ಆದುದರಿಂದ ಅಕ್ರೂರನನ್ನು ಇಲ್ಲಿಗೆ ಕರೆದುಕೊಂಡು ಬಂದರೆ, ಅನಾವೃಷ್ಟ್ಯಾದಿ ಭಯವು ಹೋಗುವುದೆಂದು ಹೇಳಲು; ಅಂಧಕನ ಮಾತಿನ ಪ್ರಕಾರ ಸತ್ವತನ ಪ್ರಪೌತ್ರನಾದ ಶತ್ರುಘ್ನನ ಪಕ್ಷದವರಿಗೆ ಹೆದರಿಕೊಂಡು ಓಡಿಹೋಗಿದ್ದ ಅಕ್ರೂರನಿಗೆ ಶ್ರೀಕೃಷ್ಣನು ಅಭಯವನ್ನಿತ್ತು ದ್ವಾರಕೆಗೆ ಕರೆದುಕೊಂಡು ಬಂದನು. ತದಾಪ್ರಭೃತಿ ಸ್ಯಮಂತಕಮಣಿಪ್ರಭಾವದಿಂದ ದ್ವಾರಕಾನಗರಿಯು ಸುಭಿಕ್ಷವಾಯಿತು. ಆಗ ಶ್ರೀಕೃಷ್ಣನು ಯೋಚಿಸುತ್ತಾನೆ, ಅಕ್ರೂರನು ಶ್ವಫಲ್ಗನಿಂದ ಹುಟ್ಟಿದುದರಿಂದ ಅನಾವೃಷ್ಟ್ಯಾದಿ ದೋಷಗಳು ಹೋಗುವುದೆಂದು ಹೇಳುವ ಜನಗಳ ಮಾತು ಅನಾವೃಷ್ಟಿಪರಿಹಾರಕ್ಕೆ ಪ್ರಬಲವಾದ ಕಾರಣವಾಗಲಿಲ್ಲ. ಆದುದರಿಂದ ಪ್ರಾಯಿಕವಾಗಿ ರತ್ನವು ಅಕ್ರೂರನಲ್ಲಿಯೇ ಇರಬಹುದು; ಇದರಿಂದ ಅಕ್ರೂರನಿಗೆ ಪ್ರಾಶಸ್ತ್ಯವುಂಟಾಗಿದೆಯಲ್ಲದೆ, ಅಕ್ರೂರನು ಅವಿಚ್ಛಿನ್ನವಾಗಿ ಅನೇಕ ಯಜ್ಞಗಳನ್ನು ಮಾಡುತ್ತಿರುವುದೂ ಸಹ ಮಣಿಪ್ರಭಾವವೇ ಹೊರ್ತು ಬೇರೇ ಅಲ್ಲ. ಈ ಕಾರಣದಿಂದ ಮಣಿಯು ಅಕ್ರೂರನಲ್ಲಿಯೇ ಇರುವುದೆಂದು ನಿಶ್ಚಯಿಸಿ ಸಕಲ ಯಾದವರಿಗೂ ಕಾರಣಾಂತರವನ್ನು

ಹೇಳಿ, ತನ್ನ ಮನೆಯಲ್ಲಿ ಸಭೆಯನ್ನು ಸೇರಿಸಿ ಯಾದವರೆಲ್ಲರೂ ಕೂತುಕೊಂಡ ನಂತರ ಅಕ್ರೂರನ ಹತ್ತಿರ ಕೃಷ್ಣನು ಪರಿಹಾಸಾದಿ ಮಾತುಗಳನ್ನಾಡುವ ಸಮಯದಲ್ಲಿ, ಕೃಷ್ಣನು ಅಕ್ರೂರನನ್ನು ಕುರಿತು, "ಅಕ್ರೂರನೇ! ಶತಧನ್ವನು ಯುದ್ಧಕ್ಕೆ ಬಂದ ಕಾಲದಲ್ಲಿ ರತ್ನವನ್ನು ನಿನ್ನಲ್ಲಿಟ್ಟಿರುವುದಾಗಿ ತಿಳಿದಿರುವೆನು. ರತ್ನವು ನಿನ್ನಲ್ಲಿದ್ದರೂ ಫಲಗಳನ್ನು ನಾವೇ ಅನುಭವಿಸುವುದರಿಂದ, ರತ್ನವು ನಿನ್ನಲ್ಲಿದ್ದರೂ ಬಾಧಕವಿಲ್ಲ; ಆದರೆ ನಮ್ಮ ಅಣ್ಣನಾದ ಬಲಭದ್ರನಿಗೆ ರತ್ನವು ನನ್ನಲ್ಲಿಯೇ ಇರುವುದೆಂದು ಸಂದೇಹವಿರುವುದು; ಈ ಸಂಶಯನಿವಾರಣಾರ್ಥವಾಗಿ ನೀನು ರತ್ನವನ್ನು ಬಲರಾಮನಿಗೆ ತೋರಿಸೆಂದು" ಹೇಳಲು; ಆಗ ಅಕ್ರೂರನು ಮನಸ್ಸಿನಲ್ಲಿ ಯೋಚಿಸುತ್ತಾನೆ: ಈ ರತ್ನವನ್ನು ತೋರಿಸದೇ ಇದ್ದರೆ ನನ್ನ ವಸ್ತ್ರವನ್ನು ಶೋಧನೆಮಾಡುತ್ತಾನೆ; ಇದರಿಂದ ಬಲಿಷ್ಠರಲ್ಲಿ ವಿರೋಧವನ್ನು ಸಂಪಾದಿಸಿದ ಹಾಗಾಗುವುದು; ಬಲವದ್ವಿರೋಧವು ಯುಕ್ತವಾದುದಲ್ಲ, ಎಂದು ಯೋಚಿಸಿ, ಅಖಿಲಜಗತ್ಕಾರಣನಾದ ಶ್ರೀಕೃಷ್ಣನನ್ನು ಕುರಿತು ಹೇಳುತ್ತಾನೆ: "ಭಗವಂತನೇ! ಈ ಸ್ಯಮಂತಕರತ್ನವನ್ನು ಶತಧನ್ವನು ನನ್ನಲ್ಲಿರಿಸಿ ಹೊರಟುಹೋದನು. ನೀನು ಕೇಳಿದರೆ ಕೊಡೋಣವೆಂದು ಇದುವರೆಗೆ ರತ್ನವನ್ನು ಇಟ್ಟುಕೊಂಡಿದ್ದೆನು. ಈ ರತ್ನವನ್ನು ಪರಿಗ್ರಹಿಸಿ ಯಾರಿಗೆ ಬೇಕಾದರೂ ಕೊಡಬಹುದೆಂದು" ಹೇಳಿ ರತ್ನವನ್ನು ವಸ್ತ್ರದಲ್ಲಿ ಕಟ್ಟಿದ್ದನ್ನು ಬಿಚ್ಚಿ ಯಾದವರ ಸಭೆಯಲ್ಲಿರಿಸಿದನು. ಆಗ ಸಭೆಯು ರತ್ನದ ಕಾಂತಿಯಿಂದ ಪ್ರಕಾಶವಾಯಿತು. ಆಗ ಯಾದವರೆಲ್ಲರೂ ವಿಸ್ಮಿತರಾದರು. ಅನಂತರ ಬಲಭದ್ರನು ಈ ರತ್ನವು ನನಗೂ ಕೃಷ್ಣನಿಗೂ ಭಾಗವಾಗತಕ್ಕದ್ದೆಂದೂ, ಸತ್ಯಭಾಮೆಯು ಈ ರತ್ನವು ನನ್ನ ಪಿತೃಧನವಾದುದರಿಂದ ನನಗೆ ಬರಬೇಕೆಂದೂ ಸಹ ಹೇಳಿದರು. ಇದನ್ನು ಕೇಳಿದ ಕೃಷ್ಣನು, ಎತ್ತಿಗೂ ಚಕ್ರಕ್ಕೂ ಮಧ್ಯದಲ್ಲಿರುವಂತೆ ಆಯಿತು; ಈ ರತ್ನಕ್ಕಾಗಿ ಬಲರಾಮ ಸತ್ಯಭಾಮೆಯರು ವ್ಯವಹಾರಮಾಡದಹಾಗೆ ಉಪಾಯವನ್ನು ಯೋಚಿಸಿ ಸಭೆಯಲ್ಲಿ ಹೇಳುತ್ತಾನೆ: "ಈ ರತ್ನವು ಶುಚಿಯಾದವನ ಸಮೀಪದಲ್ಲಿದ್ದರೆ, ದೇಶಕ್ಕೆ ಸೌಖ್ಯಗಳುಂಟಾಗುವುದು; ಅಶುಚಿಯಾದವನು ಧರಿಸಿದರೆ ಅವನಿಗೆ ಮರಣವುಂಟಾಗುವುದು; ಈ ಕಾರಣದಿಂದ ನಾನು ಧರಿಸಲು ಹದಿನಾರು ಸಾವಿರ ಸ್ತ್ರೀಯರಿಂದ ಕೂಡಿರುತ್ತೇನೆ; ಆದುದರಿಂದ ರತ್ನವನ್ನು ಧರಿಸಲು ಶಕ್ತನಲ್ಲ. ಬಲರಾಮನು ರತ್ನವನ್ನು ಧರಿಸಿದರೆ, ಮದಿರಪಾನಾದ್ಯುಪಭೋಗಗಳನ್ನು ಬಿಡಬೇಕಾಗುವುದು. ಸತ್ಯಭಾಮೆಯು ನನಗೆ ಪತ್ನಿಯಾಗಿರುವುದರಿಂದ ಅವಳೂ ನನ್ನಂತೆಯೇ ಆಚಾರನಿಷ್ಠತೆ ಇಲ್ಲದವಳು, ಈ ಕಾರಣಗಳಿಂದ ಮಣಿಯು ಸದಾಚಾರಸಂಪನ್ನನಾದ ಅಕ್ರೂರನಲ್ಲಿಯೇ ಇರಲೆಂದು" ಹೇಳಿ ರತ್ನವನ್ನು ಅಕ್ರೂರನ ಕೈಗೆ ಕೊಟ್ಟನು.

ಅನಂತರ ಅಕ್ರೂರನು ಭಗವದಾಜ್ಞಾಪ್ರಕಾರ ದೇಶಸೌಖ್ಯಾರ್ಥವಾಗಿ ಸ್ಯಮಂತಕ ಮಣಿಯನ್ನು ಪರಿಗ್ರಹಿಸಿ ತದಾಪ್ರಭೃತಿ ಬಹಿರಂಗವಾಗಿ ಧರಿಸಿದನು. ಶ್ರೀಕೃಷ್ಣನು ಬಲರಾಮನಿಂದ ಹೇಳಿದ ಅಪವಾದಪರಿಹಾರಾರ್ಥವಾಗಿಯೂ ಸತ್ರಾಜಿತನು ಹೇಳಿದ ಅಪವಾದ ನಿರಾಸಾರ್ಥವಾಗಿಯೂ ಸಹ, ಸ್ಯಮಂತಕರತ್ನವನ್ನು ಪ್ರಯತ್ನ ದಿಂದ ವ್ಯಕ್ತಪಡಿಸಿದನು. ಈ ಕಥೆಯನ್ನು ಕೇಳಿದವರಿಗೆ ಅಪವಾದ ಪರಿಹಾರ ವಾಗುವುದಲ್ಲದೆ ಪಾಪವಿಮೋಚನೆಯೂ ಸಹ ಆಗುವುದು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಹದಿಮೂರನೆಯ ಅಧ್ಯಾಯವು ಸಮಾಪ್ತಃ

ಹದಿನಾಲ್ಕನೆಯ ಅಧ್ಯಾಯವು

"ಅನಮಿತ್ರನಿಗೆ ಶಿನಿಯೂ, ಶಿನಿಗೆ ಸತ್ಯಕನೂ, ಇವನಿಂದ ಸಾತ್ಯಕಿಯೂ ಸಹ ಹುಟ್ಟಿದರು. ಇವನಿಗೆ ಯುಯುಧಾನನೆಂಬ ಹೆಸರೂ ಸಹ ಉಂಟು. ಇವನಿಂದ ಸಂಜಯನೂ, ಸಂಜಯನಿಂದ ಕುಣಿಯೂ, ಕುಣಿಯಿಂದ ಯುಗಂ ಧರನೂ ಸಹ ಹುಟ್ಟಿದರು. ಇವರೆಲ್ಲರೂ ಶೈನೇಯರೆಂಬ ಸಂಜ್ಞೆಯುಳ್ಳವರು. ಅನಮಿತ್ರನ ಸಂತತಿಯಲ್ಲಿ ವೃಷ್ಣಿಯೆಂಬುವನು ಹುಟ್ಟಿದನು. ಇವನಿಂದ ಶ್ವಫಲ್ಗನು ಹುಟ್ಟಿದನು. ಶ್ವಫಲ್ಗನ ವೃತ್ತಾಂತವನ್ನು ಹಿಂದೆಯೇ ಹೇಳಿರುವುದು. ಇವನಿಂದ ಅಕ್ರೂರನೂ, ಅಕ್ರೂರನಿಂದ ಉಪಮದ್ಗುವೂ, ಇವನಿಂದ ಮೃದ, ಅಮೃದ, ವಿಶ್ವಾರಿ, ಮೇಜಯ, ಗಿರಿಕ್ಷತ್ರ, ಉಪಕ್ಷತ್ರ, ಶತ್ರುಘ್ನ, ಅರಿಮರ್ದನ, ಧರ್ಮದೃಕ್, ದೃಷ್ಟ, ಧರ್ಮಗಂಧ, ಮೋಜವಾಹ, ಪ್ರತಿವಾಹರೆಂಬ ಪುತ್ರರೂ ಸುತರಾ ಎಂಬ ಕನ್ನಿಕೆಯೂ ಸಹ ಹುಟ್ಟಿದರು. ಅಕ್ರೂರನಿಗೆ ದೇವವಾನ್, ಉಪದೇವರು ಎಂಬ ಪುತ್ರರೂ ಸಹ ಇದ್ದರು. ಚಿತ್ರಕನಿಗೆ ಪೃಥುವೇ ಮೊದ ಲಾದ ಅನೇಕ ಮಕ್ಕಳುಗಳಿದ್ದರು. ಅಂಧಕನಿಗೆ ಕುಕುರ, ಭಜಮಾನ, ಶುಚಿ ಕಂಬಳ, ಬರ್ಹಿಷರೆಂದು ನಾಲ್ಕುಜನ ಪುತ್ರರು, ಕುಕುರನಿಂದ ಧೃಷ್ಟನೂ, ಇವನಿಂದ ಕಪೋತರೋಮನೂ, ಅನಂತರ ವಿಲೋಮನೂ, ಇವನಿಂದ ಅನುವೂ, ಅನುವಿನಿಂದ ಆನಕದುಂದುಭಿಯೂ, ಆಮೇಲೆ ಅಭಿಜಿತನೂ, ಅವನಿಂದ ಪುನರ್ವಸುವೂ, ಇವನಿಂದ ಆಹುಕನೂ, ಆಹುಕೀ ಎಂಬ ಕನ್ನಿಕೆಯೂ, ಆಹುಕನಿಗೆ ದೇವಕ, ಉಗ್ರಸೇನರೂ, ದೇವಕನಿಗೆ ದೇವವಾನ್, ಉಪದೇವ, ಸಹದೇವ, ದೇವರಕ್ಷಿ ಎಂಬ ನಾಲ್ವರು ಪುತ್ರರೂ, ವೃಕದೇವಾ,

ಉಪದೇವಾ, ದೇವರಕ್ಷಿತಾ, ಶ್ರೀದೇವಾ, ಶಾಂತಿದೇವಾ, ಸಹದೇವಾ, ದೇವಕೀ ಎಂಬುದಾಗಿ ಏಳು ಕನ್ನಿಕೆಗಳೂ ಸಹ ಹುಟ್ಟಿದರು. ಈ ಏಳು ಜನ ಕನ್ನಿಕೆಗಳನ್ನೂ ವಸುದೇವನು ವಿವಾಹಮಾಡಿಕೊಂಡನು. ಉಗ್ರಸೇನನಿಗೆ ಕಂಸ, ನ್ಯಗ್ರೋಧ, ಸುನಾಮಾ, ಆನಕಾಹ್ವ, ಶಂಕು, ಸುಭೂಮಿ, ರಾಷ್ಟ್ರಪಾಲ, ಯುದ್ಧ ತುಷ್ಟಿ, ಸುತುಷ್ಟಿಮತ್ ಎಂಬ ಪುತ್ರರೂ, ಕಂಸಾ, ಕಂಸವತೀ, ಸುತನು, ರಾಷ್ಟ್ರ ಪಾಲಕರೆಂಬ ಕನ್ನಿಕೆಯರೂ ಸಹ ಹುಟ್ಟಿದರು. ಭಜಮಾನನಿಂದ ವಿದೂರಥನೂ, ಇವನಿಂದ ಶೂರನೂ, ಶೂರನಿಂದ ಶಮಿಯೂ, ಇವನಿಂದ ಪ್ರತಿಪತ್ರನೂ, ಇವನಿಂದ ಸ್ವಯಂಭೋಜನೂ, ಅನಂತರ ಹೃದಿಕನೂ, ಇವನಿಂದ ಕೃತವರ್ಮ, ಶತಧನು, ದೇವಾರ್ಹ, ದೇವಗರ್ಭರೂ, ದೇವಗರ್ಭನಿಂದ ಶೂರನೂ ಸಹ, ಹುಟ್ಟಿದರು. ಶೂರನು ಮಾರಿಷಾ ಎಂಬ ಪತ್ನಿಯಲ್ಲಿ ವಸುದೇವನೇ ಮೊದಲಾದ ಹತ್ತು ಜನ ಪುತ್ರರನ್ನು ಪಡೆದನು. ವಸುದೇವನು ಹುಟ್ಟಿದಮಾತ್ರಕ್ಕೆ ಅಂತರಿಕ್ಷದಲ್ಲಿ ದೇವತೆಗಳು ವಸುದೇವನ ಗೃಹದಲ್ಲಿ ಭಗವಂತನಾದ ಶ್ರೀಮನ್ನಾರಾಯಣನು ಅವತರಿಸುವನೆಂಬ ಸಂತೋಷದಿಂದ ಆನಕದುಂದುಭಿಯನ್ನು ಹೊಡೆದರು. ಇದರಿಂದ ವಸುದೇವನು ಆನಕದುಂದುಭಿಯೆಂಬ ಹೆಸರನ್ನೂ ಸಹ ಪಡೆದನು. ವಸುದೇವನಿಗೆ ದೇವಭಾಗ, ದೇವಶ್ರವ, ಅಷ್ಟಕ, ಕಕುಚ್ಚಕ್ರ, ವತ್ಸಧಾರಕ, ಸೃಂಜಯ, ಶ್ಯಾಮ, ಶಮಿಕ, ಗಂಡೂಷರೆಂಬುದಾಗಿ ಒಂಭತ್ತು ಜನ ತಮ್ಮಂದಿರೂ, ಪೃಥಾ, ಶೃತದೇವಾ, ಶೃತಕೀರ್ತಿ, ಶೃತಶ್ರವಾ, ರಾಜಾಧಿದೇವಿಗಳೆಂಬುದಾಗಿ ಐದುಜನ ತಂಗಿಯರುಗಳೂ ಸಹ ಹುಟ್ಟಿದರು. ಶೂರನು ಕುಂತಿ ಎಂಬ ಸ್ನೇಹಿತನಿಗೆ ಮಕ್ಕಳಿಲ್ಲದುದರಿಂದ ತನ್ನ ಮಗಳಾದ ಪೃಥೆಯನ್ನು ಸಾಕಿಕೊಳ್ಳಲು ಕೊಟ್ಟನು. ಪೃಥೆಯನ್ನು ಪಾಂಡುವು ವಿವಾಹಮಾಡಿಕೊಂಡು, ಪೃಥೆಯಲ್ಲಿ ಧರ್ಮ, ವಾಯು, ಇಂದ್ರ ಇವರ ಮಂತ್ರದಿಂದ ಯುಧಿಷ್ಠಿರ, ಭೀಮ, ಅರ್ಜುನರೆಂಬುದಾಗಿ ಮೂರುಜನ ಪುತ್ರರು ಹುಟ್ಟಿದರು. ಪೃಥುವು ವಿವಾಹವಾಗುವುದಕ್ಕೆ ಮುಂಚೆಯೇ ಸೂರ್ಯನ ಅನುಗ್ರಹದಿಂದ ಕರ್ಣನೆಂಬ ಮಗನನ್ನು ಪಡೆದಳು, ಪಾಂಡುವಿಗೆ ಮಾದ್ರೀ ಎಂಬ ಎರಡನೆಯ ಹೆಂಡತಿಯು ಇದ್ದಳು. ಮಾದ್ರಿಯಲ್ಲಿ ಅಶ್ವಿನೀ ದೇವತೆಗಳ ಅಂಶದಿಂದ ನಕುಲ ಸಹದೇವರೆಂದು ಪುತ್ರರು ಹುಟ್ಟಿದರು. ವೃದ್ಧ ಧರ್ಮನೆಂಬುವನು ಶೃತದೇವಿಯನ್ನು ವಿವಾಹಮಾಡಿಕೊಂಡು ಅವಳಲ್ಲಿ ದಂತವಕ್ರನೆಂಬ ಮಹಾಸುರನನ್ನು ಪಡೆದನು. ಶೃತಕೀರ್ತಿಯನ್ನು ಕೇಕಯ ರಾಜನು ವಿವಾಹಮಾಡಿಕೊಂಡು ಅವಳಲ್ಲಿ ಸಂತರ್ಧನನೇ ಮೊದಲಾದ ಐದು ಜನ ಪುತ್ರರನ್ನು ಪಡೆದನು. ಶ್ರತಶ್ರವಸೆಯನ್ನು ಚೇದಿರಾಜನಾದ ದಮೋಘಷನು ವಿವಾಹ ಮಾಡಿಕೊಂಡು ಅವಳಲ್ಲಿ ಶಿಶುಪಾಲನನ್ನು ಪಡೆದನು.

ಶಿಶುಪಾಲನು ಪೂರ್ವದಲ್ಲಿ ಉದಾರವಿಕ್ರಮನಾದ ದೈತ್ಯರಿಗೆ ಆದಿಪುರುಷನಾದ ಹಿರಣ್ಯಕಶಿಪುವಾಗಿದ್ದನು. ಅನಂತರ ಮೂರುಲೋಕದ ಸಂಪತ್ತುಗಳನ್ನು ಆಕ್ರಮಿಸಿದ ರಾವಣನಾಗಿದ್ದನು. ಶಿಶುಪಾಲನು, ಭೂಭಾರಾವತರಣಾರ್ಥವಾಗಿ ಅವತಾರಮಾಡಿರುವ ಶ್ರೀ ಕೃಷ್ಣನಲ್ಲಿ ದ್ವೇಷವನ್ನು ಹೊಂದಿ ಕೃಷ್ಣಚಕ್ರದಿಂದ ಮೃತಿಯನ್ನು ಹೊಂದಿ ಸಾಯುಜ್ಯವನ್ನು ಹೊಂದಿದನು. ಪ್ರಪನ್ನನಾದವನು ಭಗವಂತನಿಂದ ಇಷ್ಟಾರ್ಥವನ್ನು ಹೊಂದುತ್ತಾನೆ. ಅಪ್ರಪನ್ನನೂ ಸಹ ಭಗವ ದ್ವೇಷಿಯಾಗಿ ಆತನಿಂದಲೇ ವಧಿಸಲ್ಪಟ್ಟು ಶ್ರೀಮನ್ನಾರಾಯಣನ ಪಾದವನ್ನು ಹೊಂದುತ್ತಾನೆ.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಹದಿನಾಲ್ಕನೆಯ ಅಧ್ಯಾಯವು ಸಮಾಪ್ತಃ

ಹದಿನೈದನೆಯ ಅಧ್ಯಾಯವು

ಮೈತ್ರೇಯರು ಪರಾಶರ ಭಗವಂತನನ್ನು ಪುನಃ ಕೇಳುತ್ತಾರೆ. "ಓ ಪರಾಶರ ಬ್ರಹ್ಮರ್ಷಿಯೇ, ಹಿರಣ್ಯಕಶಿಪುವನ್ನೂ ರಾವಣನನ್ನೂ ಸಹ ಶ್ರೀ ಮಹಾವಿಷ್ಣುವು ಸಂಹರಿಸಿದಾಗ್ಯೂ ಸಾಯುಜ್ಯವನ್ನು ಹೊಂದದೆ ಪುನರ್ಜನ್ಮವನ್ನೈತ್ತಿದರು. ಭಗವ ದ್ವೇಷಿಯಾಗಿ ಅವನಿಂದ ನಿಗ್ರಹನಾದರೂ ಮೋಕ್ಷವುಂಟಾಗುವುದೆಂದು ಹಿಂದಿನ ಅಧ್ಯಾಯದಲ್ಲಿ ಹೇಳಿದರಷ್ಟೆ. ಅದೇ ಪ್ರಕಾರ ಹಿರಣ್ಯಕಶಿಪು ರಾವಣರಿಗೆ ಮೋಕ್ಷ ವಾಗದಿರಲು ಕಾರಣವೇನು? ಶಿಶುಪಾಲನಿಗೆ ಸಾಯುಜ್ಯವುಂಟಾಗುವುದಕ್ಕೂ ಸಹ ಕಾರಣವನ್ನು ತಿಳಿಯಲಪೇಕ್ಷೆಯುಳ್ಳ ನನಗೆ ಅನುಗ್ರಹಿಸಬೇಕು"—ಎಂದು ಕೇಳಿಕೊಳ್ಳಲು; ಪರಾಶರರು ಹೇಳುತ್ತಾರೆ. "ಓ ಮೈತ್ರೇಯನೇ! ದೈತ್ಯೇಶ್ವರ ನಾದ ಹಿರಣ್ಯಕಶಿಪುವಿನ ವಧಾರ್ಥವಾಗಿ ಭಗವಂತನು ನೃಸಿಂಹರೂಪವನ್ನು ಧರಿಸಿದನು. ಹಿರಣ್ಯಕಶಿಪುವಿಗೆ ಮನಸ್ಸಿನಲ್ಲಿ ನೃಸಿಂಹರೂಪಿಯಾದವನು ವಿಷ್ಣು ವೆಂದು ಅಭಿಪ್ರಾಯವುಂಟಾಗಲಿಲ್ಲ. ಹಿರಣ್ಯಕಶಿಪುವು ರಜೋದ್ರೇಕದಿಂದ ಭೋಗಸಂಪತ್ತಿನಿಂದ ಕೂಡಿದವನಾಗಿದ್ದುದರಿಂದ ಪುನರ್ಜನ್ಮವನ್ನೈತ್ತಿದನು. ಇದೇ ರೀತಿ ರಾವಣನು ಕಾಮಾತಿರೇಕದಿಂದ ಜಾನಕಿಯಲ್ಲಿ ಆಸಕ್ತವಾದ ಮನಸ್ಸಿನಿಂದ ದಾಶರಥಿರೂಪಿಯಾದ ಶ್ರೀಮನ್ನಾರಾಯಣನಿಂದ ಸಂಹೃತನಾಗುವ ಕಾಲದಲ್ಲಿ ಆತನು ಮಾನುಷನೆಂದು ತಿಳಿದನೇ ಹೊರತು ಅಚ್ಯುತನೆಂದು ಭಾವಿಸಲಿಲ್ಲ.

ಆದುದರಿಂದ ರಾವಣನು ಶಿಶುಪಾಲನ ಜನ್ಮವನ್ನೆತ್ತಿದನು. ಶಿಶುಪಾಲನು ಭಗವಂತನಾದ ಶ್ರೀಮನ್ನಾರಾಯಣನು ಕೃಷ್ಣಾವತಾರದಲ್ಲಿ ಮಾಡಿದ ಆಶ್ಚರ್ಯಕರವಾದ ಕೆಲಸಗಳನ್ನು ಕಂಡುದರಿಂದಲೂ, ಅವನ ಮನಸ್ಸಿನಲ್ಲಿ ಕೃಷ್ಣನ ನಾಮಗಳು ಸ್ಥಿರವಾಗಿ ನಿಂತವು. ಅಲ್ಲದೆ ಶಿಶುಪಾಲನಿಗೆ ಶ್ರೀ ಕೃಷ್ಣನು ಕಮಲಾಕ್ಷನಾಗಿಯೂ, ಪೀತಾಂಬರಧಾರಿಯಾಗಿಯೂ, ಕಿರೀಟ ಹಾರ ಕೇಯೂರಾದಿಗಳಿಂದ ಅಲಂಕೃತನಾಗಿಯೂ, ಚತುರ್ಬಾಹುಗಳಿಂದ ಶಂಖಚಕ್ರಗದಾ ಪದ್ಮಯುಕ್ತನಾಗಿಯೂ ಇರುವ ರೂಪವು ಕಾಣುತ್ತಿದ್ದುದರಿಂದ ಶಿಶುಪಾಲನಿಗೆ ಕೃಷ್ಣನಲ್ಲಿ ವಿರೋಧವುಂಟಾಗಿದ್ದರೂ ಶಿಶುಪಾಲನು ಸ್ನಾನಮಾಡತಕ್ಕ ಕಾಲದಲ್ಲಿಯೂ, ಆಟವಾಡತಕ್ಕ ಕಾಲದಲ್ಲಿಯೂ, ಊಟಮಾಡತಕ್ಕ ಕಾಲದಲ್ಲಿಯೂ, ಇತರ ಕಾಲಗಳಲ್ಲಿಯೂ ಸಹ ಕೃಷ್ಣನ ವಿಷಯಗಳನ್ನೇ ನೆನಸುತ್ತಿದ್ದುದರಿಂದ ಮನಸ್ಸು ಕೃಷ್ಣನನ್ನು ಬಿಟ್ಟು ಬೇರೇ ತಿರುಗಲಿಲ್ಲ. ಶಿಶುಪಾಲನು ಕೃಷ್ಣನನ್ನು ಪದೇ ಪದೇ ದೂಷಿಸುತ್ತಾ ಕೃಷ್ಣನ ಚಕ್ರದಿಂದ ಹತನಾಗುವ ಕಾಲದಲ್ಲಿ ಶಂಕಚಕ್ರಗದಾಲಂಕೃತನಾದ ಶ್ರೀಕೃಷ್ಣನನ್ನು ನೋಡಿದುದರಿಂದ ಭಗವಂತನೊಂದಿಗೆ ಸಾಯುಜ್ಯವನ್ನು ಹೊಂದಿದನು. ಹಿರಣ್ಯಕಶಿಪುವಿಗೆ ನೃಸಿಂಹರೂಪಿಯು ಪರಬ್ರಹ್ಮನೆಂದು ಅಭಿಪ್ರಾಯವು ಹುಟ್ಟದೇ ಇದ್ದುದರಿಂದಲೂ ರಾವಣನಿಗೆ ಮರಣಕಾಲದಲ್ಲಿ ಸೀತೆಯಲ್ಲಿ ಕಾಮಾಸಕ್ತನಾಗಿ ಶ್ರೀರಾಮನು ಪರಬ್ರಹ್ಮನೆಂದು ತಿಳಿಯದಿದ್ದುದರಿಂದಲೂ ಸಹ, ಆಗ ಮೋಕ್ಷವುಂಟಾಗಲಿಲ್ಲ. ಶಿಶುಪಾಲನಿಗೆ ಕೃಷ್ಣನೇ ಪರಬ್ರಹ್ಮನೆಂದು ತಿಳಿದಿದ್ದುದರಿಂದ ಮೋಕ್ಷವನ್ನು ಹೊಂದಿದನು. ಶ್ರೀಕೃಷ್ಣನು ದ್ವೇಷದಿಂದ ಸಂಕೀರ್ತನ ಸ್ಮರಣೆಗಳನ್ನು ಮಾಡಿದವರೂ ದುರ್ಲಭವಾದ ಶಾಶ್ವತವಾದ ಪದವಿಯನ್ನು ಕೊಡುವಾಗ ಭಕ್ತಿಯಿಂದ ಧ್ಯಾನಾದಿಗಳನ್ನು ಮಾಡತಕ್ಕವರಿಗೆ ಕೊಡುವುದೇನಾಶ್ಚರ್ಯವು? ಓ ಮೈತ್ರೇಯನೇ? ನೀನು ಕೇಳಿದ ಪ್ರಶ್ನೆಗೆ ಸಮಾಧಾನವನ್ನು ಹೇಳಿದೆನು. ಮುಂದಿನ ಕಥಾವಿಷಯವನ್ನು ಹೇಳುವೆನು ಕೇಳು: ಆನಕ ದುಂದುಭಿಯಾದ ವಸುದೇವನಿಗೆ ಪೌರವೀ, ರೋಹಿಣೀ, ಮದಿರಾ, ಭದ್ರಾ, ದೇವಕೀ ಮೊದಲಾಗಿ ಅನೇಕ ಪತ್ನಿಗಳಿದ್ದರು. ಆನಕ ದುಂದುಭಿಯು ರೋಹಿಣಿಯಲ್ಲಿ ಬಲಭದ್ರ ಶಠಸಾರಣ, ದುರ್ಮದಾದಿಗಳನ್ನೂ, ಬಲದೇವನು ರೇವತಿಯಲ್ಲಿ ವಿಶಠ, ಉಲ್ಮುಕರನ್ನೂ, ವಸುದೇವನು ಸಾರಣಿಯಲ್ಲಿ ಸಾರ್ಷ್ಟಿ ಮೊದಲಾದ ಪುತ್ರರನ್ನೂ, ಮದಿರೆಯಲ್ಲಿ ನಂದ ಉಪನಂದಾದಿ ಪುತ್ರರುಗಳನ್ನೂ, ವೈಶಾಲಿಯಲ್ಲಿ ಕೌಶಿಕನನ್ನೂ, ದೇವಕಿಯಲ್ಲಿ ಕೀರ್ತಿಮಂತ, ಸುಷೇಣ, ಉದಾಯುಧ, ಭದ್ರಸೇನ, ಋಜುದಾಸ, ಭದ್ರದೇವನೆಂಬ ಆರುಜನ ಪುತ್ರರನ್ನೂ ಪಡೆದರು. ಇವರನ್ನು ಕಂಸನು ನಾಶಮಾಡಿದನು. ಅನಂತರ

ಏಳನೆಯ ಗರ್ಭವು ಅರ್ಧರಾತ್ರಿಯ ಸಮಯದಲ್ಲಿ ಭಗವಂತನಿಂದ ಪ್ರೇರಿತವಾದ ಯೋಗನಿದ್ರೆಯು ದೇವಕೀಗರ್ಭವನ್ನು ರೋಹಿಣೀ ಜಠರದಲ್ಲಿಟ್ಟಿತು. ಗರ್ಭ ವನ್ನು ಕರ್ಷಣೆಮಾಡಿದುದರಿಂದ ಸಂಕರ್ಷಣನೆಂದು ಹೆಸರುಂಟಾಯಿತು. ಅನಂತರ ಸಕಲ ಜಗತ್ತೆಂಬ ಮಹಾವೃಕ್ಷಕ್ಕೆ ಮೂಲಭೂತನಾಗಿಯೂ, ಸಕಲ ಸುರಾಸುರ ಮುನಿಜನರಿಗೂ ಸಹ ಅಗೋಚರನಾಗಿಯೂ, ಬ್ರಹ್ಮೇಂದ್ರಾದಿಗಳಿಂದ ನಮಸ್ಕರಿಸಲ್ಪಡತಕ್ಕವನಾಗಿಯೂ, ಅನಾಧಿಮಧ್ಯನಿಧನನಾಗಿಯೂ ಇರುವ ಭಗವಂತನಾದ ಶ್ರೀಮನ್ನಾರಾಯಣನು ಭೂಭಾರ ಪರಿಹಾರಾರ್ಥವಾಗಿ ದೇವಕೀಗರ್ಭದಲ್ಲಿ ಅವತರಿಸಿದನು. ಶ್ರೀವಾಸುದೇವನ ಯೋಗನಿದ್ರೆಯು ನಂದ ಗೋಪ ಪತ್ನಿಯಾದ ಯಶೋದಾಗರ್ಭವನ್ನು ಹೊಂದಿದಳು. ಶ್ರೀಮನ್ನಾರಾ ಯಣನು ಅವತರಿಸುವ ಕಾಲದಲ್ಲಿ ಜಗತ್ತು ಸುಪ್ರಸನ್ನವಾದ ಆದಿತ್ಯ ಚಂದ್ರರೇ ಮೊದಲಾದ ಗ್ರಹಗಳಿಂದಲೂ ದುಷ್ಟಸತ್ವಭಯವಿಲ್ಲದುದಾಗಿಯೂ ಸಹ ಪ್ರಕಾಶಮಾನವಾಗಿತ್ತು. ಪರಮಾತ್ಮನು ಅವತಾರಮಾಡಿದುದರಿಂದ ಜಗತ್ತು ಸನ್ಮಾರ್ಗವರ್ತಿನಿಯಾಯಿತು. ಭೂಲೋಕದಲ್ಲಿ ಅವತಾರಮಾಡಿದ ಭಗವಂತ ನಿಗೆ ಹದಿನಾರುಸಾವಿರದ ನೂರೊಂದು ಪತ್ನೀರುಗಳಿದ್ದರು. ಇವರುಗಳಲ್ಲಿ ರುಕ್ಮಿಣೀ, ಸತ್ಯಭಾಮಾ, ಜಾಂಬವತೀ, ಚಾರುಹಾಸಿನೀ ಮೊದಲಾದ ಎಂಟು ಜನ ಸ್ತ್ರೀಯರು ಪ್ರಧಾನರಾದವರು. ಅನಾದಿಯಾದ ಭಗವಂತನು ತನ್ನ ಪತ್ನೀರುಗಳಲ್ಲಿ ಲಕ್ಷ ಎಂಟುಸಾವಿರ ಪುತ್ರರನ್ನು ಪಡೆದನು. ಇವರುಗಳಲ್ಲಿ, ಪ್ರದ್ಯುಮ್ನ, ಚಾರುಧೇಷ್ಣ, ಸಾಂಬರೇ ಮೊದಲಾದ ಹದಿಮೂರುಜನ ಪುತ್ರರು ಪ್ರಧಾನರಾದವರು. ಪ್ರದ್ಯುಮ್ನನು ರುಕ್ಮಿಣಿಯ ಮಗಳಾದ ರುಕ್ಮವತಿ ಯನ್ನು ವಿವಾಹ ಮಾಡಿಕೊಂಡನು. ಪ್ರದ್ಯುಮ್ನನಿಂದ ಅನಿರುದ್ಧನು ಹುಟ್ಟಿ ದನು. ಅನಿರುದ್ಧನು ರುಕ್ಮಿಣಿಯ ಪೌತ್ರಿಯಾದ ಸುಭದ್ರೆಯನ್ನು ವಿವಾಹ ಮಾಡಿಕೊಂಡು ಅವಳಲ್ಲಿ ವಜ್ರನನ್ನು ಪಡೆದನು. ವಜ್ರನಿಂದ ಪ್ರತಿಬಾಹುವೂ ಇವನಿಂದ ಸುಚಾರುವೂ ಸಹ ಹುಟ್ಟಿದರು. ಈ ಪ್ರಕಾರ ಯದುಕುಲವು ವೃದ್ಧಿ ಯಾಯಿತು. ಈ ವಂಶದಲ್ಲಿ ಹುಟ್ಟಿದವರ ಹೆಸರುಗಳನ್ನು ಹೇಳಬೇಕಾದರೆ ನೂರುವರ್ಷಗಳಾದರೂ ಪೂರ್ತಿಯಾಗಲಾರದು. ಧನುರ್ವಿದ್ಯೆಯನ್ನು ಮಾತ್ರ ಅಭ್ಯಾಸಮಾಡುತ್ತಿದ್ದ ಕುಮಾರರು ಮೂರುಕೋಟಿ ಎಂಬತ್ತೆಂಟುಸಾವಿರದ ಒಂದುನೂರು. ಇನ್ನು ಇತರ ಬಾಲಕರೆಷ್ಟಿರಬಹುದು ? ಪೂರ್ವದಲ್ಲಿ ದೇವಾ ಸುರರಯುದ್ಧದಲ್ಲಿ ಸತ್ತವರೆಲ್ಲರೂ, ಮನುಷ್ಯರಾಗಿ ಹುಟ್ಟಿ ಲೋಕಗಳಿಗೆ ಹಿಂಸೆ ಯನ್ನು ಮಾಡುತ್ತಿದ್ದರು. ಇವರುಗಳ ಸಂಹಾರಾರ್ಥವಾಗಿಯೇ ಭಗವಂತನು ಯದುವಂಶದಲ್ಲಿ ಅವತರಿಸಿದನು. ಈ ರೀತಿಯಲ್ಲಿ ವಿಷ್ಣುವಿನಿಂದ ಸರ್ವೋತ್ಕೃಷ್ಟ

ವಾದ ವೃಷ್ಣಿವಂಶವನ್ನು ಕೇಳತಕ್ಕವರು ಸರ್ವಪಾತಕಗಳಿಂದ ಮುಕ್ತರಾಗಿ ವಿಷ್ಣು ಲೋಕವನ್ನು ಹೊಂದುವರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಹದಿನೈದನೆಯ ಅಧ್ಯಾಯವು ಸಮಾಪ್ತಃ

ಹದಿನಾರನೆಯ ಅಧ್ಯಾಯವು

"ಇದುವರೆಗೆ ಯದುವಂಶವನ್ನು ಹೇಳಿದೆನು: ಮುಂದೆ ದುರ್ವಸು ವಂಶವನ್ನು ಹೇಳುವೆನು. ದುರ್ವಸುವಿಗೆ ವಹ್ನಿಯೂ, ವಹ್ನಿಗೆ ಭಾರ್ಗನೂ, ಭಾರ್ಗನಿಗೆ ಭಾನುವೂ, ಇವನಿಂದ ತ್ರಯಿಸಾನುವೂ, ಅವನಿಂದ ಕರಂದಮನೂ, ಇವನಿಗೆ ಮರುತ್ತನೂ ಸಹ ಹುಟ್ಟಿದರು. ಇವನಿಗೆ ಮಕ್ಕಳಿಲ್ಲದುದರಿಂದ ಪುರುವಂಶೋತ್ಪನ್ನನಾದ ದುಷ್ಯಂತನನ್ನು ಮಗನನ್ನಾಗಿ ಮಾಡಿಕೊಂಡನು. ಈ ಪ್ರಕಾರ ಯಯಾತಿಯ ಶಾಪದಿಂದ ಪುರುವಂಶವನ್ನೇ ಆಸ್ರಯಿಸಿದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಹದಿನಾರನೆಯ ಅಧ್ಯಾಯವು ಸಮಾಪ್ತಃ

ಹದಿನೇಳನೆಯ ಅಧ್ಯಾಯವು

"ದ್ರುಹ್ಯನಿಗೆ ಬಭ್ರುವೂ, ಬಭ್ರುವಿನಿಂದ ಸೇತುವೂ, ಸೇತುವಿನಿಂದ ಆರಬ್ಧನೂ, ಆರಬ್ಧನಿಗೆ ಗಾಂಧಾರನೂ, ಇವನಿಗೆ ಘರ್ಮನೂ, ಅನಂತರ ಘೃತನೂ, ಆಮೇಲೆ ದುರ್ದಮನೂ, ಇವನಿಂದ ಪ್ರಚೇತನೂ, ಇವನಿಂದ ಶತಧರ್ಮನೂ ಸಹ ಹುಟ್ಟಿದರು. ಶತಧರ್ಮನು ಉತ್ತರದೇಶದಲ್ಲಿ ಅನೇಕ ಮ್ಲೇಂಚರಿಗೆ ಅಧಿಪತಿಯಾಗಿದ್ದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಹದಿನೇಳನೆಯ ಅಧ್ಯಾಯವು ಸಮಾಪ್ತಃ

ಹದಿನೆಂಟನೆಯ ಅಧ್ಯಾಯವು

"ಯಯಾತಿಗೆ ನಾಲ್ಕನೆಯ ಮಗನಾದ ಆನುವಿಗೆ ಸಭಾನಲ, ಚಕ್ಷು, ಪರಮೇಷು ಎಂಬುದಾಗಿ ಮೂರುಜನ ಪುತ್ರರು. ಸಭಾನಲನಿಗೆ ಕಾಲಾನಲನೂ,

ಇವನಿಂದ ಸೃಂಜಯನೂ, ಸೃಂಜಯನಿಗೆ ಪುರಂಜಯನೂ, ಇವನಿಗೆ ಜನಮೇಜಯನೂ, ಇವನಿಂದ ಮಹಾಶಾಲಿಯೂ, ಅನಂತರ ಮಹಾಮನನೂ, ಆಮೇಲೆ ಮಹಾಮನನಿಗೆ ಉಶೀನರತಿತೀಕ್ಷರೂ, ಉಶೀನರನಿಂದ ಶಿಬಿ, ನೃಗ, ನವ, ಕ್ರಿಮಿ, ವರ್ಮರೆಂಬುದಾಗಿ ಐದುಜನ ಪುತ್ರರೂ, ಶಿಬಿಗೆ ವೃಷದರ್ಭ, ಸುವೀರ, ಕೇಕಯ, ಮದ್ರಕರೆಂದು ನಾಲ್ವರು ಪುತ್ರರೂ, ತಿತಿಕ್ಷುವಿಗೆ ರುಶದ್ರಥನೂ, ಇವನಿಗೆ ಹೇಮನೂ, ಹೇಮನಿಂದ ಸುತಪನೂ, ಸುತಪನಿಂದ ಬಲಿಯೂ, ಇವನಿಂದ ಅಂಗ, ವಂಗ, ಕಳಿಂಗ, ಸುಹ್ಮ, ಪೌಂಡ್ರಾದಿಪುತ್ರರೂ ಹುಟ್ಟಿದರು. ಇವರುಗಳೆಲ್ಲರೂ ತಮ್ಮ ತಮ್ಮ ಹೆಸರಿನಿಂದಲೇ ದೇಶವನ್ನು ಭಾಗಿಸಿದರು. ಅಂಗನಿಂದ ಅನಪಾನನೂ, ಇವನಿಂದ ದಿವಿರಥನೂ, ಅನಂತರ ಧರ್ಮರಥನೂ, ಆಮೇಲೆ ಚಿತ್ರರಥನೂ ಸಹ ಹುಟ್ಟಿದರು. ಈ ಚಿತ್ರರಥನಿಗೆ ರೋಮಪಾದನೆಂದೂ ಸಹ ಹೆಸರು. ರೋಮಪಾದನಿಗೆ ದಶರಥನು ಸ್ನೇಹಿತನಾಗಿದ್ದನು. ಅಜಪುತ್ರನಾದ ದಶರಥನು, ತನ್ನ ಮಗಳಾದ ಶಾಂತೆಯನ್ನು ಅಪುತ್ರವಂತನಾದ ರೋಮಪಾದನಿಗೆ ದತ್ತುಕೊಟ್ಟನು. ರೋಮಪಾದನಿಂದ ಚತುರಂಗನೂ, ಇವನಿಂದ ಪೃಥುಲಾಕ್ಷನೂ, ಅನಂತರ ಚಂಪನೂ, ಚಂಪನಿಗೆ ಹರ್ಯಂಗನೂ, ಹರ್ಯಂಗನಿಂದ ಭದ್ರರಥನೂ, ಇವನಿಂದ ಬೃಹದ್ರಥನೂ, ಅನಂತರ ಬೃಹತ್ಕರ್ಮನೂ, ಅವನಿಂದ ಬೃಹದ್ಭಾನುವೂ, ಇವನಿಗೆ ಬೃಹನ್ಮನನೂ, ಇವನಿಂದ ಜಯದ್ರಥನೂ, ಜಯದ್ರಥನಿಗೆ ಬ್ರಹ್ಮಕ್ಷತ್ರರಿಂದ ಹುಟ್ಟಿದ ಪತ್ನಿಯಲ್ಲಿ ವಿಜಯನೂ, ಇವನಿಂದ ಧೃತಿಯೂ, ಇವನಿಗೆ ಧೃತವ್ರತನೂ, ಇವನಿಂದ ಸತ್ಯಕರ್ಮನೂ, ಇವನಿಂದ ಅತಿರಥನೂ ಸಹ ಹುಟ್ಟಿದರು. ಅತಿರಥನು ಗಂಗಾನದಿಗೆ ಬಂದು ಬಲೆಯನ್ನು ಹಾಕಿದ ಕಾಲದಲ್ಲಿ ಬಲೆಗೆ ಒಂದು ಮಗುವು ಸಿಕ್ಕಿತು. ಆ ಮಗುವಿಗೆ ಕರ್ಣನೆಂದು ನಾಮಕರಣ ಮಾಡಿದನು. ಕರ್ಣನು ಅಂಗದೇಶೋತ್ಪನ್ನನಾಗಿ ಅಂಗರಾಜನಾದನು. ಕರ್ಣನಿಂದ ವೃಕ್ಷಸೇನನು ಹುಟ್ಟಿದನು. ವೃಕ್ಷಸೇನನವರೆಗೆ ಅಂಗವಂಶವು ಮುಗಿಯಿತು. ಅನಂತರ, ಪೂರುವಂಶವನ್ನು ಹೇಳುತ್ತೇನೆ.”

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಹದಿನೆಂಟನೆಯ ಅಧ್ಯಾಯವು ಸಮಾಪ್ತಃ

ಹತ್ತೊಂಬತ್ತನೆಯ ಅಧ್ಯಾಯವು

ಪೂರುವಿಗೆ ಜನಮೇಜಯನೂ, ಜನಮೇಜಯನಿಂದ ಪ್ರಚಿನ್ವನೂ, ಇವನಿಂದ ಪ್ರವೀರನೂ, ಪ್ರವೀರನಿಂದ ಮನಸ್ಯುವೂ, ಇವನಿಗೆ ಅಭಯದನೂ,

ಅವನಿಗೆ ಸುದ್ಯುವೂ, ಸುದ್ಯುನಿಗೆ ಬಹುಗತನೂ, ಅವನಿಂದ ಸಂಯಾತಿಯೂ, ಅನಂತರ ಅಹಂಯಾತಿಯೂ, ಆಮೇಲೆ ರೌದ್ರಾಶ್ವನೂ, ಇವನಿಗೆ ಋತೇಪುವೇ ಮೊದಲಾಗಿ ಹತ್ತುಜನ ಪುತ್ರರೂ, ಋತೇಪುವಿಗೆ ಅಂತಿನಾರನೂ, ಇವನಿಗೆ ಸುಮತಿ, ಅಪ್ರತಿರಥ, ಧ್ರುವನೆಂಬುದಾಗಿ ಮೂವರೂ, ಅಪ್ರತಿರಥನಿಗೆ ಕಣ್ವನೂ, ಅವನಿಗೆ ಮೇಧಾತಿಥಿಯೂ, ಅಪ್ರತಿರಥನಿಗೆ ಐಲೀನನೆಂಬ ಮತ್ತೊಬ್ಬ ಮಗನೂ, ಐಲೀನನಿಗೆ ದುಷ್ಯಂತನೇ ಮೊದಲಾಗಿ ನಾಲ್ವರು ಪುತ್ರರೂ, ದುಷ್ಯಂತನಿಂದ ಚಕ್ರವರ್ತಿಯಾದ ಭರತನೂ ಸಹ ಹುಟ್ಟಿದನು: ಭರತನೆಂದು ಹೆಸರುಂಟಾಗಲು ಕಾರಣವೇನೆಂದರೆ: ದುಷ್ಯಂತನು ಬೇಟೆಗೋಸ್ಕರ ಕಾಡಿಗೆ ಹೋಗಿ ಬೇಟೆ ಯಾಡಿದ ಆಯಾಸವನ್ನು ಪರಿಹಾರಮಾಡಿಕೊಳ್ಳುವುದಕ್ಕಾಗಿ ಕಣ್ವಋಷಿಯ ಆಶ್ರಮಕ್ಕೆ ಬಂದು ಆಶ್ರಮದಲ್ಲಿ ವಿಶ್ವಾಮಿತ್ರನಿಂದ ಮೇನಕೆಯಲ್ಲಿ ಉತ್ಪನ್ನಳಾದ ಶಕುಂತಳೆಯನ್ನು ನೋಡಿ ಮೋಹಿತನಾಗಿ ಗಾಂಧರ್ವ ವಿವಾಹವನ್ನು ಮಾಡಿ ಕೊಂಡನು. ಆಗ ಶಕುಂತಳೆಯು ಗರ್ಭವನ್ನು ಧರಿಸಿದಳು. ದುಷ್ಯಂತನು ಶಕುಂತಳೆಯನ್ನು ಬಿಟ್ಟು ತನ್ನ ರಾಜ್ಯಕ್ಕೆ ಪ್ರಯಾಣಮಾಡಿ, ಈ ಸಂಗತಿಗಳನ್ನು ಮರೆತುಬಿಟ್ಟನು. ಕೊಂಚದಿವಸದಲ್ಲಿ ಶಕುಂತಳೆಯು ಒಬ್ಬ ಪುತ್ರನನ್ನು ಪಡೆದಳು. ಅನಂತರ ಕಣ್ವಋಷಿಯು ಶಿಷ್ಯನನ್ನು ಜೊತೆಮಾಡಿ ಶಕುಂತಳೆಯನ್ನೂ ಮಗ ನನ್ನೂ ಸಹ ದುಷ್ಯಂತನಲ್ಲಿಗೇ ಕಳುಹಿಸಿಕೊಟ್ಟನು. ದುಷ್ಯಂತನು ಶಕುಂತಳೆ ಯನ್ನು ನೋಡಿ ಉದಾಸೀನನಾಗಲು, ದೇವತೆಗಳು ಅಂತರಿಕ್ಷದಲ್ಲಿ ದುಷ್ಯಂತನಿಗೆ ಹೇಳುತ್ತಾರೆ: "ಎಲೈ ದುಷ್ಯಂತನೇ, ಶಕುಂತಳೆಯು ಪರಿಶುದ್ಧಳಾದವಳು; ಇವಳನ್ನು ಉದಾಸೀನ ಮಾಡಬೇಡ; ಈ ಪುತ್ರನು ನಿನ್ನಿಂದ ಹುಟ್ಟಿದವನು; ಇವನನ್ನು ಭರಿಸು ಅಂದರೆ ಧರಿಸೆಂದು ಹೇಳಲು, ಆಗ ದುಷ್ಯಂತನು ಶಕುಂತಳೆ ಯನ್ನೂ ಆಕೆಯ ಪುತ್ರನನ್ನೂ ಭರಣಿಮಾಡಿ, ಪುತ್ರನಿಗೆ ಭರತನೆಂದು ನಾಮಕರಣ ಮಾಡಿದನು. ಭರತಚಕ್ರವರ್ತಿಗೆ ಮೂರುಜನ ಪತ್ನೀರುಗಳಲ್ಲಿ ಒಂಬತ್ತುಜನ ಪುತ್ರರು ಹುಟ್ಟಿದರು. ಭರತನು ಮಕ್ಕಳುಗಳನ್ನು ನೋಡಿ, ಪತ್ನಿ ಗಳಲ್ಲಿ ಹೇಳುತ್ತಾನೆ: ಈ ಪುತ್ರರು ನನಗೆ ಸರಿಯಾದವರಲ್ಲವೆಂದು ಹೇಳಲು, ಭರತನ ಪತ್ನಿಗಳು ಮನಸ್ಸಿನಲ್ಲಿ ಯೋಚಿಸುತ್ತಾರೆ: ಮಕ್ಕಳು ತನಗೆ ಸರಿಯಾಗಿಲ್ಲ ವೆಂದರೆ ವ್ಯಭಿಚಾರದಿಂದ ಹುಟ್ಟಿದವರೆಂದು ಪತಿಯು ತಿಳಿದಿರಬಹುದು, ತಿಳಿದಿದ್ದರೆ ತಮ್ಮನ್ನು ಎಲ್ಲಿ ಪರಿತ್ಯಾಗಮಾಡುತ್ತಾನೋ ಎಂಬ ಭಯದಿಂದ, ತಾಯಿಯರು ಮಕ್ಕಳುಗಳನ್ನು ಕೊಂದುಹಾಕಿದರು. ಬೃಹಸ್ಪತಿಯ ತಮ್ಮನಾದ ಉಚಥ್ಯನ ಪತ್ನಿಯಾದ ಮಮತೆಯು ಗರ್ಭವನ್ನು ಧರಿಸಿದ್ದಳು. ಆಗ ಬೃಹಸ್ಪತಿಯು ಉಚಥ್ಯನಿಲ್ಲದ ಕಾಲದಲ್ಲಿ ಮಮತೆಯಲ್ಲಿ ವೀರ್ಯವನ್ನು ಬಿಡಲು, ಮಮತೆಯ

ಗರ್ಭವು ಸ್ಥಳವಿಲ್ಲವೆಂದು ಬೃಹಸ್ಪತಿಯ ವೀರ್ಯವನ್ನು ನೂಕಲು, ವೀರ್ಯವು ಕೆಳಕ್ಕೆ ಬಿದ್ದಿತು. ಇದನ್ನು ಕಂಡ ಬೃಹಸ್ಪತಿಯು ಕೋಪಗೊಂಡು ಮಮತಾಗರ್ಭವು ಅಂಧಕನಾಗಲೆಂದು ಶಪಿಸಿದನು. ಆಗ ಗರ್ಭವು ಅಂಧಕನಾಗಿ ದೀರ್ಘತಮನೆಂಬ ಹೆಸರಿನಿಂದ ಹುಟ್ಟಿದನು. ಅನಂತರ ಬೃಹಸ್ಪತಿಯು ಮಮತೆಯನ್ನು ಕುರಿತು ನಮ್ಮಿಬ್ಬರಿಂದ ಹುಟ್ಟಿದುದರಿಂದ ಇದನ್ನು ದ್ವಾಜ ಅಂದರೆ ರಕ್ಷಿಸು, ಬಿದ್ದಿರುವ ವೀರ್ಯವನ್ನು ಭರ ಅಂದರೆ ಧರಿಸು ಎಂದು ಹೇಳಿದನು. ಆ ಮಾತಿಗೆ ಮಮತೆಯು ನಾನು ಒಬ್ಬಳೇ ಇರುವುದರಿಂದ ನೀನು ರಕ್ಷಿಸೆಂದು ಬೃಹಸ್ಪತಿಗೆ ಹೇಳಲು, ಬೃಹಸ್ಪತಿ ಮಮತೆಯರಿಬ್ಬರೂ ವೀರ್ಯವನ್ನು ರಕ್ಷಿಸದಿರಲು, ಸಪ್ತಮರುತ್ತುಗಳು ವೀರ್ಯವನ್ನು ರಕ್ಷಿಸಿ ಭಾರದ್ವಾಜನೆಂದು ನಾಮಕರಣವನ್ನು ಮಾಡಿದರು. ಇವನಿಗೆ ವಿತಥನೆಂಬುದಾಗಿಯೂ ಸಹ ಹೆಸರುಂಟು. ವಿತಥನನ್ನು ಅಪುತ್ರವಂತನಾದ ಭರತ ನಿಗೆ ಸಪ್ತಮರುತ್ತುಗಳು ಕೊಟ್ಟರು. ವಿತಥನಿಗೆ ಮನ್ಯುವೂ, ಮನ್ಯುವಿಗೆ ಬಹೃ ಕ್ಷತ್ರ ಮಹಾವೀರ್ಯ ನಗರಗರ್ಗರೆಂಬ ಪುತ್ರರು ಹುಟ್ಟಿದರು. ನಗರನಿಗೆ ಸಂಕೃತಿಯೂ, ಸಂಕೃತಿಗೆ ಗುರು, ಪ್ರೀತಿರಂತಿ, ದೇವರೂ ಸಹ ಹುಟ್ಟಿದರು. ಗರ್ಗನಿಂದ ಶಿನಿಯೂ ಹುಟ್ಟಿದನು. ಇವರೆಲ್ಲರೂ ಬ್ರಹ್ಮಕ್ಷತ್ರ ತೇಜಸ್ಸಿನಿಂದ ಕೂಡಿ, ಗಾರ್ಗ್ಯರೆಂಬ ಸಂಜ್ಞೆಯನ್ನು ಪಡೆದರು. ಮಹಾವೀರ್ಯನಿಂದ ದುರಕ್ಷಯನೂ, ಅವನಿಗೆ ತ್ರೈಯ್ಯಾರುಣಿ, ಪುಷ್ಕರಿಣಿ, ಕಪಿ ಎಂಬುದಾಗಿ ಮೂವರು ಪುತ್ರರು. ಇವರು ಬ್ರಾಹ್ಮಣ್ಯವನ್ನು ಹೊಂದಿದರು. ಬೃಹತ್ಕ್ಷತ್ರನಿಗೆ ಸುಹೋತ್ರನೂ, ಸುಹೋತ್ರನಿಂದ ಹಸ್ತಿಯೂ ಸಹ ಹುಟ್ಟಿದರು. ಇವನು ಹಸ್ತಿನಾಪುರಿಯಲ್ಲಿ ವಾಸಮಾಡಿದನು. ಇವನಿಂದ ಅಜಮೀಢ, ದ್ವಿಜಮೀಢ, ಪುರಮೀಢರೆಂಬು ದಾಗಿ ಮೂವರೂ, ಅಜಮೀಢನಿಂದ ಕಣ್ವನೂ, ಇವನಿಂದ ಮೇಧಾತಿಥಿಯೂ ಸಹ ಹುಟ್ಟಿದರು. ಇವರು ಕಣ್ವಾಯನರೆಂಬ ಸಂಜ್ಞೆಯಿಂದ ಬ್ರಾಹ್ಮಣ ರಾದರು. ಅಜಮೀಢನಿಗೆ ಬೃಹದಿಷು ಎಂಬ ಮತ್ತೊಬ್ಬ ಮಗನಿದ್ದನು. ಬೃಹದಿಷುವಿನಿಂದ ಬೃಹದ್ಧನುವೂ, ಇವನಿಂದ ಬೃಹತ್ಕರ್ಮನೂ, ಅನಂತರ ಜಯದ್ರಥನೂ, ಆಮೇಲೆ ವಿಶ್ವಜಿತುವೂ, ಅನಂತರ ಸೇನಜಿತುವೂ, ಇವನಿಗೆ ಚಿರಾಶ್ವ, ಕಾಶ್ಯ, ದೃಢಹನು, ವತ್ಸಹನುರೆಂಬುದಾಗಿ ಪುತ್ರರೂ, ರುಚಿರಾಶ್ವನಿಗೆ ಪೃಥುಸೇನನೂ, ಇವನಿಂದ ಪಾರನೂ, ಅನಂತರ ನೀಲನೂ, ಇವನಿಗೆ ನೂರು ಜನ ಪುತ್ರರೂ ಹುಟ್ಟಿದರು. ಇವರುಗಳಲ್ಲಿ ಜ್ಯೇಷ್ಠನಾದವನು, ಕಾಂಪಿಲ್ಯಾಧಿಪತಿ ಯಾದ ಸಮರನು, ಇವನಿಗೆ ಪಾರ, ಸುಪಾರ, ಸದಶ್ವರೆಂಬ ಮೂವರು ಮಕ್ಕಳು. ಸುಪಾರನಿಂದ ಪೃಥುವೂ, ಪೃಥುವಿಗೆ ಸುಕೃತಿಯೂ, ಇವನಿಂದ ವಿಭ್ರಾಜನೂ, ಅನಂತರ ಅಣುಹುವೂ ಹುಟ್ಟಿದರು. ಅಣುಹುವು ಶುಕಬ್ರಹ್ಮರ್ಷಿಯ ಮಗಳಾದ

ಕೀರ್ತಿಯನ್ನು ವಿವಾಹಮಾಡಿಕೊಂಡು ಅವಳಲ್ಲಿ ಬ್ರಹ್ಮದತ್ತನೂ, ಬ್ರಹ್ಮದತ್ತ ನಿಂದ ವಿಶ್ವಕ್ಸೇನನೂ, ಇವನಿಂದ ಉದಕ್ಸೇನನೂ, ಇವನಿಂದ ಭಲ್ಲಾಭನೂ ಜನಿಸಿದರು. ದ್ವಿಜವಿಾಢನಿಗೆ ಯವಿನರನೂ, ಇವನಿಂದ ಧೃತಿಮಂತನೂ, ಅನಂತರ ಸತ್ಯಧೃತಿಯೂ, ಆಮೇಲೆ ದೃಢನೇಮಿಯೂ, ಇವನಿಂದ ಸುಪಾರ್ಶ್ವನೂ, ಸುಪಾರ್ಶ್ವನಿಂದ ಸುಮತಿಯೂ, ಇವನಿಂದ ಸನ್ನತಿಯೂ, ಇವನಿಗೆ ಕೃತನೂ ಸಹ ಹುಟ್ಟಿದರು. ಕೃತನಿಗೆ ಹಿರಣ್ಯನಾಭನು, ಯೋಗವಿದ್ಯೆಯನ್ನು ಉಪದೇಶ ಮಾಡಿದನು. ಕೃತನು ಸಾಮವೇದಕ್ಕೆ ಇಪ್ಪತ್ತುನಾಲ್ಕು ಸಂಹಿತೆಗಳನ್ನು ಮಾಡಿದನು. ಇವನಿಂದ ಉಗ್ರಾಯುಧನು ಹುಟ್ಟಿ, ನೀಪರೆಂಬ ಕ್ಷತ್ರಿಯರನ್ನು ನಾಶಮಾಡಿದನು. ಉಗ್ರಾಯುಧನಿಂದ ಕ್ಷೇಮ್ಯನೂ, ಕ್ಷೇಮ್ಯನಿಂದ ಸುಧೀರನೂ, ಇವನಿಂದ ರಿಪುಂಜಯನೂ, ಇವನಿಂದ ಬಹುರಥನೂ ಸಹ ಹುಟ್ಟಿದರು. ಇವರುಗಳೆಲ್ಲರೂ ಪೌರವರೆಂದು ಹೇಳಿಸಿಕೊಳ್ಳುವರು. ಅಜವಿಾಢನಿಗೆ ನಳಿನೀ ಎಂಬ ಪತ್ನಿಯಲ್ಲಿ ನೀಲನೂ, ಇವನಿಗೆ ಶಾಂತಿಯೂ, ಅನಂತರ ಸುಶಾಂತಿಯೂ, ಇವನಿಂದ ಪುರಂಜಯನೂ, ಅನಂತರ ಋಕ್ಷನೂ, ಅನಂತರ ಹರ್ಯಶ್ವನೂ, ಹರ್ಯಶ್ವನಿಂದ ಮುದ್ಗಲ, ಸೃಂಜಯ, ಬೃಹದಿಷು, ಯವಿನರ, ಕಾಂಪಿಲ್ಯರೆಂಬುದಾಗಿ ಐದುಜನ ಪುತ್ರರೂ ಸಹ ಹುಟ್ಟಿದರು. ಇವರು ಪಾಂಚಾಲರೆಂದು ದೇಶಾಧಿಪತಿಗಳಾದರು. ಮುದ್ಗಲನಿಂದ ಮೌದ್ಗಲ್ಯರೆಂಬ ಬ್ರಹ್ಮಕ್ಷತ್ರ ತೇಜಸ್ಸಿನಿಂದ ಯುಕ್ತರಾದವರು ಹುಟ್ಟಿದರು. ಮುದ್ಗಲನಿಂದ ಹರ್ಯಶ್ವನೂ, ಇವನಿಂದ ದಿವೋದಾಸನೂ, ಅಹಲ್ಯಾ ಎಂಬ ಕನ್ನಿಕೆಯೂ, ಶರದ್ವತನಿಂದ ಗೌತಮ, ಅವನಿಂದ ಅಹಲ್ಯೆಯಲ್ಲಿ ಶತಾನಂದನೂ, ಶತಾನಂದನಿಂದ ಧನುರ್ವೇದಾಂತ ಪಾರಗನಾದ ಸತ್ಯಧೃತಿಯೂ ಸಹ ಹುಟ್ಟಿದರು. ಸತ್ಯಧೃತಿಗೆ ಊರ್ವಶಿಯನ್ನು ನೋಡಿ ವೀರ್ಯಸ್ಖಲನೆಯುಂಟಾಗಿ, ವೀರ್ಯವು ಶರಸ್ತಂಬದಲ್ಲಿ ಬಿದ್ದು ಎರಡು ಗಂಡುಮಕ್ಕಳೂ ಒಂದು ಕನ್ನಿಕೆಯೂ ಹುಟ್ಟಿದರು. ಬೇಟೆಯಾಡುವುದಕ್ಕಾಗಿ ಬಂದ ಶಂತನುಚಕ್ರವರ್ತಿಯು ಮಕ್ಕಳುಗಳನ್ನು ನೋಡಿ, ಕೃಪೆಯಿಂದ ಪರಿಗ್ರಹಿಸಿ ಒಬ್ಬನಿಗೆ ಕುಮಾರನೆಂದೂ, ಮತ್ತೊಬ್ಬನಿಗೆ ಕೃಪನೆಂದೂ, ಕನ್ನಿಕೆಗೆ ಕೃಪೀಯೆಂದೂ ನಾಮಕರಣ ಮಾಡಿದನು.

ಕೃಪಿಯನ್ನು ದ್ರೋಣಾಚಾರ್ಯರು ವಿವಾಹಮಾಡಿಕೊಂಡು ಅಶ್ವತ್ಥಾಮನನ್ನು ಪಡೆದರು. ದಿವೋದಾಸನಿಗೆ ಮಿತ್ರಾಯುವೂ, ಇವನಿಗೆ ಚ್ಯವನರಾಜನೂ, ಇವನಿಂದ ಸುದಾಸನೂ, ಅವನಿಂದ ಸೌದಾಸನೂ, ಸೌದಾಸನಿಂದ ಸಹದೇವನೂ, ಇವನಿಂದ ಸೋಮಕನೂ, ಸೋಮಕನಿಂದ ಜಂತವೂ ಮೊದಲಾದ ನೂರುಜನ ಪುತ್ರರು ಹುಟ್ಟಿದರು. ಇವರಲ್ಲಿ ಕನಿಷ್ಟನಾದ ಪೃಷತನಿಂದ ದ್ರುಪದನೂ, ಇವನಿಂದ

ಧೃಷ್ಟದ್ಯುಮ್ನನೂ, ಅನಂತರ ಧೃಷ್ಟಕೇತುವೂ ಸಹ ಹುಟ್ಟಿದರು. ಅಜಮಿಢ ನಿಗೆ ಋಕ್ಷನೆಂಬ ಬೇರೊಬ್ಬ ಮಗನಿದ್ದನು. ಋಕ್ಷನಿಂದ ಸಂವರಣನೂ, ಇವನಿಂದ ಕುರುವೂ ಸಹ ಹುಟ್ಟಿದರು. ಕುರುವು ಧರ್ಮಕ್ಷೇತ್ರವನ್ನು ಕುರುಕ್ಷೇತ್ರವೆಂದು ಮಾಡಿದನು. ಕುರುವಿನಿಂದ ಸುಧನು, ಜುಹ್ನು, ಪರೀಕ್ಷಿತ್ ಮೊದಲಾದ ಪುತ್ರರೂ, ಸುಧನುವಿನಿಂದ ಸುಹೋತ್ರನೂ, ಇವನಿಂದ ಚ್ಯವನನೂ, ಅನಂತರ ಕೃತಕನೂ, ಇವನಿಂದ ಉಪರಿಚರವಸುವೂ, ಇವನಿಂದ ಬೃಹದ್ರಥ, ಪ್ರತ್ಯಗ್ರ, ಕುಶಾಂಬ, ಕುಚೇಲ, ಮಾತ್ಸ್ಯರೇ ಮೊದಲಾದ ಏಳುಜನ ಪುತ್ರರೂ, ಬೃಹದ್ರಥನಿಂದ ಕುಶಾಗ್ರನೂ, ಕುಶಾಗ್ರನಿಂದ ವೃಷಭನೂ, ವೃಷಭನಿಂದ ಪುಷ್ಪ ವಂತನೂ, ಇವನಿಂದ ಸತ್ಯಹಿತನೂ, ಅನಂತರ ಸುಧನ್ವನೂ ಇವನಿಗೆ ಜಂತುವೂ ಸಹ ಹುಟ್ಟಿದರು. ಬೃಹದ್ರಥನಿಂದ ಉತ್ಪನ್ನವಾದ ಶಕಲದ್ವಯವನ್ನು ಜರಾ ಎಂಬ ರಾಕ್ಷಸಿಯಿಂದ ಸೇರಿಸಲ್ಪಟ್ಟುದರಿಂದ, ಜರಾಸಂಧನೂ, ಇವನಿಂದ ಸಹದೇವನೂ, ಅನಂತರ ಸೋಮಪನೂ, ಆಮೇಲೆ ಶ್ರುತಿಶ್ರವನೂ ಸಹ ಹುಟ್ಟಿದರು. ಇವರುಗಳು ಮಗಧ ಭೂಪಾಲರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಹತ್ತೊಂಬತ್ತನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತನೆಯ ಅಧ್ಯಾಯವು

"ಪರೀಕ್ಷಿತನಿಗೆ ಜನಮೇಜಯ, ಶ್ರುತಸೇನ, ಉಗ್ರಸೇನ, ಭೀಮಸೇನರೆಂಬುದಾಗಿ ನಾಲ್ವರು ಪುತ್ರರೂ, ಜಹ್ನುವಿಗೆ ಸುರಥನೂ, ಅವನಿಗೆ ವಿದೂರಥನೂ, ಇವನಿಂದ ಸಾರ್ವಭೌಮನೂ, ಇವನಿಂದ ಜಯತ್ಸೇನನೂ, ಅನಂತರ ಆರಾಧಿತನೂ, ಆಮೇಲೆ ಅಯುತಾಯುವೂ, ಇವನಿಂದ ದೇವಾತಿಥಿಯೂ ಅನಂತರ ಋಕ್ಷನೂ, ಋಕ್ಷನಿಂದ ಭೀಮಸೇನನೂ, ಅವನಿಂದ ದಿಲೀಪನೂ, ದಿಲೀಪನಿಂದ ಪ್ರತೀಪನೂ, ಪ್ರತೀಪನಿಗೆ ಶಂತನು, ಬಾಹ್ಲೀಕ, ದೇವಾಪಿ ಎಂಬುದಾಗಿ ಮೂವರು ಪುತ್ರರೂ ಹುಟ್ಟಿದರು. ದೇವಾಪಿಯು ಬಾಲ್ಯದಲ್ಲಿಯೇ ಅರಣ್ಯವನ್ನು ಪ್ರವೇಶಿಸಿದನು. ಶಂತನುವು ರಾಜನಾದನು. ಶಂತನುವು ಲೋಕದಲ್ಲಿ ಜೀರ್ಣವಾದ ಯಾವ ಪದಾರ್ಥವನ್ನು ಕೈಯಿಗಳಿಂದ ಸ್ಪರ್ಶಿಸಿದರೂ, ಆ ಪದಾರ್ಥಗಳು ಯೌವನವನ್ನು ಹೊಂದುತ್ತಿದ್ದುವು. ಅಲ್ಲದೆ ಕ್ರೌರ್ಯವು ಹೋಗಿ ಶಾಂತತೆಯನ್ನು ಹೊಂದುತ್ತಿದ್ದವು. ಆದುದರಿಂದಲೇ ಪದಾರ್ಥಗಳು ಇವನಿಗೆ ಶಂತನು

ಎಂದು ಹೆಸರುಂಟಾಯಿತು. ಆತನು ರಾಜ್ಯವನ್ನು ಪರಿಪಾಲಿಸುತ್ತಿರುವಾಗ ದ್ವಾದಶವರ್ಷಕ್ಷಾಮವು ಪ್ರಾಪ್ತವಾಯಿತು. ಈ ಕ್ಷಾಮದಿಂದ ದೇಶವು ನಾಶವಾಗುವುದಕ್ಕೆ ಕಾರಣವಾಯಿತು. ಆಗ ಶಂತನುವು ಬ್ರಾಹ್ಮಣರನ್ನು ಕರೆದು ಕ್ಷಾಮಕ್ಕೆ ಕಾರಣವೇನೆಂದು ಕೇಳಲು, ಅದಕ್ಕೆ ಬ್ರಾಹ್ಮಣರು ಹೇಳಿದುದೇನೆಂದರೆ, ಓ ರಾಜನೇ, ನೀನು ನಿನ್ನ ಅಣ್ಣನಾದ ದೇವಾಪಿಗೆ ಸೇರಬೇಕಾಗಿದ್ದ ಈ ರಾಜ್ಯವನ್ನು ಅನುಭವಿಸುವುದರಿಂದ ಕ್ಷಾಮವುಂಟಾಗಿದೆ. ರಾಜ್ಯಕ್ಕೆ ಜ್ಯೇಷ್ಠನಾದವನು ಅಧಿಕಾರಿಯಾಗಬೇಕಾಗಿರುವುದರಿಂದ ಈ ರಾಜ್ಯವನ್ನು ದೇವಾಪಿಗೆ ಕೊಟ್ಟರೇ ಕ್ಷಾಮನಿವಾರಣೆಯಾಗುವುದೆಂದು ಹೇಳಲು; ಆಗ ರಾಜನು ಬ್ರಾಹ್ಮಣರನ್ನು ಜೊತೆಯಲ್ಲಿ ಕರೆದುಕೊಂಡು ಅರಣ್ಯಕ್ಕೆ ಪ್ರಯಾಣಮಾಡಿ, ದೇವಾಪಿಯ ಆಶ್ರಮವನ್ನು ಪ್ರವೇಶಿಸಿ, ಬ್ರಾಹ್ಮಣರು ದೇವಾಪಿಗೆ ರಾಜ್ಯಾಧಿಪತ್ಯವು ಜ್ಯೇಷ್ಠನ ಅಧಿಕಾರಕ್ಕೆ ಅಧೀನವಾದುದರಿಂದ ರಾಜ್ಯವನ್ನು ನೀನು ಪರಿಗ್ರಹಿಸೆಂದು ಹೇಳಲು, ದೇವಾಪಿಯು ಅವುಗಳ ಯೋಗಸಿದ್ಧಿಯನ್ನು ಪಡೆಯುವ ಕಾಲವಾದ ನಿಮಿತ್ತ ರಾಜ್ಯಾಧಿಪತ್ಯಕ್ಕೆ ಅನುಮೋದಿಸಲಿಲ್ಲ. ಶಂತನುವು ಬ್ರಾಹ್ಮಣರನ್ನು ಕರೆದುಕೊಂಡು ರಾಜ್ಯಕ್ಕೆ ಬಂದು ರಾಜ್ಯಪರಿಪಾಲನೆಯನ್ನು ಮಾಡಿದನು. ಅನಂತರ ಶಂತನುವಿನ ರಾಜ್ಯದಲ್ಲಿ ವೃಷ್ಟಿಯುಂಟಾಗಿ ಸುಭಿಕ್ಷವಾಯಿತು. ಬಾಹ್ಲೀಕನಿಂದ ಸೋಮದತ್ತನೂ, ಇವನಿಗೆ ಭೂರಿ, ಭೂರಿಶ್ರವ, ಶಲ್ಯರೆಂಬುದಾಗಿ ಮೂವರು ಪುತ್ರರು ಹುಟ್ಟಿದರು. ಶಂತನುವಿಗೆ ಜಾಹ್ನವೀ ತೀರದಲ್ಲಿ ಉದಾರಕೀರ್ತಿಯಾದ ಸಕಲಶಾಸ್ತ್ರಾರ್ಥತತ್ವಜ್ಞರಾದ ಭೀಷ್ಮರು ಹುಟ್ಟಿದರು. ಶಂತನುವಿಗೆ ಸತ್ಯವತಿಯಲ್ಲಿ ಚಿತ್ರಾಂಗದ ವಿಚಿತ್ರವೀರ್ಯರೆಂಬುದಾಗಿ ಇಬ್ಬರು ಪುತ್ರರು ಹುಟ್ಟಿದರು. ಚಿತ್ರಾಂಗದನು ಬಾಲ್ಯದಲ್ಲಿಯೇ ಚಿತ್ರಾಂಗದನೆಂಬ ಗಂಧರ್ವನಿಂದ ಹತನಾದನು. ವಿಚಿತ್ರವೀರ್ಯನು ಕಾಶೀರಾಜನ ಮಕ್ಕಳಾದ ಅಂಬಾ, ಅಂಬಾಲಿಕೆಯನ್ನು ವಿವಾಹ ಮಾಡಿಕೊಂಡನು. ವಿಚಿತ್ರವೀರ್ಯನು ಉಪಭೋಗಾತಿರೇಕದಿಂದ ಕ್ಷಯರೋಗ ಪೀಡಿತನಾಗಿ ಪಂಚತ್ವವನ್ನು ಹೊಂದಿದನು. ಆಗ ಸತ್ಯವತಿಯು ತನ್ನ ಪುತ್ರನಾದ ವೇದವ್ಯಾಸನಿಗೆ ವಂಶಾಭಿವೃದ್ಧಿಯನ್ನು ಮಾಡೆಂದು ಹೇಳಲು; ಆ ವೇದವ್ಯಾಸನ ಅನುಗ್ರಹದಿಂದ ವಿಚಿತ್ರವೀರ್ಯನ ಕ್ಷೇತ್ರದಲ್ಲಿ ಧೃತರಾಷ್ಟ್ರ ಪಾಂಡುಗಳೂ, ಭುಜಿಷ್ಯಾ ಎಂಬ ದಾಸಿಯಲ್ಲಿ ವಿದುರನೂ ಸಹ ಹುಟ್ಟಿದರು. ಧೃತರಾಷ್ಟ್ರನು ಗಾಂಧಾರಿ ಎಂಬ ಪತ್ನಿಯಲ್ಲಿ, ದುರ್ಯೋಧನ ದುಶ್ಶಾಸನರೇ ಮೊದಲಾದ ನೂರು ಜನ ಪುತ್ರರನ್ನು ಪಡೆದನು. ಪಾಂಡುವಿಗೆ ಅರಣ್ಯದಲ್ಲಿ ಬೇಟೆಯಾಡುವ ಕಾಲದಲ್ಲಿ ಪ್ರಜಾಸಂತತಿಯುಂಟಾಗಬೇಡವೆಂಬ ಶಾಪವುಂಟಾದುದರಿಂದ, ಕುಂತಿಯು ಯಮ, ವಾಯು, ಇಂದ್ರ ಇವರುಗಳ ಅನುಗ್ರಹದಿಂದ ಯುಧಿಷ್ಠಿರ, ಭೀಮಸೇನ,

ಅರ್ಜುನರೆಂಬ ಮೂವರು ಪುತ್ರರನ್ನು ಪಡೆದಳು. ಪಾಂಡುಚಕ್ರವರ್ತಿಯ ಎರಡನೇ ಪತ್ನಿಯಾದ ಮಾದ್ರಿಯು ಅಶ್ವಿನೀ ದೇವತೆಗಳ ಅನುಗ್ರಹದಿಂದ, ನಕುಲ ಸಹದೇವರನ್ನು ಪಡೆದಳು. ಪಾಂಡುಚಕ್ರವರ್ತಿಗೆ ಪುತ್ರರಾದ ಯುಧಿಷ್ಠಿರ, ಭೀಮ, ಅರ್ಜುನ, ನಕುಲ, ಸಹದೇವ ಈ ಐವರಿಗೂ ದ್ರೌಪದಿಯಲ್ಲಿ ಐದು ಪುತ್ರರು ಹುಟ್ಟಿದರು. ಯುಧಿಷ್ಠಿರನಿಂದ ಪ್ರತಿವಿಂಧ್ಯನೂ, ಭೀಮನಿಂದ ಶೃತಸೇನನೂ, ಅರ್ಜುನನಿಂದ ಶ್ರುತಕೀರ್ತಿಯೂ, ನಕುಲನಿಂದ ಶತಾನೀಕನೂ, ಸಹದೇವನಿಂದ ಶ್ರುತಕರ್ಮನೂ ಸಹ ಹುಟ್ಟಿದರು. ಯೌಧೇಯಿ ಎಂಬುವಳು ಯುಧಿಷ್ಠಿರನಿಂದ ದೇವಕನನ್ನೂ, ಹಿಡಿಂಬಿಯು ಭೀಮನಿಂದ ಘಟೋತ್ಕಚನನ್ನೂ, ಕಾಶಿಯು ಭೀಮಸೇನನಿಂದ ಸರ್ವಗನನ್ನೂ, ವಿಜಯಾ ಎಂಬುವಳು ಸಹದೇವನಿಂದ ಸುಹೋತ್ರನನ್ನೂ, ರೇಣುಮತಿಯು ನಕುಲನಿಂದ ನಿರಮಿತ್ರನನ್ನೂ, ನಾಗಕನ್ನಿಕೆಯಾದ ಉಲೂಪಿಯು ಅರ್ಜುನನಿಂದ ಇರಾವಂತನನ್ನೂ, ಮಣಲೂರು ರಾಜನ ಪುತ್ರಿಯು ಅರ್ಜುನನಿಂದ ಬಭ್ರುವಾಹನನ್ನೂ, ಸುಭದ್ರೆಯು ಅರ್ಜುನನಿಂದ ಅತಿ ಬಲಪರಾಕ್ರಮಿಯಾದ ಸಕಲ ಶತ್ರು ಸಂಹಾರಕನಾದ ಅಭಿಮನ್ಯುವನ್ನೂ ಸಹ ಪಡೆದರು. ಅಭಿಮನ್ಯುವು ಸಾಯುವ ಕಾಲದಲ್ಲಿ ಪತ್ನಿಯಾದ ಉತ್ತರೆಯು ಗರ್ಭವನ್ನು ಧರಿಸಿದ್ದಳು. ಆಗ ಪಾಂಡವರು ಕ್ಷೀಣರಾದ ಕಾಲದಲ್ಲಿ ಅಶ್ವತ್ಥಾಮನು ಬ್ರಹ್ಮಾಸ್ತ್ರದಿಂದ ಉತ್ತರಾಗರ್ಭವನ್ನು ಭಸ್ಮವನ್ನು ಮಾಡಿದನು. ಭಗವಂತನಾಗಿಯೂ, ಸಕಲ ಸುರಾಸುರವಂದಿತ ಚರಣನಾಗಿಯೂ, ಮಾನುಷರೂಪಧಾರಿಯಾಗಿಯೂ ಇರುವ ಶ್ರೀಕೃಷ್ಣನು ಉತ್ತರಾಗರ್ಭವನ್ನು ಪುನಃ ಬದುಕಿಸಿದುದರಿಂದ ಪರೀಕ್ಷಿತ್ ಎಂಬ ಮಗನು ಹುಟ್ಟಿದನು. ಪರೀಕ್ಷಿನ್ಮಹಾರಾಜನು ಈಗಲೂ ಅಖಿಲ ಭೂಮಂಡಲವನ್ನೂ ಧರ್ಮದಿಂದ ಪರಿಪಾಲಿಸುತ್ತಿರುವನು."

ಇಲ್ಲಿಗೆ ಶ್ರೀ ವಿಷ್ಣು ಪುರಾಣದಲ್ಲಿ ಚತುರ್ಥಾಂಶದಲ್ಲಿ
ಇಪ್ಪತ್ತನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತೊಂದನೆಯ ಅಧ್ಯಾಯವು

"ಓ ಮೈತ್ರೇಯನೇ, ಮುಂದಿನ ರಾಜವಂಶವನ್ನು ಹೇಳುತ್ತೇನೆ ಕೇಳು. ಈಗ ರಾಜ್ಯಪರಿಪಾಲನೆ ಮಾಡುತ್ತಿರುವ ಪರೀಕ್ಷಿನ್ಮಹಾರಾಜನಿಗೆ ಜನಮೇಜಯನೂ ಜನಮೇಜಯನಿಗೆ ಶತಾನೀಕನೂ ಸಹ ಹುಟ್ಟುತ್ತಾರೆ. ಇವನು ಯಾಜ್ಞವಲ್ಕ್ಯರಿಂದ ವೇದಾಧ್ಯಯನಮಾಡಿ, ಅಸ್ತ್ರವಿದ್ಯೆಯನ್ನೂ ಸಹ ಕಲಿತು, ವಿಷಮವಾದ

ವಿಷಯಾಸಕ್ತಿರಹಿತಮನಸ್ಕನಾಗಿ, ಶುಕಮಹರ್ಷಿಯಿಂದ ಆತ್ಮಜ್ಞಾನಪ್ರವೀಣನಾಗಿ, ಮುಕ್ತಿಯನ್ನೂ ಹೊಂದುವನು. ಇವನಿಂದ ಅಶ್ವಮೇಧದತ್ತನೂ, ಇವನಿಂದ ಅಧಿಸೀಮ ಕೃಷ್ಣನೂ, ಅನಂತರ ನಿಚಕ್ನುನೂ, ಸಹ ಹುಟ್ಟುವರು. ಇವನ ಕಾಲದಲ್ಲಿ ಹಸ್ತಿನಾಪುರವು ಗಂಗೆಯಲ್ಲಿ ಮುಳುಗಿಹೋಗಿ, ನಿಚಕ್ನುನು ಕೌಶಾಂಬೀ ಪಟ್ಟಣದಲ್ಲಿ ವಾಸಮಾಡುವನು. ಇವನಿಗೆ ಉಷ್ಣನೂ, ಇವನಿಂದ ವಿಚಿತ್ರರಥನೂ, ಅನಂತರ ಶುಚಿರಥನೂ, ಇವನಿಂದ ವೃಷ್ಣಿಮಂತನೂ, ಅನಂತರ ಸುಷೇಣನೂ, ಆಮೇಲೆ ಸುನೀಥನೂ, ಇವನಿಂದ ನೃಪಚಕ್ಷುವೂ, ಇವನಿಂದ ಸುಖಿಬಲನೂ, ಅನಂತರ ಪಾರಿಪ್ಲವನೂ, ಇವನಿಂದ ಸುನಯನೂ, ಆಮೇಲೆ ಮೇಧಾವಿಯೂ, ಮೇಧಾವಿಯಿಂದ ರಿಪುಂಜಯನೂ, ಇವನಿಂದ ಅಶ್ವನೂ, ಅಶ್ವನಿಂದ ತಿಗ್ಮನೂ, ತಿಗ್ಮನಿಂದ ಬೃಹದ್ರಥನೂ, ಇವನಿಂದ ವಸುದಾಸನೂ, ಇವನಿಂದ ಶತಾನೀಕನೂ, ಅನಂತರ ಉದಯನೂ, ಇವನಿಂದ ವೀಹೀನರನೂ, ಅನಂತರ ದಂಡಪಾಣಿಯೂ, ಆಮೇಲೆ ನಿಮಿತ್ತನೂ, ನಿಮಿತ್ತನಿಂದ ಕ್ಷೇಮಕನೂ ಸಹ ಹುಟ್ಟುವರು. ಬ್ರಹ್ಮ ಕ್ಷತ್ರ ಸಂಬಂಧವಾದ ಸಂತತಿಯು ಕ್ಷೇಮಕನವರೆಗೆ, ಕಲಿಯುಗದಲ್ಲಿ ನಡೆಯುವುದು.”

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಇಪ್ಪತ್ತೊಂದನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತೆರಡನೆಯ ಅಧ್ಯಾಯವು

“ಅನಂತರ ಇಕ್ಷ್ವಾಕುವಂಶೋತ್ಪನ್ನರಾದ ಭವಿಷ್ಯದ್ರಾಜರನ್ನು ಹೇಳುತ್ತೇನೆ ಕೇಳು: ಬೃಹದ್ಬಲನಿಗೆ ಬೃಹತ್ಷಣನೂ, ಇವನಿಗೆ ಉರುಕ್ಷಯನೂ, ಇವನಿಂದ ವತ್ಸವ್ಯೂಹನೂ, ಅನಂತರ ವ್ಯೋಮನೂ, ಅವನಿಂದ ದಿವಾಕರನೂ, ಇವನಿಂದ ಸಹದೇವನೂ, ಸಹದೇವನಿಂದ ಬೃಹದಶ್ವನೂ, ಇವನಿಂದ ಭಾನುರಥನೂ, ಇವನಿಗೆ ಪ್ರತೀತಾಶ್ವನೂ, ಇವನಿಂದ ಸುಪ್ರತೀಕನೂ, ಸುಪ್ರತೀಕನಿಂದ ಮರುದೇವನೂ, ಅನಂತರ ಸುನಕ್ಷತ್ರನೂ, ಸುನಕ್ಷತ್ರನಿಂದ ಕಿಂನರನೂ, ಕಿಂನರನಿಂದ ಅಂತರಿಕ್ಷನೂ, ಇವನಿಗೆ ಸುಪರ್ಣನೂ, ಅವನಿಂದ ಅಮಿತ್ರಜಿತುವೂ, ಇವನಿಂದ ಬೃಹದ್ಭಾಜನೂ, ಇವನಿಂದ ಧರ್ಮಿಯೂ, ಧರ್ಮಿಯಿಂದ ಕೃತಂಜಯನೂ, ಇವನಿಂದ ರಣಂಜಯನೂ, ಅನಂತರ ಸಂಜಯನೂ, ಆಮೇಲೆ ಶಾಕ್ಯನೂ, ಇವನಿಂದ ಶುದ್ಧೋದನನೂ, ಇವನಿಂದ ಬಾಹುಳನೂ, ಬಾಹುಳನಿಂದ ಪ್ರಸೇನ

ಜಿತುವೂ, ಇವನಿಂದ ಚಕ್ಷುದ್ರಕನೂ, ಇವನಿಂದ ಕುಂಡಕನೂ, ಅನಂತರ ಸುರಥನೂ, ಅವನಿಗೆ ಸುಮಿತ್ರನೂ ಸಹ ಹುಟ್ಟುವರು. ಕಲಿಯುಗದಲ್ಲಿ ಇಕ್ಷ್ವಾಕು ವಂಶವು ಸುಮಿತ್ರನವರಿಗೆ ನಡೆಯುವುದು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಇಪ್ಪತ್ತೆರಡನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತುಮೂರನೆಯ ಅಧ್ಯಾಯವು

"ಮಾಗಧರಾಜರ ಮತ್ತು ಬೃಹದ್ರಥವಂಶೋತ್ಪನ್ನರಾದ ಭವಿಷ್ಯದ್ರಾಜರುಗಳನ್ನು ಹೇಳುತ್ತೇನೆ ಕೇಳು: ಈ ವಂಶದಲ್ಲಿ ಮಹಾಬಲಪರಾಕ್ರಮಿಗಳಾದ ಜರಾಸಂಧನೇ ಮೊದಲಾದವರು ಹುಟ್ಟಿದ್ದರು. ಜರಾಸಂಧನಿಗೆ ಸಹದೇವನೂ, ಸಹದೇವನಿಂದ ಸೋಮಾಪಿಯೂ, ಇವನಿಗೆ ಅನುಶ್ರುತಶ್ರವನೂ, ಇವನಿಗೆ ಅಯುತಾಯುವೂ, ಅನಂತರ ನಿರಮಿತ್ರನೂ, ಆಮೇಲೆ ಸುನೇತ್ರನೂ, ಅವನಿಂದ ಬೃಹತ್ಕರ್ಮನೂ, ಅನಂತರ ಶ್ಯೇನಜಿತುವೂ, ಅನಂತರ ಶ್ರುತಂಜಯನೂ, ಇವನಿಂದ ವಿಪ್ರನೂ, ವಿಪ್ರನಿಂದ ಶುಚಿಯೂ, ಇವನಿಗೆ ಕ್ಷೇಮ್ಯನೂ, ಅನಂತರ ಸುವ್ರತನೂ, ಸುವ್ರತನಿಂದ ಧರ್ಮನೂ, ಧರ್ಮನಿಂದ ಸುಶ್ರವನೂ, ಅನಂತರ ದೃಢಸೇನನೂ, ಇವನಿಂದ ಸುಬಲನೂ, ಸುಬಲನಿಂದ ಸುನೀತನೂ, ಅನಂತರ ಸತ್ಯಜಿತುವೂ, ಇವನಿಂದ ವಿಶ್ವಜಿತುವೂ, ಅವನಿಗೆ ರಿಪುಂಜಯನೂ ಸಹ ಹುಟ್ಟುವರು. ಇವರುಗಳು ಒಂದುಸಹಸ್ರವರ್ಷದವರೆಗೂ ರಾಜ್ಯವನ್ನು ಪರಿಪಾಲಿಸುವರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ
ಇಪ್ಪತ್ತುಮೂರನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತನಾಲ್ಕನೆಯ ಅಧ್ಯಾಯವು

"ಬಾರ್ಹದ್ರಥವಂಶಕ್ಕೆ ರಿಪುಂಜಯನೇ ಕೊನೆಯ ರಾಜನು. ಇವನ ಮಂತ್ರಿಯಾದ ಮುನಿಕನು, ಸ್ವಾಮಿಯಾದ ರಿಪುಂಜಯನನ್ನು ಕೊಂದು ತನ್ನ ಮಗನಾದ ಪ್ರದ್ಯೋತನಿಗೆ ರಾಜ್ಯಾಭಿಷೇಕಮಾಡುವನು. ಪ್ರದ್ಯೋತನಿಗೆ ಬಲಾಕನೂ, ಇವನಿಗೆ ವಿಶಾಖಯೂಪನೂ, ಇವನಿಂದ ಜನಕನೂ, ಅವನಿಗೆ ನಂದಿವರ್ಧನನೂ, ಅನಂತರ ನಂದಿಯೂ ಸಹ ಹುಟ್ಟುವರು. ಪ್ರದ್ಯೋತಸಂಜ್ಞಿಕರಾದ ಈ ಐದು

ಜನ ರಾಜರು ಎಂಟನೂರಮೂವತ್ತೆಂಟು ವರ್ಷಗಳಕಾಲ ರಾಜ್ಯವಾಳುವರು. ನಂದಿಗೆ ಶಿಶುನಾಭನೂ, ಇವನಿಗೆ ಕಾಕವರ್ಣನೂ, ಅನಂತರ ಕ್ಷೇಮಧರ್ಮನೂ, ಇವನಿಗೆ ಕ್ಷತ್ರೌಜನೂ, ಅವನಿಂದ ವಿಧಿಸಾರನೂ, ಅನಂತರ ಅಜಾತಶತ್ರುವೂ, ಆಮೇಲೆ ಅರ್ಭಕನೂ, ಇವನಿಂದ ಉದಯನೂ, ಇವನಿಗೆ ನಂದಿವರ್ಧನನೂ, ಇವನಿಂದ ಮಹಾನಂದಿಯೂ ಸಹ ಹುಟ್ಟುವರು. ಶೈಶುನಾಭಸಂಜ್ಞಿಕರಾದ ಈ ರಾಜರು, ಮುನ್ನೂರು ಅರವತ್ತೆರಡು ವರ್ಷಗಳಕಾಲ ರಾಜ್ಯವನ್ನಾಳುವರು. ಮಹಾನಂದಿಗೆ ಶೂದ್ರಸ್ತ್ರೀಯಲ್ಲಿ ಹುಟ್ಟಿದ ಮಹಾಪದ್ಮನಾಮಕನಾದ ನಂದನು ಅತಿ ಲುಬ್ಧನಾಗಿಯೂ, ಮಹಾ ಪರಾಕ್ರಮಿಯಾಗಿಯೂ ಎರಡನೆಯ ಪರಶುರಾಮನಂತೆ ಅಖಿಲ ಕ್ಷತ್ರಿಯರನ್ನು ನಾಶಮಾಡುವನು. ಇವನಿಂದ ಮುಂದೆ ಶೂದ್ರರು ಭೂಪಾಲರಾಗುವರು. ನಂದನು ಏಕಚಕ್ರಾಧಿಪತ್ಯವನ್ನು ಮಾಡುತ್ತಾನೆ. ಇವನಿಗೆ ಸುಮಾಲ್ಯನೇ ಮೊದಲುಗೊಂಡು ಎಂಟುಜನ ಪುತ್ರರು ಹುಟ್ಟುವರು. ಇವರು ನೂರುವರ್ಷ ರಾಜ್ಯವನ್ನು ಪಾಲಿಸುವರು. ನವನಂದನರನ್ನು, ವಿಷ್ಣುಮಿತ್ರವಾತ್ಸ್ಯಾಯನ ಗುಪ್ತಾದಿ ಪರ್ಯಾಯನಾಮಕನಾದ, ಕೌಟಿಲ್ಯನಾದ, ಚಾಣುಕ್ಯನೆಂಬ ಬ್ರಾಹ್ಮಣನು ನಾಶಮಾಡುವನು. ನವನಂದನರು ನಾಶವಾದನಂತರ ಮೌರ್ಯರು ಭೂಪಾಲರಾಗುವರು. ಕೌಟಿಲ್ಯನಾದ ಚಾಣಿಕ್ಯನು ಚಂದ್ರಗುಪ್ತನನ್ನು ರಾಜನನ್ನಾಗಿ ಮಾಡುವನು. ನಂದನಿಗೆ ಮೂರಾ ಎಂಬ ಶೂದ್ರ ಸ್ತ್ರೀಯಲ್ಲಿ ಚಂದ್ರಗುಪ್ತನು ಹುಟ್ಟಿದುದರಿಂದ ಮೌರ್ಯನೆಂದು ಹೆಸರುಂಟಾಗುತ್ತದೆ. ಚಂದ್ರಗುಪ್ತನಿಗೆ ಬಿಂದುಸಾರನೂ, ಇವನಿಗೆ ಅಶೋಕವರ್ಧನನೂ, ಅನಂತರ ಸುಯಶಸನೂ, ಆಮೇಲೆ ದಶರಥನೂ, ಇವನಿಂದ ಸಂಯುತನೂ, ಇವನಿಗೆ ಶಾಲಿಶೂಕನೂ, ಅವನಿಂದ ಸೋಮಶರ್ಮನೂ, ಇವನಿಗೆ ಶತಧನ್ವನೂ, ಇವನಿಂದ ಬೃಹದ್ರಥನೂ ಸಹ ಹುಟ್ಟುವರು. ಈ ಹತ್ತು ಜನ ಮೌರ್ಯರೂ ನೂರು ಮೂವತ್ತೇಳು ವರ್ಷ ರಾಜ್ಯವಾಳುವರು. ಅನಂತರ ಶುಂಗರೆಂಬ ಸಂಜ್ಞೆಯುಳ್ಳವರು ಹತ್ತು ಜನರು ರಾಜರಾಗುವರು. ಇವರಲ್ಲಿ ಪ್ರಧಾನನಾದ ಪುಷ್ಯಮಿತ್ರನೆಂಬ ಬೃಹದ್ರಥನ ಸೇನಾಪತಿಯು ಸ್ವಾಮಿಯಾದ ಬೃಹದ್ರಥನನ್ನು ಕೊಂದು, ತಾನೇ ರಾಜನಾಗುವನು. ಪುಷ್ಯಮಿತ್ರನಿಗೆ ಅಗ್ನಿಮಿತ್ರನೂ, ಇವನಿಂದ ಸುಜ್ಯೇಷ್ಠನೂ, ಅನಂತರ ವಸುಮಿತ್ರನೂ, ಇವನಿಂದ ಉದಂಕನೂ, ಅನಂತರ ಪುಳಿಂದಕನೂ ಆಮೇಲೆ ಘೋಷವಸುವೂ, ಅನಂತರ ವಜ್ರಮಿತ್ರನೂ, ಇವನಿಂದ ಭಾಗವತನೂ ಸಹ ಹುಟ್ಟುವರು. ಈ ಶುಂಗರು ನೂರಹನ್ನೆರಡು ವರ್ಷ ರಾಜ್ಯವಾಳುವರು. ಭಾಗವತನ ಮಗನಾದ ದೇವಭೂತಿಯನ್ನು ಅವನ ಮಂತ್ರಿಯಾದ ವಸುದೇವನಾಮಕನಾದ ಕಣ್ವನು, ದೇವಭೂತಿಯು ವ್ಯಸನ

ದಲ್ಲಿರುವ ಕಾಲದಲ್ಲಿ ಇವನನ್ನು ಸಂಹರಿಸಿ, ತಾನೇ ರಾಜನಾಗುವನು. ವಸುದೇವ ನಿಗೆ ಭೂಮಿತ್ರನೂ, ಅವನಿಗೆ ನಾರಾಯಣನೂ, ಇವನಿಂದ ಸುಶರ್ಮನೂ ಸಹ ಹುಟ್ಟುವರು. ಈ ಕಣ್ವರು ನಲವತ್ತೈದು ವರ್ಷ ರಾಜ್ಯವಾಳುವರು. ಸುಶರ್ಮ ನನ್ನು ಇವನ ಭೃತ್ಯನಾದ ಬಲಿಪುಚ್ಛಕನು ಕೊಂದು ಭೂಮಿಯನ್ನು ಅನುಭವಿಸು ವನು.

ಅನಂತರ ಇವನ ತಮ್ಮನಾದ ಕೃಷ್ಣನು ರಾಜನಾಗುವನು. ಇವನಿಗೆ ಶಾಂತ ಕರ್ಣಿಯೂ ಇವನಿಂದ ಪೂರ್ಣೋತ್ಸಂಗನೂ, ಅನಂತರ ಶಾತಕರ್ಣಿಯೂ, ಇವನಿಂದ ಲಂಬೋದರನೂ, ಇವನಿಂದ ಪಿಲಕನೂ, ಅನಂತರ ಮೇಘಸ್ವಾತಿಯೂ, ಆಮೇಲೆ ಪಟುಮಂತನೂ, ಇವನಿಂದ ಅರಿಷ್ಟಕರ್ಮನೂ, ಅರಿಷ್ಟಕರ್ಮನಿಂದ ಹಾಲಾಹಲನೂ, ಇವನಿಂದ ಪಲಲಕನೂ ಅನಂತರ ಪುಳಿಂದಸೇನನೂ, ಇವ ನಿಂದ ಸುಂದರನೂ, ಆಮೇಲೆ ಶಾಂತಕರ್ಣಿಯೂ, ಅನಂತರ ಶಿವಸ್ವಾತಿಯೂ, ಇವನಿಂದ ಗೋಮತಿಯೂ, ಗೋಮತಿಯಿಂದ ಅಳಿಮಂತನೂ, ಇವನಿಗೆ ಶಾಂತ ಕರ್ಣಿಯೂ, ಇವನಿಗೆ ಶಿವಶ್ರೀಯೂ, ಅನಂತರ ಶಿವಸ್ಕಂದನೂ, ಅವನಿಂದಯಜ್ಞ ಶ್ರೀಯೂ, ಇವನಿಗೆ ದ್ವಿಜಯಜ್ಞನೂ, ಇವನಿಂದ ಚಂದ್ರಶ್ರೀಯೂ, ಅವನಿಂದ ಪುಲೋಮಾಪಿಯೂ ಸಹ ಹುಟ್ಟುವರು. ಇವರುಗಳು ನಾಲ್ಕುನೂರುಎಂಭತ್ತಾರು (೪೮೬) ವರ್ಷ ರಾಜ್ಯವಾಳುವರು. ಅನಂತರದಲ್ಲಿ ಏಳುಜನ ಆಂಧ್ರರಾಜರು ಗಳೂ, ಗರ್ದಭಿನ ಸಂಜ್ಞಿಕರಾದ ಹತ್ತುಜನ ರಾಜರೂ, ಆಮೇಲೆ ಎಂಟುಜನ ಯವನರೂ, ಹದಿನಾಲ್ಕುಜನ ತುರುಷ್ಕರೂ, ಹನ್ನೊಂದು ಮೌನರೂ ಸಹ ರಾಜರಾಗಿ ಸಾವಿರದತೊಂಭತ್ತು ವರ್ಷಗಳ ಕಾಲ ರಾಜ್ಯವಾಳುವರು. ಅನಂತರ ಕೈಂಕಿಲನಾಮಕರಾದ ಯವನರು ರಾಜರಾಗುತ್ತಾರೆ. ಇವರುಗಳಲ್ಲಿ ಪ್ರಧಾನ ನಾದ ವಿಂಧ್ಯಶಕ್ತಿಗೆ ಪುರಂಜಯನೂ, ಇವನಿಗೆ ರಾಮಚಂದ್ರನೂ, ಇವನಿಂದ ಧರ್ಮವರ್ಮನೂ, ಅನಂತರ ವಂಗನೂ, ಆಮೇಲೆ ನಂದನನೂ, ಇವನಿಗೆ ಸುನಂದಿಯೂ ಸಹ ಹುಟ್ಟುವರು. ಇವರು ನೂರಾರು (೧೦೬) ವರ್ಷ ರಾಜ್ಯ ವಾಳುವರು. ಪುಷ್ಯಮಿತ್ರ, ಪಯಮಿತ್ರರೇ ಮೊದಲಾದ ಏಳುಜನ ಆಂಧ್ರ ರಾಜರು ಭೂಮಿಯನ್ನು ಪರಿಪಾಲಿಸುವರು. ಕೋಸಲದೇಶದಲ್ಲಿ ಒಂಬತ್ತು ರಾಜರು ರಾಜ್ಯವಾಳುವರು. ಇವರು ನಿಷಧವಂಶೀಕರು. ಮಗಧ ದೇಶದಲ್ಲಿ ವಿಶ್ವ ಸ್ಫಾಟಿಕನೆಂಬುವನು ಬೇರೆಬೇರೆ ವರ್ಣಗಳನ್ನು ಮಾಡುತ್ತಾನೆ. ಕೈವರ್ತ, ಪಯ, ಪುಳಿಂದರೆಂಬ ಬ್ರಾಹ್ಮಣರನ್ನು ರಾಜ್ಯದಲ್ಲಿ ಸ್ಥಾಪಿಸುತ್ತಾನೆ. ಮಾಗಧರು ಅಖಿಲಕ್ಷತ್ರಿಯರನ್ನು ನಾಶಮಾಡಿ, ಪದ್ಮಾವತೀಯೆಂಬ ಪಟ್ಟಣದಲ್ಲಿ ವಾಸ ಮಾಡುತ್ತಾರೆ. ಪ್ರಯಾಗ, ಗಯಾ, ಗುಪ್ತಾ ಈ ದೇಶಗಳನ್ನು ಪಾಲಿಸುವರು.

ದೇವರಕ್ಷಿತನೆಂಬುವನು ಕೋಸಲ, ಆಂಧ್ರ, ಪುಂಡ್ರ, ತಾಮ್ರಲಿಪ್ತ, ಸಮತಟ ವೆಂಬ ಪಟ್ಟಣಗಳಿಗೆ ರಾಜನಾಗುವನು. ಗುಹನು ಕಳಿಂಗ, ಮಾಹಿಷ, ಮಹೇಂದ್ರ, ಭೌಮ ಪಟ್ಟಣಗಳನ್ನು ಅನುಭವಿಸುವನು. ಮಣಿಧಾನ್ಯ ವಂಶೀಕರು ನೈಷಧ, ನೈಮಿಷಕ, ಕಾಲಕೋಶಕವೆಂಬ ದೇಶಗಳನ್ನು ಪಾಲಿಸುವರು. ಕನಕನೆಂಬುವನು ತ್ರೈರಾಜ್ಯದೇಶವನ್ನು ಪಾಲಿಸುವನು. ವ್ರಾತ್ಯರಾದ ಬ್ರಾಹ್ಮಣರು ಸೌರಾಷ್ಟ್ರ, ಅವಂತಿ, ನರ್ಮದಾ ಮರುಭೂಮಿ ಪ್ರದೇಶಗಳನ್ನು ಪಾಲಿಸುವರು. ಮ್ಲೇಚ್ಛ ಶೂದ್ರಾದಿಗಳು, ಸಿಂಧು, ತಟ, ದಾಪಿಕೋರ್ವಿ, ಚಂದ್ರಭಾಗ, ಕಾಶ್ಮೀರ ದೇಶ ಗಳನ್ನು ಪಾಲಿಸುವರು. ಅಲ್ಲದೆ ಸಮಕಾಲೀನರು ಮತ್ತು ಅಲ್ಪವಾದ ಐಶ್ವರ್ಯ ವುಳ್ಳವರು ಮಹಾಕೋಪವುಳ್ಳವರು, ಯಾವಾಗಲೂ ಅನೃತ, ಅಧರ್ಮವುಳ್ಳ ವರು, ಸ್ತ್ರೀ, ಬಾಲ, ಗೋಹತ್ಯಮಾಡತಕ್ಕವರು, ಪರಸ್ವತ್ತಿನಲ್ಲಿ ಅಪೇಕ್ಷೆಯುಳ್ಳ ವರು, ಅಲ್ಪಸಾರವುಳ್ಳವರು, ಉದಯಾಸ್ತಮಯ ಪ್ರಾಯವಾದವರು, ಅಂದರೆ ಕ್ಷಣಿಕರಾದವರು, ಅಲ್ಪಾಯುಷ್ಕರು, ಮಹಾ ಆಶೆಯುಳ್ಳವರು, ಧರ್ಮಲುಬ್ಧ ರಾದವರು ಸಹ ಆಗುವರು. ಇವರ ದೇಶದ ಪ್ರಜೆಗಳೂ ಸಹ ಇವರಂತೆಯೇ ಇರುವರು. ಪ್ರತಿದಿನವೂ ಧರ್ಮಾರ್ಥಗಳು ಕ್ಷೀಣವಾಗುತ್ತಾ ಜಗತ್ತು ಕ್ಷೋಭ ಯುಕ್ತವಾಗುವುದು. ಅನಂತರ ದ್ರವ್ಯವೇ ಪ್ರಧಾನವಾಗುವುದು. ಬಲವೇ ಸಕಲ ಧರ್ಮಕಾರಣವಾಗುವುದು. ದಾಂಪತ್ಯಸಂಬಂಧಕ್ಕೆ ಅಭಿರುಚಿಯೇ ಕಾರಣ ವಾಗಿರುವುದು. ಸ್ತ್ರೀಭೋಗವೇ ಭೋಗವಾಗುವುದು. ಅನೃತವೇ ವ್ಯವಹಾರಕ್ಕೆ ಪ್ರಧಾನವಾಗುವುದು. ಎತ್ತರವಾದ ಸ್ಥಳದಿಂದ ನೀರನ್ನು ತೆಗೆದುಕೊಂಡು ಸ್ವಂತ ಭೂಮಿಯನ್ನು ಪೈರುಮಾಡಬೇಕೆಂಬುವುದೇ ಭೂಮಿ ಎಂಬುದಾಗಿ ತಿಳಿಯುವರೇ ಹೊರತು ಪುಣ್ಯಕ್ಷೇತ್ರಾದಿಗಳಿಗೆ ಹೋಗಬೇಕೆಂಬುವುದೇ ಇರುವುದಿಲ್ಲ. ಯಜ್ಞೋಪವೀತವೇ ಬ್ರಾಹ್ಮಣ್ಯವಾಗಿರುವುದು. ರತ್ನಪ್ರಚುರವಾದ ಆಭರಣಾದಿ ಗಳೇ ಶ್ಲಾಘ್ಯವಾಗುವುದೇ ಹೊರತು, ಗುಣಾದಿಗಳು ಶ್ಲಾಘ್ಯವಾಗುವುದಿಲ್ಲ. ವೇಷಧಾರಣೆಮಾತ್ರವೇ ಆಶ್ರಮಧರ್ಮಸೂಚಕವು. ಅನ್ಯಾಯವೇ ಮುಖ್ಯ ವೃತ್ತಿಯು. ದೌರ್ಬಲ್ಯವೇ ನಿರ್ವೃತ್ತಿಗೆ ಕಾರಣವಾಗುವುದು. ಗಟ್ಟಿಯಾಗಿ ಮಾತಾಡುವುದೇ ಪಾಂಡಿತ್ಯವು. ಧನವಿಲ್ಲದವನು ಸಾಧುವಾಗುವನು. ಸ್ನಾನ ವೆಂಬುವುದೇ ಸರ್ವಕರ್ಮವಾಗುವುದು. ದಾನವೇ ಧರ್ಮಹೇತುವೇ ಹೊರತು, ಯಾಗಾದಿಗಳು ಇರುವುದಿಲ್ಲ. ಸ್ವೀಕಾರಮಾಡುವುದೇ ವಿವಾಹವಾಗುವುದು. ವೇಷಧಾರಿಯಾದವನೇ ಸತ್ಪಾತ್ರನಾಗುವನು. ದೂರವಾದ ನೀರನ್ನು ತರುವುದೇ ತೀರ್ಥಯಾತ್ರೆಯು, ಕಪಟವೇಷಧಾರಿಯಾದವನೇ ಮಹಾತ್ಮನಾಗುವನು. ಈ ಪ್ರಕಾರ ಅನೇಕ ದೋಷಯುಕ್ತವಾದ ಭೂಮಂಡಲದಲ್ಲಿ ಯಾವ ವರ್ಣದವನು

ಬಲಿಷ್ಠನಾಗುವನೋ ಅವನೇ ರಾಜನಾಗುವನು. ರಾಜನು ಪ್ರಜಾಹಿತಚಿಂತಕನಾಗದಿರುವುದರಿಂದ, ಪ್ರಜೆಗಳು ಅಸಹಾಯಕರಾಗಿ, ಪರ್ವತದ ಗುಹೆಗಳನ್ನಾಶ್ರಯಿಸುವರು. ಈ ಪ್ರಜೆಗಳಿಗೆ ಕಂದಮೂಲ ಫಲಪುಷ್ಪಾದಿಗಳೇ ಆಹಾರವಾಗುವುದು. ಮರದ ಚರ್ಮವೇ ಬಟ್ಟೆಯಾಗುವುದು, ಮಳೆ, ಗಾಳಿ, ಬಿಸಿಲು, ಛಳಿ ಇವುಗಳಿಂದ ಪೀಡಿತರಾಗುವರು. ಮೂವತ್ತುಮೂರು ವರ್ಷಗಳು ಕೂಡಾ ಒಬ್ಬನೂ ಬದುಕುವುದಿಲ್ಲ. ಕಲಿಯುಗದಲ್ಲಿ ಯಾವಾಗಲೂ ಜನವು ಕ್ಷಯವನ್ನು ಹೊಂದುವುದು. ಶ್ರೌತಸ್ಮಾರ್ತಧರ್ಮಗಳು ಕ್ಷೀಣವಾದ ಕಾಲದಲ್ಲಿ ಅಖಿಲ ಜಗತ್ಸೃಷ್ಟಿಕರ್ತನಾದ, ಚರಾಚರ ಗುರುವಾದ, ಆದಿಮಧ್ಯಾಂತರಹಿತನಾದ, ಪರಬ್ರಹ್ಮನಾದ, ಭಗವಂತನಾದ, ಶ್ರೀ ವಾಸುದೇವನು, ಶಂಬಳಗ್ರಾಮದಲ್ಲಿ, ಬ್ರಾಹ್ಮಣನ ಗೃಹದಲ್ಲಿ, ಕಲ್ಕಿರೂಪಿಯಾಗಿ ಅವತರಿಸಿ, ಸಕಲ ಮ್ಲೇಚ್ಛ ಕಳ್ಳರೇ ಮೊದಲಾದ ದುಷ್ಟರನ್ನು ನಾಶಮಾಡಿ, ಧರ್ಮಸ್ಥಾಪನೆಯನ್ನು ಮಾಡುತ್ತಾನೆ. ಅನಂತರ ಕಲಿಯುಗದ ಅಂತ್ಯದಲ್ಲಿರತಕ್ಕ ಜನಗಳು, ಸ್ಫಟಿಕದಂತೆ ನಿರ್ಮಲ ಮನಸ್ಕರಾಗುವರು. ಇವರಿಗೆ ಪುತ್ರಸಂತಾನವಿರುವುದಿಲ್ಲ. ಆಗ ಪ್ರಜೆಗಳು ಕೃತಯುಗಾನುಸಾರಿಗಳಾಗುವರು. ಯಾವಾಗ ಸೂರ್ಯ, ಚಂದ್ರ, ಬೃಹಸ್ಪತಿಗಳು ಒಂದೇ ರಾಶಿಯಲ್ಲಿರುವರೋ ಆಗ ಕೃತಯುಗವಾಗುವುದು. "ಓ ಮೈತ್ರೇಯನೇ ? ಇದುವರೆವಿಗೆ ಕಳೆದುಹೋದ ರಾಜರ ವಂಶಗಳನ್ನೂ ಸಹ ಹೇಳಿದೆನು. ಪರೀಕ್ಷಿನ್ಮಹಾರಾಜನಿಂದ ನಂದನವರೆಗೆ ಸಾವಿರದಐವತ್ತು (೧೦೫೦) ವರ್ಷಗಳಾಗುವುದು. ಅನಂತರ ಪ್ರದ್ಯೋತನಾದಿ ವಂಶಗಳು ನಡೆಯುವುದು. ಶಕಟಾಕಾರವಾದ ಸಪ್ತರ್ಷಿಗಳ ಮಂಡಲದ ಉದಯಕಾಲದಲ್ಲಿ ಎರಡು ನಕ್ಷತ್ರಗಳು, ಅಂದರೆ ಪುಲಸ್ತ್ಯ, ಕ್ರತು, ಈ ಎರಡು ಯಾವಾಗ ಕಾಣುವುವೋ ಮತ್ತು ಈ ಎರಡು ನಕ್ಷತ್ರಗಳ ಸಮರೇಖಾಂಶದಲ್ಲಿ ಅಶ್ವಿನ್ಯಾದಿ ನಕ್ಷತ್ರಗಳ ಮಧ್ಯದಲ್ಲಿ ಯಾವುದಾದರೂ ಒಂದು ನಕ್ಷತ್ರವು ಕಾಣುವುದೋ, ಆ ನಕ್ಷತ್ರದಿಂದ ಸಹಿತವಾದ ಸಪ್ತರ್ಷಿಮಂಡಲವು, ನೂರು ವರ್ಷಗಳವರೆವಿಗೂ, ಅದೇ ರೀತಿಯಲ್ಲಿರುವುದು. ಈ ರೀತಿ ಪರೀಕ್ಷಿನ್ಮಹಾರಾಜನ ಕಾಲದಲ್ಲಿ, ಸಮರೇಖಾಂಶದಲ್ಲಿ, ಮಖಾ ನಕ್ಷತ್ರದಿಂದ ಕೂಡಿತ್ತು. ಆಗ ಕಲಿಯು ಪ್ರಾಪ್ತನಾಯಿತು. ಕಲಿಯು ದೇವಮಾನದಲ್ಲಿ ಸಾವಿರದ ಇನ್ನೂರು ವರ್ಷವು ನಡೆಯುವುದು. ವಸುದೇವಗೃಹದಲ್ಲಿ ಭಗವಂತನಾದ ಶ್ರೀಮನ್ನಾರಾಯಣನು ಇರುವ ಕಾಲದಲ್ಲಿ ಕಲಿಯು ಪ್ರವೇಶಿಸಿತು. ಭಗವಂತನಾದ ವಸುದೇವನು ವಾಸಮಾಡುವವರೆಗೆ ಕಲಿಯು ವೃದ್ಧಿಯಾಗಲಿಲ್ಲ. ಶ್ರೀಕೃಷ್ಣನು ವೈಕುಂಠಲೋಕಕ್ಕೆ ಪ್ರಯಾಣಮಾಡಿದುದರಿಂದ ಕಲಿಯು ವೃದ್ಧಿಯಾಗಲು ಕಾರಣವಾಯಿತು. ಆ ಕಾಲದಲ್ಲಿ ಯುಧಿಷ್ಠಿರನು ಕಲಿಯು ವೃದ್ಧಿಯಾದುದನ್ನೂ ಕೃಷ್ಣನು ನಿರ್ಯಾಣವಾದುದನ್ನೂ ಸಹ ಕಂಡು,

ತಮ್ಮಂದಿರುಗಳಿಂದ ಕೂಡಿ, ರಾಜ್ಯವನ್ನು ಬಿಡತಕ್ಕ ಕಾಲದಲ್ಲಿ ಪರೀಕ್ಷಿತನಿಗೆ ರಾಜ್ಯಾಭಿಷೇಕ ಮಾಡಿ, ಮಹಾಪ್ರಸ್ಥಾನವನ್ನು ಪಡೆದನು. ಕೃಷ್ಣನು ಯಾವ ದಿವಸ ಪ್ರಯಾಣ ಮಾಡಿದನೋ ಅದೇ ದಿವಸವೇ ಕಲಿಯು ವೃದ್ಧಿಗೆ ಪ್ರಾರಂಭ ವಾಯಿತು. ಈ ಕಲಿಯು ಮಾನುಷಗಣದಲ್ಲಿ ಸಂಧಿಗಳಕಾಲ ಹೊರತು ಮೂರು ಲಕ್ಷ ಅರವತ್ತು ಸಹಸ್ರ ವರ್ಷ (೩,೬೦೦೦೦) ವೃದ್ಧಿಯಲ್ಲಿರುವನು. ಈ ಪ್ರಕಾರ ದೇವಮಾನದಲ್ಲಿ ಉಭಯಸಂಧಿಕಾಲಗಳೂ ಸೇರಿ ಸಾವಿರದ ಇನ್ನೂರು ವರ್ಷ ನಿಶ್ಶೇಷವಾಗಿ ಕಳೆವರೆ ಪುನಃ ಕೃತಯುಗವು ಪ್ರಾರಂಭವಾಗುವುದು. ಬೀಜ ಭೂತರಾದ ಪುರುವಂಶೋತ್ಪನ್ನನಾದ ದೇವಾಪಿಯೂ, ಇಕ್ಷ್ವಾಕುವಂಶೋತ್ಪನ್ನ ನಾದ ಮರುವೂ ಸಹ ಕಲಾಪಗ್ರಾಮದಲ್ಲಿ ತಪಸ್ಸುಮಾಡುತ್ತಿದ್ದು, ಕೃತಯುಗ ದಲ್ಲಿ ಕ್ಷತ್ರಪ್ರವರ್ತಕರಾಗುವರು. ಇದೇ ಪ್ರಕಾರ ಕೆಲವು ಮಹರ್ಷಿಗಳೂ ಸಹ ಪ್ರಜಾವೃದ್ಧಿಗೆ ಪ್ರವರ್ತಕರಾಗುವರು. ಹಿಂದೆ ಹೇಳಿದ ಕ್ರಮದಿಂದ ಮನುಪುತ್ರ ರಿಂದ ಕೃತ, ತ್ರೇತಾ, ದ್ವಾಪರ ಯುಗಗಳು ಭೋಗಿಸಲ್ಪಡುವುದು. ಈ ರೀತಿ ಸಂಕ್ಷೇಪವಾಗಿ ವಂಶಾದಿಗಳನ್ನು ಹೇಳಿರುವೆನು. ವಿಸ್ತಾರವಾಗಿ ಹೇಳಬೇಕಾದರೆ ನೂರಾರು ವರ್ಷಗಳಾಗುವುವು. ಮೋಹಾಂಧರಾದ ರಾಜರು, ಈ ಭೂಮಿಯು ನನಗೇ, ನನ್ನ ಮಗನಿಗೂ, ಮೊಮ್ಮಗನಿಗೂ ಸಹ ಇರಬೇಕೆಂಬುದಾಗಿ, ಮಮಕಾ ರಾದಿಯುಕ್ತರಾಗಿ ಹೇಯವಾದ ದೇಹಾವಸಾನದವರೆಗೂ ಆಸೆಯುಳ್ಳವರಾಗು ತ್ತಾರೆ. ಹಿಂದೆ ಅನೇಕ ರಾಜರು ಭೂಮಿಯನ್ನು ಬಿಟ್ಟು ಹೋದರು. ಮುಂದೆಯೂ ಅನೇಕರು ಬಿಟ್ಟು ಹೋಗುತ್ತಾರೆ. ಈ ವಿಷಯದಲ್ಲಿ ಭೂದೇವಿಯು ಹೇಳಿದ ವಿಷಯವನ್ನು ಧರ್ಮಧ್ವಜನಾದ ಜನಕರಾಜನಿಗೆ ಅಸಿತಮಹರ್ಷಿಯು ಹೇಳು ವನು: ಎಲೈ ಜನಕನೇ? ಭೂಮಿಯು ಹೇಳುವುದೇನೆಂದರೆ: ಜಾಗ್ರತೆಯಾಗಿ ನಾಶವನ್ನು ಹೊಂದತಕ್ಕ ಬುದ್ಧಿಶಾಲಿಗಳಾದ ರಾಜರಿಗೂ, ನನ್ನಲ್ಲಿ ಮೋಹವು ತಪ್ಪುವುದಿಲ್ಲ. ಮೊದಲು ಇಂದ್ರಿಯನಿಗ್ರಹವನ್ನು ಮಾಡಿ, ಇಂದ್ರಿಯಭೋಗ ಲಂಪಟರಾದ ಮಂತ್ರಿಭೃತ್ಯರನ್ನೂ ಜಯಿಸಿ, ತತ್ವಜ್ಞಾನವನ್ನು ಹೊಂದದೆ ಸಾಗರಾಂತವಾದ ಭೂಮಿಯನ್ನು ಜಯಿಸಬೇಕೆಂದು ಸಮೀಪವಾಗಿರುವ ಮೃತ್ಯು ವನ್ನು ನೋಡದೆ ಆಶಾಪರವಶರಾಗುವರು. ಅನಿತ್ಯವಾದ ರಾಜ್ಯಕ್ಕೆ ಆಸೆಪಡು ವವರೇ ಹೊರತು ಮೋಕ್ಷಫಲವನ್ನು ಹೊಂದಲು ಪ್ರಯತ್ನಪಡುವವರು ಕೇವಲ ವಿರಳ. ಪಿತೃಪಿತಾಮಹಾದಿಗಳಿಂದಲೂ, ತೆಗೆದುಕೊಂಡು ಹೋಗುವುದಕ್ಕೆ ಆಗದೆ ಇದ್ದ ನನ್ನನ್ನು ಜಯಿಸಬೇಕೆಂದು ಪುತ್ರಾದಿಗಳು ಭ್ರಾಂತಿಪಡುವರು. ನನಗೋಸ್ಕರ ಅಣ್ಣ, ತಮ್ಮ, ತಂದೆ, ಮಗ ಎಂಬ ವಿವೇಚನೆಯಿಲ್ಲದೆ ರಾಜ್ಯಾಪೇಕ್ಷೆಯುಕ್ತ ರಾಗುತ್ತಾರೆ. ಎಷ್ಟು ಆಸೆಯಿಂದ ಕೂಡಿಕೊಂಡಿದ್ದಾಗ್ಯೂ ನನ್ನನ್ನು ಬಿಟ್ಟು ಮೃತ್ಯುವನ್ನು ಹೊಂದುವರು. ಈ ರೀತಿ ಭೂಮಿಯು ಹೇಳುತ್ತಾಳೆ. ಆದುದರಿಂದ

ಮನುಷ್ಯನಾದವನು ಮಮಕಾರವನ್ನು ಬಿಡಬೇಕು. ಮನುವಂಶದಲ್ಲಿ ಆ ಭಗವಂತನ ಅಂಶದಿಂದ ಅವತರಿಸಿದ ರಾಜರುಗಳ ಹೆಸರುಗಳನ್ನು ಯಾರು ಕೇಳುತ್ತಾರೋ, ಅವರು ಧನ, ಧಾನ್ಯ, ಸಮೃದ್ಧಿಯುಕ್ತರಾಗುವರು. ಸೂರ್ಯ ಚಂದ್ರ ವಂಶೋತ್ಪನ್ನರಾದ ಇಕ್ಷ್ವಾಕು, ಜಹ್ನು, ಮಾಂಧಾತೃ, ಸಗರ, ರಘು, ಯಯಾತಿ, ನಹುಷರೇ ಮೊದಲಾದ ಜ್ಞಾನನಿಷ್ಠರಾದ ಮಹಾಬಲಪರಾಕ್ರಮಿಗಳಾದ ಅಪಾರವಾದ ಧನವುಳ್ಳ ಈ ಮಹಾತ್ಮರನ್ನು ಸ್ಮರಣೆಮಾಡಿದರೆ, ಪುತ್ರ, ಹೆಂಡತಿ, ಗೃಹ, ಕ್ಷೇತ್ರ, ಧನಾದಿಗಳುಂಟಾಗುವುದು. ಅಲ್ಲದೆ ಮಮಕಾರವು ಹೋಗಿ ಪ್ರಜ್ಞಾನಿಷ್ಠತೆಯೂ ಸಹ ಉಂಟಾಗುವುದು. ಅನೇಕವಾದ ತಪಸ್ಸುಗಳಿಂದಲೂ, ಯಜ್ಞಾದಿಗಳಿಂದಲೂ ಸಹ ಯಾವ ಫಲಗಳುಂಟಾಗುವುವೋ ಅವೆಲ್ಲವೂ ಪುಣ್ಯಚರಿತ್ರರ ಕೀರ್ತನೆಯಿಂದ ಉಂಟಾಗುವುದು. ಪೃಥುಚಕ್ರವರ್ತಿಯು ಸಮಸ್ತ ಲೋಕಗಳನ್ನು ಸಂಚಾರಮಾಡಿ, ಶತ್ರುಗಳನ್ನು ಜಯಿಸಿದಾಗ್ಯೂ, ಕಾರ್ತವೀರ್ಯಾರ್ಜುನನು ಸಮಸ್ತ ದ್ವೀಪಗಳನ್ನು ಪಾಲನೆ ಮಾಡಿದಾಗ್ಯೂ ಸಹ ಮನಸ್ಸಿಗೆ ಈ ಮಹಾತ್ಮರು ಇದ್ದರೋ ಇಲ್ಲವೋ ಎಂಬ ಸಂಶಯವುಂಟಾಯಿತು. ಅಂದರೆ, ಮೇಲೆ ಹೇಳಿದ ಮಹಾತ್ಮರೆಲ್ಲರೂ ಕಾಲವೆಂಬ ಗಾಳಿಯಿಂದ ತೂಲರಾಶಿಯು ನಾಶವಾದಂತೆ, ಪಾಂಚಭೌತಿಕವಾದ ದೇಹವನ್ನು ಬಿಟ್ಟು ಬಹುಕಾಲವಾದಾಗ್ಯೂ, ಪುಣ್ಯಕೀರ್ತಿಗಳಾದವರ ಕೀರ್ತಿಯೆಂಬುವುದು ಸ್ಥಿರವಾಗಿ ನಿಲ್ಲುವುದೇ ಹೊರತು ಪುತ್ರ ಧನ ಕ್ಷೇತ್ರಾದಿಗಳು ನಿಲ್ಲತಕ್ಕವುಗಳಲ್ಲವೆಂದು ಅಭಿಪ್ರಾಯವು. ರಾವಣಾದಿಗಳು ವಿಪರೀತ ಐಶ್ವರ್ಯದಿಂದ ಯುಕ್ತರಾಗಿದ್ದಾಗ್ಯೂ ಇವರೂ ಅಂತಕನ ದೃಷ್ಟಿಪಾತದಿಂದ ಕ್ಷಣಮಾತ್ರದಲ್ಲಿ ಭಸ್ಮವಾಗಿ ಭಸ್ಮಶೇಷವೂ ಸಹ ಉಳಿಯಲಿಲ್ಲ. ಮಾಂಧಾತೃಚಕ್ರವರ್ತಿಯು ಪ್ರಖ್ಯಾತ ಕೀರ್ತಿಯುಳ್ಳವನಾದರೂ ದೇಹವು ಮಾತ್ರ ಉಳಿಯಲಿಲ್ಲ. ಹೀಗಿರುವಲ್ಲಿ ಮಮಕಾರವುಳ್ಳ ಮಂದಬುದ್ಧಿಯಾದ ಮನುಷ್ಯನಿಗೆ ದೇಹಾದಿಗಳು ನಿಲ್ಲುವುದುಂಟೆ? ಭಗೀರಥ, ಸಗರ, ಕಕುತ್ಸ್ಥ, ದಶಾನನ, ರಾಘವ, ಲಕ್ಷ್ಮಣ, ಯುಧಿಷ್ಠಿರ ಮೊದಲಾದವರು ಯಾವ ರೀತಿ ದೇಹಾದಿಗಳನ್ನು ಬಿಟ್ಟರೋ, ಅದೇ ರೀತಿಯಲ್ಲಿ ಮುಂದೆ ಬರತಕ್ಕ ರಾಜರೂ ಸಹ ನಾಶವಾಗುವರು. ಆದುದರಿಂದ ಈ ಲೋಕದಲ್ಲಿ ಮನುಷ್ಯರು ಮಮಕಾರರಹಿತರಾಗಿ ಪುತ್ರಕ್ಷೇತ್ರಾದಿ ಸಂಪತ್ತುಗಳಲ್ಲಿ ನಿರಾಶೆಯುಳ್ಳವರಾಗಿ, ಹೇಯವಾದ ದೇಹದಲ್ಲಿ ಅಭಿಮಾನವನ್ನು ಬಿಟ್ಟು, ಪರಮಾತ್ಮನಾದ ಶ್ರೀಮನ್ನಾರಾಯಣನೇ ಪರಮಧನವೆಂದು ತಿಳಿಯಬೇಕು.

ಇಲ್ಲಿಗೆ ಶ್ರೀ ವಿಷ್ಣು ಪುರಾಣದಲ್ಲಿ ಚತುರ್ಥಾಂಶದಲ್ಲಿ
ಇಪ್ಪತ್ತನಾಲ್ಕನೆಯ ಅಧ್ಯಾಯವೂ
ಚತುರ್ಥಾಂಶವೂ ಸಹ ಸಮಾಪ್ತವಾದುವು ಶ್ರೀರಸ್ತು

ಶ್ರಿಯೈ ನಮಃ

ಶ್ರೀ ಕೃಷ್ಣಾಯ ಪರಬ್ರಹ್ಮಣೇ ನಮಃ

ಶ್ರೀ ಹಯಗ್ರೀವಾಯ ನಮಃ

ಶ್ರೀಮದ್ರಾಮಾನುಜಾರ್ಯಾಯ ಯಜ್ವನೇ ದೇಶಿಕಾಯಮೇ ।
ಋಣತ್ರಯ ವಿಮುಕ್ತಾಯ ತಾತಪಾದಾಯಿತೇ ನಮಃ ॥

ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶವು ಪ್ರಾರಂಭವು

ಮೊದಲನೆಯ ಅಧ್ಯಾಯವು

ಮೈತ್ರೇಯರು ಪರಾಶರ ಬ್ರಹ್ಮರ್ಷಿಗಳನ್ನು ಕೇಳುತ್ತಾರೆ:

"ಓ ಭಗವಂತನೇ, ನಿನ್ನಿಂದ ಹೇಳಲ್ಪಟ್ಟ ರಾಜರ ವಂಶಗಳನ್ನೂ, ವಂಶಾನುಚರಿತವನ್ನೂ ಸಹ ಕೇಳಿದೆನು. ಯದುವಂಶದಲ್ಲಿ ಅವತರಿಸಿದ ಶ್ರೀಕೃಷ್ಣನ ಚರಿತ್ರೆಯನ್ನೂ ಆ ಮಹಾನುಭಾವನು ಮಾಡಿದ ಆಶ್ಚರ್ಯಕರವಾದ ಕೆಲಸಗಳನ್ನೂ ಸಹ ಕೇಳಲಪೇಕ್ಷೆಯುಳ್ಳ ನನಗೆ ಅಪ್ಪಣೆ ಕೊಡಿಸಬೇಕು" ಎಂದು ಪ್ರಾರ್ಥಿಸಲು ಪರಾಶರರು ಹೇಳುತ್ತಾರೆ: "ಓ ಮೈತ್ರೇಯನೇ! ಶ್ರೀಮನ್ನಾರಾಯಣಾಂಶದಿಂದ ಅವತರಿಸಿದ ಶ್ರೀಕೃಷ್ಣನ ಚರಿತ್ರೆಯನ್ನು ಹೇಳುತ್ತೇನೆ ಕೇಳು. ದೇವಕನ ಮಗಳಾದ ದೇವಕಿಯನ್ನು ವಸುದೇವನು ವಿವಾಹಮಾಡಿಕೊಂಡಕಾಲದಲ್ಲಿ, ಕಂಸನು ವಧೂವರರನ್ನು ರಥದಲ್ಲಿ ಕೂಡಿಸಿ, ಮಂಗಳವಾದ್ಯಗಳಿಂದ ಕೂಡಿದವನಾಗಿ ತಾನೇ ರಥವನ್ನು ನಡೆಸುತ್ತಾ ಬೀದಿಯಲ್ಲಿ ಮೆರವಣಿಗೆ ಬರುತ್ತಾ ಇದ್ದನು. ಆ ಸಮಯದಲ್ಲಿ ಅಂತರಿಕ್ಷದಲ್ಲಿ ಅಶರೀರವಾಣಿಯು ಕಂಸನನ್ನು ಕುರಿತು "ಮೂಢನಾದ ಕಂಸನೇ, ಈಗ ನಿನ್ನ ರಥದಲ್ಲಿ ಗಂಡನ ಜೊತೆಯಲ್ಲಿ ಕೂಡಿಸಿಕೊಂಡಿರುವ ದೇವಕಿಯ ಎಂಟನೆಯ ಗರ್ಭವು ನಿನ್ನ ಪ್ರಾಣಗಳನ್ನು ಅಪಹಾರಮಾಡುತ್ತದೆ" ಎಂದು ಹೇಳಿದ ಮಾತನ್ನು ಕೇಳಿದ ಕಂಸನು, ಕೋಪದಿಂದ ಕತ್ತಿಯನ್ನು ತೆಗೆದುಕೊಂಡು ದೇವಕಿಯ ತಲೆಯನ್ನು ಹಿಡಿದು ಸಂಹರಿಸಲುದ್ಯುಕ್ತಪಟ್ಟಕಾಲದಲ್ಲಿ, ವಸುದೇವನು ಕಂಸನಿಗೆ ಹೇಳುತ್ತಾನೆ: "ಮಹಾಭಾಗನಾದ ಕಂಸನೇ! ನೀನು

ಈ ದೇವಕಿಯನ್ನು ಸಂಹರಿಸಬೇಡ; ಇವಳಲ್ಲಿ ಹುಟ್ಟಿದ ಮಕ್ಕಳನ್ನು ನಿನಗೆ ಅರ್ಪಿಸುತ್ತೇನೆ. ಆದುದರಿಂದ ಸ್ತ್ರೀಹತ್ಯಪಾತಕವನ್ನು ಹೊಂದಬೇಡ" ಎಂದು ಸಮಾಧಾನವನ್ನು ಹೇಳಲು, ಕಂಸನು ವಸುದೇವನು ಹೇಳಿದ ಮಾತಿಗೆ ಅನುಮೋದಿಸಿ, ದೇವಕಿಯನ್ನು ಬಿಟ್ಟನು. ಇಷ್ಟರಲ್ಲಿಯೇ ಬಹಳವಾದ ಭಾರದಿಂದ ಪೀಡಿತಳಾದ ಭೂದೇವಿಯು ಮೇರುಪರ್ವತದಲ್ಲಿರತಕ್ಕ ದೇವಸಭೆಯನ್ನುಪ್ರವೇಶಿಸಿ, ಬ್ರಹ್ಮೇಂದ್ರಾದಿ ದೇವತೆಗಳಿಗೆ ನಮಸ್ಕರಿಸಿ, ಬ್ರಹ್ಮನನ್ನು ಕುರಿತು ಹೇಳುತ್ತಾಳೆ. "ಚಿನ್ನಕ್ಕೆ ಅಗ್ನಿಯು ಗುರುವು. ಗೋವುಗಳಿಗೆ ಸೂರ್ಯನು ಗುರುವು. ಪ್ರಜಾಪತಿಗೆ ಪತಿಯಾದ ಶ್ರೀಮನ್ನಾರಾಯಣನು ಎಲ್ಲರಿಗೂ ಮೊದಲನೆಯವನಾದ ಗುರುವು. ಕಲಾಕಾಷ್ಟನಿಮೇಷಾತ್ಮಕನಾದವನು. ಓ ಸುರೋತ್ತಮರೇ! ನೀವು ಪರಮಾತ್ಮನ ಅಂಶಭೂತರಾದವರು. ಆದಿತ್ಯ, ಮರುತ್, ಸಾಧ್ಯ, ವಸು, ರುದ್ರ, ಅಶ್ವಿನೀ ದೇವತೆಗಳು, ಅಗ್ನಿ, ಪಿತೃ ಇವರುಗಳೆಲ್ಲರೂ ಮಹಾತ್ಮನಾದ ವಿಷ್ಣುವಿನ ಅಂಶ ಭೂತರಾಗಿ ಆತನ ಶರೀರಭೂತರು. ಹಗಲು, ನಕ್ಷತ್ರ, ಗಗನ, ಅಗ್ನಿ, ಜಲ, ವಾಯು, ನಾನು, ಶಬ್ದ ಇವುಗಳೆಲ್ಲವೂ ಹಾಗೆಯೇ ಆದುದರಿಂದ ಈ ಜಗತ್ತೆಲ್ಲಾ ವಿಷ್ಣುಮಯವಾದುದು. ಕಾಲನೇಮಿಯೇ ಮೊದಲಾದ ದೈತ್ಯರು ಭೂಲೋಕವ ನ್ನಾಕ್ರಮಿಸಿ, ಅಹೋರಾತ್ರಿ ಪ್ರಜೆಗಳನ್ನು ಬಾಧಿಸುತ್ತಿರುವರು. ಪೂರ್ವದಲ್ಲಿ ಶ್ರೀಮಹಾವಿಷ್ಣುವಿನಿಂದ ಹತನಾದ ಕಾಲನೇಮಿಯು ಈಗ ಭೂಲೋಕದಲ್ಲಿ ಕಂಸನಾಗಿ ಹುಟ್ಟಿರುವನು. ಅರಿಷ್ಟ, ಪ್ರಲಂಬ, ಸುಂದರೇ ಮೊದಲಾದ ದೈತ್ಯ ರೆಲ್ಲರೂ ಭೂಲೋಕದಲ್ಲಿ ಧೇನುಕ, ನರಕ, ಬಾಣರೇ ಮುಂತಾಗಿ ಹುಟ್ಟಿರುವರು. ದುರಾತ್ಮರ ಸಂಖ್ಯೆಯನ್ನು ಗಣನೆಮಾಡುವುದಕ್ಕಾಗುವುದಿಲ್ಲ. ಇವರು ಅನೇಕ ಅಕ್ಷೌಹಿಣೀ ಸಂಖ್ಯಾತರಾಗಿರುವರು. ಮಹಾಬಲಶಾಲಿಗಳಾದ ದೈತ್ಯರುಗಳ ಭಾರ ವನ್ನು ಧರಿಸಲು ಅಶಕ್ತಳಾಗಿರುವೆನು, ಆದುದರಿಂದ ನೀವು ಭೂಭಾರವನ್ನು ಪರಿ ಹಾರಮಾಡಬೇಕೆಂದು" ಪ್ರಾರ್ಥಿಸಲು; ಬ್ರಹ್ಮಾದಿಗಳು ಧರಣೀ ವಾಕ್ಯವನ್ನು ಕೇಳಿ, ಬ್ರಹ್ಮನು ದೇವತೆಗಳನ್ನು ಕುರಿತು ಹೇಳುತ್ತಾನೆ: "ಎಲೈ ದೇವತೆಗಳಿರಾ! ನಾನೂ ಮತ್ತು ರುದ್ರನೂ ನೀವುಗಳೂ ಸಹ ಶ್ರೀಮನ್ನಾರಾಯಣನನ್ನೇ ಆತ್ಮ ವಾಗಿ ಉಳ್ಳವರಾದುದರಿಂದ, ಭೂಭಾರಹರಣಾರ್ಥವಾಗಿ ಕ್ಷೀರ ಸಮುದ್ರಕ್ಕೆ ಹೋಗಿ ಶ್ರೀಮನ್ನಾರಾಯಣನನ್ನುಪ್ರಾರ್ಥಿಸಿದರೆ, ಭಗವಂತನು ಭೂಮಿಯಲ್ಲಿ ಅವ ತರಿಸಿ ಧರ್ಮಸಂಸ್ಥಾಪನೆಯನ್ನು ಮಾಡುತ್ತಾನೆ" ಎಂದು ಬ್ರಹ್ಮನು ಹೇಳಿ, ದೇವತೆ ಗಳಿಂದ ಕೂಡಿ ಕ್ಷೀರ ಸಮುದ್ರಕ್ಕೆ ಬಂದು ಗರುಡಧ್ವಜನಾದ ಶ್ರೀಮನ್ನಾರಾಯಣ ನನ್ನು ಪ್ರಾರ್ಥಿಸುತ್ತಾರೆ. ಭಗವಂತನಾದ ವಾಸುದೇವನೇ! ನೀನು ವಿದ್ಯಾದ್ವ ಯಾತ್ಮಕನಾದವನು, ಅಂದರೆ ಶಬ್ದ ಜನ್ಯ ಜ್ಞಾನ, ವಿವೇಕಜನ್ಯ ಜ್ಞಾನಮಯ

ನಾದವನು. ವೇದಗಳಿಂದಲೂ ಅಪರಿಚ್ಛೇದ್ಯನಾದವನು. ಪರಾತ್ಪರರೂಪಾತ್ಮಕ ನಾದ ಬ್ರಹ್ಮದ್ವಯಾತ್ಮಕನಾದವನು, ಶಬ್ದ ಬ್ರಹ್ಮ ಅಂದರೆ, ಯಜ್ಞಾದಿಗಳಿಂದ ಭಗವಂತನಾದ ಶ್ರೀಮನ್ನಾರಾಯಣನನ್ನು ಆರಾಧಿಸುವುದು; ಪರಬ್ರಹ್ಮವೆಂದರೆ ಕರ್ಮಾನುಷ್ಠಾನದಿಂದ ಮೋಕ್ಷವನ್ನು ಹೊಂದುವುದು. ಈ ರೀತಿ ಮೂರ್ತ, ಅಮೂರ್ತಾತ್ಮಕವಾದ ಸ್ಥೂಲ ಸೂಕ್ಷ್ಮರೂಪಿಯಾದ ಬ್ರಹ್ಮದ್ವಯಾತ್ಮಕನಾದ ವನು ಮತ್ತೂ ಶಬ್ದ ಬ್ರಹ್ಮವೆಂದರೆ, ಸರ್ವಜ್ಞನಾದವನು; ಸರ್ವವೇದಿಯಾದ ವನು ಎಂಬ ಜ್ಞಾನವೇ ಶಬ್ದ ಬ್ರಹ್ಮವು. ತಪೋಮೂಲ ಜ್ಞಾಪ್ಯನಾದವನೇ ಪರಬ್ರಹ್ಮನು. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಶಿಕ್ಷಾ, ಕಲ್ಪ, ನಿರುಕ್ತ, ಛಂದ, ಜ್ಯೋತಿಷವೇ ಮೊದಲಾದ ಸಕಲ ಶಾಸ್ತ್ರಸ್ವರೂಪಿ ಯಾದವನು. ಉಭಯಾತ್ಮ ವಿಷಯವನ್ನು ವಿಚಾರಮಾಡುವ ಉಪನಿಷತ್ತುಗಳೂ ಸಹ ನೀನೇ. ಉಭಯಾತ್ಮವೆಂದರೆ ಎರಡು ಆತ್ಮಗಳು, ಮೊದಲನೇ ಆತ್ಮವು, ಜೀವಾತ್ಮ ಪರಮಾತ್ಮಗಳು; ಎರಡನೆಯ ಆತ್ಮವು, ಇವರುಗಳ ಸ್ಥೂಲಸೂಕ್ಷ್ಮಾದಿ ಶರೀರಗಳು; ಇವುಗಳಿಂದ ಅವ್ಯಕ್ತನಾದವನು, ವ್ಯಕ್ತನಾದವನು ಇತ್ಯಾದಿ ಚರ್ಚೆ ಗಳಿಂದ ಕೂಡಿದ ಉಪನಿಷತ್ತುಗಳು ನೀನು ಬಾಹ್ಯೇಂದ್ರಿಯಗಳಿಗೆ ಅಗೋಚರನು, ವಾಚಾಮಗೋಚರನು, ಮನಸ್ಸಿಗೂ ಅಗೋಚರನು, ದೇವ ಮನುಷ್ಯಾದಿನಾಮ ರಹಿತನಾದವನು, ಪೀತ, ಶುಕ್ಲಾದಿವರ್ಣರಹಿತನಾದವನು, ಕ್ಲೇಶಕರ್ಮಾದಿರಹಿತ ನಾದವನು, ಮುಕ್ತಸ್ವರೂಪನಾದವನು. ಕಿವಿಯಿಲ್ಲದೇ ಕೇಳತಕ್ಕವನು. ಚಕ್ಷು ಸ್ವರೂಪರಹಿತನಾಗಿ ನೋಡುವನು. ಸ್ವೇಚ್ಛೆಯಿಂದ ಅನೇಕ ರೂಪುಗಳನ್ನು ಸ್ವೀಕರಿ ಸಿರುವನು. ತಲೆಕಾಲುಗಳಿಲ್ಲದೆ ನಡೆಯುವವನು, ಎಲ್ಲವನ್ನು ಎಲ್ಲರಿಂದಲೂ ತಿಳಿ ಯದವನು, ಜೀವನಿಗಿಂತಲೂ ಸೂಕ್ಷ್ಮನಾಗುವ ಶಕ್ತಿಯುಳ್ಳವನು, ಅಸತ್ಸ್ವರೂಪ ನಾದವನು, ಅಂದರೆ, ದೃಶ್ಯರೂಪರಹಿತನಾದವನು, ನಿನ್ನನ್ನು ನೋಡತಕ್ಕವರಿಗೆ ಅಜ್ಞಾನವನ್ನು ಪರಿಹಾರಮಾಡತಕ್ಕವನು, ಸಕಲವನ್ನೂ ಧರಿಸತಕ್ಕವನು ನೀನೇ ಹೊರತು ಮತ್ತೊಬ್ಬನಿರುವನೆ? ನೀನು ವರೇಣ್ಯರೂಪನು; ಲೋಕಗಳಿಗೆ ಸಂರಕ್ಷಕನು; ಜಗತ್ತಿಗೆ ಆಧಾರನು; ನಿನ್ನಲ್ಲಿರುವ ಪ್ರಕೃತಿಗೆ ಪ್ರಧಾನಪುರುಷ ನಾದವನು; ಒಂದೇ ಅಗ್ನಿಯು, ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ, ಔಪಾಸನವೆಂಬುದಾಗಿ ನಾಲ್ಕು ಭಾಗವಾಗಿ ಲೋಕಕ್ಕೆ ತೇಜಸ್ಸನ್ನುಂಟುಮಾಡು ವವನು; ಅಥವಾ ವೈದ್ಯುತ, ಜಾಠರ, ನಿರ್ಮಂಥ್ಯ, ಬಾಡಬವೆಂಬುದಾಗಿ ನಾಲ್ಕು ವಿಧವಾದ ಅಗ್ನಿಸ್ವರೂಪನಾದವನು; ತ್ರಿವಿಕ್ರಮಾವತಾರದಿಂದ ವೇದಾನುಸಾರ ಮೂರು ಪದವುಳ್ಳವನು; ಒಂದು ಅಗ್ನಿಯು ನಾನಾವಿಧವಾಗಿ ಯಾವ ಪ್ರಕಾರ ವ್ಯಾಪಿಸಿರುವುದೋ ಅದೇ ಪ್ರಕಾರ ನೀನು ಒಂದೇ ರೂಪಿನಿಂದ ಸಕಲ ಜಗತ್ತನ್ನು

ಪೋಷಿಸುತ್ತಿರುವ ಪರಮಾತ್ಮನು. ಓ, ಸ್ವಾಮಿಯೇ! ನಿತ್ಯಸೂರಿಗಳು ಜ್ಞಾನ ದೃಶ್ಯನಾದ ಅಪ್ರಾಕೃತವಾದ ಪರಮಪದವನ್ನು ನೋಡುತ್ತಾರೆ. ನಿನ್ನ ಪರಮಪದ ಹೊರತಾಗಿ ಬೇರೊಂದು ನಿತ್ಯವಾದ ಸ್ಥಾನವಿರುವುದಿಲ್ಲ. ಓ, ನಾರಾಯಣನೇ! ಸರ್ವಾಧಾರನೇ, ಅಕ್ಷಯನಾಗಿಯೂ, ಸರ್ವೇಶ್ವರನಾಗಿಯೂ, ತೇಜಸ್ಸುಗಳಿಗೆ ಪ್ರಧಾನನಾಗಿಯೂ ಸಹ ಇರುತ್ತೀ. ಕರ್ಮಾತೀತನೇ ಅಶರಣ್ಯಭಾವನೇ ತ್ರಿಪಾದ್ವಿಭೂತಿಸ್ಥಾನನೇ, ಪುರುಷೋತ್ತಮನೇ, ನಿನಗೆ ನಮಸ್ಕಾರವು. ನೀನು ಶರೀರವನ್ನು ಸ್ವೀಕರಿಸುವುದು ಕೇವಲ ಧರ್ಮತ್ರಾಣಾರ್ಥವಾಗಿಯೇ ಹೊರತು ಸುಖದುಃಖಮಿಶ್ರವಾದ ನಾರಕಫಲಾನುಭವಾರ್ಥವಾಗಿಯೂ ಅಲ್ಲ; ಪುಣ್ಯಫಲಮಿಶ್ರವಾದ ದೇವಭೋಗಾರ್ಥವಾಗಿಯೂ ಅಲ್ಲ; ಧರ್ಮಾಧರ್ಮಮಿಶ್ರವಾದ ಕರ್ಮವಶ್ಯತ್ವಾದಿ ಶರೀರಗ್ರಹಣವೂ ಅಲ್ಲವು" ಎಂದು ಬ್ರಹ್ಮನು ಸ್ತೋತ್ರ ಮಾಡಲು; ಶ್ರೀಮನ್ನಾರಾಯಣನು ಪ್ರೀತಮನಸ್ಕನಾಗಿ, ವಿಶ್ವರೂಪವನ್ನು ತೋರಿಸುತ್ತಾ, ಬ್ರಹ್ಮದೇವನಿಗೆ ಪ್ರತ್ಯಕ್ಷನಾಗಿ, ಬ್ರಹ್ಮನನ್ನು ಕುರಿತು, "ಓ, ಬ್ರಹ್ಮನೇ! ದೇವತೆಗಳಿಂದ ಕೂಡಿಬಂದು ನನ್ನನ್ನು ಸ್ತೋತ್ರಮಾಡಿದುದಕ್ಕಾಗಿ ನಾನು ಸುಪ್ರೀತನಾಗಿರುವೆನು. ನಿನಗೆ ಏನು ಬೇಕೆಂದು" ಕೇಳಲು; "ಬ್ರಹ್ಮದೇವನು ಶ್ರೀಮನ್ನಾರಾಯಣನ ವಿಶ್ವರೂಪವನ್ನು ನೋಡಿ, ಸಹಸ್ರಬಾಹುವೇ, ಸಹಸ್ರವಕ್ತ್ರನೇ, ಜಗತ್ಸೃಷ್ಟಿಸ್ಥಿತಿನಾಶಕಾರಕನೇ, ಅಪ್ರಮೇಯನೇ, ನಿನಗೆ ನಮಸ್ಕಾರವು. ಪುನಃ ಪುನಃ ನಮಸ್ಕಾರವು. ನೀನು ಪ್ರಸನ್ನನಾಗು. ಭೂಮಿಯಲ್ಲಿ ಉತ್ಪನ್ನರಾದ ದೈತ್ಯರಿಂದ ಪೀಡಿತಳಾದ ಈ ಭೂಮಿದೇವಿಯು ಭಾರವನ್ನು ಸಹಿಸಲಾರದೆ, ಭೂಭಾರಹರಣಾರ್ಥವಾಗಿ ನಿನ್ನನ್ನು ಪ್ರಾರ್ಥಿಸುತ್ತಾಳೆಂದು" ಬ್ರಹ್ಮನು ಹೇಳಲು, ಭಗವಂತನು ತನ್ನ ದೇಹದಲ್ಲಿ ಶುಕ್ಲ, ಕೃಷ್ಣವಾದ ಎರಡು ಕೇಶಗಳನ್ನು ಕಿತ್ತು, ಬ್ರಹ್ಮದೇವನೇ, ಈ ನನ್ನ ಎರಡು ಕೇಶಗಳು ಭೂಲೋಕದಲ್ಲಿ ಹುಟ್ಟಿ, ಭೂದೇವಿಯ ಕ್ಲೇಶವನ್ನು ನಾಶಮಾಡುವುದು. ಸಕಲರಾದ ದೇವತೆಗಳು ಅವರವರ ಅಂಶದಿಂದ ಭೂಮಿಯಲ್ಲಿ ಅವತರಿಸಿ, ಪೂರ್ವೋತ್ಪನ್ನರಾದ ದೈತ್ಯರುಗಳಲ್ಲಿ ಯುದ್ಧ ಮಾಡಲಿ, ನನ್ನ ದೃಷ್ಟಿಪಾತದಿಂದ ದೈತ್ಯರೆಲ್ಲರೂ ನಾಶವಾಗುವರು. ವಸುದೇವನ ಪತ್ನಿಯಾದ ದೇವಕಿಯ ಎಂಟನೆಯ ಗರ್ಭದಲ್ಲಿ ಹುಟ್ಟಿ, ಕಾಲನೇಮಿಯಾದ ಕಂಸನನ್ನು ಸಂಹಾರಮಾಡುತ್ತೇನೆಂದು ಹೇಳಿ, ಅಂತರ್ಧಾನನಾದನು. ಬ್ರಹ್ಮಾದಿಗಳು ಶ್ರೀಮನ್ನಾರಾಯಣನಿಗೆ ನಮಸ್ಕಾರಮಾಡಿ, ತಮ್ಮತಮ್ಮ ಸ್ಥಾನಗಳಿಗೆ ಬಂದು, ಅಂಶದಿಂದ ಭೂಮಿಯಲ್ಲಿ ಅವತರಿಸಿದರು. ಇಷ್ಟರಲ್ಲಿಯೇ ನಾರದ ಭಗವಂತನು ಕಂಸನ ಬಳಿಗೆ ಬಂದು ದೇವಕಿಯ ಎಂಟನೆಯ ಗರ್ಭವು ನಿನಗೆ ಮರಣವನ್ನುಂಟುಮಾಡುವುದೆಂದು ಹೇಳಲು, ಕಂಸನು ನಾರದನು ಹೇಳಿದ

ಮಾತನ್ನು ಕೇಳಿ, ಕುಪಿತನಾಗಿ, ದೇವಕೀವಸುದೇವರನ್ನು ತನ್ನ ಗೃಹದಲ್ಲಿ ಗೋಪ್ಯವಾಗಿಟ್ಟಿದ್ದನು. ವಸುದೇವನು ಕಂಸನಿಗೆ ವಾಗ್ದಾನಮಾಡಿದ ಪ್ರಕಾರ ಹುಟ್ಟಿದ ಪುತ್ರರನ್ನು ಅರ್ಪಿಸಿದನು. ಷಡ್ಗರ್ಭಸಂಜ್ಞಿಕರಾದ ಹಿರಣ್ಯಕಶಿಪುವಿನ ಆರುಜನ ಮಕ್ಕಳುಗಳನ್ನು ಶ್ರೀಮನ್ನಾರಾಯಣನಿಂದ ಪ್ರೇರಿತಳಾದ ಯೋಗನಿದ್ರೆಯು ಕ್ರಮವಾಗಿ ದೇವಕಿಯ ಗರ್ಭವನ್ನು ಹೊಂದಿಸಿದಳು; ಆರುಜನ ಪುತ್ರರನ್ನೂ ಕಂಸನು ನಾಶಮಾಡಿದನು; ಶೇಷಾಂಶವಾದ ದೇವಕಿಯ ಏಳನೆಯ ಗರ್ಭವನ್ನು ಯೋಗನಿದ್ರೆಯು ತೆಗೆದುಕೊಂಡು ಹೋಗಿ, ನಂದಗೋಕುಲದಲ್ಲಿ ವಸುದೇವನ ಪತ್ನಿಯಾದ ರೋಹಿಣಿಯ ಉದರದಲ್ಲಿರಿಸಿದಳು. ಆಗ ದೇವಕಿಗೆ ಗರ್ಭಸ್ರಾವವಾಯಿತೆಂದು ಲೋಕದಲ್ಲಿ ಪ್ರತೀತಿಯುಂಟಾಯಿತು. ಗರ್ಭವನ್ನು ಸಂಕರ್ಷಣೆಮಾಡಿದುದರಿಂದ ಸಂಕರ್ಷಣನೆಂದು ಹೆಸರುಂಟಾಯಿತು. ಅನಂತರ ಭಗವದಂಶವು ದೇವಕಿಯ ಎಂಟನೆಯ ಗರ್ಭವನ್ನು ಹೊಂದಿತು. ಆಗ ಭಗವಂತನು ಯೋಗನಿದ್ರೆಯನ್ನು ಕುರಿತು ಹೇಳುತ್ತಾನೆ. “ಓ ನಿದ್ರೆಯೇ! ನೀನು ಯಶೋದಾ ಗರ್ಭವನ್ನು ಹೊಂದು. ನಾನು ವರ್ಷಾಕಾಲದಲ್ಲಿ ಶ್ರಾವಣಮಾಸ ಕೃಷ್ಣಾಷ್ಟಮಿಯಲ್ಲಿ, ಅರ್ಧರಾತ್ರಿಯಲ್ಲಿ ಹುಟ್ಟುವೆನು. ನೀನು ಆ ನವಮಿಯಲ್ಲಿ, ಅಂದರೆ ರಾತ್ರಿ ಶೇಷದಲ್ಲಿಯೇ ಹುಟ್ಟುವೆ. ನನ್ನ ಶಕ್ತಿಯಿಂದ ಪ್ರೇರಿತನಾದ ವಸುದೇವನು ನನ್ನನ್ನು ಯಶೋದಾಶಯನದಲ್ಲಿರಿಸಿ, ನಿನ್ನನ್ನು ತೆಗೆದುಕೊಂಡು ಬರುವನು. ಆಗ ಕಂಸನು ನಿನ್ನನ್ನು ದೊಡ್ಡದಾದ ಬಂಡೆಯಮೇಲೆ ಹಾಕುವ ವೇಳೆಯಲ್ಲಿ ನೀನು ಅಂತರಿಕ್ಷಗತಳಾಗುವೆ. ಆಗ ಸಹಸ್ರಾಕ್ಷನು ನನ್ನ ಗೌರವದಿಂದ ನಿನಗೆ ನಮಸ್ಕಾರಮಾಡಿ, ತಂಗಿಯ ಭಾವವನ್ನು ಹೊಂದುವನು. ಅಲ್ಲದೆ ನೀನು ಶುಂಭ ನಿಶುಂಭರೇ ಮೊದಲಾದ ದೈತ್ಯರನ್ನು ಸಂಹಾರಮಾಡಿ, ಅನೇಕ ಸ್ಥಳಗಳಲ್ಲಿ ಭೂತಿ, ಸನ್ನತಿ, ಕ್ಷಾಂತಿ, ಕಾಂತಿ, ಪೃಥಿವೀ, ಲಜ್ಜಾ, ಪುಷ್ಟಿ, ಉಷಾ, ದುರ್ಗಾ, ವೇದಗರ್ಭಾ, ಅಂಬಿಕಾ, ಭದ್ರಾ, ಭದ್ರಕಾಳಿ, ಕ್ಷೇಮದಾ, ಭಾಗ್ಯದಾ ಇತ್ಯಾದಿ ಹೆಸರುಗಳನ್ನು ಹೊಂದಿ ಪೂಜಿಸಲ್ಪಡುವೆ. ಈ ನಿನ್ನ ಹೆಸರುಗಳನ್ನು ಯಾರು ಸಾಯಂಪ್ರಾತಃ ಉಚ್ಚರಿಸುವರೋ ಅವರಿಗೆ ನನ್ನ ಅನುಗ್ರಹವುಂಟಾಗುವುದು. ದೇವತೆಗಳೂ ಸಹ ನಿನ್ನನ್ನು ಭಕ್ಷ್ಯಭೋಜ್ಯಾದಿಗಳಿಂದ ಆರಾಧಿಸುವರು ಎಂಬುದಾಗಿ ಶ್ರೀಮನ್ನಾರಾಯಣನು ಯೋಗನಿದ್ರೆಗೆ ಆಜ್ಞಾಪಿಸಿದನು.”

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಮೊದಲನೆಯ ಅಧ್ಯಾಯವು ಸಮಾಪ್ತಃ

ಎರಡನೆಯ ಅಧ್ಯಾಯವು

"ಯೋಗನಿದ್ರೆಯು ಭಗವದಾಜ್ಞಾಪ್ರಕಾರ ಪಾತಾಳಲೋಕದಲ್ಲಿದ್ದ ಹಿರಣ್ಯ ಕಶಿಪುವಿನ ಆರುಜನ ಪುತ್ರರನ್ನು ದೇವಕೀಗರ್ಭವನ್ನು ಹೊಂದಿಸಿದನಂತರ, ಏಳನೆಯ ಗರ್ಭವನ್ನು ರೋಹಿಣೀಜಠರದಲ್ಲಿರಿಸಿದಳು. ಅನಂತರ ಭಗವಂತನು ದೇವಕೀ ಉದರವನ್ನು ಪ್ರವೇಶಿಸಿದ ದಿವಸವೇ ಮಾಯೆಯು, ಯಶೋದಾಜಠರ ವನ್ನು ಪ್ರವೇಶಿಸಿದಳು. ಭಗವಂತನು ಗರ್ಭಸ್ಥನಾದನೆಂದು ದೇವತೆಗಳು ಸಂತೋಷ ಪಟ್ಟರು. ಗ್ರಹಗಣಗಳು ನಿರ್ಮಲವಾಗಿ ಸಂಚರಿಸಿದವು. ಋತುಗಳು ಶುಭಕರ ಗಳಾದವು. ದೇವಕಿಯು ಮಹಾತೇಜಸ್ಸಿನಿಂದ ಕೂಡಿದವಳಾದಳು. ಈ ರೀತಿ ತೇಜೋವಿಶಿಷ್ಟಳಾದ ದೇವಕಿಯನ್ನು ನೋಡಲು, ಯಾರೂ ಸಮರ್ಥರಾಗಲಿಲ್ಲ. ಸ್ತ್ರೀಪುರುಷರಿಗೆ ಅದೃಷ್ಟಳಾದ ದೇವಕಿಯನ್ನು ದೇವತೆಗಳು ನೋಡಿ, ಸ್ತುತಿಸಿದರು. "ಓ, ದೇವಕಿ! ನೀನು ಶ್ರೀ ಮಹಾವಿಷ್ಣುವನ್ನುದರದಲ್ಲಿ ಧರಿಸಿರುವುದರಿಂದ ಪ್ರಕೃತಿಯಾಗಿರುವೆ; ಬ್ರಹ್ಮಗರ್ಭವುಳ್ಳವಳು; ಜಗತ್ಸೃಷ್ಟಿಕರ್ತನಿಗೆ ಸಂಬಂಧ ವಾದ ವೇದಗರ್ಭವಾದ ವಾಣಿಯಾದವಳು; ಸೃಷ್ಟಿಕರ್ತರೂಪವನ್ನು ಗರ್ಭದಲ್ಲಿ ಧರಿಸಿದವಳು; ಸರ್ವಕ್ಕೂ ಬೀಜಭೂತಳಾದವಳು; ಯಜ್ಞಗರ್ಭವಾದ ವೇದ ಸ್ವರೂಪಿಯಾದವಳು; ಫಲಗರ್ಭವುಳ್ಳವಳು; ನೀನು ದೇವಗರ್ಭಳಾದ ಅದಿತಿಯು; ದೈತ್ಯಗರ್ಭಳಾದ ದಿತಿಯೂ ಸಹ ನೀನೇ; ಮತ್ತೂ ಸಂಧ್ಯಾಕಾಂತಿ ಯುಕ್ತವಾದ ವಾಸರಗರ್ಭವುಳ್ಳವಳು; ಜ್ಞಾನಗರ್ಭವುಳ್ಳ ಸನ್ನತಿಯು; ನಯ ಗರ್ಭಳಾದ ನೀತಿಯಾದವಳು; ಕಾಮಗರ್ಭಳಾದ ಇಚ್ಛೆಯಾದವಳು; ಸಂತೋಷ ಗರ್ಭಳಾದ ತುಷ್ಟಿಯಾದವಳು; ಗ್ರಹನಕ್ಷತ್ರಗರ್ಭಳಾದ ಅಂತರಿಕ್ಷರೂಪಿಯಾದ ವಳು; ಓ, ದೇವಿ! ಈ ರೀತಿ ಸಕಲವಿಭೂತಿಯಿಂದ ನೀನು ಕೂಡಿದವಳು; ಸಮುದ್ರ, ಪರ್ವತ, ನದೀ, ದ್ವೀಪ, ವನ, ಪಟ್ಟಣ ಇವುಗಳೇ ಆಭರಣವಾಗಿ ಉಳ್ಳವಳು; ಸಮಸ್ತವಾದ ಭೂಮಂಡಲವನ್ನೂ, ಸಮಸ್ತ ಲೋಕಗಳನ್ನೂ ಸಹ ಧರಿಸಿರುವವಳು; ದೇವದಾನವ ಗಂಧರ್ವರೆಲ್ಲರೂ ನಿನ್ನ ಗರ್ಭದಲ್ಲಿರುವವರು; ರೂಪಕರ್ಮಗಳಿಂದ ಅಪರಿಚ್ಛೇದ್ಯನಾದ ಸರ್ವಾತ್ಮಕನಾದ ಸರ್ವಭಾವನಾದ ಶ್ರೀ ಮಹಾವಿಷ್ಣುವು ನಿನ್ನ ಗರ್ಭದಲ್ಲಿರುವನು; ನೀನು ಸ್ವಾಹಾ, ಸ್ವಧಾ, ವಿದ್ಯಾ, ಅಮೃತರೂಪಿಯಾದವಳು; ನೀನು ಸರ್ವಲೋಕಸಂರಕ್ಷಣಾರ್ಥವಾಗಿ ಭೂಮಿಯಲ್ಲಿ ಅವತರಿಸಿದವಳು. ಓ, ದೇವಿ! ನೀನು ಪ್ರಸನ್ನಳಾಗಿ ಲೋಕಕ್ಕೆ ಮಂಗಳವನ್ನುಂಟು ಮಾಡು. ಸಕಲ ಜಗದ್ಧಾರಕನಾದ ಸರ್ವೇಶ್ವರನನ್ನು ಪ್ರೀತಿಯಿಂದ ಧರಿಸಿರುವೆ."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಎರಡನೆಯ ಅಧ್ಯಾಯವು ಸಮಾಪ್ತಃ

ಮೂರನೆಯ ಅಧ್ಯಾಯವು

"ದೇವಕಿಯು ದೇವತೆಗಳಿಂದ ಸ್ತುತಿಸಲ್ಪಟ್ಟವಳಾಗಿ, ಗರ್ಭದಿಂದ ಲೋಕ ಸಂರಕ್ಷಣಾರ್ಥವಾಗಿ ಪುಂಡರೀಕಾಕ್ಷನನ್ನು ಧರಿಸಿ, ಅಚ್ಯುತನೆಂಬ ಸೂರ್ಯನಿಂದ ಜಗತ್ಪದ್ಮವನ್ನು ವಿಕಾಸಮಾಡಿದಳು. ಭಗವಂತನು ಅವತರಿಸಿದ ದಿವಸವು ಸಮಸ್ತ ದಿಕ್ಕುಗಳನ್ನೂ ಸಂತೋಷಪಡಿಸಿತು. ಚಂದ್ರನು ಕನ್ನೈದಿಲೆಗಳನ್ನು ಪ್ರಕಾಶಪಡಿಸು ವಂತೆ ಜಗತ್ತನ್ನು ಭಗವಂತನು ಪ್ರಕಾಶಪಡಿಸಿದನು. ಭಗವಂತನು ಅವತರಿಸಿದುದ ರಿಂದ ಸತ್ಪುರುಷರು ಸಂತೋಷವನ್ನು ಹೊಂದಿದರು. ಬಿರುಗಾಳಿಯು ಮಂದ ಮಾರುತವಾಯಿತು; ನದಿಗಳು ನಿರ್ಮಲಗಳಾದವು; ಸಮುದ್ರಗಳು ಶಬ್ದದಿಂದ ಮನೋಹರವಾದ ವಾದ್ಯವನ್ನು ಮಾಡಿದವು; ಗಂಧರ್ವರು ಗಾನಮಾಡಿದರು; ಅಪ್ಸರಸ್ತ್ರೀಯರು ನರ್ತನಮಾಡಿದರು; ದೇವತೆಗಳು ಪುಷ್ಪವೃಷ್ಟಿಯನ್ನು ಕರೆದರು; ತ್ರೇತಾಗ್ನಿಗಳು ಜ್ವಲಿಸಿದವು; ಮೇಘಗಳು ಮೆಲ್ಲಗೆ ಗರ್ಜನೆಮಾಡಿದವು. ಈ ಪ್ರಕಾರ ಮಂಗಳಕರವಾದ ಕಾಲದಲ್ಲಿ ಶ್ರೀಮನ್ನಾರಾಯಣನು ಅರ್ಧರಾತ್ರಿಯಲ್ಲಿ ದೇವಕಿಯ ಉದರದಲ್ಲಿ ಅವತರಿಸಿದನು. ಆಗ ವಸುದೇವನು, ಕಮಲಾಕ್ಷನಾದ, ಚತುರ್ಬಾಹುಯುಕ್ತನಾದ, ಶ್ರೀವತ್ಸವಕ್ಷಸನಾದ, ಭಗವಂತನಾದ, ಶ್ರೀಮನ್ನಾರಾ ಯಣನನ್ನು ನೋಡಿ ಪರಮಾನಂದಭರಿತನಾಗಿ, ಕಂಸನ ಭಯದಿಂದ ಪರಮಾತ್ಮ ನನ್ನು ಸ್ತೋತ್ರಮಾಡುತ್ತಾನೆ: "ಓ, ದೇವದೇವೇಶನೇ! ಶಂಖಚಕ್ರಗದಾಧರನೇ, ನೀನು ಪ್ರಸನ್ನನಾಗಿ ಈ ರೂಪವನ್ನು ಉಪಸಂಹರಿಸು. ನೀನು ನನ್ನ ಮನೆಯಲ್ಲಿ ಹುಟ್ಟಿದುದರಿಂದ ಕಂಸನು ನನ್ನನ್ನು ಸಂಹರಿಸುವನು. ಕಂಸನಿಂದ ನಿನಗೆ ಭಯ ವಿಲ್ಲದಿದ್ದರೂ ನನ್ನ ಕ್ಷೇಮಾರ್ಥವಾಗಿ ಈ ಅಮೋಘವಾದ ರೂಪವನ್ನು ಮರೆಸಿಕೋ" ಈ ರೀತಿ ವಸುದೇವನು ಪ್ರಾರ್ಥಿಸಿದನಂತರ ದೇವಕಿಯು ಭಗವಂತನನ್ನು ಕುರಿತು ಹೇಳುತ್ತಾಳೆ: "ಓ, ಸ್ವಾಮಿ! ಅನಂತರೂಪಿಯಾಗಿಯೂ, ಅಖಿಲವಿಶ್ವರೂಪ ನಾಗಿಯೂ, ನಿಖಿಲಜಗದ್ಧಾರಕನಾಗಿಯೂ ಇರುವ ನೀನು ಪ್ರಸನ್ನನಾಗಿ ಪ್ರಾಕೃತ ಬಾಲರೂಪನಾಗು. ಚತುರ್ಭುಜಾದಿಗಳಿಂದ ಕೂಡಿದ ಈ ರೂಪವನ್ನು ಉಪಸಂಹಾರಮಾಡು. ಅಂದರೆ, ಕಂಸ ಸಂಹಾರಾಂತವಾಗಿ, ಈ ರೂಪವನ್ನು ಮುಚ್ಚು. (ನರಕ, ಶಿಶುಪಾಲ, ಪೌಂಡ್ರಕರೇ ಮೊದಲಾದವರನ್ನು ಸಂಹಾರ ಮಾಡತಕ್ಕ ಕಾಲದಲ್ಲಿ ಚತುರ್ಭುಜತ್ವಾದಿಗಳು ಸಿದ್ಧವಾಗಿರುವುದರಿಂದ, ಪ್ರಕೃತ ಚತುರ್ಭುಜತ್ವವು ಆವಶ್ಯಕವಿಲ್ಲವೆಂದು ಅಭಿಪ್ರಾಯ) ದೈತ್ಯನಿಂದ ಹುಟ್ಟಿದ ಕಂಸನು ಈ ನಿನ್ನ ರೂಪವನ್ನು ನೋಡದ ಹಾಗೆ ಮಾಡು" ಎಂದು ಹೇಳಿದಳು. ಉಗ್ರಸೇನನ ಮಗನಾದ ಕಂಸನು ದೈತ್ಯನಿಂದ ಹುಟ್ಟಿದನೆಂದು ದೇವಕಿಯು ಹೇಳಲು ಕಾರಣವೇನೆಂದರೆ: ಉಗ್ರಸೇನನ ಪತ್ನಿಯು ಋತುಸ್ನಾತಳಾದ ಕಾಲ ದಲ್ಲಿ ದ್ರುಮಿಳನೆಂಬ ದೈತ್ಯನು ಉಗ್ರಸೇನನ ವೇಷದಿಂದ ಕಂಸನ ತಾಯಿಯಲ್ಲಿ

ರಮಿಸಿದರಿಂದ ಕಂಸನು ದೈತ್ಯನಿಂದ ಹುಟ್ಟಿದನೆಂದು ಹೇಳಿದ್ದಾಗಿದೆ. ಈ ರೀತಿ ದೇವಕಿಯು ಹೇಳಿದನಂತರ ಭಗವಂತನು ದೇವಕಿಯನ್ನು ಕುರಿತು ಹೇಳುತ್ತಾನೆ. "ನೀನು ಪೂರ್ವದಲ್ಲಿ ಪುತ್ರಾರ್ಥಿಯಾಗಿ ನನ್ನನ್ನು ಪ್ರಾರ್ಥಿಸಿದುದರಿಂದ, ಈಗ ನಿನ್ನ ಉದರದಲ್ಲಿ ಜನಿಸಿದೆನೆಂದು" ಹೇಳಿ ಪ್ರಾಕೃತ ಶಿಶುವಾದನು. ಆಗ ವಸುದೇವನು ಶಿಶುವನ್ನು ತೆಗೆದುಕೊಂಡು ಪ್ರಯಾಣಮಾಡಿದನು. ಆಗ ದ್ವಾರ ರಕ್ಷಕರು ನಿದ್ರಾಸಕ್ತರಾದರು. ವಸುದೇವನು ಶಿಶುವಿನೊಡನೆ ಪ್ರಯಾಣಮಾಡ ತಕ್ಕ ಕಾಲದಲ್ಲಿ ಮಳೆಯು ಬಂದುದರಿಂದ ಆದಿಶೇಷನು ವಸುದೇವನಿಗೆ ಛತ್ರಿ ಯಾದನು. ಯಮುನಾನದಿಯು ವಿಷ್ಣುವನ್ನು ಧರಿಸಿ ಬರತಕ್ಕ ವಸುದೇವನಿಗೆ ಜಾನುಮಾತ್ರ ನೀರುಳ್ಳದ್ದಾಯಿತು. ಕಂಸನಿಗೆ ಕಷ್ಟವನ್ನು ಕೊಡುವುದಕ್ಕಾಗಿ ನಂದಗೋಪನೇ ಮೊದಲಾದವರು ಯಮುನಾತೀರಕ್ಕೆ ಬಂದರು. ವಸುದೇವನು ಅವರನ್ನು ನೋಡಿದನು. ನಂದಾದಿಗಳು ಮಾತ್ರ ವಸುದೇವನನ್ನು ನೋಡಲಿಲ್ಲ. ಅಷ್ಟರಲ್ಲಿಯೇ ನಂದಗೋಪನ ಪತ್ನಿಯಾದ ಯಶೋದೆಯು ಕನ್ಯಾರತ್ನವನ್ನು ಪಡೆದಳು. ವಿಷ್ಣು ಮಾಯಾಮೋಹಿತಳಾದ ಯಶೋದೆಗೆ ಹುಟ್ಟಿದ ಮಗುವು ಇಂತಹುದೆಂದು ತಿಳಿಯಲಿಲ್ಲ. ಆಗ ವಸುದೇವನು ಬಾಲಕನನ್ನು ಯಶೋದಾ ಶಯನದಲ್ಲಿರಿಸಿ, ಬಾಲಕಿಯನ್ನು ತೆಗೆದುಕೊಂಡು ಬಂದನು. ಆಗ ಯಶೋದೆಯು ನೀಲೋತ್ಪಲದಳಶ್ಯಾಮನಾದ ಮಗನನ್ನು ನೋಡಿ ಸಂತೋಷವನ್ನುಹೊಂದಿದಳು. ವಸುದೇವನು ಶಿಶುವನ್ನು ದೇವಕೀಶಯನದಲ್ಲಿರಿಸಿ, ಪೂರ್ವದಂತೆ ಬಂಧನ ದಲ್ಲಿದ್ದನು. ಅನಂತರ ದ್ವಾರಪಾಲಕರು ಬಾಲಧ್ವನಿಯನ್ನು ಕೇಳಿ, ಆತುರದಿಂದ ಓಡಿಬಂದು, ಕಂಸನಿಗೆ ದೇವಕಿಯು ಪ್ರಸವಿಸಿದಳೆಂದು ಹೇಳಿದರು. ಇದನ್ನು ಕೇಳಿದ ಕಂಸನು ಜಾಗ್ರತೆಯಾಗಿ ಎದ್ದು, ದೇವಕೀ ಸಮೀಪಕ್ಕೆ ಬಂದು ಶಿಶುವನ್ನು ತೆಗೆದುಕೊಂಡನು. ಆಗ ದೇವಕಿಯು ಇದು ಹೆಣ್ಣುಮಗುವೆಂದು ಎಷ್ಟು ಹೇಳಿ ದಾಗ್ಯೂ ಕೇಳದೆ ಕಂಸನು ಮಗುವನ್ನು ಶಿಲಾತಲದಲ್ಲಿ ಹಾಕಿದನು. ಆ ಶಿಶುವು ಸಾಯದೆ ಅಂತರಿಕ್ಷಕ್ಕೆ ಹಾರಿ ಎಂಟು ಭುಜಗಳಿಂದ ಅನೇಕ ಆಯುಧಗಳನ್ನು ಧರಿಸಿ, ಮಹಾಭಯಂಕರವಾದ ರೂಪಿನಿಂದ ಕೂಡಿ, ಕುಪಿತಳಾಗಿ ಕಂಸನಿಗೆ ಹೇಳುತ್ತಾಳೆ: "ಎಲೈ, ದುರಾತ್ಮನೇ, ಬಂಡೆಯಮೇಲೆ ನನ್ನನ್ನು ಎತ್ತಿಹಾಕಿದುದ ರಿಂದ ನಿನಗೆ ಏನು ಪ್ರಯೋಜನವಾಯಿತು? ಪೂರ್ವದಲ್ಲಿ ನೀನು ಯಾರಿಂದ ಮೃತಿಯನ್ನು ಹೊಂದಿದೆಯೋ, ಈಗಲೂ ಅವನಿಂದಲೇ ನಾಶವಾಗುವೆಯಾದುದ ರಿಂದ ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಿಸೆಂದು" ಹೇಳಿ, ವಿಷ್ಣುಮಾಯೆಯು ಹೊರಟುಹೋದಳು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಮೂರನೆಯ ಅಧ್ಯಾಯವು ಸಮಾಪ್ತಃ

ನಾಲ್ಕನೆಯ ಅಧ್ಯಾಯವು

ಅನಂತರದಲ್ಲಿ ಕಂಸನು ಖಿನ್ನಮನಸ್ಕನಾಗಿ ಪುಲಂಜಿ, ಕೇಶಿ ಪ್ರಮುಖರಾದ ಅಸುರಶ್ರೇಷ್ಠರನ್ನು ಕರೆಸಿ ಅವರಿಗೆ ಆಜ್ಞಾಪಿಸುತ್ತಾನೆ. "ಪೂತನಾ ಮೊದಲಾದ ರಾಕ್ಷಸಶ್ರೇಷ್ಠರುಗಳಿರಾ! ನಾನು ಹೇಳುವ ಮಾತನ್ನು ಕೇಳಿ; ನನ್ನ ಪರಾಕ್ರಮ ದಿಂದ ತಪ್ತರಾದ ದೇವತೆಗಳು ನನ್ನನ್ನು ನಾಶ ಮಾಡುವುದಕ್ಕೆ ಪ್ರಯತ್ನಿಸಿರು ವರು. ಅಲ್ಪವೀರ್ಯನಾದ ಇಂದ್ರನಿಂದೇನಾಗುವುದು? ಏಕಚಾರಿಯಾದ ಎಂದರೆ ತಾಪಸಿಯಾದ ಹರನಿಂದೇನಾಗುವುದು? ಛಿದ್ರದಿಂದ ಅಸುರಸಂಹಾರ ಮಾಡಿದ ಹರಿಯಿಂದ ತಾನೇ ಏನುಮಾಡಲು ಸಾಧ್ಯವಾಗುವುದು? ಆದಿತ್ಯ, ವಸು, ಅಗ್ನಿ, ಇಂದ್ರ, ಯಮರೇ ಮೊದಲಾದ ದೇವತೆಗಳು ತಾನೇ ಏನುಮಾಡ ಬಲ್ಲರು? ಇವರುಗಳೆಲ್ಲರೂ ನನ್ನಿಂದ ಪರಾಜಿತರಾದವರು. ಇಂದ್ರನು ಯುದ್ಧ ದಲ್ಲಿ ಸೋತು, ಆ ಕೋಪದಿಂದ ನನ್ನ ರಾಷ್ಟ್ರಕ್ಕೆ ವೃಷ್ಟಿಯನ್ನುಂಟುಮಾಡಲಿಲ್ಲ. ಆಗ ನಾನು ನನ್ನ ಬಾಣಗಳಿಂದ ಮೇಘಗಳನ್ನು ಹೊಡೆಯಲು, ಮೇಘಗಳು ಯಥೇಚ್ಛವಾಗಿ ವೃಷ್ಟಿಯನ್ನುಂಟುಮಾಡಿದವು. ಶ್ವಶುರನಾದ ಜರಾಸಂಧನ ಹೊರತಾಗಿ ಉಳಿದ ರಾಜರುಗಳೆಲ್ಲರೂ ನನಗೆ ಭಯಪಡತಕ್ಕವರು. ಹೇ ದೈತ್ಯೇಂ ದ್ರರೇ! ನೀವುಗಳು ದೇವತೆಗಳ ಅಪಕಾರಾರ್ಥವಾಗಿ ಯತ್ನಿಸಿ, ಲೋಕದಲ್ಲಿ ಯಶಸ್ವಿಗಳಾಗಿಯೂ, ಯಜ್ಞಶೀಲರಾಗಿಯೂ, ಯಾರಿರುತ್ತಾರೋ ಅವರೆಲ್ಲ ರನ್ನೂ ನಾಶಮಾಡತಕ್ಕ ಕಾರ್ಯದಲ್ಲಿ ಉದ್ಯುಕ್ತರಾಗಿರಿ. ದೇವಕೀಗರ್ಭ ಸಂಭೂತಳಾದ ದುರ್ಗಿಯು, ನಾನು ಪೂರ್ವಜನ್ಮದಲ್ಲಿ, ಯಾರಿಂದ ಮೃತಿ ಯನ್ನು ಹೊಂದಿದೆನೋ, ಅವನು ಈಗ ಭೂಮಿಯಲ್ಲಿ ಹುಟ್ಟಿರುವುದರಿಂದ, ಅವನಿಂದಲೇ ಮೃತಿಯನ್ನು ಹೊಂದುವುದಾಗಿ ಹೇಳಿದಳು. ಆದುದರಿಂದ ನೀವು ಭೂಮಿಯಲ್ಲಿ ಹುಟ್ಟಿರುವ ಬಾಲಕರನ್ನು ನಾಶಮಾಡುವ ಪ್ರಯತ್ನವನ್ನು ಮಾಡಿ," ಎಂದು ಆಜ್ಞಾಪಿಸಿ, ಗೃಹವನ್ನು ಪ್ರವೇಶಮಾಡಿ ಬಂಧನದಲ್ಲಿದ್ದ ದೇವಕೀವಸುದೇವರನ್ನು ಬಿಡಿಸಿ ಅವರಿಗೆ ಹೇಳುತ್ತಾನೆ: "ಇದುವರೆಗೆ ಹುಟ್ಟಿದ ನಿಮ್ಮ ಮಕ್ಕಳನ್ನು ನಾಶಮಾಡಿದ್ದು ವ್ಯರ್ಥವಾಯಿತು. ನನ್ನ ನಾಶಕ್ಕಾಗಿ ಮತ್ತೊಬ್ಬ ಬಾಲಕನು ಭೂಮಿಯಲ್ಲಿ ಹುಟ್ಟಿರುವುದಾಗಿ ದುರ್ಗಿಯು ಹೇಳಿದುದ ರಿಂದ ನಿಮಗೆ ನಾನು ವೃಥಾ ಹಿಂಸೆಯನ್ನು ಕೊಟ್ಟೆನು. ನೀವು ಇದಕ್ಕಾಗಿ ಪರಿತಾಪವನ್ನು ಹೊಂದಬೇಡಿ" ಎಂದು ಸಮಾಧಾನಪಡಿಸಿ, ತನ್ನ ಗೃಹವನ್ನು ಪ್ರವೇಶಿಸಿದನು.

ಇಲ್ಲಿಗೆ ಶ್ರೀ ವಿಷ್ಣು ಪುರಾಣದಲ್ಲಿ ಪಂಚಮಾಂಶದಲ್ಲಿ
ನಾಲ್ಕನೆಯ ಅಧ್ಯಾಯವು ಸಮಾಪ್ತಃ

ಐದನೆಯ ಅಧ್ಯಾಯವು

“ವಸುದೇವನು ಬಂಧನದಿಂದ ಮುಕ್ತನಾಗಿ ಕಪ್ಪವನ್ನು ಕೊಡುವುದಕ್ಕಾಗಿ ಬಂದ ನಂದಗೋಪನನ್ನು ನೋಡಿ, “ನಂದಗೋಪನೇ, ವೃದ್ಧಾಪ್ಯದಲ್ಲಿ ನಿನಗೆ ಪುತ್ರನು ಹುಟ್ಟಿದ್ದನ್ನು ಕೇಳಿ ಪರಮಾನಂದವನ್ನು ಹೊಂದಿದೆನು. ನೀನು ಕಂಸನಿಗೆ ಕಪ್ಪವನ್ನು ಕೊಟ್ಟು ಜಾಗ್ರತೆಯಾಗಿ ನಂದಗೋಕುಲಕ್ಕೆ ಪ್ರಯಾಣ ಮಾಡು. ಸಾವಕಾಶಮಾಡಬೇಡ. ನಿನ್ನ ಪುತ್ರನನ್ನು ಯಾವರೀತಿ ಜಾಗರೂಕತೆಯಿಂದ ನೋಡುವೆಯೋ ಅದೇರೀತಿ ರೋಹಿಣೀತನಯನನ್ನು ಸಂರಕ್ಷಿಸುತ್ತಾ ಇರು” ಎಂದು ಹೇಳಲು; ನಂದಗೋಪನು ವಸುದೇವನ ವಾಕ್ಯಾನುಸಾರ ಕಂಸನಿಗೆ ಕಪ್ಪವನ್ನು ಕೊಟ್ಟು ನಂದಗೋಕುಲಕ್ಕೆ ಪ್ರಯಾಣಮಾಡಿದನು. ಬಾಲಘಾತಿನಿಯಾದ ಪೂತನಿಯು ನಂದಗೋಕುಲವನ್ನು ಪ್ರವೇಶಿಸಿ, ಮಲಗಿರತಕ್ಕ ಕೃಷ್ಣನನ್ನು ಎತ್ತಿಕೊಂಡು ವಿಷಮಿಶ್ರವಾದ ಸ್ತನ್ಯವನ್ನು ಕೊಟ್ಟಳು. ಆಗ ಕೃಷ್ಣನು ಪೂತನಾಸ್ತನವನ್ನು ಎರಡು ಕೈಗಳಿಂದ ಗಟ್ಟಿಯಾಗಿ ಹಿಂಡಿ ಪೂತನಾ ಪ್ರಾಣವನ್ನೇ ಪಾನಮಾಡಿದನು. ಆಗ ಅತಿಭೀಷಣಳಾದ ಪೂತನಿಯು ನೆಲದ ಮೇಲೆ ಬಿದ್ದು ಪ್ರಾಣವನ್ನು ಬಿಟ್ಟಳು. ಪ್ರಾಣಬಿಡತಕ್ಕಕಾಲದಲ್ಲಿ ಪೂತನಿಯು ಗಟ್ಟಿಯಾಗಿ ರೋದನಮಾಡಿದುದರಿಂದ, ಯಶೋದಾ ಮೊದಲಾದವರು ನಿದ್ರೆಯಿಂದ ಎಚ್ಚರಗೊಂಡು, ನಿರ್ಜೀವಳಾದ ಪೂತನಿಯನ್ನೂ ಅವಳ ಸಮೀಪದಲ್ಲಿರತಕ್ಕ ಕೃಷ್ಣನನ್ನೂ ಸಹ ನೋಡಿ, ಯಶೋದೆಯು ಭಯದಿಂದ ಕೃಷ್ಣನನ್ನು ಎತ್ತಿಕೊಂಡು ಗೋವಿನಬಾಲದಿಂದ, ಬಾಲದೋಷಪರಿಹಾರಾರ್ಥವಾಗಿ ಶಾಂತಿಯನ್ನು ಮಾಡಿದಳು. ನಂದಗೋಪನೂ ಸಹ ಗೋಮಯಚೂರ್ಣದಿಂದ ಮುಖದಲ್ಲಿ ತಿಲಕವನ್ನಿಟ್ಟನು. ನಂದಗೋಪನು ಕೃಷ್ಣನಿಗೆ ರಕ್ಷಣೆಯನ್ನಿಟ್ಟು ಕೃಷ್ಣನಿಗೆ ಮಂಗಳವನ್ನು ಮಾಡುತ್ತಾನೆ; “ಓ ಕೃಷ್ಣ ! ಸಕಲಪ್ರಾಣಿಗಳಿಗೂ ಪ್ರಭುವಾದ ಶ್ರೀಮನ್ನಾರಾಯಣನು ನಿನ್ನನ್ನು ರಕ್ಷಿಸಲಿ, ಯಾವ ಪರಮಾತ್ಮನ ನಾಭೀಕಮಲದಿಂದ ಬ್ರಹ್ಮನೂ, ಜಗತ್ತೂ ಸಹ ಹುಟ್ಟಿದವೋ, ಕೋರೆ ದವಡೆಯಿಂದ ಭೂಮಿಯನ್ನು ವರಾಹರೂಪದಿಂದ ಧರಿಸಿದನೋ. ಆ ಪರಮಾತ್ಮನು ನಿನ್ನನ್ನು ರಕ್ಷಿಸಲಿ, ನಖಾಂಕುರದಿಂದ ವೈರಿ ವಕ್ಷಸ್ಥಲವನ್ನು ನಾಶಮಾಡಿದ ನೃಸಿಂಹನೂ, ಹ್ರಸ್ವವಾಗಿದ್ದು ಕ್ಷಣಕಾಲದಲ್ಲಿ ಮೂರುಲೋಕವನ್ನೂ ಅಳೆದ ವಾಮನಮೂರ್ತಿಯೂ ಸಹ ರಕ್ಷಿಸಲಿ. ನಿನ್ನ ಶಿರಸ್ಸನ್ನು ಗೋವಿಂದನೂ, ಕಂಠವನ್ನು ಕೇಶವನೂ, ಜಠರವನ್ನು ವಿಷ್ಣುವೂ, ಜಂಘೆಪಾದಗಳನ್ನು ಜನಾರ್ದನನೂ, ಮುಖ, ಬಾಹು, ಮನಸ್ಸು, ಇಂದ್ರಿಯ ಇವುಗಳೆಲ್ಲವನ್ನೂ ಅವ್ಯಾಹತೈಶ್ವರ್ಯನಾದ ನಾರಾಯಣನೂ ಸಹ ರಕ್ಷಿಸಲಿ.” ದಿಕ್ಕುಗಳಲ್ಲಿ ವೈಕುಂಠನೂ, ವಿದಿಕ್ಕು

ಗಳಲ್ಲಿ ಮಧುಸೂದನನೂ, ಅಂತರಿಕ್ಷದಲ್ಲಿ ಹೃಷೀಕೇಶನೂ, ಭೂಮಿಯಲ್ಲಿ ಮಹೀಧರನೂ ಸಹ ರಕ್ಷಿಸಲಿ. ಈ ಪ್ರಕಾರ ನಂದಗೋಪನು ಬಾಲಕನಿಗೆ ರಕ್ಷೆಯನ್ನು ಮಾಡಿ, ಬಾಲಕನನ್ನು ಹಾಸಿಗೆಯಲ್ಲಿ ಮಲಗಿಸಿದನು. ಪೂತನಿಯು ಸತ್ತುಬಿದ್ದಿರುವುದನ್ನು ಕಂಡು ಗೋಪರೆಲ್ಲರೂ ಆಶ್ಚರ್ಯವನ್ನು ಹೊಂದಿದರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಐದನೆಯ ಅಧ್ಯಾಯವು ಸಮಾಪ್ತಃ

ಆರನೆಯ ಅಧ್ಯಾಯವು

"ಯಶೋದಾತನಯನು ಮಲಗಿರತಕ್ಕಕಾಲದಲ್ಲಿ ಮುರನೆಂಬ ದೈತ್ಯನು ಶಕಟರೂಪಿನಿಂದ ಬಾಲಕನ ಮೇಲೆ ಉರಳಿಬಂದಕಾಲದಲ್ಲಿ, ಬಾಲಕನು ಕಾಲಿನಿಂದ ಒದೆಯಲು, ಬಂಡಿಯು ಉರುಳಿಕೊಂಡು, ಬಂಡಿಯಲ್ಲಿದ್ದ ಭಾಂಡಾದಿಗಳು ನಾಶವಾಗಿ, ಶಕಟಾಸುರನು ನಾಶವಾದನು. ಇದನ್ನು ಗೋಪರು ನೋಡಿ ಆಶ್ಚರ್ಯಪಟ್ಟರು. ಗೋಪಪುರೋಹಿತನಾದ ಗರ್ಗನು, ವಸುದೇವನಿಂದ ಪ್ರೇರಿತನಾಗಿ ವಸುದೇವನ ಮಗನೆಂದು ಗೋಪರಿಗೆ ತಿಳಿಯಕೂಡದೆಂದು ಗುಟ್ಟಾಗಿ ನಾಮಕರಣವನ್ನು ಮಾಡಿದನು. ರೋಹಿಣೀ ತನಯನಿಗೆ ರಾಮನೆಂದೂ, ನಂದಗೋಪನ ಮಗನಿಗೆ ಕೃಷ್ಣನೆಂದೂ ಸಹ ನಾಮಕರಣ ಮಾಡಿದನು. ಅನಂತರ ಸ್ವಲ್ಪದಿವಸದಲ್ಲಿ ರಾಮಕೃಷ್ಣರಿಬ್ಬರೂ ಕೈಯ್ಯಿಗಳಿಂದಲೂ, ಕಾಲುಗಳಿಂದಲೂ, ಭೂಮಿಯಲ್ಲಿ ನಡೆಯುತ್ತಾ ಭಸ್ಮವನ್ನು ಮೈಮೇಲೆ ಹಾಕಿಕೊಂಡು ಆಟವಾಡುತ್ತಾ, ಗೋವುಗಳ ಸಮೂಹನಲ್ಲಿ ಸಂಚರಿಸುತ್ತಾ, ಕರುಗಳ ಬಾಲಗಳನ್ನು ಹಿಡಿದು ಆಟವಾಡುತ್ತಿದ್ದರು. ಆಗ ಯಶೋದೆಯು ಗೋವುಗಳ ಮಧ್ಯದಲ್ಲಿ ಸಂಚರಿಸುವುದರಿಂದ ಏನಾದರೂ ಅಪಾಯವುಂಟಾಗುವುದೆಂದು ಭ್ರಾಂತಿಪಟ್ಟವಳಾಗಿ, ರಾಮಕೃಷ್ಣರನ್ನು ಕರೆದುಕೊಂಡು ಬಂದಳು. ರಾಮಕೃಷ್ಣರ ಲೂಟಿಯನ್ನು ತಡೆಯಲಾರದೆ ಯಶೋದೆಯು ಕೃಷ್ಣನನ್ನು ಒರಲುಕಲ್ಲಿಗೆ ಕಟ್ಟಿ, "ಓ ಕೃಷ್ಣಾ, ನಿನ್ನ ಚೇಷ್ಟೆಯನ್ನು ತಡೆಯಲಾರೆ, ಈಗೇನು ಮಾಡುವೆಯೆಂದು" ಹೇಳಿ ಕಾರ್ಯಕ್ಕಾಗಿ ಒಳಗೆ ಹೋದಳು. ಯಶೋದೆಯು ಅಂತಃಪ್ರವಿಷ್ಟಳಾದುದನ್ನು ನೋಡಿ, ಕೃಷ್ಣನು ಕಲ್ಲಿನಿಂದ ಸಮೇತನಾಗಿ ಯಮಳಾರ್ಜುನವೆಂಬ ಎರಡು ವೃಕ್ಷಗಳ ಮಧ್ಯದಲ್ಲಿ ಪ್ರಯಾಣಮಾಡಿದನು. ಆಗ ಒರಲುಕಲ್ಲು ಎರಡು ವೃಕ್ಷಗಳ ಮಧ್ಯದಲ್ಲಿ ಅಡ್ಡವಾಗಿ ಸಿಕ್ಕಿಕೊಂಡಿದ್ದರಿಂದ ಮರಗಳು ಮಧ್ಯದಲ್ಲಿ ಮುರಿದು ಕೆಳಕ್ಕೆ ಬಿದ್ದುವು.

ಈ ಶಬ್ದವನ್ನು ಕೇಳಿದ ಜನರು ಮರದ ಸಮೀಪಕ್ಕೆ ಬಂದು ನೋಡಲು, ಮರಗಳು ಮುರಿದುಬಿದ್ದು ಅವುಗಳ ಮಧ್ಯದಲ್ಲಿ ಹಸನ್ಮುಖನಾಗಿ ಕಲ್ಲಿನಿಂದ ಸಹಿತನಾದ ಕೃಷ್ಣನನ್ನು ನೋಡಿ ವಿಸ್ಮಿತರಾದರು. ಕೃಷ್ಣನ ಸೊಂಟಕ್ಕೆ ಕಲ್ಲನ್ನು ಕಟ್ಟಿದುದರಿಂದ ದಾಮೋದರನೆಂಬ ಹೆಸರುಂಟಾಯಿತು. ನಂದಗೋಪನೇ ಮೊದಲಾದ ಗೋಪವೃದ್ಧರೆಲ್ಲರೂ ಸೇರಿ "ನಮಗೆ ಪದೇಪದೇ, ಅನೇಕ ಉಪಹತಿಗಳುಂಟಾಗುವುದು, ಅನೇಕವಾದ ಭಯಂಕರವಾದ ಅಪಶಕುನಗಳುಂಟಾಗುತ್ತಲಿರುವುದು, ಆದುದರಿಂದ ನಾವುಗಳು ಈ ಸ್ಥಳವನ್ನು ಬಿಟ್ಟು ಬೇರೆ ಸ್ಥಳಕ್ಕೆ ಹೋಗೋಣವೆಂದು ಪರಸ್ಪರ ಆಲೋಚನೆ ಮಾಡುತ್ತಾ, ಇದುವರೆಗೆ ಪೂತನಾವಿನಾಶವೂ, ಶಕಟವಿಪರ್ಯಯವೂ, ಯಮಳಾರ್ಜುನ ಪತನವೂ, ಹೀಗೆ ಪರಂಪರೆಯಾದ ಕಷ್ಟಗಳು ಸಂಭವಿಸುವುದರಿಂದ, ಇಲ್ಲಿಗೆ ಸಮೀಪದಲ್ಲಿರತಕ್ಕ ಬೃಂದಾವನವೆಂಬ ಸ್ಥಳಕ್ಕೆ ಹೋಗೋಣ"ವೆಂದು ನಿಶ್ಚಯಿಸಿ ತಕ್ಷಣದಲ್ಲಿಯೇ ನಂದಗೋಕುಲವನ್ನು ಬಿಟ್ಟು, ಬೃಂದಾವನದಲ್ಲಿ ವಾಸಮಾಡಿದರು. ನಂದಗೋಕುಲವು ಪರಮಾತ್ಮನಾದ ಕೃಷ್ಣನಿಂದ ಬಿಡಲ್ಪಟ್ಟುದರಿಂದ ಕಾಕಗೃಧ್ರಾದಿಗಳಿಗೆ ಆಶ್ರಯವಾಯಿತು. ಬೃಂದಾವನವು ಭಗವಂತನಾದ ಕೃಷ್ಣನಿಂದ ಗೋಸಮೃದ್ಧಿಯನ್ನು ಹೊಂದಿತು. ಅತಿಕಠಿಣವಾದ ಬಿಸಲಿನ ಕಾಲದಲ್ಲಿಯೂ ಕೂಡ ಹಸೀಹುಲ್ಲು, ಗೋಸಂರಕ್ಷಣಾರ್ಥವಾಗಿ ಸಮೃದ್ಧಿಯಾಗಿತ್ತು. ಇದೇ ರೀತಿ, ಬೃಂದಾವನವು ಸಕಲ ಸಂಪತ್ತಿನಿಂದ ಕೂಡಿತ್ತು. ರಾಮಕೃಷ್ಣರು ಬಾಲಲೀಲೆಗಳನ್ನಾಡುತ್ತಾ, ಗೋಶಾಲೆಯಲ್ಲಿ ಆಟವಾಡುತ್ತಾ, ಬರ್ಹಿಪಿಂಛೆ[1]ಯಿಂದ ತಲೆಯನ್ನು ಅಲಂಕಾರಮಾಡಿಕೊಂಡು, ವನದಲ್ಲಿರತಕ್ಕ ಪುಷ್ಪಗಳಿಂದ ಅಲಂಕೃತರಾಗಿ ವೇಣುಗಾನಯುಕ್ತರಾಗಿ ಕಾಕಪಕ್ಷವನ್ನು[2] ಧರಿಸಿ, ಅಗ್ನಿಯೋಪಾದಿಯಲ್ಲಿ ತೇಜಸ್ವಿಗಳಾಗಿಯೂ, ಒಬ್ಬರಮೇಲೊಬ್ಬರು ಆರೋಹಣಮಾಡತಕ್ಕವರಾಗಿಯೂ, ಗೋಪಬಾಲಕರಿಂದಲೂ ಗೋವುಗಳಿಂದಲೂ ಸಹ ಕೂಡಿ ಎಲ್ಲರಿಗೂ ವಿಸ್ಮಯವನ್ನುಂಟುಮಾಡುತ್ತಾ, ಏಳುವರ್ಷಗಳವರೆಗೆ ವಿನೋದವಾಗಿ ಕಾಲವನ್ನು ಕಳೆಯುತ್ತಿದ್ದರು. ಸರ್ವಜಗತ್ಪಾಲಕರಾದ ರಾಮಕೃಷ್ಣರು ಕರುಗಳನ್ನು ಕಾಯತಕ್ಕವರಾದರು. ಸಮಸ್ತ ದಿಕ್ಕುಗಳನ್ನೂ ಒಂದಾಗಿ ಮಾಡುತ್ತದೋ ಎಂಬಂತೆ ಮೇಘಪಂಕ್ತಿಗಳು ಅಂತರಿಕ್ಷದಲ್ಲಿ ವ್ಯಾಪಿಸಿತು. ಈ ವರ್ಷಾಕಾಲವು ಹೊಸದಾದ ಬಾಲತೃಣದಿಂದಲೂ ಗರುಡ ನೀಲರತ್ನದಂತೆ ಪದ್ಮರಾಗದಿಂದಲೂ ಸಹ ಕೂಡಿದಂತೆ ಪ್ರಕಾಶವಾಗಿತ್ತು. ನದಿಗಳು ಹೊಸದಾಗಿ

---

[1] ನವಿಲುಗರಿ [2] ಕಿವಿಗಳ ಹತ್ತಿರ ಬಿಟ್ಟಿರುವ ಕೇಶ, ಜುಲ್ಪಿಯು.

ಐಶ್ವರ್ಯವನ್ನು ಹೊಂದಿದವರಂತೆ ಪ್ರವಹಿಸಿದವು. ಮೂರ್ಖರ ಪ್ರಗಲ್ಭ ವಾಕ್ಯದಂತೆ ನಿರ್ಮಲನಾದ ಚಂದ್ರನು ಮಲಿನವಾದ ಮೇಘಗಳಿಂದ ಆವೃತನಾಗಿದ್ದನು. ಉನ್ಮತ್ತವಾದ ನವಿಲುಗಳಿಂದಲೂ ಭ್ರಮರಗಳಿಂದಲೂ ವ್ಯಾಪ್ತವಾದ ವರ್ಷಾಕಾಲದಲ್ಲಿ ರಾಮಕೃಷ್ಣರು ಗೋಪಾಲಬಾಲಕರಿಂದ ಯುಕ್ತರಾಗಿ, ವಿಹರಿಸಿದರು. ಕೆಲವರು ಗೋವುಗಳ ಮಧ್ಯೆದಲ್ಲಿಯೂ, ಕೆಲವರು ವೃಕ್ಷಗಳಲ್ಲಿಯೂ, ಕೆಲವರು ಕದಂಬ ಪುಷ್ಪಮಾಲಿಕೆಗಳಿಂದಲೂ ಕೆಲವರು ಪರ್ಣಶಯ್ಯೆಯಲ್ಲಿ ಮಲಗತಕ್ಕವರಾಗಿಯೂ, ಕೆಲವು ವೇಳೆ ನಿದ್ರಾಸಕ್ತರಾಗಿಯೂ, ಕೆಲವು ವೇಳೆ ಮೇಘಗಳಂತೆ ಗರ್ಜನೆ ಮಾಡುವವರಾಗಿಯೂ, ಕೆಲವು ವೇಳೆ ನವಿಲು ಕೋಗಿಲೆಗಳಂತೆ ಧ್ವನಿ ಮಾಡತಕ್ಕವರಾಗಿಯೂ, ಈ ಪ್ರಕಾರ ಸಂತೋಷಯುಕ್ತರಾಗಿ ವನದಲ್ಲಿ ನಾನಾವಿಧವಾದ ಆಟವಾಡುತ್ತಿದ್ದರು. ಈ ರೀತಿ ಬೃಂದಾವನದಲ್ಲಿ ಸಮಾನ ಬಾಲಕರಿಂದ ಕಾಲವನ್ನು ಕಳೆದರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಆರನೆಯ ಅಧ್ಯಾಯವು ಸಮಾಪ್ತಃ

ಏಳನೆಯ ಅಧ್ಯಾಯವು

ಶ್ರೀಕೃಷ್ಣನು ಒಂದಾನೊಂದು ದಿವಸ ಬಲರಾಮನನ್ನು ಬಿಟ್ಟು ಇತರ ಬಾಲಕರಿಂದ ಕೂಡಿ, ವನಕ್ಕೆ ಹೋಗಿ, ಮನೋಹರವಾದ ಪುಷ್ಪಗಳಿಂದ ಅಲಂಕೃತನಾಗಿ, ರಮ್ಯವಾದ ಕಾಳಿಂದೀ ನದಿಯ ಸಮೀಪಕ್ಕೆ ಬಂದು, ವಿಷದಿಂದ ವ್ಯಾಪ್ತವಾದ ಮಹಾ ಭಯಂಕರವಾದ ಕಾಳಿಂಗಮಡುವನ್ನು ನೋಡಿ, ನದೀ ತೀರದಲ್ಲಿದ್ದ ಮರಗಳು ವಿಷಾಗ್ನಿಯಿಂದ ಸುಡಲ್ಪಟ್ಟುದನ್ನೂ, ಸಮೀಪದಲ್ಲಿ ಒಂದು ಪಕ್ಷಿಯೂ ಕೂಡ ಇಲ್ಲದೇ ಇದ್ದುದನ್ನೂ ಎರಡನೆಯ ಮೃತ್ಯುವಿನಂತೆ ಮಹಾ ಭಯಂಕರವಾದ ಮುಖವುಳ್ಳ ಸರ್ಪವನ್ನೂ ಸಹ ಕಂಡು, ಇಲ್ಲಿ ದುಷ್ಟನಾದ ಕಾಳಿಂಗನು ವಾಸವಾಗಿರುತ್ತಾನೆ. ಇವನು ನನಗೆ ವಿಭೂತಿಭೂತನಾದ ಗರುತ್ಮಂತನಿಂದ ಪರಾಜಿತನಾಗಿ, ಸಮುದ್ರವನ್ನು ಬಿಟ್ಟು, ಇಲ್ಲಿ ವಾಸವಾಗಿರುವನು. ಇವನಿಂದ ಸಾಗರಗಾಮಿನಿಯಾದ ಯಮುನಾನದಿಯು ದೂಷ್ಯವಾಗಿರುವನು. ಆದುದರಿಂದ ಈ ಜಲವನ್ನು ಬಾಯಾರಿಕೆಯಿಂದ ಬಳಲಿದ ಗೋಪ ಬಾಲಕರೂ ಮತ್ತು ಗೋವುಗಳೂ ಸಹ ಪಾನಮಾಡಲು ಅವಕಾಶವಿಲ್ಲವಾದುದರಿಂದ, ಈ ನಾಗರಾಜನು ನನ್ನಿಂದ ನಿಗ್ರಹವಾದರೆ, ಗೋಪಾಲಕರೆಲ್ಲರೂ ನಿರ್ಭೀತರಾಗಿ ಸಂಚರಿಸಬಹುದು. ಭೂಮಿಯಲ್ಲಿ ದುಷ್ಟನಿಗ್ರಹಾರ್ಥವಾಗಿಯೇ

ಸಾನು ಅವತರಿಸಿರುವುದು. ಸಮೀಪದಲ್ಲಿರತಕ್ಕ ಕದಂಬ ವೃಕ್ಷದ ಮೇಲೆ ಪೂರ್ವದಲ್ಲಿ ಗರುತ್ಮಂತನು ಅಮೃತವನ್ನು ತೆಗೆದುಕೊಂಡು ಬಂದು, ಅದರ ಮೇಲೆ ಅಮೃತವನ್ನಿರಿಸಿ, ಕೊಂಚಕಾಲ ವಿಶ್ರಾಂತಿಯನ್ನು ತೆಗೆದುಕೊಂಡನು. ಅಮೃತಸಂಬಂಧದಿಂದ ಈ ಮರವು ವಿಷಜ್ವಾಲೆಯಿಂದ ಸುಡಲಿಲ್ಲ. ಆದ ಪ್ರಯುಕ್ತ ಈ ಮರದ ಮೇಲೆ ಹತ್ತಿ ಮಡುವಿನಲ್ಲಿ ಧುಮುಕಿ, ನಾಗರಾಜನನ್ನು ನಾಶಮಾಡುವೆನೆಂದು ಯೋಚಿಸಿ, ವಸ್ತ್ರಗಳನ್ನು ಗಟ್ಟಿಯಾಗಿ ಕಟ್ಟಿ, ಮಡುವಿನಲ್ಲಿ ಧುಮುಕಿದನು. ಕೃಷ್ಣನು ಧುಮುಕಿದುದರಿಂದ ಮಡುವು ಅಲ್ಲೋಲಕಲ್ಲೋಲವಾಗಿ ಬಹುದೂರದಲ್ಲಿರತಕ್ಕ ಮರಗಳಿಗೆ ನೀರು ಹಾರಿ, ಮರಗಳು ಸುಟ್ಟುಹೋದುವು. ಕೃಷ್ಣನು ಮಡುವಿನಲ್ಲಿ ಗಟ್ಟಿಯಾಗಿ ಭುಜವನ್ನು ಹೊಡೆದುಕೊಂಡ ಶಬ್ದವನ್ನು ನಾಗರಾಜನು ಕೇಳಿ ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಅನೇಕ ವಿಷಮಿಶ್ರವಾದ ಸರ್ಪಗಳಿಂದ ಕೂಡಿ, ಕೃಷ್ಣನ ಸಮೀಪಕ್ಕೆ ಬಂದನು. ಅನೇಕರಾದ ನಾಗಕನ್ನಿಕೆಗಳು ದಿವ್ಯಾಲಂಕಾರಯುಕ್ತರಾಗಿ ನಾಗರಾಜನ ಜೊತೆಯಲ್ಲಿ ಕೃಷ್ಣನ ಸಮೀಪಕ್ಕೆ ಬಂದರು. ಆಗ ಸರ್ಪಗಳು ಕೃಷ್ಣನನ್ನು ಕಚ್ಚಿದವು. ಕೃಷ್ಣನು ಸರ್ಪಗಳಿಂದ ಮೃತನಾದನೆಂದು ಗೋಪಬಾಲಕರು ಭಾವಿಸಿ, ದುಃಖಿತರಾಗಿ ಮನೆಗೆ ಬಂದು, ಎಲ್ಲರಿಗೂ ಕೃಷ್ಣನು ಕಾಳೀಯ ಮಡುವಿನಲ್ಲಿ ಬಿದ್ದು ಸರ್ಪಗಳಿಂದ ಸತ್ತುಹೋದನು! ಬಂದು ನೋಡಿ! ಎಂದು ಹೇಳಲು; ಈ ವಜ್ರಪ್ರಹಾರಕ್ಕೆ ಸಮಾನವಾದ ಮಾತನ್ನು ಕೇಳಿ, ಗಾಬರಿಯಿಂದಲೂ, ದುಃಖದಿಂದಲೂ ಸಹ ಯಶೋದಾ ಮೊದಲಾದ ಗೋಪಸ್ತ್ರೀಯರು ವೇಗದಿಂದ ಯಮುನಾ ಮಡುವಿನ ಬಳಿಗೆ ಬಂದು, "ಕೃಷ್ಣ ! ಕೃಷ್ಣ !" ಎಂಬುದಾಗಿ ರೋದನಮಾಡಿದರು. ನಂದಗೋಪನೇ ಮುಂತಾದವರು ಮಡುವಿನ ಸಮೀಪಕ್ಕೆ ಬಂದು, ನಾಗಗಳಿಂದ ಆವರಿತ ದೇಹವುಳ್ಳ ಕೃಷ್ಣನನ್ನು ನೋಡಿ, ಎಲ್ಲರೂ ಮೂರ್ಛೆಯನ್ನು ಹೊಂದಿದರು. ಪುನಃ ಎಚ್ಚರಗೊಂಡು, ಕೃಷ್ಣನನ್ನು ನೋಡಿ, ಗೋಪಸ್ತ್ರೀಯರು ದುಃಖದಿಂದ ಯಶೋದಾ ಸಹಿತರಾಗಿ ನಾವೂ ಮಡುವಿನಲ್ಲಿ ಬೀಳೋಣ. ಬೃಂದಾವನವು ಕೃಷ್ಣನು ಇಲ್ಲದುದರಿಂದ ಶೂನ್ಯಪ್ರಾಯವಾಗಿರುವುದಲ್ಲದೆ ಸೂರ್ಯನಿಲ್ಲದ ಹಗಲಿನಂತೆಯೂ ಚಂದ್ರನಿಲ್ಲದ ರಾತ್ರಿಯಂತೆಯೂ ಎತ್ತಿಲ್ಲದ ಗೋಸಮೂಹದಂತೆಯೂ ಕೃಷ್ಣನಿಲ್ಲದ ಬೃಂದಾವನವು ಅರಣ್ಯವಾದ ಕಾಡಿನಂತೆಯೂ, ನೀರಿಲ್ಲದ ಸರೋವರದಂತೆಯೂ ಇರುವುದು. ಇಂದೀವರ ಶ್ಯಾಮನಾದ ಕೃಷ್ಣನು ಇಲ್ಲದ ಗೃಹವು ವಾಸಾರ್ಹವಾಗಲಾರದು. ಶ್ರೀಕೃಷ್ಣನು ನಮ್ಮ ಕೂಡಾ ಮಧುರವಾದ ಮಾತುಗಳನ್ನಾಡದೇ ಇರುವುದರಿಂದ ಈಗ ನಮ್ಮ ಮನೋರಥವೆಂಬ ಧನವನ್ನು ಅಪಹರಿಸಿದನು. ಪುಂಡರೀಕಾಕ್ಷನಾದ ಕೃಷ್ಣನಿಂದ ರಹಿತರಾಗಿ ನಂದಗೋಕುಲಕ್ಕೆ

ನೋಡಬೇಕಾಯಿತು. ಈ ಪ್ರಕಾರ ಗೋಪಸ್ತ್ರೀಯರ ರೋದನವನ್ನು ಕೇಳಿ, ಬಲರಾಮನು ನಿಶ್ಚೇಷ್ಟಿತರಾದ ಗೋಪಾಲರನ್ನೂ, ಮಗನ ಮುಖವನ್ನೇ ನೋಡುತ್ತಾ ಸ್ತಬ್ಧನಾದ ನಂದಗೋಪನನ್ನೂ, ಮೂರ್ಛಾಕುಲಳಾದ ಯಶೋದೆಯನ್ನೂ ಸಹ ನೋಡಿ, ಕೃಷ್ಣನನ್ನು ಕುರಿತು ಹೇಳುತ್ತಾನೆ. "ದೇವದೇವೇಶನಾದ ಕೃಷ್ಣನೇ ನೀನು ಬಹಳವಾಗಿ ಮಾನುಷಭಾವವನ್ನು ತೋರಿಸುವೆಯಲ್ಲಾ? ನೀನು ಅನಂತನೆಂಬುವುದನ್ನು ಮರೆತೆಯಾ? ಸಕಲ ಜಗತ್ತಿಗೂ ಆಧಾರನಾದವನು. ಸೃಷ್ಟಿ, ಸ್ಥಿತಿ, ಸಂಹಾರಕಾರಕನು; ವೇದಮಯನಾದವನು, ಇಂದ್ರ, ಅಗ್ನಿ, ವಸು, ರುದ್ರರೇ ಮೊದಲಾದವರಿಂದ ಚಿಂತಿಸಲ್ಪಡತಕ್ಕವನು. ಓ ಜಗನ್ನಾಥನೇ! ನೀನು ಭೂಭಾರಾವತರಣಾರ್ಥವಾಗಿ, ಮಾನುಷಜನ್ಮವನ್ನೆತ್ತಿರುವೆ. ನಿನ್ನ ಅಂಶದಿಂದ ನಾನೂ ಸಹ ಅವತರಿಸಿರುವೆ ಓ ಭಗವಂತನೇ! ನಿನ್ನ ಕ್ರೀಡಾರ್ಥವಾಗಿ ದೇವಸ್ತ್ರೀಯರೂ ಸಹ ಅವತರಿಸಿರುವರು. ಈ ರೀತಿ ಅವತರಿಸಿರುವ ನಮ್ಮಿಬ್ಬರಿಗೂ ಗೋಪಾಲಕರು ಬಂಧುಗಳಲ್ಲವೇ? ಗೋಪಸ್ತ್ರೀಯರು ನಿನ್ನ ವಿರಹದಿಂದ ನಿಶ್ಚೇಷ್ಟಿತರಾಗಿರುವುದನ್ನು ಉಪೇಕ್ಷೆಮಾಡುವುದು ಯುಕ್ತವಲ್ಲ. ಇದುವರೆಗೆ ತೋರಿಸಿದ ಮಾನುಷಭಾವವೂ, ಬಾಲಭಾವವೂ ಸಹ ಸಾಕು. ಮೊದಲು ದುಷ್ಟನಾದ ನಾಗರಾಜನನ್ನು ನಾಶಮಾಡಿ ಬಂಧುಗಳನ್ನು ಸಂತೋಷಪಡಿಸು" ಎಂದು ಹೇಳಲು, ಕೃಷ್ಣನು ಜ್ಞಾಪಿಸಿಕೊಂಡು ಸರ್ಪಗಳನ್ನು ಬಿಡಿಸಿ, ಕಾಳಿಂಗನ ತಲೆಯಮೇಲೆ ಕಾಲನ್ನು ಗಟ್ಟಿಯಾಗಿ ಊರಲು, ನಾಗರಾಜನು ಕೃಷ್ಣನ ಕಾಲಿನ ಹೊಡೆತದಿಂದ ಪ್ರಾಣಗಳನ್ನು ಬಿಡುವ ಸ್ಥಿತಿಗೆ ಬಂದು, ರಕ್ತವನ್ನು ವಮನಮಾಡುತ್ತಾ ಇರತಕ್ಕ ಕಾಲದಲ್ಲಿ, ಅವನ ಪತ್ನಿಗಳು ಮಧುಸೂದನನನ್ನು ನೋಡಿ, "ಸರ್ವೇಶ್ವರನೇ, ನೀನು ಸರ್ವಜ್ಞನಾದವನು, ಸರ್ವೋತ್ತಮನಾದವನು, ಪರಂಜ್ಯೋತಿಯು ನಿನ್ನನ್ನು ಸ್ತುತಿಸಲು ದೇವತೆಗಳೂ ಕೂಡ ಸಮರ್ಥರಲ್ಲವು. ಹೀಗಿರುವಲ್ಲಿ ಹೆಂಗಸರಾದ ನಾವು ಸ್ತೋತ್ರಮಾಡಲು ಶಕ್ತರೇ? ನಿನ್ನ ಸ್ವರೂಪವನ್ನು ಯೋಗಿಗಳು ಅರಿಯಲಾರರು. ಅಣುವಿಗೂ ಅಲ್ಪನಾದವನು, ಮಹತ್ತಿಗೆ ಮಹತ್ತಾದವನು, ಇಂತಹ ನಿನ್ನನ್ನು ನಮಸ್ಕರಿಸುತ್ತೇವೆ. ಮತ್ತೊಬ್ಬ ವಿಷ್ಣುವು ಇಲ್ಲದುದರಿಂದ ಬ್ರಹ್ಮರುದ್ರೇಂದ್ರಾದಿಗಳಿಗೆ ಸ್ವಾಮಿಯಾದ ನಿನಗೆ ನಮಸ್ಕಾರವು. ಓ ಕೃಷ್ಣಾ! ನಿನಗೆ ಕೋಪವೆಂಬುವುದು ಸ್ವಲ್ಪವೂ ಇರುವುದಿಲ್ಲ. ಪಾಲನವೆಂಬುವುದೇ ಮುಖ್ಯವಾಗಿರುವುದು. ಸ್ತ್ರೀಯರೂ ಮೂಢರೂ ದೀನರೂ ಆದ ಪ್ರಾಣಿಗಳು ಸತ್ಪುರುಷರಿಗೆ ಅನುಕಂಪ್ಯರಾದ[1]ವರು, ಆದುದರಿಂದ ಸ್ತ್ರೀಯರಾದ ನಮ್ಮನ್ನು ರಕ್ಷಿಸುವುದಲ್ಲದೆ, ಕಾಳಿಯನನ್ನು

[1] ದಯೆತೋರಿಸಲು ಯೋಗ್ಯರು.

ಕಾಪಾಡು. ನೀನು ಜಗದಾಧಾರನಾದವನು; ಕಾಳೀಯನು, ಅಲ್ಪಬಲವುಳ್ಳವನು; ನಿನ್ನ ಪಾದಘಾತದಿಂದ ಇನ್ನು ಸ್ವಲ್ಪ ಹೊತ್ತಿನಲ್ಲಿ ಪ್ರಾಣವನ್ನು ಬಿಡುವನು, ಅಲ್ಪವೀರ್ಯನಾದ ಪನ್ನಗನೆಲ್ಲಿ, ಭುವನಾಶ್ರಯನಾದ ನೀನೆಲ್ಲಿ, ಜಗತ್ಸ್ವಾಮಿಯೇ, ಈ ನಾಗರಾಜನು ಪ್ರಾಣವನ್ನು ಬಿಡಲು ಸಿದ್ಧನಾಗಿರುವನು. ಅನುಗ್ರಹಮಾಡಿ ನಮಗೆ ಪತಿಭಿಕ್ಷೆಯನ್ನು ಕೊಟ್ಟು ಕಾಪಾಡು." ಈ ರೀತಿ ನಾಗಪತ್ನಿಯರು ಶ್ರೀಕೃಷ್ಣನನ್ನು ಪ್ರಾರ್ಥಿಸಿದ ತರುವಾಯ, ಕಾಳೀಯನು ಗದ್ಗದಸ್ವರದಿಂದ "ದೇವದೇವ" ಎಂಬುದಾಗಿ, ಮೆಲ್ಲಮೆಲ್ಲಗೆ, ಸ್ತೋತ್ರಮಾಡಲು ಪ್ರಾರಂಭಿಸಿದನು. "ಓ ವಾಸುದೇವನೇ, ನಿನ್ನಲ್ಲಿ ಅಷ್ಟೈಶ್ವರ್ಯವು ಸ್ವಾಭಾವಿಕವಾಗಿರುವುದು. ನೀನು ಪ್ರಕೃತಿಗೂ ಶ್ರೇಷ್ಠನಾದ ಜೀವನಿಗೂ ಶ್ರೇಷ್ಠನಾದವನು, ಇಂದ್ರಿಯಾದಿಗಳಿಗೆ ಪ್ರಧಾನನಾದವನು. ಪ್ರಧಾನವೆಂಬುವುದು ನಿನ್ನಲ್ಲಿಯೇ ಇರುವುದು. ಉತ್ಕೃಷ್ಟ ಸ್ವರೂಪನೇ ನಿನ್ನನ್ನು ಏನೆಂದು ಸ್ತೋತ್ರಮಾಡಲಿ, ನಿನ್ನಿಂದಲೇ ಬ್ರಹ್ಮ ರುದ್ರೇಂದ್ರಾದಿಗಳು ಸಂಭೂತರಾಗಿರುವರು, ನೀನು ಇಚ್ಛಾಗೃಹೀತವಾದ ಅವಯವವುಳ್ಳವನು, ಬ್ರಹ್ಮಾದಿಗಳಿಂದ ನಂದನ ವನೋದ್ಭವವಾದ ಪುಷ್ಪಗಳಿಂದ ಅರ್ಚಿಸಲ್ಪಡತಕ್ಕ ನಿನ್ನನ್ನು ಯಾವ ರೀತಿ, ಅರ್ಚಿಸಲಿ? ಸದ್ರಸದ್ರೂಪಿಯಾದ ನಿನ್ನನ್ನು ಬ್ರಹ್ಮಾದಿ ದೇವತೆಗಳು ತಿಳಿಯಲಾರರು. ಹೀಗಿರುವಲ್ಲಿ ನಾನು ನಿನ್ನನ್ನು ಸ್ತುತಿಸಬಲ್ಲೆನೇ? ದೇವರಾಜನು ನಿನ್ನ ಅವತಾರ ರೂಪಗಳನ್ನು ಅರ್ಚಿಸುವನೇ ಹೊರತು ಪರಮಾರ್ಥ ರೂಪವನ್ನರ್ಚಿಸಲಾರನು. ಅಹಿಂಸಾ ಪುಷ್ಪ, ಇಂದ್ರಿಯನಿಗ್ರಹಪುಷ್ಪ, ಸರ್ವಭೂತದಯಾಪುಷ್ಪ, ಕ್ಷಮಾಪುಷ್ಪ, ಶಮಪುಷ್ಪ, ದಮಪುಷ್ಪ, ಧ್ಯಾನಪುಷ್ಪ, ಸತ್ಯಪುಷ್ಪಗಳೆಂಬ ಎಂಟು ವಿಧವಾದ ಪುಷ್ಪಗಳಿಂದ ಯೋಗಿಗಳು ನಿನ್ನನ್ನು ಅರ್ಚಿಸುವರು. ಇಂತಹ ಪುಷ್ಪಗಳು ಒಂದಾದರೂ ನನ್ನಲ್ಲಿರುವುದಿಲ್ಲ. ಆದುದರಿಂದ ನಿನ್ನನ್ನು ಅರ್ಚಿಸುವುದು ಹೇಗೆ? ಈ ರೀತಿಯುಳ್ಳರತಕ್ಕ ನಾನು ಅರ್ಚಿಸಲಿಲ್ಲ; ಸ್ತುತಿಸಲಿಲ್ಲ; ಹೀಗಿದ್ದಾಗ್ಯೂ ಕರುಣಾಮಯವಾದ ಮನಸ್ಸುಳ್ಳ ನೀನು, ಪ್ರಸನ್ನನಾಗು. ಓ ಕೇಶವ, ಕ್ರೂರವಾದ ಈ ಸರ್ಪಜಾತಿಯಲ್ಲಿ ನಾನು ಹುಟ್ಟಿದವನಾದುದರಿಂದ ಜಾತಿಗೆ ಅನುಸಾರವಾದ ಕೆಲಸವನ್ನು ಮಾಡುತ್ತಿರುವೆನು. ಇದರಲ್ಲಿ ನನ್ನ ಅಪರಾಧವೇನೂ ಇಲ್ಲ. ನೀನೇ ಸಕಲ ಸೃಷ್ಟಿಕರ್ತನು, ಸಕಲ ಸಂಹಾರಕನು, ಸಕಲ ಪಾಲಕನು, ಜಾತಿಗೆ ಅನುಸಾರವಾದ ಚೇಷ್ಟೆಯನ್ನು ಸೃಷ್ಟಿಸಿದವನು. ಆದುದರಿಂದ ನಾನು ಕ್ರೂರಸ್ವಭಾವದಿಂದಿರುವೆನು. ದುಷ್ಟ ಸಂಹಾರಾರ್ಥವಾಗಿ ಪದೇಪದೇ ಅವತಾರ ಮಾಡುತ್ತೇನೆಂದು ನೀನು ಹೇಳುವ ಪ್ರಕಾರ ಕ್ರೂರನಾದ ನನ್ನನ್ನು ದಂಡಿಸುವುದು ನಿನಗೆ ಸಹಜವಾಗಿರುವುದು. ಆದರೆ ನಿನ್ನಿಂದ ಅಜ್ಞನಾದ ನಾನು ದಂಡ್ಯ

ನಾಗಿರುವುದರಿಂದ ಇದಕ್ಕಿಂತಲೂ ಅತಿಶಯವಾದ ವರವು ಬೇಕಾಗಿರುವುದಿಲ್ಲ. ಅಂದರೆ, ಭಗವಂತನಿಂದ ನಿಗ್ರಹವಾಗುವುದೇ ಉತ್ಕೃಷ್ಟವಾದ ಅನುಗ್ರಹವೆಂದು ಅಭಿಪ್ರಾಯವು. ಓ ಭಗವಂತನೇ! ಈಗ ನಾನು ಪರಾಕ್ರಮಹೀನನೂ, ವಿಷರಹಿತನೂ, ಶಿಕ್ಷಿಸಲ್ಪಟ್ಟವನೂ ಸಹ ಆಗಿರುವೆನು. ಆದುದರಿಂದ ಪ್ರಾಣ ಒಂದನ್ನು ಮಾತ್ರ ನನಗೆ ಕೊಡು!" ಎಂದು ವಿಜ್ಞಾಪಿಸಿಕೊಂಡನು. ಈ ರೀತಿ ಹೇಳಿದ ಕಾಳೀಯನ ವಾಕ್ಯವನ್ನು ಕೇಳಿ ಭಗವಂತನಾದ ಕೃಷ್ಣನು ಹೇಳುತ್ತಾನೆ. "ಎಲೈ ನಾಗರಾಜನೇ! ಸಪುತ್ರಪರಿವಾರನಾಗಿ ಯಮುನಾ ಜಲವನ್ನು ಬಿಟ್ಟು, ಸಮುದ್ರವನ್ನು ಪ್ರವೇಶಿಸು, ನಿನ್ನ ತಲೆಯಲ್ಲಿ ನನ್ನ ಕಾಲಿನ ಗುರುತಿರುವುದರಿಂದ ಗರುಡನು ಯಾವಾಗಲೂ ನಿನ್ನನ್ನು ಹಿಂಸಿಸಲಾರನು." ಈ ರೀತಿ ಶ್ರೀಕೃಷ್ಣನು ಆಜ್ಞಾಪಿಸಲು, ನಾಗರಾಜನು ಕೃಷ್ಣನಿಗೆ ನಮಸ್ಕಾರಮಾಡಿ, ಸಮುದ್ರವನ್ನು ಪ್ರವೇಶಿಸಿದನು. ಅನಂತರ ಗೋಪಾಲಕರು ಸತ್ತುಹೋದವನು ಪುನಃ ಬದುಕಿ ಬಂದನೆಂದು ಸಂತೋಷಯುಕ್ತರಾಗಿ ಕೃಷ್ಣನನ್ನು ಆಲಿಂಗನಾಘ್ರಾಣಾದಿಗಳನ್ನು ಮಾಡಿ, ಆನಂದದಿಂದುಂಟಾದ ಕಣ್ಣೀರುಗಳಿಂದ ಅಭಿಷೇಕಮಾಡಿದರು. ಯಮುನಾ ಜಲವೂ ಕೂಡ ನಿರ್ಮಲವಾಯಿತು. ಸಕಲ ಬಂಧುಜನಗಳಿಂದ ಕೃಷ್ಣನು ಸ್ತೋತ್ರ ಮಾಡಿಸಿಕೊಂಡು ಊರನ್ನು ಸೇರಿದನು."

ಇಲ್ಲಿಗೆ ಶ್ರೀ ವಿಷ್ಣು ಪುರಾಣದಲ್ಲಿ ಪಂಚಮಾಂಶದಲ್ಲಿ
ಏಳನೆಯ ಅಧ್ಯಾಯವು ಸಮಾಪ್ತಃ

ಎಂಟನೆಯ ಅಧ್ಯಾಯವು

"ಗೋವುಗಳನ್ನು ಕಾಪಾಡುತ್ತಾ, ರಾಮಕೃಷ್ಣರು, ವನದಲ್ಲಿ ಸಮಾನ ಬಾಲಕರಿಂದೊಡಗೂಡಿ ಸಂಚರಿಸುತ್ತಾ, ರಮ್ಯವಾದ ತಾಳವನಕ್ಕೆ ಪ್ರವೇಶಿಸಿದರು. ತಾಳವನದಲ್ಲಿ ಧೇನುಕನೆಂಬ ರಾಕ್ಷಸನು ಮೃಗ ಮಾಂಸವನ್ನು ತಿನ್ನುತ್ತಾ, ವಾಸ ಮಾಡಿಕೊಂಡಿದ್ದನು. ಧೇನುಕನು ಯಾವಾಗಲೂ ಕತ್ತೆರೂಪಿನಿಂದ ಇರುತ್ತಿದ್ದನು. ತಾಳವನದಲ್ಲಿ ಅನೇಕವಾದ ಫಲಗಳು ಇರುವುದನ್ನು ಗೋಪಬಾಲಕರು ಕಂಡು, ಫಲದಲ್ಲಿ ಅಪೇಕ್ಷೆಯನ್ನು ಹೊಂದಿ, "ಓ ರಾಮ! ಓ ಕೃಷ್ಣ! ಈ ವನವು ಧೇನುಕನಿಂದ ರಕ್ಷಿಸಲ್ಪಟ್ಟಿರುವುದು; ತಾಳೀಫಲಗಳು ಸುವಾಸನೆಯುಳ್ಳವುಗಳಾಗಿರುತ್ತವೆ. ನಮಗೆ ಈ ಹಣ್ಣುಗಳ ಮೇಲೆ ಬಹಳ ಆಸೆಯುಂಟಾಗಿರುವುದು; ನೀವು ಈ ಹಣ್ಣುಗಳನ್ನು ನಮಗೆ ತಂದುಕೊಡಿ," ಎಂದು ಬಾಲಕರು ಕೇಳಲು, ರಾಮಕೃಷ್ಣರಿಬ್ಬರೂ ಮರವನ್ನು ಹತ್ತಿ, ಹಣ್ಣುಗಳನ್ನು ಬಿಡಿಸಿದರು. ಈ ಶಬ್ದ

ವನ್ನು ಕೇಳಿದ ಧೇನುಕನು, ಕೋಪದಿಂದ ಮರದ ಸಮೀಪಕ್ಕೆ ಬಂದು, ಬಲರಾಮನನ್ನು ಹಿಂದಿನ ಎರಡು ಕಾಲುಗಳಿಂದ ಒದ್ದನು. ಆಗ ಬಲರಾಮನು ಧೇನುಕನ ಕಾಲುಗಳನ್ನು ಹಿಡಿದು, ಅಂತರಿಕ್ಷಕ್ಕೆ ತಿರುಗಿಸಿ ಹಾಕಲು, ರಾಕ್ಷಸನು ಗತಜೀವಿತನಾಗಿ ಭೂಮಿಯಲ್ಲಿ ಬಿದ್ದನು. ಧೇನುಕನ ಅನುಚರರಾದ ಗರ್ದಭ ರಾಕ್ಷಸರು, ಕೃಷ್ಣನಿಂದ ಹತರಾದರು. ಆಗ ತಾಳವನವು ಭಯರಹಿತವಾಗಿ ಗೋವುಗಳು ಯಥೇಚ್ಛವಾದ ಹುಲ್ಲುಗಳನ್ನು ತಿನ್ನುವುದಕ್ಕೆ ಅವಕಾಶವಾಯಿತು. ಬಾಲಕರು ಬೇಕಾದಷ್ಟು ಫಲಗಳನ್ನು ಭುಂಜಿಸಿದರು. ತಾಳವನದ ಭೂಭಾಗವು ಫಲಗಳಿಂದ ಭರಿತವಾಯಿತು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಎಂಟನೆಯ ಅಧ್ಯಾಯವು ಸಮಾಪ್ತಃ

ಒಂಬತ್ತನೆಯ ಅಧ್ಯಾಯವು

"ಧೇನುಕಾಸುರನು ಪರಿವಾರಸಹಿತನಾಗಿ ಹತನಾದುದರಿಂದ ತಾಳವನವು ರಮ್ಯವಾಯಿತು. ವಸುದೇವಪುತ್ರರಾದ ರಾಮಕೃಷ್ಣರು ಸಂತೋಷಯುಕ್ತರಾಗಿ ಭಾಂಡೀರವೆಂಬ ವಟವೃಕ್ಷದ ಸಮೀಪಕ್ಕೆ ಬಂದು ಗಾನ ಮಾಡುತ್ತಾ, ಸಿಂಹ ಗರ್ಜನೆ ಮಾಡುತ್ತಾ, ಮರಗಳ ಸೌಂದರ್ಯವನ್ನು ನೋಡುತ್ತಾ, ಹಸುಗಳನ್ನು ಕಾಯುತ್ತಾ, ಅವುಗಳ ಹೆಸರನ್ನು ಕೂಗುತ್ತಾ, ವನಮಾಲಾದಿಗಳಿಂದ ಶೋಭಿಸುತ್ತಾ, ಹಗ್ಗಗಳನ್ನು ಹೆಗಲಿನ ಮೇಲೆ ಧರಿಸುತ್ತಾ, ಇಂದ್ರಾಯುಧದಿಂದ ಕೂಡಿದ ಶ್ವೇತ, ಕೃಷ್ಣ ಮೇಘಗಳಂತೆ ಪ್ರಕಾಶಿಸುತ್ತಾ, ವಿಚಿತ್ರವಾದ ಆಟಗಳಿಂದ ಸಂಚರಿಸುತ್ತಿದ್ದರು. ಸಮಸ್ತಲೋಕನಾಥರಿಗೆ ನಾಥರಾದ ರಾಮಕೃಷ್ಣರು ಭೂಲೋಕದಲ್ಲಿ ಮನುಷ್ಯಧರ್ಮದಲ್ಲಿ ಆಸಕ್ತರಾಗಿ, ಮನುಷ್ಯತ್ವವನ್ನೇ ಬಹುಮಾನಮಾಡುತ್ತಾ, ಮಾನುಷಚೇಷ್ಟಾಯುಕ್ತರಾಗಿ, ವನದಲ್ಲಿ ಸಂಚರಿಸಿದರು. ತೋಳುಗಳನ್ನು ಪಲ್ಲಕ್ಕಿಯಂತೆ ಮಾಡಿಕೊಂಡು ಹುಡುಗರ ಜೊತೆಯಲ್ಲಿ ವಿಹರಿಸುತ್ತಾ ಕಲ್ಲುಗಳ ಆಟಗಳನ್ನಾಡುತ್ತಾ ಇರುವ ಕಾಲದಲ್ಲಿ, ಪ್ರಲಂಬನೆಂಬ ರಾಕ್ಷಸನು ಗೋಪಾಲನ ವೇಷದಿಂದ ರಾಮಕೃಷ್ಣರ ಸಮೀಪಕ್ಕೆ ಬಂದು, ವಿಶ್ವಾಸವನ್ನು ತೋರಿಸುತ್ತಾ, ಛಿದ್ರದಿಂದ ನಾಶಮಾಡಲು, ಸಮಯವನ್ನು ನಿರೀಕ್ಷಿಸುತ್ತಾ, ರಾಮಕೃಷ್ಣಾದಿಗಳ ಜೊತೆಯಲ್ಲಿ, ಕ್ರೀಡನಕವೆಂಬ ನೆಗೆದಾಡುವ ಆಟಗಳನ್ನಾಡುತ್ತಾ ಇದ್ದನು. ಈ ಆಟವು ಇಬ್ಬಿಬ್ಬರು ಜೊತೆಯಾಗಿ ಆಡತಕ್ಕ

ದೆಂದು ನಿಶ್ಚಯಿಸಿ ಆಡುತ್ತಿದ್ದರು. ಶ್ರೀದಾಮನೆಂಬ ಹುಡುಗನಿಂದ ಕೃಷ್ಣನೂ ಪ್ರಲಂಬನಿಂದ ಬಲರಾಮನೂ, ಇತರ ಗೋಪಾಲಕರು, ಗೋಪಾಲಕರಿಂದ ಕೂಡಿ ಆಡುತ್ತಿದ್ದರು. ಕೃಷ್ಣನು ಶ್ರೀದಾಮನನ್ನೂ, ಬಲರಾಮನು ಪ್ರಲಂಬನನ್ನೂ ಸಹ ಜಯಿಸಿದರು. ಸೋತವರು ಗೆದ್ದವರನ್ನು ಹೊರಬೇಕಾಯಿತು, ಗೆದ್ದವರನ್ನು ಸೋತವರು ಹೊತ್ತುಕೊಂಡು ಭಾಂಡೀರವೆಂಬ ವಟವೃಕ್ಷದವರೆಗೂ ಹೋಗಿ, ಹಿಂತಿರುಗಿಬಂದರು. ಪ್ರಲಂಬನು ಬಲರಾಮನನ್ನು ಹೊತ್ತುಕೊಂಡು, ಅಂತರಿಕ್ಷಕ್ಕೆ ಹಾರಿದನು. ಬಲರಾಮನ ಭಾರವನ್ನು ಪ್ರಲಂಬನು ಸಹಿಸಲು ಅಶಕ್ತನಾದಾಗ್ಯೂ ಬಹಳ ಪ್ರಯಾಸದಿಂದ ದೇಹವನ್ನು ದೊಡ್ಡದಾಗಿ ಬೆಳೆಸಿಕೊಂಡು ಅಂತರಿಕ್ಷದಲ್ಲಿ ಸಂಚರಿಸಿದನು. ಮಹಾಭಯಂಕರನಾದ ರಾಕ್ಷಸನು ಹೊತ್ತುಕೊಂಡು ಹೋಗ ತಕ್ಕ ಕಾಲದಲ್ಲಿ, ಬಲರಾಮನು ಕೃಷ್ಣನನ್ನು ಕುರಿತು, ಕೃಷ್ಣ ! ಕೃಷ್ಣ ! ಎಂದು ಗಟ್ಟಿಯಾಗಿ ಕೂಗಿ, ಅದ್ಭುತಾಕಾರನಾದ ರಾಕ್ಷಸನು ನನ್ನನ್ನು ಹೊತ್ತುಕೊಂಡು ಹೋಗುತ್ತಾನೆ. ಈಗ ನಾನೇನು ಮಾಡಲಿ ಎಂದು ಕೇಳಲು, ಆಗ ಕೃಷ್ಣನು ಬಲರಾಮನೂ ತನ್ನ ಅಂಶವೆಂಬ ಭಾವನೆಯಿಂದ ಹೇಳುತ್ತಾನೆ: "ಅಣ್ಣಾ ಇದೇನು ಮಾನುಷಭಾವವನ್ನು ಈಗಲೂ ತೋರಿಸಬೇಕೇ? ನೀನು ಸರ್ವಾತ್ಮಕನು, ಸರ್ವಗುಹ್ಯಾಧಿಪತಿಯು, ಜಗದ್ಬೀಜಕಾರಣನಾಗಿರುವ ನನ್ನನ್ನು ಮರತೆಯಾ? ನನ್ನಂತೆ ನೀನು ಜಗತ್ಕಾರಣನಲ್ಲವೆ? ಭೂಭಾರಾವತರಣಾರ್ಥ ವಾಗಿ ಮರ್ತ್ಯಲೋಕದಲ್ಲಿ ಅವತರಿಸಿರುವನು ನೀನು. ಅಂತರಿಕ್ಷವೇ ಶಿರಸ್ಸಾಗಿ ಉಳ್ಳವನು. ಮೇಘಗಳೇ ನಿನಗೆ ಕೇಶಗಳು, ಭೂಮಿಯೇ ಕಾಲುಗಳು, ಅಗ್ನಿಯೇ ಮುಖವು, ಚಂದ್ರನೇ ಮನಸ್ಸು, ವಾಯುವೇ ಶ್ವಾಸನಿಶ್ವಾಸಗಳು, ನಾಲ್ಕು ದಿಕ್ಕುಗಳೇ ತೋಳುಗಳು, ಸಹಸ್ರಮುಖವುಳ್ಳವನು, ಭಗವಂತನಾದವನು, ಮಹಾತ್ಮನು, ಅನೇಕವಾದ ಕೈ, ಕಾಲು, ಶರೀರವುಳ್ಳವನು, ಸಹಸ್ರಪದ್ಮೋದ್ಭ ವನು. ಮುನಿಗಳು ನಿನ್ನನ್ನು ಸಹಸ್ರವಿಧವಾಗಿ ಸ್ತುತಿಸುವರು; ನಿನ್ನ ದಿವ್ಯರೂಪ ವನ್ನು ಯಾರೂ ನೋಡಲಾರರು; ನಿನ್ನ ಅವತಾರರೂಪುಗಳನ್ನು ದೇವತೆಗಳು ಅರ್ಚಿಸುವರು; ಭೂಮಿಯನ್ನು ಧರಿಸಿರುವನು; ಸಮುದ್ರದ ನೀರನ್ನು ಬಡ ಬಾಗ್ನಿಯು ಪಾನಮಾಡುವುದು, ಬಡಬಾಗ್ನಿಯಲ್ಲಿರತಕ್ಕ ಘನೀಭೂತವಾದ ಜಲ ವನ್ನು ಚಂದ್ರನು ಹಿಮಾದ್ರಿಯಲ್ಲಿ ಹಾಕುವನು; ಗ್ರೀಷ್ಮಕಾಲದಲ್ಲಿ ಸೂರ್ಯನು ಗಟ್ಟಿಯಾದ ಹಿಮವನ್ನು ಜಲವನ್ನು ಮಾಡುವನು; ಇದೇ ರೀತಿ ನೀನು ಜಗತ್ತನ್ನು ಪ್ರಳಯಕಾಲದಲ್ಲಿ ಪಾನಮಾಡುವೆ. ಪುನಃ ನಿನ್ನಿಂದಲೇ ಹುಟ್ಟು ವುದು, ಹೇ ವಿಶ್ವಾತ್ಮಕನೇ! ನೀನೂ ನಾನೂ ಒಬ್ಬನೇ ಆಗಿ ಜಗತ್ಕಾರಣನಾದ ವನು. ಜಗತ್ತಿನ ಸ್ಥಿತಿಗಾಗಿ ನಾವಿಬ್ಬರೂ ಬೇರೆಬೇರೆಯಾಗಿರುವೆವು. ನೀನು

ಅಪಾರವಾದ ಮಹಿಮೆಯುಳ್ಳವನು. ಮಾನುಷಭಾವವನ್ನು ಬಿಟ್ಟು, ದಾನವನನ್ನು ಸಂಹರಿಸಿ ಬಂಧುಗಳಿಗೆ ಹಿತವನ್ನುಂಟುಮಾಡು" ಎಂದು ಹೇಳಲು, ಬಲರಾಮನು ಕೃಷ್ಣನಿಂದ ಆಜ್ಞಾಪಿಸಲ್ಪಟ್ಟವನಾಗಿ, ಕೋಪದಿಂದ ಪ್ರಲಂಬನ ಶಿರಸ್ಸಿನ ಮೇಲೆ ಮುಷ್ಟಿಯಲ್ಲಿ ಹೊಡೆಯಲು, ಪ್ರಲಂಬನು, ಮುಷ್ಟಿಪ್ರಹಾರದಿಂದ ರಕ್ತವನ್ನು ವಮನಮಾಡುತ್ತಾ, ಭೂಮಿಯಲ್ಲಿ ಬಿದ್ದು ಹತನಾದನು. ಇದನ್ನು ನೋಡಿದ ಗೋಪಾಲಕರು ಪರಮಹರ್ಷಿತರಾಗಿ, ಜಯಘೋಷವನ್ನು ಮಾಡಿದರು. ಬಲರಾಮನು ಕೃಷ್ಣಾದಿಗಳಿಂದ ಕೂಡಿ, ಹರ್ಷಯುಕ್ತನಾಗಿ ಗೋಕುಲವನ್ನು ಹೊಂದಿದನು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಒಂಬತ್ತನೆಯ ಅಧ್ಯಾಯವು ಸಮಾಪ್ತಃ

ಹತ್ತನೆಯ ಅಧ್ಯಾಯವು

"ಈ ಪ್ರಕಾರ ನಂದಗೋಕುಲದಲ್ಲಿ ರಾಮಕೃಷ್ಣರು ವಿಹರಿಸುವ ಕಾಲದಲ್ಲಿ, ಮಳೆಗಾಲವು ಕಳೆದುಹೋಗತಕ್ಕ ಕಾಲವು ಪ್ರಾಪ್ತವಾಯಿತು. ಶರತ್ಕಾಲವಾದುದರಿಂದ ಸ್ವಲ್ಪ ಜಲದಲ್ಲಿರತಕ್ಕ ಮೀನುಗಳು ಗೃಹಸ್ಥನಾದವನು ಪುತ್ರಕ್ಷೇತ್ರಾದಿಸಕ್ತನಾಗಿ ಮಮಕಾರದಿಂದ ತಪಿಸುವಂತೆ, ತಾಪವನ್ನು ಹೊಂದಿದವು. ಯೋಗಿಗಳು ಸಂಸಾರವು ಅಸಾರವಾದುದೆಂದು ತಿಳಿದು, ಸಂಸಾರವನ್ನು ಬಿಡುವಹಾಗೆ, ನವಿಲುಗಳು ಮದವನ್ನು ಬಿಟ್ಟವು. ಜ್ಞಾನಿಯಾದವನು ಗೃಹವನ್ನು ಬಿಡುವಂತೆ ಮೇಘಗಳು ಜಲದಿಂದ ಮುಕ್ತವಾಗಿ, ನಿರ್ಮಲವಾದವು. ಮನುಷ್ಯನ ಮನಸ್ಸು ಮಮಕಾರಬಾಹುಳ್ಯದಿಂದ ಶೋಷಿಸುವಂತೆ, ಸೂರ್ಯನ ಕಿರಣಗಳಿಂದ ಸರೋವರಗಳು ಶುಷ್ಕಗಳಾದವು. ಸತ್ಪುರುಷರ ಮನಸ್ಸುಗಳು ಜ್ಞಾನಾತಿರೇಕದಿಂದ ಸಮತ್ವವಾಗುವ ಹಾಗೆ ಜಲವು ಕುಮುದಸಂಬಂಧದಿಂದ ಸಮತ್ವವನ್ನು ಹೊಂದಿದವು. ಯೋಗಿಯಾದವನು ಸತ್ಕುಲದಲ್ಲಿ ಚರಮದೇಹವನ್ನು ಅಂದರೆ ಮುಕ್ತನಾಗುವುದಕ್ಕೆ ಕಡೇ ಜನ್ಮವನ್ನು ಹೊಂದುವಹಾಗೆ, ಚಂದ್ರನು ಅಖಂಡಮಂಡಲನಾದನು. ಜ್ಞಾನಿಯಾದವನು ಕ್ಷೇತ್ರಪುತ್ರಾದಿಗಳನ್ನು ಕೊಂಚಕೊಂಚವಾಗಿ ಬಿಡುವಂತೆ, ಕೆರೆ ಮುಂತಾದವುಗಳು ದಡವನ್ನು ಮೆಲ್ಲಮೆಲ್ಲಗೆ ಬಿಡುತ್ತಾ ಬಂದುವು. ಅನೇಕ ವಿಘ್ನಗಳಿಂದ ಕುಯೋಗಿಗಳು ಕ್ಲೇಶಗಳಿಂದ ಹತರಾಗುವಂತೆ, ಪುನಃ ಯೋಗನಿಷ್ಠರಾಗುವಂತೆ ಹಂಸಪಕ್ಷಿಗಳು ಸರೋವರಗಳ ನೀರು ಕಮ್ಮಿಯಾದುದ

ನಿಂದ ಯೋಗಾಸಕ್ತಗಳಾದುವು. ಯತಿಯಾದವನು ನಿಶ್ಚಲವಾದ ಮನಸ್ಸಿನಿಂದ ಕ್ರಮವಾಗಿ ಮಹಾಯೋಗವನ್ನು ಹೊಂದಿದಹಾಗೆ, ಸಮುದ್ರನು ನಿಶ್ಚಲವಾದ, ನಿರ್ವಿಕಾರವಾದ, ಜಲವುಳ್ಳವನಾದನು. ಸತ್ಪುರುಷರ ಮನಸ್ಸುಗಳು ಸರ್ವಗತನಾದ ಶ್ರೀ ಮಹಾವಿಷ್ಣುವನ್ನು ತಿಳಿದು, ನಿರ್ಮಲವಾಗುವಂತೆ, ಜಲಗಳು ನಿರ್ಮಲಗಳಾದವು. ಯೋಗಿಗಳ ಮನಸ್ಸಿನ ಕ್ಲೇಶಗಳು ಯೋಗಾಗ್ನಿಯಿಂದ ದಗ್ಧವಾಗಿ, ನಿರ್ಮಲಮನಸ್ಸಿನಂತೆ, ಅಂತರಿಕ್ಷವು ಮೇಘಗಳಿಂದ ರಹಿತವಾಗಿ, ನಿರ್ಮಲವಾಯಿತು. ಮಹಾತ್ಮನು ವಿವೇಕದಿಂದ ಅಹಂಕಾರಾದಿಗಳಿಂದ ಉತ್ಪನ್ನವಾದ ದುಃಖವನ್ನು ಪರಿಹಾರಮಾಡಿಕೊಳ್ಳುವ ಹಾಗೆ, ಸೂರ್ಯನ ತಾಪವನ್ನು ಚಂದ್ರನು ಶಮನ ಮಾಡುವನು. ಶಬ್ದಾದಿ ಇಂದ್ರಿಯಾರ್ಥಗಳಿಂದ ಶ್ರೋತ್ರಾದಿ ಇಂದ್ರಿಯಗಳು ನಿರ್ಮಲವಾಗುವಂತೆ ಶರತ್ಕಾಲವು ಅಂತರಿಕ್ಷದಲ್ಲಿ ಮೇಘಗಳನ್ನೂ, ಭೂಮಿಯ ಮಾಲಿನ್ಯವನ್ನೂ, ನೀರಿನ ಕಾಲುಷ್ಯವನ್ನೂ ಸಹ ನಿರ್ಮಲಮಾಡಿತು. ಪ್ರಾಣಾಯಾಮವನ್ನು ಪೂರಕ, ರೇಚಕ, ಕುಂಭಕಾದಿಗಳಿಂದ (ಪೂರಕವೆಂದರೆ, ವಾಯುವನ್ನು ದೇಹದಲ್ಲಿ ತುಂಬುವುದು, ಕುಂದಕವೆಂದರೆ, ಒಂದು ಸ್ಥಳದಲ್ಲಿ ವಾಯುವನ್ನು ಸ್ಥಾಪಿಸುವುದು. ರೇಚಕವೆಂದರೆ, ವಾಯುವನ್ನು ಹೊರಕ್ಕೆ ಬಿಡುವುದು.) ಅಭ್ಯಾಸಮಾಡುವಂತೆ, ಸರೋವರದ ನೀರು ಪೂರ್ಣವಾಗಿ ನಿಂತು, ಗದ್ದೆ ತೋಟ ಮುಂತಾದವುಗಳಿಗೆ ಬಿಡಲ್ಪಟ್ಟಿತು. ಈ ಪ್ರಕಾರದಿಂದಿರುವ ಶರತ್ಕಾಲದಲ್ಲಿ ಗೋಕುಲವಾಸಿಗಳು ಇಂದ್ರನ ಪೂಜಾರ್ಥವಾಗಿ ಉದ್ಯುಕ್ತರಾದುದನ್ನು ಕೃಷ್ಣನು ನೋಡಿ, ಗೋಪವೃದ್ಧರಿಗೆ ಹೇಳುತ್ತಾನೆ: "ಇದೇನು, ನಿಮಗೆ ಮಹಾನಂದವುಂಟಾಗಿರುವುದು ? ಇಂದ್ರನ ಮಹೋತ್ಸವವೆಂದರೇನು ?" ಎಂದು ಕೇಳಲು ; ನಂದಗೋಪನು ಹೇಳುವನು : "ಇಂದ್ರನು ಮೇಘಗಳಿಗೆ ಅಧಿಪತಿಯು; ಅವನ ಆಜ್ಞೆಯಿಂದ ಮೇಘಗಳು ವರ್ಷಿಸಿ, ಅದರಿಂದ ಸಸ್ಯಾದಿಗಳು ಹುಟ್ಟಿ, ಸಂತೋಷವನ್ನುಂಟುಮಾಡುವುದು—ನಮ್ಮ ಗೋವುಗಳು ಮಳೆಯಿಂದುತ್ಪನ್ನವಾದ ಹುಲ್ಲುಗಳನ್ನು ಸೇವಿಸಿ, ಬಹಳವಾದ ಹಾಲನ್ನು ಕರೆಯುವುವು ; ಕರುಗಳಿಂದ ಕೂಡಿರುವುವು ; ಇವುಗಳಿಂದ ನಾವು ತುಷ್ಟರೂ, ಪುಷ್ಟರೂ ಸಹ ಆಗುವೆವು. ಸುವೃಷ್ಟಿಯುಂಟಾದರೆ ಭೂಮಿಯು ಸಸ್ಯಸಮೃದ್ಧಿಯಾಗುವುದು. ತೃಣಸಮೃದ್ಧಿಯಾಗುವುದು. ಜನಗಳಿಗೆ ಹಸಿವು ಕಮ್ಮಿಯಾಗುವುದು. ಭೂಮಿಯಲ್ಲಿರತಕ್ಕ ಜಲವನ್ನು ಸೂರ್ಯಕಿರಣಗಳು ಮೇಘಗಳಲ್ಲಿ ಬಿಡುತ್ತವೆ. ಮೇಘಗಳು ಭೂಮಿಗೆ ವರ್ಷಿಸುತ್ತವೆ. ಈ ಕಾರಣಗಳಿಂದ ರಾಜರೂ, ನಾವೂ, ಇತರ ಜನರೂ ಸಹ ಇಂದ್ರನನ್ನು ಪೂಜಿಸುವ ಪದ್ಧತಿಯಿರುವುದು." ಈ ಪ್ರಕಾರ ನಂದಗೋಪನು ಹೇಳಲು, ಆ ಮಾತಿಗೆ ಕೃಷ್ಣನು ಇಂದ್ರನಿಗೆ ಕೋಪವುಂಟಾಗು

ಪ್ರದಕ್ಕಾಗಿ ನಂದಗೋಪನನ್ನು ಕುರಿತು, ಹೇಳುತ್ತಾನೆ: "ನಾವು ಕೃಷಿಮಾಡತಕ್ಕವರಲ್ಲ, ವ್ಯಾಪಾರಮಾಡತಕ್ಕವರಲ್ಲ, ನಾವು ವನಚರರಾದುದರಿಂದ, ನಮಗೆ ಗೋವುಗಳೇ ಪ್ರಧಾನವಾದ ದೈವವು. ವ್ಯವಸಾಯಗಾರರಿಗೆ ವ್ಯವಸಾಯವೇ ಪ್ರಧಾನವಾದುದು, ವ್ಯಾಪಾರಗಾರರಿಗೆ ವ್ಯಾಪಾರವೇ ಜೀವನವು; ನಮಗೆ ಗೋರಕ್ಷಣೆಯೇ ಮುಖ್ಯವಾದ ವೃತ್ತಿಯು; ಯಾವ ಯಾವ ವರ್ಣದವರಿಗೆ ಯಾವ ವಿದ್ಯೆಯು ರೂಢಿಯಾಗಿರುವುದೋ, ಆ ವೃತ್ತಿಯನ್ನೇ ಆಶ್ರಯಿಸಬೇಕು. ಅದೇ ಪೂಜನೀಯವಾದುದು, ಉಪಕಾರಿಯಾದುದು. ಮನುಷ್ಯನು ಫಲಾನುಭವವಾದ ವಸ್ತುವನ್ನು ಬಿಟ್ಟು ಬೇರೊಂದು ವಸ್ತುವನ್ನು ಪೂಜಿಸಿದರೆ, ಅವನಿಗೆ ಇಹಪರಗಳಲ್ಲಿ ಮಂಗಳವಾಗಲಾರದು. ವ್ಯವಸಾಯಗಾರರಿಗೆ ಹೊಲಗಳವರೆವಿಗೆ ಎಲ್ಲೆಯಾಗಿರುವದು. ಹೊಲಗಳಿಂದ ಜೀವನವಿರುವುದು; ನಾವು ವನಚಾರಿಗಳಾದುದರಿಂದ ನಮಗೆ ಪರ್ವತವು ಎಲ್ಲೆಯಾಗಿರುವುದು. ಪರ್ವತದ ತೃಣ ಜಲಾಶಯದಿಂದ ನಾವುಗಳೂ ಮತ್ತು ನಮ್ಮ ಗೋವುಗಳೂ ಸಹ ಸುಖಿಗಳಾಗಿರುತ್ತೇವೆ. ಆದುದರಿಂದ ನಮಗೆ ಆಶ್ರಯವಾದ ಗೋವರ್ಧನ ಪರ್ವತವನ್ನೂ, ನಮಗೆ ದನವಾದ ಗೋವುಗಳನ್ನೂ ಪೂಜಿಸೋಣ. ಬ್ರಾಹ್ಮಣರು ಮಂತ್ರ ಯಜ್ಞವನ್ನು ಮಾಡುತ್ತಾರೆ. ಕರ್ಷಕರು ಸೀರಯಜ್ಞವನ್ನು ಮಾಡುತ್ತಾರೆ. ವನಪರ್ವತಗಳನ್ನು ಆಶ್ರಯಿಸಿರತಕ್ಕ ನಾವು ಗಿರಿ, ಗೋ ಯಜ್ಞಗಳನ್ನು ಮಾಡತಕ್ಕುದು ಯುಕ್ತವಾಗಿರುವುದರಿಂದ, ನೀವು ಗೋವರ್ಧನ ಪರ್ವತವನ್ನು ಪೂಜಿಸಿ; ಇಂದ್ರನಿಂದ ನಮಗೇನೂ ಪ್ರಯೋಜನವಿಲ್ಲವು. ಆದುದರಿಂದ ನಮ್ಮ ಹಳ್ಳಿಯಲ್ಲಿರತಕ್ಕವರೆಲ್ಲರೂ ಹಾಲು ಮುಂತಾದ ಪದಾರ್ಥಗಳನ್ನು ತೆಗೆದುಕೊಂಡು ಗೋವರ್ಧನ ಗಿರಿಯನ್ನು ಪೂಜಿಸಿ, ಬ್ರಾಹ್ಮಣರಿಗೆ ಭೋಜನಾದಿಗಳನ್ನೂ, ಹೋಮಾದಿಗಳನ್ನೂ ಮಾಡಿ, ನಮ್ಮ ಗೋವುಗಳಿಗೆ ಶರತ್ಕಾಲೀನವಾದ ಪುಷ್ಪಗಳಿಂದ ಅಲಂಕಾರಮಾಡಿ, ಸಂತೋಷಯುಕ್ತರಾಗೋಣ. ಇದೇ ನನ್ನ ಅಭಿಮತ. ನೀವೆಲ್ಲರೂ ಪ್ರೀತಿಯಿಂದ ಮಾಡಿದರೆ, ಗೋವುಗಳಿಗೂ ಪರ್ವತಕ್ಕೂ ನನಗೂ ಸಹ ಪ್ರೀತಿಯಾಗುವುದು." ಈ ಪ್ರಕಾರ ಶ್ರೀಕೃಷ್ಣನು ಹೇಳಿದುದಕ್ಕೆ ನಂದ ಗೋಪಾದಿಗಳು ಸಂತೋಷಯುಕ್ತರಾಗಿ ಕೃಷ್ಣನನ್ನು ಸ್ತುತಿಸಿದರು—"ಓ ಕೃಷ್ಣಾ ನೀನು ಹೇಳಿದ ಮಾತು ನಿಜವಾದುದು! ನಿನ್ನ ಇಷ್ಟಾನುಸಾರ ಗಿರಿಯಜ್ಞವನ್ನೇ ಮಾಡುತ್ತೇವೆಂದು" ಹೇಳಿ, ಹಾಲು ಮೊಸರು ಮುಂತಾದ ಪದಾರ್ಥಗಳಿಂದ ಗೋವರ್ಧನಗಿರಿಗೆ ಹೋಮಾದಿಗಳನ್ನು ಮಾಡಿ, ಬಲಿಕರ್ಮವನ್ನು ಮಾಡಿದರು. ಅನಂತರ ಅನೇಕಜನ ಬ್ರಾಹ್ಮಣರನ್ನು ಅನ್ನಾದಿಗಳಿಂದ ಸತ್ಕರಿಸಿದರು. ಗೋವುಗಳು ಪೂಜಿಸಲ್ಪಟ್ಟು ಗಿರಿಯನ್ನು ಪ್ರದಕ್ಷಿಣೆಮಾಡಿದವು. ಎತ್ತುಗಳೂ ಕೂಡಾ

ಸಂತೋಷದಿಂದ ಮೇಘಗಳಂತೆ ಗರ್ಜನೆಮಾಡಿದುವು. ಕೃಷ್ಣನು ಪರ್ವತದ ಶಿಖರದಲ್ಲಿ ನಾನೇ ಶೈಲಾಭಿಮಾನಿಯಾದ ದೇವತೆಯೆಂದು ಮೂರ್ತಿಶರೀರಕನಾಗಿ, ಗೋಪಾಲಕರಿಂದ ಕೊಡಲ್ಪಟ್ಟ ಅನ್ನಾದಿಗಳನ್ನು ಭುಂಜಿಸಿದನು. ಕೃಷ್ಣನು ಗೋಪರಿಂದ ಕೂಡಿ ಶೈಲಾಭಿಮಾನಿದೇವತಾರೂಪಿಯಾದ ತನ್ನ ಎರಡನೆಯ ದೇಹವನ್ನು ಪೂಜಿಸಿದನು. ಅನಂತರದಲ್ಲಿ ಗೋಪಾಲಕರು ಗೋವರ್ಧನಗಿರಿಯಿಂದ ವರಗಳನ್ನು ಪಡೆದು ಗೋಕುಲಕ್ಕೆ ಬಂದರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಹತ್ತನೆಯ ಅಧ್ಯಾಯವು ಸಮಾಪ್ತಃ

ಹನ್ನೊಂದನೆಯ ಅಧ್ಯಾಯವು

"ಗೋಪಾಲಕರು ಪ್ರತಿವರ್ಷವೂ ಮಾಡುತ್ತಿದ್ದ ತನ್ನ ಯಜ್ಞವನ್ನು ಈ ವರ್ಷವೂ ಮಾಡಲಿಲ್ಲವೆಂದು ದೇವೇಂದ್ರನು ಕೋಪಯುಕ್ತನಾಗಿ ಸಂವರ್ತಕವೆಂಬ ಮೇಘವನ್ನು ಕುರಿತು ಆಜ್ಞಾಪಿಸುತ್ತಾನೆ. "ಹೇ! ಸಂವರ್ತಕನೇ! ನಂದಗೋಪನು ಕೃಷ್ಣನ ಆಶ್ರಯಬಲದಿಂದ ನನಗೆ ಮಾಡುತ್ತಿದ್ದ ಪೂಜೆಯನ್ನು ಬಿಟ್ಟಿರುವನು. ಆದುದರಿಂದ ಗೋಕುಲದಲ್ಲಿ ವೃಷ್ಟಿಯನ್ನುಂಟುಮಾಡಿ ಗೋವುಗಳಿಗೂ ಗೋಪಾಲಕರಿಗೂ ಸಹ ಹಿಂಸೆಯನ್ನು ಮಾಡು. ನಾನು ಐರಾವತವನ್ನು ಹತ್ತಿಕೊಂಡು ಬಂದು, ನಿನಗೆ ಸಹಾಯಕನಾಗಿರುವೆನು" ಎಂದು ಹೇಳಲು, ಸಂವರ್ತಕನು ಇಂದ್ರನ ಆಜ್ಞಾನುಸಾರ ಭಯಂಕರವಾದ ವೃಷ್ಟಿಯನ್ನು ಕರೆದನು. ಈ ಮಳೆಯಿಂದ ಭೂಮಿ, ದಿಕ್ಕುಗಳು, ಅಂತರಿಕ್ಷ ಇವುಗಳೆಲ್ಲವೂ ಒಂದೇ ಆದವು, ಅನೇಕ ಮಿಂಚುಗಳಿಂದಲೂ, ಮೇಘಗಳ ಘರ್ಜನೆಯಿಂದಲೂ, ದಿಕ್ಕುಗಳು ತುಂಬಿಹೋದುವು. ಲೋಕವು ಅಂಧಕಾರವಾಗಿ ಜಲಮಯವಾಯಿತು. ಗೋವುಗಳು ಮಳೆ, ಗಾಳಿ, ಇವುಗಳಿಂದ ಕಾಲಿನ ಸಂದಿಯಲ್ಲಿ ತಲೆಹಾಕಿಕೊಂಡು, ಮೂರ್ಛೆಯನ್ನು ಹೊಂದಿದವು. ಹುಡುಗರು ದೀನರಾಗಿ ಮಳೆಯಿಂದ ಪೀಡಿತರಾಗಿ, ಕೃಷ್ಣ! ನಮ್ಮನ್ನು ಕಾಪಾಡು ಕಾಪಾಡು! ಎಂದು ರೋದನಮಾಡಿದರು. ಈ ಪ್ರಕಾರ ಗೋಕುಲವು ದುಃಖಮಯವಾದುದನ್ನು ನೋಡಿ, ಕೃಷ್ಣನು ಯೋಚಿಸುತ್ತಾನೆ! ಇಂದ್ರನು ತನಗೆ ಗೋಪಾಲಕರು ಯಜ್ಞವನ್ನು ಮಾಡಲಿಲ್ಲವೆಂಬುದಾಗಿ ಕುಪಿತನಾಗಿ, ಈ ರೀತಿ ನಮಗೆ ತೊಂದರೆ

ಯನ್ನು ಮಾಡಿರುವನು. ಈಗ ನಾನು ಗೋಕುಲವನ್ನು ರಕ್ಷಿಸತಕ್ಕದ್ದು ಮುಖ್ಯವಾದುದೆಂದು ಯೋಚಿಸಿ, ಗೋವರ್ಧನಗಿರಿಯನ್ನು ಕಿತ್ತು, ಒಂದೇ ಕೈಯಲ್ಲಿ ಛತ್ರಿಯಂತೆ ಧರಿಸಿ, ನಂದಾದಿಗಳಿಗೆ ಹೇಳುತ್ತಾನೆ: "ನೀವುಗಳೆಲ್ಲರೂ ಪರ್ವತವೆಂಬ ಛತ್ರಿಯಲ್ಲಿ ವಾಸಮಾಡಿಕೊಂಡು, ಮಳೆಹಿಂಸೆಯನ್ನು ತಪ್ಪಿಸಿಕೊಳ್ಳಿರಿ" ಎಂದು ಹೇಳಲು, ಗೋಪಾಲಕರು ಸಕಲ ಸಾಮಗ್ರಿಗಳನ್ನು ತೆಗೆದುಕೊಂಡು ಸಪರಿವಾರವಾಗಿ, ಗೋವರ್ಧನಗಿರಿಯಲ್ಲಿ ವಾಸಮಾಡಿ, ಕೃಷ್ಣನು ಒಂದೇ ಕೈಯಿಂದ ಲೀಲೆಯಿಂದ ಪರ್ವತವನ್ನು ಧರಿಸಿರುವುದನ್ನು ನೋಡಿ, ಬಹಳ ಆಶ್ಚರ್ಯವನ್ನು ಹೊಂದಿ, ಕೃಷ್ಣನನ್ನು ಹೊಗಳಿದರು. ಇಂದ್ರನಿಂದ ಪ್ರೇರಿತವಾದ ಮೇಘವು, ಏಳುರಾತ್ರಿ ಗೋವುಗಳನ್ನು ನಾಶಮಾಡಬೇಕೆಂದು ವರ್ಷಿಸಿತು. ಶ್ರೀಕೃಷ್ಣನಿಂದ ಗೋಕುಲವು ಸಂರಕ್ಷಿಸಲ್ಪಟ್ಟುದನ್ನು ಇಂದ್ರನು ನೋಡಿ, ತಾನು ಮಾಡಿದ ಪ್ರಯತ್ನವು ನಿಷ್ಫಲವಾಯಿತೆಂದು ತಿಳಿದು, ಮೇಘವನ್ನು ಹಿಂದಕ್ಕೆ ಕಳುಹಿಸಿ, ತಾನೂ ಸಹ ಹಿಂತಿರುಗಿದನು. ಆಗ ಕೃಷ್ಣನು ಮಳೆಯು ನಿಂತಿತು ಎಂದು ಗಿರಿಯನ್ನು ಪೂರ್ವದಂತಿರಿಸಿ ಗೋಪಾಲಕರಿಂದ ಕೂಡಿ ಗೋಕುಲವನ್ನು ಹೊಂದಿದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಹನ್ನೊಂದನೆಯ ಅಧ್ಯಾಯವು ಸಮಾಪ್ತಃ

ಹನ್ನೆರಡನೆಯ ಅಧ್ಯಾಯವು

"ಅನಂತರ, ದೇವೇಂದ್ರನು ನಾನು ಭಗವಂತನಲ್ಲಿ ಅಪರಾಧವನ್ನು ಹೊಂದಿದೆನು. ಕೃಷ್ಣರಕ್ಷಿತರಾದ ಗೋಪಾಲಕರನ್ನೂ ಗೋವುಗಳನ್ನೂ ಸಹ ನಾಶಮಾಡಬೇಕೆಂದು ಪ್ರಯತ್ನಪಟ್ಟರೆ, ಅದು ಸಾಧ್ಯವಾಗುವುದುಂಟೆ? ನಾನು ಮಾಡಿದ ಅಪರಾಧವನ್ನು ಕ್ಷಮಿಸುವುದಕ್ಕಾಗಿ ಭಗವಂತನ ದರ್ಶನವನ್ನು ಮಾಡಬೇಕೆಂದು ನಿಶ್ಚಯಿಸಿ, ಐರಾವತವನ್ನು ಹತ್ತಿಕೊಂಡು ಬಂದು, ಗೋವರ್ಧನಗಿರಿಯಲ್ಲಿ ಸಂಚರಿಸುತ್ತಿರುವ ಗೋಪ ವೇಷಧಾರಿಯಾದ, ಮಹಾವೀರ್ಯನಾದ, ಸಕಲ ಜಗದ್ರಕ್ಷಕನಾದ ಗೋಪಕುಮಾರರಿಂದ ಪರಿವೃತನಾದ, ಅಂತರಂಗವಾಗಿ ಗರುಡನು ಪಕ್ಷಿಗಳಿಂದ ಹರಿಯ ತಲೆಗೆ ಛಾಯೆಯನ್ನು ಮಾಡುತ್ತಿದ್ದ ಗರುತ್ಮಂತನನ್ನೂ,

ಕೃಷ್ಣನನ್ನೂ ಸಹ ನೋಡಿ, ಐರಾವತದಿಂದ ಇಳಿದು, ಕೃಷ್ಣನ ಸಮೀಪಕ್ಕೆ ಬಂದು, ಕೃಷ್ಣನನ್ನು ಕುರಿತು, ಅಂತರಂಗವಾಗಿ ಹೇಳುತ್ತಾನೆ: "ಓ, ಕೃಷ್ಣ! ಈಗ ನಾನು ನಿನ್ನಲ್ಲಿ ಬರಲು ಕಾರಣವೇನೆಂದರೆ: ನೀನು ಅನ್ಯಥಾ ಯೋಚಿಸ ಬೇಡ. ಭೂಭಾರ ಪರಿಹಾರಾರ್ಥವಾಗಿ ಭೂಮಿಯಲ್ಲಿ ನೀನು ಅವತಾರಮಾಡಿರು ವವನು. ನೀನೇ ಪರಮೇಶ್ವರನು, ಗೋಪಾಲಕರು ನನ್ನನ್ನು ಕುರಿತು ಮಾಡ ತಕ್ಕ ಯಜ್ಞವನ್ನು ಭಂಗಪಡಿಸಿದುದರಿಂದ, ನನ್ನಿಂದ ಆಜ್ಞಪ್ತವಾದ ಮೇಘಗಳು ಗೋಕುಲವನ್ನು ನಾಶಮಾಡಬೇಕೆಂದು ಪ್ರಯತ್ನಿಸಿದವು. ನೀನು ಗೋವು ಗಳನ್ನೂ ಗೋಪಾಲಕರನ್ನೂ ಸಹ ಗೋವರ್ಧನಗಿರಿಯನ್ನು ಎತ್ತಿ ಕಾಪಾಡಿದೆ. ನಿನ್ನ ಅದ್ಭುತವಾದ ಕೆಲಸವನ್ನು ನೋಡಿ, ಸಂತೋಷಪಟ್ಟವನಾಗಿ, ನಿನ್ನ ಸಮೀಪಕ್ಕೆ ಬಂದಿರುವೆನು. ನೀನು ಸತ್ಯಲೋಕದ ಮೇಲ್ಭಾಗದಲ್ಲಿರತಕ್ಕ ಗೋಲೋಕಕ್ಕೆ, ಇಂದ್ರನಾಗಿರುವುದರಿಂದ ಉಪೇಂದ್ರನೂ, ಗೋವಿಂದನೂ ಸಹ ಆಗಿರುವೆ. ಈಗಲೂ ನಿನಗೆ ಗೋವುಗಳ ವಾಕ್ಯದಿಂದ ಪ್ರೇರಿತನಾಗಿ ಈ ಗೋಸಮೂಹದಲ್ಲಿ ಅಭಿಷೇಕಮಾಡುತ್ತೇನೆ" ಎಂದು ಹೇಳಿ, ಐರಾವತದ ಮೇಲಿದ್ದ ಕಲಶೋದಕವನ್ನು ತೆಗೆದುಕೊಂಡು ಬಂದು, ಶ್ರೀಕೃಷ್ಣನಿಗೆ ಅಭಿಷೇಕವನ್ನು ಮಾಡಿದನು. ಈ ಅಭಿಷೇಕಮಹೋತ್ಸವದಿಂದ ಗೋವುಗಳು ಆನಂದವನ್ನು ಹೊಂದಿ, ಭೂಮಿಗೆ ಹಾಲನ್ನು ಸ್ರವಿಸಿದವು. ಆಗ ಇಂದ್ರನು ವಿನಯಾನ್ವಿತನಾಗಿ ಕೃಷ್ಣನನ್ನು ಕುರಿತು ಹೇಳುತ್ತಾನೆ: "ಓ, ಸ್ವಾಮಿಯೇ, ಭೂಭಾರಹರಣೇಚ್ಛೆ ಯಿಂದ ನಾನು ಅರ್ಜುನನಾಗಿ ಹುಟ್ಟಿರುವೆನು. ಅರ್ಜುನಾಂಶದಿಂದ ಹುಟ್ಟಿರುವ ನನ್ನನ್ನು ಸಂರಕ್ಷಿಸುತ್ತಾ ಇರಬೇಕೆಂದು ಪ್ರಾರ್ಥಿಸುತ್ತೇನೆಂದು ಹೇಳಲು, ಆ ಮಾತಿಗೆ ಕೃಷ್ಣನು ಹೇಳುತ್ತಾನೆ: ಎಲೈ ಇಂದ್ರನೇ ನಿನ್ನ ಇಷ್ಟದ ಪ್ರಕಾರ ನಿನ್ನ ಅಂಶದಿಂದ ಹುಟ್ಟಿರುವ ಅರ್ಜುನನನ್ನು ನಾನು ಭೂಮಿಯಲ್ಲಿರುವವರೆಗೂ ರಕ್ಷಿಸುತ್ತೇನೆ. ಅಲ್ಲದೆ ನಾನು ಭೂಮಿಯಲ್ಲಿರುವವರೆಗೂ ಅರ್ಜುನನನ್ನು ಯುದ್ಧ ದಲ್ಲಿ ಯಾರೂ ಜಯಿಸಲಾರರು. ಕಂಸನೇ ಮೊದಲಾದ ಅಸುರರು ನಾಶವಾದನಂತರ, ಮಹತ್ತರವಾದ ಭಾರತಯುದ್ಧವು ನಡೆಯುವುದು. ಆ ಯುದ್ಧದಲ್ಲಿ ಭಾರಾವ ತರಣವನ್ನು ಮಾಡುತ್ತೇನೆಯಾದುದರಿಂದ ನೀನು ಮಗನಾದ ಅರ್ಜುನನಲ್ಲಿರತಕ್ಕ ಸಂತಾಪವನ್ನು ಬಿಡು. ನಾನು ಅರ್ಜುನನ ಸಮೀಪದಲ್ಲಿರುವ ಕಾಲದಲ್ಲಿ, ಶತ್ರು ಗಳು ನನ್ನ ಮುಂಭಾಗದಲ್ಲಿ ನಿಲ್ಲಲಾರರು. ಭಾರತಯುದ್ಧವು ಪೂರ್ತಿಯಾದ ನಂತರ ಕುಂತೀದೇವಿಗೆ ಶಸ್ತ್ರಕ್ಷತಶೂನ್ಯರಾದ ಪಾಂಡವರನ್ನು ಕೊಡುತ್ತೇನೆ. ಈ ಪ್ರಕಾರ ಕೃಷ್ಣನು ಹೇಳಲು, ದೇವೇಂದ್ರನು ಕೃಷ್ಣನನ್ನು ಆಲಿಂಗನಮಾಡಿ, ಐರಾವತವನ್ನು ಹತ್ತಿಕೊಂಡು ದೇವಲೋಕಕ್ಕೆ ಪ್ರಯಾಣಮಾಡಿದನು. ಅನಂತರ

ಕೃಷ್ಣನು ಗೋಪಾಲಕರಿಂದ ಸಹಿತನಾಗಿ ಗೋಪಿಕಾಸ್ತ್ರೀಯರುಗಳ ದೃಷ್ಟಿಪಾತದಿಂದ ಪರಿಶುದ್ಧವಾದ ಮಾರ್ಗದಿಂದ ನಂದಗೋಕುಲವನ್ನು ಹೊಂದಿದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಹನ್ನೆರಡನೆಯ ಅಧ್ಯಾಯವು ಸಮಾಪ್ತಃ

ಹದಿಮೂರನೆಯ ಅಧ್ಯಾಯವು

"ಇಂದ್ರನು ಪ್ರಯಾಣಮಾಡಿದನಂತರ, ಗೋಪಾಲಕರು ಕೃಷ್ಣನನ್ನು ಕುರಿತು ಹೇಳುತ್ತಾರೆ: "ಓ, ಕೃಷ್ಣ! ನೀನು ಪರ್ವತವನ್ನು ಧರಿಸಿ ನಮ್ಮನ್ನು ಕಾಪಾಡಿದೆ. ಗೋವುಗಳನ್ನೂ ಸಹ ಸಂರಕ್ಷಿಸಿದೆ. ನೀನು ಜುಗಿಪ್ಸಿತವಾದ ಗೋಪಾಲತ್ವವನ್ನು ಹೊಂದಿ, ಹುಡುಗಾಟದಿಂದ ಆಶ್ಚರ್ಯಕರವಾದ ಕಾರ್ಯಗಳನ್ನು ಮಾಡಿರುವೆ. ನೀರಿನಲ್ಲಿ ಕಾಳೀಯನನ್ನು ಶಿಕ್ಷಿಸಿ, ಧೇನುಕನನ್ನು ಸಂಹರಿಸಿ, ಗೋವರ್ಧನಗಿರಿಯನ್ನು ಲೀಲೆಯಿಂದ ಧರಿಸಿದೆ. ಇವುಗಳನ್ನು ನೋಡಿದರೆ, ನೀನು ಮನುಷ್ಯನಲ್ಲವೆಂದು ಶ್ರೀವರನಾಣೆಯಿಂದ ಹೇಳುತ್ತೇವೆ. ಓ ಕೇಶವನೇ! ನೀನು ಪ್ರೀತಿಯುಕ್ತನಾಗಿ ಸ್ತ್ರೀಯರನ್ನೂ, ಕುಮಾರರನ್ನೂ, ನಮ್ಮನ್ನೂ ಸಹ ಕಾಪಾಡಿದ್ದು ಆಶ್ಚರ್ಯವಾದುದು. ದೇವತೆಗಳಿಂದಲೂ ಸಹ ಮಾಡಲು ಅಸಾಧ್ಯವಾದುದು. ಈ ನಿನ್ನ ಬಾಲತ್ವವೂ, ಅತಿವೀರ್ಯತ್ವವೂ ಸಹ ಗೋಪಾಲಕರಿಗೆ ಅರ್ಹವಾದುದಲ್ಲ. ಎಲೈ ಅಮೇಯಾತ್ಮನೇ! ನಿನ್ನ ಮಹಿಮೆಯು ನಮಗೆ ಬಹಳ ಸಂದೇಹವನ್ನುಂಟುಮಾಡುವುದು; ನೀನು ದೇವನೋ ಅಥವಾ ದಾನವನೋ, ಗಂಧರ್ವನೋ ಹೇಗಾದರೂ ಆಗಲಿ ವಿಚಾರದಿಂದಾಗತಕ್ಕದ್ದೇನು? ಮುಖ್ಯ ನಮಗೆ ಬಂಧುವಾಗಿರುವೆ! ಆದುದರಿಂದ ನಿನಗೆ ನಮಸ್ಕಾರವು ಎಂದು ಹೇಳಲು, ಶ್ರೀಕೃಷ್ಣನು ಕ್ಷಣಕಾಲ ಸುಮ್ಮನಿದ್ದು, ಸ್ವಲ್ಪವಾಗಿ ಪ್ರಣಯಕೋಪವನ್ನು ಹೊಂದಿ, ಗೋಪಾಲಕರನ್ನು ಕುರಿತು ಹೇಳುತ್ತಾನೆ: "ಹೇ ಗೋಪಾಲಕರೇ! ನನ್ನ ಸಂಬಂಧ ನಿಮಗೆ ಶ್ಲಾಘ್ಯವಾಗಿದ್ದರೆ ಇತರ ವಿಚಾರದಿಂದೇನು ಪ್ರಯೋಜನ? ನೀವು ನನ್ನಲ್ಲಿ ಪ್ರೀತಿವಂತರಾಗಿದ್ದರೆ ಸಮಾನಜಾತಿಯವನೆಂದು ತಿಳಿಯಿರಿ, ನಾನು ದೇವನಲ್ಲ, ದಾನವನಲ್ಲ, ಗಂಧರ್ವನೂ ಅಲ್ಲ. ನಿಮಗೆ ಬಂಧುವಾದವನು; ಇದು ಹೊರತು ಬೇರೆ ಚಿಂತಿಸತಕ್ಕ ಅವಶ್ಯಕತೆಯಿಲ್ಲ" ಎಂಬುದಾಗಿ ಹೇಳಿದ ಕೃಷ್ಣನ ವಾಕ್ಯವನ್ನು ಕೇಳಿ, ಗೋಪಾಲಕರು ಮೌನವನ್ನು ಹೊಂದಿದರು. ಅನಂತರ ಕೃಷ್ಣನು ನಿರ್ಮಲವಾದ ಅಂತರಿಕ್ಷದಲ್ಲಿ ಆಹ್ಲಾದಕರ

ನಾದ ಚಂದ್ರನನ್ನು ನೋಡಿ, ಗೋಪಿಕಾಸ್ತ್ರೀಯರಿಂದ ಕ್ರೀಡಿಸುವುದಕ್ಕೆ ಮನಸ್ಸನ್ನಿಟ್ಟನು. ಕೃಷ್ಣನು ರಾಮನಿಂದ ರಹಿತನಾಗಿ ಮಧುರವಾದ ಗಾನವನ್ನು ಮಾಡಿದನು. ರಮ್ಯವಾದ ಗಾನವನ್ನು ಕೇಳಿದ ಗೋಪಿಕಾಸ್ತ್ರೀಯರು, ತಾವು ಮಾಡತಕ್ಕ ಕೆಲಸವನ್ನು ಬಿಟ್ಟು, ಮಧುಸೂದನನಿದ್ದ ಸ್ಥಳಕ್ಕೆ ಬಂದರು. ಒಬ್ಬಳು ಕೃಷ್ಣನ ಲಯಕ್ಕನುಸಾರವಾಗಿ ಗಾನಮಾಡಿದಳು; ಮತ್ತೊಬ್ಬಳು ಕೃಷ್ಣನನ್ನೇ ಮನಸ್ಸಿನಿಂದ ಸ್ಮರಿಸುತ್ತಿದ್ದಳು; ಬೇರೊಬ್ಬಳು ಕೃಷ್ಣ, ಕೃಷ್ಣ ಎಂದು ಲಜ್ಜಾಯುಕ್ತಳಾದಳು; ಇನ್ನೊಬ್ಬಳು ಪ್ರೇಮಾನಂದಳಾಗಿ, ಕೃಷ್ಣನ ಪಾರ್ಶ್ವವರ್ತಿಯಾದಳು; ಮತ್ತೊಬ್ಬಳು ಗೃಹಾಂತರದಲ್ಲಿಯೇ ಇದ್ದುಕೊಂಡು ಕೃಷ್ಣನನ್ನೇ ಧ್ಯಾನಿಸುತ್ತಾ, ಕಾಮದ್ವಾರ, ಕೃಷ್ಣನಲ್ಲಿಯೇ ಮಗ್ನಳಾದಳು; ಮತ್ತೊಬ್ಬ ಗೋಪಸ್ತ್ರೀಯು ಕೃಷ್ಣನು ಪರಬ್ರಹ್ಮನೆಂದು ಚಿಂತಿಸಿದಳು. ಈ ಪ್ರಕಾರ ಕೃಷ್ಣನು ಗೋಪಿಕಾಸ್ತ್ರೀಯರಿಂದ ಪರಿವೃತನಾಗಿ, ಮನೋಹರವಾದ ಬೆಳದಿಂಗಳಲ್ಲಿ ರಾಸಕ್ರೀಡೆಯನ್ನು ಆಡಿದನು. ಗೋಪಿಕಾಸ್ತ್ರೀಯರು ಕೃಷ್ಣನ ಚೇಷ್ಟೆಯಲ್ಲಿಯೇ ಆಸಕ್ತರಾದರು. ಕೃಷ್ಣನು ಬೇರೆ ಸ್ಥಳಕ್ಕೆ ಹೋದನು. ಆ ಕಾಲದಲ್ಲಿ, ಗೋಪಿಕಾಸ್ತ್ರೀಯರು ಕೃಷ್ಣನನ್ನು ಬೃಂದಾವನದಲ್ಲಿ ಹುಡುಕುತ್ತಿದ್ದರು. ಕೃಷ್ಣನಲ್ಲಿ ಬದ್ಧಹೃದಯರಾಗಿ ಸ್ತ್ರೀಯರು ಪರಸ್ಪರ ಮಾತನಾಡಿಕೊಳ್ಳುತ್ತಾರೆ: ನಾನೇ ಕೃಷ್ಣನು, ಕೃಷ್ಣನಂತೆಯೇ ಸಂಚರಿಸುವೆನು, ನೋಡಿರಿ ಎಂದಳು. ಮತ್ತೊಬ್ಬಳು ಕೃಷ್ಣನ ಹಾಗೆಯೇ ಗಾನಮಾಡುವನೆಂದಳು. ಬೇರೊಬ್ಬಳು ಕಾಳೀಯನನ್ನು ಶಿಕ್ಷಿಸಿದ ಕೃಷ್ಣನಂತೆ ನಿಂತುಕೊಳ್ಳುವೆನೆಂದಳು. ಇನ್ನೊಬ್ಬಳು ಗೋವರ್ಧನ ಗಿರಿಯನ್ನು ಧರಿಸಿರುವೆನೆಂದಳು. ಈ ಪ್ರಕಾರ ಗೋಪಿಯರು ಕೃಷ್ಣಮನಸ್ಕರಾಗಿ, ಬೃಂದಾವನದಲ್ಲಿ ಸಂಚರಿಸಿದರು. ಕೃಷ್ಣನನ್ನು ಹುಡುಕುತ್ತಾ ದಾರಿಯಲ್ಲಿ ಕೃಷ್ಣನ ಪದ್ಮರೇಖೆಯಿಂದ ಕೂಡಿದ ಹೆಜ್ಜೆಯನ್ನು ನೋಡಿದಳು. ಹೆಜ್ಜೆಯ ಜೊತೆಯಲ್ಲಿ ಮತ್ತೊಬ್ಬ ಯುವತಿಯ ಹೆಜ್ಜೆಯನ್ನೂ ಸಹ ಕಂಡಳು. ಕೃಷ್ಣನು ಈ ಸ್ಥಳದಲ್ಲಿ ಯುವತಿಯಿಂದ ಪುಷ್ಪಾಲಂಕೃತನಾಗಿರುವುದರಿಂದ ಪುಷ್ಪಗಳು ಚೆಲ್ಲಿರುವುದು. ಈ ಸ್ಥಳದಲ್ಲಿ ಕೃಷ್ಣನ ಹೆಜ್ಜೆಯು ಕಾಣುವುದಿಲ್ಲ, ಪ್ರಾಯಕವಾಗಿ ಸ್ತ್ರೀಯಿಂದ ಕೂಡಿ ಗುಹೆಯಲ್ಲಿರಬಹುದು. ಈ ರೀತಿ ಕೃಷ್ಣನನ್ನು ಹುಡುಕುತ್ತಾ ಕೃಷ್ಣದರ್ಶನದಲ್ಲಿ ನಿರಾಶರಾಗಿ, ಪುನಃ ಕೃಷ್ಣವಿರಹದಿಂದ ಯಮುನಾತೀರಕ್ಕೆ ಬಂದರು. ಯಮುನಾತೀರದಲ್ಲಿ ವಿಕಸಿತವಾದ ಕಮಲದಂತೆ ಮುಖವುಳ್ಳ ತ್ರೈಲೋಕ್ಯರಕ್ಷಕನಾದ ಕೃಷ್ಣನನ್ನು ನೋಡಿ, ಅತ್ಯಂತ ಹರ್ಷಿತಳಾಗಿ, ಕೃಷ್ಣ, ಕೃಷ್ಣ, ಕೃಷ್ಣ ಎಂದಳು. ಮತ್ತೊಬ್ಬಳು ಭ್ರೂಭಂಗದಿಂದ ಕೃಷ್ಣನ ಮುಖವನ್ನು ನೋಡಿ, ನೇತ್ರವೆಂಬ ಭ್ರಮರದಿಂದ ಕೃಷ್ಣನ ಮುಖವೆಂಬ

ಕಮಲವನ್ನು ಪಾನಮಾಡಿದಳು. ಮತ್ತೊಬ್ಬಳು ಕೃಷ್ಣನ ರೂಪಲಾವಣ್ಯಾದಿಗಳನ್ನು ನೋಡಿ, ಕೃಷ್ಣನಲ್ಲಿ ಯೋಗಾಸಕ್ತಳಾದಳು. ಈ ರೀತಿ ಗೋಪಿಕಾಸ್ತ್ರೀಯರು ಕೃಷ್ಣನಿಂದ ಕೂಡಿ, ವಿಹರಿಸುತ್ತಿದ್ದರು. ಕೃಷ್ಣನು ಗೋಪಸ್ತ್ರೀಯರಿಂದ ರಾಸಕ್ರೀಡೆಯನ್ನಾಡುತ್ತಿರಲು, ರಾಸಕ್ರೀಡೆಯಲ್ಲಿ ಒಬ್ಬಳು ಕೃಷ್ಣನ ಕೈಯನ್ನು ಹಿಡಿದುಕೊಂಡಳು. ಮತ್ತೊಬ್ಬಳು ಹೆಗಲಿನಮೇಲೆ ತೋಳುಗಳನ್ನಿಟ್ಟು, ಆಟವಾಡಿದಳು. ಇನ್ನೊಬ್ಬಳು ಕೃಷ್ಣನ ಮುಖವನ್ನು ಹಿಡಿದುಕೊಂಡು, ಚುಂಬನಮಾಡಿದಳು. ಈ ರೀತಿ ಕೃಷ್ಣನು ಗೋಪಿಯರ ಕಪೋಲವನ್ನು ಆಲಿಂಗನಮಾಡುತ್ತಾ, ಗಾನಮಾಡಿಕೊಂಡು, ಗೋಪಿಯರಿಂದ ಗಾನಮಾಡಿಸಿಕೊಂಡು, ವಿಹರಿಸಿದನು. ಅನೇಕಜನ ಸ್ತ್ರೀಯರು, ಗಂಡ, ತಂದೆ, ಮಾವ, ಅಣ್ಣ, ತಮ್ಮ, ಮೈದುನ, ಇವರುಗಳ ಅಧೀನದಲ್ಲಿದ್ದಾಗ್ಯೂ, ಅವರನ್ನು ವಂಚಿಸಿ, ಕೃಷ್ಣನನ್ನು ಪ್ರೀತಿಸುತ್ತಿದ್ದರು. ಸಮಸ್ತಪ್ರಾಣಿಗಳಲ್ಲಿಯೂ ಆಕಾಶ, ಅಗ್ನಿ, ಭೂಮಿ, ಜಲ ಇತ್ಯಾದಿಗಳು ಯಾವ ಪ್ರಕಾರ ಸರ್ವವ್ಯಾಪಿಗಳಾಗಿರುವುದೋ ಅದೇರೀತಿ, ಶ್ರೀಕೃಷ್ಣನು ಸಕಲ ಗೋಪಿಯರಲ್ಲಿಯೂ ರಾತ್ರಿಕಾಲದಲ್ಲಿ ಕಾಮರೂಪದಿಂದ ವಿಹರಿಸುತ್ತಾ, ಹಗಲಿನಲ್ಲಿ ಯಥಾಪ್ರಕಾರ ಬಾಲನಾಗಿ ಆಟಗಳನ್ನಾಡುತ್ತಿದ್ದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಹದಿಮೂರನೆಯ ಅಧ್ಯಾಯವು ಸಮಾಪ್ತಃ

ಹದಿನಾಲ್ಕನೆಯ ಅಧ್ಯಾಯವು

"ಸಂಧ್ಯಾಕಾಲದಲ್ಲಿ ಕೃಷ್ಣನು ರಾಸಕ್ರೀಡೆಯನ್ನಾಡುತ್ತಿರಲು, ಅರಿಷ್ಟನೆಂಬ ದೈತ್ಯನು ವೃಷಭಾಕಾರದಿಂದ ಗೋವುಗಳಿಗೆ ಭಯವನ್ನುಂಟುಮಾಡುತ್ತಾ, ಕ್ರೂರವಾದ ಕೋಡುಗಳಿಂದ ಯುಕ್ತನಾಗಿ, ಖುರಾಗ್ರದಿಂದ ಭೂಮಿಯನ್ನು ಕೆರೆಯುತ್ತಾ, ಗೋವುಗಳ ಗರ್ಭವನ್ನು ನಾಶಮಾಡುತ್ತಾ, ತಪಸ್ವಿಗಳನ್ನು ಹಿಂಸಿಸುತ್ತಾ, ಕಾಡಿನಲ್ಲಿ ಸಂಚರಿಸುತ್ತಿದ್ದನು. ಭಯಂಕರನಾದ ವೃಷಭಾಕಾರನಾದ ದೈತ್ಯನನ್ನು ನೋಡಿ, ಗೋಪಗೋಪಿಯರು ಹೆದರಿಕೊಂಡು, ಕೃಷ್ಣ, ಕೃಷ್ಣ, ಎಂಬುದಾಗಿ ಕೂಗಿಕೊಂಡರು. ಈ ಕೂಗನ್ನು ಕೇಳಿದ ಕೃಷ್ಣನು, ಸಿಂಹನಾದವನ್ನು ಮಾಡಿದನು. ಕೃಷ್ಣನ ಸಿಂಹನಾದವನ್ನು ಕೇಳಿದ ಅರಿಷ್ಟನು, ಕೃಷ್ಣನಿದ್ದ ಕಡೆಗೆ ಬಂದು, ಅವನ ಮುಂಭಾಗದಲ್ಲಿ ಕಾಲನ್ನು ಕೆರೆಯುತ್ತಾ, ಕೃಷ್ಣನ ವಕ್ಷ

ಸ್ಥಳದಲ್ಲಿ ದೃಷ್ಟಿಯನ್ನಿಟ್ಟು, ಕೃಷ್ಣನನ್ನು ಕೊಲ್ಲುವುದಕ್ಕೆ ಉದ್ಯುಕ್ತಪಟ್ಟನು. ಕೃಷ್ಣನು ದೈತ್ಯನ ಕೊಂಬುಗಳನ್ನು ಹಿಡಿದು, ತನ್ನ ಕಾಲಿನಿಂದ ದೈತ್ಯನ ವಕ್ಷ ಸ್ಥಲವನ್ನೊದೆಯಲು, ಮೂರ್ಛೆಯನ್ನು ಹೊಂದಿ, ಪುನಃ ಎಚ್ಚರಗೊಂಡ ಕಾಲ ದಲ್ಲಿ, ಕೃಷ್ಣನು ಒಂದು ಕೋಡನ್ನು ಕಿತ್ತು, ಅದರಿಂದ ದೈತ್ಯನನ್ನು ಸಂಹರಿಸಿ ದನು. ಅನಂತರ ಗೋಪಾಲಕರು ಅರಿಷ್ಟನೆಂಬ ದೈತ್ಯನನ್ನು ಸಂಹಾರಮಾಡಿದ ಕೃಷ್ಣನನ್ನು ಸ್ತೋತ್ರಮಾಡಿದರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಹದಿನಾಲ್ಕನೆಯ ಅಧ್ಯಾಯವು ಸಮಾಪ್ತಃ

ಹದಿನೈದನೆಯ ಅಧ್ಯಾಯವು

"ಈ ಪ್ರಕಾರ ಶ್ರೀಕೃಷ್ಣನು ಅರಿಷ್ಟನನ್ನೂ ಪ್ರಲಂಬನನ್ನೂ ಸಂಹಾರಮಾಡಿ, ಗೋವರ್ಧನಗಿರಿಯನ್ನು ಧರಿಸಿ, ಕಾಳೀಯನನ್ನು ಶಿಕ್ಷಿಸಿ, ನಳಕೂಬರ ವೃಕ್ಷ ಚ್ಛೇದನವನ್ನು ಮಾಡಿ, ಪೂತನಿಯನ್ನು ಸಂಹಾರಮಾಡಿ, ಶಕಟಾಸುರನನ್ನು ಧ್ವಂಸಿಸಿ, ಗೋಪಗೋಪೀಯರಿಗೆ ಸಂತೋಷವನ್ನುಂಟುಮಾಡಿದುದನ್ನೂ, ಯಶೋದಾ ಶಿಶುವನ್ನು ಬದಲಾಯಿಸಿದುದನ್ನೂ ಸಹ ನಾರದರು ಕಂಸನಿಗೆ ವಿಸ್ತಾರವಾಗಿ ತಿಳಿಸಿದರು. ಕಂಸನು ನಾರದರಿಂದ ಹೇಳಲ್ಪಟ್ಟ ಸಕಲವೃತ್ತಾಂತ ವನ್ನೂ ಕೇಳಿ, ಕೋಪದಿಂದ ವಸುದೇವನನ್ನು ತಿರಸ್ಕಾರಮಾಡಿ, ಸಕಲ ಯಾದವರನ್ನೂ ನಿಂದಿಸಿ, ಮನಸ್ಸಿನಲ್ಲಿ ಈ ರೀತಿ ಯೋಚಿಸುತ್ತಾನೆ: "ನನಗೆ ರಾಮಕೃಷ್ಣರು ಮೃತ್ಯುಗಳೆಂಬುದಾಗಿ ನಾರದರು ಹೇಳಿದರು. ದೇವರ್ಷಿಯು ಅನೃತವನ್ನಾಡತಕ್ಕವರಲ್ಲ. ಆ ರಾಮಕೃಷ್ಣರು ಬಲಿಷ್ಠರಾಗುವುದರೊಳಗಾಗಿ, ನಾಶಮಾಡಬೇಕು. ಬಾಲಕರಾದ ರಾಮಕೃಷ್ಣರನ್ನು ಚಾಣೂರ ಮುಷ್ಟಿಕರೆಂಬ ಜಟ್ಟಿಗಳಿಂದ ನಾಶಮಾಡಿಸುವೆನು. ಧನುರ್ಮಾಸಮಹೋತ್ಸವದ ವ್ಯಾಜ ದಿಂದ ಇಲ್ಲಿಗೆ ಕರೆಸಿ, ರಾಮಕೃಷ್ಣರ ನಾಶಕ್ಕಾಗಿ ಉಪಾಯಗಳನ್ನು ಕಲ್ಪಿಸು ತ್ತೇನೆ. ಇವರನ್ನು ಕರೆದುಕೊಂಡು ಬರುವುದಕ್ಕಾಗಿ ಅಕ್ರೂರನನ್ನು ನಂದ ಗೋಕುಲಕ್ಕೆ ಕಳುಹಿಸಬೇಕು. ಇದಕ್ಕೆ ಮುಂಚಿತವಾಗಿ ಕೇಶಿಯನ್ನು ಕಳುಹಿಸಿ ಬೃಂದಾವನಚಾರಿಯಾದ ಕೃಷ್ಣನನ್ನು ಕೊಲ್ಲಿಸುತ್ತೇನೆಂದು", ಮನಸ್ಸಿನಲ್ಲಿ ಆಲೋಚಿಸಿ, ಶ್ವಫಲ್ಕನ ಮಗನಾದ ಅಕ್ರೂರನನ್ನು ಕರೆದು, "ಓ, ಅಕ್ರೂರನೇ, ನೀನು ರಥವನ್ನು ನಂದಗೋಕುಲಕ್ಕೆ ತೆಗೆದುಕೊಂಡು ಹೋಗಿ, ನನಗೆ ಮೃತ್ಯು

ಗಳಾದ ರಾಮಕೃಷ್ಣರನ್ನು ಕರೆದುಕೊಂಡು ಬರುವುದು; ಅವರು ಇಲ್ಲಿಗೆ ಬಂದ ನಂತರ ಮಲ್ಲಯುದ್ಧವನ್ನು ಮಾಡಿಸುತ್ತೇನೆ; ನಂತರ ಮಹಾಮಾತ್ರನೆಂಬ ಮಾವಟಿಗನಿಂದ ಪೀಡಿತವಾದ ಕುವಲಯಾಪೀಡಿತವೆಂಬ ಆನೆಯಿಂದ ಕೊಲ್ಲಿಸುತ್ತೇನೆ; ಹೀಗೆ ರಾಮಕೃಷ್ಣರನ್ನು ಸಂಹಾರಮಾಡಿಸಿದನಂತರ ವಸುದೇವನನ್ನೂ ನಂದಗೋಪನನ್ನೂ ನನ್ನ ತಂದೆಯಾದ ಉಗ್ರಸೇನನನ್ನೂ ಸಹ ಕೊಲ್ಲಿಸಿ, ಯಾದವರ ಗೋವುಗಳನ್ನೂ ಧನವನ್ನೂ ಸಹ ಅಪಹಾರಮಾಡುತ್ತೇನೆ; ಯಾದವರನ್ನು ಸಂಹರಿಸಿದನಂತರ, ನನಗೆ ಶತ್ರುಗಳು ಇತರರು ಯಾರೂ ಇರುವುದಿಲ್ಲ, ಅನಂತರ ನನಗೆ ನಿಷ್ಕಂಟಕವಾದ ರಾಜ್ಯವಾಗುವುದು; ಆದುದರಿಂದ ನನ್ನ ಹಿತಕ್ಕಾಗಿ ನಂದಗೋಕುಲಕ್ಕೆ ಹೋಗಿ, ಮಹೋತ್ಸವಾರ್ಥವಾಗಿ ಅಪಾರವಾದ ಹಾಲು, ಮೊಸರು, ತುಪ್ಪ ಇವುಗಳನ್ನು ತೆಗೆದುಕೊಂಡು ಬರುವಹಾಗೆ, ಯಾದವರಿಗೆ ಹೇಳು.” ಈ ಪ್ರಕಾರ ಕಂಸನಿಂದ ಆಜ್ಞಪ್ತನಾದ ಅಕ್ರೂರನು ರಥಾರೋಹಣಮಾಡಿಕೊಂಡು, ಮಧುರಾಪಟ್ಟಣದಿಂದ ಕೃಷ್ಣಸಂದರ್ಶನದ ಸಂತೋಷವನ್ನು ಹೊಂದುವುದಕ್ಕಾಗಿ ಪ್ರಯಾಣ ಮಾಡಿದನು.”

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಹದಿನೈದನೆಯ ಅಧ್ಯಾಯವು ಸಮಾಪ್ತಃ

ಹದಿನಾರನೆಯ ಅಧ್ಯಾಯವು

“ಕೇಶಿನಾಮಕನಾದ ದೈತ್ಯನು ಕಂಸನ ದೂತನಿಂದ ಪ್ರೇರಿತನಾಗಿ ಕೃಷ್ಣನ ಸಂಹಾರಾರ್ಥವಾಗಿ ಬೃಂದಾವನದ ಸಮೀಪಕ್ಕೆ ಬಂದು, ಭಯಂಕರವಾದ ಶಬ್ದವನ್ನು ಮಾಡಿದನು. ಆ ಶಬ್ದವನ್ನು ಗೋಪಾಲಕರು ಕೇಳಿ, ಭಯಾಕ್ರಾಂತರಾಗಿ ಕೃಷ್ಣನ ಸಮೀಪಕ್ಕೆ ಬಂದು, ರಕ್ಷಿಸೆಂದು ಪ್ರಾರ್ಥಿಸಿದರು. ಗೋಪಾಲಕರ ಆರ್ತಧ್ವನಿಯನ್ನು ಕೇಳಿ, ನೀವು ಭಯಪಡಬೇಡಿ, ಈ ದೈತ್ಯನು ಕೇಶಿಯೆಂಬುವನು; ಅಲ್ಪಪರಾಕ್ರಮಿಯಾದ ಕೇಶಿಯಿಂದ ಏನೂ ಆಗಲಾರದು ಎಂದು, ಧೈರ್ಯವನ್ನು ಹೇಳಿ, ದುಷ್ಟನಾದ ಕೇಶಿಯೇ, ನಾನೇ ಕೃಷ್ಣನು ಎಂದು ಹೇಳುತ್ತಾ, ಸೂರ್ಯನಂತೆಯೂ, ತ್ರಿಪುರಾಂತಕನಂತೆಯೂ, ಮಹಾಪರಾಕ್ರಮಿಯಾದ ಕೃಷ್ಣನು ಕೇಶಿಯ ಸಮೀಪಕ್ಕೆ ಬಂದು, ಎಲೈ ದುಷ್ಟನೇ, ನಿನ್ನ ಹಲ್ಲುಗಳನ್ನುದುರಿಸುವೆನೆಂದು ಹೇಳಿ, ತನ್ನ ಬಾಹುವೆಂಬ ಸರ್ಪದಿಂದ ಕೇಶಿಯನ್ನು ಕಟ್ಟಿ, ಅವನ ಹಲ್ಲುಗಳನ್ನು ಉದುರಿಸಿದನು. ಕೇಶಿಯ ದೇಹವನ್ನಾಶ್ರಯಿಸಿದ ಕೃಷ್ಣನ ಬಾಹುವು ವೃದ್ಧಿ

ಯಾಗಿ, ದೈತ್ಯನನ್ನು ಹೊಡೆಯಲು, ದೈತ್ಯನು ಬಾಯಿಂದ ರಕ್ತವನ್ನು ವಮನ ಮಾಡಿ ಪ್ರಾಣವನ್ನು ಬಿಟ್ಟನು. ಕೇಶಿಯು ನಿಶ್ಚೇಷ್ಟಿತನಾದುದನ್ನು ನೋಡಿ, ಕೃಷ್ಣನು ಅನಾಯಾಸವುಳ್ಳವನಾಗಿ ನಗುತ್ತಾ ಇದ್ದನು. ಆಗ ಗೋಪಾಲಕರೂ, ಗೋಪಿಯರೂ, ಪುಂಡರೀಕಾಕ್ಷನನ್ನು ಸ್ತೋತ್ರಮಾಡಿದರು. ಅನಂತರದಲ್ಲಿ ನಾರದರು, ಕೃಷ್ಣನ ಸಮೀಪಕ್ಕೆ ಬಂದು, "ಕೃಷ್ಣ, ಅದ್ಭುತನಾದ ಕೇಶಿಯನ್ನು ನಾಶಮಾಡಿದುದರಿಂದ ದೇವತೆಗಳು ಸ್ವಸ್ಥಹೃದಯರಾದರು. ನಿಮ್ಮ ಯುದ್ಧವನ್ನು ನೋಡುವುದಕ್ಕೋಸ್ಕರವೇ ದೇವಲೋಕದಿಂದ ಬಂದೆನು. ನೀನು ಕೇಶಿಯನ್ನು ಸಂಹಾರಮಾಡಿದುದರಿಂದ ಕೇಶವನೆಂದು ಲೋಕದಲ್ಲಿ ಖ್ಯಾತಿವಂತನಾಗಿರುವೆ. ಓ, ವಾಸುದೇವನೇ, ನಿನಗೆ ಮಂಗಳವಾಗಲಿ. ನಾಡಿದ್ದು ನಡೆಯುವ ಕಂಸ ಯುದ್ಧದಲ್ಲಿ ಪುನಃ ನಿನ್ನ ದರ್ಶನವನ್ನು ತೆಗೆದುಕೊಳ್ಳುತ್ತೇನೆ. ಉಗ್ರಸೇನನ ಮಗನಾದ ಕಂಸನು ಸಪರಿವಾರನಾಗಿ, ನಾಶವಾದರೆ, ನೀನು ಭೂಭಾರಹರ ನಾಗುವೆ. ಎಲೈ, ಜನಾರ್ದನನೇ, ನಾನು ಹೋಗಿಬರುವೆನೆಂದು" ಹೇಳಿ, ಪ್ರಯಾಣಮಾಡಿದರು. ಅನಂತರ ಕೃಷ್ಣನು ಗೋಪಾಲಕರಿಂದ ಕೂಡಿ ನಂದ ಗೋಕುಲವನ್ನು ಸೇರಿದನು."

ಇಲ್ಲಿಗೆ ಶ್ರೀ ವಿಷ್ಣು ಪುರಾಣವಲ್ಲಿ ಪಂಚಮಾಂಶದಲ್ಲಿ
ಹದಿನಾರನೆಯ ಅಧ್ಯಾಯವು ಸಮಾಪ್ತಃ

ಹದಿನೇಳನೆಯ ಅಧ್ಯಾಯವು

ಶ್ರೀಕೃಷ್ಣನನ್ನು ನೋಡುವಿಕೆಯಲ್ಲಿ ಕುತೂಹಲವುಳ್ಳ ಅಕ್ರೂರನು ಬಹುವೇಗ ವಾಗಿ ನಂದಗೋಕುಲಕ್ಕೆ ಬರುತ್ತಾ ದಾರಿಯಲ್ಲಿ ಯೋಚಿಸುತ್ತಾನೆ: "ಲೋಕದಲ್ಲಿ ನನ್ನಂತಹ ಧನ್ಯರು ಯಾರೂ ಇಲ್ಲ. ಶ್ರೀಮನ್ನಾರಾಯಣಾಂಶದಿಂದ ಅವತರಿಸಿದ ಶ್ರೀಕೃಷ್ಣನ ಮುಖವನ್ನು ನೋಡಲು ಬಂದುದರಿಂದ ನಾನೇ ಧನ್ಯನು. ಈ ನನ್ನ ಜನ್ಮವು ಸಫಲವಾಯಿತು. ನನ್ನ ರಾತ್ರಿಯು ಹಗಲಾಯಿತು. ವಿಕಸಿತವಾದ ಕಮಲಮುಖನಾದ ಶ್ರೀಮಹಾವಿಷ್ಣುವನ್ನು ನೋಡುವುದರಿಂದ ಕೃತಕೃತ್ಯ ನಾದೆನು. ಯಾವ ಪರಮಾತ್ಮನಿಂದ ವೇದವೇದಾಂಗಗಳು ಉತ್ಪನ್ನವಾದುವೋ, ಅಂತಹ ಪರಮತೇಜೋಮಯನಾದ ಭಗವಂತನ ಮುಖವನ್ನು ನೋಡುತ್ತೇನೆ. ಯಾವ ಭಗವಂತನು ಯಜ್ಞಾದಿಗಳಿಂದ ಅರ್ಚಿಸಲ್ಪಡುವನೋ, ಆ ಜಗತ್ಪತಿ ಯಾದ, ಸರ್ವಾಧಾರನಾದ ಶ್ರೀಮನ್ನಾರಾಯಣನ ಮುಖವನ್ನು ನೋಡುತ್ತೇನೆ.

ಯಾವ ಇಂದ್ರನು ನೂರಾರು ಯಜ್ಞಗಳನ್ನು ಮಾಡಿ ದೇವರಾಜನಾದನೋ, ಆ ಕೇಶವನ ಮುಖವನ್ನು ನೋಡುತ್ತೇನೆ. ಬ್ರಹ್ಮರುದ್ರೇಂದ್ರಾದಿಗಳೂ ಕೂಡಾ ಯಾವ ಮಹಾತ್ಮನ ಸ್ವರೂಪವನ್ನು ಯಥಾರ್ಥವಾಗಿ ಅರಿಯರೋ ಅಂತಹ ಶ್ರೀಹರಿಯನ್ನು ನೋಡುತ್ತೇನೆ. ಸರ್ವಾತ್ಮನಾದ, ಸರ್ವಜ್ಞನಾದ, ಸರ್ವಭೂತಾಂತರಾತ್ಮಕನಾದ, ಅಚಿಂತ್ಯನಾದ, ಅವ್ಯಯನಾದ, ಸರ್ವವ್ಯಾಪಿಯಾದ, ಶ್ರೀಮನ್ನಾರಾಯಣನು ನನ್ನೊಡನೆ ಮಾತನಾಡುವನು. ಮತ್ಸ್ಯ, ಕೂರ್ಮ, ವರಾಹ, ಹಯಗ್ರೀವ, ನೃಸಿಂಹರೂಪಿಯಾದ ಶ್ರೀಮನ್ನಾರಾಯಣನು ನನ್ನನ್ನು ಮಾತನಾಡಿಸುವನು. ಸ್ವೇಚ್ಛಾದೇಹವನ್ನು ಧರಿಸಿದ ಮನುಷ್ಯತ್ವವನ್ನು ಪಡೆದಿರುವ ಅನಂತನು, ನನ್ನನ್ನು "ಅಕ್ರೂರನೇ" ಎಂದು ಮಾತನಾಡಿಸುವನು. ಯಾವ ಭಗವಂತನ, ಪಿತೃ, ಮಾತೃ, ಪುತ್ರ, ಸುಹೃತ್ ಎಂಬ ಮಾಯೆಯನ್ನು ದಾಟುವುದಕ್ಕೆ ಆಗಲಾರದೋ, ಆ ಜಗದ್ವ್ಯಾಪಿಯಾದ ಶ್ರೀಮನ್ನಾರಾಯಣನಿಗೆ ನಮಸ್ಕಾರವು. ಹೃತ್ಕಮಲದಲ್ಲಿ ಯಾವ ಪರಮಾತ್ಮನನ್ನು ಧ್ಯಾನಮಾಡಿ ವಿಸ್ತಾರವಾದ ಅವಿದ್ಯೆಯನ್ನು ದಾಟುವನೋ, ಅಂತಹ ಅಮೇಯನಾದ ವಿದ್ಯಾತ್ಮನಿಗೆ ನಮಸ್ಕಾರವು. ಯಜ್ಞಶೀಲರು, ಯಜ್ಞಪುರುಷನೆಂಬುದಾಗಿಯೂ, ಭಗವಚ್ಛಾಸ್ತ್ರನಿಷ್ಠರು, ವಾಸುದೇವನೆಂಬುದಾಗಿಯೂ, ವೇದಾಂತಿಗಳು ವಿಷ್ಣುವೆಂಬುದಾಗಿಯೂ ಸಹ ಯಾರನ್ನು ಹೇಳುವರೋ, ಆ ಪರಮಾತ್ಮನನ್ನು ನಮಸ್ಕರಿಸುತ್ತೇನೆ. ಜಗತ್ತು ಯಾವ ಪುರುಷನ ಆಶ್ರಯದಲ್ಲಿರುವುದೋ, ಆ ಶ್ರೀಮನ್ನಾರಾಯಣನು, ನಾನು ಕಂಸನಿಗೆ ಪ್ರಿಯನಾದವನೆಂದು ನನ್ನಲ್ಲಿ ಅಸೂಯೆಯನ್ನು ಮಾಡದೆ, ನನಗೆ ಪ್ರಸನ್ನನಾಗಲಿ. ಯಾವ ಪುರುಷನನ್ನು ಸ್ಮರಣೆಮಾಡಿದರೆ, ಸಕಲ ಕಲ್ಯಾಣಗಳುಂಟಾಗುವುದೋ ಆ ಶ್ರೀಹರಿಯನ್ನು ಶರಣುಹೊಂದುತ್ತೇನೆ." ಅಕ್ರೂರನು ಈ ಪ್ರಕಾರ ಭಕ್ತಿಯಿಂದ ನಮ್ರವಾದ ಮನಸ್ಸಿನೊಡನೆ ಭಗವಂತನನ್ನು ಚಿಂತಿಸುತ್ತಾ, ಸೂರ್ಯೋದಯಕಾಲಕ್ಕೆ ಸರಿಯಾಗಿ, ನಂದಗೋಕುಲಕ್ಕೆ ಬಂದು, ಗೋಶಾಲೆಯಲ್ಲಿ ಕರುಗಳ ಮಧ್ಯದಲ್ಲಿರತಕ್ಕವನಾಗಿಯೂ, ವಿಕಸಿತವಾದ ಕಮಲಗಳಂತೆ ಕಣ್ಣುಗಳುಳ್ಳವನಾಗಿಯೂ, ಶ್ರೀವತ್ಸವಕ್ಷನಾಗಿಯೂ, ಅಜಾನುಬಾಹುವಾಗಿಯೂ, ವಿಶಾಲವಕ್ಷಸ್ಥಲನಾಗಿಯೂ, ವಿಕಸಿತವಾದ ಮುಖಕಮಲವನ್ನು ಧರಿಸಿರುವನಾಗಿಯೂ, ತುಂಗವಾದ ರಕ್ತನಖನಾಗಿಯೂ, ಭೂಮಿಯಲ್ಲಿ ಕಾಲುಗಳನ್ನಿಟ್ಟುಕೊಂಡಿರುವನಾಗಿಯೂ, ಪೀತಾಂಬರಧಾರಿಯಾಗಿಯೂ, ವನ್ಯಪುಷ್ಪಾ[1]ಲಂಕೃತನಾಗಿಯೂ, ಚಂದ್ರನಿಂದ ಕೂಡಿದ ನೀಲಾಚಲದಂತೆ ಪ್ರಕಾಶಿಸತಕ್ಕವನಾಗಿಯೂ, ಕಮಲಪುಷ್ಪದಿಂದ ಅಲಂಕೃತನಾಗಿಯೂ, ಹಂಸಗಳಂತೆ

[1] ವನದಲ್ಲಿ ಹುಟ್ಟಿದ

ಹಲ್ಲುಗಳುಳ್ಳವನಾಗಿಯೂ, ನೀಲಾಂಬರಧರನಾಗಿಯೂ ಇರತಕ್ಕ ವಾಸುದೇವನನ್ನು ಮೊದಲು ನೋಡಿದನು. ಅನಂತರ ಉದ್ದವಾದ ತೋಳುಗಳುಳ್ಳವನಾಗಿಯೂ, ಕಮಲಮುಖನಾಗಿಯೂ, ಮೇಘಮಾಲೆಯಿಂದ ಆವರಿಸಲ್ಪಟ್ಟ ಕೈಲಾಸ ಪರ್ವತದಂತೆ ಇರತಕ್ಕವನಾಗಿಯೂ ಇರುವ ಬಲರಾಮನನ್ನೂ ಸಹ ಕಂಡು, ಅಕ್ರೂರನು ಪುಲಕಾಂಚಿತ ಶರೀರವುಳ್ಳವನಾದನು. ಇದೇ ಪರಂಧಾಮವು; ಇದೇ ಪರಮಪದವು; ಶ್ರೀಮನ್ನಾರಾಯಣನು ಎರಡು ರೂಪಿನಿಂದ ಇರುವನು. ಈ ಪರಮಪುರುಷನನ್ನು ನೋಡಿದುದರಿಂದ ನನ್ನ ಕಣ್ಣುಗಳು ಸಾಫಲ್ಯವನ್ನು ಹೊಂದಿದವು. ಭಗವಂತನ ಅಂಗಸಂಗದಿಂದ, ನನ್ನ ಅಂಗವೂ ಸಹ ಸಫಲವಾಯಿತು. ಶ್ರೀವಾಸುದೇವನ ಅಂಗುಳಿಸ್ಪರ್ಶದಿಂದ ನನ್ನ ಪಾಪಗಳೆಲ್ಲವೂ ಪರಿಹಾರವಾದವು. ಅಗ್ನಿ, ಮಿಂಚು, ಸೂರ್ಯ, ಇವುಗಳಂತೆ ಕ್ರೂರವಾದ ಚಕ್ರದಿಂದ ಕಾಲನೇಮಿಯೇ ಮೊದಲಾದ ದೈತ್ಯಸಮೂಹವನ್ನು ನಾಶಮಾಡಿ, ದೈತ್ಯಸ್ತ್ರೀಯರುಗಳ ನಯನಾಂಜನವನ್ನು ಅಪಹಾರಮಾಡಿದನೊ, ಯಾವ ಪರಮಾತ್ಮನಿಂದ ಬಲಿಚಕ್ರವರ್ತಿಯು ಪಾತಾಳಲೋಕದಲ್ಲಿ ವಾಸಮಾಡುತ್ತಾ, ಅಪಾರವಾದ ಭೋಗಗಳನ್ನು ಅನುಭವಿಸುತ್ತಾನೋ, ಆ ಪರಮಾತ್ಮನಾದ ಶ್ರೀಕೃಷ್ಣನು, ಕಂಸನು ನನ್ನನ್ನು ಪರಿಗ್ರಹಿಸಿರುವುದರಿಂದ ದುಷ್ಟನೆಂಬುದಾಗಿ ನನಗೆ ಎಲ್ಲಿ ಅವಮಾನಪಡಿಸುತ್ತಾನೋ, ಆಗ ನನ್ನ ಜನ್ಮವು ಬಹಿಷ್ಕೃತವಾಗುವುದು. ಜ್ಞಾನಾತ್ಮಕನಾಗಿಯೂ, ಅಮಲಸತ್ವರಾಶಿಯಾಗಿಯೂ, ದೋಷರಹಿತನಾಗಿಯೂ, ವ್ಯಕ್ತನಾಗಿಯೂ ಇರುವ ಶ್ರೀಕೃಷ್ಣನು ಹೃದಯದಲ್ಲಿರತಕ್ಕವನಾದುದರಿಂದ ನನ್ನನ್ನು ತಿರಸ್ಕಾರಮಾಡಲಾರನು. ನಾನು ಭಕ್ತಿ ನಮ್ರನಾಗಿ ಸರ್ವೇಶ್ವರನಾದ ಶ್ರೀ ಮಹಾವಿಷ್ಣುವನ್ನು ಶರಣು ಹೊಂದಿರುತ್ತೇನೆ."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಹದಿನೇಳನೆಯ ಅಧ್ಯಾಯವು ಸಮಾಪ್ತಃ

ಹದಿನೆಂಟನೆಯ ಅಧ್ಯಾಯವು

"ಅಕ್ರೂರನು ಈ ಪ್ರಕಾರ ಭಗವಂತನನ್ನು ಚಿಂತಿಸುತ್ತಾ, ಶ್ರೀಕೃಷ್ಣನ ಕಾಲುಗಳನ್ನು ಹಿಡಿದು ನಮಸ್ಕಾರಮಾಡಿದನು. ಆಗ ಶ್ರೀಕೃಷ್ಣನು ತನ್ನ ಹಸ್ತದಿಂದ ಅಕ್ರೂರನನ್ನು ಸ್ಪರ್ಶಿಸಿ, ಆಲಿಂಗನಮಾಡಿಕೊಂಡು ಅಕ್ರೂರನನ್ನು ಮನೆಗೆ ಕರೆದುಕೊಂಡು ಹೋದನು. ಅನಂತರ ಅಕ್ರೂರನು ಬಲರಾಮಾದಿಗಳಿಗೆ ನಮಸ್ಕಾರ

ಮಾಡಿದನಂತರ, ರಾಮಕೃಷ್ಣರು ಅಕ್ರೂರನ ಜೊತೆಯಲ್ಲಿ ಭಕ್ಷ್ಯಭೋಜ್ಯಾದಿಗಳಿಂದ ಯುಕ್ತವಾದ ಭೋಜನವನ್ನು ಮಾಡಿದರು. ಅನಂತರ ಅಕ್ರೂರನು ರಾಮಕೃಷ್ಣರನ್ನು ಕುರಿತು ಹೇಳುತ್ತಾನೆ: "ಓ ಜಗನ್ನಾಥನೇ, ದೇವಕೀವಸುದೇವರೂ ಮತ್ತು ಉಗ್ರಸೇನನೂ ಸಹ ಕಂಸನಿಂದ ಭಯಗ್ರಸ್ಥರಾಗಿರುತ್ತಾರೆ. ದುರಾತ್ಮನಾದ ಕಂಸನಿಂದ ಪ್ರೇರಿತನಾಗಿ ನಿಮ್ಮನ್ನು ಕರೆದುಕೊಂಡುಹೋಗಬೇಕೆಂದು ಬಂದಿರುವೆನು. ಇದಕ್ಕಾಗಿ ಏನು ಉಪಾಯಮಾಡಬೇಕೋ ಅದನ್ನು ಚಿಂತಿಸು" ಎಂದು ಹೇಳಲು, ಅದಕ್ಕೆ ಶ್ರೀಕೃಷ್ಣನು, ಎಲೈ ಅಕ್ರೂರನೇ, ನೀನೂ ನಾನೂ ಮತ್ತು ಬಲರಾಮನೂ ಸಹ ನಾಳೆ ಮಧುರಾಪಟ್ಟಣಕ್ಕೆ ಹೋಗೋಣ; ಅಲ್ಲದೆ ಗೋಪವೃದ್ಧರೂ ಸಹ ರಾಜಮರ್ಯಾದೆಗೆ ಅನುರೂಪವಾದ ಪದಾರ್ಥಗಳನ್ನು ತೆಗೆದುಕೊಂಡು ಬರುವರು. ಇನ್ನು ಮೂರು ರಾತ್ರಿಯೊಳಗಾಗಿ, ಕಂಸನು ಸಹಚರಸಹಿತನಾಗಿ ನಾಶವಾಗುವನು. ಈ ಒಂದು ರಾತ್ರಿ ನನ್ನೊಡನೇ ಇರು" ಎಂದು ಹೇಳಿದನು. ಅನಂತರ ಆ ರಾತ್ರಿ ಶ್ರೀಕೃಷ್ಣನೂ ಬಲರಾಮನೂ ಅಕ್ರೂರನೂ ಸಹ ನಂದಗೋಪನ ಗೃಹದಲ್ಲಿ ಮಲಗಿ, ಉದಯಕಾಲವಾದನಂತರ ರಾಮಕೃಷ್ಣರು ಅಕ್ರೂರನಿಂದ ಸಹಿತರಾಗಿ, ಮಧುರಾಪಟ್ಟಣಕ್ಕೆ ಪ್ರಯಾಣಸಿದ್ಧರಾದರು. ಆ ಕಾಲದಲ್ಲಿ ಗೋಪಸ್ತ್ರೀಯರು ಕೃಷ್ಣನು ಪ್ರಯಾಣಮಾಡುವುದನ್ನು ಕೇಳಿ, ವಿಶೇಷ ದುಃಖದಿಂದ ಕಣ್ಣೀರು ಸುರಿಸುತ್ತಾ, ನಿಟ್ಟುಸುರನ್ನು ಬಿಡುತ್ತಾ, ಪರಸ್ಪರ ಮಾತನಾಡಿಕೊಳ್ಳುವರು. ಕೃಷ್ಣನು ಮಧುರಾಪಟ್ಟಣಕ್ಕೆ ಹೋದರೆ, ಪುನಃ ನಂದಗೋಕುಲಕ್ಕೆ ಬರುವುದಿಲ್ಲ. ಅಲ್ಲಿನ ಸ್ತ್ರೀಯರುಗಳ ಆಲಾಪವೆಂಬ ಮಧುವನ್ನು ಕಿವಿಯಿಂದ ಪಾನಮಾಡುವನು. ಪಟ್ಟಣಸ್ಥರಾದ ಸ್ತ್ರೀಯರನ್ನು ನೋಡಿದ ಕೃಷ್ಣನು, ಹಳ್ಳಿಕಾರರಾದ ನಮ್ಮನ್ನು ನೋಡುವುದುಂಟೆ? ಈ ಗೋಕುಲಕ್ಕೆ ಸಾರಭೂತನಾದ ಶ್ರೀಹರಿಯನ್ನು ವಿಧಿಯು ನಿರ್ಘೃಣನಾಗಿ ಕರೆದುಕೊಂಡು ಹೋಗುತ್ತಾನಲ್ಲಾ? ಕೃಷ್ಣನು ನಾಗರೀಕರಾದ ಸ್ತ್ರೀಯರ ರೂಪಲಾವಣ್ಯ ಸೌಕುಮಾರ್ಯ ಗಾನಾದಿಗಳನ್ನು ನೋಡಿ, ಅಲ್ಲಿಯೇ ನಿಲ್ಲುವನು. ಸೌಮ್ಯರಾದ ನಾವು ಯಾವ ಯುಕ್ತಿಯಿಂದಲೂ ಕರೆದುಕೊಂಡು ಬರಲು ಆಗುವುದಿಲ್ಲ. ಕೇಶವನನ್ನು ಕ್ರೂರನಾದ ಅಕ್ರೂರನು ರಥದಲ್ಲಿ ಕೂರಿಸಿಕೊಂಡು ಪ್ರಯಾಣಮಾಡಿದನು. ಈ ದುಷ್ಟನಾದ ಅಕ್ರೂರನು ನಮ್ಮಗಳ ಕಣ್ಣಿಗೆ ಆಹ್ಲಾದಕರನಾದ, ಅನುರಾಗಯುಕ್ತನಾದ ಹರಿಯನ್ನು ಕರೆದುಕೊಂಡು ಹೋದನು. ಈ ಕೃಷ್ಣನು ರಾಮಸಹಿತನಾಗಿ ನಮ್ಮಲ್ಲಿ ನಿಷ್ಕರುಣೆಯಿಂದ ಪ್ರಯಾಣಮಾಡುತ್ತಾನೆ. ಆದುದರಿಂದ ಎಲ್ಲರೂ ಜಾಗ್ರತೆಯಾಗಿ ಹೋಗಿ ಕೃಷ್ಣನಿಗೆ ಅಡ್ಡಿಮಾಡೋಣ. ನಾವು ಹೋದರೆ ವಿರಹತಾಪದಿಂದ ದಗ್ಧರಾದ ನಮ್ಮನ್ನು ನಮ್ಮ ಹಿರಿಯರು ಏನು ಮಾಡುವರೋ?

ಅಯ್ಯೋ! ನಂದಗೋಪಾದಿಗಳೂ ಕೂಡ ಹೊರಟರಲ್ಲಾ. ಕೃಷ್ಣನನ್ನು ನಿಲ್ಲಿಸ ತಕ್ಕವರು ಯಾರೂ ಇಲ್ಲವೇ? ಮಧುರಾವಾಸಿಗಳಾದ ಸ್ತ್ರೀಯರ ನೇತ್ರಗಳೆಂಬ ಭ್ರಮರಗಳು ಕೃಷ್ಣನ ಮುಖಕಮಲವನ್ನು ಪಾನಮಾಡುತ್ತವೆ. ಆದುದರಿಂದ ಆ ನಾರಿಯರೇ ಧನ್ಯರಾಗುವರು. ಈ ದಿವಸ ಕೃಷ್ಣನು ಮಧುರಾವಾಸಿಗಳ ನೇತ್ರ ಗಳಿಗೆ ಮಹೋತ್ಸವವನ್ನುಂಟುಮಾಡುತ್ತಾನೆ. ಈ ಗೋಪಿಜನಕ್ಕೆ ಕೃಷ್ಣನೆಂಬ ಮಹಾನಿಧಿಯನ್ನು ಕರುಣಾತ್ಮಕನಾದ ವಿಧಿಯು ತೋರಿಸಿ, ನಮ್ಮಗಳ ಕಣ್ಣು ಗಳನ್ನೇ ಅಪಹಾರಮಾಡಿದನು. ಹರಿಯ ಅನುರಾಗದಿಂದ ನಮ್ಮಗಳ ಕೈಬಳೆಗಳು ಶೈಥಿಲ್ಯವನ್ನು ಹೊಂದಿದವು. ಅಂದರೆ ಕೃಷ್ಣನ ವಿಶ್ಲೇಷದಿಂದ ಕೃಶರಾದರು. ಅಕ್ರೂರನು ಕ್ರೂರಹೃದಯನಾಗಿ ರಥದ ಕುದುರೆಗಳನ್ನು ಓಡಿಸುತ್ತಾನಲ್ಲಾ! ಆರ್ತರಾದ ಸ್ತ್ರೀಯರನ್ನು ರಕ್ಷಿಸತಕ್ಕವರು ಯಾರೂ ಇಲ್ಲವೇ; ಎಂದು ಗೋಪ ಸ್ತ್ರೀಯರು ದುಃಖಿತರಾಗಿ ರಥವನ್ನು ನೋಡುತ್ತಿದ್ದ ಹಾಗೆಯೇ ರಥವು ಬಹುದೂರ ವಾಗಿ ಹೊರಟುಹೋಯಿತು. ರಥದ ಧೂಳುಗಳೂ ಸಹ ಕಾಣದಂತಾದವು. ರಾಮಕೃಷ್ಣರು ನಂದಗೋಕುಲವನ್ನು ಬಿಟ್ಟು ಬಹುದೂರವಾಗಿ ಪ್ರಯಾಣಮಾಡಿ, ಯಮುನಾತೀರಕ್ಕೆ ಮಧ್ಯಾಹ್ನಕಾಲಕ್ಕೆ ಸರಿಯಾಗಿ ಬಂದು, ರಥವನ್ನು ನಿಲ್ಲಿಸಿ, ಅಕ್ರೂರನು ರಾಮಕೃಷ್ಣರಿಗೆ ಹೇಳುತ್ತಾನೆ: "ನೀವು ಸ್ವಲ್ಪಕಾಲ ವಿಶ್ರಾಂತ ರಾಗಿರಿ, ನಾನು ಮಾಧ್ಯಾಹ್ನಿಕ ಕರ್ಮವನ್ನು ತೀರಿಸಿ ಬರುವೆನೆಂದು" ಹೇಳಿ, ರಾಮಕೃಷ್ಣರಿಂದ ಆಜ್ಞಪ್ತನಾಗಿ ಸ್ನಾನಾರ್ಥವಾಗಿ, ಯಮುನಾಜಲದಲ್ಲಿ ಮುಳುಗಿದ ಕಾಲದಲ್ಲಿ ಸಾವಿರ ಹೆಡೆಗಳಿಂದ ಕೂಡಿದ ಕಮಲದಳದಂತೆ ವಿಸ್ತಾರ ವಾದ ಕಣ್ಣುಗಳುಳ್ಳ, ವಾಸುಕ, ರಂಭ ಮೊದಲಾದ ಸರ್ಪರಾಜರಿಂದ ಸ್ತುತ್ಯನಾದ, ವನಮಾಲಾ ವಿಭೂಷಿತನಾದ, ಮನೋಹರನಾದ, ಕುಂಡಲಾಲಂಕೃತನಾದ, ಕಾಂತಿಯುಕ್ತನಾದ, ಜಲಸ್ಥನಾದ, ಬಲರಾಮನನ್ನು ಕಂಡು, ಅವನ ಸಮೀಪ ದಲ್ಲಿ ಮೇಘಶ್ಯಾಮನಾಗಿಯೂ, ವಿಸ್ತಾರವಾದ ಕಣ್ಣುಳ್ಳವನಾಗಿಯೂ, ಚತು ರ್ಬಾಹುವಾಗಿಯೂ, ಉದಾರಾಂಗನಾಗಿಯೂ, ಶಂಖಚಕ್ರಗದಾಧರನಾಗಿಯೂ, ಪೀತಾಂಬರಧಾರಿಯಾಗಿಯೂ, ವಿಚಿತ್ರಮಾಲ್ಯಶೋಭಿತನಾಗಿಯೂ, ಶ್ರೀವತ್ಸ ವಕ್ಷಸ್ತನಾಗಿಯೂ, ಮಕರಕುಂಡಲಾಲಂಕೃತನಾಗಿಯೂ, ಇರುವ ಶ್ರೀಕೃಷ್ಣನನ್ನು ನೋಡಿ, ಅಕ್ರೂರನು ವಿಸ್ಮಿತನಾಗಿ, ರಥದಲ್ಲಿದ್ದ ರಾಮಕೃಷ್ಣರು ನೀರಿನಲ್ಲಿ ಹೇಗೆ ಬಂದರು ಎಂದು ಜಲದಿಂದ ಮೇಲಕ್ಕೆ ಬಂದು ನೋಡುವಲ್ಲಿ, ನೀರಿನಲ್ಲಿದ್ದ ರಾಮ ಕೃಷ್ಣರು ರಥದಲ್ಲಿ ಪೂರ್ವದಂತೆ ಕೂತುಕೊಂಡಿದ್ದರು. ಪುನಃ ಅಕ್ರೂರನು ಜಲದಲ್ಲಿ ಮುಳುಗಿದನು. ಆಗ ಅಕ್ರೂರನು ಸಿದ್ಧ, ಮುನಿ, ಗಂಧರ್ವ, ನಾಗಾದಿಗಳಿಂದ ಸ್ತೋತ್ರವನ್ನು ಮಾಡಿಸಿಕೊಳ್ಳುವ ರಾಮಕೃಷ್ಣರನ್ನು ಪುನಃ ನೋಡಿದನು.

ಅಕ್ರೂರನು ಪರಮಾರ್ಥವನ್ನು ತಿಳಿದು ಅಚ್ಯುತನನ್ನು ಸ್ತುತಿಸುತ್ತಾನೆ : "ಸನ್ಮಾತ್ರ ರೂಪಿಯಾದ, ಅಚಿಂತ್ಯಮಹಿಮನಾದ, ವ್ಯಾಪಿಯಾದ, ಕಾರ್ಯಾವಸ್ಥೆಯಲ್ಲಿ ಬಹುರೂಪಿಯಾದ, ಕಾರಣಾವಸ್ಥೆಯಲ್ಲಿ ಏಕರೂಪಿಯಾದ, ಪರಮಾತ್ಮನಿಗೆ ನಮಸ್ಕಾರವು. ಸರ್ವರೂಪನಾದ ನಿನಗೆ ನಮಸ್ಕಾರವು. ಹವಿರ್ಭೂತನಾದ ನಿನಗೆ ನಮಸ್ಕಾರವು. ಜ್ಞಾನಕ್ಕೆ ಪಾರನಾದ ನಿನಗೆ ನಮಸ್ಕಾರವು. ಓ ವಾಸುದೇವನೇ! ನೀನು ಭೂತಾತ್ಮನು ಅಂದರೆ ಶಬ್ದಾದಿಸಹಿತವಾದ ಪಂಚಭೂತಗಳನ್ನು ಶರೀರ ವಾಗಿ ಉಳ್ಳವನು, ಹನ್ನೊಂದು ಇಂದ್ರಿಯಗಳನ್ನೂ ಪ್ರಕೃತಿಯನ್ನೂ ಶರೀರ ವಾಗಿ ಉಳ್ಳವನು, ಅಂದರೆ ಸಮಷ್ಟಿವ್ಯಷ್ಟಿ ಸೃಷ್ಟಿಗಳಿಂದ ಬಿಡಲ್ಪಟ್ಟ ಸ್ವರೂಪ ಉಳ್ಳವನು. ಆನಂದಮಯನಾದ ಪರಮಾತ್ಮನಾದವನು. ಈ ಪ್ರಕಾರ ಐದು ವಿಧವಾಗಿರತಕ್ಕ ಸರ್ವಾತ್ಮಕನೇ, ಕ್ಷರಾಕ್ಷರಮಯನೇ, ನೀನು ಪ್ರಸನ್ನನಾಗು; ಅಗಣಿತನಾದ ಉಭಯ ವಿಭೂತಿಯಿಂದ ಆನಂದಾತ್ಮಕನಾದ ಬ್ರಹ್ಮ, ವಿಷ್ಣು, ಶಿವನೆಂದು, ಸಂಜ್ಞೆಗಳಿಂದ ಬೇರೆ ಬೇರೆಯಾಗಿ ಹೇಳಲ್ಪಟ್ಟವನೇ, ತನಗಿಂತಲೂ ಶ್ರೇಷ್ಠವಾದವನಿಲ್ಲದ ಸರ್ವೇಶ್ವರನೇ, ನಿನ್ನನ್ನು ನಮಸ್ಕರಿಸುತ್ತೇನೆ. ಓ ನಾಥ, ನಿನಗೆ ಹೆಸರು, ಕುಲ, ಗೋತ್ರ ಇವುಗಳಲ್ಲಿ ಯಾವುದನ್ನೂ ಹೇಳುವುದಕ್ಕಾಗುವು ದಿಲ್ಲ; ಅಂತಹ ಪರಬ್ರಹ್ಮನಾದವನು, ಹೀಗಿದ್ದಾಗ್ಯೂ ಲೋಕಾನುಗ್ರಹಾರ್ಥ ವಾಗಿ, ಸ್ವೇಚ್ಛಾಗೃಹೀತವಾದ ಶರೀರವನ್ನು ಹೊಂದಿ, ಕೃಷ್ಣಾದಿನಾಮಗ್ರಹಣೆ ಯಿಂದ ಕೂಡಿರುವನು. ವಿಶ್ವಾತ್ಮಕನಾಗಿರುವನು. ನಿನ್ನ ಸಂಬಂಧವಿಲ್ಲದ ವಸ್ತುವು ಯಾವುದೂ ಇಲ್ಲ. ನೀನು ಭಿನ್ನಾರ್ಥ, ಭಿನ್ನಕಾರ್ಯ ಇವುಗಳಿಂದ ಬ್ರಹ್ಮ, ರುದ್ರ, ಸೂರ್ಯ, ಇಂದ್ರ, ವಾಯು, ಅಗ್ನಿ, ಕುಬೇರ, ಯಮರೆಂಬ ಶಕ್ತಿಭೇದ ಗಳಿಂದ ಕೂಡಿದವನು. ನೀನು ಸೂರ್ಯರೂಪಿಯಾಗಿ ವೃಷ್ಟಿ ಮೂಲಕ ಜಗತ್ತನ್ನು ಸೃಷ್ಟಿಮಾಡತಕ್ಕವನು, ಆದುದರಿಂದ ಪ್ರಪಂಚವು ನಿನಗೆ ಶೇಷಭೂತವಾದುದು. ಸದಸದಾತ್ಮಕನಾದ ಜ್ಞಾನಾತ್ಮಕನಾದ ನಿನಗೆ ನಮಸ್ಕಾರವು. ವಾಸುದೇವನಾದ, ಸಂಕರ್ಷಣನಾದ, ಪ್ರದ್ಯುಮ್ನನಾದ, ಅನಿರುದ್ಧನಾದ ನಿನಗೆ ನಮಸ್ಕಾರವು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಹದಿನೆಂಟನೆಯ ಅಧ್ಯಾಯವು ಸಮಾಪ್ತಃ

ಹತ್ತೊಂಬತ್ತನೆಯ ಅಧ್ಯಾಯವು

"ಈ ಪ್ರಕಾರ ಅಕ್ರೂರನು, ನೀರಿನಲ್ಲಿ ಸರ್ವೇಶ್ವರನಾದ ಅಚ್ಯುತನನ್ನು ಸ್ತೋತ್ರ ಮಾಡಿ, ಗಂಧಪುಷ್ಪಾದಿಗಳಿಂದ ಪೂಜಿಸಿ, ಇತರ ವಿಷಯಗಳನ್ನು ಪರಿತ್ಯಾಗ

ಮಾಡಿ; ಪರಬ್ರಹ್ಮಭೂತನಾದ ಕೇಶವನಲ್ಲಿ ದೃಢಚಿತ್ತನಾಗಿ ಸಮಾಧಿಯಿಂದ ವಿರಾಮವನ್ನು ಹೊಂದಿದನು. ಮಹಾಮತಿಯಾದ ಅಕ್ರೂರನು ತಾನು ಕೃತಕೃತ್ಯನಾದೆನೆಂದು ಹರ್ಷಯುಕ್ತನಾಗಿ, ಯಮುನಾತೀರವನ್ನು ಬಿಟ್ಟು, ರಥದ ಸಮೀಪಕ್ಕೆ ಬಂದು, ರಾಮಕೃಷ್ಣರನ್ನು ನೋಡಿದನು. ಆಗ ಕೃಷ್ಣನು ಅಕ್ರೂರನಿಗೆ ಹೇಳುತ್ತಾನೆ: "ಓ, ಅಕ್ರೂರನೇ, ನೀನು ಯಮುನಾಜಲದಲ್ಲಿ ಏನೋ ಆಶ್ಚರ್ಯವನ್ನು ಕಂಡಂತೆ ಕಾಣುವೆ. ಆ ಆಶ್ಚರ್ಯವನ್ನು ನನಗೂ ಹೇಳೆಂದನು. ಕೃಷ್ಣನ ಮಾತಿಗೆ ಅಕ್ರೂರನು ನಗುತ್ತ, "ಕೃಷ್ಣ, ನಾನು ನೀರಿನಲ್ಲಿ ನೋಡಿದ ಆಶ್ಚರ್ಯವನ್ನು ಇಲ್ಲಿಯೂ ನನ್ನ ಮುಂಭಾಗದಲ್ಲಿ ನೋಡುತ್ತೇನೆ. ಪರಮಾತ್ಮನ ರೂಪವು ಜಗತ್ತಿಗೆ ಆಶ್ಚರ್ಯಕರವಾದುದು. ಓ, ಕೃಷ್ಣ, ಆಶ್ಚರ್ಯವನ್ನು ನಿನ್ನಿಂದಲೇ ನೋಡಿದೆನು, ಇದು ಹಾಗಿರಲಿ. ಈಗ ನಾವು ಮಧುರಾಪಟ್ಟಣಕ್ಕೆ ಹೋಗೋಣ. ದುಷ್ಟನಾದ ಕಂಸನು ಕೋಪಿಸುವನು. ಭಗವತ್ಸಾಕ್ಷಾತ್ಕಾರವಾದರೂ ಭಗವಂತನಲ್ಲಿ ಮಾತನಾಡುವುದಕ್ಕೂ ಸಹ ಅವಕಾಶವಿಲ್ಲವಲ್ಲಾ; ಪರೋಪಜೀವಿಗಳ ಜನ್ಮವು ಬಹು ಕಷ್ಟತರವಾದುದು." ಈ ರೀತಿ ಹೇಳುತ್ತಾ, ರಥವನ್ನು ಬಹು ವೇಗವಾಗಿ ನಡೆಸಿ, ಸಾಯಂಕಾಲಕ್ಕೆ ಮಧುರಾಪಟ್ಟಣದ ಸಮೀಪಕ್ಕೆ ಬಂದು, ಆಗ ಅಕ್ರೂರನು ರಾಮಕೃಷ್ಣರಿಗೆ ಹೇಳುತ್ತಾನೆ: "ನೀವು ರಥದಿಂದಿಳಿದು ಕಾಲ್ನಡೆಯಿಂದ ಪಟ್ಟಣಪ್ರವೇಶವನ್ನು ಮಾಡಿ. ನಾನೊಬ್ಬನೇ ರಥವನ್ನು ತೆಗೆದುಕೊಂಡು ಹೋಗುತ್ತೇನೆ. ನೀವು ವಸುದೇವನ ಮನೆಗೆ ಹೋಗಬೇಡಿ. ನಿಮಗಾಗಿ ಕಂಸನು ವಸುದೇವನನ್ನು ಓಡಿಸಿರುವನು" ಎಂದು ಅಕ್ರೂರನು ಹೇಳಿ, ಪಟ್ಟಣಪ್ರವೇಶ ಮಾಡಿದನು. ರಾಮಕೃಷ್ಣರೂ ಸಹ ಮಧುರಾಪಟ್ಟಣವನ್ನು ಪ್ರವೇಶಮಾಡಿ, ರಾಜಬೀದಿಯಲ್ಲಿ ಸಂಚರಿಸಿದರು. ಆಗ ಮಧುರಾವಾಸಿಗಳಾದ ಸ್ತ್ರೀಪುರುಷರೆಲ್ಲರೂ ಆನಂದಪರವಶರಾಗಿ, ಮದಗಜದಂತೆ ಬರುತ್ತಿರುವ ರಾಮಕೃಷ್ಣರನ್ನು ನೋಡಿದರು. ಈ ರಾಮಕೃಷ್ಣರು ಬೀದಿಯಲ್ಲಿ ಸಂಚರಿಸುತ್ತಿದ್ದ ಕಾಲದಲ್ಲಿ, ಅಗಸನು ವಸ್ತ್ರಗಳನ್ನು ಮಡಿಮಾಡಿ, ಅರಮನೆಗೆ ತೆಗೆದುಕೊಂಡು ಹೋಗುತ್ತಿದ್ದನು. ಅದನ್ನು ನೋಡಿ ವಸ್ತ್ರಗಳನ್ನು ಕೊಡು ಎಂಬುದಾಗಿ ಕೇಳಿದುದಕ್ಕೆ, ಅಗಸನು ರಾಮಕೃಷ್ಣರನ್ನು ನಿಷ್ಠುರವಾಕ್ಯಗಳಿಂದ ತಿರಸ್ಕಾರಮಾಡಲು, ಕೃಷ್ಣನು ಅಗಸನ ತಲೆಯಮೇಲಿದ್ದ ವಸ್ತ್ರಗಳನ್ನು ಕಿತ್ತುಕೊಂಡು, ಅಗಸನ ತಲೆಯನ್ನು ಚಂಡಾಡಿದನು. ಅನಂತರ ಇವರಿಬ್ಬರೂ ಹೂವಾಡಿಗನ ಮನೆಗೆ ಹೋಗಿ, ಹೂವಾಡಿಗನನ್ನು ಈ ಪುಷ್ಪಮಾಲಿಕೆಯು ಯಾರಿಗೆಂದು ಕೇಳಲು, ಅವನು ರಾಮಕೃಷ್ಣರನ್ನು ನೋಡಿ ವಿಸ್ಮಿತನಾಗಿ ಮುಖಕಮಲಗಳಿಂದ ವಿಕಸಿತರಾದ ಇವರು ದೇವಲೋಕದಿಂದ ಭೂಮಿಗೆ ಬಂದಿರಬಹುದು ಎಂದು ಯೋಚಿಸಿ, ಪೀತ

ನೀಲಾಂಬರಧಾರಿಗಳಾದ ರಾಮಕೃಷ್ಣರಿಗೆ ದಂಡವತ್ಪ್ರಣಾಮವನ್ನು ಮಾಡಿ, ನೀವು ನನ್ನ ಮನೆಗೆ ಬಂದುದರಿಂದ ನಾನು ಧನ್ಯನಾದೆನು; ಅನುಗ್ರಹಮಾಡುವುದೇ ಪ್ರಯೋಜನವಾಗಿ ಉಳ್ಳ ನಿಮ್ಮನ್ನು ಪೂಜಿಸುತ್ತೇನೆಂದು ಹೇಳಿ, ಅತಿ ಮನೋಹರವಾದ ಪುಷ್ಪಮಾಲಿಕೆಗಳನ್ನು ಯಥೇಚ್ಛವಾಗಿ ರಾಮಕೃಷ್ಣರಿಗೆ ಸಮರ್ಪಿಸಿ, ಆನಂದವನ್ನು ಹೊಂದಿದನು. ಮಾಲಾಕಾರನು ಬಾರಿಬಾರಿಗೂ ನಮಸ್ಕಾರಮಾಡುತ್ತಿದ್ದುದನ್ನು ಕೃಷ್ಣನು ನೋಡಿ ಪ್ರಸಾದಾಭಿಮುಖನಾಗಿ, "ಎಲೈ ಹೂವಾಡಿಗನೇ, ನಿನಗೆ ಧನ, ಸಂಪತ್ತೂ, ಪುತ್ರಸಂಪತ್ತೂ, ಬಲಸಂಪತ್ತೂ ಸಹ ಉಂಟಾಗಲಿ ಎಂದು ವರವನ್ನು ಕೊಟ್ಟು, ಅಂತ್ಯಕಾಲದಲ್ಲಿ ನನ್ನ ಸ್ಮರಣೆಯಿಂದ ದಿವ್ಯಲೋಕವನ್ನು ಹೊಂದು, ನಿನಗೆ ಯಾವಾಗಲೂ ಧರ್ಮದಲ್ಲಿಯೇ ಬುದ್ಧಿಯಿರಲಿ, ಅಲ್ಲದೆ ನಿನ್ನ ಸಂತತಿಯಲ್ಲಿ ಹುಟ್ಟಿದವರು ದೀರ್ಘಾಯುಷ್ಮಂತರಾಗಿರಲಿ." ಈ ಪ್ರಕಾರ ಕೃಷ್ಣನು ಹೂವಾಡಿಗನಿಗೆ ವರಗಳನ್ನು ಕೊಟ್ಟು ಬಲರಾಮಸಹಿತನಾಗಿ ಹೂವಾಡಿಗನಿಂದ ಪೂಜಿಸಲ್ಪಟ್ಟವನಾಗಿ ಅಲ್ಲಿಂದ ಹೊರಟನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಹತ್ತೊಂಬತ್ತನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತನೆಯ ಅಧ್ಯಾಯವು

ಶ್ರೀಕೃಷ್ಣನು ಹೂವಾಡಿಗನ ಮನೆಯಿಂದ ಹೊರಟು, ರಾಜಬೀದಿಯಲ್ಲಿ ಬರುತ್ತಿದ್ದ ಕಾಲದಲ್ಲಿ, ಕುಬ್ಜೆಯೆಂಬುವಳು ಕಂಸನ ಅರಮನೆಗೆ ದಿವ್ಯಗಂಧದಿಂದ ಪೂರ್ಣವಾದ ಪಾತ್ರೆಯನ್ನು ತೆಗೆದುಕೊಂಡು ಹೋಗುತ್ತಿದ್ದಳು. ನವಯೌವನ ಭೂಷಿತಳಾದ ಕುಬ್ಜೆಯನ್ನು ಕೃಷ್ಣನು ನೋಡಿ, ಅವಳನ್ನು ಕುರಿತು, ಓ ಸುಭಗೆ ಈ ಸುಗಂಧವನ್ನು ಯಾರಿಗೆ ತೆಗೆದುಕೊಂಡು ಹೋಗುವೆ ಎಂದು ಕೇಳಲು, ಕುಬ್ಜೆಯು ಕೃಷ್ಣನ ಮಾತಿನಿಂದ ಮನ್ಮಥನಿಗೆ ವಶಳಾಗಿ ಸಾನುರಾಗದಿಂದ ಕೃಷ್ಣನನ್ನು ಕುರಿತು ಹೇಳುತ್ತಾಳೆ: "ಓ ಕಾಂತ, ಕಂಸನಿಂದ ಚಂದನಕಾರ್ಯದಲ್ಲಿ ನಿಯಮಿಸಲ್ಪಟ್ಟವಳು; ಬಹು ವಕ್ರವಾದ ದೇಹವುಳ್ಳವಳೆಂದು ಖ್ಯಾತಿಗೊಂಡಿರುವೆನು, ಇದು ನಿನಗೆ ಗೊತ್ತಿಲ್ಲವೇ? ಕಂಸನಿಗೆ ನನ್ನ ಹೊರತು ಮತ್ತ್ಯಾರೂ ಚಂದನಕಾರ್ಯವನ್ನು ಮಾಡುವುದಿಲ್ಲ. ಅವನಿಗೆ ನಾನು ಬಹಳವಾಗಿ ಅನುಗ್ರಹಪಾತ್ರಳಾದವಳು" ಎಂದು ಕುಬ್ಜೆಯು ಹೇಳಲು, ಕೃಷ್ಣನು

ಕುಬ್ಜೆಯನ್ನು ಕುರಿತು ಹೇಳುತ್ತಾನೆ: "ಎಲೈ ಮನೋರಮೆಯೆ, ಶ್ಲಾಘ್ಯವಾದ ಸುಗಂಧವು ರಾಜಾರ್ಹವಾದುದೋ? ಹಾಗಾದರೆ ಈ ಅನುಲೇಪನವನ್ನು ನಮ್ಮಿಬ್ಬರಿಗೂ ಕೊಡು ಎನಲು, ಕುಬ್ಜೆಯು ಬಹಳ ಆದರದಿಂದ ರಾಮಕೃಷ್ಣರಿಗೆ ಅನುಲೇಪನವನ್ನು ಕೊಟ್ಟಳು. ಭಕ್ತಿಯಿಂದ ಕೊಡಲ್ಪಟ್ಟ ಗಂಧವನ್ನು ರಾಮ ಕೃಷ್ಣರು ತಮ್ಮಗಳ ದೇಹಕ್ಕೆ ಲೇಪಿಸಿಕೊಂಡು, ಇಂದ್ರಧನುಸ್ಸಿನಿಂದ ಕೂಡಿದ ಶ್ವೇತ, ಕೃಷ್ಣ ಮೇಘಗಳಂತೆ ಪ್ರಕಾಶಿಸಿದರು. ಅನಂತರ ಶ್ರೀಕೃಷ್ಣನು ಕುಬ್ಜೆಯ ಕೇಶಗಳನ್ನು ಹಿಡಿದುಕೊಂಡು, ಕಾಲುಗಳಿಂದ ಕಾಲುಗಳನ್ನು ತುಳಿದುಕೊಂಡು ಎಳೆದನು. ಆಗ ಕುಬ್ಜೆಯು ವಕ್ರತ್ವವನ್ನು ಬಿಟ್ಟು, ಋಜುತ್ವವನ್ನು ಹೊಂದಿದಳು. ಅನಂತರ ಸರ್ವಸ್ತ್ರೀಯರಿಗೂ ಅತಿಶಯವಾದ ರೂಪಶಾಲಿಯಾದಳು. ಆಗ ಕುಬ್ಜೆಯು ಪ್ರೇಮಗರ್ಭಭರಿತಳಾಗಿ, ಗೋವಿಂದನ ವಸ್ತ್ರಗಳನ್ನು ಹಿಡಿದುಕೊಂಡು ನಮ್ಮ ಮನೆಗೆ ಹೋಗೋಣ ಬಾ ಎಂದು ಹೇಳಿದಳು. ಆ ಮಾತಿಗೆ ಕೃಷ್ಣನು ಬಲರಾಮನ ಮುಖವನ್ನು ನೋಡುತ್ತ ಕುಬ್ಜೆಗೆ ಹೇಳುತ್ತಾನೆ: "ಎಲೈ ಸ್ತ್ರೀಯೆ, ನಿನ್ನ ಇಷ್ಟಾನುಸಾರ ನಿನ್ನ ಮನೆಗೆ ಬರುತ್ತೇನೆ, ನೀನು ಹೊರಡು" ಎಂದು ಹೇಳಿ, ಬಲರಾಮಸಹಿತನಾಗಿ ಧನುಶ್ಶಾಲೆಗೆ ಹೋಗಿ, ಶಾಲಾರಕ್ಷಕರನ್ನು ಉತ್ಕೃಷ್ಟವಾದ ಧನುಸ್ಸನ್ನು ಕೊಡು ಎಂದು ಕೇಳಲು, ಅವರು ಶ್ರೇಷ್ಠವಾದ ಧನುಸ್ಸನ್ನು ಕೊಟ್ಟರು. ಆ ಧನುಸ್ಸನ್ನು ಆರೋಪಣೆಮಾಡತಕ್ಕ ಕಾಲದಲ್ಲಿ ಅದು ಮುರಿದು ಹೋಯಿತು. ಆ ಶಬ್ದವು ಮಧುರಾಪುರಿಯ ಎಲ್ಲಾ ಕಡೆಗಳಲ್ಲಿಯೂ ತುಂಬಿತು. ಅನಂತರ ಧನುಶ್ಶಾಲಾರಕ್ಷಕರಾದ ಸೈನಿಕರನ್ನು ನಾಶಮಾಡಿ, ಅಲ್ಲಿಂದ ಮುಂದಕ್ಕೆ ಪ್ರಯಾಣಮಾಡಿದರು. ಕಂಸನು ಧನುರ್ಭಂಗಶಬ್ದವನ್ನು ಕೇಳಿ, ಅಕ್ರೂರನು ಬಂದ ಸಮಾಚಾರವನ್ನೂ ಸಹ ತಿಳಿದು, ಮಲ್ಲಯುದ್ಧದಲ್ಲಿ ವಿಶಾರದರಾದ ಚಾಣೂರ ಮುಷ್ಟಿಕರಿಗೆ ಹೇಳುತ್ತಾನೆ: "ಗೋಪಾಲ ಬಾಲಕರಾದ ರಾಮಕೃಷ್ಣರು ಬಂದಿರುತ್ತಾರೆ; ಅವರನ್ನು ಮಲ್ಲಯುದ್ಧದಲ್ಲಿ ಸಂಹರಿಸಿ ನನಗೆ ಸಂತೋಷ ವನ್ನುಂಟುಮಾಡಿರಿ. ರಾಮಕೃಷ್ಣರು ನನಗೆ ಮೃತ್ಯುಗಳು; ಇವರು ನಿಮ್ಮಿಂದ ನಾಶವಾದರೆ, ನಿಮಗೆ ಅನೇಕ ಇಷ್ಟಾರ್ಥಗಳನ್ನು ಕೊಡುತ್ತೇನೆ; ನ್ಯಾಯವಾಗಿ ಯಾಗಲಿ, ಅನ್ಯಾಯವಾಗಿಯಾಗಲಿ, ಅವರನ್ನು ಸಂಹರಿಸಬೇಕು," ಎಂದು ಆಜ್ಞಾಪಿಸಿ, ಮಾವಟಿಗನನ್ನು ಕರೆದು, ನೀನು ಸಭಾದ್ವಾರದಲ್ಲಿ ಕುವಲಯಾ ಪೀಡನಾಮಕವಾದ ಆನೆಯ ಮೇಲೆ ಕೂತುಕೊಂಡು, ರಂಗಸ್ಥಾನಕ್ಕೆ ಬರುವ ರಾಮಕೃಷ್ಣರನ್ನು ಸಂಹರಿಸಬೇಕೆಂದು ಮಾವಟಿಗನಿಗೆ ಆಜ್ಞಾಪಿಸಿ, ಸಭೆಯನ್ನು ಅಲಂಕಾರಮಾಡಿಸಿ, ಅನೇಕ ಮಂಚಗಳಿಂದ ಆಸನವನ್ನು ಕಟ್ಟಿಸಿ, ಅಂತಃಪುರ ಪ್ರವೇಶಮಾಡಿದನು. ಮರಣಕಾಲ ಸಮೀಪಿಸಿದ ಕಂಸನು ರಾತ್ರಿ ಎಲ್ಲಾ ನಿದ್ರೆ

ಮಾಡದೆ ಸೂರ್ಯೋದಯವನ್ನೇ ನಿರೀಕ್ಷಿಸುತ್ತಿದ್ದನು. ಸೂರ್ಯೋದಯವಾದ ನಂತರ ಸಭಿಕರೆಲ್ಲರೂ ಕಂಸನ ಸಭೆಗೆ ಬಂದು ಮಂಚಗಳಲ್ಲಿ ಕೂತುಕೊಂಡರು. ಸಾಮಂತರಾಜರೂ ಸಹ ಅವರವರ ಆಸನಗಳಲ್ಲಿ ಕೂತುಕೊಂಡರು. ಮಲ್ಲಯುದ್ಧ ಪರೀಕ್ಷಕರೂ ಸಹ ರಂಗಮಧ್ಯದ ಸಮೀಪದಲ್ಲಿ ಕೂತುಕೊಂಡರು. ಕಂಸನೂ ಸಭೆಗೆ ಬಂದು ಎತ್ತರವಾದ ಸಿಂಹಾಸನದಲ್ಲಿ ಕೂತುಕೊಂಡನು. ಅಂತಃಪುರ ಸ್ತ್ರೀಯರೂ, ವಾರಾಂಗನೆಯರೂ ಸಹ ಕ್ಲಿಪ್ತವಾದ ಸ್ಥಾನದಲ್ಲಿ ಕೂತುಕೊಂಡರು. ನಂದಗೋಪನೇ ಮೊದಲಾದ ಗೋಪಾಲಕರೂ, ಅಕ್ರೂರವಸುದೇವರೂ ಸಹ ಸಭಾಲಂಕೃತರಾದರು. ಸ್ತ್ರೀಯರ ಮಧ್ಯದಲ್ಲಿ ದೇವಕಿಯು, ಪುತ್ರನಿಗೆ ಕ್ಷೇಮವನ್ನು ಹರಸತಕ್ಕವಳಾಗಿ ಕೂತುಕೊಂಡಿದ್ದಳು. ಈ ರೀತಿ ಸಭೆಯು ಪೂರ್ಣವಾದನಂತರ, ಮಂಗಳವಾದ್ಯಗಳು ಘೋಷಿಸಲ್ಪಟ್ಟವು. ಮಂಗಳವಾದ್ಯ ಶಬ್ದವನ್ನು ಕೇಳಿ, ರಾಮಕೃಷ್ಣರು ಹಸನ್ಮುಖಿಗಳಾಗಿ ಸಭಾದ್ವಾರಕ್ಕೆ ಬಂದರು. ಆ ಕಾಲದಲ್ಲಿ ಕುವಲಯಾಪೀಡವು ಮಾವಟಿಗನಿಂದ ಪ್ರೇರಿತವಾಗಿ ಗೋಪಕುಮಾರಕರನ್ನು ಸಂಹರಿಸಲು ಪ್ರಯತ್ನಪಟ್ಟಿತು. ಸಭೆಯವರು ಹಾಹಾಕಾರವನ್ನು ಮಾಡಿದರು. ಇದನ್ನು ನೋಡಿದ ಬಲರಾಮನು ಕೃಷ್ಣನಿಗೆ ಹೇಳುತ್ತಾನೆ: ಈ ಗಜವು ನಮ್ಮನ್ನು ಹಿಂಸಿಸುವುದಕ್ಕೆ ಬರುತ್ತದೆ; ಆದುದರಿಂದ ಇದನ್ನು ಕೊಲ್ಲಬೇಕೆಂದು ಹೇಳಲು, ಶತ್ರುಸಂಹಾರಕನಾದ ಮಾಧವನು, ಸಿಂಹನಾದವನ್ನು ಮಾಡಿ, ಆನೆಯ ಸೊಂಡಲನ್ನು ಹಿಡಿದುಕೊಂಡು, ಐರಾವತಕ್ಕೆ ಸಮಾನಬಲವುಳ್ಳ ಆನೆಯನ್ನು ತಿರುಗಿಸಿ, ಅದರ ಬಲಭಾಗದ ದಂತವನ್ನು ಮುರಿದು, ದಂತದಿಂದ ಮಾವಟಿಗನ ತಲೆಯನ್ನು ಚೂರುಚೂರಾಗಿ ಮಾಡಿದನು. ಬಲರಾಮನು ಕುವಲಯಾಪೀಡದ ಮತ್ತೊಂದು ದಂತವನ್ನು ಕಿತ್ತು, ಇತರ ಮಾವಟಿಗರನ್ನು ಕೊಂದನು. ಅನಂತರ ಬಲಭದ್ರನು ಕುವಲಯಾಪೀಡವನ್ನು ಸಂಹರಿಸಿ, ಸಿಂಹನಾದವನ್ನು ಮಾಡಿದನು. ಬಳಿಕ ರಾಮಕೃಷ್ಣರು ಗಜದಂತವನ್ನು ಕೈಯಲ್ಲಿ ಹಿಡಿದುಕೊಂಡು, ಮೃಗಮಧ್ಯವಾದ ಸಿಂಹದಂತೆ ಸಭಾಮಧ್ಯವನ್ನು ಪ್ರವೇಶ ಮಾಡಿದರು. ಆಗ ಸಭಿಕರು ವಿಸ್ಮಿತರಾಗಿ, ರಾಮಕೃಷ್ಣರನ್ನು ನೋಡಿ, ಇವನೇ ಕೃಷ್ಣನು, ಇವನೇ ಬಲರಾಮನು, ಈ ಕೃಷ್ಣನಿಂದ ಬಾಲಘಾತಿನಿಯಾದ ಪೂತನಿಯೂ, ಶಕಟಾಸುರನೂ, ಯಮಳಾರ್ಜುನರೂ ಸಹ ನಾಶವಾದರು. ಕಾಳೀಯನು ಶಿಕ್ಷಿಸಲ್ಪಟ್ಟನು. ಗೋವರ್ಧನ ಪರ್ವತವನ್ನು ಏಳು ರಾತ್ರಿ ಧರಿಸಿದವನು; ಅರಿಷ್ಟ, ಧೇನುಕ, ಕೇಶಿ ಇವರುಗಳನ್ನು ನಾಶಮಾಡಿದ ಕೃಷ್ಣನೇ ಇವನೆಂದೂ, ಇವನಿಗೆ ಅಣ್ಣನಾದ ಬಲರಾಮನು ಇವನೇ ಎಂದು ಜನಗಳು ಮಾತನಾಡಿಕೊಂಡರು. ಸ್ತ್ರೀಯರ ಮನಸ್ಸು, ನೇತ್ರ ಇವುಗಳಿಗೆ ಆನಂದಕರ

ನಾದ ಕೃಷ್ಣನು, ಪ್ರಾಜ್ಞರಾದ, ಪುರಾಣಾರ್ಥವಿಶಾರದರಾದ, ಮಹಾತ್ಮರುಗಳಿಂದ ಮುಳುಗಿಹೋಗಿದ್ದ ಯಾದವ ವಂಶವನ್ನುದ್ಧರಿಸುತ್ತಾನೆಂದೂಹಿಸಲ್ಪಟ್ಟಿತು. ಶ್ರೀಮನ್ನಾರಾಯಣನು ಮಾನುಷಜನ್ಮವೆತ್ತಿ ಭೂಭಾರವನ್ನು ಪರಿಹಾರಮಾಡು ತ್ತಾನೆಂಬುದಾಗಿ ವರ್ಣಿಸಲ್ಪಟ್ಟಿರುವುದು. ದೇವಕಿಗೆ ಮಗನನ್ನು ನೋಡಿದುದ ರಿಂದ ಹೃದಯದಲ್ಲಿದ್ದ ತಾಪವು ಹೋಗಿ, ಸ್ನೇಹವೆಂಬ ಸ್ತನ್ಯವುಳ್ಳ ಪಯೋಧರ ವುಳ್ಳವಳಾಗಿ, ಮಹೋತ್ಸಾಹವು ಉಂಟಾಯಿತು. ವಸುದೇವನಿಗೆ ವಾರ್ಧಕ್ಯವು ಹೋಗಿ, ನವಯೌವನವುಂಟಾಯಿತು; ಅಂತಃಪುರಸ್ತ್ರೀಯರ ಕಣ್ಣುಗಳು ವಿಶಾಲ ವಾದವು. ನಾಗರಿಕಸ್ತ್ರೀಯರು ವಿರಾಮವಿಲ್ಲದೆ ಕಣ್ಣುಗಳಿಗೆ ಆಯಾಸವನ್ನುಂಟು ಮಾಡಿ ಪರಸ್ಪರ ಮಾತನಾಡುತ್ತಾರೆ: ಓ, ಸಖಿಯೇ ಕೃಷ್ಣನನ್ನು ನೋಡು; ಗಜಯುದ್ಧದ ಆಯಾಸದಿಂದ ಉಂಟಾದ ಬೆವರಿನಿಂದ ಅಲಂಕೃತವಾದ ಮುಖ ವನ್ನು ನೋಡು; ಪುಂಡರೀಕನ ಮುಖವನ್ನು ನೋಡು; ಜಲಾಶಯವನ್ನು ಬಿಟ್ಟು ಮನುಷ್ಯಜನ್ಮವೆತ್ತಿರುವ ಕುಮಾರನನ್ನು ನೋಡು; ಕಣ್ಣುಗಳಿಗೆ ಸಾಫಲ್ಯವನ್ನುಂಟುಮಾಡತಕ್ಕ ಯಶೋದಾನಂದನನ್ನು ನೋಡು; ಶ್ರೀವತ್ಸಚಿಹ್ನೆ ಯನ್ನು ನೋಡು; ಶತ್ರುಪಕ್ಷ ಕ್ಷಯವನ್ನು ಮಾಡತಕ್ಕ ಕೃಷ್ಣನನ್ನು ನೋಡು; ಓ, ಸಖಿ, ಚಂದ್ರನಂತೆ ಪ್ರಕಾಶಮಾನನಾದ, ನೀಲವಸ್ತ್ರಧಾರಿಯಾದ ಬಲರಾಮ ನನ್ನು ನೋಡಿದೆಯಾ? ಚಾಣೂರನಿಂದ ಆಟವಾಡತಕ್ಕ ರಾಮಕೃಷ್ಣರನ್ನು ನೋಡು; ಆ ದುಷ್ಟನಾದ ಚಾಣೂರನು ಯುದ್ಧಸಿದ್ಧನಾಗಿರುವನು; ಈ ಸಭೆ ಯಲ್ಲಿ ಹೇಳತಕ್ಕ ವೃದ್ಧರು ಯಾರೂ ಇಲ್ಲವೇ? ಕೋಮಲಾಂಗನಾದ ಕೃಷ್ಣನೆಲ್ಲಿ, ಕಠಿಣದೇಹವುಳ್ಳ ಚಾಣೂರನೆಲ್ಲಿ, ಮಧ್ಯಸ್ಥರು ಯಾರೂ ಇಲ್ಲವೇ? ಅಸಮಾನ ಯುದ್ಧವನ್ನು ನಿಲ್ಲಿಸತಕ್ಕವರೇ ಇಲ್ಲವಲ್ಲಾ. ಈ ರೀತಿ ಮಾತನಾಡತಕ್ಕ ಸ್ತ್ರೀಯರ ಮಾತನ್ನು ಕೃಷ್ಣನು ಕೇಳುತ್ತಾ, ರಂಗಸ್ಥಳಕ್ಕೆ ಬಂದು, ಮಲ್ಲಯುದ್ಧ ಕ್ಕಾಗಿ ಸೊಂಟವನ್ನು ಕಟ್ಟಿ, ಕೃಷ್ಣನು ಚಾಣೂರನೊಡನೆಯೂ, ಬಲರಾಮನು ಮುಷ್ಟಿಕನೊಡನೆಯೂ ಮಲ್ಲಯುದ್ಧಕ್ಕೆ ಪ್ರಾರಂಭಿಸಿದರು. ಕೃಷ್ಣನು ಚಾಣೂರ ನಿಂದ ಹಸ್ತತಾಡನ, ಊರುತಾಡನವೇ ಮುಂತಾದವುಗಳನ್ನು ಮಾಡಿ, ಶಸ್ತ್ರ ವಿಲ್ಲದ ಘೋರವಾದ ಯುದ್ಧವನ್ನು ಮಾಡಿ, ಚಾಣೂರನ ಕಾಲುಗಳನ್ನು ಹಿಡಿದು ಅಂತರಿಕ್ಷಕ್ಕೆ ಹಾಕಲು, ಚಾಣೂರನು ಭೂಮಿಯ ಮೇಲೆ ಬಿದ್ದು ಹತನಾದನು. ಮುಷ್ಟಿಕನೂ ಸಹ ಇದೇ ರೀತಿ ಬಲರಾಮನಿಂದ ನಾಶವಾದನು. ಚಾಣೂರ ಮುಷ್ಟಿಕರ ಮರಣದಿಂದ ಕುಪಿತನಾದ ಕೋಸಲಕನೆಂಬ ಮಲ್ಲನು, ಕೃಷ್ಣನಲ್ಲಿ ದ್ವಂದ್ವಯುದ್ಧವನ್ನು ಮಾಡಿ, ಅವನೂ ಸಹ ನಾಶವಾದನು. ಈ ರೀತಿ ಮೂವರು ಪ್ರಧಾನರಾದ ಮಲ್ಲರು ಹತವಾದುದನ್ನು ನೋಡಿ, ಉಳಿದ

ಜಟ್ಟಿಗಳೆಲ್ಲರೂ ಓಡಿಹೋದರು. ಅನಂತರ ರಾಮಕೃಷ್ಣರು ಸಮಾನವಯಸ್ಕ ರಾದ ಬಾಲಕರನ್ನು ಆಲಿಂಗಿಸಿ, ಹರ್ಷವನ್ನು ಹೊಂದಿದರು. ಕಂಸನು ಕೋಪ ಯುಕ್ತನಾಗಿ ಹೇಳುತ್ತಾನೆ: "ಗೋಪಬಾಲಕರನ್ನು ಸಂಹರಿಸಿ, ಈ ನಂದ ಗೋಪನನ್ನು ಹಿಡಿದು ಕಾರಾಗೃಹದಲ್ಲಿಡಿ. ವಸುದೇವನನ್ನು ಕೊಲ್ಲಿರಿ, ಈ ಗೋಪಾಲಕರೆಲ್ಲರನ್ನೂ ನಾಶಮಾಡಿ, ಇವರ ಗೋವುಗಳನ್ನೂ ಧನಗಳನ್ನೂ ಸಹ ತೆಗೆದುಕೊಳ್ಳಿರಿ," ಎಂದು ಆಜ್ಞಾಪಿಸತಕ್ಕ ಕಂಸನನ್ನು ನೋಡಿ, ಶ್ರೀಕೃಷ್ಣನು ನಕ್ಕು ಕಂಸನ ಮೇಲೆ ಹಾರಿ ಅವನ ಕೇಶಗಳನ್ನು ಎಳೆದು, ಕಿರೀಟವನ್ನು ನೆಲದಲ್ಲಿ ಹಾಕಿ, ಕಂಸನನ್ನು ನೆಲಕ್ಕೆ ಕೆಡವಿ, ಅವನ ಮೇಲೆ ತಾನೂ ಬಿದ್ದನು. ಅನಂತರ ಕಂಸನು ಅಶೇಷಜಗದಾಧಾರನಾದ ಕೃಷ್ಣನ ಭಾರದಿಂದ ಪ್ರಾಣವನ್ನು ಬಿಟ್ಟನು. ಆಗ ಶ್ರೀಕೃಷ್ಣನು ಮೃತನಾದ ಕಂಸನ ದೇಹವನ್ನು ಎಳೆದು, ರಂಗಸ್ಥಾನದ ಮಧ್ಯದಲ್ಲಿ ಹಾಕಿದನು. ಆಮೇಲೆ ಕಂಸನ ತಮ್ಮನಾದ ಸುನಾಮ ನೆಂಬುವನು ಅಣ್ಣನು ಸತ್ತುಹೋದ ರೋಷದಿಂದ ಬಲರಾಮನಲ್ಲಿ ದ್ವಂದ್ವ ಯುದ್ಧಕ್ಕೆ ಬಂದು, ಪ್ರಾಣವನ್ನು ಬಿಟ್ಟನು. ರಂಗಸ್ಥಾನವೆಲ್ಲವೂ ಹಾಹಾಕಾರ ದಿಂದ ಕೂಡಲ್ಪಟ್ಟಿತು. ಲೀಲಾಮಾತ್ರದಿಂದ ಕಂಸನು ಮೃತಿಯನ್ನು ಹೊಂದಿದ ನಂತರ ಶ್ರೀಕೃಷ್ಣನು ದೇವಕೀವಸುದೇವರ ಕಾಲುಗಳನ್ನು ಹಿಡಿದು ನಮಸ್ಕಾರ ಮಾಡಿದನು. ಅನಂತರ ವಸುದೇವನು ಕೃಷ್ಣನನ್ನು ಮೇಲಕ್ಕೆತ್ತಿ ಹೇಳುತ್ತಾನೆ: "ಓ, ಕೃಷ್ಣ, ನೀನು ದೇವತೆಗಳಿಗೆ ವರವನ್ನು ಕೊಟ್ಟ ಪ್ರಕಾರ, ನಮ್ಮಿಬ್ಬರಿಂದ ನೀನು ಹುಟ್ಟಿ, ಭೂಮಿಯನ್ನು ಉದ್ಧಾರಮಾಡಿದೆ. ನೀನು ನನ್ನ ಗೃಹದಲ್ಲಿ ದುಷ್ಟನಿಗ್ರಹಾರ್ಥವಾಗಿ ಅವತರಿಸಿದುದರಿಂದ ನನ್ನ ಕುಲವು ಪಾವನವಾಯಿತು. ನೀನು ಸಕಲಪ್ರಾಣಿಗಳಿಗೂ ಅಂತರಾತ್ಮಕನಾದವನು, ಸರ್ವಭೂತಮಯನಾದ ವನು, ಸಕಲಪ್ರಾಣಿಗಳಿಗೂ ಸೃಷ್ಟಿಕರ್ತನಾದವನು. ಓ, ಅಚ್ಯುತ, ನೀನು ಯಜ್ಞರೂಪಿಯು, ನೀನೇ ಯಜ್ಞಮಾಡತಕ್ಕವನು, ಯಜ್ಞಶೀಲರಿಗೆ ಪರಮೇಶ್ವ ರನು, ಓ, ಜನಾರ್ಧನ, ನೀನೇ ಸಕಲ ಜಗತ್ಕರ್ತನು, ನೀನು ನನಗೂ ದೇವಕಿಗೂ ಮಗನೆಂಬುವುದು ಹಾಸ್ಯಾಸ್ಪದವಾದುದು; ಅನಾದಿನಿಧನನಾದ ನಿನ್ನನ್ನು ಜನರು ಯಾರ ಮಗನೆಂಬುದಾಗಿ ಕೇಳುವುದಿಲ್ಲವು, ಅದು ನಿನ್ನ ಮಾಯೆಯಿಂದುಂಟಾ ಗಿರುವುದು. ಸ್ಥಾವರಜಂಗಮಾತ್ಮಕವಾದ ಸಕಲ ಜಗತ್ತೂ, ನಿನ್ನಲ್ಲಿಯೇ ಇರು ವುದು; ಇಂತಹ ಜಗದಾತ್ಮಕನಾದ ನೀನು, ದೇವಕಿಯ ಗರ್ಭದಲ್ಲಿ ಮನುಷ್ಯ ನಾಗಿ ಹುಟ್ಟಿರುವೆ. ಈ ರೀತಿ ಕಲ್ಯಾಣಗುಣಾತ್ಮಕನಾದ ನೀನು, ಪ್ರಸನ್ನನಾಗು; ನೀನು ನನಗೆ ಮಗನಲ್ಲ, ನಿನ್ನ ಕೆಲಸಗಳನ್ನು ಬ್ರಹ್ಮ, ರುದ್ರ ಇವರೇ ಮೊದಲಾದ ವರು ತಿಳಿಯತಕ್ಕವರಲ್ಲ; ಅಚಿಂತ್ಯಾದ್ಭುತಕರ್ಮವುಳ್ಳ ಶ್ರೀಮನ್ನಾರಾಯಣನಾದ

ನೀನು, ಜಗದುಪಕಾರಾರ್ಥವಾಗಿ ಅವತರಿಸಿರುವುದರಿಂದ ನಮ್ಮಗಳನ್ನು ಕಾಪಾಡು. ಓ, ಸರ್ವೇಶನೇ, ಮಾಯಾವಿಮೋಹಿತನಾದ ನನಗೆ ಮಗನಾಗಿ ಹುಟ್ಟಿ, ಕಂಸನ ಭಯವನ್ನು ತಪ್ಪಿಸಿರುವೆ. ಗೋಕುಲದಲ್ಲಿ ಶತ್ರುಭಯವಿಲ್ಲದಂತೆ ಮಾಡಿ ವೃದ್ಧಿಪಡಿಸಿರುವೆ. ಹೀಗಿದ್ದಾಗ್ಯೂ ಪುತ್ರನು ಎಂಬ ಮಮಕಾರವನ್ನು ಹೊಂದಿರುವೆ. ಈ ಕಾರಣಗಳಿಂದ ಪುರುಷೋತ್ತಮನಾದ ನೀನು ನಮ್ಮನ್ನು ರಕ್ಷಿಸು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಇಪ್ಪತ್ತನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತೊಂದನೆಯ ಅಧ್ಯಾಯವು

"ದೇವಕೀ ವಸುದೇವರು ಭಗವಂತನು ಮಾಡಿದ ಆಶ್ಚರ್ಯಕರಗಳಾದ ಕೆಲಸಗಳನ್ನು ನೋಡಿ, ಜ್ಞಾನಯುಕ್ತರಾಗಿ ಭಗವಂತನನ್ನು ಸ್ತೋತ್ರಮಾಡಿ, ಪುನಃ ವೈಷ್ಣವಮಾಯೆಯನ್ನು ಹೊಂದಿದನಂತರ, ಕೃಷ್ಣನು ದೇವಕೀ ವಸುದೇವರನ್ನು ಕುರಿತು ಹೇಳುತ್ತಾನೆ. "ಓ ತಂದೆಯೇ, ತಾಯಿಯೇ, ಬಹುಕಾಲದಿಂದ ಕಂಸ ಭೀತರಾದ ನಿಮ್ಮನ್ನು ನಾನೂ ಮತ್ತು ಬಲರಾಮನೂ ಸಹ ಪೂಜಿಸದೆ ಇದ್ದ ಕಾಲವೆಲ್ಲವೂ ವ್ಯರ್ಥವಾಯಿತು. ಇದರಿಂದ ಆಯುಸ್ಸು ಖಂಡಿಸಲು ಕಾರಣವಾಯಿತು. ಗುರು, ದೇವತೆಗಳು, ಬ್ರಾಹ್ಮಣ, ಮಾತಾ, ಪಿತೃ ಇವರುಗಳನ್ನು ಪೂಜಿಸತಕ್ಕ ಕಾಲವೇ ಸಫಲವಾಗುವುದು. ಇದರಿಂದಲೇ ಸಕಲವೂ ವೃದ್ಧಿಯಾಗುವುದು. ಕಂಸನ ಭಯದಿಂದ ಪರಾಧೀನದಲ್ಲಿದ್ದು, ನಿಮ್ಮಗಳ ಶುಶ್ರೂಷೆಯನ್ನು ಮಾಡದಿರತಕ್ಕ ನಮ್ಮಗಳ ಅಪರಾಧವನ್ನು ಕ್ಷಮಿಸಬೇಕು," ಎಂದು ತಾಯಿತಂದೆಗಳಿಗೂ ನಂದಗೋಪಾದಿಗಳಿಗೂ ಸಹ ನಮಸ್ಕಾರ ಮಾಡಿದರು. ಅನಂತರ ಕಂಸನ ಪತ್ನಿಗಳು ಪತಿಯ ಸಮೀಪದಲ್ಲಿ ದುಃಖಿಸಿದರು. ಇದನ್ನು ನೋಡಿದ ಕೃಷ್ಣನು ಸ್ತ್ರೀಯರನ್ನು ಸಮಾಧಾನಪಡಿಸಿ, ಬಂಧನದಲ್ಲಿದ್ದ ಉಗ್ರಸೇನನನ್ನು ಬಂಧನದಿಂದ ಬಿಡಿಸಿ, ಉಗ್ರಸೇನನಿಗೆ ರಾಜ್ಯಾಭಿಷೇಕಮಾಡಿದನು. ತರುವಾಯ ಉಗ್ರಸೇನನು ಕಂಸಾದಿಗಳಿಗೆ ಕರ್ಮಗಳನ್ನು ಮಾಡಿಸಿದನಂತರ, ಕೃಷ್ಣನು ಉಗ್ರಸೇನನಿಗೆ ಹೇಳುತ್ತಾನೆ: "ಎಲೈ ರಾಜನೇ, ನಾನು ಬಂದ ಕೆಲಸವು ಪೂರ್ತಿಯಾಯಿತು—ನನಗೆ ಅಪ್ಪಣೆಯನ್ನು ಕೊಡು; ನಮ್ಮ ಊರಿಗೆ ಹೋಗುತ್ತೇನೆ; ಈ ನಮ್ಮ ವಂಶವು ಯಯಾತಿಶಾಪದಿಂದ ರಾಜ್ಯಾರ್ಹವಾಗದೆ

ಇದ್ದಾಗ್ಯೂ, ನಾನು ಭೃತ್ಯನಾಗಿರುವುದರಿಂದ, ರಾಜರುಗಳಿಂದ ಆಗತಕ್ಕದ್ದೇನಿದೆ. ನಾವು ದೇವತೆಗಳಿಗೆ ಆಜ್ಞಾಪಿಸಬಹುದು" ಎಂದು ಹೇಳಿ, ಮನಸ್ಸಿನಲ್ಲಿ ವಾಯು ವನ್ನು ಸ್ಮರಿಸಲು, ತಕ್ಷಣದಲ್ಲಿ ವಾಯುವು ಕೃಷ್ಣನಿಗೆ ಅಭಿಮುಖದಲ್ಲಿ ಬಂದು ನಿಂತನು. ಆಗ ಕೇಶವನು ವಾಯುವಿಗೆ ಹೇಳುತ್ತಾನೆ: "ಎಲೈ ವಾಯುವೇ, ನೀನು ದೇವೇಂದ್ರನ ಬಳಿಗೆ ಹೋಗಿ, ನಿನ್ನಲ್ಲಿರತಕ್ಕ ಸುಧರ್ಮಾ ಎಂಬ ಸಭೆ ಯನ್ನು ನಮ್ಮ ರಾಜನಾದ ಉಗ್ರಸೇನನಿಗೆ ಗರ್ವವನ್ನು ಪಡದೆ ಕಳುಹಿಸೆಂದು ಹೇಳು. ಕೃಷ್ಣನು ಅನೇಕ ಯಾದವರೊಂದಿಗೆ ಸುಧರ್ಮಸಭೆಯಲ್ಲಿರಬೇಕೆಂದು ಅಪೇಕ್ಷೆಪಟ್ಟಿರುವುದರಿಂದ ಜಾಗ್ರತೆಯಾಗಿ ಕಳುಹಿಸು" ಎಂದು ಹೇಳಿಕಳುಹಿಸಿ ದನು. ಬಳಿಕ ವಾಯುವು ದೇವಲೋಕಕ್ಕೆ ಹೋಗಿ ದೇವೇಂದ್ರನಿಗೆ ಶ್ರೀಕೃಷ್ಣನು ಹೇಳಿದ ಮಾತುಗಳನ್ನು ಹೇಳಲು, ದೇವೇಂದ್ರನು ಸುಧರ್ಮಸಭೆಯನ್ನು ವಾಯು ವಿನ ಜೊತೆಯಲ್ಲಿ ಕಳುಹಿಸಿಕೊಟ್ಟನು. ವಾಯುವು ಸರ್ವರತ್ನಮಯವಾದ ಸಭೆ ಯನ್ನು ಉಗ್ರಸೇನನಿಗೆ ತಂದುಕೊಟ್ಟನು. ಕೃಷ್ಣಸಂಶ್ರಯರಾದ ಯಾದವರು ದೇವಸಭೆಯನ್ನು ಪ್ರವೇಶಿಸಿ, ಹರ್ಷೋದ್ರಿಕ್ತರಾದರು. ಅನಂತರ ರಾಮಕೃಷ್ಣರು ಜ್ಞಾನಸಂಪನ್ನರಾಗಿದ್ದಾಗ್ಯೂ, ಸರ್ವಜ್ಞಾನಮಯರಾಗಿದ್ದಾಗ್ಯೂ, ಲೋಕದಲ್ಲಿ ಆಚಾರ್ಯಶಿಷ್ಯಕ್ರಮಗಳನ್ನು ಸ್ಥಾಪಿಸುವುದಕ್ಕಾಗಿ ಉಪನೀತರಾಗಿ ಅವಂತೀ ಪುರವಾಸಿಯಾದ ಸಾಂದೀಪನಲ್ಲಿ ವಿದ್ಯಾಭ್ಯಾಸಮಾಡುವುದಕ್ಕೆ ಪ್ರಯಾಣಮಾಡಿ, ಸಾಂದೀಪನಲ್ಲಿ ಶಿಷ್ಯತ್ವವನ್ನು ಹೊಂದಿ, ಗುರು ಶುಶ್ರೂಷೆಯನ್ನು ಮಾಡುತ್ತಾ, ಜನಗಳಿಗೆ ಆಚಾರವನ್ನು ಪ್ರಕಾಶಪಡಿಸಿ, ಅರವತ್ತುನಾಲ್ಕು ದಿವಸಗಳಲ್ಲಿ ಸರಹಸ್ಯ ವಾದ ಧನುರ್ವೇದಗಳನ್ನು ಅಭ್ಯಾಸಮಾಡಿದರು. ಇದನ್ನು ನೋಡಿದ ಸಾಂದೀಪನು, ಇವರುಗಳ ಕರ್ಮವು ಅತಿಮಾನುಷವಾದುದು; ಇವರುಗಳನ್ನು ಸೂರ್ಯ ಚಂದ್ರ ರೆಂದು ತಿಳಿದನು. ಸಾಂಗೋಪಾಂಗಗಳಾದ ನಾಲ್ಕು ವೇದಗಳನ್ನೂ, ಸಕಲಶಾಸ್ತ್ರ ಗಳನ್ನೂ, ಅಶೇಷವಾದ ಅಸ್ತ್ರಗ್ರಾಮವನ್ನೂ ಸಹ ಹೇಳಿದ ಮಾತ್ರಕ್ಕೆ ತಿಳಿದು ಕೊಂಡು, ಸಕಲಶಾಸ್ತ್ರಪಾರಂಗತರಾಗಿ, ಗುರುದಕ್ಷಿಣೆಯನ್ನು ಆಜ್ಞಾಪಿಸಿ ಎಂದು ಪ್ರಾರ್ಥಿಸಲು; ಅದಕ್ಕೆ ಸಾಂದೀಪನು ಲವಣಸಮುದ್ರದಲ್ಲಿ ಸತ್ತುಹೋದ ತನ್ನ ಮಗನನ್ನು ತಂದುಕೊಡಬೇಕೆಂದು ಹೇಳಲು, ಆ ಮಾತಿಗೆ ರಾಮಕೃಷ್ಣರು ಅನುಮೋದಿಸಿ, ಅಸ್ತ್ರಗಳನ್ನು ಧರಿಸಿ, ಸಮುದ್ರತೀರಕ್ಕೆ ಬಂದಕಾಲದಲ್ಲಿ ಸಮುದ್ರ ರಾಜನು ರಾಮಕೃಷ್ಣರಿಗೆ ಅರ್ಘ್ಯಾದಿಗಳನ್ನು ಸಮರ್ಪಿಸಿ, ಸಾಂದೀಪನ ಮಗ ನನ್ನು ನಾನು ಅಪಹರಿಸಲಿಲ್ಲ; ಪಂಚಜನ್ಯನೆಂಬ ದೈತ್ಯನು ಶಂಖರೂಪದಿಂದ ಬಾಲಕನನ್ನು ಅಪಹರಿಸಿ ನನ್ನಲ್ಲಿ ವಾಸವಾಗಿರುವನು ಎಂಬುದಾಗಿ ಸಮುದ್ರನು ಹೇಳಲು; ಕೃಷ್ಣನು ಜಲವನ್ನು ಪ್ರವೇಶಿಸಿ, ದೈತ್ಯನನ್ನು ಸಂಹಾರಮಾಡಿ,

ಅವನ ಮೂಳೆಯಲ್ಲಿದ್ದ ಶಂಖವನ್ನು ತೆಗೆದುಕೊಂಡು ಶಬ್ದಮಾಡಿದನು. ಶಂಖ ಧ್ವನಿಯು ದೈತ್ಯರಿಗೆ ಬಲಹೀನತೆಯನ್ನೂ, ದೇವತೆಗಳಿಗೆ ತೇಜೋವೃದ್ಧಿಯನ್ನೂ ಅಧರ್ಮಕ್ಷಯವನ್ನೂ ಸಹ ಉಂಟುಮಾಡಿತು. ಸಮುದ್ರದಲ್ಲಿ ಸಾಂದೀಪನ ಮಗನು ಸಿಕ್ಕದೇ ಇರುವುದರಿಂದ ಕೃಷ್ಣನು ಯಮಲೋಕಕ್ಕೆ ಹೋಗಿ, ಶಂಖ ಧ್ವನಿಯನ್ನು ಮಾಡಿದನು. ಬಲದೇವನು ಯಮನನ್ನು ಸೋಲಿಸಿ ಯಾತನಾ ದೇಹದಲ್ಲಿದ್ದ ಸಾಂದೀಪನ ಮಗನನ್ನು ಪೂರ್ವದಂತೆ ಶರೀರವುಳ್ಳವನನ್ನಾಗಿ ಮಾಡಿ ಕೃಷ್ಣನು ಸಾಂದೀಪನಿಗೆ ಮಗನನ್ನು ಕೊಟ್ಟು, ಪುನಃ ಮಧುರಾಪಟ್ಟಣಕ್ಕೆ ಬಲರಾಮಸಹಿತನಾಗಿ ಬಂದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಇಪ್ಪತ್ತೊಂದನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತೆರಡನೆಯ ಅಧ್ಯಾಯವು

ಜರಾಸಂಧನ ಹೆಣ್ಣುಮಕ್ಕಳಾದ ಅಸ್ತಿ, ಪ್ರಾಸ್ತಿ ಎಂಬ ಇಬ್ಬರು ಕನ್ನಿಕೆ ಗಳನ್ನು ಕಂಸನು ವಿವಾಹಮಾಡಿಕೊಂಡಿದ್ದನು. ಕಂಸನು ಸತ್ತುಹೋದ ವೃತ್ತಾಂತವನ್ನು ಜರಾಸಂಧನು ಕೇಳಿ, ಕೋಪದಿಂದ ಯಾದವ ಸೈನ್ಯವನ್ನು ಸಂಹರಿಸಬೇಕೆಂದು ಇಪ್ಪತ್ತುಮೂರು ಅಕ್ಷೋಹಿಣೀಸೈನ್ಯದಿಂದ ಪರಿವೃತನಾಗಿ ಮಧುರಾಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಆಗ ರಾಮಕೃಷ್ಣರು ಅಲ್ಪವಾದ ಸೈನ್ಯದಿಂದ ಪರಿವೃತರಾಗಿ ಜರಾಸಂಧನ ಸೈನ್ಯವನ್ನು ಪ್ರವೇಶಿಸಿ, ಪುರಾತನವಾದ ಆಯುಧಗಳನ್ನು ತೆಗೆದುಕೊಳ್ಳಬೇಕೆಂದು ಮನಸ್ಸಿನಲ್ಲಿ ಚಿಂತಿಸಲು, ಆಗ ಅಂತರಿಕ್ಷ ದಿಂದ ಶಾರ್ಙ್ಗ, ಧನುಸ್ಸು, ಕೌಮೋದಕೀ ಎಂಬ ಗದೆಯೂ ಸಹ ಕೃಷ್ಣನ ಸಮೀಪಕ್ಕೆ ಬಂದುವು. ಬಲರಾಮನಿಗೆ ಹಲಾಯುಧವೂ ಸಹ ಬಂದಿತು. ಅನಂತರ ಸೈನ್ಯಸಮೇತನಾದ ಜರಾಸಂಧನನ್ನು ಸೋಲಿಸಿ ಓಡಿಸಿದನು. ಆಗ ಜರಾಸಂಧನು ಪುನಃ ಯುದ್ಧಕ್ಕೆ ಬಂದು ಪರಾಜಿತನಾದನು. ಇದೇ ರೀತಿ ಹದಿನೆಂಟು ಸಲ ರಾಮಕೃಷ್ಣರೊಡನೆ ಯುದ್ಧಕ್ಕೆ ಬಂದು, ಪರಾಜಿತನಾದನು. ಯಾದವ ಸೈನ್ಯವು ಜರಾಸಂಧನನ್ನು ಸೋಲಿಸಿದುದು ಯಾದವ ಸೈನ್ಯದ ಸಾಮರ್ಥ್ಯವಲ್ಲ; ಚಕ್ರಧರನಾದ ವಿಷ್ಣುವಿನ ಸಾನ್ನಿಧ್ಯ ಮಹಾತ್ಮೆಯಿಂದ ಪರಾಜಿತನಾದನು. ಜಗತ್ಪತಿಯಾದ ಶ್ರೀಮನ್ನಾರಾಯಣನು ಲೀಲಾಮಾತ್ರ ದಿಂದ ಜಗತ್ತನ್ನು ಸಂಹಾರಮಾಡಲು ಶಕ್ತನಾಗಿದ್ದಾಗ್ಯೂ, ಶತ್ರುಪಕ್ಷವನ್ನು

ನಾಶಮಾಡಬೇಕೆಂಬ ಉದ್ಯೋಗವು ವಿಲಾಸಾರ್ಥವಾಗಿರುವುದು. ಲೀಲಾವಿಗ್ರಹ ರೂಪಿಯಾದ ಶ್ರೀಕೃಷ್ಣನು ಜರಾಸಂಧನನ್ನು ಸಾಮದಾನಾದಿ ಉಪಾಯಗಳಿಂದ ಜಯಿಸಬೇಕೆಂಬುವುದು ಮನುಷ್ಯ ಜನ್ಮದ ಧರ್ಮವಾಗಿರುವುದು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಇಪ್ಪತ್ತೆರಡನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತಮೂರನೆಯ ಅಧ್ಯಾಯವು

"ಒಂದಾನೊಂದು ದಿವಸ ಯಾದವರ ಸಮೂಹದಲ್ಲಿ ಗಾರ್ಗ್ಯನನ್ನು ಇವನ ಭಾವಮೈದುನನು, ಅಪುತ್ರವಂತನಾದುದರಿಂದ ಷಂಡನೆಂದು ಹಾಸ್ಯಮಾಡಿದನು. ಆಗ ಗಾರ್ಗ್ಯನು ಕೋಪಿಸಿಕೊಂಡು ಪುತ್ರಪ್ರಾಪ್ತಿಗಾಗಿ ದಕ್ಷಿಣದಿಕ್ಕಿಗೆ ಹೋಗಿ, ಯಾದವಸಮೂಹಕ್ಕೆ ಭಯವನ್ನುಂಟುಮಾಡತಕ್ಕ ಪುತ್ರನನ್ನು ಹೊಂದಬೇಕೆಂದು ಮಹಾದೇವನನ್ನು ಕುರಿತು ತಪಸ್ಸುಮಾಡಿದನು. ಹನ್ನೆರಡುವರ್ಷಕಾಲ ಲೋಹ ಚೂರ್ಣವೆಂದರೆ ಕಬ್ಬಿಣದ ಹುಡಿಯನ್ನು ತಿಂದುಕೊಂಡು ತಪಸ್ಸುಮಾಡಿದ ನಂತರ, ರುದ್ರದೇವನು ಪ್ರತ್ಯಕ್ಷನಾಗಿ ಪುತ್ರನು ಹುಟ್ಟುವನೆಂದು ಹೇಳಿ ಹೊರಟು ಹೋದನು. ಅನಂತರ ಗಾರ್ಗ್ಯನಿಗೆ ಇವನ ಪತ್ನಿಯಲ್ಲಿ ಬಹಳ ಕಪ್ಪಾದ ಮಗನು ಹುಟ್ಟಿದನು. ಅವನಿಗೆ ಕಾಲಯವನನೆಂಬುದಾಗಿ ನಾಮಕರಣಮಾಡಿ, ಗಾರ್ಗ್ಯನು ತಪಸ್ಸಿಗೆ ಹೊರಟುಹೋದನು. ಕಾಲಯವನನು ಮಹಾ ಪರಾಕ್ರಮಿಯಾಗಿ, ಬಲಶಾಲಿಗಳಾದ ರಾಜರನ್ನು ಜಯಿಸಿದನು. ಆಗ ನಾರದನು ಕಾಲಯವನನ ಸಮೀಪಕ್ಕೆ ಬಂದು ಯಾದವರು ಮಹಾ ಬಲಶಾಲಿಗಳೆಂದು ಹೇಳಿದನು. ಇದನ್ನು ಕೇಳಿ ಕಾಲಯವನನು ಕೋಟಿಸಂಖ್ಯಾಕರಾದ ಮ್ಲೇಚ್ಛ ಸೈನಿಕರಿಂದ ಪರಿವೃತನಾಗಿ, ಮಧುರಾಪಟ್ಟಣಕ್ಕೆ ಬಂದು ಯುದ್ಧಭಯವನ್ನುಂಟುಮಾಡಿ, ಯಾದವಸೈನ್ಯವನ್ನು ನಾಶಮಾಡುತ್ತಾ ಬಂದನು. ಆಗ ಶ್ರೀಕೃಷ್ಣನು ಕಾಲ ಯವನನಿಂದ ಸೈನ್ಯವು ನಾಶವಾಗುತ್ತಾ ಇರುವುದು; ಹೀಗೆ ನಾಶವಾದರೆ ಮಗಧೇಶ್ವರನಾದ ಜರಾಸಂಧನಿಗೆ ನಮ್ಮ ಮೇಲೆ ಯುದ್ಧಕ್ಕೆ ಬರಲು ಅವಕಾಶ ವಾಯಿತು; ಜರಾಸಂಧನ ಸೈನ್ಯವೆಲ್ಲವೂ ನಾಶವಾಗಿದ್ದರೂ ಈ ಕಾಲಯವನನು ಜರಾಸಂಧನಿಗೆ ಸಹಾಯಕನಾಗುವನು! ನಮಗೆ ಎರಡು ಕಡೆಯಲ್ಲಿಯೂ ಹಿಂಸೆಯು ತಪ್ಪಲಾರದು ಎಂದು ಯೋಚಿಸಿ, ಈ ಪಟ್ಟಣವನ್ನು ಶತ್ರುಗಳು ಪ್ರವೇಶಿಸದಂತೆ ದುರ್ಗದಿಂದ ವ್ಯಾಪಿಸಿರುವಂತೆಯೂ, ಸ್ತ್ರೀಯರೂ ಸಹ ಯುದ್ಧ

ವನ್ನು ಮಾಡಿ ಜಯಿಸುವಂತೆಯೂ ಸಹ ಪಟ್ಟಣವನ್ನು ನಿರ್ಮಿಸಬೇಕೆಂದು ನಿಶ್ಚಯಿಸಿ, ಸಮುದ್ರರಾಜನನ್ನು ಚಿಂತಿಸಿ, ಹನ್ನೆರಡು ಯೋಜನ ವಿಸ್ತಾರವುಳ್ಳ ದ್ವಾರಕಾಪಟ್ಟಣವನ್ನು ಸಮುದ್ರಮಧ್ಯದಲ್ಲಿ ನಿರ್ಮಿಸಿದನು. ಇಂದ್ರನ ಅಮರಾವತಿಗೆ ಸದೃಶವಾದ ದ್ವಾರಕಾಪಟ್ಟಣಕ್ಕೆ ಮಧುರಾವಾಸಿಗಳಾದ ಜನರನ್ನು ಕರೆದುಕೊಂಡು ಬಂದನು. ಅನಂತರ ಶ್ರೀಕೃಷ್ಣನು ಸಕಲ ಜನರನ್ನೂ ದ್ವಾರಕೆಗೆ ಕಳುಹಿಸಿ, ತಾನು ಮಾತ್ರ ನಿರಾಯುಧನಾಗಿ ಮಧುರಾಪಟ್ಟಣದಿಂದ ಹೊರಕ್ಕೆ ಹೊರಟು, ಕಾಲಯವನನನ್ನು ನೋಡಲು; ಕಾಲಯವನನೂ ಸಹ ಕೃಷ್ಣನನ್ನು ನೋಡಿ, ಹಿಡಿದುಕೊಳ್ಳುವುದಕ್ಕೆ ಪ್ರಯತ್ನಿಸಿದನು. ಕೃಷ್ಣನು ಇವನ ಕೈಯ್ಯಿಗೆ ಸಿಕ್ಕಬಾರದೆಂದು ಓಡುವುದಕ್ಕೆ ಆರಂಭಿಸಿದನು. ಕಾಲಯವನನು ಕೃಷ್ಣನನ್ನು ಓಡಿಸಿಕೊಂಡು ಹೊರಟನು. ಆಗ ಕೃಷ್ಣನು ಪರ್ವತದ ಗುಹಾಪ್ರವೇಶಮಾಡಿದನು. ಈ ಯವನನೂ ಸಹ ಗುಹೆಯನ್ನು ಪ್ರವೇಶಿಸಿ, ಮಲಗಿರುವ ಮುಚುಕುಂದನನ್ನು ಕೃಷ್ಣನು ಮಲಗಿರುವನೆಂದು ತಿಳಿದು ಕಾಲಿನಿಂದೊದ್ದನು. ಆಗ ಮುಚುಕುಂದನು ನಿದ್ರೆಯಿಂದ ಎಚ್ಚರಗೊಂಡು ಕಣ್ಣು ಬಿಟ್ಟು ನೋಡಲು ಕಾಲಯವನನು ಸುಟ್ಟು ಬೂದಿಯಾದನು. ಮುಚುಕುಂದನು ದೇವಾಸುರಯುದ್ಧದಲ್ಲಿ ಬಹಳ ಶ್ರಮಪಟ್ಟು ಅಸುರರನ್ನು ಜಯಿಸಿದುದರಿಂದ ದೇವತೆಗಳು ನಿನಗೆ ಏನು ವರ ಬೇಕೋ ಅದನ್ನಪೇಕ್ಷಿಸೆಂದು ಹೇಳಲು; ಮುಚುಕುಂದನು ನಿದ್ರೆಯನ್ನು ಅಪೇಕ್ಷಿಸಿದನು. ದೇವತೆಗಳು ಅದೇರೀತಿ ವರವನ್ನು ಕೊಟ್ಟು, ನೀನು ಮಲಗಿರತಕ್ಕ ಕಾಲದಲ್ಲಿ ಯಾರು ನಿನ್ನನ್ನು ಎಚ್ಚರಮಾಡುವರೋ ಅವರು ತಕ್ಷಣದಲ್ಲಿಯೇ ಭಸ್ಮವಾಗುವರೆಂದು ವರವನ್ನು ಕೊಟ್ಟಿದ್ದರು. ಅದೇರೀತಿ ಕಾಲಯವನನೂ ನಾಶವಾದನಂತರ ದೂರದಲ್ಲಿರತಕ್ಕ ಕೃಷ್ಣನನ್ನು ಮುಚುಕುಂದನು ನೋಡಿ, ನೀನು ಯಾರೆಂದು ಕೇಳಲು, ಆ ಮಾತಿಗೆ ಕೃಷ್ಣನು ನಾನು ಚಂದ್ರವಂಶದಲ್ಲಿ ಹುಟ್ಟಿದ ವಸುದೇವನಿಗೆ ಮಗನು; ಯದುವಂಶದಲ್ಲಿ ಹುಟ್ಟಿದವನು ಎಂದು ಹೇಳಲು; ಮುಚುಕುಂದನು ಹಿಂದೆ ತನಗೆ ವೃದ್ಧ ಗಾರ್ಗ್ಯರು ಹೇಳಿದ ಮಾತನ್ನು ಸ್ಮರಣೆಗೆ ತಂದುಕೊಂಡು, ಕೃಷ್ಣನಿಗೆ ನಮಸ್ಕಾರಮಾಡಿ. ಸರ್ವೇಶ್ವರನಾದ ಕೃಷ್ಣನನ್ನು ಕುರಿತು ಹೇಳುತ್ತಾನೆ: "ಓ ವಾಸುದೇವನೆ, ನನಗೆ ವೃದ್ಧ ಗಾರ್ಗ್ಯರು, ಇಪ್ಪತ್ತೆಂಟನೆಯ ದ್ವಾಪರಯುಗದಲ್ಲಿ ಶ್ರೀಮನ್ನಾರಾಯಣನು ಲೋಕೋಪಕಾರಾರ್ಥವಾಗಿ ಯದುವಂಶದಲ್ಲಿ ಅವತರಿಸುವನೆಂದು ಹೇಳಿದ ಪ್ರಕಾರ ಮರ್ತ್ಯೋಪಕಾರಿಯಾದ ಶ್ರೀಮಾಧವನು ನೀನೇ, ನಿನ್ನ ತೇಜಸ್ಸನ್ನು ನೋಡಲು ನಾನು ಅಶಕ್ತನಾದವನು; ದೇವಾಸುರ ಯುದ್ಧದಲ್ಲಿ ದೈತ್ಯಭಟರು ನಿನ್ನ ತೇಜಸ್ಸನ್ನು ಸಹಿಸ

ಲಾರದೆ ಪರಾಜಿತರಾದರು. ಈಗ ನಾನು ನಿನ್ನ ತೇಜಸ್ಸನ್ನು ಸಹಿಸಲಾರೆನು; ಸಂಸಾರದಲ್ಲಿ ಮಗ್ನನಾದ ಪ್ರಾಣಿಗೆ ರಕ್ಷಕನಾದ ನೀನು ನನಗೆ ಪ್ರಸನ್ನನಾಗು; ಪ್ರಸನ್ನರ ದುಃಖಪರಿಹಾರಕನಾದ ನೀನು ನನ್ನ ಅಶುಭವನ್ನು ಪರಿಹರಿಸು. ಸಮುದ್ರ, ಪರ್ವತ, ನದೀ, ವನ, ಭೂಮಿ, ಗಗನ, ವಾಯು, ಅಗ್ನಿ, ಮನಸ್ಸು, ಬುದ್ಧಿ, ಅಹಂಕಾರ, ಇವುಗಳೆಲ್ಲವೂ ನೀನೇ, ನೀನೇ ಪ್ರಾಣೇಶನು; ಶಬ್ದಾದಿಹೀನನಾದವನು; ವೃದ್ಧಾಪ್ಯವಿಲ್ಲದವನು; ಅಮೇಯನಾದವನು; ಕ್ಷಯರಹಿತನು; ವೃದ್ಧಿನಾಶವಿಲ್ಲದವನು; ಪರಬ್ರಹ್ಮನು; ಆದ್ಯಂತರಹಿತನು; ದೇವಮನುಷ್ಯತಿರ್ಯಗಾದಿಗಳೆಲ್ಲವೂ ನಿನ್ನದಾಗಿರುವುದು; ಮೂರ್ತಾಮೂರ್ತನು ಸ್ಥೂಲಸೂಕ್ಷ್ಮಾತ್ಮಕನು ನೀನು, ನಿನ್ನ ಹೊರತು ಜಗತ್ಕರ್ತನು ಬೇರೆ ಇಲ್ಲ; ಸಂಸಾರಚಕ್ರದಲ್ಲಿ ಅಲೆದಾಡುವ ತಾಪತ್ರಯದಿಂದ ಕೂಡಿದ ನನ್ನಿಂದ ಯಾವಾಗಲೂ ನೀನು ನೋಡಲ್ಪಡಲಿಲ್ಲ; ದುಃಖಗಳನ್ನೇ ಸುಖಗಳನ್ನಾಗಿ ತಿಳಿದುಕೊಂಡಿರುವ ನನ್ನಿಂದ ನಿನ್ನ ಪದಗಳು ಪರಿಗ್ರಹಿಸಲ್ಪಡಲಿಲ್ಲ. ರಾಜ್ಯ, ಭೂಮಿ, ಬಲ, ಕೋಶ, ಮಿತ್ರ, ಪುತ್ರ, ಭಾರ್ಯಾ, ಭೃತ್ಯ ಇವೇ ಮುಂತಾದವುಗಳನ್ನೆಲ್ಲಾ ಸುಖವೆಂಬ ಬುದ್ಧಿಯಿಂದ ಸೇವಿಸಿ, ಪರಿಣಾಮದಲ್ಲಿ ಇವುಗಳೆಲ್ಲವೂ ತಾಪಾತ್ಮಕವಾದವು; ದೇವ, ನಾನು ದೇವಲೋಕಕ್ಕೆ ಹೋದಕಾಲದಲ್ಲಿ ದೇವತೆಗಳು ನನ್ನಿಂದ ಸಹಾಯವನ್ನು ಹೊಂದಿದರೇ ಹೊರತು ಅವರಿಂದ ನನಗೆ ಮೋಕ್ಷಸಹಾಯವಾಗಲಿಲ್ಲ. ಜಗತ್ಕಾರಣನಾದ ನಿನ್ನನ್ನು ಆರಾಧಿಸದೆ ಮೋಕ್ಷವನ್ನು ಹೊಂದಿದವರು ಯಾರೂ ಇಲ್ಲ. ನಿನ್ನ ಮಾಯೆಯಿಂದ ಮೋಹಿತರಾದ ಜನಗಳು ಜನನಮರಣಾದಿ ತಾಪಗಳನ್ನು ಹೊಂದಿ, ಅನಂತರ ಯಮಲೋಕವನ್ನು ಹೊಂದುತ್ತಾರೆ. ನಿನ್ನ ಸ್ವರೂಪವನ್ನು ತಿಳಿಯದೆ ಇರತಕ್ಕವರಾಗಿ, ಅತಿದಾರುಣವಾದ ನರಕಗಳನ್ನು ಅನುಭವಿಸುವರು. ನಾನು ವಿಷಯಾದಿಗಳಲ್ಲಿ ಮೋಹಿತನಾಗಿ, ಗರ್ವವೆಂಬ ಮಡುವಿನಲ್ಲಿ ಬಿದ್ದು, ಅಲೆದಾಡುವೆನು. ಈ ರೀತಿಯಲ್ಲಿರತಕ್ಕ ನಾನು ಅಪಾರನಾದ, ಅಪ್ರಮೇಯನಾದ ನಿನ್ನನ್ನು ಶರಣುವನ್ನು ಹೊಂದಿರುವೆನು. ಸಂಸಾರ ಪರಿತಾಪತಪ್ತನಾದ ನಾನು, ನಿರತಿಶಯ ತೇಜಸ್ಕನಾದ ನಿನ್ನಲ್ಲಿ ಪರಮಪದವನ್ನು ಹೊಂದುವುದಕ್ಕಾಗಿ ಅಭಿಲಾಷಯುಕ್ತನಾಗಿರುವೆನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಇಪ್ಪತ್ತಮೂರನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತನಾಲ್ಕನೆಯ ಅಧ್ಯಾಯವು

"ಮುಚುಕುಂದನು ಈ ಪ್ರಕಾರ ಸ್ತೋತ್ರಮಾಡಿದನಂತರ, ಶ್ರೀಕೃಷ್ಣನು ಮುಚುಕುಂದನಿಗೆ ಹೇಳುತ್ತಾನೆ: "ಎಲೈ ರಾಜನೇ, ನನ್ನ ಅನುಗ್ರಹದಿಂದ ನೀನು ಇಷ್ಟವಾದ ಲೋಕಗಳನ್ನು ಹೊಂದಬಹುದು; ಅನೇಕ ಭೋಗಗಳನ್ನು ಅನುಭವಿಸಿ ಪುನಃ ಮತ್ತೊಂದು ಜನ್ಮದಲ್ಲಿ ಮೋಕ್ಷವನ್ನು ಹೊಂದುವೆ" ಎಂದು ಜಗನ್ನಾಯಕನು ಹೇಳಲು, ಮುಚುಕುಂದನು ಗುಹೆಯಿಂದ ಹೊರಟು, ಹ್ರಸ್ವಾಕಾರವುಳ್ಳ ಜನರನ್ನು ನೋಡಿ, ಕಲಿಯುಗವು ಬಂದುದನ್ನೂ ಸಹ ತಿಳಿದು, ತಪಸ್ಸಿಗೋಸ್ಕರ ನರನಾರಾಯಣ ಸ್ಥಾನವಾದ ಗಂಧಮಾದನ ಪರ್ವತವನ್ನು ಹೊಂದಿದನು. ಶ್ರೀಕೃಷ್ಣನು ಉಪಾಯದಿಂದ ಕಾಲಯವನನನ್ನು ನಾಶಮಾಡಿ, ಮಥುರಾಪಟ್ಟಣಕ್ಕೆ ಬಂದು, ಆನೆ, ಕುದುರೆ ಮುಂತಾದವುಗಳನ್ನು ತೆಗೆದುಕೊಂಡು ಬಂದು, ಉಗ್ರಸೇನನಿಗೆ ಕೊಟ್ಟನು. ಆಗ ಯದುಕುಲವು ನಿಶ್ಶಂಕವಾಯಿತು. ಗೋಪಗೋಪೀಯರು ಜಯಶಾಲಿಯಾಗಿ ಬಂದ ಶ್ರೀಕೃಷ್ಣನನ್ನು ಬಹುಮಾನ ಪುರಸ್ಸರವಾಗಿ ಕಂಡು, ಆನಂದಸಾಗರಮಗ್ನರಾದರು. ಕೆಲವರು ಕೃಷ್ಣನನ್ನು ಆಲಂಗಿಸಿದರು; ಮತ್ತೆ ಕೆಲವರು ಹಾಸ್ಯಮಾಡಲಾರಂಭಿಸಿದರು; ಇನ್ನು ಕೆಲವರು ಪ್ರಿಯವಾದ ಮಾತುಗಳನ್ನಾಡಿದರು; ಗೋಪಸ್ತ್ರೀಯರು ಪ್ರೇಮಕುಪಿತರಾಗಿ ಈರ್ಷೆಯಿಂದ ಮಾತನಾಡಿದರು; ಇನ್ನು ಕೆಲವು ಸ್ತ್ರೀಯರು ಪರಸ್ಪರ ಮಾತನಾಡಿಕೊಳ್ಳುವರು; ಗ್ರಾಮ್ಯರಾದ ನಮ್ಮನ್ನು ಬಿಟ್ಟುಹೋದ ಪಟ್ಟಣಸ್ತ್ರೀಯರಿಗೆ ವಲ್ಲಭನಾದ ಕೃಷ್ಣನು ಬಂದನೇ? ನಮ್ಮಗಳ ಸ್ಥಿತಿಯನ್ನು ಹಾಸ್ಯಮಾಡಿ, ಪುರಸ್ತ್ರೀಯರ ಸೌಭಾಗ್ಯವನ್ನು ಅಧಿಕವಾದುದೆಂದು ತಿಳಿದುಕೊಂಡ ಕೃಷ್ಣನು ಬಂದನೇ? ನಮ್ಮಗಳ ಗಾನಾದಿಗಳನ್ನು ಸ್ಮರಿಸಿ ಬರದೆ ಇದ್ದಾಗ್ಯೂ, ತಾಯಿಯನ್ನಾದರೂ ನೋಡುವುದಕ್ಕೆ ಬಂದನೇ? ನಮ್ಮನ್ನು ಬಿಟ್ಟುಹೋದ ಕೃಷ್ಣನ ಕಥೆಯಿಂದೇನು? ತಂದೆ, ತಾಯಿ, ಬಂಧು, ಬಳಗ, ಸ್ವಜನ, ಇವರೆಲ್ಲರನ್ನೂ ಬಿಟ್ಟುಹೋದ ಕೃಷ್ಣನು, ಕೃತಜ್ಞನಲ್ಲವಮ್ಮಾ. ಗೋವಿಂದನಾದ ದಾಮೋದರನು ಪುರಸ್ತ್ರೀಸಕ್ತಮನಸ್ಕನಾಗಿರುವುದರಿಂದ ನಮ್ಮಲ್ಲಿ ಪ್ರೀತಿಯಿರಲಾರದು. ಹೀಗೇ ಹೇಳುತ್ತಾ ಇರುವ ಗೋಪಸ್ತ್ರೀಯರು, ಕೃಷ್ಣ, ದಾಮೋದರ ಎಂಬುದಾಗಿ ಕೂಗುವುದಕ್ಕೆ ಆರಂಭಿಸಿದರು. ಆಗ ಬಲರಾಮನು ಗೋಪಸ್ತ್ರೀಯರಿಗೆ ಸಮಾಧಾನಪಡಿಸಿದನು. ನಂದಗೋಕುಲದಲ್ಲಿ ಕೃಷ್ಣನಿಂದ ಸಹಿತರಾಗಿ ಗೋಪಗೋಪೀಯರು ವಿಹರಿಸುತ್ತಿದ್ದರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಇಪ್ಪತ್ತನಾಲ್ಕನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತೈದನೆಯ ಅಧ್ಯಾಯವು

"ಬೃಂದಾವನದಲ್ಲಿ ಗೋಪಗೋಪೀಯರಿಂದ ಸಂಚರಿಸತಕ್ಕ ಮಹಾತ್ಮನಾದ, ಮಾನುಷರೂಪಧಾರಿಯಾದ, ಧರಣೀಧರನಾದ ಆದಿಶೇಷಾವತಾರಿಯಾದ ಬಲರಾಮನಿಗೆ ಉಪಭೋಗಾರ್ಥವಾಗಿ ವರುಣನು ವಾರುಣಿಯನ್ನು ಕಳುಹಿಸಿದನು. ಮದಿರೆಯು ವರುಣನಿಂದ ಆಜ್ಞಪ್ತಳಾಗಿ ಬೃಂದಾವನಕ್ಕೆ ಬಂದು, ಕದಂಬ ವೃಕ್ಷದ ಪೊಟರೆಯಲ್ಲಿ ನಿಂತಳು. ಬಲರಾಮನು ಸಂಚರಿಸುತ್ತಾ ಮದಿರಾಗಂಧವನ್ನು ಆಘ್ರಾಣಿಸಿ, ಮದಿರಾಪಾನಾಸಕ್ತ ಮನಸ್ಸುಳ್ಳವನಾಗಿ, ಕದಂಬವೃಕ್ಷದ ಸಮೀಪಕ್ಕೆ ಬಂದು, ಮರದಲ್ಲಿ ಸ್ರವಿಸುತ್ತಿದ್ದ ಮದ್ಯವನ್ನು ನೋಡಿ, ಬಹಳ ಸಂತೋಷವನ್ನು ಹೊಂದಿ, ಗೋಪಗೋಪೀಯರಿಂದ ಕೂಡಿ, ಮದ್ಯಪಾನವನ್ನು ಮಾಡಿ, ಗೀತವಾದ್ಯವಿಶಾರದರಾದ ಗೋಪಸ್ತ್ರೀಯರಿಂದ ಗಾನಾದಿಗಳನ್ನು ಕೇಳುತ್ತಾ, ಮದ್ಯಪಾನದಿಂದ ಮತ್ತನಾಗಿ, ತಾನು ಕೂತಿದ್ದ ಸ್ಥಳದಲ್ಲಿಯೇ ಇದ್ದುಕೊಂಡು, ಯಮುನಾ ನದಿಯನ್ನು ಕುರಿತು, "ಎಲೈ ಯಮುನೆಯೇ, ನಾನು ಸ್ನಾನಮಾಡಬೇಕಾಗಿರುವುದರಿಂದ ಇಲ್ಲಿಗೆ ಬಾ" ಎಂದು ಕರೆದನು. ಯಮುನೆಯು ಮತ್ತನಾಗಿ ಮಾತನಾಡುವ ಬಲರಾಮನ ಮಾತನ್ನು ಉಪೇಕ್ಷೆ ಮಾಡಲು, ಬಲಭದ್ರನು ಕೋಪಿಸಿಕೊಂಡು ನೇಗಲಿನಿಂದ ಯಮುನಾನದಿಯನ್ನು ಎಳೆದು, "ಎಲೈ ಪಾಪೀ? ನಾನು ಹೇಳಿದಾಗ್ಯೂ ನನ್ನ ಮಾತನ್ನು ತಿರಸ್ಕರಿಸಿದೆಯಲ್ಲವೇ? ಈಗ ನನ್ನ ಸಾಮರ್ಥ್ಯವನ್ನು ನೋಡು" ಎಂದು ಎಳೆದನು. ಆಗ ಯಮುನಾನದಿಯು ತನ್ನ ಮಾರ್ಗವನ್ನು ಬಿಟ್ಟು, ಬಲಭದ್ರನು ಇದ್ದ ಸ್ಥಳಕ್ಕೆ ಬಂದು, ವನವನ್ನೆಲ್ಲಾ ಮುಳುಗಿಸಿದಳು. ಅನಂತರ ಯಮುನೆಯು ಶರೀರವನ್ನು ಧರಿಸಿ, ಬಲರಾಮನಿಗೆ ಹೇಳುತ್ತಾಳೆ: "ಓ, ಬಲಭದ್ರನೇ, ನನ್ನ ಅಪರಾಧವನ್ನು ಕ್ಷಮಿಸಿ, ಪ್ರಸನ್ನನಾಗು; ನಿನ್ನ ಹಲಾಯುಧವನ್ನು ತೆಗೆ ಎಂದು ಪ್ರಾರ್ಥಿಸಲು, ಯಮುನಾನದಿಯ ಮಾತನ್ನು ಕೇಳಿ, ಬಲರಾಮನು ಎಲೈ ಯಮುನೆಯೇ, ನನ್ನ ಶೌರ್ಯವನ್ನು ನೋಡಿದೆಯಾ; ಆದರೆ ನೀನು ಶರಣಾಗತಳಾದುದರಿಂದ ನಿನ್ನನ್ನು ಸಂಹಾರಮಾಡುವುದಿಲ್ಲ ಎಂದು ಹೇಳಿ ಯಮುನೆಯನ್ನು ಬಿಟ್ಟನು. ಅನಂತರ ಆ ಯಮುನಾನದಿಯಲ್ಲಿ ಸ್ನಾನಮಾಡಿದ ಒಡನೆಯೇ ಈ ಮಹಾತ್ಮನಾದ ಬಲಭದ್ರನಿಗೆ ದಿವ್ಯತೇಜಸ್ಸುಂಟಾಯಿತು. ವರುಣನು ಕಳುಹಿಸಿಕೊಟ್ಟ ಭೂಷಣಪ್ರಾಯವಾದ ನೀಲೋತ್ಪಲ ಪುಷ್ಪವನ್ನೂ, ಒಂದು ಕುಂಡಲವನ್ನೂ ಕಮಲ ಪುಷ್ಪಗಳಿಂದ ಮಾಡಿದ ಬಾಡಿಹೋಗದೇ ಇರುವ ಹಾರವನ್ನೂ ಸಹ ಧರಿಸಿದವನಾಗಿ ಮತ್ತೂ ಹಾಗೆಯೇ ಲಕ್ಷ್ಮಿಯು ಕೊಟ್ಟ ಸಮುದ್ರಕಾಂತಿಯೋಪಾದಿಯಲ್ಲಿ ನೀಲವಾದ ಎರಡು ವಸ್ತ್ರಗಳನ್ನೂ ತೊಟ್ಟು, ಪರಮಶೋಭಾಯುಕ್ತನಾಗಿ

ವಿರಾಜಿಸಿದನು. ಹೀಗೆ ಅಲಂಕಾರಯುಕ್ತನಾಗಿ ಬಲರಾಮನು ಕೆಲವು ಕಾಲ ನಂದಗೋಕುಲದಲ್ಲಿ ವಿಹರಿಸುತ್ತಿದ್ದು, ಎರಡು ತಿಂಗಳುಗಳು ಕಳೆದನಂತರ ಪುನಃ ದ್ವಾರಕಾಪಟ್ಟಣಕ್ಕೆ ಬಂದು ಸೇರಿದನು. ಅನಂತರ ರೈವತನೆಂಬ ರಾಜನ ಮಗಳಾದ ರೇವತಿ ಎಂಬ ಮಗಳನ್ನು ವಿವಾಹ ಮಾಡಿಕೊಂಡು ಆಕೆಯಲ್ಲಿ ನಿಶಿತ, ಉಲ್ಮುಕರೆಂಬ ಇಬ್ಬರು ಪುತ್ರರನ್ನು ಪಡೆದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಇಪ್ಪತ್ತೈದನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತಾರನೆಯ ಅಧ್ಯಾಯವು

ಶ್ರೀ ಪರಾಶರರು ಪುನಃ ಉಪದೇಶಿಸುತ್ತಾರೆ: "ವಿದರ್ಭದೇಶದ ರಾಜಧಾನಿಯಾದ ಕುಂಡಿನ ನಗರದಲ್ಲಿ ಭೀಷ್ಮಕನೆಂಬ ರಾಜನಿದ್ದನು. ಆತನಿಗೆ ರುಕ್ಮೀ ಎಂಬ ದುಷ್ಟಪುತ್ರನೂ ರುಕ್ಮಿಣೀಯೆಂಬ ಕನ್ಯಾರತ್ನವೂ ಇದ್ದರು. ಆ ಮಂದಹಾಸಯುಕ್ತಳಾಗಿ ಮನೋಹರಳಾದ ಕನ್ಯಾವನ್ನು ಕೃಷ್ಣನು ವಿವಾಹ ಮಾಡಿಕೊಳ್ಳಲಪೇಕ್ಷಿಸಿದನು. ಆದರೆ ರುಕ್ಮಿಯು ಚಕ್ರಧರನಾದ ಶ್ರೀಕೃಷ್ಣನಲ್ಲಿ ದ್ವೇಷಬುದ್ಧಿಯಿಂದ, ಆತನು ಯಾಚಿಸಿದರೂ ಆತನಿಗೆ ಕೊಡಲು ಸಮ್ಮತಿಸಲಿಲ್ಲವು. ತನ್ನ ಸ್ನೇಹಿತನಾದ ಜರಾಸಂಧನಿಂದ ಪ್ರೇರಿಸಲ್ಪಟ್ಟವನಾಗಿ, ಜರಾಸಂಧನ ದತ್ತು ಮಗನಾದ ಶಿಶುಪಾಲನಿಗೆ ತನ್ನ ತಂಗಿಯಾದ ರುಕ್ಮಿಣಿಯನ್ನು ವಿವಾಹ ಮಾಡಿಕೊಡುವ ಹಾಗೆ ಒಪ್ಪಿಕೊಂಡು, ರುಕ್ಮಿಯೂ ಭೀಷ್ಮಕನೂ ಸಹ ರುಕ್ಮಿಣಿಯ ವಿವಾಹಕ್ಕಾಗಿ ಜರಾಸಂಧ ಮೊದಲಾದ ರಾಜರುಗಳನ್ನು ತನ್ನ ಪುರಿಗೆ ಕರೆಸಿಕೊಂಡರು. ಹಾಗೆಯೇ ಶಿಶುಪಾಲನಿಗೆ ಪ್ರಿಯರಾದವರೂ ಕೂಡ ಬಂದು ನೆರೆದರು. ಶ್ರೀಕೃಷ್ಣನೂ ಕೂಡ ಬಲಭದ್ರ ಮೊದಲಾದ ಯಾದವರಿಂದ ಪರಿವೃತನಾಗಿ, ಚೈದ್ಯಭೂಪಾಲನಾದ ಶಿಶುಪಾಲನ ವಿವಾಹವು ಹೇಗೆ ಜರುಗುತ್ತದೆಂದು ನೋಡಲಪೇಕ್ಷೆಯುಳ್ಳವನಾಗಿ, ಕುಂಡಿನ ನಗರವನ್ನು ಕುರಿತು ತೆರಳಿದನು. ಇನ್ನೂ ನಾಳೆ ವಿವಾಹಕ್ಕೆ ಮುಹೂರ್ತವಿಟ್ಟಿರುವಾಗಲೇ ಪೂರ್ವದಿನದಲ್ಲೇ, ಶ್ರೀಹರಿಯು ರುಕ್ಮಿಣಿಯನ್ನು ರಥದಲ್ಲಿ ಕೂರಿಸಿಕೊಂಡು ಹೊರಟು,ಬಲಭದ್ರನನ್ನೂ ಮತ್ತು ಬಂದಿದ್ದ ಇತರ ಯಾದವರ ಸೈನ್ಯವನ್ನೂ ಕುರಿತು ಶತ್ರುಪಕ್ಷದವರನ್ನೆಲ್ಲಾ ನಿರೋಧಿಸತಕ್ಕ ಭಾರವನ್ನು ನಿಮ್ಮಲ್ಲಿಟ್ಟಿರುತ್ತೇನೆಂದು ಹೇಳಿ, ದ್ವಾರಕಾಭಿಮುಖವಾಗಿ, ಬಹುಶೀಘ್ರವಾಗಿ ಪ್ರಯಾಣಮಾಡಿದನು. ಅನಂತರದಲ್ಲಿ ಈ ವರ್ತ

ಮಾನವನ್ನು ಕೇಳಿ, ಪೌಂಡ್ರಕನೂ, ದಂತವಕ್ರನೂ, ವಿಡೂರಥನೂ, ಶಿಶುಪಾಲ ಜರಾಸಂಧ ಸಾಲ್ವರೇ ಮೊದಲಾದ ರಾಜರುಗಳೂ ಸಹ ಕುಪಿತರಾಗಿ ಶ್ರೀಕೃಷ್ಣ ನನ್ನು ಕೊಲ್ಲಬೇಕೆಂದು ಸಂಕಲ್ಪಿಸಿದವರಾಗಿ, ಬಲರಾಮ ಮೊದಲಾದ ಯಾದವ ರೊಂದಿಗೆ ಯುದ್ಧಮಾಡಿ ಪರಾಜಿತರಾದರು. ಆದರೆ ರುಕ್ಮನು ಮಾತ್ರ ಶ್ರೀಕೃಷ್ಣನನ್ನು ಸಂಹರಿಸದೆ ಪಟ್ಟಣಪ್ರವೇಶಮಾಡುವುದಿಲ್ಲವೆಂದು ನಿಶ್ಚಯಿಸಿ, ಕೃಷ್ಣನನ್ನು ಅನುಸರಿಸಿ, ಕೃಷ್ಣನಲ್ಲಿ ಯುದ್ಧಮಾಡಿ, ಕೃಷ್ಣನಿಂದ ಪರಾಜಿತನಾಗಿ, ಭೂಮಿಯಲ್ಲಿ ಬಿದ್ದನು. ಆಗ ಶ್ರೀಕೃಷ್ಣನು ರುಕ್ಮನನ್ನು ಜಯಿಸಿ, ರುಕ್ಮಿಣಿ ಯನ್ನು ಮೊದಲು ರಾಕ್ಷಸ ವಿವಾಹದಿಂದ ಪಾಣಿಗ್ರಹಣ ಮಾಡಿಕೊಂಡುದುದ ರಿಂದ ವಿಧಿಪೂರ್ವಕವಾಗಿ ಪಾಣಿಗ್ರಹಣವನ್ನು ಮಾಡಿಕೊಂಡನು. ಅನಂತರ, ರುಕ್ಮಿಣಿಯಲ್ಲಿ ಮನ್ಮಥಾಂಶನಾದ ಪ್ರದ್ಯುಮ್ನನನ್ನು ಪಡೆದನು. ಪ್ರದ್ಯುಮ್ನನಿಂದ ಶಂಬರಾಸುರನು ಹತನಾದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಇಪ್ಪತ್ತಾರನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತೇಳನೆಯ ಅಧ್ಯಾಯವು

ಮೈತ್ರೇಯರು, ಪರಾಶರಬ್ರಹ್ಮರ್ಷಿಗಳನ್ನು ಕೇಳುತ್ತಾರೆ: "ಓ, ಭಗವಂತನೇ, ಪ್ರದ್ಯುಮ್ನನಿಂದ ಶಂಬರಾಸುರನು ಹತನಾದುದು ಹೇಗೆ, ಅದನ್ನು ಅಪ್ಪಣೆ ಕೊಡಿಸ ಬೇಕೆಂದು ಪ್ರಾರ್ಥಿಸಲು, ಅದಕ್ಕೆ ಪರಾಶರರು ಹೇಳುತ್ತಾರೆ: "ಎಲೈ ಮೈತ್ರೇಯನೇ, ಪ್ರದ್ಯುಮ್ನನು ಹುಟ್ಟಿದ ಆರು ದಿವಸಕ್ಕೆ ಶಂಬರಾಸುರನೆಂಬ ಮಾಯಾವಿಶಾರದನಾದ ರಾಕ್ಷಸನು, ಪ್ರದ್ಯುಮ್ನನು ತನಗೆ ಮೃತ್ಯುವೆಂದು ತಿಳಿದು, ಬಾಲಕನಾಗಿರುವ ಕಾಲದಲ್ಲಿಯೇ ನಾಶಮಾಡಬೇಕೆಂದು ಯೋಚಿಸಿ, ಸೂತಿಕಾಗೃಹದಿಂದ ಶಿಶುವನ್ನು ಅಪಹಾರಮಾಡಿ, ಲವಣಸಮುದ್ರದಲ್ಲಿ ಹಾಕಲು, ಆಗ ಒಂದು ದೊಡ್ಡದಾದ ಮೀನು ಬಾಲಕನನ್ನು ನುಂಗಿತು. ಬಾಲಕನು ಮೀನಿನ ಜಾಠರಾಗ್ನಿಯಿಂದ ದಹಿಸದೆ ಬದುಕಿಕೊಂಡಿದ್ದನು. ಹೀಗಿರುವ ಕಾಲದಲ್ಲಿ ಮತ್ಸ್ಯಗ್ರಾಹಿಗಳು ಸಮುದ್ರದಲ್ಲಿ ಬಲೆಯನ್ನು ಹಾಕಿ, ಮೀನುಗಳನ್ನು ಹಿಡಿದು ಕೊಂಡಿರುವಾಗ ಬಾಲಕನನ್ನು ನುಂಗಿದ ಮೀನು, ಇತರ ಮೀನುಗಳೊಂದಿಗೆ ಬಲೆಗೆ ಸಿಕ್ಕಿಕೊಂಡಿತು. ಆಗ ಅವರು ಮೀನುಗಳನ್ನು ತೆಗೆದುಕೊಂಡು ಬಂದು, ದೊಡ್ಡದಾದ ಮೀನನ್ನು ಶಂಬರಾಸುರನಿಗೆ ಕೊಟ್ಟರು. ಶಂಬರಾಸುರನ ಪತ್ನಿ

ಯಾದ ಮಾಯಾವತಿಯು ಅಡಿಗೆಮಾಡತಕ್ಕ ಪರಿಚಾರಕರನ್ನು ವಿಚಾರಿಸಿಕೊಂಡಿರುವಾಗ ಅಡಿಗೆಯವರು ಬಾಲಕನಿರುವ ಮೀನನ್ನು ಸೀಳಿದ ಕಾಲದಲ್ಲಿ ಅದರ ಹೊಟ್ಟೆಯಲ್ಲಿರುವ ದಗ್ಧವಾದ ಮನ್ಮಥನೆಂಬ ವೃಕ್ಷದ ಬುಡದಲ್ಲಿ ಅಂಕುರಿಸಿದ, (ಮಂಗಳಕರನಾದ) ಬಾಲಕನನ್ನು ಮಾಯಾವತಿಯು ನೋಡಿ, ವಿಸ್ಮಿತಳಾಗಿ ಈ ಬಾಲಕನು ಯಾರು, ಮೀನಿನ ಜಠರದಲ್ಲಿ ಬರಲು ಕಾರಣವೇನು ಎಂದು ಯೋಚಿಸತಕ್ಕ ಕಾಲದಲ್ಲಿ, ನಾರದರು ಅಲ್ಲಿಗೆ ಬಂದು, ಮಾಯಾವತಿಗೆ ಹೇಳುತ್ತಾರೆ: "ಈ ಶಿಶುವು ಸಕಲ ಜಗತ್ತಿಗೂ ಸೃಷ್ಟಿ, ಸ್ಥಿತಿ, ಸಂಹಾರಕನಾದ ಶ್ರೀ ಮಹಾವಿಷ್ಣುವಿಗೆ ಹುಟ್ಟಿದವನು. ಸೂತಿಕಾಗೃಹದಲ್ಲಿದ್ದ ಈ ಬಾಲಕನನ್ನು ನಿನ್ನ ಗಂಡನು ಅಪಹರಿಸಿ, ಸಮುದ್ರದಲ್ಲಿ ಹಾಕಿದನು. ಮತ್ಸ್ಯದ ಜಠರದಿಂದ ನಿನ್ನ ಗೃಹಕ್ಕೆ ಬಂದಿರುವನು. ಆದುದರಿಂದ ಈ ಶಿಶುವನ್ನು ಜಾಗರೂಕತೆಯಿಂದ ಕಾಪಾಡು" ಎಂದು ಹೇಳಿ ಹೊರಟುಹೋದನು. ಅನಂತರ ಮಾಯಾವತಿಯು ನಾರದನು ಹೇಳಿದಂತೆ, ಶಿಶುವನ್ನು ಕಾಪಾಡುತ್ತಾ, ಶಿಶುವಿನ ರೂಪಾದಿಗಳನ್ನು ಬಾಲ್ಯವಾಗಿರುವಾಗಲೇ ಮೋಹಿಸಿದವಳಾದಳು. ಅನಂತರ ಪ್ರದ್ಯುಮ್ನನಿಗೆ ಬಾಲ್ಯವು ಕಳೆದು, ಯೌವನವುಂಟಾದ ಕಾಲದಲ್ಲಿ ಮಾಯಾವತಿಯು ಅಭಿಲಾಷೆಯುಕ್ತಳಾಗಿ, ಸದಾ ಪ್ರದ್ಯುಮ್ನನಿಗೆ ಅನುರಾಗದಿಂದ ಸಕಲ ಮಾಯೆಗಳನ್ನೂ ಹೇಳಿಕೊಟ್ಟಳು. ಪ್ರದ್ಯುಮ್ನನು ಸಕಲ ಮಾಯಾವಿಶಾರದನಾಗಿರುವುದನ್ನು ಮಾಯಾವತಿಯು ನೋಡಿ, ಕಾಮಮೋಹಿತಳಾದಳು. ಆಗ ಪ್ರದ್ಯುಮ್ನನು ಹೇಳುತ್ತಾನೆ: "ಎಲೈ ತಾಯಿಯೇ, ನೀನು ಮಾತೃಭಾವವನ್ನು ಬಿಟ್ಟು, ಪತ್ನೀಭಾವವನ್ನಾಶ್ರಯಿಸಲು ಕಾರಣವೇನು ಎಂದು ಕೇಳಲು, ಆ ಮಾತಿಗೆ ಅವಳು ನೀನು ನನ್ನ ಮಗನಲ್ಲ, ನೀನು ವಿಷ್ಣುವಿನ ಮಗನು, ಶಂಬರನಿಂದ ಅಪಹೃತನಾಗಿ, ಸಮುದ್ರದಲ್ಲಿ ಬಿದ್ದು, ಮೀನಿನ ಜಠರವನ್ನು ಪ್ರವೇಶಿಸಿ, ಅನಂತರ ನನ್ನ ಗೃಹಕ್ಕೆ ಬಂದಿರುವೆ. ನಿನ್ನ ತಾಯಿಯು ಅದ್ಯಾಪಿ ರೋದಿಸುವಳು ಎಂದು ಹೇಳಲು, ಪ್ರದ್ಯುಮ್ನನು ಶಂಬರಾಸುರನನ್ನು ಯುದ್ಧಕ್ಕೆ ಕರೆದು, ಯುದ್ಧದಲ್ಲಿ ಶಂಬರಾಸುರನ ಸೈನ್ಯವನ್ನು ನಾಶಮಾಡಿದನು. ಅನಂತರ ಶಂಬರಾಸುರನು ಏಳು ಮಾಯೆಗಳನ್ನು ಮಾಡಿ, ಪ್ರದ್ಯುಮ್ನನ ಎಂಟನೆಯ ಮಾಯೆಯಿಂದ ಶಂಬರನು ಹತನಾದನು. ಅನಂತರ ಪ್ರದ್ಯುಮ್ನನು ಮಾಯಾವತೀ ಸಹಿತನಾಗಿ ದ್ವಾರಕಾನಗರಿಗೆ ಬಂದು, ಅಂತಃಪುರಕ್ಕೆ ಬಂದ ಕಾಲದಲ್ಲಿ, ಮಾಯಾವತಿ ಸಹಿತನಾದ ಪ್ರದ್ಯುಮ್ನನನ್ನು ಶ್ರೀಕೃಷ್ಣನ ಸ್ತ್ರೀಯರು ನೋಡಿ, ಕೃಷ್ಣನೇ ಬಂದನೆಂದು ಭ್ರಾಂತಿಪಟ್ಟರು. ರುಕ್ಮಿಣಿಯು ಸುಖಕರವಾದ ದೃಷ್ಟಿಯಿಂದ ನೋಡಿ, ನವಯೌವನಭರಿತನಾದ ಇವನನ್ನು ಪ್ರಸವಿಸಿದವಳೇ ಧನ್ಯಳು; ನನ್ನ ಮಗನು ಇದುವರೆಗೆ ಬದುಕಿದ್ದರೆ,

ಇವನಂತೆಯೇ ಆಗುತ್ತಿದ್ದನು ಎಂದು ಮಾತನಾಡುತ್ತಾ, ಇವನು ಯಾರು? ಅಥವಾ ಇವನ ಶರೀರಸೌಂದರ್ಯವನ್ನು ನೋಡಿದರೂ, ನನಗೆ ಇವನಲ್ಲಿ ಉಂಟಾದ ಸ್ನೇಹವನ್ನು ನೋಡಿದರೂ, ಇವನು ಶ್ರೀಕೃಷ್ಣನ ಮಗನೇ ಸರಿ ಎಂದುಕೊಳ್ಳುವ ಕಾಲಕ್ಕೆ ಸರಿಯಾಗಿ, ಶ್ರೀಕೃಷ್ಣನು ಅಲ್ಲಿಗೆ ಬಂದನು. ಆಗ ನಾರದರೂ ಸಹ ಬಂದರು. ಅನಂತರ ನಾರದರು ರುಕ್ಮಿಣೀದೇವಿಗೆ ಹೇಳುತ್ತಾರೆ: "ಹೇ ಜಗನ್ಮಾತೆ, ಇವನು ನಿನ್ನ ಮಗನು, ಶಂಬರಾಸುರನನ್ನು ಸಂಹರಿಸಿ, ಈ ಮಾಯಾವತಿಯನ್ನು ಕರೆದುಕೊಂಡು ಬಂದಿರುತ್ತಾನೆ. ಇವಳೇ ನಿನ್ನ ಸೊಸೆಯು; ಇವಳು ಶಂಬರನಿಗೆ ಹೆಂಡತಿಯಲ್ಲ! ಇದಕ್ಕೆ ಕಾರಣವನ್ನು ಹೇಳುತ್ತೇನೆ ಕೇಳು, ಮನ್ಮಥನು ದಗ್ಧನಾದ ಕಾಲದಲ್ಲಿ ಈ ರತಿಯು ಪುನಃ ಮನ್ಮಥನ ಉತ್ಪತ್ತಿಯನ್ನು ಕಾದುಕೊಂಡಿರುವುದಕ್ಕಾಗಿ, ಮಾನುಷವೇಷಧಾರಿಣಿಯಾಗಿ, ಶಂಬರನನ್ನು ಮೋಹಗೊಳಿಸಿದಳು. ಶಂಬರಾಸುರನ ಜೊತೆಯಲ್ಲಿ ಮಾಯಾರೂಪದಿಂದ ಆಹಾರ, ಭೋಗಗಳನ್ನು ಅನುಭವಿಸಿದಳು. ಇವನೇ ಮನ್ಮಥನು, ಇವಳು ರತಿಯು; ಈ ವಿಷಯದಲ್ಲಿ ಸಂಶಯಪಡಬೇಡ ಎಂದು ನಾರದನು ಹೇಳಲು, ರುಕ್ಮಿಣೀ ವಾಸುದೇವರು ಅತ್ಯಂತ ಹರ್ಷವನ್ನು ಹೊಂದಿದರು. ನಷ್ಟನಾದ ಮಗನನ್ನು ಪಡೆದ ರುಕ್ಮಿಣಿಯನ್ನು ದ್ವಾರಕಾವಾಸಿಗಳೆಲ್ಲರೂ ಸ್ತುತಿಸಿ ಪರಮಾನಂದಭರಿತರಾದರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಇಪ್ಪತ್ತೇಳನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತೆಂಟನೆಯ ಅಧ್ಯಾಯವು

ರುಕ್ಮಿಣೀದೇವಿಯು, ಚಾರುಧೇಷ್ಣ, ಸುಧೇಷ್ಣ, ಚಾರುದೇಹ, ಸುಷೇಣ, ಚಾರುಗುಪ್ತ, ಭದ್ರಚಾರು, ಚಾರುವಿಂದ, ಸುಚಾರು, ಚಾರು ಎಂಬ ಪುತ್ರರನ್ನೂ ಚಾರುಮತೀಯೆಂಬ ಪುತ್ರಿಯನ್ನೂ ಸಹ ಪಡೆದಳು. ಶ್ರೀಕೃಷ್ಣನಿಗೆ ರುಕ್ಮಿಣಿಯೂ ಸೇರಿ ಮಿತ್ರವಿಂದಾ, ಸತ್ಯಾ, ಜಾಂಬವತಿ, ರೋಹಿಣಿ, ಸುಶೀಲಾ, ಸತ್ಯಭಾಮಾ, ಲಕ್ಷ್ಮಣಾ ಎಂಬುದಾಗಿ ಅಷ್ಟ ಪಟ್ಟಮಹಿಷಿಗಳೂ ಇವರುಗಳಲ್ಲದೆ ಹದಿನಾರು ಸಾವಿರ ಸ್ತ್ರೀಯರೂ ಸಹ ಪತ್ನಿಗಳಿದ್ದರು. ರುಕ್ಮಿಣಿಗೆ ಜ್ಯೇಷ್ಠಪುತ್ರನಾದ ಪ್ರದ್ಯುಮ್ನನು ಸೋದರಮಾವನಾದ ರುಕ್ಮಿಯ ಮಗಳನ್ನು ಸ್ವಯಂವರದಿಂದ ವಿವಾಹಿತನಾದನು. ಇವಳಲ್ಲಿ ಮಹಾಬಲಪರಾಕ್ರಮಿಯಾದ ಅನಿರುದ್ಧನು ಹುಟ್ಟಿದನು. ಶ್ರೀಕೃಷ್ಣನಲ್ಲಿ ರುಕ್ಮಿಣಿಗೆ ಅಸೂಯೆಯಿದ್ದಾಗ್ಯೂ, ತನ್ನ ಪೌತ್ರಿ

ಯನ್ನು ಅನಿರುದ್ಧನಿಗೆ ವಿವಾಹಮಾಡಿಕೊಡಬೇಕೆಂದು ನಿಶ್ಚಯಿಸಿ ಕೃಷ್ಣನನ್ನು ಕೇಳಲು; ಶ್ರೀಕೃಷ್ಣನು ರುಕ್ಮನ ಮಾತಿಗೆ ಅನುಮೋದಿಸಿ, ಎಲ್ಲರೂ ಅನಿರುದ್ಧನ ವಿವಾಹಾರ್ಥವಾಗಿ ರುಕ್ಮನ ನಗರಿಗೆ ಪ್ರಯಾಣಮಾಡಿದರು. ಈ ವಿವಾಹಾರ್ಥ ವಾಗಿ ಅನೇಕ ರಾಜರುಗಳೂ ಸಹ ಬಂದರು. ವಿವಾಹವು ಸಾಂಗವಾಗಿ ನೆರವೇರಿದ ನಂತರ, ಕಳಿಂಗರಾಜನೇ ಮೊದಲಾದವರು ರುಕ್ಮನನ್ನು ಕುರಿತು ಹೇಳುತ್ತಾರೆ: ರುಕ್ಮ, ಈ ಬಲರಾಮನು ಪಗಡೇ ಆಟದಲ್ಲಿ ಬಹಳ ಕುತೂಹಲವುಳ್ಳವನು: ಇವನಲ್ಲಿ ನೀನು ಪಗಡೆಯನ್ನಾಡಿ ಅನಕ್ಷಜ್ಞನಾದ ಬಲರಾಮನನ್ನು ಜಯಿಸಬಹು ದೆಂದು ಹೇಳಲು, ಆ ಮಾತಿಗೆ ಶ್ರೀಕೃಷ್ಣನಲ್ಲಿ ಅಸೂಯಾಪರನಾದ ರುಕ್ಮನು, ದ್ಯೂತಕ್ಕೆ ಅನುಮೋದಿಸಿ ಆಟವಾಡುವುದಕ್ಕೆ ಪ್ರಾರಂಭಿಸಿದರು. ಆಟದಲ್ಲಿ ಮೊದಲನೇ ಜೂಜನ್ನು ರುಕ್ಮನು ಗೆದ್ದನು. ಅನಂತರ, ಬಲರಾಮನು ಗೆದ್ದನು. ಆಗ ಕಳಿಂಗರಾಜನು ರುಕ್ಮನೇ ಗೆದ್ದನೆಂದು ಗಟ್ಟಿಯಾಗಿ ಧ್ವನಿಗೈದನು. ಆಗ ಬಲರಾಮನು ನಾನೇ ಗೆದ್ದವನೆಂದನು. ಈ ಪ್ರಕಾರ ಇವರಿಬ್ಬರೂ ಪರಸ್ಪರ ನಾನು ಗೆದ್ದೆನು, ನಾನು ಗೆದ್ದೆನೆಂದು, ವಾಕ್ಕಲಹವನ್ನು ಮಾಡುವ ಕಾಲದಲ್ಲಿ, ಅಶರೀರವಾಣಿಯು ಬಲಭದ್ರನಿಗೆ ಕೋಪವನ್ನುಂಟುಮಾಡಬೇಕೆಂದು, ಬಲ ರಾಮನೇ ಗೆದ್ದನು, ರುಕ್ಮನು ಹೇಳಿದ್ದು ಸುಳ್ಳು" ಎಂದು ಹೇಳಲು; ಬಲರಾಮನು ಈ ದುಷ್ಟರು ಸುಳ್ಳನ್ನು ಹೇಳತಕ್ಕವರೆಂದು ಕೋಪಗೊಂಡು, ಆಟದ ಹಲಿಗೆಯನ್ನು ತೆಗೆದುಕೊಂಡು ರುಕ್ಮನನ್ನು ಹೊಡೆದನು. ಕಳಿಂಗರಾಜನ ಹಲ್ಲುಗಳನ್ನು ಬಲ ಭದ್ರನು ಮುರಿದನು, ಆಸ್ಥಾನದಲ್ಲಿದ್ದ ಚಿನ್ನದ ಕಂಭವನ್ನು ಕಿತ್ತು, ಅದರಿಂದ ರುಕ್ಮನ ಪಕ್ಷಕರಾದವರನ್ನೂ ಸಹ ಹೊಡೆದನು. ಅನಂತರ ಸಭಿಕರೆಲ್ಲರೂ ಹಾಹಾಕಾರವನ್ನು ಮಾಡುತ್ತಾ, ಓಡಿಹೋದರು. ಬಲರಾಮನು ರುಕ್ಮನನ್ನು ನಾಶಮಾಡಿದಾಗ್ಯೂ, ಕೃಷ್ಣನು ಬಲರಾಮನ ಭಯದಿಂದ ಯಾವ ಮಾತನ್ನೂ ಆಡಲಿಲ್ಲ. ಆಮೇಲೆ ಕೃಷ್ಣನು ಅನಿರುದ್ಧನೇ ಮೊದಲಾದ ಸಕಲಪರಿವಾರದೊಡನೆ ದ್ವಾರಕಾನಗರಿಯನ್ನು ಹೊಂದಿದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಇಪ್ಪತ್ತೆಂಟನೆಯ ಅಧ್ಯಾಯವು ಸಮಾಪ್ತಃ

ಇಪ್ಪತ್ತೊಂಬತ್ತನೆಯ ಅಧ್ಯಾಯವು

"ಶ್ರೀಕೃಷ್ಣನು ದ್ವಾರಕಾಪಟ್ಟಣದಲ್ಲಿರುವಾಗ ದೇವೇಂದ್ರನು ಐರಾವತದ ಮೇಲೆ ಕೂತುಕೊಂಡು, ದ್ವಾರಕಾಪಟ್ಟಣಕ್ಕೆ ಬಂದು, ದೂರದಲ್ಲಿಯೇ ಆನೆಯಿಂದ

ಕೆಳಕ್ಕೆ ಇಳಿದ, ಕೃಷ್ಣನ ಸಮೀಪಕ್ಕೆ ಬಂದು, "ಲೋಕನಾಥ, ನೀನು ಮನುಷ್ಯತ್ವದಲ್ಲಿದ್ದಾಗ್ಯೂ, ದೇವತೆಗಳ ಸಕಲದುಃಖವನ್ನು ಪರಿಹಾರಮಾಡಿದೆ. ತಪಸ್ವಿಗಳ ಸುಖಕ್ಕೋಸ್ಕರ ಅರಿಷ್ಟ, ಧೇನುಕಕೇಶೀ, ಕಂಸ, ಕುವಲಯಾಪೀಡ, ಪೂತನಾ ಮೊದಲಾದ ಲೋಕೋಪದ್ರವಕಾರಕರೆಲ್ಲರೂ ಸಂಹರಿಸಲ್ಪಟ್ಟು ಜಗತ್ತು ಸಂರಕ್ಷಿಸಲ್ಪಟ್ಟಿತು. ಈಗ ನಾನು ಏತಕ್ಕೋಸ್ಕರ ಬಂದೆನೆಂದರೆ, ಪ್ರಾಗ್ಜ್ಯೋತಿಷನಗರದಲ್ಲಿ ನರಕಾಸುರನು ಸರ್ವಭೂತಾಪಕಾರಿಯಾಗಿ, ಲೋಕಕ್ಕೆ ಉಪದ್ರವವನ್ನುಂಟುಮಾಡುತ್ತಿರುವನು. ದೇವ, ಸಿದ್ಧ, ಸುರ, ನೃಪ ಇವರುಗಳ ಕನ್ನಿಕೆಗಳನ್ನೆಲ್ಲಾ ಅಪಹಾರಮಾಡಿ, ತನ್ನ ಗೃಹದಲ್ಲಿಟ್ಟುಕೊಂಡಿರುವನು. ನರಕನು ವರುಣನ ಛತ್ರವನ್ನು ಅಪಹರಿಸಿರುವನು. ಮಂದರಪರ್ವತದ ಮಣಿಪರ್ವತವೆಂಬ ಶೃಂಗವನ್ನು ಅಪಹರಿಸಿರುವನು. ಅಮೃತವನ್ನು ಸ್ರವಿಸತಕ್ಕ ನನ್ನ ತಾಯಿಯ ಕುಂಡಲವನ್ನು ಅಪಹರಿಸಿರುವನು. ಭೂಮಿಯ ಮಗನಾದ ನರಕನು ಐರಾವತವನ್ನು ಅಪಹರಿಸಿರುವನು. ಈ ರೀತಿ ನರಕಾಸುರನು ದುರ್ವಿನೀತನಾಗಿರುವುದನ್ನು ನಿನಗೆ ತಿಳುಹಿಸಬೇಕೆಂದು ಬಂದಿರುವೆನು. ಇವನನ್ನು ಸಂಹರಿಸಿ ಲೋಕಕ್ಕೆ ಅಭ್ಯುದಯವನ್ನುಂಟುಮಾಡೆಂದು ಹೇಳಲು; ಶ್ರೀಕೃಷ್ಣನು ವಿಸ್ಮಿತನಾಗಿ ಇಂದ್ರನ ಕೈಯನ್ನು ಹಿಡಿದುಕೊಂಡು, ವರಾಸನದಿಂದೆದ್ದನು. ಅನಂತರ ಗರುಡನನ್ನು ಸ್ಮರಣೆಮಾಡಲು, ಗರುತ್ಮಂತನು ಶ್ರೀಕೃಷ್ಣನ ಎದುರಿಗೆ ಬಂದನಂತರ ಸತ್ಯಭಾಮಾಸಹಿತನಾಗಿ ಗರುಡಾರೋಹಣವನ್ನುಮಾಡಿಕೊಂಡು, ಪ್ರಾಗ್ಜ್ಯೋತಿಷನಗರವನ್ನುಹೊಂದಿದನು. ಸತ್ಯಭಾಮೆಯು ಭೂಮಿಯ ಅಂಶದಿಂದ ಹುಟ್ಟಿದುದರಿಂದ, ಭೂಭಾರಪರಿಹಾರಾರ್ಥವಾಗಿ ಭೂಮಿಯ ಮಗನಾದ ನರಕನನ್ನು ಸಂಹರಿಸಲು, ಸತ್ಯಭಾಮಾಸ್ವಿತನಾಗಿ ನರಕಾಸುರನ ಪಟ್ಟಣಕ್ಕೆ ಬಂದನು. ಆಗ ಇಂದ್ರನು ದೇವಲೋಕವನ್ನು ಹೊಂದಿದನು. ಪ್ರಾಗ್ಜ್ಯೋತಿಷನಗರವು ಮುರಾಸುರನಿಂದ ಮಾಡಲ್ಪಟ್ಟ ಕತ್ತಿಯಂತೆ ತೀಕ್ಷ್ಣವಾದ ಪಾಶಗಳಿಂದ ವ್ಯಾಪ್ತವಾಗಿತ್ತು. ಅಸಾಧ್ಯವಾದ ಶತಯೋಜನವಿಸ್ತಾರವಾದ ಪಾಶಗಳನ್ನು ನಂದಕವೆಂಬ ಖಡ್ಗದಿಂದ ಶ್ರೀಕೃಷ್ಣನು ಛೇದನಮಾಡಿದನು. ಅನಂತರ ಮುರಾಸುರನು ಯುದ್ಧಕ್ಕೆ ಬರಲು, ಅವನನ್ನು ಸಂಹರಿಸಿದನಂತರ ಮುರನ ಪುತ್ರರಾದ ಏಳುಸಾವಿರ ರಾಕ್ಷಸರನ್ನು ಚಕ್ರದಿಂದ ಸಂಹರಿಸಿ, ನಂತರ ಹಯಗ್ರೀವನೆಂಬ ರಾಕ್ಷಸನನ್ನೂ, ಪಂಚಜನರೆಂಬ ರಾಕ್ಷಸರನ್ನೂ ಸಹ ಸಂಹಾರಮಾಡಿ, ನರಕಾಸುರನ ಅಪಾರವಾದ ಸೈನ್ಯದೊಂದಿಗೆ ಯುದ್ಧಮಾಡಿ, ಸಕಲಸೈನ್ಯವನ್ನೂ ನಾಶಮಾಡಿ, ನರಕಾಸುರನನ್ನು ಚಕ್ರದಿಂದ ಸಂಹಾರಮಾಡಿದನು. ಅನಂತರ ಭೂದೇವಿಯು ಅದಿತಿಯ ಕುಂಡಲವನ್ನು ತೆಗೆದುಕೊಂಡು ಬಂದು ಶ್ರೀಕೃಷ್ಣನನ್ನು ಕುರಿತು, "ಹೇ ಜಗನ್ನಾಥ, ನೀನು ವರಾಹರೂಪಿಯಾಗಿ ನನ್ನನ್ನು

ಉದ್ಧರಿಸಿದ ಕಾಲದಲ್ಲಿ ನಿನ್ನ ಅಂಗಸಂಪರ್ಕದಿಂದ ಈ ನರಕನು ನನ್ನಲ್ಲಿ ಹುಟ್ಟಿದನು. ಇವನನ್ನು ನೀನೇ ಕೊಟ್ಟವನು; ನಿನ್ನಿಂದಲೇ ಸಂಹೃತನಾದನು; ಆದರೆ ಇವನ ಸಂತತಿಯನ್ನು ಛೇದಮಾಡಬೇಡ; ಈ ಕುಂಡಲಗಳನ್ನು ಪರಿಗ್ರಹಿಸೆಂದು" ಹೇಳಿ, ಕುಂಡಲಗಳನ್ನು ಕೊಟ್ಟು, ನನ್ನ ಭಾರಾವತರಣಾರ್ಥವಾಗಿ ಮರ್ತ್ಯಲೋಕದಲ್ಲಿ ಮಾನುಷಜನ್ಮವನ್ನೆತ್ತಿ, ಪ್ರಸಾದಸುಮುಖನಾಗಿರುವೆ. ಓ ಭಗವಂತನೇ, ಈ ಜಗತ್ತುಗಳಿಗೆ ಸೃಷ್ಟಿ, ಸ್ಥಿತಿ, ಸಂಹಾರಕನಾದವನು ನೀನೇ; ನೀನೇ ಜಗದ್ರೂಪನು; ಓ ಅಚ್ಯುತ, ನೀನು ಸರ್ವವ್ಯಾಪಿಯು, ಕಾರ್ಯಕಾರಣಕರ್ತನು, ಸರ್ವ ಭೂತಾತ್ಮಕನು, ಪರಮಾತ್ಮನಾಗಿಯೂ ಸಹ ಇರತಕ್ಕವನು. ಓ ಸರ್ವ ಭೂತಾತ್ಮಕನೇ, ನೀನು ಪ್ರಸನ್ನನಾಗು, ನಿನ್ನ ಮಗನಾದ ನರಕಾಸುರನ ಅಪರಾಧವನ್ನು ಕ್ಷಮಿಸು" ಎಂದು ಪ್ರಾರ್ಥಿಸಲು, ಭಗವಂತನು ಹಾಗೆಯೇ ಆಗ ಲೆಂದು ಭೂದೇವಿಗೆ ಹೇಳಿ, ನರಕಾಸುರನ ಮನೆಯಲ್ಲಿದ್ದ ರತ್ನಗಳನ್ನೂ, ಹದಿನಾರು ಸಾವಿರ ಕನ್ನಿಕೆಗಳನ್ನೂ, ನಾಲ್ಕು ದಂತಗಳುಳ್ಳ ಆರುಸಾವಿರ ಗಜಗಳನ್ನೂ, ಕಾಂಭೋಜದೇಶೋತ್ಪನ್ನವಾದ ಇಪ್ಪತ್ತೊಂದುಸಾವಿರ ಕುದುರೆಗಳನ್ನೂ ಸಹ ತೆಗೆದುಕೊಂಡು ದ್ವಾರಕಾಪಟ್ಟಣಕ್ಕೆ ಬಂದನು. ಅಲ್ಲದೆ ವರುಣಛತ್ರವನ್ನೂ, ಮಣಿಪರ್ವತವನ್ನೂ ಸಹ ಗರುಡನ ಮೇಲೆ ಧರಿಸಿ, ಅದಿತಿಗೆ ಕುಂಡಲವನ್ನು ಕೊಡುವುದಕ್ಕೋಸ್ಕರ ದೇವಲೋಕಕ್ಕೆ ಪ್ರಯಾಣಮಾಡಿದನು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಇಪ್ಪತ್ತೊಂಬತ್ತನೆಯ ಅಧ್ಯಾಯವು ಸಮಾಪ್ತಃ

ಮೂವತ್ತನೆಯ ಅಧ್ಯಾಯವು

"ಗರುಡನು ವರುಣಚ್ಛತ್ರವನ್ನೂ, ಮಣಿಪರ್ವತವನ್ನೂ, ಸತ್ಯಭಾಮಾಸಹಿತ ನಾದ ಹೃಷೀಕೇಶನನ್ನೂ, ಲೀಲಾಮಾತ್ರದಿಂದ ಧರಿಸಿ, ದೇವಲೋಕವನ್ನು ಹೊಂದಿದನು. ಅನಂತರ ಶ್ರೀಕೃಷ್ಣನು ಸ್ವರ್ಗದ್ವಾರದಲ್ಲಿ ಶಂಖಧ್ವನಿಯನ್ನು ಮಾಡಲು, ಸಕಲ ದೇವತೆಗಳೂ ಅರ್ಘ್ಯಾದಿಗಳಿಂದ ಭಗವಂತನ ಸಮೀಪಕ್ಕೆ ಬಂದು ಪೂಜಿಸಿದರು. ಆಗ ಪರಮಾತ್ಮನು ದೇವಮಾತೆಯಾದ ಅದಿತಿಯ ಗೃಹಕ್ಕೆ ಬಂದು, ಅದಿತಿಯನ್ನು ನೋಡಲು; ಅದಿತಿಯು ಇಂದ್ರನಿಂದ ಸಹಿತಳಾಗಿ ಶ್ರೀಕೃಷ್ಣನಿಗೆ ನಮಸ್ಕಾರ ಮಾಡಲು, ಭಗವಂತನು ಕುಂಡಲವನ್ನು ಅದಿತಿಗೆ ಕೊಟ್ಟು, ನರಕಾಸುರ ಸಂಹಾರ ವೃತ್ತಾಂತವನ್ನೂ ಸಹ ಹೇಳಿದನು. ಆಮೇಲೆ

ಅದಿತಿಯು ಸುಪ್ರೀತಳಾಗಿ, ಶ್ರೀಕೃಷ್ಣನನ್ನು ಕುರಿತು, "ಓ, ಪುಂಡರೀಕಾಕ್ಷ, ಭಕ್ತಾಭಯಂಕರ, ಸನಾತನಾತ್ಮ, ಸರ್ವಾತ್ಮ, ಭೂತಾತ್ಮ, ಭೂತಭಾವನ, ಕಲ್ಯಾಣಗುಣಾತ್ಮಕ, ತ್ರಿಗುಣಾತೀತ, ನಿರ್ದ್ವಂದ್ವ, ಶುದ್ಧಸತ್ವ, ಹೃದಿಸ್ಥಿತ, ವರ್ಣಾದಿವರ್ಜಿತ, ಜನ್ಮಾದಿವಿಕಾರರಹಿತ, ಸ್ವಪ್ನಾದಿಪರಿವರ್ಜಿತ, ಸಂಧ್ಯಾ, ರಾತ್ರಿ, ಅಹಸ್ಸು, ಭೂಮಿ, ಗಗನ, ವಾಯು, ಅಂಬು, ಅಗ್ನಿ, ಮನಸ್ಸು, ಬುದ್ಧಿ, ಭೂತ ಇವುಗಳ ರೂಪಾತ್ಮಕನೇ, ಅಚ್ಯುತ, ಸೃಷ್ಟಿ, ಸ್ಥಿತಿ ವಿನಾಶಗಳಿಗೆ ಕರ್ತನೇ, ಬ್ರಹ್ಮಾದಿಗಳಿಗೆ ಸ್ವಾಮಿಯಾದವನೇ, ಸ್ವಶರೀರಗಳಾದ ಬ್ರಹ್ಮ, ವಿಷ್ಣು, ಶಿವಾದಿ ಮೂರ್ತಿಗಳುಳ್ಳವನೇ, ಈಶ್ವರನಾದವನೇ, ನಿನಗೆ ನಮಸ್ಕಾರವು. ದೇವ, ತಿರ್ಯಗಾದಿ ನಾಲ್ಕು ವಿಧವಾದ ಚೇತನಾತ್ಮಕನೇ, ನಿನಗೆ ನಮಸ್ಕಾರವು. ಸಕಲ ಜೀವಾತ್ಮಕನೇ, ಪ್ರಸನ್ನನಾಗು; ಅತಿಮೋಹಕರವಾದ ನಿನ್ನ ಮಾಯೆಯನ್ನು ತಿಳಿಯದಿರತಕ್ಕ ಮೂಢನು, ಅನಾತ್ಮನಲ್ಲಿ ಆತ್ಮಬುದ್ಧಿಯನ್ನು ಮಾಡುವನು. ತನ್ನ ಪದಾರ್ಥವಲ್ಲದ ವಸ್ತುವಿನಲ್ಲಿ ಸ್ವಾಭಿಮಾನವಿಡುವುದೂ ಪುರುಷರಿಗೆ ಸ್ವಭಾವವಾಗಿರುವುದು. "ನಾನು, ನನ್ನದು" ಎಂಬ ಭಾವನೆಯೂ ಸಹ ಸಹಜವಾಗಿ ಉಂಟಾಗುವುದು. ಇವುಗಳೆಲ್ಲವೂ ಸಂಸಾರಕ್ಕೆ ತಾಯಿಯಾದ ನಿನ್ನ ಮಾಯಾಪ್ರಭಾವವು, ಸ್ವಧರ್ಮನಿರತರಾದ ಸತ್ಪುರುಷರಿಂದ ನೀನು ಆರಾಧಿತನಾಗಿ ಅವರಿಗೆ ಮೋಕ್ಷವನ್ನು ಕೊಡುವೆ. ಅಂತಹ ಮಹಾತ್ಮರು ಮಾತ್ರ ನಿನ್ನ ಮಾಯೆಯನ್ನು ಅತಿಕ್ರಮಿಸಿರುವರು. ಬ್ರಹ್ಮಾದಿ ಸಕಲ ದೇವತೆಗಳೂ ಕೂಡ, ನಿನ್ನ ಮಾಯೆಯೆಂಬ ಅಂಧಕಾರದಿಂದ ಆವೃತರಾಗಿ ನಿನ್ನನ್ನು ಆರಾಧಿಸಿ, ಇಷ್ಟಾರ್ಥವನ್ನು ಹೊಂದುವರು. ಪುತ್ರಭಾವವನ್ನು ನಿನ್ನಲ್ಲಿ ನಾನು ಇಟ್ಟಿರುವುದರಿಂದಲೂ, ಶತ್ರುಪಕ್ಷವನ್ನು ಜಯಿಸಬೇಕೆಂಬ ಅಪೇಕ್ಷೆಯಿಂದಲೂ ಸಹ ನಿನ್ನನ್ನು ಆರಾಧಿಸಿದೆನೇ ಹೊರತು, ಮೋಕ್ಷವನ್ನು ಹೊಂದಬೇಕೆಂದು ನಿನ್ನನ್ನು ಪ್ರಾರ್ಥಿಸಲಿಲ್ಲ. ಇದು ನಿನ್ನ ಮಾಯಾವಿಲಾಸವೇ ಹೊರತು ಬೇರೆ ಅಲ್ಲ. ಕೌಪೀನಾಚ್ಛಾದನ ವಿಷಯಕವಾದ ಆಸೆಯು ಸರ್ವೈಶ್ವರ್ಯಪ್ರದಾಯಕವಾದ ಕಲ್ಪವೃಕ್ಷವು ಎದುರಿಗಿದ್ದರೂ ಉಂಟಾಗಬಹುದು. ಅಂತಹ ಭ್ರಾಮಕವು ನಮ್ಮ ದುಷ್ಕರ್ಮದಿಂದಲೇ ಉಂಟಾಗುತ್ತದೆ. ಆದುದರಿಂದ, "ಓ, ಜಗನ್ಮಾಯಾಮೋಹಕರನೇ, ನೀನು ಪ್ರಸನ್ನನಾಗು; ಅಜ್ಞಾನವನ್ನೇ ಜ್ಞಾನವೆಂದು ತಿಳಿದುಕೊಂಡಿರುವ ನನ್ನ ಭಾವವನ್ನು ನಾಶಮಾಡು; ಚಕ್ರಹಸ್ತನಾದ, ಶಾರ್ಙಹಸ್ತನಾದ, ಖಡ್ಗಹಸ್ತನಾದ, ಶಂಖಹಸ್ತನಾದ, ನಿನಗೆ ನಮಸ್ಕಾರವು; ಸ್ಥೂಲಚಿಹ್ನೆಯಿಂದ ಕೂಡಿದ ನಿನ್ನ ರೂಪವನ್ನು ನೋಡಿರುವೆನೇ ಹೊರತು, ಸೂಕ್ಷ್ಮರೂಪವನ್ನು ತಿಳಿಯದ ನನಗೆ ಪ್ರಸನ್ನನಾಗು". ಈ ಪ್ರಕಾರ ಅದಿತಿಯು ಸ್ತೋತ್ರಮಾಡಿದುದಕ್ಕೆ ಭಗವಂತನು, ಸಸ್ಮಿತನಾಗಿ

ದೇವತೆಗಳಿಗೆ ಜನ್ಮಭೂಮಿಯಾದ ಅದಿತಿಯನ್ನು ಕುರಿತು ಹೇಳುತ್ತಾನೆ: "ಓ, ಅದಿತಿಯೇ, ನೀನು ನನಗೆ ತಾಯಿಯಾದುದರಿಂದ ಪ್ರಸನ್ನಳಾಗಿ ವರವನ್ನು ಕೊಡುವಳಾಗು ಎಂದು ಹೇಳಲು, ಅದಕ್ಕೆ ಅದಿತಿಯು ಓ, ಪುರುಷಶ್ರೇಷ್ಠ, ನೀನು ಮನುಷ್ಯಲೋಕದಲ್ಲಿ ಅಶೇಷ ಸುರಾಸುರರಿಂದಲೂ ಅಜೇಯನಾಗಿರು ಎಂದು ವರವನ್ನು ಕೊಟ್ಟಳು. ಅನಂತರ ಕೃಷ್ಣನ ಪತ್ನಿಯಾದ ಸತ್ಯಭಾಮೆಯು ಅದಿತಿಗೆ ನಮಸ್ಕಾರ ಮಾಡಿ, ಪ್ರಸನ್ನಳಾಗೆಂದು ಪ್ರಾರ್ಥಿಸಿದಳು. ಅದಕ್ಕೆ ಅದಿತಿಯು, "ಓ, ಮಂಗಳಕರಳಾದ ಸತ್ಯಭಾಮೆಯೇ, ನನ್ನ ಅನುಗ್ರಹದಿಂದ ನಿನಗೆ ವಾರ್ಧಿಕ್ಯವೈರೂಪ್ಯಾದಿಗಳು ಉಂಟಾಗದೆ, ಸದಾ ನವಯೌವನಭರಿತಳಾಗಿರು" ಎಂದು ಹೇಳಲು ; ಅನಂತರ ದೇವೇಂದ್ರನು ಸತ್ಯಭಾಮಾಸಹಿತನಾದ ಕೃಷ್ಣನಿಗೆ ಸತ್ಕಾರಮಾಡಿದನು. ಶಚೀದೇವಿಯು ಸತ್ಯಭಾಮಾಸಹಿತನಾದ ಕೃಷ್ಣನಿಗೆ ಸತ್ಕಾರಮಾಡಿದಳು. ಆದರೆ ಪಾರಿಜಾತಪುಷ್ಪವನ್ನು ಮಾತ್ರ ಇವರು ಮನುಷ್ಯರಾದುದರಿಂದ, ದೇವಭೋಗ್ಯವಾದ ಪಾರಿಜಾತಪುಷ್ಪವು ಮನುಷ್ಯರಿಗೆ ಯೋಗ್ಯವಾದುದ್ದಲ್ಲವೆಂದು ಕೊಡಲಿಲ್ಲ. ತಾನು ಮಾತ್ರ ಪಾರಿಜಾತಪುಷ್ಪಗಳಿಂದ ಅಲಂಕೃತಳಾಗಿದ್ದಳು. ಅನಂತರ ಕೃಷ್ಣನು ಸತ್ಯಭಾಮೆಯಿಂದ ಕೂಡಿ, ದೇವೋದ್ಯಾನವನ್ನು ಪ್ರವೇಶಿಸಿ, ಮನೋಹರವಾದ ಸುಗಂಧದಿಂದ ಪೂರ್ಣವಾದ, ನಿತ್ಯಾಹ್ಲಾದಕರವಾದ ಚಿಗುರುಗಳಿಂದ ಶೋಭಿತವಾದ, ಚಿನ್ನದಂತೆ ತೊಗಟೆಯಿಂದ ಕೂಡಿರುವ, ಅಮೃತಮಥನದಲ್ಲಿ ಉತ್ಪನ್ನವಾದ, ಪಾರಿಜಾತವೃಕ್ಷವನ್ನು ನೋಡಿ ಸಂತೋಷವನ್ನು ಹೊಂದಿದನು. ಆಗ ಸತ್ಯಭಾಮೆಯು ಶ್ರೀಕೃಷ್ಣನನ್ನು ಕುರಿತು, ಈ ಪಾರಿಜಾತ ತರುವನ್ನು ನಮ್ಮ ನಗರಿಗೆ ತೆಗೆದುಕೊಂಡುಹೋಗಬೇಕೆನಲು ; ಆ ಮಾತಿಗೆ ಶ್ರೀಕೃಷ್ಣನು, "ಪ್ರಿಯೆ, ನೀನು ಹೇಳಿದ ಮಾತು ಸತ್ಯವಾದುದು ; ನೀನು ನನಗೆ ಪರಮಪ್ರಿಯಳಾದವಳು ; ಜಾಂಬವತೀ ರುಕ್ಮಿಣೀರುಗಳು ನಿನ್ನಷ್ಟು ಸೌಭಾಗ್ಯವನ್ನಪೇಕ್ಷಿಸತಕ್ಕವರಲ್ಲ ; ನಮ್ಮ ಮನೆಯ ಅಂಗಳದಲ್ಲಿ ಈ ವೃಕ್ಷವನ್ನಿಟ್ಟರೆ ಬಹು ರಮಣೀಯವಾಗಿರುವುದು" ಎಂದು ಹೇಳಲು ; ಸತ್ಯಭಾಮೆಯು "ಗೋವಿಂದನೇ. ನಾನು ಹೇಳಿದ ಮಾತು ವಿನೋದವೆಂದೆಣಿಸಬೇಡ, ನಿಜವಾಗಿಯೂ ಈ ಪಾರಿಜಾತವೃಕ್ಷವನ್ನು ನನ್ನ ಮನೆಗೆ ತೆಗೆದುಕೊಂಡು ಹೋಗಬೇಕು, ಈ ಪುಷ್ಪದಿಂದಲಂಕೃತಳಾಗಿ, ಸಪತ್ನೀಸ್ತ್ರೀಯರ ಮಧ್ಯದಲ್ಲಿ ಪ್ರಕಾಶಿಸುವೆನು" ಎಂದು ಹೇಳಲು, ಆ ಮಾತಿಗೆ ಕೃಷ್ಣನು ಅನುಮೋದಿಸಿ, ಪಾರಿಜಾತ ತರುವನ್ನು ಕಿತ್ತು, ಗರುಡನಮೇಲಿರಿಸಿದನು. ಆಗ ವನಪಾಲಕರು ಕೃಷ್ಣನನ್ನು ಕುರಿತು, "ಓ ಗೋವಿಂದನೇ, ದೇವರಾಜಮಹಿಷಿಯಾದ ಶಚೀದೇವಿಗೆ ಪ್ರಿಯವಾದ ಈ ಪಾರಿಜಾತವನ್ನು ತೆಗೆದುಕೊಂಡು ಹೋಗಬೇಡ, ಶಚೀದೇವಿಗೆ ಪ್ರಿಯತಮವಾದ ಈ ವೃಕ್ಷದ ಸಮೀಪಕ್ಕೆ ಯಾವ ದೇವತೆ

ಗಳೂ ಬರಲಾರರು; ಒಂದು ವೇಳೆ ಬಂದರೆ, ಇಂದ್ರನು ವಜ್ರಾಯುಧವನ್ನು ಧರಿಸು ವನು; ಈ ವೃಕ್ಷದ ಸಮೀಪಕ್ಕೆ ಬಂದವರು ಕ್ಷೇಮಯುಕ್ತರಾಗಲಾರರು; ಶಚೀ ದೇವಿಭೂಷಣಾರ್ಥವಾಗಿರತಕ್ಕ ಈ ವೃಕ್ಷವನ್ನು ತೆಗೆದುಕೊಂಡು ದೇವತೆಗಳಲ್ಲಿ ವೃಥಾ ವಿರೋಧವನ್ನು ಸಂಪಾದಿಸಬೇಡ; ವಿಷಪ್ರಾಯವಾದ ಕರ್ಮವನ್ನು ಯಾರುತಾನೇ ಮಾಡುವರು" ಎಂದು ಹೇಳಲು, ವನಪಾಲಕರ ಮಾತನ್ನು ಕೇಳಿದ ಸತ್ಯಭಾಮೆಯು, ಮಹಾಕುಪಿತಳಾಗಿ, ದೂತರಿಗೆ ಹೇಳುತ್ತಾಳೆ: ಪಾರಿಜಾತ ವೃಕ್ಷಕ್ಕೆ ಶಚಿಯು ಯಾರು, ಇಂದ್ರನೆಂಬುವನು ಯಾರು, ಅಮೃತಮಥನೋತ್ಪನ್ನ ವಾದ ಈ ವೃಕ್ಷವು ಸರ್ವಲೋಕಕ್ಕೂ ಸಮಾನವಾದುದು; ಈ ವೃಕ್ಷವನ್ನು ಇಂದ್ರನೊಬ್ಬನೇ ಪರಿಗ್ರಹಿಸಬೇಕೋ? ಅಮೃತ, ಚಂದ್ರ, ಸಂಪತ್ತು ಇವುಗಳೆಲ್ಲವೂ ಹೇಗೆ ಸರ್ವಲೋಕಸಮವಾದುದೋ, ಅದೇ ರೀತಿ ಪಾರಿಜಾತವೂ ಸಹ ಸರ್ವ ಜನಸಮವಾದುದು. ದೇವೇಂದ್ರನು ತನಗೆ ಪತಿಯಾಗಿರುವನೆಂಬ ಗರ್ವಯುಕ್ತ ಳಾದ ಶಚೀದೇವಿಗೆ ಸತ್ಯಭಾಮೆಯು ಪಾರಿಜಾತವೃಕ್ಷವನ್ನು ತೆಗೆದುಕೊಂಡು ಹೋದಳೆಂದು ಹೇಳಿ, ನೀನು ಗಂಡನಾದ ಇಂದ್ರನಿಗೆ ಪ್ರಿಯಳಾಗಿರುವುದೂ ಇಂದ್ರನು ನಿನಗೆ ಅಧೀನವಾಗಿರುವುದೂ ಸಹ ನಿಜವಾಗಿದ್ದರೆ ವೃಕ್ಷವನ್ನು ತೆಗೆದು ಕೊಂಡು ಹೋಗುವ ನನ್ನ ಪತಿಗೆ ಅಡ್ಡಿಮಾಡು; ಆಗ ನಿನ್ನ ಗಂಡನ ಸಾಮರ್ಥ್ಯ ವನ್ನು ನೋಡುವೆನು; ಅನಂತರ ಮನುಷ್ಯಳಾದ ನಾನು ಈ ವೃಕ್ಷವನ್ನು ತೆಗೆದು ಕೊಂಡು ಹೋಗುವೆನು" ಎಂಬುದಾಗಿ ಸತ್ಯಭಾಮೆಯು ಹೇಳಿದ ಮಾತನ್ನು ಕೇಳಿ, ವನರಕ್ಷಕರು ಶಚೀದೇವಿಯ ಬಳಿಗೆ ಬಂದು, ಸತ್ಯಭಾಮೆಯು ಹೇಳಿದ ಮಾತನ್ನು ಅರಿಕೆ ಮಾಡಿದರು. ಆಗ ಇಂದ್ರಾಣಿಯು, ಪತಿಗೆ ಪಾರಿಜಾತಹರಣ ವೃತ್ತಾಂತವನ್ನು ಹೇಳಿ ಯುದ್ಧಕ್ಕೆ ಪ್ರೋತ್ಸಾಹಮಾಡಿದಳು. ಇಂದ್ರನು ದೇವಸೇನಾ ಸಹಿತನಾಗಿ ಕೃಷ್ಣನೊಂದಿಗೆ ಪಾರಿಜಾತಕ್ಕೋಸ್ಕರ ಯುದ್ಧಕ್ಕಾಗಿ ಪ್ರಯಾಣಮಾಡಿದನು. ಇಂದ್ರನು ವಜ್ರಾಯುಧವನ್ನು ಧರಿಸಿದ ಕಾಲದಲ್ಲಿ ಸಕಲದೇವತೆಗಳೂ ಆಯುಧಪಾಣಿಗಳಾದರು. ಆಗ ಶ್ರೀಕೃಷ್ಣನು ಸಾಯುಧ ರಾದ ದೇವತೆಗಳಿಂದ ಪರಿವೃತನಾಗಿ, ಆನೆಯಮೇಲೆ ಬರುವ ಇಂದ್ರನನ್ನು ನೋಡಿ ಶಂಖಧ್ವನಿಯನ್ನು ಮಾಡಿ, ಬಾಣಗಳ ಮಳೆಯನ್ನು ವರ್ಷಿಸಿದನು. ಆಗ ದೇವತೆಗಳೂ ಸಹ ಹರಿಯಮೇಲೆ ಅಸ್ತ್ರಗಳನ್ನು ಪ್ರಯೋಗಿಸಿದರು. ದೇವತೆಗಳಿಂದ ಬಿಡಲ್ಪಟ್ಟ ಅಸ್ತ್ರಗಳನ್ನು ಕೃಷ್ಣನು ಸುಲಭವಾಗಿ ನಾಶ ಮಾಡಿದನು. ಗರುಡನು ವರುಣನ ಪಾಶವನ್ನು ಕಿತ್ತುಕೊಂಡು, ಕೊಕ್ಕಿನಿಂದ ಚೂರುಮಾಡಿದನು. ಯಮನು ದಂಡವನ್ನು ಕೃಷ್ಣನಿಗೆ ಪ್ರಯೋಗಿಸಲು, ದೇವಕೀಸುತನು ಯಮದಂಡವನ್ನು ಹುಡಿಮಾಡಿದನು. ಕುಬೇರನ ಪುಷ್ಪಕವನ್ನು

ಚಕ್ರದಿಂದ ಎಳ್ಳಿನಂತೆ ಮಾಡಿದನು. ಸೂರ್ಯನನ್ನು ಕ್ರೂರದೃಷ್ಟಿಯಿಂದ ನಿಸ್ತೇಜಸ್ಕನನ್ನಾಗಿ ಮಾಡಿದನು. ಅಗ್ನಿಯನ್ನು ಬಾಣಗಳಿಂದ ಶೀತಲವಾಗಿ ಮಾಡಿದನು. ಅಷ್ಟವಸುಗಳನ್ನು ದಿಕ್ಕಾಪಾಲಾಗಿ ಓಡಿಸಿದನು. ಏಕಾದಶರುದ್ರರು ಚಕ್ರದಿಂದ ಭೂಮಿಯಲ್ಲಿ ಬಿದ್ದರು. ಸಾಧ್ಯರು ವಿಶ್ವೇದೇವರು ಮರುತ್ತುಗಳು ಗಂಧರ್ವರು ಇವರುಗಳೆಲ್ಲರೂ ಶಾರ್ಙ್ಗಧನುಸ್ಸಿನಿಂದ ಬಿಡಲ್ಪಟ್ಟ ಬಾಣಗಳಿಂದ ಮೂರ್ಛೆಯನ್ನು ಹೊಂದಿದರು. ಗರುಡನು ಸಕಲ ದೇವಸೈನ್ಯವನ್ನು ರೆಕ್ಕೆಗಳಿಂದ ಹೊಡೆಯುವುದು, ಕೊಕ್ಕಿನಿಂದ ಕುಕ್ಕುವುದು, ಕಾಲುಗಳಿಂದ ಒದೆಯುವುದು, ನಖಾಂಕುರಗಳಿಂದ ಸೀಳುವುದು; ಈ ಪ್ರಕಾರ ಹಿಂಸಿಸಿದನು. ಅನಂತರ ಇಂದ್ರ ಮಧುಸೂದನರು ಪರಸ್ಪರ ಬಾಣಗಳನ್ನು ಬಿಡುವುದು, ಅಸ್ತ್ರಗಳನ್ನು ಪ್ರಯೋಗಿಸುವುದು, ಈ ರೀತಿ ಯುದ್ಧ ಮಾಡುವ ಕಾಲದಲ್ಲಿ ಗರುಡನು ಐರಾವತದೊಂದಿಗೂ, ಶ್ರೀಕೃಷ್ಣನು ಇತರ ದೇವತೆಗಳೊಂದಿಗೂ ಸಹ ಯುದ್ಧ ಮಾಡಿದರು. ಇಂದ್ರನು ಅಸ್ತ್ರಶಸ್ತ್ರಗಳೆಲ್ಲವೂ ಪೂರೈಸಿದನಂತರ, ವಜ್ರಾಯುಧವನ್ನು ಧರಿಸಿದನು. ಶ್ರೀ ವಾಸುದೇವನು ಚಕ್ರವನ್ನು ಧರಿಸಿದನು. ಆ ಕಾಲದಲ್ಲಿ ಸಕಲ ಜಗತ್ತೂ ಭಯದಿಂದ ಕೂಡಿತು. ಆಗ ಇಂದ್ರನು ವಜ್ರಾಯುಧವನ್ನು ಕೃಷ್ಣನಿಗೆ ಪ್ರಯೋಗಿಸಲು, ಕೃಷ್ಣನು ವಜ್ರಾಯುಧವನ್ನು ಲೀಲಾಮಾತ್ರದಿಂದ ಕೈಯಲ್ಲಿ ಧರಿಸಿ, ಚಕ್ರವನ್ನು ಇಂದ್ರನಿಗೆ ಪ್ರಯೋಗಿಸದೆ, "ಓ, ಇಂದ್ರನೇ, ಸ್ವಲ್ಪ ನಿಲ್ಲು" ಎಂದು ಹೇಳಲು, ಇಂದ್ರನು ನಿರಾಯುಧನಾಗಿ ಪಲಾಯನಕ್ಕೆ ಉದ್ಯುಕ್ತನಾದನು. ಆಗ ಸತ್ಯಭಾಮೆಯು ಪ್ರಣಷ್ಟವಜ್ರಾಯುಧನಾದ ಗರುಡನಿಂದ ಗಾಯವನ್ನು ಹೊಂದಿ, ವಾಹನವುಳ್ಳ ಇಂದ್ರನನ್ನು ಕುರಿತು ಹೇಳುತ್ತಾಳೆ: "ತ್ರೈಲೋಕ್ಯಾಧಿಪನೇ, ಶಚೀಪತಿಯೇ ನೀನು ಪಲಾಯನಮಾಡುವುದು ಆಯುಕ್ತವಾಗಿರುವುದು. ಪಾರಿಜಾತಪುಷ್ಪಮಾಲೆಯಿಂದ ಅಲಂಕೃತಳಾದ ನಿನ್ನ ಹೆಂಡತಿಯು ನಿನ್ನನ್ನು ಅನುಸರಿಸುವಳು. ಪಾರಿಜಾತಪುಷ್ಪದಿಂದ ಶೋಭಿತಳಾಗಿ ಪ್ರಣಯ ಕಲಹಕ್ಕೆ ಬರುತ್ತಿರುವ ಹೆಂಡತಿಯಾದ ಶಚೀದೇವಿಯನ್ನು ಬಿಟ್ಟು ಓಡಿಹೋಗುವುದು ಅನುಚಿತವು. ಓ, ಇಂದ್ರನೇ, ನಾಚಿಕೆಯನ್ನು ಬಿಟ್ಟು ಪಾರಿಜಾತವೃಕ್ಷವನ್ನು ತೆಗೆದುಕೊಂಡು ಹೋಗಿ, ನಿನ್ನ ಹೆಂಡತಿಯನ್ನು ಸಂತೋಷಪಡಿಸು. ದೇವತೆಗಳೂ ಸಹ ಸಂತೋಷಪಡಲಿ. ಆ ಶಚಿಯು ತನ್ನ ಪತಿಯು ಮಹಾಪರಾಕ್ರಮಿಯೆಂಬ ಗರ್ವದಿಂದ ಮನೆಗೆ ಬಂದ ನನಗೆ ಪಾರಿಜಾತವನ್ನು ಕೊಡದೆ ಉಪಚರಿಸಿದಳಲ್ಲವೇ? ಪತಿಯನ್ನು ಸ್ತುತಿಸುವುದರಲ್ಲಿ ಆಸಕ್ತಳಾದ ನಾನು, ಸ್ತ್ರೀಸ್ವಭಾವದಿಂದ ನಿನಗೆ ವಿರೋಧವನ್ನುಂಟುಮಾಡಿದೆನು. ಪರಸ್ವತ್ತಾದ ಪಾರಿಜಾತದಿಂದ ನಮಗೇನೂ ಪ್ರಯೋಜನವಿಲ್ಲ. ರೂಪಾದಿಗಳಿಂದ ಗರ್ವಿತಳಾದ ಶಚಿಯೇ ಇಟ್ಟುಕೊಳ್ಳಲಿ"

ಎಂದು ಸತ್ಯಭಾಮೆಯು ಹಾಸ್ಯಮಾಡಲು, ದೇವಾಧಿಪನು ಹಿಂತಿರುಗಿ, "ಓ, ಉಗ್ರಳಾದ ಸತ್ಯಭಾಮೆಯೆ, ಹಾಸ್ಯಮಾಡುವುದನ್ನು ನಿಲ್ಲಿಸು, ವಿಶ್ವರೂಪಿಯಾದ ಸೃಷ್ಟಿ ಸ್ಥಿತಿ ಕಾರಕನಾದ ಶ್ರೀಕೃಷ್ಣನಿಂದ ನಾನು ಸೋತಾಗ್ಯೂ, ನನಗೆ ನಾಚಿಕೆ ಯಿಲ್ಲ. ಓ ದೇವಿ, ಯಾರಿಂದ ಸಕಲ ಜಗತ್ತೂ ಹುಟ್ಟುವುದೋ, ಎಲ್ಲಿರುವುದೋ, ಯಾರಿಂದ ನಾಶವಾಗುವುದೋ, ಆ ಪುರುಷನಿಂದ ನಾಚಿಕೆಯುಂಟಾಗುವುದೇ, ಸಕಲಲೋಕವೂ .ಯಾರಿಂದ ಹುಟ್ಟುವುದೋ, ಅತ್ಯಂತ ಸೂಕ್ಷ್ಮರೂಪಿಯಾದ, ಅಜೇಯನಾದ, ಶಾಶ್ವತನಾದ, ಜಗದುಪಕಾರಕನಾದ, ಸರ್ವೇಶನಾದ, ಶ್ರೀಕೃಷ್ಣ ನನ್ನು ಜಯಿಸುವುದಕ್ಕೆ ಯಾರುತಾನೇ ಸಮರ್ಥರಾಗುವರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಮೂವತ್ತನೆಯ ಅಧ್ಯಾಯವು ಸಮಾಪ್ತಃ

ಮೂವತ್ತೊಂದನೆಯ ಅಧ್ಯಾಯವು

"ದೇವರಾಜನು ಈ ಪ್ರಕಾರ ಸ್ತುತಿಸಲು, ಶ್ರೀಕೃಷ್ಣನು ಮುಗುಳುನಗೆಯಿಂದ ಇಂದ್ರನನ್ನು ಕುರಿತು ಹೇಳುತ್ತಾನೆ: "ಓ ನೀನು ದೇವರಾಜನು, ನಾವು ಮನುಷ್ಯರು, ನೀನು ನಮ್ಮ ಅಪರಾಧವನ್ನು ಕ್ಷಮಿಸು. ನಾನು ಸತ್ಯಭಾಮೆಯ ಮಾತನ್ನು ಕೇಳಿ, ಪಾರಿಜಾತವೃಕ್ಷವನ್ನು ತೆಗೆದುಕೊಂಡೆನು; ಈಗಲೂ ಈ ವೃಕ್ಷವನ್ನು ನೀನು ತೆಗೆದುಕೊಂಡು ಸ್ವಸ್ಥಾನದಲ್ಲಿರಿಸು, ನನ್ನನ್ನು ಸಂಹರಿಸುವುದಕ್ಕಾಗಿ ಪ್ರಯೋಗಿಸಿದ ಈ ನಿನ್ನ ವಜ್ರಾಯುಧವನ್ನು ಪರಿಗ್ರಹಿಸು, ಇದು ನಿನಗೆ ಅರ್ಹ ವಾದುದು" ಎಂದು ಹೇಳಲು ಇಂದ್ರನು ಹೇ ಈಶನೇ, ನೀನು ಮನುಷ್ಯನೆಂದು ಹೇಳಿಕೊಂಡು ನನ್ನನ್ನು ಮೋಹಗೊಳಿಸುವೆ, ನಿನ್ನನ್ನು ನಾನು ಬಲ್ಲೆನು. ಆದರೆ ನಿನ್ನ ಸೂಕ್ಷ್ಮರೂಪವನ್ನು ಮಾತ್ರ ನಾನು ನೋಡಿದವನಲ್ಲ; ನೀನು ಮನುಷ್ಯ ನಾದರೂ ಆಗು; ದೇವನಾದರೂ ಆಗು; ಯಾವ ರೂಪಿಯಾದರೂ ನೀನೇ ಜಗತ್ತನ್ನು ರಕ್ಷಿಸತಕ್ಕವನು, ಓ ಕೃಷ್ಣನೇ, ಈ ಪಾರಿಜಾತವನ್ನು ತೆಗೆದುಕೊಂಡು ದ್ವಾರಕೆಗೆ ಹೋಗು. ನೀನು ಮರ್ತ್ಯಲೋಕದಲ್ಲಿರುವವರೆಗೂ ಈ ತರುವೂ ಸಹ ಅಲ್ಲಿಯೇ ಇರುವುದು, ಓ ದೇವದೇವ, ಜಗನ್ನಾಥ, ಕೃಷ್ಣ, ವಿಷ್ಣೋ, ಮಹಾಭುಜ, ಶಂಖಚಕ್ರಗದಾಪಾಣೇ ನನ್ನ ಅತಿಕ್ರಮವನ್ನು ಮನ್ನಿಸು ಎಂದು ಪ್ರಾರ್ಥಿಸಲು, ಶ್ರೀಕೃಷ್ಣನು ಹಾಗೆಯೇ ಆಗಲೆಂದು ಇಂದ್ರನಿಗೆ ಹೇಳಿ, ದೇವಗಂಧರ್ವರಿಂದ ಸ್ತುತಿ ಸಲ್ಪಟ್ಟವನಾಗಿ, ದ್ವಾರಕಾನಗರಿಯ ಸಮೀಪಕ್ಕೆ ಬಂದು, ಶಂಖಧ್ವನಿಯನ್ನು

ಮಾಡಿ, ಎಲ್ಲರಿಗೂ ಹರ್ಷವನ್ನುಂಟುಮಾಡಿ, ಪಟ್ಟಣವನ್ನು ಪ್ರವೇಶಿಸಿ, ಗರುಡನಿಂದ ಕೆಳಕ್ಕೆ ಇಳಿದು, ಸತ್ಯಭಾಮಾ ಗೃಹವನ್ನು ಹೊಕ್ಕು, ಪಾರಿಜಾತವೃಕ್ಷವನ್ನು ಅಂಗಳದಲ್ಲಿ ಸ್ಥಾಪಿಸಿದನು. ಸಕಲ ಯಾದವರೂ, ಮೂರು ಯೋಜನ ದೂರ ಸುವಾಸನೆಯನ್ನು ಕೊಡುತ್ತಿದ್ದ ಪಾರಿಜಾತವೃಕ್ಷವನ್ನು ನೋಡಿ, ಪರಮಾನಂದಭರಿತರಾದರು. ಆ ಸಮಸ್ತ ಯಾದವರೂ ಪಾರಿಜಾತವೃಕ್ಷಕ್ಕೆ ಅಭಿಮುಖವಾಗಿ ಬಂದು ನಿಂತು ತಾವು ಈಗ ಮಾನುಷ ದೇಹಯುಕ್ತರಾಗಿದ್ದರೂ ಪೂರ್ವದಲ್ಲಿ ಅಮಾನುಷ ಶರೀರಧಾರಿಗಳಾದ ದೇವತೆಗಳೆಂಬ ಜ್ಞಾನವುಳ್ಳವರಾಗುತ್ತಿದ್ದರು. ನರಕಾಸುರನ ಗೃಹದಿಂದ ತಂದಿದ್ದ ಧನಾದಿಗಳನ್ನು ಬಂಧುವರ್ಗಕ್ಕೆಲ್ಲಾ ಹಂಚಿದನು. ಸ್ತ್ರೀಯರನ್ನು ಮಾತ್ರ ತಾನೇ ಇಟ್ಟುಕೊಂಡನು. ಅನಂತರ ಶುಭದಿವಸದಲ್ಲಿ ಆ ನಾರೀರತ್ನಗಳನ್ನು ವಿವಾಹಮಾಡಿಕೊಂಡು, ಒಂದೇ ಕಾಲದಲ್ಲಿ ವಿಧಿವತ್ತಾಗಿ ಪಾಣಿಗ್ರಹಣಮಾಡಿಕೊಂಡನು. ಹದಿನಾರುಸಾವಿರ ಸ್ತ್ರೀಯರಿಗಿಂತಲೂ ಹೆಚ್ಚಾಗಿರುವ ಸ್ತ್ರೀಯರಲ್ಲಿ ಮಧುಸೂದನನು ಅಷ್ಟು ರೂಪುಗಳನ್ನೇ ಧರಿಸಿದ್ದನು. ಪ್ರತಿಯೊಬ್ಬ ಸ್ತ್ರೀಯೂ ಕೃಷ್ಣನೊಬ್ಬನೇ ನನ್ನನ್ನು ಮಾತ್ರ ವರಿಸಿದನೆಂದು ಎಲ್ಲಾ ಸ್ತ್ರೀಯರು ಅಂದುಕೊಂಡರು. ವಿಶ್ವರೂಪಧಾರಿಯಾದ ಪರಮಾತ್ಮನು, ಸಕಲಸ್ತ್ರೀಯರ ಗೃಹದಲ್ಲಿಯೂ ವಾಸಮಾಡುತ್ತಿದ್ದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಮೂವತ್ತೊಂದನೆಯ ಅಧ್ಯಾಯವು ಸಮಾಪ್ತಃ

ಮೂವತ್ತೆರಡನೆಯ ಅಧ್ಯಾಯವು

"ಪ್ರದ್ಯುಮ್ನನೇ ಮೊದಲಾದ ರುಕ್ಮಿಣೀಪುತ್ರರನ್ನು ಹೇಳಿದೆನು. ಭಾನು ಭೌಮರೇ ಮೊದಲಾದವರು ಸತ್ಯಭಾಮಾಪುತ್ರರು. ದೀಪ್ತಿಮತ್ ತಾಮಪಕ್ಷರೇ ಮೊದಲಾದವರು ರೋಹಿಣಿಯಲ್ಲಿ ಹುಟ್ಟಿದವರು. ಜಾಂಬವತಿಯಲ್ಲಿ ಸಾಂಬರೇ ಮೊದಲಾದವರೂ, ನಾಗ್ನಜಿತೆಯಲ್ಲಿ ಭದ್ರವಿಂದರೇ ಮೊದಲಾದವರೂ, ಶೈಬ್ಯೆಯಲ್ಲಿ, ಸಂಗ್ರಾಮಜಿತರೇ ಮೊದಲಾದವರೂ, ಮಾದ್ರಿಯಲ್ಲಿ ವೃಕರೇ ಮೊದಲಾದವರೂ, ಲಕ್ಷ್ಮಣೆಯಲ್ಲಿ ಗಾತ್ರವಂತರೇ ಮೊದಲಾದವರೂ, ಕಾಳಿಂದಿಯಲ್ಲಿ ಶೃತರೇ ಮೊದಲಾದವರೂ ಸಹ ಹುಟ್ಟಿದರು. ಅಲ್ಲದೆ ಇತರ ಸ್ತ್ರೀಯರಿಗೂ ಸಹ ಅನೇಕ ಸಾವಿರ ಪುತ್ರರೂ ಸಹ ಹುಟ್ಟಿದರು. ಅನೇಕ ಸಹಸ್ರ ಸಂಖ್ಯೆಯ ಪುತ್ರರೆಲ್ಲರಿಗೂ ಪ್ರದ್ಯುಮ್ನನೇ ಮೊದಲನೆಯವನು. ಪ್ರದ್ಯುಮ್ನನಿಂದ ಅನಿರುದ್ಧನೂ,

ಅನಿರುದ್ಧನಿಂದ ವಜ್ರನೂ ಸಹ ಹುಟ್ಟಿದರು. ಅನಿರುದ್ಧನು ಬಲಿಚಕ್ರವರ್ತಿಯ ಮಗನಾದ ಬಾಣನ ಪುತ್ರಿಯಾದ ಉಷೆಯನ್ನು ಯುದ್ಧದಲ್ಲಿ ವರಿಸಿದನು. ಈ ಯುದ್ಧದಲ್ಲಿ ಶಂಕರನಿಗೂ ಶ್ರೀಕೃಷ್ಣನಿಗೂ ಘೋರವಾದ ಯುದ್ಧವು ನಡೆದು ಯುದ್ಧದಲ್ಲಿ ಬಾಣನ ಸಾವಿರ ಬಾಹುಗಳನ್ನೂ ಕೃಷ್ಣನು ಚಕ್ರದಿಂದ ನಾಶ ಮಾಡಿದನು" ಎಂದು ಪರಾಶರಮಹರ್ಷಿಗಳು ಹೇಳಲು, ಆಗ ಮೈತ್ರೇಯರು "ಹರನಿಗೂ ಕೃಷ್ಣನಿಗೂ ಯಾವ ರೀತಿ ಯುದ್ಧವುಂಟಾಯಿತು? ಬಾಣನ ಬಾಹುಗಳು ಯಾವ ರೀತಿ ನಾಶವಾದವು? ಈ ಆಶ್ಚರ್ಯವನ್ನು ಕೇಳಬೇಕೆಂದು ಬಹಳ ಕುತೂಹಲಯುಕ್ತನಾಗಿರುವೆನೆಂದು" ಹೇಳಲು ಆ ಮಾತಿಗೆ ಪರಾಶರ ಬ್ರಹ್ಮರ್ಷಿಯು ಹೇಳುತ್ತಾರೆ: "ಎಲೈ ಮೈತ್ರೇಯನೇ, ಶಂಕರನು ಪಾರ್ವತಿಯೊಂದಿಗೆ ವಿಹರಿಸುತ್ತಿರುವ ಕಾಲದಲ್ಲಿ ಬಾಣನ ಮಗಳಾದ ಉಷೆಯು, ಪಾರ್ವತಿಯನ್ನು ನೋಡಿ, ತಾನೂ ಪತಿಯೊಂದಿಗೆ ವಿಹರಿಸುವುದಕ್ಕಾಗಿ ಅಪೇಕ್ಷಿಸಲು, ಆಗ ಪಾರ್ವತಿಯು "ಎಲೈ ಉಷೆಯೇ, ನೀನು ವೃಥಾ ತಾಪವನ್ನು ಹೊಂದಬೇಡ, ನೀನೂ ನನ್ನಂತೆಯೇ ಪತಿಯಿಂದ ಕೂಡಿ ವಿಹರಿಸುವೆ" ಎಂದು ಹೇಳಲು ಅದನ್ನು ಕೇಳಿದ ಉಷೆಯು "ಯಾವಾಗ ವಿಹರಿಸುವ ಪ್ರಾಪ್ತಿಯುಂಟಾಗುತ್ತದೆ. ನನ್ನ ಗಂಡನು ಯಾರು? ಎಂದು ಕೇಳಲು ಅದಕ್ಕೆ ಪಾರ್ವತಿಯು ಹೇಳುತ್ತಾಳೆ: "ವೈಶಾಖಶುದ್ಧ ದ್ವಾದಶಿಯಲ್ಲಿ ನೀನು ಸ್ವಪ್ನದಲ್ಲಿ ಯಾವ ಪುರುಷನನ್ನು ನೋಡುವೆಯೋ, ಅವನೇ ನಿನಗೆ ಪತಿಯಾಗುವನು" ಎಂದು ಹೇಳಿದಳು. ಪಾರ್ವತಿಯು ಹೇಳಿದ ಪ್ರಕಾರ ಅದೇ ತಿಥಿಯಲ್ಲಿ ಉಷೆಯು ಸ್ವಪ್ನದಲ್ಲಿ ಪುರುಷನನ್ನು ನೋಡಿ, ಅನಂತರ ಎಚ್ಚರಗೊಂಡು, ಲಜ್ಜಾಶೂನ್ಯಳಾಗಿ, "ಹಾ! ಎಲ್ಲಿ ಹೋದೆ" ಎಂದು ಹೇಳುತ್ತಿರುವಾಗ, ಇವಳ ಸಖಿಯಾದ, ಬಾಣಾಸುರನ ಮಂತ್ರಿಯಾದ ಕುಭಾಂಡನ ಮಗಳಾದ ಚಿತ್ರರೇಖೆಯು, ಉಷಾ ಸಮೀಪಕ್ಕೆ ಬಂದು, ನೀನು ಹೇಳುವುದು ಯಾರೆಂದು ಕೇಳಿದಳು. ನಿರ್ಲಜ್ಜೆಯಾದ ಉಷೆಯು ಸ್ವಪ್ನ ವೃತ್ತಾಂತವನ್ನು ಹೇಳಲು, ಅದಕ್ಕೆ ಚಿತ್ರರೇಖೆಯು, "ಎಲೌ ಸಖಿ, ಉಷೆಯೇ, ನಿನ್ನ ಸ್ವಪ್ನದ ಪುರುಷನನ್ನು ತಿಳಿಯುವುದು ಬಹಳ ಕಷ್ಟವಾಗಿರುವುದು, ಯಾರೆಂದು ತಿಳಿಯಲಿ, ಆದಾಗ್ಯೂ ನಿನಗೆ ಪ್ರಿಯವನ್ನುಂಟುಮಾಡಬೇಕಾಗಿದೆ, ಇನ್ನು ಏಳೆಂಟು ದಿವಸದವರೆಗೂ ಸುಮ್ಮನಿರು. ಅಷ್ಟರೊಳಗಾಗಿ ನಿನ್ನ ಪುರುಷನನ್ನು ತಿಳಿಯುವೆನೆಂದು" ಹೇಳಿ, ಒಳಕ್ಕೆ ಹೋಗಿ, ಈ ವಿಚಾರದಲ್ಲಿ ಏನು ಉಪಾಯವನ್ನು ಮಾಡಬೇಕೆಂದು ಯೋಚಿಸಿ, ಸಖಿಯು ದೇವಗಂಧರ್ವ ಮನುಷ್ಯರ ಚಿತ್ರಪಟವನ್ನು ಬರೆದು, ಉಷೆಗೆ ತೋರಿಸಲು; ಉಷೆಯು ದೇವಗಂಧರ್ವರನ್ನು ಬಿಟ್ಟು, ಮನುಷ್ಯರಲ್ಲಿ ದೃಷ್ಟಿಯನ್ನಿಟ್ಟು, ಅವರಲ್ಲಿಯೂ ವೃಷ್ಣಿಗಳನ್ನು ನೋಡಿ, ಅದನ್ನೂ

ಬಿಟ್ಟು, ರಾಮಕೃಷ್ಣರನ್ನು ನೋಡಿ ಅನಂತರ ಪ್ರದ್ಯುಮ್ನನನ್ನು ದೃಷ್ಟಿಸಿ, ಅವನ ಪಕ್ಕದಲ್ಲಿದ್ದ ಅನಿರುದ್ಧನನ್ನು ನೋಡಿ, ಲಜ್ಜೆಯಿಂದ ತಲೆಯನ್ನು ಬಗ್ಗಿಸಿದಳು. ಪುನಃ ಲಜ್ಜೆಯನ್ನು ಬಿಟ್ಟು, ಇವನೇ, ಇವನೇ ಎಂದು ಚಿತ್ರಪಟದ ಅನಿರುದ್ಧನನ್ನು ತೋರಿಸಿದಳು. ಆಗ ಚಿತ್ರರೇಖೆಯು "ಇವನು ಶ್ರೀಕೃಷ್ಣನ ಪೌತ್ರನು, ಪ್ರದ್ಯುಮ್ನನ ಮಗನು, ಇವನು ಅನಿರುದ್ಧನು, ಪ್ರಿಯದರ್ಶನನು, ಇವನನ್ನು ನೀನು ಮದುವೆಯಾದರೆ, ನಿನ್ನ ಭಾಗ್ಯಕ್ಕೆ ಎಣೆಯೇ ಇಲ್ಲ. ಹೇ ಸಖೀ ದ್ವಾರಕಾ ನಗರಿಯು ಪ್ರವೇಶಿಸುವುದಕ್ಕೆ ಅಸಾಧ್ಯವಾದರೂ, ನಿನಗೆ ಪ್ರಿಯವನ್ನುಂಟುಮಾಡುವುದಕ್ಕಾಗಿ ದ್ವಾರಕೆಗೆ ಹೋಗಿ, ಅನಿರುದ್ಧನನ್ನು ಕರೆದುಕೊಂಡು ಬರುವೆನು, ಇದನ್ನು ಯಾರಿಗೂ ಹೇಳದೆ ರಹಸ್ಯವಾಗಿಡು. ನಾನು ಬರುವವರೆವಿಗೂ ತಾಪವನ್ನು ಸಹಿಸಿಕೊಂಡಿರು" ಎಂದು ಹೇಳಿ, ದ್ವಾರಕಾನಗರಿಗೆ ಚಿತ್ರರೇಖೆಯು ಪ್ರಯಾಣಸಿದ್ಧಳಾದಳು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಮೂವತ್ತೆರಡನೆಯ ಅಧ್ಯಾಯವು ಸಮಾಪ್ತಃ

ಮೂವತ್ತುಮೂರನೆಯ ಅಧ್ಯಾಯವು

"ಬಾಣಾಸುರನು, ತ್ರಿಲೋಚನನಾದ ರುದ್ರನನ್ನು ಕುರಿತು ಹೇಳುತ್ತಾನೆ: "ಓ, ದೇವ! ನಾನು ಸಹಸ್ರಬಾಹುಗಳನ್ನು ಧರಿಸಿದ್ದಾಗ್ಯೂ, ಯುದ್ಧವಿಲ್ಲದೆ ಬಹಳ ನಿರ್ವಿಣ್ಣನಾಗಿರುವೆನು. ಸಹಸ್ರಬಾಹುಧರನಾದ ನನಗೆ ಯುದ್ಧವಿಲ್ಲದೆ ಇದ್ದರೆ, ಈ ಬಾಹುಗಳು ವೃಥಾ ಭಾರವಾಗಿರುವುದು ; ಈ ಭಾರವನ್ನು ಹೊತ್ತಿರುವುದರಿಂದೇನು ಪ್ರಯೋಜನ ?" ಎಂಬುದಾಗಿ ಕೇಳಲು, ಆ ಮಾತಿಗೆ ಶಂಕರನು ಹೇಳುತ್ತಾನೆ, "ಎಲೈ ಬಾಣನೆ, ರಾಕ್ಷಸರಿಗೆ ಪ್ರಿಯವಾದ ನಿನ್ನ ಮಯೂರ ಧ್ವಜವು, ಯಾವಾಗ ಭಂಗವಾಗುವುದೋ, ಆಗ ನಿನಗೆ ಯುದ್ಧವು ಲಭಿಸುವುದು," ಎಂದು ಹೇಳಲು ; ಬಾಣನು ಹರ್ಷಯುಕ್ತನಾಗಿ, ಮಹಾದೇವನಿಗೆ ನಮಸ್ಕರಿಸಿ, ಮನೆಗೆ ಬಂದನು. ಆಗ ಇವನ ಧ್ವಜವು ಭಂಗವಾದುದನ್ನು ಕೇಳಿ, ಆನಂದವನ್ನು ಹೊಂದಿದನು. ಇಷ್ಟರಲ್ಲಿಯೇ ಯೋಗವಿದ್ಯಾಬಲದಿಂದ ಚಿತ್ರರೇಖೆಯು ಅನಿರುದ್ಧನನ್ನು ಕರೆದುಕೊಂಡು, ಉಷೆಯ ಅಂತಃಪುರವನ್ನು ಪ್ರವೇಶಿಸಿ, ಉಷೆಗೆ ಅನಿರುದ್ಧನನ್ನು ಸಮರ್ಪಿಸಿದಳು. ಉಷೆಯು ಅನಿರುದ್ಧನ ಜೊತೆಯಲ್ಲಿ ವಿಹಾರಗಳನ್ನು ಅನುಭವಿಸುವ ಕಾಲದಲ್ಲಿ, ಅಂತಃಪುರ ಪಾಲಕರು ಈ ವಿಷಯವನ್ನು ಬಾಣನಿಗೆ

ತಿಳಿಸಿದರು. ಆಗ ಬಾಣನು ಇದನ್ನು ಕೇಳಿ, ಕೋಪಾಕ್ರಾಂತನಾಗಿ ಅನಿರುದ್ಧನಲ್ಲಿ ಯುದ್ಧಕ್ಕೆ ಸೈನ್ಯವನ್ನು ಕಳುಹಿಸಲು ; ಅನಿರುದ್ಧನು ಬಾಣನ ಸೈನ್ಯವನ್ನು ನಾಶ ಮಾಡಲು ; ಅದನ್ನು ಕೇಳಿದ ಬಾಣನು, ರಥಾರೋಹಣ ಮಾಡಿಕೊಂಡು, ಅನಿರುದ್ಧನಲ್ಲಿ ಯುದ್ಧಮಾಡಿ ಸೋತುಹೋದನು. ಅನಂತರ ಬಾಣಾಸುರನು ಮಾಯಾಯುದ್ಧವನ್ನು ಮಾಡುತ್ತಾ, ಯುದ್ಧದಲ್ಲಿ ಯದುನಂದನನನ್ನು ನಾಗಾಸ್ತ್ರದಿಂದ ಬಂಧಿಸಿದನು. ಇತ್ತಲಾಗಿ ದ್ವಾರಕಾನಗರಿಯಲ್ಲಿ ಅನಿರುದ್ಧನು ಎಲ್ಲಿಹೋದನೆಂದು ಕೃಷ್ಣಾದಿಗಳು ಗಾಬರಿಪಡುವ ಕಾಲದಲ್ಲಿ, ನಾರದನು ಕೃಷ್ಣನ ಸಮೀಪಕ್ಕೆ ಬಂದು, ಅನಿರುದ್ಧನು ಬಾಣಾಸುರನಿಂದ ಕಟ್ಟಲ್ಪಟ್ಟ ವಿಚಾರವನ್ನು ಹೇಳಲು ; ಆಗ ಯದುಕುಲತಿಲಕನು ಬಲರಾಮಾದಿಗಳಿಂದ ಕೂಡಿ, ಗರುಡಾ ರೋಹಣನಾಗಿ ಬಾಣಾಸುರನ ನಗರಿಗೆ ಬಂದು, ರುದ್ರನ ಪ್ರಮಥಸೈನ್ಯವನ್ನು ನಾಶಮಾಡಿದನು. ಈ ವಿಚಾರವನ್ನು ತಿಳಿದ ರುದ್ರದೇವನು, ಮೂರು ಕಾಲು ಗಳಿಂದಲೂ, ಮೂರು ತಲೆಗಳಿಂದಲೂ ವ್ಯಾಪ್ತವಾದ ಮಾಹೇಶ್ವರಜ್ವರವನ್ನು ಬಾಣಸಂರಕ್ಷಣಾರ್ಥವಾಗಿ ಕಲ್ಪಿಸಿ ಯುದ್ಧಕ್ಕೆ ಕಳುಹಿಸಲು ; ಜ್ವರವು ಶ್ರೀಕೃಷ್ಣ ನಲ್ಲಿ ಯುದ್ಧಮಾಡುತ್ತಾ ಇರುವ ಕಾಲದಲ್ಲಿ, ಮಾಹೇಶ್ವರಜ್ವರದಿಂದ ಬಲರಾಮಾ ದಿಗಳು ತಾಪವನ್ನು ಹೊಂದಿದರು. ಕೃಷ್ಣನ ದೇಹವನ್ನು ಜ್ವರವು ಪ್ರವೇಶಿಸಿತು. ಆಗ ಶ್ರೀಕೃಷ್ಣನ ದೇಹದಲ್ಲಿ ವೈಷ್ಣವಜ್ವರವು ಉತ್ಪತ್ತಿಯಾದುದರಿಂದ ವೈಷ್ಣವ ಜ್ವರದ ತಾಪವನ್ನು ಸಹಿಸಲಾರದೆ, ಮಾಹೇಶ್ವರಜ್ವರವು ಶ್ರೀಕೃಷ್ಣನ ದೇಹದಿಂದ ಹೊರಗೆ ಬಂದು, ನೆಲದ ಮೇಲೆ ಬಿತ್ತು. ವೈಷ್ಣವಜ್ವರವು ಬಹಳ ಅದ್ಭುತವಾಗಿ ಕೃಷ್ಣದೇಹದಿಂದ ಹೊರಕ್ಕೆ ಬಂದ ಕಾಲದಲ್ಲಿ, ಬ್ರಹ್ಮಾದಿಗಳು ಭೀತರಾಗಿ ಕೃಷ್ಣನ ಬಳಿಗೆ ಬಂದು, ಕ್ಷಮಿಸೆಂದು ಪ್ರಾರ್ಥಿಸಲು, ಶ್ರೀಕೃಷ್ಣನು ಬ್ರಹ್ಮಾದಿಗಳ ಸಂತೋಷಾರ್ಥವಾಗಿ ಜ್ವರವನ್ನು ಶಮನಮಾಡಿದನು. ಆಗ ಜ್ವರವು ಶ್ರೀಕೃಷ್ಣ ನನ್ನು ಕುರಿತು, ನೀನು ನನ್ನನ್ನು ಸೃಷ್ಟಿಸಿದುದರಿಂದ ಜ್ವರಯುದ್ಧ ವಿಚಾರವನ್ನು ಕೇಳತಕ್ಕವರಿಗೆ ಜ್ವರದಪೀಡೆಯು ಇಲ್ಲದಹಾಗೆ ವರವನ್ನು ಕೊಡಬೇಕೆಂದು ಕೇಳಲು, ಆ ಮಾತಿಗೆ ಭಗವಂತನು ಹಾಗೆಯೇ ಆಗಲೆಂದು ಜ್ವರಕ್ಕೆ ಹೇಳಿದನು. ಅನಂತರ ಶ್ರೀಕೃಷ್ಣನು ಪಂಚಾಗ್ನಿಗಳನ್ನು ಜಯಿಸಿ, ದಾನವಸೈನ್ಯವನ್ನು ನಿರ್ಮೂಲ ಮಾಡಿದನು. ಆಮೇಲೆ ಬಾಣನು ಶಂಕರ, ಕಾರ್ತಿಕೇಯರೇ ಮೊದಲಾದವರಿಂದ ಸಹಿತನಾಗಿ ಕೃಷ್ಣನೊಂದಿಗೆ ಯುದ್ಧಕ್ಕೆ ಬರಲು ; ಕೃಷ್ಣನಿಗೂ ಶಂಕರನಿಗೂ ಘೋರವಾದ ಯುದ್ಧವು ನಡೆಯಿತು. ಈ ಯುದ್ಧದಿಂದ ಸಕಲಲೋಕಗಳೂ ನಡುಗಿದವು; ಮಹಾಪ್ರಳಯ ಉಂಟಾಯಿತೆಂದು ದೇವತೆಗಳು ಭಯಾಕ್ರಾಂತ ರಾದರು. ಶ್ರೀಕೃಷ್ಣನು ಜೃಂಭಕಾಸ್ತ್ರವನ್ನು ಶಂಕರನಿಗೆ ಪ್ರಯೋಗಿಸಲು, ಅಸ್ತ್ರ

ದಿಂದ ರುದ್ರನು ಜೃಂಭಿತನಾದನು. ಅಂದರೆ, ಶರೀರಪರವಶವಾಯಿತು. ಪ್ರಮಥ ಗಣವೂ ದಾನವಸೈನ್ಯವೂ ಸಹ ನಾಶವಾದವು. ಜೃಂಭಾಸ್ತ್ರದಿಂದ ವ್ಯಾಪ್ತನಾದ ಶಂಕರನು, ರಥದಲ್ಲಿ ಸ್ತಬ್ಧನಾದನು. ಗರುಡನ ರೆಕ್ಕೆಗಳ ಹೊಡೆತದಿಂದಲೂ, ಪ್ರದ್ಯುಮ್ನನ ಅಸ್ತ್ರಪ್ರಯೋಗದಿಂದಲೂ ಸಹ ಷಣ್ಮುಖರೇ ಮೊದಲಾದ ಸೈನ್ಯ ವೆಲ್ಲವೂ ಕ್ಷೀಣವಾದುವು. ಅನಂತರ ಬಾಣಾಸುರನು ಸಾರಥಿಯಾದ ನಂದಿಯಿಂದ ಸಿದ್ಧಪಡಿಸಿದ ರಥದಲ್ಲಿ ಕೂತುಕೊಂಡು, ಕೃಷ್ಣನಲ್ಲಿ ಯುದ್ಧಕ್ಕೆ ಬಂದನು. ಸೈನ್ಯ ಪರಿವೃತನಾಗಿ ಬರುವ ಬಾಣನನ್ನು ನೋಡಿ, ಬಲರಾಮನು ಹಲಾಯುಧದಿಂದ ಬಾಣನ ಸಕಲಸೈನ್ಯವನ್ನೂ ನಾಶಮಾಡಿದನು. ಆಗ ಬಾಣನು ಕ್ರೋಧಾನಲ ಪ್ರದೀಪಿತನಾಗಿ, ಕೃಷ್ಣನಲ್ಲಿ ಅತಿದಾರುಣವಾದ ಯುದ್ಧವನ್ನು ಮಾಡಿದನು. ಯುದ್ಧದಲ್ಲಿ ಬಾಣನು ಬಿಟ್ಟ ಸಕಲಾಸ್ತ್ರಗಳನ್ನೂ, ಬಾಣಗಳಿಂದ ಪರಿಹಾರ ಮಾಡಿದನು. ಈ ಪ್ರಕಾರ ಬಾಣಕೃಷ್ಣರು ಯುದ್ಧಮಾಡುತ್ತಾ, ಕೃಷ್ಣನು ಅಮೋಘವಾದ ಬಾಣಗಳನ್ನು ಬಾಣಾಸುರನ ಮೇಲೆ ಪ್ರಯೋಗಿಸಲು ; ಬಾಣನು ಕೃಷ್ಣನ ಬಾಣಗಳನ್ನು ನಾಶಮಾಡಿದನು. ಆಗ ಶ್ರೀಕೃಷ್ಣನು ಕೋಟಿಸೂರ್ಯ ಪ್ರಕಾಶಮಾನವಾದ ಸುದರ್ಶನವನ್ನು ತೆಗೆದುಕೊಂಡು ಬಾಣಾಸುರನ ಬಾಹು ಗಳೆಂಬ ವನವನ್ನು ಕತ್ತರಿಸುವಂತೆ ಚಕ್ರಕ್ಕೆ ಆಜ್ಞಾಪಿಸಲು, ಸುದರ್ಶನವು ಕೃಷ್ಣನಿಂದ ಆಜ್ಞಪ್ತವಾಗಿ, ಬಾಣಾಸುರನ ಸಹಸ್ರಬಾಹುಗಳನ್ನೂ ಕತ್ತರಿಸಿ ಪುನಃ ಕೃಷ್ಣನ ಸಮೀಪಕ್ಕೆ ಬಂತು. ಅನಂತರ ತ್ರಿಪುರಾರಿಯು, ರಕ್ತಪ್ರವಾಹ ದಿಂದ ಕೂಡಿದ ಬಾಣನನ್ನು ನೋಡಿ, ಬಾಣನನ್ನು ಬದುಕಿಸಬೇಕೆಂದು ಕೃಷ್ಣನ ಬಳಿಗೆ ಬಂದು, "ಓ, ಕೃಷ್ಣ! ಜಗನ್ನಾಥ, ನೀನೇ ಪುರುಷೋತ್ತಮನೆಂದು ನಾನು ತಿಳಿದಿರುವೆನು ; ನೀನೇ ಪರಮಾತ್ಮನು ; ಅನಾದಿನಿಧನನು, ದೇವ, ತಿರ್ಯಕ್, ಮನುಷ್ಯ ಶರೀರಗಳನ್ನು ಇಚ್ಛಾಮಾತ್ರದಿಂದ ಗ್ರಹಿಸಿ, ಮನುಷ್ಯರೀತಿ ಯನ್ನು ತೋರಿಸತಕ್ಕವನು ; ಹೇ ವಾಸುದೇವನೇ, ಈ ಬಾಣನಿಗೆ ನಾನು ಅಭಯ ವನ್ನು ಮಾಡಿರುವೆನು, ನನ್ನ ಅಭಯವನ್ನು ಸುಳ್ಳುಮಾಡಬೇಡ. ನನ್ನ ಅಭಯ ದಿಂದ ಬಾಣನು ತೃಪ್ತನಾಗಿರುವನು, ಇವನ ಅಪರಾಧವೇನೂ ಇಲ್ಲ, ನಾನು ಇವನಿಗೆ ವರವನ್ನು ಕೊಟ್ಟಿರುವುದರಿಂದ ನೀನು ಕ್ಷಮಿಸು," ಎಂದು ಗೋವಿಂದ ನನ್ನು ಪ್ರಾರ್ಥಿಸಲು, ಶ್ರೀಕೃಷ್ಣನು ಶಂಕರನನ್ನು ಕುರಿತು ಹೇಳುತ್ತಾನೆ: "ಓ, ಶಂಕರ! ನೀನು ಬಾಣನಿಗೆ ವರವನ್ನು ಕೊಟ್ಟಿರುವುದರಿಂದ ಬಾಣನು ಬದುಕಲಿ, ನೀನು ವರವನ್ನು ಕೊಟ್ಟಿರುವುದರಿಂದಲೇ ಬಾಹುಚ್ಛೇದನವನ್ನು ಮಾಡಿ, ಚಕ್ರವು ನನ್ನ ಕರಸ್ಥವಾಯಿತು. ನೀನು ಕೊಟ್ಟ ವರವು ನಾನೇ ಕೊಟ್ಟದೆಂದು ತಿಳಿ, ನಾನು ನಿನಗೆ ಆತ್ಮವಾದುದರಿಂದ ನನ್ನಿಂದ ಅವಿಭಕ್ತನಾದವನು, ದೇವತಿರ್ಯಙ್ಮ

ನುಷ್ಯಾದಿಗಳಿಂದ ವ್ಯಾಪ್ತನಾದ ಜಗತ್ತೂ, ನನ್ನಿಂದಲೇ ಉತ್ಪನ್ನವಾದುದು. ನೀನು ಶರೀರಮಾತ್ರಭೇದದಿಂದ ಇರುವೆಯೇ ಹೊರತು, ನನ್ನಲ್ಲಿಯೇ ಅಭೇದ ದಿಂದಿರುವೆ, ಅಜ್ಞಾನದಿಂದ ಮೋಹಿತರಾದ ಪುರುಷರು ನೀನೂ ನಾನು ಸೇರಿರದೆ ಭಿನ್ನರಾಗಿರುವವರೆಂಬುದಾಗಿ ತಿಳಿಯುವರು. ಓ, ಶಂಕರ! ನಿನಗೆ ನಾನು ಪ್ರಸನ್ನ ನಾಗಿರುವೆನು. ನೀನು ಪ್ರಯಾಣಮಾಡು ಎಂಬುದಾಗಿ ಕೃಷ್ಣನು ಹೇಳಲು; ಗರುಡನಿಂದ ನಾಗಾಸ್ತ್ರಬಂಧದಿಂದ ಮುಕ್ತನಾದ ಅನಿರುದ್ಧನಿರುವ ಸ್ಥಳಕ್ಕೆ ಬಂದು, ಪತ್ನೀಸಹಿತನಾದ ಅನಿರುದ್ಧನನ್ನು ಗರುಡನ ಮೇಲೆ ಕೂಡಿಸಿಕೊಂಡು, ದ್ವಾರಕಾಪಟ್ಟಣಕ್ಕೆ ಬಂದು, ಪುತ್ರಪೌತ್ರಾದಿಗಳಿಂದಲೂ, ಪತ್ನಿಯರುಗಳಿಂದಲೂ ಸಹ ವಿಹರಿಸಿಕೊಂಡಿದ್ದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಮೂವತ್ತುಮೂರನೆಯ ಅಧ್ಯಾಯವು ಸಮಾಪ್ತಃ

ಮೂವತ್ತನಾಲ್ಕನೆಯ ಅಧ್ಯಾಯವು

"ಮೈತ್ರೇಯರು ಪರಾಶರರನ್ನು ಕುರಿತು ಪ್ರಶ್ನಿಸುತ್ತಾರೆ: ಶ್ರೀಕೃಷ್ಣನು ಮಾನುಷದೇಹವನ್ನು ಹೊಂದಿ, ಇಂದ್ರನನ್ನೂ ರುದ್ರದೇವನನ್ನೂ ಅನೇಕ ದೇವತೆ ಗಳನ್ನೂ ಸಹ ಜಯಿಸಿ, ಆಶ್ಚರ್ಯಕರವಾದ ಕೆಲಸಗಳನ್ನು ಮಾಡಿದನು. ಹೇ ಪರಾಶರ ಭಗವಂತರೇ, ಇದಲ್ಲದೆ ಪರಮಾತ್ಮನು ಇನ್ನೂ ಯಾವ ಕೆಲಸಗಳನ್ನು ಮಾಡಿದ ನೆಂದು ಕೇಳಲು; ಪರಾಶರರು ಹೇಳುತ್ತಾರೆ: "ಎಲೈ ಮೈತ್ರೇಯನೇ! ಜಗನ್ನಾಯಕ ನಾದ ಶ್ರೀಕೃಷ್ಣನು ವಾರಣಾಸೀ ಪಟ್ಟಣವನ್ನು ನಾಶಮಾಡಿದ ವಿಚಾರವನ್ನು ಹೇಳುತ್ತೇನೆ ಕೇಳು: ಭೂಲೋಕದಲ್ಲಿ ಪೌಂಡ್ರಕನೆಂಬ ವಾಸುದೇವನು ಇದ್ದನು. ಇವನನ್ನು ಅಜ್ಞಾನಿಗಳು ಭೂಮಿಯಲ್ಲಿ ಅವತಾರಮಾಡಿದ ಶ್ರೀಮನ್ನಾರಾಯಣ ನೆಂದು ಭ್ರಾಂತರಾಗಿದ್ದರು. ಪೌಂಡ್ರಕನೂ ಕೂಡ, ನಾನೇ ವಾಸುದೇವನು, ಭೂಮಿಯಲ್ಲಿ ಅವತರಿಸಿರುವೆನೆಂದು ತಿಳಿದುಕೊಂಡು, ವಿಷ್ಣು ಚಿಹ್ನೆಯನ್ನು ಕಲ್ಪಿಸಿಕೊಂಡು, ದ್ವಾರಕಾಪಟ್ಟಣಕ್ಕೆ ಕೃಷ್ಣನ ಸಮೀಪಕ್ಕೆ ದೂತರನ್ನು ಕಳುಹಿ ಸಿದನು. ದೂತನು ಕೃಷ್ಣನ ಸಮೀಪಕ್ಕೆ ಬಂದು, "ಎಲೈ ಸ್ವಾಮಿಯೆ! ನಾನು ಪೌಂಡ್ರಕ ವಾಸುದೇವಮಹಾರಾಜನಿಗೆ ದೂತನು; ನಮ್ಮ ಸ್ವಾಮಿಯು ಹೇಳಿದು ದೇನೆಂದರೆ: ನೀನು ಕಲ್ಪಿತವಾದ ಶಂಖಚಕ್ರವನ್ನು ಧರಿಸಿರುವೆ, ನೀನು ಪರಾಕ್ರಮಿ ಯಾಗಿದ್ದರೆ ಕಲ್ಪಿತವಾದ ಚಕ್ರಾದಿಗಳನ್ನು ಬಿಟ್ಟು, ಶಂಖಚಕ್ರಧಾರಿಯಾದ

ನನ್ನಲ್ಲಿ ಯುದ್ಧಮಾಡು; ನಾನು ಸೋತರೆ ಆಗ ನೀನು ನಿನ್ನ ಆಯುಧಗಳನ್ನು ಧರಿಸಬಹುದು; ಅಲ್ಲದೆ ನೀನು ಸ್ತ್ರೀ ಸಮೂಹದಲ್ಲಿ ಜೀವಿಸಿಕೊಂಡಿರಬೇಕೆಂಬ ಆಶೆಯಿದ್ದರೆ, ಅಲ್ಲಿಯೇ ಇರಬಹುದು, ಹಾಗಿಲ್ಲದಿದ್ದರೆ ಯುದ್ಧಕ್ಕೆ ಬಾ" ಎಂದು ಹೇಳಿದನು. ಶ್ರೀಕೃಷ್ಣನು ದೂತನ ವಾಕ್ಯವನ್ನು ಕೇಳಿ, ಪೌಂಡ್ರಕನಿಗೆ ದೂತನಲ್ಲಿ ಹೇಳುತ್ತಾನೆ: ಎಲೈ ದೂತನೇ, ನಿಮ್ಮ ರಾಜನಿಗೆ ಹೇಳು, ಏನನ್ನರೆ ನಾನು ಶಂಖಚಕ್ರಾದಿಗಳಿಂದ ಯುಕ್ತನಾಗಿ ನಾಳೆ ಪೌಂಡ್ರಕನ ಪಟ್ಟಣಕ್ಕೆ ಬರುವೆನು: ನಾನು ಬಂದನಂತರ ಮುಂದಿನ ಕೆಲಸವನ್ನು ಮಾಡೋಣವೆಂಬುದಾಗಿ ಹೇಳಿಕಳುಹಿಸಿದನು. ಮಾರನೇದಿವಸ ಶ್ರೀಕೃಷ್ಣನು ಗರುತ್ಮಂತನಮೇಲೆ ಆರೋಹಣಮಾಡಿಕೊಂಡು, ಕಾಶೀರಾಜನ ಪಟ್ಟಣಕ್ಕೆ ಬಂದನು. ದೂತವಾಕ್ಯವನ್ನು ಕೇಳಿದ ಕಾಶೀರಾಜನು, ಯುದ್ಧಕ್ಕೆ ಸೈನ್ಯವನ್ನು ಸಿದ್ಧಪಡಿಸಿದನು. ಪೌಂಡ್ರಕವಾಸುದೇವನು ಕಾಶೀರಾಜನ ಬಲದಿಂದ ಕೂಡಿ ಕೃಷ್ಣನ ಎದುರಿಗೆ ಯುದ್ಧಕ್ಕೆ ಬಂದನು. ಎತ್ತರವಾದ ರಥದಲ್ಲಿ ಶಂಖಚಕ್ರಗದಾ ಶಾರ್ಙಧಾರಿಯಾಗಿಯೂ, ಪೀತಾಂಬರಧಾರಿಯಾಗಿಯೂ, ಶ್ರೀವತ್ಸ ಚಿಹ್ನೆಯಿಂದ ಅಲಂಕೃತನಾಗಿಯೂ ಇರುವ ಪೌಂಡ್ರಕನನ್ನು ಕೃಷ್ಣನು ನೋಡಿದನು; ಮತ್ತೂ ಕಿರೀಟ ಕುಂಡಲಾದಿ ರತ್ನಗಳಿಂದ ಅಲಂಕೃತನಾಗಿರುವುದನ್ನೂ ಸಹ ನೋಡಿ, ಗರುಡಧ್ವಜನು ಕಾಶೀರಾಜನ ಸೈನ್ಯವನ್ನೆಲ್ಲಾ ಅಮೋಘವಾದ ಅಸ್ತ್ರಗಳಿಂದ ನಾಶಮಾಡಿ, ತನ್ನನ್ನು ವೇಷಗಳಿಂದ ಹಾಸ್ಯಮಾಡುತ್ತಿರುವ ಪೌಂಡ್ರಕನನ್ನು ಕುರಿತು ಹೇಳುತ್ತಾನೆ: "ಎಲೈ ಮೂಢನಾದ ಪೌಂಡ್ರಕನೇ! ನೀನು ದೂತನಲ್ಲಿ ಹೇಳಿಕಳುಹಿಸಿದಂತೆ, ನಾನು ಚಕ್ರವನ್ನು ಬಿಡುತ್ತೇನೆ; ಗದೆಯನ್ನು ಬಿಡುತ್ತೇನೆ; ಗರುಡನನ್ನು ಬಿಡುತ್ತೇನೆಂದು ಹೇಳಿ, ಚಕ್ರಾದಿಗಳನ್ನು ಬಿಟ್ಟನು. ಸುದರ್ಶನವು ಪೌಂಡ್ರಕನ ತಲೆಯನ್ನು ಕತ್ತರಿಸಿತು. ಗದೆಯು ಸಾರಥಿ ಕುದುರೆಗಳನ್ನು ನಾಶಮಾಡಿತು. ಗರುಡನು ಧ್ವಜವನ್ನು ನಾಶಮಾಡಿದನು. ಅನಂತರ ಕೃಷ್ಣನು ಚಕ್ರದಿಂದ ಕಾಶೀರಾಜನ ತಲೆಯನ್ನು ಕತ್ತರಿಸಿ, ಕೃಷ್ಣನು ದ್ವಾರಕಾಪಟ್ಟಣಕ್ಕೆ ಬಂದನು. ಕಾಶೀರಾಜನ ತಲೆಯು ಪಟ್ಟಣದಲ್ಲಿದ್ದ ಮಗನ ಮುಂಭಾಗದಲ್ಲಿ ಬಿದ್ದಿತು. ಮಗನು ತಂದೆಯ ತಲೆಯನ್ನು ನೋಡಿ, ದುಃಖಿತನಾಗಿ ವೃಷಧ್ವಜನನ್ನು ಪ್ರಾರ್ಥಿಸಲು, ವೃಷಧ್ವಜನು ಪ್ರತ್ಯಕ್ಷನಾಗಿ ಎಲೈ ಮಗನೇ, ನಿನಗೇನು ಬೇಕೆನಲು; ಕಾಶೀರಾಜನ ಮಗನು ದ್ವಾರಕಾನಾಥನಾದ ಕೃಷ್ಣನನ್ನು ಸಂಹರಿಸುವ ಹಾಗೆ ಏನಾದರೂ ಉಪಾಯವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳಲು; ಶಂಕರನು ಕೃತ್ಯದಿಂದ ಭೂತವನ್ನು ಸೃಷ್ಟಿಸಿ ಕಳುಹಿಸಿದನು. ಆ ಭೂತವು ಭಯಂಕರವಾಗಿ ಅಗ್ನಿಯಿಂದಾವೃತವಾಗಿ ದ್ವಾರಕಾಪಟ್ಟಣಕ್ಕೆ ಬರುತ್ತಿರುವಾಗ

ಪಟ್ಟಣಸ್ಥರು ಇದನ್ನು ನೋಡಿ ಭಯಪಟ್ಟರು. ಆಗ ಕೃಷ್ಣನು ರುದ್ರನ ಕೃತ್ಯ ವೆಂದು ತಿಳಿದು, ಚಕ್ರಕ್ಕೆ ಆಜ್ಞಾಪಿಸಿದನು. ಚಕ್ರವು ಭೂತವನ್ನು ಓಡಿಸಿಕೊಂಡು ಕಾಶೀರಾಜನ ಪಟ್ಟಣಕ್ಕೆ ಬಂದು, ಭೂತವನ್ನು ನಾಶಮಾಡಿ, ರುದ್ರನ ಪ್ರಮಥ ಗಣಗಳನ್ನೂ ಕಾಶೀರಾಜನ ಮಗನನ್ನೂ ನಾಶಮಾಡಿ, ಕಾಶೀರಾಜನ ಪಟ್ಟಣ ವನ್ನು ಸುಟ್ಟು ಬೂದಿಮಾಡಿತು. ಅನಂತರ ಸುದರ್ಶನವು ಕೃಷ್ಣನ ಕೈಯಿಗೆ ಬಂದು ಸೇರಿತು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಮೂವತ್ತನಾಲ್ಕನೆಯ ಅಧ್ಯಾಯವು ಸಮಾಪ್ತಃ

ಮೂವತ್ತೈದನೆಯ ಅಧ್ಯಾಯವು

"ಮೈತ್ರೇಯರು ಪರಾಶರರನ್ನು ಪುನಃ ಕೇಳುತ್ತಾರೆ: "ಓ ಬ್ರಹ್ಮರ್ಷಿಯೇ! ಶ್ರೀಕೃಷ್ಣನ ಅದ್ಭುತ ಕಾರ್ಯಗಳನ್ನು ಕೇಳಿ ಪರಮಾನಂದಭರಿತನಾದೆನು. ಆದಾಗ್ಯೂ ಪುನಃ ಪುನಃ ಭಗವಂತನ ಲೀಲಾಚರ್ಯೆಗಳನ್ನು ಕೇಳುವುದರಲ್ಲಿ ಆಸಕ್ತ ನಾಗಿರುವೆನು. ಆದರೆ ಬಲಭದ್ರನು ಯಮುನಾಕರ್ಷಣೆಯನ್ನು ಮಾಡಿದ ವೃತ್ತಾಂತವನ್ನೂ ಸಹ ಕೇಳಿದೆನು. ಬಲಭದ್ರನು ಇನ್ಯಾವ ಆಶ್ಚರ್ಯವಾದ ಕಾರ್ಯಗಳನ್ನು ಮಾಡಿದನು ಅದನ್ನು ಅಪ್ಪಣೆಕೊಡಿಸಬೇಕೆಂದು" ಕೇಳಿಕೊಳ್ಳಲು ಆ ಮಾತಿಗೆ ಪರಾಶರರು ಹೇಳುತ್ತಾರೆ: "ಎಲೈ ಮೈತ್ರೇಯನೇ, ಅಪ್ರಮೇಯ ನಾಗಿಯೂ, ಧರಣೀಧರನಾಗಿಯೂ ಇರುವ, ಅನಂತನು ಮಾಡಿದ ಆಶ್ಚರ್ಯ ವಾದ ಕಾರ್ಯಗಳನ್ನು ಹೇಳುತ್ತೇನೆ ಕೇಳು: ಜಾಂಬವತೀಮಗನಾದ ಸಾಂಬನು, ಸ್ವಯಂವರದಲ್ಲಿ ಆಸಕ್ತಳಾದ ದುರ್ಯೋಧನನ ಮಗಳನ್ನು ಬಲಾತ್ಕಾರವಾಗಿ ಅಪಹರಿಸಿದನು. ಇದರಿಂದ ಸುಯೋಧನ ಕರ್ಣಾದಿಗಳು ಮಹಾಕುಪಿತರಾಗಿ ಸಾಂಬನೊಂದಿಗೆ ಯುದ್ಧಮಾಡಿ, ಅಸೂಯಾಪರನಾದ ಕೌರವನು, ಕರ್ಣಾದಿ ಗಳಿಂದ ಸಹಿತನಾಗಿ, ಸಾಂಬನನ್ನು ಬಂಧನದಲ್ಲಿರಿಸಿದನು. ಬಲರಾಮನೇ ಮೊದಲಾದ ಯಾದವರು ಈ ಸಮಾಚಾರವನ್ನು ತಿಳಿದು ಯುದ್ಧಾಸಕ್ತರಾದ ಕಾಲದಲ್ಲಿ, ಬಲರಾಮನು ಕೃಷ್ಣನಿಗೆ ಹೇಳುತ್ತಾನೆ: "ನೀವುಗಳೆಲ್ಲರೂ ಇಲ್ಲಿಯೇ ಇರಿ, ನಾನೊಬ್ಬನೇ ಹೋಗಿ ಸಾಂಬನನ್ನು ಕರೆದುಕೊಂಡು ಬರುತ್ತೇನೆ, ಆ ಕೌರವನು ನನ್ನ ಮಾತನ್ನು ಗೌರವಿಸುವುದರಿಂದ ಯುದ್ಧವು ಅವಶ್ಯಕವಿಲ್ಲ ಎಂಬುದಾಗಿ ಹೇಳಿ ಯಾದವರನ್ನು ನಿಲ್ಲಿಸಿ, ಹಸ್ತಿನಾಪಟ್ಟಣದ ಸಮೀಪಕ್ಕೆ

ಬಂದು ಉದ್ಯಾನವನದಲ್ಲಿಯೇ ನಿಂತನು. ಈ ಸಮಾಚಾರವನ್ನು ತಿಳಿದ ದುರ್ಯೋಧನನು ಬಲರಾಮನನ್ನು ನೋಡಬೇಕೆಂಬುದಾಗಿ ಬಂಧುವರ್ಗದೊಡನೆ ಉದ್ಯಾನ ವನಕ್ಕೆ ಬಂದು, ಬಲರಾಮನಿಗೆ ಅರ್ಘ್ಯಾದಿಗಳನ್ನು ಕೊಟ್ಟು ಸತ್ಕರಿಸಲು, ಬಲರಾಮನು ದುರ್ಯೋಧನನನ್ನು ಕುರಿತು ಹೇಳುತ್ತಾನೆ: "ಎಲೈ ದುರ್ಯೋಧ ನನೇ, ನೀನು ಮಾಡಿದ ಸತ್ಕಾರಗಳು ಬಹುಶ್ಲಾಘ್ಯತಮವಾದುದು ; ನಮ್ಮ ರಾಜ ನಾದ ಉಗ್ರಸೇನನು ಸಾಂಬನನ್ನು ಕಳುಹಿಸಿಕೊಡು ಎಂಬುದಾಗಿ ನಿನಗೆ ಅಪ್ಪಣೆ ಮಾಡಿರುವುದರಿಂದ, ಅವನ ಆಜ್ಞಾಪ್ರಕಾರ ನೀನು ಸಾಂಬನನ್ನು ಕಳುಹಿಸೆಂದು" ಹೇಳಲು ; ಆ ಮಾತಿಗೆ ಕರ್ಣ ದುರ್ಯೋಧನಾದಿಗಳು ಕೋಪಾಕ್ರಾಂತರಾಗಿ ಬಲರಾಮನನ್ನು ಕುರಿತು ಹೇಳುತ್ತಾರೆ: "ಎಲೈ ಹಲಾಯುಧನೇ, ನಿಮ್ಮ ಯದುವಂಶವು ರಾಜ್ಯಾಧಿಪತ್ಯಕ್ಕೆ ಅರ್ಹವಾದುದೇ ಅಲ್ಲ. ಹೀಗಿರುವಲ್ಲಿ ನಿಮಗೆ ರಾಜ್ಯವೆಲ್ಲಿಹುದು ? ಉಗ್ರಸೇನನು ಯಾರು ? ಅವನು ನಮಗೆ ಆಜ್ಞಾಪಿಸಲು ಕಾರಣವೇನು ? ಉಗ್ರಸೇನನು ನಮಗೆ ಆಶ್ರಿತರಾಜನು, ಭೃತ್ಯಭಾವದಲ್ಲಿರತಕ್ಕ ಉಗ್ರಸೇನನು, ಸ್ವಾಮಿಯಾದ ನಮಗೆ ಆಜ್ಞಾಪಿಸುವುದೆಂದರೇನು ? ನೀನು ಮತ್ತು ಕೃಷ್ಣನೂ ಇಬ್ಬರೂ ಮಹಾಪರಾಕ್ರಮಿಗಳೆಂಬ ಗರ್ವದಿಂದ ಹೇಳಿದ ಮಾತು. ಕುರುಕುಲೋತ್ಪನ್ನರಾದ ನಮಗೆ ಯಾದವನು ಆಜ್ಞಾಪಿಸುತ್ತಾನೆಯೇ? ಶ್ವೇತಚ್ಛತ್ರಧಾರಿಗಳಾದ ನಾವು ಅಲ್ಪ ಪರಾಕ್ರಮಿಗಳಾದ ಗೊಲ್ಲರನ್ನು ಹಿಂಸಿಸ ಬಾರದೆಂದು ಉದಾಸೀನವಾಗಿದ್ದುದಕ್ಕೆ ಈ ಯಾದವರು ಮಹಾ ಗರ್ವಿತರಾದರು. ಹೀನರಾದವರನ್ನು ಆಸನ ಭೋಜನಾದಿಗಳಿಂದ ಉಪಚರಿಸಿದರೆ, ಅವರು ಅಂತರಿಕ್ಷ ದಲ್ಲಿರುವರು. ಮುಖ್ಯ ಇವರು ಈ ರೀತಿ ಪರಿಣಮಿಸಿರುವುದು, ನಮ್ಮ ದೋಷ ವಲ್ಲವೇ," ಈ ರೀತಿ ಕೌರವರು ಹೇಳುತ್ತಾ, ಕೃಷ್ಣನ ಮಗನಾದ ಸಾಂಬನನ್ನು ಬಿಡುವುದಿಲ್ಲವೆಂದು ನಿಮ್ಮ ಉಗ್ರಸೇನನಿಗೆ ಹೇಳು ಎಂಬುದಾಗಿ ಹೇಳಿ, ಎಲ್ಲರೂ ಹಸ್ತಿನಾವತಿಗೆ ಹಿಂತಿರುಗಿದರು. ಅನಂತರ ಬಲರಾಮನು ಕ್ರೋಧಪರವಶನಾಗಿ ಹಲಾಯುಧದಿಂದ ಭೂಮಿಯನ್ನು ಹೊಡೆಯಲು, ಭೂಮಿಯು ಒಡೆದು ಬಾಯಿ ಬಿಟ್ಟಿತು. ಈ ಹೊಡೆತದ ಶಬ್ದವು ದಿಕ್ಕುಗಳಿಗೆ ವ್ಯಾಪಿಸಿತು. ಬಲಭದ್ರನು ಕುಪಿತ ನಾಗಿ ಹೇಳುತ್ತಾನೆ : "ಈ ದುರಾತ್ಮರಾದ ಅಸಾರರಾದ, ಕೌರವರ ರಾಜ್ಯವು ನಮಗೆ ಅತ್ಯಂತ ಅಲ್ಪವಾದುದು. ಇವರು ನಮ್ಮನ್ನು ಆಗಂತುಕರಾದ ರಾಜರೆಂದು ಹೀಯಾಳಿಸಿದರು. ಉಗ್ರಸೇನನು ಸುಧರ್ಮ ಸಭೆಯಲ್ಲಿರತಕ್ಕವನು. ದೇವಾಧಿಪ ನಿಗೂ ಲಭಿಸದೆ ಇರತಕ್ಕುದು. ಉಗ್ರಸೇನನು ಪಾರಿಜಾತ ತರುವನ್ನು ಇಟ್ಟು ಕೊಂಡಿರುವನು. ಕೇವಲ ತುಚ್ಛರಾದ ಈ ಮಾನುಷರಾಜರು ನೀಚಾಸನದಲ್ಲಿರ ತಕ್ಕವರು. ನಮ್ಮ ದೊರೆಯಾದ ಉಗ್ರಸೇನನು ಸಕಲಪ್ರಾಣಿಗಳಿಗೂ ದೊರೆಯಾಗಿ

ರಲಿ. ಈಗ ನಾನು ಕೌರವರು ಭೂಮಿಯಲ್ಲಿ ಹುಟ್ಟಲೇ ಇಲ್ಲವೆಂದು ನಾಶಮಾಡಿ, ನಮ್ಮ ಪಟ್ಟಣಕ್ಕೆ ಹೋಗುತ್ತೇನೆ. ಕರ್ಣ, ದುರ್ಯೋಧನ, ದ್ರೋಣ, ಭೀಷ್ಮ, ಬಾಹ್ಲಿಕ, ದುಶ್ಶಾಸನ, ಭೂರಿ, ಭೂರಿಶ್ರವ, ಸೋಮದತ್ತ, ಭೀಮ, ಅರ್ಜುನ, ಯುಧಿಷ್ಠಿರ, ನಕುಲ, ಸಹದೇವ ಇವರುಗಳನ್ನೂ ಕುದುರೆ, ಆನೆ, ರಥ, ಕಾಲಾಳು ಗಳನ್ನೂ ಸಹ ನಾಶಮಾಡಿ, ಪತ್ನೀಸಹಿತನಾದ ಸಾಂಬನನ್ನು ಕರೆದುಕೊಂಡು ನಗರಿಗೆ ಹೋಗುವೆನು; ಅಥವಾ ಈ ಹಸ್ತಿನಾಪಟ್ಟಣವನ್ನೇ ಗಂಗಾನದಿಯಲ್ಲಿ ಮುಳುಗಿಸುತ್ತೇನೆ ಎಂಬುದಾಗಿ ಹೇಳುತ್ತಾ, ಹಲಾಯುಧದಿಂದ ಹಸ್ತಿನಾ ಪಟ್ಟಣವನ್ನು ಎಳೆದನು. ಆಗ ಪಟ್ಟಣವು ನಡುಗಿತು. ಪಟ್ಟಣಸ್ಥರೆಲ್ಲರೂ ಭಯಾ ಕ್ರಾಂತರಾದರು. ಕೌರವರು ಭಯದಿಂದ ಕೂಡಿ ಬಲರಾಮನ ಸಮೀಪಕ್ಕೆ ಬಂದು, "ಓ ಬಲರಾಮನೇ, ಮಹಾಬಲಪರಾಕ್ರಮಿಯೇ ನಮ್ಮ ಅಪರಾಧವನ್ನು ಕ್ಷಮಿಸು, ಕೋಪವನ್ನು ಬಿಟ್ಟು ನಮಗೆ ಪ್ರಸನ್ನನಾಗು. ನಿನ್ನ ಪ್ರಭಾವವನ್ನು ತಿಳಿಯದ ನಮ್ಮ ಅಪರಾಧವನ್ನು ಮನ್ನಿಸೆಂದು ಪ್ರಾರ್ಥಿಸಿ, ಸಾಂಬನನ್ನು ಪತ್ನೀಸಹಿತನಾಗಿ ಬಲರಾಮನಿಗೆ ಕೊಡಲು, ಬಲರಾಮನು ಸಮಾಧಾನಚಿತ್ತ ನಾಗಿ ಭೀಷ್ಮ ದ್ರೋಣಾದಿಗಳಿಗೆ ನಮಸ್ಕರಿಸಿ, ಸಾಂಬನಿಂದ ಸಹಿತನಾಗಿ ದ್ವಾರಕಾ ಪಟ್ಟಣಕ್ಕೆ ಬಂದನು. ಈ ರೀತಿ ಪರಾಕ್ರಮದಿಂದ ಬಲರಾಮನು ಪ್ರಖ್ಯಾತಿಯನ್ನು ಹೊಂದಿದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಮೂವತ್ತೈದನೆಯ ಅಧ್ಯಾಯವು ಸಮಾಪ್ತಃ

ಮೂವತ್ತಾರನೆಯ ಅಧ್ಯಾಯವು

"ಓ ಮೈತ್ರೇಯನೇ, ಬಲರಾಮನ ಪರಾಕ್ರಮವನ್ನು ಇನ್ನೂ ಹೇಳುತ್ತೇನೆ ಕೇಳು: ದೇವಶತ್ರುವಾದ ನರಕಾಸುರನಿಗೆ ಸ್ನೇಹಿತನಾದ ದ್ವಿವಿಧನೆಂಬ ವಾನ ರಾಧಿಪತಿಯು, ನರಕನು ಹತನಾದ ವಿಚಾರವನ್ನು ತಿಳಿದು, ಅಜ್ಞಾನಮೋಹಿತ ನಾದ ದ್ವಿವಿಧನು ಕೃಷ್ಣನನ್ನು ಆಶ್ರಯಿಸಿರುವ ದೇವತೆಗಳನ್ನು ಹಿಂಸಿಸಬೇಕೆಂದು ಯೋಚಿಸಿ, ಭೂಲೋಕದಲ್ಲಿ ಯಜ್ಞಗಳನ್ನು ನಾಶಮಾಡುತ್ತಾ, ಪಟ್ಟಣಗಳನ್ನೂ ವನಗಳನ್ನೂ ಸಹ ಧ್ವಂಸಿಸುತ್ತಾ, ಪರ್ವತಗಳನ್ನು ಸಮುದ್ರದಲ್ಲಿ ಹಾಕುತ್ತಾ, ಸಮುದ್ರವನ್ನು ಕ್ಷೋಭಿಸುತ್ತಾ, ಲೋಕವನ್ನು ಅಲ್ಲೋಲ ಕಲ್ಲೋಲ ಮಾಡು ತ್ತಿದ್ದನು. ಹೀಗಿರುವಾಗ ಒಂದಾನೊಂದು ದಿವಸ ಬಲರಾಮನು ಸ್ತ್ರೀಯರಿಂದ

ಕೂಡಿ ರೈವತೋದ್ಯಾನದಲ್ಲಿ ವಿಹರಿಸುತ್ತಾ, ಪಾನವನ್ನು ಮಾಡಿ, ಸಂತೋಷ ದಿಂದಿರುವಾಗ ದ್ವಿವಿಧನು ಅಲ್ಲಿಗೆ ಬಂದು, ಬಲರಾಮನನ್ನು ನೋಡಿ, ಅವನ ಅಭಿಮುಖದಲ್ಲಿ ನಿಂತು, ಭ್ರೂವಿಕ್ಷೇಪಾದಿ ಕಪಿಚೇಷ್ಟೆಯನ್ನು ಮಾಡಿ, ರೇವತೀ ಮೊದಲಾದ ಸ್ತ್ರೀಯರನ್ನು ಹಾಸ್ಯಮಾಡುತ್ತಾ, ಮದ್ಯಪೂರಿತವಾದ ಗಡಿಗೆಗಳ ನ್ನೊಡೆದುಹಾಕಿದನು. ಇದನ್ನು ನೋಡಿ, ಬಲಭದ್ರನು ಕೋಪಿಸಿಕೊಂಡು, ಕಪಿಯನ್ನು ಹೆದರಿಸಿದನು. ಅನಂತರ ಕಪಿಯು ಹೆದರದೆ, ಪುನಃ ಕಿಲ, ಕಲಾ ಶಬ್ದವನ್ನು ಮಾಡಲು, ಬಲರಾಮನು ಮುಸಲಾಯುಧವನ್ನು ತೆಗೆದುಕೊಂಡು ಕಪಿಯನ್ನು ಹೊಡೆಯುವುದಕ್ಕೆ ಪ್ರಾರಂಭಿಸಲು, ಆಗ ಕಪಿಯು ದೊಡ್ಡದಾದ ಬಂಡೆಯನ್ನು ತೆಗೆದು ಬಲರಾಮನನ್ನು ಹೊಡೆದನು. ಬಲರಾಮನು ಮುಸಲ ದಿಂದ ಕಲ್ಲುಬಂಡೆಯನ್ನು ಪುಡಿಪುಡಿಮಾಡಿದನು. ಅನಂತರ ಕಪಿಯು ಕೋಪ ದಿಂದ ಬಲರಾಮನ ವಕ್ಷಸ್ಥಳವನ್ನು ಮುಷ್ಟಿಯಿಂದ ಹೊಡೆದನು. ಆಗ ಬಲ ರಾಮನು ಮುಷ್ಟಿಯಿಂದ ಕಪಿಯನ್ನು ಹೊಡೆಯಲು; ಕಪಿಯು ನೆಲದ ಮೇಲೆ ಬಿದ್ದು ಪ್ರಾಣವನ್ನು ಬಿಟ್ಟಿತು. ಆಗ ದೇವತೆಗಳು ಹರ್ಷಯುಕ್ತರಾಗಿ ಅಸುರೋಪ ಕಾರಿಯಾದ ದ್ವಿವಿಧನನ್ನು ಸಂಹರಿಸಿದ ಬಲರಾಮನಿಗೆ ಪುಷ್ಪವೃಷ್ಟಿಯನ್ನು ಕರೆದು ಬಲರಾಮನನ್ನು ಸ್ತುತಿಸಿದರು. ಈ ರೀತಿ ಬಲರಾಮನು ಅನೇಕ ಆಶ್ಚರ್ಯಕರ ವಾದ ಕೆಲಸಗಳನ್ನು ಮಾಡುತ್ತಿದ್ದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಮೂವತ್ತಾರನೆಯ ಅಧ್ಯಾಯವು ಸಮಾಪ್ತಃ

ಮೂವತ್ತೇಳನೆಯ ಅಧ್ಯಾಯವು

"ಈ ಪ್ರಕಾರ ಶ್ರೀಕೃಷ್ಣನು ಬಲಭದ್ರಸಹಿತನಾಗಿ ದೈತ್ಯರುಗಳನ್ನು ಸಂಹರಿಸಿ, ಅನೇಕ ದುಷ್ಟರಾದ ರಾಜರನ್ನೂ ಸಹ ನಾಶಮಾಡಿ, ಅರ್ಜುನಸಹಿತನಾಗಿ ಅನೇಕ ಅಕ್ಷೋಹಿಣೀ ಸೈನ್ಯವನ್ನು ಸಂಹರಿಸಿ, ಭೂಭಾರವನ್ನು ತಪ್ಪಿಸಿದನು. ಅನಂತರ ಬ್ರಾಹ್ಮಣ ಶಾಪದ ನೆವದಿಂದ ಯದುಕುಲವನ್ನೂ ನಾಶಮಾಡಿ ದ್ವಾರಕಾಪಟ್ಟಣ ವನ್ನೂ ಮಾನುಷಜನ್ಮವನ್ನೂ ಸಹ ಬಿಟ್ಟು, ಸ್ವಸ್ಥಾನವಾದ ವೈಕುಂಠಲೋಕ ವನ್ನು ಹೊಂದಿದನು ಎಂಬುದಾಗಿ ಪರಾಶರರು ಹೇಳಲು; ಮೈತ್ರೇಯರು ಕೇಳು ತ್ತಾರೆ:

"ಬ್ರಾಹ್ಮಣರು ಶಾಪವನ್ನು ಕೊಡಲು ಕಾರಣವೇನು? ಮಾನುಷ ಜನ್ಮವನ್ನು

ಯಾವ ರೀತಿ ಬಿಟ್ಟನು ? ಇವುಗಳನ್ನು ನನಗೆ ವಿಸ್ತಾರವಾಗಿ ಹೇಳಬೇಕು" ಎನಲು ; ಪರಾಶರರು ಹೇಳುತ್ತಾರೆ: "ಎಲೈ ಮೈತ್ರೇಯನೇ, ವಿಶ್ವಾಮಿತ್ರ, ಕಣ್ವ, ನಾರದಮಹರ್ಷಿಗಳು ಒಂದಾನೊಂದು ದಿವಸ ಪಿಂಡಾರಕವೆಂಬ ಪುಣ್ಯಕ್ಷೇತ್ರದಲ್ಲಿ ಬರುತ್ತಿದ್ದರು. ಆಗ ಯೌವನ ಮದೋದ್ರಿಕ್ತರಾದ ಯಾದವರು, ಸರ್ವೇಶ್ವರ ಸಙ್ಕಲ್ಪಾನುಸಾರ ಪ್ರೇರಿತರಾಗಿ, ಜಾಂಬವತೀ ಮಗನಾದ ಸಾಂಬನಿಗೆ ಸ್ತ್ರೀವೇಷ ವನ್ನು ಹಾಕಿ, ಮಹರ್ಷಿಗಳನ್ನು ನೋಡಿ, ನಮಸ್ಕರಮಾಡಿ, ಈ ಸ್ತ್ರೀಯು ಯಾವುದನ್ನು ಪ್ರಸವಿಸುವಳೆಂದು ಕೇಳಲು ; ಮಹರ್ಷಿಗಳು ಜ್ಞಾನದೃಷ್ಟಿಯಿಂದ ಯೋಚಿಸಿ, ಕುಪಿತರಾಗಿ, ಈ ಸ್ತ್ರೀಯು ಯಾದವಸಮೂಹಕ್ಕೆಲ್ಲಾ ಸಂಹಾರ ರೂಪವಾಗಿರುವ, ಯಾದವಕುಲವೇ ನಿರ್ಮೂಲವಾಗುವ, ಮುಸಲವನ್ನು ಪ್ರಸವಿಸುವಳೆಂದು ಹೇಳಿದರು. ಆಗ ಯಾದವರು ಮಹರ್ಷಿಗಳು ಹೇಳಿದ ಮಾತನ್ನು ಕೇಳಿ, ಉಗ್ರಸೇನನ ಬಳಿಗೆ ಬಂದು, ನಡೆದ ವೃತ್ತಾಂತವನ್ನು ಹೇಳಿ ದರು. ಅನಂತರ ಸಾಂಬನು ಮಹರ್ಷಿಗಳು ಹೇಳಿದ ಪ್ರಕಾರ ಮುಸಲವನ್ನು ಹುಡಿಮಾಡಿ ಚೂರುಗಳನ್ನು ಸಮುದ್ರಕ್ಕೆ ಹಾಕಿ ಎಂದು ಆಜ್ಞಾಪಿಸಲು ; ಯಾದವರು ಮುಸಲದ ಚೂರನ್ನು ಸಮುದ್ರಕ್ಕೆ ಹಾಕಿದರು. ಆ ಚೂರುಗಳಿಂದ ಎರಕವೆಂಬ ವಜ್ರಪ್ರಾಯವಾದ ಹುಲ್ಲುಗಳು ಹುಟ್ಟಿದವು. ಇನ್ನು ಕೆಲವು ಚೂರು ಗಳು ಬಾಣಶಲ್ಯಗಳಾದವು. ಈ ಶಲ್ಯವನ್ನು ಮೀನುಗಳು ನುಂಗಿದವು. ಆ ಮೀನು ಗಳನ್ನು ಜರಾನಾಮಕನಾದ ವ್ಯಾಧನು ಹಿಡಿದು, ಭೇದನಮಾಡಿದ ಕಾಲದಲ್ಲಿ ಅದರ ದೇಹದಲ್ಲಿದ್ದ ಶಲ್ಯವನ್ನು ತೆಗೆದುಕೊಂಡನು. ಅನಂತರ ದೇವತೆಗಳಿಂದ ಪ್ರೇರಿತ ನಾದ ವಾಯುವು ಶ್ರೀಕೃಷ್ಣನ ಸಮೀಪಕ್ಕೆ ಬಂದು, ನಮಸ್ಕರಿಸಿ ಏಕಾಂತದಲ್ಲಿ ಹೇಳುತ್ತಾನೆ: "ಓ ಜಗನ್ನಾಥನೇ ಸಕಲ ದೇವತೆಗಳಿಂದ ಪರಿವೃತನಾದ ಇಂದ್ರನು ವಿಜ್ಞಾಪಿಸಿಕೊಂಡುದನ್ನು ಹೇಳುತ್ತೇನೆ, ಕೇಳು: ನೀನು ದೇವತೆಗಳ ಇಷ್ಟಾನುಸಾರ ಭೂಭಾರಾವತರಣಾರ್ಥನಾಗಿ ಮಾನುಷದೇಹವನ್ನು ಹೊಂದಿ ನೂರ ಇಪ್ಪತ್ತೈದು ವರ್ಷಗಳಾದುವು. ಭೂಭಾರವನ್ನು ಪರಿಹಾರಮಾಡಿದ ಹಾಗಾಯಿತು. ದೇವತೆಗಳ ಇಷ್ಟವನ್ನು ನೆರವೇರಿಸಿದ ಹಾಗಾಯಿತು. ಇನ್ನು ಮೇಲೆ ಸ್ವರ್ಗವನ್ನು ಹೊಂದಬಹುದು. ಅಥವಾ ಈ ಮಾನುಷ ಜನ್ಮದಲ್ಲಿ ಎಷ್ಟು ದಿವಸ ಅಭಿರುಚಿಯಿರುವುದೋ ಅಷ್ಟು ದಿವಸ ಪರಿಯಂತರ ಇರಬಹುದು" ಎಂದು ವಿಜ್ಞಾಪಿಸಲು ; ಭಗವಂತನು ಎಲೈ ವಾಯುವೇ, ನೀನು ಹೇಳಿದ ಮಾತು ನಿಜ ವಾದುದು ; ಇದನ್ನು ನಾನು ತಿಳಿದಿರುವೆನು ; ಈ ಯಾದವ ಸಮೂಹವು ಬಹಳ ವಿಸ್ತಾರವಾಗಿರುವುದರಿಂದ ಈ ಭಾರವನ್ನು ಇನ್ನು ಏಳು ದಿವಸದಲ್ಲಿ ನಾಶಮಾಡಿ, ಸ್ವಸ್ಥಾನವನ್ನು ಹೊಂದುವೆನು. ಇದನ್ನು ದೇವತೆಗಳಿಗೆ ಹೇಳು ಎಂಬುದಾಗಿ

ಭಗವಂತನು ಹೇಳಲು, ವಾಯುವು ಶ್ರೀಕೃಷ್ಣನಿಗೆ ನಮಸ್ಕಾರಮಾಡಿ, ದೇವಲೋಕವನ್ನು ಹೊಂದಿದನು. ಅನಂತರ ಶ್ರೀಕೃಷ್ಣನು ದ್ವಾರಕಾಪಟ್ಟಣದಲ್ಲಿ ಅನೇಕ ಮಹೋತ್ಪಾತಗಳನ್ನು ನೋಡಿ, ಯಾದವರ ನಾಶವನ್ನು ತಿಳಿದು, ವೃದ್ಧರಾದ ಯಾದವರಿಗೆ ಹೇಳುತ್ತಾನೆ: "ಈಗ ನಮಗೆ ವಿನಾಶವು ಪ್ರಾಪ್ತವಾಗುವುದು; ದ್ವಾರಕಾನಗರಿಯು ಸಮುದ್ರದ ಪಾಲಾಗುವುದು; ಆದುದರಿಂದ ಈ ಪಟ್ಟಣವನ್ನು ಬಿಟ್ಟು ಪ್ರಭಾಸಕ್ಷೇತ್ರದಲ್ಲಿ ವಾಸಮಾಡೋಣವೆಂದು ಹೇಳಿದನು. ಆಗ ಮಹಾ ಭಾಗವತೋತ್ತಮನಾದ ಉದ್ಧವನು ಕೃಷ್ಣನಿಗೆ ನಮಸ್ಕಾರಮಾಡಿ, "ಓ ಪರಮಾತ್ಮನೇ, ನಾನೇನು ಮಾಡಬೇಕು? ನಾನು ಎಲ್ಲಿ ವಾಸಮಾಡಲಿ; ನಮ್ಮ ಯಾದವ ಕುಲವೆಲ್ಲವೂ ನಾಶವಾಗುವುದೇ" ಎಂದು ಕೇಳಲು, ಶ್ರೀಕೃಷ್ಣನು ಹೇಳುತ್ತಾನೆ: "ಓ ಉದ್ಧವನೇ; ನೀನು ಬದರಿಕಾಶ್ರಮದಲ್ಲಿ ವಾಸಮಾಡುತ್ತಾ, ಭಗವಂತನನ್ನು ಧ್ಯಾನಿಸುತ್ತಾ ಇರು. ಅನಂತರ ನನ್ನ ಲೋಕವನ್ನು ಹೊಂದುವೆ" ಎಂದು ಹೇಳಲು; ಉದ್ಧವನು ಕೃಷ್ಣನ ಆಜ್ಞಾಪ್ರಕಾರ ನರನಾರಾಯಣ ಸ್ಥಾನವನ್ನು ಹೊಂದಿದನು. ಅನಂತರ ಸಕಲ ಯಾದವರೂ ರಥಾರೋಹಣಮಾಡಿಕೊಂಡು ರಾಮಕೃಷ್ಣರೊಡನೆ, ಪ್ರಭಾಸಕ್ಷೇತ್ರಕ್ಕೆ ಪ್ರಯಾಣಮಾಡಿದರು. ಅಲ್ಲಿ ಕೃಷ್ಣನಿಂದ ಪ್ರೇರಿತರಾದ ಯಾದವರು, ಮದ್ಯಪಾನಾಸಕ್ತರಾಗಿ ಪರಸ್ಪರ ಕಲಹಗಳನ್ನು ಮಾಡುತ್ತಾ, ಯುದ್ಧಕ್ಕೆ ಆರಂಭಿಸಿ, ಸಮುದ್ರತೀರದಲ್ಲಿ ಮುಸಲದಿಂದ ಉತ್ಪನ್ನವಾದ ಎರಕಹುಲ್ಲುಗಳಿಂದ ಹೊಡೆದಾಡಿದರು. ಇದರಿಂದ ಅನೇಕ ಯಾದವರು ಹತರಾದರು. ಶ್ರೀಕೃಷ್ಣನು ದಾರುಕನಿಂದಲೂ, ಬಲಭದ್ರನಿಂದಲೂ ಸಹಿತನಾಗಿ ಸಮುದ್ರತೀರಕ್ಕೆ ಬಂದನು. ಆಗ ಶಂಖ ಚಕ್ರಾದಿಗಳು ಆದಿತ್ಯಪಥದಲ್ಲಿ ಪ್ರಯಾಣಮಾಡಿದವು. ಅನಂತರ ಬಲರಾಮನು ಆದಿಶೇಷನಾಗಿ ಸಮುದ್ರರಾಜನಿಂದ ಅರ್ಘ್ಯಾದಿಗಳನ್ನು ಹೊಂದಿ, ಸಮುದ್ರವನ್ನು ಪ್ರವೇಶಮಾಡಿದನು. ಇದನ್ನು ನೋಡಿದ ಕೃಷ್ಣನು ದಾರುಕನಿಗೆ ಹೇಳುತ್ತಾನೆ: "ನೀನು ಹೋಗಿ, ವಸುದೇವ ಉಗ್ರಸೇನರಿಗೆ ನಮ್ಮಿಬ್ಬರ ನಿರ್ಯಾಣವನ್ನು ಹೇಳು. ಅಲ್ಲದೆ ಅರ್ಜುನನು ಬರುವವರೆಗೂ ದ್ವಾರಕಾನಗರಿಯಲ್ಲಿದ್ದು, ಅನಂತರ ಅರ್ಜುನನ ಜೊತೆಯಲ್ಲಿ ಪ್ರಯಾಣ ಮಾಡು; ಆಗ ಪಟ್ಟಣವು ಸಮುದ್ರದಲ್ಲಿ ಮುಳುಗಿ ಹೋಗುವುದು ಎಂಬುವುದಾಗಿ ಹೇಳು, ನೀನು ಜಾಗ್ರತೆಯಾಗಿ ಹೋಗಿ ಅರ್ಜುನನನ್ನು ಕರೆದುಕೊಂಡು ಬಂದು, ಉಳಿದ ಯಾದವರನ್ನೂ ಸ್ತ್ರೀಯರನ್ನೂ ಸಹ ಸಂರಕ್ಷಿಸಬೇಕೆಂದು ನಾನು ಹೇಳಿದೆನೆಂದು ತಿಳಿಸು" ಎಂದು ಹೇಳಲು; ದಾರುಕನು ಕೃಷ್ಣನಿಗೆ ನಮಸ್ಕಾರಮಾಡಿ, ದ್ವಾರಕಾಪಟ್ಟಣಕ್ಕೆ ಬಂದು, ಕೃಷ್ಣನು ಹೇಳಿದ ಮಾತನ್ನು ಉಗ್ರಸೇನಾದಿಗಳಿಗೆ ಹೇಳಿ, ವಜ್ರನಿಗೆ ಯೌವರಾಜ್ಯಾಭಿಷೇಕವನ್ನು ಮಾಡಿ, ಅರ್ಜುನನನ್ನು ಕರೆದು

ಕೊಂಡು ಬರುವುದಕ್ಕೆ ಹೊರಟನು. ರಾಜ ಸಂತಾನಾಭಿವೃದ್ಧಿಗಾಗಿ ವಜ್ರನೂ, ಸಂತತ ವಿದ್ಯಾಭಿವೃದ್ಧಿಗಾಗಿ ಉದ್ಧವನೂ ಸಹ ಉಳಿದರು. ಅನಂತರ ಶ್ರೀಕೃಷ್ಣನು ಯೋಗಾಸಕ್ತನಾದನು. ಹಿಂದೆ ಒಂದಾನೊಂದುಕಾಲದಲ್ಲಿ ದೂರ್ವಾಸಮಹರ್ಷಿಯು ಅತಿಥಿಯಾಗಿ ಕೃಷ್ಣನಲ್ಲಿ ಬರಲು, ಕೃಷ್ಣನು ದೂರ್ವಾಸ ಋಷಿಗೆ ಅತಿಥಿ ಸತ್ಕಾರವನ್ನು ಮಾಡಿದನು. ಆಗ ದೂರ್ವಾಸ ಋಷಿಯು ಕೃಷ್ಣನನ್ನು ಕುರಿತು, ನಿನ್ನ ಸರ್ವಾಂಗವನ್ನೂ ನನ್ನ ಉಚ್ಛಿಷ್ಟದಿಂದ ಲೇಪಿಸೆಂದು ಹೇಳಲು, ಕೃಷ್ಣನು ಬ್ರಾಹ್ಮಣೋಚ್ಛಿಷ್ಟವನ್ನು ಕಾಲಿನಿಂದ ಸ್ಪರ್ಶಮಾಡಕೂಡದೆಂದು ತಿಳಿದು, ಕಾಲನ್ನು ಹೊರತಾಗಿ ತನ್ನ ದೇಹವನ್ನು ದೂರ್ವಾಸಮಹರ್ಷಿಯ ಉಚ್ಛಿಷ್ಟದಿಂದ ಲೇಪಿಸಿದನು. ಇದನ್ನು ನೋಡಿ ದೂರ್ವಾಸನು ಕೋಪಗೊಂಡು, ನಿನಗೆ ಕಾಲಿನಿಂದ ಮರಣವುಂಟಾಗಲೆಂದು ಶಾಪವನ್ನು ಕೊಟ್ಟಿದ್ದನು. ಶ್ರೀಕೃಷ್ಣನು ಬ್ರಾಹ್ಮಣ ವಚನವನ್ನು ಸಂಮಾನಮಾಡಬೇಕೆಂದು ಯೋಚಿಸಿ, ಸ್ವಸ್ತಿಕಾಸನದಲ್ಲಿ ಕೂತು ಕೊಂಡನು. ಆಗ ಜರಾ ಎಂಬುವನು, ಮುಸಲದಿಂದ ಉತ್ಪನ್ನವಾದ ಬಾಣಶಲ್ಯ ದಿಂದ ದೂರದಲ್ಲಿ ಕೃಷ್ಣನ ಕಾಲನ್ನು ಮೃಗವೆಂದು ತಿಳಿದು ಹೊಡೆದನು. ಅನಂತರ ವ್ಯಾಧನು ಚತುರ್ಬಾಹುಯುಕ್ತನಾದ ಕೃಷ್ಣನೆಂದು ತಿಳಿದು, ಕೃಷ್ಣನ ಸಮೀಪಕ್ಕೆ ಬಂದು, ನಮಸ್ಕಾರಮಾಡಿ, "ನಾನು ಅವಿಜ್ಞತೆಯಿಂದ ಮಾಡಿದ ಅಪರಾಧವನ್ನು ಕ್ಷಮಿಸಿ, ಪ್ರಸನ್ನನಾಗು" ಎಂದು ಪ್ರಾರ್ಥಿಸಲು ; ಕೃಷ್ಣನು ವ್ಯಾಧನನ್ನು ಕುರಿತು, "ಎಲೈ ವ್ಯಾಧನೇ ನೀನು ನನ್ನ ಅನುಗ್ರಹದಿಂದ ಸ್ವರ್ಗಲೋಕವನ್ನು ಹೊಂದು" ಎಂದು ಹೇಳಲು; ಲುಬ್ಧಕನು ವಿಮಾನಾರೂಢನಾಗಿ, ಸ್ವರ್ಗಲೋಕವನ್ನು ಹೊಂದಿದನು. ಅನಂತರ ಶ್ರೀಕೃಷ್ಣನು ಸಾತ್ವಿಕ ರಾಜಸತಾಮಸವಾದ ಮರುಗತಿಯನ್ನು ಅತಿಕ್ರಮಿಸಿ, ಮಾನುಷದೇಹವನ್ನು ಬಿಟ್ಟು, ಪರಮಪದವನ್ನು ಕುರಿತು ಪ್ರಯಾಣಮಾಡಿದನು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಮೂವತ್ತೇಳನೆಯ ಅಧ್ಯಾಯವು ಸಮಾಪ್ತಃ

ಮೂವತ್ತೆಂಟನೆಯ ಅಧ್ಯಾಯವು

ದಾರುಕನಿಂದ ಸಹಿತನಾದ ಅರ್ಜುನನು ದ್ವಾರಕಾಪಟ್ಟಣಕ್ಕೆ ಬಂದು, ಸಮುದ್ರತೀರದಲ್ಲಿ ರಾಮಕೃಷ್ಣರ ದೇಹವನ್ನು ನೋಡಿ, ದುಃಖಾಕ್ರಾಂತನಾಗಿ, ರಾಮಕೃಷ್ಣರಿಗೆ ಸಂಸ್ಕಾರಮಾಡಿದನು. ಅನಂತರ ರುಕ್ಮಿಣೀ ಮೊದಲಾದ ಎಂಟು

ಜನ ಪಟ್ಟಮಹಿಷಿಗಳು ಕೃಷ್ಣ ವಿರಹದಿಂದ ಅಗ್ನಿಪ್ರವೇಶ ಮಾಡಿದರು. ಉಗ್ರಸೇನ, ವಸುದೇವ, ದೇವಕೀ, ರೋಹಿಣೀ ಮೊದಲಾದವರು ಕೃಷ್ಣವೃತ್ತಾಂತವನ್ನು ತಿಳಿದು, ಅಗ್ನಿಯಲ್ಲಿ ಪ್ರವೇಶಿಸಿದರು. ಅನಂತರ ಅರ್ಜುನನು ಸತ್ತವರಿಗೆ ಪ್ರೇತ ಕಾರ್ಯಗಳನ್ನು ಮಾಡಿ ವಜ್ರನನ್ನೂ ಅನೇಕ ಸ್ತ್ರೀಯರನ್ನೂ ಸಹ ಕರೆದು ಕೊಂಡು, ದ್ವಾರಕಾಪಟ್ಟಣದಿಂದ ಹೊರಟನು. ಕೃಷ್ಣನು ಹೊರಟುಹೋದ ನಂತರ ಸುಧರ್ಮವೆಂಬ ದೇವಸಭೆಯೂ, ಪಾರಿಜಾತವೂ ಸಹ ಸ್ವರ್ಗಲೋಕ ವನ್ನು ಹೊಂದಿದವು. ಕೃಷ್ಣನು ಯಾವ ದಿವಸ ಮರ್ತ್ಯಲೋಕವನ್ನು ಬಿಟ್ಟನೋ, ಆ ದಿವಸ ಮಲಿನಾಂಗನಾದ ಕಲಿಯು ಪ್ರವೇಶಿಸಿದನು. ದ್ವಾರಕಾಪಟ್ಟಣವು ಸಮುದ್ರದಲ್ಲಿ ಮುಳುಗಿತು. ಆದರೆ ಕೃಷ್ಣನು ವಾಸಮಾಡುತ್ತಿದ್ದ ಗೃಹ ಮಾತ್ರ ಮುಳುಗಲಿಲ್ಲ; ಈಗಲೂ ಆ ಸ್ಥಳವು ಭಗವಂತನು ಅಲ್ಲಿ ವಾಸಿಸುತ್ತಿರುವನೆಂದು, ಮಹಾ ಪುಣ್ಯಕ್ಷೇತ್ರವಾಗಿರುವುದು. ದರ್ಶನಮಾತ್ರದಿಂದಲೇ ಸಕಲ ಪಾಪ ಪರಿಹಾರವಾಗಿರುವುದು. ಅರ್ಜುನನು ಬಹು ಧಾನ್ಯ ಧನಾದಿಗಳಿಂದ ಕೂಡಿದ ಪಂಚನದವೆಂಬ ದೇಶದಲ್ಲಿ ವಾಸಮಾಡಿ, ಮುಂದಕ್ಕೆ ಪ್ರಯಾಣಮಾಡತಕ್ಕ ಕಾಲದಲ್ಲಿ, ದುಷ್ಟರಾದ ಕಳ್ಳರು ಗುಂಪುಕೂಡಿ, ಧನುರ್ಧಾರಿಯಾದ ಅರ್ಜುನ ನನ್ನೂ, ಹತನಾಥರಾದ ಸ್ತ್ರೀಯರನ್ನೂ ಸಹ ನೋಡಿ, ಪರಸ್ಪರ ಮಾತನಾಡಿ ಕೊಳ್ಳುತ್ತಾರೆ: ಧನುರ್ಧಾರಿಯಾದ ಅರ್ಜುನನೊಬ್ಬನು ನಮ್ಮನ್ನು ಲಕ್ಷ್ಯ ಮಾಡದೆ ಸ್ತ್ರೀಯರೊಂದಿಗೆ ಪ್ರಯಾಣ ಮಾಡುವನು. ಇವನು ಭೀಷ್ಮ, ದ್ರೋಣ, ಜಯದ್ರಥರೇ ಮೊದಲಾದ ಮಹಾವೀರರನ್ನು ಸಂಹರಿಸಿದ ಗರ್ವದಿಂದ ನಮ್ಮನ್ನು ಮಾತನಾಡಿಸದೆ ಹೋಗುವುದರಿಂದ ಇವನನ್ನು ನಾವುಗಳು ಮಣ್ಣು ಕಲ್ಲುಗಳಿಂದ ಹೊಡೆದು ಸ್ತ್ರೀಯರನ್ನು ಅಪಹರಿಸಬೇಕೆಂದು ಮಾತನಾಡಿಕೊಂಡು, ಅರ್ಜುನನ ಎದುರಿಗೆ ಬಂದು ಮಣ್ಣು ಹೆಂಟೆಗಳಿಂದ ಹೊಡೆದರು. ಆಗ ಅರ್ಜುನನು ಕಳ್ಳ ರನ್ನು ಹೆದರಿಸಿದಾಗ್ಯೂ ಅವರು ಧೈರ್ಯಯುಕ್ತರಾಗಿ ಅರ್ಜುನನ ಧನವನ್ನೂ ಸ್ತ್ರೀಯರನ್ನೂ ಸಹ ಅಪಹರಿಸಿದರು. ಆಗ ಅರ್ಜುನನು ಗಾಂಡೀವವನ್ನು ತೆಗೆದು ಕೊಳ್ಳಲು ಪ್ರಯತ್ನಪಟ್ಟು ಧನುಸ್ಸನ್ನು ಎತ್ತಲು, ಸಾಮರ್ಥ್ಯವಿಲ್ಲದಿದ್ದರೂ ಬಹಳ ಪ್ರಯಾಸದಿಂದ ಧನುಸ್ಸನ್ನು ಎತ್ತಿದಾಗ್ಯೂ, ಬಾಣವನ್ನು ಬಿಡಲು ಸಮರ್ಥನಾಗ ಲಿಲ್ಲ. ಆಗ ಅರ್ಜುನನು ಖಿನ್ನನಾಗಿ ಅಸ್ತ್ರಗಳಿಂದ ಅನೇಕ ರಾಜರನ್ನು ಸಂಹಾರ ಮಾಡಿ, ಈಗ ಈ ದುಷ್ಟರಾದ ಕಳ್ಳರನ್ನು ನಾಶಮಾಡಲು ನನ್ನ ಅಸ್ತ್ರಗಳೆಲ್ಲವೂ ನಿರ್ವೀರ್ಯಗಳಾದವು. ಶ್ರೀಕೃಷ್ಣನು ಸಹಾಯಕನಾಗಿದ್ದುದರಿಂದ ನಮ್ಮ ಪರಾ ಕ್ರಮವು ಸ್ತುತ್ಯವಾಗಿದ್ದಿತು. ಪ್ರಕೃತ ದೈವಬಲವಿಲ್ಲದ್ದರಿಂದ ನಿಸ್ತೇಜಸ್ಕನಾಗಿರುವ ನೆಂದು ಚಿಂತಾಕ್ರಾಂತನಾದಕಾಲದಲ್ಲಿ, ಕಳ್ಳರು ಸಕಲ ವಸ್ತುಗಳನ್ನೂ ಅಪಹರಿಸಿ

ಓಡಿಹೋದರು. ಅನಂತರ ಅರ್ಜುನನು ಮಹಾ ದುಃಖಾವಿಷ್ಟನಾಗಿ ಅಮೋಘವಾದ ಧನುಸ್ಸು, ರಥ, ಕುದುರೆ, ಅಸ್ತ್ರ ಇವುಗಳೆಲ್ಲವೂ ಅಶ್ರೋತ್ರಿಯನಾದ ಬ್ರಾಹ್ಮಣನಿಗೆ ದಾನವನ್ನು ಕೊಟ್ಟಂತೆ, ಒಂದು ನಿಮಿಷದಲ್ಲಿ ನಾಶವಾದುವು. ನಾನು ಮಹಾಪರಾಕ್ರಮಿಯಾದಾಗ್ಯೂ, ಮಹಾತ್ಮನಾದ ಶ್ರೀಕೃಷ್ಣನ ಅನುಗ್ರಹವು ತಪ್ಪಿದುದರಿಂದ ದುಷ್ಟರಾದ ದಸ್ಯುಗಳನ್ನು ಸಂಹರಿಸಲು ಸಾಮರ್ಥ್ಯವಿಲ್ಲದಂತಾಯಿತು ಎಂಬುದಾಗಿ ರೋದನ ಮಾಡುತ್ತಾ, ಇಂದ್ರಪ್ರಸ್ಥಪಟ್ಟಣವನ್ನು ಪ್ರವೇಶಿಸಿ, ವನಚಾರಿಯಾದ ವೇದವ್ಯಾಸ ಮಹರ್ಷಿಗಳನ್ನು ನೋಡಿ, ನಮಸ್ಕರಿಸಿದನು. ವ್ಯಾಸರು ನಮಸ್ಕರಿಸಿದ ಅರ್ಜುನನನ್ನು ನೋಡಿ ಹೇಳುತ್ತಾರೆ: ಎಲೈ ಅರ್ಜುನನೇ, ನೀನು ಬ್ರಹ್ಮಹತ್ಯವನ್ನು ಮಾಡಿದವನಂತೆಯೂ, ಛಾಯಾರಹಿತನಾಗಿಯೂ, ಆಶಾಭಂಗದಿಂದ ದುಃಖಿಯಾದವನಂತೆಯೂ, ನಿರಾಶ್ರಯನಾಗಿಯೂ, ಸಂತಾನಾಪೇಕ್ಷಿಯಾದವನು. ಸ್ತ್ರೀಯನ್ನು ಯಾಚಿಸಿ ರತಿಯನ್ನು ಹೊಂದದೆ ಕಾಂತಿರಹಿತನಾದಂತೆಯೂ, ಮೃಷ್ಟಾನ್ನವನ್ನು ಬ್ರಾಹ್ಮಣರಿಗೆ ಕೊಡದೆ ತಾನೊಬ್ಬನೇ ಊಟ ಮಾಡಿದವನಂತೆಯೂ, ಕೃಪಣನಾದವನ ಧನವನ್ನು ಅಪಹರಿಸಿದವನಂತೆಯೂ ಸಹ ಕಾಣುವೆ. ಅಲ್ಲದೆ ಶೂರ್ಪದ ಗಾಳಿಯಿಂದ ಹಾರಿಹೋಗಿ, ಪರಾಜಿತನಾಗಿರುವೆ ಎಂದು ಕೇಳಲು; ಅರ್ಜುನನು ಹೇಳುತ್ತಾನೆ: "ಓ ಭಗವಂತನೇ! ನಮಗೆ ಆಶ್ರಯನಾದ ಶ್ರೀಕೃಷ್ಣನು ಬಲ, ತೇಜಸ್ಸು, ವೀರ್ಯ, ಪರಾಕ್ರಮ, ಸಂಪತ್ತು ಇವುಗಳೆಲ್ಲವನ್ನೂ ತೆಗೆದುಕೊಂಡು ನಮ್ಮನ್ನು ಮಾತ್ರ ಬಿಟ್ಟು, ಲೋಕಾಂತರವನ್ನು ಹೊಂದಿದನು. ಸರ್ವೇಶ್ವರನಿಂದ ಹೀನರಾದ ನಾವು, ತೃಣದಂತಾದೆವು. ಅಸ್ತ್ರ, ಬಾಣ, ಧನಸ್ಸು ಇವುಗಳಿಗೆ ಸಾರಭೂತನಾದ ಗೋವಿಂದನು, ನನ್ನನ್ನು ಬಿಟ್ಟು ಹೊರಟುಹೋದನು. ಶ್ರೀಕೃಷ್ಣನು ನಮ್ಮನ್ನು ನೋಡಿದ ಮಾತ್ರಕ್ಕೆ ಸಕಲ ಸಂಪದ್ಯುಕ್ತರಾದ ನಾವು, ಕೃಷ್ಣವಿಶ್ಲೇಷದಿಂದ, ನಿಶ್ರೀಕರಾದೆವು. ಭೀಷ್ಮ, ದ್ರೋಣ, ಕರ್ಣ, ದುರ್ಯೋಧನಾದಿಗಳು ಯಾರ ಪ್ರಭಾವದಿಂದ ದಗ್ಧರಾದರೋ, ಆ ಶ್ರೀಕೃಷ್ಣನು ಭೂಲೋಕವನ್ನು ಬಿಟ್ಟನು. ಇದರಿಂದ ಭೂಮಿಯು ಯೌವನರಹಿತವಾಗಿಯೂ, ಸಂಪದ್ರಹಿತವಾಗಿಯೂ, ಛಾಯಾರಹಿತವಾಗಿಯೂ ಸಹ ಕಾಣುವುದು. ಕೃಷ್ಣರಹಿತನಾದ ನಾನು, ಕಳ್ಳರಿಂದ ಪರಾಜಿತನಾದೆನು. ನನ್ನ ಗಾಂಡೀವವು ಕಳ್ಳರ ಮಣ್ಣುಹೆಂಟೆಗಳಿಂದ ಅವಮಾನವನ್ನು ಹೊಂದಿತು. ಅನೇಕ ಸ್ತ್ರೀಸಮೂಹವು ದಸ್ಯುಗಳ ಪಾಲಾಯಿತು. ಈ ಪ್ರಕಾರ ನೀಚಾವಮಾನದಿಂದ ಲಜ್ಜಾರಹಿತನಾಗಿರುವೆನೆಂದು" ಅನೇಕ ವಿಧವಾಗಿ ಪ್ರಲಾಪಿಸಿದನು. ಇದನ್ನು ಕೇಳಿದ ವೇದವ್ಯಾಸನು, "ಅಯ್ಯಾ ಅರ್ಜುನ, ವೃಥಾಚಿಂತಿಸುವುದೇತಕ್ಕೆ? ಸಕಲಪ್ರಾಣಿಗಳಿಗೂ, ಇದೇ ರೀತಿ ನಡೆಯುವುದು ಸಹಜವಾಗಿರುವುದು;

ಕಾಲಾನುಸಾರ ಜಯಾಪಜಯಗಳುಂಟಾಗುವುದು. ಸಕಲವೂ ಕಾಲಾನುಸಾರವಾಗಿ ನಡೆಯುವುದು; ಆದುದರಿಂದ ಧೈರ್ಯವನ್ನು ತಾಳು, ನದೀ, ಸಮುದ್ರ, ಪರ್ವತ, ಭೂಮಿ, ದೇವ, ಮನುಷ್ಯ, ಪಶು, ವೃಕ್ಷ, ಪಕ್ಷ್ಯಾದಿಗಳೆಲ್ಲವೂ ಭಗವಂತನಿಂದಲೇ ಸೃಷ್ಟಿಯಾಗಿ, ಕ್ಷಯವಾಗುವುವು. ಇವುಗಳೆಲ್ಲವೂ ಕಾಲಾತ್ಮಕವಾದುದರಿಂದ ಸಮಾಧಾನಮನಸ್ಕನಾಗು. ಭಗವಂತನಾದ ಶ್ರೀಮನ್ನಾರಾಯಣನು,ಕಾಲಾತ್ಮಕನಾಗಿರುವನು. ಶ್ರೀಕೃಷ್ಣನು ಭೂಭಾರಾವತರಣಾರ್ಥವಾಗಿ, ಭೂಮಿಯಲ್ಲಿ ಅವತರಿಸಿ, ಭೂಭಾರವನ್ನು ಪರಿಹಾರಮಾಡಿ, ದೇವಬ್ರಾಹ್ಮಣರಿಗೆ ಹಿತವನ್ನುಂಟುಮಾಡಿ, ಕೃತಕೃತ್ಯನಾಗಿ, ಸ್ವಸ್ಥಾನವನ್ನು ಹೊಂದಿರುವನು. ಇದಕ್ಕಾಗಿ ನೀನು ವ್ಯಥೆಪಡಬೇಡ. ಆಯಾಯಾ ಕಾಲಾನುಸಾರ, ನಡೆಯಬೇಕಾದ ಕಾರ್ಯಗಳು ನಡೆಯುತ್ತವೆ. ನಿನಗುಂಟಾದ ಜಯಾಪಜಯಗಳು ಶ್ರೀ ಮಹಾವಿಷ್ಣುವಿನಿಂದಲೇ ಆಗಿರುವುದು. ಪರಮಾತ್ಮನಲ್ಲದೆ ಭೀಷ್ಮಾದಿಗಳನ್ನು ಜಯಿಸುವರಾರು? ದೇವೇಶನಾದ ಶ್ರೀಕೃಷ್ಣನು ಸಕಲಪ್ರಾಣಿಶರೀರಕನಾಗಿ, ಸೃಷ್ಟಿಸ್ಥಿತ್ಯಾದಿಗಳನ್ನು ಮಾಡುವನು. ಇದಕ್ಕಾಗಿ ನೀನು ನೀಚರಿಂದ ಪರಾಜಿತನಾಗಿರುವುದು, ಸ್ತ್ರೀಯರಿಗಾಗಿ ವ್ಯಥೆಪಡುವುದೂ ಸಹ ಅನುಚಿತವಾದುದು. ಸ್ತ್ರೀಯರ ಪೂರ್ವವೃತ್ತಾಂತವನ್ನು ಹೇಳುವೆನು ಕೇಳು: ಪೂರ್ವದಲ್ಲಿ ಅಷ್ಟಾವಕ್ರ ಮಹರ್ಷಿಯು ದಿವ್ಯಸಹಸ್ರವರ್ಷಪರಿಯಂತರ ಜಲದಲ್ಲಿ ವಾಸಮಾಡುತ್ತಾ, ತಪಸ್ಸುಮಾಡುತ್ತಿದ್ದನು. ದೇವಾಸುರ ಯುದ್ಧದಲ್ಲಿ ದೇವತೆಗಳು ಜಯಶಾಲಿಗಳಾಗಿ, ಸಂಭ್ರಮೋತ್ಸವವನ್ನು ಮೇರು ಪರ್ವತದಲ್ಲಿ ಮಾಡುತ್ತಿದ್ದರು. ಈ ಉತ್ಸವಕ್ಕಾಗಿ ಅಪ್ಸರಸ್ತ್ರೀಯರು ಹೋಗುತ್ತಿದ್ದ ಕಾಲದಲ್ಲಿ ಪರಮಕಾಂತಿಯುಕ್ತನಾದ ಅಷ್ಟಾವಕ್ರನನ್ನು ನೋಡಿ, ಸ್ತ್ರೀಯರು ವಿಸ್ಮಿತರಾಗಿ ಕಂಠದವರೆಗೂ ಮುಳುಗಿದ್ದ ಮಹರ್ಷಿಯನ್ನು ಅನೇಕ ವಿಧದಿಂದುಪಚರಿಸಿದರು. ಆಗ ಅಷ್ಟಾವಕ್ರನು ಪ್ರಸನ್ನನಾಗಿ ರಂಭಾ ಮೇನಕಾದ್ಯಪ್ಸರಸ್ತ್ರೀಯರನ್ನು ಕುರಿತು, "ನಿಮ್ಮ ಶುಶ್ರೂಷೆಯಿಂದ ನಾನು ಪ್ರೀತನಾಗಿರುವೆನು. ನಿಮಗೆ ಏನು ಅಪೇಕ್ಷೆಯೋ ಅದನ್ನು ಕೇಳಬಹುದೆಂದು" ಹೇಳಲು; ಆ ಮಾತನ್ನು ಕೇಳಿ, ಸ್ತ್ರೀಯರು ಹರ್ಷಯುಕ್ತರಾಗಿ, ಬ್ರಾಹ್ಮಣೋತ್ತಮನೇ! ನಮಗೆ ಪುರುಷೋತ್ತಮನಾದ ನಾರಾಯಣನು ಪತಿಯಾಗಬೇಕೆಂದು ಕೇಳಿಕೊಂಡರು. ಆಗ ಅಷ್ಟಾವಕ್ರಮಹರ್ಷಿಯು, ಅಪ್ಸರಸ್ತ್ರೀಯರ ಇಷ್ಟಾನುಸಾರ ವರವನ್ನು ಕೊಟ್ಟು ಜಲದಿಂದ ಮೇಲಕ್ಕೆ ಬಂದನು. ಆಗ ರಂಭಾದಿಗಳು ಮಹರ್ಷಿಯ ವಕ್ರವಾದ ಶರೀರವನ್ನು ನೋಡಿ ಹಾಸ್ಯಮಾಡಿದರು. ಮಹರ್ಷಿಯು ಕೋಪಯುಕ್ತನಾಗಿ ಅಪ್ಸರಸ್ತ್ರೀಯರನ್ನು ಕುರಿತು, "ನೀವು ನನ್ನ ಶರೀರವನ್ನು ನೋಡಿ, ಹಾಸ್ಯಮಾಡಿದುದರಿಂದ ನೀವು ಭಗವಂತನಿಗೆ ಪತ್ನಿಗಳಾಗಿ ನಂತರ ನಿಮ್ಮನ್ನು ಕಳ್ಳರು

ಅಪಹರಿಸಲೆಂದು", ಶಾಪವನ್ನು ಕೊಟ್ಟನು. ಈ ರೀತಿ ಹೇಳಿದ ಮಾತನ್ನು ಕೇಳಿ, ಸ್ತ್ರೀಯರು ಕ್ಷಮಾಪಣೆಯನ್ನು ಕೇಳಿಕೊಳ್ಳಲು; ಪುನಃ ಸ್ವರ್ಗಲೋಕವನ್ನು ಹೊಂದುವಿರಿ ಎಂಬುದಾಗಿ ಅಷ್ಟಾವಕ್ರನು ಅನುಗ್ರಹಿಸಿದನು. ಈ ಪ್ರಕಾರ ಶಾಪದಿಂದ ಕೃಷ್ಣನ ಸ್ತ್ರೀಯರು ಕಳ್ಳರ ಪಾಲಾದರು. ಇದಕ್ಕಾಗಿ ನೀನು ದುಃಖಿಸ ಬೇಡವೆಂದು ಸಮಾಧಾನಮಾಡಿ, ಪುನಃ ಅರ್ಜುನನನ್ನು ಕುರಿತು ವ್ಯಾಸಮಹರ್ಷಿ ಗಳು ಹೇಳುತ್ತಾರೆ: "ಭಗವಂತನಿಂದಲೇ ಸಕಲವೂ ಸಂಹೃತವಾಯಿತು. ನಿಮಗೂ ಕೂಡಾ ಕಾಲವು ಸನ್ನಿಹಿತವಾಗಿರುವುದು; ಹುಟ್ಟಿದವನು ಸಾಯುವುದು ನಿಯತ ವಾದುದು; ಇದನ್ನು ತಿಳಿದ ಜ್ಞಾನಿಗಳು ಈ ವಿಷಯದಲ್ಲಿ ವ್ಯಥೆಪಡುವುದಿಲ್ಲ. ಆದುದರಿಂದ ನೀನು ಅಣ್ಣತಮ್ಮಂದಿರಿಂದ ಕೂಡಿ, ರಾಜ್ಯವನ್ನು ಬಿಟ್ಟು, ತಪಸ್ಸಿಗೆ ಹೊರಡಬಹುದು. ನೀನು ಪಟ್ಟಣಕ್ಕೆ ಹೋಗಿ, ಧರ್ಮರಾಜನಿಗೆ ನಾನು ಹೇಳಿದ ಮಾತನ್ನು ಹೇಳಿ, ಎರಡು ಮೂರು ದಿವಸಗಳಲ್ಲೇ ನೀವು ಪ್ರಯಾಣಮಾಡಿ" ಎಂದು ಆಜ್ಞಾಪಿಸಿ, ಅರ್ಜುನನನ್ನು ಕಳುಹಿಸಿದನು. ಅನಂತರ ಅರ್ಜುನನು ವ್ಯಾಸಾಜ್ಞಾನುಸಾರ, ಪಟ್ಟಣಕ್ಕೆ ಬಂದು, ಧರ್ಮಾದಿಗಳಿಗೆ ನಡೆದ ವೃತ್ತಾಂತ ವನ್ನು ತಿಳಿಸಿ, ಪರೀಕ್ಷಿತನನ್ನು ರಾಜನನ್ನಾಗಿ ಮಾಡಿ, ಪಾಂಡವರು ಮಹಾ ಪ್ರಸ್ಥಾನಕ್ಕೆ ಪ್ರಯಾಣಮಾಡಿದರು. ಎಲೈ ಮೈತ್ರೇಯನೇ, ಶ್ರೀಕೃಷ್ಣನ ಮಹಾತ್ಮ್ಯೆ ಯನ್ನು ನಿನಗೆ ವಿಸ್ತಾರವಾಗಿ ಹೇಳಿದೆನು. ಯದುವಂಶದಲ್ಲಿ ಅವತರಿಸಿದ ಶ್ರೀಕೃಷ್ಣನ ಚರಿತ್ರೆಯನ್ನು ಯಾವಾಗಲೂ ಕೇಳುತ್ತಿರುವವರು, ಸಕಲ ಪಾಪ ವಿಮುಕ್ತರಾಗಿ ವಿಷ್ಣುಲೋಕವನ್ನು ಹೊಂದುವರು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪಂಚಮಾಂಶದಲ್ಲಿ
ಮೂವತ್ತೆಂಟನೆಯ ಅಧ್ಯಾಯವು ಸಮಾಪ್ತಃ

ಪಂಚಮಾಂಶವೂ ಸಹ ಸಮಾಪ್ತವಾದುದು
ಶ್ರೀಕೃಷ್ಣಾರ್ಪಣಮಸ್ತು
ಅಚ್ಯುತ ಪ್ರಿಯತಾಂ
ಶ್ರೀರಸ್ತು

ಶ್ರಿಯೈ ನಮಃ

ಶ್ರೀ ಕೃಷ್ಣಾಯ ಪರಬ್ರಹ್ಮಣೇನಮಃ

ಶ್ರೀ ಹಯಗ್ರೀವಾಯನಮಃ

ಶ್ರೀಮದ್ರಾಮಾನುಜಾಚಾರ್ಯಾಯ ಯಜ್ವನೇ ದೇಶಿಕಾಯಮೇ ।
ಋಣತ್ರಯ ವಿಮುಕ್ತಾಯ ತಾತಪಾದಾಯಿತೇ ನಮಃ ॥

ಶ್ರೀ ವಿಷ್ಣುಪುರಾಣದಲ್ಲಿ ಷಷ್ಟಾಂಶವು ಪ್ರಾರಂಭವು

ಮೊದಲನೆಯ ಅಧ್ಯಾಯವು

ಮೈತ್ರೇಯರು, ಶ್ರೀ ಪರಾಶರರನ್ನು ಕೇಳುತ್ತಾರೆ: "ಓ ಮಹಾತ್ಮರೇ! ನೀವು ಹೇಳಿದ ಸರ್ಗ, ವಂಶ, ಮನ್ವಂತರಾದಿಗಳನ್ನು ಕೇಳಿದೆನು. ಈಗ ಮಹಾ ಪ್ರಳಯವನ್ನು ಕೇಳಲಪೇಕ್ಷೆಯುಳ್ಳವನಾಗಿರುವುದರಿಂದ ನನಗೆ ಹೇಳಬೇಕು" ಎಂದು ಪ್ರಾರ್ಥಿಸಲು ; ಶ್ರೀ ಪರಾಶರರು ಮೈತ್ರೇಯರಿಗೆ ಹೇಳುತ್ತಾರೆ. "ನಿನ್ನ ಇಷ್ಟಾನುಸಾರ ಮಹಾಪ್ರಳಯವನ್ನು ಹೇಳುತ್ತೇನೆ, ಕೇಳು. ನಾಲ್ಕು ಯುಗ ದೊಳಗೆ ಕೃತಯುಗವೇ ಮೊದಲನೆಯದು, ಕೃತಯುಗದಲ್ಲಿ ಯಾವ ರೀತಿ ಎಲ್ಲವೂ ಸೃಷ್ಟಿಯಾಯಿತೋ ಅದೇ ರೀತಿಯಲ್ಲಿ ಕಲಿಯುಗದಲ್ಲಿ ನಾಶವಾಗು ತ್ತದೆ. ಈಗ ಕಲಿಯ ಸ್ವರೂಪವನ್ನು ಹೇಳುತ್ತೇನೆ. ಕಲಿಯುಗದಲ್ಲಿ ಮನುಷ್ಯರಿಗೆ ವರ್ಣಾಶ್ರಮಧರ್ಮಗಳ ಪ್ರವೃತ್ತಿಯಿರುವುದಿಲ್ಲ ; ವೇದೋಕ್ತವಾದ ಧರ್ಮಾಚರ ಣೆಯೂ ಸಹ ಇರುವುದಿಲ್ಲ. ಧರ್ಮವಿವಾಹವೂ, ಆಚಾರ್ಯಶಿಷ್ಯಧರ್ಮವೂ, ದಾಂಪತ್ಯಕ್ರಮವೂ, ಅಗ್ನಿದೇವಾರ್ಚನಾದಿಗಳೂ ಸಹ ಇರುವುದಿಲ್ಲ. ಯಾವ ಕುಲದವನಾದರೂ ಸರಿಯೇ ಬಲಿಷ್ಠನಾದವನೇ ರಾಜನಾಗುವನು. ಧನವುಳ್ಳವನೇ ಸರ್ವವರ್ಣಕ್ಕೂ ಯೋಗ್ಯನಾಗುವನು ; ಪ್ರಾಯಶ್ಚಿತ್ತವೆಂಬುವುದೇ ಇರುವುದಿಲ್ಲ. ಕಲಿಯುಗದಲ್ಲಿ ಅವೈದಿಕವಾದ ಕಾಳೀ ಮೊದಲಾದವೇ, ದೇವತೆಯಾಗುವುದು. ವೈರಾಗ್ಯವಿಲ್ಲದ ಆಶ್ರಮಗಳನ್ನು ಸರ್ವರೂ ಆಶ್ರಯಿಸುವರು. ತೀರ್ಥಯಾತ್ರಾದಿ ಕಾಯಕ್ಲೇಶವೂ, ವಿಧ್ಯನುಷ್ಠಾನವಾದ ಉಪವಾಸಾದಿಗಳೂ ಸಹ ಇರುವುದಿಲ್ಲ. ತಪಸ್ಸೂ, ಧನದಲ್ಲಿ ನಿಸ್ಪೃಹತೆಯೂ ಇರುವುದಿಲ್ಲ. ಸ್ತ್ರೀಯರು ಸುವರ್ಣರತ್ನಾದಿ

ಗಳಿಲ್ಲದೆ ಕೇಶಧಾರಣೆಮಾತ್ರದಿಂದ ಅಲಂಕೃತರಾಗುವರು. ಧನಹೀನನಾದ ಪತಿಯನ್ನು ತ್ಯಾಗಮಾಡುವರು. ಧನವಂತರಾದವರೇ ಸ್ತ್ರೀಯರಿಗೆ ಪತಿಯಾಗುವರು! ಯಾವ ಮನುಷ್ಯನು ಬಹಳವಾಗಿ ಧನಾದಿಗಳನ್ನು ಕೊಡುವನೋ ಅವನೇ ಸ್ವಾಮಿಯೆನ್ನಿಸಿಕೊಳ್ಳುವನು. ಕುಲಾದಿಗಳಿಂದ ಪೂಜ್ಯನಾದರೂ ಸ್ವಾಮಿಯಾಗುವುದಿಲ್ಲ. ದ್ರವ್ಯಸಂಘವು ಗೃಹಾದಿಗಳಿಗೆ ಪ್ರಯೋಜನವೇ ಹೊರತು ಆದಾನಯಾಗಾದಿಗಳಿಗೆ ಇಲ್ಲ. ಬುದ್ಧಿಯು ದ್ರವ್ಯಾರ್ಜನೆಗೇ ಹೊರತು ಆತ್ಮಜ್ಞಾನಾದಿಗಳಿಗಲ್ಲ. ದ್ರವ್ಯವು ದೇಹೋಪಭೋಗಾರ್ಥವಾಗಿಯೇ ಹೊರತು ಅತಿಥಿಭೋಗಾರ್ಥವಾಗಿರುವುದಿಲ್ಲ. ಸ್ತ್ರೀಯರು ಸ್ವೇಚ್ಛೆಯುಳ್ಳವರಾಗಿ ಪುರುಷರಂತೆ ಸಂಚರಿಸುವರು! ಪುರುಷರು ಅನ್ಯಾಯದಿಂದ ಅರ್ಜಿಸಲ್ಪಟ್ಟ ಧನದಲ್ಲಿ ಅಪೇಕ್ಷೆಯುಳ್ಳವರಾಗುವರು; ಸ್ನೇಹಿತನು ಯಾಚನೆ ಮಾಡಿದಾಗ್ಯೂ ಧನಲೋಭದಿಂದ ಸ್ವಾರ್ಥವನ್ನೇ ನಿರೀಕ್ಷಿಸುತ್ತಾರೆ. ಹಣತೂಕ ಚಿನ್ನದ ಅರ್ಧಾರ್ಧದಲ್ಲೂ ಕೂಡ ಆಸೆ ಇಡುವರು. ಶೂದ್ರರು ಬ್ರಾಹ್ಮಣರನ್ನು ಸಮಾನರಾದವರೆಂದು ತಿಳಿಯುತ್ತಾರೆ. ಹಸು, ಎಮ್ಮೆ ಇವುಗಳಿಗೆ ಹಾಲು ಕೊಡುವವರಿಗೂ ಸತ್ಕಾರವಾಗುವುದು. ಯಾವಾಗಲೂ ಅನಾವೃಷ್ಟಿಭಯದಿಂದ ಕ್ಷುತ್ಪೀಡಿತರಾಗಿ ಅಂತರಿಕ್ಷದಲ್ಲಿಯೇ ದೃಷ್ಟಿಯುಳ್ಳವರಾಗುವರು. ಅನಾವೃಷ್ಟಿಯ ದೆಸೆಯಿಂದ ತಪಸ್ವಿಗಳಂತೆ ಕಂದಮೂಲಗಳಿಂದ ಜೀವಿಸುವರು. ಧನಹೀನರಾಗಿ ಯಾವಾಗಲೂ ದುರ್ಭಿಕ್ಷದಿಂದಲೇ ಕೂಡಿರುವರು. ಸ್ವಲ್ಪವಾದ ಸುಖಸಂತೋಷಾದಿಗಳನ್ನು ಹೊಂದುತ್ತಾರೆ. ಸ್ನಾನವಿಲ್ಲದೆ ಭೋಜನವನ್ನು ಮಾಡುತ್ತಾರೆ. ದೇವಪೂಜೆ, ಅತಿಥಿಸತ್ಕಾರ, ಅಗ್ನಿಕಾರ್ಯ, ಪಿಂಡೋದಕ ಕ್ರಿಯೆ ಇವುಗಳನ್ನು ಮಾಡುವುದಿಲ್ಲ. ಸ್ತ್ರೀಯರು ಚಪಲಚಿತ್ತರಾಗಿ ಬಹಳವಾಗಿ ಊಟಮಾಡುತ್ತಾ, ಹ್ರಸ್ವವಾದ ದೇಹವುಳ್ಳವರಾಗಿ, ಬಹು ಪ್ರಜ್ಞಾವಂತರೂ, ಅಲ್ಪಭಾಗ್ಯಶಾಲಿಗಳೂ, ಎರಡು ಕೈಯಿಗಳಿಂದ ತಲೆಯನ್ನು ಕೆರೆಯತಕ್ಕವರೂ, ಅತ್ತೆಮಾವಂದಿರನ್ನು ಹೆದರಿಸುತ್ತಾ ಅನಾದರಣೆಯುಳ್ಳವರೂ, ತಮ್ಮ ದೇಹವನ್ನು ಮಾತ್ರ ಪೋಷಣೆಮಾಡಿಕೊಳ್ಳುವವರೂ, ನೀಚ ಸ್ವಭಾವಯುಕ್ತರೂ, ಸಂಸ್ಕಾರಹೀನರೂ, ಕ್ರೂರವಾದ ಮಾತುಗಳೂ, ಸುಳ್ಳುಮಾತುಗಳನ್ನೂ ಸಹ ಆಡತಕ್ಕವರೂ, ದುಶ್ಶೀಲರೂ, ದುಶ್ಶೀಲರಾದವರಲ್ಲಿ ಪ್ರೀತಿಯುಕ್ತರೂ, ಪುರುಷರಲ್ಲಿ ದುಷ್ಟವಾದ ನಡತೆಯುಳ್ಳವರೂ ಸಹ ಆಗುವರು. ಬ್ರಹ್ಮಚಾರಿಗಳು ವೇದವ್ರತಾಚರಣೆಯಿಲ್ಲದೆ ವೇದಾಧ್ಯಯನ ಮಾಡುವರು. ಗೃಹಸ್ಥರು ಹೋಮಾದಿಗಳನ್ನು ಮಾಡದೆ ಉಚಿತವಾದ ದಾನವನ್ನೂ ಸಹ ಮಾಡುವುದಿಲ್ಲ. ವಾನಪ್ರಸ್ಥರು ಗ್ರಾಮ್ಯಾಹಾರವನ್ನು ಪರಿಗ್ರಹಿಸುವರು. ಸನ್ಯಾಸಿಗಳು ಸ್ನೇಹಿತರೇ ಮುಂತಾದ ಬಂಧುಯುಕ್ತರಾಗುವರು. ರಾಜರು ಪ್ರಜೆಗಳನ್ನು ಕಾಪಾಡದೆ ಕಪ್ಪಕಾಣಿಕೆಗಳನ್ನು ಪರಿಗ್ರಹಿ

ಸುವರು. ಅಲ್ಲದೆ ಜನಗಳ ದ್ರವ್ಯವನ್ನೂ ಅಪಹರಿಸುವರು. ಯಾವ ಮನುಷ್ಯನು ಆನೆ, ಕುದುರೆ, ರಥ ಇವುಗಳನ್ನು ಇಟ್ಟುಕೊಳ್ಳುತ್ತಾನೋ, ಅವನೇ ರಾಜನು. ಯಾವ ಮನುಷ್ಯನು ಬಲಹೀನನೋ ಅವನೇ ಭೃತ್ಯನು. ವೈಶ್ಯರು ಸ್ವಕರ್ಮ ವಾದ ಕೃಷಿ ವ್ಯಾಪಾರ ಇವುಗಳನ್ನು ಬಿಟ್ಟು, ಶೂದ್ರವೃತ್ತಿಯನ್ನಾಶ್ರಯಿಸುವರು. ಶೂದ್ರರು ಅಧಮರಾಗಿ ಪಾಷಂಡ ಸಂಶ್ರಯರಾಗಿ ಭೈಕ್ಷವ್ರತವನ್ನಾಚರಿಸುವರು. ಜನಗಳು ದುರ್ಭಿಕ್ಷಪೀಡಿತರಾಗಿ ದೇಶದೇಶಗಳನ್ನು ಹೊಂದುವರು. ವೇದಮಾರ್ಗವು ಲೀನವಾಗಿ ಅಧರ್ಮವು ವೃದ್ಧಿಯಾಗಿ ಪಾಷಂಡಾದಿಗಳಿಂದ ಪೂರ್ಣವಾದ ಕಾಲದಲ್ಲಿ ಅಲ್ಪಾಯುಷ್ಮಂತರಾಗುತ್ತಾರೆ. ಶಾಸ್ತ್ರೋಕ್ತವಾದ ತಪಸ್ಸನ್ನು ಮಾಡದೆ ಅಕ್ರಮ ವಾದ ತಪಸ್ಸುಗಳನ್ನು ಮಾಡುವುದರಿಂದಲೂ, ರಾಜನ ದೋಷದಿಂದಲೂ, ಬಾಲ್ಯ ದಲ್ಲಿಯೇ ಮರಣವುಂಟಾಗುವುದು. ಸ್ತ್ರೀಯರು ಐದಾರು ವರ್ಷಗಳಿಗೆ ಪ್ರಸವಿಸು ವರು. ಪುರುಷರಿಗೆ ಎಂಟು ಒಂಭತ್ತು ವರ್ಷಗಳಿಗೆ ಪುತ್ರೋತ್ಪತ್ತಿಯಾಗುವುದು. ಹನ್ನೆರಡು ವರ್ಷಗಳಲ್ಲಿಯೇ ವೃದ್ಧಾಪ್ಯವುಂಟಾಗುವುದು. ಕಲಿಯುಗದ ಅಂತ್ಯದಲ್ಲಿ ಇಪ್ಪತ್ತು ವರ್ಷಗಳ ಕಾಲವೂ ಕೂಡ ಬದುಕುವುದಿಲ್ಲ. ಅಲ್ಪಪ್ರಜ್ಞರೂ, ದುಷ್ಟ ವಾದ ಅಂತಃಕರಣವುಳ್ಳವರೂ, ವೃಥಾ ರೂಪವುಳ್ಳವರೂ ಸಹ ಆಗುವರು. ಯಾವ ಯಾವ ಕಾಲದಲ್ಲಿ ಧರ್ಮವು ಕ್ಷೀಣವಾಗುವುದೋ ಆಗ ಕಲಿಯು ವೃದ್ಧಿ ಯಾಗುವುದು. ಯಾವ ಕಾಲದಲ್ಲಿ ವೇದಮಾರ್ಗ ಪ್ರವರ್ತಕರಾದ ಸತ್ಪುರುಷರು ಕ್ಷೀಣವಾಗುವರೋ ಆಗ ಕಲಿಯು ವೃದ್ಧಿಯಾಗುವುದು. ಯಾವ ಕಾಲದಲ್ಲಿ ಯಜ್ಞಾದಿಗಳಿಂದ ಪುರುಷೋತ್ತಮನಾದ ಶ್ರೀಮನ್ನಾರಾಯಣನು ಆರಾಧಿಸಲ್ಪಡು ವುದಿಲ್ಲವೋ, ಆಗಲೂ ಕಲಿಯು ವೃದ್ಧಿಯಾಗುವುದು. ಯಾವಾಗ ವೇದದಲ್ಲಿ ಪ್ರೀತಿಯಿಲ್ಲದೆ ಪಾಷಂಡರಲ್ಲಿ ಪ್ರೀತಿಯುಂಟಾಗುವುದೋ, ಆಗ ಕಲಿಯು ವೃದ್ಧಿ ಯಾಗುವುದು. ಯಾವಾಗ ಸರ್ವಕರ್ತನಾದ ಸರ್ವೇಶ್ವರನಾದ ಜಗತ್ಪತಿಯಾದ ಶ್ರೀಮನ್ನಾರಾಯಣನನ್ನು ಪಾಷಂಡೋಪಹತರಾಗಿ ಪೂಜಿಸುವುದಿಲ್ಲವೋ ಆಗ ಕಲಿಯು ಪ್ರಬಲವಾಗುವುದು. ಜನಗಳು ದೇವತೆಗಳಿಂದೇನು, ಯಜ್ಞಗಳಿಂದೇನು, ವೇದಗಳಿಂದೇನು, ಶೌಚಾದಿಗಳಿಂದೇನು, ಸ್ನಾನಮಾಡುವುದರಿಂದೇನು ಎಂಬು ದಾಗಿ ಹೇಳುತ್ತಾರೆ. ಇಂತಹ ಜನಗಳಿಗೆ ಸ್ವಲ್ಪವಾದ ಮಳೆ, ಬೆಳೆ, ಫಲಶಕ್ತಿ, ಇವು ಗಳೆಲ್ಲವೂ ಉಂಟಾಗುವುದು. ಶಣಬಿನ ನಾರಿನಿಂದ ವಸ್ತ್ರಗಳೂ, ಮರಗಳು ಹುಲ್ಲಿ ನಂತೆಯೂ, ಬ್ರಾಹ್ಮಣರು ಶೂದ್ರಪ್ರಾಯದವರೂ, ಧಾನ್ಯಗಳು ಅಣುಪ್ರಾಯ ಗಳೂ, ಹಾಲು ಆಜ್ಯಪ್ರಾಯವೂ ಸಹ ಆಗುವುದು. ಜನಗಳು ತಂದೆ ಯಾರು, ತಾಯಿ ಯಾರೆಂದು ಹೇಳುತ್ತಾ, ಶ್ವಶುರನನ್ನು ಆಶ್ರಯಿಸುವರು. ವಾಙ್ಮನಃಕಾಯ ಗಳಿಂದ ಪ್ರತಿದಿನವೂ ಪಾಪಕಾರ್ಯಗಳನ್ನೇ ಮಾಡುತ್ತಿರುವರು. ಸತ್ಯಹೀನರೂ,

ಶೌಚಹೀನರೂ ಆದ ಮನುಷ್ಯರಿಗೆ ಯಾವಾಗಲೂ ದುಃಖವೇ ಉಂಟಾಗು ವುದು. ಸ್ವಾಧ್ಯಾಯ, ವಷಟ್ಕಾರ, ಹೋಮ ಪಿತೃಕಾರ್ಯ ಇವುಗಳು ಇಲ್ಲದ ಕಾಲದಲ್ಲಿ ಧರ್ಮವು ವಿರಳವಾಗಿರುವುದು. ಕೃತಯುಗದಲ್ಲಿ ಮಹತ್ತರವಾದ ತಪಸ್ಸನ್ನು ಮಾಡಿ ಯಾವ ಫಲವನ್ನು ಹೊಂದುತ್ತಿದ್ದರೂ ಆ ಫಲವನ್ನೇ ಕಲಿ ಯುಗದಲ್ಲಿ ಸ್ವಲ್ಪವಾದ ಹರಿಕೀರ್ತನೆಯಿಂದ ಹೊಂದುವರು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಷಷ್ಠಾಂಶದಲ್ಲಿ
ಮೊದಲನೆಯ ಅಧ್ಯಾಯವು ಸಮಾಪ್ತಃ

ಎರಡನೆಯ ಅಧ್ಯಾಯವು

"ಮೈತ್ರೇಯನೇ, ಅಧರ್ಮಪ್ರಚುರವಾದ ಕಲಿಯುಗದಲ್ಲಿ ಸ್ವಲ್ಪ ಪುಣ್ಯದಿಂದ ಮಹಾಫಲ ಉಂಟಾಗುವುದು. ಈ ವಿಷಯವಾಗಿ ವೇದವ್ಯಾಸನು ಹೇಳಿದ ಧರ್ಮ ವನ್ನು ಹೇಳುತ್ತೇನೆ ಕೇಳು : ಯಾವ ಕಾಲದಲ್ಲಿ ಅಲ್ಪವಾದ ಧರ್ಮವು ಮಹಾ ಫಲವನ್ನು ಕೊಡುವುದೆಂದು ಮಹರ್ಷಿಗಳಿಗೆ ಚರ್ಚೆಯುಂಟಾಗಿ ವೇದವ್ಯಾಸ ಮಹರ್ಷಿಯನ್ನು ಸಂಶಯನಿವಾರಣೆಗಾಗಿ ಕೇಳಬೇಕೆಂದು ನಿಶ್ಚಯಿಸಿ ಮಹರ್ಷಿ ಗಳು ವ್ಯಾಸನ ಸಮೀಪಕ್ಕೆ ಬರಲು ಆಗ ವ್ಯಾಸನು ಗಂಗಾ ನದಿಯಲ್ಲಿ ಸ್ನಾನ ಮಾಡುತ್ತಿದ್ದುದನ್ನು ಕಂಡು, ಸ್ನಾನವು ಪೂರ್ತಿಯಾಗಲೆಂದು ನದೀತೀರದಲ್ಲಿ ಕೂತುಕೊಂಡಿದ್ದರು. ಅನಂತರ ನನ್ನ ಮಗನು ಸ್ನಾನಮಾಡಿ ಮೇಲಕ್ಕೆ ಬಂದು ಮಹರ್ಷಿಗಳ ಪ್ರಶ್ನೆಯಿಲ್ಲದೆಯೇ ಹೇಳುತ್ತಾನೆ: "ಶೂದ್ರನೇ ಒಳ್ಳೆಯವನು, ಕಲಿಯುಗವೇ ಒಳ್ಳೆಯದೆಂದು ಹೇಳಿ, ಪುನಃ ನದಿಯಲ್ಲಿ ಸ್ನಾನಮಾಡಿದನು. ಪುನಃ ಜಲದಿಂದ ಮೇಲಕ್ಕೆ ಬಂದು ಸ್ತ್ರೀಯರೂ ಕೂಡಾ ಕಲಿಯುಗದಲ್ಲಿ ಧನ್ಯ ರಾದವರೆಂದು ಹೇಳಿ, ಪುನಃ ಸ್ನಾನಮಾಡಿ, ನಿತ್ಯಕರ್ಮವನ್ನೆಲ್ಲಾ ಪೂರ್ತಿಯಾಗಿ ಮಾಡಿದನಂತರ ಮಹರ್ಷಿಗಳು ನನ್ನ ಮಗನ ಸಮೀಪಕ್ಕೆ ಬಂದು, ಅಭಿವಂದ ನಾದಿಗಳನ್ನು ಮಾಡಿ, ವ್ಯಾಸನಿಂದ ಕೊಡಲ್ಪಟ್ಟ ಆಸನಗಳಲ್ಲಿ ಕೂತುಕೊಂಡ ನಂತರ, ಮಹರ್ಷಿಗಳನ್ನು "ಏತಕ್ಕೋಸ್ಕರ ಬಂದಿರಿ" ಎಂದು ಕೇಳಲು ; ಮಹರ್ಷಿ ಗಳು "ಸಂದೇಹಪರಿಹಾರವನ್ನು ಕೇಳುವುದಕ್ಕಾಗಿ ಬಂದೆವು ; ನೀವು ಸ್ನಾನಮಾಡಿ ಶೂದ್ರಸ್ಸಾಧುಃ, ಕಲಿಸ್ಸಾಧುಃ, ಸ್ತ್ರೀಸಾಧುಧನ್ಯರು ಎಂಬುದಾಗಿ ಹೇಳಿದಿರಿ ಯಲ್ಲವೇ ? ಆ ವಿಷಯವನ್ನೇ ಕೇಳಬೇಕೆಂದು ಬಂದಿರುವ ನಮಗೆ ಹೇಳಬೇಕೆನಲು ವ್ಯಾಸನು ಹೇಳುತ್ತಾನೆ: "ಕೃತಯುಗದಲ್ಲಿ ಹತ್ತು ವರ್ಷಗಳ ಕಾಲವೂ, ತ್ರೇತಾ

ಯುಗದಲ್ಲಿ ಒಂದು ವರ್ಷಕಾಲವೂ, ದ್ವಾಪರಯುಗದಲ್ಲಿ ಒಂದು ತಿಂಗಳ ಕಾಲವೂ ತಪಸ್ಸು ಮಾಡಿದರೆ ಯಾವ ಫಲ ಉಂಟಾಗುವುದೋ, ಆ ಫಲವು ಒಂದು ದಿವಸದಲ್ಲಿಯೇ ಕಲಿಯುಗದಲ್ಲಿ ಲಭಿಸುತ್ತದೆ. ಆದುದರಿಂದ "ಕಲಿಸ್ಸಾಧುಃ" ಎಂಬುದಾಗಿ ಹೇಳಿದೆನು. ಕೃತಯುಗದಲ್ಲಿ ಧ್ಯಾನಮಾಡುವುದೂ, ತ್ರೇತಾಯುಗದಲ್ಲಿ ಯಜ್ಞಮಾಡುವುದೂ, ದ್ವಾಪರಯುಗದಲ್ಲಿ ಪೂಜಿಸುವುದೂ, ಕಲಿಯುಗದಲ್ಲಿ ಕೇಶವನನ್ನು ಸಂಕೀರ್ತನೆಮಾಡುವುದೂ ಸಹ ಉತ್ತಮವಾದುದು. ಕಲಿಯುಗದಲ್ಲಿ ಅಲ್ಪವಾದ ಆಯಾಸದಿಂದ ಬಹಳವಾದ ಧರ್ಮವುಂಟಾಗುವುದರಿಂದ ಕಲಿಯುಗವೇ ಪ್ರಶಸ್ತವಾದುದೆಂದು ಹೇಳಿದೆನು. ಬ್ರಾಹ್ಮಣರು ವೇದಾಧ್ಯಯನವನ್ನು ಮಾಡಿ ವ್ರತಚರ್ಯಗಳಿಂದಲೂ, ಯಜ್ಞಾದಿಗಳಿಂದಲೂ, ಧರ್ಮವನ್ನು ಸಂಪಾದಿಸಬೇಕು. ಹರಿಸಂಕೀರ್ತನೆ ಇಲ್ಲದಿದ್ದರೆ, ಇವುಗಳು ವ್ಯರ್ಥವು. ವಾಸುದೇವನ ಕಥೆ ಇಲ್ಲದ ಕಥೆಗಳು ವ್ಯರ್ಥವು. ಶ್ರೀಕೃಷ್ಣನಿಗೆ ನಿವೇದನ ಮಾಡದ ಭೋಜನವು ವ್ಯರ್ಥವು. ಡಂಭ ಲೋಭಾದಿಗಳಿಂದ ಮಾಡುವ ಯಜ್ಞಾದಿಗಳು ವ್ಯರ್ಥವು. ಈ ಪ್ರಕಾರ ವಿಧಿಗೆ ವ್ಯತಿರಿಕ್ತವಾಗಿ ನಡೆಯತಕ್ಕ ಧರ್ಮಗಳೆಲ್ಲವೂ ದೋಷಾವಹವಾದುವು. ಬ್ರಾಹ್ಮಣರು ಪರಾಧೀನದಿಂದ ಕಾರ್ಯಗಳನ್ನು ಮಾಡಿ ಲೋಕಗಳನ್ನು ಹೊಂದಬೇಕು. ಶೂದ್ರನು ಬ್ರಾಹ್ಮಣ ಶುಶ್ರೂಷೆಯಿಂದ ಆಮಂತ್ರಕವಾದ ಪಕ್ವ ಹೋಮಾದಿಗಳನ್ನು ಮಾಡಿ, ಉತ್ಕೃಷ್ಟವಾದ ಲೋಕಗಳನ್ನು ಹೊಂದುವುದರಿಂದಲೇ ಶೂದ್ರಸ್ಸಾಧುಃ ಎಂಬುದಾಗಿ ಹೇಳಿದೆನು. ಭಕ್ಷ್ಯಾಭಕ್ಷ್ಯಗಳಲ್ಲಿಯೂ, ಪೇಯಾಪೇಯಗಳಲ್ಲಿಯೂ ಸಹ ನಿಯಮವಿಲ್ಲದೆ ಜಾಗ್ರತೆಯಾಗಿ ಒಳ್ಳೇ ಗತಿ ಉಂಟಾಗುವುದರಿಂದ ಶೂದ್ರನೇ ಉತ್ತಮವಾದವನೆಂದು ಹೇಳಿದೆನು. ಸ್ವಧರ್ಮಕ್ಕೆ ವಿರೋಧವಿಲ್ಲದ ಧನವನ್ನು ಸಂಪಾದಿಸುವುದೂ, ಸಂಪಾದಿಸಿದ ಧನವನ್ನು ಸತ್ಪಾತ್ರದಲ್ಲಿ ವಿನಿಯೋಗಿಸುವುದೂ, ಸದ್ದ್ರವ್ಯದಿಂದ ಯಜ್ಞವನ್ನು ಮಾಡುವುದೂ, ಧನವನ್ನು ಕಾಪಾಡುವುದೂ ಸಹ ಕ್ಲೇಶವಾದುದು. ಈ ರೀತಿ ಅನೇಕ ಕ್ಲೇಶಗಳಿಂದ ಬ್ರಾಹ್ಮಣರು ಬ್ರಹ್ಮಲೋಕಾದಿಗಳನ್ನು ಹೊಂದಬೇಕು. ಸ್ತ್ರೀಯರು ಯಾವ ಕ್ಲೇಶಗಳೂ ಇಲ್ಲದೆ ಪತಿ ಶುಶ್ರೂಷೆಯೆಂಬ ಸುಲಭವಾದ ಧರ್ಮವನ್ನಾಚರಿಸಿ, ಪತಿಸಾಲೋಕ್ಯವನ್ನು ಹೊಂದುವುದರಿಂದಲೇ, ಸ್ತ್ರೀಗಳು ಸಾಧುಧನ್ಯರು ಎಂಬುದಾಗಿ ಹೇಳಿದೆನು. ಈ ರೀತಿ ಸುಲಭವಾದುದನ್ನು ನಾನು ಹೇಳಿದೆನು. ನೀವು ಏತಕ್ಕೋಸ್ಕರ ನನ್ನಲ್ಲಿ ಬಂದಿರಿ ಅದನ್ನು ಕೇಳಬಹುದೆಂದು" ವ್ಯಾಸಮಹರ್ಷಿಯು ಹೇಳಲು; ಆಗ ಮಹರ್ಷಿಗಳು ಹೇಳುತ್ತಾರೆ: "ವ್ಯಾಸಮಹರ್ಷಿಗಳೇ! ನಾವು ಬಂದ ವಿಷಯವನ್ನು ನಮ್ಮ ಪ್ರಶ್ನೆಯಿಲ್ಲದೆಯೇ ನೀವೇ ಹೇಳಿದುದರಿಂದ, ನಾವು ಕೇಳಬೇಕಾದುದೇನೂ ಉಳಿಯಲಿಲ್ಲವೆಂಬುದಾಗಿ

ಮಹರ್ಷಿಗಳು ಹೇಳಲು; ಆ ಮಾತಿಗೆ ವ್ಯಾಸಮಹರ್ಷಿಯು ಸಂತೋಷಪಟ್ಟು ಮಹರ್ಷಿಗಳನ್ನು ಕುರಿತು ಹೇಳುತ್ತಾರೆ: ನೀವು ನನ್ನನ್ನು ಕೇಳುವುದಕ್ಕಾಗಿ ಬಂದಕಾಲದಲ್ಲಿ ನಿಮ್ಮ ಅಭಿಪ್ರಾಯವನ್ನು ದಿವ್ಯಜ್ಞಾನದಿಂದಲೇ ತಿಳಿದು ಶೂದ್ರ ಸ್ಸಾಧುಃ, ಎಂಬಿವೇ ಮೊದಲಾದ ಮೂರು ವಾಕ್ಯಗಳನ್ನು ಹೇಳಿದೆನು. ಕಲಿಯುಗ ದಲ್ಲಿ ಸ್ವಲ್ಪವಾದ ಪ್ರಯತ್ನದಿಂದ ಧರ್ಮವು ಸಿದ್ಧಿಯಾಗುವುದು. ಆದುದರಿಂದ ಕಲಿಯುಗದವರೇ ಧನ್ಯರೆಂದು ಹೇಳಿದೆನು. ಈ ಪ್ರಕಾರ ಕೃಷ್ಣದ್ವೈಪಾಯನು ಹೇಳಲು, ಮಹರ್ಷಿಗಳು ವ್ಯಾಸಮಹರ್ಷಿಗೆ ನಮಸ್ಕರಿಸಿ ಹೊರಟುಹೋದರು. ಎಲೈ ಮೈತ್ರೇಯನೇ, ಈ ರಹಸ್ಯವನ್ನು ನಿನಗೂ ಸಹ ಹೇಳಿರುವೆನು, ಮಹಾ ದುಷ್ಟವಾದ ಕಲಿಯುಗದಲ್ಲಿ ಇದೊಂದು ದೊಡ್ಡದಾದ ಗುಣವಿರುವುದು. ನೀನು ಕೇಳಿದ ಪ್ರಳಯಾದಿಗಳನ್ನು ಇನ್ನು ಮುಂದಕ್ಕೆ ಹೇಳುತ್ತೇನೆ ಕೇಳು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಷಷ್ಠಾಂಶದಲ್ಲಿ
ಎರಡನೆಯ ಅಧ್ಯಾಯವು ಸಮಾಪ್ತಃ

ಮೂರನೆಯ ಅಧ್ಯಾಯವು

ಸಕಲ ಪ್ರಾಣಿಗಳಿಗೂ ನೈಮಿತ್ತಿಕ ಪ್ರಾಕೃತಿಕ ಆತ್ಯಂತಿಕಗಳೆಂಬುದಾಗಿ ಮೂರು ವಿಧವಾದ ಪ್ರಳಯವುಂಟಾಗುವುದು. ಕಲ್ಪಾಂತದ ಪ್ರಳಯವು ನೈಮಿತ್ತಿಕ ವೆಂತಲೂ, ಪ್ರಾಕೃತಪ್ರಳಯವು ಬ್ರಹ್ಮಾವಸಾನವೆಂತಲೂ, ಆತ್ಯಂತಿಕಪ್ರಳಯವು ಮೋಕ್ಷವೆಂತಲೂ ಸಹ ಹೇಳಲ್ಪಡುವುದು. ಪರಾರ್ಧವೆಂದರೆ, ಚತುರ್ದಶಮನ್ವಂತರ ಗಳ ಕಾಲವು. ಇದರ ಎರಡರಷ್ಟು ಬ್ರಹ್ಮನ ಆಯುಸ್ಸು. ಬ್ರಹ್ಮನ ಆಯುಸ್ಸು ಕಳೆದ ನಂತರ ಆಗುವ ಪ್ರಳಯಕ್ಕೆ ಪ್ರಾಕೃತಿಕವೆಂದು ಹೆಸರು. ಪ್ರಾಕೃತಿಕ ಪ್ರಳಯದಲ್ಲಿ ಸಕಲವೂ ನಾಶವಾಗುವುದು. ಲಘುವಾದ ಅಕ್ಷರವನ್ನು ಉಚ್ಚಾರಣೆ ಮಾಡುವ ಕಾಲಕ್ಕೆ ನಿಮೇಷವೆಂದು ಹೆಸರು. ಹದಿನೈದು ನಿಮೇಷಗಳಿಗೆ ಕಾಷ್ಠಾ ಎಂದು ಹೆಸರು. ಮೂವತ್ತು ಕಾಷ್ಠಗಳಿಗೆ, ಒಂದು ಕಲೆಯು; ಹದಿನೈದು ಕಲೆ ಗಳ ಒಂದು ಘಳಿಗೆಯು; ಎರಡು ಘಳಿಗೆಗೊಂದು ಮುಹೂರ್ತವು; ಮೂವತ್ತು ಮುಹೂರ್ತಗಳೊಂದು ದಿನ; ಮೂವತ್ತು ದಿನಗಳೊಂದು ಮಾಸ; ಹನ್ನೆರಡು ಮಾಸಗಳೊಂದು ವರ್ಷ; ವರ್ಷ ಒಂದಕ್ಕೆ ದೇವತೆಗಳಿಗೊಂದು ದಿನ; ಮಾನವ ಮಾನದ ಮುನ್ನೂರುಅರವತ್ತು ವರ್ಷಗಳು, ದೇವತೆಗಳಿಗೊಂದು ವರ್ಷ. ಇಂಥಾ ಹನ್ನೆರಡು ಸಾವಿರ ವರ್ಷಗಳಿಗೆ ನಾಲ್ಕು ಯುಗಗಳು. ಈ ಚತುರ್ಯುಗಗಳು ಸಾವಿರ

ನಾದರೆ ಬ್ರಹ್ಮನಿಗೊಂದು ದಿನ; ದಿನ ಒಂದಕ್ಕೆ ನೈಮಿತ್ತಿಕ ಲಯವಾಗುವುದು. ಈ ಪ್ರಳಯಕಾಲದಲ್ಲಿ ನೂರು ವರ್ಷಗಳ ಕಾಲ ಅನಾವೃಷ್ಟಿಯಿಂದ ಅಲ್ಪ ಶಕ್ತಿಗಳುಳ್ಳ ಪ್ರಾಣಿಗಳು ನಾಶವಾಗುವುವು. ಅನಂತರ ಭಗವಂತನಾದ ಶ್ರೀಮನ್ನಾರಾಯಣನು, ರುದ್ರರೂಪಧರನಾಗಿ ಸಕಲಪ್ರಾಣಿಗಳನ್ನೂ ನಾಶಮಾಡುವುದಕ್ಕೆ ಪ್ರಯತ್ನಿಸುವನು. ಶ್ರೀಮನ್ನಾರಾಯಣನು ಸೂರ್ಯನ ಸುಷುಮ್ನ, ಹರಿಕೇಶ, ವಿಶ್ವಕರ್ಮಾ, ವಿಶ್ವವ್ಯಚಾ, ಸ್ವಧಾ, ಸಂಯದ್ವಸು, ಅರ್ವಾಗ್ವಸುಗಳೆಂಬ ಏಳು ಕಿರಣಗಳಲ್ಲಿದ್ದುಕೊಂಡು ಸಮಸ್ತ ಜಲಗಳನ್ನೂ ಪಾನಮಾಡಿ ಸಮಸ್ತಭೂಮಂಡಲವನ್ನೂ ಒಣಗಿಸುತ್ತಾನೆ. ಸಮುದ್ರ, ನದಿ ಇವುಗಳು ಒಣಗಿಹೋಗುವುದು. ಏಳು ಕಿರಣಗಳೂ ಆರೋಗ, ಭ್ರಾಜ, ಪಟರ, ಪತಂಗ, ಸ್ವರ್ಣರ, ಜ್ಯೋತಿಷೀಮಾನ್, ವಿಭಾಸನೆಂಬ ಏಳು ಸೂರ್ಯರಾಗಿ ಮೂರು ಲೋಕವನ್ನೂ ವೃಕ್ಷ ಜಲ ಇವುಗಳಿಲ್ಲದಂತೆ ಸುಡುವುದು. ಆಗ ಭೂಮಿಯು ಕೂರ್ಮಪೃಷ್ಠದಂತೆ ಇರುವುದು. ಶ್ರೀಮನ್ನಾರಾಯಣನು ಕಾಲಾಗ್ನಿ ರುದ್ರನಾಗಿ ಪಾತಾಳಲೋಕವನ್ನೂ ಸಹ ಸುಡುತ್ತಾನೆ. ಭುವರ್ಲೋಕ ಸ್ವರ್ಗಲೋಕಗಳೂ ಸಹ ಸುಟ್ಟು ಹೋಗುವುವು. ಆಗ ಮೂರು ಲೋಕವೂ ಕೊಪ್ಪರಿಗೆಯಂತಾಗುವುದು. ಪಾತಾಳಾದಿಲೋಕಗಳು ಸುಡುವ ಕಾಲದಲ್ಲಿ ಮನ್ವಾದಿಗಳು ತಾಪಾರ್ತರಾಗಿ ಮಹರ್ಲೋಕವನ್ನು ಹೊಂದಿ ಅಲ್ಲಿಯೂ ತಾಪವನ್ನು ಸಹಿಸಲಾರದೆ ಜನಲೋಕವನ್ನು ಹೊಂದುವರು. ಈ ಪ್ರಕಾರ ರುದ್ರರೂಪಿಯಾದ ಜನಾರ್ದನನು ಮುಖಶ್ವಾಸದಿಂದ ಸಂವರ್ತಕಗಳೆಂಬ ಪ್ರಳಯಮೇಘಗಳನ್ನು ಸೃಷ್ಟಿಸುವನು. ಘೋರವಾದ ಮೇಘಗಳು ಸಕಲಲೋಕಗಳಲ್ಲೂ ವರ್ಷಿಸಿ ಭಯಂಕರವಾದ ಅಗ್ನಿಯನ್ನು ಶಮನ ಮಾಡಿ, ಲೋಕಗಳನ್ನು ಜಲಮಯವಾಗಿ ಮಾಡುವುವು. ಈ ಪ್ರಕಾರ ನೂರಾರು ವರ್ಷಗಳವರೆವಿಗೂ ವರ್ಷಿಸುವುವು. ನಿತ್ಯನಾಗಿಯೂ ಪರಮಾತ್ಮನಾಗಿಯೂ ಇರುವ ವಾಸುದೇವನ ಮಹಾತ್ಮ್ಯದಿಂದ ಕಲ್ಪಾಂತದಲ್ಲಿ ಸಮಸ್ತವೂ ಈ ರೀತಿಯಾಗುವುದು."

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಷಷ್ಠಾಂಶದಲ್ಲಿ
ಮೂರನೆಯ ಅಧ್ಯಾಯವು ಸಮಾಪ್ತಃ

ನಾಲ್ಕನೆಯ ಅಧ್ಯಾಯವು

"ಮೂರು ಲೋಕಗಳೂ ಜಲಮಯವಾದ ಕಾಲದಲ್ಲಿ ಸಪ್ತರ್ಷಿಸ್ಥಾನದಲ್ಲಿ ಜಲದಲ್ಲಿರತಕ್ಕ ಶ್ರೀಮನ್ನಾರಾಯಣನ ಮುಖನಿಶ್ವಾಸದಿಂದ ಗಾಳಿಯು ಹುಟ್ಟಿ,

ಭಯಂಕರಗಳಾದ ಮೇಘಗಳನ್ನು ನಾಶಮಾಡಿ, ನೂರಾರು ವರ್ಷಗಳು ಬೀಸುತ್ತಿರುವುದು. ಅನಂತರ, ಸರ್ವಭೂತಮಯನಾದ, ಭಗವಂತನಾದ, ಭೂತಭಾವನನಾದ ಶ್ರೀಮನ್ನಾರಾಯಣನು ಶೇಷಶಯ್ಯಾಗತನಾಗಿ, ಜನಲೋಕವಾಸಿಗಳಾದ ಸನಕಾದಿಗಳಿಂದ ಸ್ತುತಿಸಲ್ಪಟ್ಟವನಾಗಿ, ಬ್ರಹ್ಮರೂಪಧರನಾಗಿ ಮಾಯಾವಿಕಾರವಾದ ಯೋಗನಿದ್ರೆಯಿಂದ ಕೂಡಿದವನಾಗಿ ಮಲಗಿರುವನು. ಇದೇ ನೈಮಿತ್ತಿಕನೆಂಬ ಪ್ರಳಯವು. ಭಗವಂತನು ಎಚ್ಚರವಾದ ಕಾಲದಲ್ಲಿ ಜಗದ್ವ್ಯಾಪಾರವು ನಡೆಯುವುದು ; ಯೋಗನಿದ್ರಾಸಕ್ತನಾದ ಕಾಲದಲ್ಲಿ ಜಗಲ್ಲಯವುಂಟಾಗುವುದು ; ಚತುರ್ಮುಖಬ್ರಹ್ಮನಿಗೆ ಹಗಲು ಎಷ್ಟು ದಿವಸವೋ, ಅಷ್ಟು ದಿವಸ ರಾತ್ರಿಯಾಗಿರುವುದು. ರಾತ್ರಿ ಕಳೆದನಂತರ ಬ್ರಹ್ಮನು ಪುನಃ ಸೃಷ್ಟಿಮಾಡುವನು. ಇದುವರೆಗೆ ಅವಾಂತರ ಪ್ರಳಯವಾದ ನೈಮಿತ್ತಿಕವನ್ನು ಹೇಳಿದೆನು. ಮುಂದೆ ಪ್ರಾಕೃತ ಪ್ರಳಯವನ್ನು ಹೇಳುತ್ತೇನೆ ಕೇಳು. ಶ್ರೀಕೃಷ್ಣನ ಇಚ್ಛೆಯಿಂದಲೇ ಸಕಲ ಲೋಕಗಳು ನಾಶವಾಗುವ ಕಾಲದಲ್ಲಿ ಮೊದಲು ಜಲದಿಂದ ಭೂಮಿಯ ಗಂಧಾತ್ಮಕವಾದ ಗುಣವು ನಾಶವಾಗುವುದು. ಭೂಮಿಯ ಗಂಧಾತ್ಮಕವಾದ ಗುಣವು ನಾಶವಾದನಂತರ, ಜಲಮಯವಾಗುವುದು. ಆಗ ಜಲವು ವೃದ್ಧಿಯಾಗಿ ಸಕಲ ಲೋಕವನ್ನೂ ವ್ಯಾಪಿಸುವುದು. ನೀರಿನ ಗುಣವನ್ನು ತೇಜಸ್ಸು ನಾಶಮಾಡುವುದು. ಇದರಿಂದ ನೀರು ತೇಜೋಭಾವವನ್ನು ಹೊಂದುವುದು. ಅಗ್ನಿಯು ಸಕಲಲೋಕವನ್ನೂ ಆವರಿಸುವುದು. ಅಗ್ನಿಯನ್ನು ವಾಯುವು ನಾಶಮಾಡುವುದು. ವಾಯುವಿನ ಸ್ಪರ್ಶಗುಣವನ್ನು ಆಕಾಶವು ನುಂಗುವುದು. ಅದರಿಂದ ವಾಯುವು ನಾಶವಾಗುವುದು. ಆಕಾಶದ ಶಬ್ದಗುಣವನ್ನು ಭೂತಾದಿಯು ನುಂಗುವುದು. ಭೂತಾದಿಯನ್ನು ಮಹತ್ತು ನಾಶಮಾಡುವುದು. ಈ ಏಳು ಪ್ರಕೃತಿಗಳೂ ವ್ಯಕ್ತ ಅವ್ಯಕ್ತಸ್ವರೂಪಗಳೆಂಬುದಾಗಿ ಹೇಳಲ್ಪಡುವುದು. ಅಂದರೆ, ಕಾರ್ಯಕಾರಣರೂಪುಗಳು. ಇವುಗಳೆಲ್ಲವೂ ಪರಮಾತ್ಮನಲ್ಲಿಯೇ ಲಯವಾಗುವುವು. ಸರ್ವೇಶ್ವರನಾದ ಶ್ರೀಮನ್ನಾರಾಯಣನಲ್ಲಿ ಹೆಸರು, ಕುಲ, ಜಾತಿ, ಇವುಗಳ ಕಲ್ಪನೆಯು ಇರುವುದಿಲ್ಲ; ಅಂದರೆ ಹೇಯಗುಣರಹಿತನಾಗಿರುವನು. ವಿಕಾರನಿಷೇಧನು. ಈ ಗುಣಗಳಿರತಕ್ಕವನೇ ಪರಬ್ರಹ್ಮನು. ಇವನಿರುವ ಸ್ಥಾನವೇ ಅತ್ಯುತ್ಕೃಷ್ಟವು. ಈ ಸ್ಥಾನವನ್ನು ಪಡೆದವರು ಯಾವಾಗಲೂ ಹಿಂತಿರುಗುವುದಿಲ್ಲ. ಆದುದರಿಂದ ಪರಬ್ರಹ್ಮನಾದ ಶ್ರೀಮನ್ನಾರಾಯಣನೇ ಸರ್ವಾಧಾರನು, ಪರಮೇಶ್ವರನು. ವಿಷ್ಣುವೇ ಸಕಲವೇದವೇದಾಂಗಗಳಲ್ಲಿ ಪರಬ್ರಹ್ಮನೆಂದು ಹೇಳಲ್ಪಡುವನು. ಪ್ರವೃತ್ತ, ನಿವೃತ್ತಧರ್ಮಗಳೆಂಬ ಎರಡು ಕರ್ಮಗಳಿಂದಲೂ ಪರಬ್ರಹ್ಮನಾದ ಶ್ರೀಮನ್ನಾರಾಯಣನು ಪೂಜಿಸಲ್ಪಡುವನು. ಋಗ್ಯಜುಸ್ಸಾಮಗಳಿಂದ

ಮಾಡುವ ಕರ್ಮಗಳೂ, ಪ್ರವೃತ್ತಧರ್ಮವು; ಜ್ಞಾನಯೋಗಾದಿಗಳಿಂದ ಪೂಜಿಸುವುದು ನಿವೃತ್ತಧರ್ಮವು; ಯೋಗಿಗಳಿಂದ ನಿವೃತ್ತಿಮಾರ್ಗವು ಅವಲಂಬಿಸಲ್ಪಡಲಾಗಿ ವಿಷ್ಣುವು ಮುಕ್ತಿಯನ್ನು ಕೊಡುವನು. ಹ್ರಸ್ವದೀರ್ಘಪ್ಲುತವೇ ಮೊದಲಾದ ಶಬ್ದವು ಅಚಿದ್ವಸ್ತುವು. ವಾಕ್ಯಗಳಿಗೆ ಅಗೋಚರವಾದುದು ಚಿದ್ವಸ್ತುವು. ಹೀಗೆ ಚಿದಚಿದಾತ್ಮಕನು ವಿಷ್ಣುವು ನಾಶರಹಿತನು; ವ್ಯಕ್ತಾವ್ಯಕ್ತಸ್ವರೂಪನು; ಪರಮಾತ್ಮನು, ವಿಶ್ವಾತ್ಮನು, ಇಂತಹ ಶ್ರೀಮನ್ನಾರಾಯಣನಿಗೆ ಅಹಸ್ಸು ರಾತ್ರಿ ಎಂಬುವುದೇ ಇಲ್ಲವು. ಪ್ರಳಯಕಾಲವು ಪರಮಾತ್ಮನಿಗೆ ರಾತ್ರಿಯೆಂತಲೂ, ಜಗದ್ವ್ಯಾಪಾರಕಾಲವು ಹಗಲೆಂತಲೂ ಸಹ ಹೇಳತಕ್ಕವುಗಳೆಲ್ಲಾ ಸರ್ವೇಶ್ವರನಾದ ಶ್ರೀಮನ್ನಾರಾಯಣನಿಗೆ ಉಪಚಾರವಾದುವು. ಈ ರೀತಿ ಪ್ರಾಕೃತಲಯವನ್ನು ಹೇಳಿದೆನು. ಮುಂದೆ ಹೇಳುವ ಆತ್ಯಂತಿಕಲಯುವನ್ನು ಕೇಳು" ಎಂದು ಮೈತ್ರೇಯನಿಗೆ ಪರಾಶರಮುನಿಗಳು ಹೇಳುತ್ತಾರೆ.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಷಷ್ಟಾಂಶದಲ್ಲಿ
ನಾಲ್ಕನೆಯ ಅಧ್ಯಾಯವು ಸಮಾಪ್ತಃ

ಐದನೆಯ ಅಧ್ಯಾಯವು

"ಬುದ್ಧಿಶಾಲಿಯಾದವನು ಜ್ಞಾನ ವೈರಾಗ್ಯ ಸಂಪನ್ನನಾಗಿ ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕವೆಂಬ ತಾಪತ್ರಯಗಳನ್ನು ತಿಳಿದು, ಆತ್ಯಂತಿಕವಾದ ಲಯವನ್ನು ಹೊಂದಬೇಕು. ಆಧ್ಯಾತ್ಮಿಕವಾದ ತಾಪವು ಶಾರೀರ ಮಾನಸವೆಂಬುದಾಗಿ ಎರಡು ವಿಧವಾಗಿರುವುದು. ಶಾರೀರತಾಪವು ಅನೇಕ ವಿಧವಾಗಿರುತ್ತದೆ. ಅವು ಯಾವುವೆಂದರೆ: ಶಿರೋರೋಗ, ಬಾತುಕೊಳ್ಳುವ ರೋಗ, ಜ್ವರ, ಶೂಲ, ಭಗಂಧರ, ಅಕ್ಷಿರೋಗ, ಅತಿಸಾರ, ಕುಷ್ಠಾಂಗ ಇವೇ ಮೊದಲಾದ ರೋಗಗಳು. ಮಾನಸತಾಪವು, ಕಾಮ, ಕ್ರೋಧ, ದ್ವೇಷ, ಲೋಭ, ಮೋಹ, ವಿಷಾದ, ಶೋಕ, ಅಸೂಯೆ, ಅವಮಾನ, ಮಾತ್ಸರ್ಯ ಇವೇ ಮೊದಲಾದವುಗಳು. ಮೃಗ, ಪಕ್ಷಿ, ಮನುಷ್ಯ, ಪಿಶಾಚ, ಉರಗ, ರಾಕ್ಷಸ ಇವೇ ಮೊದಲಾದವುಗಳಿಂದ ಉಂಟಾದ ಬಾಧೆಗಳಿಗೆ ಆದಿಭೌತಿಕವೆಂದೂ, ಶೀತ, ವಾತ, ಉಷ್ಣ, ಮಳೆ, ಮಿಂಚು, ನೀರು ಇವೇ ಮೊದಲಾದವುಗಳಿಂದುಂಟಾಗುವ ಬಾಧೆಗೆ ಆಧಿದೈವಿಕವೆಂದೂ ಹೆಸರು. ಈ ಬಾಧೆಗಳಲ್ಲದೆ ಗರ್ಭ, ಜನ್ಮ, ವೃದ್ಧಾಪ್ಯ, ಮರಣ, ನರಕಗಳೇ ಮೊದಲಾದ ಅನೇಕ ದುಃಖಗಳುಂಟಾಗುವುದು. ಬಹಳವಾದ ಮಲಗಳಿಂದ

ಆವೃತವಾದ ಗರ್ಭದಲ್ಲಿ ಸುಕುಮಾರಶರೀರವುಳ್ಳ ಜೀವವು ಉಲ್ಬಣದಿಂದ ಆವರಿಸಲ್ಪಟ್ಟು, ಚಕ್ರದಂತೆ ತಲೆಯನ್ನು ಕಾಲುಗಳ ಸಂದಿಯಲ್ಲಿಟ್ಟುಕೊಂಡು ವಾಸಮಾಡುತ್ತಿರುವುದು. ತಾಯಿಯು ಊಟಮಾಡುವ ಉಪ್ಪು, ಹುಳಿ, ಕಾರ ಮೊದಲಾದ ಪದಾರ್ಥಗಳಿಂದ ತಾಪವನ್ನು ಹೊಂದಿ ಬಹಳ ಹಿಂಸೆಯನ್ನು ಅನುಭವಿಸುವುದು. ಕೈಕಾಲುಗಳು ಅಲ್ಲಾಡುವುದಕ್ಕೆ ಅವಕಾಶವಿಲ್ಲದೆ ಮಲಮೂತ್ರಗಳೆಂಬ ಕೆಸರಿನಲ್ಲಿ ನಿರಂತರವಾಗಿ ಮಲಗಿಕೊಂಡು ಬಹಳ ಹಿಂಸೆಯನ್ನು ಅನುಭವಿಸುವುದು. ಕರ್ಮಾನುಸಾರ ಬಹು ದುಃಖಮಯವಾದ ಗರ್ಭದಲ್ಲಿ ಅನೇಕ ಜನ್ಮಗಳುಂಟಾಗುವುದು. ಮಲಮೂತ್ರಗಳಲ್ಲಿ ಮುಖವನ್ನಿಟ್ಟುಕೊಂಡು ಬ್ರಹ್ಮನಿಂದ ನಿಯುಕ್ತವಾದ ವಾಯುವಿನಿಂದ ಪೀಡಿತವಾಗಿರುವುದು. ಅಂದರೆ, ಗರ್ಭಕ್ಕಿಂತಲೂ ಹೊರಗೆ ಬರತಕ್ಕ ದ್ವಾರವು ಬಹಳ ಚಿಕ್ಕದಾದುದರಿಂದ ಅನೇಕ ಹಿಂಸೆಯನ್ನು ಹೊಂದುವುದು. ಜನನಕಾಲದಲ್ಲಿ ಪ್ರಸೂತಿವಾಯುವಿನಿಂದ ಅಧೋಮುಖವಾಗಿ ಅನೇಕ ಕ್ಲೇಶಗಳಿಂದ ಯುಕ್ತವಾಗಿ ತಾಯಿಯ ಉದರದಿಂದ ನೆಲದಮೇಲೆ ಬಿದ್ದು ಬಾಹ್ಯವಾಯುವಿನಿಂದ ಮೂರ್ಛೆಯನ್ನು ಹೊಂದಿ, ಜ್ಞಾನಶೂನ್ಯವಾಗುವುದು. ಈ ರೀತಿ ಹುಟ್ಟಿದ ಶಿಶುವು ನವೆಯಾದರೆ ಕೆರೆದುಕೊಳ್ಳುವುದಕ್ಕೂ ಅಲ್ಲಾಡುವುದಕ್ಕೂ, ಸ್ನಾನ ಪಾನ ಆಹಾರ ಇವುಗಳನ್ನು ಮಾಡಿಕೊಳ್ಳುವುದಕ್ಕೂ ಸಹ ಶಕ್ತಿಯಿಲ್ಲದೆ ಪರಾಧೀನವಾಗಿರುವುದು. ಅಶುಚಿಯಾದ ಹಾಸಿಗೆಯಲ್ಲಿ ಮಲಗುವುದೂ, ತಿಗಣೆ, ಸೊಳ್ಳೆ, ಚಿಗಟ ಇವುಗಳಿಂದ ಹಿಂಸೆಯನ್ನು ಅನುಭವಿಸುತ್ತಾ, ಪರಿಹಾರಮಾಡಿಕೊಳ್ಳುವುದಕ್ಕೆ ಅಸಮರ್ಥನಾಗಿರುವುದು. ಗರ್ಭದಲ್ಲಿಯೂ, ಜನನವಾದಮೇಲೆ ಬಾಲಭಾವದಲ್ಲಿಯೂ ಸಹ ಅನೇಕ ದುಃಖಗಳನ್ನು ಅನುಭವಿಸಿ, ಅಜ್ಞಾನದಿಂದ ಮೂಢನಾಗಿ, ನಾನು ಯಾರು, ಎಲ್ಲಿಂದ ಬಂದೆನು, ಎಲ್ಲಿಗೆ ಹೋಗುವೆನು, ಯಾವ ಕರ್ಮದಿಂದ ಬದ್ಧನಾಗಿರುವೆನು, ಇದಕ್ಕೆ ಕಾರಣವೇನು, ಯಾವ ಕೆಲಸ ಮಾಡಬೇಕು, ಮಾಡಬಾರದ ಕೆಲಸವಾವುದು, ಗುಣದೋಷಗಳಾವುವು ಎಂಬ ಜ್ಞಾನವಿಲ್ಲದೆ ಪಶುಸಮಾನನಾಗಿ, ಉದರಾದಿಗಳ ನಿಮಿತ್ತವಾಗಿ ಅನೇಕ ದುಃಖಗಳನ್ನು ಹೊಂದುತ್ತಾನೆ. ಕರ್ಮಗಳನ್ನು ಮಾಡುವುದನ್ನು ಬಿಟ್ಟು, ಅಜ್ಞಾನವನ್ನು ಹೊಂದಿ, ತಮೋಗುಣಪ್ರಚುರವಾದ ಕೆಲಸಗಳನ್ನೇ ಮಾಡುವನು. ಕರ್ಮಲೋಪವನ್ನು ಮಾಡಿದುದಕ್ಕೆ ನರಕಾನುಭವವೇ ಫಲವು. ಆದುದರಿಂದ ಅಜ್ಞಾನಿಗಳಿಗೆ ಇಹಪರಗಳಲ್ಲಿ ದುಃಖವೇ ಹೊರತು ಸುಖವಿರುವುದಿಲ್ಲವು. ವೃದ್ಧಾಪ್ಯದಲ್ಲಿ ಗಳಿತವಾದ ಅಂಗಗಳುಳ್ಳವನಾಗಿ, ಹಲ್ಲುಗಳು ಬಿದ್ದು, ರಕ್ತನಾಡಿಗಳು ಶಿಥಿಲವಾಗಿ ತಲೆಯನ್ನು ಅಲ್ಲಾಡಿಸುತ್ತಾ, ನೇತ್ರಪಾಟವು ಕಮ್ಮಿಯಾಗಿ ಸಕಲ ಮೂಳೆಗಳೂ ಕಾಣಿಸುವಂತೆ ಸೊಂಟವನ್ನು ಬಗ್ಗಿಸಿದವನಾಗಿ, ಅಲ್ಪಾಹಾರವುಳ್ಳವನಾಗಿ, ಅಲ್ಪ

ವಾದ ವ್ಯಾಪಾರವುಳ್ಳವನಾಗಿ, ನಡೆಯುವುದಕ್ಕೂ ಕೂತುಕೊಳ್ಳುವುದಕ್ಕೂ, ಮಲಗುವುದಕ್ಕೂ ಸಹ ಅಸಮರ್ಥನಾಗಿ, ಕಿವಿಗಳು ಮಂದವಾಗಿ, ಜೊಲ್ಲು ಸುರಿಸುವ ಮುಖವುಳ್ಳವನಾಗಿ, ಇಂದ್ರಿಯಗಳ ಸ್ವಾಧೀನತಪ್ಪಿದವನಾಗಿ ಮರಣೋನ್ಮುಖನಾಗಿ, ಸಕಲವಸ್ತುಗಳಲ್ಲಿಯೂ ಸ್ಮರಣೆಯಿಲ್ಲದವನಾಗಿ, ಮಾತನಾಡುವುದಕ್ಕೆ ಅಸಮರ್ಥನಾಗಿ, ಶ್ವಾಸಶ್ಲೇಷ್ಮಾದಿಗಳಿಂದ ಪೀಡಿತನಾಗಿ, ನಿದ್ರೆಯಿಲ್ಲದವನಾಗಿ, ಇತರರಿಂದ ಮಲಗಿಸಿ ಕೂಡಿಸಲ್ಪಡುವನಾಗಿ, ಭೃತ್ಯ, ಪುತ್ರ, ಹೆಂಡತಿ ಇವರಿಗೆ ಅವಮಾನಾಸ್ಪದನಾಗಿ, ಶೌಚಾಚಾರ ಆಹಾರಗಳಿಲ್ಲದವನಾಗಿ, ಪರಿಜನರಿಗೆ ಹಾಸ್ಯಾಸ್ಪದನಾಗಿ, ಜನ್ಮಾಂತರಗಳಲ್ಲಿ ಮಾಡಿದ ಪಾಪಕೃತ್ಯಗಳನ್ನು ಸ್ಮರಿಸುತ್ತಾ, ಅನೇಕ ದುಃಖಗಳಿಂದ ತಪ್ತನಾಗಿ ಕಷ್ಟತರವಾದ ವೃದ್ಧಾಪ್ಯವನ್ನು ಅನುಭವಿಸಿ, ಮರಣಕಾಲದಲ್ಲಿ ಕೈಕಾಲು ಕುತ್ತಿಗೆ ಇವುಗಳೆಲ್ಲವೂ ಶಿಥಿಲವಾಗಿ ನಡುಗುತ್ತಾ, ಸ್ವಲ್ಪಕಾಲ ಜ್ಞಾನವುಳ್ಳವನಾಗಿಯೂ, ಸ್ವಲ್ಪಕಾಲ ಅಜ್ಞಾನಪರವಶನಾಗಿಯೂ, ಧನ, ಧಾನ್ಯ, ಪುತ್ರ, ಕಳತ್ರ, ಭೃತ್ಯ, ಗೃಹ ಇವುಗಳಲ್ಲಿ ಮಮತೆಯುಳ್ಳವನಾಗಿ, ದಾರುಣವಾದ ರೋಗಗಳಿಂದ ಪೀಡಿತನಾಗಿ, ಕಣ್ಣುಗುಡ್ಡೆಯನ್ನು ತಿರುಗಿಸುತ್ತಾ, ಶ್ವಾಸಾದಿಗಳಿಂದ ಘುರಘುರಾಯಮಾನನಾಗಿ, ಉದಾನವಾಯು ಪ್ರಪೀಡಿತನಾಗಿ, ಮಹತ್ತರವಾದ ತಾಪದಿಂದ ವ್ಯಾಪ್ತನಾಗಿ, ಯಮನದೂತರ ಪಾಶದಿಂದ ಹಿಂಸಿಸಲ್ಪಟ್ಟವನಾಗಿ ಪ್ರಾಣವನ್ನು ಬಿಟ್ಟು, ಬಹುಕ್ಲೇಶವಾದ ಯಾತನಾದೇಹವನ್ನು ಹೊಂದುತ್ತಾನೆ. ಈ ಪ್ರಕಾರ ಮಹಾಭಯಂಕರವಾದ ದುಃಖಮಯವಾದ ಮರಣವನ್ನು ಹೊಂದಿ ನಂತರ ನರಕಯಾತನೆಯನ್ನು ಅನುಭವಿಸುವುದನ್ನು ಹೇಳುತ್ತೇನೆ ಕೇಳು: ಯಮದೂತರು ಪಾಶವನ್ನು ಕಟ್ಟಿ ಎಳೆದುಕೊಂಡು, ದಂಡದಿಂದ ಹೊಡೆಯುತ್ತಾ, ಯಮನ ಭಯಂಕರವಾದ ಮಾರ್ಗವನ್ನು ನೋಡುತ್ತಾ, ಕುದಿಯತಕ್ಕ ಎಣ್ಣೆ ಕೊಪ್ಪರಿಗೆಯಲ್ಲಿ ಬೀಳುವುದೂ ಯಂತ್ರ, ಶಸ್ತ್ರ, ಕತ್ತಿಗಳ ಹೊಡೆತವನ್ನು ಅನುಭವಿಸುವುದೂ, ಕತ್ತರಿಗಳಿಂದ ಕತ್ತರಿಸುವುದೂ, ಮೂಷೆಯಲ್ಲಿ ಸುಡುವುದೂ, ಶೂಲಾಗ್ರದಲ್ಲಿ ಸಂಚರಿಸುವುದೂ, ಹುಲಿಗಳ ಬಾಯಿಯಲ್ಲಿ ಬೀಳುವುದೂ, ಗೃಧ್ರಗಳಿಂದ ಕುಕ್ಕುವುದೂ, ಆನೆಗಳಿಂದ ತುಳಿಯುವುದೂ, ತೈಲಭಾಂಡದಲ್ಲಿ ಕುದಿಯುವುದೂ, ಕ್ಷೇಪಯಂತ್ರಗಳಿಂದ ಎಸೆಯುವುದೂ ಇವೇ ಮೊದಲಾದ ಪಾಪಫಲಗಳಿಂದ ಸಹಿಸಲಸಾಧ್ಯವಾದ ನರಕಗಳನ್ನು ಅನುಭವಿಸುತ್ತಾನೆ. ಮೈತ್ರೇಯನೇ! ನರಕಗಳ ಸಂಖ್ಯೆಯು ಬಹಳವಾಗಿರುವುದರಿಂದ ಅವುಗಳನ್ನು ಹೇಳಲಸಾಧ್ಯವು. ಈ ಮಹದುಃಖವು ನರಕದಲ್ಲಿ ಮಾತ್ರವೆಂಬುದಾಗಿಯೇ ತಿಳಿಯಬೇಡ, ಸ್ವರ್ಗದಲ್ಲಿಯೂ ಕೂಡ ಪುಣ್ಯವು ಕ್ಷೀಣವಾದನಂತರ ಕೆಳಕ್ಕೆ ಬೀಳುವ ದುಃಖಗಳು ಇರುವುದು. ನರಕಾದಿಗಳನ್ನು ಅನುಭವಿಸಿ, ಪುನಃ

ಗರ್ಭದಲ್ಲಿ ಹುಟ್ಟುವುದೂ, ಗರ್ಭದಲ್ಲಿಯೇ ನಾಶವಾಗುವುದೂ, ಬಾಲ್ಯದಲ್ಲಿಯೂ, ಯೌವನದಲ್ಲಿಯೂ, ವೃದ್ಧಾಪ್ಯದಲ್ಲಿಯೂ ಸಹ ಮರಣವನ್ನು ಹೊಂದುವುದೂ, ಬದುಕಿರುವವರೆವಿಗೂ ದುಃಖವನ್ನೇ ಅನುಭವಿಸುತ್ತಾ, ನೂಲಿಗೆ ಕಾರಣವಾದ ಹತ್ತಿಬೀಜದಂತೆ ಜೀವನು ಪರಂಪರೆಯಾಗಿ ದುಃಖಾವಿಷ್ಟನಾಗುತ್ತಾನೆ. ಮನುಷ್ಯರಿಗೆ ದ್ರವ್ಯಪುತ್ರಾದಿಗಳು ಪ್ರೀತಿಕರಗಳು. ಇವುಗಳು ಎಷ್ಟು ಪ್ರೀತಿಯನ್ನುಂಟುಮಾಡುವುವೋ ಅವೆಲ್ಲವೂ ದುಃಖಕ್ಕೆ ಬೀಜಗಳಾಗಿರುವುವು. ಕಳತ್ರ, ಪುತ್ರ, ಮಿತ್ರ, ಧನ, ಗೃಹ, ಕ್ಷೇತ್ರ ಇವುಗಳೆಲ್ಲವೂ ಸ್ವಲ್ಪವೂ ಸುಖವನ್ನುಂಟುಮಾಡುವುದಿಲ್ಲ. ಗರ್ಭ, ಜನ್ಮ, ವಾರ್ಧಕಾದಿ ದುಃಖಮಯವಾದ ಅವಸ್ಥೆಗಳೆಂಬ ರೋಗಗಳಿಗೆ ಭಗವಂತನನ್ನು ಹೊಂದಬೇಕೆಂಬುವುದೊಂದೇ ಔಷಧಿಯು. ಆದುದರಿಂದ ಪಂಡಿತರಾದ ಮನುಷ್ಯರು ಭಗವತ್ಪ್ರಾಪ್ತಿಗೆ ನಿರಂತರವಾಗಿ ಯತ್ನಿಸಬೇಕು. ಭಗವಂತನನ್ನು ಹೊಂದಬೇಕಾದರೆ ಕರ್ಮಜ್ಞಾನಗಳೆರಡೇ ಉಪಾಯವಾಗಿರುವುದು. ಕರ್ಮಸ್ವರೂಪವನ್ನು ಹಿಂದೆಯೇ ಹೇಳಿರುವೆನು. ಈಗ ಜ್ಞಾನಸ್ವರೂಪವನ್ನು ಹೇಳುತ್ತೇನೆ ಕೇಳು: ಜ್ಞಾನವು ಆಗಮೋಕ್ತಜ್ಞಾನ, ವಿವೇಕಜನ್ಯಜ್ಞಾನವೆಂದು ಎರಡು ವಿಧವಾಗಿರುವುದು; ಅಂದರೆ ಶಬ್ದಬ್ರಹ್ಮ, ಪರಬ್ರಹ್ಮವೆಂದರ್ಥವು. ಶ್ರೋತ್ರೇಂದ್ರಿಯಾದಿಗಳಿಂದ ವೇದಶ್ರವಣವನ್ನು ಮಾಡುವುದಕ್ಕೆ ಪೂರ್ವವಾಗಿರುವ ಅವಿದ್ಯಾಕರ್ಮ ಸಂಚಯಗಳು ನಾಶವಾಗಿ ಶ್ರವಣಾನಂತರ, ಯಾಥಾತ್ಮ್ಯಜ್ಞಾನವುಂಟಾಗುವುದು. ವೇದಾಧ್ಯಯನವು ಅಜ್ಞಾನವೆಂಬ ಕತ್ತಲೆಗೆ ದೀಪದಂತಿರುವುದು. ಆಗಮಜನ್ಯಜ್ಞಾನವುಂಟಾದನಂತರ, ವಿವೇಕಜನ್ಯಜ್ಞಾನವು ಸೂರ್ಯನಂತೆ ಪ್ರಕಾಶವಾಗುವುದು. ಅಂದರೆ, ಕರ್ಮಗಳನ್ನು ಮಾಡಿ, ಜ್ಞಾನನಿಷ್ಠನಾಗಬೇಕೆಂಬ ಅಭಿಪ್ರಾಯದ ವಿಷಯದಲ್ಲಿ ಮನುವು ಹೇಳಿರುವುದೇನೆಂದರೆ: ಶಬ್ದಬ್ರಹ್ಮದಲ್ಲಿ ನಿಷ್ಠನಾದವನು, ಪರಬ್ರಹ್ಮವನ್ನು ಹೊಂದುತ್ತಾನೆ. ಅಂದರೆ, ಕರ್ಮದಿಂದ ಭಗವಂತನನ್ನು ಆರಾಧಿಸಿ, ಜ್ಞಾನವನ್ನು ಹೊಂದಿ, ಮೋಕ್ಷವನ್ನು ಪಡೆಯಬೇಕೆಂದಭಿಪ್ರಾಯವು; ಆದುದರಿಂದ, ಶಬ್ದಜನ್ಯಜ್ಞಾನ, ವಿವೇಕಜನ್ಯಜ್ಞಾನವೆರಡೂ ಒಂದೇ ಆಗಿರುವುದರಿಂದ ವ್ಯತ್ಯಾಸವಿರುವುದಿಲ್ಲ. ಇದೇ ಅರ್ಥವನ್ನೇ ವೇದದಲ್ಲಿ ಹೇಳಿರುತ್ತದೆ. ಪರಬ್ರಹ್ಮಸ್ವರೂಪವೆಂತಹುದೆಂದರೆ: ಜ್ಞಾನೋತ್ಪತ್ತಿಗೆ ಪೂರ್ವದಲ್ಲಿ, ಅವ್ಯಕ್ತನಾದವನು, ವಿಕಾರರಹಿತನು, ನಾಶರಹಿತನು, ವಾಙ್ಮನಸ್ಸುಗಳಿಗೆ ಅಗೋಚರನು, ದೇವಮನುಷ್ಯಾದಿ ರೂಪರಹಿತನು, ಸರ್ವಕ್ಕೂ ನಿಯಾಮಕನು, ಕಾರಣರಹಿತನು, ನಿತ್ಯನು, ವ್ಯಾಪವ್ಯಾಪಕ ರೂಪದಿಂದಿರತಕ್ಕವನು, ನಿತ್ಯಸೂರಿಗಳಿಂದ ಸದಾ ನೋಡತಕ್ಕವನು, ಈ ರೀತಿ ವೇದಗಳು ಬ್ರಹ್ಮಸ್ವರೂಪವನ್ನು ಹೇಳಿರುವುದರಿಂದ ನಿರ್ಗುಣಬ್ರಹ್ಮನೆಂಬ ವಾಕ್ಯಗಳು ತಿರಸ್ಕೃತ

ವಾಗಿರುವುದು. ಆದುದರಿಂದ ಮೋಕ್ಷಾಪೇಕ್ಷಿಗಳು ಪರಬ್ರಹ್ಮನ ಸ್ಥಾನವನ್ನೇ ಧ್ಯಾನಿಸುತ್ತಾರೆ. ಸಗುಣಬ್ರಹ್ಮಸ್ಥಾನವೇ ಪರಮಪದವು. ದ್ವಾದಶಾಕ್ಷರಮಂತ್ರ ಚಿಂತಕರು, ಸಕಲಹೇಯಪ್ರತ್ಯನೀಕನಾಗಿ ಕಲ್ಯಾಣಗುಣಾಕರನಾಗಿ ಜಗತ್ಕಾರಣ ನಾದ, ಭಗವಚ್ಛಬ್ದವಾಚ್ಯನಾದ ಶ್ರೀಮನ್ನಾರಾಯಣನೇ ಪರಬ್ರಹ್ಮನೇ ಹೊರತು, ಬೇರೆ ಇಲ್ಲವೆಂದು ಹೇಳುತ್ತಾರೆ. ಭಗವಚ್ಛಬ್ದವು ಶ್ರೀಮನ್ನಾರಾಯಣ ನಿಗೆ ಸಹಜವಾದುದು; ಇತರರಿಗೆ ಉಪಚಾರವಾಗಿರುವುದು. ಈ ಅರ್ಥವನ್ನೇ ವೇದಗಳು ಹೇಳುತ್ತವೆ. 'ಭ' ಅಂದರೆ, ಸ್ವಾಮಿ, ಪೋಷಕ, ಎಂದೂ 'ಗ' ಎಂದರೆ, ರಕ್ಷಕನೂ, ನಡೆಸತಕ್ಕವನೆಂದೂ 'ವ' ಎಂದರೆ, ಸಕಲ ಪ್ರಾಣಿಗಳ ವಾಸಕ್ಕೆ ಸ್ಥಾನವೆಂದೂ ಸಹ ಭಗವಚ್ಛಬ್ದಕ್ಕೆ ಅರ್ಥವು ಹೇಳಲ್ಪಟ್ಟಿದೆ ಅಥವಾ ಭಗವಾನ್ ಅಂದರೆ ಷಡ್ಗುಣ ಪೂರ್ಣನಾದವನೆಂದೂ ಸಹ ಅರ್ಥವು. ಹೀಗಿರು ವುದರಿಂದ ಭಗವಚ್ಛಬ್ದವು ವಾಸುದೇವನಿಗೇ ಹೊರತು ಇತರರಿಗೆ ಸಲ್ಲತಕ್ಕುದಲ್ಲವು. ಉತ್ಪತ್ತಿ, ಪ್ರಳಯ, ಪ್ರಾಣಿಗಳ ಗಮನಾಗಮನ ಇತ್ಯಾದಿಗಳೆಲ್ಲವೂ, ಭಗವಚ್ಛಬ್ದ ವಾಚ್ಯವಾದವುಗಳು. ಜ್ಞಾನ, ಶಕ್ತಿ, ಬಲ, ಐಶ್ವರ್ಯ, ಪರಾಕ್ರಮ, ತೇಜಸ್ಸು ಇವುಗಳೆಲ್ಲವೂ ಹೇಯಗುಣರಹಿತಗಳಾಗಿ ಭಗವಚ್ಛಬ್ದ ವಾಚ್ಯಗಳು. ಸಕಲ ಪ್ರಾಣಿಗಳೂ, ಪರಮಾತ್ಮನಲ್ಲಿ ವಾಸಮಾಡುವುದರಿಂದಲೂ, ಪರಮಾತ್ಮನು ಸಕಲ ಪ್ರಾಣಿಗಳಲ್ಲಿ ವಾಸಮಾಡುವುದರಿಂದಲೂ, ವಾಸುದೇವನೆಂದು ಹೇಳಲ್ಪಟ್ಟಿರು ವುದು. ಈ ವಾಸುದೇವ ಶಬ್ದಾರ್ಥವನ್ನು ಖಾಂಡಿಕ್ಯ ಜನಕನಿಗೆ, ಕೇಶಿಧ್ವಜನು ಹೇಳಿದ್ದೇನೆಂದರೆ ಪರಮಾತ್ಮನಾದ ಶ್ರೀ ವಾಸುದೇವನು, ಮಹದಾದಿವಿಕಾರ ಗಳಿಂದಲೂ, ಸತ್ವಾದಿ ಗುಣಗಳಿಂದಲೂ, ವಿಲಕ್ಷಣನಾದವನು; ಕರ್ಮರಹಿತನು; ಮುಕ್ತರಿಗಿಂತಲೂ ವಿಲಕ್ಷಣನು; ಅಂತರ್ಬಹಿರ್ವ್ಯಾಪ್ತನು; ಸಮಸ್ತ ಕಲ್ಯಾಣ ಗುಣಾತ್ಮಕನು; ಜಗದ್ಧಿತಾರ್ಥವಾಗಿ ಅವತಾರಕಾಲಗಳಲ್ಲಿ ಇಚ್ಛಾಗ್ರಹೀತ ದೇಹ ವುಳ್ಳವನು; ಭಗವಾನ್ ಎಂಬ ಶಬ್ದದಲ್ಲಿ ಭ, ಗ, ವ ಎಂಬ ಮೂರು ಅಕ್ಷರಗಳ ಅರ್ಥವನ್ನು ಹಿಂದೆ ಹೇಳಿ, ಈಗ "ಅನ" ಎಂಬ ಅಕ್ಷರದ ಅರ್ಥವನ್ನು ಹೇಳುತ್ತಾರೆ: 'ನ' ಎಂದರೆ, ಕಲ್ಯಾಣಗುಣಾಕರನಾದ ವಾಸುದೇವನಲ್ಲಿ ಕ್ಲೇಶಾದಿ ಹೇಯ ಗುಣಗಳಿರುವುದಿಲ್ಲವೆಂದು ಅರ್ಥ. ಈ ರೀತಿ ಭಗವಚ್ಛಬ್ದವಾಚ್ಯನಾದ ವಾಸು ದೇವನೇ ಸರ್ವೇಶ್ವರನು, ಸರ್ವದರ್ಶಿಯು, ಸರ್ವವೇದಿಯು, ಸರ್ವಶಕ್ತನು, ದೋಷ ರಹಿತನು, ನಿರ್ಮಲನು."

ಇಲ್ಲಿಗೆ ಶ್ರೀ ವಿಷ್ಣು ಪುರಾಣದಲ್ಲಿ ಷಷ್ಠಾಂಶದಲ್ಲಿ
ಐದನೆಯ ಅಧ್ಯಾಯವು ಸಮಾಪ್ತಃ

ಆರನೆಯ ಅಧ್ಯಾಯವು

"ವೇದಾರ್ಥದಿಂದಲೂ, ಯೋಗದಿಂದಲೂ ಸಹ ಪರಮಾತ್ಮನು ಕಾಣುವನು.
ರಬ್ರಹ್ಮಪ್ರಾಪ್ತಿಗೆ ಇವುಗಳೇ ಕಾರಣವು. ಸ್ವಾಧ್ಯಾಯ, ಯೋಗ, ಇವುಗಳ
ಸತ್ತಿನಿಂದ ಪರಮಾತ್ಮನು ಪ್ರಕಾಶವಾಗುವನು. ಪರಬ್ರಹ್ಮನನ್ನು ನೋಡುವುದ
ಕ್ಕೋಸ್ಕರ ವೇದಾರ್ಥಜ್ಞಾನವು ಆವಶ್ಯವು. ಮಾಂಸ ಚಕ್ಷುಸ್ಸಿನಿಂದ ಪರಬ್ರಹ್ಮ
ನ್ನು ನೋಡುವುದಕ್ಕಾಗುವುದಿಲ್ಲವಾದುದರಿಂದ ಯೋಗಚಕ್ಷುಸ್ಸಿನಿಂದ ನೋಡ
ೇಕು" ಎಂದು ಪರಾಶರಮಹರ್ಷಿಯು ಹೇಳಲು, ಮೈತ್ರೇಯರು ಕೇಳುತ್ತಾರೆ:
ನೆಂದರೆ "ಓ ಭಗವಂತನೇ! ಯೋಗವೆಂದರೇನು? ಯೋಗದ ವಿಚಾರವನ್ನು
ಸ್ತಾರವಾಗಿ ಹೇಳಿದರೆ, ನಾನೂ ಭಗವಂತನನ್ನು ನೋಡುತ್ತೇನೆ" ಎಂಬುದಾಗಿ
ೇಳಲು; ಆ ಮಾತಿಗೆ ಶ್ರೀ ಪರಾಶರರು ಹೇಳುತ್ತಾರೆ. "ಧರ್ಮಧ್ವಜನಾದ
ನಕನಿಗೆ ಮಿತಧ್ವಜನೆಂಬ ಮಗನೂ, ಮಿತಧ್ವಜನಿಗೆ ಕೃತಧ್ವಜನೂ, ಇವನಿಗೆ
ೇಶಿಧ್ವಜನೂ ಸಹ ಹುಟ್ಟಿದರು. ಮಿತಧ್ವಜನಿಗೆ ಖಾಂಡಿಕ್ಯ ಜನಕನೆಂಬ
ುಗನೂ ಸಹ ಇದ್ದರು. ಖಾಂಡಿಕ್ಯನು ಕರ್ಮಮಾರ್ಗದಲ್ಲಿ ರಾಜ್ಯವನ್ನು ಪರಿ
ಾಲಿಸುತ್ತಿದ್ದನು. ಕೇಶಿಧ್ವಜನು ಆತ್ಮವಿದ್ಯಾವಿಶಾರದನಾಗಿ ರಾಜ್ಯವಾಳು
ತ್ತಿದ್ದನು. ಇವರಿಬ್ಬರಿಗೂ ವಿವಾದವುಂಟಾಗಿ, ಯುದ್ಧದಲ್ಲಿ ಖಾಂಡಿಕ್ಯನು ಪರಾಜಿತ
ಾಗಿ, ಅಲ್ಪವಾಗಿ ಸಾಧನಗಳನ್ನು ತೆಗೆದುಕೊಂಡು ಮಂತ್ರಿಗಳಿಂದ ಕೂಡಿ ಅರಣ್ಯ
ಾಸಿಯಾದನು. ಕೇಶಿಧ್ವಜನು ಜ್ಞಾನನಿಷ್ಠನಾಗಿ ಮೋಕ್ಷವನ್ನು ಹೊಂದುವುದ
ಕ್ಕೋಸ್ಕರ ಅನೇಕ ಯಜ್ಞಗಳನ್ನು ಮಾಡುತ್ತಿರುವ ಕಾಲದಲ್ಲಿ ಪ್ರವರ್ಗ್ಯವೆಂಬ
ಹೋಮಕ್ಕೋಸ್ಕರ ಹಾಲನ್ನು ಕರೆಯುತ್ತಿದ್ದ ಹಸುವನ್ನು ಅರಣ್ಯದಲ್ಲಿ ಹುಲಿಯು
ಹೊಡೆದುಹಾಕಿತು. ರಾಜನು ಹವಿಸ್ಸಿಗೋಸ್ಕರ ಹಾಲನ್ನು ಕೊಡುತ್ತಿದ್ದ ಹಸುವು
ಹತವಾದುದನ್ನು ಕಂಡು ಇದಕ್ಕೆ ಪ್ರಾಯಶ್ಚಿತ್ತವೇನೆಂದು ಋತ್ವಿಕರನ್ನು ಕೇಳಲು;
ಅವರು ನಮಗೆ ಪ್ರಾಯಶ್ಚಿತ್ತವು ತಿಳಿಯದು; ಕಶೇರುವನ್ನು ಕೇಳು ಎನಲು;
ರಾಜನು ಕಶೇರುವನ್ನು ಕೇಳಲು, ಕಶೇರುವು ಶುನಕಮಹರ್ಷಿಯನ್ನು ಕೇಳೆನಲು,
ರಾಜನು ಶುನಕನನ್ನು ಕೇಳಿದುದಕ್ಕೆ, ಶುನಕರು ನನಗೂ ಈ ಪ್ರಾಯಶ್ಚಿತ್ತವು
ಗೊತ್ತಿಲ್ಲ. ಇದನ್ನು ತಿಳಿದಿರತಕ್ಕವನು ಯಾರೆಂದರೆ, ನಿನ್ನ ಶತ್ರುವಾದ ಖಾಂಡಿಕ್ಯ
ಜನಕನೊಬ್ಬನೇ ಹೊರತು ಮತ್ಯಾರೂ ತಿಳಿದಿಲ್ಲವಾದುದರಿಂದ ಅವನಲ್ಲಿ
ಹೋಗಿ ಕೇಳೆನಲು, ಕೇಶಿಧ್ವಜನು ರಥಾರೋಹಣನಾಗಿ ಕೃಷ್ಣಜಿನಧರನಾಗಿ,
ಖಾಂಡಿಕ್ಯನಿದ್ದ ವನಕ್ಕೆ ಬಂದನು. ಖಾಂಡಿಕ್ಯನು ತನ್ನ ಶತ್ರುವಾದ ಕೇಶಿಧ್ವಜನು
ಬರುವುದನ್ನು ಕಂಡು ಧನುಸ್ಸನ್ನು ಧರಿಸಿ ಕೋಪಾವಿಷ್ಟನಾಗಿ ಕೇಶಿಧ್ವಜನನ್ನು
ಕುರಿತು ಹೇಳುತ್ತಾನೆ: "ಎಲೈ ಕೇಶಿಧ್ವಜನೇ, ನೀನು ಕೃಷ್ಣಾಜಿನ ಕವಚವನ್ನು

ಧರಿಸಿ ನನ್ನನ್ನು ಸಂಹರಿಸುವೆಯಾ? ಕೃಷ್ಣಾಜಿನವನ್ನು ಧರಿಸಿದ ನಿನ್ನನ್ನು ನಾನ ಸಂಹರಿಸುವುದಿಲ್ಲವೆಂದು ಬಂದಿರುವೆಯೋ? ಮೃಗಗಳ ಪೃಷ್ಠದಲ್ಲಿ ಕೃಷ್ಣಾಜಿನವಿ ಮಾತ್ರಕ್ಕೆ ಮೃಗಗಳನ್ನು ಕೊಲ್ಲುವುದಿಲ್ಲವೇ? ಅದೇ ಪ್ರಕಾರ ನಿನ್ನನ್ನು ಬಾಣ ಗಳಿಂದ ಕೊಲ್ಲುವೆನು. ನನ್ನ ರಾಜ್ಯವನ್ನು ಅಪಹರಿಸಿರುವುದರಿಂದ ನಿನ್ನನ ಸಂಹರಿಸುವುದೇ ಯುಕ್ತವಾಗಿರುವುದು ಎಂದು ಹೇಳಲು, ಕೇಶಿಧ್ವಜನು ಹೇಳ ತ್ತಾನೆ "ಓ ಖಾಂಡಿಕ್ಯನೇ! ನಿನ್ನನ್ನು ಈಗಿರುವ ಸಂಶಯವನ್ನು ಕೇಳುವುದಕ್ ಬಂದಿರುವೆನು, ಆದುದರಿಂದ ಕೋಪವನ್ನೂ ಬಾಣವನ್ನೂ ಸಹ ಬಿಡು ಎಂದ ಹೇಳಲು, ಖಾಂಡಿಕ್ಯನು ಏಕಾಂತದಲ್ಲಿ ಮಂತ್ರಿಗಳಿಂದ ಕೂಡಿ ಆಲೋಚಿಸುವ ಕಾಲದಲ್ಲಿ ಮಂತ್ರಿಗಳು, ಶತ್ರುವಾದ ಕೇಶಿಧ್ವಜನು ನಿನ್ನ ಸಮೀಪಕ್ಕೆ ಬಂದಿರು ವುದರಿಂದ ಇವನನ್ನು ಸಂಹಾರಮಾಡಿದರೆ, ಭೂಮಿಯು ನಿನ್ನ ವಶವಾಗುವುದೆಂದು" ಹೇಳಲು, ಖಾಂಡಿಕ್ಯನು, "ನೀವು ಹೇಳಿದ ಮಾತು ನಿಜವಾದುದು, ಆದರೆ, ಲೋಕಗಳನ್ನು ಜಯಿಸುವುದಕ್ಕಿಂತಲೂ ಭೂಮಿಯನ್ನು ಜಯಿಸುವುದು ಅಧಿಕ ವಾದುದಲ್ಲ. ಪರಲೋಕವನ್ನು ಜಯಿಸಿದರೆ ಬಹುಕಾಲ ಸುಖಪಡಬಹುದು, ಭೂಮಿಯನ್ನು ಜಯಿಸುವುದು ಅಲ್ಪ ಸುಖವಾದ ಕಾಲವು, ಆದುದರಿಂದ ಇವನನ್ನು ಸಂಹರಿಸದೆ ಯಾತಕ್ಕೆ ಬಂದಿರುವೆಯೆಂದು ಕೇಳಿ ಅವನಿಗೆ ಪ್ರತ್ಯುತ್ತರವನ್ನು ಹೇಳುತ್ತೇನೆಂದು ಮಂತ್ರಿಗಳಿಗೆ ಸಮಾಧಾನವನ್ನುಹೇಳಿ, ಕೇಶಿಧ್ವಜನ ಸಮೀಪಕ್ಕೆ ಬಂದು "ಏನನ್ನು ಕೇಳುವುದಕ್ಕೆ ಬಂದಿರುವೆಯೋ ಅದನ್ನು ಕೇಳು ಉತ್ತರವನ್ನು ಹೇಳುವೆನೆಂದನು." ಆಗ ಕೇಶಿಧ್ವಜನು ಯಜ್ಞಸಂಬಂಧವಾದ ಧರ್ಮಧೇನುವನ್ನು ಹುಲಿಯು ಹೊಡೆದುಹಾಕಿತು. ಇದರಿಂದ ಯಜ್ಞವಿಘ್ನವುಂಟಾದುದಕ್ಕಾಗಿ ಪ್ರಾಯಶ್ಚಿತ್ತವನ್ನು ಕೇಳುವುದಕ್ಕೆ ಬಂದಿರುವೆನೆಂದು ಹೇಳಲು; ಖಾಂಡಿಕ್ಯನು ಕೇಶಿಧ್ವಜನಿಗೆ ಪ್ರಾಯಶ್ಚಿತ್ತವನ್ನು ಹೇಳಿಕಳುಹಿಸಿದನು. ಕೇಶಿಧ್ವಜನು ಊರಿಗೆ ಬಂದು ಯಜ್ಞಶಾಲೆಯಲ್ಲಿ ಪ್ರಾಯಶ್ಚಿತ್ತಪುರಸ್ಸರವಾಗಿ ಯಜ್ಞವನ್ನು ಪೂರ್ತಿಯಾಗಿ ಮಾಡಿ ಬ್ರಾಹ್ಮಣರನ್ನೂ ಸಭಿಕರನ್ನೂ ಯಾಚಕರನ್ನೂ ಸಹ ಸನ್ಮಾನಮಾಡಿ, ಖಾಂಡಿಕ್ಯನಿಂದ ಯಜ್ಞವು ಪೂರ್ತಿಯಾಯಿತು. ಆದುದರಿಂದ ಅವನಿಗೆ ಗುರುದಕ್ಷಿಣೆಯನ್ನು ಕೊಡದಿದ್ದರೆ, ನಾನು ಮಾಡಿದ ಕರ್ಮವು ಸಾರ್ಥಕ ವಾಗುವುದಿಲ್ಲವಾದುದರಿಂದ ಗುರುದಕ್ಷಿಣೆಯನ್ನು ಕೊಟ್ಟು ಬರಬೇಕೆಂದು ನಿಶ್ಚಯಿಸಿ ರಥಾರೋಹಣನಾಗಿ ಖಾಂಡಿಕ್ಯನಿದ್ದ ಸ್ಥಳಕ್ಕೆ ಬಂದನು. ಆಗ ಖಾಂಡಿಕ್ಯನು ಕೇಶಿಧ್ವಜನನ್ನು ನೋಡಿ ಆಯುಧವನ್ನು ಧರಿಸಿದವನಾಗಿ ಕೇಶಿಧ್ವಜನನ್ನು ಸಂಹರಿಸಬೇಕೆಂದು ಅವನ ಅಭಿಮುಖವಾಗಿ ಬಂದು ನಿಲ್ಲಲು, ಕೇಶಿಧ್ವಜನು ನೋಡಿ ಖಾಂಡಿಕ್ಯನನ್ನು ಕುರಿತು ಹೇಳುತ್ತಾನೆ: ಓ, ಖಾಂಡಿಕ್ಯನೇ, ನೀನು

ೀಪಿಸಬೇಡ, ಗುರುದಕ್ಷಿಣೆಯನ್ನು ಕೊಡುವುದಕ್ಕಾಗಿ ಬಂದಿರುವೆನು; ನಿನ್ನ ಪದೇಶದಿಂದ ಯಜ್ಞವು ಸಾಂಗವಾಗಿ ನೆರವೇರಿತು; ಆದುದರಿಂದ ನೀನು ರುದಕ್ಷಿಣೆಯನ್ನು ಅಪೇಕ್ಷಿಸೆಂದು ಕೇಳಿಕೊಳ್ಳಲು, ಖಾಂಡಿಕ್ಯನು ಪುನಃ ಮಂತ್ರಿ ಕಲ್ಲಿ ಆಲೋಚಿಸಲು, ಮಂತ್ರಿಗಳು ಗುರುದಕ್ಷಿಣೆಯಾಗಿ ಅವನ ರಾಜ್ಯವನ್ನೇ ಪೇಕ್ಷಿಸೆಂದು ಹೇಳಲು, ಮಂತ್ರಿಗಳ ಮಾತಿಗೆ ಖಾಂಡಿಕ್ಯನು ನಕ್ಕು ಹೇಳುವನು: ಲ್ಪಕಾಲ ರಕ್ಷಿಸತಕ್ಕ ಭೂಮಿಯನ್ನು ನಮ್ಮಂತಹವರು ಅಪೇಕ್ಷಿಸಬಾರದು, ನೀವು ರಮಾರ್ಥವನ್ನು ತಿಳಿದವರಲ್ಲವು, ಈ ರೀತಿ ಮಂತ್ರಿಗಳಿಗೆ ಹೇಳಿ ಕೇಶಿಧ್ವಜನ ಳಿಗೆ ಬಂದು "ಕೇಶಿಧ್ವಜನೇ ನೀನು ಅಧ್ಯಾತ್ಮಶಾಸ್ತ್ರವಿಚಕ್ಷಣನಾದುದರಿಂದ ಂಸಾರಕ್ಲೇಶ ನಾಶವಾಗುವ ಪರಮಾರ್ಥವನ್ನು ಹೇಳು" ಎಂದನು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಷಷ್ಠಾಂಶದಲ್ಲಿ
ಆರನೆಯ ಅಧ್ಯಾಯವು ಸಮಾಪ್ತಃ

ಏಳನೆಯ ಅಧ್ಯಾಯವು

ಅನಂತರ ಕೇಶಿಧ್ವಜನು ಖಾಂಡಿಕ್ಯನಿಗೆ ಹೇಳುತ್ತಾನೆ: ಖಾಂಡಿಕ್ಯನೇ, ೀನು ಗುರುದಕ್ಷಿಣೆಯನ್ನು ಕೇಳು ಎಂದರೆ, ಪರಮಾರ್ಥವನ್ನು ಹೇಳು ಎಂದು ಪೇಕ್ಷಿಸಿದೆ. ಕ್ಷತ್ರಿಯರಿಗೆ ರಾಜ್ಯಲಾಭಕ್ಕಿಂತಲೂ ಪ್ರೀತಿಕರವಾದ ವಸ್ತುವಿರುವು ಲ್ಲ. ಅಕಂಟಕವಾದ ರಾಜ್ಯವನ್ನು ಅಪೇಕ್ಷಿಸಿದಾಗ್ಯೂ ಕೊಡುತ್ತಿದ್ದೆನು. ಕ್ಷತ್ರಿ ಯರಿಗೆ ರಾಜ್ಯಪಾಲನವೇ ಮುಖ್ಯವಾದ ಧರ್ಮವು ಎಂದು ಹೇಳಲು, ಖಾಂಡಿಕ್ಯನು ಹೇಳುತ್ತಾನೆ: "ನೀನು ನನ್ನ ರಾಜ್ಯವನ್ನು ಅಪಹರಿಸಿದುದರಿಂದ ನನಗೆ ರಾಜ್ಯ ಯುವುದು ಬಂಧನವಾಗಿ ಕಾಣುವುದು. ರಾಜ್ಯಭೋಗವು ಅಲ್ಪವಾದುದು, ದುದರಿಂದ ರಾಜ್ಯವನ್ನು ಅಪೇಕ್ಷಿಸಲಾರೆನು, ವಿದ್ಯಾವಂತರಲ್ಲದವರು ಮಮ ರಯುಕ್ತರಾಗಿ, ರಾಜ್ಯಾಪೇಕ್ಷಿಗಳಾಗುವರು. ಅಹಂಕಾರವೆಂಬ ಮದ್ಯಪಾನ ಂದ ಮದವಿಶಿಷ್ಟರಾಗುವರು" ಎಂಬುದಾಗಿ ಹೇಳಲು, ಕೇಶಿಧ್ವಜನು ಆ ಮಾತನ್ನು ಕೇಳಿ ಸಂತೋಷಪರವಶನಾಗಿ ಖಾಂಡಿಕ್ಯಜನಕನಿಗೆ ಯೋಗೋಪ ದೇಶವನ್ನು ಮಾಡುತ್ತಾನೆ: ವರ್ಣಾಶ್ರಮಧರ್ಮಾನುಷ್ಠಾನದಿಂದ ಮೃತ್ಯುವನ್ನು ದಾಟಬೇಕು. ಅವಿದ್ಯಾಸ್ವರೂಪವೆಂತಾದುದೆಂದರೆ, ದೇಹದಲ್ಲಿ ಆತ್ಮಭ್ರಾಂತಿ ಉಂಟಾಗಿ, ಪಂಚಭೂತಾತ್ಮಕವಾದ ದೇಹದಲ್ಲಿ ಮೋಹವನ್ನು ಹೊಂದಿ, ನಾನು ನನ್ನದೆಂದು, ಕುಮತಿಬುದ್ಧಿಯನ್ನು ಹೊಂದುವನು. ಶರೀರಭೋಗಾರ್ಥವಾಗಿ

ಗೃಹಕ್ಷೇತ್ರಾದಿಗಳ ಮಮಕಾರವನ್ನಿಟ್ಟರೆ, ಮಮಕಾರವು ಶರೀರಕ್ಕೆ ಭೋಗ
ನ್ನುಂಟುಮಾಡದೆ ದೇಹಾಂತರಪ್ರಾಪ್ತಿಗೂ ಬಂಧಕ್ಕೂ ಸಹ ಕಾರಣವಾಗುವುದ
ಗೃಹವು ಯಾವ ಪ್ರಕಾರ ಮಣ್ಣು ನೀರುಗಳಿಂದ ಕೂಡಿರುವುದೊ, ಅದೇ ಪ್ರಕಾ
ದೇಹವು ಮಣ್ಣು ನೀರು ಇವುಗಳಿಂದ ಕೂಡಿರುವುದು. ಇಂತಹ ಪಾಂಚ ಭೌತಿ
ವಾದ ದೇಹದಿಂದ ಸಾವಿರಾರು ಜನ್ಮಗಳನ್ನೆತ್ತಿ ಸಂಸಾರಮಾರ್ಗವನ್ನು ಹೊಂ
ಮೋಹಾಯಾಸವನ್ನು ಅನುಭವಿಸಿ ಅಹಂಕಾರವೆಂಬ ಧೂಳಿಯಿಂದ ವ್ಯಾಪಿ
ಕೊಂಡಿರುವನು. ಯಾವಾಗ ಜ್ಞಾನವೆಂಬ ಉಷ್ಣೋದಕದಿಂದ ಧೂಳನ್ನು ತೊಳೆದ
ಕೊಳ್ಳುತ್ತಾನೋ, ಆಗ ಸಂಸಾರವೆಂಬ ಮಾರ್ಗಾಯಾಸವನ್ನು ಶಮನಮಾ
ಕೊಳ್ಳುವನು. ಮೋಹಾಯಾಸವು ಪರಿಹಾರವಾದನಂತರ, ಸಮಾಧಾನವಾ
ಮನಸ್ಸುಳ್ಳವನಾಗಿ ಮೋಕ್ಷಸುಖವನ್ನು ಹೊಂದುವನು; ನಿರ್ಮಲಸುಖಜ್ಞಾ
ರೂಪನಾಗುವನು. ಶೀತಳವಾದ ನೀರು ಯಾವ ರೀತಿ ಶಬ್ದ, ನೊರೆ ಮೊದಲಾ
ದವುಗಳಿಲ್ಲದೇ ನಿರ್ಮಲವಾಗಿರುವುದೋ, ಅದೇ ಪ್ರಕಾರ, ನಿರ್ಮಲನಾದ
ಅಪಾರವಾದ ಜ್ಞಾನಾನಂದಮಯನಾಗುವನು. ಆದುದರಿಂದ ಕ್ಲೇಶಗಳನ್ನು
ಶಮನಮಾಡಬೇಕಾದರೆ, ಯೋಗವೇ ಹೊರತು ಬೇರೆ ಯಾವುದೂ ಇಲ್ಲ. ಈ
ಯೋಗ ಸ್ವರೂಪವನ್ನು ಹೇಳುತ್ತೇನೆ ಕೇಳು: ಯೋಗದಲ್ಲಿರತಕ್ಕವನು ಪರಬ್ರಹ್ಮ
ನನ್ನು ಹೊಂದಿ, ಯಾವಾಗಲೂ ಹಿಂತಿರುಗುವುದಿಲ್ಲ. ಮನುಷ್ಯರಿಗೆ ಮೋಕ್ಷವನ್ನು
ಹೊಂದುವುದಕ್ಕೂ ಸಂಸಾರ ಬಂಧನದಲ್ಲಿ ಬೀಳುವುದಕ್ಕೂ ಸಹ ಮನಸ್ಸೇ
ಕಾರಣವಾಗಿರುವುದು. ಆದುದರಿಂದ ಪ್ರಕೃತಿಪುರುಷ ಈಶ್ವರಗಳೆಂಬ ತತ್ವತ್ರಯ
ಜ್ಞಾನವನ್ನು ಹೊಂದಿ, ಪರಬ್ರಹ್ಮನನ್ನು ಧ್ಯಾನಿಸಬೇಕು. ಈ ರೀತಿ ಧ್ಯಾನಿಸಿದರೆ
ಅನಾದಿಯಾದ, ಅವಿದ್ಯಾ, ಕರ್ಮ, ವಾಸನಾ, ದೇಹಾದಿಸಕಲಭಾವನೆಯೂ
ನಾಶವಾಗುವುದು. ಇದೇ ಆತ್ಯಂತಿಕ ಪ್ರಳಯವೆಂದು ಹೇಳುತ್ತಾರೆ. ಈ ರೀತಿ
ಪರಬ್ರಹ್ಮನನ್ನು ಧ್ಯಾನಿಸತಕ್ಕವನು ಆತ್ಮಭಾವವನ್ನು ಹೊಂದುವನು; ಅಂದರೆ,
ಪರಬ್ರಹ್ಮನು ಸತ್ಯಕಾಮನು, ಸತ್ಯಸಂಕಲ್ಪನು ಇತ್ಯಾದಿ ಜ್ಞಾನವನ್ನು ಹೊಂದು
ತ್ತಾನೆ. ಅಯಸ್ಕಾಂತವು ಯಾವ ರೀತಿ ಸಜಾತೀಯವನ್ನು ಆಕರ್ಷಿಸುವುದೋ,
ಆದೇ ರೀತಿಯಲ್ಲಿ ಯೋಗಾಸಕ್ತನನ್ನು ಪರಬ್ರಹ್ಮನು ಆಕರ್ಷಿಸುವನು. ಅಗ್ನಿ
ಸಂಪರ್ಕದಿಂದ ಚಿನ್ನವು ನಿರ್ದುಷ್ಟವಾಗುವಂತೆ, ವಾಸುದೇವನ ಸಂಗದಿಂದ
ಜೀವನು ನಿರ್ದೋಷಿಯಾಗುವನು. ಅಗ್ನಿಯು ಒಣಗಿದ ಕಾಡನ್ನು ದಹಿಸುವಂತೆ
ಚಿತ್ತಸ್ಥನಾದ ವಿಷ್ಣುವು, ಸಕಲದೋಷಗಳನ್ನು ನಾಶಮಾಡುವನು. ಸತ್ವಮಯ
ವಾದ ಮನೋಗತಿಯನ್ನು ಪರಬ್ರಹ್ಮನಲ್ಲಿಡುವುದೇ ಯೋಗವೆನ್ನಿಸಿಕೊಳ್ಳುವುದು.
ಇಂತಹ ಧರ್ಮಲಕ್ಷಣವಾದ ಯೋಗವುಳ್ಳವನೇ ಯೋಗಿಯು; ಇವನೇ

ಮುಮುಕ್ಷುವು; ಯೋಗಿಯಾದವನು, ಆಲಸ್ಯ, ವ್ಯಾಧಿ, ಪ್ರಮಾದ, ಸ್ಥಾನ ಸಂಶಯ, ಚಂಚಲವಾದ ಮನಸ್ಸು, ಅಶ್ರದ್ಧೆ, ಭ್ರಾಂತಿದರ್ಶನ, ದುಃಖ, ದೌರ್ಮನಸ್ಸು, ವಿಷಯಾಸಕ್ತತೆ ಎಂಬ ಹತ್ತು ವಿಘ್ನಗಳನ್ನೂ ದಾಟಿ ಪ್ರತಿಭಾ, ಶ್ರವಣ, ವಾರ್ತಾ, ದರ್ಶನ, ಆಸ್ವಾದನವೇ ಮೊದಲಾದ ಸಿದ್ಧಿಯನ್ನು ಹೊಂದುವನು. ಈ ರೀತಿ ಯೋಗಿಯಾದವನು ಸ್ತ್ರೀಸಂಗವನ್ನೂ, ನಿಷಿದ್ಧದ್ರವ್ಯಪರಿಗ್ರಹವನ್ನೂ ಅಹಿಂಸೆಯನ್ನೂ, ನಿಷ್ಕಾಮನಾಗಿ ಬಿಡಬೇಕು. ಯಮನಿಯಮಾದಿಗಳನ್ನು ಕಾಮ್ಯವಾಗಿ ಆಚರಿಸಿದರೆ, ಅನೇಕ ಐಹಿಕಫಲಗಳುಂಟಾಗುವುದು. ನಿಷ್ಕಾಮನಾಗಿ ಆಚರಿಸಿದರೆ, ಮೋಕ್ಷಫಲವುಂಟಾಗುವುದು. ಯೋಗವನ್ನು ಆಚರಿಸಬೇಕಾದರೆ ಸರ್ವರೋಗಹರವಾದ ಭದ್ರಾಸನದಲ್ಲಿ ಕೂತು, ಯಮನಿಯಮಾದಿಗಳಿಂದ ಮುಕ್ತನಾಗುವವನೇ ಯತಿಯು. ಯೋಗಿಯು ಪ್ರಾಣವೆಂಬ ವಾಯುವನ್ನು ಬಹುಕಾಲ ನಿರೋಧಿಸುವ ಅಭ್ಯಾಸ ಮಾಡುವುದೇ ಪ್ರಾಣಾಯಾಮವೆನ್ನಿಸಿಕೊಳ್ಳುವುದು. ಉಚ್ಛ್ವಾಸದಿಂದ ಮುಖ,ಮೂಗುಗಳಿಂದ ಹೊರಕ್ಕೆ ಹೊರಡುವ ವಾಯುವೇ ಪ್ರಾಣವಾಯು. ನಿಶ್ವಾಸದಿಂದ ಒಳಕ್ಕೆ ಪ್ರವೇಶ ಮಾಡುವ ವಾಯುವೇ ಅಪಾನವು. ಶ್ವಾಸಗಳನ್ನು ತಡೆಯುವುದೇ ರೇಚಕವು; ಇವೇ ಮೊದಲಾದ ಪ್ರಾಣಾಯಾಮದಿಂದ ಭಗವನ್ಮೂರ್ತಿಯನ್ನು ಧ್ಯಾನಮಂತ್ರದಿಂದ ಜಪಿಸಬೇಕು. ಹೀಗೆ ಜಪಿಸಿದರೆ ಮನಸ್ಸು ಶುಭ್ರವಾಗುವುದು. ಮನಸ್ಸಿಗೆ ಆಶ್ರಯವಾಗುವನೇ ಪರಬ್ರಹ್ಮನು. ಪರಬ್ರಹ್ಮನು ಮೂರ್ತ, ಅಮೂರ್ತವೆಂಬುದಾಗಿ ಎರಡು ವಿಧವಾಗಿರುವನು. ಮೂರ್ತವೆಂದರೆ ಸಶರೀರವಾದ ಹಿರಣ್ಯಗರ್ಭನೆ ಮೊದಲಾದ ರೂಪವು. ಅಮೂರ್ತವೆಂದರೆ ಶರೀರವಿಲ್ಲದ ಮುಕ್ತರೂಪಾಗಿರುವುದು. ಇದಕ್ಕೆ ಪರ, ಅಪರವೆಂಬುದಾಗಿಯೂ ಸಹ ಹೇಳುವರು. ಈ ಜಗತ್ತು ಮೂರ್ತಾಮೂರ್ತಾತ್ಮಕವಾಗಿ ಭಾವನಾತ್ರಯದಿಂದ ಕೂಡಿರುವುದು. ಬ್ರಹ್ಮಭಾವನಾ, ಕರ್ಮಭಾವನಾ, ಉಭಯಾತ್ಮಕಭಾವನಾ ಎಂದು ಮೂರು ವಿಧವು. ಸನಂದನಾದಿಗಳು ಬ್ರಹ್ಮಭಾವನೆಯಿಂದ ಕೂಡಿರುವರು; ದೇವಾದಿಗಳು ಕರ್ಮಭಾವನೆಯಿಂದ ಕೂಡಿರುವರು; ಮೋಕ್ಷಾಪೇಕ್ಷಿಗಳು ಉಭಯಾತ್ಮಕವಾದ ಭಾವನೆಯಿಂದ ಕೂಡಿರುವರು; ಭೇದಭಿನ್ನದರ್ಶಿಗಳಾದ ಸನಕಾದಿಗಳು ಪರಬ್ರಹ್ಮನನ್ನು ನೋಡುವರು. 'ಅಪರ' ಎಂದರೆ, ಜಾತ್ಯಾದಿ ಭೇದರಹಿತನು. ಆದುದರಿಂದಲೆ, ವಾಚಾಮಗೋಚರನು, ಅಪಕ್ಷಯಾದಿವಿಕಾರರಹಿತನು, ಸ್ವಯಂಪ್ರಕಾಶನು, ಗುಣವೇ ಮುಖ್ಯವಾಗಿ ನಿರೂಪಿಸಲು ಯೋಗ್ಯವಾಗಿ ಉಳ್ಳವನು, ಎಲ್ಲವೂ ಬ್ರಹ್ಮಾತ್ಮಕವಾದುದರಿಂದಲೇ ಬ್ರಹ್ಮವೆಂದೇ ಹೇಳಿಸಿಕೊಳ್ಳುತ್ತದೆ. ಅದೇ ವಿಷ್ಣುವಿನ ಉತ್ಕೃಷ್ಟ ರೂಪು. ಭಾವನಾತ್ರಯದಿಂದ ಯುಕ್ತವಾದ ಜಗತ್ತು, ವಿಷ್ಣುಶಕ್ತಿಯಿಂದ ಕೂಡಿ

ರುವುದು. ಸಮಸ್ತ ಶಕ್ತ್ಯಾಶ್ರಯನಾದ ಭಗವಂತನು ಲೋಕೋಪಕಾರಾರ್ಥವಾಗಿ ದೇವತಿರ್ಯಗ್ಜಂತು ಮನುಷ್ಯ ಮೊದಲಾದ ಅವತಾರರೂಪಗಳನ್ನು ಹೊಂದಿರುವನು. ಹದಿನಾಲ್ಕು ಮನ್ವಂತರಗಳೂ ದೇವಾವತಾರವು; ಮತ್ಸ್ಯಾದ್ಯವತಾರವು ತಿರ್ಯಗ್ಜಾತಿಯು; ರಾಮಾದ್ಯವತಾರಗಳು ಮನುಷ್ಯಾವತಾರವು. ಆದುದರಿಂದ ಪರಬ್ರಹ್ಮನಿಗೆ ಜಾತ್ಯಾದಿಗಳು ಹೇಳುವುದು ಅಸಾಧ್ಯವಾಗಿರುವುದು. ಬೃಂದಾವನ, ಗೋಕುಲ ಕಾಳೀಯಮಡು, ಪ್ರವೇಶಾದಿಗಳೂ, ರಾವಣ, ಶಿಶುಪಾಲ, ಬಾಣ, ಇಂದ್ರ, ರುದ್ರಾದಿಗಳಿಂದ ಅಪ್ರತಿಹತನಾಗಿರುವುದೂ, ಇತ್ಯಾದಿ ಗುಣಗಳು ಕರ್ಮಾಧೀನವಾಗಿ ಬಂದವುಗಳಲ್ಲ; ನಿಮಿತ್ತವಾಗಿ ಬಂದುವೆಂಬ ಇತ್ಯಾದಿ ಜ್ಞಾನವೇ ಮನಸ್ಸಿಗೆ ಶುಭಾಶ್ರಯವು. ಈರೀತಿ ಜ್ಞಾನವನ್ನು ಧಾರಣೆಮಾಡಿ, ಭಗವಂತನಾದ ಪರಬ್ರಹ್ಮನನ್ನು ಚಿಂತಿಸಬೇಕು. ಯಾವ ರೀತಿ ಚಿಂತಿಸಬೇಕೆಂದರೆ, ಪ್ರಸನ್ನವದನನು ಕಮಲದಂತೆ ಕಣ್ಣುಳ್ಳವನು, ಸುಕಪೋಲನು, ವಿಸ್ತಾರವಾದ ಮುಖವುಳ್ಳವನು, ಕುಂಡಲಾಲಂಕೃತನಾದವನು, ಎತ್ತರವಾದ ಕುತ್ತಿಗೆಯುಳ್ಳವನು, ಶ್ರೀವತ್ಸಚಿಹ್ನೆಯಿಂದ ವಿಶಾಲವಾದ ವಕ್ಷಸ್ಥಳವುಳ್ಳವನು, ತ್ರಿವಳಿಯಿಂದಲೂ, ನಾಭಿಯಿಂದಲೂ ಕೂಡಿದ ಉದರವುಳ್ಳವನು, ಚತುರ್ಭುಜವುಳ್ಳವನು, ಪೀತಾಂಬರಧಾರಿಯಾದವನು, ಇಂತಹ ಪರಬ್ರಹ್ಮನನ್ನು ನಿರ್ಮಲಚಿತ್ತತೆಯಿಂದ ಚಿಂತಿಸಬೇಕು. ಕಿರೀಟ, ಹಾರ, ಬಾಹುಪುರಿ, ಕಡಗ, ಶಾರ್ಙ, ಶಂಖ, ಗದಾ, ಖಡ್ಗ, ಚಕ್ರ, ಅಕ್ಷಮಾಲಾ ಇವುಗಳನ್ನು ಧರಿಸಿರತಕ್ಕವನು ಎಂಬುದಾಗಿ ಯೋಗಿಯು ತನ್ಮಯನಾಗಿ ಧ್ಯಾನಿಸಬೇಕು. ಚಂಚಲವಿಲ್ಲದ ಮನಸ್ಸಿನಿಂದ ಧ್ಯಾನಮಾಡಿ, ಭಗವಂತನು ಮನಸ್ಸಿನಲ್ಲಿ ಸ್ಥಿರವಾದರೆ, ಸಮಾಧಿ ಎಂಬುದಾಗಿ ಹೇಳುವುದು. ಪ್ರಾಪ್ಯನಾದ ಪರಬ್ರಹ್ಮನಲ್ಲಿ ಪ್ರಾಪಕವಾದ ಜ್ಞಾನವನ್ನಿಟ್ಟು, ಭಗವದುಪಾಸಕವಾದ ಆತ್ಮನನ್ನು ಸೇರಿಸಬೇಕು. ಬ್ರಹ್ಮಸಾಕ್ಷಾತ್ಕಾರವನ್ನು ಹೊಂದುವುದಲ್ಲದೆ ಮೋಕ್ಷವನ್ನೂ ಸಹ ಹೊಂದುವನು. ಹೀಗೆ ಮೋಕ್ಷವನ್ನು ಹೊಂದಿ ಭಗವಂತನ ಭಾವವನ್ನೇ ಹೊಂದುತ್ತಾನೆ. ಭಾವವೆಂದರೆ ಭಗವಂತನಂತೆ ಅಪಹತಪಾಪ್ಮತ್ವಾದಿ ಎಂಟು ಧರ್ಮಗಳನ್ನು ಹೊಂದಿ ಭಗವಂತನಿಂದ ಅಭೇದನಾಗುವನು. ಎಂದರೆ, ಜ್ಞಾನ, ಆನಂದಾದಿ ಆಕಾರಗಳಿಂದ ಏಕಪ್ರಕಾರನಾಗುವನು. ಎಲೈ ಖಾಂಡಿಕ್ಯನೇ, ನಿನಗೆ ಈ ರೀತಿ ಜ್ಞಾನಯೋಗವನ್ನು ಹೇಳಿರುವೆನೆಂಬುದಾಗಿ ಹೇಳಲು, ಖಾಂಡಿಕ್ಯನು ಕೇಶಿಧ್ವಜನಿಗೆ ಹೇಳುತ್ತಾನೆ: "ನೀನು ಯೋಗವನ್ನು ಉಪದೇಶ ಮಾಡಿದುದರಿಂದ ನನಗೆ ಮಹೋಪಕಾರವನ್ನು ಮಾಡಿದೆ. ಈ ಉಪದೇಶದಿಂದ ನನ್ನ ಮನಸ್ಸು ನಿರ್ಮಲವಾಯಿತು. ನಾನು ನನ್ನದೆಂಬ ಮಮಕಾರವನ್ನು ಮೊದಲು ಹೇಳಿದ್ದೆಲ್ಲವೂ ಅಸತ್ತಾದುದು; ನನ್ನ ಶ್ರೇಯಸ್ಸಿಗೋಸ್ಕರ ನೀನು ಉಪದೇಶಮಾಡಿದೆ; ನೀನು ಹೊರಟುಹೋಗ

ವಹುದೆಂದು ಹೇಳಿ, ಕೇಶಿಧ್ವಜನಿಗೆ ಸತ್ಕಾರಮಾಡಿ ಕಳುಹಿಸಿಕೊಟ್ಟು, ಖಾಂಡಿಕ್ಯನು ಮಗನಿಗೆ ರಾಜ್ಯಾಭಿಷೇಕಮಾಡಿ, ಗೋವಿಂದಮನಸ್ಕನಾಗಿ ವನಕ್ಕೆ ಪ್ರಯಾಣಮಾಡಿ, ಏಕಾಂತಮನಸ್ಕನಾಗಿ, ಯಮಾದಿಗುಣಯುಕ್ತನಾಗಿ, ವಿಷ್ಣುವೆಂಬ ನಿರ್ಮಲವಾದ ಪರಬ್ರಹ್ಮನಲ್ಲಿ ಸಾಯುಜ್ಯವನ್ನು ಹೊಂದಿದನು. ಕೇಶಿಧ್ವಜನೂ ಸಹ ತನ್ನ ಪಟ್ಟಣಕ್ಕೆ ಬಂದು ನಿಷ್ಕಾಮನಾಗಿ ಅನೇಕ ಕರ್ಮಗಳನ್ನು ಮಾಡಿ ಸಿದ್ಧಿಯನ್ನು ಹೊಂದಿದನು.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಷಷ್ಠಾಂಶದಲ್ಲಿ
ಏಳನೆಯ ಅಧ್ಯಾಯವು ಸಮಾಪ್ತಃ

ಎಂಟನೆಯ ಅಧ್ಯಾಯವು

ಪುನಃ ಪರಾಶರ ಮಹರ್ಷಿಗಳು ಹೇಳುತ್ತಾರೆ: "ಓ ಮೈತ್ರೇಯನೇ! ಶಾಶ್ವತವಾದ ಮೋಕ್ಷವನ್ನು ಹೊಂದತಕ್ಕ ಆತ್ಯಂತಿಕ ಪ್ರಳಯವನ್ನು ಹೇಳಿದೆನು. ಸೃಷ್ಟಿ, ಸ್ಥಿತಿ, ವಂಶ, ಮನ್ವಂತರ, ವಂಶಾನುಚರಿತ ಇವುಗಳೆಲ್ಲವನ್ನೂ ನಿನಗೆ ಹೇಳಿದ ಹಾಗಾಯಿತು. ವಿಷ್ಣುಪುರಾಣವು ಸಕಲ ಪಾಪಗಳನ್ನೂ ಪರಿಹಾರಮಾಡತಕ್ಕದು. ಸರ್ವಶಾಸ್ತ್ರಗಳಿಗೂ ಅಧಿಕವಾದ ಪುರುಷಾರ್ಥವನ್ನುಂಟುಮಾಡತಕ್ಕದು. ಗುರುಶುಶ್ರೂಷಾಪರನಾದ ನಿನಗೋಸ್ಕರ ಹೇಳಿದೆನು. ಇನ್ನೇನು ಕೇಳುವುದಕ್ಕೆ ಅಪೇಕ್ಷೆಯಿರುವುದೋ ಅದನ್ನು ಕೇಳು ಎನಲು"; ಮೈತ್ರೇಯರು "ಭಗವಂತನಾದ ಬ್ರಹ್ಮರ್ಷಿಯೇ! ನೀವು ಹೇಳಿದ ಅನೇಕ ವಿಷಯಗಳನ್ನು ಕೇಳಿದೆನು. ಆದುದರಿಂದ ಮತ್ಯಾವದೂ ಕೇಳಬೇಕಾದುದಿಲ್ಲ. ನಿಮ್ಮ ಅನುಗ್ರಹದಿಂದ ಸಕಲ ಸಂದೇಹಗಳೂ ನಿವಾರಣೆಯಾದವು. ಮನಸ್ಸು ನಿರ್ಮಲವಾಯಿತು. ಸೃಷ್ಟಿ, ಸ್ಥಿತಿ, ಲಯಗಳನ್ನು ಕೇಳಿದೆನು. ಸೃಷ್ಟಿಕಾರಣನಾದ ಬ್ರಹ್ಮ, ದಕ್ಷಾದಿ, ಪಾಲನಕಾರಣನಾದ ವಿಷ್ಣು, ಮನ್ವಾದಿ, ಪ್ರಳಯಕಾರಣನಾದ ರುದ್ರ, ಕಾಲಾಂತಕಾದಿ ಮೂರು ರಾಶಿಗಳನ್ನೂ ಪ್ರಧಾನ, ವ್ಯಕ್ತ, ಕಾಲಾದಿ ಮೂರು ವಿಧವಾದ ವಿಷ್ಣು ಶಕ್ತಿಯನ್ನೂ ಭಾವಭಾವನೆಯನ್ನೂ ಸಹ ಕೇಳಿದೆನು. ಸಕಲ ಜಗತ್ತೂ ವಿಷ್ಣುವಿನಿಂದ ವ್ಯತಿರಿಕ್ತವಾದುದಲ್ಲವೆಂಬ ಇತ್ಯಾದಿ ವಿಷಯಗಳನ್ನು ಕೇಳಿದುದರಿಂದ ಸಂದೇಹರಹಿತನಾದೆನು. ವರ್ಣಾಶ್ರಮಧರ್ಮಗಳನ್ನೂ, ಧರ್ಮಜ್ಞರ ಮಹಿಮೆಯನ್ನೂ, ಸಕಲ ಕರ್ಮಗಳನ್ನೂ ಕೇಳಿದುದರಿಂದ ಪುನಃ ಯಾವುದನ್ನೂ ಕೇಳಬೇಕಾದುದಿಲ್ಲ. ಆಚಾರ್ಯರೇ ನಿಮಗೆ ನಾನು ಆಯಾಸವನ್ನುಂಟುಮಾಡಿದ ಅಪರಾಧವನ್ನು

ಕ್ಷಮಿಸಿ ಪುತ್ರಶಿಷ್ಯರಿಗೆ ವ್ಯತ್ಯಾಸವಿರುವುದಿಲ್ಲವಷ್ಟೆ," ಎಂಬುದಾಗಿ ಮೈತ್ರೇಯರು ಹೇಳಲು; ಪರಾಶರ ಮಹರ್ಷಿಗಳು, ಹೇಳುತ್ತಾರೆ: "ಓ ಮೈತ್ರೇಯನೇ! ಈಗ ನಿನಗೆ ಹೇಳಿದ ವಿಷ್ಣುಪುರಾಣವು ವೇದಸಂಮತವಾದುದು. ಸಕಲ ಪಾಪರಾಶಿಯೂ ನಾಶವಾಗುವುದು. ಸಿಂಹದ ಭಯದಿಂದ ಮೃಗಗಳು ಓಡಿಹೋಗುವಂತೆ, ಶ್ರೀಮನ್ನಾರಾಯಣನ ನಾಮಸಂಕೀರ್ತನದಿಂದ ಪಾಪರಾಶಿಗಳು ಓಡಿಹೋಗುವುವು. ಕಲಿಯುಗದಲ್ಲಿ ಅನೇಕ ಪಾಪಗಳುಂಟಾಗುವುವು. ಈ ಪಾಪಗಳೆಲ್ಲವೂ ಭಗವನ್ನಾಮ ಸಂಕೀರ್ತನದಿಂದ ನಾಶವಾಗುವುದು. ಅಶ್ವಮೇಧ ಯಜ್ಞದಲ್ಲಿ ಅವಭೃತಸ್ನಾನಮಾಡಿದರೆ ಯಾವ ಫಲವುಂಟಾಗುವುದೋ, ಅದೇ ಫಲವು ವಿಷ್ಣುಪುರಾಣವನ್ನು ಕೇಳುವುದರಿಂದುಂಟಾಗುವುದು. ಪ್ರಯಾಗದಲ್ಲಿಯೂ, ಪುಷ್ಕರದಲ್ಲಿಯೂ, ಕುರುಕ್ಷೇತ್ರದಲ್ಲಿಯೂ ಸಹ ಉಪವಾಸವನ್ನು ಮಾಡಿದರೆ ಉಂಟಾಗುವ ಫಲವು ವಿಷ್ಣುಪುರಾಣದಿಂದುಂಟಾಗುವುದು. ಒಂದು ವರ್ಷ ಕಾಲ ಅಗ್ನಿಹೋತ್ರಾದಿಗಳನ್ನುಮಾಡಿದ ಫಲವು ವಿಷ್ಣುಪುರಾಣಶ್ರವಣದಿಂದುಂಟಾಗುವುದು. ಜ್ಯೇಷ್ಠಶುದ್ಧ ದ್ವಾದಶಿಯಲ್ಲಿ ಯಮುನಾ ನದಿಯಲ್ಲಿ ಸ್ನಾನಮಾಡಿ, ಮಥುರಾ ಪಟ್ಟಣದಲ್ಲಿ ಹರಿಯನ್ನು ನೋಡಿದರೆ, ಉಂಟಾಗುವ ಫಲವು ವಿಷ್ಣುಪುರಾಣಶ್ರವಣದಿಂದುಂಟಾಗುವುದು. ಶ್ರೀ ವಿಷ್ಣುಪುರಾಣವು ಸಂಸಾರಭೀರುಗಳಿಗೆ ರಕ್ಷಕವಾದುದು. ಲೋಕದಲ್ಲಿ ಶ್ರಾವ್ಯವಾದವುಗಳಿಗೆಲ್ಲಾ ಪರಮಶ್ರಾವ್ಯವಾದುದು; ಪರಮಪವಿತ್ರವಾದುದು; ಸ್ವಪ್ನನಾಶಕವಾದುದು; ಸರ್ವದೋಷಪರಿಹಾರಕವಾದುದು; ಮಂಗಳಗಳಿಗೆಲ್ಲಾ ಮಂಗಳವಾದುದು; ಪುತ್ರಸಂಪತ್ಪ್ರದವಾದುದು; ಇದು ಆರ್ಷೇಯವಾದುದು, ಮೊದಲು ಬ್ರಹ್ಮನು ಋಭವಿಗೂ, ಋಭುವು ಪ್ರಿಯವ್ರತನಿಗೂ, ಇವನು ಭಾಗುರುವಿಗೂ, ಇವನು ಸ್ತಂಬಮಿಶ್ರನಿಗೂ, ಇವನು ದಧೀಚಿಗೂ ದಧೀಚಿಯು ಸಾರಸ್ವತನಿಗೂ, ಸಾರಸ್ವತನು ಭೃಗುವಿಗೂ, ಭೃಗುವು ಪುರುಕುತ್ಸನಿಗೂ, ಪುರುಕುತ್ಸನು ನರ್ಮದಾದೇವಿಗೂ, ಇವಳು ಧೃತರಾಷ್ಟ್ರ ಅಪೂರಣರಿಗೂ, ಇವರು ವಾಸುಕಿಗೂ, ವಾಸುಕಿಯು ವತ್ಸನಿಕೂ, ವತ್ಸನು ಅಶ್ವತರನಿಗೂ, ಇವನು ಕಂಬಳನಿಗೂ ಕಂಬಳನು ಎಲಾಪುತ್ರನಿಗೂ, ಇವನು ವೇದಶಿರನಿಗೂ, ಇವನು ಪ್ರಮಿತಿಗೂ, ಪ್ರಮಿತಿಯು ಜಾತುಕರ್ಣನಿಗೂ, ಇವನು ಇತರ ಪುಣ್ಯಕರ್ಮಶಾಲಿಗಳಿಗೂ ಸಹ ಪರಂಪರೆಯಾಗಿ ಉಪದೇಶಮಾಡಿದರು. ಪುಲಸ್ತ್ಯವಸಿಷ್ಠರವರ ಪ್ರಸಾದದಿಂದ, ಪೂರ್ವಜನ್ಮದಲ್ಲಿ ಸಾರಸ್ವತನಿಂದ ಕೇಳಿದುದನ್ನು ಈ ಜನ್ಮದಲ್ಲಿ ಸ್ಮರಣೆಗೆ ಬಂದು ಅದನ್ನು ನಿನಗೆ ಹೇಳಿದೆನು. ನೀನು ಶಿನೀಕನಿಗೆ ಕಲಿಯುಗದ ಅಂತ್ಯದಲ್ಲಿ ಹೇಳುವೆ. ಈ ಪ್ರಕಾರ ಆರ್ಷೇಯವಾಗಿ ಉಪದೇಶಕ್ರಮದಿಂದ ಪರಂಪರಾಪ್ರಾಪ್ತವಾಗಿಯೂ, ಕಲಿದೋಷ ಪ್ರಶಮನವಾಗಿಯೂ,

ಪರಮಗುಹ್ಯವಾಗಿಯೂ ಇರತಕ್ಕ ವಿಷ್ಣುಪುರಾಣವನ್ನು ಭಕ್ತಿಯಿಂದ ಕೇಳತಕ್ಕ ವರ ಪಾಪಗಳು ನಾಶವಾಗುವುವು. ಈ ಪುರಾಣವನ್ನು ಪ್ರತಿದಿನವೂ ಕೇಳುವುದ ರಿಂದ ಸಕಲತೀರ್ಥಸ್ನಾನಗಳ ಫಲವುಂಟಾಗುವುದು. ಆದಿ ಮಧ್ಯ ಅಂತ್ಯಗಳಲ್ಲಿ ಜ್ಞಾನಮಯನಾದ ಅಚ್ಯುತನ ಮಹಿಮೆಯನ್ನು ಕೇಳತಕ್ಕವರೂ, ಹೇಳತಕ್ಕವರೂ, ಪಠನಮಾಡತಕ್ಕವರೂ ಸಹ ಶ್ರೀಮನ್ನಾರಾಯಣನ ಅನುಗ್ರಹಕ್ಕೆ ಪಾತ್ರರಾಗು ವರು. ಅಚ್ಯುತನನ್ನು ಸಂಕೀರ್ತನೆಮಾಡುವರು ನರಕವನ್ನೂ ಸ್ವರ್ಗವನ್ನೂ ಅಲ್ಪವಾದ ಬ್ರಹ್ಮಲೋಕವನ್ನೂ ಸಹ ಹೊಂದದೆ, ಮೋಕ್ಷವನ್ನೇ ಹೊಂದುವರು. ಕರ್ಮನಿಷ್ಠರು ಯಜ್ಞಗಳಿಂದ ಯಜ್ಞೇಶ್ವರನೆಂಬುದಾಗಿಯೂ, ಜ್ಞಾನಿಗಳು ಪರಾ ಪರಮಯನಾದ ಪರಬ್ರಹ್ಮನೆಂಬುದಾಗಿಯೂ, ಶ್ರೀಮನ್ನಾರಾಯಣನನ್ನು ಆರಾಧಿ ಸುತ್ತಾರೆ. ಇಂತಹ ಪರಮಾತ್ಮನನ್ನು ಧ್ಯಾನಿಸಿದರೆ, ಹುಟ್ಟುವುದೂ, ಸಾಯು ವುದೂ, ವೃದ್ಧಿಯಾಗುವುದೂ, ಕ್ಷಯವಾಗುವುದೂ ಸಹ ಯಾವುದೂ ಇರುವು ದಿಲ್ಲ. ಪ್ರಭುವಾದ ಶ್ರೀಮನ್ನಾರಾಯಣನು ಪಿತೃರೂಪಧರನಾಗಿಯೂ, ದೇವ ನಾಗಿಯೂ, ಹವ್ಯಕವ್ಯಗಳನ್ನೂ, ಸ್ವಾಧಾಕಾರ ಸ್ವಾಹಾಕಾರಗಳನ್ನೂ ಸಹ ಪರಿಗ್ರಹಿಸುತ್ತಾನೆ. ಜ್ಞಾನಿಗಳಿಂದ ಸರ್ವಶಕ್ತಿನಿಲಯನಾದ ಪರಬ್ರಹ್ಮನಾಗಿ ಆರಾಧಿಸಿಕೊಂಡು, ಪರಮಪದವನ್ನು ಹೊಂದಿಸುತ್ತಾನೆ. ಯಾವ ಪರಮಾತ್ಮ ನಿಗೆ ಅಂತ್ಯವೂ, ಉತ್ಪತ್ತಿಯೂ, ವೃದ್ಧಿಕ್ಷಯವೂ, ವಿಕಾರಾದಿಗಳೂ ಸಹ ಇರುವುದಿಲ್ಲವೋ ಅಂತಹ ಪುರುಷೋತ್ತಮನಾದ, ಸರ್ವೇಶನಾದ ಶ್ರೀಮನ್ನಾರಾ ಯಣನನ್ನು ನಮಸ್ಕರಿಸುತ್ತೇನೆ. ಶೇಷಭೂತನಾಗಿಯೂ, ಜ್ಞಾನೈಕಸ್ವರೂಪ ನಾಗಿಯೂ, ಸ್ವತಶ್ಶುದ್ಧನಾಗಿಯೂ, ಸರ್ವನಿಯಾಮಕನಾಗಿಯೂ, ಅವ್ಯಯ ನಾಗಿಯೂ ಇರುವ ಶ್ರೀಮನ್ನಾರಾಯಣನಿಗೆ ನಮಸ್ಕಾರವು. ಸತ್ವಾದಿಗುಣ ವಿಕಾರನಾಗಿಯೂ, ಸಂಸಾರವಿಮುಕ್ತಿಕಾರಣನಾಗಿಯೂ,ಅವ್ಯಾಕೃತನಾಗಿಯೂ, ಜರಾದಿರಹಿತನಾಗಿಯೂ, ಸೂಕ್ಷ್ಮಬೃಹದ್ರೂಪನಾಗಿಯೂ, ಜಗದುಪಕಾರಕ ನಾಗಿಯೂ ಇರುವ ಶ್ರೀಮನ್ನಾರಾಯಣನನ್ನು ನಮಸ್ಕರಿಸುತ್ತೇನೆ. ಈ ಪ್ರಕಾರ ಅಪ್ರಾಕೃತದಿವ್ಯಶರೀರನಾದ ಶ್ರೀಮನ್ನಾರಾಯಣನು ಸಕಲಪುರುಷರಿಗೂ ಮೋಕ್ಷವನ್ನುಂಟುಮಾಡಲಿ.

ಇಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಷಷ್ಠಾಂಶದಲ್ಲಿ
ಎಂಟನೆಯ ಅಧ್ಯಾಯವು ಸಮಾಪ್ತವಾದುದು
ಸಮಸ್ತ ಸನ್ಮಂಗಳಾನಿಭವಂತು
ಶ್ರೀಃ ವಿಜಯತು
ಶ್ರೀ ಕೃಷ್ಣಾರ್ಪಣಮಸ್ತು

ಅನುಬಂಧಗಳು

ವಿ. ಪು. (=ವಿಷ್ಣುಪುರಾಣ) ಪು. ೧, ೧ನೇ ಸಾಲು

ಮುನಿಶ್ರೇಷ್ಠರಾದ ಪರಾಶರಬ್ರಹ್ಮರ್ಷಿಯನ್ನು ಶ್ರೀ ಮೈತ್ರೇಯರು ಪ್ರಶ್ನೆ ಮಾಡುತ್ತಾರೆ:

ಮೂಲ: "ಪರಾಶರಂ ಮುನಿವರಂ ಕೃತಪೌರ್ವಾಹ್ಣಿಕ ಕ್ರಿಯಂ।
ಮೈತ್ರೇಯಃ ಪರಿಪಪ್ರಚ್ಛ ಪ್ರಣಿಪತ್ಯಾಭಿವಾದ್ಯ ಚ॥" ವಿ.ಪು. ೧-೧-೧

ಇದು ಪುರಾಣರತ್ನದ ಮೊದಲನೇ ಪದ್ಯ, ಹಾಗೂ ಮಂಗಳ ಶ್ಲೋಕವು. ಇಲ್ಲಿ ಮೈತ್ರೇಯರು ತತ್ವಹಿತ ಪುರುಷಾರ್ಥಗಳ ಯಥಾರ್ಥಜ್ಞಾನಕ್ಕಾಗಿ ಪ್ರಾರ್ಥಿಸಿರುತ್ತಾರೆ. ತತ್ವವನ್ನು ತಿಳಿಯಲು ಆಚಾರ್ಯನು ಅತ್ಯವಶ್ಯವು. ಈ ಪದ್ಯದ ಪೂರ್ವಾರ್ಧವು ಆಚಾರ್ಯನ ಲಕ್ಷಣವನ್ನೂ, ಉತ್ತರಾರ್ಧವು ಶಿಷ್ಯನ ಲಕ್ಷಣವನ್ನೂ ತಿಳಿಸುತ್ತದೆ.

ಪರಾಶರಂ ಪರಾನ್ =ಬಾಹ್ಯಕುದೃಷ್ಟೀನ್, ಸಮ್ಯಕ್ಪ್ರಮಾಣಕರ್ಕೈಃ, ಆಶೃಣಾತಿ ಇತಿ ಪರಾಶರಃ ಎಂಬ ವ್ಯುತ್ಪತ್ತಿಯಿಂದ ವೇದ ಮತ್ತು ಶಾಸ್ತ್ರಜನ್ಯ ಜ್ಞಾನದಿಂದ ಕುವಾದಿಗಳನ್ನು ಜಯಿಸಿ ಅವರನ್ನು ಸತ್ಪಥ ಪ್ರವರ್ತಕರನ್ನಾಗಿ ಮಾಡುವ ಸಾಮರ್ಥ್ಯವು. ವೇದಾರ್ಥಗಳನ್ನು ಗ್ರಹಿಸುವುದು ಕಷ್ಟವು. ಗುರುಗಳ ಉಪದೇಶವಿಲ್ಲದೆ ಅದು ದೊರೆಯುವುದಿಲ್ಲ. ಹಾಗಾದರೆ ಈ ಮಹನೀಯರಿಗೆ (ಪರಾಶರರಿಗೆ) ಅಂತಹ ಸಂಸ್ಕಾರವು ಹೇಗೆ ದೊರೆಯಿತು? ಎಂದು ಸಂದೇಹಿಸಿದರೆ ವಿಷ್ಣುಪುರಾಣದ ಪ್ರಥಮಾಂಶದ ಪ್ರಥಮಾಧ್ಯಾಯದಲ್ಲಿ ಇತಿಹಾಸವು ಸ್ಪಷ್ಟವಾಗಿ ನಿರೂಪಿಸಿರುತ್ತೆ. ಜಗತ್ತಿನಲ್ಲಿ ರಾಕ್ಷಸರೇ ಇರಕೂಡದೆಂದ ಪರಾಶರರು ಯಜ್ಞವೊಂದನ್ನುಪಕ್ರಮಿಸಿದರು. ಆ ಸಂದರ್ಭದಲ್ಲಿ ಬ್ರಹ್ಮಮಾನಸಪುತ್ರರಾದ ಪುಲಸ್ತ್ಯರೂ, ಪಿತಾಮಹರಾದ ವಸಿಷ್ಠರೂ ಬಂದು, ಆ ಯಜ್ಞವನ್ನು ನಿಲ್ಲಿಸುವಂತೆ ಹೇಳಿದೊಡನೆ ಪರಾಶರರು ಲಜ್ಜಿತರಾಗಿ ಶಾಂತರಾದರು. ಆಗ ಪುಲಸ್ತ್ಯರು ಈ ರೀತಿ ಅನುಗ್ರಹಿಸಿದರು. ನೀನು ನಮ್ಮ ಮಾತಿನಂತೆ ಯಜ್ಞವನ್ನು ನಿಲ್ಲಿಸಿ ಶಾಂತನಾದೆ. ಆದ್ದರಿಂದ ಸಕಲಶಾಸ್ತ್ರಪ್ರವೀಣನಾಗಿ ದೇವತಾಪಾರಮಾರ್ಥ್ಯವನ್ನೂ ಚಿದಚಿತ್ತುಗಳ ಸ್ವರೂಪ ಸ್ವಭಾವವನ್ನೂ ತಿಳಿಸುವ ಉತ್ತಮವಾದ ವಿಷ್ಣುಪುರಾಣವನ್ನು ರಚಿಸುವವನಾಗು, ಎಂದು ಹರಸಿ ಹೊರಟುಹೋದರು. ಅಂತಹ ಇಬ್ಬರು ಮಹನೀಯರ ತಪಃಪ್ರಭಾವದಿಂದ ಹೊರಬಂದ ವಾಣಿಯೇ ಈ ಪುರಾಣರತ್ನ. ಈ ಸಾರತಮವಾದ ಪುರಾಣರತ್ನವನ್ನು ಮೈತ್ರೇಯರೇ, ನಿಮಗೆ ಉಪದೇಶಿಸು

ವೆನು ಎಂಬ ಸಂದರ್ಭದಿಂದ ಪರಾಶರರಿಗೆ ವಸಿಷ್ಠ ಪುಲಸ್ತ್ಯರ ಅನುಗ್ರಹದಿಂದ ಗುರು ಸಂಸ್ಕಾರ ಬಲವು ಅತಿಶಯವಾಗಿತ್ತೆಂದು ಸ್ಪಷ್ಟವಾಯಿತು. ಆಚಾರ್ಯನ ಲಕ್ಷಣವನ್ನೂ "ಆಚಿನೋತಿಹಿ ಶಾಸ್ತ್ರಾರ್ಥಾನ್ ಆಚಾರಾನ್ ಸ್ಥಾಪಯತ್ಯಪಿ। ಸ್ವಯಮಾಚರತೇ ಯಸ್ಮಾತ್ತಸ್ಮಾದಾಚಾರ್ಯ ಈರಿತಃ॥" ಎಂದು ಆರ್ಯರು ಹೇಳಿರುವಂತೆ ಆಚಾರಗಳನ್ನು ಶಾಸ್ತ್ರಗಳಲ್ಲಿ ಹೇಳಿರುವಂತೆ 'ಇದಮಿತ್ಥಂ' ಎಂಬ ನಿಶ್ಚಯಿಸುವ ಜ್ಞಾನ ಮತ್ತು ಆಚರಿಸುವಿಕೆ ಇದನ್ನು ಶ್ರೀ ವೇದಾಂತ ದೇಶಿಕರ ನ್ಯಾಸವಿಂಶತಿಯಲ್ಲಿ "ಸಿದ್ಧಂ ಸತ್ಸಂಪ್ರದಾಯೇ ಸ್ಥಿರಧಿಯಂ" ಎಂಬ ಪದ್ಯದಿಂದ ನಿರೂಪಿಸಿರುತ್ತಾರೆ.

ಮುನಿವರಂ ಮನನಶೀಲರು. ಪರಬ್ರಹ್ಮನ ಚಿಂತನೆಯಲ್ಲಿ ನಿರತರಾದವರು. ಕೃತಪೌರ್ವಾಹ್ಣಿಕ ಕ್ರಿಯಂ=ಆಹ್ನಿಕ—ಭಗವದಾರಾಧನೆಗಳಿಂದ ಪರಿಶುದ್ಧ ಮನಸ್ಸುಳ್ಳವರು. ಈ ಮೂರು ಪದಗಳಿಂದ ಜ್ಞಾನವೂ-ಅನುಷ್ಠಾನವೂ ಹೇಳಿದಂತಾಯಿತು. ಅಲ್ಲಿಗೆ ಪರಾಶರರು ಜ್ಞಾನಾನುಷ್ಠಾನದಲ್ಲಿ ಪರಿಪೂರ್ಣತೆ ಪಡೆದಿದ್ದರು. ಹಕ್ಕಿಗಳಿಗೆ ಮೇಲಕ್ಕೆ ಹಾರಲು ಹೇಗೆ ಎರಡು ರೆಕ್ಕೆಗಳು ಸಾಧನವೋ, ಹಾಗೆಯೇ ಆಚಾರ್ಯನಿಗೆ ಪರಮಪದಕ್ಕೆ ಹಾರಲು, ಜ್ಞಾನ, ಅನುಷ್ಠಾನ ಎಂಬ ಎರಡು ರೆಕ್ಕೆಗಳು ಸಾಧನ. ಯಥಾ "ಉಭಾಭ್ಯಾಮೇವ ಪಕ್ಷಾಭ್ಯಾಂ ಯಥಾಂಖೇ ಪಕ್ಷಿಣಾಂ ಗತಿಃ। ತಥೈವ ಜ್ಞಾನಕರ್ಮಭ್ಯಾಂ ನಿಯತಾಪರಮಾಗತಿಃ॥" ಎಂದು ಜ್ಞಾನನಿಧಿಗಳಲ್ಲಿ ಪ್ರಥಮರಾದ ಶ್ರೀ ವೇದವ್ಯಾಸರ ವಾಣಿಯನ್ನು ಶ್ಲಾಘಿಸಲು ಹೊರಟ ಶ್ರುತಿಯೂ ಕೂಡ ಪರಾಶರ ಮಹರ್ಷಿಯನ್ನು ಮುಂದು ಮಾಡಿಕೊಂಡು "ಸಹೋವಾಚ ವ್ಯಾಸಃ ಪಾರಾಶರ್ಯಃ" ಎಂದು ಶ್ಲಾಘಿಸಿರುತ್ತೆ. ವಸಿಷ್ಠಃ-ಶಕ್ತಿಃ-ಪರಾಶರಃ-ವ್ಯಾಸಃ-ಶುಕಃ. ಈ ಐದು ಮಂದಿ ಬ್ರಹ್ಮರ್ಷಿಗಳ ಸಂತತಿಯಲ್ಲಿ ಪುರಾಣ ರಚನೆಯು ಶ್ರೀ ಪರಾಶರರ ಆದ್ಯಜ್ಞಾನದಿಂದಲೇ ಪ್ರಾರಂಭವಾಯಿತು. ವ್ಯಾಸರಿಗೆ ಪ್ರಾಶಸ್ತ್ಯವು ಪಾರಾಶರ್ಯರಾದುದರಿಂದ (ಪರಾಶರರ ಪುತ್ರರಾದುದರಿಂದ). ಭಗವದ್ರಾಮಾನುಜರೂ ಸಹ "ಪಾರಾಶರ್ಯ ವಸಿತಸ್ಸುಧಾಂ" ಎಂದು ಪರಾಶರ ಪುತ್ರರಾದ ಶ್ರೀ ವ್ಯಾಸರ ಶ್ರೀಸೂಕ್ತಿಯನ್ನು ಅನುಭವಿಸಿ ಎಂತಲೆ ಶ್ರೀಭಾಷ್ಯಗ್ರಂಥದ ಪ್ರಾರಂಭದಲ್ಲಿ ವ್ಯಾಸರ ಪ್ರಭಾವವನ್ನು ಶ್ಲಾಘಿಸಿರುತ್ತಾರೆ. ಗೀತಾಭಾಷ್ಯದಲ್ಲೂ "ಯಥೋಕ್ತಂ ಭಗವತಾ ಪರಾಶರೇಣ" ಎಂದು ಶ್ರೀ ರಾಮಾನುಜರು ಪರಾಶರರಿಗೆ ವಿಶೇಷ ಗೌರವವನ್ನು ಸಲ್ಲಿಸಿರುತ್ತಾರೆ.

ಮಂಗಲ ಪದ್ಯದ ಉತ್ತರಾರ್ಧದಿಂದ ಶಿಷ್ಯಲಕ್ಷಣವು. ಮೈತ್ರೇಯಃ—ಬ್ರಹ್ಮಜ್ಞಾನಿಯಾದ ಮೈತ್ರೇಯಿಯ ಪುತ್ರರು. ತಾವು ತಿಳಿದಿದ್ದ ಬ್ರಹ್ಮಜ್ಞಾನವು ಸರಿಯೋ ಅಲ್ಲವೋ ಆಚಾರ್ಯಮುಖೇನ ಸ್ಥಿರಪಡಿಸಿಕೊಳ್ಳಲು ಉತ್ಸಾಹವುಳ್ಳವರು.

ಇದರಿಂದ "ತತ್ವಬೋಧಾಭಿಲಾಷೀ" ಎಂಬ ಶಿಷ್ಯಲಕ್ಷಣವು ಹೇಳಿದಂತಾಯಿತು. ಆಚಾರಶೀಲರ ಕುಲದಲ್ಲಿ ಹುಟ್ಟಿದವರಾದ್ದರಿಂದ ಸದಾಚಾರಸಂಪತ್ತಿಯೂ ಮೈತ್ರೇಯರಲ್ಲಿದ್ದುದಾಗಿ ತಿಳಿಯುತ್ತೆ. ಪರಿಪಪ್ರಚ್ಛ-ಪ್ರಣಿಪತ್ಯ-ಅಭಿವಾದ್ಯ ಚ ಆಚಾರ್ಯರಿಗೆ ದಂಡವತ್ಪ್ರಣಾಮವನ್ನು ಸಲ್ಲಿಸಿ ಪ್ರಶ್ನಕಾಲವನ್ನು ನಿರೀಕ್ಷಿಸಿ ಪ್ರಶ್ನಿಸಿದರು. ದೇವತಾಪಾರಮಾರ್ಥ್ಯವನ್ನು (ತತ್ವವನ್ನು) ತಿಳಿಯಬೇಕಾದರೆ "ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ। ಉಪದೇಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ವದರ್ಶಿನಃ॥" ಎಂದು ಗೀತಾಚಾರ್ಯನು ಉಪದೇಶಿಸಿರುವಂತೆ ಶಿಷ್ಯ ಲಕ್ಷಣಪೂರ್ಣರಾದ ಮೈತ್ರೇಯರು ಈ ಕ್ರಮವನ್ನೇ ಅನುಸರಿಸಿ ಪ್ರಶ್ನಿಸಿರುತ್ತಾರೆ. ಇಂತಹ ಶಿಷ್ಯನು ದೊರೆತಲ್ಲಿ ತತ್ವದರ್ಶಿಗಳಾದ ಜ್ಞಾನಿಗಳು "ಸ್ಯಾದಸೌ" ಎಂಬ ಪರಮಕೃಪೆಯಿಂದ ಪ್ರತಿಫಲಾಪೇಕ್ಷೆ ಇಲ್ಲದೆ ಜ್ಞಾನವನ್ನು ಉಪದೇಶಿಸುತ್ತಾರೆ.

ಅಧ್ಯಾತ್ಮವಿದ್ಯೆಯು ಗುರು ಶಿಷ್ಯ ಕ್ರಮವನ್ನನುಸರಿಸಿಯೇ ಪ್ರಕಾಶಕ್ಕೆ ಬರಬೇಕೆಂದು ಸಂಪ್ರದಾಯ. "ರಾಮಾಯಣದಲ್ಲೂ, ವಾಲ್ಮೀಕಿಃ ನಾರದಂ ಪರಿಪಪ್ರಚ್ಛ." ಮಹಾಭಾರತ ಪ್ರಾರಂಭದಲ್ಲೂ "ನಾರಾಯಣಂ ನಮಸ್ಕೃತ್ಯ ನರಂ ಚೈವ" ಗೀತಾರಂಭದಲ್ಲೂ "ಶಿಷ್ಯಸ್ತೇಹಂ ಶಾಧಿಮಾಂ ತ್ವಾಂ ಪ್ರಪನ್ನಂ" ಪ್ರಕೃತದ ಪುರಾಣರತ್ನದಲ್ಲೂ "ಮೈತ್ರೇಯಃ ಪರಾಶರಂ ಪರಿಪಪ್ರಚ್ಛ." ಮುಖ್ಯ ವಾಗಿ ವೇದಾಂತ ವಿದ್ಯೆಯು ಕರಗತವಾಗಬೇಕಾದರೆ "ಆಚಾರ್ಯವಾನ್ ಪುರುಷೋಬೇವೇತ್" ಎಂಬ ಉಪನಿಷತ್ತಿನ ವಾಣಿಯಂತೆ ಎಲ್ಲರೂ ಆಚಾರ್ಯ ರುಳ್ಳವರಾಗಬೇಕು. ಮೈತ್ರೇಯರಿಗೆ ಪರಾಶರರಂತಹ ಸದಾಚಾರ್ಯಸಂಬಂಧ ದಿಂದ ಅವರ ಸಂದೇಹವೆಲ್ಲಾ ಪರಿಹೃತವಾಯಿತು. ಗುರುಪರಂಪರಾಕ್ರಮದಿಂದಲೇ ಆತ್ಮವಿದ್ಯೆಯ ಪ್ರಾಪ್ತಿಯೆಂದು ಸ್ವಾಮಿ ನಿಗಮಾಂತದೇಶಿಕರು ತಮ್ಮ ರಹಸ್ಯ ತ್ರಯಸಾರದ ಶಿಷ್ಯ ಕೃತ್ಯಾಧಿಕಾರದಲ್ಲಿ ಒಂದು ಮಹಾವಾಕ್ಯವನ್ನು ಅಪ್ಪಣೆ ಕೊಡಿಸಿರುತ್ತಾರೆ. ಯಥಾ: "ತಾನಿಪ್ಪಡಿ ಪ್ಪೆತ್ತ ರಹಸ್ಯತ್ರಯಸಾರಾರ್ಥಮಾನ ಮಹಾಧನತ್ತೈ ಅಧಿಕಾರತ್ತಿಲ್ ಶೊನ್ನಪಡಿಯೆ ಉಚಿತಸ್ಥಾನಮರಿಂದು ಸಮರ್ಪಿಕ್ಕಂ ಪೋದು" ಕಥಯಾಮಿ ಯಥಾಪೂರ್ವಂ ದಕ್ಷಾದ್ಯೈರ್ಮುನಿ ಸತ್ತಮೈಃ। ಪೃಷ್ಟಃ ಪ್ರೋವಾಚ ಭಗವಾನಬ್ಜಯೋನಿಃ ಪಿತಾಮಹಃ ತೈಶ್ಚೋಕ್ತಂ ಪುರುಕುತ್ಸಾಯ ಭೂಭುಜೇ ನರ್ಮದಾತಟೇ। ಸಾರಸ್ವತಾಯ ತೇನಾಪಿ ಮಮ ಸಾರಸ್ವತೇನ ಚ॥" "ಎಗ್ರು ಶ್ರೀ ಪರಾಶರ ಬ್ರಹ್ಮರ್ಷಿ ಮೈತ್ರೇಯ ಭಗವಾನುಕ್ಕು ಅರುಳಿಚ್ಚೆಯದಾಪ್ಪೋಲೆ ಗುರುಪರಂಪರೆಯ್ಯೈ ಪ್ರಕಾಶಿಪ್ಪಿತ್ತು ಕ್ಕೊಂಡು, ತನ್ನ ತಜ್ಞತೆಯುಂ, ಅರ್ಥತ್ತಿನ್ ಶೀರ್ಮೆಯುಂ, ತೋತ್ತ ಉಪ ದೇಶಿಕ್ಕವೇಣುಂ" ಎಂದು. ಅಂದರೆ—"ಓ ಮೈತ್ರೇಯರೇ! ಚತುರ್ಮುಖನಿಂದ

ದಕ್ಷನಿಗೂ ದಕ್ಷನಿಂದ ನರ್ಮದಾದಡದಲ್ಲಿದ್ದ ಪುರುಕುತ್ಸನಿಗೂ, ಪುರುಕುತ್ಸನಿಂದ ಸಾರಸ್ವತರಿಗೂ, ಅವರಿಂದ ನನಗೂ ಗುರುಶಿಷ್ಯಕ್ರಮದಿಂದ ಸಾಂಪ್ರದಾಯ ರೀತ್ಯಾ ಬಂದ ಉಪದೇಶವನ್ನೇ ನಿಮಗೂ ಉಪದೇಶಿಸುತ್ತೇನೆ" ಎಂದು. ಪ್ರಕೃತ ದಲ್ಲಿ ಪುರಾಣರತ್ನದಲ್ಲಿ ಪರಾಶರ ಬ್ರಹ್ಮರ್ಷಿಯ ಸಮೀಪದಲ್ಲಿ ಮೈತ್ರೇಯರು ಈ ಬ್ರಹ್ಮವಿದ್ಯೆಯನ್ನು ಪಡೆದಿರುತ್ತಾರೆ.

ವಚನ. ವಿ. ಪು.(= ವಿಷ್ಣುಪುರಾಣ) ಪುಟ, ೨, ಸಾಲು ೨೬

ಮೂಲ: "ವಿಷ್ಣೋಃ ಸ್ವಕಾಶಾದುದ್ಭೂತಂ ಜಗತ್ತತ್ರೈವ ಚ ಸ್ಥಿತಂ।
ಸ್ಥಿತಿ ಸಂಯಮಕರ್ತಾಸೌ ಜಗತೋಽಸ್ಯ ಜಗಚ್ಚ ಸಃ ॥ ವಿ.ಪು. ೧-೧-೩೧

ಈ ಪದ್ಯವು ಶ್ರೀ ವಿಷ್ಣುಪುರಾಣದ ಸಾರವಾದ ತಾತ್ಪರ್ಯವನ್ನೇ ಬೋಧಿಸುತ್ತದೆ. ಭಗವಾನ್ ಪರಾಶರರಿಗೆ ವಸಿಷ್ಠ-ಪುಲಸ್ತ್ಯರ ಅನುಗ್ರಹದಿಂದ ವಿಷ್ಣು ತತ್ವದ ಜ್ಞಾನವು ಲಭಿಸಿತು. ವಿಷ್ಣುವೇ ಪರತತ್ವವೆಂದೂ, ಅವನೇ ಜಗತ್ಕಾರಣನೆಂದೂ ಮೈತ್ರೇಯರ ಪ್ರಶ್ನೆಗಳಿಗೆ ಉತ್ತರವಾಗಿ ಪುರಾಣದ ಮುಖ್ಯ ತಾತ್ಪರ್ಯವೂ ಆಗಿದೆ. ಜಗತ್ಕಾರಣವು ಯಾವುದೋ ಅದನ್ನೆ ಚರ್ಚೆಮಾಡಿ ತಿಳಿಯಬೇಕು. ಅದರಲ್ಲೆ ಶರಣಾಗತಿ ಮಾಡಬೇಕು. ಈ ಮೂಲಕ ಜೀವನು ಧನ್ಯತೆ ಪಡೆಯಬೇಕೆಂಬ ವಿಷಯಗಳನ್ನು "ಯತೋವಾ ಇಮಾನಿ ಜಾಯಂತೇ," "ಕಾರಣಂತು ಧ್ಯೇಯಂ" "ತತ್ಕಾರಣಂ ಸಾಂಖ್ಯಯೋಗಾಧಿಗಮ್ಯಂ" ಇತ್ಯಾದಿ ಶ್ರುತಿವಾಕ್ಯಗಳು ಸ್ಪಷ್ಟಪಡಿಸಿರುತ್ತವೆ. ಈ ಶ್ರುತಿವಾಕ್ಯಗಳ ಸಹಾಯದಿಂದ ಜಗತ್ತಿಗೂ ಪರಮಾತ್ಮನಿಗೂ ಶರೀರ-ಶರೀರಭಾವ ಸಂಬಂಧವನ್ನೂ, ನಿಯಾಮ್ಯ-ನಿಯಾಮಕಭಾವವನ್ನೂ ತಿಳಿದರೆ ಜೀವಾತ್ಮನಿಗೂ—ಪರಮಾತ್ಮನಿಗೂ ಭೇದವುಂಟೆಂಬ ಅರಿವು ಮೂಡುತ್ತದೆ. ಈ ತಾತ್ಪರ್ಯವನ್ನೇ "ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ" "ಜ್ಞಾಜ್ಞಾದ್ವಾವಜಾವೀಶನೀಶೌ" ಎಂಬ ಶ್ರುತಿವಾಕ್ಯಗಳೂ ತಿಳಿಸುತ್ತವೆ. ಅಲ್ಲಿಗೆ ವಿಷ್ಣುವೇ ಜಗತ್ಕಾರಣನೆಂದೂ ಅವನೇ ಉಪಾಸ್ಯನೆಂದೂ ತಿಳಿದಂತಾಯಿತು. ಉಪಾದಾನಕಾರಣ-ನಿಮಿತ್ತಕಾರಣ-ಸಹಕಾರಿಕಾರಣ ಎಂದು ಕಾರಣಗಳು ಮೂರು ವಿಧ. ಲೋಕಾನುಭವದಲ್ಲಿ ಒಂದು ಕಾರ್ಯಕ್ಕೆ ಮೇಲಿನ ಮೂರು ಕಾರಣಗಳೂ ಬೇರೆಬೇರೆಯಾಗಿರುತ್ತವೆ. ಕಾರ್ಯವನ್ನುಂಟುಮಾಡುವ ವಸ್ತುವಿಗೆ ಕಾರಣವೆಂದು ಹೆಸರು. ತಾನೇ ಕಾರ್ಯರೂಪವಾಗಿ ಪರಿಣಮಿಸುವ ವಸ್ತುವಿಗೆ 'ಉಪಾದಾನ ಕಾರಣ'ವೆಂದು ಹೆಸರು. ಚಿನ್ನದ ಗಟ್ಟಿಯೇ ಬಳೆ-ಉಂಗುರವಾಗಿ ಪರಿಣಾಮ ಹೊಂದುತ್ತೆ. ಮಣ್ಣೇ ಮಡಕೆಯಾಗುತ್ತೆ. ಆದ್ದರಿಂದ ಬಳೆ-ಉಂಗುರಗಳಿಗೆ ಚಿನ್ನದ ಗಟ್ಟಿಯೂ, ಮಡಕೆಗೆ ಮಣ್ಣೂ ಉಪಾದಾನಕಾರಣವಾಯಿತು. ಈ

ಉಪಾದಾನಕಾರಣವನ್ನು ಕಾರ್ಯರೂಪವಾಗಿ ಪರಿಣಮಿಸುವಂತೆ ಮಾಡುವ ಕರ್ತೃ ನಿಮಿತ್ತಕಾರಣ. ಚಿನ್ನದ ಗಟ್ಟಿಯನ್ನು ಬಳೆ-ಉಂಗುರಗಳನ್ನಾಗಿ ಮಾಡುವ ಅಕ್ಕಸಾಲೆಯೂ, ಮಡಕೆಯನ್ನು ಮಾಡುವ ಕುಂಬಾರನೂ ನಿಮಿತ್ತಕಾರಣರು. ಕಾರ್ಯವನ್ನು ಮಾಡುವುದಕ್ಕೆ ಸಾಧನವಾದ ಸಾಮಾನು ಸಹಕಾರಿ ಕಾರಣ. ಬಳೆಗೆ ಅಗ್ಗಿಷ್ಟಿಕೆ-ಇಕ್ಕಳ, ಮಡಕೆಗೆ-ದಂಡ-ಚಕ್ರ ಇತ್ಯಾದಿಗಳು ಸಹಕಾರಿ ಕಾರಣಗಳು. ಈ ರೀತಿ ಲೋಕದಲ್ಲಿ ಕಾರ್ಯಕ್ಕೆ ಕಾರಣಗಳು ಬೇರೆಬೇರೆಯಾಗಿರುತ್ತವೆ. ಆದರೆ ಶಾಸ್ತ್ರದೃಷ್ಟಿಯಿಂದ ಜಗತ್ತೆಂಬ ಕಾರ್ಯಕ್ಕೆ ಶ್ರೀ ಮಹಾವಿಷ್ಣುವೇ ತ್ರಿವಿಧಕಾರಣನೂ ಆಗಿರುತ್ತಾನೆ.

ವಿಷ್ಣುವಿನಿಂದಲೇ ಈ ಜಗತ್ತು ಸೃಷ್ಟವಾಯಿತು. ಸೃಷ್ಟಿಗೆ ಮೊದಲು ಅವನಲ್ಲೇ ಸೂಕ್ಷ್ಮರೂಪವಾಗಿತ್ತು. ಜಗತ್ತಿನ ಸೃಷ್ಟಿ-ಸ್ಥಿತಿ-ಲಯ ಇವು ಮೂರೂ ವಿಷ್ಣುವಿಂದಲೇ ನಡೆಯುತ್ತದೆ. ಒಟ್ಟಿನಲ್ಲಿ ಸೃಷ್ಟಿ-ಸ್ಥಿತಿ-ಲಯಗಳಿಗೆ ಅವನೇ ಕಾರಣನು ಎಂಮ ಮೇಲಿನ ತಾತ್ಪರ್ಯ. ಈಗ ಜಗತ್ತೆಂಬ ಕಾರ್ಯಕ್ಕೆ ಅವನೇ ತ್ರಿವಿಧಕಾರಣನು ಹೇಗೆಂದರೆ: ಚಿತ್, ಅಚಿತ್, ಈಶ್ವರರೆಂಬುವರೇ ತತ್ವತ್ರಯಗಳು. "ಭೋಕ್ತಾ-ಭೋಗ್ಯಂ ಪ್ರೇರಿತಾರಂಚ ಮತ್ವಾ" ಎಂಬ ಉಪನಿಷದ್ವಾಕ್ಯವು ನಿಜವಾದ ತತ್ವಗಳನ್ನು ತಿಳಿಯಪಡಿಸಿರುತ್ತದೆ.ಅಂದರೆ ಸುಖದುಃಖಾದಿಗಳನ್ನು ಅನುಭವಿಸುವವನು ಒಬ್ಬ. ಅನುಭವಿಸಲ್ಪಡುವುದು ಒಂದು. ಇವೆರಡಕ್ಕೂ ಪ್ರೇರಕನೊಬ್ಬ. ಚಿತ್ತು ಮತ್ತು ಅಚಿತ್ತೂ ಇವೆರಡೂ ಭಗವಂತನ ಶರೀರಗಳು. ಇದರೊಡನೆ ಕೂಡಿಕೊಂಡಿರುವ ದೇವರು ಒಬ್ಬನೇ. ಇಂತಹ ವಿಶಿಷ್ಟ ವಸ್ತು ಒಬ್ಬನೇ ಹೊರತು ಬೇರೊಬ್ಬನಿಲ್ಲ. ಇದೇ ವಿಶಿಷ್ಟಾದ್ವೈತ. ಚತುರ್ಮುಖ ಬ್ರಹ್ಮನ ನೂರು ವರ್ಷಕ್ಕೆ ಮಹಾಪ್ರಳಯವಾಗುತ್ತೆ. ಈ ಮಹಾಪ್ರಳಯದಲ್ಲಿ ಚಿತ್ತು, ಅಚಿತ್ತುಗಳೆರಡೂ ಪರಬ್ರಹ್ಮನಲ್ಲಿ ಸೂಕ್ಷ್ಮರೂಪವಾಗಿ ಹುದುಗಿರುತ್ತದೆ. ಉಪ್ಪಿನ ಹರಳನ್ನು ನೀರಿನಲ್ಲಿ ಹಾಕಿದರೆ ಕ್ರಮೇಣ ಕರಗಿಹೋಗಿ ಅದರ ನಾಮರೂಪಗಳು ಕಾಣಿಸುವುದಿಲ್ಲ. ಆದರೆ ಅದು ಅಲ್ಲಿ ಸೂಕ್ಷ್ಮರೂಪವಾಗಿರುತ್ತೆ. ಉಪ್ಪಿನ ಹೆಸರು ಹೇಳಲು ವಸ್ತುವು ಕಾಣುವುದಿಲ್ಲ. ಆಕಾರವೂ ಇರುವುದಿಲ್ಲ. ಹೀಗೆ ಪ್ರಳಯಕಾಲದಲ್ಲಿ ಶ್ರೀವಿಷ್ಣುವು ನಾಮರೂಪಗಳನ್ನು ಹೇಳಲು ಬಾರದ ಚಿದಚಿತ್ತುಗಳೊಡನೆ ಇರುತ್ತಾನೆ. ಸೃಷ್ಟಿಕಾಲದಲ್ಲಿ ಸ್ಥೂಲ ಚೇತನಾಚೇತನಗಳಿಂದ ಕೂಡಿದವನಾಗುತ್ತಾನೆ. ಆಗ ನಾಮರೂಪಗಳನ್ನು ವಿಭಾಗಿಸಿ ಹೇಳಬಹುದು. ಸೂಕ್ಷ್ಮ ಜೀವರಾಶಿಗಳನ್ನು ಪ್ರಳಯದಲ್ಲಿ ಶರೀರವಾಗಿ ಹೊಂದಿರುವ ನಾರಾಯಣನೇ ಸೃಷ್ಟಿಯ ಸ್ಥಿತಿಯಲ್ಲಿ ಸ್ಥೂಲ ಜೀವ ಶರೀರಕನಾಗಿ ಆಗುವುದರಿಂದ ಅವನು ಉಪಾದಾನಕಾರಣನು. ಚಿನ್ನದ ಗಟ್ಟಿಯ ಅವಸ್ಥೆಯೇ ಪ್ರಳಯ. ಒಡವೆಗಳಾಗಿ ಪರಿಣಮಿಸಿದ ಅವಸ್ಥೆಯೇ ಸೃಷ್ಟಿ. ಗಟ್ಟಿ

ಚಿನ್ನದಲ್ಲಿ ಉಂಗುರ-ಬಳೆ ಎಂದು ಹೆಸರಿಸಲು ಆಗದು. ತಯಾರಾದಮೇಲೆ ನಾಮರೂಪಗಳು ಬರುತ್ತವೆ. ಚಿನ್ನ ಒಂದೇ. ಅದೇ ಒಡವೆಗಳ ಮೂಲವಸ್ತು. ಅಂತೆಯೆ ಭಗವಂತ ಎಲ್ಲಕ್ಕೂ ಉಪಾದಾನಕಾರಣ. ಬಳೆ-ಉಂಗುರಗಳನ್ನಾಗಿ ತಯಾರಿಸಬೇಕೆಂದು ಅಕ್ಕಸಾಲಿಗೆ ಹೊಳೆಯುವಂತೆ, ಪರಮಾತ್ಮನಿಗೂ "ಬಹುಸ್ಯಾಂ ಪ್ರಜಾಯೇಯ ಮಿತಿ" ಎಂದು ಸೃಷ್ಟಿಸಬೇಕೆಂದು ಇಚ್ಛೆಯಾಗುತ್ತದೆ. ಹೀಗೆ ಸಂಕಲ್ಪ ವಿಶಿಷ್ಟವೇಶದಿಂದ ಪರಮಾತ್ಮನೇ ನಿಮಿತ್ತಕಾರಣನೂ ಆಗುತ್ತಾನೆ. ಅಕ್ಕಸಾಲಿಗೆ ಅಗ್ಗಿಷ್ಟಿಕೆ-ಇಕ್ಕಳ ಇತ್ಯಾದಿ ಸಾಧನಗಳು ಬೇಕಾಗುವಂತೆ ಪರಮಾತ್ಮನಿಗೆ ಬೇರೊಂದರ ಸಹಾಯವಿಲ್ಲದೆಯೇ ಜಗತ್ತನ್ನು ಸೃಷ್ಟಿಸುತ್ತಾನೆ. ಆದ್ದರಿಂದ ಅವನು ಸಹಕಾರಿಕಾರಣನೂ ಆಗುತ್ತಾನೆ. ಹೀಗೆ ಪರಮಾತ್ಮನೊಬ್ಬನೇ ಜಗತ್ತೆಂಬ ಕಾರ್ಯಕ್ಕೆ ತ್ರಿವಿಧಕಾರಣನಾಗಿರುತ್ತಾನೆ.

ಭಗವಂತನು ಪೂರ್ವಸೃಷ್ಟಿಕ್ರಮದ ಸ್ಮೃತಿಯನ್ನು ಹೊಂದಿಯೇ "ಧಾತಾ ಯಥಾಪೂರ್ವಮ ಕಲ್ಪಯತ್" ಎಂದು ಸೃಷ್ಟಿಸುತ್ತಾನೆ. 'ಸ್ಥಿತಿ' ಎಂದರೆ ರಕ್ಷಿಸುವುದು, ಲೋಕಪಾಲಕರಾದ ಸೋಮ-ಸೂರ್ಯಾದಿ ರೂಪದಿಂದ ಜಗತ್ತನ್ನು ರಕ್ಷಿಸುವುದು. ಸಂಯಮವೆಂದರೆ ಪ್ರಳಯ. ಅಗ್ನಿ-ಅಂತಕಾದಿ ರೂಪದಿಂದ ಸಂಹರಿಸುವುದು (ಸೂಕ್ಷ್ಮರೂಪವಾಗಿ ತನ್ನಲ್ಲೆ ಹುದುಗಿಸಿಕೊಳ್ಳುವುದು) ಸೃಷ್ಟಿ ಎಂದರೆ ನಾಮರೂಪಗಳಿಂದ ಹೆಸರಿಸುವಂತೆ ಸ್ಥೂಲವಾಗಿ ಪ್ರಕಾಶಕ್ಕೆ ತರುವುದು. ಚತುರ್ಮುಖನ ಮೂಲಕವಾಗಿ ಸೃಷ್ಟಿಸುವುದು. ಹೀಗೆ ಭಗವಂತನು ಜಗತ್ತಿಗೆ ಸ್ಥಿತಿ-ಸಂಯಮ-ಕರ್ತಾರವಾಗಿ ಇರುವನು ಎಂದು ಮೈತ್ರೇಯರ ಪ್ರಶ್ನೆಗೆ ಪರಾಶರರು ಉತ್ತರಿಸಿರುತ್ತಾರೆ.

ವಿ. ಪು. ಅ. ೨ ಪದ್ಯ–೧ (ವಚನ–ಪುಟ ೪)

ಮೂಲ: **ಅವಿಕಾರಾಯ ಶುದ್ಧಾಯ ನಿತ್ಯಾಯ ಪರಮಾತ್ಮನೇ ।**
ಸದೈಕರೂಪರೂಪಾಯ ವಿಷ್ಣವೇ ಸರ್ವಜಿಷ್ಣವೇ ॥ ವಿ.ಪು. ೧-೨-೧

ಈ ಪದ್ಯದಲ್ಲಿ ಶ್ರೀ ಪರಾಶರರು ಬದ್ಧಮುಕ್ತನಿತ್ಯರೆಂಬ ಸಕಲ ಆತ್ಮವರ್ಗಗಳಿಗಿಂತ ಸರ್ವೇಶ್ವರನು ವಿಲಕ್ಷಣನೆಂದೂ, ಸರ್ವವನ್ನೂ ವ್ಯಾಪಿಸಿಕೊಂಡಿರುವುದರಿಂದ ಅವನು 'ವಿಷ್ಣು'ವೆಂತಲೂ ಉಪದೇಶಿಸಿರುತ್ತಾರೆ. 'ಅವಿಕಾರಾಯ' ಎಂಬ ಪದದಿಂದ 'ನಿತ್ಯಾಸತತವಿಕ್ರಿಯಾ' ಎಂದು ಸ್ವರೂಪ ಸ್ವಭಾವಗಳಲ್ಲಿ ವಿಕಾರ ಹೊಂದುವ ಪ್ರಕೃತಿಗಿಂತಲೂ ವಿಲಕ್ಷಣನೆಂದು ಹೇಳಿದಂತಾಯಿತು. ಹಾಗಾದರೆ ಬದ್ಧಜೀವನಂತೆಯೊ ಎಂದು ಸಂದೇಹಿಸಿದರೆ (ಬದ್ಧಜೀವನಿಗೂ ಹುಟ್ಟುವುದು ಮತ್ತು ಸಾಯುವುದು ಇವೆರಡೂ ಇಲ್ಲದೆ ನಿತ್ಯವಾಗಿರುವುದರಿಂದ) ಜೀವಾತ್ಮನಿ

ಗಿಂತ ವಿಲಕ್ಷಣನು ಎಂದು ಹೇಳುವುದಕ್ಕಾಗಿ ಮೂಲ ಪದ್ಯದಲ್ಲಿ ಮಹರ್ಷಿಗಳು "ಶುದ್ಧಾಯ" ಎಂಬ ಪದವನ್ನು ಪ್ರಯೋಗಿಸಿರುತ್ತಾರೆ. ಅಂದರೆ ಈ ಜೀವಾತ್ಮನು ಪ್ರಕೃತಿರೂಪ ಹೇಯಸಂಬಂಧದಿಂದ ಅಶುದ್ಧನು. ಪರಮಾತ್ಮನಾದರೋ ಹೇಯ ಗಂಧರಹಿತನು. ಹಾಗಾದರೆ ಮುಕ್ತರಿಗೆ ಶುದ್ಧತ್ವವಿರುವ ಕಾರಣ ಮುಕ್ತರಂತಾಗ ಬಹುದಲ್ಲ ಎಂದು ಸಂದೇಹಿಸಿದರೆ ಮುಕ್ತರಿಂದಲೂ ವ್ಯಾವೃತ್ತಿ ಹೇಳುವುದಕ್ಕಾಗಿ 'ನಿತ್ಯಾಯ' ಎಂದು ಮೂಲದಲ್ಲಿ ಪ್ರಯೋಗಿಸಿರುತ್ತಾರೆ. ಮುಕ್ತನಿಗೆ ಮುಕ್ತ ನಾಗುವ ಮುನ್ನ ಹೇಯಸಂಬಂಧವುಂಟು. ಮುಕ್ತನಾದಮೇಲೆ ಹೇಯಸಂಬಂಧ ವಿಲ್ಲವು. ಸರ್ವೇಶ್ವರನಿಗಾದರೋ ಹೇಯಸಂಬಂಧರಾಹಿತ್ಯವು ನಿತ್ಯವಾದುದು. ಅವಿಕಾರಿತ್ವ-ಶುದ್ಧತ್ವ ಇವೆರಡೂ ನಿತ್ಯರಿಗೂ ಪರಮಾತ್ಮನಿಗೂ ಇರುವುದರಿಂದ ಪರಮಾತ್ಮನು ನಿತ್ಯರಂತಾಗಬಹುದಲ್ಲಾ ಎಂದು ಸಂದೇಹಿಸಿದರೆ ಇದರ ವ್ಯಾವೃತ್ತಿ ಗಾಗಿ 'ಪರಮಾತ್ಮನೇ' ಎಂದು ಮೂಲದಲ್ಲಿ ಪ್ರಯೋಗಿಸಿರುತ್ತಾರೆ. ಅಂದರೆ ನಿತ್ಯರಿಗೂ ಆತ್ಮನಾಗಿ ಅವರ ಸತ್ತಾಸ್ಥಿತಿ ಪ್ರವೃತ್ತಿಗಳಿಗೆ ಕಾರಣನಾದುದರಿಂದ ಪರಮಾತ್ಮನು ಸರ್ವಶ್ರೇಷ್ಠನು ಎಂದು "ಅವಿಕಾರಾಯ-ಶುದ್ಧಾಯ-ನಿತ್ಯಾಯ-ಪರಮಾತ್ಮನೇ ಎಂಬ ನಾಲ್ಕು ಪದಗಳಿಂದ ಸೂಚಿಸಿರುತ್ತಾರೆ. ಇದಕ್ಕನುಗುಣ ವಾಗಿ ಸರ್ವವಿಲಕ್ಷಣವಾದ ಪರಮಾತ್ಮನ ಜ್ಯೋತಿರ್ಮಯ ಸ್ವರೂಪವನ್ನು ಪದ್ಯದ ಉತ್ತರಾರ್ಧದಿಂದ ವಿವರಿಸುತ್ತಾರೆ "ಸದೈಕರೂಪರೂಪಾಯ" ಎಂದು. "ಆದಿತ್ಯವರ್ಣಂ ಹಿರಣ್ಮಯಃ ಪುರುಷಃ ಸರ್ವೇನಿಮೇಷಾಜಜ್ಞಿರೇ ವಿದ್ಯುತಃ ಪುರು ಷಾದಧಿ" ಎಂದು ಉಪನಿಷತ್ತುಗಳು ಘೋಷಿಸಿರುವ ಮಂಗಳ ಜ್ಯೋತಿರ್ಮಯ ರೂಪವೇ ಸರ್ವೇಶ್ವರನ ರೂಪವು. "ಸದೈಕ ರೂಪರೂಪಾಯ" ಎಂಬ ಪದದಲ್ಲಿ 'ರೂಪ' ಎಂಬ ಪದವು ಎರಡು ಬಾರಿ ಪ್ರಯೋಗಿಸಲ್ಪಟ್ಟಿದೆ. ಅದರಲ್ಲಿ ಪ್ರಥಮ ರೂಪ ಶಬ್ದವು ಸ್ವಭಾವವಾಚಿಯೆಂತಲೂ, ದ್ವಿತೀಯ ರೂಪ ಶಬ್ದವು ವಿಗ್ರಹ ವಾಚಿಯೆಂತಲೂ ಗ್ರಹಿಸಬೇಕು. ಅಥವಾ ಸದೈಕರೂಪಂ ಅಂದರೆ ಸರ್ವದಾ ಏಕಪ್ರಕಾರರೂಪವೆಂಬ ಅರ್ಥವನ್ನು ಹೇಳಿ ಹೇಯಪ್ರತ್ಯನೀಕತೆ-ಕಲ್ಯಾಣೈಕತಾ ನತ್ವಗಳೆಂಬ ಸರ್ವವಿಲಕ್ಷಣ ರೂಪವೆಂಬ ಅರ್ಥವನ್ನೂ ಗ್ರಹಿಸಬಹುದು.

ರೂಪಕ್ಕನುಗುಣವಾದ ಐಶ್ವರ್ಯವನ್ನೂ ತೋರಿಸಲು ಪದ್ಯದಲ್ಲಿ "ವಿಷ್ಣವೇ" ಎಂಬ ವಿಶೇಷ್ಯಪದವು ಪ್ರಯುಕ್ತವಾಗಿದೆ. ನಿತ್ಯವಿಭೂತಿ-ಲೀಲಾವಿಭೂತಿಗಳ ಲ್ಲಿರುವ ಸಕಲವನ್ನೂ ಅಂತಃಬಹಿಃ ವ್ಯಾಪಿಸಿಕೊಂಡಿರುವುದರಿಂದಲೂ, ಮುಂದೆ ವಿಷ್ಣು ಪುರಾಣದ ೬-೪-೪ನೇ ಪದ್ಯದಲ್ಲಿ

"ಪರಮಾತ್ಮಾ ಚ ಸರ್ವೇಷಾಂ ಆಧಾರಃ ಪರಮೇಶ್ವರಃ।

ವಿಷ್ಣುನಾಮಾ ಸ ವೇದೇಷು ವೇದಾಂತೇಷು ಚ ಗೀಯತೇ॥" ಅಂದರೆ

ಎಲ್ಲಾ ಜೀವಾತ್ಮರುಗಳನ್ನು ವ್ಯಾಪಿಸಿ ನಿಯಮಿಸುವ ಸಾಮರ್ಥ್ಯವುಳ್ಳವನಾದ್ದ ರಿಂದ ವಿಷ್ಣುವು ಪರಮಾತ್ಮನೆಂದು ಹೇಳಿಸಿಕೊಂಡಿರುತ್ತಾನೆ. ಚಿತ್ತು, ಅಚಿತ್ತು ಗಳನ್ನು ವ್ಯಾಪಿಸಿಕೊಂಡಿದ್ದರೂ, ಆದರಲ್ಲಿರುವ ದೋಷಗಳು ತನಗೆ ಅಂಟದಂತಿದ್ದು ಸರ್ವಸಾಕ್ಷೀಭೂತನಾಗಿ ಸರ್ವೋತ್ಕೃಷ್ಟನಾದ್ದರಿಂದ ಅವನು ಸರ್ವಜಿಷ್ಣುವೂ ಆಗಿರುತ್ತಾನೆ.

ಅಲ್ಲದೆ "ಅವಿಕಾರಾಯ ಶುದ್ಧಾಯ" ಎಂಬ ಪದ್ಯದಿಂದ ಜೀವಾತ್ಮವರ್ಗಕ್ಕೂ ಪರಮಾತ್ಮನಿಗೂ ಇರುವ ಭೇದವನ್ನೂ ತಿಳಿಸಿದಂತಾಯಿತು. ಪ್ರಪಂಚದಲ್ಲಿ 'ಆತ್ಮಾ' ಎಂಬುವುದು ಒಂದೇ ಆದರೆ ಆತ್ಮ ಪರಮಾತ್ಮ ಎಂಬ ವ್ಯವಹಾರಕ್ಕೂ ಅವಕಾಶವಿಲ್ಲವು. ಸರ್ವೇಶ್ವರನು ಪರಮಾತ್ಮನಾಗಬೇಕಾದರೆ ಬದ್ಧಮುಕ್ತರೆಂಬ ಆತ್ಮವರ್ಗಗಳಿದ್ದರೇನೆ. ಆತ್ಮವೇ ಒಂದೇ ಆಗಿ ಉಳಿದುದೆಲ್ಲವೂ ಮಿಥ್ಯೆಯೆಂದು ಹೇಳಿದರೆ ಅವನಿಗೆ ಸಮನೂ, ಅಧಿಕನೂ ಇಲ್ಲವು ಎಂದು ಹೇಳುವ "ನತತ್ಸಮ ಶ್ಚಾಭ್ಯಧಿಕಃ ಶ್ರೂಯತೇ" ಎಂಬ ಶ್ರುತಿವಾಕ್ಯಕ್ಕೇ ಏನು ಗತಿ? ಒಬ್ಬನೇ ವಿದ್ಯಾರ್ಥಿ ಇರುವ ತರಗತಿಯಲ್ಲಿ ಉಪಾಧ್ಯಾಯರು ತರಗತಿಯಲ್ಲಿ ಇವನೇ ಮೊದಲನೆಯವನೆಂದು ಹೇಳಿದರೆ ನಗಬೇಕಲ್ಲವೆ? ಆತ್ಮೈಕ್ಯವಾದಿಗಳು ಪರಮಾತ್ಮಾ ಎಂಬ ಪದಕ್ಕೆ ಸರಿಯಾದ ಅರ್ಥ ಹೇಳಲಾರರು. ಅಲ್ಲದೆ ಶ್ರೀ ಪರಾಶರರು ೩ನೇ ಅಧ್ಯಾಯದ ಪ್ರಥಮಾಂಶದ ಹತ್ತನೇ ಪದ್ಯದಲ್ಲಿ "ಪರಃ ಪರಾಣಾಂ ಪರಮಃ ಪರಮಾತ್ಮಾತ್ಮ ಸಂಸ್ಥಿತಃ" ಜೀವದ್ರವ್ಯವೇ ಬೇರೆ ಪರಮಾತ್ಮ ದ್ರವ್ಯವೇ ಬೇರೆಯೆಂದು ಸ್ಪಷ್ಟವಾಗಿ ನಿರೂಪಿಸಿರುತ್ತಾರೆ. ವ್ಯಾಸ ಮುನೀಶ್ವರರೂ ಸಹ ಜೀವಾತ್ಮನು ೨೫ನೇ ತತ್ವವೆಂದೂ, ಪರಮಾತ್ಮನು ೨೬ನೇ ತತ್ವವೆಂದೂ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಗೀತೆಯಲ್ಲೂ "ಶಾಧಿ ಮಾಂ ತ್ವಾಂ ಪ್ರಪನ್ನಂ" "ಅಹಂ ತ್ವಾ ಸರ್ವಪಾಪೇಭ್ಯಃ" "ಮಯಿ ಸರ್ವಮಿದಂ ಪ್ರೋತಂ" "ಮದ್ಭಕ್ತಾ ಯಾಂತಿಮಾಮಪಿ" "ಉತ್ತಮಃ ಪುರುಷಸ್ತ್ವನ್ಯಃ" ಇತ್ಯಾದಿ ಸ್ಥಳ ಗಳಲ್ಲಿ ಆತ್ಮೈಕ್ಯವನ್ನು ಹೇಳಲು ಸಾಧ್ಯವಿಲ್ಲವಾದ ಕಾರಣ ಪ್ರಾಪ್ತಾನೇ ಬೇರೆ ಪ್ರಾಪ್ಯನೇ ಬೇರೆ ಎಂದು ವಿಶದವಾಗಿ ನಿರ್ಣಯಿಸಲ್ಪಟ್ಟಿದೆ.

ವಚನ ವಿ.ಪು. ಪು. ೧೫, ಸಾಲು ೬

ಮೂಲ : "ಯೋಗಿನಾಮಮೃತಂ ಸ್ಥಾನಂ ಸ್ವಾತ್ಮ ಸಂತೋಷಕಾರಿಣಂ।
ಏಕಾಂತಿನಃ ಸದಾ ಬ್ರಹ್ಮಧ್ಯಾಯಿನೋ ಯೋಗಿನಶ್ಚಯೇ।
ತೇಷಾಂ ತತ್ಪರಮಂ ಸ್ಥಾನಂ ಯದ್ವೈ ಪಶ್ಯಂತಿ ಸೂರಯಃ॥

ವಿ.ಪು. ೧-೬.೩೮.೩೯

ಈ ಪದ್ಯಗಳಲ್ಲಿ ಪರಾಶರರು ವರ್ಣಾನುಸಾರವಾಗಿ ಲೋಕಗಳ ವ್ಯವಸ್ಥೆಯನ್ನು ಮಾಡಿರುತ್ತಾರೆ ಮತ್ತು ಆತ್ಮಾನುಭವಕ್ಕೆ ಸ್ಥಳವನ್ನೂ ಸೂಚಿಸಿರುತ್ತಾರೆ. ಮೇಲಿನ ಪದ್ಯದಲ್ಲಿ 'ಏಕಾಂತಿನಃ' ಎಂಬ ಪದದಿಂದ ಪರಮಾತ್ಮೋಪಾಸಕರಾದ ಭಕ್ತಿಯೋಗನಿಷ್ಠರನ್ನು ಹೇಳಿ 'ಯದ್ವೈ ಪಶ್ಯಂತಿ ಸೂರಯಃ' ಎಂದಿರುವಂತೆ ಅವರಿಗೆ ದಿವ್ಯವೈಕುಂಠಪ್ರಾಪ್ತಿ, ಎಂದೇ ಹೇಳಿದಂತಾಯಿತು. ಆದರೆ "ಯೋಗಿನಾಮಮೃತಂ ಸ್ಥಾನಂ ಸ್ವಾತ್ಮ ಸಂತೋಷಕಾರಿಣಂ" ಇಲ್ಲಿ 'ಆತ್ಮಸಂತೋಷಕಾರಿಣಂ' ಎಂಬ ಪದದಲ್ಲಿ ಹೇಳಿರುವ ಆತ್ಮಕ್ಕೆ ಸಂತೋಷಕರವಾದ ಸ್ಥಾನವು ಯಾವುದು? ಕೈವಲ್ಯವೆಂದು ಕೆಲವರ ಮತ. ಇದೂ ನಿತ್ಯವಾದ ಸ್ಥಾನವೆ. ಹಾಗಾದರೆ ವೈಕುಂಠಕ್ಕೆ ಸೇರಿದೆಯೆ? ಅದೊಂದೇ ನಿತ್ಯವಲ್ಲವೆ? ಕೈವಲ್ಯವೆಂಬುವುದು ಯಾವುದು? ಎಲ್ಲಿದೆ? ಇದು ಅರ್ಚಿರಾದಿ ಗತಿಯ ಮಧ್ಯದಲ್ಲೋ, ಅಂತ್ಯದಲ್ಲೋ ಎಂಬುವುದು ಎಲ್ಲಿಯೂ ಸ್ಪಷ್ಟವಿಲ್ಲವು. ಇದು ಧ್ರುವನ ಸ್ಥಾನಕ್ಕೂ ಮೇಲಿದ್ದು ಆದಿಯಲ್ಲಿ ಗಂಗೆಯು ಪ್ರವಹಿಸಿದ ವಿಷ್ಣುಪದಾಖ್ಯ ಸ್ಥಾನವೆಂದು ಶ್ರೀ ವಿಷ್ಣುಚಿತ್ತರು ತಮ್ಮ ವ್ಯಾಖ್ಯಾನದಲ್ಲಿ ಬರೆದಿರುತ್ತಾರೆ. "ಯೋಗಿನಾಂ ಅಮೃತಂ ಸ್ಥಾನಂ" ಎಂದಿರುವುದರಿಂದ ಅಮೃತಸ್ಥಾನ ಮೋಕ್ಷವಾದ್ದರಿಂದ ಯೋಗಿಶಬ್ದಕ್ಕೆ ಪರಮಾತ್ಮೋಪಾಸಕನೇ ಎಂದು ಅರ್ಥವನ್ನು ಹೇಳಬೇಕು. ಅಗ್ಯೆ 'ಸ್ವಾತ್ಮಸಂತೋಷಕಾರಿಣಂ' ಎಂಬ ಪದದಲ್ಲಿರುವ 'ಆತ್ಮ' ಶಬ್ದಕ್ಕೆ ಮನಸ್ಸು ಎಂಬರ್ಥವನ್ನು ಹೇಳಿ ಉಪಾಸಕರು ತಮ್ಮ ಮನಸ್ಸಿಗೆ ಸಂತೋಷವನ್ನುಂಟು ಮಾಡುವವರೆಂದೂ ವಿವರಿಸಬೇಕಾಗುತ್ತೆ. ಇದಕ್ಕೆ ಪ್ರಮಾಣವಾಗಿ "ಮಾನಸಮಿತಿ ವಿದ್ವಾಂಸಃ ಸಪ್ತಸ್ವಾದ್ವಿದ್ವಾಂಸ ಏವ ಮಾನಸೇರಮಂತೆ" ಎಂಬ ಉಪನಿಷದ್ವಾಕ್ಯಾನುಸಾರ ಮನಸ್ಸಿಗೆ ಉಲ್ಲಾಸಕರವಾದ ಸ್ಥಾನ ಪರಮಪದ ಎಂದಾದರೂ ಆಗಬಹುದು. ಅಥವಾ ತಾನು (ಜೀವಾತ್ಮನು) ಪರಮಾತ್ಮನಿಗೆ ಶರೀರವೆಂದು ಭಾವಿಸಿ ಆತ್ಮಜ್ಞಾನಕ್ಕಾಗಿ ಪರಮಾತ್ಮನನ್ನು ಉಪಾಸಿಸುತ್ತಾನೆ. ಅಗ ಅತನಿಗೆ ಅದರ ಫಲವಾಗಿ ಆತ್ಮೋಪಾಸನೆಯ ಅನುಭವಕ್ಕಾಗಿ ಕೆಲವು ದಿನ ಕೈವಲ್ಯವೆಂಬ ಸ್ಥಳದಲ್ಲಿದ್ದು ಅನಂತರ ವೈಕುಂಠಕ್ಕೆ ಹೋಗುವುದಾಗಿ ತಿಳಿಯಬೇಕು. ಕೈವಲ್ಯ ಸ್ಥಾನವಿಷಯದಲ್ಲಿ ಶ್ರುತಿಪ್ರಮಾಣವು ಇಲ್ಲ. ನಾರದೀಯ ಪುರಾಣದಲ್ಲಿ ಕೈವಲ್ಯವುಂಟೆಂದು ಹೇಳಿದೆ.

ಯಥಾ॥ "ಐಹ ಲೌಕಿಕಮೈಶ್ವರ್ಯಂ ಸ್ವರ್ಗಾದ್ಯಂ ಪಾರಲೌಕಿಕಂ।
ಕೈವಲ್ಯಂ ಭಗವಂತಂ ಚ ಮಂತ್ರೋಽಯಂ ಸಾಧಯಿಷ್ಯತಿ॥ ಎಂದೂ "ಐಶ್ವರ್ಯಮಕ್ಷರಗತಿಂ ಪರಮಂಪದಂವಾ" ಅಕ್ಷರಗತಿ ಎಂದರೆ ಕೈವಲ್ಯ, ಎಂದು ಶ್ರೀ ಪರಾಶರಭಟ್ಟರೂ ಸಹ ಪ್ರಯೋಗಿಸಿರುತ್ತಾರೆ.

ವಚನ ವಿ.ಪು. ಪುಟ ೧೫, ಸಾಲು ೮

ಮೂಲ: ಗತ್ವಾ ಗತ್ವಾ ನಿವರ್ತಂತೇ ಚಂದ್ರಸೂರ್ಯಾದಯೋಗ್ರಹಾಃ ।
ಅದ್ಯಾಪಿ ನನಿವರ್ತಂತೇ ದ್ವಾದಶಾಕ್ಷರ ಚಿಂತಕಾಃ ॥

ಇಲ್ಲಿ ದ್ವಾದಶಾಕ್ಷರ ಮಂತ್ರದ ಉಪಾಸನೆಯಿಂದ ಬರುವ ಫಲವು ಸೂಚಿತವಾಗಿದೆ. ಕಾಲಗಳನ್ನು ಸೂಚಿಸುವ ಚಂದ್ರಸೂರ್ಯಾದಿ ಗ್ರಹಗಳು ಜಾರಿಬೀಳುತ್ತಾರೆ. ಹೀಗೆಯೇ ಬ್ರಹ್ಮಾದಿ ದೇವತೆಗಳೂ ಸಹ. ದ್ವಾದಶಾಕ್ಷರದ ಮೂಲಕ ಭಗವದುಪಾಸನೆ ಮಾಡಿದವರು ಪರಮಪದವನ್ನು ಸೇರಿ ಹಿಂತಿರುಗಿ ಬರುವುದಿಲ್ಲ. "ಆ ಬ್ರಹ್ಮ ಭುವನಾಲ್ಲೋಕಃ ಪುನರಾವರ್ತಿನೋಽರ್ಜುನ" ಬ್ರಹ್ಮಲೋಕದ ಪರ್ಯಂತ ಸಮಸ್ತ ಲೋಕದ ಜನರೂ ಹಿಂತಿರುಗಿ ಬರುವರು. "ಮಾಮುಪೇತ್ಯತು ಕೌಂತೇಯ ಪುನರ್ಜನ್ಮ ನ ವಿದ್ಯತೇ" ಅರ್ಜುನನೇ! ನನ್ನನ್ನು ಭಜಿಸಿ ನನ್ನಲ್ಲಿಗೆ ಬಂದವರು ಎಂದಿಗೂ ಹಿಂತಿರುಗುವುದಿಲ್ಲ. ಅವರಿಗೆ ಪುನರ್ಜನ್ಮವಿಲ್ಲ.

ದ್ವಾದಶಾಕ್ಷರ ಮಂತ್ರವೇ ವಾಸುದೇವ ಮಂತ್ರವು (ನಮೋ ಭಗವತೇ ವಾಸುದೇವಾಯ). ಷಡಕ್ಷರ-ಅಷ್ಟಾಕ್ಷರ-ದ್ವಾದಶಾಕ್ಷರ ಇವು ಮೂರೂ ವ್ಯಾಪಕಮಂತ್ರಗಳೇ. ಶ್ರುತಿಯಲ್ಲೂ ಒಂದೇ ಮಂತ್ರದಲ್ಲಿ ಮೂರು ವ್ಯಾಪಕ ಮಂತ್ರಗಳನ್ನೂ ಸೇರಿಸಿರುತ್ತಾರೆ (ಓಂ ನಾರಾಯಣಾಯ ವಿದ್ಮಹೆ ವಾಸುದೇವಾಯ ಧೀಮಹಿ ತನ್ನೋ ವಿಷ್ಣುಃ ಪ್ರಚೋದಯಾತ್) ಎಂದು ವಾಸುದೇವ ಮಂತ್ರವನ್ನು ನಾರದರು ಪ್ರಹ್ಲಾದನಿಗೆ ಉಪದೇಶಿಸಿದರು. ದ್ವಾದಶಾಕ್ಷರ ಮಂತ್ರವನ್ನುಚ್ಚರಿಸಿ ಶರಣಾಗತಿ ಮಾಡಿದವರಿಗೆ ಪರಮಪದ ಪ್ರಾಪ್ತಿಯಾಗುತ್ತದೆ. ಅವರಿಗೆ ಏನಾದರೂ ಸಮಾಧಾನ ಹೇಳಿ ಸ್ವಲ್ಪಕಾಲ ಭೂಲೋಕಕ್ಕೆ ಹೋಗಿ ಪುನಃ ಇಲ್ಲಿಗೆ ಕರೆಸಿ ಕೊಳ್ಳುತ್ತೇವೆ, ಎಂದು ಹೇಳಿದರೂ ಅವರು ಸಮ್ಮತಿಸಲಾರರು. ಒಂದು ವೇಳೆ ಭಗವನ್ನಿಯಮಾನುಸಾರ ಭೂಲೋಕಾದಿ ಸಂಚಾರ ಪ್ರಾಪ್ತವಾದರೂ ಶ್ರುತಿಯು ಹೇಳುವಂತೆ "ಇಮಾನ್ ಲೋಕಾನ್ ಕಾಮಾನ್ನೀ ಕಾಮರೂಪ್ಯನು ಸಂಚರನ್" ಈ ಲೋಕದ ಭೋಗಗಳೂ ಸಹ ಮುಕ್ತನ ಇಷ್ಟಾನುಸಾರ ನಡೆಯುತ್ತೆ. ಕರ್ಮವಶ್ಯನಲ್ಲದ ಕಾರಣ ಸರ್ವವೂ ಆತನಿಗೆ ಅನುಕೂಲವಾಗಿಯೇ ಆಗಿ ಆಗಲೂ ಪುನರಾವರ್ತಿ ಇಲ್ಲವೆಂದೇ ತಿಳಿಯಬೇಕು. ಈ ಸಂದರ್ಭದಲ್ಲಿ "ನ ಚ ಪರಮ ಪುರುಷಸ್ಸತ್ಯಸಂಕಲ್ಪಃ ಅತ್ಯರ್ಥಪ್ರಿಯಂ ಜ್ಞಾನಿನಂ ಲಬ್ಧ್ವಾ ಕದಾಚಿದಾವರ್ತಯಿಷ್ಯತಿ" ಅಂದರೆ ಸತ್ಯಸಂಕಲ್ಪನಾದ ಪರಮ ಪುರುಷನು ತನಗೆ ಪ್ರಿಯನಾದ ಜ್ಞಾನಿಯನ್ನು ಹೊಂದಿ ಆತನಿಗೆ ಎಂದೂ ಆವರ್ತಿಯನ್ನುಂಟುಮಾಡುವುದಿಲ್ಲವಾಗಿ ಯತಿರಾಜರು ತಮ್ಮ ಗದ್ಯದಲ್ಲಿ ತಿಳಿಸಿರುತ್ತಾರೆ. "ವಾಸುದೇವಸ್ಸರ್ವಮಿತಿ ಸಮಹಾತ್ಮಾ ಸುದುರ್ಲಭಃ" ಸರ್ವವನ್ನು ವಾಸುದೇವಾತ್ಮಕವನ್ನಾಗಿ ಭಾವಿಸುವ

ಭಕ್ತನು ಪದೇ ಪದೇ ಸಿಗಲಾರನು. ಎಷ್ಟೋ ಜನ್ಮಗಳು ಕಳೆದಮೇಲೆ ಇಂತಹ ಒಬ್ಬ ಜ್ಞಾನಿಯು ದೊರೆಯುತ್ತಾನೆ. ಇವನನ್ನು ಹೊಂದಿ ಪರಮಾತ್ಮನೂ ಸಂತೋಷಿಸುತ್ತಾನೆ. ವಾಸುದೇವ ಮಂತ್ರಕ್ಕಿಂತ ಮಿಗಿಲಾದ ಮಂತ್ರವಿಲ್ಲ. "ನ ವಾಸುದೇವಾತ್ಪರಮಸ್ತಿ ಪಾವನಂ ನ ವಾಸುದೇವಾತ್ಪರಮಸ್ತಿಸಾಧನಂ। ನವಾಸುದೇವಾತ್ಪರಮಸ್ತಿ ದೈವತಂ ನವಾಸುದೇವಂ ಪ್ರಣಿಪತ್ಯಸೀದಶಿ॥" ಎಂದು ಈ ಮಂತ್ರದ ಮಹತ್ವವು ಅಪರಿಮಿತವಾದುದು. ವಾಸುದೇವ ಶಬ್ದಕ್ಕೆ ಮಹರ್ಷಿಗಳೇ ಅರ್ಥವನ್ನು ಒಂದು ಪದ್ಯದಿಂದ ಸೂಚಿಸಿರುತ್ತಾರೆ. ಆ ಪದ್ಯವು ಯಾವುದೆಂದರೆ—ವಿ.ಪು. ೧-೨-೧೨.

"ಸರ್ವತ್ರಾಸೌ ಸಮಸ್ತಂಚ ವಸತ್ಯತ್ರೇತಿ ವೈಯತಃ।
ತತಸ್ಸ ವಾಸುದೇವೇತಿ ವಿದ್ವದ್ಭಿಃ ಪರಿಪಠ್ಯತೇ॥"

ವಚನ ವಿ.ಪು. ಪು. ೧೮, ಸಾಲು ೨೨

ವಿ.ಪು. ಪ್ರಥಮಾಂಶ ೮-೧೭

ಮೂಲ: ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃಶ್ರೀರನಪಾಯಿನೀ।
ಯಥಾ ಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮ॥

ಈ ಪದ್ಯದಲ್ಲಿ ಶ್ರೀ ಪರಾಶರರು ಜಗನ್ಮಾತೆಯಾದ ಲಕ್ಷ್ಮಿಯು ಸರ್ವೇಶ್ವರನಿಗೆ ಸರ್ವಾವಸ್ಥೆಯಲ್ಲೂ ಎಡಬಿಡದೆ ಇರುವ 'ಪತ್ನಿ'ಯೆಂದು ನಿರ್ಣಯಿಸಿರುತ್ತಾರೆ. ಪರ-ವ್ಯೂಹ-ವಿಭವವೇ ಮೊದಲಾದ ಅವತಾರಗಳಲ್ಲೂ, ಜಗತ್ಸೃಷ್ಟ್ಯಾದಿ ವಿಹಾರಗಳಲ್ಲೂ, ಚೇತನನಿಗೆ ಉಪಾಯೋಪೇಯ ಅವಸ್ಥೆಗಳಲ್ಲೂ ಭಗವಂತನು ಪತ್ನೀವಿಶಿಷ್ಟನಾಗಿಯೇ ಇರುತ್ತಾನೆ. ಈ ದಂಪತಿಗಳಿಗೆ ಎಂದೂ ವಿರಹವೇ ಇಲ್ಲ. ಹೀಗೇಕೆ ಹೇಳಬೇಕು ? ಎಂದರೆ ಕೆಲವರು ಲಕ್ಷ್ಮಿಗೆ ಅಣುತ್ವವನ್ನು ಹೇಳಿ ಜೀವ ಕೋಟಿಗೆ ಸೇರಿಸಿರುತ್ತಾರೆ. ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಲ್ಲೂ ಚೇತನೋಪಾತ್ತ-ಮೋಕ್ಷ ಪ್ರದಿತ್ವಾದಿಗಳಲ್ಲೂ ಲಕ್ಷ್ಮಿಗೆ ಸಂಬಂಧವಿಲ್ಲವೆಂತಲೂ ಹೇಳುತ್ತಾರೆ. ಈ ಅಭಿಪ್ರಾಯಗಳು ಶಾಸ್ತ್ರಸಮ್ಮತವಲ್ಲವು. ಲಕ್ಷ್ಮೀತಂತ್ರವೆಂಬ ಗ್ರಂಥದಲ್ಲಿ ಈ ರೀತಿ ನಿರ್ಣಯಿಸಲ್ಪಟ್ಟಿದೆ.

"ಲಕ್ಷ್ಮ್ಯಾಸಹ ಹೃಷೀಕೇಶೋ ದೇವ್ಯಾಕಾರುಣ್ಯರೂಪಯಾ।
ರಕ್ಷಕಸ್ಸರ್ವಸಿದ್ಧಾಂತೇ ವೇದಾಂತೇಷು ಚ ಗೀಯತೇ॥"

ಲಕ್ಷ್ಮಿಗೂ ರಕ್ಷಣಾದಿ ಕಾರ್ಯಗಳಲ್ಲಿ ಅನ್ವಯವುಂಟೆಂದು ಸ್ಥಾಪಿಸಿರುತ್ತಾರೆ. 'ದೇವ್ಯಾಕಾರುಣ್ಯರೂಪಯಾ' ಎಂದು ಹೇಳಿರುವುದರಿಂದ ಸರ್ವೇಶ್ವರನೊಬ್ಬನೆ

ಜಗತ್ತಿಗೆ ಶೇಷಿಯಲ್ಲ. ಲಕ್ಷ್ಮಿಗೂ ಉಂಟೆಂದು "ಅಸ್ಯಾ ಮಮ ಚ ಶೇಷಂ ಹಿ ವಿಭೂತಿರು ಭಯಾತ್ಮಿಕಾ" ಎಂದು ಉಭಯ ವಿಭೂತಿ ನಿಯಮನಾದಿಗಳಲ್ಲಿ ಇಬ್ಬರಿಗೂ ಅನ್ವಯವುಂಟೆಂದೂ, ವಿಶ್ವಕ್ಸೇನ ಸಂಹಿತೆಯಲ್ಲಿ ಹೇಳಿರುತ್ತದೆ. ಈ ತಾತ್ಪರ್ಯವು ಶ್ರುತಿಯಲ್ಲೂ ನಿರ್ಣೀತವಾಗಿದೆ. "ಈಶ್ವರೀಗಂ ಸರ್ವಭೂತಾನಾಂ" "ಅಸ್ಯೇಶಾನಾ ಜಗತೋ ವಿಷ್ಣುಪತ್ನಿ" "ಶ್ರದ್ಧಯಾ ದೇವೋದೇವತ್ವಮಶ್ನುತೇ" "ಸಾ ನೋ ಲೋಕಮಮೃತಂ ದದಾತು" ಇತ್ಯಾದಿ. "ಶ್ರೀಮಾನ್ ನಾರಾಯಣೋನಃ ಪತಿಃ" ಎಂದು ಪರತತ್ವಕ್ಕೆ ಲಕ್ಷ್ಮೀನಾರಾಯಣರಿಬ್ಬರೂ ಸೇರಿರುತ್ತಾರೆ. "ದ್ವಾವಿಚಸದ್ವೈಕಶೇಷೀ" ಇಬ್ಬರೂ ಸೇರಿ ಒಂದು ಶೇಷಿಯೆಂದೂ, ಆಚಾರ್ಯರು ಸ್ಥಾಪಿಸಿರುತ್ತಾರೆ. ಈಶ್ವರನಂತೆ ಈಕೆಯು ವಿಭುವೆಂದೂ, ಈಶ್ವರಳೆಂದೂ ಸ್ಥಾಪಿಸಿ, ಜೀವಕೋಟಿಗೆ ಸೇರಿದವಳಲ್ಲವೆಂದೂ ಸ್ಥಾಪಿಸಿ, ತಮ್ಮ ಶಿಷ್ಯರಾದ ಮೈತ್ರೇಯರಿಗೆ ಲಕ್ಷ್ಮಿಯು ವಿಭುವು ಎಂದು ಮನದಟ್ಟಾಗುವಂತೆ ಪುನಃ "ತ್ವಯ್ಯೈತದ್ವಿಷ್ಣುನಾಚಾಂಬ ಜಗದ್ವ್ಯಾಪ್ತಂ ಚರಾಚರಂ" ಎಂದು ನಿರ್ಣಯಿಸಿ ಸ್ವರೂಪವ್ಯಾಪ್ತಿಯನ್ನೂ ಸಿದ್ಧಾಂತಿಸಿ ಉಪದೇಶಿಸಿರುತ್ತಾರೆ.

ವಚನ ವಿ.ಪು. ಪುಟ ೨೨ ಸಾಲು ೨೩

ಮೂಲ : ನಾರಾಯಣ ಮಣೀಯಾಂಸಂ ಅಶೇಷಾಣಾಂ ಅಣೀಯಸಾಂ ।
ಸಮಸ್ತಾನಾಂ ಗರಿಷ್ಠಂ ಚ ಭೂರಾದೀನಾಂ ಗರೀಯಸಾಂ ॥

ವಿ.ಪು. ೧-೯-೪೧

ಈ ಪದ್ಯವು "ಅಣೋರಣೀಯಾನ್ಮಹತೋ ಮಹೀಯಾನ್" ಎಂಬ ಶ್ರುತಿ ವಾಕ್ಯದ ಉಪಬ್ರಹ್ಮಣವು. ಅಶೇಷಾಣಾಂ ಅಣೀಯಸಾಂ=ಎಲ್ಲಾ ಅಣುಗಳಿಗಿಂತಲೂ, ಅಣೀಯಾಂಸಂ=ಅಲ್ಪಪ್ರಮಾಣನಾಗಿ ವ್ಯಾಪಿಸುವ ಶಕ್ತಿಯುಳ್ಳವನು. ಗರೀಯಾಸಾಂ ಗರಿಷ್ಠಂ ಚ=ದೊಡ್ಡ ವಸ್ತುಗಳಲ್ಲಿ ದೊಡ್ಡದಾಗಿ ವ್ಯಾಪಿಸುವ ಸಾಮರ್ಥ್ಯವುಳ್ಳವನು. ಅಂದರೆ ಸೂಕ್ಷ್ಮಪದಾರ್ಥಕ್ಕಿಂತ ಸೂಕ್ಷ್ಮನು. ಸ್ಥೂಲಪದಾರ್ಥಕ್ಕಿಂತ ಸ್ಥೂಲನು. ಶ್ರುತಿಯು "ಯದೋಷಧೀಭಿಃ ಪುರುಷಾನ್ಪಶೂಗ್ಂಶ್ಚ ವಿವೇಶ ಭೂತಾನಿ ಚರಾಚರಾಣಿ." ಎಲ್ಲವನ್ನೂ ಸೃಷ್ಟಿಸಿದ ಪರಮಾತ್ಮನು ಚರಾಚರಗಳಲ್ಲಿ ತಾನು ಅನುಪ್ರವೇಶ ಮಾಡಿರುವುದಾಗಿ ಹೇಳಿರುತ್ತದೆ. ಅವನ ಅನುಪ್ರವೇಶವಿಲ್ಲದಿದ್ದರೆ ಪ್ರಾಣಿಗಳಿಗೆ ಸತ್ವವೇ ಇರುವುದಿಲ್ಲವು. ನಾಮವೂ, ರೂಪವೂ ಯಾವ್ಯಾವುದಕ್ಕೆ ಉಂಟೋ ಅವುಗಳಲ್ಲಿ ಪರಮಾತ್ಮನು ಅಂತರ್ಯಾಮಿ. ಸುಮ್ಮನೆ ಒಂದು ರೇಖೆಯನ್ನು ಎಳೆದರೂ ಅಲ್ಲಿ ರೂಪವು ಕಾಣುವುದರಿಂದ ಅಲ್ಲಿ ಪರಮಾತ್ಮ ಅಂತರ್ಯಾಮಿ. ಆದರೆ "ಏಷೋಣುರಾತ್ಮಾ" ಎಂದು

ಜೀವಾತ್ಮನು ಅಣು ಎಂದು ಶ್ರುತಿಯು ಹೇಳಿರುವಾಗ ಅಣುವಾದ ಈ ಜೀವನದಲ್ಲಿ ಅವನು ಹೇಗೆ ವ್ಯಾಪಿಸಿಯಾನು? ಅಣುವು ನಿರವಯವ (ಅವಯವವೆ ಇಲ್ಲ) ವಸ್ತು. ಇದರಲ್ಲಿ ಪ್ರವೇಶ ಹೇಗೆ? ಎಂಬ ಸಂದೇಹ ನಿವಾರಣೆಗಾಗಿಯೇ ಶ್ರೀ ಪರಾಶರರು "ಅಣೀಯಸಾಂ ಅಣೀಯಾಂಸಂ" ಸೂಕ್ಷ್ಮ ಪದಾರ್ಥದಲ್ಲಿ ಸೂಕ್ಷ್ಮಕ ರನು. ಹೆಂಚಿನ ಮನೆಯಲ್ಲಿ ಬಿಸಿಲಿನ ಕೋಲು ಬರುತ್ತೆ. ಅದರಲ್ಲಿ ಗಮನಿಸಿದರೆ ಅತಿ ಸೂಕ್ಷ್ಮತರ ಕಣಗಳು ಕಾಣುತ್ತವೆ. ಅದರಲ್ಲಿಯೂ ಭಗವಾನ್ ಸೂಕ್ಷ್ಮತರನಾಗಿ ಸೇರಿರುತ್ತಾನೆ. ಸಮುದ್ರದಲ್ಲಿ ಅಲೆಗಳು ಪರಸ್ಪರ ಬಡಿದು ತುಂತುರುಗಳು ಏಳುತ್ತವೆ. ಆ ಸೂಕ್ಷ್ಮತರವಾದ ತುಂತುರಿನಲ್ಲಿ ಪರಮಾತ್ಮನು ಅಂತರ್ಯಾಮಿಯೆಂದು "ಪರಂದ ಕಣ್ ಪರವೆಯುಳ್ ನೀರ್ ದೊರುಂ ಪರಂದುಳನ್" ಎಂದು ಶ್ರೀನಮ್ಮಾಳ್ವಾರರು ಸೂಕ್ಷ್ಮತರ ವಸ್ತುವಿನಲ್ಲಿ ಸ್ವಲ್ಪವೂ ಬಿಡದೆ ವ್ಯಾಪಿಸುವ ಸಾಮರ್ಥ್ಯವುಳ್ಳವ ನೆಂದು ಹಾಡಿರುತ್ತಾರೆ. ಸೂಕ್ಷ್ಮವಾದ ಸಾಸುವೆಕಾಳಿನಲ್ಲೂ, ಬೃಹತ್ತಾದ ಹಿಮಾಲಯದಲ್ಲೂ ಅವುಗಳ ಆಕಾರಕ್ಕೆ ತಕ್ಕಂತೆ ಭಗವಂತನು ವ್ಯಾಪಿಸಿರುತ್ತಾನೆ. ಇದೇ ನಾರಾಯಣ ಶಬ್ದದ ಅರ್ಥವು "ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣ ಸ್ಥಿತಃ" ಎಂದು ವೇದಪುರುಷನೂ ಸ್ಪಷ್ಟಪಡಿಸಿರುತ್ತಾನೆ. ಶ್ರೀ ನಿಗಮಾಂತ ದೇಶಿಕರು ಮೂಲಮಂತ್ರಾಧಿಕಾರದಲ್ಲಿ ಪರಮಾತ್ಮನ ವ್ಯಾಪ್ತಿಯ ವಿಷಯವಾಗಿ ಈ ರೀತಿ ಅಪ್ಪಣೆ ಕೊಡಿಸಿರುತ್ತಾರೆ: "ನಾರಾಯಣ ಪದತ್ತಿಲೆ ಅಯನಮೆನ್ರು ವಾಸಸ್ಥಾನಮಾಯೆ, ಅಪ್ಪೋದು ಬಹುವ್ರೀಹಿ ಸಮಾಸ ತ್ತಾಲೆ ಅಂತರ್ವ್ಯಾಪ್ತಿಯುಂ, ತತ್ಪುರುಷ ಸಮಾಸತ್ತಾಲೆ ಬಹಿರ್ವ್ಯಾಪ್ತಿಯುಂ ತೋತ್ತುಗಿರದೆನ್ರು ಅನುಸಂಧಿಪ್ಪಾರ್ ಗಳ್. ಇವ್ವೈ ಇರೆಂಡುಂ ಶ್ರುತಿಸಿದ್ಧಂ" ಎಂದು. "ನಾರಾಃ ಅಯನಂ ಯಸ್ಯ" ಎಂಬ ಬಹುವ್ರೀಹಿ ಸಮಾಸದಿಂದ ನಾರಶಬ್ದವಾಚ್ಯಗಳನ್ನೆಲ್ಲಾ ವಾಸಸ್ಥಾನವಾಗಿವುಳ್ಳವನೆಂದು ಅಂತರ್ವ್ಯಾಪ್ತಿಯೂ "ನಾರಾಣಾಂ ಅಯನಂ" ಎಂಬ ತತ್ಪುರುಷ ಸಮಾಸದಿಂದ ನಾರಗಳಿಗೆ ಆಶ್ರಯ ಸ್ಥಾನನು ಬಹಿರ್ವ್ಯಾಪ್ತಿಯನ್ನೂ ಹೇಳಿ ಮೇಲಿನ ಶ್ರೀ ಪರಾಶರ ಶ್ರೀ ಸೂಕ್ತಿ ಯನ್ನು ಪ್ರಮಾಣಕ್ಕಾಗಿ ಉಪನ್ಯಾಸ ಮಾಡಿರುತ್ತಾರೆ.

ವಚನ ವಿ.ಪು. ಪುಟ ೫೩, ಸಾಲು ೧

ಮೂಲ: "ಯನ್ನದೇವಾ ನಮುನಯೋ ನಚಾಹಂ ನಚಶಂಕರಃ।
ಜಾನಂತಿ ಪರಮೇಶಸ್ಯ ತದ್ವಿಷ್ಣೋಃ ಪರಮಂ ಪದಂ॥ ವಿ.ಪು. ೧-೯-೫೫

ಚತುರ್ಮುಖನು ದೇವತೆಗಳಿಂದೊಡಗೂಡಿ ಕ್ಷೀರಸಮುದ್ರದ ದಡಕ್ಕೆ ಬಂದು ಸ್ತೋತ್ರ ಮಾಡುವ ಸಂದರ್ಭ (ಸಮುದ್ರ ಮಥನಕ್ಕೆ ಮುಂಚೆ).

ನಾನಾಗಲಿ, ಶಂಕರನಾಗಲಿ, ದೇವತೆಗಳಾಗಲಿ, ಮುನಿಗಳಾಗಲಿ, ಆ ಪರಮಾತ್ಮನ ಸ್ಥಾನವಾದ ವಿಷ್ಣು ಪದವನ್ನು ತಿಳಿದಿಲ್ಲ. ಅಂತಹ ಭಗವಂತನಿಗೆ ನಮಸ್ಕಾರವು. ಕರ್ಮವಶ್ಯರಾದ ಬದ್ಧ ಚೇತನರುಗಳೇನೋ ಪರಮಾತ್ಮನ ಸ್ಥಾನವನ್ನು ತಿಳಿಯಲಾರರು. ಜ್ಞಾನಾಧಿಕರಾದ ದೇವತೆಗಳೂ, ಮುನಿಗಳೂ ಪರಮಾತ್ಮನ ಸ್ಥಾನವನ್ನು ತಿಳಿಯಬಹುದಲ್ಲ. ಮುನಿಗಳು ಧರ್ಮ-ತಪಸ್ಸೇ ಮೊದಲಾದ ಅನುಷ್ಠಾನಗಳಿಂದ ಅಧಿಕ ಜ್ಞಾನ ಪಡೆದವರು. ಇವರೂ ಸಹ ಮಿತವಾದ ಜ್ಞಾನವುಳ್ಳವರಾದ್ದರಿಂದ ತಿಳಿಯಲಾರರು. "ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ" ಎಂದು ಶ್ರುತಿಯು ಹೇಳಿರುವುದಲ್ಲಾ. ಪರಮಪದದಲ್ಲಿ ಮುನಿಗಳೂ ಅಮರರೂ ಇದ್ದು ವಿಷ್ಣುಪದವನ್ನು ನೋಡುತ್ತಾರಲ್ಲಾ ಎಂದು ಶಂಕಿಸಿದರೆ ಅಲ್ಲಿರುವ ಮುನಿಗಳೆಂದರೆ ನಿತ್ಯಸೂರಿಗಳು. ಈ ಪದ್ಯದಲ್ಲಿ ಪ್ರಯೋಗಿಸಿರುವ ಮುನಿ ಶಬ್ದವು ಈ ಲೋಕದಲ್ಲಿ ತಪಸ್ಸನ್ನಾಚರಿಸುವವರೆಂದರ್ಥ. ಬ್ರಹ್ಮರುದ್ರರೂ ಸಹ ಜೀವಕೋಟಿಗೆ ಸೇರಿ ಕರ್ಮವಶ್ಯರು. ಇವರೂ ಸಹ "ವಿಧಿ ಶಿವಸನಕಾದ್ಯೈರ್ಧ್ಯಾತು ಮತ್ಯಂ ತದೂರಂ ತವಪರಿಚನಭಾವಂ" ಎಂದು ಬ್ರಹ್ಮರುದ್ರರಿಗೂ ಆ ಸ್ಥಾನವು ಅಗೋಚರವೆಂದು ಶ್ರೀ ಯಮುನಾರ್ಯರು ತಮ್ಮ ಸ್ತೋತ್ರರತ್ನದಲ್ಲಿ ತಿಳಿಸಿರುತ್ತಾರೆ. ಇದೇ ಅಭಿಪ್ರಾಯವು ಗೀತೆಯ ಹತ್ತನೆಯ ಅಧ್ಯಾಯದ ಎರಡನೇ ಪದ್ಯದಲ್ಲೂ ಸ್ಪಷ್ಟವಾಗಿದೆ.

"ನಮೇ ವಿದು ಸ್ಸುರಗಣಾಃ ಪ್ರಭವಂ ನಮಹರ್ಷಯಃ ।
ಅಹಮಾದಿರ್ಹಿ ದೇವಾನಾಂ ಮಹರ್ಷೀಣಾಂಚ ಸರ್ವಶಃ ॥"

ಈ ಪದ್ಯದ ಭಾಷ್ಯಸಂಕ್ತಿಯಲ್ಲೂ "ಸುರಗಣಾಃ ಮಹರ್ಷಯಶ್ಚ ಅತೀಂದ್ರಿಯಾರ್ಥ ದರ್ಶಿನೋ ಅಧಿಕತರಜ್ಞಾನಾಅಪಿ ಮೇಪ್ರಭಾವಂ ನವಿದುಃ ಯತಃ ತೇಷಾಂ ದೇವಾನಾಂ ಮಹರ್ಷೀಣಾಂ ಚ ಅಹಮಾದಿಃ ತೇಷಾಂ ಮಯಾದತ್ತಂ ಜ್ಞಾನಂ ಪರಿಮಿತಂ ಅತಸ್ತೇ ಪರಿಮಿತಜ್ಞಾನಾ ಮತ್ಸ್ವರೂಪಂ ನ ಜಾನಂತಿ" ಅಂದರೆ ದೇವತೆಗಳೂ, ಮಹರ್ಷಿಗಳೂ ಬ್ರಹ್ಮರುದ್ರಾದಿಗಳೂ ಸಹ ನನ್ನಿಂದಲೇ ಜ್ಞಾನವನ್ನು ಪಡೆದಿರುತ್ತಾರೆ. ಮನುಷ್ಯರಿಗಿಂತ ಅಧಿಕ ಜ್ಞಾನವುಳ್ಳವರಾದರೂ, ಆ ಜ್ಞಾನವೂ ಸಹ ಪರಿಮಿತವೇ ಆದ್ದರಿಂದ ಪರಮಾತ್ಮನ ಮಹಿಮೆಯನ್ನೂ, ಅವನಿರುವ ಸ್ಥಳವನ್ನು ತಿಳಿಯಲಾರರು ಎಂದು ಚತುರ್ಮುಖನು ಭಗವಂತನ ಮಹಿಮೆಯು ಊಹಾತೀತವೆಂದು ನಿರ್ಣಯಿಸಿ ಅದೇ ರೀತಿ ಸ್ತೋತ್ರ ಮಾಡಿರುತ್ತಾನೆ.

ವಚನ ವಿ.ಪು. ಪುಟ ೨೬, ಸಾಲು ೮

ಮೂಲ: "ಯಜ್ಞ ವಿದ್ಯಾ ಮಹಾವಿದ್ಯಾ ಗುಹ್ಯ ವಿದ್ಯಾ ಚ ಶೋಭನೇ ।
ಆತ್ಮವಿದ್ಯಾ ಚ ದೇವಿ ತ್ವಂ ವಿಮುಕ್ತಿ ಫಲದಾಯಿನೀ ॥" ವಿ.ಪು. ೧-೯-೧೨೦

ಇಂದ್ರಕೃತವಾದ ಲಕ್ಷ್ಮೀ ಸ್ತೋತ್ರವಿದು. ಯಾವಾಗೆಂದರೆ ಸಮುದ್ರಮಥನ ಕಾಲದಲ್ಲಿ ಲಕ್ಷ್ಮಿಯು ಕ್ಷೀರಸಮುದ್ರದಲ್ಲಿ ಕಾಣಿಸಿಕೊಂಡಳು. ಅವಳ ಕಟಾಕ್ಷವು ಬಿದ್ದೊಡನೆ ಇಂದ್ರನು ಕಳೆದುಕೊಂಡ ತನ್ನ ರಾಜ್ಯೈಶ್ವರ್ಯವೆಲ್ಲವನ್ನೂ ಪುನಃ ಪಡೆದನು. ಆಗ ಇಂದ್ರನು ಲಕ್ಷ್ಮಿಯನ್ನು ಸ್ತೋತ್ರ ಮಾಡುತ್ತಾನೆ. ಲಕ್ಷ್ಮಿಗೆ ಕೆಲವರು ಮೋಕ್ಷಪ್ರದತ್ವವನ್ನು ಅಂಗೀಕರಿಸುವುದಿಲ್ಲ. ಅದಕ್ಕೆ ಉತ್ತರವಾಗಿ ಪುಲಸ್ತ್ಯ ವಸಿಷ್ಠರ ಅನುಗ್ರಹದಿಂದ ಪರದೇವತಾ ಪಾರಮಾರ್ಥ್ಯವನ್ನು ತಿಳಿದ ಶ್ರೀ ಪರಾಶರಬ್ರಹ್ಮರ್ಷಿಗಳು ಜಗನ್ಮಾತಾವಾದ ಲಕ್ಷ್ಮಿಗೆ ಮೋಕ್ಷವನ್ನು ಕರುಣಿಸುವ ಸಾಮರ್ಥ್ಯವಿದೆಯೆಂದು 'ವಿಮುಕ್ತಿಫಲದಾಯಿನೀ' ಇಂದ್ರನ ಸ್ತೋತ್ರದ ಮೂಲಕ ಪ್ರಕಾಶಪಡಿಸಿರುತ್ತಾರೆ.

ಪದ್ಯದ ಅಭಿಪ್ರಾಯ ಯಜ್ಞವಿದ್ಯಾ=ಧರ್ಮಮೀಮಾಂಸಾ ವಿದ್ಯಾಮಯಳು ಮಹಾವಿದ್ಯಾ=ಈ ಪದಕ್ಕೆ ವಿಷ್ಣುಚಿತ್ತೀಯರು ಇಂದ್ರಜಾಲಾದಿ ಕುಹಕ ವಿದ್ಯೆಯೆಂದು ಅರ್ಥಮಾಡಿರುತ್ತಾರೆ. ಇಂದ್ರಜಾಲಾದಿ ವಿದ್ಯೆಗಳೂ ಲಕ್ಷ್ಮಿಯ ವಿಭೂತಿವರ್ಗಕ್ಕೆ ಸೇರಿರುವುದಾಗಿ ಗ್ರಾಹ್ಯವು. ಗುಹ್ಯವಿದ್ಯಾ=ಅಷ್ಟಾಕ್ಷರ-ದ್ವಾದಶಾಕ್ಷರ ರೂಪ ಮಂತ್ರವಿದ್ಯೆಯು. ಆತ್ಮವಿದ್ಯಾ=ಮೋಕ್ಷಾರ್ಥಿಗೆ ಆತ್ಮವಿದ್ಯೆಯು. ಈ ವಿದ್ಯೆಗಳಿಗೆಲ್ಲಾ ಲಕ್ಷ್ಮಿಯು ಅಭಿಮಾನದೇವತೆಯು. ವಿಮುಕ್ತಿ ಫಲದಾಯಿನೀ=ಮೋಕ್ಷವನ್ನು ಕೊಡುವವಳೂ ಮಹಾಲಕ್ಷ್ಮಿಯೇ. ಗೀತೆಯಲ್ಲಿ ಹೇಳಿರುವ "ಆರ್ತೋಜಿಜ್ಞಾಸು ರರ್ಥಾರ್ಥೀ ಜ್ಞಾನೀ ಚ ಭರತರ್ಷಭ" ಎಂಬ ನಾಲ್ಕು ಮಂದಿ ಅಧಿಕಾರಿಗಳಿಗೆ ಬೇಕಾದ ನಾಲ್ಕು ವಿದ್ಯೆಗಳು ಇಲ್ಲಿ ಪ್ರಸ್ತಾಪ ಮಾಡಿರುವುದಾಗಿ ತಿಳಿಯಬಹುದು. ಆರ್ತನಿಗೆ ಗುಹ್ಯವಿದ್ಯೆಯಾದ ಅಷ್ಟಾಕ್ಷರ-ದ್ವಾದಶಾಕ್ಷರಗಳು ಅವಶ್ಯ. ಜಿಜ್ಞಾಸುವಿಗೆ ಮಹಾವಿದ್ಯೆಯೂ, ಅರ್ಥಾರ್ಥಿಗೆ ಯಜ್ಞವಿದ್ಯೆಯೂ, ಜ್ಞಾನಿಗೆ ಆತ್ಮವಿದ್ಯೆಯೂ ಅವಶ್ಯ (ಅಂದರೆ ಪರಮಾತ್ಮ ಸಾಕ್ಷಾತ್ಕಾರಕ್ಕೆ ಕಾರಣವಾದ ಬ್ರಹ್ಮವಿದ್ಯೆ). ಈ ವಿದ್ಯೆಯಲ್ಲಿ ಚಾತುರ್ಯ ಪಡೆದ ನಾಲ್ಕು ಮಂದಿಗಳೂ ಉದಾರಿಗಳೇ ಅಂದರೆ ಭಗವಂತನಿಗೂ ಲಕ್ಷ್ಮಿಗೂ ಬೇಕಾದವರು. 'ವಿಮುಕ್ತಿ ಫಲದಾಯಿನೀ' ಎಂದು ಹೇಳಿರುವುದರಿಂದ ಮೋಕ್ಷವನ್ನು ಕರುಣಿಸುವ ಲೋಕಮಾತೆಯು ಇತರ ಫಲಗಳನ್ನೂ ಸಹ ಕರುಣಿಸುವಳೆಂದು ಕೈಮುತಿಕನ್ಯಾಯಸಿದ್ಧವು. ಶ್ರೀ ಪರಾಶರಭಟ್ಟರು ಶ್ರೀ ಗುಣರತ್ನಕೋಶದಲ್ಲಿ ಹೇಳಿರುವಂತೆ "ಐಶ್ವರ್ಯ ಮಕ್ಷರಗತಿಂ ಪರಮಂ ಪದಂವಾ" ಎಂದು ಐಹಿಕ ಸಂಪತ್ತನ್ನೂ, ಕೈವಲ್ಯವನ್ನೂ, ಪರಮ ಪದವನ್ನೂ ಕೊಡುವ ಸಾಮರ್ಥ್ಯವು ಭಗವಂತನಿಗಿರುವಂತೆ ಲಕ್ಷ್ಮಿಗೂ ಉಂಟೆಂದು ಸಿದ್ಧಾಂತ ಮಾಡಿರುತ್ತಾರೆ. ಶ್ರೀಯಾಮುನೇಯರೂ ಸಹ ಚತುಶ್ಲೋಕಿಯಲ್ಲಿ "ಆಕಾರತ್ರಯಸಂಪನ್ನಾಂ"

ಅಂದರೆ ಉಪಾಯತ್ವ-ಉಪೇಯತ್ವ-ಪುರುಷಕಾರತ್ವ ಇವು ಮೂರೂ ಲಕ್ಷ್ಮಿಗೆ ಸಹಜವಾಗಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಕೆಲವರು ಹೇಳುವಂತೆ ಲಕ್ಷ್ಮಿಗೆ ಮೋಕ್ಷಪ್ರದತ್ವವಿಲ್ಲವೆಂಬ ಸಂದೇಹವನ್ನು ಶ್ರೀಪರಾಶರರು ಮೇಲಿನ ಪದ್ಯದಿಂದ ಪರಿಹರಿಸಿರುತ್ತಾರೆ.

ವಚನ ವಿ.ಪು. ಪುಟ ೩೫, ಸಾಲು ೨೭

ಮೂಲ: ಸಹಸ್ರಶೀರ್ಷಾಪುರುಷಃ ಸಹಸ್ರಾಕ್ಷಸ್ಸಹಸ್ರಪಾತ್ ।
ಸರ್ವವ್ಯಾಪೀ ಭುವಸ್ಸ್ಪರ್ಶಾದತ್ಯತಿಷ್ಠದ್ದಶಾಂಗುಲಂ ॥ ವಿ.ಪು. ೧-೧೨-೫೬

ಧ್ರುವನು ಸ್ತೋತ್ರ ಮಾಡುವ ಪದ್ಯವಿದು. ಶ್ರೀ ಪರಾಶರರು ಇಲ್ಲಿ ಪುರುಷ ಸೂಕ್ತದ ಪಙ್ಕ್ತಿಗಳನ್ನೇ ಪದ್ಯರೂಪದಲ್ಲಿ ಬರೆದಿರುತ್ತಾರೆ. ಪುರುಷಸೂಕ್ತವು ವಿರಾಡ್ರೂಪಿಯಾದ ಪರಮಾತ್ಮನನ್ನೇ ಸ್ತೋತ್ರ ಮಾಡುತ್ತದೆ. ದೇವಾಲಯ ಗಳಲ್ಲೂ, ಮನೆಯಲ್ಲೂ ಅಭಿಷೇಕ ಮಾಡುವಾಗ ಹೇಳುತ್ತಾರೆ. ನಾಲ್ಕು ವೇದ ಗಳಲ್ಲೂ ಪುರುಷಸೂಕ್ತವು ಪಠಿತವಾಗಿರುವುದರಿಂದ "ವೇದೇಷು ಪೌರುಷಂ ಸೂಕ್ತಂ" ಎಂಬ ಹಿರಿಮೆಯು ಬಂದಿರುತ್ತೆ. ಈ ಸೂಕ್ತವು ನಾಲ್ಕು ವೇದಗಳ ಸಾರ. ಸೂಕ್ತದ ವಾಕ್ಯವನ್ನು ಪದ್ಯರೂಪದಲ್ಲಿ ಪ್ರಯೋಗಿಸಿರುವುದು ಪುರಾಣಕ್ಕೂ ಒಂದು ಹಿರಿಮೆ ಬಂದಿರುತ್ತೆ. ಈ ಅಧ್ಯಾಯದಲ್ಲಿ ಅನೇಕ ಪದ್ಯಗಳು ಪುರುಷ ಸೂಕ್ತದ ವಾಕ್ಯಗಳೇ ಆಗಿರುತ್ತೆ. ಪುರುಷಸೂಕ್ತದಲ್ಲಿ ಪಠಿತವಾಗಿರುವ ಪುರುಷ ಶಬ್ದವು ಪರಬ್ರಹ್ಮವಾಚಿ. ಪುರುಷನೆಂದರೆ 'ನಾರಾಯಣನೇ' ಎಂದು ಶತಪಥ ಬ್ರಾಹ್ಮಣವು ಹೇಳುತ್ತದೆ. ಸರ್ವವನ್ನೂ ತನ್ನಲ್ಲಿ ತುಂಬಿಕೊಂಡಿರುವವನಿಗೆ 'ಪುರುಷ'ನೆಂದರ್ಥ. ಮನುಷ್ಯಾದಿ ರೂಪಗಳನ್ನು ಸೃಷ್ಟಿಸಿ ಅವುಗಳಲ್ಲಿ ಪ್ರವೇಶಿಸಿ ಶಯನ ಮಾಡಿರುವುದರಿಂದಲೂ 'ಪುರುಶೇತೆ' ಪುರುಷನೆಂದು ಪ್ರಸಿದ್ಧಿಯಾಗಿರು ತ್ತಾನೆ. ಅಥವಾ ಪೂರ್ವದಿಂದಲೂ ಸ್ಥಿತವಾಗಿರುವ ಕಾರಣ ಪುರುಷನೆಂದು "ಪೂರ್ವಮೇವಾಹಮಿಹಾಸಮಿತಿ" "ತತ್ ಪುರುಷಸ್ಯ ಪುರುಷತ್ವಂ" ಶ್ರುತಿಯು ಹೇಳುತ್ತದೆ. 'ಸಹಸ್ರ ಶೀರಷ್' ಎಂಬಲ್ಲಿ ಸಹಸ್ರ ಶಬ್ದವು ಅನಂತವಾಚಿ. ಸಾವಿರದ ತಲೆ ಎಂಬರ್ಥವಲ್ಲ. ಭಗವಂತನ ಜ್ಞಾನಶಕ್ತಿಗಳ ಆನಂತ್ಯವನ್ನೂ ವ್ಯಾಪ್ತಿಯನ್ನೂ ಹೇಳುತ್ತದೆ. ಶೀರ್ಷ ಶಬ್ದವು ಅಂಗಪ್ರತ್ಯಂಗಗಳಿಗೂ ಉಪ ಲಕ್ಷಣವು. ಶಿರಸ್ಸು ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳೂ ಆಧಾರವಾಗಿದೆ. ಬ್ರಾಹ್ಮಣದಲ್ಲಿ ಶಿರಶ್ಶಬ್ದಕ್ಕೆ ಅರ್ಥನಿರ್ವಚನ ಮಾಡುವಾಗ "ಬೋಧನ-ಮನನ-ಶ್ರವಣ-ಸ್ಪರ್ಶನ-ದರ್ಶನ-ರಸನ-ಘ್ರಾಣ-ಜ್ಞಾನಾನಿ ಶ್ರಿತಾನಿ ಭವಂತೀತ್ಯತಃ ಶಿರಃ" ಇತಿ. ಆದ್ದರಿಂದ ಪುರುಷನ ಜ್ಞಾನಶಕ್ತಿಗಳ ಆನಂತ್ಯವು ಹೇಳಲ್ಪಟ್ಟಿತು.

ಈ ಅರ್ಥವೇ ಮುಂದಿನ ವಾಕ್ಯಗಳಲ್ಲಿ ವಿಶದವಾಗಿರುತ್ತೆ. 'ಸಹಸ್ರಾಕ್ಷಃ' ಎಂಬುವುದರಿಂದ ಜ್ಞಾನದ ಆನಂತ್ಯವೂ. 'ಸಹಸ್ರಪಾತ್' ಎಂಬ ಪದದಿಂದ ಶಕ್ತಿಯ ಆನಂತ್ಯವೂ ಸೂಚಿತವಾಗಿರುತ್ತೆ. ಇಲ್ಲಿ 'ಅಕ್ಷಿ' ಶಬ್ದವು ಸರ್ವಜ್ಞಾನೇಂದ್ರಿಯಗಳಿಗೂ ಉಪಲಕ್ಷಕವು. ಪಾದ ಶಬ್ದವು ಸಕಲ ಕರ್ಮೇಂದ್ರಿಯಗಳಿಗೂ ಉಪಲಕ್ಷಕವು. ಭಗವಂತನಿಗೆ ಅಂಗಪ್ರತ್ಯಂಗಗಳು ಇಲ್ಲದಿದ್ದರೂ ತತ್ಕಾರ್ಯಗಳು ನಡೆಯುತ್ತವೆಂದು "ಅಪಾಣಿಪಾದೋ ಜವನೋ ಗೃಹೀತಾ" ಅವನಿಗೆ ಹಸ್ತವಿಲ್ಲ. ಆದರೂ ಹಿಡಿಯಬಲ್ಲ. ಅವನಿಗೆ ಕಾಲಿಲ್ಲ. "ಆದರೂ ಜಾಗ್ರತೆ ಓಡಬಲ್ಲ" ಎಂದು ಶ್ರುತಿಯು ಹೇಳಿರುತ್ತದೆ. ಹೀಗೆಯೇ "ಪಶ್ಯತ್ಯಚಕ್ಷುಃ ಸಶೃಣೋತ್ಯಕರ್ಣಃ" ಮುಂತಾದ ವಾಕ್ಯಗಳ ಆಶಯವನ್ನೂ ತಿಳಿಯಬೇಕು. "ಭುವಸ್ಪರ್ಶಾ" ಚಿದಚಿದಾತ್ಮಕವಾದ ಜಗತ್ತನ್ನು ಸ್ಪರ್ಶಿಸಿ, ದಶಾಂಗುಲಂ ಅತ್ಯತಿಷ್ಠತ್ = ಆಚೆಗೂ ಹತ್ತು ಅಂಗುಲ ವ್ಯಾಪಿಸಿರುವನು. ಅಂದರೆ ಜ್ಞಾನಿಯಾದವನು ತಿಳಿಯಬಹುದಾದಕ್ಕಿಂತ ಇನ್ನೂ ದೊಡ್ಡವನು. "ಯೇನಾವೃತಂ ಖಂಚದಿವಂ ಮಹೀಂಚ" ಎಂಬ ಶ್ರುತಿಯ ತಾತ್ಪರ್ಯದಂತೆ ವ್ಯಾಪ್ಯವಾದ ಜಗತ್ತಿಗಿಂತ ವ್ಯಾಪಕನಾದ ಪರಮಪುರುಷನ ಮಹತ್ವವನ್ನು ಮನಸ್ಸಿನಲ್ಲಿ ಧ್ಯಾನಿಸಿ ಧ್ರುವನು ಈ ರೀತಿ ಸ್ತೋತ್ರ ಮಾಡಿರುತ್ತಾನೆ.

ವಚನ ವಿ. ಪು. ಪುಟ ೪೯, ಸಾಲು ೬

ಮೂಲ: ಪಾರಂ ಪರಂ ವಿಷ್ಣುರಪಾರಪಾರಃ ಪರಃ ಪರೇಭ್ಯಃ ಪರಮಾರ್ಥರೂಪೀ ।
ಸ ಬ್ರಹ್ಮಪಾರಃ ಪರಪಾರಭೂತಃ ಪರಃ ಪರಾಣಾಮಪಿ ಪಾರಪಾರಃ ॥

ವಿ. ಪು. ೧-೧೫-೫೫

ಕಂಡು ಮಹರ್ಷಿಯು ಪರಬ್ರಹ್ಮನನ್ನು ಸ್ತೋತ್ರಮಾಡಿದ ಈ ಪದ್ಯವನ್ನು ಚಂದ್ರನು ಪ್ರಚೇತಸರಿಗೆ ಹೇಳುತ್ತಾನೆ. ವ್ಯಾಖ್ಯಾನ ಸಹಾಯವಿಲ್ಲದೆ ಈ ಪದ್ಯಕ್ಕೆ ಅರ್ಥವನ್ನು ಹೇಳುವುದು ಕಷ್ಟವು. ಪರ-ಪಾರ ಎಂದು ಹದಿನಾಲ್ಕು ಬಾರಿ ಇಲ್ಲಿ ಪಠಿತವಾಗಿದೆ. ವಿಷ್ಣುಚಿತ್ತೀಯರ ವ್ಯಾಖ್ಯಾನವು ಈ ರೀತಿ ಇರುತ್ತೆ.

"ಪಾರಂ ಪರಂ" = ಸಂಸಾರಮಾರ್ಗವನ್ನು ಅತಿಕ್ರಮಿಸಿದವನು "ಸೋಧ್ವನಃ ಪಾರಮಾಪ್ನೋತಿ" ಎಂದು ಶ್ರುತಿಯೂ, "ಯಮಧ್ವನಃ ಪಾರಮುಶಂತಿಯೋಗಿನಃ" ಎಂದು ಪುರಾಣವೂ ಸಹ ವಿಷ್ಣುವು ಸಂಸಾರಮಾರ್ಗವನ್ನತಿಕ್ರಮಿಸಿದವನೆಂದು ಹೇಳುತ್ತದೆ. ಅಥವಾ ಪರಂಪರೆಯೂ ಬಂದ ಗುರುಗಳ ರಹಸ್ಯವಾದ ಉಪದೇಶಕ್ಕೆ ಅರ್ಹನಾದವನೆಂತಲೂ ಅರ್ಥವಾಗುತ್ತೆ. ಛಾಂದೋಗ್ಯ ಉಪನಿಷತ್ತು "ತದ್ಧೈತದ್ಬ್ರಹ್ಮ ಪ್ರಜಾಪತಯ ಉವಾಚ ಪ್ರಜಾಪತಿರ್ಮನವೇ ಮನುಃ

ಪ್ರಜಾಭ್ಯಃ” ಅಂದರೆ ಈ ರಹಸ್ಯೋಪದೇಶವು ಪ್ರಜಾಪತಿಯಿಂದ ಮನುವಿಗೂ, ಮನುವಿಂದ ಪ್ರಜಾವರ್ಗಕ್ಕೂ ಕ್ರಮವಾಗಿ ಬಂದಿರುತ್ತೆ. ಮತ್ತೊಂದು ಸ್ಥಳದಲ್ಲೂ “ಏವಂ ಪರಂಪರಾಪ್ರಾಪ್ತಂ ಇಮಂ ರಾಜರ್ಷಯೋವಿದುಃ” ಎಂದು ಹೇಳಿರುತ್ತೆ. “ಅಪಾರಪಾರಃ” ಪಾರಃಶಕ್ತಿಃ ಪರಮಾತ್ಮನು ಅನಂತಶಕ್ತಿಯುಳ್ಳವನು. “ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ” ಎಂಬ ಶ್ರುತಿಯ ತಾತ್ಪರ್ಯವು. ಅಥವಾ ಪಾರಂಯಸ್ಯ ನಾಸ್ತಿ ಸಃ ಅಪಾರಪಾರಃ ಎಂದು ಬಿಡಿಸಿದರೆ ಭಗವಂತನು ಅಪರಿಮಿತಪರಿಮಾಣವುಳ್ಳವನೆಂದು ಅರ್ಥವಾಗುತ್ತೆ. ಅಥವಾ ಅಪಾರಸ್ಯ ಅಸಮಾಪ್ತಸ್ಯ ಯಜ್ಞಕರ್ಮಣಃ ಪಾರಃ= ಸ್ವಕೀರ್ತನ ಸ್ಮರಣಾದಿನ ಪೂರಕಃ. ಅಂದರೆ ಅವನನ್ನು ಸ್ತುತಿಸಿದರೆ ಯಜ್ಞಾದಿಕರ್ಮಗಳನ್ನು ಪೂರ್ಣಗೊಳಿಸಿ ಯಜ್ಞಫಲವನ್ನು ಅನುಗ್ರಹಿಸುವವನೆಂದು ಅರ್ಥ. ಷಾಂ “ವಿದುಃ ಕೃಷ್ಣಂ ಬ್ರಾಹ್ಮಣಾಸ್ತುತ್ವತೇಯೇ ತೇಷಾಂ ರಾಜನ್ ಸರ್ವಯಜ್ಞಾಃ ಸಮಾಪ್ತಾಃ” ಎಂದು ಮಹರ್ಷಿಯ ವಚನವಿದೆ. “ಪರಃ ಪರೇಭ್ಯಃ=ಜಗತ್ತೆಂಬ ಕಾರ್ಯಕ್ಕೆ ಕಾರಣನಾದುದರಿಂದಲೂ, ಆನಂದಮಯನಾದ್ದರಿಂದಲೂ ಬ್ರಹ್ಮನೇ ಮೊದಲಾದ ದೇವತೆಗಳಿಗಿಂತ ಉತ್ಕೃಷ್ಟನು. “ಪರಮಾರ್ಥರೂಪೀ” ಬ್ರಹ್ಮಾದಿ ದೇವತೆಗಳ ಶರೀರದಂತೆ ವಿನಾಶಹೊಂದುವ ಶರೀರವುಳ್ಳವನಲ್ಲವು. ಸರ್ವಶಕ್ತಿಗಳಿಗೂ ಆಶ್ರಯವಾದ ದಿವ್ಯಮಂಗಳ ವಿಗ್ರಹವುಳ್ಳವನು. ಅಥವಾ ತನ್ನನ್ನು ಆಶ್ರಯಿಸಿ ಬಂದ ಭಕ್ತರನು ಆನಂದಗೊಳಿಸುವ ಆನಂದಮಯಸ್ವರೂಪನು “ಏಷಹ್ಯೇವಾನಂದಯಾತಿ” ಎಂಬ ಶ್ರುತಿಯ ತಾತ್ಪರ್ಯವು. ‘ಬ್ರಹ್ಮಪಾರಃ’ ಅಂದರೆ ವಿಸ್ತಾರವಾದ ಪ್ರಕೃತಿ ಮಂಡಲವನ್ನು ಸೃಷ್ಟಿಸಿ ಅದರ ಆಚೆ ನಿಂತವನು. ಅಥವಾ “ಸಬ್ರಹ್ಮಪಾರಃ”=ವೇದಗಳನ್ನೂ ಬ್ರಹ್ಮಾದಿ ದೇವತಾವರ್ಗವನ್ನೂ ಕಾಪಾಡುವವನು. ಆಗ್ಯೆ “ಸಬ್ರಹ್ಮಾನ್=ಸವೇದಾನ್ ವೈದಿಕಾನ್ ಪಾಲಯತಿ ಇತಿ ಸಬ್ರಹ್ಮಪಾರಃ” ಎಂದು ವಿಗ್ರಹವಾಕ್ಯವಾಗುತ್ತದೆ. “ಪರಪಾರಭೂತಃ=ಪ್ರಧಾನವಾದ ಪ್ರಕೃತಿಗಿಂತಲೂ, ಆತ್ಮವರ್ಗಕ್ಕಿಂತಲೂ ವಿಲಕ್ಷಣನು. “ಉಭಾವೇಶಾಲೀಯೇತೇ ಪರಮಾತ್ಮನಿ” ಮೇಲೆ ಹೇಳಿದ ಪ್ರಕೃತಿ ಮತ್ತು ಆತ್ಮವರ್ಗ ಇವೆರಡೂ ಪ್ರಳಯದಲ್ಲಿ ಪರಮಾತ್ಮನಲ್ಲಿ ಸೂಕ್ಷ್ಮರೂಪದಿಂದ ಅಡಗಿಕೊಳ್ಳುತ್ತವೆ. ಅಥವಾ ಪರೇಷಾಂ=ಪರಸ್ಪರ ಭಿನ್ನಾನಾಃ. ವಸ್ತೂನಾಂ ಪಾರಭೂತಃ, ಅಂದರೆ ಪರಸ್ಪರ ಭಿನ್ನವಾದ ವಸ್ತುಗಳನ್ನು ಭಿನ್ನವಾಗಿ ತಿಳಿಯುವಂತೆಯೇ ಸೇರಿಸತಕ್ಕವನು. ಸೇತುವೆಯು ತನ್ನ ಅತ್ತ ಇತ್ತ ಕಡೆ ಇರುವ ಎರಡು ಭಾಗಗಳನ್ನು ಸೇರಿಸುವಂತೆ “ಏಷ ಸೇತುರ್ವಿಧರಣ ಇತಿ” ಎಂಬ ಶ್ರುತಿಯ ತಾತ್ಪರ್ಯ. “ಪರಃ ಪರಾಣಾಃ=ಪರೇಭ್ಯಃ=ನಿತ್ಯಮುಕ್ತೇಭ್ಯಃ ಪರಃ. ಅಂದರೆ ನಿತ್ಯಮುಕ್ತರಿಗಿಂತ

ವಿಲಕ್ಷಣನು "ಉತ್ತಮಃಪುರುಷಸ್ತ್ವನ್ಯಃ ಪರಮಾತ್ಮೇದ್ಯುದಾಹೃತಃ" ಎಂಬಂತೆ ನಿತ್ಯರೂ ಮುಕ್ತರೂ ಪರಮಾತ್ಮನಿಗೆ ಶೇಷಭೂತರು. ನಿತ್ಯ ಮುಕ್ತರಿಗೆ ಜಗತ್ ಸೃಷ್ಟ್ಯಾದಿಗಳಲ್ಲಿ ಅಧಿಕಾರವಿಲ್ಲವು. ಪರಮಾತ್ಮನು ಇವರಿಗೆ ಶೇಷಿಯಾಗಿಯೂ, ಜಗತ್‌ಸೃಷ್ಟ್ಯಾದಿಗಳಲ್ಲಿ ಸ್ವತಂತ್ರನೂ ಆದ್ದರಿಂದ ಪರನು. "ಪಾರಪಾರಃ"= ಸರ್ವಪಾರಭೂತಃ ಕಾಲಃ ಕಸ್ಯಾಪಿ ಪಾರಃ=ಅವಸಾನಭೂಮಿಃ. ಅಂದರೆ ಈ ಜಗತ್ತು ಕಾಲಾಂತರ್ಯಾಮಿಯಾದ ಪರಮಾತ್ಮನಿಗೆ ವಿಧೇಯವು. "ಅನಾದಿ ರ್ಭಗವಾನ್‌ಕಾಲಃ" ಎಂಬ ವಾಕ್ಯದ ತಾತ್ಪರ್ಯ. ಕಾಲವು ಈ ಬ್ರಹ್ಮಾಂಡವನ್ನು ತನ್ನ ಅಧೀನದಲ್ಲಿಟ್ಟುಕೊಂಡು ಪ್ರಕೃತಿಗೆ ನಿಯಾಮಕವಾಗಿದೆ. ಆದರೆ ಪರಮ ಪದದಲ್ಲಿ ಕಾಲವು ಪ್ರಭುವಲ್ಲ. "ಕಾಲಂ ಸಪಚತೇತತ್ರ" ಎಂಬಂತೆ ಕಾಲವು ಪರಮ ಪದದಲ್ಲಿ ಪರಮಾತ್ಮನ ದಾಸನಾಗಿ ಅವನ ನಿಯಾಮ್ಯವರ್ಗಕ್ಕೆ ಒಳ ಪಟ್ಟಿರುತ್ತಾನೆ. ಅಥವಾ ಪಾರಾಣಾ=ಪೂರಕಾಣಾಂ ವ್ಯೋಮಾದಿ ವಿಭುದ್ರ ವ್ಯಾಣಾಂ ಪಾರಃ=ಪೂರಯಿತಾ=ವಿಭುದ್ರವ್ಯಗಳೆಲ್ಲವನ್ನೂ ವ್ಯಾಪಿಸಿಕೊಂಡ ವನು "ಪೇನೇದಂ ಪೂರ್ಣಂಪುರುಷೇಣ ಸರ್ವಂ" ಎಂಬ ಶ್ರುತಿಯ ಮಾತಿನಂತೆ ಈ ಎಲ್ಲವನ್ನೂ ಪರಮಾತ್ಮನು ಪೂರ್ಣವಾಗಿ ಆವರಿಸಿಕೊಂಡಿರುತ್ತಾನೆ. ಅಥವಾ ರಲಯೋರಭೇದಃ ಎಂಬ ನ್ಯಾಯದಂತೆ ಪಾಲಪಾಲಃ=ಇವೆಲ್ಲವನ್ನೂ ಬಿಡದೆ ರಕ್ಷಿಸತಕ್ಕವನು. "ನಹಿಪಾಲನ ಸಾಮರ್ಥ್ಯಂ ಋತೇ ಸರ್ವೇಶ್ವರಂ ಹರಿಂ" ಹರಿಯನ್ನು ಬಿಟ್ಟು ಮತ್ತಾರೂ ರಕ್ಷಿಸುವ ಸಾಮರ್ಥ್ಯ ಹೊಂದಿಲ್ಲ ಎಂದು ಚಂಪ್ರನು ಪ್ರಚೇತಸನಿಗೆ ಕಂಡು ಮಹರ್ಷಿಯು ಪರಬ್ರಹ್ಮನನ್ನು ಸ್ತುತಿಸಿದ ರೀತಿ ಯನ್ನು ವಿವರಿಸಿದನು.

ವಿ.ಪು. ೧೯ನೇ ಅಧ್ಯಾಯ ಪು. ೬೧ (ವಚನ ವಿಷ್ಣುಪುರಾಣ) ಪದ್ಯ–೮೫

ಮೂಲ : ಸರ್ವಗತತ್ವಾದನಂತಸ್ಯ ಸಏವಾಹ ಮವಸ್ಥಿತಃ ।
ಮತ್ತಸ್ಸರ್ವಮಹಂ ಸರ್ವಂ ಮಯಿ ಸರ್ವಂ ಸನಾತನೇ ॥

ಪ್ರಹ್ಲಾದನು ಇತರ ರಾಕ್ಷಸ ಕುಮಾರರಿಗೆ ಉಪದೇಶಿಸುವ ಸಂದರ್ಭ. "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಉಪನಿಷದ್ವಾಕ್ಯದ ವಿವರಣೆಯನ್ನು ಪರಾಶರರು ಭಾಗವತನಾದ ಪ್ರಹ್ಲಾದನ ಮಾತಿನಿಂದ ವಿವರಿಸಿರುತ್ತಾರೆ. ಸರ್ವೇಶ್ವರನು ಎಲ್ಲವನ್ನೂ ವ್ಯಾಪಿಸಿ ನನ್ನಲ್ಲೂ ಇರುವನು. ನನ್ನಿಂದಲೇ ಎಲ್ಲವೂ ನಡೆಯುತ್ತೆ. ನಾನೇ ಸರ್ವವು ಅಂದರೆ ನನ್ನಲ್ಲಿರುವ ಪರಮಾತ್ಮನೇ ಸರ್ವವು. ನನ್ನಲ್ಲಿ ಅಂತರ್ಯಾಮಿಯಾಗಿರುವ ಸರ್ವೇಶ್ವರನಲ್ಲೆ ಎಲ್ಲವೂ ಅಡಗಿವೆ ಎಂದು ಮೂಲ ಪದ್ಯದ ತಾತ್ಪರ್ಯ.

ಈ ಪದ್ಯದಲ್ಲಿ ಪ್ರಹ್ಲಾದನು ನಾನೇ ಸರ್ವವು ಎಂದು ಹೇಳಿ ತನ್ನ ಉಪಾಸನೆಯನ್ನೇ ಮಾಡುವಂತೆ ರಾಕ್ಷಸ ಕುಮಾರರಿಗೆ ಉಪದೇಶಿಸಿರುತ್ತಾನೆ. ಆದರೆ ಪ್ರಹ್ಲಾದನ ಉಪಾಸನೆಯಿಂದ ಮೋಕ್ಷವು ಲಭಿಸುವುದೆ? ನಾನು ಎಲ್ಲವು ಎಂದು ಹೇಳಿಕೊಂಡಿರುವುದು ಅಹಂಕಾರವಾಗಲಿಲ್ಲವೆ? ಎಂಬ ಸಂದೇಹಗಳು ಬರುವುದು. ಆದರೆ ಹರಿಯ ಉಪಾಸನೆಯಲ್ಲಿ ನಿರತನಾದ ಪರಮಭಾಗವತನಾದ ಪ್ರಹ್ಲಾದನ ಬಾಯಲ್ಲಿ ನಿರರ್ಥಕವಾದ ಮಾತುಗಳು ಬರುತ್ತವೆಯೆ! ಹರಿಯ ಧ್ಯಾನದಲ್ಲಿ ನಿರತನಾದ ಪ್ರಹ್ಲಾದನು ತನ್ಮಯನಾಗಿ ತಾನೂ ಹರಿಯೇ ಆಗಿ ಹೇಳುತ್ತಿರುವ ಮಾತುಗಳೆಂದು ತಿಳಿಯಬೇಕು. ವೇದಾಂತ ಶಾಸ್ತ್ರದ ಪ್ರಕಾರವಾಗಿಯೂ ಇದು ಸಮಂಜಸವೇ ಆಗಿದೆ. ಉಪಾಸನಾ ವಿದ್ಯೆಗಳಲ್ಲಿ "ಪ್ರತರ್ದನ ವಿದ್ಯೆ" ಎಂಬುವುದು ಒಂದು ವಿದ್ಯೆ. ಪ್ರತರ್ದನರು ಮೋಕ್ಷಪುರುಷಾರ್ಥವನ್ನು ಪಡೆಯಲು ಯಾರನ್ನು ಉಪಾಸಿಸಬೇಕೆಂದು ಇಂದ್ರನನ್ನು ಕೇಳುತ್ತಾರೆ. ಇಂದ್ರನು "ಮಾಮುಪಾಸ್ವ" ನನ್ನನ್ನೇ ಉಪಾಸಿಸಿರಿ ಎಂದು ಉತ್ತರಕೊಟ್ಟನು. ಇದು ತಾನೆ ಹೇಗೆ ಸಮಂಜಸ? ಇಂದ್ರನನ್ನು ಉಪಾಸಿಸಿದರೆ ಮೋಕ್ಷ ಎಲ್ಲವು—ಅವನೂ ಒಬ್ಬ ಬದ್ಧಜೀವನು. ಆದರೂ ಶಾಸ್ತ್ರದೃಷ್ಟಿಯಿಂದ ಇಂದ್ರನ ಮಾತು ಸಮಂಜಸವಾಗಿದೆ. ಹೇಗೆಂದರೆ—ಯಜುರಾರಣ್ಯಕದಲ್ಲಿ ಹೇಳಿರುವಂತೆ—"ಅಂತಃಪ್ರವಿಷ್ಟಶ್ಶಾಸ್ತಾ ಜನಾನಾಂ ಸರ್ವಾತ್ಮಾ" "ಯ ಆತ್ಮನಿ ತಿಷ್ಠನ್" "ಐತದಾತ್ಮ್ಯಮಿದಂ ಸರ್ವಂ" ಇತ್ಯಾದಿ ಪ್ರಮಾಣಗಳಿಂದ ಇಂದ್ರನು "ಮಾಮುಪಾಸ್ವ" ಎಂದು ಹೇಳಿದ್ದು ಸಮಂಜಸವೆ. ಅಂದರೆ ನನ್ನಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನನ್ನು ಉಪಾಸಿಸು ಎಂದರ್ಥ. "ಶಾಸ್ತ್ರದೃಷ್ಟ್ಯಾತು ಉಪದೇಶಃ ವಾಮದೇವವತ್" ಎಂಬ ಬ್ರಹ್ಮ ಸೂತ್ರವೂ ಕೂಡ ಮೇಲಿನ ಶಾಸ್ತ್ರಾರ್ಥವನ್ನೇ ಉಪದೇಶಿಸಿದೆ. ಈ ಸೂತ್ರವು ಇಂದ್ರನಿಗೆ ಆತ್ಮಾವಾದ ಪರಮಪುರುಷನೇ ಉಪಾಸ್ಯನೆಂದು ಸ್ಪಷ್ಟಪಡಿಸಿರುತ್ತೆ. ವಾಮದೇವರು ಇದೇ ರೀತಿ ಉಪದೇಶಿಸಿರುತ್ತಾರೆಂದು, ಸೂತ್ರದಲ್ಲಿ "ವಾಮ ದೇವವತ್" ಎಂದು ವ್ಯಾಸರು ಸೂಚಿಸಿರುತ್ತಾರೆ. ವಾಸುದೇವನೇ ಸರ್ವವೆಂದು ಉಪಾಸನೆ ಮಾಡುವವರ ಸ್ಥಿತಿಯೆಲ್ಲವೂ ಇದೇ ರೀತಿಯಾಗಿರುತ್ತೆ.

ಆಳ್ವಾರುಗಳಲ್ಲಿ ಪ್ರಧಾನರಾದ ಶಠಗೋಪರು (ನಮ್ಮಾಳ್ವಾರ್ರು) ಇದೇ ರೀತಿ ತಮ್ಮನ್ನೇ ಮರೆತು ಹೇಳಿಕೊಂಡಿರುತ್ತಾರೆ. ಎಲ್ಲಿ ಎಂದರೆ (ತಿರು ೫-೬-೧) ಈ ದಶಕದಲ್ಲಿ ನಾಯಿಕಾವಸ್ಥೆಯನ್ನು ಪಡೆದ ಶಠಾರಿಮುನಿವರ್ಯರು ಗೋಪಿಕಾ ಸ್ತ್ರೀಯರಂತೆ ಎಲ್ಲವನ್ನೂ ನಾನೇ ಮಾಡಿದೆ ಎಂದು ನಾಯಿಕೆಯ ತಾಯಿಯು ವರ್ಣಿಸಿರುವಂತೆ ಹೇಳಿರುತ್ತಾರೆ. ಆಪಾಶುರವು—

“ಕಡಲ್ ಜ್ಞಾಲಂ ಶಯ್ದೇನುಂ ಯಾನೇ ಯೆನ್ನುಂ
ಕಡಲ್ ಜ್ಞಾಲಂ ಮಾವೇನುಂ ಯಾನೇಯೆನ್ನುಂ
ಕಡಲ್ ಜ್ಞಾಲಂ ಕೊಂಡೇನುಂ ಯಾನೇಯೆನ್ನುಂ
ಕಡಲ್ ಜ್ಞಾಲಂ ಕೀಂಡೇನುಂ ಯಾನೇಯೆನ್ನುಂ” ಇತ್ಯಾದಿ.

ಅಂದರೆ ಭಗವಂತನಿಂದ ಆವಿಷ್ಟೆಯಾದ ಶಠಗೋಪನಾಯಕಿಯ ಮಾತು ಸಮುದ್ರ ಪರಿವೃತವಾದ ಭೂಮಿಯನ್ನು ನಾನೇ ಸೃಷ್ಟಿಮಾಡಿದೆ. ಆ ಭೂಮಿಯನ್ನು ವಾಮನನಾಗಿ ಅಳೆದುಕೊಂಡವನೂ ನಾನೇ. ವರಾಹರೂಪಿಯಾಗಿ ಭೂಮಿಯನ್ನು ಉದ್ಧಾರ ಮಾಡಿದವನೂ ನಾನೇ. ಪ್ರಳಯಕಾಲದಲ್ಲಿ ಈ ಭೂಮಿಯನ್ನು ಭಕ್ಷಿಸಿದವನೂ ನಾನೇ. ವೇದಶಾಸ್ತ್ರಗಳೆಲ್ಲವೂ ನಾನೇ. ಭೂಮಿಯೂ, ಆಕಾಶವೂ, ಅಗ್ನಿಯೂ, ವಾಯುವೂ ನಾನೇ. ಈ ರೀತಿ ವಿಲಕ್ಷಣರಿಗೆ ಮಾತ್ರ ಭಗವದುಪಾಸನೆಯಿಂದ ಬರುವ ಆವೇಶವು.

ಪ್ರಕೃತ ಪದ್ಯದಲ್ಲಿಯೂ ಪರಮ ಭಾಗವತನಾದ ಪ್ರಹ್ಲಾದನಿಗೆ ಶ್ರೀಹರಿಯ ಉಪಾಸನಾಬಲದಿಂದ ಹರಿಯಿಂದ ಆವಿಷ್ಟನಾಗಿ ತನ್ನನ್ನೆ ಮರೆತು ಹರಿಯೂ ನಾನೇ, ನನ್ನಿಂದಲೆ ಎಲ್ಲವೂ ಆಯಿತು, ಎಂದು ಆವೇಶಭರದಲ್ಲಿ ರಾಕ್ಷಸ ಕುಮಾರರಿಗೆ ಉಪದೇಶಿಸಿರುತ್ತಾನೆ.

ವಚನ ವಿ.ಪು. ಪುಟ ೬೯, ಸಾಲು ೧೨

ಮೂಲ: “ವಿಷ್ಣುರ್ಮನ್ವಾದಯಃ ಕಾಲಃ ಸರ್ವಭೂತಾನಿ ಚದ್ವಿಜ।
ಸ್ಥಿತೇರ್ನಿಮಿತ್ತಭೂತಸ್ಯ ವಿಷ್ಣೋರೇತಾ ವಿಭೂತಯಃ॥ ವಿ. ಪು. ೧-೨೨-೩೨

ಶ್ರೀ ಪರಾಶರರು ಮೈತ್ರೇಯರಿಗೆ ಭಗವದ್ವಿಭೂತಿಯನ್ನು ವಿವರಿಸುವ ಸಂದರ್ಭವು. ಸೃಷ್ಟಿಗೆ ಕಾರಣವಾದ ವಿಭೂತಿಯನ್ನು ಮೇಲಿನ ಪದ್ಯದ ಹಿಂದಿನ ಪದ್ಯ ೧-೨೨-೩೧

“ಬ್ರಹ್ಮಾದಕ್ಷಾದಯಃ ಕಾಲಃ ತಥೈವಾಖಿಲಜಂತವಃ।
ವಿಭೂತಯೋ ಹರೇರೇತಾಃ ಜಗತ್ಸೃಷ್ಟಿ ಹೇತವಃ॥

ಈ ಪದ್ಯದಲ್ಲಿ ಚತುರ್ಮುಖನೂ, ದಕ್ಷಪ್ರಜಾಪತಿ ಮೊದಲಾದವರೂ, ಕಾಲವೂ, ಸಮಸ್ತ ಜಂತುಗಳೂ ಸೃಷ್ಟಿಗೆ ಕಾರಣವಾದಿ ವಿಭೂತಿಗಳೆಂದೂ, ೧-೨೨-೩೨ನೇ ಪದ್ಯದಲ್ಲಿ ವಿಷ್ಣುವೂ, ಮನ್ವಾದಿಗಳೂ, ಕಾಲವೂ, ಸರ್ವಭೂತಗಳೂ ಸ್ಥಿತಿಗೆ ಕಾರಣವಾದ ವಿಭೂತಿಗಳೆಂದು ಹೇಳಿರುತ್ತೆ, ೧-೨೨-೩೩ನೇ ಪದ್ಯವಾದ

“ರುದ್ರಃ ಕಾಲಾಂತಕಾದ್ಯಾಶ್ಚ ಸಮಸ್ತಾಶ್ಚೈವ ಜಂತವಃ।
ಚತುರ್ಧಾ ಪ್ರಳಯಾಯೈತಾ ಜನಾರ್ದನ ವಿಭೂತಯಃ॥”

ಎಂದು ಈ ಪದ್ಯದಲ್ಲಿ ರುದ್ರನೂ, ಕಾಲವೂ, ಯಮನೂ, ಸಮಸ್ತ ಜಂಗಳೂ, ಪ್ರಳಯಕ್ಕೆ ಕಾರಣಗಳಾದ ವಿಭೂತಿಗಳೆಂದೂ ಶ್ರೀ ಪರಾಶರರು ಮೈತ್ರೇಯರಿಗೆ ಉಪದೇಶಿಸಿರುತ್ತಾರೆ. ಅಲ್ಲಿಗೆ ಸೃಷ್ಟಿಗೆ ಚತುರ್ಮುಖನೂ, ಸ್ಥಿತಿಗೆ ವಿಷ್ಣುವೂ, ಲಯಕ್ಕೆ ರುದ್ರನೂ ಕಾರಣರೆಂದು ಹೇಳಿದಂತಾಯಿತು.

ಬ್ರಹ್ಮರುದ್ರರು ಕ್ಷೇತ್ರಜ್ಞರಾದ ಕಾರಣ ನಿಯಾಮ್ಯ ವರ್ಗಕ್ಕೆ ಸೇರಿ ಭಗವದ್ವಿಭೂತಿ ವರ್ಗಕ್ಕೆ ಸೇರಿದವರೆಂದು ಹೇಳಿದ್ದು ಸರಿಯಾಯಿತು. ಆದರೆ ಮೇಲಿನ ೩೨ನೇ ಪದ್ಯದಲ್ಲಿ ವಿಷ್ಣುವು ವಿಷ್ಣುವಿನ ವಿಭೂತಿಗೆ ಸೇರಿದವನೆಂದು ಹೇಳಿರುವುದು ಹೇಗೆ ಉಪಪನ್ನವು? "ನಹಿಪಾಲನ ಸಾಮರ್ಥ್ಯಂ ಋತೇ ಸರ್ವೇಶ್ವರಂಹರಿಂ" ಎಂಬಂತೆ ರಕ್ಷಿಸಲು ಹರಿಯನ್ನು ಬಿಟ್ಟರೆ ಮತ್ತಾರೂ ಸಮರ್ಥರಲ್ಲವು ಎಂದು ಹೇಳಿರುವುದರಿಂದ ವಿಷ್ಣುವಿಗೆ ವಿಷ್ಣುವೇ ರಕ್ಷಕನೆಂದೂ, ವಿಭೂತಿಯೆಂದೂ, ನಿಯಾಮ್ಯನೆಂದೂ ತೋರಿಬರುತ್ತೆ. ಈ ಸಂದರ್ಭದಲ್ಲಿ ವಿಭೂತಿ ಶಬ್ದವು ಔಪಚಾರಿಕವಾಗಿ ಪ್ರಯೋಗಿಸಲ್ಪಟ್ಟಿದೆಯೆಂದು ಗ್ರಹಿಸಬೇಕು. ಹಾಗಾದರೂ ಬ್ರಹ್ಮರುದ್ರರ ವಿಷಯದಲ್ಲೂ ಏಕೆ ಔಪಚಾರಿಕವಾಗಿರಕೂಡದು ಎಂಬ ಪ್ರಶ್ನೆ ಬರುವುದು ಸಹಜ. ಇದಕ್ಕೆ ಸಮಾಧಾನವೇನು?—ಬ್ರಹ್ಮ ರುದ್ರರಿಬ್ಬರೂ ನಾರಾಯಣನ ಶರೀರವಾಗಿ ಆ ಎರಡು ಶಬ್ದಗಳೂ ತತ್ತಚ್ಛರೀರಕ ಪರಮಾತ್ಮನನ್ನೇ ಬೋಧಿಸುತ್ತವೆ. "ಬ್ರಹ್ಮಾನಾರಾಯಣಃ" ಶಿವಶ್ಚನಾರಾಯಣಃ "ಸ ಬ್ರಹ್ಮಾಸ ಶಿವಃ" ಎಂಬುದಾಗಿ ಸಾಮಾನಾಧಿಕಾರಣ್ಯ ಪ್ರಯೋಗಗಳುಂಟು. ಆದರೆ "ವಿಷ್ಣುಶ್ಚ ನಾರಾಯಣಃ" ಎಂಬ ಪ್ರಯೋಗವಿಲ್ಲ. ಇಲ್ಲಿ ಇವೆರಡೂ ಪರ್ಯಾಯ ಪದಗಳು ವಿಷ್ಣುವೇ ನಾರಾಯಣನಾದುದರಿಂದ ಸಾಮಾನಾಧಿಕರಣ್ಯ ಕೂಡುವುದಿಲ್ಲ. ಆದ್ದರಿಂದ ೩೨ನೇ ಪದ್ಯದಲ್ಲಿ 'ವಿಭೂತಿ' ಶಬ್ದವು ಔಪಚಾರಿಕವಾಗಿ ಪ್ರಯೋಗಿಸಿರುತ್ತೆಂದು ತಿಳಿಯಬೇಕು.

ವಚನ ವಿ.ಪು. ಪು. ೬೯, ಸಾಲು ೧೩

ಮೂಲ: "ರುದ್ರಃ ಕಾಲಾಂತಕಾದ್ಯಾಶ್ಚ ಸಮಸ್ತಾಶ್ಚೈವ ಜಂತವಃ ।
ಚತುರ್ಧಾ ಪ್ರಲಯಾಯೈತಾ ಜನಾರ್ದನ ವಿಭೂತಯಃ ॥ ವಿ. ಪು. ೧-೨೨-೩೩

ರುದ್ರನೂ, ಕಾಲನೂ, ಅಂತಕನೂ, ಸಮಸ್ತ ಜಂತುಗಳೂ ಸಹ ಜನಾರ್ದನನ ವಿಭೂತಿಗಳೆಂದು ಈ ಪದ್ಯವು ತಿಳಿಸುತ್ತದೆ. ಈ ರೀತಿ ಹೇಳಿರುವ ಮಹರ್ಷಿಯ ಮಾತಿನ ಅಭಿಪ್ರಾಯವನ್ನು ಈ ರೀತಿ ಊಹಿಸಬಹುದಾಗಿದೆ. ತತ್ವವನ್ನು ವಿವೇಚಿಸಲು ಹೊರಟ ಅನೇಕರು ಅನೇಕ ರೀತಿಯಲ್ಲಿ ಹೇಳುವರು. ಕೆಲವರು ಎಲ್ಲಾ ಆತ್ಮವೂ ಒಂದೇ ಎಲ್ಲವೂ ಪರಮಾತ್ಮನಲ್ಲಿ ಐಕ್ಯವೆಂದು ಹೇಳುತ್ತಾರೆ.

ಚಿತ್ತು ಮತ್ತು ಅಚಿತ್ತು ಇವೆರಡೂ ಪರಮಾತ್ಮದ್ರವ್ಯವೆಂದು ಯಾದವ ಪ್ರಕಾಶರು ತಿಳಿಸುತ್ತಾರೆ. ಜೀವಾತ್ಮನೂ ಪರಮಾತ್ಮನೂ ಒಂದೇ ಎಂದು ಶಾಂಕರರ ಅಭಿಪ್ರಾಯವು. ಬ್ರಹ್ಮ-ವಿಷ್ಣು-ಶಿವ ಈ ಮೂವರು ಸಮರು ಎಂದು ಕೆಲವರು ಹೇಳುತ್ತಾರೆ. ಈ ವಾದಗಳನ್ನು ಪುಷ್ಟೀಕರಿಸಲು "ಪುರುಷ ಏವೇದಗಂ ಸರ್ವಂ, ಸರ್ವಂ ಖಲ್ವಿದಂ ಬ್ರಹ್ಮ, ನೇಹನಾನಾಸ್ತಿ ಕಿಂಚನ" ಎಂಬವೇ ಮೊದಲಾವ ಶ್ರುತಿವಾಕ್ಯಗಳನ್ನೂ ಉದಾಹರಿಸುತ್ತಾರೆ. ಆದರೆ ವಿಷ್ಣುಪುರಾಣ ಕಾರರು ಮೇಲಿನ ವಾದಗಳು ವೇದ ವಿರುದ್ಧ ವಾದಗಳೆಂದು ನಿಶ್ಚಯಿಸಿರುವರು. ಗೀತೆಯ ೧೧ನೇ ಅಧ್ಯಾಯದ ಒಂಭತ್ತನೇ ಪದ್ಯದಲ್ಲೂ "ಪರಮಂ ರೂಪ ಮೈಶ್ವರಂ" ಎಂಬ ಪ್ರಯೋಗವಿದ್ದು ಇದು ಈಶ್ವರನ ಶಿವರೂಪವೆಂದು ಸಿದ್ಧಾಂತ ಮಾಡಲು ಹೊರಟು "ಅಪ್ರಮೇಯ ಪ್ರಭಾವಂತಂ ದೇವದೇವ ಮುಮಾಪತಿಂ। ಭಜಸ್ವನಿತ್ಯಂ ಪ್ರಿಯತೋ ವಿಶ್ವೇಶಂ ಹರಮವ್ಯಯಂ॥" ಎಂಬ ಪ್ರಮಾಣ ಪದ್ಯ ವನ್ನೂ ಉದಾಹರಿಸಿರುತ್ತಾರೆ. ಶ್ರೀಕೃಷ್ಣನು ರುದ್ರರೂಪವನ್ನು ಪ್ರದರ್ಶಿಸಿದುದಾಗಿ ಗೀತೆಯಲ್ಲಿ ಎಲ್ಲೂ ಹೇಳಿಲ್ಲ. ಶ್ರೀಕೃಷ್ಣನು ರುದ್ರರೂಪವನ್ನು ತೋರಿಸುವು ದಾಗಿಯೂ ಹೇಳಿಲ್ಲ. "ಧೃತಿಂ ನ ವಿಂದಾಮಿ ಶಮಂ ಚ ವಿಷ್ಣೋ" "ಭಾಸಸ್ತವೋಗ್ರಾಃ ಪ್ರತಪಂತಿ ವಿಷ್ಣೋ" ಎಂಬ ಮಾತುಗಳೂ ಗೀತೆಯಲ್ಲೇ ಇದ್ದು, ವಿಷ್ಣು-ಹರಿ ಶಬ್ದಗಳ ಪ್ರಯೋಗವಿದೆಯೇ ಹೊರತು 'ಉಮಾಪತಿ' ಎಂಬ ಪದದ ಪ್ರಯೋಗವೇ ಇಲ್ಲ. ಅಲ್ಲಿ ಅದು ರುದ್ರರೂಪವೆಂದು ಹೇಳ ಹೊರಟರೆ ಅಸಂಬದ್ಧ ಪ್ರಲಾಪವಾಗುವುದು. ಅಶ್ವಮೇಧಿಕ ಪರ್ವದಲ್ಲಿ "ದ್ರಷ್ಟು ಮಿಚ್ಛಾಮಿ ತೇ ರೂಪಂ ವೈಷ್ಣವಂ ತನ್ನಿದರ್ಶಯ" ಶಾಶ್ವತಂ ವೈಷ್ಣವಂ ರೂಪಂ ದದೃಶೇ ಯದ್ಧನಂಜಯಃ" ಎಂದು ಅರ್ಜುನನಿಗೆ ತೋರಿಸಿದ ರೂಪವು ವೈಷ್ಣವರೂಪವೆಂತಲೇ ಸ್ಪಷ್ಟವಾಗಿದೆ. "ಸರ್ವಂ ಖಲ್ವಿದಂ ಬ್ರಹ್ಮ" ಇತ್ಯಾದಿ ಶ್ರುತಿವಾಕ್ಯಗಳು ಸ್ವರೂಪೈಕ್ಯವನ್ನು ಹೇಳುವಂತೆ ತೋರುತ್ತದೆ. ಆದರೆ "ಜ್ಞಾಜ್ಞಾ ಅಜಾವೀಶನೀಶಾ" ಈ ವಾಕ್ಯದಲ್ಲಿ ಜೀವಾತ್ಮ-ಪರಮಾತ್ಮ ಭೇದವು ಹೇಳಲ್ಪಟ್ಟಿದೆ. "ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ" ಅಂದರೆ ಚೇತನ, ಅಚೇತನ ಮತ್ತು ಈಶ್ವರರೆಂಬ ಮೂರು ತತ್ವಗಳನ್ನು ತಿಳಿದು. ಈ ಮೇಲಿನ ಎರಡು ಶ್ರುತಿ ವಾಕ್ಯಗಳು ಸಮಂಜಸವಾಗಲು ಘಟಕಶ್ರುತಿಗಳಾದ ಯಸ್ಯ ಪೃಥಿವೀ ಶರೀರಂ, ಯಸ್ಯಾತ್ಮಾಶರೀರಂ, ಇತ್ಯಾದಿ ವಾಕ್ಯಗಳಿಂದ ಪರಮಾತ್ಮನು ಎಲ್ಲವನ್ನೂ ಶರೀರವಾಗಿ ಧರಿಸಿ, ಎಲ್ಲದಕ್ಕೂ ಆತ್ಮನಾಗಿರುವುದರಿಂದ "ಸರ್ವಂ ಖಲ್ವಿದಂ ಬ್ರಹ್ಮ" ಇತ್ಯಾದಿ ವಾಕ್ಯಗಳೂ ಸಮಂಜಸವಾಗುತ್ತವೆ.

ಅಲ್ಲದೆ 'ಈಶ್ವರ' ಶಬ್ದವು ನಾರಾಯಣಾರ್ಥದಲ್ಲೇ ಮುಖ್ಯಾರ್ಥವುಳ್ಳದ್ದಾ

ಗಿರುತ್ತೆ. ಸಹಸ್ರನಾಮದಲ್ಲೂ "ಈಶ್ವರೋ ವಿಕ್ರಮೀ ಧನ್ವೀ" ಎಂದು ಈಶ್ವರ ಶಬ್ದವು ವಿಷ್ಣ್ವರ್ಥದಲ್ಲೇ ಪರ್ಯವಸಾನಹೊಂದಿರುತ್ತೆ. ರುದ್ರನಲ್ಲಿ ಈಶ್ವರ ಶಬ್ದವು ಲಾಕ್ಷಣಿಕಾರ್ಥವುಳ್ಳದ್ದು. ಅಲ್ಲದೆ ನಾರಾಯಣೀಯದಲ್ಲೂ "ಪತಿಂ ವಿಶ್ವಸ್ಯಾತ್ಮೇಶ್ವರಗ್ಂ ಶಿವಮಚ್ಯುತಂ" ಈಶ್ವರ ಶಬ್ದವು ನಾರಾಯಣನಲ್ಲೇ ಮುಖ್ಯ ತಾತ್ಪರ್ಯವುಳ್ಳದ್ದಾಗಿದೆ. ಅಲ್ಲದೆ

"ಬ್ರಹ್ಮಾಣಂ ಶಿತಿಕಂಠಂ ಚ ಯಾಶ್ಚಾನ್ಯಾ ದೇವತಾ ಸ್ಮೃತಾಃ।
ಪ್ರತಿಬುದ್ಧಾ ನ ಸೇವಂತೇ ಯಸ್ಮಾತ್ಪರಿಮಿತಂ ಫಲಂ ॥"

ಎಂದು ಚತುರ್ಮುಖ ರುದ್ರರು ದೇವತೆಗಳಲ್ಲೇ ಸೇರಿದವರೆಂದು ಸ್ಪಷ್ಟವಾಗಿದೆ.

"ಏತಾ ವಿಬುಧೌ ಶ್ರೇಷ್ಠಾ ಪ್ರಸಾದ ಕ್ರೋಧಜೌಸ್ಮೃತೌ।
ತದಾದರ್ಶಿತ ಪಂಥಾ ನೌ ಸೃಷ್ಟಿ ಸಂಹಾರಕಾರಕೌ ॥"

ಎಂದು ರುದ್ರನು ನಾರಾಯಣನಿಂದ ಸಂಹಾರ ಕಾರ್ಯದಲ್ಲಿ ನಿಯಮಿಸಲ್ಪಟ್ಟಿರುವುದಾಗಿ ತಿಳಿದು ಬಂದಿದೆ. ಅಲ್ಲದೆ ಪರಾಶರರೇ ಹರಿ ಶಬ್ದದ ಅರ್ಥವನ್ನು ವಿವರಿಸುತ್ತಾ

"ಬ್ರಹ್ಮಾಣ ಮಿಂದ್ರಂ ರುದ್ರಂ ಚ ಯಮಂ ವರುಣ ಮೇವ ಚ।
ನಿಗೃಹ್ಯ ಹರತೇಯಸ್ಮಾತ್ತಸ್ಮಾದ್ಧರಿ ರಿಹೋಚ್ಯತೇ ॥"

ಸಂದೇಹ ಬರದಂತೆ ಬ್ರಹ್ಮರುದ್ರಾದಿಗಳೆಲ್ಲರೂ ನಾರಾಯಣನ ಆಜ್ಞಾಕಾರಕರಾಗಿರುವುದಾಗಿ ತಿಳಿಸಿರುತ್ತಾರೆ. ಈ ಎಲ್ಲಾ ತಾತ್ಪರ್ಯವನ್ನು ಮನಸ್ಸಿನಲ್ಲಿಟ್ಟು ಶ್ರೀ ಪರಾಶರರು ರುದ್ರಾದಿ ದೇವತೆಗಳೆಲ್ಲರೂ "ಜನಾರ್ದನ ವಿಭೂತಯಃ" ವಿಷ್ಣುವಿನ ವಿಭೂತಿಯೆಂದು ಸಿದ್ಧಾಂತ ಮಾಡಿ ಉಪದೇಶಿಸಿರುತ್ತಾರೆ.

ವಚನ ವಿ.ಪು. ಪುಟ ೭೪, ಸಾಲು ೨೧

ಮೂಲ: ಗಾಯಂತಿ ದೇವಾಃ ಕಿಲ ಗೀತಕಾನಿ ಧನ್ಯಾಸ್ತು ತೇ ಭಾರತಭೂಮಿಭಾಗೇ।
ಸ್ವರ್ಗಾಪವರ್ಗಾಸ್ಪದ ಮಾರ್ಗಭೂತೇ ಭವಂತಿಭೂಯಃ ಪುರುಷಾಸ್ಸುರತ್ವಾತ್ ॥ ೨-೩-೨೪

ಈ ಪದ್ಯವಲ್ಲಿ ಶ್ರೀ ಪರಾಶರರು ಭಾರತಭೂಮಿಯ ಪಾವಿತ್ರ್ಯತೆಯನ್ನೂ ಮಹಿಮೆಯನ್ನೂ ವಿವರಿಸಿರುತ್ತಾರೆ. ಭಾರತಭೂಮಿಯು ಕರ್ಮಭೂಮಿ ಎಂದೂ, ಇತರ ಭೂಭಾಗಗಳು ಭೋಗಭೂಮಿಯೆಂದೂ ಶ್ರೀ ಪರಾಶರರು ನಿರ್ಣಯಿಸಿ ಇದೇ ಅಧ್ಯಾಯದ—

"ಅತ್ರ ಜನ್ಮಸಹಸ್ರಾಣಾಂ ಸಹಸ್ರೈರಪಿ ಸತ್ತಮ ।
ಕದಾಚಿಲ್ಲಭತೇಜಂತುರ್ಮಾನುಷ್ಯಂ ಪುಣ್ಯಸಂಚಯಾತ್ ॥"

ವಿ.ಪು. ೨-೩.೨೩

"ಅತ್ರಾಪಿ ಭಾರತಂ ಶ್ರೇಷ್ಠಂ ಜಂಬೂದ್ವೀಪೇ ಮಹಾಮುನೇ ।
ಯತೋಹಿ ಕರ್ಮಭೂರೇಷಾಹ್ಯತೋನ್ಯಾ ಭೋಗಭೂಮಯಃ ॥"

ವಿ.ಪು. ೨-೩.೨೨

ಎಂಬ ಪದ್ಯಗಳಿಂದ ಸ್ಪಷ್ಟಪಡಿಸಿರುತ್ತಾರೆ. ಶ್ರೀ ವೇದಾಂತದೇಶಿಕರು "ಭೂಗೋಳ ನಿರ್ಣಯ"ವೆಂಬ ತಮ್ಮ ಗ್ರಂಥದಲ್ಲಿ ಸಪ್ತ ಊರ್ಧ್ವಲೋಕಗಳ ವಿಸ್ತೀರ್ಣ ಐವತ್ತು ಕೋಟಿ ಯೋಜನ ವಿಸ್ತಾರವುಳ್ಳದ್ದೆಂದೂ, ಅವುಗಳಲ್ಲಿ ಜಂಬೂದ್ವೀಪದ ವಿಸ್ತೀರ್ಣ ಒಂದು ಲಕ್ಷ ಯೋಜನವುಳ್ಳದ್ದೆಂದೂ ನಿರ್ಣಯಿಸಿರುತ್ತಾರೆ. ಆ ಗ್ರಂಥದ ಪದ್ಯ ಈ ರೀತಿ ಇದೆ—

"ಪಂಚಾಶತ್ಕೋಟಿಭಿಸ್ಸ್ಯಾನ್ಮಿತಮವನಿತಲಂ ಯೋಜನಾನಾಂ ತಥಂಹಿ ।
ಪ್ಯಾಜ್ಜಂಬೂದ್ವೀಪಮೇಕಂ ನಿಯುತಮುದಧಿನಾ ತಾವತಾ ವೇಷ್ಟಿತಂ ತತ್ ॥"

ಎಂದು ಲಕ್ಷಯೋಜನ ಪರಿಮಿತಿಯುಳ್ಳ ಜಂಬೂದ್ವೀಪವನ್ನೇ ನವವರ್ಷಗಳಾಗಿ ವಿಭಾಗಿಸಿರುತ್ತಾರೆ. ದ್ವೀಪಗಳೂ ಸಹ ಏಳು. ಅವು ಯಾವುವೆಂದರೆ—

"ಜಂಬೂಪ್ಲಕ್ಷ ಶಾಲ್ಮಲಿ ಕುಶಕ್ರೌಂಚ ಶಾಕಪುಷ್ಕರದ್ವೀಪಾಃ" ಎಂದು.

ಈ ಏಳು ದ್ವೀಪಗಳು ಸಪ್ತಸಮುದ್ರಗಳಿಂದ ಪರಿವೃತವಾಗಿವೆ. ಆ ಸಮುದ್ರಗಳು ಯಾವುವೆಂದರೆ—

"ಲವಣೇಷು ಸುರಾಘೃತ ದಧಿ ದುಗ್ಧಾಮ್ಬು ಸ್ಸಿಂಧು ಸಂವೃತಾಃ ಕ್ರಮಶಃ"

ಈ ಜಂಬೂದ್ವೀಪವನ್ನು "ಭರತ-ಕಿಂಪುರುಷ-ಹರಿವರ್ಷ-ಇಳಾವೃತ-ರಮ್ಯಕ-ಹಿರಣ್ಮಾತ್-ಕುರು-ಭದ್ರಾಶ್ವ-ಕೇತುಮಾಲ" ಎಂದು ನವವರ್ಷಗಳಾಗಿ ವಿಭಾಗಿಸಿರುತ್ತಾರೆ. ಈ ನವವರ್ಷಗಳಲ್ಲಿ ಭರತ-ಕಿಂಪುರುಷ-ಹರಿವರ್ಷಗಳು ಮೇರು ಪರ್ವತಕ್ಕೆ ದಕ್ಷಿಣ ದಿಗ್ಭಾಗದಲ್ಲಿವೆ. ಇದರಲ್ಲಿ ಭರತವರ್ಷವು ಒಂಭತ್ತು ಸಹಸ್ರ ಯೋಜನ ಪರಿಮಿತಿಯುಳ್ಳದ್ದು. ಈ ಭರತಭೂಮಿಯ ವೈಭವವನ್ನೇ ಶ್ರೀ ಪರಾಶರರು ಮೇಲಿನ ಪದ್ಯದಲ್ಲಿ ವಿವರಿಸಿರುತ್ತಾರೆ. ಶ್ರುತಿಸ್ಮೃತಿ ವಿಹಿತವಾದ ಕರ್ಮಗಳನ್ನು ಭಾರತದ ಭೂಮಿಯಲ್ಲಿ ಅನುಷ್ಠಿಸಿದರೇ ಅದಕ್ಕೆ ಫಲವುಂಟು. ಅದು ಭಗವತ್ಪ್ರೀತಿಯೂ ಆಗುತ್ತದೆ. ಈ ಭೂಮಿಯನ್ನು ಬಿಟ್ಟು ಮಿಕ್ಕ ಭೂಮಿಗಳಲ್ಲಿ ಅನುಷ್ಠಾನ ಮಾಡುವ ಕರ್ಮಗಳಿಗೆ ಫಲವಿಲ್ಲವೆಂದು ಸ್ಪಷ್ಟವಾಗಿ ಹೇಳಿದಂತಾಯಿತು.

ಮನುಷ್ಯ ಜನ್ಮ ದೊರೆಯುವುದೇ ಕಷ್ಟವು. ಅವರಲ್ಲಿ ಭಾರತಭೂಮಿಯಲ್ಲಿ ಜನ್ಮ ದೊರೆಯುವುದು ಇನ್ನೂ ಕಷ್ಟ. ಅದರಲ್ಲಿ ವೇದಾಧ್ಯಯನಯೋಗ್ಯವಾದ ವರ್ಣದಲ್ಲಿ ಜನ್ಮ ದೊರೆಯುವುದು ಮತ್ತೂ ಕಷ್ಟವು. ಬಹಳ ಸುಕೃತ ವಿಶೇಷ ವಿದ್ದರೇನೇ ಭಾರತಭೂಮಿಯಲ್ಲಿ ಜನ್ಮ ಸಾಧ್ಯ. ಭಾರತದ ನೆಲದಲ್ಲಿ ಜನ್ಮ ಪಡೆದವರು ಧನ್ಯರೆಂದು ಮಹರ್ಷಿಗಳೇ ಶ್ಲಾಘಿಸಿರುತ್ತಾರೆ. ಇದಕ್ಕೆ ಅನೇಕ ಕಾರಣಗಳಿವೆ.

ಭಗವಂತನ ದಶಾವತಾರದಲ್ಲಿ ಮೊದಲನೆಯ ಮತ್ಸ್ಯ-ಕೂರ್ಮ-ವರಾಹಾವತಾರಗಳು ಸೃಷ್ಟಿಯ ಪ್ರಾರಂಭದಲ್ಲಿ ಆದವು. ಅನಂತರ ನಡೆದ ನರಸಿಂಹಾವತಾರವು ಈಗಿನ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಅಹೋಬಲದ ಸಮೀಪದಲ್ಲಿರುವ ಅರಣ್ಯಭಾಗದಲ್ಲಿ ನಡೆಯಿತೆಂದು ಹೇಳಲು ಪುಷ್ಕಲ ಕಾರಣಗಳಿವೆ.

ವಾಮನಮೂರ್ತಿಯು ಈಗಿನ ಉತ್ತರ ಭಾರತದ ಅಯೋಧ್ಯೆಯ ಸಮೀಪದಲ್ಲಿ ತಪಸ್ಸುಮಾಡಿ ಸಿದ್ಧಿಯನ್ನು ಪಡೆದ ಕಾರಣ ಅದು ಈಗಲೂ ಸಿದ್ಧಾಶ್ರಮವೆಂದು ಪ್ರಸಿದ್ಧವಾಗಿದೆ. ವಿಶ್ವಾಮಿತ್ರರೂ ಇಲ್ಲಿಯೇ ತಪಸ್ಸುಮಾಡಿ ಸಿದ್ಧಿ ಪಡೆದರು. ದಶಾವತಾರಗಳಲ್ಲಿ ಒಂದಾದ ವಾಮನಾವತಾರವು ಇಲ್ಲಿಯೇ ಆಗಿ ನರ್ಮದಾನದಿಯ ತೀರದಲ್ಲಿ ಯಜ್ಞಮಾಡುತ್ತಿದ್ದ ಬಲಿಯ ಯಜ್ಞವಾಟಕ್ಕೆ ನಡೆದು ಬಂದು ಅಲ್ಲಿ ಮೂರು ಅಡಿ ನೆಲವನ್ನು ಬೇಡಿ ತ್ರಿವಿಕ್ರಮನಾದನು. ಹೀಗೆ ವಾಮನ ತ್ರಿವಿಕ್ರಮಾವತಾರವೂ ಭಾರತದಲ್ಲೇ ಆಯಿತು. ಇಕ್ಷ್ವಾಕು ಸಂತತಿಯ ರಾಜರೆಲ್ಲರೂ ಅಂದರೆ ಸೂರ್ಯವಂಶಕ್ಕೆ ಮೊದಲಿಗನಾದ ಮನುಚಕ್ರವರ್ತಿಯಿಂದ ಹಿಡಿದು ಶ್ರೀರಾಮ ನಂತರ ಇಪ್ಪತ್ತನಾಲ್ಕು ಮಂದಿ ರಾಜರೆಲ್ಲರೂ ಅಯೋಧ್ಯೆಯನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡು ಧರ್ಮದಿಂದ ರಾಜ್ಯಭಾರ ನಿರ್ವಹಿಸಿದರು. ಕೃತ-ತ್ರೇತ-ದ್ವಾಪರ-ಕಲಿ ಎಂಬ ನಾಲ್ಕು ಯುಗಗಳಲ್ಲಿ ಕೃತ-ತ್ರೇತಾಯುಗಗಳಲ್ಲಿ ಸೂರ್ಯವಂಶೀಯರ ಆಳ್ವಿಕೆ ಭಾರತದಲ್ಲಿ ನಡೆಯಿತೆಂದು ಪುರಾಣಗಳಿಂದ ತಿಳಿದುಬರುತ್ತೆ. ದ್ವಾಪರದಲ್ಲಿ ಚಂದ್ರವಂಶೀಯರ ಆಳ್ವಿಕೆ. ಇವರ ರಾಜಧಾನಿ ಈಗ ರಾಜಧಾನಿಯೆಂದು ಪ್ರಸಿದ್ಧವಾಗಿರುವ ದೆಹಲಿಯ ಸಮೀಪದಲ್ಲಿರುವ ಹಸ್ತಿನಾವತಿ. ಧರ್ಮರಾಜಾದಿಗಳು ರಾಜ್ಯಭಾರ ಮಾಡಿದ ಊರು. ದ್ವಾಪರಾಂತ್ಯದಲ್ಲಿ ಕೃಷ್ಣಾವತಾರ. ಈ ಅವತಾರವೂ ಸಹ ಉತ್ತರ ಭಾರತದ ಪಶ್ಚಿಮ ಸಮುದ್ರತೀರದಲ್ಲಿರುವ ದ್ವಾರಕೆಯಲ್ಲಿಯೇ ಆಯಿತು. ಭಾರತದ ದಕ್ಷಿಣ ಭಾಗವು ದಂಡಕಾರಣ್ಯವೆಂದು ಪ್ರಸಿದ್ಧವಾಗಿ ಅನೇಕ ಬ್ರಹ್ಮರ್ಷಿಗಳಿಗೂ, ಮುನಿಜನರಿಗೂ ತಪೋಭೂಮಿಯಾಗಿ ಮತ್ತೊಂದು ಬ್ರಹ್ಮಲೋಕವೆಂಬಂತೆ ಕಂಗೊಳಿಸಿತು. ರಾಮಾವತಾರದಲ್ಲಿ ಶ್ರೀರಾಮನು ಅಯೋಧ್ಯೆಯಿಂದ ಹೊರಟು ದಂಡ

ಕಾರಣ್ಯದಲ್ಲಿ ಸಂಚರಿಸಿ ದಕ್ಷಿಣಭಾರತದ ತುತ್ತತುದಿಗೆ ಬಂದು ಸಮುದ್ರರಾಜನನ್ನು ಉಪಾಸಿಸಿ ಲಂಕೆಯವರೆಗೆ ಸೇತುಬಂಧನ ಮಾಡಿದನು. ಶ್ರೀರಾಮನು ಮಲಗಿದ ಸ್ಥಳವೇ ಈಗ 'ದರ್ಭಶಯನಂ' ಅಥವಾ 'ಸೇತು' ಎಂಬ ಪ್ರಸಿದ್ಧ ಯಾತ್ರಾ ಸ್ಥಳವಾಗಿದೆ.

ಅಲ್ಲದೆ ಉತ್ತರ ಭಾರತದ ಸರಯೂ, ಗಂಗೆ-ಯಮುನಾ ನದಿಗಳ ದಡದಲ್ಲಿ ನಡೆದ ಯಜ್ಞ-ಯಾಗಾದಿಗಳಿಗೆ ಲೆಕ್ಕವಿಲ್ಲ. ಸರಯೂ ನದಿಯದಡದಲ್ಲಿ ಸೂರ್ಯ ವಂಶದ ಚಕ್ರವರ್ತಿಗಳೆಲ್ಲರೂ ಅಶ್ವಮೇಧಯಜ್ಞದ ಮೂಲಕ ಭಗವಂತನನ್ನು ಆರಾಧಿಸಿರುತ್ತಾರೆ. ಈಗಿನ ಅಯೋಧ್ಯೆಗೂ-ಹರಿದ್ವಾರಕ್ಕೂ ಮಧ್ಯದಲ್ಲಿರುವ ನೈಮಿಶಾರಣ್ಯದಲ್ಲಿ ಸಹಸ್ರಾರು ವರ್ಷಗಳು ಪುರಾಣೇತಿಹಾಸ ಪ್ರವಚನಗಳು ನಡೆದುವು.

ವಸಿಷ್ಠ-ವ್ಯಾಸ-ವಾಲ್ಮೀಕಾದಿ ಮಹರ್ಷಿಗಳೆಲ್ಲರ ತಪೋಭೂಮಿಯೇ ಭಾರತ. ಹಿಮಾಲಯದಲ್ಲಿರುವ ನರ-ನಾರಾಯಣಾಶ್ರಮದಿಂದ ಹಿಡಿದು ಕನ್ಯಾಕುಮಾರಿ ಯವರೆಗೆ ಅನೇಕ ಋಷ್ಯಾಶ್ರಮಗಳಿದ್ದವೆಂದು ಪುರಾಣಗಳಲ್ಲಿ ತಿಳಿದುಬಂದಿರುತ್ತೆ. ಭಗವದ್ಭಾಗತರ ಜನ್ಮಭೂಮಿಯೇ ಭಾರತವು. ಕೃತಯುಗದಿಂದ ಪ್ರಾರಂಭವಾಗಿ ಇಲ್ಲಿಯವರೆಗೆ ನಡೆದಿರುವ ವ್ರತಗಳು-ತಪಸ್ಸು-ಧ್ಯಾನಾದಿಗಳು-ಅಶ್ವಮೇಧಾದಿ ಯಾಗಗಳು ಭಾರತಭೂಮಿಯಿಂದ ಹೊರಗೆ ನಡೆದಿರುವಂತೆ ಕೇಳಿಲ್ಲ. ಇಲ್ಲಿರುವ ನಗರಗಳು-ಬೆಟ್ಟಗಳು-ನದಿಗಳು ಎಲ್ಲದಕ್ಕೂ ಭಗವದ್ಭಾಗತರ ಸಂಬಂಧವಿದ್ದು ವಿಶೇಷವಾದ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುತ್ತೆ. ಗಂಗೆ-ಕಾವೇರಿ ಮುಂತಾದ ಸಪ್ತ ಪವಿತ್ರ ನದಿಗಳಿಂದ ಭಾರತವು ಪುಣ್ಯಭೂಮಿಯಾಗಿದೆ. ಈ ನದಿಗಳ ವೈಭವವನ್ನು ವೇದಪುರುಷನೂ ಸಹ ಕೊಂಡಾಡಿರುತ್ತಾನೆ. ಅಲ್ಲದೆ ಈ ಭಾರತ ದಲ್ಲೇ ಸಪ್ತ ಮುಕ್ತಿಕ್ಷೇತ್ರಗಳಿರುವುದಾಗಿ—"ಅಯೋಧ್ಯಾ ಮಧುರಾಮಾಯಾ ಕಾಶೀಕಾಂಚೀಹ್ಯವಂತಿಕಾ। ಪುರೀ ದ್ವಾರವತೀ ಚೈವ ಸಪ್ತೈತೇ ಮುಕ್ತಿದಾ ಯಕಾಃ॥" ಎಂಬ ಶ್ರೀ ಸೂಕ್ತಿಯನ್ನು ಕೇಳಿರುತ್ತೇವೆ. ವ್ಯಾಸರು ಸ್ಕಾಂದ-ಬ್ರಹ್ಮಾಂಡ ಪುರಾಣಗಳಲ್ಲಿ ಮತ್ತು ಮಹಾಭಾರತದಲ್ಲಿ ವಿವರಿಸಿರುವ ಅನೇಕ ಅಚಾರ್ಸ್ಥಾನಗಳು ಭಾರತದಲ್ಲೇ ಇವೆ. ಇವುಗಳನ್ನೇ ದ್ರಾವಿಡದಲ್ಲಿ ಅವತರಿಸಿದ ಆಳ್ವಾರ್ರುಗಳು ನೂರೆಂಟು ದಿವ್ಯದೇಶಗಳೆಂದು ತಮ್ಮ ಪ್ರಬಂಧದಲ್ಲಿ ಸ್ತೋತ್ರ ಮಾಡಿರುತ್ತಾರೆ. ಶ್ರೀರಂಗವೇ ಮೊದಲಾದ ಎಂಟು ದಿವ್ಯ ಕ್ಷೇತ್ರಗಳೂ ಭಾರತ ಭೂಮಿಯಲ್ಲೇ ಇವೆ. ಯಾವುವೆಂದರೆ

"ಆದೌ ಸ್ವಯಮಿದಂ ವ್ಯಕ್ತಂ ಶ್ರೀರಂಗಂ ರಂಗಸಂಜ್ಞಿಕಂ।
ಶ್ರೀಮುಷ್ಣಂ ವೇಂಕಟಾದ್ರಿಂಚ ಸಾಲಗ್ರಾಮಂ ಚನೈಮಿಶಂ।

ಶ್ವೇತಾದ್ರಿಂ ಪುಷ್ಕರಂಚೈವ ನರನಾರಾಯಣಾಹ್ವಯಂ ||
ಅಷ್ಟ್ಯಾಮೇ ಮೂರ್ತಯ ಸ್ಸಂತ ಸ್ವಯಂವ್ಯಕ್ತಾ ಮಹೀತಲೇ || ಎಂದು.
ಭಾರತ ಭೂಮಿಯಲ್ಲೇ ಐದುನೂರು ಪುಣ್ಯನದಿಗಳು ಹರಿಯುತ್ತಿವೆ. ಇವುಗಳ ದಡಗಳಲ್ಲಿ ಅನೇಕ ಶಿವಕ್ಷೇತ್ರಗಳೂ, ವಿಷ್ಣುಕ್ಷೇತ್ರಗಳೂ ಕಂಗೊಳಿಸುತ್ತಿವೆ. ಭಾರತವನ್ನು ಬಿಟ್ಟು ಮಿಕ್ಕ ಭೂಭಾಗಗಳೂ ಹೇರಳವಾಗಿವೆ. ನದಿಗಳಿವೆ. ಬೆಟ್ಟಗಳಿವೆ. ಅನೇಕ ನಗರಗಳಿವೆ. ಆದರೆ ಅವುಗಳಿಗೆ ಹಿನ್ನೆಲೆಗಳು ಏನೇನೂ ಇಲ್ಲ. ಭಾರತ ಭೂಮಿಯಲ್ಲಿ ನಾಸ್ತಿಕರನ್ನು ಆಸ್ತಿಕರನ್ನಾಗಿ ಮಾಡುವ ಭೂಭಾಗಗಳೂ, ಪುಣ್ಯತೀರ್ಥಗಳೂ ಅನೇಕವಾಗಿವೆ. ದಕ್ಷಿಣಭಾರತದಲ್ಲಿ 'ಕಲೌವೇಂಕಟನಾಯಕಃ' ಎಂದು ಋಗ್ವೇದ ಪ್ರಸಿದ್ಧವಾದ ಬೆಟ್ಟವಿದೆ. ಬೆಟ್ಟವನ್ನು ಸೇವಿಸಿದವರ ಪಾಪವನ್ನು ಪರಿಹಾರಮಾಡುವ ಸಾಮರ್ಥ್ಯವು ಈ ಬೆಟ್ಟಕ್ಕೆ ಇದೆ. ಇಂದೂ ವರ್ಣಾಶ್ರಮ ಧರ್ಮಗಳು ಉಳಿದುಕೊಂಡಿರುವುದು ಈ ಭಾರತಭೂಮಿಯಲ್ಲಿ. ಅದರಲ್ಲೂ ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಉಳಿದುಕೊಂಡಿದೆ. ಮ್ಯಾಕ್ಸ್‌ಮುಲರ್ ಎಂಬ ಪಾಶ್ಚಾತ್ಯ ಸಂಶೋಧಕನು ಭಾರತೀಯರು ಹೇಳುವಂತೆ ಮನುಷ್ಯನಿಗೆ ಪುನರ್ಜನ್ಮವಿರುವುದಾದರೆ ತನಗೆ ಭಾರತಭೂಮಿಯಲ್ಲಿ ಜನ್ಮ ಬೇಕೆಂದು ತನ್ನ ಸಾಹಿತ್ಯ ಚರಿತ್ರೆಯಲ್ಲಿ ಬರೆದುಕೊಂಡಿರುತ್ತಾನೆ. ಕೃತ-ತ್ರೇತಗಳಲ್ಲಿ ಯಜ್ಞ-ಯಾಗಾದಿಗಳ ಸಂದರ್ಭದಲ್ಲಿ ಅರ್ಪಿಸಿದ ಹವಿಸ್ಸನ್ನು ದೇವತೆಗಳು ಕೆಳಕ್ಕೆ ಇಳಿದುಬಂದು ಸ್ವೀಕರಿಸುತ್ತಿದ್ದರೆಂದು ನಮ್ಮ ಆರ್ಯರ ಗ್ರಂಥಗಳಿಂದ ತಿಳಿದುಬಂದಿದೆ. ಬದರೀ ಯಾತ್ರೆ, ಕಾಶೀಯಾತ್ರೆ, ಶ್ರೀರಂಗಯಾತ್ರೆ, ಸೇತೂಯಾತ್ರೆ ಮುಂತಾದ ಪವಿತ್ರವಾದ ಯಾತ್ರಾ ಪ್ರಕರಣಗಳೂ ಭಾರತಕ್ಕೆ ಸಂಬಂಧಿಸಿವೆ. ಮಿಕ್ಕ ಭೂಭಾಗಗಳಲ್ಲಿ ಕೇವಲ ಪ್ರೇಕ್ಷಣೀಯ ಸ್ಥಳಗಳು ಮಾತ್ರವೇ ಇವೆ. ಭಾರತಭೂಮಿಯಲ್ಲಿರುವ ಪುಣ್ಯತೀರ್ಥ-ಪುಣ್ಯಕ್ಷೇತ್ರ-ಯಾತ್ರಾಸ್ಥಳಗಳು ಪ್ರೇಕ್ಷಣೀಯ ಸ್ಥಳಗಳಾದರೂ ಸಂಗಡ ಪುಣ್ಯವೂ ವೃದ್ಧಿಯಾಗುತ್ತದೆ. ಅಮರಕಾರನು ಹೇಳುವಂತೆ "ಆರ್ಯಾವರ್ತಃ ಪುಣ್ಯಭೂಮಿಃ ಮಧ್ಯಂ ವಿಂಧ್ಯಹಿಮಾಲಯೋಃ" ಎಂಬಂತೆ ಪುಣ್ಯಭೂಮಿಯಾಗಿದೆ. ಪುಣ್ಯಭೂಮಿಯಾದ ಭಾರತದ ವೈಭವವನ್ನು ದೇವತೆಗಳು ಹಾಡುತ್ತಾರೆ. ಇಲ್ಲಿ ಜನ್ಮಪಡೆದ ವಿಶೇಷ ವ್ಯಕ್ತಿಗಳ ಕೀರ್ತಿಯನ್ನು ಹೊಗಳುತ್ತಾರೆ. ಭಾರತದಲ್ಲೇ ಸತ್ಕರ್ಮಾಚರಣೆಯಿಂದ ಸ್ವರ್ಗಾದಿಸದ್ಗತಿಗಳಿಗೂ, ಮೋಕ್ಷಕ್ಕೂ ಹೋಗಲು ಸಾಧ್ಯ ಎಂದು ಶ್ರೀ ಪರಾಶರರು ಭಾರತದ ಮತ್ತು ಅಲ್ಲಿ ಜನ್ಮಪಡೆದ ಧನ್ಯರ ಮಹಿಮೆಯನ್ನು ೨ನೇ ಅಂಶದ ಮೂರನೇ ಅಧ್ಯಾಯದಲ್ಲಿ ವಿವರಿಸಿರುತ್ತಾರೆ.

ವಚನ ವಿ.ಪು. ಪುಟ ೮೫, ಸಾಲು ೨೨

ಮೂಲ: "ಪ್ರಾಯಶ್ಚಿತ್ತಾನ್ಯಶೇಷಾಣಿ ತಪಃ ಕರ್ಮಾತ್ಮಕಾನಿವೈ ।
ಯಾನಿ ತೇಷಾಮಶೇಷಾಣಾಂ ಶ್ರೀ ಕೃಷ್ಣಾನುಸ್ಮರಣಂ ಪರಂ ॥"

ವಿ.ಪು. ೨-೬-೩೯

ಶ್ರೀಕೃಷ್ಣಸ್ಮರಣೆಯ ಸಕಲ ಪಾಪಗಳಿಗೂ ಪ್ರಾಯಶ್ಚಿತ್ತವೆಂದು ಈ ಪದ್ಯದಲ್ಲಿ ಸೂಚಿಸಿ ಭಗವನ್ನಾಮಸ್ಮರಣೆಯ ವೈಭವವನ್ನು ಮಹರ್ಷಿಗಳು ಇಲ್ಲಿ ನಿರೂಪಿಸಿರುತ್ತಾರೆ.

ಪಾಪಗಳನ್ನು ಮಾಡುತ್ತಿರುವುದೇ ಚೇತನನ ಧರ್ಮ. ಒಂದೇ, ಎರಡೇ ಸಾವಿರಾರು ಪಾಪಗಳು. ಶಾಸ್ತ್ರವು ಒಂದೊಂದು ಪಾಪಕ್ಕೂ ಒಂದೊಂದು ಪ್ರಾಯಶ್ಚಿತ್ತವನ್ನು ಹೇಳಿದೆ. ಚೇತನನು ಮಾಡಿದ ಒಂದೊಂದು ಪಾಪಕ್ಕೂ ಒಂದೊಂದು ನರಕ(ಶಿಕ್ಷೆ)ಯನ್ನು ಭಗವಂತನು ಸೃಷ್ಟಿಸುತ್ತಾ ಬಂದನು. ಹೀಗೆ ೮೪ ಲಕ್ಷ ಶಿಕ್ಷೆ (ನರಕ)ಯನ್ನು ಸೃಷ್ಟಿಸಿದನು. ಆದರ ಮೇಲೆಯೂ ಚೇತನನು ಪಾಪಗಳನ್ನು ಮಾಡುತ್ತಿರುವನು. ಪರಮಾತ್ಮನೇ ಸೋತು ಸುಮ್ಮನಿರಬೇಕಾಯಿತು. ವೇದಾಚಾರ್ಯರೆಂಬುವರು ತಮ್ಮ 'ಕ್ಷಮಾಷೋಡಶೀ' ಎಂಬ ಸ್ತೋತ್ರದಲ್ಲಿ ಇದನ್ನೇ ತಿಳಿಸಿರುತ್ತಾರೆ:

"ಸದ್ವಿತ್ರಾಣಿ ಕೃತಾನ್ಯನೇನ ನಿರಯೈರ್ನಾಲಂ ಪುನಃ ಕಲ್ಪಿತೈಃ
ಪಾಪಾನಾ ಮಿತಿ ಮತ್ಕೃತೇ ತದಧಿಕಾನ್ಸ್ರಷ್ಟುಂ ಪ್ರವೃತ್ತೇಮಯಿ ।
ತೇಭ್ಯೋಪ್ಯಭ್ಯಧಿಕಾನಿ ಕಾನ್ಯಹಮಪಿ ಕ್ಷುದ್ರಃ ಕರೋಮಿ ಕ್ಷಣಾತ್
ತ್ವದ್ಯತ್ನಸ್ತ್ವವ ನಿಷ್ಫಲಃ ಖಲುಭವೇತ್ತತ್ತತ್ ಕ್ಷಮೈವ ಕ್ಷಮಾ ॥"

ಹೇ ಭಗವನ್ ನಾನು ಪಾಪ ಮಾಡಿದೆ. ನೀನು ನರಕವನ್ನು ಸೃಷ್ಟಿಸಿದೆ. ಕ್ಷುದ್ರನಾದ ನಾನು ಸೃಷ್ಟಿಸಿದ ನರಕಗಳಿಗಿಂತ ಹೆಚ್ಚು ಹೆಚ್ಚು ಪಾಪ ಮಾಡುತ್ತಲೆ ಹೋದೆ. ನಿನ್ನ ನರಕ ಸೃಷ್ಟಿಯ ಯತ್ನ ನಿಷ್ಫಲವಾಯಿತು. ನಿನ್ನಲ್ಲಿ 'ಕ್ಷಮಾ' ಎಂಬ ಗುಣವಿದೆ. ಆ ಗುಣಕ್ಕೆ ನಮ್ಮನ್ನು ಪಾತ್ರರನ್ನಾಗಿ ಮಾಡಿಕೊ. ನರಕ ಸೃಷ್ಟಿಯ ಯತ್ನವನ್ನು ನಿಲ್ಲಿಸು" ಎಂದು. ಸ್ವಾಮಿ ವೇದಾಂತದೇಶಿಕರೂ ಸಹ ಸಂಸಾರದಲ್ಲಿರುವ ನಮಗೆ ಒಂದು ಬಿರುದನ್ನು ಕೊಟ್ಟಿರುತ್ತಾರೆ. ಬಿರುದು ಯಾವುದೆಂದರೆ "ಅಹಮಸ್ಮ್ಯಪರಾಧ ಚಕ್ರವರ್ತೀ" "ನಾವೆಲ್ಲಾ ದುರಿತ ಸಾರ್ವಭೌಮರು" ಎಂದು ಭಗವಂತನ ದಯಾಗುಣವು ಗುಣಸಾರ್ವಭೌಮಿಯು. ಆಕೆಯ ಅನುಗ್ರಹದಿಂದಲೇ ದುರಿತಗಳು ಅಡಗಬೇಕು.

ಸ್ಮೃತ್ಯಾದಿಗಳಲ್ಲಿ ಹೇಳಿರುವ ಪ್ರಾಯಶ್ಚಿತ್ತಗಳನ್ನನುಷ್ಠಿಸಿ ಪಾಪಗಳನ್ನು

ಪರಿಹರಿಸಿಕೊಳ್ಳಬಹುದಲ್ಲಾ. ಅಂದರೆ "ನಾಭುಕ್ತಂ ಕ್ಷೀಯತೇ ಕರ್ಮ" ಎಂದಿರುವುದರಿಂದ, ಇದುವರೆಗೆ ಮಾಡಿರುವ ಪಾಪಕರ್ಮಗಳನ್ನನುಭವಿಸಲು ಮುಂದಿರುವ ಕಾಲವು ಸಾಲದು. ಪ್ರಾಯಶ್ಚಿತ್ತಗಳಿಂದ ಪಾಪಗಳನ್ನು ಪರಿಹರಿಸಿಕೊಳ್ಳೋಣ ವೆಂದರೆ ಆಯುಸ್ಸೂ ಸಾಲದು. ಅನೇಕ ಪಾಪಗಳಿಗೆ ಪ್ರಾಯಶ್ಚಿತ್ತವೂ ಇಲ್ಲ. ಹಾಗಾದರೆ ಚೇತನರ ಗತಿ—ಭಗವಂತನ ದಯೆಯೇ ಗತಿ. ಆ ತಾಯಿಯೇ ನಮ್ಮನ್ನುದ್ಧರಿಸಬೇಕು. ಶ್ರೀನಿವಾಸನ ದಯಾಪ್ರವಾಹ ಈ ಕ್ಷುದ್ರಚೇತನನ ಮೇಲೆ ಹರಿಯುವಂತೆ ಕರುಣಾರೂಪಿಯಾದ ಲಕ್ಷ್ಮಿಯೇ ಅನುಗ್ರಹಿಸಬೇಕೆಂದು ಶ್ರೀ ವೇದಾಂತ ದೇಶಿಕರು ದಯಾಶತಕದ ೩೪ನೇ ಪದ್ಯದಲ್ಲಿ ನಮಗಾಗಿ ಪ್ರಾರ್ಥಿಸಿರುತ್ತಾರೆ. ಆ ಪದ್ಯ:

"ಅನುಭವಿತು ಮಘೌಘಂ ನಾಲ ಮಾಗಾಮಿ ಕಾಲಃ
ಪ್ರಶಮಯಿತು ಮಶೇಷಂ ನಿಷ್ಕ್ರಿಯಾಭಿರ್ನ ಶಕ್ಯಂ।
ಸ್ವಯ ಮಿತಿಹಿ ದಯೇತ್ವಂ ಸ್ವೀಕೃತ ಶ್ರೀನಿವಾಸಾ
ಶಿಥಿಲಿತ ಭವಭೀತಿ ಶ್ಶ್ರೇಯಸೇ ಜಾಯಸೇ ನಃ॥"

ಎಂದು ಪುರಾಣರತ್ನದ (೩-೬-೪೦)ನೇ ಪದ್ಯದಲ್ಲೂ—

"ಕೃತೇ ಪಾಪೇಽನು ತಾಪೋ ವೈ ಯಸ್ಯ ಪುಂಸಃ ಪ್ರಜಾಯತೇ।
ಪ್ರಾಯಶ್ಚಿತ್ತಂತು ತಸ್ಯೈಕಂ ಹರಿಸಂಸ್ಮರಣಂ ಪರಂ॥"

ಹೀಗೆ ಹರಿಸ್ಮರಣೆಯು ಸರ್ವ ಪಾಪಗಳಿಗೂ ಪ್ರಾಯಶ್ಚಿತ್ತವು. ಒಂದು ವೇಳೆ ಪಾಪ ಪ್ರಾಯಶ್ಚಿತ್ತವಾಗಿ ಉಪವಾಸ-ಯಜ್ಞ-ದಾನಗಳನ್ನಾಚರಿಸಿದರೂ ಆ ಸಂದರ್ಭದಲ್ಲೂ ಹರಿಸ್ಮರಣೆಯು ವಿಶೇಷಪ್ರಾಯಶ್ಚಿತ್ತವಾಗುವುದು. ಈ ಚೇತನನಿಗೆ ಈಶ್ವರಜ್ಞಾನದಿಂದಲೇ ಶುದ್ಧಿಯು "ಕ್ಷೇತ್ರಜ್ಞಸ್ಯ ಈಶ್ವರಜ್ಞಾನಾ ದ್ವಿಶುದ್ಧಿಃ ಪರಮಾಮತಾ" ಎಂದು ಹಿರಿಯರ ಮಾತು. ಹರಿಸ್ಮರಣೆಯಿಂದ "ಇಷೀಕಾತೂಲ ಮಗ್ನೌಪ್ರೋತಂ ಪ್ರದೂಯೇತ" ಅಂದರೆ ಹತ್ತಿಯ ಬೆಟ್ಟವು ಒಂದು ಕಿಡಿ ಬೆಂಕಿಯಿಂದ ದಗ್ಧವಾಗಿ ಹೋಗುವಂತೆ ಪಾಪದ ಬೆಟ್ಟವು ನಾಶವಾಗುತ್ತದೆ. ಅಗ್ನಿಸಂಬಂಧದಿಂದ ಭಂಗಾರವು ಶುದ್ಧವಾಗುವಂತೆ ಚೇತನನ ಮನಸ್ಸು ಹರಿಸ್ಮರಣದಿಂದ ಶುದ್ಧಿ ಹೊಂದುತ್ತದೆ. ಶ್ರೀ ಶಠಗೋಪರು ಹರಿಸ್ಮರಣದಿಂದ ಪರಿಶುದ್ಧವಾದ ತಮ್ಮ ಮನಸ್ಸನ್ನು ಶ್ಲಾಘಿಸಿರುವ ರೀತಿ ಅನುಕರಣೀಯವಾಗಿದೆ. (ತಿರುವಾ ೧-೧೦-೪)

"ನೆಂಜಮೇ ನಲ್ಲೈ ನಲ್ಲೈ ಉನ್ನೈ ಪೆತ್ತಾಲೆ
ಎನ್ ಶೆಯ್ಯೋಂ, ಇನಿಯೆನ್ನ ಕುರೈವಿನಂ

ವೈಂದನ್ನೈ ಮಲರಾಳ್ ಮಣವಾಳನ್ನೈ
ತುಂಜುಂ ಪೋದುಂ ವಿಡಾದು ತೊಡರ್ ಕಂಡಾಯ್ ||"

ಅಂದರೆ—ಹೇ ಮನಸ್ಸೇ ! ನೀನು ಮಾಡುವ ಕಾರ್ಯವು ಒಳ್ಳೆಯದು, ಒಳ್ಳೆಯದು. ನಿನ್ನ ಸಹಾಯ ಸಿಕ್ಕರೆ ಯಾವ ಕಾರ್ಯವನ್ನು ಸಾಧಿಸಲಾರೆ. ನನಗೆ ಏನು ಕೊರತೆ. ನಾನು ವಿಸ್ಮೃತಿಯನ್ನು ಪಡೆದರೂ ನೀನು ಲಕ್ಷ್ಮೀಪತಿಯ ಧ್ಯಾನವನ್ನು ಬಿಡಬೇಡ" ಎಂದು. ಚೇತನನು ಕುಳಿತಾಗ—ನಿಂತಾಗ—ಹೋಗುವಾಗ ಭಗವಂತನನ್ನು ಚಿಂತಿಸುತ್ತಿದ್ದರೆ ಧನ್ಯತೆಯನ್ನು ಪಡೆಯುತ್ತಾನೆ. ಇತರ ಪ್ರಾಯಶ್ಚಿತ್ತಗಳು ಅನವಶ್ಯಕ.

ವಚನ ವಿ.ಪು. ಪುಟ ೮೮, ಸಾಲು ೮

ಮೂಲ : "ತದನಂತಮಸಂಖ್ಯಾತ ಪ್ರಮಾಣಂ ಚಾಪಿ ವೈಯತಃ |
ಹೇತು ಭೂತಮಶೇಷಸ್ಯ ಪ್ರಕೃತಿ ಸ್ಸಾ ಪರಾ ಮುನೇ||" ವಿ.ಪು. ೨-೭-೨೬

ಪ್ರಕೃತಿ ಎಂಬುವುದು ಪರಿಚ್ಛಿನ್ನವೆ? ಅಥವಾ ಅಪರಿಚ್ಛಿನ್ನವೆ? ಎಂಬ ಶಂಕಾಪಿಗೆ ಈ ಪದ್ಯವು ಉತ್ತರಿಸುತ್ತದೆ. ಯತಃ=ಯಾವ ಕಾರಣದಿಂದ ತತ್=ಆ ಪ್ರಕೃತಿಯು, ಅನಂತಂ—ನಾಶವಿಲ್ಲದೆ ಇದೆಯೊ, ಮತ್ತು ಅಸಂಖ್ಯಾತ ಪ್ರಮಾಣಂ=ಲೆಕ್ಕಮಾಡಲು ಸಾಧ್ಯವಿಲ್ಲದ ವಿಸ್ತಾರವುಳ್ಳದೊ, ಆ ಕಾರಣದಿಂದ ಪ್ರಕೃತಿಯು, ಅಶೇಷಸ್ಯ=ಸಕಲ ಅಚಿದ್ವಸ್ತುಗಳಿಗೂ, ಹೇತುಭೂತಂ= ಕಾರಣವಾಗಿದೆ. ಇಲ್ಲಿ ವರ್ಣಿಸಿರುವ ಪ್ರಕೃತಿಯು ಅನಂತ ದೇಶತಃ ಎಲೆಯೇ ಇಲ್ಲದ್ದು. ನಾಶವಿಲ್ಲದ್ದು. ಅಸಂಖ್ಯಾತವಾದ್ದು ಎಂದು ತಿಳಿಯುತ್ತೆ. ಹಾಗೆಯೇ ಶಠಗೋಪರು ಅಪರಿಚ್ಛಿನ್ನವೆಂಬ ಅರ್ಥದಲ್ಲಿ "ಶೂಳ್‌ನ್ದ ಕಗನ್ರಳ್‌ನ್ದುಯರ್‌ನ್ದ ಮುಡಿವಿಲ್ ಪೆರುಂ ಪಾಳೇಯೋ" ಅಂದರೆ "ಕಾರ್ಯವರ್ಗವನ್ನೆಲ್ಲಾ ವ್ಯಾಪಿಸಿ ಹೆತ್ತು ದಿಕ್ಕುಗಳಲ್ಲಿಯೂ ಹರಡಿ ನಿತ್ಯವಾಗಿರುವುದು ಪ್ರಕೃತಿ" ಎಂತಲೇ ವರ್ಣಿಸಿರುತ್ತಾರೆ—ಆದರೆ ಪ್ರಕೃತಿಗಿಂತ ವಿಲಕ್ಷಣವಾದ ಶುದ್ಧ ಸತ್ವ ದ್ರವ್ಯ (ವೈಕುಂಠ) ಉಂಟೆಂದು ಹೇಳಿರುತ್ತದೆ. ಪ್ರಕೃತಿಯು ಅಪರಿಚ್ಛಿನ್ನವಾದರೆ ನಿತ್ಯ ವಿಭೂತಿಯೆನಿಸಿದ ವೈಕುಂಠದಲ್ಲೂ ಇರಬೇಕಾಗುತ್ತೆ. ಆದರೆ ನಿತ್ಯವಿಭೂತಿ ಇರುವ ಸ್ಥಳದಲ್ಲಿ ಪ್ರಕೃತಿ ಇಲ್ಲವು. ಈ ಪ್ರಕೃತಿಗೆ ಲೀಲಾವಿಭೂತಿ ಎಂದು ಹೆಸರು. ಅಂದ ಭಗವಂತನ ಲೀಲೆಗಾಗಿ ಏರ್ಪಟ್ಟುದು. ಈ ಲೀಲಾವಿಭೂತಿಯನ್ನು ಮೂರರಷ್ಟು ಹಾಕಿದರೆ ನಿತ್ಯವಿಭೂತಿಯಾಗುತ್ತದೆ. ಆದ್ದರಿಂದಲೆ ನಿತ್ಯವಿಭೂತಿಯನ್ನು ತ್ರಿಪಾದ್ವಿಭೂತಿಯೆಂತಲೂ, ಈ ಲೀಲಾವಿಭೂತಿಯನ್ನು

ಏಕಾಪಾದ್ವಿಭೂತಿಯೆಂತಲೂ "ಪಾದೋಽಸ್ಯ ವಿಶ್ವಾ ಭೂತಾನಿ" ತ್ರಿಪಾದಸ್ಯಾ ಮೃತಂ ದಿವಿ" ಎಂದು ಶ್ರುತಿಯು ಪರಿಚ್ಛಿನ್ನವಾಗಿ ಹೇಳಿರುತ್ತದೆ. ಅಲ್ಲದೆ ಲೀಲಾ ವಿಭೂತಿ=ನಿತ್ಯವಿಭೂತಿಗಳ ನಡುವೆ ವಿರಜಾನದಿಯು ಹರಿಯುತ್ತಿದೆ—ಎಂದು ಶಾಸ್ತ್ರ ವಚನವಿದೆ. ಮುಕ್ತಜೀವನು ಪರಮ ಪದಕ್ಕೆ ಪ್ರಯಾಣ ಮಾಡುವಾಗ ವಿರಜಾನದಿಯಲ್ಲಿ ಪ್ರಕೃತಿಸಂಬಂಧವನ್ನು ಕಳೆದುಕೊಳ್ಳುವುದಾಗಿಯೂ ಹೇಳಿದೆ. ಆದ್ದರಿಂದ ಪ್ರಕೃತಿಯು ದೇಶತಃ ಪರಿಚ್ಛಿನ್ನವು. ಕಾಲತಃ ಅಪರಿಚ್ಛಿನ್ನವು. "ಅಜಾಮೇಕಾಂ ಲೋಹಿತ ಶುಕ್ಲಕೃಷ್ಣಾಂ" ಎಂಬ ಶ್ರುತಿಯಂತೆ ತ್ರಿಗುಣಗಳಿಂದ ಕೂಡಿ ಅನಾದಿಯಾಗಿ ನಿತ್ಯವಾಗಿರುವುದೆಂದು ತಾತ್ಪರ್ಯ.

ವಚನ ವಿ.ಪು. ಪುಟ ೧೦೨, ಸಾಲು ೨

ಮೂಲ: "ಜ್ಯೋತೀಂಷಿ ವಿಷ್ಣುರ್ಭುವನಾನಿ ವಿಷ್ಣುರ್ವನಾನಿ ವಿಷ್ಣುರ್ಗಿರಯೋ ದಿಶಶ್ಚ ।
ನದ್ಯಸ್ಸಮುದ್ರಾಶ್ಚ ಸ ಏವ ಸರ್ವಂ ಯದಸ್ತಿ ಯನ್ನಾಸ್ತಿ ಚ ವಿಪ್ರವರ್ಯ ॥
೨-೧೨-೩೮

ಈ ಪದ್ಯದಲ್ಲಿ ಸಮಸ್ತ ವಿಶ್ವವೂ ಪರಮಾತ್ಮನೇ ಎಂದು ಶ್ರೀ ಪರಾಶರರು ವಿವರಿಸಿರುತ್ತಾರೆ. ಈ ರೀತಿ ಹೇಳುವ ಔಚಿತ್ಯವೇನು? ಜಗತ್ತು ಮಿಥ್ಯೆಯಲ್ಲ. ಅವನ ಶರೀರವಾಗಿ ಸತ್ಯ ಎಂದು ಹೇಳಲು ಗೀತೆಯಲ್ಲೂ "ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ" ಮಣಿಗಳು ಇದ್ದರೆ ಸೂತ್ರವು (ದಾರವು) ಪ್ರೋತವಾಗುವುದು. ಮಣಿಗಣಗಳು ಮಿಥ್ಯೆಯಾದರೆ ಪ್ರೋತವಾಗುವುದು ಹೇಗೆ? ಲೌಕಿಕರಾಜನಿಗೆ ಅನೇಕ ವಿಭೂತಿಗಳಿರುವುದಾದರೆ ರಾಜಾಧಿರಾಜನಿಗೆ ಎಷ್ಟು ವಿಭೂತಿ ಇರಬೇಕು?

ಪ್ರಕೃತ ಮೇಲಿನ ಪದ್ಯದಲ್ಲಿ ಮೈತ್ರೇಯರನ್ನು ಕುರಿತು ಶ್ರೀ ಪರಾಶರರು ಹೇಳುತ್ತಾರೆ. ಚಂದ್ರಸೂರ್ಯಾದಿ ಗ್ರಹಗಳೂ ವಿಷ್ಣುವೆ. ಹದಿನಾಲ್ಕು ಬ್ರಹ್ಮಾಂಡಗಳೂ ವಿಷ್ಣುವೇ. ಗಿರಿಗಳೂ ವಿಷ್ಣುವೆ. ನದೀ-ಸಮುದ್ರಗಳೂ ವಿಷ್ಣುವೆ. ಎಂದು ಹೇಳಿ ಕಡೆಯಲ್ಲಿ 'ಯದಸ್ತಿ' ಅಸ್ತಿ ಶಬ್ದವಾಚ್ಯವಾದ ಆತ್ಮವರ್ಗವೂ, ಯನ್ನಾಸ್ತಿ=ನಾಸ್ತಿ ಶಬ್ದವಾಚ್ಯವಾದ ಅಚಿದ್ವರ್ಗವೂ ಸಹ ವಿಷ್ಣುವೇ. 'ತತ್ ಸೃಷ್ಟ್ವಾ=ತದೇವಾನುಪ್ರಾವಿಶತ್' ಎಂಬ ಉಪನಿಷದ್ವಾಣಿಯಂತೆ ಸೃಷ್ಟವಾದ ಎಲ್ಲದರಲ್ಲೂ ಅವನು ಅಂತರ್ಯಾಮಿ. ಲೋಕದಲ್ಲಿ ಸಮಸ್ತ ವಸ್ತುಗಳನ್ನೂ ಬೋಧಿಸುವ ಶಬ್ದಗಳು ತತ್ತಚ್ಛರೀರಕ ಪರಮಾತ್ಮನನ್ನೇ ಬೋಧಿಸುತ್ತವೆಂದು ಮಹರ್ಷಿಗಳು ಮೇಲಿನ ಪದ್ಯದಲ್ಲಿ ತೋರಿಸಿರುತ್ತಾರೆ. ಆದ್ದರಿಂದ ಪರ

ಮಾತ್ಮನಿಗೂ—ಜಗತ್ತಿಗೂ ಸಾಮಾನಾಧಿಕರಣ್ಯವು ಕೂಡುತ್ತದೆ. ಇಡೀ ಜಗತ್ತು ಚಿದಚಿತ್ತುಗಳೇ ಆಗಿರುವುದರಿಂದ ಸಮಸ್ತ ವಿಶ್ವವೂ ಪರಮಾತ್ಮನೇ. ಆದ್ದರಿಂದ ವಿಷ್ಣುಸಹಸ್ರನಾಮದ ಪ್ರಥಮ ನಾಮ 'ವಿಶ್ವಾಯ ನಮಃ' ಎಂದಿರುತ್ತೆ. ಇದನ್ನನುಸರಿಸಿ ಶ್ರೀ ನಿಗಮಾಂತ ದೇಶಿಕರೂ ಸಹ, ತಮ್ಮ 'ಶರಣಾಗತಿದೀಪಿಕಾ' ಎಂಬ ಸ್ತೋತ್ರದ ಏಳನೇ ಪದ್ಯದಲ್ಲಿ—

"ವಿಶ್ವಂ ಶುಭಾಶ್ರಯವದೀಶ ವಪು ಸ್ತ್ವದೀಯಂ।
ಸರ್ವಾ ಗಿರ ಸ್ತ್ವಯಿ ಪಶಂತಿ ತತೋಽಸಿ ಸರ್ವಃ॥"

ಚರಾಚರಾತ್ಮಕವಾದ ಈ ಜಗತ್ತನ್ನು ಪರಮಾತ್ಮನು ಶರೀರವನ್ನಾಗಿ ಹೊಂದಿರುತ್ತಾನೆ. ಆದ್ದರಿಂದಲೆ ಓ! ದೀಪಪ್ರಕಾಶಸ್ವಾಮಿಯೆ "ತತೋಽಸಿ ಸರ್ವಃ" ಸಾಮಾನಾಧಿಕರಣ್ಯದಿಂದ ಈ ಜಗತ್ತು ಮತ್ತೂ ಕಾಣುವ ವಸ್ತುಗಳೂ ನೀನೇ ಎಂಬುದಾಗಿ ಹೇಳಲ್ಪಡುತ್ತೀಯೆ. ಶರೀರಬೋಧಕವಾದ ಪದಗಳೆಲ್ಲವೂ ಶರೀರಿಯಾಗಿ ಆತ್ಮಾವಾಗಿರುವ ನಿನ್ನನ್ನೆ ಬೋಧಿಸುತ್ತವೆ. ಪ್ರಕೃತ ಮೇಲಿನ ವಿಷ್ಣುಪುರಾಣದ ಪದ್ಯದಲ್ಲಿ "ಸ ಏವ ಸರ್ವಂ" ಎಂದ ಮಹರ್ಷಿಗಳು ಪ್ರಯೋಗಿಸಿರುತ್ತಾರೆ.

ವಚನ ವಿ.ಪು. ಪು. ೧೦೩, ಸಾಲು ೯

ಮೂಲ: ಆತ್ಮಾ ಶುದ್ಧೋಽಕ್ಷರ ಶ್ಯಾಂತೋ ನಿರ್ಗುಣಃ ಪ್ರಕೃತೇಃ ಪರಃ।
ಪ್ರವೃದ್ಧ್ಯಪಚಯೌ ನಾಸ್ಯ ಚೈಕಾಸ್ಯಾಖಿಲ ಜಂತುಷು॥
ವಿ.ಪು. ೨-೧೩-೭೧

ಈ ಪದ್ಯದಲ್ಲಿ ಜಡಭರತರು ರಹೂಗಣನಿಗೆ ಆತ್ಮಸ್ವರೂಪವನ್ನುಪದೇಶಿಸುವ ಸಂದರ್ಭವು. ರಹೂಗಣನೆಂಬ ರಾಜನು ಆತ್ಮಸ್ವರೂಪವನ್ನು ತಿಳಿಯಲು ಕಪಿಲರ ಬಳಿಗೆ ಹೋಗುತ್ತಿದ್ದನು. ಪಲ್ಲಕ್ಕಿಯನ್ನು ಹೊರುವವರು ಶ್ರಾಂತರಾಗಿ ಮಧ್ಯದಲ್ಲಿ ಸಿಕ್ಕಿದ ಜಡಭರತರನ್ನು ಈ ಕೆಲಸಕ್ಕಾಗಿ ನಿಯೋಜಿಸಿದರು. ಪಲ್ಲಕ್ಕಿಯನ್ನು ಹೊರುವ ಅಭ್ಯಾಸವಿಲ್ಲದಕಾರಣ ಜಡಭರತರು ಅತ್ತ ಇತ್ತ ವಕ್ರವಕ್ರವಾಗಿ ನಡೆಯುತ್ತಿದ್ದರು. ಇದಕ್ಕಾಗಿ ಸಿಟ್ಟಾದ ರಾಜನು "ನೋಡಲು ದಷ್ಟಪುಷ್ಟವಾಗಿ ಬೆಳೆದಿದ್ದೀಯೆ. ನಿನಗೆ ಆಯಾಸವಾಗಲು ಕಾರಣವಿಲ್ಲ. ಇನ್ನು ಸ್ವಲ್ಪ ದೂರ ಬಂದಿರುತ್ತೀಯೆ" ನೆಟ್ಟಗೆ ಹೋಗುವಂತೆ ಗದರಿಸಿದನು. ಆಗ ಜಡಭರತರ ಬಾಯಿಂದ ಹೊರಟ ಮಾತುಗಳಿವು.

ರಾಜನೇ ನೀನು ಹೇಳಿದಂತೆ ನಾನು ದಪ್ಪವಾಗಿ ಬೆಳೆದೂ ಇಲ್ಲ. ನಿನ್ನ

ಪಲ್ಲಕ್ಕಿಯನ್ನು ಹೊತ್ತೂ ಇಲ್ಲ. ಆಯಾಸವಂತೂ ಇಲ್ಲವೇ ಇಲ್ಲ. ದಪ್ಪವಾಗಿಯೂ, ಕೃಶವಾಗಿಯೂ ಕಾಣುವ ಈ ದೇಹವು ಪಂಚಭೂತಗಳ ಸಂಸರ್ಗದಿಂದಾದುದು. ಈ ದೇಹಸಂಬಂಧವನ್ನು ಹೊಂದಿರುವ ಆತ್ಮನು ದಪ್ಪವೂ ಅಲ್ಲ, ಕೃಶವೂ ಅಲ್ಲ. ಅದರ ಸ್ವರೂಪವೇ ಬೇರೆ. ಆತ್ಮವರ್ಗವು ಜ್ಞಾನೈಕಾಕಾರತೆಯಿಂದ ತಮಸಾಗಿರುತ್ತದೆ. ಆತ್ಮವು ಶುದ್ಧನು. ಅವಿನಾಶಿಯು ಶಾಂತನು. ತ್ರಿಗುಣ ರಹಿತನು. ದೇಹಕ್ಕಿಂತ ವಿಲಕ್ಷಣವಾದವನು. ದೇಹಕ್ಕೆ ಬರುವ ವೃದ್ಧಿಕ್ಷಯಗಳು ಆತ್ಮಕ್ಕೆ ಇಲ್ಲ. ನಾನು ಭೂಮಿಯ ಮೇಲಿದ್ದೇನೆ. ನೀನು ಪಲ್ಲಕ್ಕಿಯಲ್ಲಿರುವೆ. ಹಾಗಾದರೆ ಪಲ್ಲಕ್ಕಿಯನ್ನು ಹೊತ್ತಿರುವವರು ಯಾರು? ಎಂದು ರಾಜನ ಪ್ರಶ್ನೆ. ಇದಕ್ಕೆ ಉತ್ತರವಾಗಿ ೬೯ನೇ ಪದ್ಯ—

"ಅಹಂ ತ್ವಂಚ ತಥಾನ್ಯೇಚ ಭೂತೈರುಹ್ಯಾಮ ಪಾರ್ಥಿವ।
ಗುಣಪ್ರವಾಹ ಪತಿತೋ ಭೂತವರ್ಗೋಽಪಿಯಾತ್ಯಯಂ॥

ವಿ.ಪು. ೨-೧೩-೬೯

ನಾನು–ನೀನು ಎಂಬ ವ್ಯವಹಾರವು ದೇಹತ್ವೇನ ಪರಿಣತವಾದ ಭೂತ ಸಂಪರ್ಕದಿಂದಾದುದು. ಭೂತ ಸಂಘಕ್ಕೆ ಗಮನಾದಿ ವ್ಯಾಪಾರವು ಗುಣಕೃತ ವಾದುದು. ಸತ್ವಾದಿಗುಣಗಳು ಪ್ರಾಣಿಗಳಿಗೆ ಅವರವರ ಸಂಚಿತ ಕರ್ಮಾಧೀನ ವಾದುದು. ಈ ವಿಷಯವೇ ಗೀತೆಯಲ್ಲಿ—

"ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ।
ಅಹಂಕಾರ ವಿಮೂಢಾತ್ಮಾ ಕರ್ತಾಹ ಮಿತಿ ಮನ್ಯತೇ॥"

ಜೀವಾತ್ಮನು ದೇಹಸಂಬಂಧವಿಲ್ಲದೆ ಯಾವ ಕೆಲಸವನ್ನೂ ಮಾಡಲಾರನು. ಜೀವಾತ್ಮನು ಕಾರ್ಯೋನ್ಮುಖನಾಗಲು ದೇಹೇಂದ್ರಿಯಗಳ ಸಹಾಯವು ಆವಶ್ಯಕವು ಆತ್ಮನು ತಾನು ಮಾಡಿರುವ ಪಾಪ-ಪುಣ್ಯಗಳಿಗೆ ಅನುಗುಣವಾಗಿ ತ್ರಿಗುಣಾತ್ಮಕ ವಾದ ದೇಹಸಂಬಂಧವು ಪ್ರಾಪ್ತವಾಗಿರುತ್ತದೆ. ಸತ್ವರಜೋಸ್ತಮೋಗುಣಗಳಿಗೆ ಅನುರೂಪವಾಗಿ ಮಾಡಲ್ಪಡುವ ಕರ್ಮಗಳನ್ನು ಕುರಿತು ತಾನೇ ಕರ್ತಾವೆಂದು ತಿಳಿಯುವನು. ಈ ತಿಳುವಳಿಕೆಯು ದೇಹಾತ್ಮ ಭ್ರಮದಿಂದ ಉಂಟಾದುದು. ಇಂತಹ ದೇಹಾತ್ಮ ಭ್ರಮೆಯು "ಅನಾತ್ಮನ್ಯಾತ್ಮಬುದ್ಧಿರ್ಯಾ ಅಸ್ವೇಸ್ವಮಿತಿಯಾ ಮತಃ। ಅವಿದ್ಯಾತರು ಸಂಭೂತಂ ಬೀಜಮೇತದ್ದ್ವಿಧಾಸ್ಥಿತಂ॥" ಆತ್ಮವಲ್ಲದೆ ದೇಹದಲ್ಲಿ 'ಅವಿದ್ಯಾ' ಎಂಬ ವೃಕ್ಷದ ಬೀಜದಿಂದ ಉತ್ಪನ್ನವಾದುದು. ಈ ಭ್ರಾಂತಿಯಿಂದಲೇ ತಾನೇ ಕರ್ತಾ ಎಂದು ಭಾವಿಸುತ್ತಾನೆ. ಈ ಅಭಿಪ್ರಾಯ ವನ್ನೇ ಕಪಿಲರು ತಮ್ಮ ತಾಯಿಯಾದ ದೇವಹೂತಿಗೆ ಉಪದೇಶಿಸುವ ಸಂದರ್ಭ

ದಲ್ಲೂ "ಏವಂ ಪರಾಭಿಧ್ಯಾನೇನ ಕರ್ತೃತ್ವಂ ಪ್ರಕೃತೇಃ ಪುಮಾನ್। ಕರ್ಮಸು ಕ್ರಿಯಮಾಣೇಷು ಗುಣೈರಾತ್ಮನಿ ಮಾನ್ಯತೇ॥ (ಭಾ. ೩-೨೬-೭) ಪ್ರಕೃತಿಯಿಂದ ಮುಚ್ಚಿಹೋದ ಜ್ಞಾನವುಳ್ಳವರು ಪ್ರಕೃತಿಯಿಂದುಂಟಾಗುವ ಸಾಂಸಾರಿಕ ಪ್ರವೃತ್ತಿಗಳಲ್ಲಿ ತಮ್ಮಿಂದಲೇ ಕರ್ಮವು ಆಚರಿಸಲ್ಪಟ್ಟಿತೆಂದು ತಿಳಿಯುವರೆಂದು ಉಪದೇಶಿಸಿರುತ್ತಾರೆ.

ಕರ್ಮಯೋಗಾದಿ ಉಪಾಯುಗಳನ್ನು ಅನುಷ್ಠಿಸಿ ನಿತ್ಯವಾದ ಭಗವತ್ಕೈಂಕರ್ಯದಲ್ಲಿ ಆನಂದವನ್ನು ಪಡೆಯಲೆಂದು ದಯಾಮಯನಾದ ಸರ್ವೇಶ್ವರನು ಈ ಆತ್ಮನಿಗೆ ಇಂದ್ರಿಯ-ದೇಹಸಂಬಂಧಗಳನ್ನು ಕಲ್ಪಿಸಿರುತ್ತಾನೆ. ಮುಖ್ಯವಾಗಿ ಚಿತ್ತಾದ ಆತ್ಮದ ಸ್ವರೂಪ-ಸ್ವಭಾವಗಳನ್ನು ಅಚಿತ್ತಾದ ದೇಹದ ಸ್ವರೂಪ ಸ್ವಭಾವಗಳನ್ನೂ ತಿಳಿಯದೆ ಹೋದರೆ ದೇಹಾತ್ಮಭ್ರಮಣವು ನಾಶವಾಗಲಾರದು. ಶರೀರವಲ್ಲದೆ ಬೇರೆಯಾದ ಆತ್ಮನೇ ಇಲ್ಲ ಎಂದು ವಾದಿಸುವವರಿಗೆ ಇಹಪರಗಳೆರಡರಲ್ಲೂ ಸೌಖ್ಯವಿಲ್ಲ. ಜ್ಞಾನಾಶ್ರಯತ್ವವೂ, ಸ್ವಸ್ಮೈಭಾಸಮಾನತ್ವವೂ (ಅಂದರೆ ತನ್ನನ್ನು ತಾನೇ ತಿಳಿದುಕೊಳ್ಳುವುದು). ಇವು ಚಿತ್ತಾದ ಆತ್ಮದ ಲಕ್ಷಣಗಳು. ಜ್ಞಾನವಿಲ್ಲದಿರುವಿಕೆ (ಜಡತ್ವ) ಇಂದ್ರಿಯಗಳಿಗೆ ಗೋಚರವಾಗುವಿಕೆ ಇವು ಅಚಿತ್ತಿನ ಲಕ್ಷಣಗಳು. ಚಿತ್ತಾದ ಆತ್ಮಕ್ಕೆ ಜ್ಞಾನವಿರುವುದರಿಂದಲೂ, ಅಚಿತ್ತು ಜ್ಞಾನಶೂನ್ಯವಾದ್ದರಿಂದಲೂ ಅಚಿತ್ತಾದ ದೇಹವು ಚಿತ್ತಾದ ಆತ್ಮಾ ಹೇಗಾದೀತು? ಈ ರೀತಿ ಯಥಾರ್ಥವಾದ ಆತ್ಮಸ್ವರೂಪಕ್ಕೆ ಬೇರೆಯಾದ ಅಂದರೆ ವಿರುದ್ಧವಾದ ಅರ್ಥಗಳನ್ನು ಕಲ್ಪಿಸುವವರು ಚೋರರು, ಆತ್ಮಸ್ವರೂಪವನ್ನು ಮರೆಸುವವರು ಆತ್ಮಾಪಹಾರಿಗಳು, ಅವರು ಮಾಡದ ಪಾಪವೇ ಇಲ್ಲ, ವಿದ್ಯಾಚೋರರು ಅಲ್ಲದೆ ಗುರುದ್ರೋಹಿಗಳು, ವೇದವಿರುದ್ಧವಾದ ಅರ್ಥವನ್ನು ಹೇಳುವವರಾದ ಕಾರಣ ವೇದವನ್ನೂ ಈಶ್ವರನನ್ನೂ ದೂಷಿಸುವವರು. ಬಹಳ ಪಾಪಗಳನ್ನು ಮಾಡಿದವರು, ಇವರು ಶಿಕ್ಷಾರ್ಹರು, ಎಂದು ವ್ಯಾಸಮುನೀಶ್ವರರು ಭಾರತದ ಉದ್ಯೋಗಪರ್ವದಲ್ಲಿ ಅಪ್ಪಣೆ ಕೊಡಿಸಿರುತ್ತಾರೆ. ಆ ಪದ್ಯಗಳು ಯಾವುವೆಂದರೆ—

"ಯೋಽನ್ಯಥಾ ಸಂತಮಾತ್ಮಾನಂ ಅನ್ಯಥಾ ಪ್ರತಿಪದ್ಯತೇ।
ಕಿಂತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ॥
ವಿದ್ಯಾ ಚೋರೋ ಗುರುದ್ರೋಹೀ ವೇದೇಶ್ವರ ವಿದೂಷಕಃ।
ತ ಏತೇ ಬಹು ಪಾಪ್ಮಾನ ಸ್ಸದ್ಯೋದಂಡ್ಯಾ ಇತಿಶ್ರುತಿಃ॥"

ಎಂದು ಜ್ಞಾನಾಶ್ರಸಾದ ಆತ್ಮನಿಗೆ ಸ್ಥೂಲತ್ವ-ಕೃಶತ್ವಗಳು ಲಕ್ಷಣಗಳಲ್ಲ. ಇವೆಲ್ಲಾ ಅಚಿತ್ತಾದ ಶರೀರದ ಲಕ್ಷಣಗಳು ಎಂದು ಜಡಭರತರು ರಹೂಗಣನಿಗೆ

ಆತ್ಮಸ್ವರೂಪ ಯಾಥಾರ್ಥ್ಯವನ್ನು "ಆತ್ಮಾ ಶುದ್ಧಃ ಅಕ್ಷರಃ ಶಾಂತಃ ಅಸ್ಯ ವೃದ್ಧಿ. ಅಪಜಯಃ ನ ಸಂತಿ" ಎಂಬ ಮೇಲಿನ ವಿಷ್ಣುಪುರಾಣದ ಪದ್ಯದಿಂದ ಉಪದೇಶಿಸಿರುತ್ತಾರೆ. ಜಡಭರತರಿಂದ ಉಪದಿಷ್ಟನಾದ ರಹೂಗಣನು ಆತ್ಮಜ್ಞಾನ ಸಂಪನ್ನನಾಗಿ ಸರ್ವವೂ ವಾಸುದೇವಾತ್ಮಕವೆಂದು ಚಿಂತಿಸುತ್ತಾ ಮೋಕ್ಷವನ್ನು ಪಡೆದನು.

ವ.ಭಾ. ಪು. ೧೩೪. ವಿ.ಪು. ೨-೧೩-೯೮

ಮೂಲ : "ಪುಮಾನ್ನದೇವೋ ನನರೋ ನ ತಿರ್ಯಙ್ನ ಚ ಪಾದಪಃ ।
ಶರೀರಾಕೃತಿಭೇದಾಸ್ತು ಭೂಪೈತೇ ಕರ್ಮಯೋನಯಃ ॥

ಈ ಪದ್ಯದಿಂದ ಆದಿಭರತರು ರಹೂಗುಣನಿಗೆ ಆತ್ಮದ ಲಕ್ಷಣವನ್ನು ಉಪದೇಶಿಸಿರುತ್ತಾರೆ. ಈ ಜೀವಾತ್ಮನು ದೇವನೂ ಅಲ್ಲವು, ಮನುಷ್ಯನೂ ಅಲ್ಲವು. ಪಶುವೂ ಅಲ್ಲವು, ವೃಕ್ಷವೂ ಅಲ್ಲವು. ಪುಮಾನ್ ಅಂದರೆ ಜ್ಞಾನಸ್ವರೂಪನಾದುದರಿಂದ ಮಹಾಪರಿಶುದ್ಧನು. ಶರೀರಭೇದಗಳು ತೋರುತ್ತವಲ್ಲ ಇದು ಹೇಗೆ? ಇದಕ್ಕೆ ಕಾರಣವನ್ನು ತಿಳಿಸುತ್ತಾರೆ. ಶರೀರ ಆಕೃತಿಭೇದಗಳು ತೋರುವುದೇನೊ ಸತ್ಯವು. ಆದರೆ "ಕರ್ಮಯೋನಯಃ" ಕರ್ಮಮೂಲಕವಾಗಿ ಬಂದವುಗಳು. ನಾನು ಮನುಷ್ಯ-ನಾನು ದೇವತೆ ಎಂಬ ವ್ಯವಹಾರಗಳಿದ್ದರೂ ಮನುಷ್ಯ ಶರೀರ-ದೇವತಾ ಶರೀರ-ಪಶು ಶರೀರ ಇವೆಲ್ಲವೂ ಜೀವರ ಕರ್ಮದಿಂದ ಉಂಟಾದುವು. ಮತ್ತೊಂದು ಕಡೆಯೂ ಇದೇ ರೀತಿ ಉಪದೇಶಿಸಿರುತ್ತಾರೆ—

"ನಾಯಂ ದೇವೋ ನಮರ್ತ್ಯೋವಾ ನ ತಿರ್ಯಕ್ ಸ್ಥಾವರೋಪಿ ವಾ ।
ಜ್ಞಾನಾನಂದಮಯಸ್ತ್ವಾತ್ಮಾ ಶೇಷೋಹಿ ಪರಮಾತ್ಮನಃ ॥"

ಇವನು ಧರ್ಮಭೂತಜ್ಞಾನದಿಂದ ಎಲ್ಲವನ್ನೂ ವ್ಯಾಪಿಸಿಕೊಂಡಿರುವುದರಿಂದ "ಆತ್ಮ"ನೆಂದು ಪ್ರಸಿದ್ಧನಾಗಿರುವನು. ದೇವಮನುಷ್ಯಾದಿ ಶರೀರಗಳಂತೆ ಜಡವಲ್ಲ. ಜ್ಞಾನಾನಂದಮಯನು, ಸರ್ವೇಶ್ವರನಿಗೆ ಶೇಷಭೂತನು. ಆತ್ಮಸಿದ್ಧಿಯಲ್ಲಿ ಆಚಾರ್ಯರೂ ಸಹ—

"ದೇಹೇಂದ್ರಿಯ ಮನಃಪ್ರಾಣಧೀಭ್ಯೋಽನ್ಯೋಽನನ್ಯ ಸಾಧನಃ ।
ನಿತ್ಯೋವ್ಯಾಪೀ ಪ್ರತಿಕ್ಷೇತ್ರಂ ಆತ್ಮಾ ಭಿನ್ನಃ ಸ್ವತಃ ಸುಖೀ ॥

ಎಂಬ ಆತ್ಮತತ್ವದ ಸ್ವರೂಪವನ್ನು ನಿತ್ಯಃ, ವ್ಯಾಪೀ, ಸುಖೀ ಎಂದು ಉಪದೇಶಿಸಿರುತ್ತಾರೆ. ಜ್ಞಾನೈಕಾಕಾರನಾದ ಆತ್ಮನಿಗೆ ದೇವ-ಮನುಷ್ಯಾದಿ ಆಕಾರವೆಂಬ ಮೋಹಜ್ಞಾನಕ್ಕೆ ಕಾರಣವಾದ ಕರ್ಮವು ನಾಶವಾದೊಡನೆಯೇ ಪರಿಶುದ್ಧನಾಗಿ

ತನ್ನ ನೈಜಸ್ವರೂಪದಿಂದ ಬೆಳಗುವನು—ಎಂಬ ವಿಷಯವು ವಿಷ್ಣುಪುರಾಣದ ಎರಡನೇ ಅಂಶವ ಹನ್ನೆರಡನೇ ಅಧ್ಯಾಯದ ನಲವತ್ತನೇ ಪದ್ಯದಲ್ಲಿ ನಿರೂಪಿತವಾಗಿದೆ. ಆ ಪದ್ಯವು ಯಾವುದೆಂದರೆ—

"ಯದಾತು ಶುದ್ಧಂ ನಿಜರೂಪಿ ಸರ್ವಂ ಕರ್ಮಕ್ಷಯೇ
ಜ್ಞಾನಮಪಾಸ್ತ ದೋಷಂ।
ತದಾಹಿಸಂಕಲ್ಪತರೋಃ ಫಲಾನಿ ಭವಂತಿ ನೋ ವಸ್ತುಷು
ವಸ್ತು ಭೇದಾಃ॥"

ಜೀವಾತ್ಮರಿಗೆ ಪ್ರಕೃತಿ ಮೂಲಕ ಉಂಟಾದ ಉಪಾಧಿಯು ಹೊರಟುಹೋದರೆ "ಸಂಪದ್ಯಾವಿರ್ಭಾವಃ ಸ್ವೇನ ಶಬ್ದಾತ್" ಎಂಬ ಬ್ರಹ್ಮಸೂತ್ರದಲ್ಲಿ ಹೇಳಿರುವಂತೆ ಇತರ ಜೀವಾತ್ಮರೂ ಸಹ ಪರಮಾತ್ಮನಿಗೆ ಜ್ಞಾನೈಕಾಕಾರತೆಯಿಂದ ಸಮರೆಂಬ ಜ್ಞಾನವು ಉಂಟಾಗುತ್ತದೆ.

ಶ್ರೀ ಯಾಮುನಾರ್ಯರು ತಮ್ಮ ಸ್ತೋತ್ರರತ್ನದ ನಾಲ್ಕನೇ ಪದ್ಯದಲ್ಲಿ ಚಿತ್ತು, ಅಚಿತ್ತು, ಈಶ್ವರ ಎಂಬ ತತ್ವತ್ರಯಗಳ ಸ್ವರೂಪಪ್ರಭಾವಗಳನ್ನೂ, ಮೋಕ್ಷಸ್ವರೂಪವನ್ನೂ, ಅದನ್ನು ಹೊಂದಲು ಉಪಾಯವನ್ನೂ ಸಹ ನಿಪುಣತರವಾಗಿ ಪ್ರತಿಪಾದಿಸಿ ಉಪಕಾರ ಮಾಡಿರುವ ಶ್ರೀ ಪರಾಶರರನ್ನು ವಂದಿಸುತ್ತೇನೆಂದು ಹೇಳಿ ಪರಾಶರರಲ್ಲಿ ಭಕ್ತಿ-ಗೌರವಗಳನ್ನು ಸೂಚಿಸಿರುತ್ತಾರೆ. ಹಾಗಾದರೆ ಈ ಪುರಾಣರತ್ನದಲ್ಲಿ ಚಿತ್-ಅಚಿತ್, ಈಶ್ವರ ತತ್ವಗಳ ಸ್ವರೂಪ ಸ್ವಭಾವಗಳನ್ನು ಎಲ್ಲಿ ಎಲ್ಲಿ ವಿವರಿಸಿರುತ್ತಾರೆ? ಎಂದರೆ ಅನೇಕ ಸ್ಥಳಗಳಲ್ಲಿ ಹೇಳಿದ್ದರೂ ಸ್ಥೂಲವಾಗಿ ಹೀಗೆ ವಿವರಿಸಬಹುದು. ಈ ಮೇಲಿನ ವಿಷ್ಣುಪುರಾಣದ (೨-೧೩-೯೮) ಈ ಪದ್ಯದಲ್ಲಿ ಚಿತ್ತಾದ (ಜ್ಞಾನಸ್ವರೂಪನಾದ) ಆತ್ಮನ ಸ್ವರೂಪ ಪರಿಚಯ ಮಾಡಿಕೊಟ್ಟಂತಾಯಿತು. ಇನ್ನು ಅಚಿತ್ತೆನಿಸಿದ ಪ್ರಕೃತಿಯ ಸ್ವರೂಪವೆಲ್ಲಿದೆ? ಎಂದರೆ ವಿಷ್ಣುಪುರಾಣದ (೨-೧೩-೮೯)

ಮೂಲ : ಪಿಂಡಃ ಪೃಥಗ್ಯತಃ ಪುಂಸಃ ಶಿರಃಪಾಣ್ಯಾದಿ ಲಕ್ಷಣಃ।
ತತೋಹಮಿತಿ ಕುತ್ರೈತಾಂ ಸಂಜ್ಞಾಂ ರಾಜ್ಯ ಕರೋಮ್ಯಹಂ॥

ಜೀವಾತ್ಮನು ಶರೀರ-ಇಂದ್ರಿಯ-ಮನಸ್ಸುಗಳಿಗಿಂತ ಬೇರೆಯಾದವನು. ಶರೀರವು ಒಂದು ಮಣ್ಣಿನ ಉಂಡೆಯಂತೆ. ಇದು ಜಡ. ಆದರಲ್ಲಿ ಜ್ಞಾನವಿಲ್ಲ. ಶರೀರವು ಪರಾರ್ಥವಾಗಿಯೇ ಇರುತ್ತದೆ. ನಿತ್ಯವೂ ವಿಕಾರಹೊಂದುವ ಸ್ವಭಾವವುಳ್ಳದು. ಶರೀರವನ್ನು ಪ್ರಕೃತಿ ಎಂದು ಕರೆಯುತ್ತಾರೆ. ಇದರಲ್ಲಿ ೨೪ ಸಾಮಗ್ರಿ

ಗಳು. ಯಾವುವೆಂದರೆ—ಮೂಲಪ್ರಕೃತಿ-ಅಹಂಕಾರ-ಮಹತ್ತತ್ವ-೩. ಪಂಚಭೂತಗಳು-ಪಂಚತನ್ಮಾತ್ರೆಗಳು-೧೦. ದಶೇಂದ್ರಿಯಗಳು ಮತ್ತು ಮನಸ್ಸು-೧೧ ಹೀಗೆ ೨೪. ಇವಿಷ್ಟೂ ಜಡಗಳೆ (ಅಚಿತ್ತುಗಳೇ).

ಇನ್ನು ಈಶ್ವರ ತತ್ವ—ಈತನು ಕಲ್ಯಾಣಗುಣವಿಶಿಷ್ಟನು—ಹೇಯಗುಣವಿಲ್ಲದವನು–ಜ್ಞಾನಾನಂದ ಸ್ವರೂಪನು. ಶ್ರಿಯಃ ಪತಿಯು. ಜಗತ್ತಿಗೆ ಆಧಾರನು. ನಿಯಾಮಕನು ಮತ್ತು ರಕ್ಷಕನು. ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನು. ವಿಷ್ಣುಪುರಾಣದಲ್ಲಿ ಈಶ್ವರ ಸ್ವರೂಪವು ಅಲ್ಲಲ್ಲೇ ಹೇಳಲ್ಪಟ್ಟಿದೆ—

"ಅವಿಕಾರಾಯ ಶುದ್ಧಾಯ ನಿತ್ಯಾಯ ಪರಮಾತ್ಮನೇ।
ಸದೈಕರೂಪ ರೂಪಾಯ ವಿಷ್ಣವೇ ಸರ್ವಜಿಷ್ಣವೇ॥
"ಶಾಸ್ತಾ ವಿಷ್ಣುರಶೇಷಸ್ಯ
"ಪರಃಪರಾಣಾಂ ಪರಮಃ
"ಸಮಸ್ತ ಕಲ್ಯಾಣ ಗುಣಾತ್ಮಕೋಽಸೌ" ಇತ್ಯಾದಿ.

ವಿ.ಪು. ವ. ಪುಟ ೧೧೬. ೧೦ ಸಾಲು

ಮೂಲ: ಆದ್ಯೋ ವೇದಶ್ಚತುಷ್ಪಾದಃ ಶತಸಾಹಸ್ರ ಸಮ್ಮಿತಃ।
ತತೋ ದಶಗುಣಃ ಕೃತ್ಸ್ನಃ ಯಜ್ಞೋಽಯಂ ಸರ್ವಕಾಮಧುಕ್॥
ವಿ.ಪು. ೩-೪-೧

ಈ ಪದ್ಯದಲ್ಲಿ ವೇದವಿಭಾಗಗಳನ್ನೂ, ವೇದಪ್ರೋಕ್ತವಾದ ಯಜ್ಞವಿಭಾಗವನ್ನೂ ಶ್ರೀ ಪರಾಶರರು ಉಪದೇಶಿಸಿರುತ್ತಾರೆ. ಮೊತ್ತಮೊದಲು ಚತುರ್ಮುಖನು ಅವಿಭಕ್ತವಾಗಿ ಪಠಿಸಿದ ವೇದವನ್ನು ವ್ಯಾಸರು ಋಗ್ವೇದ-ಯಜುರ್ವೇದ-ಸಾಮವೇದ-ಅಥರ್ವಣವೇದವೆಂದು ವಿಂಗಡಿಸಿದರು. ಈ ನಾಲ್ಕರಲ್ಲೂ ಸಂಹಿತಾಭಾಗ-ಬ್ರಾಹ್ಮಣಭಾಗ-ಆರಣ್ಯಕಭಾಗ–ಉಪನಿಷದ್ಭಾಗ ಎಂಬುದಾಗಿ ನಾಲ್ಕು ವರ್ಗಗಳಿರುತ್ತವೆ. ವೇದಗಳೆಲ್ಲವೂ ಭಗವದ್ವೈಭವವನ್ನೇ ಸಾರುತ್ತಿವೆ. ವೇದಗಳಲ್ಲಿ 'ಯಜ್ಞ'ಭಾಗವೂ ಪ್ರಧಾನವಾದ ಅಂಶ. 'ಯಜ = ಪೂಜಾಯಾಂ' ಎಂಬ ಧಾತುವಿನಿಂದ ಉತ್ಪನ್ನವಾದ ಯಜ್ಞಶಬ್ದಕ್ಕೆ ಪೂಜೆ ಎಂದರ್ಥ. ಯಾರ ಪೂಜೆ? ಯಾರು ಜಗತ್ಕಾರಣನೋ ಅವನ ಪೂಜೆ. ವಿಷ್ಣುವೇ ಜಗತ್ಕಾರಣನು ಅವನನ್ನೇ ಪೂಜಿಸಿರಿ "ಬೃಹತ್ತೇ ವಿಷ್ಣೋ ಸುಮತಿಂ ಭಜಾಮಹೇ" "ವಿಷ್ಣವೇ ಚಾರ್ಚತ" ಎಂದು ಋಗ್ವೇದವೂ, "ಹರಿಗಾಂ ಹರಂತ ಮನುಯಂತಿದೇವಾಃ"

ಎಂದು ಯಜುರ್ವೇದವೂ ವಿಷ್ಣುವಿನ ಆರಾಧನೆಯನ್ನು ಹೇಳಿರುತ್ತೆ. "ಆರಾಧನಾನಾಂ ಸರ್ವೇಷಾಂ ವಿಷ್ಣೋರಾರಾಧನಂ ಪರಂ" ಎಂದು ಅಭಿಯುಕ್ತರ ಮಾತೂ ಇದೆ. ಯಜ್ಞಾರಾಧ್ಯನೂ, ಯಜ್ಞಸ್ವರೂಪನೂ ವಿಷ್ಣುವೇ "ಯಜ್ಞೋವೈ ವಿಷ್ಣುಃ" ಎಂದು ಹೇಳಿರುತ್ತದೆ. ನಾಲ್ಕು ವೇದಗಳಲ್ಲಿ ಪಠಿತವಾಗಿರುವ ಪುರುಷಸೂಕ್ತವೂ "ಯಜ್ಞೇನ ಯಜ್ಞಮಯಜಂತ ದೇವಾಃ" ವೇದಗಳಲ್ಲಿ ಯಜ್ಞವೇ ಪ್ರಧಾನವಾದ ಅಂಶವೆಂದು ಘೋಷಿಸಿರುತ್ತೆ.

ಪ್ರಕೃತದಲ್ಲಿ ಮೇಲಿನ ವಿಷ್ಣುಪುರಾಣದ ಪದ್ಯವು ಋಗಾದಿ ನಾಲ್ಕು ವೇದಗಳು. ಇವುಗಳು ಅನಂತ ಶಾಖೆಗಳುಳ್ಳವು. ಈ ಎಲ್ಲಾ ವೇದಗಳೂ ಹತ್ತು ವಿಧವಾದ ಯಜ್ಞಗಳನ್ನು ತಿಳಿಸಿರುತ್ತವೆ. ಈ ಯಜ್ಞಗಳ ಅನುಷ್ಠಾನದಿಂದ ಸಕಲ ಕಾಮಗಳೂ ಸಿದ್ಧಿಸುತ್ತವೆ ಎಂದು. ಈ ಹತ್ತು ಯಜ್ಞಗಳು ಯಾವುವೆಂದರೆ— (೧) ಅಗ್ನಿಹೋತ್ರ (೨) ದರ್ಶಪೂರ್ಣಮಾಸ (೩) ಚಾತುರ್ಮಾಸ್ಯ (೪) ಪಶುಬಂಧ (೫) ಸೋಮ (೬) ದೇವಯಜ್ಞ (೭) ಪಿತೃಯಜ್ಞ (೮) ಭೂತಯಜ್ಞ (೯) ಮನುಷ್ಯಯಜ್ಞ (೧೦) ಬ್ರಹ್ಮಯಜ್ಞ ಎಂಬುದಾಗಿ. ಇವುಗಳಲ್ಲಿ ಮೊದಲನೆಯದಾದ 'ಅಗ್ನಿಹೋತ್ರವು.' ಅಂದರೆ ವಿವಾಹದ ದಿನ 'ಔಪಾಸನ' ಎಂಬ ಅಗ್ನಿಕಾರ್ಯವು ಪ್ರಾರಂಭವಾಗುತ್ತದೆ. ಅಂದಿನಿಂದ ಆ ಅಗ್ನಿಯು ಮನೆಯಲ್ಲಿ ಧಾರ್ಯ. ಧಾರಾಗ್ನಿಯಾಗಿ ಅದು ಎಂದೂ ಆರುವುದಿಲ್ಲ. ಈ ಅಗ್ನಿಯಲ್ಲಿ ಸಾಯಂ ಪ್ರಾತಃ ಔಪಾಸನವನ್ನು ಗೃಹಸ್ಥನು ಆಚರಿಸುತ್ತಾನೆ. ಈ ರೀತಿ ಧಾರಾಗ್ನಿಯನ್ನು ಇಟ್ಟುಕೊಂಡಿರುವವರು ಈ ಕಲಿಕಾಲದಲ್ಲಿ ಇಲ್ಲವೆಂತಲೇ ಹೇಳಬಹುದು. ಇದ್ದರೂ ಎಲ್ಲೋ ಒಬ್ಬರು. ಅವರು ವಂದ್ಯರು. ಈ ಅಗ್ನಿಗೆ "ಗೃಹಪತಿ" ಎಂದು ಹೆಸರು. ಸಾಯಂ ಪ್ರಾತಃ ಈ ಅಗ್ನಿಯ ಭಜನೆಯಿಂದ ಮನೆಯಲ್ಲಿರುವವರ ಪಾಪವೆಲ್ಲಾ ಪರಿಹಾರವಾಗುತ್ತದೆ. ಮತ್ತೊಂದು ತರಹ ಅಗ್ನಿಹೋತ್ರ "ಜಾತಪುತ್ರಃ ಕೃಷ್ಣಕೇಶಃ ಅಗ್ನೀನಾದಧೀತ" ಎಂದು ಪುತ್ರ ಸಂತತಿಯನ್ನು ಪಡೆದಮೇಲೆ 'ಅಗ್ನ್ಯಾಧಾನ' ಸೋಮಯಾಗಾದಿಗಳಿಂದ ಭಗವಂತನನ್ನಾರಾಧಿಸುವುದು. 'ಅಗ್ನ್ಯಾಧಾನ'ವನ್ನು ಮಾಡಿದ ಮೇಲೆ ನಿತ್ಯವೂ ಸಾಯಂ ಪ್ರಾತಃ ಅಗ್ನಿಹೋತ್ರ ಮಾಡಬೇಕು. ಶುಕ್ಲಪಕ್ಷ-ಕೃಷ್ಣಪಕ್ಷದ ಪ್ರಥಮಾ ತಿಥಿಯಲ್ಲಿ 'ಇಷ್ಟಿ'ಯನ್ನು ಮಾಡುವುದು. ಇದನ್ನೇ ದರ್ಶ-ಪೂರ್ಣಮಾಸ ಎಂಬುದಾಗಿಯೂ ಕರೆಯುತ್ತಾರೆ. "ಚಾತುರ್ಮಾಸ್ಯ-ಪಶುಬಂಧ-ಸೋಮ ಇವೂ ಯಜ್ಞಭೇದಗಳೇ. ಕಲಿಯುಗದಲ್ಲಿ ಈ ಯಜ್ಞಗಳ ಆಚರಣೆಯೇ ಇಲ್ಲ. ಇವುಗಳ ವಿವರಣೆಯೂ ಅಪ್ರಕೃತ. ಆದರೆ "ಚಾತುರ್ಮಾಸ್ಯ' ವ್ರತವನ್ನು ಆಚರಿಸುವವರು ಇದ್ದಾರೆ. ಒಂದೊಂದು ತಿಂಗಳಲ್ಲಿ ಒಂದು ವ್ರತವೆಂದು.

ಪಯೋವ್ರತ, ದಧಿವ್ರತ, ಶಾಕವ್ರತ ಎಂಬುದಾಗಿ ಆಚರಿಸುತ್ತಾರೆ. ಇವೆಲ್ಲವೂ ಒಂದು ವಿಧದಲ್ಲಿ ಭಗವದಾರಾಧನೆಗಳೇ. ಯಜ್ಞ-ಯಾಗಾದಿಗಳು ಪವಿತ್ರವಾದ ಕರ್ಮಗಳಾದರೂ ಇವುಗಳ ಆಚರಣೆಗೆ ಪ್ರತಿಬಂಧಕಗಳು ಹೆಚ್ಚು. ಈ ಪಂಚ ಯಜ್ಞಗಳು ಕಷ್ಟಸಾಧ್ಯ.

ಆದರೆ ದೇವಯಜ್ಞಾದಿ ಪಂಚಯಜ್ಞಗಳನ್ನು ಅನುಷ್ಠಿಸಬಹುದು. ಶ್ರುತಿಯೂ ಸಹ ಈ ಪಂಚಯಜ್ಞಗಳ ವೈಭವವನ್ನು ಹೇಳಿ ನಿತ್ಯಾನುಷ್ಠೇಯವೆಂದು ಉಪದೇಶಿಸಿರುತ್ತದೆ. ಯಥಾ "ಪಂಚ ವಾ ಏತೇ ಮಹಾಯಜ್ಞಾ ಸ್ಸತತಿ ಪ್ರತಾಯಂತೇ ಸತತಿ ಸಂತಿಷ್ಠಂತೇ ದೇವಯಜ್ಞಃ ಪಿತೃಯಜ್ಞಃ ಭೂತಯಜ್ಞೋ ಮನುಷ್ಯ ಯಜ್ಞೋ ಬ್ರಹ್ಮಯಜ್ಞ ಇತಿ" ಎಂದು ಇವು ಐದು ಪಂಚ ಮಹಾಯಜ್ಞಗಳು. ಇವುಗಳನ್ನು ನಿತ್ಯವೂ ಮಾಡಬೇಕು ಎಂದು ಹೇಳಿ ಇದರ ಅನುಷ್ಠಾನ ಕ್ರಮವನ್ನೂ ತಿಳಿಸಿರುತ್ತೆ.

ನಿತ್ಯವೂ ವಿಹಿತವಾದ ವೇದಮಂತ್ರದ ಮೂಲಕ ಸಮಿತ್ತನ್ನು ಅಗ್ನಿಯಲ್ಲಿ ಸಮರ್ಪಿಸಿದರೆ ಅದು ದೇವಯಜ್ಞವಾಗುತ್ತದೆ.

ಸ್ನಾನ ಸಂಧ್ಯಾನಂತರ 'ಸ್ವಧಾ' ಎಂಬ ಶಬ್ದೋಚ್ಚಾರಣೆಯ ಮೂಲಕ ಜಲಾಂಜಲಿಯನ್ನು ಅರ್ಪಿಸಿದರೆ ಅದು ಪಿತೃಯಜ್ಞವಾಗುತ್ತದೆ.

ತಾನು ಊಟಮಾಡುವ ಮುಂಚೆ ಪ್ರಾಣಿವರ್ಗಕ್ಕೆ ಬಲಿಯನ್ನು (ಧಾನ್ಯವನ್ನಾಗಲಿ, ಅನ್ನವನ್ನಾಗಲಿ) ಅರ್ಪಿಸಿದರೆ ಅದು ಭೂತಯಜ್ಞವಾಗುತ್ತದೆ.

ನಿತ್ಯವೂ ಒಬ್ಬ ಬ್ರಹ್ಮವಿತ್ತಿಗೆ ಅನ್ನವನ್ನು ಸಮರ್ಪಿಸಿದರೆ (ಊಟಹಾಕಿದರೆ) ಅದು ಮನುಷ್ಯಯಜ್ಞವಾಗುತ್ತದೆ.

ಯಾವುದಾದರೊಂದು ಪಿತೃ-ಪಿತಾಮಹ ಕ್ರಮವಾಗಿ ಬಂದ ವೇದ ಶಾಖೆಯನ್ನು ಪಠಿಸಿದರೆ (ಪಾರಾಯಣ ಮಾಡಿದರೆ) ಅದು ಬ್ರಹ್ಮಯಜ್ಞವಾಗುತ್ತದೆ. ಶ್ರುತಿಯು ಮತ್ತೊಂದು ರೀತಿಯಲ್ಲೂ ಯಜ್ಞವನ್ನು ಈ ರೀತಿ ವಿವರಿಸಿರುತ್ತೆ :

ಶ್ರದ್ಧೆಯಿಂದ ಋಗ್ವೇದದ ಮಂತ್ರವೊಂದನ್ನು ಪಠಿಸಿದರೆ ಅದರಿಂದ ದೇವತೆಗಳೂ, ಪಿತೃಗಳೂ ತಮ್ಮ ಮೇಲೆ ಹಾಲಿನ ಪ್ರವಾಹವೇ ಹರಿಯಿತು. ಇದೇ ಆಹುತಿಯೂ ಆಯಿತು ಎಂದು ಸಂತೋಷಪಡುತ್ತಾರೆ.

ಭಕ್ತಿಯಿಂದ ಯಜುರ್ವೇದದ ಮಂತ್ರವನ್ನು ಪಠಿಸಿದರೆ ತಮ್ಮ ಲೋಕದಲ್ಲಿ ತುಪ್ಪದ ಕಾಲುವೆಯೇ ಹರಿಯುತೆಂದೂ, ತುಪ್ಪದಿಂದ ಆಹುತಿಯನ್ನು ಕೊಟ್ಟಂತಾಯಿತೆಂದು ದೇವತೆಗಳೂ, ಪಿತೃಗಳೂ ಸಂತೋಷಪಡುತ್ತಾರೆ.

ಅರ್ಥಜ್ಞಾನದ ಮೂಲಕ ಸಾಮವೇದವನ್ನು ಪಠಿಸಿದರೆ ಸೋಮಪಾನ ಮಾಡಿದಷ್ಟು ದೇವತೆಗಳೂ-ಪಿತೃಗಳೂ ಸಂತೋಷ ಹೊಂದುತ್ತಾರೆ.

ಆದರದಿಂದ ಅಥರ್ವಣವೇದವನ್ನು ಪಾರಾಯಣ ಮಾಡಿದರೆ ಜೇನುತುಪ್ಪದ ಕಾಲುವೆ ಹರಿಯಿತೆಂದು ಅವರು ಸಂತೋಷಪಡುತ್ತಾರೆ.

ಅಥವಾ ಮೇಲೆ ಹೇಳಿದ ನಾಲ್ಕು ವೇದಗಳ ಅಭ್ಯಾಸವಿಲ್ಲದಿದ್ದಲ್ಲಿ-ವೇದ ಭಾಗವಾದ ಬ್ರಾಹ್ಮಣ-ಉಪನಿಷತ್ತು ಪಠಿಸಿದರೂ ಆಗಬಹುದು. ಅದೂ ಆಗದಿದ್ದರೆ ಇತಿಹಾಸಗಳಾದ ರಾಮಾಯಣ-ಭಾರತಗಳ ಪಾರಾಯಣ ಮಾಡಿದರೂ ಸರಿಯೆ, ಅಥವಾ ದೇವರನಾಮ (ಸಂಕೀರ್ತನ)ಗಳನ್ನು ಹಾಡಿದರೆ—ಪಠಿಸಿದರೂ ಸರಿಯೆ. ಅಥವಾ ಭಗವದವತಾರ ಕಥೆಗಳನ್ನು ಪ್ರವಚನ ಮಾಡಿದರೂ ಸರಿಯೆ. ದೇವತೆಗಳೂ, ಪಿತೃಗಳೂ ತೃಪ್ತಿ ಹೊಂದುತ್ತಾರೆ. ಇವೆಲ್ಲವೂ 'ಜ್ಞಾನ ಯಜ್ಞ' ಎಂದು ಕರೆಯಲ್ಪಟ್ಟು ಭಗವತ್ಪ್ರೀತಿಗೆ ಕಾರಣವಾಗುತ್ತೆ. ಈ ಪಾರಾಯಣ ಗಳಿಂದ ತೃಪ್ತರಾದ ದೇವತೆಗಳು ಪಿತೃಗಳು ಈ ರೀತಿ ಹರಸುತ್ತಾರೆ. ಪಾರಾಯಣ ಮಾಡಿದ ಕರ್ತೃವಿಗೆ ಆಯುಸ್ಸು-ತೇಜಸ್ಸು-ವರ್ಚಸ್ಸು-ಸಂಪತ್ತು-ಕೀರ್ತಿ-ಬ್ರಹ್ಮವರ್ಚಸ್ಸು ಮತ್ತು ಅನ್ನ ದಿನೇದಿನೇ ವೃದ್ಧಿಯಾಗಲೆಂದು ಹರಸಿ ಇವನು ನಿತ್ಯತೃಪ್ತನಾಗಿ ಬಾಳಲೆಂದು ಆಶಿಸುತ್ತಾರೆ. ಈ ರೀತಿ ಯಜುರಾರಣ್ಯಕದ ದ್ವಿತೀಯಪ್ರಶ್ನದ ಮಂತ್ರಭಾಗವು ಮೇಲಿನ ತಾತ್ಪರ್ಯವನ್ನು ವಿಶದಪಡಿಸಿರುತ್ತೆ. ಇದನ್ನೇ ವಿಷ್ಣುಪುರಾಣವು ಮೇಲಿನ ಪದ್ಯದಲ್ಲಿ 'ದಶಯಜ್ಞ' ಎಂದು ಹೇಳಿ ಇದರ ಅನುಷ್ಠಾನವು ದೇವತಾಪ್ರೀತಿಗೂ, ತನ್ನ ಶ್ರೇಯಸ್ಸಿಗೂ ಕಾರಣವೆಂದು ತಿಳಿಸಿರುತ್ತೆ. ಭಗವದ್ಗೀತೆಯ ಮೂರನೇ ಅಧ್ಯಾಯದ ೧೦-೧೧-೧೨ನೇ ಪದ್ಯ ಗಳಲ್ಲಿ ಯಜ್ಞದ ವೈಭವವು ವಿಶೇಷವಾದ ರೀತಿಯಲ್ಲಿ ನಿರೂಪಿತವಾಗಿದೆ:

"ಸಹ ಯಜ್ಞೈಃ ಪ್ರಜಾಸ್ಸೃಷ್ಟ್ವಾ ಪುರೋವಾಚ ಪ್ರಜಾಪತಿಃ |
ಅನೇನ ಪ್ರಸವಿಷ್ಯಧ್ವಂ ಏಷವೋಽಸ್ತ್ವಿಷ್ಟಕಾಮಧುಕ್ ||" ಗೀತೆ ೩-೧೦

ಅಂದರೆ ಇಲ್ಲಿ ಯಜ್ಞಾದಿ ಕರ್ಮವನ್ನು ಭಗವತ್ಪ್ರೀತಿಗಾಗಿ ಅಲ್ಲದೆ ಮತ್ತಾವ ಪ್ರಯೋಜನವನ್ನಪೇಕ್ಷಿಸಿ ಮಾಡಬೇಡ. ಅನೇನ ಪ್ರಸವಿಷ್ಯಧ್ವಂ = ಯಜ್ಞದ ಮೂಲಕವಾಗಿ ವೃದ್ಧಿಯನ್ನೂ, ಶ್ರೇಯಸ್ಸನ್ನೂ ಪಡೆಯಿರಿ. 'ಏಷಃ' = ಈ ಯಜ್ಞವು ಅಂದರೆ ಪರಮಪುರುಷಾರಾಧನರೂಪವಾದ ಈ ಕರ್ಮವು 'ಇಷ್ಟ ಕಾಮಧುಕ್' = ನಿಮ್ಮ ಅಭೀಷ್ಟಗಳನ್ನು ನೆರವೇರಿಸುವ ಕಾಮಧೇನುವಾಗಲಿ. ಈ ಯಜ್ಞದ ಭಾವನೆ ಎಷ್ಟು ಸುಂದರವಾಗಿದೆ. ಯಜ್ಞಗಳೊಂದಿಗೇನೆ ಪ್ರಜಾಸೃಷ್ಟಿ. ಈ ಸೃಷ್ಟಿ ಯಜ್ಞದ ಮೇಲೆ ನಿಂತಿದೆ. ಮುಂದಿನ ಪದ್ಯದಲ್ಲೂ:

"ದೇವಾನ್ ಭಾವಯತಾನೇನ ತೇ ದೇವಾಭಾವಯಂತುವಃ |
ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ||" ಗೀತೆ ೩-೧೧

ಇಲ್ಲಿ "ಪರಸ್ಪರಂ ಭಾವಯಂತಃ" ಎಂಬ ಪದದಿಂದ ನಾವು 'ಹವಿಸ್ಸಮರ್ಪಣ ಮೂಲಕ ದೇವತೆಗಳನ್ನು ಆರಾಧಿಸಬೇಕು. ಈ ಯಜ್ಞದಿಂದ ತೃಪ್ತರಾದ ದೇವತೆಗಳು ಕಾಲಕಾಲಕ್ಕೆ ಸರಿಯಾಗಿ ಮಳೆಗರೆದು ಸಸ್ಯಸಮೃದ್ಧಿಯ ಮೂಲಕ ನಮ್ಮನ್ನು ವರ್ಧಿಸಲಿ. ಹೀಗೆ ದೇವತೆಗಳಿಗೂ ಮನುಷ್ಯರಿಗೂ ಪರಸ್ಪರ ಪ್ರೀತಿಯು ಯಜ್ಞದಿಂದ ವೃದ್ಧಿಹೊಂದಿತು. ಯಜ್ಞಭಾವಿತರಾದ ದೇವತೆಗಳು ನಮ್ಮ ಅಭೀಷ್ಟಗಳನ್ನೂ ನೆರವೇರಿಸುತ್ತಾರೆ. ಮೊದಲು ಕೊಟ್ಟು ತಾನು ಉಳಿದಿದ್ದನ್ನು ಅನುಭವಿಸುವುದೇ ನಿಜವಾದ ಯಜ್ಞ.' "ತೇ ನತ್ಯಕ್ತೇನ ಭುಂಜೀಥಾಃ" ಎಂದು ಈಶಾವಾಸ್ಯ ಉಪನಿಷತ್ತು ಹೇಳಿದೆ. ಇದೇ ತಾತ್ಪರ್ಯವನ್ನು ಗೀತೆಯು:

"ಯಜ್ಞ ಶಿಷ್ಟಾಶಿನಸ್ಸಂತಃ ಮುಚ್ಯಂತೇ ಸರ್ವಕಿಲ್ಬಿಷೈಃ ।
ತೇಶ್ವಘಂ ಭುಂಜತೇ ಪಾಪಾಃ ಯೇ ಪಚಂತ್ಯಾತ್ಮಕಾರಣಾತ್ ॥"

ಗೀತೆ ೩–೧೩

ಯಜ್ಞಶಿಷ್ಟಾಶಿನಃ = ಮೇಲೆ ಹೇಳಿದ ಪಂಚಮಹಾಯಜ್ಞಗಳು ಪರಮ ಪುರುಷನ ಆರಾಧನವೆಂದು ಭಾವಿಸಿ, ಧರ್ಮದಿಂದ ಪ್ರಾಪ್ತವಾದ ದ್ರವ್ಯದಿಂದ ಅನ್ನವನ್ನು ಪಕ್ವಮಾಡಿ ಪ್ರಥಮತಃ ಭಗವಂತನಿಗೆ ಅಥವಾ ತದಾತ್ಮಕರಾದ ದೇವತೆಗಳಿಗೆ ನಿವೇದಿಸಬೇಕು. ಅವರಲ್ಲಿ ಉಳಿದ ಆಹಾರವನ್ನು ಭುಜಿಸುವವನೇ ಸಜ್ಜನನು. ಇದರಿಂದ ಆರಾಧಕನ ಸಕಲ ಪಾಪಗಳೂ ಪರಿಹಾರವಾಗುತ್ತವೆ. ಇದಲ್ಲದೆ ಅಧರ್ಮದಿಂದ ದ್ರವ್ಯವನ್ನಾರ್ಜಿಸಿ ತನ್ನ ದೇಹಪೋಷಣೆಗಾಗಿ ಅನ್ನವನ್ನು ಮಾಡಿ ಭಗವದನಿವೇದಿತವಾದ ಅದನ್ನು ತಿನ್ನುವವನು ಪಾಪವನ್ನೇ ಊಟಮಾಡಿದಂತಾಗಿ ಪಾಪಿಗಳಾಗಿಯೇ ಆಗುವರು. ಇವರಿಗೆ ಯಾವ ಶ್ರೇಯಸ್ಸೂ ಇಲ್ಲ.

ಆದ್ದರಿಂದ ಪ್ರಾತಸ್ಸಂಧ್ಯಾವಂದನದ ಉಪಸ್ಥಾನಮಂತ್ರದಲ್ಲೂ "ಸತ್ಯಾಯ ಹವ್ಯಂ ಘೃತವದ್ಭಿರ್ಧೇವ" ಎಂದು ಯಜ್ಞಶಿಷ್ಟವಾದ ಅನ್ನವೇ ಪರಮ ಶ್ರೇಯಸ್ಸಿಗೆ ಕಾರಣವೆಂದು ನಿರೂಪಿತವಾಗಿದೆ. ಇವೆಲ್ಲದರ ಸಾರವೇ ಎಂಬಂತೆ ಶ್ರೀ ಪರಾಶರರು ಈ ವಿಷ್ಣುಪುರಾಣದ ಮೇಲಿನ ಪದ್ಯದಲ್ಲಿ "ಯಜ್ಞೋಽಯಂ ಸರ್ವಕಾಮಧುಕ್" ಎಂದು ದಿವ್ಯವಾದ ವಾಣಿಯಿಂದ ಎಲ್ಲರೂ ಯಜ್ಞಶಿಷ್ಟವಾದ ವಸ್ತುವನ್ನೇ ಅನುಭವಿಸಿರಿ. ನಿಮಗೆ ಶ್ರೇಯಸ್ಸು ವೃದ್ಧಿಯಾಗುವುದೆಂದು ಹರಸಿರುತ್ತಾರೆ.

ವಚನ ವಿ.ಪು. ಪುಟ ೧೧೬, ಸಾಲು ೧೭

ಮೂಲ: ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಂ ।
ಕೋಹ್ಯನ್ಯೋ ಭುವಿ ಮೈತ್ರೇಯ ಮಹಾಭಾರತಕೃದ್ಭವೇತ್ ॥

ವಿ.ಪು. ೩-೪-೫

ಈ ಪದ್ಯದಲ್ಲಿ ಪರಾಶರಬ್ರಹ್ಮರ್ಷಿಗಳು ಕೃಷ್ಣದ್ವೈಪಾಯನರೆಂದು ಪ್ರಸಿದ್ಧರಾದ ವೇದವ್ಯಾಸರ ಮಹಿಮೆಯನ್ನು ಪ್ರಕಾಶಪಡಿಸಿರುತ್ತಾರೆ. ವೇದವ್ಯಾಸರು ಶ್ರೀ ಪರಾಶರರ ಪುತ್ರರು. ತಂದೆಯಾದವನು ತನ್ನ ಮಗನನ್ನೂ ಹೊಗಳಬಾರದೆಂದು ಸುಭಾಷಿತವಿದೆ. "ಲಾಲನೇ ಬಹವೋ ದೋಷಾಃ ತಾಡನೇ ಬಹವೋ ಗುಣಾಃ। ತಸ್ಮಾತ್ಪುತ್ರಂ ಚ ಶಿಷ್ಯಂ ಚ ತಾಡಯೇನ್ನತು ಲಾಲಯೇತ್" ಎಂದು. ಹೀಗಿರುವಲ್ಲಿ ಜ್ಞಾನನಿಧಿಗಳಾದ ಪರಾಶರ ಮುನಿಗಳು ಪುತ್ರನಾದ ವ್ಯಾಸರನ್ನು ಶ್ಲಾಘಿಸಬಹುದೆ? ಶ್ಲಾಘನೆಯು ಉಚಿತವಾದ್ದರಿಂದಲೇ ಹೊಗಳಿರುತ್ತಾರೆ. ವ್ಯಾಸರ ವಂಶಶುದ್ಧಿಯೂ ಪವಿತ್ರವಾದುದು ಮತ್ತು ಕೇಳಿದರೆ ಸುಕೃತವು ವೃದ್ಧಿಯಾಗುವುದು :

"ವ್ಯಾಸಂ ವಸಿಷ್ಠನಪ್ತಾರಂ ಶಕ್ತೇಃ ಪೌತ್ರ ಮಕಲ್ಮಷಂ।
ಪರಾಶರಾತ್ಮಜಂ ವಂದೇ ಶುಕತಾತಂ ತಪೋನಿಧಿಂ ॥"

ವ್ಯಾಸರು ರಾಜರ್ಷಿಯಾದ ವಿಶ್ವಾಮಿತ್ರರನ್ನು ಬ್ರಹ್ಮರ್ಷಿಯನ್ನಾಗಿ ಪರಿವರ್ತನೆಗೊಳಿಸಿದ ವಸಿಷ್ಠ ಬ್ರಹ್ಮರ್ಷಿಗಳ ಪ್ರಪೌತ್ರರು. ವಸಿಷ್ಠ ಮತ್ತು ಅರುಂಧತೀ ದೇವಿಯವರ ಪುತ್ರರಾದ ಶಕ್ತಿಮಹರ್ಷಿಯ ಮೊಮ್ಮಕ್ಕಳು. ವಸಿಷ್ಠ ಮತ್ತು ಪುಲಸ್ತ್ಯರ ಅನುಗ್ರಹದಿಂದ ಪರತತ್ವದ ಜ್ಞಾನವನ್ನು ಪಡೆದು ಪುರಾಣರತ್ನವನ್ನು ರಚಿಸಿದ ಪರಾಶರಬ್ರಹ್ಮರ್ಷಿಗಳ ಸತ್ಪುತ್ರರು. ಪ್ರಾಯೋಪವೇಶದಲ್ಲಿದ್ದ ಪರೀಕ್ಷಿದ್ರಾಜನಿಗೆ ಮೋಕ್ಷವನ್ನು ಕೊಡಿಸಿಕೊಟ್ಟ ಶುಕಬ್ರಹ್ಮರ ತಂದೆಯು. ಇವರೇ ಮಹಾಭಾರತ ಕರ್ತೃ. ಜಗತ್ತಿನಲ್ಲಿ ಅತಿವಿಸ್ತಾರವಾದ ಹಿರಿಯದಾದ ಮೊದಲನೇ ಗ್ರಂಥ. ಅನೇಕ ಧರ್ಮಗಳ ಸಮನ್ವಯವನ್ನು ಇಲ್ಲಿ ನಾವು ಕಾಣುತ್ತೇವೆ. ಸಾಮಾನ್ಯ ಮಾನವ ಇಂತಹ ಗ್ರಂಥವನ್ನು ರಚಿಸಲಾರ. ಆದ್ದರಿಂದ ಓ! ಮೈತ್ರೇಯರೆ! ಮಹಾಭಾರತ ಗ್ರಂಥವನ್ನು ರಚಿಸಿದ ಕೃಷ್ಣದ್ವೈಪಾಯನರೆಂದು ಪ್ರಸಿದ್ಧರಾದ ವ್ಯಾಸರನ್ನು ಅಖಿಲ ಜಗತ್ಸ್ವಾಮಿಯಾದ ನಾರಾಯಣನನ್ನಾಗಿಯೇ ತಿಳಿಯಿರಿ.

ವೇದವೇ ಹಿಂದೂ ಸಂಸ್ಕೃತಿಯ ಮೂಲ. ಸಹಸ್ರ ಶಾಖಾತ್ಮಕವಾದ ವೇದವನ್ನು ಸಂಹಿತೆ-ಬ್ರಾಹ್ಮಣ-ಆರಣ್ಯಕ-ಉಪನಿಷತ್, ಎಂದು ವಿಭಾಗಿಸಿಕೊಟ್ಟವರು ವೇದ ವ್ಯಾಸರು. ಮಾನವನ ಅಭ್ಯುದಯಕ್ಕಾಗಿ ವೇದವು ಯಜ್ಞ-ದಾನ-ತಪಸ್ಸುಗಳನ್ನು ಉಪದೇಶಿಸಿದೆ. ಯಜ್ಞದಾನಗಳನ್ನೇ 'ಧರ್ಮ'ವೆಂದು ಕರೆದು ವ್ಯಾಸರ ಶಿಷ್ಯರಾದ ಜೈಮಿನಿ ಮುನಿಗಳು. 'ಅಥಾತೋಧರ್ಮಜಿಜ್ಞಾಸಾ' ಎಂದು ಆರಂಭವಾಗುವ ಪೂರ್ವಮೀಮಾಂಸಾ ಶಾಸ್ತ್ರವನ್ನು ರಚಿಸಿದರು. ವ್ಯಾಸರು ಪರಬ್ರಹ್ಮನ ವಿಷಯವಾಗಿ 'ಅಥಾತೋ ಬ್ರಹ್ಮ ಜಿಜ್ಞಾಸಾ' ಎಂದಾರಂಭವಾಗುವ ಉತ್ತರ

ಮೀಮಾಂಸಾ ಗ್ರಂಥವನ್ನು ರಚಿಸಿದರು. ಈ ಎರಡು ಮೀಮಾಂಸೆಗಳು ವೇದದ ಅರ್ಥವನ್ನು ಸಮಂಜಸವಾಗಿ ಉಪದೇಶಿಸಿರುವುದರಿಂದ ನಮಗೆ ವೇದವು ಮುಖ್ಯ ಪ್ರಮಾಣವಾಯಿತು.

ವೇದವನ್ನಾಗಲೀ, ವೇದಾರ್ಥಗಳನ್ನು ವಿವರಿಸುವ ಪೂರ್ವೋತ್ತರ ಮೀಮಾಂಸಾ ಗ್ರಂಥವನ್ನಾಗಲಿ ವ್ಯಾಸಂಗಮಾಡಿ ಅದರಲ್ಲಿರುವ ಸಾರವನ್ನು ಗ್ರಹಿಸಲು ಸಾಮಾನ್ಯ ಮಾನವರಿಂದ ಸಾಧ್ಯವಾಗಲಿಲ್ಲ. ಆದ್ದರಿಂದ ಧರ್ಮ ವನ್ನೂ ಮತ್ತು ಬ್ರಹ್ಮವನ್ನೂ ಕಥೆಯ ರೂಪದಲ್ಲಿ ಸುಲಭವಾಗಿ ಸಾಮಾನ್ಯ ಮಾನವನಿಗೂ ತಿಳಿಯಪಡಿಸಲು ದಯಾಳುಗಳಾದ ವೇದವ್ಯಾಸರು 'ಮಹಾ ಭಾರತ'ವೆಂಬ ಇತಿಹಾಸವನ್ನು ರಚಿಸಿದರು. ಮೇಲೆ ನೋಡಲು ಅದು ಕೌರವ-ಪಾಂಡವರ ಕಥೆ. ಒಳಗೆ ಧರ್ಮ ಮತ್ತು ಬ್ರಹ್ಮಗಳ ವಿಷಯಗಳಿಂದ ಅಲಂಕೃತ ವಾಗಿದೆ. "ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್" ಎಂಬು ವುದೇ ಮಹರ್ಷಿಯ ಮುಖ್ಯವಾದ ಉದ್ದೇಶ. ಅನುಶಾಸನಪರ್ವದಲ್ಲಿ ಹೇಳಿರು ವಂತೆ "ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್" ಅಂದರೆ ಮಹಾಭಾರತದಲ್ಲಿ ಹೇಳಿರುವ ವಿಷಯವೇ ಮಿಕ್ಕ ಗ್ರಂಥಗಳಲ್ಲಿದೆ. ಇಲ್ಲಿ ಇಲ್ಲದ ವಿಷಯ ಮತ್ತೆಲ್ಲಿಯೂ ಇಲ್ಲ. ಆದ್ದರಿಂದಲೆ "ವ್ಯಾಸೋಚ್ಛಿಷ್ಟಂ ಜಗತ್ಸರ್ವಂ" ಎಂಬ ನಾಣ್ಣುಡಿ ಹುಟ್ಟಿಕೊಂಡಿದೆ. ಮಹತ್ತರವಾದ ವಿಷಯಗಳ ಚರ್ಚೆಯು ಕಥಾರೂಪವಾಗಿ, ಸಂವಾದದ ರೂಪವಾಗಿ, ಉಪಾಖ್ಯಾನಗಳ ಮೂಲಕವಾಗಿ, ನೀತಿಬೋಧೆಯ ಮೂಲಕ ಚರ್ಚಿತವಾಗಿರುವುದರಿಂದ 'ಮಹಾಭಾರತ' ಎಂಬ ಹೆಸರಿನಿಂದ ಪ್ರಖ್ಯಾತವಾಯಿತು. "ಮಹತ್ವಾತ್ ಭಾರಭೂತತ್ವಾತ್ ಮಹಾಭಾರತಮುಚ್ಯತೇ" ಭೀಷ್ಮಪರ್ವದಲ್ಲಿ ಭಗವದ್ಗೀತೆಯೂ, ಅನುಶಾಸನ ಪರ್ವದಲ್ಲಿ ಶ್ರೀವಿಷ್ಣುಸಹಸ್ರನಾಮವೂ ಇದ್ದು ಭಾರತವೆಂಬ ಕುಲಾಚಲಕ್ಕೆ ಎರಡು ಸ್ವರ್ಣಕಳಶಗಳಂತೆ ಕಂಗೊಳಿಸುತ್ತಿವೆ. ನಿತ್ಯವೂ ಗೀತೆಯನ್ನು ಪಾರಾಯಣ ಮಾಡುತ್ತಾರೆ. ನಿತ್ಯವೂ ಸಹಸ್ರನಾಮವನ್ನು ಪಠಿಸುತ್ತಾರೆ. ಈ ಮಹನೀಯ ಮಹರ್ಷಿಯನ್ನು ಹೇಗೆ ಮರೆಯಲು ಸಾಧ್ಯ? ವೇದಪುರುಷನೂ ಕೂಡ 'ಸಹೋ ವಾಚವ್ಯಾಸಃ ಪಾರಾಶರ್ಯಃ' ಎಂದು ಶ್ಲಾಘಿಸಿ 'ಪರಾಶರ ಪುತ್ರರಾದ ವ್ಯಾಸರು ಹೇಳಿರುವ ವಾಣಿ ಸಂಸಾರಕ್ಕೆ ಮದ್ದು' ಎಂದಿದೆ. "ಪಾರಾಶರ್ಯ ವರ್ಚಸ್ಸುಧಾಂ" ಎಂದು ಬ್ರಹ್ಮಸೂತ್ರಭಾಷ್ಯದ ಪ್ರಾರಂಭದಲ್ಲಿ 'ವ್ಯಾಸರದು ಅಮೃತವಾಣಿ' ಎಂದು ಆಚಾರ್ಯ ರಾಮಾನುಜರು ಶ್ಲಾಘಿಸಿರುತ್ತಾರೆ. "ವ್ಯಾಸಾಯ ವಿಷ್ಣುರೂಪಾಯ" ಎಂದು ವ್ಯಾಸರನ್ನು ನಾರಾಯಣಾಂಶರೆಂದು ಪ್ರಕೃತದಲ್ಲಿ ಪರಾಶರರು ಶಿಷ್ಯರಾದ ಮೈತ್ರೇಯರಿಗೆ ಉಪದೇಶಿಸಿರುವುದು ಸಮಂಜಸವಾಗಿದೆ. ಇಂತಹ ವ್ಯಾಸರಿಗೆ ನಮೋನಮಃ.

ವಚನ. ವಿ.ಪು. ಪುಟ ೧೨೦, ಸಾಲು ೨೭

ಮೂಲ: ಆದ್ಯಂ ಸರ್ವಪುರಾಣಾನಾಂ ಪುರಾಣಂ ಬ್ರಾಹ್ಮಮುಚ್ಯತೇ ।
ಅಷ್ಟಾದಶಪುರಾಣಾನಿ ಪುರಾಣಜ್ಞಾಃ ಪ್ರಚಕ್ಷತೇ ॥
ಬ್ರಾಹ್ಮಂ ಪಾದ್ಮಂ ವೈಷ್ಣವಂ ಚ ಶೈವಂ ಭಾಗವತಂ ತಥಾ ।
ತಥಾನ್ಯಂ ನಾರದೀಯಂ ಚ ಮಾರ್ಕಂಡೇಯಂ ಚ ಸಪ್ತಮಂ ॥
ಆಗ್ನೇಯ ಮಷ್ಟಮಂ ಚೈವ ಭವಿಷ್ಯನ್ನವಮಂ ಸ್ಮೃತಂ ।
ದಶಮಂ ಬ್ರಹ್ಮವೈವರ್ತಂ ಲೈಂಗಮೇಕಾದಶಂ ಸ್ಮೃತಂ ॥
ವಾರಾಹಂ ದ್ವಾದಶಂ ಚೈವ ಸ್ಕಾಂದಂ ಚಾತ್ರ ತ್ರಯೋದಶಂ ।
ಚತುರ್ದಶಂ ವಾಮನಂ ಚ ಕೌರ್ಮಂ ಪಂಚದಶಂ ತಥಾ ॥
ಮಾತ್ಸ್ಯಂ ಚ ಗಾರುಡಂ ಚೈವ ಬ್ರಹ್ಮಾಂಡಂ ಚ ತತಃ ಪರಂ ।
ಮಹಾಪುರಾಣಾನ್ಯೇತಾನಿ ಹ್ಯಷ್ಟಾದಶ ಮಹಾಮುನೇ ॥

ವಿ.ಪು. ೩-೬/೨೦-೨೧-೨೨-೨೪

ಈ ಮೇಲಿನ ಪದ್ಯಗಳಲ್ಲಿ ಪುರಾಣಗಳ ರಚನಾಕ್ರಮವೂ, ಸಂಖ್ಯೆಯೂ ಸೂಚಿಸಲ್ಪಟ್ಟಿದೆ. ಹದಿನೆಂಟು ಪುರಾಣಗಳನ್ನೂ ವ್ಯಾಸಮುನೀಶ್ವರರೇ ರಚಿಸಿದರೆಂದು ಪ್ರಸಿದ್ಧಿ ಇದೆ. "ಅಷ್ಟಾದಶಪುರಾಣಾನಾಂ ವ್ಯಾಸಃ ಕರ್ತಾ ಸ್ವಯಂ ಪ್ರಭುಃ" ಎಂದು. ಆದರೆ ವ್ಯಾಸಮುನೀಶ್ವರರು 'ಪುರಾಣಸಂಹಿತಾ' ಎಂಬ ಬೃಹದ್ಗ್ರಂಥವನ್ನು ಶಿಷ್ಯರಾದ ರೋಮಹರ್ಷಣನಿಗೆ ಉಪದೇಶಿಸಿದರು. ಈ ರೋಮಹರ್ಷಣರೇ ಸೂತಪುರಾಣಿಕರೆಂದು ಪ್ರಖ್ಯಾತಿ ಪಡೆದಿರುತ್ತಾರೆ. ಈ ಸೂತಪುರಾಣಿಕರ ನಾಲ್ಕು ಮಂದಿ ಶಿಷ್ಯರು ನಾಲ್ಕು ಪುರಾಣಸಂಹಿತೆಗಳನ್ನು ರಚಿಸಿದರು (ಇವರ ಹೆಸರು ಮೂಲದಲ್ಲಿದೆ). ಆದ್ದರಿಂದ ಎಲ್ಲಾ ಪುರಾಣಗಳಿಗೂ ನಾಲ್ಕು ಪ್ರಧಾನ ಭೇದಗಳುಂಟಾಗಲು ಕಾರಣವಾಯಿತು. ವಿಷ್ಣುಪುರಾಣದಲ್ಲಿ ಆರು ಪ್ರಧಾನ ಭೇದಗಳಿವೆ. ಈ ಆರು ಭೇದಗಳಿಗೂ ಶ್ರೀ ಪರಾಶರರೇ ಕರ್ತೃಗಳು. ಲೈಂಗಪುರಾಣದಲ್ಲಿ ಇದರ ವಿವರಣೆ ಈ ರೀತಿ ಇದೆ:

"ಪುರಾಣಂ ವೈಷ್ಣವಂ ಚಕ್ರೇ ಪ್ರಸಾದಾದ್ವೈಪರಾಶರಃ ।
ಷಟ್‌ಪ್ರಕಾರಂ ಸಮಸ್ತಾರ್ಥಸೂಚಕಂ ಜ್ಞಾನಸಂಚಯಂ ॥
ದಶಸಾಹಸ್ರ ಸಂಮಿತಂ ಸರ್ವವೇದಾರ್ಥಸಂಯುತಂ ॥" ಎಂದು.

ಶೈವ-ಮಾತ್ಸ್ಯಪುರಾಣಗಳಲ್ಲಿ ವಿಷ್ಣುಪುರಾಣದ ವಿಷಯದಲ್ಲಿ ಈ ರೀತಿ ವಿವರಣೆ ಇದೆ. ವಿಷ್ಣುಪುರಾಣವು ಕೆಲವೆಡೆಯಲ್ಲಿ ಎಂಟು ಸಾವಿರ (ಪದ್ಯ) ಗ್ರಂಥವುಳ್ಳದ್ದೆಂದೂ, ಕೆಲವು ದೇಶಗಳಲ್ಲಿ ಒಂಭತ್ತುಸಾವಿರ ಗ್ರಂಥಪರಿಮಿತಿಯುಳ್ಳದ್ದೆಂದೂ, ಕೆಲವು ಪ್ರದೇಶಗಳಲ್ಲಿ ಇಪ್ಪತ್ತುನಾಲ್ಕುಸಾವಿರ ಗ್ರಂಥಪರಿಮಿತಿಯುಳ್ಳದ್ದೆಂದೂ,

ಮತ್ತೆ ಕೆಲವೆಡೆಗಳಲ್ಲಿ ಹನ್ನೆರಡುಸಾವಿರ ಗ್ರಂಥಪರಿಮಿತಿಯುಳ್ಳದೆಂದೂ ವಿವರಣೆ ಇದೆ. ಆದರೆ ಈಗ ಪ್ರಚಲಿತವಿರುವ ವಿಷ್ಣುಪುರಾಣದಲ್ಲಿ ಆರು ಸಾವಿರ ಗ್ರಂಥ (ಪದ್ಯ)ಗಳಿರುತ್ತವೆ. ಆದರೆ ಈ ಆರು ಭೇದಗಳಲ್ಲಿಯೂ ಸೃಷ್ಟಿ-ಪ್ರಳಯ-ವಂಶ-ಮನ್ವಂತರ-ವಂಶಾನುಚರಿತಗಳೆಂಬ ಐದು ಲಕ್ಷಣಗಳೂ ಒಂದೇ ವಿಧವಾಗಿದೆ.

ಮಾತ್ಸ್ಯಪುರಾಣದಲ್ಲಿ ಪುರಾಣಗಳ ಬಗ್ಗೆ ಕೊಟ್ಟಿರುವ ಕೆಲವು ವಿಶೇಷಗಳನ್ನು ಸಂಗ್ರಹವಾಗಿ ಇಲ್ಲಿ ಸೂಚಿಸಲಾಗಿದೆ. ಬ್ರಾಹ್ಮಪುರಾಣವು ಮೊತ್ತಮೊದಲು ಬ್ರಹ್ಮನಿಂದ ಮರೀಚಿಮಹರ್ಷಿಗೆ ಉಪದೇಶಿಸಲ್ಪಟ್ಟಿತೆಂದೂ, ಈ ಪುರಾಣವು ಹತ್ತುಸಾವಿರ ಗ್ರಂಥಪರಿಮಿತಿಯುಳ್ಳದ್ದೆಂದೂ ಸಹ ಅಲ್ಲೇ ವಿವರಿಸಲ್ಪಟ್ಟಿರುತ್ತೆ.

ಯಥಾ : "ಬ್ರಹ್ಮಣಾಭಿಹಿತಾಪೂರ್ವಂ ಯಾವನ್ಮಾತ್ರಂ ಮರೀಚಯೇ |
ಬ್ರಾಹ್ಮಂ ತದ್ದಶಸಾಹಸ್ರಂ ಪುರಾಣಂ ಪರಿಕೀರ್ತ್ಯತೇ ||" ಎಂದು

ಎರಡನೆಯದು ಪಾದ್ಮಪುರಾಣ. ಇದರ ವಿಚಾರವಾಗಿ ಹೀಗಿದೆ:
"ಏಕದೇವ ಚ ವೈಬ್ರಾಹ್ಮಂ ಪಾದ್ಮಕಲ್ಪೇ | ಜಗದ್ಧಿತಂ |
ಪಾದ್ಮಂ ತತ್ಪಂಚಪಂಚಾಶತ್ಸಹಸ್ರಾಣಿ ನಿಗದ್ಯತೇ ||"

ಬ್ರಾಹ್ಮಪುರಾಣವೇ ಜಗತ್ತಿನ ಹಿತಕ್ಕಾಗಿ ಪಾದ್ಮಕಲ್ಪದಲ್ಲಿ ಮತ್ತಷ್ಟು ವಿಸ್ತರಿಸಲ್ಪಟ್ಟು ಐವತ್ತೈದು ಸಹಸ್ರ ಗ್ರಂಥ ಪರಿಮಿತಿ ಹೊಂದಿ 'ಪಾದ್ಮಪುರಾಣ'ವೆಂದು ಪ್ರಸಿದ್ಧಿಯಾಯಿತು.

ಮೂರನೆಯದು ವಿಷ್ಣುಪುರಾಣ :
"ವಾರಾಹ ಕಲ್ಪವೃತ್ತಾಂತಮಧಿಕೃತ್ಯಪರಾಶರಃ |
ಯಾಗ್ರಾಹಧರ್ಮಾನಖಿಲಾನ್ ತದ್ಯುಕ್ತಂ ವೈಷ್ಣವಂ ವಿಮಃ ||
ವಿಷ್ಣ್ವಾಖ್ಯಮಷ್ಟಸಾಹಸ್ರಂ ತತ್ಪುರಾಣಂ ವಿದುರ್ಬುಧಾಃ ||"

ಈಗ ನಡೆಯುತ್ತಿರುವುದು ಶ್ವೇತವರಾಹಕಲ್ಪ. ಈ ಕಲ್ಪದಲ್ಲಿಯೇ ಶ್ರೀ ಪರಾಶರ ಬ್ರಹ್ಮರ್ಷಿಗಳು ಈ ಕಲ್ಪದ ವೃತ್ತಾಂತಗಳನ್ನೂ, ಅನೇಕ ಧರ್ಮರಹಸ್ಯಗಳನ್ನೂ ಮೈತ್ರೇಯರಿಗೆ ಉಪದೇಶಿಸಿದರು. ಇದರಲ್ಲಿ ಎಂಟು ಸಹಸ್ರ ಗ್ರಂಥಗಳಿರುತ್ತವೆ. ಮೇಲೆ ತಿಳಿಸಿರುವಂತೆ ಈ ಪುರಾಣದಲ್ಲಿ ಆರು ಪ್ರಭೇದಗಳಿದ್ದು ಈಗಿರುವ ವಿಷ್ಣುಪುರಾಣದಲ್ಲಿ ಆರು ಸಾವಿರ ಪದ್ಯಗಳಿರುತ್ತವೆ.

ನಾಲ್ಕನೆಯದು ಶೈವಪುರಾಣ :
"ಶ್ವೇತಕಲ್ಪೇ ಪ್ರಸಂಗೇನ ಧರ್ಮಾನ್ ವಾಯುರಿಹಾಬ್ರವೀತ್ |

ಯತ್ರ ತದ್ವಾಯವೀಯಂ ಸ್ಯಾದ್ರುದ್ರಮಾಹಾತ್ಮ್ಯಸಂಯುತಂ ||
ಚತುರ್ವಿಂಶತ್ಸಹಸ್ರಾಣಿ ಪುರಾಣಂ ಶೈವ ಮುಚ್ಯತೇ ||"

ಶ್ವೇತಕಲ್ಪದಲ್ಲಿ ಸಂದರ್ಭಾನುಸಾರ ವಾಯುವು ಕೆಲವು ಧರ್ಮಗಳನ್ನು ಪ್ರಕಾಶಕ್ಕೆ ತಂದನು. ಮುಖ್ಯವಾಗಿ ಈ ಪುರಾಣದಲ್ಲಿ ರುದ್ರನ ಮಾಹಾತ್ಮ್ಯೆಯು ವಿವರಿಸಲ್ಪಟ್ಟಿದೆ. ಇಪ್ಪತ್ತುನಾಲ್ಕುಸಾವಿರ ಗ್ರಂಥಪರಿಮಿತಿಯುಳ್ಳ ಈ ಪುರಾಣವು ಶೈವ ಪುರಾಣವೆಂದು ಪ್ರಸಿದ್ಧಿಯಾಗಿದೆ.

ಐದನೆಯದು ಭಾಗವತಪುರಾಣ :

"ಯತ್ರಾಧಿಕೃತ್ಯ ಗಾಯತ್ರೀಂ ವರ್ಣ್ಯತೇ ಧರ್ಮವಿಸ್ತರಃ |
ವೃತ್ರಾಸುರವಧೋಯತ್ರ ತದ್ಭಾಗವತ ಮುಚ್ಯತೇ ||
ಅಷ್ಟಾದಶಸಹಸ್ರಾಣಿ ತದ್ಭಾಗವತ ಮುಚ್ಯತೇ ||"

ಗಾಯತ್ರೀ ಮಂತ್ರದ ಅರ್ಥವಿವರಣೆಯಿಂದ ಪ್ರಾರಂಭವಾಗಿ ವಿಸ್ತಾರವಾಗಿ ಅನೇಕ ಧರ್ಮಗಳ ವಿವರಣೆ ಇದೆ. ಇದರಲ್ಲಿ ಹದಿನೆಂಟುಸಾವಿರ ಪದ್ಯಗಳಿವೆ. ಇದಕ್ಕೆ 'ಭಾಗವತ' ಪುರಾಣವೆಂದು ಹೆಸರು.

ಆರನೆಯದು ನಾರದೀಯ ಪುರಾಣ :

"ಯತ್ರಾಹ ನಾರದೋ ಧರ್ಮಾನ್ ಬೃಹತ್ಕಲ್ಪಾಶ್ರಯಾನಿಹ |
ಪಂಚವಿಂಶತ್ಸಸ್ರಾಣಿ ನಾರದೀಯಂ ತದುಚ್ಯತೇ ||"

ಬೃಹತ್ಕಲ್ಪದಲ್ಲಿ ನಾರದರು ವಿವರಿಸಿದ ಧರ್ಮಗಳು ಇಪ್ಪತ್ತೈದುಸಹಸ್ರ ಗ್ರಂಥ ಪರಿಮಿತಿ ಇದ್ದು 'ನಾರದೀಯ ಪುರಾಣ'ವೆಂದು ಪ್ರಸಿದ್ಧಿಯಾಗಿದೆ.

ಏಳನೆಯದು ಮಾರ್ಕಂಡೇಯ ಪುರಾಣ :

"ಯತ್ರಾಧಿಕೃತ್ಯ ಶಕುನಿಂ ಧರ್ಮಾಧರ್ಮವಿಚಾರಣಾ |
ತದ್ವಾತ್ರಿಂಶತ್ಸಾಹಸ್ರಂ ಸ್ಯೈ ಮಾರ್ಕಂಡೇಯ ಮಿಹೋಚ್ಯತೇ ||"

ಶಕುನಿಯನ್ನು ಕುರಿತು ಧರ್ಮದ ಮತ್ತು ಅಧರ್ಮದ ಬಗ್ಗೆ ಚರ್ಚಿಸಿ ಮೂವತ್ತೆರಡುಸಾವಿರ ಗ್ರಂಥಪರಿಮಿತಿ ಇರುವ ಪುರಾಣವು ಮಾರ್ಕಂಡೇಯ ಪುರಾಣವೆಂದು ಪ್ರಸಿದ್ಧಿಪಡೆದಿದೆ.

ಎಂಟನೆಯದು ಆಗ್ನೇಯಪುರಾಣ:

"ಶಾಪಾವಸಾನೇ ಭೃಗುಣಾ ಋಷಿಣಾ ಯತ್ರ ಪ್ರಕಾಶಿತಂ।
ಆಗ್ನೇಯಂ ಚಾಷ್ಟಸಹಸ್ರಂ ಸರ್ವಕ್ರತು ಫಲಪ್ರದಂ ॥"

ಭೃಗುಮಹರ್ಷಿಯು ತಮ್ಮ ಶಾಪವು ಮುಗಿದ ಮೇಲೆ ಎಂಟು ಸಹಸ್ರ ಗ್ರಂಥಪರಿಮಿತಿಯುಳ್ಳ ಆಗ್ನೇಯ ಪುರಾಣವನ್ನು ಪ್ರಕಾಶಕ್ಕೆ ತಂದರು. ಇದರಲ್ಲಿ ಹೇಳಿರುವ ಯಜ್ಞಗಳನ್ನು ಅನುಷ್ಠಿಸಿದರೂ ಮತ್ತು ಪುರಾಣವನ್ನು ಪಠಿಸಿದರೂ ಸಹ ಸರ್ವಯಜ್ಞಗಳಿಂದ ಬರುವ ಫಲವು ಬರುವುದಾಗಿ ಫಲಶ್ರುತಿಯೂ ಸಹ ಸೂಚಿಸಲ್ಪಟ್ಟಿದೆ.

ಒಂಭತ್ತನೆಯದು ಭವಿಷ್ಯಪುರಾಣ:

"ಶತಾನೀಕೇನ ಪೃಷ್ಟೇನ ವ್ಯಾಸಶಿಷ್ಯೇಣ ಧೀಮತಾ।
ಸೌರಾಧರ್ಮಾ ವಿಶೇಷೇಣ ವ್ಯಾಖ್ಯಾತಾಸ್ತು ಸುಮಂತುನಾ
ಏಕತ್ರಿಂಶತ್ಸಹಸ್ರಾಣಿ ಭವಿಷ್ಯಾಖ್ಯಂ ಸುಭಾಷಿತಂ ॥"

ಸುಮಂತು ಎಂಬ ಮುನಿಯು ವ್ಯಾಸಶಿಷ್ಯನಾದ ಶತಾನೀಕನಿಗೆ ಇಪ್ಪತ್ತೊಂದು ಸಹಸ್ರ ಗ್ರಂಥಪರಿಮಿತಿ ಇರುವ ಭವಿಷ್ಯಪುರಾಣವನ್ನು ಉಪದೇಶಿಸಿದನು. ಈ ಪುರಾಣದಲ್ಲಿ ಸೌರಧರ್ಮವೂ, ವಿಶೇಷವಾಗಿ ಸುಭಾಷಿತಗಳೂ ಹೇಳಲ್ಪಟ್ಟಿರುತ್ತೆ.

ಹತ್ತನೆಯದು ಬ್ರಹ್ಮವೈವರ್ತಪುರಾಣ:

"ಯತ್ರ ವೈ ವೈಷ್ಣವಾಧರ್ಮಾಃ ವಸಿಷ್ಠೇನ ಮಹಾತ್ಮನಾ।
ಅಂಬರೀಷಸ್ಯ ವೈಪ್ರೋಕ್ತಾಃ ಸರ್ಗೋಬ್ರಾಹ್ಮಸ್ಥಿತ್ಯೈವ ಚ॥
ಪುರಾಣಂ ಬ್ರಹ್ಮವೈವರ್ತಂ ತಾದ್ವಾದಶಸಹಸ್ರಕಂ ॥"

ವಸಿಷ್ಠರು ಅಂಬರೀಷ ಚಕ್ರವರ್ತಿಗೆ ಈ ಪುರಾಣವನ್ನುಪದೇಶಿಸಿದರು. ಅಂಬರೀಷನು ಪರಮ ವಿಷ್ಣುಭಕ್ತನು. ಅಂಬರೀಷನ ಪ್ರಶ್ನೆಯನ್ನನುಸರಿಸಿ ವಿಶೇಷವಾಗಿ ವಿಷ್ಣುಧರ್ಮದ ವಿವರಣೆ ಈ ಪುರಾಣದಲ್ಲಿದೆ. ಈ ಪುರಾಣದಲ್ಲಿ ಹನ್ನೆರಡು ಸಹಸ್ರ ಗ್ರಂಥಗಳಿವೆ.

ಹನ್ನೊಂದನೆಯದು:

"ಯತ್ರಾದೀಶಾನಕಲ್ಪಸ್ಯ ವೃತ್ತಾಂತಮಧಿಕೃತ್ಯ ಚ।
ನಂದಿನಾ ಲೈಂಗಮುತ್ಯುಕ್ತಂ ಏಕಾದಶಸಹಸ್ರಕಂ ॥"

ನಂದಿಯು ಈಶಾನಕಲ್ಪದ ವೃತ್ತಾಂತವನ್ನು ಕುರಿತು ಲೈಂಗಪುರಾಣವನ್ನು ರಚಿಸಿರುತ್ತಾನೆ. ಇದರಲ್ಲಿ ಹನ್ನೊಂದು ಸಹಸ್ರ ಪದ್ಯಗಳಿವೆ.

ಹನ್ನೆರಡನೆಯದು ವಾರಾಹಪುರಾಣ :

"ಮಹಾವರಾಹಸ್ಯ ಪುನಃ ಮಾಹಾತ್ಮ್ಯಮಧಿಕೃತ್ಯ ಚ ।
ವಿಷ್ಣುನಾಭಿಹಿತಂಕ್ಷೋಣ್ಯಾಃ ತದ್ವಾರಾಹಮಿಹೋಚ್ಯತೇ ॥
ಮಾನವಸ್ಯ ಪ್ರಸಂಗೇನ ಕಲ್ಪಸ್ಯ ಮುನಿಸತ್ತಮಾಃ ।
ಚತುರ್ವಿಂಶತ್ಸಹಸ್ರಾಣಿ ತತ್ಪುರಾಣಮಿಹೋಚ್ಯತೇ ॥"

ಮಾನವಕಲ್ಪದಲ್ಲಿ ವರಾಹಮೂರ್ತಿಯು ಭೂದೇವಿಯನ್ನು ಕುರಿತು ಉಪದೇಶಿಸಿದ ಪುರಾಣಕ್ಕೆ ವಾರಾಹಪುರಾಣವೆಂದು ಹೆಸರು. ಇದರಲ್ಲಿ ಇಪ್ಪತ್ತುನಾಲ್ಕು ಸಹಸ್ರ ಪದ್ಯಗಳಿವೆ. ಶ್ವೇತವರಾಹಮೂರ್ತಿಯ ವೈಭವವು ಈ ಪುರಾಣದಲ್ಲಿ ವರ್ಣಿತ ವಾಗಿದೆ.

ಹದಿಮೂರನೆಯದು ಸ್ಕಾಂದಪುರಾಣ :

"ಯತ್ರ ಮಾಹೇಶ್ವರಾ ಧರ್ಮಾನಧಿಕೃತ್ಯ ಚ ಷಣ್ಮುಖಃ ।
ಕಲ್ಪೇತತ್ಪುರುಷೇ ರುದ್ರಚರಿತೈರುಪಬೃಂಹಿತಂ ॥
ಸ್ಕಾಂದಂ ನಾಮಪುರಾಣಂ ತತ್ಸಹಸ್ರಶತಸಮ್ಮಿತಂ ॥"

ಷಣ್ಮುಖನಿಗೆ ಸ್ಕಾಂದನೆಂದೇ ಹೆಸರು. ಷಣ್ಮುಖನೇ ರುದ್ರವೈಭವವನ್ನು ಪ್ರಕಾಶ ಪಡಿಸಲು ಈ ಪುರಾಣವನ್ನು ರಚಿಸಿದನು. ಇದರಲ್ಲಿ ಈಶ್ವರಧರ್ಮಗಳು ನಿರೂಪಿತವಾಗಿವೆ. ಶಂಕರನ ಚರಿತ್ರೆಯೂ ಲೀಲೆಯೂ ಈ ಪುರಾಣದಲ್ಲಿ ಹೇಳಿರುತ್ತೆ. ಇದು ತತ್ಪುರುಷಕಲ್ಪದಲ್ಲಿ ಪ್ರಕಾಶಕ್ಕೆ ಬಂದು ಸ್ಕಾಂದಪುರಾಣ ವೆಂದು ಪ್ರಸಿದ್ಧವಾಗಿದೆ. ಇದರಲ್ಲಿ ಒಂದು ಲಕ್ಷ ಪದ್ಯಗಳಿವೆ.

ಹದಿನಾಲ್ಕನೆಯದು ವಾಮನಪುರಾಣ :

"ತ್ರಿವಿಕ್ರಮಸ್ಯ ಮಾಹಾತ್ಮ್ಯಂ ಅಧಿಕೃತ್ಯ ಚತುರ್ಮುಖಃ ।
ತ್ರಿವರ್ಗಂಚ ತ್ರಿದೈವತ್ಯಂ ವಾಮನಂ ಪರಿಕೀರ್ತ್ಯತೇ ॥
ಚತುರ್ದಶ ಸಹಸ್ರಾಣಿ ಶ್ವೇತಕಲ್ಪಾನುಗಂ ಶಿವಂ ।"

ಚತುರ್ಮುಖನು ಶ್ವೇತಕಲ್ಪದಲ್ಲಿ ವಾಮನ ತ್ರಿವಿಕ್ರಮನ ಮಾಹಾತ್ಮ್ಯವನ್ನು ಪ್ರಕಾಶಕ್ಕೆ ತಂದನು. ಇದರಲ್ಲಿ ಹದಿನಾಲ್ಕು ಸಹಸ್ರ ಪದ್ಯಗಳಿವೆ. ವಾಮನ ಪುರಾಣವೆಂದು ಪ್ರಸಿದ್ಧವಾಗಿದೆ.

ಹದಿನೈದನೆಯದು ಕೂರ್ಮಪುರಾಣ :

"ಯತ್ರ ಧರ್ಮಾರ್ಥಕಾಮಾನಾಂ ಮೋಕ್ಷಸ್ಯ ಚ ರಸಾತಲೇ |
ಮಾಹಾತ್ಮ್ಯಂ ಕಥಯಾಮಾಸ ಕೂರ್ಮರೂಪೀ ಜನಾರ್ದನಃ ||
ಇಂದ್ರದ್ಯುಮ್ನ ಪ್ರಸಂಗೇನ ಋಷಿಭ್ಯಶ್ಯಕ್ರಸನ್ನಿಧೌ |
ಕೌರ್ಮಂ ತತ್ ಷಟ್‌ಸಹಸ್ರಾಣಿ ಅಗ್ನಿಕಲ್ಪಾನುಷಂಗಿಕಂ ||"

ಕೂರ್ಮರೂಪಿಯಾದ ನಾರಾಯಣನು ದೇವೇಂದ್ರನ ಸಮಕ್ಷಮದಲ್ಲಿ ಋಷಿಗಳಿಗೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳ ಮಹಿಮೆಯನ್ನು ಹೇಳಿದನು. ಇಂದ್ರದ್ಯುಮ್ನನೆಂಬ ರಾಜನ ಪ್ರಸಂಗದಿಂದ ರಸಾತಲದಲ್ಲಿ ಅಗ್ನಿಕಲ್ಪದಲ್ಲಿ ಕೂರ್ಮನು ಹೇಳಿದ್ದರಿಂದ ಇದು ಕೂರ್ಮಪುರಾಣವೆಂದು ಪ್ರಸಿದ್ಧಿಯಾಗಿದೆ. ಇದರಲ್ಲಿ ಆರು ಸಾವಿರ ಪದ್ಯಗಳಿವೆ.

ಹದಿನಾರನೆಯದು ಮಾತ್ಸ್ಯಪುರಾಣ :

"ಶ್ರುತೀನಾಂ ಯತ್ರ ಕಲ್ಪಾದೌ ಪ್ರವೃತ್ಯರ್ಥಂ ಜನಾರ್ದನಃ |
ಮತ್ಸ್ಯರೂಪೀ ಚ ಮನವೇ ನರಸಿಂಹೋಪವರ್ಣನಂ |
ಅಧಿಕೃತ್ಯಾಬ್ರವೀತ್ಸಪ್ತ ಕಲ್ಪವೃತ್ತಂ ಸಹವ್ರತಂ ||
ತನ್ಮಾತ್ಸ್ಯಮಿತಿ ಜಾನೀಧ್ವಂ ಸಹಸ್ರಾಣಿ ಚತುರ್ದಶ ||"

ಮತ್ಸ್ಯರೂಪಿ ಜನಾರ್ದನನು ಶ್ರುತ್ಯರ್ಥಗಳನ್ನು ನಿರೂಪಿಸುವುದಕ್ಕಾಗಿ ಮನು ಚಕ್ರವರ್ತಿಗೆ ಈ ಪುರಾಣವನ್ನುಪದೇಶಿಸಿದನು. ಇದರಲ್ಲಿ ಸಪ್ತಕಲ್ಪಗಳ ವೃತ್ತಾಂತಗಳೂ, ಅನೇಕ ವ್ರತಗಳ ವಿಷಯಗಳೂ ನಿರೂಪಿತವಾಗಿದೆ. ಇದರಲ್ಲಿ ಹದಿನಾಲ್ಕು ಸಹಸ್ರ ಪದ್ಯಗಳಿವೆ.

ಹದಿನೇಳನೆಯದು ಗರುಡಪುರಾಣ :

ಯಥಾ ಚ ಗಾರುಡೇ ಕಲ್ಪೇ ವಿಶ್ವಾಂಡಂ ಗರುಡೋದ್ಭವಂ |
ಅಧಿಕೃತ್ಯಾಬ್ರವೀದ್ವಿಷ್ಣುಃ ಗಾರುಡಂ ತದಿಹೋಚ್ಯತೇ ||
ತತಷೋಡಶ ಸಹಸ್ರಾಣಿ ಗೃಪತೇಽತ್ರಿಹಪಠ್ಯತೇ ||

ಗಾರುಡ ಕಲ್ಪದಲ್ಲಿ ವಿಷ್ಣುವು ಈ ಬ್ರಹ್ಮಾಂಡವೆಲ್ಲವೂ ಗರುಡನಿಂದಾದುದೆಂದು ವಿಷ್ಣುವು ಗರುಡನಿಗೆ ಉಪದೇಶಿಸಿದನು. ಇದರಲ್ಲಿ ಹದಿನಾರು ಸಹಸ್ರ ಪದ್ಯಗಳಿವೆ.

ಹದಿನೆಂಟನೆಯದು ಬ್ರಹ್ಮಾಂಡ ಪುರಾಣ :

"ಬ್ರಹ್ಮಾ ಬ್ರಹ್ಮಾಂಡ ಮಾಹಾತ್ಮ್ಯಂ ಅಧಿಕೃತ್ಯಾಬ್ರವೀತ್ಪುನಃ |
ತಚ್ಚದ್ವಾದಶಸಾಹಸ್ರಂ ಬ್ರಹ್ಮಾಂಡ ದ್ವಿಶತಾಧಿಕಮ್ |

ಭವಿಷ್ಯಾಣಾಂಚ ಕಲ್ಪಾನಾಂ ಶ್ರೂಯತೇ ಯತ್ರವಿಸ್ತರಃ।
ತದ್ಬ್ರಹ್ಮಾಂಡಂಪುರಾಣಂತು ಬ್ರಹ್ಮಣಾಸಮುದಾಹೃತಂ ||"

ಬ್ರಹ್ಮಾಂಡದ ಮಹಿಮೆಯನ್ನಧಿಕರಿಸಿ ಬ್ರಹ್ಮನು ಉಪದೇಶಿಸಿರುವ ಪುರಾಣಕ್ಕೆ ಬ್ರಹ್ಮಾಂಡ ಪುರಾಣವೆಂದು ಹೆಸರು. ಭವಿಷ್ಯಕಲ್ಪಗಳ ವಿಸ್ತಾರ ವೃತ್ತಾಂತವೂ ಈ ಪುರಾಣದಲ್ಲಿ ಚಿತ್ರಿಸಲ್ಪಟ್ಟಿದೆ. ಇದರಲ್ಲಿ ಹನ್ನೆರಡುಸಾವಿರ ಪದ್ಯಗಳಿವೆ.

ಮೈತ್ರೇಯರೇ ಈಗ ನಿಮಗೆ ಹೇಳುತ್ತಿರುವುದು ವಿಷ್ಣುಪುರಾಣವು. ಇದು ಪದ್ಮಪುರಾಣಾನಂತರ ಪ್ರಕಾಶಕ್ಕೆ ಬಂದಿತು. ಸೃಷ್ಟಿ-ಪ್ರಳಯ-ಮನ್ವಂತರಗಳ ವಿಷಯಗಳು ಎಲ್ಲಾ ಪುರಾಣಗಳಿಗೂ ಸಾಮಾನ್ಯ ಲಕ್ಷಣ. ಎಲ್ಲಾ ಪುರಾಣಗಳಲ್ಲೂ ವಿಷ್ಣುವಿನ ಮಹಿಮೆಯೇ ವಿವರಿಸಲ್ಪಟ್ಟಿರುತ್ತೆ. ಸರ್ಗಾದಿಗಳೆಲ್ಲವೂ ವಿಷ್ಣುಕರ್ತೃಕಗಳೇ. ಇದಕ್ಕೆ ಶ್ರುತಿಪ್ರಮಾಣವೂ ಉಂಟು. "ಯತೋವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿಜೀವಂತಿ. ಯತ್ಪ್ರಯಂತ್ಯಭಸಂವಿಶಂತೀತಿ" ಅಂದರೆ ಯಾವನಿಂದ ಭೂತವರ್ಗಗಳು ಸೃಷ್ಟವಾಗಿ, ಯಾವನಿಂದಲೇ ರಕ್ಷಿತವಾಗಿ, ಅಂತ್ಯದಲ್ಲಿ ಯಾವನನ್ನೇ ಹೋಗಿ ಸೇರುತ್ತದೋ ಆತನೇ ಜಗತ್ಕಾರಣನು. ಅವನೇ ನಾರಾಯಣನು. "ಏಕೋಹವೈ ನಾರಾಯಣ ಆಸೀಕ, ನ ಬ್ರಹ್ಮಾನೇಶಾನಃ, ನೇಮೇ ದ್ಯಾವಾಪೃಥಿವೀ ಇತ್ಯಾದಿ ಶ್ರುತಿವಾಕ್ಯಗಳೂ, ನಾರಾಯಣನ ಕರ್ತೃತ್ವವನ್ನೂ, ವ್ಯಾಪಿತ್ವವನ್ನೂ ಸಮರ್ಥಿಸುತ್ತದೆ. ಈ ತಾತ್ಪರ್ಯವನ್ನೇ ವಿಷ್ಣುಪುರಾಣವೂ ಬೋಧಿಸುತ್ತದೆ. ಯಥಾ:

"ಸರ್ವಂ ವಿಷ್ಣುಮಯಂ ಬ್ರಹ್ಮನ್ನಿತಿಪೌರಾಣಿಕಂ ವಚಃ।
ಏವಮೇವಪುರಾಣೇಷು ದಶಸ್ವಷ್ಟಸು ನಾನ್ಯಥಾ ||
ಅನ್ಯಥಾಯೇಪ್ರಪದ್ಯಂತೇ ನಾರಕಾಸ್ತೇ ಭವಂತಿವೈ ||"

ಇತ್ಯಾದಿ ಪುರಾಣವಚನಗಳೂ ವಿಷ್ಣುವಿನ ಪರತ್ವವನ್ನೇ ಬೋಧಿಸುತ್ತವೆ. ಅಲ್ಲದೆ ಶ್ರುತ್ಯರ್ಥದ ಉಪಬೃಂಹಣಕ್ಕಾಗಿಯೇ ಪುರಾಣೇತಿಹಾಸಗಳು ಹೊರಟಿರುತ್ತವೆ. "ಇತಿಹಾಸಪುರಾಣಾಭ್ಯಾಂವೇದಂ ಸಮುಪಬೃಂಹಯೇತ್" ಎಂದು.

ಈ ಮೇಲೆ ವಿವರಿಸಿರುವ ಮಾತ್ಸ್ಯಪುರಾಣದ ಪ್ರಮಾಣಬಲದಿಂದ ಬೇರೆ ಬೇರೆ ಕಲ್ಪಗಳಲ್ಲಿ ಬೇರೆಬೇರೆ ಪುರಾಣಗಳು ಪ್ರಕಾಶಕ್ಕೆ ಬಂದವೆಂದು ಸ್ಪಷ್ಟವಾಗುತ್ತದೆ. ಅಲ್ಲದೆ ಅವು ಏಕಕರ್ತೃಕಗಳೂ ಅಲ್ಲ. ಹಾಗಾದರೆ ಹದಿನೆಂಟು ಪುರಾಣಗಳೂ ವ್ಯಾಸರಿಂದ ರಚಿತವಾದುವು ಎಂದು ಹೇಗೆ ಸಮಂಜಸವಾದೀತು ಎಂಬ ಸಂದೇಹವೂ ಉಂಟಾಗುತ್ತೆ. ಇದಕ್ಕೆ ಸಮಾಧಾನವೂ ಅಲ್ಲೇ ಹೇಳಲ್ಪಟ್ಟಿದೆ.

ಅಲ್ಲದೆ ಪುರಾಣ ರಚನೆ ಮೊದಲು. ಅನಂತರ ವೇದಗಳ ಪ್ರಕಾಶವೆಂತಲೂ ಅಲ್ಲೇ ತಿಳಿಯಬಂದಿರುತ್ತೆ. ಯಥಾ:

"ಪುರಾಣಂ ಸರ್ವಶಾಸ್ತ್ರಾಣಾಂ ಪ್ರಥಮಂ ಬ್ರಾಹ್ಮಣಂ ಸ್ಮೃತಂ ।
ಅನಂತರಂ ತು ವಕ್ತ್ರೇಭ್ಯೋ ವೇದಾಸ್ತಸ್ತ ವಿನಿರ್ಗತಾಃ ॥
ಪುರಾಣಮೇಕಮೇವಾಸೀ ಚ್ಛತಕೋಟಿಪ್ರವಿಸ್ತರಂ ॥"

"ಮೊತ್ತಮೊದಲು ಬ್ರಹ್ಮನು ಬ್ರಹ್ಮಾಂಡಪುರಾಣವನ್ನೂ ಪ್ರಕಾಶಕ್ಕೆ ತಂದನು. ನೂರು ಕೋಟಿ ಗ್ರಂಥಪರಿಮಿತವಾಗಿ ಇದೊಂದೇ ಪುರಾಣವಾಗಿತ್ತು. ಅನಂತರ ಅವನ ಬಾಯಿಂದ ವೇದಗಳು ಹೊರಟವು" ಎಂದು. ಧರ್ಮಸಂಹಿತಾ ಎಂಬ ಗ್ರಂಥ ದಲ್ಲಿ ಈ ವಿವರಣೆ ಇದೆ.

"ಬ್ರಾಹ್ಮಮೇವ ಕೃತೇ ಚಾದ್ಯಂ ಪುರಾಣಂ ಶ್ರುತಿಸಮ್ಮತಂ ।
ಅಷ್ಟಾದಶವಿಧಂ ತಚ್ಚ ಶತಕೋಟಿಪ್ರಭೇದತಃ ॥
ತಸ್ಮಾತ್ ತ್ರೇತಾಯುಗೇ ಪ್ರೋಕ್ತಂ ಶತಮೇಕಾದಶೋತ್ತರಂ ।
ಪುರಾಣಸಂಹಿತಾಕಿರ್ತಾ ದ್ವಾಪರೇವ್ಯಾಸ ಏವ ಹಿ ॥

ಮಾತ್ಸ್ಯೇಚ: "ತದರ್ಥೋಽತ್ರ ಚತುರ್ಲಕ್ಷ್ಯೆ ಸ್ಸಂಕ್ಷೇಪೇಣನಿವೇಶಿತಃ ।
ಪುರಾಣಾನಿದಶಾಷ್ಟಾ ಚ ಸಾಂಪ್ರತಂ ತದಿಹೋಚ್ಯತೇ ॥"

ಎಂಬ ಈ ನಿರ್ಣಯಗಳ ಪ್ರಕಾರ ಈ ಅಭಿಪ್ರಾಯವು ಸ್ಪಷ್ಟವಾಗುತ್ತೆ.

ಕೃತಯುಗದಲ್ಲಿ ವೇದಗಳಿಗಿಂತ ಮುಂಚೆಯೇ ನೂರು ಕೋಟಿ ಗ್ರಂಥವಿಸ್ತಾರ ವಾದ ಬ್ರಾಹ್ಮಪುರಾಣವು ಬ್ರಹ್ಮನಿಂದ ಸೃಷ್ಟವಾಯಿತು. ಇದೇನೇ ತ್ರೇತಾಯುಗ ದಲ್ಲಿ ಬ್ರಹ್ಮನೇ ಮೊದಲಾದ ಹದಿನೆಂಟು ಮಂದಿ ಋಷಿಗಳಿಂದ ಒಂದು ಕೋಟಿ ಗ್ರಂಥಪರಿಮಿತಿಯುಳ್ಳ ಬ್ರಾಹ್ಮ-ಪಾದ್ಮ-ವೈಷ್ಣವ ಮುಂತಾದ ಹದಿನೆಂಟು ಪುರಾಣಗಳು ಸೃಷ್ಟವಾದುವು. ಪುನಃ ದ್ವಾಪರಯುಗದ ಕಡೆಯಲ್ಲಿ ಮೇಲೆ ತಿಳಿಸಿರುವ ವಿಸ್ತಾರವಾದ ಪುರಾಣಗಳ ಸಾರವನ್ನು ನಾಲ್ಕು ಲಕ್ಷ ಗ್ರಂಥ ಪರಿಮಿತಿಯಲ್ಲಿ ಸತ್ಯವತೀಪುತ್ರರಾದ ವೇದವ್ಯಾಸರು ಪ್ರಕಾಶಕ್ಕೆ ತಂದರು. ಆದ್ದರಿಂದ ಹದಿನೆಂಟು ಪುರಾಣಗಳು ವ್ಯಾಸರಚಿತವಾದುವುವೆಂದು ವ್ಯವಹಾರವು ಬಂದಿರುತ್ತೆ. ನಾಲ್ಕು ಲಕ್ಷ ಗ್ರಂಥಪರಿಮಿತಿಯುಳ್ಳ ಹದಿನೆಂಟು ಪುರಾಣಗಳನ್ನೂ ವ್ಯಾಸರು ರೋಮಹರ್ಷಣ ಸೂತರಿಗೆ ಉಪದೇಶ ಮಾಡಿದರೆಂದು ವ್ಯವಹಾರದಲ್ಲಿ ಬಂದಿರುತ್ತೆ. ಅಲ್ಲಡೆ ಇದುವರೆಗೆ ಇಪ್ಪತ್ತೇಳು ಮಂದಿ ವ್ಯಾಸರು ಆಗಿ ಈ ಇಪ್ಪತ್ತೆಂಟನೇ ದ್ವಾಪರದಲ್ಲಿ ಕೃಷ್ಣದ್ವೈಪಾಯನರೆಂಬ ವ್ಯಾಸರು ಇಪ್ಪತ್ತೆಂಟ

ನೆಯ ವ್ಯಾಸರೆಂದು ವಿಷ್ಣುಪುರಾಣದ ಮೂರನೆಯ ಅಂಶದ ಮೂರನೆಯ ಅಧ್ಯಾಯದಲ್ಲಿ ಸ್ಪಷ್ಟ ವಿವರಣೆ ಇದೆ.

ವಚನ ವಿ.ಪು. ಪುಟ ೧೨೨, ಸಾಲು ೮

ಮೂಲ: ಸ್ವಪುರುಷಮಭಿವೀಕ್ಷ್ಯ ಪಾಶಹಸ್ತಂ ವದತಿಯಮಃ ಕಿಲತಸ್ಯ ಕರ್ಣಮೂಲೇ।
ಪರಿಹರ ಮಧುಸೂದನಪ್ರಪನ್ನಾನ್ ಪ್ರಭುರಹಮನ್ಯನೃಣಾಂ ನವೈಷ್ಣ
ವಾನಾಂ॥ ವಿ. ಪು. ೩-೭-೧೪

ಭೀಷ್ಮರು ನಕುಲನಿಗೆ ಹೇಳುವ ಮಾತು. ಹಿಂದೆ ಕಳಿಂಗನೆಂಬ ಮುನಿಯು ಯಮಕಿಂಕರರ ಸಂವಾದವನ್ನು ನನಗೆ ಹೇಳಿದ್ದನ್ನೇ ನಿನಗೆ ತಿಳಿಸುವೆನು ಕೇಳು. ಪ್ರಕೃತದಲ್ಲಿ ಯಾವುದನ್ನು ಅನುಷ್ಠಾನಮಾಡಿದರೆ ಯಮನ ದೃಷ್ಟಿಗೆ ಮನುಷ್ಯನು ಬೀಳುವುದಿಲ್ಲ? ಎಂಬ ಮೈತ್ರೇಯರ ಪ್ರಶ್ನೆಗೆ ಶ್ರೀಪರಾಶರ ಉತ್ತರವೂ ಈ ಪದ್ಯದಲ್ಲಿರುತ್ತೆ.

ಯಮನು ತನ್ನ ಭಟರನ್ನು ಕರೆದು ಅವರ ಕಿವಿಯಲ್ಲಿ ಹೀಗೆ ಹೇಳುತ್ತಾನೆ. ಎಲೈ ಭಟರೆ! ಮಧುಹಂತಕನಾದ ಶ್ರೀಮನ್ನಾರಾಯಣನಲ್ಲಿ ಯಾರು ಶರಣಾಗತರೋ ಅವರ ಸಮೀಪಕ್ಕೂ ಹೋಗಬೇಡಿ. ನಾನು ವಿಷ್ಣುಭಕ್ತರಿಗೆ ಪ್ರಭುವಲ್ಲ. ಮಿಕ್ಕ ಅಭಕ್ತರಿಗೆ ನಾನು ಪ್ರಭುವು ಎಂದು ಈ ಪದ್ಯದ ತಾತ್ಪರ್ಯ. ಈ ಪದ್ಯದಲ್ಲಿ ಯಮನು ಭಟರ ಕರ್ಣಮೂಲದಲ್ಲಿ ರಹಸ್ಯವಾಗಿ ಹೇಳಲು ಕಾರಣವೇನೆಂದರೆ ವಿಷ್ಣುನಾಮವನ್ನು ಸ್ಪಷ್ಟವಾಗಿ ಹೇಳಿದ್ದಾದರೆ ನರಕದಲ್ಲಿರುವವರೆಲ್ಲಾ ಸದ್ಗತಿಯನ್ನು ಪಡೆಯುತ್ತಾರೆ. ಅವರು ಅದನ್ನು ಪಡೆಯಲು ಅನರ್ಹರು. ಅಲ್ಲದೆ ಯಮನಿರುವುದು ತಪ್ಪಿತಸ್ಥರನ್ನು ಶಿಕ್ಷಿಸುವುದಕ್ಕಾಗಿಯೇ. ಅದನ್ನು ಬಿಟ್ಟು ಅಯೋಗ್ಯರನ್ನು ನರಕದಿಂದ ಬಿಡುಗಡೆಮಾಡುವುದಕ್ಕಲ್ಲ. ಹಾಗೆ ಮಾಡಿದರೆ ಭಗವಾನ್ ಕೊಟ್ಟ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಂತಾಗುವುದು. ಆದ್ದರಿಂದಲೇ ದೂತರ ಕಿವಿಯಲ್ಲಿ ವಿಷ್ಣುಭಕ್ತರ ಸಮೀಪಕ್ಕೆ ಹೋಗಕೂಡದೆಂದು ಆಜ್ಞೆಮಾಡುತ್ತಾನೆ. ಅಲ್ಲದೆ ಯಮನ ಪ್ರಭುತ್ವವು ವಿಷ್ಣುಭಕ್ತರ ವಿಷಯದಲ್ಲಿ ನಡೆಯುವುದಿಲ್ಲವೆಂತ ಪ್ರಮಾಣವೂ ಇದೆ.

ಯಥಾ ವಿಷ್ಣುಧರ್ಮೇಽದ್ರವಂತಿ ದೈತ್ಯಾಃ ಪ್ರಣಮಂತಿ ದೇವತಾಃ ನಶ್ಯಂತಿ
ರಕ್ಷಾಂಸ್ಯಪಯಂತಿ ಚಾರಯಃ।
ಯತ್ಕೀರ್ತನಾತ್ ಸೋಽದ್ಭುತರೂಪಕೇಣ ಮಮಾಸ್ತು ಮಾಂಗಲ್ಯ
ವಿವೃದ್ಧಯೇಹರಿಃ॥" ಅಂದರೆ

"ವಿಷ್ಣು ಭಕ್ತರನ್ನು ಕಂಡ ದೈತ್ಯರು ಓಡುತ್ತಾರೆ. ದೇವತೆಗಳು ಈ ಭಕ್ತರನ್ನು ನಮಿಸುತ್ತಾರೆ. ಶತ್ರುಗಳು ಇದ್ದಲ್ಲೆ ನಾಶವಾಗುತ್ತಾರೆ. ಕೀರ್ತನೆಯಿಂದ ತೃಪ್ತನಾದ ಹರಿಯು ಭಕ್ತರಿಗೆ ಅನೇಕ ಮಂಗಳಗಳನ್ನು ಅನುಗ್ರಹಿಸುತ್ತಾನೆಂದು" ಶ್ರುತಿಯು ಸಹ "ಸರ್ವೇಸ್ಮೈ ದೇವಾ ಬಲಮಾವಹಂತಿ" ಭಕ್ತರಿಗೆ ಕಿಂಚಿತ್ ಕೈಂಕರ್ಯ ಮಾಡಬೇಕೆಂದು ದೇವತೆಗಳೂ ಸಹ ಇವನ ಸಮೀಪಕ್ಕೆ ಬರುತ್ತಾರೆ. ಭಗವದ್ಭಕ್ತರು ತನಗೆ ಪ್ರಭುವಿನ ಸ್ಥಾನದಲ್ಲಿರುವುದಾಗಿ ಇದೆ ಅಧ್ಯಾಯದ ೩೩ನೇ ಪದ್ಯದಲ್ಲಿ ಸ್ಪಷ್ಟಪಡಿಸಿರುತ್ತಾನೆ. ಪದ್ಯವು ಯಾವುದೆಂದರೆ:

"ಕಮಲನಯನ ವಾಸುದೇವ ವಿಷ್ಣೋಧರಣಿಧರಾಚ್ಯುತಶಂಖ ಚಕ್ರಪಾಣೇ।
ಭವ ಶರಣಮಿತೀರಯಂತಿಯೇ ವೈತ್ಯಜ ಭಟದೂರತರೇಣ ತಾನಪಾಪಾನ್॥"

ಎಂದು ವಿಷ್ಣುಪುರಾಣದಲ್ಲಿ ಯಮನು ತಾನು ಅಸ್ವತಂತ್ರನೆಂದೂ, ಹರಿಯು ತನಗೂ ಯಮನಾಗಿ ನಿಯಮಿಸುವುದಾಗಿ ಹೇಳಿಕೊಂಡಿರುತ್ತಾನೆ. ಯಥಾ.

"ಅಹಮಮರಗಣಾರ್ಚಿತೇನ ಧಾತ್ರಾ ಯಮ ಇತಿಲೋಕಹಿತಾಹಿತೇ ನಿಯುಕ್ತಃ।
ಹರಿಗುರುವಶಗೋಽಸ್ಮಿನ ಸ್ವತಂತ್ರಃ ಪ್ರಭವತಿ ಸಂಯಮನೇ ಮಮಾಪಿ ವಿಷ್ಣುಃ॥"

"ಭಾಗವತರಿಗೆ ದೇವತಾಂತರಗಳೂ ಸಹ ವಿಧೇಯವಾಗಿ ನಡೆದುಕೊಳ್ಳುತ್ತವೆ" ಎಂಬಂಶದ ಮೇಲೆ ತೊಂಡರಡಿಪ್ಪೊಡಿಯಾಳ್ವಾರರು ಸ್ವಾರಸ್ಯವಾಗಿ ಹಾಡಿರುತ್ತಾರೆ. ಯಥಾ.

"ಕಾವಿಲಿಲ್ ಪುಲನ್ವೈವ್ವೆತ್ತು ಕ್ಕಲಿತನ್ನೈ ಕ್ಕಡಕ್ಕ ಪ್ಪಾಯನ್ದು
ನಾವಲಿಟ್ಟುಳಿತರು ಹಿನ್ರೋಂ ನಮನ್ ತಮರ್ ತಲೆಹಳ್ಮಿಾದೇ
ಮೂವುಲ ಹುಂಡುಮಿಳಾನ್ದ ಮುದಲ್ವ। ನಿನ್ನಾಮಂ ಕತ್ತ
ಆವಲಿಪ್ಪುಡಮೆ ಕಂಡಾಯ್ ಅರಂಗಮಾನಹರುಳಾನೇ॥" ಅಂದರೆ:

"ಭಗವಾನ್! ಆಚಾರ್ಯಾನುಗ್ರಹದಿಂದ ನಿನ್ನ ನಾಮಗಳನ್ನು ಪರಿಚಯಮಾಡಿಕೊಂಡು ಕೀರ್ತನೆ ಮಾಡಿದ್ದರಿಂದ ಪಂಚೇಂದ್ರಿಯಗಳನ್ನು ನಿಯಮಿಸಿ, ಪಾಪಗಳನ್ನು ಕಳೆದುಕೊಂಡು ಯಮಭಟರ ತಲೆಯಮೇಲೆ ಕಾಲಿಟ್ಟು ನಿರ್ಭಯರಾಗಿ ಸಂಚರಿಸುತ್ತಿದ್ದೇವೆ. ಗೊತ್ತೆ? ಇದು ನಿನ್ನ ನಾಮಸಂಕೀರ್ತನದ ವೈಭವ" ಎಂದು.

ಭಕ್ತರ ವಿಷಯದಲ್ಲಿ ಯಮನೂ ಯಮಭಟರೂ ಹ್ಯಾಗೆ ನಡೆದುಕೊಳ್ಳುತ್ತಾರೆಂಬುದಕ್ಕೆ ತಿರುಮಂಗೈ ಆಳ್ವಾರರ ಶ್ರೀಸೂಕ್ತಿ: ೮-೧೦-೭

"ವೆಳ್ಳೈ ನೀರ್ ವೆಳ್ಳತ್ತಣೈಂದರವಣೆ ಮೇಲ್
ತುಳ್ಳು ನೀರ್ ಮೆಳ್ಳತ್ತುಯಿನ್ರ ಪೆರುಮಾನೇ
ವಳ್ಳಲೇ ಯುಂ ತಮರ್ಕ್ಕೆನ್ರುಂ ನಮಂತಮರ್
ಕಳ್ಳರ್ ಪೋಲ್ ಕಣ್ಣಪುರತ್ತುರೆಯಮ್ಮಾನೇ॥" ಅಂದರೆ

"ಕ್ಷೀರಸಮುದ್ರದಲ್ಲಿ ಶೇಷಪರ್ಯಂಕದಲ್ಲಿ ಮಲಗಿ ಯಾರು ಯಮವಶ್ಯರು? ಯಾರು ಆರ್ತತೆಯಿಂದ ನನ್ನನ್ನು ಕೀರ್ತಿಸುತ್ತಾರೆ? ಎಂದು ಸಾವಧಾನವಾಗಿ ಭಗವಂತನು ಯೋಗನಿದ್ರೆಯಲ್ಲಿರುತ್ತಾನೆ. ಇಂತಹ ಪರಮಾತ್ಮನನ್ನುಯಾರು ಧ್ಯಾನಿಸುತ್ತಾರೋ ಇಂತಹವರ ಸಮೀಪಕ್ಕೆ ಬಂದ ಯಮಭಟರು ಕಳ್ಳರಂತೆ ತಿಳಿಯದಂತೆಯೇ ಹಿಂತಿರುಗುತ್ತಾರಂತೆ "ಸಖಲು ಭಾಗವತಾಯಮ ವಿಷಯಂಗಚ್ಛಂತಿ" ಎಂಬ ವಚನವೂ "ಮೃತ್ಯುರ್ಧಾವತಿ ಪಂಚಮ ಇತಿ" ಎಂಬ ಶ್ರುತಿಯೂ ಸಹ ಮೇಲಿನ ಪದ್ಯದಲ್ಲಿ ಯಮನು ತನ್ನ ಭಟರನ್ನು ಕುರಿತು ಹೇಳುವ ಮಾತುಗಳಿಗೆ ಪ್ರಮಾಣಗಳಾಗಿವೆ.

ವಿಷ್ಣುಪುರಾಣದ ಮೂರನೇ ಅಂಶದ ಈ ಏಳನೇ ಅಧ್ಯಾಯವು ಪವಿತ್ರತಮವಾದ ಅಧ್ಯಾಯವಾಗಿದೆ. ಈ ಅಧ್ಯಾಯದಲ್ಲಿ ಶ್ರೀ ಪರಾಶರ ಮಹರ್ಷಿಗಳು ಭಗವನ್ನಾಮಗಳ ವೈಭವವೇನು? ಭಗವನ್ನಾಮ ಕೀರ್ತನೆಯ ಮಹಿಮೆಯೇನು? ಭಾಗವತರ ವೈಭವವೇನು? ಎಂಬಂಶಗಳನ್ನು ಉಪದೇಶ ಮಾಡಿರುತ್ತಾರೆ. ಭಾಗವತರೆಂದರೆ ಮಧುಸೂದನನ ಪ್ರಪನ್ನರು. ಇವರು ಕೃತಕೃತ್ಯರು "ಕೃತಕೃತ್ಯಾಃ ಪ್ರತೀಕ್ಷಂತೇ ಮೃತ್ಯುಂ ಪ್ರಿಯಮಿವಾತಿಥಿಂ" ಎಂಬಂತೆ. ಕೃತಕೃತ್ಯರು ಮನೆಗೆ ಬಂದ ಯಮನನ್ನು ಪ್ರಿಯನಾದ ಅತಿಥಿಯು ಬಂದನೆಂದು ಸಂತೋಷಿಸಿ ಸತ್ಕರಿಸಿ ಕಳುಹಿಸಿಕೊಡುತ್ತಾರಂತೆ. ಭಗವನ್ನಾಮಸಂಕೀರ್ತನವು ಸಂಸಾರ ತಾರಕವೂ ಹೌದು ಎಂಬುವುದಕ್ಕೆ ಇದೇ ಅಧ್ಯಾಯದ ೩೮ನೇ ಪದ್ಯವೆ ಪ್ರಮಾಣವು. ಪದ್ಯ:

"ಕಿಂಕರಾಃ ಪಾಶದಂಡಾಶ್ಚ ನ ಯಮೋ ನ ಚ ಯಾ ತನಾಃ।
ಸಮರ್ಥಾಸ್ತಸ್ಯ ಯಸ್ಯಾತ್ಮಾ ಕೇಶವಾಲಂಬನಸ್ಸದಾ॥"

ಯಾರು ಕೇಶವನ ಆಶ್ರಿತರೋ ಅವರ ವಿಷಯದಲ್ಲಿ ಯಮಕಿಂಕರರೇ ಆಗಲಿ, ಯಮನೇ ಆಗಲಿ, ಅವನ ಆಯುಧಗಳೇ ಆಗಲಿ, ಅವರನ್ನು ಹಿಂಸಿಸಲು

ಅಸಮರ್ಥರು. ಈ ಪದ್ಯದಲ್ಲಿರುವ "ಯಸ್ಮಾತ್ಮಾ ಕೇಶವಾಲಂಬನಃ" ಎಂಬ ಪದವು ಕೇಶವನಲ್ಲಿ ತನ್ನ ಆತ್ಮವನ್ನು ಸಮರ್ಪಿಸಿದವನೆಂದು ಅರ್ಥವಾಗುತ್ತದೆ. ಇದೇ ಭರ ಸಮರ್ಪಣವು. ನವವಿಧ ಭಕ್ತಿಗಳಲ್ಲಿ ಕಡೆಯದು. ಯಥಾ "ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ, ಅರ್ಚನಂ ವಂದನಂ ದಾಸ್ಯಂ ಸಖ್ಯ ಮಾತ್ಮನಿವೇದನಂ||" ಈ ಜೀತನನು ಬದುಕಬೇಕು ಹೇಗೆ? ಕೇಶವನಲ್ಲಿ ಭಕ್ತಿಯುಳ್ಳವನಾಗಿ "ಜೀವಿತಂ ವಿಷ್ಣುಭಕ್ತಸ್ಯ ವರಂ ಪಂಚದಿನಾನ್ಯಪಿ| ನತುಕಲ್ಪ ಸಹಸ್ರಾಣಿ ಭಕ್ತಿಹೀನಸ್ಯ ಕೇಶವೇ||" ಕೇಶವಾರ್ಪಿತ ಚಿತ್ತಾಯೇ ನ ಶವಾನ ಪುನರ್ಭವಾಃ| ಕೇಶವನಲ್ಲಿ ಭಕ್ತಿಯಿಲ್ಲದವರು ಶವಕ್ಕೆ ಸಮಾನರು. ಸ್ವಲ್ಪದಿನವೇ ಬದುಕಿದರೆ ಸಾಕು. ಕೇಶವನಲ್ಲಿ ಮನಸ್ಸಿಟ್ಟು ಬದುಕಬೇಕು. ಅವನನ್ನೇ ಕೀರ್ತಿಸಬೇಕು. ಇಂತಹವರನ್ನು ಯಮನೂ ಸಹ ಸ್ತೋತ್ರಮಾಡಿಯಾನು. ಇಂತಹ ಅಮೋಘವಾದ ಉಪದೇಶವು ಈ ಏಳನೇ ಅಧ್ಯಾಯದಲ್ಲಿ ಗಂಭೀರವಾಗಿ ಹುದುಗಿರುವ ಅಭಿಪ್ರಾಯವು.

ವಚನ ವಿ.ಪು. ಪುಟ ೧೨೩, ಸಾಲು ೧

ಮೂಲ: "ನ ಚಲತಿ ನಿಜವರ್ಣಧರ್ಮತೋ ಯಸ್ಸಮಮತಿ ರಾತ್ಮಸುಹೃದ್ವಿಪಕ್ಷಪಕ್ಷೇ|
ನ ಹರತಿ ನ ಚ ಹಂತಿ ಕಿಂಚಿದುಚ್ಚೈಃ ಸ್ಥಿತಮನಸಂ ತಮವೇಹಿ ವಿಷ್ಣುಭಕ್ತಂ||"
ವಿ.ಪು. ೩-೭-೨೦

ಶ್ರೀ ಪರಾಶರರು ಈ ಪದ್ಯದಲ್ಲಿ ನಿಜವಾದ ವಿಷ್ಣುಭಕ್ತರು ಯಾರು? ಎಂಬ ವಿಷಯವನ್ನು ಸ್ಪಷ್ಟಪಡಿಸಿರುತ್ತಾರೆ. ಯಾರುಯಾರು ತಮ್ಮತಮ್ಮ ವರ್ಣಕ್ಕನುಸಾರವಾದ ಧರ್ಮವನ್ನು ಆಚರಿಸುತ್ತಾರೊ, ಶತ್ರುಮಿತ್ರರಲ್ಲಿ ಸಮಾನಬುದ್ಧಿಯುಳ್ಳವರೋ, ಮತ್ತೊಬ್ಬರ ಸ್ವತ್ತನ್ನು ಅಪಹರಿಸುವುದಿಲ್ಲವೊ, ಮತ್ತೊಬ್ಬರನ್ನು ಹಿಂಸಿಸುವುದಿಲ್ಲವೊ, ಯಾರು ಪರಿಶುದ್ಧ ಮನಸ್ಸುಳ್ಳವರೊ, ಅವರನ್ನು ವಿಷ್ಣುಭಕ್ತರನ್ನಾಗಿ ತಿಳಿ. ನೀಚಜಾತಿಯವರೂ ಸಹ ಅವರ ಜಾತಿಗೆ ಹೇಳಿರುವ ಧರ್ಮವನ್ನಾಚರಿಸಿದರೆ ಮುಕ್ತಿಯನ್ನುಪಡೆಯುತ್ತಾರೆ. ಸುಕೃತಿಗಳಾಗಿ ಬ್ರಾಹ್ಮಣ ಯೋನಿಯಲ್ಲಿ ಜನಿಸಿ ನಿಜಧರ್ಮವನ್ನು ಪಾಲಿಸಿದಲ್ಲಿ ಮುಕ್ತಿಯನ್ನು ಪಡೆಯುತ್ತಾರೆಂದು ಹೇಳುವುದೇನು? ಗೀತೆಯಲ್ಲಿ "ಸ್ತ್ರೀಯೋ ವೈಶ್ಯಾಸ್ತಥಾ ಶೂದ್ರಾಃ ತೇಪಿಯಾಂತಿ ಪರಾಂ ಗತಿಂ" ಎಂದು ನಿರ್ಣಯಿಸಿ ಅಪಕೃಷ್ಟ ವರ್ಣದವರಿಗೂ ಮೋಕ್ಷವುಂಟೆಂದು ಹೇಳಿರುತ್ತೆ. ಶಬರಿಗೆ ಶಬರತ್ವ-ಸ್ತ್ರೀತ್ವ ಇವೆರಡೂ ಇದ್ದರೂ ಮತಂಗಮಹರ್ಷಿಗಳನ್ನು ಶುಶ್ರೂಷೆ ಮಾಡಿದ್ದರಿಂದ ಅವರು ಮಾಡಿದ ಶರಣಾಗತಿಯಿಂದಲೂ, ಶ್ರೀರಾಮಪ್ರಸಾದದಿಂದಲೂ ಮೋಕ್ಷವನ್ನು ಹೊಂದಿದಳು.

ವಿದುರಾದಿ ಶೂದ್ರಭಾಗವತರೂ ಸಹ ಆಚಾರ್ಯರನ್ನಾಶ್ರಯಿಸಿ ಬ್ರಾಹ್ಮಣರಿಗಿಂತ ಮುಂಚಿತವಾಗಿಯೇ ಮುಕ್ತಿಯನ್ನು ಪಡೆದಿರುತ್ತಾರೆ. ಅಂತ್ಯಜರಾದ ತಿರು ಪ್ಪಾಣಾಳ್ವಾರರೂ ಸಹ ಶ್ರೀರಂಗನಾಥನನ್ನು ಭಜಿಸಿ ಮುಕ್ತರಾದರು. ಆದ್ದರಿಂದ ಮುಕ್ತರಾಗಲು ಜಾತಿ ಪ್ರಧಾನವಲ್ಲ. ಸ್ವಕೀಯ ವರ್ಣಕ್ಕೆ ವಿಧಿಸಿರುವ ಧರ್ಮಾ ನುಷ್ಠಾನವೇ ಪ್ರಧಾನವು. ಜಾತಿಯು ಜನ್ಮದಿಂದಲೇ ಬಂದಿರುವ ಕಾರಣ ಮರಣಾಂತರ ಅದು ತಪ್ಪಿದ್ದಲ್ಲ. ಜಾತಿಗೆ ವಿಹಿತವಾದ ಪ್ರವೃತ್ತಿಗಳೂ ತಪ್ಪಿದ್ದಲ್ಲ. ಮಹಾಭಾರತ ಭೀಷ್ಮಪರ್ವದಲ್ಲೂ—

"ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಶೂದ್ರೈಶ್ಚ ಕೃತಲಕ್ಷಣೈಃ।
ಸೇವ್ಯತೇಭ್ಯರ್ಚತೇ ಚೈವ ನಿತ್ಯಯುಕ್ತೈ ಸ್ವಕರ್ಮಭಿಃ॥" ಅಂದರೆ:

ಶಂಖಚಕ್ರಾಂಕಿತರಾದ ತಮ್ಮ ವರ್ಣಾಶ್ರಮಧರ್ಮಗಳಲ್ಲಿ ನಿರತರಾಗಿರುವ ಬ್ರಾಹ್ಮಣ-ಕ್ಷತ್ರಿಯ ವೈಶ್ಯ-ಶೂದ್ರರಿಂದಲೂ ಸರ್ವೇಶ್ವರನು ಪೂಜಿಸಲು ಯೋಗ್ಯನು. ಪೂಜೆಯಿಂದ ತೃಪ್ತನಾದ ಸರ್ವೇಶ್ವರನು ಅವರವರ ಮನೋರಥ ವನ್ನು ಪೂರ್ಣಮಾಡುತ್ತಾನೆ" ಎಂದು ಅಪಕೃಷ್ಟವರ್ಣದವನು ಭಗವದ್ಭಕ್ತನಲ್ಲ ವೆಂತಲೂ, ಬ್ರಾಹ್ಮಣನಾದ ಮಾತ್ರದಿಂದ ಭಾಗವತನೆಂತಲೂ ಹೇಳುವಂತಿಲ್ಲ. ಯಾರ ಹೃದಯದಲ್ಲಿ ಭಗವಾನಿಲ್ಲವೋ, ಅವರೀಗ ಶೂದ್ರರೆಂದು ಅಭಿಯುಕ್ತರ ಮಾತಿದೆ: ಯಥಾಃ "ನ ಶೂದ್ರಾ ಭಗವದ್ಭಕ್ತಾಃ ವಿಪ್ರಾಭಾಗವತಾಸ್ಮೃತಾಃ। ಸರ್ವವರ್ಣೇಷುತೇ ಶೂದ್ರಾಃ ಯೇಹ್ಯಭಕ್ತಾಜನಾರ್ದನೇ॥ ಎಂದು. ವಿಷ್ಣು ಭಕ್ತನಾಗಬೇಕಾದರೆ ಸ್ವಕೀಯ ವರ್ಣಾಶ್ರಮ ಧರ್ಮದಿಂದಲೇ ಎಂದು ಮಹರ್ಷಿ ಗಳು ಮೇಲಿನ ಪದ್ಯದಲ್ಲಿ ಉಪದೇಶಿಸಿರುತ್ತಾರೆ.

ವಚನ ವಿ.ಪು. ಪುಟ ೧೨೪, ಸಾಲು ೧೩

ಮೂಲ: "ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನ್ ।
ವಿಷ್ಣುರಾರಾಧ್ಯತೇ ಪಂಥಾ ನಾನ್ಯಸ್ತತ್ತೋಷಕಾರಕಃ ॥"

ವಿ.ಪು. ೩-೮-೯

ಈ ಪದ್ಯದಲ್ಲಿ ವರ್ಣಧರ್ಮ ಮತ್ತು ಆಶ್ರಮ ಧರ್ಮಗಳನ್ನು ಅವಶ್ಯವಾಗಿ ಆಚರಿಸತಕ್ಕದ್ದೆಂದು ಮಹರ್ಷಿಗಳು ಉಪದೇಶಿಸಿರುತ್ತಾರೆ. ಈ ಧರ್ಮಾಚರಣೆಯೇ ವಿಷ್ಣುವಿನ ಆರಾಧನೆಯು. ವಿಷ್ಣುವು ಅವರವರ ಕರ್ಮಾಚರಣೆಗಳಿಂದ ಸಂತೋಷ ಪಡುವಷ್ಟು ಬೇರೆ ಆಚರಣೆಗಳಿಂದ ತೃಪ್ತಿ ಪಡುವುದಿಲ್ಲ. ಈ ಅಭಿಪ್ರಾಯವೇ ಇದೇ ಅಧ್ಯಾಯದ ೧೯ನೇ ಪದ್ಯದಲ್ಲಿ ಸ್ಪಷ್ಟವಾಗಿ ಹೇಳಿರುತ್ತೆ :

"ವರ್ಣಾಶ್ರಮೇಷು ಯೇ ಧರ್ಮಾಃ ಶಾಸ್ತ್ರೋಕ್ತಾ ನೃಪಸತ್ತಮ।
ತೇಷು ತಿಷ್ಠನ್ನರೋ ವಿಷ್ಣುಮಾರಾಧಯತಿ ನಾನ್ಯಥಾ॥"

ವಿ.ಪು. ೩_೮=೧೯

ವರ್ಣಾಶ್ರಮಧರ್ಮಗಳು ಶ್ರುತಿ ಸ್ಮೃತೀತಿಹಾಸಪುರಾಣಗಳಲ್ಲಿ ನಿರೂಪಿತವಾಗಿವೆ. ಶಾಸ್ತ್ರಬೋಧಿತವಾಗಿ ವರ್ಣಾಶ್ರಮಗಳಿಗೆ ಉಚಿತವಾದ ಧರ್ಮಾಚರಣೆಯನ್ನು ಪರಮಾತ್ಮನು ತನ್ನ ಕೈಂಕರ್ಯವನ್ನೇ ಆಚರಿಸುತ್ತಾನೆಂದು ತೃಪ್ತಿಪಡುವನು. ಆಜ್ಞಾಕೈಂಕರ್ಯ–ಅನುಜ್ಞಾಕೈಂಕರ್ಯವೆಂದು ಕೈಂಕರ್ಯವು ಎರಡು ವಿಧ. ಸಂಧ್ಯಾವಂದನಾದಿ ನಿತ್ಯಕರ್ಮವು ಆಜ್ಞಾಕೈಂಕರ್ಯವು. ದೇವಾಲಯವನ್ನು ಗುಡಿಸುವುದು, ಮಾಲೆಯನ್ನು ಕಟ್ಟಿ ಭಗವಂತನಿಗೆ ಸಮರ್ಪಿಸೋಣವು, ದೀಪಗಳನ್ನು ಹಚ್ಚುವುದು, ಆಚಾರ್ಯೋಪದೇಶದಂತೆ ದಿವ್ಯದೇಶಗಳಲ್ಲಿರುವ ಸ್ವಾಮಿಯನ್ನು ಸಂದರ್ಶಿಸೋಣವು. ಭಾಗವತರನ್ನು ಉಪಚರಿಸುವುದು ಇವೆಲ್ಲವೂ ಅನುಜ್ಞಾಕೈಂಕರ್ಯಗಳು. "ಅಹರಹಸ್ಸಂಧ್ಯಾಮುಪಾಸೀತ" ಎಂದು ಆಜ್ಞೆಮಾಡಿರುವ ಕೈಂಕರ್ಯವು, ವೇದಾಧಿಕಾರವಿರುವವರೆಲ್ಲರೂ ಅವಶ್ಯ ಆಚರಿಸಬೇಕು. ಇದನ್ನು ಆಚರಿಸದಿದ್ದರೆ ಸಂಧ್ಯಾಹೀನೋ, ಅಶುಚಿರ್ನಿತ್ಯಮನರ್ಹಸ್ಸರ್ವಕರ್ಮಸು." ಸಂಧ್ಯಾಹೀನನು ಇತರ ಅನುಜ್ಞಾಕೈಂಕರ್ಯಗಳಿಗೂ ಅನರ್ಹನು. ನಿತ್ಯಕರ್ಮವನ್ನು ಯಾವಚ್ಛರೀರ ಆಚರಿಸಬೇಕು. ಹಾಗೆ ಆಚರಿಸದಿದ್ದರೆ "ಆಜ್ಞಾಛೇದೀ ಮಮ ದ್ರೋಹೀ ಮದ್ಭಕ್ತೋಽಪಿ ನ ವೈಷ್ಣವಃ" ಎಂಬ ಭಗವನ್ನಿಗ್ರಹಕ್ಕೆ ಪಾತ್ರನಾಗುತ್ತಾನೆ. ಕರ್ಮಗಳನ್ನು ಕಾಮ್ಯಫಲಕ್ಕಾಗಿ ಆಚರಿಸಕೂಡದು. "ಶ್ರೀಮನ್ನಾರಾಯಣಾಯೇತಿ ಸಮರ್ಪಯಾಮಿ" ಎಂಬ ತ್ಯಾಗಬುದ್ಧಿಯಿಂದ ಆಚರಿಸತಕ್ಕದ್ದು. ಸಂಧ್ಯಾವಂದನಾದಿಗಳೂ ಭಗವದ್ಭಜನವೇ. ಈ ಅಂಶವು "ಸಾಕ್ಷಾದಪ್ಯವಿರೋಧಂ ಜೈಮಿನಿಃ" ಎಂಬ ಬ್ರಹ್ಮಸೂತ್ರದಲ್ಲೂ ನಿತ್ಯನೈಮಿತ್ತಿಕಗಳು ಅವಶ್ಯ ಅನುಷ್ಠೇಯವೆಂದು ಉಪಪಾದಿತವಾಗಿದೆ. ಗೀತೆಯಲ್ಲೂ "ಸ್ವೇಸ್ವೇ ಕರ್ಮಣ್ಯಭಿರತಃ ಸಿದ್ಧಿಂ ವಿಂದತಿ" ಎಂದು ಉಪದಿಷ್ಟವಾಗಿದೆ. ಆದ್ದರಿಂದ ನಿತ್ಯನೈಮಿತ್ತಿಕಗಳನ್ನು ಆಚರಿಸುವುದರಲ್ಲಿ ಎಚ್ಚರಿಕೆಯನ್ನು ವಹಿಸುವುದು ಜಾಣತನ.

ವಚನ ವಿ.ಪು. ಪುಟ ೧೨೮, ಸಾಲು ೧೬

ಮೂಲ : "ತತಶ್ಚ ನಾಮ ಕುರ್ವೀತ ಪಿತೈವ ದಶಮೇಽಹನಿ।
ದೇವ ಪೂರ್ವಂ ನರಾಖ್ಯಂ ಹಿ ಶರ್ಮವರ್ಮಾದಿಸಂಯುತಂ॥"

ವಿ.ಪು. ೩_೧೦_೮

ಸಗರಚಕ್ರವರ್ತಿಗೂ ಔರ್ವಮಹರ್ಷಿಗೂ ನಡೆಯುತ್ತಿರುವ ಸಂವಾದ. ಸಗರನು ಔರ್ವಮಹರ್ಷಿಗಳಿಂದ ಅನೇಕ ಧರ್ಮಗಳನ್ನು ಕೇಳಿದನು. ಈಗ ಹುಟ್ಟಿದ ಪುರುಷನಿಗೆ ನಡೆಸತಕ್ಕ ಕರ್ಮದ ವಿಧಿಗಳ ಬಗ್ಗೆ ಹೇಳಬೇಕೆಂದು ಸಗರನು ಪ್ರಾರ್ಥಿಸಲು ಔರ್ವಮಹರ್ಷಿಯು ಉತ್ತರಿಸುತ್ತಾರೆ.

ಹುಟ್ಟಿದ ಕೂಡಲೇ ನಡೆಸುವ ಕರ್ಮಕ್ಕೆ ಜಾತಕರ್ಮವೆಂದು ಹೆಸರು. ಜಾತಾಶೌಚದಲ್ಲಿ ಹೇಗೆ ನಡೆಸುವುದು ? ಎಂದು ಶಂಕೆ ಕೂಡದು. ಕಂಠಭೂಷಣ ಗೃಹ್ಯರತ್ನದಲ್ಲಿ "ನಾಮಕರ್ಮ ಚ ಜಾತೇಷ್ಟಿಂ ಯಥಾಕಾಲಂ ಸಮಾಚರೇತ್" ಎಂದು ನಿರ್ಣಯಿಸಿ "ಜಾತೇಪುತ್ರೇ ದಿವಾಶಕ್ತಂ ವಾ ಪಿತಾ ಸಚೆಲಸ್ನಾತ್ವಾ ತತ್ಕ್ಷಣಾತ್ ತಿಥಿವಾರಾದಿಕಮವಿಚಾರಯನ್ ಜಾತಕರ್ಮಕುರ್ಯಾತ" ಅಂದರೆ ಪುತ್ರನು ಹುಟ್ಟಿದೊಡನೆಯೇ ತಂದೆಯು ಸಚೇಲಸ್ನಾನಮಾಡಿ ತಿಥಿಕಾಲಾದಿಗಳನ್ನು ವಿಚಾರಿಸದೆ ಜಾತಕರ್ಮವನ್ನು ಮಾಡಬೇಕು ಎಂದು. "ತದಹಃಕೃತ್ಸ್ನಂ ಪುಣ್ಯಂ" ಪುತ್ರ ಹುಟ್ಟಿದ ದಿನವು ಪುಣ್ಯವಾದುದು ಎಂದು ಹೇಳಿರುವ ಕಾರಣ ಅಂದು ಅಶೌಚವಿಲ್ಲ. "ಗೋಭೂಧನಧಾನ್ಯಾದಿ ಶಕ್ತಿಕೋದದ್ಯಾತ್" ಹಸು ಹಣ ಧಾನ್ಯಗಳನ್ನು ಅಂದು ಯಥಾಶಕ್ತಿ ಕೊಡಬೇಕು ಎಂಬ ನಿರ್ಣಯವೂ ಸಹ ಗೃಹ್ಯರತ್ನದಲ್ಲಿ ಹೇಳಿರುತ್ತೆ.

ಇದೇ ರೀತಿ ಹತ್ತನೇ ದಿನದಲ್ಲಿ ನಾಮಕರಣವನ್ನು ಮಾಡಬೇಕು. ಇಲ್ಲಿಯೂ ಹತ್ತನೇ ದಿನ ಎಂದು ಹೇಳಿರುವುದರಿಂದ ಜಾತಾಶೌಚವಿರುವಾಗ ನಾಮಕರಣ ಹೇಗೆ? ಇಲ್ಲಿ ದಶಮೇಹನಿ ಅಂದರೆ ಸ್ಮೃತ್ಯುಕ್ತ ಕಾಲದಲ್ಲಿ ಆಚರಿಸುವುದೆಂದು ವ್ಯಾಖ್ಯಾನಮಾಡಿರುತ್ತಾರೆ. ಯಾಜ್ಞವಲ್ಕ್ಯಸ್ಮೃತಿಯಲ್ಲಿ "ಅಹನ್ಯೇಕಾದಶೇ ನಾಮ" ಹನ್ನೊಂದನೆಯ ದಿನ ನಾಮಕರಣ ಮಾಡಬೇಕೆಂದು ಹೇಳಿದೆ. ಮತ್ತೊಂದು ಕಡೆ "ನಾಮಧೇಯಂ ದಶಮ್ಯಾಂ ಚ ಕೇಚಿದಿಚ್ಛಂತಿ ಪಾರ್ಥಿವ। ದ್ವಾದಶ್ಯಾಮಥವಾ ರಾತ್ರ್ಯಾಂ ಮಾಸೇ ಪೂರ್ಣೇ ತಥಾಪರೇ" ಎಂಬ ಸ್ಮೃತಿ ವಾಕ್ಯವನ್ನನುಸರಿಸಿ ಕೆಲವರು ಹತ್ತನೆಯ ದಿನದಲ್ಲೂ, ಕೆಲವರು ಹನ್ನೆರಡನೆಯ ದಿನದಲ್ಲೂ, ಮಾಸಾನಂತರದಲ್ಲೂ ನಾಮಕರಣ ಮಾಡುತ್ತಾರೆ. ಬೋಧಾಯನೀಯ ಗೃಹ್ಯಸೂತ್ರದಲ್ಲೂ "ದಶಮ್ಯಾಂದ್ವಾದಶ್ಯಾಂದಾ ನಾಮಕರಣಂ" 'ದಶಮ್ಯಾಂ' ಎಂಬ ಪದಕ್ಕೆವ್ಯಾಖ್ಯಾನ ಮಾಡುವಾಗ "ದಶಮ್ಯಾಮುತ್ಥಿತಾಯಾಂ ಸ್ನಾತಾಯಾಂ" ಇತ್ಯುಕ್ತೇಃ ನ ದಶಮೇ ಹನಿ ನಾಮಕರಣಂ ದಶಮಾಹಾಪರ ರಾತ್ರ ಏವ ಉತ್ಥಾನಸ್ನಾನ ವಿಧಾನಾತ್. ಅಂದರೆ ಹತ್ತನೆಯ ರಾತ್ರಿ ಕಳೆದು ಮಂಗಳಸ್ನಾನಮಾಡಿದ ನಂತರವೇ ನಾಮಕರಣವು. ಅಲ್ಲಿಗೆ ಹತ್ತನೆಯ ದಿನ ನಾಮಕರಣವಾಗುವುದಿಲ್ಲ. ಯಾಕೆಂದರೆ ಆಶೌಚಾನ್ನವನ್ನು ಸ್ವೀಕರಿಸಿವರೆ

ಚಾಂದ್ರಾಯಣವನ್ನಾಚರಿಸಬೇಕೆಂದು ಪ್ರಾಯಶ್ಚಿತ್ತ ಹೇಳಿರುತ್ತೆ. ಆದ್ದರಿಂದ ಹತ್ತನೆಯ ರಾತ್ರಿ ಕಳೆದು ಸ್ನಾನಾನಂತರ ನಾಮಕರಣವನ್ನಾಚರಿಸಬೇಕೆಂದು ಸಿದ್ಧಾಂತವಾಯಿತು.

"ದೇವಪೂರ್ವಂ ನರಾಖ್ಯಂಹಿ" ಮನುಷ್ಯರಿಗೆ ದೇವತಾನಾಮವನ್ನೇ ಇಡಬೇಕು. ಗಂಡುಮಕ್ಕಳಿಗೆ ಸಮಾಕ್ಷರವಿರಬೇಕು. "ಬೋಧಾಯನರು ದ್ವ್ಯಕ್ಷರಂ ಚತುರಕ್ಷರಂ ಷಡಕ್ಷರಂ ಅಷ್ಟಾಕ್ಷರಂ ವಾ" ಎಂದೇ ಸೂತ್ರದಲ್ಲಿ ನಿರ್ದೇಶಿಸಿರುತ್ತಾರೆ. 'ಅಯುಗಕ್ಷರಂ ಕುಮಾರ್ಯಾಃ' ಹೆಣ್ಣುಮಕ್ಕಳಿಗೆ ವಿಷಮಾಕ್ಷರದ ಹೆಸರಿಡಬೇಕು. 'ಶರ್ಮವರ್ಮಾದಿ ಸಂಯುತಂ' ಶರ್ಮ, ವರ್ಮ ಇವುಗಳನ್ನು ಹೆಸರಿನ ಕಡೆಯಲ್ಲಿ ಸೇರಿಸಬೇಕು. ಇವರಲ್ಲಿ ನಿಯಮವೂ ಉಂಟು. ಯಥಾಹಮನುಃ

"ಶರ್ಮಾಂತಂ ಬ್ರಾಹ್ಮಣಸ್ಯೋಕ್ತಂ ವರ್ಮಾಂತಂ ಕ್ಷತ್ರಿಯಸ್ಯತು।
ವೈಶ್ಯಸ್ಯ ಪುಷ್ಟಿಸಂಯುಕ್ತಂ ಶೂದ್ರಸ್ಯ ಪ್ರೇಷ್ಯ ಸಂಯುತಂ॥"

ಬ್ರಾಹ್ಮಣನಿಗೆ ಹೆಸರಿನ ಕಡೆಯಲ್ಲಿ 'ಶರ್ಮಾ' ಎಂದು ಸೇರಿಸಬೇಕು. ವಿಷ್ಣುಶರ್ಮಾ. ಕ್ಷತ್ರಿಯನಿಗೆ ಹೆಸರಿನ ಕಡೆಯಲ್ಲಿ 'ವರ್ಮಾ' ಎಂದು ಸೇರಿಸಬೇಕು. 'ಇಂದ್ರವರ್ಮಾ'. ವೈಶ್ಯನಿಗೆ ಹೆಸರಿನ ಕಡೆಯಲ್ಲಿ 'ಗುಪ್ತ' ಎಂದು ಸೇರಿಸಬೇಕು. 'ಚಂದ್ರಗುಪ್ತ'. ಶೂದ್ರನಿಗೆ ಹೆಸರಿನ ಕಡೆಯಲ್ಲಿ 'ದಾಸಃ' ಎಂದು ಸೇರಿಸಬೇಕು. 'ಹರಿದಾಸಃ' ಎಂದು.

ಜಾತಕರ್ಮ-ನಾಮಕರಣ ಇತ್ಯಾದಿ ಕರ್ಮಗಳನ್ನು ಯಾಕೆ ಆಚರಿಸಬೇಕು? ಇದರ ಮಹತ್ವವೇನು? ಈಗಿನ ನಾಗರೀಕತೆಯಲ್ಲಿ ಈ ಕರ್ಮಗಳೆಲ್ಲಾ ಬಿಟ್ಟು ಹೋಗಿದೆಯಲ್ಲಾ? ಬಿಟ್ಟದ್ದರಿಂದ ಬಂದಿರುವ ಅನರ್ಥವೇನು? ಸ್ಮೃತಿಯಲ್ಲಿ:

"ಜಾತಸ್ಯಾರಿಷ್ಟನಾಶಾಯ ಸರ್ವಾಪಚ್ಛಯ ಶಾಂತಯೇ।
ಸರ್ವ ಸಂಪತ್ಸಮೃಧ್ಯರ್ಥಂ ಜಾತಕರ್ಮಾದಿ ಕಾರಯೇತ್॥" ಅಂದರೆ:

ಹುಟ್ಟಿದ ಶಿಶುವಿನ ಅರಿಷ್ಟ ನಾಶಕ್ಕಾಗಿಯೂ, ಇಲ್ಲಿ ಅರಿಷ್ಟವೆಂದರೆ ತಾಯಿಯ ಜಠರದಿಂದ ಹೊರಬಂದ ಸಕಲ ಶಿಶುಗಳಿಗೂ ಜಲದೋಷವೆಂಬ ದೋಷವಿರುತ್ತದೆ. ಈ ದೋಷವನ್ನು ವೇದಪುರುಷನು 'ವರುಣಪಾಶ' ಎಂದು ಕರೆದಿರುತ್ತಾನೆ. ಈಗಿನವರು ಲಿವರ್ ದೋಷವೆನ್ನುತ್ತಾರೆ. ಅವಕ್ಕೆ ಹುಟ್ಟಿದ ಕೂಡಲೆ ಕಲಶ ಸ್ಥಾಪನೆ ಮಾಡಿ ಅದರಲ್ಲಿ ವರುಣದೇವತೆಯನ್ನು ಆವಾಹನೆ ಮಾಡಿ ಮಂತ್ರಾದಿಗಳಿಂದ ಉಪಚಾರಾದಿಗಳನ್ನು ಸಮರ್ಪಿಸಿ ಆ ತೀರ್ಥದಿಂದ ಶಿಶುವನ್ನು ಪ್ರೋಕ್ಷಿಸಿದರೆ ಈ ಅರಿಷ್ಟವು ನಾಶವಾಗುತ್ತದೆಂದು ವೇದವು ಹೇಳುತ್ತದೆ. ಯಥಾ "ಕ್ಷೇತ್ರಿಯೈತ್ವಾನಿರ‍್ಋತ್ಯೈತ್ವಾದ್ರುಹೋಮುಂಚಾಮಿ ವರುಣಸ್ಯ ಪಾಶಾತ್"

ಎಂದು. ಈ ಅರಿಷ್ಟ ನಿವಾರಣೆಗಾಗಿಯೂ, ಸಕಲ ಭಯಶಾಂತಿಗಾಗಿಯೂ, ಸರ್ವ ಸಂಪತ್ಸಮೃದ್ಧ್ಯರ್ಥವಾಗಿಯೂ, ಸದ್ಯಃ ಜಾತಕರ್ಮವನ್ನಾಚರಿಸಬೇಕು. ಈ ಕರ್ಮಗಳನ್ನು ಉಕ್ತಕಾಲದಲ್ಲಿ ಅನುಷ್ಠಿಸುವುದು ಶ್ರೇಯಸ್ಕರ: ಯಥಾ.
"ನಾಮಕರ್ಮಚ ಜಾತೇಷ್ಟಿಂ ಯಥಾಕಾಲಂ ಸಮಾಚರೇತ್ ।" ಎಂಬ ವಚನವಿರುವುದರಿಂದ ಜಾತಕರ್ಮಾದಿ ವೇದೋದಿತ ಕರ್ಮಗಳನ್ನು ಯಥಾ ಕಾಲದಲ್ಲಿ ನಡೆಸಬೇಕು. ಅಲ್ಲದೆ ಕರ್ತೃವಿಗೆ ಆಶೌಚವಿದ್ದರೂ ತಾತ್ಕಾಲಿಕ ಶುದ್ಧಿಯನ್ನು ಸ್ಮೃತಿಕಾರರು ತಿಳಿಸಿರುತ್ತಾರೆ. ಯಥಾ:

"ಆಶೌಚೇತು ಸಮುತ್ಪನ್ನೇ ಪುತ್ರಜನ್ಮ ಯದಾಭವೇತ್ ।
ಕರ್ತುಸ್ತಾತ್ಕಾಲಿಕೀ ಶುದ್ಧಿಃ ಪೂರ್ವಾಶೌಚೇನ ಶುಧ್ಯತಿ ॥" ಎಂದು.

ಇದರಂತೆಯೇ ಬೋಧಯನಾದಿ ಮಹಾಮೇಧಾವಿಗಳು ಉಪನಯನಾದಿ ಸಂಸ್ಕಾರ ಗಳಿಗೂ ಕಾಲನಿರ್ಣಯ ಮಾಡಿರುತ್ತಾರೆ. ಯಥಾ "ಗರ್ಭಾಷ್ಟಮೇಷು ಬ್ರಾಹ್ಮಣ ಮುಪನಯಾತ. ಬ್ರಾಹ್ಮಣನು ಎಂಟನೇ ವಯಸ್ಸಿನಲ್ಲಿ ಉಪನಯನಮಾಡಬೇಕು. ಆ ವಯಸ್ಸಿನಲ್ಲಿ ಉಪನಯನಮಾಡಲು ಅನಾನುಕೂಲವಾದರೆ "ಆಷೋಡಷಾ ದ್ಬ್ರಾಹ್ಮಣಸ್ಯ"ಎಂದು ಹದಿನಾರನೇ ವಯಸ್ಸಿನವರೆವಿಗೂ ಶಾಸ್ತ್ರಕಾರರ ಅವಕಾಶ ಮಾಡಿಕೊಟ್ಟಿರುತ್ತಾರೆ. ಇದೇ ರೀತಿ ಕ್ಷತ್ರಿಯನು 'ಗರ್ಭೈಕಾದಶೇಷು ರಾಜನ್ಯಂ' ಹನ್ನೊಂದನೇ ವಯಸ್ಸಿನಲ್ಲೂ, ವೈಶ್ಯನು "ಗರ್ಭದ್ವಾದಶೇಷು ವೈಶ್ಯಂ" ಹನ್ನೆರಡನೇ ವಯಸ್ಸಿನಲ್ಲೂ ತನ್ನ ಮಗನಿಗೆ ಉಪನಯನ ಸಂಸ್ಕಾರಮಾಡ ಬೇಕೆಂದು ನಿರ್ಣಯಿಸಿರುತ್ತಾರೆ. ಈ ವೇದವಿಹಿತವಾದ ಕರ್ಮಗಳೆಲ್ಲವೂ ಪವಿತ್ರ ವಾದುವುಗಳು. ಇದನ್ನು ಆಚರಿಸಿದ ದ್ವಿಜನು ಪುಣ್ಯವನ್ನು ಗಳಿಸಿ ಇಲ್ಲಿಯೂ ಅಲ್ಲಿಯೂ ಸುಖವಾಗಿರುವುದಾಗಿ ಜ್ಞಾನಿಗಳ ಸಿದ್ಧಾಂತ. ಯಥಾ:

"ವೈದಿಕೈಃ ಕರ್ಮಭಿಃ ಪುಣ್ಯೈರ್ನಿಷೇಕಾದಿ ದ್ವಿಜನ್ಮನಾಂ ।
ಕಾರ್ಯಶ್ಶರೀರ ಸಂಸ್ಕಾರಃ ಪಾವನಃ ಪ್ರೇತ್ಯ ಚೇಹ ಚ ॥" ಎಂದು.

ಜಾತಕರ್ಮಾದಿಗಳೆಲ್ಲವೂ ಶರೀರ ಸಂಸ್ಕಾರಗಳಾಗಿ ಶರೀರವನ್ನು ಪಾವನಗೊಳಿಸು ತ್ತವೆ. ಹನ್ನೊಂದನೇ ದಿನದಲ್ಲಿ ಮಗುವಿಗೆ ನಾಮವನ್ನಿಡಬೇಕೆಂದು (ಹೆಸರನ್ನಿಡ ಬೇಕೆಂದು) ಮೇಲೆ ತಿಳಿಸಿರುತ್ತೆ. ದೇವತಾನಾಮವನ್ನಿಟ್ಟು ಆ ಹೆಸರಿನಿಂದ ಕರೆದರೆ ಕರೆದವರಿಗೂ ಪುಣ್ಯ. ದೇವತಾನಾಮವನ್ನಿಟ್ಟುಕೊಂಡವನಿಗೂ ಪಾಪ ಪರಿಹಾರ. ವೇದದಲ್ಲಿ ಇತಿಹಾಸವೊಂದು ಇರುತ್ತದೆ. ನಾರಾಯಣನು ಜಗತ್ಕಾರ ಣನು. ಇವನ ಮಗ ಚತುರ್ಮುಖ. ಚತುರ್ಮುಖನ ಮಗ ರುದ್ರ (ಶಂಕರ) ಎಂದು ಸಾಮವೇದವು ತಿಳಿಸುತ್ತದೆ. ಚತುರ್ಮುಖನಿಗೆ ರುದ್ರನು ಪುತ್ರನಾಗಿ

ಹುಟ್ಟಿದ ಮೇಲೆ ಕೂಡಲೇ ಹೆಸರನ್ನಿಡಲಿಲ್ಲವಂತೆ. ಅಯ್ಯೋ ನಾನು ಅನಾಮಧೇಯನಾದೆ ಎಂದು ರುದ್ರನು ಅಳಲು ಪ್ರಾರಂಭಿಸಿದನಂತೆ. ಆಗ ಬ್ರಹ್ಮನು ರುದ್ರನನ್ನು ಕುರಿತು ಹೇಳುತ್ತಾನೆ. "ಕುಮಾರ ಕಿಂರೋದಿಷಿ ಯಚ್ಛ್ರಮೇ ತಪಸೋಧಿಜಾತೋಸೀತಿ" ಅಂದರೆ, ಕುಮಾರನೆ ಏಕೆ ರೋದನ ಮಾಡುತ್ತಿರುವೆ? ನನ್ನ ತಪಸ್ಸಿನ ಮೂಲಕ ನೀನು ಜನ್ಮವನ್ನು ಪಡೆದಿರುತ್ತೀಯೆ. ಅದಕ್ಕೆ ರುದ್ರನು "ತಮಬ್ರವೀತ್ ಅಪಹತ ಪಾಪ್ಮಾವಾ ಅಹಮಸ್ಮಿ ಹಂತ ನಾಮಾನಿಮೇದೇಹೀತಿ." ಬ್ರಹ್ಮನಿಗೆ ಹೇಳುವ ಮಾತು ನಾನು ಪಾಪರಹಿತನಾಗಬೇಕು. ನನಗೆ ನಾಮಕರಣ ಮಾಡು (ಹೆಸರನ್ನಿಡು) ಎಂದು. "ತಸ್ಮಾಜ್ಜಾತಸ್ಯ ಪುತ್ರಸ್ಯನಾಮ ಕುರ್ಯಾತ್." ಆದ್ದರಿಂದ ಹುಟ್ಟಿದ ಶಿಶುವಿಗೆ ನಾಮಕರಣ ಮಾಡಬೇಕು. ಆಗ ಬ್ರಹ್ಮನು "ಸೋಬ್ರವೀದ್ರುದ್ರೋಸೀತಿ" ನಿನಗೆ ರುದ್ರನೆಂದು ಹೆಸರಿಟ್ಟಿರುತ್ತೇನೆ. ಏಕೆಂದರೆ "ಯದರೋದೀಃ ತಸ್ಮಾದ್ರುದ್ರಸ್ಯರುದ್ರತ್ವಂ" ನೀನು ಜನ್ಮವನ್ನು ಪಡೆದಮೇಲೆ ರೋದನಮಾಡಿದೆ. ರೋದನದಿಂದ ನೀನು ರುದ್ರನೆಂದೇ ಪ್ರಸಿದ್ಧನಾಗು. ಇದು ಶ್ರುತಿಯಲ್ಲಿ ಬಂದಿರುವ ಇತಿಹಾಸ. ಸಕಾಲದಲ್ಲಿ ನಾಮಕರಣಮಾಡುವುದು ಶ್ರೇಯಸ್ಕರವೆಂದು ಈ ಇತಿಹಾಸದಿಂದ ತಿಳಿದುಬರುತ್ತೆ. ನಾಮವನ್ನಿಡುವುದು ಕೇವಲ ಮನುಷ್ಯನಿಗೆ ಅಲ್ಲ. ದೇವಾಲಯ–ಪ್ರಾಣಿಗಳಿಗೂ–ಕಾವ್ಯಗಳಿಗೂ, ಕೊಳಗಳಿಗೂ ಹೆಸರು ಇಡಲ್ಪಟ್ಟಿರುತ್ತೆ. ಯಥಾ ಶ್ರೀಧರೀಯೇ—

"ದೇವಾಲಯ ಗಜಾಶ್ವಾನಾಂ ವೃಕ್ಷಾಣಾಂ ವಾಪಿ ಕೂಪಯೋಃ ।
ಗೃಹೋಪಕರಣಾನಾಂಚ ಚಿಹ್ನಾನಾಂ ಯೋಷಿತಾಂ ನೃಣಾಂ ॥
ಕಾವ್ಯಾದೀನಾಂ ಕಥಾನಾಂಚ ಪಶ್ವಾದೀನಾಂ ವಿಶೇಷತಃ ।
ರಾಜಪ್ರಸಾದ ಸಂಜ್ಞಾನಾಂ ನಾಮಕರ್ಮವಿಧೀಯತೇ ॥" ಎಂದು :

ಮಕ್ಕಳಿಗೆ ದೇವರ ಹೆಸರನ್ನೆ ಇಡಬೇಕು. ಇದಕ್ಕೆ ಪೆರಿಯಾಳ್ವಾರ್ ಶ್ರೀಸೂಕ್ತಿಃ—

"ನಂಬಿ ಪಿಂಬಿ ಎನ್ರು ನಾಟ್ಟು ಮಾನಿಡರ್ಪೈ ಪ್ಪೇರಿಟ್ಟಾಲ್
ಸಂಬುಂಪಿನ್ನು ಮೆಲ್ಲಾಂ ನಾಲುನಾಳಿಲ್ ಅಳುಂಗಿಪ್ಪೋಂ
ಶೆಂಪೆರುಂ ತಾಮರೈಕ್ಕಣ್ಣ ಪ್ಪೇರಿಟ್ಟಳೈತ್ತಕ್ಕಾಲ್
ನಂಬಿಕಾಳ್ ನಾರಣಂ ತಮ್ಮನ್ನೈ ನರಕಂ ಪುಕಾಳ್"

ಅಂದರೆ ನಂಬಿ–ಪಿಂಬಿ ಮೊದಲಾದ ಹೆಸರುಗಳನ್ನಿಟ್ಟರೆ ಇನೆಲ್ಲವೂ ನಾಲ್ಕು ದಿನಗಳಿದ್ದು ನಾಶವಾಗುವುವು. ಪುಂಡರೀಕಾಕ್ಷನ ಹೆಸರನ್ನಿಟ್ಟು ಕೂಗಿದರೆ ಪುಣ್ಯ ವೃದ್ಧಿಯಾಗುವುದು. ಆದ್ದರಿಂದ ಸಹೋದರಿಯರೇ ನಾರಾಯಣನ ಹೆಸರನ್ನಿಟ್ಟು ಕರೆಯಿರಿ. ನಿಮಗೆ ನರಕಬಾಧೆ ಇರುವುದಿಲ್ಲ. ಮತ್ತು :

"ನಲಮುಡೆ ಊತ್ತೆಯಿಲ್ ತೋನ್ರಿತ್ತು ಓರು ಮಲಿ ಊತ್ತೆಯೈ
ಮಲಮುಡೆ ಊತ್ತೆಯಿರ್ ಪೇರಿಟ್ಟಾಲ್ ಮರುಮೈಕ್ಕಿಲ್ಲೇ
ಕುಲಮುಡೈ ಗೋವಿಂದಾ ಗೋವಿಂದಾ ಎನ್ರುಳೈತ್ತಕ್ಕಾಲ್
ನಲಮುಡೆ ನಾರಣ್ಣ ತಮ್ಮನ್ನೈ ನರಕಂ ಪುಕಾಳ್"

ನಾಗರೀಕತೆಯನ್ನನುಸರಿಸಿ ಮಕ್ಕಳಿಗೆ ಏನೇನೋ ಹೆಸರಿಟ್ಟರೆ ಆ ಹೆಸರುಗಳಿಗೆ ಯಾವ ಮಹಿಮೆಯೂ ಇಲ್ಲ. ಆ ಹೆಸರುಗಳಿಗೆ ಶಕ್ತಿಯೂ ಇಲ್ಲ. ಕರೆಯುವವರಿಗೆ ಪುಣ್ಯ ಮೊದಲೆ ಇಲ್ಲ. ಆದ್ದರಿಂದ ಸಹೋದರಿಯರೆ ನಿಮ್ಮ ಮಕ್ಕಳಿಗೂ ನಿಮಗೂ ಪುಣ್ಯವನ್ನು ವೃದ್ಧಿಮಾಡುವ 'ಗೋವಿಂದ' ಎಂಬ ಹೆಸರನ್ನಿಡಿ. ಬಾಯಿ ತುಂಬ ಕರೆಯಿರಿ. ನಿಮಗೆ ನರಕಬಾಧೆ ತಪ್ಪುತ್ತೆ ಎಂದು. ಮುಖ್ಯವಾಗಿ ಜಾತಕರ್ಮ-ನಾಮಕರಣಾದಿಗಳನ್ನು ತತ್ಕಾಲದಲ್ಲಿ ನಡೆಸಿರಿ ಎಂದು ಪರಾಶರರು ಮೇಲಿನ ಪದ್ಯದಿಂದ ಸೂಚಿಸಿರುತ್ತಾರೆ.

ವಚನ ವಿ.ಪು. ಪುಟ ೧೩೦, ಸಾಲು ೨೫

ಮೂಲ: ಉಪತಿಷ್ಠಂತಿ ವೈ ಸಂಧ್ಯಾಂ ಯೇ ನ ಪೂರ್ವಂ ಸಪಶ್ಚಿಮಾಂ ।
ವ್ರಜಂತಿ ತೇ ದುರಾತ್ಮಾನಃ ತಾಮಿಸ್ರಂ ನರಕಂ ನೃಪ ॥ ವಿ.ಪು. ೩-೧೧-೧೦೪

ತಸ್ಮಾದನುದಿತೇ ಸೂರ್ಯೇ ಸಮುತ್ಥಾಯ ಮಹೀಪತೇ ।
ಉಪತಿಷ್ಠೇನ್ನರಸಂಧ್ಯಾಂ ಅಸ್ತಪಂಶ್ಚ ದಿನಾಂತಜಾಂ॥ ವಿ.ಪು. ೩-೧೧-೧೦೩

ಈ ಮೇಲಿನ ಎರಡು ಪದ್ಯಗಳಿಂದ ಪರಾಶರರು ಸಂಧ್ಯೆಯ ಮೇಲ್ಮೆಯನ್ನೂ, ಆಯಾ ಕಾಲದಲ್ಲಿ ಸಂಧ್ಯೆಯನ್ನು (ಸಂಧ್ಯಾವಂದನೆ) ಅನುಷ್ಠಿಸಬೇಕೆಂದೂ, ಸಂಧ್ಯಾಹೀನರಿಗೆ ಆಗುವ ಶಿಕ್ಷೆಯನ್ನೂ ಸಹ ಉಪದೇಶಿಸಿರುತ್ತಾರೆ. ಆದ್ದರಿಂದ ತ್ರಿಕಾಲದಲ್ಲೂ ಸಂಧ್ಯೋಪಾಸನೆ ಅವಶ್ಯ ಅನುಷ್ಠಾನ ಮಾಡಬೇಕು. ನಿತ್ಯವೂ ಭೋಜನವನ್ನೂ, ನಿದ್ರೆಯನ್ನೂ ಹೇಗೆ ಬಿಡುವುದಿಲ್ಲವೋ ಹಾಗೆಯೇ ಸಂಧ್ಯೋಪಾಸನೆಯನ್ನೂ ಬಿಡಕೂಡದು. ಅಂತೆಯೇ ಆದು ನಿತ್ಯಕರ್ಮವಾಯಿತು. ಇದರ ಅನುಷ್ಠಾನದ ಬಗ್ಗೆ ಅನೇಕ ಶ್ರುತಿ-ಸ್ಮೃತಿಗಳು ವಿಶೇಷ ತಿಳುವಳಿಕೆಯನ್ನು ಕೊಟ್ಟಿರುತ್ತವೆ. ಯಥಾ—

ಯಾಜ್ಞವಲ್ಕ್ಯ ಸ್ಮೃತೌ:

"ಯಾವಂತೋಽಸ್ಯಾಂ ಪೃಥಿವ್ಯಾಂತು ವಿಕರ್ಮಸ್ಥಾ ದ್ವಿಜಾತಯಃ ।
ತೇಷಾಂ ಹಿ ಪಾವನಾರ್ಥಾಯ ಸಂಧ್ಯಾ ಸೃಷ್ಟಾಸ್ವಯಂಭುವಾ ॥"

ವಿಹಿತವಾದ ಕರ್ಮಗಳನ್ನು ಬಿಡುವುದು, ನಿಷಿದ್ಧವಾದ ಕರ್ಮ ಆಚರಿಸುವುದು —ಇದರಿಂದ ಬರುವ ಅಶುಚಿತ್ವದ ಪರಿಹಾರವಾಗಿ, ಪಾವಿತ್ರ್ಯದ ಸಂಪಾದನೆಗಾಗಿ ಚತುರ್ಮುಖನಿಂದ ಸಂಧ್ಯೋಪಾಸನೆಯು ಸೃಷ್ಟವಾಯಿತು.

ಆಶ್ವಮೇಧಿಕೇ ಪರ್ವೇ :

"ತೇಷಾಂ ಹಿ ಪಾವನಾರ್ಥಾಯ ನಿತ್ಯಮೇವ ಯುಧಿಷ್ಠಿರ।
ಉಭೇ ಸಂಧ್ಯೇಽಧಿತಿಷ್ಠಾಮಿ ಹ್ಯಸ್ಕನ್ನಂ ತದ್ವ್ರತಂ ಮಮ॥"

ಧರ್ಮರಾಜನೇ ! ಎಲ್ಲರಿಗೂ ಪಾವಿತ್ರ್ಯವನ್ನುಂಟುಮಾಡುವುದಕ್ಕಾಗಿಯೇ ನಿತ್ಯಕರ್ಮವಾದ ಸಂಧ್ಯೋಪಾಸನೆಯನ್ನು ನಾನು ನಿತ್ಯವೂ ಆಚರಿಸುತ್ತಿದ್ದೇನೆ. ಇದು ನನ್ನ ಉತ್ತಮವಾದ ವ್ರತ ಎಂದು ಶ್ರೀಕೃಷ್ಣನು ಹೇಳಿರುವ ಮಾತು.

ಸಂಧ್ಯೋಪಾಸನೆಯನ್ನು ಬಿಟ್ಟವರು ಬ್ರಾಹ್ಮಣರಲ್ಲ. ಅವರು ಸರ್ವಕರ್ಮ ಬಹಿಷ್ಕೃತರೆಂದು ಸ್ಮೃತಿಯು ಹೇಳುತ್ತದೆ. ಯಥಾ ಪಿತಾಮಹಃ—

"ಅನಾಗತಾಂತು ಯೇ ಪೂರ್ವಾಂ ಅನತೀತಾಂತು ಪಶ್ಚಿಮಾಂ।
ಸಂಧ್ಯಾಂನೋಪಾಸತೇ ವಿಪ್ರಾಃ ಕಥಂ ತೇ ಬ್ರಾಹ್ಮಣಾಃ ಸ್ಮೃತಾಃ॥"

ಬ್ರಾಹ್ಮಣತ್ವವು ಉಳಿಯುವುದು ಸಂಧ್ಯೋಪಾಸನೆಯಿಂದ. ಅದನ್ನು ಬಿಟ್ಟವರು ಬ್ರಾಹ್ಮಣರು ಹೇಗೆ ಆದಾರು? ದಕ್ಷಸ್ಮೃತಿಯಲ್ಲಿ—

"ಸಂಧ್ಯಾಹೀನೋಽಶುಚಿರ್ನಿತ್ಯಮನರ್ಹಸ್ಸರ್ವಕರ್ಮಸು।
ಯದನ್ಯತ್ಕುರುತೇ ಕರ್ಮ ನ ತಸ್ಯ ಫಲಮಶ್ನುತೇ॥"

ಸಂಧ್ಯಾಹೀನನಿಗೆ ಆಶೌಚವು ತಪ್ಪಿದ್ದಲ್ಲ. ಅವನು ಇತರ ಕರ್ಮಗಳಿಗೆ ಅನರ್ಹನು. ಇತರ ಕರ್ಮಗಳನ್ನು ಅನುಷ್ಠಿಸಿದರೂ ಅವನಿಗೆ ಆ ಕರ್ಮದ ಫಲವಿಲ್ಲ. ಆದ್ದರಿಂದ ತ್ರಿಸಂಧ್ಯೆಯು ಅವಶ್ಯ ಅನುಷ್ಠೇಯ. ಯಥಾ ಭರದ್ವಾಜಃ—

"ಋಗ್ಯಜುಸ್ಸಾಮವೇದಾನಾಂ ರೂಪತ್ರಯಮಿದಂ ಪರಂ।
ತಸ್ಮಾದ್ದ್ವಿಜ ಸ್ಸದಾ ಸಂಧ್ಯಾತ್ರಿತಯೋಪಾಸ್ತಿಮಾಚರೇತ್॥"

ಮೂರು ವೇದಗಳ ರೂಪವೇ ಸಂಧ್ಯಾತ್ರಿತಯವು. ಪ್ರಾತಃ-ಮಧ್ಯಾಹ್ನ-ಸಂಜೆ ಈ ಮೂರು ಕಾಲಗಳಲ್ಲಿಯೂ ಋಕ್, ಯಜುಃ, ಸಾಮವೇದಗಳ ರೂಪವಾದ ಸಂಧ್ಯೆಯನ್ನು ಉಪಾಸನೆ ಮಾಡುವವನೇ ದ್ವಿಜನು. ವೇದಾಧಿಕಾರವಿರುವವರೆಲ್ಲರೂ ಈ ಸಂಧ್ಯೋಪಾಸನೆಯನ್ನಾಚರಿಸಬೇಕು. ಭಾರತವು ಕರ್ಮಭೂಮಿ. ಇಲ್ಲಿ ಜನಿಸಿದವರು ಯಾರಾದರೂ ಸರಿಯೆ. ಅವರಿಗೆ ಈ ಉಪಾಸನೆಯು ಅನಿವಾರ್ಯ. ಯೋಗಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಹೇಳುವಾಗ

"ಬ್ರಹ್ಮಣೋಪಾಸ್ಯತೇ ಸಂಧ್ಯಾ ವಿಷ್ಣುನಾ ಶಂಕರೇಣ ಚ।
ಕಸ್ಮಾನ್ನೋಪಾಸಯೇದ್ದೇವೀಂ ಶ್ರೇಯಸ್ಕಾಮೋದ್ವಿಜೋತ್ತಮಃ ||"

ಹೀಗೆ ತ್ರಿಮೂರ್ತಿಗಳೇ ಸಂಧ್ಯೆಯನ್ನುಉಪಾಸಿಸಿರುವ ಕಾರಣ ಶ್ರೇಯಸ್ಕಾಮನಾದ ದ್ವಿಜಶ್ರೇಷ್ಠನು ಏಕೆ ಈ ಉಪಾಸನೆಯನ್ನು ಅನುಷ್ಠಿಸಕೂಡದು? ರಾಮಾಯಣ ದಲ್ಲಿ ರಾಮನು ಸಂಧ್ಯಾನುಷ್ಠಾನ ಮಾಡಿರುವುದಾಗಿ ಅಲ್ಲಲ್ಲಿ ವಾಲ್ಮೀಕಿಗಳು ಸೂಚಿಸಿರುತ್ತಾರೆ. ರಾಮನಿಗೆ ಸುಪ್ರಭಾತ ಹೇಳುವಾಗ "ಕೌಸಲ್ಯಾಸುಪ್ರಜಾ ರಾಮ ಪೂರ್ವಾಸಂಧ್ಯಾಪ್ರವರ್ತತೇ। ಉತ್ತಿಷ್ಠನರಶಾರ್ದೂಲ ಕರ್ತವ್ಯಂ ದೈವ ಮಾಹ್ನಿಕಂ ||" ಇಲ್ಲಿ "ಪೂರ್ವಾಸಂಧ್ಯಾಪ್ರವರ್ತತೇ" ಎಂದು ಹೇಳಿ "ಆಹ್ನಿಕಂ ಕರ್ತವ್ಯಂ" ಎಂದು ಸಂಧ್ಯೋಪಾಸನೆಯ ಆವಶ್ಯಕತೆಯನ್ನು ವಿಧಿಸಿರುತ್ತೆ. ವಾಲ್ಮೀಕಿಗಳು ನಿತ್ಯಕರ್ಮವಾದ ಸಂಧ್ಯೋಪಾಸನೆಗೆ ಪ್ರಾಧಾನ್ಯವನ್ನು ಕೊಟ್ಟು ಅಲ್ಲಲ್ಲೆ ಸಂಧ್ಯಾನುಷ್ಠಾನವು ಅವಶ್ಯ ಅನುಷ್ಠೇಯವೆಂದು ಜ್ಞಾಪಿಸಿರುತ್ತಾರೆ. ಯಥಾ—

"ಪೂರ್ವಾಂ ಸಂಧ್ಯಾಮುಪಾಸೀನೋ ಜಜಾಪ ಯ ತಮಾನಸಃ" ಇಲ್ಲಿ ಗಾಯತ್ರೀಜಪವೂ ಪ್ರಾಧಾನ್ಯವೆಂದು 'ಜಜಾಪ' ಎಂಬ ಪದದಿಂದ ಸೂಚಿಸಿರು ತ್ತಾರೆ. ಅಯೋಧ್ಯಾಕಾಂಡದಲ್ಲಿ ಗಂಗಾತೀರದಲ್ಲಿ ರಾಮನು ಸಾಯಂಸಂಧ್ಯೋ ಪಾಸನೆಯನ್ನು ಮಾಡಿ ಕೇವಲ ಜಲವನ್ನೇ ಅಂದು ಆಹಾರವಾಗಿ ಸ್ವೀಕರಿಸಿದ ನೆಂದು ಹೇಳಿರುತ್ತಾರೆ. ಯಥಾ—

"ತತಶ್ಚೀರೋತ್ತರಾಸಂಗಃ ಸಂಧ್ಯಾಮನ್ವಾಸ್ಯಪಶ್ಚಿಮಾಂ।
ಜಲಮೇವಾದದೇ ಭೋಜ್ಯಂ ಲಕ್ಷ್ಮಣೇನಾಹೃತಂ ಪಯಃ ||"

ಭಗವಾನ್ ವ್ಯಾಸಮುನೀಶ್ವರರೂ ಸಹ ಇದರ ಆವಶ್ಯಕತೆಯನ್ನು ಸಮರ್ಥಿಸಿರು ತ್ತಾರೆ—

"ಪ್ರಕ್ಷಿಪೇತ್ಸೂತಕೇಪ್ಯರ್ಘ್ಯಂ ಗಾಯತ್ರೀಂ ತು ಸಮುಚ್ಚರನ್।
ದತ್ವಾಪ್ರದಕ್ಷಿಣಂ ಕುರ್ಯಾತ್ಸೂರ್ಯಂ ಧ್ಯಾಯಂ ಸ್ತತೋದ್ವಿಜಃ ||"

ಅಂದರೆ ಗಾಯತ್ರೀ ಮಂತ್ರವನ್ನುಚ್ಚರಿಸುತ್ತಾ ಸೂತಕದಲ್ಲಿಯೂ ಸಹ ಅರ್ಘ್ಯ ವನ್ನು ಕೊಡುತ್ತಾ ಸೂರ್ಯನನ್ನು ಧ್ಯಾನಿಸಬೇಕೆಂದು ತಿಳುವಳಿಕೆ ಕೊಟ್ಟಿರುತ್ತಾರೆ. ಇದೇ ವಿಷಯವನ್ನು ಪುಲಸ್ತ್ಯರೆಂಬ ಮಹನೀಯರೂ ಸಹ ಸಮರ್ಥಿಸಿರುತ್ತಾರೆ. ಯಥಾ—

"ಸೂತಕೇ ಮೃತಕೇ ಚೈವ ಸಂಧ್ಯಾಕರ್ಮ ನ ಸಂತ್ಯಜೇತ್।
ಮನಸೋಚ್ಚಾರಯೇನ್ಮಂತ್ರಾನ್ ಪ್ರಾಣಾಯಾಮಮೃತೇ ದ್ವಿಜಃ ||

"ಸಂಧ್ಯಾಮಿಷ್ಟಿಂ ಚರುಂ ಹೋಮಂ ಯಾವಜ್ಜೀವಂ ಸಮಾಚರೇತ್ ।
ಸತ್ಯಜೇತ್ಸೂತಕೇ ಚಾಪಿ ತ್ಯಜನ್ನಚ್ಛೇದಧೋ ದ್ವಿಜಃ ॥" ಎಂದು

ಸೂತಕದಲ್ಲಿರುವಾಗಲೂ ಸಂಧ್ಯೋಪಾಸನೆಯನ್ನು ಬಿಡಕೂಡದೆಂದು ಹೇಳಿದ ಮೇಲೆ ಮಿಕ್ಕ ಸಮಯದಲ್ಲಿ ಹೇಳುವುದೇನಿದೆ. ಸಂಧ್ಯೋಪಾಸನೆ-ಇಷ್ಟಿ-ಚರು ಹೋಮ ಇವುಗಳನ್ನು ಜೀವಪರ್ಯಂತ ಅನುಷ್ಠಿಸಬೇಕೆಂದು ಪುಲಸ್ತ್ಯರ ಅಭಿಪ್ರಾಯ. ಗೋಬಿಲರೆಂಬ ಮಹನೀಯರು ಸಂಧ್ಯೋಪಾಸನೆಯನ್ನು ತಿಳಿಯದಿರುವುದು. ಅನುಷ್ಠಾನ ಮಾಡದಿರುವುದು ಮಹಾಪಾಪಕ್ಕೆ ಕಾರಣವೆಂದು ಹೇಳಿರುತ್ತಾರೆ. ಸಂಧ್ಯೆಯನ್ನು ಬಿಟ್ಟವನು ಬದುಕಿರುವ 'ಶವ'ವೆಂತಲೂ ಹೇಳುತ್ತಾರೆ. ಯಥಾ—

"ಸಂಧ್ಯಾಯೇನ ನ ವಿಜ್ಞಾತಾ ಸಂಧ್ಯಾ ನೈವಹ್ಯುಪಾಸಿತಾ।
ಜೀವಮಾನೋ ಭವೇಚ್ಛೂದ್ರೋ ಮೃತಏವಾಭಿಧೀಯತೇ ॥" ಎಂದು

ಸಂಧ್ಯೋಪಾಸನೆಯನ್ನು ಬಿಡದೆ ಅನುಷ್ಠಿಸಿದವರಿಗೆ ಫಲವನ್ನೂ ಹೇಳಿರುತ್ತಾರೆ. ಯಥಾ ಯಮಃ—

"ಸಂಧ್ಯಾಮುಪಾಸತೇ ಯೇತು ಸತತಂ ಸಂಶಿತವ್ರತಾಃ।
ವಿಧೂತ ಪಾಪಾಸ್ತೇಯಾಂತಿ ಬ್ರಹ್ಮಲೋಕಂ ಸನಾತನಂ ॥" ಎಂದು

ಸಂಧ್ಯೋಪಾಸನೆಯನ್ನು ವಿಹಿತಕಾಲದಲ್ಲಿ ಅನುಷ್ಠಿಸುವುದರಿಂದ ಅದು ಉತ್ತಮ ಫಲವನ್ನೇ ನೀಡುತ್ತದೆ. ಆದ್ದರಿಂದ ತತ್ತತ್ಕಾಲದಲ್ಲಿ ಅನುಷ್ಠಿಸುವುದೆಂತಲೂ ನಿರ್ಣಯಿಸಿರುತ್ತಾರೆ. ಪ್ರಾತಃ ನಕ್ಷತ್ರವಿರುವಾಗಲೇ ಅರ್ಘ್ಯೆಯನ್ನು ಬಿಟ್ಟಿರಬೇಕು. ಸೂರ್ಯನನ್ನು ಕಂಡು ಉಪಸ್ಥಾನ ಮಾಡಬೇಕು. ಇದು ಉತ್ತಮ ಸಂಧ್ಯಾ ವಂದನೆ. ನಕ್ಷತ್ರಾಸ್ತಮಯಾನಂತರ ಮಾಡುವ ಸಂಧ್ಯಾವಂದನೆ ಮಧ್ಯಮ ಸಂಧ್ಯಾವಂದನೆ. ಸೂರ್ಯೋದಯವಾದಮೇಲೆ ಮಾಡುವ ಸಂಧ್ಯಾವಂದನೆ ಅಧಮ ಸಂಧ್ಯಾವಂದನೆ. ಈ ರೀತಿ ಪ್ರಾತಸ್ಸಂಧ್ಯೆ ಮೂರು ವಿಧ. ಹೀಗೆಯೇ ಸಂಜೆ ಸೂರ್ಯನನ್ನು ನೋಡುತ್ತಲೆ ಅರ್ಘ್ಯೆಯನ್ನು ಸಮರ್ಪಿಸಿ ಜಪ-ಉಪಸ್ಥಾನ ಮಾಡುವುದು ಉತ್ತಮ. ಸೂರ್ಯಾಸ್ತಮಯಾನಂತರ ಮಾಡುವ ಸಂಧ್ಯೆ ಮಧ್ಯಮ. ನಕ್ಷತ್ರೋದಯಾನಂತರ ಮಾಡುವುದು ಅಧಮ—ಹೀಗೆ ಸಾಯಂಸಂಧ್ಯೆಯೂ ಮೂರು ವಿಧ. ನೆತ್ತಿಯ ಮೇಲೆ ಸೂರ್ಯನಿರುವಾಗ ಮಾಧ್ಯಾಹ್ನಿಕವು ಉತ್ತಮವು. ಈ ಅಭಿಪ್ರಾಯವನ್ನೇ ತಮಿಳಿನಲ್ಲಿ ಕಾಣಾಮಲ್ (ಸೂರ್ಯನನ್ನು ನೋಡುವುದಕ್ಕೆ ಮುಂಚೆ) ಕೋಣಾಮಲ್ (ಸೂರ್ಯನು ನೆತ್ತಿಯ ಮೇಲಿರು ವಾಗ) ಕಂಡುವಿಡು (ಸಂಜೆ ಸೂರ್ಯನನ್ನು ನೋಡಿ ಅರ್ಘ್ಯ ಬಿಡು) ಎಂದು ಉತ್ತಮ ಪಕ್ಷವನ್ನಾಗಿ ಆರಿಸಿರುತ್ತಾರೆ. ಪ್ರಮಾಣವೇನೆಂದರೆ—

ಪ್ರಾತಸ್ಸಂಧ್ಯಾವಂದನೆಗೆ

"ಉತ್ತಮಾತು ಸನಕ್ಷತ್ರಾ ಮಧ್ಯಮಾ ಲುಪ್ತತಾರಕಾ।
ಅಧಮಾ ಸೂರ್ಯಸಹಿತಾ ಪ್ರಾತಸ್ಸಂಧ್ಯಾತ್ರಿಧಾಮತಾ॥"

ಸಾಯಂಸಂಧ್ಯಾವಂದನೆ

"ಉತ್ತಮಾ ಸೂರ್ಯಸಹಿತಾ ಮಧ್ಯಮಾ ಲುಪ್ತಭಾಸ್ಕರಾ।
ಅಧಮಾ ತು ಸನಕ್ಷತ್ರಾ ಸಾಯಂಸಂಧ್ಯಾತ್ರಿಧಾಮತಾ॥"

ಇದರಲ್ಲಿ ಉತ್ತಮ ಪಕ್ಷವನ್ನಂಗೀಕರಿಸುವುದು ಶ್ರೇಯಸ್ಕರ. ವಿಹಿತಕಾಲದಲ್ಲಿ ಸಂಧ್ಯಾನುಷ್ಠಾನ ಮಾಡುವುದಾದರೆ ಶುದ್ಧತೆ, ಅಶುದ್ಧತೆಯನ್ನು ವಿಮರ್ಶಿಸ ಬೇಕಾಗಿಲ್ಲ. ಹೇಗಿದ್ದರೆ ಹಾಗೆಯೇ ಶುಚಿತ್ವ "ಶುಚಿರ್ವಾ ಅಶುಚಿರ್ವಾ ಕಾಲೇ ಕಾಲೇ ಸಂಧ್ಯಾಮುಪಾಸೀತ" ಎಂಬ ವಿಧಿವಾಕ್ಯವು ವಿಹಿತಕಾಲದಲ್ಲಿ ಮಾಡು ಎಂದು ಬೋಧಿಸುತ್ತದೆ.

ಇದುವರೆವಿಗೆ ಸ್ಮೃತಿ-ಇತಿಹಾಸ-ಪುರಾಣಗಳ ಪ್ರಮಾಣವನ್ನು ವಿವರಿಸಿದ್ದಾಯಿತು. ಸಂಧ್ಯೋಪಾಸನೆಗೆ ಶ್ರುತಿಪ್ರಮಾಣವುಂಟೊ ಅಂದರೆ ಅದರ ಪ್ರಮಾಣವೂ ಉಂಟು. ಯಜುರಾರಣ್ಯಕದ ಎರಡನೆಯ ಪ್ರಶ್ನದಲ್ಲಿ–"ತದುಹವಾ ಏತೇ ಬ್ರಹ್ಮವಾದಿನಃ ಪೂರ್ವಾಭಿಮುಖಾಸ್ಸಂಧ್ಯಾಯಾಂ ಗಾಯತ್ರ್ಯಾ ಅಭಿಮಂತ್ರಿಕಾ ಆಪ ಊರ್ಧ್ವಂ ವಿಕ್ಷಿಪಂತಿ" ನಿಯಮವನ್ನು ವಿಧಿಸಿರುವ ಈ ಶ್ರುತಿವಾಕ್ಯದಲ್ಲಿ ಸಂಧ್ಯೆಯಲ್ಲಿಯೇ ಅರ್ಘ್ಯವನ್ನು ಕೊಡಬೇಕೆಂದು ಹೇಳಿರುತ್ತದೆ. "ಊರ್ಧ್ವಂತ್ರಿಸಂಧ್ಯಯೋಃ ಕ್ಷಿಪೇತ್" ಎಂಬುದಾಗಿ ಸ್ಮೃತಿವಾಕ್ಯವೂ ಇರುತ್ತೆ. 'ಸಂಧ್ಯೆ' ಎಂದರೆ ಸೂರ್ಯೋದಯಕ್ಕೆ ಮುಂಚಿನ ಕಾಲ. ಆಗಲೇ ಅರ್ಘ್ಯೆಯನ್ನು ಸಮರ್ಪಿಸಬೇಕೆಂದು ಸಿದ್ಧವಾಯಿತು. ಈ ಶ್ರುತಿ-ಸ್ಮೃತಿ ವಾಕ್ಯಗಳನ್ನನುಸರಿಸಿ ಶ್ರೀ ಪರಾಶರರೂ ಸಹ 'ತಸ್ಮಾದನುದಿತೇ ಸೂರ್ಯೇ ಸಮುತ್ಥಾಯಉಪತಿಷ್ಠೇನ್ನರಸ್ಸಂಧ್ಯಾಂ" ಎಂದು ಮೇಲಿನ ಪದ್ಯದಲ್ಲಿ ಸಂಧ್ಯಾವಂದನೆಯ ಕಾಲವನ್ನು ಖಚಿತವಾಗಿ ತಿಳಿಸಿರುತ್ತಾರೆ. ಅಲ್ಲದೆ "ಅಥೋಪತಿಷ್ಠೇದಾದಿತ್ಯಂ ಉದಯಂತಂ ದಿವಾಕರಂ" ಅಂದರೆ ಇನ್ನೇನು ಸೂರ್ಯನು ಉದಯಿಸುತ್ತಾನೆ, ಅನ್ನುವಾಗ ಉಪಸ್ಥಾನ ಮಾಡಬೇಕು ಎಂಬ ಮಾತಿರುವುದರಿಂದ ಸೂರ್ಯೋದಯಕ್ಕೆ ಮುಂಚೆ ಅರ್ಘ್ಯವೂ, ಗಾಯತ್ರೀಜಪವೂ ಮುಗಿದಿರಬೇಕು. ಶ್ರುತಿಯೂ ಸಹ "ಉದ್ಯಂತಮಸ್ತಂ ಯಂತಮಾದಿತ್ಯ ಮಭಿಧ್ಯಾಯನ್ ಕುರ್ವನ್ಬ್ರಾಹ್ಮಣೋ ವಿದ್ವಾನ್ಸಕಲಂ ಭದ್ರಮಶ್ನುತೇಽಸಾವಾದಿತ್ಯೋ ಬ್ರಹ್ಮೇತಿ ಬ್ರಹ್ಮೈವಸನ್ ಬ್ರಹ್ಮಾಪ್ಯೇತಿ" ಈ ಶ್ರುತಿವಾಕ್ಯದಲ್ಲಿ 'ಉದ್ಯಂತಂ' ಹುಟ್ಟುತ್ತಿರುವ 'ಅಸ್ತಂ

ಯಂತಂ' ಮುಳುಗುತ್ತಿರುವ ಸೂರ್ಯನನ್ನು ನೋಡುತ್ತಾ ಸಂಧ್ಯೋಪಾಸನೆಯನ್ನು ಅನುಷ್ಠಿಸಬೇಕು (ಮುಗಿಸಬೇಕು). ಅಲ್ಲಿಗೆ ಸೂರ್ಯೋದಯಾನಂತರ ಸಂಧ್ಯಾನುಷ್ಠಾನ ಮಾಡುವುದು ಗೌಣಕಾಲವಾಗುತ್ತೆ.

ಅಲ್ಲದೆ ತ್ರಿಸಂಧ್ಯೆಯಲ್ಲೂ ಅರ್ಘ್ಯವನ್ನು ನಿಂತುಕೊಂಡು ಅಂಜಲಿಯಲ್ಲಿರುವ ನೀರನ್ನು ಮೇಲಕ್ಕೆ ಎರಚಬೇಕೆಂದು "ಆಪ ಊರ್ಧ್ವಂ ವಿಕ್ಷಿಪಂತಿ" ಆಪೋ ವಜ್ರೀ ಭೂತ್ವಾ ಮಂದೇಹಾರುಣೇ ದ್ವೀಪೇ ಪ್ರಕ್ಷಿಪಂತಿ" ಶ್ರುತಿಯು ಹೇಳಿರುತ್ತದೆ. ಕಾರಣವೇನೆಂದರೆ ವೇದದಲ್ಲಿ ಈ ಇತಿಹಾಸವು ಬಂದಿರುತ್ತೆ. ಬಹಳ ಹಿಂದಿನ ಕಾಲದಲ್ಲಿ ರಾಕ್ಷಸರು ಉಗ್ರವಾದ ತಪಸ್ಸನ್ನಾಚರಿಸಿದರು. ಅವರಿಗೆ ಚತುರ್ಮುಖನು ಪ್ರತ್ಯಕ್ಷನಾಗಿ ವರವೇನುಬೇಕೆಂದು ಕೇಳಿದರು. ಅವರು ಸೂರ್ಯನೊಡನೆ ಯುದ್ಧಮಾಡಬೇಕೆಂದು ಕೇಳಿದರು. ಯುದ್ಧಮಾಡಿ ಎಂದು ವರವನ್ನು ಕೊಟ್ಟನು. ಅದರಂತೆ ಸೂರ್ಯನು ಹುಟ್ಟುತ್ತಿರುವಂತೆಯೇ ಅವನ ಸಂಚಾರವನ್ನು ಈ ರಾಕ್ಷಸರು ತಡೆದರು. ಸೂರ್ಯನು ಹುಟ್ಟಿಬರುವ ಸ್ಥಳದಲ್ಲಿ ಮಂದೇಹಾರುಣದ್ವೀಪವೆಂಬ ಒಂದು ದ್ವೀಪವಿದೆ. ಅಲ್ಲಿ ರಾಕ್ಷಸರು ಸೂರ್ಯನ ಗತಿಗೆ ಅಡ್ಡಲಾದರು. ಆಗ ಬ್ರಾಹ್ಮಣರು ಗಾಯತ್ರೀ ಮಂತ್ರದಿಂದ ಮಂತ್ರಿತವಾದ ತೀರ್ಥವನ್ನು ಮೇಲುಮುಖನಾಗಿ ಎರಚಿದರು. ಆಗ ಆ ತೀರ್ಥದ ಒಂದೊಂದು ತುಂತುರೂ ಸಹ ಒಂದೊಂದು ವಜ್ರಾಯುಧವಾಗಿ ಹೋಗಿ ಆ ರಾಕ್ಷಸರನ್ನು ನಿಗ್ರಹಿಸಿತು. ಸೂರ್ಯನು ಮುಂದೆ ಸಂಚರಿಸಲು ಸಾಧ್ಯವಾಯಿತು. ಆದರೇನು? ಆ ರಾಕ್ಷಸರಿಗೆ ಪುನಃ ಮಧ್ಯಾಹ್ನದ ಸಂಧಿಕಾಲದಲ್ಲೂ, ಸಾಯಂ ಸಂಧ್ಯಾಕಾಲದಲ್ಲೂ ಬಲವು ವೃದ್ಧಿಯಾಗಿ ಸೂರ್ಯನಿಗೆ ಅಡ್ಡಲಾದರು. ಆಗ ಪುನಃ ಅರ್ಘ್ಯವನ್ನು ಕೊಡಬೇಕು. ಅದಕ್ಕೆ ನಿಂತು ಅರ್ಘ್ಯವನ್ನು ಮೇಲುಮುಖನಾಗಿ ಎರಚಬೇಕೆಂದು ವೇದವು ಹೇಳಿರುತ್ತದೆ.

ಈ ರೀತಿ ಸಂಧ್ಯಾನುಷ್ಠಾನವನ್ನು ಮಾಡುವವನನ್ನು ವೇದಪುರುಷನು 'ವಿದ್ವಾನ್' ಎಂದು ಶ್ಲಾಘಿಸಿರುತ್ತಾರೆ. ಈತನು ಸಕಲ ಮಂಗಳಗಳನ್ನೂ ಕಾಣುತ್ತಾನೆ. ಬ್ರಹ್ಮವಿತ್ತಾಗಿ ಪರಬ್ರಹ್ಮನ ಸಾಯುಜ್ಯವನ್ನೂ ಪಡೆಯುತ್ತಾನೆಂದು ವೇದಪುರುಷನು ಹೇಳಿರುತ್ತಾನೆ. ಪ್ರಾತಸ್ಸಂಧ್ಯಾವಂದನೆ ಮತ್ತು ಮಾಧ್ಯಾಹ್ನಿಕಗಳನ್ನು ನಿಂತು ಮಾಡಬೇಕೆಂದೂ, ಸಾಯಂ ಸಂಧ್ಯಾವಂದನೆಯನ್ನು ಅರ್ಘ್ಯ ಮತ್ತು ಉಪಸ್ಥಾನ ವಿನಹಾ ಉಳಿದ ಜಪ-ಅಂಗನ್ಯಾಸಗಳನ್ನು ಕುಳಿತೇ ಮಾಡಬೇಕೆಂದೂ ವಿಧಿಯಿದೆ "ಪ್ರಾತಸ್ತಿಷ್ಠನ್ ಸಾಯಮಾಸೀನಃ" ಎಂದು. ಶ್ರುತಿಯೂ ಸಹ—"ಬ್ರಹ್ಮವಾದಿನೋ ವದಂತಿ, ಕಸ್ಮಾತ್ ಬ್ರಾಹ್ಮಣಃ ಅಹೋರಾತ್ರೇ ಸಂಯೋಗೇ ಸಂಧ್ಯಾಮುಪಾಸ್ತೇ, ಕಸ್ಮಾತ್ಪ್ರಾತಸ್ತಿಷ್ಠನ್? ಕಸ್ಮಾದ್ಬ್ರಾಹ್ಮಣ

ಸ್ಸಾಯಮಾಸೀನಸ್ಸಂಧ್ಯಾಮುಪಾಸ್ತೇ? ಕಾಸಂಧ್ಯಾ? ಕಶ್ಚಸಂಧ್ಯಾಕಾಲಃ? ಇತಿಪ್ರಶ್ನಾಃ. ಉತ್ತರವು ಈ ರೀತಿ ಇರುತ್ತೆ. ದೇವಾಶ್ಚ ಅಸುರಾಶ್ಚ ಅಸ್ಪರ್ಧಂತ, ತೇ ಅಸುರಾಃ ಆದಿತ್ಯಮಭಿದ್ರುವನ್. ಸ ಆದಿತ್ಯೋ ಬಭೇತ್. ಅಂದರೆ ದೇವತೆಗಳು—ಅಸುರರು ಸ್ಪರ್ಧೆಗೆ ಇಳಿದರು. ಆಗ ಅಸುರರು ಸೂರ್ಯನನ್ನು ಮುತ್ತಿದರು. ಆಗ ಸೂರ್ಯನು ಹೆದರಿದನು. ಆಗ "ಪ್ರಜಾಪತಿರೇತದ್ಭೇಷಜಮಪಶ್ಯತ್" ಬ್ರಹ್ಮನು ಸಂಧ್ಯೋಪಾಸನೆಯೆ ಇದಕ್ಕೆ ಔಷಧವೆಂದು ಕಂಡುಹಿಡಿದನು. "ತಸ್ಮಾದ್ಬ್ರಾಹ್ಮಣಃ ಅಹೋರಾತ್ರ ಸಂಯೋಗೇ ಸಂಧ್ಯಾಮುಪಾಸ್ತೆ=ಅದಕ್ಕೆ ಬ್ರಾಹ್ಮಣನು ಪ್ರಾತಸ್ಸಂಧ್ಯಾಕಾಲಗಳ ಸಂಧಿಕಾಲದಲ್ಲಿ ಸಂಧ್ಯಾವಂದನೆಯನ್ನಾಚರಿಸುತ್ತಾನೆ. ಯತ್ಸಾಯಂ ಆಸೀನಃ ಸಂಧ್ಯಾಮುಪಾಸ್ತೇ ತಯಾ ವೀರಸ್ಥಾನಂಜಯತಿ=ಸಾಯಂ ಸಂಧ್ಯೆಯಲ್ಲಿ ಜಪವನ್ನು ಕುಳಿತು ಮಾಡುವುದರಿಂದ ವೀರರಸ್ಥಾನವನ್ನು ಗೆಲ್ಲುತ್ತಾನೆ. "ಯತ್ಪ್ರಾತಸ್ತಿಷ್ಠನ್ ತಯಾಸ್ವರ್ಗಂ ಲೋಕಂ ಜಯತಿ=ಪ್ರಾತಃ ನಿಂತ ಸಂಧ್ಯೋಪಾಸನೆಯನ್ನು ಮಾಡುವುದರಿಂದ ಸ್ವರ್ಗಲೋಕವನ್ನು ಜಯಿಸುತ್ತಾನೆ" ಎಂದು ಹೇಳಿರುತ್ತದೆ.

ಸಂಧ್ಯೆಯನ್ನು ಕೆಲವು ಸಮಯದಲ್ಲಿ ವಿಹಿತಕಾಲದಲ್ಲಿ ಆಚರಿಸದಿದ್ದರೂ ದೋಷವಿಲ್ಲ. ಶ್ರೀ ವರಾಹಪುರಾಣದಲ್ಲಿ ಶ್ವೇತವರಾಹಮೂರ್ತಿಯು ಭೂದೇವಿಗೆ ಹೇಳುವ ಮಾತು: "ಯಾವ ಯಾವ ಕಾಲದಲ್ಲಿ ಯಾವ ಯಾವ ಕರ್ಮಗಳನ್ನು ಮಾಡಬೇಕೆಂದು ವೇದಶಾಸ್ತ್ರವು ವಿಧಿಸಿರುತ್ತದೊ, ಅಂತಹ ವೇಳೆಯಲ್ಲಿ ನನ್ನ ಕೈಂಕರ್ಯವನ್ನು ಮಾಡುತ್ತಿದ್ದಲ್ಲಿ ನಿತ್ಯಕರ್ಮಕ್ಕೆ ಲೋಪಬಂದರೂ ದೋಷವಿಲ್ಲ. ಅಲ್ಲಿಗೆ ಕರ್ಮವನ್ನು ಬಿಡಬೇಕೆಂದರ್ಥವಲ್ಲ. ಭಗವತ್ಕೈಂಕರ್ಯವು ಮುಗಿದೊಡನೆ ವಿಹಿತವಾದ ನಿತ್ಯಕರ್ಮವನ್ನನುಷ್ಠಿಸತಕ್ಕದ್ದು. ಬೀದಿಯಲ್ಲಿ ಭಗವದುತ್ಸವವು ನಡೆಯುತ್ತಿರುವಾಗಲೂ, ಬ್ರಹ್ಮೋತ್ಸವಾದಿಕಾಲಗಳಲ್ಲಿ ಭಗವಂತನು ಆಸ್ಥಾನ ಮಂಟಪದಲ್ಲಿರುವಾಗಲೂ, ವೇದವಿಹಿತವಾದ ಕರ್ಮವು ಪ್ರಾಪ್ತವಾಯಿತೆಂದು ಭಗವತ್ಕೈಂಕರ್ಯವನ್ನು ಅಲ್ಲಿಗೆ ನಿಲ್ಲಿಸಿ ಸಂಧ್ಯಾದಿ ಅನುಷ್ಠಾನಗಳಿಗೆ ಹೋಗಕೂಡದು. ಭಗವದತಿಕ್ರಮವೆಂಬ ದೋಷಕ್ಕೆ ಭಾಗಿಯಾಗುವುದಲ್ಲದೆ ನೂರು ಜನ್ಮಗಳು ನಾಯಿಯ ಯೋನಿಯಲ್ಲಿ ಹುಟ್ಟಿ ಅನಂತರ ಚಾಂಡಾಲ ಯೋನಿಯಲ್ಲಿ ಹುಟ್ಟುವನು. ಆದ್ದರಿಂದ ಭಗವತ್ಕೈಂಕರ್ಯದಲ್ಲಿ ನಿರತರಾದವರಿಗೆ ಅಕಾಲದಲ್ಲಿ ಮಾಡಿದ ಕರ್ಮಕ್ಕೂ ವಿಶೇಷ ಫಲವುಂಟು ಎಂದು ಭೂದೇವಿಗೆ ವರಾಹಮೂರ್ತಿಯು ಉಪದೇಶಿಸಿರುವ ಭಾಗವು ಗಮನಿಸಬೇಕಾದ ಅಂಶವು. ಆ ಪದ್ಯಗಳು ಯಾವುವೆಂದರೆ ಯಥಾ "ಶ್ರೀವಾರಾಹೇ."

"ಯಸ್ಮಿನ್ಕಾಲೇ ವಿಶಾಲಾಕ್ಷಿ ಯಸ್ಯಯತ್ಕರ್ಮ ಚೋದಿತಂ।
ತತ್ಕಾಲೇ ಕರ್ಮತತ್ತ್ಯಕ್ತ್ವಾ ಮಾಮುಪಾಸ್ತೇ ನರೋ ಯದಿ॥
ನದೋಷಸ್ತತ್ರ ದೇವೇಶಿ ಭವತ್ಯತ್ರ ನ ಸಂಶಯಃ।
ರಥ್ಯಾಂ ಗತೇಶು ದೇವೇಶೇ ಹ್ಯಾಸ್ಥಾನಂ ಚಾಸ್ಥಿತೇ ಸತಿ॥
ಮಧ್ಯೇ ಸಂಧ್ಯಾಮನುಪ್ರಾಪ್ತಾಂ ವಿಪ್ರಾವೇದಾರ್ಥಮೋಹಿತಾಃ।
ಸಂಧ್ಯೋಪಾಸ್ಯಾಂ ಪ್ರಕುರ್ವಂತಿ ನರಾವಿಷ್ಣು ಪರಾಙ್ಮುಖಾಃ॥
ಶ್ವಾನಯೋನಿಶತಂ ಪ್ರಾಪ್ಯ ಚಾಂಡಾಲೀಂ ಯೋನಿಮಾಪ್ನುಯುಃ॥"

ಎಂದು ಒಂದು ವೇಳೆ ಅಬುದ್ಧಿಪೂರ್ವಕವಾಗಿ ಸಂಧ್ಯಾಹಾನಿಯು ಪ್ರಾಪ್ತವಾದರೆ ಸಾಯಂಸಂಧ್ಯೆಯನ್ನತಿಕ್ರಮಿಸುವುದಾದರೆ ರಾತ್ರಿ ಉಪವಾಸವಿರಬೇಕು. ಪ್ರಾತಸ್ಸಂಧ್ಯೆಯ ಅತಿಕ್ರಮವು ಪ್ರಾಪ್ತವಾದರೆ ಹಗಲು ಉಪವಾಸವಿರಬೇಕು ಎಂದು ಬೋಧಾಯನರು ಹೇಳಿರುತ್ತಾರೆ. ಯಥಾಹ ಮನುಃ—

"ವೇದೋದಿತಾನಾಂ ನಿತ್ಯಾನಾಂ ಕರ್ಮಣಾಂ ಸಮತಿಕ್ರಮೇ।
ಸ್ನಾತಕವ್ರತಲೋಪೇಚ ಪ್ರಾಯಶ್ಚಿತ್ತಮಭೋಜನಂ॥" ಅಂದರೆ

ವೇದೋದಿತವಾದ ನಿತ್ಯಕರ್ಮಗಳನ್ನು ಅತಿಕ್ರಮಿಸಿದ್ದಾದರೆ, ಭೋಜನವನ್ನು ಬಿಡುವುದೇ ಪ್ರಾಯಶ್ಚಿತ್ತವು ಎಂದು ಮನುವಿನ ಸಿದ್ಧಾಂತ.

ಆದ್ದರಿಂದ ವಿಹಿತಕಾಲದಲ್ಲಿ ಶಾಸ್ತ್ರಚೋದಿತವಾದ ಸಂಧ್ಯಾದಿಕರ್ಮಗಳನ್ನು ಅವಶ್ಯ ಅನುಷ್ಠಿಸುವುದು ಶ್ರೇಯಸ್ಕರವಾದ ದಾರಿಯೆಂದು ಶ್ರೀ ಪರಾಶರರು ಮೇಲಿನ ಎರಡು ಪದ್ಯಗಳಲ್ಲಿ ಉಪದೇಶಿಸಿರುತ್ತಾರೆ.

ವಚನ ವಿ.ಪು. ಪುಟ ೧೩೮, ಸಾಲು ೧೧

ಮೂಲ: ಏವಂ ಶ್ರಾದ್ಧಂ ಬುಧಃ ಕುರ್ಯಾತ್ ಪೈತ್ರ್ಯಂ ಮಾತಾಮಹಂ ತಥಾ।
ಶ್ರಾದ್ಧೈಸ್ತಾಪ್ಯಾಯಿತಾ ದದ್ಯುಸ್ಸರ್ವಾನ್ ಕಾಮಾನ್ಪಿತಾಮಹಾಃ॥

ವಿ.ಪು. ೩-೧೫-೫೧

ಔರ್ವಮಹರ್ಷಿಗಳು ಸಗರಚಕ್ರವರ್ತಿಗೆ ಶ್ರಾದ್ಧವು ಅವಶ್ಯ ಅನುಷ್ಠೇಯವೆಂದು ಸಪ್ರಮಾಣವಾಗಿ ಈ ಅಧ್ಯಾಯದಲ್ಲಿ ಉಪದೇಶಿಸಿರುತ್ತಾರೆ. ಇದನ್ನೇ ಪರಾಶರರು ಮೈತ್ರೇಯರಿಗೆ ವಿವರಿಸುತ್ತಾರೆ.

"ದೇವಪಿತೃಕಾರ್ಯಾಭ್ಯಾಂ ನಪ್ರಮದಿತವ್ಯಂ" ತತ್ತತ್ಕಾಲದಲ್ಲಿ ದೇವತಾಕಾರ್ಯವನ್ನೂ, ಪಿತೃಕಾರ್ಯವನ್ನೂ (ಶ್ರಾದ್ಧ) ನಡೆಸಬೇಕೆಂದು ತೈತ್ತಿರೀಯ ಉಪನಿಷತ್ತು ಶಾಸನ ಮಾಡಿರುತ್ತೆ. ಹಾಗೆಯೇ ರಾಮಾಯಣದಲ್ಲೂ:

"ಜೀವತೋ ವಾಕ್ಯಕರಣಾತ್ ಪ್ರತ್ಯಬ್ದಂ ಭೂರಿಭೋಜನಾತ್ ।
ಗಯಾಯಾಂ ಪಿಂಡದಾನಾಚ್ಚ ತ್ರಿಭಿಃ ಪುತ್ರಸ್ಯ ಪುತ್ರತಾ ॥"

ಅಂದರೆ ತಂದೆತಾಯಿಗಳು ಬದುಕಿರುವಾಗ ಅವರ ಮಾತಿನಂತೆ ನಡೆದುಕೊಳ್ಳುವುದು—ಅವರು ಗತಿಸಿದ ಮೇಲೆ ಪ್ರತಿಮೃತ ತಿಥಿಯಲ್ಲಿ ಸತ್ಪಾತ್ರದಲ್ಲಿ ಭೋಜನ ನೀಡುವುದು, ಗಯೆಯಲ್ಲಿ ಪಿಂಡಪ್ರಧಾನ ಮಾಡುವುದು. ಈ ಮೂರರಿಂದ ಪುತ್ರನಿಗೆ ಪುತ್ರತ್ವ ಉಳಿಯುತ್ತೆಂದು ಶ್ರೀ ವಾಲ್ಮೀಕಿಗಳು ಉಪದೇಶಿಸಿರುತ್ತಾರೆ.

ಸ್ಮೃತಿಕಾರರ ಅಭಿಪ್ರಾಯ:

"ಪಂಡಿತಾ ಜ್ಞಾನಿನೋ ಮೂರ್ಖಾಃ ಸ್ತ್ರಿಯೋ ವಾ ಬ್ರಹ್ಮಚಾರಿಣಃ ।
ಮೃತಾಹಂ ಸಮತಿಕ್ರಮ್ಯ ಚಂಡಾಲೇಷ್ವಭಿಜಾಯತೇ ॥" ಅಂದರೆ

ಮೃತ ತಿಥಿಯಲ್ಲಿ ಶ್ರಾದ್ಧಕರ್ಮ ಮಾಡದವನು ಯಾರೇ ಆಗಿರಲಿ ಮುಂದೆ ಚಾಂಡಾಲ ಯೋನಿಯಲ್ಲಿ ಹುಟ್ಟುವನು. ಶ್ರಾದ್ಧಾದಿಗಳನ್ನು ಬಿಟ್ಟವನು ಹದಿನಾಲ್ಕು ಜನ್ಮ ಚಾಂಡಾಲ ಯೋನಿಯಲ್ಲಿ ಹುಟ್ಟುವುದಾಗಿ ಕೂರ್ಮ ಪುರಾಣವು ಹೇಳುತ್ತದೆ.

ವಿಷ್ಣುಪುರಾಣದ ಮೂರನೇ ಅಂಶದ ಕಡೆಯಲ್ಲೂ:

"ತೋಯಪ್ರದಾನ ಪಿತೃಪಿಂಡ ಬಹಿಷ್ಕೃತಾನಾಂ ಸಂಭಾಷಣಾದಪಿ ನರಾ ನರಕಂ ಪ್ರಯಾಂತಿ" ಅಮಾವಾಸ್ಯಾತರ್ಪಣಾದಿ ಪ್ರತ್ಯಾಬ್ದೀಕ ಶ್ರಾದ್ಧಗಳನ್ನು ಬಿಟ್ಟವರು ನರಕಕ್ಕೆ ಹೋಗುವುದಿರಲಿ—ಅವರೊಡನೆ ಸಂಭಾಷಣೆ ಮಾಡಿದವರೂ ಸಹ ನರಕಗಾಮಿಗಳಾಗುತ್ತಾರೆ.

ಶ್ರಾದ್ಧಾದಿಗಳನ್ನು ನಡೆಸಲು ಧನವೂ-ಧಾನ್ಯವೂ ಅವಶ್ಯ ಬೇಕು. ದರಿದ್ರನಾದವನು ಏನು ಶ್ರಾದ್ಧಮಾಡಿಯಾನು? ಆವನಿಗೆ ತನ್ನ ಊಟಕ್ಕೆ ಅವಕಾಶವಿಲ್ಲದೆ ಭಿಕ್ಷೆ ಬೇಡುತ್ತಾನೆ. ಇಂತಹವನ ಗತಿಯೇನು? ಎಂಬ ಶಂಕೆ ಬಂದರೆ ಆತನಿಗೂ ಶಾಸ್ತ್ರ ದಾರಿ ತೋರಿರುತ್ತೆ.

"ಶ್ರಾದ್ಧೇಹನಿತು ಸಂಪ್ರಾಪ್ತೇ ತ್ವಭಾವೇ ದ್ರವ್ಯ ವಿಪ್ರಯೋಃ ।
ಪಿಂಡಮಾತ್ರ ಪ್ರದಾನಂ ವಾ ಭವೇನ್ನಿರಶನೋಪಿ ವಾ ॥"

ಶ್ರಾದ್ಧದಿನದಲ್ಲಿ ಧನ-ವಿಪ್ರರ ಸಹಾಯವಿಲ್ಲದವನು, ಬ್ರಾಹ್ಮಣ ಭೋಜನವನ್ನು ಮಾಡಿಸಬೇಕಾದ್ದಿಲ್ಲ. ಪಿಂಡವನ್ನು ಕೇವಲ ಪಿತೃಗಳಿಗೆ ಅರ್ಪಣೆ ಮಾಡಿದರೆ ಸಾಕು. ಅದಕ್ಕೂ ಗತಿ ಇಲ್ಲದಿದ್ದರೆ ಶ್ರಾದ್ಧದಿನದಲ್ಲಿ ಪೂರ್ಣ ಉಪವಾಸವನ್ನು ಮಾಡುವುದು. ಅಥವಾ ಅರಣ್ಯಕ್ಕೆ ಹೋಗಿ ರೋದನಮಾಡಿದರೂ ಸರಿಯೆ. ಸ್ಮೃತಿಕಾರರು ಶ್ರಾದ್ಧವನ್ನು ಪ್ರಶಂಸಿಸಿದ್ದಾರೆ. ಯಥಾ—

"ಯೇಯಜಂತಿ ಪಿತೃನ್ ದೇವಾನ್ ಬ್ರಾಹ್ಮಣಾನ್ ಸಹುಕಾಶನಾನ್ ।
ಸರ್ವಭೂತಾಂತರಾತ್ಮಾನಂ ವಿಷ್ಣುಮೇವ ಯಜಂತಿ ತೇ॥

ಆಯುಃಪುತ್ರಾನ್ ಯಶಸ್ಸ್ವರ್ಗಂ ಕೀರ್ತಿಂ ಪುಷ್ಟಿಂ ಬಲಂ ಶ್ರೀಯಂ।
ಪಶೂನ್ ಸುಖಂ ಧನಂ ಧಾನ್ಯಂ ಪ್ರಾಪ್ನುಯಾತ್ಪಿತೃಪೂಜನಾತ್ ॥" ಅಂದರೆ

ಪಿತೃಗಳನ್ನು, ದೇವತೆಗಳನ್ನು, ಬ್ರಾಹ್ಮಣರನ್ನು ಯಾರು ಪೂಜಿಸುತ್ತಾರೊ ಅವರು ಸರ್ವಭೂತಗಳಿಗೂ ಅಂತರಾತ್ಮನಾದ ನನ್ನನ್ನೇ ಪೂಜಿಸುತ್ತಾರೆ. ಪಿತೃ ಪೂಜಕರಿಗೆ ಆಯುಸ್ಸು, ಸತ್ಸಂತತಿಕೀರ್ತಿ, ಸ್ವರ್ಗ, ಆರೋಗ್ಯ, ಸಂಪತ್ತು, ಪಶುಸಂಪತ್ತು, ಸುಖ, ಧನ, ಧಾನ್ಯ ಇವೆಲ್ಲವೂ ವೃದ್ಧಿಯಾಗುತ್ತವೆ. ಈ ರೀತಿ ಫಲವನ್ನು ಹೇಳಿ ಶ್ರಾದ್ಧವನ್ನು ಬಿಟ್ಟವರಿಗೆ ದೋಷವನ್ನೂ ಹೇಳಿರುತ್ತಾರೆ. ಯಥಾ :

"ನ ತತ್ರ ವೀರಾಜಾಯಂತೇ ನಾರೋಗಾಃ ನಶತಾಯುಷಃ।
ನ ಚ ಶ್ರೇಯೋಧಿಗಚ್ಛಂತಿ ಯತ್ರ ಶ್ರಾದ್ಧವಿವರ್ಜಿತಂ॥" ಅಂದರೆ

ಎಲ್ಲಿ ಪಿತೃಪೂಜೆ (ಶ್ರಾದ್ಧ) ನಡೆಯುವುದಿಲ್ಲವೋ ಆ ಕುಲದಲ್ಲಿ ವೀರರು ಹುಟ್ಟುವುದಿಲ್ಲ. ಹುಟ್ಟಿದರೂ ರೋಗಿಗಳಾಗಿ ಹುಟ್ಟುತ್ತಾರೆ. ಅವರು ದೀರ್ಘಾಯುಗಳಾಗಿ ಇರುವುದಿಲ್ಲ. ಯಾರಿಗೂ ಶ್ರೇಯಸ್ಸೂ ಇಲ್ಲ.' ಎಂದು ಶ್ರುತಿಸ್ಮೃತಿ ಕಾರರು ನಿರ್ಣಯಿಸಿರುವುದರಿಂದ ಮಾತಾ-ಪಿತೃ ಕೈಂಕರ್ಯವು (ಶ್ರಾದ್ಧವು) ಅವಶ್ಯ ಅನುಷ್ಠೇಯವು.

ವಿಷ್ಣುಪುರಾಣದ ಮೂರನೇ ಅಂಶದ ಹದಿನೈದನೆಯ ಅಧ್ಯಾಯದ ಮೊದಲಲ್ಲಿ ಶ್ರಾದ್ಧದಲ್ಲಿ ಎಂತಹ ಬ್ರಾಹ್ಮಣರು ಅರ್ಹರು ? ಎಂಬುವ ವಿವರಣೆ ಇದೆ. ವೇದ ವಿತ್ತುಗಳೂ ಸದಾಚಾರ ಸಂಪನ್ನರೂ ಶ್ರಾದ್ಧಭೋಜನಕ್ಕೆ ಅರ್ಹರು. "ವೇದವಿದ ಸ್ಸುಶೀಲಾನ್ ಭೋಜಯೇತ್" ಎಂಬ ಹಿರಿಯರ ವಾಕ್ಯವೂ ಇದೆ. ಪ್ರಕೃತ ಪುರಾಣದಲ್ಲಿ

"ಸೋಮಾಧಾರಃ ಪಿತೃಗಣೋ ಯೋಗಾಧಾರಸ್ತು ಚಂದ್ರಮಾಃ।
ತಸ್ಮಾದ್ಯೋಗಿನಿಯೋಗಸ್ತು ಶ್ರಾದ್ಧೇ ಭೂಪಾಲಶಸ್ಯತೇ ॥"

ವಿ.ಪು. ೩-೧೫-೫೫

ಶ್ರಾದ್ಧದಲ್ಲಿ ವಸು-ರುದ್ರ-ಆದಿತ್ಯರು ಅಧಿಕಾರಿ ದೇವತೆಗಳು. ಅವರು ನಿಮಂತ್ರಿತ ಬ್ರಾಹ್ಮಣರಲ್ಲಿ ಆವಾಹಿತರಾಗಿ (ಅವರಲ್ಲಿ ಪ್ರವೇಶಿಸಿ) ಶ್ರಾದ್ಧ ಭೋಜನಮಾಡಿ ತೃಪ್ತರಾಗಿ ತಮ್ಮ ಯೋಗಬಲದಿಂದ ಚಂದ್ರನ ಮೂಲಕ ಪಿತೃಲೋಕಕ್ಕೆ ಹೋಗಿ ಅಲ್ಲಿರುವ ನಮ್ಮ ಪಿತೃಗಳನ್ನು ತೃಪ್ತಿಪಡಿಸುತ್ತಾರೆ.

ಕರ್ತೃಗಳಾದ ನಮ್ಮ ಮನೋರಥವನ್ನೂ ನೆರವೇರಿಸುತ್ತಾರೆ. ಅಲ್ಲಿಗೆ ಪಿತೃವರ್ಗಕ್ಕೆ ಚಂದ್ರನೇ ಆಧಾರನು. ಚಂದ್ರನಿಗೆ ಯೋಗವು ಆಧಾರ. ಆದ್ದರಿಂದ ಶ್ರಾದ್ಧದಲ್ಲಿ ಯೋಗಿಯನ್ನೇ ಆಹ್ವಾನಿಸುವುದು ಉತ್ತಮ ಬೋಧಾಯನರೂ ಸಹ:

"ಪಾವನಂ ಭೋಜಯೇಚ್ಛ್ರಾದ್ಧೇ ಬ್ರಾಹ್ಮಣಂ ವೇದಪಾರಗಂ |
ಶ್ರುತಿಶೀಲಾದಿಸಂಪನ್ನಂ ಅವಲಕ್ಷಣ ವರ್ಜಿತಂ ||"

ಆಚಾರಪೂತನು ವೇದವಿತ್ತೂ ಶೀಲಾದಿಗುಣಸಂಪನ್ನನೂ ಶ್ರಾದ್ಧಭೋಜನಕ್ಕೆ ಅರ್ಹನು. ಅವನಲ್ಲಿ ಅವಲಕ್ಷಣಗಳಿರಕೂಡದು ಎಂದು ಸೂಚಿಸಿರುತ್ತಾರೆ.

ಹರಿವಂಶದಲ್ಲಿ "ಶ್ರಾದ್ಧೇ ಪ್ರಶಸ್ತೋ ಬ್ರಹ್ಮಚಾರೀ ತ್ರಿದಂಡೀಯತಿರೇವ ಚ" ಬ್ರಹ್ಮಚಾರಿಯೂ, ತ್ರಿದಂಡಿಯಾದ ಸಂನ್ಯಾಸಿಯೂ ಶ್ರಾದ್ಧಭೋಜನಕ್ಕೆ ಅರ್ಹರೆಂದು ತಿಳಿಸಿರುತ್ತದೆ. ಅಲ್ಲದೆ ಗುಣಾಢ್ಯರಾದ ದೌಹಿತ್ರ, ಅಳಿಯ, ಹೆಣ್ಣು ಕೊಟ್ಟ ಮಾವ, ಸೋದರಮಾವ ಇವರು ಶ್ರಾದ್ಧಭೋಜನಕ್ಕೆ ಅರ್ಹರು.

ಶೀಲಗುಣಾದಿರಹಿತರು, ನಿರಾಶ್ರಮಿಗಳು, ರೋಗಿಗಳು, ಅಂಗವಿಕಲರು, ಜಾರಜರು, ಕಪ್ಪುಹಲ್ಲು ಮತ್ತು ಉಗುರುವುಳ್ಳವರು, ಷಂಡರು, ಪತಿತರು ಮಿತ್ರ ದ್ರೋಹಿ-ಗುರುದ್ರೋಹಿಗಳು, ವೇದಶಾಸ್ತ್ರನಿಂದಕರು—ಇವರೆಲ್ಲಾ ಶ್ರಾದ್ಧ ಭೋಜನಕ್ಕೆ ಅನರ್ಹರು. ಆದ್ದರಿಂದಲೆ ಸ್ಮೃತಿಕಾರರು—

"ನ ಬ್ರಾಹ್ಮಣಂ ಪರೀಕ್ಷೇತ ದೈವೇ ಕರ್ಮಣಿ ಧರ್ಮವಿತ್ |
ಪಿತ್ರ್ಯೇ ಕರ್ಮಣಿತುಪ್ರಾಪ್ತೇ ಪರೀಕ್ಷೇತ ಪ್ರಯತ್ನತಃ ||" ಅಂದರೆ

ದೇವತಾಕಾರ್ಯದಲ್ಲಿ ಬ್ರಾಹ್ಮಣನನ್ನು ಪರೀಕ್ಷಿಸಬೇಕಾಗಿಲ್ಲ. ಆದರೆ ಪಿತೃಕಾರ್ಯದಲ್ಲಿ (ಶ್ರಾದ್ಧ ಸಂದರ್ಭದಲ್ಲಿ) ಬ್ರಾಹ್ಮಣರನ್ನು ಪ್ರಯತ್ನಪೂರ್ವಕ ಪರೀಕ್ಷಿಸಿ ಅಂತಹ ವರನ್ನು ಶ್ರಾದ್ಧಭೋಜನಕ್ಕೆ ಆಮಂತ್ರಿಸಬೇಕು. ಶ್ರದ್ಧೆಯಿಂದ ನೆರವೇರಿಸುವ ಪಿತೃಕಾರ್ಯಕ್ಕೆ 'ಶ್ರಾದ್ಧ'ವೆಂದು ಹೆಸರು. ಪಿತೃಮೇಧಕಾರರು ಇದರ ಅರ್ಥವಿವರಣೆ ಯನ್ನು ಕೊಟ್ಟಿರುತ್ತಾರೆ—

"ಪ್ರೇತಂ ಪಿತೄಂಶ್ಚ ಸಮುದ್ದಿಶ್ಯ ಭೋಜ್ಯಂ ಯತ್ಪ್ರಿಯಮಾತ್ಮನಃ |
ಶ್ರದ್ಧಯಾ ದೀಯತೇ ಯತ್ತು ತಚ್ಛ್ರಾದ್ಧಂ ಪರಿಕೀರ್ತಿತಂ ||" ಎಂದು

ವೇದಪುರುಷನು ಶ್ರಾದ್ಧವನ್ನು 'ಪಿತೃಯಜ್ಞ'ವೆಂದು ಹೇಳಿರುವುದು ಗಮನೀಯ ವಾದ ಅಂಶ. ಶ್ರಾದ್ಧಾರಂಭದಲ್ಲಿ ಪಿತೃಗಳಿಗೆ ಆಹ್ವಾನವನ್ನು ಕೊಡುವಾಗ ಈ ಮಂತ್ರವನ್ನು ಹೇಳುತ್ತಾರೆ—"ಯೇ ಪಾರ್ಥಿವಾಸಃ ಪಿತರಃ ಯೇ ಅಂತರಿಕ್ಷೇ ಯೇದಿವಿಯೇಪಾಮೃತಂಬಭೂವುಃ ತೇ ಅಸ್ಮಿನ್ ಯಜ್ಞೇ ಸಮವಯಂತಾ" ಅಂದರೆ

ಗತಿಸಿಹೋಗಿರುವ ನಮ್ಮ ಪಿತೃಗಳು ಪೃಥ್ವೀಮಂಡಲದಲ್ಲಿ ಯಾವ ಶರೀರದಲ್ಲಿದ್ದರೂ ಸರಿಯೆ. ಅಂತರಿಕ್ಷದಲ್ಲಿ, ದೇವಲೋಕದಲ್ಲಿದ್ದರೂ ಸರಿಯೇ, ಅಮೃತಲೋಕ (ಮೋಕ್ಷ)ದಲ್ಲಿದ್ದರೂ ಸರಿಯೇ. ಇಂದು ನಾನು ಮಾಡುವ ಯಜ್ಞದಲ್ಲಿ ಭಾಗವಹಿಸಿ, ನನ್ನ ಆರಾಧನೆಯನ್ನು ಸ್ವೀಕರಿಸಿ, ನಾನು ಅರ್ಪಣೆಮಾಡುವ ಕವ್ಯವನ್ನು ಸ್ವೀಕರಿಸಿ, ನಮ್ಮನ್ನು ಕೃತಾರ್ಥರನ್ನಾಗಿ ಮಾಡಲಿ."

ಈ ಮೇಲಿನ ಮಂತ್ರದಲ್ಲಿ ಶ್ರಾದ್ಧವನ್ನು 'ಪಿತೃಯಜ್ಞ'ವೆಂಬ ಪೂಜ್ಯವಾದ ಪದದಿಂದ ಕರೆದು ಅದರ ಮಹಿಮೆಯನ್ನು ಹೇಳಿರುತ್ತದೆ. ಆದ್ದರಿಂದ ಈ ಯಜ್ಞವನ್ನು ಯಥಾಶಕ್ತಿ ಅನುಷ್ಠಿಸಲೇಬೇಕು. ಪಾತ್ರಾಭಾವದಲ್ಲಿ ಪಿತೃಯಜ್ಞವನ್ನು ಅಗ್ನಿಮುಖವಾಗಿ ಮಾಡಬೇಕು. ಅಥವಾ ನಿರ್ದಿಷ್ಟವಾದ ಅನ್ನವನ್ನು ಹಸುವಿಗೆ ತಿನ್ನಲು ಕೊಡಬೇಕು. ಅಥವಾ ನದೀತೀರ್ಥದಲ್ಲಾದರೂ ಸೇರಿಸಬೇಕು. ಏನೇ ಆಗಲಿ ಕರ್ಮಲೋಪಕ್ಕೆ ಅವಕಾಶಕೊಡಬಾರದೆಂದು ವೈದ್ಯನಾಥೀಯದಲ್ಲಿ ಹೇಳಿರುತ್ತದೆ. ಶ್ರಾದ್ಧದ ದಿನ ಸರಿಯಾದ ಶ್ರೋತ್ರಿಯನೇ ಸಿಕ್ಕಿದಲ್ಲಿ ಪಿತೃ-ಪಿತಾಮಹ-ಪ್ರಪಿತಾಮಹರಿಗೆ ಆಗುವ ಆನಂದ ಅಮಿತ ಎಂದು ವಿಷ್ಣುಧರ್ಮದಲ್ಲಿ ಹೇಳಿರುತ್ತದೆ:

"ತೃಪ್ಯಂತಿ ಪಿತರಸ್ಸರ್ವೇ ತೃಪ್ಯಂತಿ ಚ ಪಿತಾಮಹಾಃ |
ಪ್ರಪಿತಾಮಹಾಶ್ಚತುಷ್ಯಂತಿ ಶ್ರೋತ್ರಿಯೇ ಗ್ರಹಮಾಗತೇ ||" ಎಂದು

ಅನೇಕ ಸ್ಮೃತಿಕಾರರೂ ಸಹ ಶ್ರಾದ್ಧಾನುಷ್ಠಾನವನ್ನು ಶ್ಲಾಘಿಸಿರುತ್ತಾರೆ:
ಯಥಾ ಸುಮಂತುಃ

"ಶ್ರಾದ್ಧಾತ್ಪರತರಂ ನಾನ್ಯಚ್ಛ್ರೇಯಸ್ಕರ ಮುದಾಹೃತಂ |
ತಸ್ಮಾತ್ಸರ್ವಪ್ರಯತ್ನೇನ ಶ್ರಾದ್ಧಂ ಕುರ್ಯಾದ್ವಿಚಕ್ಷಣಃ ||"

ಯಥಾ ಯಮಃ—

"ಆಯುಃ ಪುತ್ರಾನ್ ಯಶಸ್ಸ್ವರ್ಗಂ ಕೀರ್ತಿಂ ಪುಷ್ಟಿಂ ಬಲಂ ಶ್ರಿಯಂ |
ಪಶೂನ್ ಸುಖಂ ಧನಂ ಧಾನ್ಯಂ ಪ್ರಾಪ್ನುಯಾತ್ಪಿತೃಪೂಜನಾತ್ ||"

ತ್ರಿಪೂರುಷೋದ್ದೇಶವಾಗಿಯೇ ಶ್ರಾದ್ಧವನ್ನು ನಡೆಸಬೇಕು. ಪಿತೃ-ಪಿತಾಮಹ-ಪ್ರಪಿತಾಮಹರಿಗೆ ಕ್ರಮವಾಗಿ, ವಸು-ರುದ್ರ-ಆದಿತ್ಯರು ದೇವತೆಗಳು. ಈ ದೇವತೆಗಳು ಪ್ರೀತರಾಗಿ ಕರ್ತೃವನ್ನು ಅನುಗ್ರಹಿಸುತ್ತಾರೆ. ಯಥಾಮನುಃ—

"ವಸೂನ್ ವದಂತಿತು ಪಿತೄನ್ ರುದ್ರಾನೇವ ಪಿತಾಮಹಾನ್ |
ಪ್ರಪಿತಾಮಹಾಂಸ್ತಥಾದಿತ್ಯಾನ್ ಶ್ರುತಿರೇಷಾಸನಾತನೀ ||" ಎಂದು

ಗೋಬೃಂದದಲ್ಲಿ ಕರುವು ಹೇಗೆ ತನ್ನ ತಾಯಿಯನ್ನು ತಿಳಿಯುತ್ತದೊ, ಹಾಗೆಯೇ ಶ್ರಾದ್ಧದಲ್ಲಿ ಉದ್ದಿಷ್ಟವಾದ ಅನ್ನವನ್ನು ಮಂತ್ರವು ಪಿತೃಗಳಿಗೆ ಸೇರಿಸುವುದೆಂದು ವ್ಯಾಸ ಭಗವಾನ್ ಹೇಳಿರುತ್ತಾರೆ. ಯಥಾ—

"ಯಥಾ ಗೋಷುಪ್ರಣಷ್ಟೋಷ್ವೈ ವತ್ಸೋವಿಂದತಿಮಾತರಂ ।
ಏವಂ ಶ್ರಾದ್ಧೇನ್ನ ಮುದ್ದಿಷ್ಟಂ ಮಂತ್ರಃಪ್ರಾಪಯತೇ ಪಿತೃನ್ ॥"

ಸಾತ್ವಿಕ ಪುರಾಣಗಳಲ್ಲಿ ಒಂದಾದ ಗರುಡಪುರಾಣವು ಶ್ರದ್ಧೆಯಿಂದ ಪೈತೃಕಕರ್ಮವನ್ನು ಮಾಡಿದವರಿಗೆ ಫಲಶ್ರುತಿಯನ್ನು ಈ ರೀತಿ ಹೇಳಿರುತ್ತೆ. ಕಾಲಕಾಲಕ್ಕೆ ಪೈತೃಕಕರ್ಮವನ್ನು ಅನುಷ್ಠಿಸಿದವರು ನರಕಗಾಮಿಗಳಾಗುವುದಿಲ್ಲ. ಅವರು ಸುಧಾಪಾನಮಾಡುತ್ತಾ ಧರ್ಮರಾಜನ ಸಭಾಮಂದಿರವನ್ನು ಪ್ರವೇಶಿಸಿ, ಅಲ್ಲಿ ಇಷ್ಟಬಂದಷ್ಟು ಕಾಲ ನೆಲಸಿ ಅನಂತರ ಧರ್ಮರಾಜನ ಅಪ್ಪಣೆ ಪಡೆದು ಅನೇಕ ಸದ್ಗತಿಗಳಿಗೆ ಪ್ರಯಾಣ ಮಾಡುತ್ತಾರೆ ಎಂದು. ಯಥಾ —

"ಪಿತೃಣಾಂ ಶ್ರಾದ್ಧದಾತಾರಃ ಕಾಲೇ ಸಂಧ್ಯಾಮುಪಾಸಕಾಃ ।
ಸುಧಾಪಾನಂ ಪ್ರಕುರ್ವಂತೋಯಾಂತಿ ತೇ ಧರ್ಮಮಂದಿರಂ ॥
ಯಮಸ್ತಾನಾಗತಾನ್ದೃಷ್ಟ್ವಾ ಸ್ವಾಗತಂ ವದತೇ ಮುಹುಃ ।
ಸಮುತ್ಥಾನಂ ಚ ಕುರುತೇ ತೇಷಾಂ ಗಚ್ಛತಿ ಸನ್ಮುಖಂ ॥
ಸಿಂಹಾಸನಂ ದದತ್ಯಾಶು ನಮಸ್ಕಾರಂ ಕರೋತಿ ಚ ।
ಪಾದಾರ್ಘ್ಯಂ ಕುರುತೇ ಪಶ್ಚಾತ್ ಪೂಜತೇ ಚಂದನಾದಿಭಿಃ ॥" ಇತ್ಯಾದಿ.

ಪಿತೃ-ಪಿತಾಮಹ-ಪ್ರಪಿತಾಮಹರೂ ಸಹ ಪೈತೃಕಕರ್ಮವನ್ನು ಯಥಾವಿಧಿ ಮಾಡಿದ ಕರ್ತೃವಿಗೆ ವರದಾನ ಮಾಡುತ್ತಾರೆ. ಪಿತೃವು ಸತ್ಸಂತತಿಯನ್ನೂ, ಪಿತಾಮಹನು ಗೋಸಂಪತ್ತನ್ನೂ, ಪ್ರಪಿತಾಮಹನು ಧನವನ್ನೂ, ವೃದ್ಧಪ್ರಪಿತಾಮಹನು ಅನ್ನಸಂಪತ್ತನ್ನೂ ಅನುಗ್ರಹಿಸಿ ಧರ್ಮರಾಜನ ಮಂದಿರಕ್ಕೆ ಪ್ರಯಾಣ ಮಾಡುತ್ತಾರೆಂದು ಗರುಡಪುರಾಣವು ಸೂಚಿಸಿರುತ್ತದೆ. ಆದ್ದರಿಂದ ಪೈತೃಕ ಕರ್ಮ ಅವಶ್ಯ ಅನುಷ್ಠೇಯವೆಂದು ವಿಷ್ಣುಪುರಾಣದ ಮೂರನೆ ಅಂಶದ ಹದಿನೈದನೇ ಅಧ್ಯಾಯದಲ್ಲಿ ಪರಾಶರರು ಉಪದೇಶಿಸಿರುತ್ತಾರೆ. ಪಿತೃಗಳಿಗೆ ವರದಾನ ಮಾಡುವ ಸಾಮರ್ಥ್ಯವಿದೆಯೆಂದು ಹೇಳುವ ಗರುಡಪುರಾಣದ ಪ್ರಮಾಣ ಪದ್ಯಗಳು:

"ಪಿತಾದದಾತಿ ಸತ್ಪುತ್ರಾನ್ ಗೋಧನಾನಿ ಪಿತಾಮಹಃ ।
ಧನದಾತಾಭವೇತ್ಸೋಪಿ ಯಸ್ತಸ್ಯ ಪ್ರಪಿತಾಮಹಃ ॥"

ದದ್ಯಾದ್ವಿಪುಲಮನ್ನಾದ್ಯಂ ವೃದ್ಧಸ್ತು ಪ್ರಪಿತಾಮಹಃ।
ತೃಪ್ತಾ ಶ್ರಾದ್ಧೇನ ತೇ ಸರ್ವೇ ದತ್ವಾ ಪುತ್ರಸ್ಯ ವಾಂಛಿತಂ॥
ಗಚ್ಛಂತಿ ಧರ್ಮಮಾರ್ಗೈಶ್ಚ ಧರ್ಮರಾಜಸ್ಯ ಮಂದಿರಂ।
ತತ್ರ ಧರ್ಮಸಭಾಯಾಂತೇ ತಿಷ್ಠಂತಿ ಪರಮಾದರಾತ್॥"

ವಚನ ವಿ.ಪು. ಪುಟ ೧೪೫, ಸಾಲು ೫

ಮೂಲ: ಕಲಾ ಮುಹೂರ್ತಾದಿ ಮಯಶ್ಚ ಕಾಲೋ ನ ಯದ್ವಿಭೂತೇಃ ಪರಿಣಾಮಹೇತುಃ।
ಅಜನ್ಮನಾಶಸ್ಯ ಸದೈಕಮೂರ್ತೇಃ ಅನಾಮರೂಪಸ್ಯ ಸನಾತನಸ್ಯ॥

ವಿ.ಪು. ೪-೧-೮೪

ನಿತ್ಯವಿಭೂತಿಯು ಕಾಲಕೃತವಾದ ಪರಿಣಾಮಕ್ಕೆ ಸೇರಿದ್ದಲ್ಲವು. ತದನ್ಯವಾದ ಲೀಲಾವಿಭೂತಿಯು ಕಾಲಕೃತ ಪರಿಣಾಮಕ್ಕೆ ಸೇರಿದ್ದೆಂದೂ ಈ ಪದ್ಯದಲ್ಲಿ ತಿಳಿಸಿರುತ್ತಾರೆ. "ಯತ್ರಪೂರ್ವೇ ಸಾಧ್ಯಾಸ್ಸಂತಿ ದೇವಾಃ" "ತ್ರಿಪಾದಸ್ಯಾಮೃತಂದಿವಿ" "ದಿವ್ಯಂ ಸ್ಥಾನಮಜರಂ" ಎಂದು ಪ್ರಸಿದ್ಧವಾದ ನಿತ್ಯವಿಭೂತಿಯು ಕಾಲಕ್ಕೆ ಅಧೀನವಲ್ಲ. ಕಲಾಮುಹೂರ್ತಾದಿಮಯಃ=ದಿನ, ಪಕ್ಷ, ಮಾಸ, ಋತು, ಸಂವತ್ಸರ, ಯುಗಾದಿರೂಪದಲ್ಲಿರುವ ಕಾಲವು, ಯದ್ವಿಭೂತೇಃ=ಪರಮಾತ್ಮನ ವಿಭೂತಿಯಾದ ನಿತ್ಯವಿಭೂತಿಗೆ ಪರಿಣಾಮಹೇತುಃ=ಪರಿಣಾಮಕ್ಕೆ ಕಾರಣವು, ನ=ಆಗಲಾರದು. ಹೀಗೆ ಹೇಳಿರುವುದರಿಂದ ಮತ್ತೊಂದು ವಿಭೂತಿಯಾದ ಲೀಲಾವಿಭೂತಿಯು ಕಾಲಪರಿಮಾಣಕ್ಕೆ ಕಾರಣವೆಂದು ಸಿದ್ಧವಾಯಿತು. ಆದರೆ ವಿಷ್ಣುಪುರಾಣದ ೧-೨-೨೬ನೇ ಪದ್ಯದ ಅಭಿಪ್ರಾಯದಂತೆ "ಅನಾದಿರ್ಭಗವಾನ್ ಕಾಲೋ ನಾಂತೋಽಸ್ಯ ದ್ವಿಜ ಉಚ್ಯತೇ" ಕಾಲಕ್ಕೆ ಆದಿಯಾಗಲಿ, ಅಂತ್ಯವಾಗಲಿ ಇಲ್ಲವೆಂದು ಹೇಳುವುದು ಹೇಗೆ? ಈ ಪದ್ಯದಲ್ಲಿ ಕಾಲಃ ಎಂಬುವುದಕ್ಕೆ ಭಗವಾನ್ ಎಂಬ ವಿಶೇಷಣವು ಕೊಡಲ್ಪಟ್ಟಿದೆ. ಭಗವಂತನು ಈ ಕಾರ್ಯರೂಪವಾದ ಜಗತ್ತಿಗೆ ಕಾರಣನು. ಕಾಲವೂ ಕೂಡ ಜಗತ್ತಿಗೆ ಕಾರಣವಾಯಿತು. ಅಲ್ಲಿಗೆ ಇಬ್ಬರು ಜಗತ್ತಿಗೆ ಕಾರಣರೇ ಎಂಬ ಸಂದೇಹವು ಬಂದಲ್ಲಿ ಕಾಲಶರೀರಕನಾದ ಪರಮಾತ್ಮನೇ ಜಗತ್ತಿಗೆ ಕಾರಣನೆಂದು ಹೇಳಲು "ಅನಾದಿರ್ಭಗವಾನ್ ಕಾಲಃ" ಎಂದು ಹೇಳಲ್ಪಟ್ಟಿದೆ. ಪರಮಾತ್ಮನಿಗೆ ಕಾಲವೂ-ಪ್ರಕೃತಿಯೂ ಶರೀರವಾಗಿ ಲೀಲೋಪಕರಣವಾಗಿದೆ. ಆದ್ದರಿಂದ ಲೀಲಾವಿಭೂತಿಯು ಕಾಲಕ್ಕೆ ಅಧೀನ. ನಿತ್ಯವಿಭೂತಿಯಾದರೋ ಭಾರತ ಶಾಂತಿಪರ್ವದಲ್ಲಿ ಹೇಳಿರುವಂತೆ "ಕಾಲಂ ಸಪಚತೇ ತತ್ರ ನಕಾಲಸ್ತತ್ರ ವೈ ಪ್ರಭುಃ" ಅಂದರೆ "ಪರಮಾತ್ಮನೇ ಕಾಲವನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುತ್ತಾನೆ" ಎಂದು

ಹೇಳಿರುವುದರಿಂದ ಕಾಲಕ್ಕೆ ಅಧೀನವಲ್ಲವು. ಪರಮಾತ್ಮನು ಸರ್ವಕ್ಕೂ ಹೇಗೆ ನಿಯಾಮಕನೋ ಹಾಗೆಯೇ ಕಾಲಕ್ಕೂ ನಿಯಾಮಕನು. ಕಾಲಕ್ಕೆ ಲೀಲಾ ವಿಭೂತಿಯಲ್ಲಿ ಕೊಟ್ಟಿರುವ ಸಾಮರ್ಥ್ಯವನ್ನು ನಿತ್ಯವಿಭೂತಿಯಲ್ಲಿ ಕೊಟ್ಟಿರುವುದಿಲ್ಲ. ಅಲ್ಲಿಗೆ ಸರ್ವದಾ ಏಕರೂಪದಲ್ಲಿರುವ, ಸನಾತನನಾದ ಕರ್ಮನಿಮಿತ್ತ ಶರೀರಗ್ರಹಣ ಮತ್ತು ವಿಯೋಗರಹಿತನಾದ ಕರ್ಮಕೃತವಾದ ದೇವಾದಿ ನಾಮಗಳಿಲ್ಲದ ಪರಮಾತ್ಮನ ಸ್ಥಾನವಾದ ನಿತ್ಯವಿಭೂತಿಯು ಕಾಲಕೃತವಾದ ಪರಿಣಾಮಕ್ಕೆ ಸೇರಿದ್ದಲ್ಲವೆಂದು ಮೇಲಿನ ಪದ್ಯದ ತಾತ್ಪರ್ಯವು.

ವಚನ ವಿ.ಪು. ಪುಟ ೧೬೧, ಸಾಲು ೨೫

ಮೂಲ: ತದಾಕರ್ಣ್ಯ ತಂ ಚ ಭಗವಾನಾಹ ಉಕ್ತಮೇವೈತತ್ ಮಯಾದ್ಯ ಪೌತ್ರಸ್ತೇ ತ್ರಿದಿವಾದ್ಗಂಗಾಂ ಭುವಮಾನಯಿಷ್ಯತೀತಿ । ೨೮ । ತದಂಭಸಾಚ ಸಂಸ್ಪೃಷ್ಟೇಷ್ವಸ್ಥಿ ಭಸ್ಮಸು ಏತೇ ಚ ಸ್ವರ್ಗಮಾರೋಕ್ಷ್ಯಂತಿ ॥ ೨೯ ॥ ಭಗವದ್ವಿಷ್ಣುಪಾದಾಂಗುಷ್ಠ ವಿನಿರ್ಗತಸ್ಯ ಹಿ ಜಲಸ್ಯೈತನ್ಮಾಹಾತ್ಮ್ಯಂ ॥ ವಿ.ಪು. ೪-೪-೨೮-೨೯-೩೦

ಮೇಲಿನ ಗದ್ಯದಲ್ಲಿ ಗಂಗಾವೈಭವವೂ, ವಿಷ್ಣುಪಾದದ ವೈಭವವೂ ಸಹ ನಿರೂಪಿತವಾಗಿದೆ. ಇದರ ವೈಭವವನ್ನು ಶ್ರೀ ಕಪಿಲಮುನಿವರ್ಯರು ಅಂಶುಮಂತನಿಗೆ ಹೇಳುತ್ತಿರುವ ಸಂದರ್ಭ. ಶ್ರೀಕಪಿಲರ ನೇತ್ರಾಗ್ನಿಯಿಂದ ದಗ್ಧರಾದ ಸಗರ ಚಕ್ರವರ್ತಿಯ ಮಕ್ಕಳಿಗೆ ಉದಕ ದಾನಮಾಡಲು ಸಗರಚಕ್ರವರ್ತಿಯ ಮೊಮ್ಮಗನಾದ ಅಂಶುಮಂತನು ಜಲವನ್ನು ಹುಡುಕಲು ಆಗ ಕಪಿಲರು ಹೇಳುತ್ತಾರೆ. ಇವರಿಗೆ ಲೌಕಿಕದಲಿದ ತರ್ಪಣಾದಿಗಳಿಂದ ಸದ್ಗತಿ ದೊರೆಯದು. ದೇವಲೋಕದ ಗಂಗೆಯನ್ನು ತಂದು ಈ ಭಸ್ಮರಾಶಿಯನ್ನು ತೇಲಿಸಿದರೆ ಸದ್ಗತಿಯು ದೊರೆಯುವುದು. ನಿನ್ನ ಮೊಮ್ಮಗನಾದ ಭಗೀರಥನು ದೇವಲೋಕದಲ್ಲಿರುವ ಗಂಗೆಯನ್ನು ತಂದು ಈ ಭಸ್ಮರಾಶಿಯನ್ನು ತೇಲಿಸುವನು. ಇವರಿಗೆ ಸದ್ಗತಿ ದೊರೆಯುವುದು. ವಿಷ್ಣುಪಾದದಿಂದ ಜನ್ಮತಾಳಿದ ಗಂಗೆಗೆ ಇಷ್ಟು ಮಾಹಾತ್ಮ್ಯವಿದೆ ಎಂದು ಮೇಲಿನ ಗದ್ಯಭಾವದ ತಾತ್ಪರ್ಯ.

ಗಂಗಾವೈಭವವು ವಿಷ್ಣುಪುರಾಣದಲ್ಲಿ ಎರಡನೇ ಅಂಶದ ಎಂಟನೇ ಅಧ್ಯಾಯದಲ್ಲೂ, ನಾಲ್ಕನೇ ಅಂಶದ ನಾಲ್ಕನೇ ಅಧ್ಯಾಯದಲ್ಲೂ ಬಂದಿರುತ್ತದೆ. ಇದರ ವಿಸ್ತಾರವಾದ ಚರಿತ್ರೆಯೂ, ಮಹಿಮೆಯೂ ರಾಮಾಯಣದಲ್ಲಿ ಮುನಿವರರಿಂದ ನಿರೂಪಿತವಾಗಿದೆ.

ತ್ರಿವಿಕ್ರಮಾವತಾರದಲ್ಲಿ ತ್ರಿವಿಕ್ರಮನ ಪಾದವು ಸತ್ಯಲೋಕದವರೆವಿಗೂ ಹೋಯಿತು. ಬ್ರಹ್ಮನು ಪಾದದಲ್ಲಿರುವ ಮಂಗಳರೇಖೆಗಳನ್ನು ತನ್ನ ಕಮಂಡಲು

ತೀರ್ಥದಿಂದ ತೊಳೆದನು. ಅದು ದೇವಲೋಕದಲ್ಲಿ 'ಮಂದಾಕಿನೀ' (ದೇವಗಂಗೆ) ಎಂಬ ಹೆಸರಿನಿಂದ ಹರಿಯಿತು. ಭಗೀರಥನು ತಪಸ್ಸಿನಿಂದ ಚತುರ್ಮುಖನನ್ನು ತೃಪ್ತಿಪಡಿಸಿ ಭೂಲೋಕಕ್ಕೂ, ಅಲ್ಲಿಂದ ಪಾತಾಳಲೋಕಕ್ಕೂ ಕರೆದುಕೊಂಡು ಹೋಗಿ ತನ್ನ ತಾತಂದಿರ ಭಸ್ಮರಾಶಿಯನ್ನು ತೇಲಿಸಿದನು. ಆದ್ದರಿಂದ ಗಂಗೆಗೆ 'ತ್ರಿಪಥಗಾ-ಭಾಗೀರಥೀ' ಎಂಬ ಹೆಸರುಗಳು ಬರಲು ಕಾರಣವಾಯಿತು.

ದೇವಲೋಕದಿಂದ ಹೊರಟ ಗಂಗೆಯು ಶಂಕರನ ಜಟಾಜೂಟದಲ್ಲಿ ಬಿದ್ದಳು. ಯಥಾ ರಾಮಾಯಣೇ:

"ತತ್ರ ದೇವರ್ಷಿಗಂಧರ್ವಾಃ ವಸುಧಾತಲವಾಸಿನಃ |
ಭವಾಂಗ ಪತಿತಂ ತೋಯಂ ಪವಿತ್ರಮಿತಿ ಪಸ್ಪೃಶುಃ ||
ಧೂತ ಪಾಪಾಃ ಪುನಸ್ತೇನ ತೋಯೇನಾಥಸುಭಾಸ್ವತಾ |
ಪುನರಾಕಾಶಮಾವಿಶ್ಯ ಸ್ವಾನ್ ಲೋಕಾನ್ ಪ್ರತಿಪೇದಿರೇ ||"

ಅಂದರೆ "ಶಂಕರನ ಜಟಾಜೂಟದಿಂದ ಭೂಮಿಗೆ ಬಿದ್ದ ಗಂಗಾಜಲವನ್ನು ದೇವತೆಗಳೂ, ಋಷಿಗಳೂ, ಗಂಧರ್ವರೂ ಪವಿತ್ರವೆಂದು ಮುಟ್ಟಿದರು. ಗಂಗಾಜಲ ಸ್ಪರ್ಶದಿಂದ ಪಾಪಗಳನ್ನು ಕಳೆದುಕೊಂಡ ಅವರು ಪುನಃ ಆಕಾಶಮಾರ್ಗದಿಂದ ತಮ್ಮ ಲೋಕಗಳಿಗೆ ಪ್ರಯಾಣ ಮಾಡಿದರೆಂದು" ಮುಖ್ಯವಾಗಿ ಗಂಗೆಗೆ ತ್ರಿಮೂರ್ತಿಗಳ ಸಂಬಂಧವು ಉಂಟಾಯಿತು. ಅಂತೆಯೇ ಪರಮಪಾವನವಾಯಿತು.

ವಿಷ್ಣುಪುರಾಣದ ಎರಡನೇ ಅಧ್ಯಾಯದಲ್ಲಿ ಗಂಗಾವೃತ್ತಾಂತವು ಬಂದಿದೆ. ಅಲ್ಲಿ ಧ್ರುವನು ಗಂಗೆಯನ್ನು ಶಿರಸ್ಸಿನಲ್ಲಿ ಧರಿಸಿರುವುದಾಗಿಯೂ, ಸಪ್ತರ್ಷಿಗಳು ಅಘಮರ್ಷಣಸೂಕ್ತವನ್ನು ಜಪಿಸಿ ಸ್ನಾನಮಾಡಿ ಗಂಗೆಯ ತೇಜಸ್ಸನ್ನು ವೃದ್ಧಿಪಡಿಸಿದರೆಂದೂ ವಿವರಣೆ ಇದೆ. ಹೀಗೆ ಗಂಗೆಯು ಭಗವದ್ಭಾಗವತ ಸಂಬಂಧವನ್ನು ಪಡೆದು ತೇಜೋವಿಶಿಷ್ಟಳಾಗಿ ಲೋಕವನ್ನು ಪವಿತ್ರಗೊಳಿಸಲು ಮೇರು ಪರ್ವತದಲ್ಲಿ ಬಿದ್ದು ಚಂದ್ರಮಂಡಲವನ್ನಾಕ್ರಮಿಸಿ ನಾಲ್ಕು ಭಾಗಗಳಾಗಿ ಹರಿದಳೆಂದು ಕಥೆಯು ಮುಂದುವರೆದಿದೆ. ಇದರಲ್ಲಿ 'ಅಲಕನಂದಾ' ಎಂಬ ಭಾಗವು ಶಂಕರನ ಶಿರಸ್ಸಿನಲ್ಲಿ ಬಹಳಕಾಲವಿದ್ದು ನಂತರ ಹೊರಟು ಸಗರಪುತ್ರರನ್ನು ಪವಿತ್ರಗೊಳಿಸಿದಳೆಂದೂ, ಅವರಿಗೆ ಸದ್ಗತಿಯನ್ನು ಹೊಂದಿಸಿದಾಗಿಯೂ ಹೇಳಿದೆ.

ವಿಷ್ಣುಪುರಾಣ ವ್ಯಾಖ್ಯಾತೃಗಳಾದ ಶ್ರೀ ವಿಷ್ಣುಚಿತ್ತರು ತಮ್ಮ ವ್ಯಾಖ್ಯಾನದಲ್ಲಿ ಕೆಲವು ಪುರಾಣಗಳಿಂದ ಸಂಗ್ರಹಿಸಿದ ಗಂಗಾವೈಭವದ ವಿವರಣೆ ಕೊಟ್ಟಿರುತ್ತಾರೆ. ವಾಮನಪುರಾಣದಲ್ಲಿ ಯಥಾ—

"ತತಃ ಪ್ರತಾಪವಾನ್ಬ್ರಹ್ಮನ್ ಬೃಹದ್ವಿಷ್ಣ್ವಂಘ್ರಿರಂಬರೇ।
ಬ್ರಹ್ಮಾಂಡೋದರ ಮಾಹತ್ಯ ನಿರಾಲೋಕಂ ಜಗಾಮ ಸಃ॥
ವಿಷ್ಣ್ವಂಘ್ರಿಣಾ ಪ್ರಸರತಾ ಕಟಾಹೇಮ್ನಿ ಭೇದಿತೇ।
ಅಂಬರಾದ್ವಿಷ್ಣುಮಾಯಾಥ ಬ್ರಾಹ್ಮಮಂಭಃ ಕಟಾಹತಃ॥
ವಿಷ್ಣ್ವಂಘ್ರಿ ಪದ್ಮೋರು ದಂಡಾತ್ ಗಾಂಗತಾನ್ಯೈನದೀ ತದಾ।
ಬಾಹ್ಯತೋಯ ಮಹಾಧಾರಾ ದಶಪಾಪ ವಿನಾಶಿನೀ॥" ಅಂದರೆ

"ವಿಷ್ಣುಪಾದವು ಅಂಡಕಟಾಹವನ್ನು ಭೇದಿಸಿ ಮೇಲಕ್ಕೆ ಹೋಯಿತು. ಹರಡಿದ ವಿಷ್ಣುಪಾದವು ಹೇಮಕಟಾಹವನ್ನು ಭೇದಿಸಿದೊಡನೆ ಅವನ ಸಂಕಲ್ಪದಂತೆ ಜಲಧಾರೆಯು ಹರಿದು ಗಂಗೆಯೆಂಬ ಹೆಸರಿನಿಂದ ಭೂಮಿಯನ್ನು ಸೇರಿದಳು. ಪಾಪಪರಿಹಾರಕಳೂ ಆದಳು" ಎಂದು.

ಅದೇ ವ್ಯಾಖ್ಯಾನದಲ್ಲಿ ವಿಷ್ಣುಧರ್ಮೋತ್ತರದ ಪದ್ಯಗಳನ್ನೂ ಉದಾಹರಿಸಿರುತ್ತಾರೆ. ಯಥಾ:

"ಬ್ರಹ್ಮಾಂಡ ಸ್ತಾಡಿತಸ್ತೇನ ಛಿದ್ರತಾಮಗಮತ್ಪ್ರಭೋ।
ತೇನ ಛಿದ್ರೇಣ ತತ್ತೋಯಂ ವಿವೇಶಾಂಡಂ ಮಹೀಪತೇ॥"

ಅಂದರೆ ವಿಷ್ಣುಪಾದದಿಂದ ತಾಡಿತವಾದ ಬ್ರಹ್ಮಾಂಡವು ಒಡೆಯಿತು. ಆ ರಂಧ್ರದಿಂದ ನೀರು ಹೊರಟಿತೆಂದು.

ಪುರಾಣಾಂತರಗಳಲ್ಲಿ ಬ್ರಹ್ಮನು ತ್ರಿವಿಕ್ರಮನ ಪಾದವನ್ನು ತೊಳೆದನು. ಅದು ದೇವಲೋಕದಲ್ಲಿ ಮಾತ್ರ ಹರಿಯಿತು. ಅದು ಸಾಲದ್ದರಿಂದ ಬ್ರಹ್ಮಾಜ್ಞೆಯಂತೆ ಧರ್ಮವೇ ಪ್ರವೀಭೂತವಾಗಿ ಆ ನೀರಿನೊಡನೆ ಸೇರಿತು. ಅದೂ ಸಾಲದ್ದರಿಂದ ಅಂಡಕಟಾಹವನ್ನು ಭೇದಿಸಿದಾಗ ವಿಷ್ಣುಪಾದಸ್ಪರ್ಶವನ್ನು ಪಡೆದ ಬಾಹ್ಯೋದಕಧಾರೆಯೂ ಸೇರಿ ಗಂಗೆಯಾಗಿ ಭೂಮಿಗೆ ಬಂದಳೆಂಬ ವಿವರಣೆಯೂ ಇದೆ.

ಗಂಗೆಯ ಸ್ನಾನ-ಪಾನಾದಿಗಳಿಂದ ಬರುವ ಫಲವು ಈ ರೀತಿ ನಿರೂಪಿತವಾಗಿದೆ:

"ಶ್ರುತಾಭಿಲಷಿತಾದೃಷ್ಟಾ ಸ್ಪೃಷ್ಟಾ ಪೀತಾವಗಾಹಿತಾ।
ಯಾ ಪಾವಯತಿ ಭೂತಾನಿ ಕೀರ್ತಿತಾ ಚ ದಿನೇದಿನೇ॥"

ವಿ.ಪು. ೨-೮-೧೨೦

ಗಂಗೆಯ ಹೆಸರು ಕಿವಿಗೆ ಬಿದ್ದರೆ, ಕಣ್ಣಿನಿಂದ ನೋಡಿದರೆ, ಮುಟ್ಟಿದರೆ, ಕುಡಿದರೆ, ಸ್ನಾನಮಾಡಿದರೆ, ಕೀರ್ತನೆ ಮಾಡಿದರೆ ಭೂತವರ್ಗವನ್ನು ಪಾವನಗೊಳಿಸುತ್ತಾಳೆಂದು ಇಲ್ಲಿ ವಿಷ್ಣುಚಿತ್ತರು ವ್ಯಾಖ್ಯಾನದಲ್ಲಿ ಬ್ರಹ್ಮಾಂಡಪುರಾಣದ ಪದ್ಯಗಳನ್ನು ಉದಾಹರಿಸುತ್ತಾರೆ. ಯಥಾ:

"ಶ್ರುತಾಗಂಗೇತಿ ಯೈರ್ಭಕ್ತ್ಯಾ ಸಕೃದ್ದೂತೇ ಸ್ಥಿತೈರಪಿ।
ತತ್ರೈ ತಾರಯೇನ್ಮರ್ತ್ಯಾನ್ ಕರುಣಾದ್ರಾ ಭವಾರ್ಣವಾತ್॥
ಕದಾದ್ರಕ್ಷ್ಯಾಮಿ ತಾಂ ಗಂಗಾಂ ಕದಾ ಸ್ನಾನಮಹಂ ಲಭೇ॥
ಇತಿ ಪುಂಸಾಭಿಲಷಿತಾ ಕುಲಾನಿ ದಶ ತಾರಯೇತ್॥
ಪೀತಾ ಧರ್ಮದ್ರವೀ ಮರ್ತ್ಯೈಃ ಯೈಗಂಗಾ ಭಕ್ತಿತಸ್ಸಕೃತ್।
ತೇಷಾಂ ಕುಲಾನಾಮಯುತಂ ಭವಾತ್ತಾರಯತೇ ಧ್ರುವಂ॥" ಅಂದರೆ

ಮನುಷ್ಯನು ತಾನಿದ್ದ ಸ್ಥಳದಲ್ಲೆ ಗಂಗೆಯ ಹೆಸರನ್ನು ಭಕ್ತಿಯಿಂದ ಕೇಳಿದರೆ ಗಂಗಾಮಾತೆಯು ಅಲ್ಲಿಗೆ ಬಂದು ರಕ್ಷಿಸುತ್ತಾಳೆ. ಗಂಗೆಯನ್ನು ಎಂದು ನೋಡುವೆನು? ಎಂದು ಸ್ನಾನ ಮಾಡುವೆನು? ಎಂದು ಅಪೇಕ್ಷಿಸಿದರೆ, ಇಚ್ಛಿಸಿದವನ ಹತ್ತು ತಲೆಮಾರು ಪಾವನವಾಗುತ್ತೆ. ಧರ್ಮವೇ ಜಲವಾಗಿರುವ ಗಂಗಾತೀರ್ಥವನ್ನು ಭಕ್ತಿಯಿಂದ ಪಾನಮಾಡಿದರೆ ಆತನ ಅನೇಕ ತಲೆಮಾರುಗಳು ಪಾವನವಾಗುತ್ತವೆ" ಎಂದು. ಇದೇ ವ್ಯಾಖ್ಯಾನದಲ್ಲಿ ಬ್ರಹ್ಮಾಂಡಪುರಾಣದ ಶ್ಲೋಕಗಳನ್ನೂ ಉದಾಹರಿಸಿರುತ್ತಾರೆ. ಯಥಾ:

"ಗಂಗಾ ಗಂಗೇತಿ ಗಂಗೇತಿ ಯೈಸ್ತ್ರಿಸಂಧ್ಯಂ ತ್ರಿರೀರಿತಂ।
ಸುದೂರಸ್ಥೈಶ್ಚ ತತ್ಪಾಕುಲ ಹಂತಿ ಜನ್ಮತ್ರಯಾರ್ಜಿತಂ॥
ಯೋಜನಾನಾಂ ಸಹಸ್ರೇಷು ಗಂಗಾಂಯಃ ಸ್ಮರತೇ ನರಃ।
ಅಪಿ ದುಷ್ಕೃತ ಕರ್ಮಾಸಾ ಲಭತೇಪರಮಾಂ ಗತಿಂ॥"

ಗಂಗೆಯಿಂದ ಬಹಳ ದೂರದಲ್ಲಿರುವವರೂ ಸಹ ಮೂರು ಸಂಧ್ಯಾಕಾಲಗಳಲ್ಲಿ ಮೂರು ಬಾರಿ ಗಂಗಾ ಶಬ್ದವನ್ನುಚ್ಚರಿಸಿದರೆ ಮೂರು ಜನ್ಮಗಳಲ್ಲಿ ಮಾಡಿದ ಪಾಪವು ಪರಿಹಾರವಾಗುತ್ತದೆ. ಸಹಸ್ರಯೋಜನ ದೂರದಲ್ಲಿರುವವನೂ ಸಹ ದುಷ್ಕೃತ್ಯಗಳನ್ನು ಮಾಡಿದ್ದರೂ ಕೂಡ ಗಂಗಾಮಾತೆಯನ್ನು ಸ್ಮರಿಸಿದರೆ ಆತನು ಪರಮಗತಿಯನ್ನು ಪಡೆಯುತ್ತಾನೆ. ಇವಿಷ್ಟೂ ವಿಷ್ಣುಚಿತ್ತರ ವ್ಯಾಖ್ಯಾನಾಂಶವು. ಸಾತ್ವಿಕಪುರಾಣಗಳಲ್ಲಿ ಒಂದಾದ ನಾರದೀಯಪುರಾಣದಲ್ಲಿ (೩೮ನೇ ಅಧ್ಯಾಯ)

"ಪೂರ್ವೇವಯಸಿ ಪಾಪಾನಿ ಕೃತ್ವಾ ಕರ್ಮಾಣಿ ಯೇ ನರಾಃ।
ಶೇಷೇ ಗಂಗಾಂ ನಿಷೇವಂತೇ ತೇಪಿಯಾಂತಿ ಪರಾಂ ಗತಿಂ॥" ಅಂದರೆ

ಪೂರ್ವವಯಸ್ಸಿನಲ್ಲಿ (ತಾರುಣ್ಯದಲ್ಲಿ) ಅನೇಕ ಅಕೃತ್ಯಗಳನ್ನು ಮಾಡಿದವನು ಉಳಿದ ವಯಸ್ಸಿನಲ್ಲಿ (ವೃದ್ಧಾಪ್ಯದಲ್ಲಿ) ಗಂಗೆಯನ್ನು ಸೇರಿ ಭಕ್ತಿಯಿಂದ ನಮಿಸಿ ಸ್ನಾನಪಾನಾದಿಗಳನ್ನು ಮಾಡಿದ್ದಾದರೆ ಆತನೂ ಸಹ ಪರಗತಿಯನ್ನು ಹೊಂದುತ್ತಾನೆ. ಇದಕ್ಕೊಂದು ಕಥೆ—

ಜಗನ್ನಾಥ ಪಂಡಿತನೆಂಬ ಆಲಂಕಾರಿಕನಿದ್ದನು. ಈತನು ಹದಿನೇಳನೇ ಶತಮಾನದವನು. ರಸಗಂಗಾಧರವೆಂಬ ಉದ್ದಾಮ ಗ್ರಂಥವನ್ನು ಬರೆದ ಲಕ್ಷಣಕಾರ. ಜನ್ಮತಃ ಬ್ರಾಹ್ಮಣ ಕವಿ. ಚಿದಂಬರದಲ್ಲಿದ್ದ ಅದ್ವೈತಾಚಾರ್ಯರಾದ ಅಪ್ಪಯ್ಯದೀಕ್ಷಿತರ ಸಮಕಾಲೀನ. ಜಗನ್ನಾಥ ಪಂಡಿತನು ಬ್ರಾಹ್ಮಣನಾದರೂ ವಿಧಿವಿಲಾಸದಂತೆ ಆತನಿಗೆ ಯವನಸ್ತ್ರೀಸಂಬಂಧವಾಯಿತು. ಆಕೆಯೊಡನೆ ಸಂಸಾರ ನಡೆಸಿ ಇಳಿವಯಸ್ಸಿನಲ್ಲಿ ಗಂಗಾದಡಕ್ಕೆ ಬಂದನು. ಅಲ್ಲಿಯೂ ಆ ಯವನ ಸ್ತ್ರೀಯೊಡನೆ ಗಂಗಾದಡದಲ್ಲಿ ಮಲಗಿದನು. ಅದೇ ಸಮಯದಲ್ಲಿ ಗಂಗಾಯಾತ್ರೆಯ ನಿಮಿತ್ತವಾಗಿ ಅಪ್ಪಯ್ಯದೀಕ್ಷಿತರು ಕಾಶಿಗೆ ಬಂದು ಯವನಸ್ತ್ರೀಯೊಡನಿದ್ದ ಜಗನ್ನಾಥಪಂಡಿತನನ್ನು ನೋಡಿ ಹೀಗೆಂದರು. 'ಕಿಂ ಶೇಷೇ ವಯಸಿ ಅನಯಾ ಶೇಷೇ' ಅಂದರೆ ಏನು? ಈ ಇಳೀವಯಸ್ಸಿನಲ್ಲೂ ಇಲ್ಲಿ ಬಂದು ಮಲಗಬೇಕೆ? ಪುನಃ ಅಂದರು "ಅಥವಾ ಸುಖಂ ಶಯಿಥಾಃ ನಿಕಟೇಜಾಗರ್ತಿ ಜಾಹ್ನವೀ ಭವತಃ" ಅಥವಾ ಸುಖವಾಗಿ ಮಲಗು. ಸಮೀಪದಲ್ಲೇ ಗಂಗೆಯು ಹರಿಯುತ್ತಿದ್ದಾಳೆ ಎಂದು. "ಅಂದರೆ ನೀನು ಮಾಡಿರುವ ಪಾಪವನ್ನು ಗಂಗೆಯು ಪರಿಹರಿಸುವಳು."

ಈ ಸಮಯದಲ್ಲೇ ಜಗನ್ನಾಥಪಂಡಿತನು 'ಗಂಗಾಲಹರಿ' ಎಂಬ ಸ್ತೋತ್ರವನ್ನು ರಚಿಸಿ ಭಕ್ತಿಯಿಂದ ಪಠಿಸಿದನು. ಇದರಲ್ಲಿ ೩೨ ಪದ್ಯಗಳಿವೆ. ಕಾಶಿಯ ಒಂದು ಘಾಟಿನಲ್ಲಿ ೩೨ ಸೋಪಾನಗಳಿವೆ. ಮೇಲಿನ ಸೋಪಾನದಲ್ಲಿ ನಿಂತು ಜಗನ್ನಾಥಪಂಡಿತನು ಗಂಗೆಯನ್ನು ಸ್ತುತಿಸುತ್ತಿರುವಂತೆ ಗಂಗಾಮಾತೆಯು ಒಂದೊಂದು ಮೆಟ್ಟಲೇರಿ ಬಂದು ಜಗನ್ನಾಥನನ್ನು ಕೊಚ್ಚಿ ತನ್ನ ಒಡಲಿನಲ್ಲಿ ಸೇರಿಸಿಕೊಂಡಳಂತೆ. ಇದೇ ಕವಿಯು ಗಂಗಾಲಹರಿಯಲ್ಲಿ ಗಂಗಾಸ್ನಾನಾದಿಗಳಿಂದ ಬರುವ ಫಲವನ್ನು ವಿವರಿಸುತ್ತಾನೆ. ಯಥಾ—

"ಅಪಿಘಂತೋ ವಿಪ್ರಾ ನವಿರತಮುಶಂತೋ ಗುರಸತೀಃ
ಪಿಬಂತೋ ಮೈರೇಯಂ ಪುನರಪಿ ಹರಂತಶ್ಚ ಕನಕಂ।
ವಿಹಾಯ ತ್ವಯ್ಯಂತೇ ತನುಮತನು ದಾನಾಧ್ವರಜುಷಾಂ
ಉಪರ್ಯಂಬ ಕ್ರೀಡಂತ್ಯಖಿಲ ಸುರಸಂಭಾವಿತ ಪದಾಃ ||" ಅಂದರೆ

ಬ್ರಹ್ಮಹತ್ಯೆ, ಗುರುದಾರಾಗಮನ-ಸುರಾಪಾನ-ಸ್ವರ್ಣಸ್ತೇಯ-ಅನೃತವದನ ಇವು ಐದು ಮಹಾಪಾತಕಗಳು.(ಬ್ರಹ್ಮವಧಗಾಂ ಸುರಾಪಾನಗಾಂ ಸುವರ್ಣಸ್ತೇಯಂ) ಎಂದು ವೇದವೂ ಹೇಳುತ್ತದೆ. ಈ ಪಾತಕಗಳಿಗೆ ನರಕದಲ್ಲಿ ಕಠಿಣಶಿಕ್ಷೆ ಅನುಭವಿಸಬೇಕೆಂತಲೂ ಶಾಸ್ತ್ರ ವಿಧಿಸಿರುತ್ತದೆ. ಆದರೆ ಗಂಗಾಮಾತೆಯೆ! ಈ ಪಂಚಮಹಾ

ಪಾತಕಿಯೂ ಸಹ ಅವಸಾನಕಾಲದಲ್ಲಿ ನಿನ್ನಲ್ಲಿಗೆ ಬಂದು ಶರೀರತ್ಯಾಗ ಮಾಡಿದರೆ ಅವನು ಸುರಸಂಭಾವಿತವಾದ ಸದ್ಗತಿಯನ್ನು ಪಡೆಯುವನು. ನಿನ್ನ ಮಹಿಮೆ ಅಪಾರವಾದ್ದು" ಎಂದು. 'ಗಂಗಾಸ್ನಾನಂ ಕಲೌವರಂ' ಎಂದು ನಾರದೀಯ ಪುರಾಣವೇ ಹೇಳಿದೆ. ಕಾಶಿಯ ಗಂಗೆಯಲ್ಲಿ ಸ್ನಾನವು ವಿಶೇಷವೆಂದು "ವಾರಾಣಸ್ಯಾಂ ವಿಶೇಷೇಣ ಗಂಗಾಸದ್ಯಸ್ತು ಮೋಕ್ಷದಾ" ಎಂದೂ ಸಹ ಹೇಳಿದೆ. ಅಲ್ಲದೆ, ಸರಸ್ವತೀನದಿಯ ತೀರ್ಥವೂ ಮೂರು ತಿಂಗಳಲ್ಲಿಯೂ, ಯಮುನಾ ತೀರ್ಥವು ಏಳು ತಿಂಗಳಲ್ಲಿಯೂ, ನರ್ಮದಾತೀರ್ಥವು ಹತ್ತು ತಿಂಗಳಲ್ಲಿಯೂ, ಗಂಗಾತೀರ್ಥವು ಒಂದು ವರ್ಷದಲ್ಲಿಯೂ ಜೀರ್ಣವಾಗುತ್ತದೆ. ಯಥಾ:

"ತ್ರಿಭಿಸ್ಸಾರಸ್ವತಂ ತೋಯಂ ಸಪ್ತಭಿಸ್ತ್ವಥಯಾಮುನಂ।
ನಾರ್ಮದಂಡಶಿಭಿರ್ಮಾಸೈಃ ಗಾಂಗಂ ವರ್ಷೇಣಜೀರ್ಯತಿ ||"

ನಾ.ಪು. ೯-೧೪-೫೯

ಗಂಗೆಯು ಭೂಮಿಗೆ ಬಂದ ದಿನ ಜ್ಯೇಷ್ಠಮಾಸ-ಶುಕ್ಲಪಕ್ಷ-ದಶಮಿ-ಮಂಗಳವಾರ ಹಿಮಾಲಯದಿಂದ ಇಳಿದು ಬಂದಳೆಂದೂ (ನಾ.ಪು. ೪೦-೧೦) ಹೇಳಿರುತ್ತದೆ. ಯಥಾ—

"ಜ್ಯೇಷ್ಠೇ ಮಾಸಿ ಕ್ಷಿತಿಸುತದಿನೇ ಶುಕ್ಲಪಕ್ಷೇ ದಶಮ್ಯಾಂ
ಹಸ್ತೇ ಶೈಲಾದವತರದಸೌ ಜಾಹ್ನವೀ ಮರ್ತ್ಯಲೋಕಂ।
ಪಾಪಾನ್ಯಸ್ಯಾಂ ಹರತಿ ಹಿತಿಥೌ ಸಾದಶ್ಯೈಷಾದ್ಯ ಗಂಗಾ
ಪುಣ್ಯಂ ದದ್ಯಾದಪಿ ಶತಗುಣಂ ವಾಜಿಮೇಧಕ್ರತೋಶ್ಚ ||"

ಇದುವರೆಗೂ ಉತ್ತರಭಾರತದಲ್ಲಿ ಹರಿಯುವ ಗಂಗಾವೈಭವದ ವಿಷಯವು ನಿರೂಪಿತವಾಯಿತು. ನಮ್ಮ ದಕ್ಷಿಣ ಭಾರತದಲ್ಲೂ ಗಂಗೆಯುಂಟು. ದಕ್ಷಿಣ ಮಧುರೆಗೆ ಸುಮಾರು ಹತ್ತು ಮೈಲು ದೂರದಲ್ಲಿ 'ಅಳಹರ್ ಕೋಯಿಲ್' (ವನಗಿರಿ) ಎಂಬ ದಿವ್ಯದೇಶವಿದೆ. ಇದರ ಸಮೀಪದ ಬೆಟ್ಟದಲ್ಲಿ 'ನೂಪುರ ಗಂಗೆ' ಹರಿದು ಬರುತ್ತಾಳೆ. ಇದರ ವೃತ್ತಾಂತ ಸ್ಥಳಪುರಾಣದಲ್ಲಿ ಹೀಗಿರುತ್ತೆ: 'ತ್ರಿವಿಕ್ರಮನ ಪಾದವು ಸತ್ಯಲೋಕಕ್ಕೆ ಹೋಗಲು ಚತುರ್ಮುಖನು ತನ್ನ ಕಮಂಡಲು ತೀರ್ಥದಿಂದ ಪಾದವನ್ನು ತೊಳೆದನಂತೆ. ತೊಳೆಯುವಾಗ ತ್ರಿವಿಕ್ರಮನ ಕಾಲಂದುಗೆ(ನೂಪುರ)ಯಲ್ಲಿ ಒಂದು ಬಿಂದು ಸೇರಿಕೊಂಡಿತು. ತ್ರಿವಿಕ್ರಮನು ಪಾದವನ್ನು ಉಪಸಂಹರಿಸಿದಾಗ ಅವನ ನೂಪುರದಿಂದ ಜಾರಿದ ಗಂಗೆಯು ವನಗಿರಿಯ ಪ್ರದೇಶದಲ್ಲಿ ಬಿದ್ದಿತೆಂದೂ, ನಂತರ ಅಲ್ಲಿಂದ ಪ್ರವಹಿಸಿ ಅಳಹರ್ ಕೋಯಿಲ್ ಅರ್ಚಾಮೂರ್ತಿ ಪಾದದಡಿಯಲ್ಲಿ ಬಂದು ಸೇರಿದಳೆಂದೂ

ಸಹೆ.' ಈ ವೃತ್ತಾಂತವನ್ನು ಶ್ರೀ ರಾಮಾನುಜರ ಶಿಷ್ಯರಾದ ಕುರೇಶರು "ಸುಂದರಿಬಾಹುಸ್ತವದಲ್ಲಿ" ವಿವರಿಸಿರುತ್ತಾರೆ. ಈ ನೂಪುರಗಂಗೆಯ ಅಂದವಾದ ನಡಿಗೆಯನ್ನೂ, ಹೀಗೆ ಅನುಭವಿಸಿರುತ್ತಾರೆ. ಯಥಾ. ಸುಂ-ಸ್ತವ ೩

"ಕ್ವಚಿತ್ವರಿತಗಾಮಿನೀ ಕ್ವಚನಿಮಂದಮಂದಾಲಸಾ
ಕ್ವಚಿತ್ ಸ್ಖಲಿತವಿಹ್ವಲಾ ಕ್ವಚನಫೇನಿಲಾಸಾರವಾ।
ಪತಂತ್ಯಪಿಕಿಲ ಕ್ವಚಿದ್ವ್ರಜತಿ ನೂಪುರಾಹ್ವಾ ನದೀ
ಸುಸುಂದರ ಭುಜಾಹ್ವಯಂ ಮಧುವಿಪೀಯ ಮತ್ತಾಯಥಾ॥"

ಈ ನದಿಯ ಸ್ನಾನವೂ ಗಂಗಾಸ್ನಾನಕ್ಕೆ ಸಮಾನವು. ಅಲ್ಲದೆ ಇದು ಶುದ್ಧ ಗಂಗೆಯೆಂದೂ "ಪಾಥೋ ದಿವ್ಯಂ ಪಶುಪತಿ ಜಟಾಸ್ಪರ್ಶ ಶೂನ್ಯಂ ವಿಭಾತಿ" ಎಂದೂ ಶ್ಲಾಘಿಸಿರುತ್ತಾರೆ. ಗಂಗೆಯು ಮಹಾಪಾವಿತ್ರ್ಯದ ನದಿ, ಪುಣ್ಯನದಿಗಳ ಹೆಸರನ್ನು ಹೇಳುವಾಗ ಈ ನದಿಗೇ ಅಗ್ರಮರ್ಯಾದೆಯನ್ನು ವೇದಪುರುಷನು "ಇಮಂ ಮೇ ಗಂಗೇ ಯಮುನೇ" ಎಂದು ಕೊಟ್ಟಿರುತ್ತಾನೆ. ಇದಕ್ಕೆ ಕಾರಣ ವಿಷ್ಣು ಪಾದೋದ್ಭವೆಯಾದ್ದರಿಂದಲೇ ಎಂದು ಶ್ರೀ ಪರಾಶರರು "ಭಗವದ್ವಿಷ್ಣು ಪಾದಾಂಗುಷ್ಠ ವಿನಿರ್ಗತಸ್ಯ ಹಿ ಜಲಸ್ಯ ಏತನ್ಮಾಹಾತ್ಮ್ಯಂ" ಎಂದು ಗದ್ಯ ಭಾಗದಿಂದ ನಿರೂಪಿಸಿರುತ್ತಾರೆ.

ವಚನ ವಿ.ಪು. ಪುಟ ೨೧೬, ಸಾಲು ೧೭

ಮೂಲ : ಶೃಣೋಷ್ಯಕರ್ಣಃ ಪರಿಪಶ್ಯಸಿ ತ್ವಮಚಕ್ಷುರೂಪೋ ಬಹುರೂಪರೂಪಃ।
ಅಪಾದಹಸ್ತೋ ಜವನೋ ಗೃಹೀತಾ ತ್ವಂ ವೇತ್ಸಿ ಸರ್ವಂ ನ ಚ ಸರ್ವವೇದ್ಯಃ॥
ವಿ.ಪು. ೫-೧-೪೧

ಪರಮಾತ್ಮನು ದಿವ್ಯಮಂಗಳ ವಿಗ್ರಹಯುಕ್ತನು. ಸಮಸ್ತ ಕಲ್ಯಾಣಗುಣ ಗಳುಳ್ಳವನು. ಅವನು ಮನ್ಮಥನಿಗೂ ಮನ್ಮಥನು. ಅನೇಕ ಅವತಾರಗಳನ್ನೆತ್ತಿ ದವನು. ಪರ-ವ್ಯೂಹ-ವಿಭವ-ಅಂತರ್ಯಾಮಿ-ಅರ್ಚಾರೂಪದಿಂದ ಐದು ರೂಪ ಗಳಿಂದ ಗೋಚರನು ಎಂದು ಶ್ರುತಿ-ಸ್ಮೃತಿ-ಇತಿಹಾಸ ಪುರಾಣಗಳು ಹೇಳುತ್ತವೆ. ಆದರೆ ಮೇಲಿನ ಪದ್ಯದಲ್ಲಿ ಅವನಿಗೆ ಕಿವಿ ಇಲ್ಲ. ಆದರೂ ಕೇಳುತ್ತಾನೆ. ಕಣ್ಣಿಲ್ಲ ಆದರೂ ನೋಡುತ್ತಾನೆ. ರೂಪವಿಲ್ಲ. ಅನೇಕ ರೂಪಗಳುಂಟು. ಅವನಿಗೆ ಪಾದ ವಿಲ್ಲ. ಆದರೂ ಓಡುತ್ತಾನೆ. ಕೈಯಿಲ್ಲ. ಆದರೂ ಹಿಡಿಯುತ್ತಾನೆ. ಇದಕ್ಕೆ ಶ್ರುತಿಪ್ರಮಾಣಗಳೂ ಇವೆ—"ಪಶ್ಯತ್ಯಚಕ್ಷುಃ ಸಶೃಣೋತ್ಯಕರ್ಣಃ" "ಅಪಾಣಿ ಪಾದೋ ಜವನೋ ಗೃಹೀತಾ" ಎಂದು. ಈ ಉಪನಿಷದ್ವಾಕ್ಯಗಳ ಅಭಿಪ್ರಾಯವೇ

(ಉಪಬೃಂಹಣವೇ) ಮೇಲಿನ ಶ್ರೀಪರಾಶರರ ಶ್ರೀಸೂಕ್ತಿಯಾಗಿದೆ. ಇಲ್ಲಿ ಭಗವಂತನಿಗೆ ಗುಣಗಳುಂಟು-ಗುಣಗಳಿಲ್ಲ. ರೂಪವುಂಟು-ರೂಪವಿಲ್ಲ. ಇಂತಹ ವಿರುದ್ಧ ಅಭಿಪ್ರಾಯಗಳಿಗೆ ಸಮಾಧಾನವೇನು?

ವೇದಗಳನ್ನು ಪ್ರಮಾಣವನ್ನಾಗಿ ಒಪ್ಪುವವರಲ್ಲಿ ಕೆಲವರು ಪರಬ್ರಹ್ಮನೇನೋ ಉಂಟು. ಆದರೆ ಅವನಿಗೆ ರೂಪವಾಗಲಿ, ಗುಣಗಳಾಗಲಿ ಇಲ್ಲ. ಅವನು ಶುದ್ಧ. "ನಿಷ್ಕಳೋ ನಿರಂಜನೋ ನಿರ್ವಿಕಲ್ಪೋ ನಿರಾಖ್ಯಾತಶ್ಶುದ್ಧೋದೇವ ಏಕೋ ನಾರಾಯಣಃ" ಎಂದು ಶ್ರುತಿಯೂ ಹೇಳಿರುತ್ತದೆ ಎಂಬ ವಾದವನ್ನು ಮುಂದಿಟ್ಟಿರುತ್ತಾರೆ. ಆದರೆ ಪರಮಾತ್ಮನಿದ್ದಾನೆಂದು ಯಾವ ವೇದ ಹೇಳಿತೋ ಅದೇ ವೇದವು ಮತ್ತೊಂದು ಕಡೆ ಅವನಿಗೆ ರೂಪ-ಗುಣಗಳುಂಟೆಂದು ಹೇಳಿದೆ. ವೇದಪ್ರಮಾಣದಿಂದ ಪರಬ್ರಹ್ಮನನ್ನು ಒಪ್ಪಿಕೊಳ್ಳುವ ಅವರು ಅದೇ ಪ್ರಮಾಣದಿಂದಲೇ ಅವನ ಆಕಾರ-ಗುಣಗಳನ್ನು ಒಪ್ಪಬೇಕಲ್ಲವೆ? ಜಿತಂತಾ ಸ್ತೋತ್ರದಲ್ಲಿ "ನತೇ ರೂಪಂ ನ ಚಾಕಾರೋ ನಾಯುಧಾನಿ ನ ಚಾಸ್ಪದಂ" ಅವನಿಗೆ ರೂಪವಿಲ್ಲ, ಆಕಾರವಿಲ್ಲ ಎಂದು ವಿರೋಧ ಕಂಡುಬಂದರೂ, ಅದೇ ಪದ್ಯದ ಉತ್ತರಾರ್ಧವು 'ತಥಾಪಿ ಪುರುಷಾಕಾರೋ ಭಕ್ತಾನಾಂ ತ್ವಂ ಪ್ರಕಾಶಸೇ' ಮೇಲಿನ ವಿರೋಧವನ್ನು ಸರಿಪಡಿಸಿರುತ್ತದೆ. ಭಗವಂತನಿಗೆ ರೂಪವುಂಟು. ಅದು ತನಗಾಗಿ ಅಲ್ಲ. ಭಕ್ತರಿಗಾಗಿ. ರೂಪವಿಲ್ಲದ ಭಗವಂತನನ್ನು ಧ್ಯಾನಮಾಡುವುದೆಂತು? "ಯೋಯೋಯಾಂಯಾಂ ತನುಂಭಕ್ತ್ಯಾ ಶ್ರದ್ಧಯಾರ್ಚಿತು ಮಿಚ್ಛತಿ।" ಯಾರು ಯಾವ ರೂಪದಿಂದ ನನ್ನನ್ನು ಧ್ಯಾನಿಸುತ್ತಾರೋ ಮತ್ತು ಅರ್ಚಿಸುತ್ತಾರೋ ಅವರಿಗೆ ಅದೇ ರೂಪದಿಂದ ಸಿದ್ಧಿಪಡೆಯುವಂತೆ ಅನುಗ್ರಹಿಸುವುದಾಗಿ ಗೀತಾಚಾರ್ಯನ ವಾಣಿಯೂ ಇರುತ್ತೆ.

ಶ್ರೀರಾಮಾನುಜರು ಶ್ರೀಭಾಷ್ಯದಲ್ಲಿ ಈ ವಿರೋಧವನ್ನು ಸುಲಭವಾಗಿ ಬಿಡಿಸಿರುತ್ತಾರೆ. ವೇದದಲ್ಲಿ "ಪಶ್ಯತ್ಯಚಕ್ಷುಃ ನಿರ್ಗುಣೊ" ಇತ್ಯಾದಿ ನಿಷೇಧ ವಾಕ್ಯಗಳು ಮಾತ್ರವೇ ಇದ್ದಿದ್ದರೆ ಅವನಿಗೆ ವಿಗ್ರಹವಿಲ್ಲ. ಗುಣಗಳಿಲ್ಲವೆನ್ನಬಹುದಾಗಿತ್ತು. ಆದರೆ ಅದೇ ವೇದವು 'ಹಿರಣ್ಯಶ್ಮಶ್ರುಃ ಹಿರಣ್ಯಕೇಶಃ' 'ತಸ್ಯಯಥಾ ಕಪ್ಯಾಸಂ ಪುಂಡರೀಕಮೇವಮಕ್ಷಿಣೀ" ಅವನಿಗೆ ಸುಂದರವಾದ ಕೇಶವೂ, ಕಣ್ಣುಗಳೂ ಇವೆ ಎಂದು ಅವನಿಗೆ ಶರೀರವಿದೆ ಎಂದು ಹೇಳುವ ವೇದಪ್ರಮಾಣಗಳೂ ಇವೆ. ಮೇಲಿನ ಶ್ರುತಿವಾಕ್ಯಗಳು ದೇವರ ಶರೀರವು ಪರಮಭೋಗ್ಯವೆಂದು ಹೇಳುತ್ತವೆ. ಶರೀರವಿಲ್ಲವೆನ್ನುವ ವೇದವಾಕ್ಯಗಳಿಗೆ ಅವನಿಗೆ ನಮ್ಮಂತೆ ಹೇಯ ಶರೀರವಿಲ್ಲವೆಂತಲೇ ತಾತ್ಪರ್ಯ ಹೇಳಬೇಕು. ಅಂತೆಯೆ ಅವನ ವಿಗ್ರಹ ದಿವ್ಯ. ಅದು ಅಪ್ರಾಕೃತ. ಈ ದಿವ್ಯವಿಗ್ರಹವನ್ನೆ ದಂಡಕಾರಣ್ಯದ ಮಹರ್ಷಿಗಳು

ಅನುಭವಿಸಿದರೆಂದು ವಾಲ್ಮೀಕಿ ಮುನಿವರರು ಸ್ಪಷ್ಟಪಡಿಸಿರುತ್ತಾರೆ. ಯಥಾ:

> ತೇ ತಂ ಸೋಮಮಿವೋದ್ಯಂತಂ ದೃಷ್ಟ್ವಾ ವೈ ಧರ್ಮಚಾರಿಣಃ।
> ರೂಪಸಂಹನನಂ ಲಕ್ಷ್ಮೀಂ ಸೌಕುಮಾರ್ಯಂ ಸುವೇಷತಾಂ॥
> ಮಂಗಳಾನಿ ಪ್ರಯುಂಜಾನಾಂ ಪ್ರತ್ಯಗೃಹ್ಣನ್ ದೃಢವ್ರತಾಃ॥

ಎಂದು. ವಾಲಿಯ ಭಾರ್ಯೆಯಾದ ತಾರೆಯೂ "ಮನುಷ್ಯದೇಹಾಭ್ಯುದಯಂ ವಿಹಾಯ ದಿವ್ಯೇನ ದೇಹಾಭ್ಯುದಯೇನ ಯುಕ್ತಃ" ಎಂದು ರಾಮನನ್ನು ದಿವ್ಯ ಮಂಗಳ ವಿಗ್ರಹಯುಕ್ತನನ್ನಾಗಿಯೇ ಅನುಭವಿಸಿರುತ್ತಾಳೆ.

ಹೀಗೆಯೇ ಕಣ್ಣಿನ ಸೌಂದರ್ಯವನ್ನು ಹೇಳುವಾಗಲೂ "ರಾಮಃ ಕಮಲಪತ್ರಾಕ್ಷಃ ಪುಂಡರೀಕವಿಶಾಲಾಕ್ಷೌ" ಮುನಿಶ್ರೇಷ್ಠರು ಸ್ಪಷ್ಟಪಡಿಸಿರುತ್ತಾರೆ.

ಶ್ರೀಶಂಕರಭಗವತ್ಪಾದರು ದಿವ್ಯವಿಗ್ರಹವನ್ನು ಒಪ್ಪದಿದ್ದರೂ, ಗೀತೆಯ ೧೧ನೇ ಅಧ್ಯಾಯದ ಐದನೇ ಪದ್ಯದ ವ್ಯಾಖ್ಯಾನದಲ್ಲಿ (ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚ) ಎಂಬ ಪದ್ಯವನ್ನು ವಿವರಿಸುವಾಗ 'ನಾನಾವಿಧಾನಿ = ಅನೇಕ ಪ್ರಕಾರಾಣಿ ದಿವಿ-ಭವಾನಿ = ದಿವ್ಯಾನಿ. ಅಂದರೆ 'ಅಪ್ರಾಕೃತ ವಿಗ್ರಹವೆಂದೇ' ವ್ಯಾಖ್ಯಾನ ಮಾಡಿರುತ್ತಾರೆ. ಉಪನಿಷತ್ತೂ ಸಹ "ಇಚ್ಛಾಗೃಹೀತಾಭಿಮತೋರುದೇಹಃ" ಎಂದು ಭಗವಂತನು ತನಗೆ ಇಷ್ಟಬಂದ ರೂಪವನ್ನು ಧರಿಸಬಲ್ಲವನು ಎಂದು ಸ್ಪಷ್ಟಪಡಿಸಿರುತ್ತೆ.

ಆದ್ದರಿಂದ ವಿಷ್ಣುಪುರಾಣದ ಮೇಲಿನ ಶ್ಲೋಕವು ನಾವು ಅವಯುವಗಳನ್ನು ಹೊಂದಿ ಮಾಡುವ ಕೆಲಸವನ್ನು ಭಗವಂತನು ಅವಯುವಗಳಿಲ್ಲದೆಯೇ ಮಾಡುವ ಸಾಮರ್ಥ್ಯವುಳ್ಳವನೆಂದೂ, ಅವನು ದಿವ್ಯಮಂಗಳ ವಿಗ್ರಹವುಳ್ಳವನೆಂದೂ, ನಮ್ಮಂತೆ ಅವನಿಗೆ ಹೇಯಶರೀರವಿಲ್ಲವೆಂತಲೂ ಸ್ಪಷ್ಟಪಡಿಸಿರುತ್ತಾರೆ.

ವಚನ ವಿ.ಪು. ಪುಟ ೨೧೭, ಸಾಲು ೫

ಮೂಲ: ನಾಕಾರಣಾತ್ಕಾರಣಾದ್ವಾ ಕಾರಣಾಕಾರಣಾನ್ನ ಚ।
ಶರೀರಗ್ರಹಣಂ ವ್ಯಾಪಿನ್ ಧರ್ಮತ್ರಾಣಾಯ ಕೇವಲಂ॥ ವಿ.ಪು. ೫-೧-೫೧

ಬ್ರಹ್ಮನು ವಿಷ್ಣುವನ್ನು ಈ ಪದ್ಯದಿಂದ ಸ್ತೋತ್ರ ಮಾಡುವನು. "ವ್ಯಾಪಿನ್ = ಸರ್ವವ್ಯಾಪಿಯಾದ ಸರ್ವೇಶ್ವರನೇ ಶರೀರಗ್ರಹಣಂ = ದಿವ್ಯಮಂಗಳವಿಗ್ರಹದೊಡನೆ ಅವತರಿಸುವಿಕೆಯು, ನಕಾರಣಾತ್ = ಸ್ವರ್ಗಾದಿ ಸುಖಭೋಗಗಳನ್ನು ಅನುಭವಿಸುವುದಕ್ಕಾಗಿ ಅಲ್ಲವು. ನಾಕಾರಣಾತ್ = ಕರ್ಮವಶ್ಯರಾದ ಮನುಷ್ಯರಂತೆ ದುಃಖವನ್ನನುಭವಿಸುವುದಕ್ಕೂ ಅಲ್ಲವು. ಕಾರಣಾಕಾರಣಾನ್ನಚ = ಮಾನವ

ರಂತೆ ಸುಖದುಃಖಗಳೆರಡನ್ನು ಅನುಭವಿಸುವುದಕ್ಕೂ ಅಲ್ಲವು. ಹಾಗಾದರೆ ಏತಕ್ಕಾಗಿ? ಧರ್ಮತ್ರಾಣಾಯ ಕೇವಲಂ = ಕೇವಲ ಧರ್ಮಸಂಸ್ಥಾಪನೆಗಾಗಿಯೆ ಎಂದು ಪದ್ಯದ ಅರ್ಥವು. ಭಗವದವತಾರವು ಶಿಷ್ಟರಕ್ಷಣೆ–ದುಷ್ಟಶಿಕ್ಷಣ–ಧರ್ಮಸಂಸ್ಥಾಪನೆಗಳ ಮೂರು ಕಾರ್ಯಕ್ಕಾಗಿ. ಇದರಲ್ಲಿ ಪ್ರಧಾನವಾದ್ದು ಧರ್ಮಸಂಸ್ಥಾಪನೆ ಮತ್ತು ಶಿಷ್ಟರಕ್ಷಣೆ. ಇಲ್ಲಿ ಅವತರಿಸಿದರೂ ಅವನಿಗೆ ವರ್ಣಾಶ್ರಮೋಚಿತವಾದ ಕರ್ಮನಿರ್ಬಂಧವು ಇಲ್ಲವು. ಕರ್ಮವಶ್ಯರಿಗೆ ಮಾತ್ರವೇ ಕರ್ಮನಿರ್ಬಂಧವು. ಆದರೂ ವಸುದೇವನ ಮನೆಯಲ್ಲಿ ಜನಿಸಿ ಪ್ರಸಿದ್ಧನಾದುದರಿಂದ ಕುಲೋಚಿತವಾದ ಕ್ಷತ್ರಧರ್ಮವನ್ನು ಅವಲಂಬಿಸಿದನು. ಅಜ್ಞಾನಿಗಳು ಅವನನ್ನು ಅನುಕರಿಸುವುದರಿಂದ ಅವರ ಉದ್ಧಾರಕ್ಕಾಗಿ ವರ್ಣೋಚಿತ ಕರ್ಮಗಳನ್ನು ಆಚರಿಸಿ ತೋರಿಸಬೇಕು. ಗೀತೆಯಲ್ಲಿ ಭಗವಾನ್ ಕೃಷ್ಣನು "ಮಮ ವರ್ತ್ಮಾನುವರ್ತಂತೇ" ಎಲ್ಲರೂ ನನ್ನ ದಾರಿಯನ್ನೇ ಹಿಡಿಯುವರು. ಲೋಕದಲ್ಲಿ ನಾನು ಪ್ರಖ್ಯಾತನಾಗಿರುವುದರಿಂದ ಎಲ್ಲರೂ ನನ್ನ ಆಚರಣೆಯನ್ನು ಅನುಸರಿಸುವರು. ನಾನು ಕ್ಷತ್ರೋಚಿತವಾದ ಧರ್ಮವನ್ನು ಆಚರಿಸದಿದ್ದರೆ ಇತರ ಕ್ಷತ್ರಿಯರೂ ಸಹ ಲೋಕಕಂಟಕರನ್ನು ನಿಗ್ರಹಿಸದೆ ಸುಮ್ಮನಾಗುವರು. ಇದರಿಂದ ಅಧರ್ಮವು ಹೆಚ್ಚಿ ಅನೇಕ ಪಾತಕಗಳಿಗೆ ನಾನೇ ಕಾರಣನಾದಂತಾಗುತ್ತೆ. ಧರ್ಮಸಂಸ್ಥಾಪನೆಗಾಗಿ ನಾನು ಸಹ ಉಚಿತ ಕರ್ಮವನ್ನು ಆಚರಿಸಲೇಬೇಕು. ಗೀತೆಯಲ್ಲಿ "ನಾನವಾಪ್ತಮವಾಪ್ತವ್ಯಂ" ನಾನು ಸತ್ಯಸಂಕಲ್ಪನು. ನನಗೆ ಅವತಾರಗಳಲ್ಲಿ ಪಡೆಯಬೇಕಾದ್ದು ಏನೂ ಇಲ್ಲವು. ದೇವನಾಗಿ, ಮನುಷ್ಯನಾಗಿ, ತಿರ್ಯಕ್ಕಾಗಿ ಅವತರಿಸುವುದು ನನ್ನ ಇಷ್ಟಾನುಸಾರ. "ಇಚ್ಛಾಗೃಹೀತಾಭಿಮತೋರು ದೇಹಃ' ಎಂದು ಪುರಾಣದಲ್ಲಿಯೇ ಹೇಳಿರುತ್ತೆ. ಅಲ್ಲದೆ "ಸಂಭವಾಮ್ಯಾತ್ಮಮಾಯಯಾ" ಇಲ್ಲಿ "ಮಾಯಾ ವಯುನಂ ಜ್ಞಾನಂ" ಎಂಬ ಅರ್ಥವನ್ನನುಸರಿಸಿ ಆತ್ಮಸಂಕಲ್ಪಾನುಸಾರ ಭಗವದವತಾರವು. ಇತರರು ಕರ್ಮಾನುಭವಕ್ಕಾಗಿ ಜನ್ಮಗಳನ್ನೆತ್ತುವರು.

ವಚನ ವಿ.ಪು. ಪುಟ ೨೨೦, ಸಾಲು ೨೮

ಮೂಲ: ಉಪಸಂಹರ ವಿಶ್ವಾತ್ಮನ್ ರೂಪಮೇತಚ್ಚತುರ್ಭುಜಂ ।
ಜಾನಾತುಮಾವತಾರಂ ತೇ ಕಂಸೋಽಯಂ ದಿತಿಜನ್ಮಜಃ ॥

ವಿ.ಪು. ೫–೩–೧೩

ದೇವಕೀದೇವಿಯು ಹುಟ್ಟಿದ ಶಿಶುವನ್ನು ನೋಡಿದಳು. ಅದ್ಭುತವಾದ ಶಿಶು. ಚತುರ್ಭುಜ ಬೇರೆ. ಇದು ಮಾನವ ಶಿಶುವಲ್ಲ. ಇವನು ಪರಮಾತ್ಮನೇ. ಕೂಡಲೇ ಕಂಸಭಯದಿಂದ ಚಕಿತಳಾದ ದೇವಕಿಯು ಈ ಅಲೌಕಿಕ ರೂಪವನ್ನು

ಉಪಸಂಹಾರಮಾಡು. ದ್ರವಿಡನೆಂಬ ದೈತ್ಯನಿಗೆ ಉಗ್ರಸೇನನ ಭಾರ್ಯೆಯಲ್ಲಿ ಚೌರ್ಯದಿಂದ ಹುಟ್ಟಿದ ಈ ಕಂಸನು ನಿನ್ನ ಈ ರೂಪವನ್ನು ನೋಡುವುದು ಬೇಡ ಎಂದು ಕೃಷ್ಣನನ್ನು ಪ್ರಾರ್ಥಿಸಿದಳು.

ಅಲ್ಲಿಗೆ ತಾಯ ಪ್ರಾರ್ಥನೆಯಂತೆ ಕೃಷ್ಣನು ಕಂಸವಧಪರ್ಯಂತವಾಗಿ ದ್ವಿಭುಜನಾಗಿಯೇ ಇದ್ದನು. ಆಮೇಲೆ ಚತುರ್ಭುಜವು ಅವನ ಸಾಧಾರಣ ರೂಪವಾಗಿತ್ತು. ವಿಷ್ಣುಚಿತ್ತೀಯ ವ್ಯಾಖ್ಯಾನದಲ್ಲಿ "ಚತುರ್ಭುಜತ್ವಮೇವ ನರಕ-ಶಿಶುಪಾಲ-ಪೌಂಡ್ರಕ ವಧಾದಿಷು ಪ್ರಸಿದ್ಧೇಃ" ಇವರ ಸಂಹಾರ ಮೊದಲಾದ ಕಾಲದಲ್ಲಿ ಚತುರ್ಭುಜನಾಗಿಯೇ ಸೇವೆಯನ್ನಿತ್ತನೆಂದು ತಿಳಿದುಬಂದಿದೆ. ಹಾಗೆಯೇ ಭಾಗವತದಲ್ಲೂ ರುಕ್ಮಿಣಿಯೊಡನೆ ಪ್ರಣಯಕಲಹದಲ್ಲಿ ಕೃಷ್ಣನ ನಿಷ್ಠುರೋಕ್ತಿಯನ್ನು ಕೇಳಿ ರುಕ್ಮಿಣಿಯು ಮೂರ್ಛಿತಳಾದಾಗ ಅವಳನ್ನುಪಚರಿಸುವ ಸಂದರ್ಭ:

ಪರ್ಯಂಕಾದವರುಹ್ಯಾಶು ತಾಮುತ್ಥಾಪ್ಯ ಚತುರ್ಭುಜಃ।
ಕೇಶಾನ್ ಸಮೂಹ್ಯ ತದ್ವಕ್ತ್ರ ಪ್ರಾಮೃಜತ್ಪದ್ಮಪಾಣಿನಾ॥

ಇಲ್ಲಿಯೂ ನಾಲ್ಕು ಭುಜಗಳೆಂದು ಹೇಳಿದೆ. ರುಕ್ಮಿಣಿಯನ್ನು ಸಮಾಧಾನಪಡಿಸುವಾಗ ನಾಲ್ಕು ಕೈಗಳೂ ಸಾರ್ಥಕತೆಯನ್ನು ಪಡೆದವು ಎಂದು ಶ್ರೀ ವೀರರಾಘವರು ತಮ್ಮ ವ್ಯಾಖ್ಯಾನದಲ್ಲಿ "ಚತುರ್ಭುಜಃ = ಉತ್ಥಾಪನ-ಆಶ್ಲೇಷಣ-ವಕ್ತ್ರಪರಿಮಾರ್ಜನಾರ್ಥಂ ಆವಿಷ್ಕೃತ ಚತುರ್ಭುಜಃ ಇತ್ಯರ್ಥಃ" ಎಂದು ಬರೆದಿದ್ದಾರೆ. ಹೀಗೆಯೇ:

ಉಪಸಂಹರ ವಿಶ್ವಾತ್ಮನ್ ಅಥೋರೂಪಮಲೌಕಿಕಂ।
ಶಂಖಚಕ್ರಗದಾಪದ್ಮಶ್ರಿಯಾಜುಷ್ಟ ಚತುರ್ಭುಜಂ॥

ಹೀಗೆ ಅಲೌಕಿಕ ರೂಪವೆಂದು ಶುಕಬ್ರಹ್ಮರು ಈ ರೂಪವನ್ನು ಅನುಭವಿಸಿರುತ್ತಾರೆ.

ಆದರೆ ವಿಷ್ಣುಪುರಾಣದ (೫-೨೫-೧)ನೇ ಪದ್ಯದಲ್ಲಿ "ಮಾನುಷಚ್ಛದ್ಮರೂಪಸ್ಯ ಶೇಷಸ್ಯ ಧರಣೀಧೃತಃ" ಮನುಷ್ಯರೂಪದಿಂದ ಮುಚ್ಚಿರೂಪವೆಂದು ಪರಾಶರರು ಅಪ್ಪಣೆ ಕೊಡಿಸಿರುತ್ತಾರೆ. ಮನುಷ್ಯನಿಗೆ ನಾಲ್ಕು ಕೈಗಳಿರುವುದು ಎಲ್ಲಿಯೂ ಇಲ್ಲ. ಆದ್ದರಿಂದ ಚತುರ್ಭುಜತ್ವವೆಂದು ಹೇಳಿರುವುದು ವಿರುದ್ಧವಾಗುವುದಿಲ್ಲವೆ? ಎಂಬ ಸಂದೇಹಕ್ಕೆ ಆಸ್ಪದವಾಯಿತು.

ಅಲ್ಲದೆ ಗೀತೆಯಲ್ಲಿ ಅರ್ಜುನನು ಶ್ರೀಕೃಷ್ಣನ ವಿಶ್ವರೂಪವನ್ನು ನೋಡಿದ ಅನಂತರ ಪ್ರಾರ್ಥಿಸುತ್ತಾನೆ:

ಕಿರೀಟಿನಂ ಗದಿನಂ ಚಕ್ರಹಸ್ತಂ ಇಚ್ಛಾಮಿ ತ್ವಾಂ ದ್ರಷ್ಟುಮಹಂ ತಥೈವ।
ತೇನೈವ ರೂಪೇಣ ಚತುರ್ಭುಜೇನ ಸಹಸ್ರಬಾಹೋ ಭವ ವಿಶ್ವಮೂರ್ತೇ॥

ಈ ಶ್ಲೋಕದ ತಾತ್ಪರ್ಯದಂತೆ ಅರ್ಜುನನಿಗೆ ಯಾವಾಗಲೂ ಚತುರ್ಭುಜ ಸೇವೆಯೆಂತಲೇ ಸ್ಪಷ್ಟವಾಗಿದೆ. ಇಲ್ಲಿ ಅರ್ಜುನನು ಮನುಷ್ಯರೂಪವನ್ನು ನೋಡಲಪೇಕ್ಷಿಸಿದನೆಂದು ಅರ್ಥಮಾಡುವುದು ಕಷ್ಟವು. ಅಲ್ಲದೆ ಕಿರೀಟಿನಂ-ಗದಿನಂ-ಚಕ್ರಿಣಂ. ಅಂದರೆ ಅರ್ಜುನನ ಪ್ರಾರ್ಥನೆ ಪ್ರಾಪ್ಯರೂಪವು. ಅಂತಹ ದಿವ್ಯ ವೈಕುಂಠದ ರೂಪವನ್ನು ತೋರಿಸು ಎಂದು ಪ್ರಾರ್ಥಿಸಿರುತ್ತಾರೆ. ಈ ರೂಪವು ಜ್ಞಾನಿಯೂ ಮುಮುಕ್ಷುವೂ ಆದವನಿಗೆ ಮಾತ್ರವೇ ಉಪಾಸ್ಯವು. ಪ್ರಕೃತದಲ್ಲಿ ಅರ್ಜುನನು ಕೃಷ್ಣಾನುಗ್ರಹಕ್ಕೆ ಪಾತ್ರನಾದುದರಿಂದ ಈ ಅದ್ಭುತ ರೂಪವನ್ನು ಸೇವೆಮಾಡಿರುವುದರಲ್ಲಿ ಸಂದೇಹವಿಲ್ಲ. ಗೀತೆಯಲ್ಲಿ "ತ್ವದನ್ಯೇನ ನ ದೃಷ್ಟಪೂರ್ವಂ" ಎಂದು ಕೃಷ್ಣನು ಹೇಳಿ ಭಕ್ತನಿಗೆ ಪರರೂಪವನ್ನೇ ತೋರಿಸಿ ಅನುಗ್ರಹಿಸಿರುತ್ತಾನೆ. "ಇತ್ಯರ್ಜುನಂ ವಾಸುದೇವಸ್ತಥೋಕ್ತ್ವಾ" ಎಂಬ ವಾಕ್ಯಾನುಸಾರ ಅಸಾಧಾರಣವಾದ ಪರವಾಸುದೇವರೂಪವನ್ನು ಅರ್ಜುನನಿಗೆ ತೋರಿ ಪುನಃ ಮನುಷ್ಯರೂಪವನ್ನು ಹೊಂದಿದನೆಂದು ವ್ಯಕ್ತವಾಗುತ್ತದೆ. "ದೃಷ್ಟ್ವೇದಂ ಮಾನುಷಂ ರೂಪಂ" ಎಂಬ ಅರ್ಜುನನ ಉಕ್ತಿಯಿಂದಲೂ ಸ್ಪಷ್ಟ ನಾಗಿರುತ್ತದೆ. ಮೇಲಿನ "ಉಪಸಂಹರ ವಿಶ್ವಾತ್ಮನ್....ದಿತಿಜನ್ಮಜಃ" ಶ್ಲೋಕ ದಲ್ಲಿ ಚತುರ್ಭುಜವನ್ನು ಹೇಳಿರುವುದು ಕೇವಲ ಪ್ರದರ್ಶನಾರ್ಥವಾಗಿ ಹೇಳಿ ಕಿರೀಟ–ವನಮಾಲೆ–ಆಭರಣಯುಕ್ತನಾಗಿ ದಿವ್ಯಪೀತಾಂಬರಧಾರಿಯಾಗಿರುವ ನಿನ್ನ ರೂಪವನ್ನು ನೋಡಲು ನಾನು ಇಚ್ಛಿಸುತ್ತೇನೆ ಎಂದು ಊಹಿಸಲು ಅವಕಾಶ ವಿದೆ. ಶ್ರೀ ಪರಾಶರಮುನಿಗಳೂ ಸಹ ಇಂತಹ ರೂಪವನ್ನು ಹೀಗೆ ವರ್ಣಿಸಿರು ತ್ತಾರೆ:

"ಪ್ರಸನ್ನವದನಂ ಚಾರುಪದ್ಮಪತ್ರೋಪಮೇಕ್ಷಣಂ।
ಸುಕಪೋಲಂ ಸುವಿಸ್ತೀರ್ಣಂ ಲಲಾಟಫಲಕೋಜ್ವಲಂ॥
ಸಮಕರ್ಣಾಂತವಿನ್ಯಸ್ತ ಚಾರುಕುಂಡಲಭೂಷಣಂ।
ಕಂಬುಗ್ರೀವಂ ಸುವಿಸ್ತೀರ್ಣಂ ಶ್ರೀವತ್ಸಾಂಕಿತ ವಕ್ಷಸಂ।
ವಲಿತ್ರಿಭಂಗಿನಾ ಮಗ್ನನಾಭಿನಾಹ್ಯುದರೇಣ ಚ॥"

ಇತ್ಯಾದಿ ಪದ್ಯದ ಅರ್ಥವು ಸುಗಮವಾಗಿದೆ. ಚತುರ್ಭುಜತ್ವವು ಮನುಷ್ಯಾವತಾರಕ್ಕೆ ವಿರುದ್ಧವಾದುದು. ಯಾವ ಯಾವ ಅವತಾರಗಳೊ ಅದಕ್ಕನುಗುಣವಾದ ಶರೀರವೂ ಅವಯವಗಳೂ ಇರಬೇಕು. ಕೃಷ್ಣನು ಈಗ ವಸುದೇವನ ಗೃಹದಲ್ಲಿ ಮನುಷ್ಯನಾಗಿ ಅವತರಿಸಿರುತ್ತಾನೆ. ಮನುಷ್ಯನಿಗೆ ನಾಲ್ಕು ಕೈಗಳಿಲ್ಲವಾದುದರಿಂದ ಎರಡು ಕೈಗಳಿಂದ ಇರುವುದೇ ಯುಕ್ತವು. ಹಾಗಾದರೆ ಚತುರ್ಭುಜನು ಎಂದು ಹೇಳಿರುವುದಕ್ಕೆ ಗತಿಯೇನು? ಸಾಧಾರಣ ಮನುಜರಿಗೆ ದ್ವಿಭುಜದಿಂದ ಸೇವೆ. ಅರ್ಜುನನಂತಹ ಭಕ್ತರಿಗೂ ಮಹಾನ್‌ಗಳಿಗೂ ಕೃಷ್ಣನು ಚತುರ್ಭುಜಸೇವೆಯನ್ನು ಅನುಗ್ರಹಿಸುತ್ತಿದ್ದನೆಂದು ಗ್ರಹಿಸತಕ್ಕದ್ದು.

ವಚನ ವಿ.ಪು. ಪುಟ ೨೨೯, ಸಾಲು ೧೯

ಮೂಲ : ಹೃದಿ ಸಂಕಲ್ಪ್ಯ ಯದ್ರೂಪಂ ಧ್ಯಾನೇನಾರ್ಚಂತಿ ಯೋಗಿನಃ ।
ಭಾವಪುಷ್ಪಾದಿನಾ ನಾಥಃ ಸೋಽರ್ಚ್ಯತೇ ವಾ ಕಥಂ ಮಯಾ ॥

ವಿ.ಪು. ೫-೭-೬೯

ಸಂದರ್ಭ—ಯಮುನಾ ಮಡುವಿನಲ್ಲಿ ವಾಸವಾಗಿದ್ದ ಕಾಳಿಯನ ಹೆಡೆಮೇಲೆ ಕೃಷ್ಣನು ನರ್ತನ ಮಾಡುತ್ತಾ ಅವನಿಗೆ ಬಹಳ ನೋವನ್ನುಂಟುಮಾಡಿದನು. ಪರಮಾತ್ಮನ ಪಾದಸ್ಪರ್ಶದಿಂದ ಜ್ಞಾನವನ್ನು ಪಡೆದ ಕಾಳಿಯನು ಕೃಷ್ಣನನ್ನು ಸ್ತೋತ್ರ ಮಾಡುವ ರೀತಿ—ಬ್ರಹ್ಮಾದಿ ದೇವತೆಗಳೇ ನಿನ್ನನ್ನು ಸಂಪೂರ್ಣವಾಗಿ ಅರ್ಚಿಸಲಾರರು. ಯೋಗಿಗಳು ಶುದ್ಧವಾದ ಪುಷ್ಪಗಳಿಂದ ನಿನ್ನನ್ನು ಅರ್ಚಿಸುವರು. ನಾನು ಯಾವ ರೀತಿ ನಿನ್ನನ್ನು ಅರ್ಚಿಸಲಿ?

ಈ ಪದ್ಯದಲ್ಲಿ ಕಾಳಿಂಗನು ಭಗವಂತನ ಅರ್ಚನೆ ಅವಶ್ಯವೆಂದು ತಿಳಿಸಿರುತ್ತಾನೆ. 'ಅರ್ಚ–ಪೂಜಾಯಾಂ' ಎಂಬ ವ್ಯುತ್ಪತ್ತಿಯಿಂದ ಅರ್ಚೆ–ಪೂಜೆ. ಅರ್ಥಾತ್ ಭಗವದಾರಾಧನೆ ಎಂದು ಅರ್ಥವಾಯಿತು. ನಿತ್ಯವೂ ಯಥಾಶಕ್ತಿ ಭಗವತ್ಪೂಜೆ ಚೇತನನ ಶ್ರೇಯಸ್ಸಿಗಾಗಿ ನಡೆಸತಕ್ಕದ್ದೆಂದು ಶ್ರುತಿಸ್ಮೃತೀತಿಹಾಸಗಳು ಶಿಕ್ಷೆ ಕೊಟ್ಟಿರುತ್ತವೆ. ಮಹೋಪನಿಷತ್ತಿನಲ್ಲಿ:

ಧೃತೋರ್ಧ್ವಪುಂಡ್ರಪರಿಮೋಕ್ಷಿತಾರಂ ನಾರಾಯಣಂ ಪೂಜಯತಿ ಸ್ಮ ಭಕ್ತ್ಯಾ ।
ಅರ್ಘ್ಯಾದಿಭಿಃ ಪೌರುಷಸೂಕ್ತಮಂತ್ರೈಸ್ಸಮಾಪ್ನುಯಾದ್ವಿಷ್ಣುಪದಂ ಮಹಾತ್ಮಾ ॥

ಅಂದರೆ ಸ್ನಾನಾನಂತರ ಊರ್ಧ್ವಪುಂಡ್ರಧಾರಣೆ–ಸಂಧ್ಯಾನುಷ್ಠಾನಾನಂತರ ಅರ್ಘ್ಯಪಾದ್ಯಾದಿಗಳಿಂದಲೂ ಪುರುಷಸೂಕ್ತಮಂತ್ರಪೂರ್ವಕವಾಗಿ ನಾರಾಯಣ

ನನ್ನು ಪೂಜಿಸಬೇಕು. ನಿತ್ಯವೂ ಈ ರೀತಿ ಆರಾಧಿಸಿದವನು ವಿಷ್ಣುಪದವನ್ನು ಪಡೆಯುವನು ಎಂಬುದಾಗಿ ಆರಾಧನಾಕಾಲದಲ್ಲಿ ಸಾಮಾನ್ಯವಾಗಿ ಪುರುಷ ಸೂಕ್ತವನ್ನು ಹೇಳುತ್ತಾ ಸಾಲಗ್ರಾಮ ಶಿಲೆಗೆ ಅಭಿಷೇಕ ಮಾಡುವರು. ಅಥರ್ವಶಿರಸ್ಸಿನಲ್ಲೂ:

"ಧೃತೋರ್ಧ್ವಪುಂಡ್ರಃ ಕೃತಚಕ್ರಧಾರೀ ವಿಷ್ಣುಂ ಪದಂ ಧ್ಯಾಯತಿ ಯೋ ಮಹಾತ್ಮಾ।
ಸ್ವರೇಣ ಮಂತ್ರೇಣ ಸದಾ ಹೃದಿಸ್ಥಂ ಪರಾತ್ಪರಂ ಯನ್ಮಹತೋ ಮಹಾಂತಂ॥"

ಈ ಮಂತ್ರದಲ್ಲೂ ಪುರುಷಸೂಕ್ತಮಂತ್ರದಿಂದ ಧ್ಯಾನ–ಅರ್ಚನೆ ಹೇಳಿರುತ್ತೆ. ಅಲ್ಲದೆ ಮೇಲಿನ ಎರಡು ಮಂತ್ರಗಳೂ "ಪಂಚಸಂಸ್ಕಾರ". ಸಂಸ್ಕಾರಪಡೆದವನೇ ಭಗವದಾರಾಧನೆ ನಡೆಸಲು ಅರ್ಹನೆಂತಲೂ ಸೂಚಿಸಿರುತ್ತೆ. ಆದ್ದರಿಂದ ಸಕಾಲ ದಲ್ಲಿ ಆಚಾರ್ಯರ ಸನ್ನಿಧಿಯಲ್ಲಿ ಪಂಚಸಂಸ್ಕಾರ (ಚಕ್ರಾಂಕನ) ಮಾಡಿಸಿಕೊಳ್ಳು ವುದು ಜಾಣತನ. ಸಂಸ್ಕಾರಶೂನ್ಯನಾಗಿರಬಾರದು. ಹೀಗೆಯೇ ಋಗ್ವೇದದ ಮಂತ್ರದಲ್ಲಿಯೂ:

"ಪ್ರವಃ ಪಾಂಥ ಮಂಥಸೋ ಧಿಯಾಯತೇ, ಮಹೇಶೂರಾಯ ವಿಷ್ಣವೇ ಚಾರ್ಚತ। ಅರ್ಚತ–ಪ್ರಾರ್ಚತ–ಪ್ರಿಯಮೇಧಾಸಃ ಅರ್ಚತ." ಅಂದರೆ ನಿಮ್ಮ ಉತ್ತರೋತ್ತರ ಶ್ರೇಯಸ್ಸಿಗಾಗಿ ವಿಷ್ಣುವನ್ನು ಅರ್ಚಿಸಿರಿ (ಆರಾಧಿಸಿರಿ), ವಿಷ್ಣು ಪೂಜೆಯನ್ನು ಬಿಡಬೇಡಿ. ಮಹನೀಯರ ಉಪದೇಶವೂ ಉಂಟು. ಯಥಾ ನಾರದಃ—

"ಸರ್ವೇಷಾಮೇವ ಲೋಕಾನಾಂ ಗುರುರ್ನಾರಾಯಣೋ ಹರಿಃ।
ತಸ್ಯ ಸಂಪೂಜನಂ ಕಾರ್ಯಂ ಸರ್ವಪಾಪಹರಂ ಹಿ ತತ್॥"

ಅಂದರೆ ಸರ್ವಲೋಕಕ್ಕೂ ನಾರಾಯಣನೇ ಗುರುವು. ಅವನ ಆರಾಧನೆಯು ಜನರ ಸರ್ವಪಾಪವನ್ನೂ ಪರಿಹರಿಸುತ್ತೆ ಎಂದು. ವ್ಯಾಸರೂ ಸಹ:

"ನ ವಿಷ್ಣ್ವಾರಾಧನಾತ್ಪುಣ್ಯಂ ವಿದ್ಯತೇ ಕರ್ಮವೈದಿಕಂ।
ತಸ್ಮಾದನಾದಿಮಧ್ಯಾಂತಂ ನಿತ್ಯಮಾರಾಧಯೇದ್ಧರಿಂ॥
ತದ್ವಿಷ್ಣೋರಿತಿ ಮಂತ್ರೇಣ ಸೂಕ್ತೇನ ಪುರುಷೇಣ ವಾ।
ನೈತಾಭ್ಯಾಂ ಸದೃಶೋ ಮಂತ್ರಃ ವೇದೇಷೂಕ್ತಶ್ಚತುರ್ಷ್ವಪಿ॥"

ಅಂದರೆ ವೇದವಿಹಿತವಾದ ಕರ್ಮಗಳಲ್ಲಿ ವಿಷ್ಣುವಿನ ಆರಾಧನೆಗಿಂತ ಮಿಗಿಲಾದ

ಕರ್ಮವು ಬೇರೆ ಇಲ್ಲ. "ತದ್ವಿಷ್ಣೋಃ ಪರಮಂ ಪದಂ" ಪುರುಷಸೂಕ್ತ. ಇವೆರಡು ನಾಲ್ಕು ವೇದಗಳಲ್ಲೂ ಪಠಿತವಾಗಿರುತ್ತೆ. "ವೇದೇಷು ಪೌರುಷಂ ಸೂಕ್ತಂ" ನಾಲ್ಕು ವೇದಗಳಲ್ಲೂ ಪುರುಷಸೂಕ್ತವು ಶ್ರೇಷ್ಠವು. ಈ ಸೂಕ್ತವನ್ನು ಅಭಿಷೇಕಕಾಲದಲ್ಲೂ 'ತದ್ವಿಷ್ಣೋಃ' ಎಂಬ ಮಂತ್ರವನ್ನು ಭಗವಂತನಿಗೆ ನೀರಾಜನ (ಮಂಗಳಾರತಿ) ಸಮರ್ಪಿಸುವ ಕಾಲದಲ್ಲೂ ಪಠಿಸುತ್ತಾರೆ. ಹೀಗೆ ಆದಿಮಧ್ಯ-ಅಂತರಹಿತನಾದ ವಿಷ್ಣುವನ್ನು ಆರಾಧಿಸಬೇಕೆಂದು ವ್ಯಾಸರು ಉಪದೇಶಿಸಿರುತ್ತಾರೆ. ಶ್ರೀ ಭಾಗವತದಲ್ಲೂ:

"ಗೃಹಂ ಶ್ಮಶಾನಂ ತವ ಬಿಂಬವರ್ಜಿತಂ ಕಥಾವಿಹೀನಾಶ್ಚ ಗಿರಶ್ಶಿವಾರುತಂ।
ಶ್ವಸನ್ ಪ್ರವೋ ದಾಸ್ಯವಿನಾ ಕೃತಂ ವಪುಃ ವದಂತಿ ಹಿ ತ್ವಯ್ಯನಿವೇದಿತಂ ವಿಷಂ॥" ಅಂದರೆ

ಭಗವಂತನ ಬಿಂಬವಿಲ್ಲದ ಗೃಹವು ಶ್ಮಶಾನಕ್ಕೆ ಸಮವು. ಭಗವತ್ಸಂಬಂಧವಿಲ್ಲದ ಕಥೆಯು ಕೇವಲ ನರಿಯ ಕೂಗಿಗೆ ಸಮಾನವು. ಭಗವದ್ದಾಸ್ಯಮಾಡದ ಶರೀರವು ಶವಕ್ಕೆ ಸಮಾನವು. ಭಗವದನಿವೇದಿತವಾದ ಆಹಾರವನ್ನು ಸೇವಿಸುವುದು ವಿಷಕ್ಕೆ ಸಮಾನವು—ಎಂದು. ವಿಷ್ಣುಧರ್ಮೋತ್ತರೇ ಯಥಾ:

"ಯುಗಕೋಟಿಸಹಸ್ರಾಣಿ ವಿಷ್ಣುಮಾರಾಧ್ಯ ಪದ್ಮಭೂಃ।
ಪುನಸ್ತ್ರೈಲೋಕ್ಯಧಾತೃತ್ವಂ ಪ್ರಾಪ್ತವಾನಿತಿ ಶುಶ್ರುಮ॥
ಶಕ್ರಃ ಕ್ರತುಶತೇನೇತ್ಥಂ ಆರಾಧ್ಯ ಗರುಡಧ್ವಜಂ।
ದೇವೇಂದ್ರತ್ವಂ ಗತಸ್ತಸ್ಮಾನ್ನಾನ್ಯಃ ಪೂಜ್ಯತಮಃ ಕ್ವಚಿತ್॥"

ಚತುರ್ಮುಖನು ಒಂದು ಕೋಟಿ ಯುಗಗಳು ವಿಷ್ಣುವನ್ನು ಆರಾಧಿಸಿ ಪುನಃ ತ್ರಿಲೋಕಗಳನ್ನು ಸೃಷ್ಟಿಸುವ ಪದವಿಯಲ್ಲಿ ಅಧಿಕೃತನಾದನು. ಹಾಗೆಯೇ ಇಂದ್ರನು ಗರುಡಧ್ವಜನನ್ನು ಆರಾಧಿಸಿ ಪುನಃ ಇಂದ್ರಪದವಿಯನ್ನು ಪಡೆದನು. ಆದ್ದರಿಂದ ಇವರೆಲ್ಲರ ಮೇಲ್ಪಂಕ್ತಿಯನ್ನನುಸರಿಸಿ ವಿಷ್ಣುವನ್ನೇ ಅರ್ಚಿಸಬೇಕು. ದೇವತಾಂತರಗಳನ್ನು ಅರ್ಚಿಸಿ ಪ್ರಯೋಜನವಿಲ್ಲವೆಂಬ ಸೂಚನೆಯೂ ಇರುತ್ತೆ. ಇತಿಹಾಸೋತ್ತಮದಲ್ಲೂ:

"ಸಂಸ್ಮೃತಃ ಪೂಜಿತೋ ವಾಪಿ ಯಃ ಪುಂಸಾಂ ಭವಹಾನಿದಃ।
ತಮಾರಾಧಯ ಗೋವಿಂದಂ ಯದೀಚ್ಛಸಿ ಪರಾಂಗತಿಂ॥"

ಅಂದರೆ ಭಗವಂತನನ್ನು ಸ್ಮರಿಸಿದರೂ ಸರಿಯೇ, ಪೂಜಿಸಿದರೂ ಸರಿಯೆ, ಸಂಸಾರ

ಸಂಬಂಧವು ತಪ್ಪುತ್ತದೆ. ಪರಗತಿಯನ್ನು ಹೊಂದಲಿಚ್ಛೆಯಿದ್ದರೆ ಗೋವಿಂದನನ್ನು ಆರಾಧಿಸು ಎಂದು.

ಮೇಲಿನ ಎಲ್ಲಾ ಪ್ರಮಾಣಗಳೂ ವಿಷ್ಣುವಿನ ಆರಾಧನೆಯೇ ಸರ್ವೋತ್ಕೃಷ್ಟವೆಂದು ಘೋಷಿಸಿರುತ್ತವೆ. ದೇವತಾಂತರ ಆರಾಧನೆ ಏಕೆ ಕೂಡದು, ಅವರನ್ನು ಆರಾಧಿಸಿದರೆ ಅವರು ರಕ್ಷಿಸುವುದಿಲ್ಲವೆ? ಅವರಿಂದ ಒಂದು ವೇಳೆ ಕ್ಷುದ್ರಫಲ ಬಂದೀತು. ವಿಷ್ಣುವನ್ನು ಹೊರತು ಯಾರೂ ಮೋಕ್ಷವನ್ನು ಕೊಡಲಾರರು.

ವಾರಾಹಪುರಾಣದಲ್ಲಿ ಮಾರ್ಕಂಡೇಯನನ್ನು ಕುರಿತು ಶಂಕರನು ಹೇಳುವ ಮಾತು:

"ಮುಹೂರ್ತಂ ಸ್ಥೀಯತಾಂ ತಾವತ್ ಮಾರ್ಕಂಡೇಯಾತ್ರ ಸುವ್ರತ।
ಕರೋಮ್ಯಾರಾಧನಂ ಯಾವತ್ ದೇವದೇವಸ್ಯ ಶಾರ್ಙ್ಗಿಣಃ ||" ಅಂದರೆ,

ಮಾರ್ಕಂಡೇಯನೇ, ನಾನು ನಿನ್ನನ್ನು ರಕ್ಷಿಸಲು ಸ್ವತಂತ್ರನಲ್ಲ. ಸ್ವಲ್ಪ ಹೊತ್ತು ನಿರೀಕ್ಷಿಸು. ದೇವದೇವನಾದ ನಾರಾಯಣನನ್ನು ಆರಾಧಿಸಿ ಅವನ ಅಪ್ಪಣೆಯಂತೆ ನಿನ್ನನ್ನು ರಕ್ಷಿಸುತ್ತೇನೆ. ಈ ಮಾತನ್ನು ಕೇಳಿ ಮಾರ್ಕಂಡೇಯನು ಶಂಕರನನ್ನು ಪ್ರಶ್ನಿಸುತ್ತಾನೆ:

"ಕಿಮಾರಾಧ್ಯಃ ಪರೋದೇವಃ ತವಾಪ್ಯಸ್ತಿ ಜಗತ್ಪತೇ।
ತ್ವಮೇವ ಸರ್ವಭೂತಾನಾಂ ಪೂಜ್ಯಶ್ಚೇತಿಮತಿರ್ಮಮ ||"

ನಿನಗೂ ಆರಾಧ್ಯನಾದ ಬೇರೆ ದೇವತೆ ಉಂಟೆ? ನೀನೇ ಸರ್ವಭೂತಗಳಿಗೂ ಪೂಜ್ಯನೆಂದು ನನ್ನ ಭಾವನೆ. ಪುನಃ ಶಂಕರನ ಉತ್ತರ:

"ಆರಾಧ್ಯೋ ಭಗವಾನ್ವಿಷ್ಣುರೇಕ ಏವ ಮಯಾಚ್ಯುತಃ।
ಆರಾಧಯ ಹೃಷೀಕೇಶಂ ಯದೀಚ್ಛಸಿ ಪರಾಂಗತಿಂ ||" ಅಂದರೆ,

ಭಗವಾನ್ ವಿಷ್ಣುವು ನನಗೂ ಆರಾಧ್ಯದೇವತೆಯು. ಮಾರ್ಕಂಡೇಯನೇ, ನೀನು ಪರಗತಿಯನ್ನು ಇಚ್ಛಿಸುವುದಾದರೆ, ನೀನೂ ಹೃಷೀಕೇಶನನ್ನು ಆರಾಧಿಸು. ಹಾಗಾದರೆ ಲೋಕದ ಜನ ಶಂಕರನನ್ನು ಆರಾಧಿಸಲು ಕಾರಣವೇನು? ಎಂಬ ಸಂದೇಹ ಬಂದಲ್ಲಿ ಶ್ರೀವಾರಾಹಪುರಾಣದಲ್ಲಿ ಶಂಕರನು ವಿಷ್ಣುವಿನಲ್ಲಿ ಈ ರೀತಿ ಪ್ರಾರ್ಥಿಸಿರುತ್ತಾನೆ:

"ಮತ್ತೋ ಭೂತ್ವಾ ಭವಾನೇವ ಮಾಮಾರಾಧಯ ಕೇಶವ।
ಮಾಂ ವಹಸ್ವ ಚ ದೇವೇಶ ವರಂ ಮತ್ತೋ ಗೃಹಾಣ ಚ||
ಯೇನಾಹಂ ಸರ್ವದೇವಾನಾಂ ಪೂಜ್ಯಾತ್ಪೂಜ್ಯತಮೋ ಭವೇತ್ ||"

ನೀನು ಭೂಲೋಕದಲ್ಲಿ ಮನುಷ್ಯನಾಗಿ ಹುಟ್ಟಿ ನನ್ನನ್ನು ಆರಾಧಿಸು. ನನ್ನಿಂದ ವರವನ್ನು ಪಡೆದುಕೊ. ನೀನು ಹೀಗೆ ಮಾಡಿದಲ್ಲಿ ದೇವತೆಗಳೆಲ್ಲರಿಗೂ ಪೂಜ್ಯತಮನಾಗುವೆನು ಎಂದು ಶಂಕರನು ಪ್ರಾರ್ಥಿಸಿರುವುದರಿಂದ ಕೆಲವು ಸಂದರ್ಭಗಳಲ್ಲಿ ವಿಷ್ಣುವು ಶಂಕರನನ್ನು ಆರಾಧಿಸಿರುವುದು ಉಂಟು. ಆದರೆ ಇದರಿಂದ ಅವನು ಪರದೇವತೆಯಾಗಲು ಅವಕಾಶವಿಲ್ಲ. ಮೋಕ್ಷವನ್ನು ಕೊಡುವ ಅಧಿಕಾರಿಯಲ್ಲ. ಆದ್ದರಿಂದ "ಆರಾಧನಾನಾಂ ಸರ್ವೇಷಾಂ ವಿಷ್ಣೋರಾರಾಧನಂ ಪರಂ" ಎಂದೂ "ನಿವಿಷ್ಣ್ವಾರಾಧನಾತ್ಪುಣ್ಯಂ ವಿದ್ಯತೇ ಕರ್ಮವೈದಿಕಂ" ಎಂಬ ಶ್ರೀಸೂಕ್ತಿಗಳಿಂದ ವಿಷ್ಣ್ವಾರಾಧನೆಯೇ ಸರ್ವಶ್ರೇಷ್ಠವೆಂದು ಶ್ರುತಿಸ್ಮೃತೀತಿಹಾಸಪುರಾಣಗಳ ಸಿದ್ಧಾಂತವಾಗಿರುತ್ತದೆ. ಪ್ರಕೃತದಲ್ಲಿ ಕಾಳಿಬ್ರಹ್ಮಾದಿ ದೇವತೆಗಳೇ ನಿನ್ನ ಆರಾಧನೆಯಲ್ಲಿ ದುರ್ಬಲರಾಗಿರುವಾಗ ನಾನು ನಿನ್ನನ್ನು ಹೇಗೆ ಅರ್ಚಿಸಲಿ? ಇದುವರೆಗೂ ಯಾರೂ ಭಗವದಾರಾಧನೆಯನ್ನು ಪೂರ್ತಿಮಾಡಿದವರು ಇಲ್ಲ. ಬ್ರಹ್ಮನೂ ಸಹ "ಗೃಹಾಣ ಪೂಜಾಂ ಗೋವಿಂದ ಯಥಾ ಶಕ್ತಿ ಮಯಾ ಕೃತಂ" ನನ್ನ ಶಕ್ತ್ಯಾನುಸಾರ ಮಾಡುವ ಆರಾಧನೆಯನ್ನು ಸ್ವೀಕರಿಸಬೇಕೆಂದು ಗೋವಿಂದನಲ್ಲಿ ಪ್ರಾರ್ಥಿಸಿರುತ್ತಾನೆ. ಯೋಗಿಗಳೂ ಸಹ ಹೃದಯಸ್ಥನಾದ ಪರಮಾತ್ಮನನ್ನು ಧ್ಯಾನದ ಮೂಲಕವಾಗಿ ಆರಾಧಿಸುತ್ತಾರೆ. ಇದನ್ನೇ ಮಾನಸಿಕ ಆರಾಧನೆಯೆಂದು ಕರೆಯುತ್ತಾರೆ. "ಹೃದಯಂ ತದ್ವಿಜಾನೀಯಾತ್ ವಿಶ್ವಸ್ಯಾಯತನಂ ಮಹತ್" ಎಂದು ವೇದವು ಹೇಳಿರುವಂತೆ ತಮ್ಮ ಹೃದಯದಲ್ಲಿ ನೆಲಸಿರುವ ಪರಮಾತ್ಮನನ್ನು ಯೋಗಿಗಳೇ ಮಾತ್ರವೇ ಕಾಣುವರು. ಆದ್ದರಿಂದ ಹೇ ಕೃಷ್ಣನೇ, ನಾನು ಯೋಗಿಯೂ ಅಲ್ಲ. ನಿನ್ನನ್ನು ಯಾವ ರೀತಿ ಅರ್ಚಿಸಲಿ? ಎಂದು ಕಾಳಿಂಗನು ದೈನ್ಯದಿಂದ ಪ್ರಾರ್ಥಿಸುವ ರೀತಿಯನ್ನು ಮೇಲಿನ ಪದ್ಯದಲ್ಲಿ ಕಾಣುತ್ತೇವೆ.

ಈ ಪದ್ಯದ ಉತ್ತರಾರ್ಧದಿಂದ ಭಾವಪುಷ್ಪಾದಿಗಳಿಂದ ನಿನ್ನನ್ನು ಹೇಗೆ ಅರ್ಚಿಸಲಿ? ಎಂದು ಕಾಳಿಂಗನು ಕೇಳುತ್ತಾನೆ. ಭಗವದಾರಾಧನಾಸಂದರ್ಭದಲ್ಲಿ ಷೋಡಶೋಪಚಾರಗಳ ಪೈಕಿ ಭಗವಂತನಿಗೆ ಮಂತ್ರಪುಷ್ಪವನ್ನು ಸಮರ್ಪಿಸುವುದೂ ಒಂದು ಕೈಂಕರ್ಯವಾಗಿರುತ್ತೆ. ಸೌಮ್ಯಗಂಧವಿರುವ ಬಿಳುಪು-ಕೆಂಪುಬಣ್ಣದ ಪುಷ್ಪಗಳನ್ನು ಭಗವಂತನಿಗೆ ಅರ್ಪಿಸುವುದು ವಿಹಿತ. ಉಗ್ರಗಂಧ-ಅಪ್ರಸಿದ್ಧ-ಚತ್ವರ-ಶ್ಮಶಾನಾದಿಗಳಲ್ಲಿರುವ ಹೂವು, ಗಾಳಿಯ ಹೊಡೆತಕ್ಕೆ ಉದುರಿದ ಹೂವು, ಕ್ರಿಮಿಕೀಟಗಳಿಂದ ಕೂಡಿದ್ದು, ಕಪ್ಪು ಬಣ್ಣದ ಹೂವು ಇವು ಪೂಜಾರ್ಹಗಳಲ್ಲವೆಂದು ಸ್ಮೃತಿಯು ಹೇಳಿರುತ್ತದೆ. ಯಾಚನೆ ಮಾಡಿ ತಂದ ಹೂವೂ ಸಹ ಪೂಜೆಗೆ ಅರ್ಹವಲ್ಲ. ಪೂಜಾರ್ಹವಾದ ಹೂವು ಯಾವುವೆಂದರೆ:

"ಸ್ವಪ್ರಯತ್ನಕೃತಂ ಶಸ್ತಂ ಮಧ್ಯಮಂ ವನ್ಯಮುಚ್ಯತೇ ।
ಅಧಮಸ್ತು ಕ್ರಯಕ್ರೀತಂ ಯಾಚಿತಂ ತ್ವಧಮಾಧಮಂ ॥" ಅಂದರೆ,

ತಾನೇ ಹೂವು ಗಿಡಗಳನ್ನು ಹಾಕಿ, ಬೆಳಸಿ ಅದರಲ್ಲಿ ವಿಕಸಿತವಾದ ಹೂವು ಉತ್ತಮ. ಕಾಡಿನಲ್ಲಿ ಅರಳಿದ ಹೂವನ್ನು ತಂದು ಭಗವದರ್ಪಣೆಮಾಡುವುದು ಮಧ್ಯಮ. ಕ್ರಯಕ್ಕೆ ತೆಗೆದ ಹೂವು ಅಧಮ. ಯಾಚನೆ ಮಾಡಿದ ಹೂವು ಅಧಮಾಧಮ. ಶ್ರೀವಿಷ್ಣುಚಿತ್ತರು ತಾವೇ ನಂದನವನ್ನು ಕಲ್ಪಿಸಿ ಸ್ವತಃ ಬೆಳೆದ ಹೂವನ್ನು ಆರಿಸಿ ಮಾಲೆ ಮಾಡಿ ಭಗವಂತನಿಗೆ ಸಮರ್ಪಿಸುತ್ತಿದ್ದರೆಂದು ಕೇಳಿದ್ದೇವೆ. ಇದಕ್ಕೆ ಆರ್ಯರ ಪ್ರಮಾಣಗಳೇನಾದರೂ ಉಂಟೆ? ಎಂದರೆ:

"ಪ್ರಾತರುತ್ಥಾಯ ಚಿನ್ವೀಯಾತ್ ಸ್ವಾರಾಮಾತ್ಸ್ವಯಮೇವ ಹಿ ।
ಪೂಜಾರ್ಥಮಸ್ತ್ರಮಂತ್ರೇಣ ಪುಷ್ಪಾದಿನ್ಯತ್ನತಃ ಪಥಿ ।
ಯಾಯಾದರಣ್ಯಮಥವಾ ನಿತ್ಯಾರ್ಥಂ ಹಿ ತದಾರ್ಜನೇ ॥
ಹೃದ್ಯಾಸ್ಸುಗಂಧಾಃ ಕರ್ಮಣ್ಯಾ ಗ್ರಾಹ್ಯಾಸ್ಸರ್ವೇ ಸಿತಾದಯಃ ।
ಉಗ್ರಗಂಧಾಹ್ಯಕರ್ಮಣ್ಯಾಸ್ತ್ವಪ್ರಸಿದ್ಧಾಸ್ತಥೈವ ಚ ॥" ಎಂದು:

ಮುಖ್ಯವಾಗಿ ಭಗವಂತನಿಗೆ ಏನನ್ನು ಸಮರ್ಪಿಸಿದರೂ ಅದು ಭಕ್ತಿಯೆಂಬ ಮುದ್ರೆಯಿಂದ ಕೂಡಿದ್ದರೆ ಮಾತ್ರ ಭಗವಂತನಿಗೆ ಅದರಲ್ಲಿ ಪ್ರೀತಿ ಹೆಚ್ಚು ಎಂಬಂಶವನ್ನು ಮರೆಯಬಾರದು.

"ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ ॥

ಎಂಬ ಭಗವದಾಜ್ಞೆಯೂ ಇದೆ. ಪಾಂಚರಾತ್ರದಲ್ಲಿಯೂ

"ಅಣ್ವಪ್ಯುಪಾಹೃತಂ ಭಕ್ತೈಃ ಪ್ರೇಮ್ಣಾ ಭೋಗಾಯ ಕಲ್ಪತೇ ।
ಭೂರ್ಯಪ್ಯಭಕ್ತೋಪಹೃತಂ ನ ಮೇ ಭೋಗಾಯ ಜಾಯತೇ ॥"

ಭಕ್ತನು ಅಲ್ಪವನ್ನು ಕೊಟ್ಟರೂ ಅದರಿಂದ ಭಗವಂತನಿಗೆ ತೃಪ್ತಿ. ಅಭಕ್ತರು ಬಹಳ ಕೊಟ್ಟರೂ ಅದರಲ್ಲಿ ಭಗವಂತನಿಗೆ ಪ್ರೀತಿಯಿಲ್ಲ. ದುರ್ಯೋಧನನ ರಾಜಯೋಗ್ಯವಾದ ಅನ್ನಕ್ಕಿಂತ ವಿದುರನ ಮನೆಯ ಅನ್ನವೇ ಕೃಷ್ಣನಿಗೆ ರುಚಿಕರವಾಗಿತ್ತೆಂಬುದೇ ಇದಕ್ಕೆ ನಿದರ್ಶನ. ಕುಚೇಲರ ಅವಲಕ್ಕಿ ವಿಶ್ವಶರೀರಕನಾದ ಪರಮಾತ್ಮನಿಗೆ ತೃಪ್ತಿಯನ್ನುಂಟುಮಾಡಿತು. ಸತ್ಯಭಾಮೆಯ ಮಣಿಭಂಗಾರವು ಭಗವಂತನಿಗೆ ರುಚಿಸಲಿಲ್ಲ. ರುಕ್ಮಿಣಿಯು ಕೃಷ್ಣ ತುಲಾಭಾರದಲ್ಲಿ ಒಂದು ತುಲಸೀ

ದಳದಲ್ಲಿ ಕೃಷ್ಣನನ್ನು ಕೂಗಿದಳು. ಹೀಗೆಯೇ ಸುದಾಮನ ಹಾರವೂ, ಗಜೇಂದ್ರನ ಕಮಲಪುಷ್ಪವೂ, ಗೋದಾ ಸಮರ್ಪಿಸಿದ ಪುಷ್ಪಹಾರವೂ, ಕುಂತಿಯು ಅರ್ಪಿಸಿದ ತೋಯವೂ (ತೀರ್ಥ), ಶಬರಿಯು ಅರ್ಪಿಸಿದ ಫಲವೂ, ಮುನಿಪತ್ನಿಯರು ಅರ್ಪಿಸಿದ ದಧ್ಯನ್ನವೂ ಪರಮಾತ್ಮನಿಗೆ ಸಂತುಷ್ಟಿಯನ್ನುಂಟುಮಾಡಿತು. ಭಗವಂತನಿಗೆ ನಾವು ಅರ್ಪಿಸುವ ದ್ರವ್ಯದಲ್ಲಿ ಗುರು-ಲಘುಗಳನ್ನು ಚಿಂತಿಸಬೇಕಾಗಿಲ್ಲ. ಭಕ್ತಿಯೆಂಬ ಮುದ್ರೆಯು ಬಿದ್ದಲ್ಲಿ ಹಗುರವಾದುದೂ ಗುರುವಾಗುತ್ತೆ. ಆದನ್ನೇ ಭಗವಂತನು "ಭಕ್ತ್ಯುಪಹೃತಂ ಅಶ್ನಾಮಿ". ಭಕ್ತಿಯಿಂದ ಅರ್ಪಿಸಿದ್ದನ್ನು ಅನುಭವಿಸುವುದಾಗಿ ಹೇಳಿರುತ್ತಾನೆ.

ಪ್ರಕೃತ ವಿಷ್ಣುಪುರಾಣದ ಪದ್ಯದಲ್ಲಿ 'ಭಾವಪುಷ್ಪಾದಿನಾ' ಎಂಬ ಪದದಿಂದ ಲೌಕಿಕಪುಷ್ಪಗಳಿಗಿಂತ ಬೇರೆಯಾದ ಎಂಟು ಪುಷ್ಪಗಳು ಭಗವಂತನಿಗೆ ಭೋಗದಾಯಕಗಳು. ಅವು ಕ್ರಮವಾಗಿ (೧) ಅಹಿಂಸಾಪುಷ್ಪಂ (೨) ಇಂದ್ರಿಯನಿಗ್ರಹ (೩) ದಯಾಪುಷ್ಪಂ (೪) ಕ್ಷಮಾಪುಷ್ಪಂ (೫) ಜ್ಞಾನಂ (೬) ತಪಃಪುಷ್ಪಂ (೭) ಧ್ಯಾನಂ (೮) ಸತ್ಯಪುಷ್ಪಂ ಎಂಬುದಾಗಿ ಯಥಾ :

"ಅಹಿಂಸಾ ಪ್ರಥಮಂ ಪುಷ್ಪಂ ಪುಷ್ಪಮಿಂದ್ರಿಯನಿಗ್ರಹಃ ।
ಸರ್ವಭೂತದಯಾಪುಷ್ಪಂ ಕ್ಷಮಾಪುಷ್ಪಂ ವಿಶೇಷತಃ ॥
ಜ್ಞಾನಂ ಪುಷ್ಪಂ ತಪಃ ಪುಷ್ಪಂ ಧ್ಯಾನಂ ಪುಷ್ಪಂ ತಥೈವ ಚ ॥
ಸತ್ಯಮಷ್ಟವಿಧಂ ಪುಷ್ಪಂ ವಿಷ್ಣೋಃ ಪ್ರೀತಿಕರಂ ಭವೇತ್ ॥

ವಿಷ್ಣುಪುರಾಣದ ಈ ಪದ್ಯದ ಪೂರ್ವಾರ್ಧದಲ್ಲಿ ವಿಷ್ಣುಪೂಜೆಯನ್ನು (ಭಗವದಾರಾಧನೆ), ಉತ್ತರಾರ್ಧದಲ್ಲಿ ಪುಷ್ಪಾರ್ಚನೆಯ ಮಹತ್ವವನ್ನು (ಇದು ಇತರ ಉಪಚಾರಗಳಿಗೂ ಉಪಲಕ್ಷಣ) ಕಾಳಿಯ ಸರ್ಪನ ಮೂಲಕ ಶ್ರೀ ಪರಾಶರರು ಪ್ರಕಾಶಪಡಿಸಿರುತ್ತಾರೆ.

ವಚನ ವಿ.ಪು. ಪುಟ ೨೪೪; ಸಾಲು ೨೨

ಮೂಲ: ಅದ್ಯ ಮೇ ಸಫಲಂ ಜನ್ಮ ಸುಪ್ರಭಾತಾ ಭವನ್ನಿಶಾ ।
ಯದುನ್ನಿದ್ರಾಬ್ಜಪತ್ರಾಕ್ಷಂ ವಿಷ್ಣೋರ್ದ್ರಕ್ಷ್ಯಾಮ್ಯಹಂ ಮುಖಂ ॥

ವಿ.ಪು. ೫-೧೭-೩

ಅಕ್ರೂರನು ಕಂಸಪ್ರೇರಿತನಾಗಿ ಕೃಷ್ಣನನ್ನು ಕರೆತರಲು ನಂದಗೋಕುಲಕ್ಕೆ ಬರುತ್ತಾ ದಾರಿಯಲ್ಲಿ ಚಿಂತಿಸುತ್ತಾನೆ. ಇಂದು ಕೃಷ್ಣನ ಮುಖವನ್ನು ನೋಡುತ್ತೇನೆ. ಜಗತ್ತಿನಲ್ಲಿ ನಾನೇ ಧನ್ಯ. ಇಂದು ನನಗೆ ಹಗಲಾಯಿತು ಎಂದು. ಪದ್ಯ

ದಲ್ಲಿ "ಸುಪ್ರಭಾತಾ ಭವನ್ನಿಶಾ" ರಾತ್ರಿ ಕಳೆದು ಹಗಲು ಬಂತು ಅದೇಕೆ? ಇದು ವರೆಗೂ ಅಕ್ರೂರನಿಗೆ ರಾತ್ರಿಹಗಲುಗಳು ಆಗಿರಲಿಲ್ಲವೆ? ಕಂಸನ ಮನೆಯ ಅನ್ನ ವನ್ನು ತಿಂದು ರಾತ್ರಿಹಗಲುಗಳನ್ನು ಸಂಕಟದಿಂದ ತಳ್ಳುತ್ತಿದ್ದ. ಅಲ್ಲಿ ಶೌರಿ ಚಿಂತೆಗೆ ಅವಕಾಶವೇ ಇರಲಿಲ್ಲ. ನಿಜವಾಗಿಯೂ ಅಕ್ರೂರನು ಕೃಷ್ಣಭಕ್ತನು. ಕಂಸನ ಸಹವಾಸದಲ್ಲಿ ಬಲಾತ್ಕಾರವಾಗಿ ಕಾಲ ಕಳೆಯುತ್ತಾ ನನಗೆ ಕೃಷ್ಣ ಸಾಕ್ಷಾತ್ಕಾರವೋ ಎಂದೋ ಕಾಲ ತಳ್ಳುತ್ತಿದ್ದನು. ಅವನ ಸ್ಥಿತಿಯು "ವರಂ ಹುತ ವಹಜ್ವಾಲಾ ಪಂಜರಾಂತರ್ವ್ಯವಸ್ಥಿತಿಃ। ನ ಶೌರಿಚಿಂತಾವಿಮುಖಜನಸಂವಾಸ ವೈಶಸಂ" ಅಂದರೆ ಭಗವತ್ಸಂಬಂಧವಿಲ್ಲದ ದೇಶದಲ್ಲಿರುವ ಜನಗಳ ಮಧ್ಯೆ ವಾಸಿ ಸುವುದಕ್ಕಿಂತ ಸುತ್ತಲೂ ಉರಿಯುತ್ತಿರುವ ಬೆಂಕಿಯ ಮಧ್ಯೆ ವಾಸಮಾಡುವುದೇ ವರವು" ಎಂಬಂತಾಗಿತ್ತು. ಸಾಧುಪರಿತ್ರಾಣಕ್ಕಾಗಿಯೇ ಭಗವದವತಾರ. ದುಷ್ಟ ಶಿಕ್ಷಣ ಅವನಿದ್ದ ಸ್ಥಳದಿಂದಲೇ ಸಂಕಲ್ಪಾನುಸಾರ ನಡೆಯಬಹುದು. ಸಾಧುಗಳು ಅವನ ಅವಲೋಕನ—ಅವನೊಡನೆ ಆಲಾಪಗಳಿಲ್ಲದಿದ್ದಲ್ಲಿ ಬದುಕಲಾರರು. ಅದಕ್ಕಾಗಿ ಭಗವಾನ್ ದೇವಮನುಷ್ಯ ಸಜಾತೀಯನಾಗಿ ಅವತರಿಸಿ ಬರುವನು. ಅಕ್ರೂರನೂ ಸಹ ಕೃಷ್ಣನ ಸಂದರ್ಶನ, ಅವನೊಡನೆ ಸಂಭಾಷಣೆಗಾಗಿ ರಾತ್ರಿ ಹಗಲುಗಳನ್ನು ತಳ್ಳುತ್ತಿದ್ದನು. ಭಗವತ್ಸಾಕ್ಷಾರಕ್ಕೆ ಮುಂಚೆ ಆಗಿದ್ದ ಹಗಲು ಗಳೆಲ್ಲವೂ ರಾತ್ರಿಗೆ ಸಮಾನ. ಅವನನ್ನು ಕಂಡ ದಿನವೇ ಸುಪ್ರಭಾತ. ವಿಶ್ವಾ ಮಿತ್ರರೂ ಪ್ರತ್ಯೂಷಕಾಲದಲ್ಲಿ ರಾಮನನ್ನು ಎಚ್ಚರಗೊಳಿಸಲು ಬಂದು "ಪೂರ್ವಾ ಸಂಧ್ಯಾ ಪ್ರವರ್ತತೆ" ಎಂದು ರಾಮನನ್ನು ಕಂಡ ದಿನ ಪೂರ್ವಾಸಂಧ್ಯೆ ಆಯಿತೆಂದು ಅನುಭವಿಸುತ್ತಾರೆ. ಆಳ್ವಾರುಗಳೂ ಸಹ ಭಗವತ್ಸಾಕ್ಷಾರಕ್ಕೆ ಮುಂಚೆ ಹುಟ್ಟೆಯೇ ಇರಲಿಲ್ಲ. ಭಗವತ್ಸಾಕ್ಷಾರವಾದ ದಿನವೇ ಹುಟ್ಟು: "ಅನ್ರು ನಾನ್ ಪಿರಂದಿಲೇನ್ ಪಿರಂದಪಿನ್ ಮರಂದಿಲೇನ್" ಎಂತಲೆ ಭಗವತ್ಸಾಕ್ಷಾರಪಡೆದು ಧನ್ಯತೆ ಪಡೆ ದರು. ಭಗವಂತನು "ಯೇ ಯಥಾ ಮಾಂ ಪ್ರಪದ್ಯಂತೇ" ಭಕ್ತರು ಯಾವ ರೀತಿ ನನ್ನನ್ನು ಧ್ಯಾನಿಸಿ ತನ್ನ ಮಂಗಳರೂಪವನ್ನು ನೋಡಲು ಇಚ್ಛಿಸುತ್ತಾರೋ ಆ ರೂಪದಿಂದಲೇ ಅವರಿಗೆ ಕಾಣಿಸಿಕೊಳ್ಳುವನು. ಇದು ವಿಭವ–ಅರ್ಚಾವತಾರಕ್ಕೆ ಸಮಾನವು. ಆದ್ದರಿಂದ ಭಗವಂತನನ್ನು ಆರಾಧಿಸಲು "ಬಹಿರಾರಾಧನಾರ್ಥಂ ತು ಯಾ ಮೂರ್ತಿರವತಿಷ್ಠತೇ। ತದಾಕಾರಂ ವಿಚಿಂತ್ಯಾಥ ಯಜೇತ್ಸರ್ವೇಶ್ವರಂ ಹರಿಂ॥ ಯಾವುದಾದರೊಂದು ಭಗವದಾಕಾರವನ್ನು ಮನಸ್ಸಿನಲ್ಲಿ ಧ್ಯಾನಿಸಿ ಸರ್ವೇಶ್ವರನಾದ ಹರಿಯನ್ನು ಅರ್ಚಿಸಬೇಕು. ಅಕ್ರೂರನೂ ಸಹ "ಉನ್ನಿದ್ರಾಬ್ಜ ಪತ್ರಾಕ್ಷಂ" ಎಂದು ಭಗವಂತನ ನೇತ್ರಸೌಂದರ್ಯ, ನೇತ್ರಕ್ಕೆ ಸ್ಥಾನಕೊಟ್ಟಿರುವ ಮಂದಹಾಸವದನ ಮುಖಮಂಡಲ, ಅನಂತರ ಬಲಮುರಿ ಶಂಖದಂತಿರುವ ಕತ್ತು

ವಕ್ಷಃಸ್ಥಳ ಕೃಷ್ಣನ ಸಂಪೂರ್ಣ ಆಕಾರವೇ ಮುಂದೆ ಬಂದು ನಿಂತಂತಾಯಿತು. ಅರ್ಧವಿಕಸಿತವಾದ ಸಿತಾಂಭೋಜದಂತೆ (ಬೆಳ್ದಾವರೆ) ಭಗವಂತನ ನೇತ್ರ. ಈ ಸಾಮ್ಯವೇತಕ್ಕೆ ಸೂರ್ಯಕಿರಣಸ್ಪರ್ಶದಿಂದ ಅರಳಿದ ಸಿತಾಂಭೋಜವು ಎಲ್ಲರನ್ನು ಆಕರ್ಷಿಸುತ್ತದೆ. ಭಗವಂತನ ನೇತ್ರವೂ ಅಷ್ಟೆ. ಎಲ್ಲರ ಮನಸ್ಸನ್ನೂ ಅಪಹರಿಸಿ ತನ್ನಲ್ಲಿ ಬಂಧಿಸುತ್ತದೆ. ಅಶೋಕವನದಲ್ಲಿ ರಾಮವಿರಹದಿಂದ ಕೃಶಳಾದ ಜಾನಕಿಯು ಎದುರಿನಲ್ಲಿ ಅಂಜಲಿಬದ್ಧನಾಗಿ ನಿಂತಿದ್ದ ಮಾರುತಿಯನ್ನು ನೀನು ರಾಮನ ಸಮೀಪದಿಂದ ಬಂದಿರುವುದಾಗಿ ಹೇಳುವಿ. ಎಲ್ಲಿ ಅವನ ಲಕ್ಷಣಗಳನ್ನು ತಿಳಿಸು ಎಂದು ಪ್ರಶ್ನಿಸುತ್ತಾಳೆ. ಅದಕ್ಕೆ ಮಾರುತಿಯ ಉತ್ತರ "ರಾಮಃ ಕಮಲಪತ್ರಾಕ್ಷಃ ಸರ್ವಸತ್ವಮನೋಹರಃ." ಈ ಪದ್ಯದಲ್ಲಿ ಮಹರ್ಷಿಯು ಪ್ರಯೋಗಿಸಿರುವ "ಸರ್ವಸತ್ವಮನೋಹರಃ" ಎಂಬ ಪದದ ಅರ್ಥವನ್ನು ಅನುಭವಿಸಬೇಕು. ಈ ಮಾತನ್ನು ಹೇಳುವವನು ಮಾರುತಿ. ರಾಮನ ನೇತ್ರ ಸೌಂದರ್ಯವು ಬೀದಿಯಲ್ಲಿ ಹೋಗುತ್ತಿರುವ ಸಕಲ ಪ್ರಾಣಿಗಳ ಮನಸ್ಸನ್ನೂ ಅಪಹರಿಸುತ್ತಿತ್ತು ಎಂದು. ಸೀತೆಯು ಕೇಳುತ್ತಾಳೆ. ಲೋಕದಲ್ಲಿ ಒಬ್ಬರ ಮನಸ್ಸಿನಲ್ಲಿರುವುದು ಮತ್ತೊಬ್ಬರಿಗೆ ಅಗೋಚರ. ಹೀಗಿರಲು ರಾಮನ ಕಣ್ಣು ಎಲ್ಲರ ಮನಸ್ಸನ್ನೂ ಅಪಹರಿಸುತ್ತೆಂದು ಹೇಗೆ ತಿಳಿದೆ? ಮಾರುತಿಯ ಉತ್ತರ: ಅಮ್ಮ! ಚತುರ್ಮುಖನು ೮೪ ಲಕ್ಷ ಜೀವರಾಶಿಯನ್ನು ಸೃಷ್ಟಿಸಿರುತ್ತಾನೆ. ಅವುಗಳಲ್ಲಿ ವಾನರಜಾತಿ ಅತಿಚಪಲಚಿತ್ತತೆಯುಳ್ಳದ್ದು. ನಾನೂ ವಾನರನೇ. ಚಪಲಚಿತ್ತನಾದ ವಾನರನ ಮನಸ್ಸನ್ನೇ ರಾಮನ ಕಣ್ಣು ಅಪಹರಿಸಿತು ಎಂದಾದಮೇಲೆ ಮಿಕ್ಕವರ ವಿಷಯವನ್ನು ಹೇಳಬೇಕೆ? ಛಾಂದೋಗ್ಯ ಉಪನಿಷತ್ತೂ ಸಹ ಭಗವಂತನ ನೇತ್ರಸೌಂದರ್ಯವನ್ನು "ತಸ್ಯ ಯಥಾ ಕಪ್ಯಾಸಂ ಪುಂಡರೀಕಮೇವ ಮಕ್ಷಿಣೀ" ಎಂದು ವಿವರಿಸಿರುತ್ತದೆ. ಈ ಮಾತಿನ 'ಕಪ್ಯಾಸಂ' ಎಂಬ ಪದಕ್ಕೆ 'ಕಂ ಪಿಬತೀತಿ=ಕಪಿಃ ಎಂದು ಮೂರು ಬಾರಿ ವಿಗ್ರಹ ಹೇಳಿ "ಗಂಭೀರಾಂಭಸಮುದ್ಭೂತ-ಸುಮೃಷ್ಟನಾಳ-ರವಿಕರವಿಕಸಿತ ಪುಂಡರೀಕದಳಾಮಲಾಯತೇಕ್ಷಣಃ" ಅಂದರೆ "ಬಹಳ ಆಳದ ಕೆಸರಿನಲ್ಲಿ ಬೇರುಬಿಟ್ಟು ನೀರಿನ ಮಧ್ಯದಲ್ಲಿದ್ದ ರೂಜಾರದ ದಿಂಡನ್ನು ಹೊಂದಿ ಪ್ರಥಮ ರವಿಕರದಿಂದ ಅರಳಿದ ಬೆಳ್ದಾವರೆಯಂತೆ ಸುಂದರ ನೇತ್ರವುಳ್ಳವನು" ಎಂದು. ಭಗವಂತನು ಯಾವ ಅವತಾರವನ್ನೇ ಎತ್ತಲಿ ನೇತ್ರಸೌಂದರ್ಯವನ್ನು ಮುಚ್ಚಲಾಗುವುದಿಲ್ಲ. "ಮೀನಃ ಕಮಲಲೋಚನಃ" "ಕೂರ್ಮಃ ಕಮಲಲೋಚನಃ" ಇತ್ಯಾದಿ ಪ್ರಯೋಗವಿದೆ. ಪ್ರಕೃತದಲ್ಲಿ ಅಕ್ರೂರನೂ ಸಹ ಮೊದಲು ಕೃಷ್ಣನ ನೇತ್ರಸೌಂದರ್ಯವನ್ನೇ ದಾರಿಯಲ್ಲಿ ಮನನಮಾಡುತ್ತಾ ಬರಲು, ಅದರಂತೆ ಕೃಷ್ಣಸಾಕ್ಷಾತ್ಕಾರಪಡೆದು ಧನ್ಯನಾದ.

ವಚನ ವಿ.ಪು. ಪುಟ ೩೫೧, ಸಾಲು ೭

ಮೂಲ: "ಮಾಲಾಕಾರಾಯ ಕೃಷ್ಣೋಽಪಿ ಪ್ರಸನ್ನಃ ಪ್ರದದೌ ವರಾನ್।
ಶ್ರೀಸ್ತ್ವಾಂ ಮತ್ಸಂಶ್ರಯಾ ಭದ್ರ ನ ಕದಾಚಿತ್ತ್ಯಜಿಷ್ಯತಿ॥"
ವಿ.ಪು. ೫-೧೯-೨೪

ಶ್ರೀಕೃಷ್ಣನು ಮಧುರೆಯ ಬೀದಿಯಲ್ಲಿ ಬರುವಾಗ ಪುಷ್ಪಮಾಲೆಗಳನ್ನು ಅರ್ಪಿಸಿದ ಮಾಲಾಕಾರನಿಗೆ ಅನುಗ್ರಹ ಮಾಡುವ ಸಂದರ್ಭ.

ಇಲ್ಲಿ ಮಾಲಾಕಾರನು ತಾನು ಸಂಪತ್ತನ್ನು ಬಯಸಿ ಪುಷ್ಪವನ್ನು ಸಮರ್ಪಿಸಲಿಲ್ಲ. ಶ್ರೀಕೃಷ್ಣರಾಮರ ಮಂಗಳರೂಪವನ್ನು ನೋಡಿ ಪ್ರೀತಿಯಿಂದ "ಪತ್ರಂ ಪುಷ್ಪಂ ಫಲಂ ತೋಯಂ" ಎಂಬಂತೆ ಅರ್ಪಿಸಿದನು. ಭಕ್ತನು ಪ್ರೀತಿಯಿಂದ ಕೊಟ್ಟಿದ್ದನ್ನುಪರಮಾತ್ಮನು "ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ" ಎಂಬಂತೆ ಪ್ರೀತಿಯಿಂದಲೇ ಅನುಭವಿಸುವನು. ಕುಚೇಲನ ಒಂದು ಹಿಡಿ ಒಣ ಅವಲಕ್ಕಿಯ ಬೆಲೆಯೇನು? ಆದರೆ ಅದಕ್ಕೆ ಭಕ್ತಿಯೆಂಬ ಮುದ್ರೆ ಒತ್ತಿತ್ತು. ಆದ್ದರಿಂದ ಅದು ಬಹಳ ಬೆಲೆಯುಳ್ಳದ್ದಾಯಿತು. ಹೀಗೆಯೇ ರುಕ್ಮಿಣಿಯು ಸಮರ್ಪಿಸಿದ ಒಂದು ತುಳಸೀಪತ್ರ, ಶಬರಿಯು ಕೊಟ್ಟ ಹಣ್ಣು, ಕುಂತಿಯು ಕೊಟ್ಟ ಒಂದು ಕುಡಿಕೆ ನೀರು ಇವೆಲ್ಲವೂ ಭಕ್ತಿಯಿಂದ ಅರ್ಪಿಸಲ್ಪಟ್ಟು ಪರಮಾತ್ಮನ ಪ್ರೀತಿಗಾಗಿ ಆದುವು. ಭಕ್ತಿಯಿಂದ ಕೊಟ್ಟಿದ್ದನ್ನು ಭಗವಾನ್ ಸ್ವೀಕರಿಸುವನು. ಭಗವಂತನಿಗೆ ನಿವೇದನ ಮಾಡುವಾಗ ಹಿರಿಯರು ಈ ಪದ್ಯವನ್ನು ಅನುಸಂಧಾನ ಮಾಡುವರು. ಯಥಾ:

"ಯಾ ಪ್ರೀತಿರ್ವಿದುರಾರ್ಪಿತೇ ಮುರರಿಪೋ ಕುಂತ್ಯರ್ಪಿತೇ ಯಾದೃಶಿ
ಯಾ ಗೋವರ್ಧನಮೂರ್ಧ್ನಿ ಯಾ ಚ ಪೃಥುಕೇ ಸ್ತನ್ಯೇ
ಯಶೋದಾರ್ಪಿತೇ ।
ಭಾರದ್ವಾಜಸಮರ್ಪಿತೇ ಶಬರಿಕಾದತ್ತೇ ಧರೇ ಯೋಷಿತಾಂ
ಯಾ ಪ್ರೀತಿರ್ಮುನಿಪತ್ನಿಭಕ್ತಿರಚಿತೇ ಪ್ರತ್ಯರ್ಪಿತಾಂ ತಾಂ ಕುರು ॥"

ಎಂದು. ಅಲ್ಪದಿಂದಲೇ ಪ್ರೀತನಾದ ಭಗವಾನ್ ಕೊಡುವ ಸಂಪತ್ತನ್ನು ಪಡೆಯಲು ನಮ್ಮ ಎರಡು ಕೈ ಸಾಲದು. ಅನನ್ಯಪ್ರಯೋಜನರಾಗಿ ನಾವು ಭಗವಂತನನ್ನು ಭಜಿಸಿದ್ದೇ ಆದರೆ ಅವನು "ಶರೀರಾರೋಗ್ಯಮರ್ಥಾಂಶ್ಚ ಭೋಗಾಂಶ್ಚೈವಾನುಷಂಗಿಕಾನ್। ದದಾತಿ ಧ್ಯಾಯಿನಾಂ ನಿತ್ಯಂ ಅಪವರ್ಗಪ್ರದೋ ಹರಿಃ॥ ಎಂಬಂತೆ ಆನುಷಂಗಿಕವಾದ ಆರೋಗ್ಯ-ಸಂಪತ್ತು-ಭೋಗಗಳು ಮುಂತಾದ ಫಲಗಳನ್ನು ಅನುಗ್ರಹಿಸುವನು. ಮೋಕ್ಷವನ್ನೇ ಕರುಣಿಸುವ ಪರಮಾತ್ಮನು

ಇತರ ಫಲಗಳನ್ನೂ ಕೊಡಲಾರನೇ? ಆದರೆ ಭಗವಂತನಲ್ಲಿ ಪ್ರಾಪಂಚಿಕ ಫಲಗಳನ್ನು ಯಾಚಿಸಬಾರದು ಜ್ಞಾನಿಗಳು. "ತತ್ಪಾದಭಕ್ತಿಜ್ಞಾನಾಭ್ಯಾಂ ಫಲಮನ್ಯತ್ಕದಾಚನ।....ಯಾಚನಾನ್ನಶ್ಯತಿ ಧ್ರುವಂ" ಅಂದರೆ ಭಗವಂತನ ಪಾದದಲ್ಲಿ ಭಕ್ತಿ-ಜ್ಞಾನ ಇವೆರಡನ್ನು ಬಿಟ್ಟು ಪ್ರಪನ್ನನು ಫಲಾಂತರಗಳನ್ನು ಯಾಚಿಸಬಾರದು. ಯಾಚಿಸಿದ್ದೇ ಆದರೆ ಅವನು ನಾಶ ಹೊಂದುವನು ಎಂದು ಹೇಳಿರುತ್ತಾರೆ. ಆದ್ದರಿಂದ ಜ್ಞಾನಿಗಳು ಫಲಾಂತರಗಳಲ್ಲಿ ಆಸೆಯನ್ನು ತೊರೆದು ಸರ್ವೇಶ್ವರನಲ್ಲಿ ಮುಕ್ತಿಯನ್ನೇ ಪ್ರಾರ್ಥಿಸುವರು. ಯಥಾ: ವಿಷ್ಣುಪುರಾಣೇ

"ತಸ್ಮಿನ್ ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ ಧರ್ಮಾರ್ಥಕಾಮೈರಲಮಲ್ಪಕಾಸ್ತೇ।
ಸಮಾಶ್ರಿತಾದ್ಬ್ರಹ್ಮತರೋರನಂತಾತ್ ವಿನಿಶ್ಚಯೋ ಮುಕ್ತಿಫಲಪ್ರಪಾತಃ॥"

ಆತನು ಪ್ರಸನ್ನನಾದರೆ ಅಲಭ್ಯವಾದುದು ಯಾವುದು? ಅಲಭ್ಯವಾದರೂ ಭಗವಂತನು ಅವನ್ನು ಸೃಷ್ಟಿಸಿ ಭಕ್ತನಿಗೆ ಕೊಡುವನು. ಧರ್ಮ-ಅರ್ಥ-ಕಾಮಗಳು ಅತ್ಯಲ್ಪಫಲಗಳು. ಸರ್ವೇಶ್ವರನು ಮೋಕ್ಷವನ್ನೇ ಕರುಣಿಸಲು ಎದುರಿನಲ್ಲಿ ಬಂದು ನಿಂತಿರುವಾಗ ಗೃಹಪುತ್ರಾದಿ ಫಲಗಳನ್ನು ಯಾಚಿಸುವುದು ಎಂತಹ ಮೂರ್ಖತನ. ಬ್ರಹ್ಮತರುವನ್ನಾಶ್ರಯಿಸಿ ಅದರಡಿಯಲ್ಲಿ ನಿಂತವನಿಗೆ ಪಕ್ವವಾದ ಮುಕ್ತಿಫಲವೇ ಅವನ ಕರಗತವಾಗುವುದು.

ಪ್ರಪನ್ನನು ಇಲ್ಲಿಯೂ ಅಲ್ಲಿಯೂ ನಿತ್ಯಸುಖಿಯಾಗಿರಬೇಕೆಂಬುದೇ ಭಗವಂತನ ಬಯಕೆ. ಹೀಗೆ ಪ್ರಪನ್ನರಿಗೆ ಐಶ್ವರ್ಯಾದಿಗಳನ್ನು ಭಗವಂತನು ಅನುಗ್ರಹಿಸಿರುವುದಕ್ಕೆ ಅನೇಕ ನಿದರ್ಶನಗಳುಂಟು. ಪರಮಭಾಗವತನಾದ ಕುಚೇಲನು ಈ ಲೋಕದಲ್ಲಿ ಮಹದೈಶ್ವರ್ಯವನ್ನು ಪಡೆದುದು ಎಲ್ಲರಿಗೂ ತಿಳಿದ ವಿಷಯ. ಹಾಗೆಯೇ ಸುಗ್ರೀವನೂ, ವಿಭೀಷಣನೂ, ಪಾಂಡವರೂ ಸಹ ರಾಜ್ಯಸಂಪತ್ತನ್ನು ಪಡೆದರು. ಶರಭಂಗರೂ ಶಬರಿಯೂ ಮೋಕ್ಷಸಂಪತ್ತನ್ನು ಪಡೆದರು.

ಪ್ರಕೃತದಲ್ಲಿ ಮಾಲಾಕಾರನು "ಪ್ರಸಾದಪರಮೌನಾಥೌ ಮಮ ಗೇಹಮುಪಾಗತೌ" ಎಂದು ಶ್ರೇಷ್ಠರಾದ ಬಲರಾಮಕೃಷ್ಣರಿಬ್ಬರೂ ಕೃಪೆಯಿಂದ ನನ್ನ ಮನೆಗೆ ಬಂದಿರುತ್ತಾರೆ ಎಂದು ಆನಂದದಿಂದ ಮನೆಯಲ್ಲಿದ್ದ ಮನೋಹರಪುಷ್ಪಗಳನ್ನೇ ಅವರಿಗೆ ಅರ್ಪಣೆ ಮಾಡಿದನು. ಅದರಿಂದ ಸುಪ್ರೀತನಾದ ಕೃಷ್ಣನು "ಶ್ರೀಸ್ತ್ವಾಂ ಮತ್ಸಂಶ್ರಯಾ ಭದ್ರ ನ ಕದಾಚಿತ್ತ್ಯಜಿಷ್ಯತಿ" ನಿನ್ನನ್ನು ಲಕ್ಷ್ಮಿಯು ಎಂದೆಂದೂ ತ್ಯಜಿಸದಿರಲಿ. ಅಲ್ಲದೆ "ಮಮಾನುಸ್ಮರಣಂ ಪ್ರಾಪ್ಯ ದಿವ್ಯಂ ಲೋಕ

ಮವಾಪ್ಸ್ಯಸಿ” ನನ್ನನ್ನು ಸ್ಮರಿಸುತ್ತಾ ದಿವ್ಯಲೋಕವನ್ನೂ ಪಡೆಯುವಿ ಎಂದೂ ಹರಸಿದನು. ಭಗವದನುಗ್ರಹದಿಂದ ಬಂದ ಐಹಿಕ ಸುಖಗಳು ಸಂಸಾರಬಂಧಕ ಗಳಾಗುವುದಿಲ್ಲ. ಬ್ರಹ್ಮೇಂದ್ರಾದಿಗಳು ಭಗವಂತನನ್ನು ಕುರಿತು ತಪಸ್ಸುಮಾಡಿ ಐಹಿಕ ಫಲಗಳನ್ನು ಬಯಸಿ ಸಂಸಾರಬಂಧನಕ್ಕೆ ಸಿಕ್ಕಿದರು. ಹೀಗೆ ಐಹಿಕ ಐಶ್ವರ್ಯವನ್ನು ಹೊಂದಿದ ಪ್ರಪನ್ನರಲ್ಲಿ ಅನಂತಶಯನದ ರಾಜರಾದ ಕುಲಶೇಖ ರಾಳ್ವಾರರೂ ಒಬ್ಬರು. ಈ ವಿಷಯವನ್ನು ಶ್ರೀ ಕುಲಶೇಖರರು ತಮ್ಮ ಪ್ರಬಂಧ ದಲ್ಲಿ (೫-೯) ಕೃಪೆಯಾ ಹೇಳಿರುತ್ತಾರೆ. ಯಥಾ:

“ನಿನ್ನೆಯೇ ತಾನ್ವೇಂಡಿ ನೀಳ್ ಶೆಲ್ವಂ ವೇಂಡಾದಾನ್
ತನ್ನೆಯೇ ತಾನ್ವೇಂಡುಂ ಶೆಲ್ವಂ ಪೋಲ್ ಮಾಯತ್ತಾಲ್
ಮಿನ್ನೆಯೇ ತೇರ್ ತಿಹಿರಿ ವಿತ್ತುವಕ್ಕೋಟ್ಟವಮ್ಮಾ
ನಿನ್ನೆಯೇ ತಾನ್ವೇಂಡಿ ನಿರ್ಪಗಡಿಯೋನೆ.”

ಇದು ಮಲೈನಾಟ್ಟು ತಿರುಪ್ಪತಿಗಳಲ್ಲಿ ಒಂದಾದ ದಿವ್ಯದೇಶ. “ವಿತ್ತುವ ಕ್ಕೋಡು” ಎಂದು ಹೆಸರು. ಇಲ್ಲಿನ ಅರ್ಚಾಮೂರ್ತಿ ಉಯ್ಯವಂದಪ್ಪೆರುಮಾಳ್. ತಾಯಿಯ ಹೆಸರು ವಿತ್ತುವಕ್ಕೋಡುವಲ್ಲಿ. ಚಕ್ರತೀರ್ಥ–ಭುಜಂಗಶಯನಂ. ಅಂಬರೀಷನಿಗೆ ಪ್ರತ್ಯಕ್ಷ. ಹಾಡಿನ ತಾತ್ಪರ್ಯ: “ಎಲೈ ಪರಮಾತ್ಮನೆ! ನಾನು ನಿನ್ನನ್ನೇ ಅಪೇಕ್ಷಿಸಿದೆ. ಬ್ರಹ್ಮರುದ್ರಾದಿಗಳ ಐಶ್ವರ್ಯವನ್ನೂ ಅಪೇಕ್ಷಿಸಲಿಲ್ಲ. ಅಪೇಕ್ಷಿಸದೇ ಇರುವ ಐಹಿಕ ಐಶ್ವರ್ಯವನ್ನು ಕರುಣಿಸುತ್ತೀಯೆ. ವಿತ್ತುವ ಕ್ಕೋಡಿಗೆ ಸ್ವಾಮಿಯಾದವನೆ! ನೀನಾಗಿಯೆ ಕೊಟ್ಟಿರುವ ಐಹಿಕ ಐಶ್ವರ್ಯದಲ್ಲಿ ನನಗೆ ಆಶೆ ಇಲ್ಲ. ದಾಸನಾದ ನಾನು ನಿನ್ನನ್ನೇ ಅಪೇಕ್ಷಿಸಿರುತ್ತೇನೆ” ಎಂದು. ಇದೇ ರೀತಿ ಯಾಮುನಾರ್ಯರಿಗೂ ಅಪೇಕ್ಷಿಸದೇ ಇರುವ ಐಹಿಕಸಂಪತ್ತು ಭಗವಂತ ನಿಂದ ಪ್ರಾಪ್ತವಾಯಿತು. ವಿರಕ್ತಿಯಿಂದ ಇವರು ಈ ಸಂಪತ್ತನ್ನು ತ್ಯಜಿಸಿದರು. ಭಗವತ್ಕೈಂಕರ್ಯವೆಂಬ ಸಂಪತ್ತನ್ನೇ ಪ್ರಾರ್ಥಿಸಿ ಮುಕ್ತರಾದರು. ಆದ್ದರಿಂದ ಶ್ರೀಕೃಷ್ಣನು ಮಾಲಾಕಾರನಿಗೆ ಐಹಿಕ ಐಶ್ವರ್ಯವನ್ನು ಕರುಣಿಸಿದರೂ, ಮಾಲಾ ಕಾರರು ಅದರಲ್ಲಿ ವಿರಕ್ತರಾಗಿ ಕೃಷ್ಣಭಕ್ತಿಯಿಂದ ಪರಮಪದವೆಂಬ ನಿತ್ಯೈಶ್ವರ್ಯ ವನ್ನೇ ಪಡೆದರು.

ವಚನ ವಿ.ಪು. ಪುಟ ೨೫೯, ಸಾಲು ೧

ಮೂಲ: “ಮನುಷ್ಯದೇಹಿನಾಂ ಚೇಷ್ಟಾಮಿತ್ಯೇವಮನುವರ್ತತೇ।
ಲೀಲಾಜಗತ್ಪತೇಸ್ತಸ್ಯ ಚ್ಛಂದತಃ ಪರಿವರ್ತತೇ॥” ವಿ.ಪು. ೫-೨೨-೧೮

ಭಗವಂತನು ರಾಮಕೃಷ್ಣಾದ್ಯವತಾರಗಳಲ್ಲಿ ದುಃಖಪಟ್ಟಿದ್ದುಂಟು. ಮನುಷ್ಯರು ತಮ್ಮ ತಮ್ಮ ಕರ್ಮಗಳಿಗೆ ಅನುಗುಣವಾಗಿ ಸುಖದುಃಖಗಳನ್ನನುಭವಿಸುವುದು ಸಹಜವಾದುದು. ಅವತಾರಗಳಲ್ಲಿ ಭಗವಂತನೂ ಸುಖದುಃಖಗಳನ್ನನುಭವಿಸಿದ ನಲ್ಲಾ. ಹಾಗಾದರೆ ಅವನೂ ಕರ್ಮವಶ್ಯನೆ? ಎಂಬ ಸಂದೇಹ ಬರುವುದು ಸಹಜ. ಇದಕ್ಕೆ ಉತ್ತರವಾಗಿ ಸ್ವಾಮಿ ವೇದಾಂತ ದೇಶಿಕರು ಪುರಾಣರತ್ನದ ಮೇಲಿನ ಪದ್ಯವನ್ನು ತಮ್ಮ ರಹಸ್ಯತ್ರಯಸಾರದ ಸಿದ್ಧೋಪಾಯ ಶೋಧನಾಧಿ ಕಾರದಲ್ಲಿ ಉದಾಹರಿಸಿ ಮುಂದಕ್ಕೆ ಈ ರೀತಿ ಉತ್ತರಿಸಿರುತ್ತಾರೆ:

> "ಇತ್ಯಾದಿಗಳಿಲೇ ಮಹರ್ಷಿಗಳ್ ಅರುದಿ ಇಟ್ಟಾರ್‌ಗಳ್, ಆಹೈಯಾಲ್ ಅವತಾರವೃತ್ತಾಂತಂಗಳಿಲುಂ ದುಃಖಾಭಿನಯಮಾತ್ರಮೇಯುಳ್ಳದು. ಅದು ತಾನುಂ ಕೃಪಾಮೂಲಂ, ಇದು ಸ್ವತಂತ್ರನಾನ ತನುಕ್ಕು ಲೀಲೆಯು ಮಾಯಿರುಕ್ಕುಂ. ಕೂನರ್ ಕುರಳರ್ಕೈಕ್ಕೊಂಡಾಡಿ ರಕ್ಷಿತ್ತೈ ನಿರಪೇಕ್ಷರಾನ ರಾಜಾಕ್ಕಳುಕ್ಕು ಲೀಲೆಯುಮಾಯ ಕೃಪಾಕಾರ್ಯ ಮುಮಾಯ್‌ಕ್ಕಾಣಾ ನಿನ್ರೋಮಿರೆ"

ಅಂದರೆ ಮನುಷ್ಯದೇಹವನ್ನು ಹೊಂದಿದವರ ವ್ಯಾಪಾರವನ್ನು ಸಾಮದಾನಭೇದ ದಂಡರೂಪದಲ್ಲಾಗಲಿ, ಅಥವಾ ಪಲಾಯನ ಮಾಡಿಯಾಗಲಿ ಅನುಸರಿಸುತ್ತಾನೆ. ಇದು ಜಗತ್ಪತೇಃ ತಸ್ಯ ಲೀಲಾ = ಸ್ವಾಮಿಯಾದ ಕೃಷ್ಣನ ಲೀಲೆಯು ಛಂದತಃ = ಆತನ ಸಂಕಲ್ಪದಂತೆ ನಡೆಯುತ್ತೆ. ಅವತಾರಗಳಲ್ಲಿ ಮಾಡುವ ಈ ವ್ಯಾಪಾರವು ದೈವಪ್ರಕೃತಿಗಳನ್ನು ಆಕರ್ಷಣೆ ಮಾಡುವುದಕ್ಕೂ, ಆಸುರಪ್ರಕೃತಿಗಳನ್ನು ವಂಚಿಸುವುದಕ್ಕೂ, ಲೋಕವಿಡಂಬನಾರ್ಥವಾಗಿ ದುಃಖಾಭಿನಯಮಾತ್ರ ಕ್ಕಾಗಿಯೇ. ಯಥಾರ್ಥವಾಗಿ ದುಃಖಪಟ್ಟರೆಂದು ಗ್ರಹಿಸಕೂಡದು. ನಿದರ್ಶನ ವಾಗಿ "ನಮದ್ವಿಧೋ ದುಷ್ಕೃತ ಕರ್ಮಕಾರೀ" ಎಂದು ರಾಮನೂ, "ಮನ್ಯೈವ ದುಷ್ಕೃತಂ ಕಿಂಚಿತ್ ಮಹದಸ್ತಿ ನ ಸಂಶಯಃ" ಎಂದು ಸೀತೆಯೂ, ಸತ್ಯ ಭಾಮೆಯ ಮೂಲಕ ಆಕೆಯ ತಂದೆಯ ವಧೆಯನ್ನು ಕೇಳಿ "ಅಹೋ ನಃ ಪರಮಂ ಕಷ್ಟಂ ಇತ್ಯಾಸ್ರಾಕ್ಷೌ ವಿಲೇಪತುಃ" ಬಲರಾಮಕೃಷ್ಣರು ಅತ್ತರೆಂದೂ ಹೀಗೆ ಕರ್ಮವಶ್ಯರೆಂದು ಅಭಿನಯಿಸಿರುತ್ತಾರೆ. ಕಾಲಯವನನಿಗೆ ಅಂಜಿ ಪಲಾಯನ ಮಾಡಿದುದೂ ನಟನವೆ. ಮುಚುಕುಂದನು ನಿದ್ರೆಯನ್ನು ಬಿಟ್ಟು ನೋಡಿದೊಡನೆ ಕಾಲಯವನನು ಭಸ್ಮನಾಗಲಿ, ಎಂಬ ಸಂಕಲ್ಪವೂ ಸಹ ಸ್ವತಂತ್ರನಾದ ಪರಮಾತ್ಮನ ಲೀಲೆ. ತ್ರಿವಕ್ರಳಾದ ಕುಬ್ಜೆಯನ್ನು ಶ್ರೀಕೃಷ್ಣನು ಕೈಹಿಡಿದು ಎತ್ತಿ

ಸ್ತ್ರೀರತ್ನಳಾಗುವಂತೆ ಅನುಗ್ರಹಿಸಿದುದೂ ಅವನ ಲೀಲೆ. ಹುಟ್ಟುದರಿದ್ರನಾದ ತ್ರಿಜಟನು ರಾಮನು ವನವಾಸಕ್ಕೆ ಹೊರಡುವ ಸಂದರ್ಭದಲ್ಲಿ ಅವನ ದೃಷ್ಟಿಗೆ ಬಿದ್ದು ಗೋಸಂಪತ್ತನ್ನು ಪಡೆದನು. ಇದು ಅವನ ಕೃಪಾಮೂಲ. ಇವೆಲ್ಲವೂ ಅವತಾರ ಕಾಲಗಳಲ್ಲಿ ನಡೆದ ಲೀಲೆಗಳಿಂದು ತಾತ್ಪರ್ಯ ಗ್ರಹಿಸಬೇಕೆಂದು ಈ ಪದ್ಯದ ಮುಖ್ಯ ತಾತ್ಪರ್ಯ.

ವಚನ ವಿ.ಪು. ಪುಟ ೨೭೧, ಸಾಲು ೨೬

ಮೂಲ: ಬ್ರಹ್ಮಾದ್ಯಾಸ್ಸಕಲಾದೇವಾ ಮನುಷ್ಯಾಃ ಪಶವಸ್ತಥಾ ।
ವಿಷ್ಣುಮಾಯಾಮಹಾವರ್ತಮೋಹಾಂಧತಮಸಾವೃತಾಃ ॥

ವಿ.ಪು. ೫-೩೦-೧೭

ಸಂದರ್ಭ: ಶ್ರೀಕೃಷ್ಣನು ನರಕಾಸುರನನ್ನು ಸಂಹರಿಸಿ ಅದಿತಿದೇವಿಗೆ ಕುಂಡಲಗಳನ್ನು ಕೊಡಲು ಸ್ವರ್ಗಲೋಕಕ್ಕೆ ಬಂದನು. ಆಗ ಅದಿತಿದೇವಿಯು ಕೃಷ್ಣನನ್ನು ಸ್ತೋತ್ರಮಾಡುವ ಸಂದರ್ಭ. ಬ್ರಹ್ಮನೇ ಮೊದಲಾದ ದೇವತೆಗಳೇ ನಿನ್ನ ಮಾಯೆಯಲ್ಲಿ ಸಿಕ್ಕಿದಮೇಲೆ ಇನ್ನು ಮನುಷ್ಯರ ಮತ್ತು ಪ್ರಾಣಿಗಳ ಪಾಡೇನು? ಚತುರ್ಮುಖನೂ ರುದ್ರರೂ ಸಹ ದೇವತೆಗಳಿಗೂ ಅಧಿಕಾರಿಗಳು. ಇಂದ್ರನು ದೇವರಾಜನು. ಇವರೆಲ್ಲರೂ ನಮ್ಮಂತೆಯೇ ಜೀವಕೋಟಿಗೆ ಸೇರಿದವರು. ಇವರೂ ಕೂಡ ಅನೇಕ ಸಂದರ್ಭಗಳಲ್ಲಿ ವಿಷ್ಣುಮಾಯೆಗೆ ಸಿಕ್ಕಿ ತೊಂದರೆಗಳನ್ನು ಅನುಭವಿಸಿರುವುದಾಗಿ ಇತಿಹಾಸಾದಿಗಳಿಂದ ತಿಳಿದುಬಂದಿರುತ್ತೆ. ಇತಿಹಾಸ ಪುರಾಣಗಳಲ್ಲಿ ಕೆಲವು ಸ್ಥಳಗಳಲ್ಲಿ ಬ್ರಹ್ಮನು ಪರತತ್ವವೆಂದೂ, ಶಂಕರನೂ ಪರತತ್ವವೆಂದೂ ಸೂಚಿತವಾಗಿದೆ. ಹಾಗಾದರೆ ಪರತತ್ವ ಯಾವುದು ಎಂದು ಸಂದೇಹವು ಬರುವುದು ಸಹಜ. ಇದಕ್ಕೆ ಉತ್ತರವಾಗಿಯೂ ಪರಾಶರರ ಮೇಲಿನ ಶ್ರೀಸೂಕ್ತಿಯು ಸಂದೇಹವನ್ನು ಪರಿಹರಿಸುತ್ತದೆ. ಸಕಲದೇವತಾವರ್ಗವೂ ಮೋಹಕ್ಕೆ ಪರವಶರಾಗಿ ವಿಷ್ಣುವಿನಿಂದಲೇ ರಕ್ಷಿಸಲ್ಪಟ್ಟರೆಂದು ಪರಾಶರರು ತಿಳಿಸಿರುತ್ತಾರೆ.

ಭಗವಾನ್ ವಿಷ್ಣುವು ಅಂಡಸೃಷ್ಟಿಯನ್ನು ಮಾಡಿ ತನ್ನ ನಾಭಿಕಮಲದಿಂದ ಬ್ರಹ್ಮನನ್ನು ಸೃಷ್ಟಿಸಿದನು. ಮುಂದಿನ ಸೃಷ್ಟಿಗೆ ಚತುರ್ಮುಖನಿಗೆ ಅಧಿಕಾರವನ್ನೂ, ಸಹಾಯಕ್ಕಾಗಿ ವೇದವನ್ನೂ ಕೊಟ್ಟನು. ಆದರೇನು? ಮಧುಕೈಟಭರೆಂಬ ರಾಕ್ಷಸರು ಬ್ರಹ್ಮನು ಅಜಾಗರೂಕತೆಯಲ್ಲಿರುವುದನ್ನು ಗಮನಿಸಿ ಅವನಲ್ಲಿದ್ದ ವೇದಪುರುಷನನ್ನು ಅಪಹರಿಸಿ ಪಾತಾಳಲೋಕವನ್ನು ಹೊಕ್ಕರು. ಆಗ ಚತು

ಮುಖನು ಮೋಹಾಂಧಕಾರದಲ್ಲಿ ಬಿದ್ದು ತನಗೆ ಉಂಟಾದ ದುರವಸ್ಥೆಯನ್ನು ಮಗನಾದ ರುದ್ರನಲ್ಲಿ ಈ ರೀತಿ ಹೇಳಿಕೊಳ್ಳುತ್ತಾನೆ:

"ವೇದಾ ಮೇ ಪರಮಂ ಚಕ್ಷುಃ ವೇದಾ ಮೇ ಪರಮಂ ಧನಂ।
ವೇದಾ ಮೇ ಪರಮಂ ಧಾಮ ವೇದ ಮೇ ಬ್ರಹ್ಮಚೋತ್ತಮಮ್ ॥
ಮಮ ವೇದಾ ಹೃತಾಸ್ಸರ್ವೇ ದಾನವಾಭ್ಯಾಂ ಬಲಾದಿತಃ।
ಅಹೋ ಬತ ಮಹದ್ದುಃಖಂ ವೇದನಾಶನಜಂ ಮಮ ॥"

ಅಂದರೆ, ವೇದವೇ ನನ್ನ ಕಣ್ಣು. ಇಬ್ಬರು ದಾನವರು ಬಂದು ಅದನ್ನು ಅಪಹರಿಸಿದರು. ಅವರು ಯಾರೋ ತಿಳಿಯದು. ವೇದನಾಶದಿಂದ ಕಣ್ಣಿಲ್ಲದ ಕುರುಡನಾದೆ. ಇನ್ನು ಲೋಕಸೃಷ್ಟಿ ಮಾಡುವ ಬಗೆ ಹೇಗೆ? ಏನೂ ತಿಳಿಯುತ್ತಿಲ್ಲ. ಅಯ್ಯೋ! ಮಹಾಸಂಕಟಕ್ಕೆ ಗುರಿಯಾದೆ ಎಂದು. ಆಗ ಭಗವಾನ್ವಿಷ್ಣುವು ಹಯಗ್ರೀವಾವತಾರವನ್ನೆತ್ತಿ ಮಧುಕೈಟಭರನ್ನು ಕೊಂದು ಪುನಃ ಚತುರ್ಮುಖನಿಗೆ ನಾಲ್ಕು ವೇದಗಳನ್ನೂ ತಂದುಕೊಟ್ಟನು.

ಹೀಗೆಯೆ ಶಂಕರನು ಗುರುಪಾತಕಕ್ಕೆ ಗುರಿಯಾಗಲು ದಯಾಮಯನಾದ ವಿಷ್ಣುವು ಆ ಪಾತಕವನ್ನು ಪರಿಹರಿಸಿದನು. ಶಂಕರನು ಬ್ರಹ್ಮನ ಮಗನೆಂದು ಸಾಮವೇದವು ಹೇಳುತ್ತದೆ. ತಂದೆಯಾದ ಚತುರ್ಮುಖನಿಗೆ ಮೊದಲು ಐದು ತಲೆಗಳಿದ್ದುವು. ಅವುಗಳಲ್ಲಿ ಮಧ್ಯದಲ್ಲಿದ್ದ ತಲೆಯನ್ನು ಚಿಗಟಿ ತೆಗೆದುಹಾಕಿದನು. ಆಗ ಬ್ರಹ್ಮನು ಈ ರೀತಿ ಶಪಿಸಿದನು.

"ಯಸ್ಮಾದನಪರಾಧಸ್ಯ ಶಿರಶ್ಛಿನ್ನಂ ತ್ವಯಾ ಮಮ।
ತಸ್ಮಾಚ್ಛಾಪಸಮಾಯುಕ್ತಃ ಕಪಾಲೀತ್ವಂ ಭವಿಷ್ಯತಿ ॥"

ಬ್ರಹ್ಮಕಪಾಲವು ಕೈಯಲ್ಲಿ ಅಂಟಿಕೊಂಡಿತು. ಏನೇನು ಮಾಡಿದರೂ ಕೈಯಿಂದ ತೆಗೆದುಹಾಕಲು ಆಗಲಿಲ್ಲ. ಹಾಗೆಯೇ ಶಂಕರನು ಬಹಳ ದಿನ ಸಂಚರಿಸಿದನು. ಒಮ್ಮೆ ಬದರೀಕ್ಷೇತ್ರಕ್ಕೆ ಬಂದು ನಾರಾಯಣನನ್ನು ಪ್ರಾರ್ಥಿಸಿದನು. ಆಗ ನಾರಾಯಣನು ತನ್ನ ಪಾರ್ಶ್ವವನ್ನು ನಖಾಗ್ರದಿಂದ ಗೀರಿದನು. ಅಲ್ಲಿ ರಕ್ತಪ್ರವಾಹವು ಹರಿದು ಶಂಕರನ ಕೈಯನ್ನು ತೊಳೆಯಲು ಬ್ರಹ್ಮಕಪಾಲವು ತುಂಡುತುಂಡಾಗಿ ಬಿದ್ದುಹೋಯಿತು. ಆಗ ತಾನು ಪವಿತ್ರನಾದೆನೆಂದು ಪಾರ್ವತಿಯಲ್ಲಿ ಹೇಳಿಕೊಂಡನು. ಯಥಾ:

"ವಿಷ್ಣುಪ್ರಸಾದಾತ್ ಸುಶ್ರೋಣಿ ಕಪಾಲಂ ತತ್ಸಹಸ್ರಧಾ।
ಸ್ಫುಟಿತಂ ಬಹುಧಾ ಯಾತಂ ಸ್ವಪ್ನಲಬ್ಧಂ ಧನಂ ಯಥಾ ॥" ಎಂದು.

ಹೀಗೆಯೇ ಶಂಕರನಿಗೆ ಒದಗಿದ ದೈತ್ಯಪೀಡೆಯೂ ವಿಷ್ಣುವಿನಿಂದ ಪರಿಹೃತವಾಯಿತು. ಅಂಧಕಾಸುರನೊಡನೆ ಶಂಕರನಿಗೆ ಯುದ್ಧಪ್ರಾಪ್ತವಾಯಿತು. ಶಂಕರನ ಶಸ್ತ್ರಹತಿಯಿಂದ ಅಂಧಕಾಸುರನ ಶರೀರದಿಂದ ರಕ್ತವು ಸೋರಿತು. ಆ ರಕ್ತಬಿಂದುಗಳು ರಾಕ್ಷಸರಾಗಿ ಶಂಕರನಿಗೆ ಬಹಳ ಕ್ಲೇಶ ಕೊಟ್ಟರು. ಆಗ ವಿಷ್ಣುವಿನಲ್ಲಿ ಮರೆಹೊಕ್ಕನು. ವಿಷ್ಣುವಿನಿಂದ ಸೃಷ್ಟಳಾದ ಶುಷ್ಕರೇವತಿಯೆಂಬುವಳು ಆ ಅಂಧಕನ ಶರೀರದಿಂದ ಬಿದ್ದ ರಕ್ತವನ್ನೆಲ್ಲಾ ಪಾನಮಾಡಿದಳು. ಇದರಿಂದ ಶಂಕರನಿಗೆ ಬಂದ ಕಷ್ಟವು ಪರಿಹಾರವಾಯಿತೆಂದು ಮತ್ಸ್ಯಪುರಾಣವು ಹೇಳುತ್ತದೆ. ಯಥಾ:

"ತತಸ್ಸ ಶಂಕರೋ ದೇವಸ್ತ್ವಂಧಕೈರಾಕುಲೀಕೃತಃ ।
ಜಗಾಮ ಶರಣಂ ದೇವೋ ವಾಸುದೇವಮಜಂ ವಿಭುಂ ॥
ತತಸ್ಸ ಭಗವಾನ್ವಿಷ್ಣುಃ ಸೃಷ್ಟವಾನ್ ಶುಷ್ಕರೇವತೀಂ ।
ಸಾ ಪಪೌ ಸಕಲಂ ತೇಷಾಮಂಧಕಾನಾಮಸೃಕ್ ಕ್ಷಣಾತ್ ॥" ಎಂದು.

ಹೀಗೆಯೇ ಭಸ್ಮಾಸುರ-ತ್ರಿಪುರಾಸುರ ಸಂಹಾರಕಾಲಗಳಲ್ಲಿಯೂ ಅವರಿಂದ ಪ್ರಾಪ್ತವಾದ ಕ್ಲೇಶಗಳನ್ನು ವಿಷ್ಣುವಿನ ಸಹಾಯದಿಂದಲೇ ದಾಟಿದನು.

ಹೀಗೆಯೇ ವಿಷ್ಣುವು ಮೋಹಿನೀ ಅವತಾರವನ್ನು ಮಾಡಿ ಅಸುರರ ವಶದಲ್ಲಿದ್ದ ಅಮೃತಕಲಶವನ್ನು ತೆಗೆದುಕೊಂಡು ಅಸುರರನ್ನು ಮೋಹಗೊಳಿಸಿ ದೇವತೆಗಳಿಗೆ ಹಂಚಿದ್ದು ತಿಳಿದ ವಿಷಯ. ನಾರದನೂ ಸಹ ಒಮ್ಮೆ ಅಹಂಕಾರದಿಂದ ತಾನೊಬ್ಬ ವಿಷ್ಣುಮಾಯೆಗೆ ಸಿಲುಕದವನು ಎಂದಿರಲು ಭಗವಂತನು ಆತನ ಗರ್ವನಿರಾಸಕ್ಕಾಗಿ ಹೆಂಗಸನ್ನಾಗಿ ಪರಿವರ್ತಿಸಿದನು. ಹೆಂಗಸಾದ ನಾರದನು ಅನೇಕ ಕ್ಲೇಶಗಳನ್ನು ಅನುಭವಿಸಿ ಪುನಃ ಭಗವತ್ಕೃಪೆಯಿಂದಲೇ ಸ್ವಸ್ವರೂಪವನ್ನು ಹೊಂದಿದ ಕಥೆಯು ಪುರಾಣದಲ್ಲಿ ನಿರೂಪಿತವಾಗಿದೆ.

'ವಿಷ್ಣುಮಾಯಾ' ಎನ್ನುವಾಗ ಮಾಯಾಶಬ್ದವು ಮಿಥ್ಯಾವಾದವನ್ನು ಬೋಧಿಸುವುದಿಲ್ಲವು. ಸತ್ಯವಾದ ವಿಚಿತ್ರ ಕರ್ಮವನ್ನು ಮಾಡುವಂತಹುದು ಎಂದು ಬೋಧಿಸುತ್ತದೆ. ಇದಕ್ಕೆ ಪ್ರಮಾಣವೇನಾದರೂ ಉಂಟೊ? ಎಂದರೆ ಭಗವದ್ರಾಮಾನುಜರು ಗೀತೆಯ ಸಪ್ತಮಾಧ್ಯಾಯದ ಹದಿಮೂರನೆಯ ಪದ್ಯದ ಭಾಷ್ಯದಲ್ಲಿ ಈ ಅರ್ಥವನ್ನು ವಿವರಿಸಿದ್ದಾರೆ. ಗೀತೆಯ ಪದ್ಯವು ಯಾವುದೆಂದರೆ: "ದೈವೀ ಹ್ಯೇಷಾ ಗುಣಮಯೀ ಮಮ ಮಾಯಾದುರತ್ಯಯಾ" ಇಲ್ಲಿ ಮಾಯಾ ಶಬ್ದದ ಅರ್ಥನಿರೂಪಣೆಗಾಗಿ ಶ್ರೀ ಪರಾಶರರ ವಿಷ್ಣುಪುರಾಣದ ಪದ್ಯಗಳನ್ನೇ ಉದಾಹರಿಸಿರುತ್ತಾರೆ. ಪ್ರಹ್ಲಾದಚರಿತ್ರೆಯಲ್ಲಿ ಶಂಬರಾಸುರನು ಪ್ರಹ್ಲಾದನನ್ನು ಮಾಯಾಸ್ತ್ರದಿಂದ ಬಂಧಿಸುವ ಸಂದರ್ಭ:

"ತತೋ ಭಗವತಾ ತಸ್ಯ ರಕ್ಷಾರ್ಥಂ ಚಕ್ರಮುತ್ತಮಂ।
ಆಜಗಾಮ ಸಮಾಜ್ಞಪ್ತಂ ಜ್ವಾಲಾಮಾಲಿಸುದರ್ಶನಂ॥
ತೇನ ಮಾಯಾ ಸಹಸ್ರಂ ತತ್ ಶಂಬರಸ್ಯಾಶುಗಾಮಿನಾ।
ಬಾಲಸರಕ್ಷತಾ ದೇಹಂ ಏಕೈಕಶ್ಯೇನ ಸೂದಿತಂ॥" ಇತ್ಯಾದಾ.

ಅತೋ ಮಾಯಾ ಶಬ್ದಃ ನಮಿಥ್ಯಾರ್ಥವಾಚೀ, ಐಂದ್ರಜಾಲಿಕಾದಿಷ್ವಪಿ ಕೇನಚಿನ್ಮಂತ್ರೌಷಧಾದಿನಾ ಮಿಥ್ಯಾರ್ಥ ವಿಷಯಾಯಾಃ ಪಾರಮಾರ್ಥಿಕ್ಯಾ ಏವ ಬುದ್ಧೇಃ. ಅಂದರೆ—ಶಂಬರಾಸುರನ ಸಾವಿರ ವಿಚಿತ್ರ ಕರ್ಮಗಳನ್ನು ಸುದರ್ಶನಚಕ್ರವು ಕ್ರಮವಾಗಿ ಒಂದೊಂದನ್ನಾಗಿ ಧ್ವಂಸಮಾಡಿತು. ಯಾವಾಗ ಸುದರ್ಶನ ಚಕ್ರವು ಧ್ವಂಸಮಾಡಿತೊ ಅದು ಸತ್ಯವಾಗಿಯೇ ಇರಬೇಕು. ಮಿಥ್ಯೆಯಾಗುವುದಿಲ್ಲವು. ಈ ಪ್ರಕೃತಿಗೂ ಮಾಯೆಯೆಂದೇ ಹೆಸರು. ಈ ಪ್ರಕೃತಿಯು ಭಗವಂತನಿಗೆ ಶೇಷಭೂತವಾಗಿ ಶರೀರವಾಗಿರುತ್ತೆ. ಇದೇ ಅಭಿಪ್ರಾಯವನ್ನು "ಮಾಯಾಂ ತು ಪ್ರಕೃತಿಂ ವಿದ್ಯಾತ್ ಮಾಯಿನಂ ತು ಮಹೇಶ್ವರಂ" ಅಂದರೆ "ಮಾಯೆಯನ್ನು ಪ್ರಕೃತಿ ಎಂದು ತಿಳಿ, ಮಾಯೆಯುಳ್ಳವನನ್ನು ಸರ್ವೇಶ್ವರನೆಂದು ತಿಳಿ." ಎಂದು ಶ್ವೇತಾಶ್ವತರ ಉಪನಿಷತ್ತು ಸಹ "ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್, ತಸ್ಮಿಂಶ್ಚಾನ್ಯೋ ಮಾಯಯಾ ಸನ್ನಿರುದ್ಧಃ" ಇಲ್ಲಿ ಮಾಯೆಯಿಂದ ಬದ್ಧನಾದವನು ಜೀವನೆಂದು ಹೇಳಿರುವುದರಿಂದ ವಿಚಿತ್ರಸೃಷ್ಟಿಗೆ ಕಾರಣವಾದ ಪ್ರಕೃತಿಯೇ ಹೇಳಲ್ಪಟ್ಟಿತೆಂದು ಸಿದ್ಧವಾಯಿತು. ಪ್ರಕೃತದ ವಿಷ್ಣುಪುರಾಣದ ಪದ್ಯದಲ್ಲಿ ಪ್ರಯುಕ್ತವಾದ "ವಿಷ್ಣುಮಾಯಾ" ಶಬ್ದಕ್ಕೂ, ವಿಷ್ಣುವು ನಡೆಸುತ್ತಿರುವ ವಿಚಿತ್ರಕರ್ಮದಲ್ಲಿ ಎಲ್ಲರೂ ಬದ್ಧರೆಂತಲೇ ತಾತ್ಪರ್ಯವು.

ವಚನ ವಿ.ಪು. ಪುಟ ೨೯೬, ಸಾಲು ೨೪

ಮೂಲ: ಕಲೌ ಜಗತ್ಪತಿಂ ವಿಷ್ಣುಂ ಸರ್ವಸ್ರಷ್ಟಾರಮೀಶ್ವರಂ।
ನಾರ್ಚಯಿಷ್ಯಂತಿ ಮೈತ್ರೇಯ ಪಾಷಂಡೋಪಹತಾ ಜನಾಃ॥

ವಿ.ಪು. ೬-೧-೫೦

ಮೈತ್ರೇಯರಿಗೆ ಶ್ರೀ ಪರಾಶರರು ಕಲಿಯುಗದ ಧರ್ಮಗಳನ್ನು ಹೇಳುತ್ತಿದ್ದಾರೆ. ಮೈತ್ರೇಯರೆ! ಕಲಿಯುಗದಲ್ಲಿ ಸರ್ವಸ್ರಷ್ಟಾವಾದ ವಿಷ್ಣುವನ್ನು ಪಾಷಂಡಿಗಳು ಆರಾಧಿಸುವುದಿಲ್ಲವು. ಪಾಷಂಡಿಗಳೆಂದರೆ ಅಸಚ್ಛಾಸ್ತ್ರವನ್ನು ಹೇಳುವ ವೇದಬಾಹ್ಯರು. ಇವರೇ ಬೌದ್ಧ, ಕಾಪಾಲಿಕ, ಕ್ಷಪಣಕ, ಚಾರ್ವಾಕಾದಿಗಳು—

ಇವರುಗಳು ವೇದವನ್ನು ಪ್ರಮಾಣವನ್ನಾಗಿ ಒಪ್ಪುವುದಿಲ್ಲ. ಇವರ ಸ್ವರೂಪವನ್ನು ವಿಷ್ಣುಪುರಾಣದ ಈ ಪದ್ಯದ ಮುಂದಿನ ಪದ್ಯವೇ (ವಿ.ಪು. ೬-೧-೫೧) ಸ್ಪಷ್ಟಪಡಿಸಿರುತ್ತದೆ—

"ಕಿಂ ದೇವೈಃ ಕಿಂ ದ್ವಿಜೈರ್ವೇದೈಃ ಕಿಂ ಶೌಚೇನಾಂಬುಜನ್ಮನಾ।
ಇತ್ಯೇವಂ ವಿಪ್ರವಕ್ಷ್ಯಂತಿ ಪಾಷಂಡೋಪಹತಾ ಜನಾಃ॥"

ಅಂದರೆ ದೇವತೆಗಳಿಂದೇನು? ಬ್ರಾಹ್ಮಣರಿಂದೇನು? ವೇದಗಳಿಂದೇನು? ತೀರ್ಥಗಳಲ್ಲಿ ಸ್ನಾನಮಾಡುವುದೇನು? ಹೀಗೆಲ್ಲಾ ಪಾಷಂಡಿಗಳು ಕುವಾದಗಳನ್ನು ಮಾಡುತ್ತಾರೆ.

ಕಲಿಕಾಲದಲ್ಲಿ ಮೇಲಿನ ಒಂದು ಗುಂಪು ವಿಷ್ಣುವಿನ ಆರಾಧನೆಯನ್ನು ದ್ವೇಷಿಸಿದರೂ ಮತ್ತೊಂದು ಗುಂಪು ವಿಷ್ಣುವನ್ನು ಆರಾಧಿಸುವವರು ಇರುವುದಾಗಿ ಶ್ರೀ ವೇದಾಂತದೇಶಿಕರು ತಮ್ಮ ರಹಸ್ಯತ್ರಯಸಾರದ ಗುರುಪರಂಪರಾಸಾರದಲ್ಲಿ ಶ್ರೀಮದ್ಭಾಗವತದ ಶ್ಲೋಕಗಳನ್ನು ಉದಾಹರಿಸಿರುತ್ತಾರೆ. ಯಥಾ ವಾ "ಇಪ್ಪಡಿತ್ತಾನ್ ಪ್ರವರ್ತಿಪ್ಪಿತ್ತ ಸತ್ಪಥತ್ತುಕ್ಕು ಪ್ರಕಟರಾಯುಂ ಪ್ರಚ್ಛನ್ನರಾಯುಂ ಇರುಂದುಳ್ಳ ಪಾಷಂಡಿಕಳಾಲ್ ಉಪರೋಧಂ ವಾರಾವೈಕ್ಕಾಕ "ಸಾಕ್ಷಾನ್ನಾರಾಯಣೋ ದೇವಃ ಕೃತ್ವಾ ಮರ್ತ್ಯಮಯೀಂ ತನುಂ। ಮಗ್ನಾನುದ್ಧರತೇ ಲೋಕಾನ್ ಕಾರುಣ್ಯಾಚ್ಛಾಸ್ತ್ರಪಾಣಿನಾ॥" "ಎನ್ರುಂ ಶೊಲ್ಲುಕಿರಪಡಿಯೇ, ಅಗಸ್ತ್ಯಸೇವಿತಮಾನ ದೇಶತ್ತಿಲೆ ಅನೇಕ ದೇಶಿಕಾಪದೇಶತ್ತಾಲೆ ಅವತರಿಪ್ಪಿತ್ತರುಳಿನಾನ್. ಇತ್ತೈಕ್ಕಣಿಶಿತ್ತು ಮಹರ್ಷಿಯುಂ" ಅಂದರೆ ತನ್ನ ಆಜ್ಞಾರೂಪವಾದ ಶಾಸ್ತ್ರಗಳನ್ನು ರಚಿಸಿ ಪಾಷಂಡಿಗಳಿಂದ ವಿಘ್ನ ಬರದಿರುವುದಕ್ಕಾಗಿ ತಾನೇ ಮನುಷ್ಯಶರೀರವನ್ನು ಧರಿಸಿ ಅಜ್ಞಾನಸಮುದ್ರದಲ್ಲಿ ಮುಳುಗಿರುವ ಚೇತನರನ್ನು ಕಾಪಾಡಲು ಅಗಸ್ತ್ಯಮುನಿಗಳಿಂದ ಅಂಕಿತವಾದ ದಿಕ್ಕಿನಲ್ಲಿ (ದಕ್ಷಿಣ ದಿಕ್ಕಿನಲ್ಲಿ) ಅವತರಿಸಿದನು. ಎಲ್ಲಿ ಅವತರಿಸಿದನು ಎಂಬುವುದಕ್ಕೆ ಭಾಗವತದ ಶ್ಲೋಕಗಳನ್ನು ಉದಾಹರಿಸಿರುತ್ತಾರೆ. ಯಥಾ:

"ಕಲೌ ಖಲು ಭವಿಷ್ಯಂತಿ ನಾರಾಯಣಪರಾಯಣಾಃ।
ಕ್ವಚಿತ್ಕ್ವಚಿನ್ಮಹಾಭಾಗಾಃ ದ್ರಮಿಡೇಷು ಚ ಭೂರಿಶಃ॥
ತಾಮ್ರಪರ್ಣೀ ನದೀ ಯತ್ರ ಕೃತಮಾಲಾಪಯಸ್ವಿನೀ।
ಕಾವೇರೀ ಚ ಮಹಾಭಾಗಾ ಪ್ರತೀಚೀ ಚ ಮಹಾನದೀ॥" ಎಂದು.

"ನಾರಾಯಣನ ಭಕ್ತರು ಭಾರತಭೂಮಿಯ ಕೆಲವು ಸ್ಥಳಗಳಲ್ಲಿಯೂ, ದ್ರಾವಿಡ

ದೇಶದಲ್ಲಿ ಹೆಚ್ಚಾಗಿಯೂ ಇರುವರು. ಎಲ್ಲಿ ತಾಮ್ರಪರ್ಣೀ, ಕಾವೇರಿ, ಪ್ರತೀಚೀ ಮುಂತಾದ ಪುಣ್ಯನದಿಗಳ ಪರಿಸರದಲ್ಲಿ ಶಠಗೋಪರ್, ವಿಷ್ಣುಚಿತ್ತರ್, ಭಕ್ತಾಂಘ್ರಿರೇಣುಪಾಣರ್ ಮೊದಲಾದ ಆಳ್ವಾರ್ರುಗಳ ರೂಪದಲ್ಲಿ ಅವತರಿಸಿದನು." ಪಾಷಂಡಿಗಳಿಂದ ವಿಘ್ನಪರಂಪರೆ ಒದಗಿದರೂ ಆಳ್ವಾರ್ರುಗಳಿಂದಲೂ, ಆಚಾರ್ಯಪರಂಪರೆಯಿಂದಲೂ ಶ್ರುತಿಸ್ಮೃತೀತಿಹಾಸ ಪುರಾಣಗಳು ಇಲ್ಲಿಯವರೆಗೆ ಜೀವಂತವಾಗಿ ಉಳಿದುಕೊಂಡಿರುತ್ತವೆ.

ವಚನ ವಿ.ಪು. ೨೯೮, ಸಾಲು ೪

ಮೂಲ: ಧ್ಯಾಯನ್ಕೃತೇ ಯಜನ್ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್ ।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಂ ॥ ವಿ.ಪು. ೬-೨-೧೭

ಈ ಪದ್ಯದಲ್ಲಿ ಅಧರ್ಮಭೂಯಿಷ್ಠವಾದ ಕಲಿಯುಗದಲ್ಲಿ ಭಗವನ್ನಾಮ ಸಂಕೀರ್ತನದಿಂದಲೇ ಮನುಷ್ಯನು ಉತ್ತಮ ಗತಿಯನ್ನು ಪಡೆಯಬಹುದೆಂದು ಮಹರ್ಷಿಗಳು ಸೂಚಿಸಿರುತ್ತಾರೆ. ಕೃತಯುಗದಲ್ಲಿ ಮನುಷ್ಯನಿಗೆ ಚಿತ್ತಶುದ್ಧಿ ಇದ್ದ ಕಾರಣ ಕೇವಲ ಭಗವದ್ಧ್ಯಾನದಿಂದಲೇ ಮನುಷ್ಯನು ಉತ್ತಮಗತಿಯನ್ನು ಕಾಣುತ್ತಿದ್ದನು. ತ್ರೇತಾಯುಗದಲ್ಲಿ ಧ್ಯಾನದ ಬಲ ಕಡಿಮೆಯಾಗಿ ಚಿತ್ತಶುದ್ಧಿಯಿಂದ ಮಾಡಿದ ಯಜ್ಞಗಳಿಂದ ಅದೇ ಫಲವನ್ನು ಪಡೆಯುತ್ತಿದ್ದನು. ದ್ವಾಪರದಲ್ಲಿ ಧ್ಯಾನಬಲವೂ ಯಜ್ಞದ ಬಲವೂ ಕುಗ್ಗಿ ಆಚಾರ ಶುದ್ಧಿಯಿಂದ ಮಾಡಿದ ಭಗವದರ್ಚನೆಯಿಂದ ಅದೇ ಫಲವನ್ನು ಪಡೆಯುತ್ತಿದ್ದನು. "ಸಂಧ್ಯಾಹೀನೋಶುಚಿರ್ನಿತ್ಯಮನರ್ಹಸ್ಸರ್ವಕರ್ಮಸು" ಎಂಬ ಮಾತಿನಂತೆ ಕಲಿಯುಗದಲ್ಲಿ ಧ್ಯಾನದ ಬಲ-ಯಜ್ಞದಬಲ-ಅರ್ಚನೆಯ ಬಲ ಇವು ಮೂರು ಇಲ್ಲ. ಆದರೂ ಕಲಿಯುಗದಲ್ಲಿ ಒಂದರ ಬಲವಿದೆ. ಅದು ಭಗವನ್ನಾಮಸಂಕೀರ್ತನೆ. ಆದ್ದರಿಂದ ಮೊದಲ ಮೂರು ಯುಗಗಳಲ್ಲಿ ಧ್ಯಾನಾದಿಗಳಿಂದ ಕಾಣುತ್ತಿದ್ದ ಫಲವನ್ನು ಕಲಿಯಲ್ಲಿ ಕೀರ್ತನೆಯಿಂದ ಕಾಣುವುದು ಕಲಿಯುಗದ ವೈಶಿಷ್ಟ್ಯ. ಆದ್ದರಿಂದ ಕಲಿಯುಗದಲ್ಲಿ ಜನ್ಮ ಪಡೆದವರು ಧನ್ಯರು. "ಅಲ್ಪಕೋ ಧರ್ಮೋ ದದಾತಿ ಸುಮಹತ್ಫಲಂ" ಕೀರ್ತನ ಎಂಬ ಅಲ್ಪಧರ್ಮಾನುಷ್ಠಾನದಿಂದ ಕಲಿಯು ಮಹತ್ಫಲವನ್ನು ಕೊಡುತ್ತದೆ. ಈ ವಿಷಯದಲ್ಲಿ ಮುನಿಗಳಲ್ಲೆ ಪರಸ್ಪರ ವಾದವು ಪ್ರಾರಂಭವಾಗಿ ಇದರ ನಿರ್ಣಯಕ್ಕಾಗಿ ಗಂಗಾನದಿಯಲ್ಲಿ ಸ್ನಾನನಿರತರಾದ ವ್ಯಾಸಮುನೀಶ್ವರರ ಬಳಿಗೆ ಬಂದರು. ಸರ್ವಜ್ಞರಾದ ವ್ಯಾಸರು ಮುನಿಗಳ ವಾದವನ್ನು ತಮ್ಮ ದಿವ್ಯದೃಷ್ಟಿಯಿಂದ ಗಮನಿಸಿ ಸ್ನಾನಮಾಡಿ ಮೇಲಕ್ಕೆ ಬಂದು ತಮ್ಮ ನಿರ್ಣಯವನ್ನು ತಿಳಿಸಿದರು.

"ದ್ವಿಜಶುಶ್ರೂಷಯೈವೈಷ ಪಾಕಯಜ್ಞಾಧಿಕಾರವಾನ್ ।
ನಿಜಾಂ ಜಯತಿ ವೈ ಲೋಕಾನ್ ಶೂದ್ರೋ ಧನ್ಯತರಸ್ತತಃ ॥
ಯೋಷಿಚ್ಛುಶ್ರೂಷಣಾದ್ಭರ್ತುಃ ಕರ್ಮಣಾ ಮನಸಾ ಗಿರಾ ।
ತದ್ಧಿತಾ ಶುಭಮಾಪ್ನೋತಿ ತತ್ಸಾಲೋಕ್ಯಂ ಯತೋ ದ್ವಿಜಃ ॥

ಎಂದು ಬ್ರಾಹ್ಮಣನು ನಿತ್ಯನೈಮಿತ್ತಿಕ ಕರ್ಮಾನುಷ್ಠಾನದಿಂದ ಪಡೆಯುವ ಫಲವನ್ನು ಶೂದ್ರನು ದ್ವಿಜಸೇವೆಯಿಂದಲೇ ಹೊಂದುವವನಾದ್ದರಿಂದ ಬ್ರಾಹ್ಮಣ-ಕ್ಷತ್ರಿಯ-ವೈಶ್ಯರಿಗಿಂತ ಧನ್ಯನು. ಅದರಂತೆ ಸ್ತ್ರೀಯೂ ಸಹ ತ್ರಿಕರಣಶುದ್ಧಿಯಿಂದ ಅಗ್ನಿಸಾಕ್ಷಿಕವಾಗಿ ಕೈಹಿಡಿದ ಪತಿಯನ್ನು ಸೇವೆಮಾಡುವುದರಿಂದ ಶುಭವನ್ನು ಹೊಂದುವಳು. ಆಕೆಯೂ ಕಲಿಯಲ್ಲಿ ಧನ್ಯಳು. "ಭರ್ತೃಶುಶ್ರೂಷಯಾ ನಾರೀ ಲಭತೇ ಸ್ವರ್ಗ ಮುತ್ತಮಂ" ಎಂದು ವಾಲ್ಮೀಕಿ ಮಹರ್ಷಿಯೂ ಹೇಳಿರುತ್ತಾರೆ. ಶೂದ್ರನು ಅಲ್ಪಾಯಾಸದಿಂದಲೇ ಬ್ರಾಹ್ಮಣನು ಹೊಂದುವ ಮುಕ್ತಿಯನ್ನು ಪಡೆಯುತ್ತಾನೆಂದು ಹೇಳಿರುವುದರಿಂದ ಜಾತಿಯೂ ಪ್ರವೃತ್ತಿಯೂ ವ್ಯವಸ್ಥಿತವಾಗಿ ನಿರ್ಣಯಿಸಿರುವುದರಿಂದ ಅದನ್ನು ಬದಲಿಸಲು ಸಾಧ್ಯವಿಲ್ಲ. ಹೀಗಿರಲು ಕಲಿಯುಗದಲ್ಲಿ ಶೂದ್ರನು ಬ್ರಾಹ್ಮಣನಂತೆ ನಡೆಯಬೇಕೆಂದು ಯತ್ನಿಸಿ ಭಗವನ್ನಿಗ್ರಹಕ್ಕೆ ಏಕೆ ಗುರಿಯಾಗುತ್ತಾನೋ ತಿಳಿಯದು. ಇದರಂತೆಯೇ ಅಲ್ಪಾಯಾಸದಿಂದ (ಭಗವತ್ಕೀರ್ತನದಿಂದ) ಮಹತ್ತರವಾದ ಫಲವು ದೊರೆಯುವುದೆಂದು ಬ್ರಾಹ್ಮಣನು ತನ್ನ ನಿತ್ಯಕರ್ಮವನ್ನು ತ್ಯಾಗಮಾಡಿ ಶೂದ್ರನಂತೆ ಪ್ರವರ್ತಿಸಿದರೆ ಇವನಿಗೂ ಭಗವನ್ನಿಗ್ರಹವು ತಪ್ಪದು. "ಸ್ವಧರ್ಮೇ ನಿಧನಂ ಶ್ರೇಯಃ," ಸ್ವೇ ಕರ್ಮಣ್ಯಭಿರತಃ", "ನಿಯತಂ ಕುರು ಕರ್ಮತ್ವಂ" ಎಂದು ಸ್ಪಷ್ಟವಾಗಿ ಭಗವದ್ವಾಣಿ ಇದ್ದರೂ ಸ್ವಧರ್ಮಪರಿತ್ಯಾಗದಿಂದ ಭಗವನ್ನಿಗ್ರಹಕ್ಕೆ ಗುರಿಯಾಗುವನೆಂದೂ ತಿಳಿಯುತಕ್ಕದ್ದು.

ಕಲಿಯುಗದಲ್ಲಿ ಅಧರ್ಮವೇ ಧರ್ಮವಾಗಿ ಅದು ಅನೇಕ ದೋಷಗಳಿಂದ ಕೂಡಿರುತ್ತದೆ. ಆದರೂ ಕಲಿಯಲ್ಲಿ ಒಂದು ದೊಡ್ಡ ಗುಣವುಂಟು. ಉಪಾಸನಾದಿ ಉಪಾಯಗಳೊಂದೂ ಇಲ್ಲದೆ ಬರೀ ನಾಮಸಂಕೀರ್ತನದಿಂದಲೇ ಪರಮಪದವನ್ನು ಹೊಂದಬಹುದೆಂದು ಮೇಲಿನ ಶ್ಲೋಕದ ಅಭಿಪ್ರಾಯವಾಗಿರುತ್ತೆ. ಇದೇ ಪುರಾಣದಲ್ಲಿ ಮಹರ್ಷಿಯು "ಅತ್ಯಂತ ದುಷ್ಟಸ್ಯ ಕಲೇಃ ಅಯಮೇಕೋ ಮಹಾನ್ಗುಣಃ" (ವಿ.ಪು. ೬-೨-೩೯), "ಸ್ವಲ್ಪೇನ ಹಿ ಪ್ರಯತ್ನೇನ ಧರ್ಮಸ್ಸಿಧ್ಯತಿ ವೈ ಕಲೌ" (ವಿ.ಪು. ೬-೨-೩೪) ಎಂಬುದಾಗಿ ಕಲಿಯುಗಕ್ಕೆ ಈ ದೊಡ್ಡ ಗುಣ ಉಂಟೆಂದು ಸ್ಪಷ್ಟಪಡಿಸಿರುತ್ತಾರೆ. ಈ ಪೂರ್ವಪಕ್ಷಿಯು ಕೇಳುತ್ತಾನೆ. ಕಲಿಯುಗದಲ್ಲಿ ನಾಮ

ಸಂಕೀರ್ತನವೇ ಉಚಿತವಾದ ಉಪಾಯವೆಂದು ಹೇಳಿದಂತಾಯಿತು. ಉಪಾಸನೆಗೆ ಅಧಿಕಾರಿಗಳೇ ಇಲ್ಲವೆಂತಲೂ ಹೇಳಿದಂತಾಯಿತು. ಆದ್ದರಿಂದ ಭಗವದುಪಾಸನೆಯು ಕಲಿಯುಗದಲ್ಲಿ ಅನವಶ್ಯಕ. ಎಂದರೆ ಇದಕ್ಕೆ ಉತ್ತರವಾಗಿ ವಿಷ್ಣುಧರ್ಮದ ಪದ್ಯವು ಸ್ಪಷ್ಟಪಡಿಸಿರುತ್ತೆ. "ಕಲೌ ಕೃತಯುಗಂ ತಸ್ಯ ಕಲಿಸ್ತಸ್ಯ ಕೃತೇಯುಗೇ। ಯಸ್ಯ ಚೇತಸಿ ಗೋವಿಂದೋ ಹೃದಯೇ ಯಸ್ಯ ನಾಚ್ಯುತಃ॥" ಅಂದರೆ ಯಾವ ಅಧಿಕಾರಿಯ ಹೃದಯದಲ್ಲಿ ಸದಾ ಗೋವಿಂದಧ್ಯಾನವು ಇರುವುದೋ ಅವನಿಗೆ ಕಲಿಯೂ ಕೃತಯುಗವಾಗುವುದು. ಯಾವನ ಹೃದಯದಲ್ಲಿ ಅಚ್ಯುತನಿಲ್ಲವೊ ಅವನಿಗೆ ಕೃತಯುಗವೊ ಕಲಿಯುಗವಾಗುವುದು. ಆದ್ದರಿಂದ ಕಲಿಯುಗದಲ್ಲಿ ಉಪಾಸನೆಯು ಇಲ್ಲವೆಂದು ಹೇಳಲಾಗುವುದಿಲ್ಲ. ಈಗಲೂ ಉಪಾಸಕರು ಇದ್ದಾರೆ. ಅವರು ಸನ್ಮಾನಕ್ಕೆ ಅರ್ಹರೆ.

ಇಲ್ಲಿ ಮತ್ತೊಂದು ಸಂದೇಹ. ಕೇಶವನ ಕೀರ್ತನೆಯಿಂದಲೇ ಪರಮಪದವು ದೊರೆಯುವುದಾದರೆ ಪ್ರಪದನಾದಿ ಉಪಾಯಾಂತರಗಳು ಅನವಶ್ಯಕವಲ್ಲವೆ ? ಎಂದು. ಆದರೆ "ಕಲೌ ಸಂಕೀರ್ತ್ಯ ಕೇಶವಂ" ಎಂಬ ಪ್ರಯೋಗವು ಕೇಶವನ ಕೀರ್ತನದಿಂದಲೇ ಪರಮಪದವು ದೊರೆಯುವುದೆಂದು ನಿರ್ಣಯವಾಗಿ ಹೇಳಿದ್ದರೆ ಉಪಾಯಾಂತರಗಳನ್ನು ತ್ಯಾಗಮಾಡಬಹುದು. ಯುಗಾಂತರಗಳಲ್ಲಿ ಧ್ಯಾನಾದಿಗಳಿಂದ ಬರುವ ಫಲವು ಕಲಿಯಲ್ಲಿ ಕೀರ್ತನದಿಂದ ಬರುವುದಾಗಿ ತಿಳಿಸಿರುತ್ತೆ. ಕೀರ್ತನದಿಂದ ಬಂಧಮುಕ್ತಿಯು ಆಗಬಹುದು. ಪರಮಪದಕ್ಕೆ ಇದು ನೇರವಾದ ಉಪಾಯವೆಂದು ಸ್ಪಷ್ಟತೆ ಇಲ್ಲ. "ಪ್ರಪನ್ನಾದನ್ಯೇಷಾಂ ನ ದಿಶತಿ ಮುಕುಂದೋ ನಿಜಪದಂ" ಎಂಬುವ ನಿರ್ಣಯವನ್ನು ಪೂರ್ವಾಚಾರ್ಯರೆಲ್ಲರೂ ಒಪ್ಪಿರುವುದರಿಂದ ಪ್ರಪದನಾದಿ ಉಪಾಯಗಳು ಅವಶ್ಯ ಬೇಕು. ಕೇಶವನ ಕೀರ್ತನೆಯು ಇಂತಹ ಉಪಾಯಗಳಿಗೆ ಸಹಕಾರಿಯಾಗಿ ಶೀಘ್ರಫಲದಾಯಕವಾಗುವುದೆಂದು ತಿಳಿಯುವುದು ಸಾಧುವಾಗಿ ತೋರುತ್ತೆ.

ವಚನ ವಿ.ಪು. ಪುಟ ೩೦೫, ಸಾಲು ೫

ಮೂಲ : ಯದ್ಯತ್ಪ್ರೀತಿಕರಂ ಪುಂಸಾಂ ವಸ್ತು ಮೈತ್ರೇಯ ಜಾಯತೇ।
ತದೇವ ದುಃಖವೃಕ್ಷಸ್ಯ ಬೀಜತ್ವಮುಪಗಚ್ಛತಿ॥ ವಿ.ಪು. ೬-೫-೫೫

ಪುತ್ರ-ಕಳತ್ರ-ಧನ ಇವುಗಳೆಲ್ಲವೂ ಮನುಷ್ಯನಿಗೆ ಪ್ರೀತಿಕರವಾದುವುಗಳು. ಹಾಗೆಯೇ ಪ್ರಕೃತಿಭೋಗವೂ, ಪುರುಷಭೋಗವೂ ಪ್ರೀತಿಕರವಾದುವುಗಳು. ಆದರೆ ಮನುಷ್ಯನಿಗೆ ಯಾವುದು ಯಾವುದು ಪ್ರೀತಿಕರವೊ ಅವೆಲ್ಲವೂ ದುಃಖಕ್ಕೆ ಕಾರಣಗಳಾಗುತ್ತದೆ. "ಯಾವತಃ ಕುರುತೇ ಜಂತುಃ ಮನಸಃ ಪ್ರಿಯಾನ್।

ತಾವಂ ತೋಸ್ಯ ನಿಖನ್ಯಂತೇ ಹೃದಯೇ ಶೋಕಶಂಕವಃ" ಎಂಬಂತೆ ಯಾವ ವಸ್ತುವಿನಲ್ಲಿ ನಾವು ಅತಿಪ್ರೀತಿಯನ್ನು ತೋರಿಸುತ್ತೇವೋ, ಅವುಗಳೇನೇ ನಮ್ಮ ಹೃದಯದಲ್ಲಿ ಶೋಕದ ಮೊಳೆಗಳಂತೆ ಚುಚ್ಚಿಕೊಳ್ಳುತ್ತವೆ. "ಅತಿ ಸರ್ವತ್ರ ವರ್ಜಯೇತ್" ಎಂದು ಹಿರಿಯರು ಹೇಳುತ್ತಾರೆ.

ವೇದವು ಕರ್ಮಭಾಗದಲ್ಲಿ ಯಜ್ಞಯಾಗಾದಿಗಳನ್ನನುಷ್ಠಿಸಿ ಗೃಹ-ಧನ-ಪುತ್ರರನ್ನು ಪಡೆಯಬಹುದಾಗಿ ಹೇಳುತ್ತದೆ. ಅದು ತತ್ಕಾಲದಲ್ಲಿ ಸುಖವಾಗಿ ತೋರುತ್ತೆ. ಆದರೆ ಪರಿಣಾಮದಲ್ಲಿ ದುಃಖವೆಂಬ ವೃಕ್ಷವು ಬೆಳೆಯಲು ಬೀಜದಂತಾಗುತ್ತೆ. ಅದೇ ವೇದದಲ್ಲಿ ಆಮುಷ್ಮಿಕವಾದ ಬ್ರಹ್ಮೇಂದ್ರಾದಿಲೋಕಪ್ರಾಪ್ತಿಗಾಗಿ ಕೆಲವು ಕರ್ಮಗಳು ನಿರೂಪಿತವಾಗಿದೆ. ಈ ಬ್ರಹ್ಮೇಂದ್ರಾದಿಲೋಕಗಳು ಭೂಮಿಯಲ್ಲಿನ ಸುಖಕ್ಕಿಂತ ವಿಲಕ್ಷಣವಾಗಿ ತೋರುತ್ತೆ. ಸುಖಕರಗಳಾಗಿಯೂ ತೋರುತ್ತೆ. ಇದು ಸಾರವತ್ತಾದ ಭಾಗವಾಗಿ ಕಂಡರೂ ದುಃಖಮೂಲತ್ವದೋಷದಿಂದ ಕೂಡಿ ನಿಂದ್ಯವಾಗಿ ಕಾಣುತ್ತೆ. ಆದ್ದರಿಂದ ಈ ಲೋಕಗಳೂ ಗ್ರಾಹ್ಯವಲ್ಲವು. ಅಲ್ಲದೆ ಈ ಲೋಕಗಳನ್ನು ಪಡೆಯಲು ಕ್ಲೇಶಕರವಾದ ಯಜ್ಞಯಾಗಾದಿಗಳನ್ನು ಅನುಷ್ಠಿಸಬೇಕು. ಒಂದುವೇಳೆ ಈ ಲೋಕಗಳು ಪ್ರಾಪ್ತವಾದರೂ "ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಎಂಬಂತೆ ಪುಣ್ಯವು ಕ್ಷಯಿಸಿದಮೇಲೆ ಭೂಲೋಕಕ್ಕೇ ಪುನಃ ಬರಬೇಕಾಗುತ್ತದೆ. ಗೀತೆಯಲ್ಲೇ ಹೇಳಿರುತ್ತೆ "ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ" ಎಂದು. ಬ್ರಹ್ಮಲೋಕಾದಿಗಳನ್ನು ಹೊಂದಿದರೂ ಪುನಃ ಆವೃತ್ತಿಯುಂಟು. ವೈಕುಂಠಲೋಕಕ್ಕೆ ಮಾತ್ರ ಪುನರಾವೃತ್ತಿ ಇಲ್ಲ. ಆದ್ದರಿಂದ ಬ್ರಹ್ಮೇಂದ್ರಾದಿ ಲೋಕಗಳೆಲ್ಲವೂ ದುಃಖಮೂಲತ್ವ-ಅಸ್ಥಿರತ್ವ ಮುಂತಾದ ದೋಷಾದಿಗಳಿಂದ ಕೂಡಿರುತ್ತೆ. ವಿಷ್ಣುಪುರಾಣದ ೬-೫-೫೦ನೇ ಪದ್ಯವು "ಸ್ವರ್ಗೇಽಪಿ ಪಾತಭೀತಸ್ಯ ಕ್ಷಯಿಷ್ಣೋರ್ನಾಸ್ತಿ ನಿರ್ವೃತಿಃ" ಅಂದರೆ ಸ್ವರ್ಗಲೋಕದ ವಾಸವು ಮುಗಿದು ಎಲ್ಲಿ ಮನುಷ್ಯಲೋಕಕ್ಕೆ ಬೀಳುತ್ತೇನೊ ಎಂಬ ಭಯವಿರುವುದರಿಂದ ಅಲ್ಲಿಯೂ ಸುಖವಿಲ್ಲವೆಂತಲೇ ಹೇಳಿದಂತಾಯಿತು.

ಹೀಗೆ ಪ್ರಕೃತಿ ಭೋಗಪ್ರಾಪಕಾಂಶವಾದ ಇಹಲೋಕ ಮತ್ತು ಸ್ವರ್ಗ. ಬ್ರಹ್ಮಲೋಕಪ್ರಾಪಕವಾದ ಶ್ರುತಿಯ ಭಾಗಗಳೂ ಪಥ್ಯವಲ್ಲ. ಪುರುಷಭೋಗಪ್ರಾಪಕಾಂಶವಾದ ಅಂದರೆ ಆತ್ಮಾನುಭವರೂಪವಾದ ಕೈವಲ್ಯ ಭಾಗವೂ ಪಥ್ಯವಲ್ಲ. ಶ್ರುತಿಗೆ ವಿರುದ್ಧವಾದ ನಿತ್ಯನೈಮಿತ್ತಿಕಾದ ವರ್ಣಾಶ್ರಮಧರ್ಮಗಳ ಅನುಷ್ಠಾನವೂ ವಿಷಕ್ಕೆ ಸಮಾನಗಳು. ಮುಮುಕ್ಷುವಿಗೆ ಇವುಗಳಿಂದ ಏನೂ ಪ್ರಯೋಜನವಿಲ್ಲವು. ಶ್ರುತಿಗೆ ವಿಪರೀತಾರ್ಥವನ್ನು ಹೇಳಿ ಚಿತ್ತಭ್ರಮವನ್ನುಂಟುಮಾಡುವ ಕುದೃಷ್ಟಿಗಳ ಸಿದ್ಧಾಂತವು ಮತ್ತೂ ಅಪಾಯಕರ. "ಬಿಭೇತ್ಯಲ್ಪಶ್ರುತಾದ್ವೇದೋ ಮಾಮಯಂ

ಪ್ರತಿರಿಷ್ಯತಿ” ಎಂದು ಬುದ್ಧಿಭೇದವನ್ನುಂಟುಮಾಡುವವರಾದ ಅಲ್ಪಜ್ಞರಿಂದ ವೇದವೇ ಹೆದರುತ್ತದೆ. ಅಲ್ಲದೆ ವೇದದಲ್ಲಿ ಹೇಳಿರುವ ಎಲ್ಲಾ ಕರ್ಮಗಳೂ ಉಪಾದೇಯವೆ? ಅನ್ನುವುದನ್ನು ಧರ್ಮಜ್ಞರಿಂದ ತಿಳಿದು ಅದನ್ನೇ ಅನುಷ್ಠಾನ ಮಾಡಬೇಕು. “ಧರ್ಮಜ್ಞಸಮಯಃ ಪ್ರಮಾಣಂ ವೇದಾಶ್ಚ” ಮೊದಲನೆಯ ಧರ್ಮಜ್ಞರ ನಿರ್ಣಯವೇ ಪ್ರಮಾಣ, ಎರಡನೆಯದು ವೇದಪ್ರಮಾಣ. ಧರ್ಮ ಶಾಸ್ತ್ರಕಾರರೂ ಸಹ—

> “ಧರ್ಮಶಾಸ್ತ್ರರಥಾರೂಢಾಃ ವೇದಖಡ್ಗಧರಾದ್ವಿಜಾಃ ।
> ಕ್ರೀಡಾರ್ಥಮಪಿ ಯದ್ಬ್ರೂಯುಃ ತದ್ಧರ್ಮೋ ವೇದನೇತರಃ ॥”

ಎಂದು ಧರ್ಮಜ್ಞರ ಪ್ರಮಾಣವೇ ಉತ್ತಮ ಪ್ರಮಾಣವೆಂದು ತೋರಿಸಿರುತ್ತಾರೆ. ಉಪನಿಷತ್ತು ಸಹ “ಯೇ ತತ್ರ ಬ್ರಾಹ್ಮಣಾಸ್ಸಂಮರಶಿನಃ। ಯುಕ್ತಾಯುಕ್ತಾಃ। ಅಲೂಕ್ಷಾಧರ್ಮಕಾಮಾಸ್ಯುಃ। ಯಥಾ ತೇ ತತ್ರ ವರ್ತೇರನ್। ತಥಾ ತತ್ರ ವರ್ತೇಥಾಃ।’ ಎಂದು ಅನುಶಾಸನಮಾಡಿ ಮಹಾಜನರು ಹಿಡಿದ ದಾರಿಯನ್ನು ಅನುಸರಿಸು. ಅದೇ ಶ್ರೇಯಸ್ಕರವಾದ ಮಾರ್ಗವೆಂದು ಘೋಷಿಸಿರುತ್ತೆ.

ಈ ಮೇಲಿನ ಎಲ್ಲಾ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಶ್ರೀ ವೇದಾಂತ ದೇಶಿಕರು ತಮ್ಮ ರಹಸ್ಯತ್ರಯಸಾರದ “ಸಾರನಿಷ್ಕರ್ಷಾಧಿಕಾರ”ದಲ್ಲಿ ಕೃಪಯಾ ಈ ರೀತಿ ಅಪ್ಪಣೆ ಕೊಟ್ಟಿರುತ್ತಾರೆ: “ಶ್ರುತಿಪಥವಿಪರೀತಂ ಕ್ಷ್ವೇಳಕಲ್ಪಂ ಶ್ರುತೌ ಚ ಪ್ರಕೃತಿಪುರುಷಭೋಗಪ್ರಾಪಕಾಂಶೋ ನ ಪಥ್ಯಃ। ತದಿಹ ವಿಬುಧಗುಪ್ತಂ ಮೃತ್ಯುಭೀತಾ ವಿಚಿನ್ವಂತ್ಯುಪನಿಷದಮೃತಾಬ್ಧೇರುತ್ತಮಂ ಸಾರಮಾರ್ಯಾಃ ॥” ಎಂದು. ಈ ಪದ್ಯದ ಪೂರ್ವಾರ್ಧದ ತಾತ್ಪರ್ಯವು ಮೇಲೆಯೇ ವಿವರಿಸಿರುತ್ತೆ. ಮನುಷ್ಯನಿಗೆ ಈ ಲೋಕದ ಭೋಗಗಳು ದುಃಖಮೂಲವಾಗಿ ಅವು ಪರಿಗ್ರಾಹ್ಯವಲ್ಲ. ಪ್ರಾರಂಭದಲ್ಲಿ ಸುಖಕರವಾದರೂ ಅಂತ್ಯದಲ್ಲಿ ದುಃಖವನ್ನುಂಟುಮಾಡುತ್ತವೆ. ಅದು ಹಿತಕರವೆಂದು ಪರಿಗ್ರಹಿಸಿದರೆ “ತದೇವ ದುಃಖವೃಕ್ಷಸ್ಯ ಬೀಜಂ” ಎಂದು ಶ್ರೀ ಪರಾಶರರು ನಮ್ಮನ್ನು ಎಚ್ಚರಿಸಿರುತ್ತಾರೆ. ಹಾಗಾದರೆ ಯಾವುದು ಮನುಷ್ಯನಿಗೆ ಪ್ರೀತಿಕರವಾದುದು? ಅಂದರೆ, ಪೂರ್ವಾಚಾರ್ಯರು ಉಪನಿಷತ್ತುಗಳೆಂಬ ಅಮೃತಸಮುದ್ರದಲ್ಲಿ ವಿಹಾರಮಾಡಿ ಭಗವಂತನಲ್ಲಿ ಶರಣಾಗತಿಮಾಡುವುದೇ ಸಾರತಮವಾದ ಧರ್ಮವೆಂದು ಉಪದೇಶಿಸಿರುತ್ತಾರೆಂದು ಮೇಲಿನ ರಹಸ್ಯತ್ರಯಸಾರದ ಉತ್ತರಾರ್ಧವು ನಿರ್ಣಯಿಸಿರುತ್ತೆ. ಆದ್ದರಿಂದ ಪ್ರೀತಿಕರವಾಗಿ ಕಾಣುವ ಐಹಿಕಾದಿಭೋಗಗಳು ದುಃಖಮೂಲವಾಗಿ ಪರಿತ್ಯಾಜ್ಯವೆಂದು ಶ್ರೀ ಪರಾಶರರು ಮೈತ್ರೇಯರಿಗೆ ಉಪದೇಶಿಸಿರುತ್ತಾರೆ.

ವಚನ ವಿ.ಪು. ಪುಟ ೩೦೬, ಸಾಲು ೨೭

ಮೂಲ : ಸಂಜ್ಞಾಯತೇ ಯೇನತದಸ್ತದೋಷಂ ಶುದ್ಧಂ ಪರಂ ನಿರ್ಮಲಮೇಕರೂಪಂ ।
ಸಂದೃಶ್ಯತೇ ವಾಪ್ಯಧಿಗಮ್ಯತೇ ವಾ ತಜ್ಞಾನಮಜ್ಞಾನಮತೋನ್ಯದುಕ್ತಂ ॥
ವಿ.ಪು. ೬-೫-೮೭

ಸಂದರ್ಭ : ಕೇಶಿಧ್ವಜನ ಖಾಂಡಿಕ್ಯ ಜನಕನಿಗೆ ವಾಸುದೇವ ಶಬ್ದಾರ್ಥವನ್ನು ವಿವರಿಸಿರುವ ರೀತಿ. ಆ ವಾಸುದೇವನು ಯಾರು? ಎಂಬ ಜ್ಞಾನವನ್ನು ಸಂಪಾದಿಸುವುದೇ ಸರಿಯಾದ ಜ್ಞಾನವು. ಮಿಕ್ಕ ಎಲ್ಲವೂ ಅಜ್ಞಾನವು ಎಂದು ಈ ಪದ್ಯದಲ್ಲಿ ತಿಳಿಸುತ್ತಾರೆ. ಪರಮಪುರುಷನಾದ ವಾಸುದೇವನು ಯಾರು? ಎಂಬುವುದನ್ನು "ಶುದ್ಧಂ, ಪರಂ, ನಿರ್ಮಲಂ, ಏಕರೂಪಂ" ಎಂಬ ವಿಶೇಷಣಗಳಿಂದ ವಿವರಿಸಿರುತ್ತಾರೆ. "ಅಸ್ತದೋಷಂ ಎಂದರೆ ಅಚಿತ್ತಿನಂತೆ" (ಜ್ಞಾನವಿಲ್ಲದ ವಸ್ತು) ಸ್ವರೂಪ ವಿಕಾರವೇ ಮೊದಲಾದ ದೋಷಗಳಿಲ್ಲದವನು. ಶುದ್ಧಂ ಎಂದರೆ ಚಿತ್ತಿನಂತೆ ಸ್ವಭಾವ ವಿಕಾರಗಳಿಲ್ಲದೆ ಶುದ್ಧನಾಗಿರುವವನು. ಪರಂ-ನಿರ್ಮಲಂ ಎಂದರೆ ಮುಕ್ತರಂತಲ್ಲದೆ ಪ್ರಕೃತಿಸಂಬಂಧವಾದ ಗುಣಗಳಿಲ್ಲದೆ ಅವರಿಗಿಂತ ವಿಲಕ್ಷಣನು. ಏಕರೂಪಂ ಅಂದರೆ ಅನೇಕ ರೂಪಗಳನ್ನು ಹೊಂದುವ ನಿತ್ಯರಿಗಿಂತ ವಿಲಕ್ಷಣನಾಗಿ ಪರಮಾತ್ಮನೆಂದು ಪ್ರಸಿದ್ಧನಾದವನು. ಹೀಗೆ ವಿಲಕ್ಷಣನಾದ ಪರಮಾತ್ಮನಾದ ವಾಸುದೇವನನ್ನು ಆಚಾರ್ಯರ ಅನುಗ್ರಹ ಪಡೆದು ಶಾಸ್ತ್ರಮುಖದಲ್ಲಿ ತಿಳಿಯಬೇಕು. ಭಗವದನುಗ್ರಹದಿಂದ ಲಬ್ಧವಾದ ವಿವೇಕದಿಂದ ಅವನೇ ಸಿದ್ಧೋಪಾಯನೆಂದು ತಿಳಿದು ಸಾಧ್ಯೋಪಾಯವಾದ ಶರಣಾಗತಿಯಿಂದ ಸಾಕ್ಷಾತ್ಕರಿಸಬೇಕು. ಈ ರೀತಿ ಅವನನ್ನು ಹೊಂದುವ ಜ್ಞಾನವೇ ಜ್ಞಾನವು. 'ಜ್ಞಾನಂ' ಎಂಬ ಪದಕ್ಕೆ ಆಚಾರ್ಯರು ಗೀತಾಭಾಷ್ಯದಲ್ಲಿ ವಿವರಣೆ ಕೊಡುತ್ತಾ "ಜ್ಞಾನಂ = ಚಿದಚಿದ್ವಸ್ತುವಿಶೇಷವಿಷಯೋ ನಿಶ್ಚಯಃ" ಎಂದು ಸ್ಪಷ್ಟಪಡಿಸಿರುತ್ತಾರೆ. ಪರಮಾತ್ಮನು ಚಿದಚಿತ್ತುಗಳಿಂದ ವಿಸಜಾತೀಯನು. ಬೆಳ್ಳಗಿರುವ ಮುತ್ತಿನಚಿಪ್ಪು ಮತ್ತು ಬೆಳ್ಳಿ ಇವೆರಡೂ ಸಜಾತೀಯವೆಂಬ ಬುದ್ಧಿ ಭ್ರಮಾತ್ಮಕವಾದುದು. ಈ ಭ್ರಮದ ನಿವೃತ್ತಿಯಾಗಬೇಕು. ಹಾಗೆ ಅಣುವಾಗಿ ಅಸ್ವತಂತ್ರನಾಗಿ ಪರತಂತ್ರನಾದ ಜೀವಾತ್ಮನೂ, ವಿಭುವಾಗಿ ಸ್ವತಂತ್ರನಾಗಿರುವ ಪರಮಾತ್ಮನೂ ಸಜಾತೀಯರೆಂದು ತಿಳಿಯುವುದು ಮೋಹವು. ಇದನ್ನೇ ಶ್ರೀ ವೇದಾಂತದೇಶಿಕರು ತಮ್ಮ ರಹಸ್ಯತ್ರಯಸಾರದಲ್ಲಿ "ಜೀವೈಶ್ವೈಕ್ಯ ಭ್ರಾಂತಿ" ಎಂದು ಕರೆದಿರುತ್ತಾರೆ. ಈ ಭ್ರಾಂತಿಯೂ ತೊಲಗಬೇಕು. ಸಿದ್ಧೋಪಾಯನಾದ ಪರಮಾತ್ಮನನ್ನು ಹೀಗೆ ತಿಳಿಯುವುದೇ ಜ್ಞಾನ. ಹೀಗೆ ತಿಳಿದರೆ "ತಮೇವಂ ವಿದ್ವಾನಮೃತ ಇಹ ಭವತಿ" ಇಲ್ಲಿಯೂ ಅಮೃತನಾಗಿ "ವಾಸುದೇವಸ್ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ"

ವಾಸುದೇವಜ್ಞಾನವನ್ನು ಪಡೆದ ಅಂತಹ ಮಹಾತ್ಮನು ಸುದುರ್ಲಭನು. ಇಂತಹ ಜ್ಞಾನವನ್ನು ಪಡೆಯಲು ಸರ್ವರೂ ಯತ್ನಿಸಬೇಕೆಂದು ಶ್ರೀ ಪರಾಶರರು ಮೇಲಿನ ಪದ್ಯದಲ್ಲಿ ಉಪದೇಶಿಸಿರುತ್ತಾರೆ.

ವಚನ ವಿ.ಪು. ೩೧೦, ಸಾಲು ೫

ಮೂಲ : ಅನೇಕಜನ್ಮಸಾಹಸ್ರೀಂ ಸಂಸಾರಪದವೀಂ ವ್ರಜನ್ ।
ಮೋಹಶ್ರಮಂ ಪ್ರಯಾತೋಽಸೌ ವಾಸನಾರೇಣುಕುಂಠಿತಃ ॥ ವಿ.ಪು. ೬-೭-೧೯

ಈ ಪದ್ಯದಲ್ಲಿ ಪರಾಶರರು ಈ ಜೀವನು ಪ್ರಕೃತಿ (ದೇಹ) ಸಂಬಂಧವನ್ನು ಹೊಂದಿ, ತನ್ನ ನೈಜಸ್ವರೂಪವನ್ನು ತಿಳಿಯದೆ ಸಂಸಾರದಲ್ಲಿ ಸಿಲುಕಿ ಮೋಹಿತನಾಗಿ ಅನೇಕ ಕ್ಲೇಶಗಳನ್ನು ಹೊಂದಿರುತ್ತಾನೆಂದು ಮೈತ್ರೇಯರಿಗೆ ಉಪದೇಶಿಸಿರುತ್ತಾರೆ. ಹಾಗಾದರೆ ಜೀವಾತ್ಮನ ನೈಜಸ್ವರೂಪವೇನು ?

ಜೀವಾತ್ಮನು ಸ್ವಭಾವತಃ ಜ್ಞಾನವಿಕಾಸವುಳ್ಳವನು. ಆನಂದವುಳ್ಳವನು. ಹೇಯಗುಣಗಳಿಲ್ಲದೆ ತುಂಬಾ ಪರಿಶುದ್ಧನು. ವಿಷ್ಣುವಿಗೆ ಶೇಷಭೂತನು. "ಜ್ಞಾನಾನಂದಮಯಸ್ತ್ವಾತ್ಮಾ ಶೇಷೋ ಹಿ ಪರಮಾತ್ಮನಃ" ಎಂದು ವಿಷ್ಣುಪುರಾಣದಲ್ಲೇ ಹೇಳಿರುತ್ತೆ.

ಭಗವಾನ್ ಕೃಷ್ಣನು "ಮಮ ಪ್ರಾಣಾ ಹಿ ಪಾಂಡವಾಃ" ಅಂದರೆ ಜೀವಾತ್ಮರು ನನಗೆ ಅತಿಪ್ರಿಯರು ಎಂದು ಹೇಳಿಕೊಂಡಿರುತ್ತಾನೆ. ಹೀಗೆಯೇ ಶ್ರೀರಾಮನು ಸುಗ್ರೀವನು ತನಗೆ ತಿಳಿಸದೆ ರಾವಣನೊಡನೆ ಯುದ್ಧಕ್ಕೆ ಹೋಗಿದ್ದಕ್ಕಾಗಿ "ತ್ವಯಿ ಕಿಂಚಿತ್ಸಮಾಪನ್ನೇ ಕಿಂ ಕಾರ್ಯಂ ಸೀತಯಾ ಮಮ" ಸುಗ್ರೀವ! ನೀನೇನಾದರೂ ಆಪತ್ತಿಗೆ ಗುರಿಯಾಗಿದ್ದರೆ ನನಗೆ ಸೀತೆಯಿಂದ ಆಗಬೇಕಾದ್ದೇನು? ಎಂದು ತನ್ನ ಭಾರ್ಯೆಗಿಂತಲೂ ಈ ಜೀವರ ಮೇಲೆ ಮಮತೆ ಹೆಚ್ಚೆಂದು ಸ್ಪಷ್ಟವಾಗುತ್ತೆ. ಜೀವಾತ್ಮಪ್ರತೀಕನಾದ ಲಕ್ಷ್ಮಣನು ಶ್ರೀರಾಮನಿಗೆ ಎಲ್ಲಾ ವಿಧವಾದ ಕೈಂಕರ್ಯವನ್ನು ಸಮರ್ಪಣೆ ಮಾಡಿದ್ದರಿಂದಲೆ ಮುನಿಶ್ರೇಷ್ಠರು "ಲಕ್ಷ್ಮಣೋ ಲಕ್ಷ್ಮಿವರ್ಧನಃ" ಎಂದು ಕೊಂಡಾಡಿದರು.

ಈ ಜೀವನು ಇಂತಹ ದಿವ್ಯಸ್ವರೂಪವುಳ್ಳವನಾಗಿದ್ದರೂ ಪ್ರಕೃತಿಸಂಬಂಧದಿಂದ ಕಲುಷಮತಿಯಾಗಿದ್ದಾನೆ. ಇದರಿಂದ ಸಂಸಾರಬಂಧನ. ಅನೇಕ ಜನ್ಮಗಳ ಪರಿಗ್ರಹ. ಕರ್ಮವಾಸನೆಗಳಿಂದ ಜ್ಞಾನಸಂಕೋಚ. ಇದರಿಂದ ತನ್ನ ನೈಜಸ್ವರೂಪವನ್ನು ಕಳೆದುಕೊಂಡಿರುತ್ತಾನೆ. ಕೈಂಕರ್ಯಸಾಮ್ರಾಜ್ಯದ ರುಚಿಯನ್ನು ತಿಳಿಯದಿದ್ದಾನೆ. ಈ ತಾತ್ಪರ್ಯವನ್ನು ಶ್ರೀ ವೇದಾಂತದೇಶಿಕರು ರಹಸ್ಯತ್ರಯಸಾರದ ಉಪೋದ್ಘಾತಾಧಿಕಾರದಲ್ಲಿ "ಮಣಿವರ ಇವ ಶೌರೇರ್ನಿತ್ಯಹೃದ್ಯೋಽಪಿ

ಜೀವಃ ಕಲುಷಮತಿರವಿಂದನ್ ಕಿಂಕರತ್ವಾಧಿರಾಜ್ಯಂ। ವಿಧಿಪರಿಣತಿಭೇದಾ ದ್ವೀಕ್ಷಿತಸ್ತೇನ ಕಾಲೇ ಗುರುಪರಿಷದುಪಜ್ಞಂ ಪ್ರಾಪ್ಯ ಗೋಪಾಯತಿ ಸ್ವಂ॥" ಎಂಬ ಪದ್ಯದಲ್ಲಿ ವಿವರಿಸಿರುತ್ತಾರೆ.

ಮೇಲಿನ ವಿಷ್ಣುಪುರಾಣದ "ವಾಸನಾರೇಣುಕುಂಠಿತಃ" ಎಂಬ ಪದದಿಂದ ಈ ಜೀವನು ವಾಸನೆಯೆಂಬ ಧೂಳಿನಿಂದ ಜ್ಞಾನಮಾಲಿನ್ಯವನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಯಾವಾಗ ಜೀವನು ಸ್ವಾಮಿ ಸಂಕಲ್ಪದಿಂದ ಈ ಲೀಲಾ ವಿಭೂತಿಗೆ ಬಂದನೋ, ಆವಾಗ ಕರ್ಮಸಂಬಂಧವೂ ಪ್ರಾಪ್ತವಾಗಿ ಅಜ್ಞಾನದಿಂದ ಆವೃತನಾಗುತ್ತಾನೆ. ಚೇತನನಿಗೆ ಲೀಲಾವಿಭೂತಿಯ ಸಂಬಂಧವು ಬಂದೊಡನೆಯೇ ಐದರ ಸಂಬಂಧವೂ ಪ್ರಾಪ್ತವಾಗಿ ಚಕ್ರದಂತೆ ಈತನನ್ನು ಹಿಂಬಾಲಿಸುತ್ತದೆ. ಆ ಐದು ಯಾವುದೆಂದರೆ—(೧) ಪ್ರಕೃತಿಸಂಬಂಧ (೨) ಕರ್ಮ (೩) ಅವಿದ್ಯಾ (೪) ವಾಸನೆ (೫) ರುಚಿ ಎಂದು.

ಜೀವನು ಈ ಲೀಲಾವಿಭೂತಿಯಲ್ಲಿರುವವರೆವಿಗೂ ಪ್ರಕೃತಿಸಂಬಂಧ ತಪ್ಪದು. ಪ್ರಕೃತಿಸಂಬಂಧವೂ ಕರ್ಮವೂ ಅನಾದಿಯಾಗಿ ಈ ಚೇತನನಿಗೆ ಪ್ರಾಪ್ತವಾಗಿದೆ. ಕರ್ಮವು ಪುಣ್ಯ-ಪಾಪರೂಪವಾಗಿ ಎರಡು ವಿಧ. ಇವೆರಡೂ ಮೋಕ್ಷಕ್ಕೆ ಪ್ರತಿಬಂಧಕಗಳು. ಪಾಪಕರ್ಮವು ಪುನಃಪುನಃ ಸಂಸಾರದಲ್ಲಿ ಸೇರುವಂತೆ ಮಾಡುತ್ತದೆ. ಪುಣ್ಯಕರ್ಮವು ಸ್ವರ್ಗಾದಿ ಭೋಗಲೋಕಗಳನ್ನು ಕೊಟ್ಟು, ಪುಣ್ಯವು ಕ್ಷಯಿಸಿದ ಮೇಲೆ "ಕ್ಷೀಣೇ ಪುಣ್ಯೇ ಮರ್ತ್ಯಲೋಕೇ ವಿಶಂತಿ" ಎಂಬಂತೆ ಭೂಲೋಕದಲ್ಲಿ ಜೀವನನ್ನು ಸೇರಿಸುತ್ತದೆ. ಆದ್ದರಿಂದ ಪುಣ್ಯ-ಪಾಪಗಳೆರಡೂ ಮೋಕ್ಷಕ್ಕೆ ಪ್ರತಿಬಂಧಕಗಳು. ಪುಣ್ಯ-ಪಾಪಗಳೆರಡನ್ನೂ ಇಲ್ಲಿಯೇ ಒದರಬೇಕು. ಆಗ ಮೋಕ್ಷಕ್ಕೆ ಅಧಿಕಾರಿಯಾಗುತ್ತಾನೆ.

ಕರ್ಮದ ಸಂಗಡ ಈ ಚೇತನನನ್ನು "ಅವಿದ್ಯೆ" ಎಂಬುವುದು ಹಿಂಬಾಲಿಸುತ್ತದೆ. "ಅವಿದ್ಯೆ" ಎಂದರೆ ಜ್ಞಾನಸಂಕೋಚದಿಂದಾದ ಅಜ್ಞಾನವು. ಭಗವಂತನು ಜೀವನಿಗೆ ಕರಣ–ಕಳೇಬರಗಳನ್ನು (ಇಂದ್ರಿಯ-ದೇಹಗಳನ್ನು) ಇವನ ಉದ್ಧಾರಕ್ಕಾಗಿ ಅನುಗ್ರಹಿಸಿ ತನಗೆ ಅಧೀನವಾದ ಸ್ವಾತಂತ್ರ್ಯವನ್ನೂ ಅನುಗ್ರಹಿಸುತ್ತಾನೆ. ಈ ಭಗವದ್ದತ್ತ ಸ್ವಾತಂತ್ರ್ಯದಿಂದ ಈ ಜೀವನು ಇಂದ್ರಿಯಗಳನ್ನು ಕೆಟ್ಟ ಮಾರ್ಗದಲ್ಲಿ ಉಪಯೋಗಿಸಿ ಜ್ಞಾನಸಂಕೋಚಹೊಂದಿ ಸ್ವತಂತ್ರಾತ್ಮಭ್ರಾಂತಿ–ದೇಹಾತ್ಮಭ್ರಾಂತಿಗಳ ಮೂಲಕ "ಅನೇಕ ಜನ್ಮಸಾಹಸ್ರೀಂ ಸಂಸಾರಪದವೀಂ ವ್ರಜನ್" ಎಂಬಂತೆ ಪುನಃಪುನಃ ಸಂಸಾರದಲ್ಲಿ ಹುಟ್ಟುತ್ತಾನೆ.

ಈ ಅವಿದ್ಯೆಯಿಂದ ಅಜ್ಞಾನವು ವೃದ್ಧಿಯಾಗಿ "ತೇನ ಮುಹ್ಯಂತಿ ಜಂತವಃ" ಎಂಬಂತೆ ಅಹಿತ ಕರ್ಮಗಳನ್ನೇ ಮಾಡುವ "ವಾಸನೆ" ಎಂಬ ಸಂಸ್ಕಾರವು

ಉಂಟಾಗುತ್ತದೆ. ಬುದ್ಧಿಪೂರ್ವಕವಾಗಿಯೇ ಪ್ರವರ್ತಿಸುವುದಕ್ಕೆ "ರುಚಿ" ಎಂದು ಹೆಸರು. ಈ ರೀತಿ ಪ್ರಕೃತಿಸಂಬಂಧ ಕರ್ಮ–ಅವಿದ್ಯೆ–ವಾಸನೆ–ರುಚಿಗಳೆಂಬ ಚಕ್ರದಲ್ಲಿ ಈ ಚೇತನನು ಸುತ್ತುತ್ತಿರುತ್ತಾನೆ. ಇವು ಐದು ಪ್ರತಿ ಚೇತನನಿಗೂ ಬೇರೆಬೇರೆಯಾಗಿ ಬೇರೆಬೇರೆ ಫಲಗಳನ್ನು ಕೊಡುತ್ತವೆ. ಆದ್ದರಿಂದಲೇ ಲೋಕದಲ್ಲಿ ಒಬ್ಬನು ರಾಜನಾಗಿಯೂ, ಒಬ್ಬನು ಸೇವಕನಾಗಿಯೂ, ಮತ್ತೊಬ್ಬನು ದರಿದ್ರನಾಗಿಯೂ, ಒಬ್ಬನು ಶ್ರೀಮಂತನಾಗಿಯೂ, ಮತ್ತೊಬ್ಬನು ವ್ಯಾಧಿಗ್ರಸ್ತನಾಗಿಯೂ, ಮತ್ತೊಬ್ಬನು ದುಃಖಿಯಾಗಿಯೂ ಆಗುವನು.

ಚೇತನರು ತಮ್ಮ ತಮ್ಮ ಕರ್ಮಕ್ಕನುಸಾರ ಕರ್ಮಫಲಗಳನ್ನು ಅನುಭವಿಸಲೇ ಬೇಕು. "ನಾಭುಕ್ತಂ ಕ್ಷೀಯತೇ ಕರ್ಮ" ಎಂಬ ನಿರ್ಣಯ ಯಾರನ್ನೂ ಬಿಟ್ಟದ್ದಿಲ್ಲ. ಒಂದು ಕರ್ಮವನ್ನು ಅನುಭವಿಸಿದನಂತರ ಮತ್ತೊಂದು ಕರ್ಮ ಪ್ರಾರಂಭವಾಗುತ್ತದೆ. ಈ ಕರ್ಮಗಳು ಪ್ರಾರಬ್ಧ-ಸಂಚಿತ–ಆಗಾಮಿ ಎಂದು ಮೂರು ವಿಧಿ. ಈಗ ಫಲ ಕೊಡಲು ಪ್ರಾರಂಭವಾಗಿರುವುದಕ್ಕೆ "ಪ್ರಾರಬ್ಧಕರ್ಮ"ವೆಂದು ಹೆಸರು. ಇದು ಈ ಜನ್ಮದಲ್ಲಿ ಮುಗಿಯಲೂ ಬಹುದು. ಮುಂದಿನ ಜನ್ಮಗಳಿಗೂ ಬರಲೂ ಬಹುದು.

ಹಿಂದೆ ಕೂಡಿಹಾಕಿಕೊಂಡಿರುವ ಕರ್ಮಗಳಿಗೆ "ಸಂಚಿತಕರ್ಮ"ವೆಂದು ಹೆಸರು. ಮುಂದಿನ ಜನ್ಮಗಳಲ್ಲಿ ಫಲ ಕೊಡುವುದಕ್ಕೆ "ಆಗಾಮಿ" ಎಂದು ಹೆಸರು. ಅತಿ ಉತ್ಕಟವಾದ ಕರ್ಮಗಳು "ಅತ್ಯುತ್ಕಟೈಃ ಪುಣ್ಯಪಾಪೈರಿಹೈವ ಫಲಮಶ್ನುತೇ" ಎನ್ನುವಂತೆ ಮುಖ್ಯವಾಗಿ ಕರ್ಮಗಳು ತತ್ತತ್ಕಾಲದಲ್ಲಿ ಫಲ ಕೊಟ್ಟೇಕೊಡುವುದಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈ ತಾತ್ಪರ್ಯವನ್ನು ಶ್ರೀ ವೇದಾಂತದೇಶಿಕರು ಉಪೋದ್ಘಾತಾಧಿಕಾರದ ಕಡೆಯಲ್ಲಿ "ಕರ್ಮವಿದ್ಯಾದಿಚಕ್ರೇ ಪ್ರತಿಪುರುಷಮಿಹಾನಾದಿ ಚಿತ್ರಪ್ರವಾಹೇ। ತತ್ತತ್ಕಾಲೇ ವಿಪಕ್ತಿರ್ಭವತಿಹಿ ಸರ್ವಸಿದ್ಧಾಂತ ಸಿದ್ಧಾಂ" ಎಂಬ ಪದ್ಯದಲ್ಲಿ ವಿವರಿಸಿರುತ್ತಾರೆ. ಕರ್ಮಗಳು ಕೆಲವು ದುಷ್ಕೃತ ಕರ್ಮಗಳು, ಕೆಲವು ಸುಕೃತ ಕರ್ಮಗಳು. ಕೆಟ್ಟ ಕರ್ಮಗಳು ಕೆಟ್ಟ ಫಲವನ್ನು ಕೊಡುತ್ತವೆ. ಯಥಾ—

> "ಪಾಪಂ ಪ್ರಜ್ಞಾಂ ನಾಶಯತಿ ಕ್ರಿಯಮಾಣಂ ಪುನಃಪುನಃ।
> ನಷ್ಟಪ್ರಜ್ಞಃ ಪಾಪಮೇವ ನಿತ್ಯಮಾರಭತೇ ನರಃ॥"

ಎಂದು. ಹೀಗೆಯೇ ಸತ್ಕರ್ಮಗಳು ಉತ್ತಮ ಫಲವನ್ನೇ ಕೊಡುತ್ತವೆ—ಯಥಾ—

> "ಪುಣ್ಯಂ ಪ್ರಜ್ಞಾಂ ವರ್ಧಯತಿ ಕ್ರಿಯಮಾಣಂ ಪುನಃಪುನಃ।
> ವೃದ್ಧಪ್ರಜ್ಞಃ ಪುಣ್ಯಮೇವ ನಿತ್ಯಮಾರಭತೇ ನರಃ॥"

ಎಂದು. ಚಾರ್ವಾಕರು ಮೋಕ್ಷವನ್ನು ಒಪ್ಪದಿದ್ದರೂ ಸುಕೃತ–ದುಷ್ಕೃತಕರ್ಮಗಳಿಂದೊದಗುವ ಫಲವನ್ನು ಒಪ್ಪಿರುತ್ತಾರೆ. ಈ ಕೆಟ್ಟ ಮತ್ತು ಒಳ್ಳೆಯ ಕರ್ಮಗಳ ಅನುಭವಕ್ಕಾಗಿ ಅನೇಕ ಜನ್ಮಗಳನ್ನು ಪಡೆಯಬಹುದಾಗಿ "ಅನೇಕ ಜನ್ಮಸಾಹಸ್ರೀಂ" ಎಂದು ಶ್ರೀ ಪರಾಶರರು ಸೂಚಿಸಿರುತ್ತಾರೆ.

ಹಾಗಾದರೆ ಈ ಚೇತನನಿಗೆ ಉತ್ಥತಿಯೇ ಇಲ್ಲವೆ ? ಎಂದು ಸಂದೇಹ ಬರಬಹುದು. ಉತ್ಥತಿಯುಂಟು. ಚೇತನನು ಕರ್ಮಗಳನ್ನು ಮಾಡುವಾಗ ಎಂದಾದರೂ ಸತ್ಕರ್ಮವನ್ನು ಮಾಡಿಯೇ ಮಾಡುವನು. ದಯಾಳುವಾದ ಪರಮಾತ್ಮನು ಈ ಸಮಯವನ್ನೇ ನಿರೀಕ್ಷಿಸಿ ಈ ಚೇತನನನ್ನು ಮೇಲೆತ್ತಲು ಸಂಕಲ್ಪಿಸುತ್ತಾನೆ. ಆಗಲೇ ಸಾತ್ವಿಕ ಸಂಭಾಷಣೆಯ ಮೂಲಕ ಚೇತನನ ಉದ್ಧಾರಕ್ಕಾಗಿ ಆಚಾರ್ಯನನ್ನು ಕಳುಹಿಸುತ್ತಾನೆ. ಈ ಮೂಲಕ ಚೇತನನು ಪರಮಾತ್ಮನ ಕೃಪೆಗೆ ಪಾತ್ರನಾಗಿ ಮುಕ್ತೈಶ್ವರ್ಯರೂಪವಾದ ಅನವಧಿಕ ಫಲವನ್ನು ಹೊಂದುತ್ತಾನೆ. ಈ ತಾತ್ಪರ್ಯವನ್ನು ಶ್ರೀ ವೇದಾಂತದೇಶಿಕರು "ತಲ್ಲಬ್ಧಸ್ವಾವಕಾಶ ಪ್ರಥಮ ಗುರುಕೃಪಾ ಗೃಹ್ಯಮಾಣಃ ಕದಾಚಿತ್, ಮುಕ್ತೈಶ್ವರ್ಯಾಂತ ಸಂಪನ್ನಿಧಿರಪಿ ಭವಿತಾ ಕಶ್ಚಿದಿತ್ಥಂ ವಿಪಶ್ಚಿತ್" ಎಂದು ನಿರ್ಣಯಿಸಿರುತ್ತಾರೆ. ಅನೇಕ ಜನ್ಮಗಳ ಮೇಲೆ ಒಬ್ಬನು "ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ" ಎಂಬಂತೆ ನಿತ್ಯೈಶ್ವರ್ಯವನ್ನು ಪಡೆಯುತ್ತಾನೆ. ಇಂತಹ ನಿರವಧಿಕ ಫಲವನ್ನು ಹೊಂದಲು ಚೇತನರೆಲ್ಲರಿಗೂ ಅಧಿಕಾರವಿರುವುದರಿಂದ, ಇವರ ಎಚ್ಚರಿಕೆಗಾಗಿ ಕೆಟ್ಟ ಕರ್ಮಗಳಿಂದಾಗುವ ಅನಿಷ್ಟಫಲವನ್ನು ಶ್ರೀ ಪರಾಶರರು ಪುರಾಣರತ್ನದ ಮೇಲಿನ ಪದ್ಯದಲ್ಲಿ ಸೂಚಿಸಿರುತ್ತಾರೆ.

ವಚನ ವಿ.ಪು. ಪುಟ ೩೧೦, ಸಾಲು ೩೦

ಮೂಲ : ಸಮಸ್ತಾ ಶ್ಶಕ್ತಯಶ್ಚೈತಾ ನೃಪ ಯತ್ರ ಪ್ರತಿಷ್ಠಿತಾಃ ।
ತದ್ವಿಶ್ವರೂಪವೈರೂಪ್ಯಂ ರೂಪಮನ್ಯದ್ಧರೇರ್ಮಹತ್ ॥ ವಿ.ಪು. ೬-೭-೭೦

ಭಗವಂತನ ದಿವ್ಯಮಂಗಳ ವಿಗ್ರಹದ ಮಹತ್ವವು ಈ ಪದ್ಯದಲ್ಲಿ ಸಂಗೃಹೀತವಾಗಿದೆ. ಹೇ ನೃಪ=ಎಲೈ ರಾಜನೇ ! ಏತಾಃ ಸಮಸ್ತಾಃ ಶಕ್ತಯಃ=ಪ್ರಚೇತನಶಕ್ತಿ, ಚೇತನಶಕ್ತಿ, ಕರ್ಮಶಕ್ತಿಗಳು ಯತ್ರ=ಯಾವ ದಿವ್ಯ ಮಂಗಳ ವಿಗ್ರಹದಲ್ಲಿ ಪ್ರತಿಷ್ಠಿತಾಃ=ಅಸ್ತ್ರ–ಭೂಷಣಾದಿ ರೂಪದಲ್ಲಿ ಸ್ಥಾಪಿಸಲ್ಪಟ್ಟಿದೆಯೊ ತತ್ ಹರೇಃ ರೂಪಂ=ಆ ದಿವ್ಯಮಂಗಳ ವಿಗ್ರಹವು ವಿಶ್ವರೂಪವೈರೂಪ್ಯ=ಪ್ರಪಂಚದ ಎಲ್ಲಾ ರೂಪಗಳಿಗಿಂತಲೂ ವಿಲಕ್ಷಣವಾದುದು. ಅನ್ಯತ್=ಅಪ್ರಾಕೃತವಾದುದು ಎಂದು ಪದ್ಯದ ಅರ್ಥ.

ದಿವ್ಯಮಂಗಳ ವಿಗ್ರಹವನ್ನು ಶ್ರುತಿಯು "ಆದಿತ್ಯವರ್ಣಂ ತಮಸಃ ಪರಸ್ತಾತ್" "ಅಮೃತೋ ಹಿರಣ್ಮಯಃ", "ವಿದ್ಯುತಃ ಪುರುಷಾದಧಿ", "ತಸ್ಯ ಮಹಾರಜತಂ ವಾಸಃ", "ಪುಂಡರೀಕಮೇವ ಮಕ್ಷಿಣೀ" ಆದಿತ್ಯವರ್ಣವೆಂತಲೂ, ಹಿರಣ್ಯವರ್ಣವೆಂತಲೂ, ಮಿಂಚಿನಂತೆಯೂ, ನೀಲಮೇಘದಂತೆಯೂ, ಅವನ ಕಣ್ಣು ಅರ್ಧ ವಿಕಸಿತವಾದ ಸಿತಾಂಭೋಜದಂತೆಯೂ ಹೀಗೆ ನಾನಾ ರೀತಿಯಾಗಿ ವರ್ಣಿಸಿರುತ್ತದೆ. ವಿಷ್ಣುಪುರಾಣದಲ್ಲಿ (೬-೫-೮೪) "ಇಚ್ಛಾಗೃಹೀತಾಭಿಮತೋರುದೇಹಃ" ಅಂದರೆ ಭಗವಂತನು ಸ್ವಸಂಕಲ್ಪದಿಂದ ಪರಿಗ್ರಹಿಸಿದ ಮಂಗಳಶರೀರವೆಂದೂ, ಕರ್ಮ ಮೂಲಕ ಬಂದದ್ದಲ್ಲವೆಂದೂ ವಿವರಿಸಲ್ಪಟ್ಟಿದೆ. ಅಲ್ಲದೆ ಪ್ರಥಮಾಂಶದ ಅಸ್ತ್ರಭೂಷಣಾಧ್ಯಾಯ(೧-೨೨-೭೬)ದಲ್ಲೂ ಸುಮಾರು ಹತ್ತು ಪದ್ಯಗಳಿಂದ ದಿವ್ಯಮಂಗಳ ವಿಗ್ರಹದ ವರ್ಣನೆ ಬಂದಿರುತ್ತೆ. ಭಗವಂತನು ಧರಿಸಿರುವ ಅಸ್ತ್ರ-ಭೂಷಣಗಳೆಲ್ಲವೂ ಒಬ್ಬೊಬ್ಬ ಮುಕ್ತಾತ್ಮನ ಶರೀರವೆಂದು ಶ್ರೀ ಸ್ವಾಮಿ ದೇಶಿಕರು ಒಂದು ತಮಿಳು ಹಾಡಿನಿಂದ ಸೂಚಿಸಿರುತ್ತಾರೆ. ಕಾಂಚೀವರದಲ್ಲಿ ಸೇವೆಯನ್ನೀಯುತ್ತಿರುವ ವರದರಾಜನು ಈ ರೀತಿ ದಿವ್ಯಮಂಗಳವಿಗ್ರಹಯುಕ್ತನಾಗಿ ಜಗತ್ತನ್ನು ರಕ್ಷಿಸುತ್ತಿರುವುದಾಗಿ ಹಾಡಿರುತ್ತಾರೆ. ಆ ಹಾಡು :

"ಪುರುಡನ್ ಮಣಿವರಮಾಹಪ್ಪೊನ್ನಾಮೂಲಪ್ಪಿರುಕಿರುತಿ ಮರುವಾಹ
ಮಾಂತಂಡಾಹ
ತೆರುಳ್ ಮರುಳ್ವಾಳ್ಮರೈವಾಹ ಆಂಗಾರಂಗಳ್ ಶಾಜ್ಞ್ಗಂಶಂಗಾಹ
ಮನಂತಿಗಿರಿಯರ
ಇರುಡಿಗಂಗಳ್ ಈರೈಂದುಂ ಶರಂಗಳಾಹ ಇರುಭೂತಮಾಲೆ
ವನಮಾಲೆಯಹ
ಗರುಡನರುವಾ ಮರೆಯಿನ್ ಪೊರುಳಾಂ ಕಣ್ಣನ್ ಕರಿಗಿರಿಮೇಲ್
ನಿನ್ರನೈತ್ತುಂ ಕಾಕ್ಕಿ ನರ‍್ರನೆ ||"

ಇದರ ತಾತ್ಪರ್ಯ : ಆತ್ಮವರ್ಗವನ್ನು ಕೌಸ್ತುಭಮಣಿಯನ್ನಾಗಿಯೂ, ಬುದ್ಧಿ-ಮಹತ್ತತ್ವಗಳನ್ನುಗದೆಯನ್ನಾಗಿಯೂ, ತಾಮಸ-ರಾಜಸಾಹಂಕಾರಗಳನ್ನುಶಂಖ-ಶಾಜ್ಞ್ಗವನ್ನಾಗಿಯೂ, ಮನಸ್ಸನ್ನು (ಸಾತ್ವಿಕಾಹಂಕಾರ) ಚಕ್ರವನ್ನಾಗಿಯೂ, ಪಂಚತನ್ಮಾತ್ರೆಗಳನ್ನು ವೈಜಯಂತೀಮಾಲೆಯನ್ನಾಗಿಯೂ, ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳನ್ನು ಶರಗಳನ್ನಾಗಿಯೂ, ಜ್ಞಾನ-ಅಜ್ಞಾನಗಳನ್ನು ಕತ್ತಿ ಮತ್ತು ಒರೆಯನ್ನಾಗಿಯೂ, ಸ್ವಾಮಿಯು ತನ್ನ ದಿವ್ಯಮಂಗಳ ವಿಗ್ರಹದಲ್ಲಿ ಧರಿಸಿ ಹಸ್ತಗಿರಿಯ (ಕಾಂಚೀ) ಶಿಖರದಲ್ಲಿ ನಿತ್ಯ ವಾಸಮಾಡುತ್ತಾ ಸಮಸ್ತವನ್ನೂ

ರಕ್ಷಿಸುತ್ತಾನೆ ಎಂಬುದಾಗಿ. ಇದೇ ತಾತ್ಪರ್ಯವನ್ನು ವಿಷ್ಣು ಪುರಾಣದ (೧-೨೨-೬೮) ಪದ್ಯಗಳಿಂದ ವಿವರಿಸಿರುತ್ತಾರೆ. ಇದನ್ನು ಏಕೆ ಧರಿಸಿರುತ್ತಾನೆ ? ಎಂದರೆ ಅದೇ ಅಧ್ಯಾಯದ (ವಿ.ಪು. ೧-೨೨-೭೬)ನೇ ಪದ್ಯದಲ್ಲಿ ಸ್ಪಷ್ಟಪಡಿಸಿರುತ್ತಾರೆ. ಆ ಪದ್ಯವು :

"ಅಸ್ತ್ರಭೂಷಣಸಂಸ್ಥಾನಸ್ವರೂಪಂ ರೂಪವರ್ಜಿತಃ |
ಬಿಭರ್ತಿ ಮಾಯಾರೂಪೋಽಸೌ ಶ್ರೇಯಸೇ ಪ್ರಾಣಿನಾಂ ಹರಿಃ ||"

ಮೇಲೆ ಹೇಳಿದ ದಿವ್ಯಾಯುಧ-ಆಭರಣಗಳಿಗೆ ಆಸ್ಪದವಾದ ಭಗವಂತನ ದಿವ್ಯ ಮಂಗಳ ವಿಗ್ರಹವು ಕರ್ಮನಿಮಿತ್ತವಾದ ಪ್ರಾಕೃತಶರೀರವಲ್ಲವು. ಆಶ್ಚರ್ಯಕರವಾದ ರೂಪವುಳ್ಳ ವಿಷ್ಣುವು ಪ್ರಾಣಿಗಳ ದರ್ಶನ-ಸ್ಮರಣ-ನಾಮಸಂಕೀರ್ತನಾದಿ ಗಳಿಂದ ಜಗತ್ತಿನ ಏಳಿಗೆಗೋಸ್ಕರವಾಗಿಯೂ, ಧರ್ಮಸ್ಥಾಪನೆಗಾಗಿಯೂ ಧರಿ ಸಿರುತ್ತಾನೆ. ಉಪನಿಷತ್ತು ಸಹ "ನ ತಸ್ಯ ಪ್ರಾಕೃತಾಮೂರ್ತಿ" ಭಗವಂತನು ಪರ-ವ್ಯೂಹ-ವಿಭವ-ಹಾರ್ದ-ಅರ್ಚಾವತಾರಗಳೆಂಬ ಯಾವ ಅವತಾರದಲ್ಲೇ ಇರಲಿ, ಅವನಿಗೆ ಕರ್ಮಕೃತವಾದ ಪ್ರಾಕೃತ ಶರೀರವಲ್ಲವೆಂತಲೇ ಘೋಷಿಸಿರುತ್ತೆ. ಇದರಿಂದ ಆತನ ಶರೀರವು ಅಪ್ರಾಕೃತವೆಂದೂ, ಪರಿಣಾಮಾದಿರಹಿತವೆಂದೂ, ಸಮಸ್ತ ತತ್ವಗಳನ್ನು ಅಸ್ತ್ರ-ಭೂಷಣ ರೂಪದಲ್ಲಿ ಧರಿಸಿರುವನೆಂದೂ, ಅತ್ಯಾಶ್ಚರ್ಯ ಕರವೆಂದೂ ಧ್ಯಾನಮಾಡಿ ಆತನನ್ನು ಶರಣುಹೋಗಬೇಕೆಂದು ತಾತ್ಪರ್ಯ.

ವಚನ ವಿ.ಪು. ಪುಟ ೩೯೬, ಸಾಲು ೨೫

ಮೂಲ : "ಹಿರಣ್ಯಗರ್ಭೋ ಭಗವಾನ್ ವಾಸವೋಥ ಪ್ರಜಾಪತಿಃ ।
ಮರುತೋ ವಸವೋ ರುದ್ರಾಃ ಭಾಸ್ಕರಾಸ್ತಾರಕಾಗ್ರಹಾಃ ॥"

ವಿ.ಪು. ೬-೭-೫೬

"ಏತತ್ಸರ್ವಮಿದಂ ವಿಶ್ವಂ ಜಗದೇತಚ್ಚರಾಚರಂ ।
ಪರಬ್ರಹ್ಮಸ್ವರೂಪಸ್ಯ ವಿಷ್ಣೋಃಶಕ್ತಿಸಮನ್ವಿತಮ್ ॥"

ವಿ.ಪು. ೬-೭-೬೦

ಕೇಶಿಧ್ವಜನು ಖಾಂಡಿಕ್ಯನಿಗೆ ಯೋಗೋಪದೇಶವನ್ನು ಮಾಡುತ್ತಿರುವ ಸಂದರ್ಭ, ಮತ್ತು ವಿಷ್ಣುವೇ ಪರದೇವತೆಯೆಂತಲೂ, ಆತನೇ ಧ್ಯೇಯ ವಸ್ತುವೆಂತಲೂ ಉಪದೇಶಿಸುತ್ತಾನೆ. ಈ ಅಧ್ಯಾಯದಲ್ಲೇ 'ವಿಷ್ಣುಪುರಾಣಂ' ಎಂಬ ಗ್ರಂಥಕ್ಕೆ ಹೆಸರು ಬರಲು ವಿಷ್ಣುವೇ ತತ್ವವಾದ್ದರಿಂದಲೂ, ಜಗತ್ಕಾರಣನಾದ್ದರಿಂದಲೂ ಸಹ ಎಂಬ ವಿವರಣೆಯೂ ಇದೆ. "ಸರ್ವಂ ಖಲ್ವಿದಂ ಬ್ರಹ್ಮ" "ಐತದಾತ್ಮ್ಯಮಿದಂ ಸರ್ವಂ" "ಸರ್ವಂ ವಿಷ್ಣುಮಯಂ ಜಗತ್" ಎಂಬ ಉಪನಿಷದ್ವಾಕ್ಯಗಳ ವಿವರಣೆಯೂ ಇದೆ. ವಿಷ್ಣುತತ್ವವನ್ನರಿಯಲು ಈ ಅಧ್ಯಾಯವು ಸಹಕಾರಿಯಾಗಿದೆ. ಭಗವಾನ್ ಪರಾಶರರು ಕೇಶಿಧ್ವಜನ ಮೂಲಕ ಮೇಲಿನ ತತ್ವವನ್ನು ಸ್ಪಷ್ಟಪಡಿಸಿದ್ದಾರೆ.

ಮೇಲಿನ ೫೬ನೇ ಪದ್ಯದಲ್ಲಿ ಹೇಳಿರುವ ಹಿರಣ್ಯಗರ್ಭನೂ (ಚತುರ್ಮುಖನೂ), ಇಂದ್ರನೂ, ನವಪ್ರಜಾಪತಿಗಳೂ, ಸಪ್ತಮರುತ್ತುಗಳೂ, ಅಷ್ಟವಸುಗಳೂ, ಏಕಾದಶರುದ್ರರೂ, ದ್ವಾದಶಾದಿತ್ಯರೂ, ನಕ್ಷತ್ರಗಳೂ ಸೂರ್ಯಚಂದ್ರಾದಿ ಗ್ರಹಗಳೂ ಸಹ ಕರ್ಮದಿಂದಾದ ಜನ್ಮವನ್ನೆತ್ತಿದವರು. ಮುಂದೆ ಎಪ್ಪತ್ತೇಳನೇ ಪದ್ಯದಲ್ಲಿ "ಅಶುದ್ಧಾಸ್ತೇ ದೇವಾದ್ಯಾಃ ಕರ್ಮಯೋನಯಃ" ಎಂದಿದೆ. ಅಂದರೆ ಮೇಲೆ ಹೇಳಿದ ದೇವತಾವರ್ಗವೆಲ್ಲವೂ ಅಪಶುದ್ಧವು. ಇವರಿಗೆ ಮಂಗಳಕರವಾದ ಅಪ್ರಾಕೃತ ಶರೀರವಿಲ್ಲವು. ವಿಷ್ಣುವೊಬ್ಬನಿಗೇನೆ ಅಪ್ರಾಕೃತಮಂಗಳಶರೀರವು.

ಶ್ರೀ ಭಾಗವತದಲ್ಲೂ "ಕರ್ಮಣಾಂ ಪರಿಪಾಕತ್ವಾದಾವಿರಿಂಚಾದಮಂಗಳಂ। ಇತಿ ಮತ್ವಾ ವಿರಕ್ತಸ್ಯ ವಾಸುದೇವಃ ಪರಾಗತಿಃ" ಎಂದು ಹೇಳಿರುವುದರಿಂದ ಕರ್ಮಗಳಿಗೆ ವಶರಾದ ಚತುರ್ಮುಖ ಮೊದಲುಗೊಂಡು ಎಲ್ಲರೂ ಅಪರಿಶುದ್ಧರು. ಇವರಿಗೆ ಶುಭಾಶ್ರಯವಿಲ್ಲವೆಂತಲೂ ಹೇಳಿ

ದಂತಾಯಿತು. ಈ ಪ್ರಮಾಣದಿಂದ ತ್ರಿಮೂರ್ತಿಗಳು ಸಮವೆಂಬ ಅಭಿಪ್ರಾಯವಾಗಲಿ, ತ್ರಿಮೂರ್ತಿಗಳು ಐಕ್ಯರೆಂಬ ಆಶಯವಾಗಲಿ, ತ್ರಿಮೂರ್ತಿಗಳಿಗಿಂತ ಬೇರೆಯಾದ ಈಶ್ವರನೊಬ್ಬನುಂಟು ಎಂಬ ಅಭಿಪ್ರಾಯವಾಗಲಿ ಕೂಡುವುದಿಲ್ಲವು. "ವಾಸುದೇವಃ ಪರಾಗತಿಃ" ಎಂದು ಹೇಳಿರುವುದರಿಂದ ವಿಷ್ಣು ಶಬ್ದವು ವಾಸುದೇವ ಪರ್ಯಾಯನಾಮವಾದ್ದರಿಂದ ವಿಷ್ಣುವೇ ಪರದೇವತೆಯೆಂದು ಸಿದ್ಧಾಂತವಾಯಿತು. ವಿಷ್ಣುಧರ್ಮದಲ್ಲಿ ವಿಷ್ಣುಶಬ್ದದ ಅರ್ಥವನ್ನು ವಿವರಿಸುವ ಸಂದರ್ಭ—"ಯಸ್ಮಾದ್ವಿಷ್ಟಂಭಿತಂ ಸರ್ವಂ ತಸ್ಯ ಶಕ್ತ್ಯಾ ಮಹಾತ್ಮನಃ। ತಸ್ಮಾತ್ಸ ಪ್ರೋಚ್ಯತೇ ವಿಷ್ಣುಃ ವಿಶೇರ್ಧಾತೋಃ ಪ್ರವೇಶನಾತ್" ವಿಷಲ್ಯ–ವ್ಯಾಪ್ತೌ ಎಂಬ ಧಾತುವಿನಿಂದ ವ್ಯುತ್ಪನ್ನವಾದ 'ವಿಷ್ಣು' ಶಬ್ದವು ಸರ್ವತ್ರ ಸರ್ವದಾ ವ್ಯಾಪಿಸಿಕೊಂಡಿರುವ ಅರ್ಥವನ್ನು ಕೊಡುತ್ತೆ. ವಾಸುದೇವ ಶಬ್ದದ ಅರ್ಥವೂ "ಸರ್ವತ್ರ ಸರ್ವದಾ ಅಯಂ ದೇವಃ ವಸತಿ" ಎಲ್ಲಾ ಕಾಲದಲ್ಲೂ, ಎಲ್ಲರಲ್ಲೂ ಈ ದೇವನು ಅಂತರ್ಯಾಮಿ ಎಂಬರ್ಥದಿಂದ ವಿಷ್ಣು, ವಾಸುದೇವ, ನಾರಾಯಣ ಶಬ್ದಗಳು ಪರ್ಯಾಯಪದಗಳಾಗಿರುತ್ತವೆ. ಈ ಮೂರು ನಾಮಗಳೂ ಸಮಾನಾರ್ಥಕಗಳಾದ್ದರಿಂದ ವೇದದಲ್ಲೂ (ನಾರಾಯಣೀಯ) "ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹೀ। ತನ್ನೋ ವಿಷ್ಣುಃ ಪ್ರಚೋದಯಾತ್" ಎಂದು ಒಂದೇ ಕಡೆ ಈ ಮೂರು ನಾಮಗಳೂ ಉಪಾತ್ತವಾಗಿವೆ.

ವಿಷ್ಣುಪುರಾಣದ ೬-೭-೬೦ನೇ ಪದ್ಯವು ವಿಷ್ಣುವಿನ ಅದ್ಭುತಶಕ್ತಿಯನ್ನು ವಿವರಿಸಿರುತ್ತೆ. ಚರಾಚರವಾದ ಜಗತ್ತೆಲ್ಲವೂ ಪರಬ್ರಹ್ಮಸ್ವರೂಪನಾದ ವಿಷ್ಣುವಿನ ಶಕ್ತಿಯಿಂದಲೇ ಆಕರ್ಷಿತವಾಗಿ ಸ್ವಸ್ಥಾನದಲ್ಲಿ ನಿಂತಿವೆ. ಸತ್ತೆಯಿಂದಲೂ ಕೂಡಿವೆ. ವಿಷ್ಣುಸಹಸ್ರನಾಮದಲ್ಲೂ "ದ್ಯೌಸ್ಸಚಂದ್ರಾರ್ಕನಕ್ಷತ್ರಂ ಖಂ ದಿಶೋಭೂರ್ಮಹೋದಧಿಃ। ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ॥" ಎಂದು ಪುರಾಣರತ್ನದ ಪದ್ಯದ ತಾತ್ಪರ್ಯವು ಸ್ಪಷ್ಟವಾಗಿ ಚಿತ್ರಿತವಾಗಿದೆ.

ಈ ಪದ್ಯದಲ್ಲಿ ಮತ್ತೊಂದು ಅರ್ಥವೂ ತೋರುತ್ತೆ. "ಯಸ್ಯ ಪೃಥಿವೀ ಶರೀರಂ, ಯಸ್ಯಾಪಃ ಶರೀರಂ, ಯಸ್ಯಾತ್ಮಾ ಶರೀರಂ, ಜಗತ್ಸರ್ವಂ ಶರೀರಂ ತೇ, ಯಸ್ಯಾದಿತ್ಯಶ್ಶರೀರಂ, ಯಸ್ಯಾಗ್ನಿಶ್ಶರೀರಂ, ಯಸ್ಯಾಂಬುವೈಷ್ಣವಃ ಕಾಯಃ" ಇತ್ಯಾದಿ ಶ್ರುತಿಸ್ಮೃತೀತಿಹಾಸಗಳ ವಿವರಣೆಯಿಂದ ಈ ಚರಾಚರವಾದ ಜಗತ್ತೆಲ್ಲವೂ ಭಗವಂತನ ಶರೀರವಾಗಿ ಸತ್ಯವಾಗಿದೆ. ವಿಷ್ಣುವು ಶರೀರಿಯಾದನು. ಮೇಲೆ ಹೇಳಿದ ವಾಕ್ಯಗಳು ಜಗಚ್ಛರೀರಕನಾದ

ವಿಷ್ಣುವನ್ನೇ ಬೋಧಿಸುತ್ತವೆ. ಕರಚರಣಾದ್ಯವಯವಗಳನ್ನೊಳಗೊಂಡವನನ್ನು ಮನುಷ್ಯನೊಬ್ಬನೆಂದು ವ್ಯವಹರಿಸುವಂತೆ, "ಸರ್ವಂ ವಿಷ್ಣುಮಯಂ ಜಗತ್" ಇವೆಲ್ಲವೂ ವಿಷ್ಣುವೇ. "ಅಂಗಾನ್ಯನ್ಯಾದೇವತಾಃ" ದೇವತಾವರ್ಗಗಳೆಲ್ಲವೂ ಅವನ ಅವಯವಗಳು ಎಂದು ಅವಯವಗಳಿಂದ ಕೂಡಿದ ಅವಯವಿಯಾದ ವಿಷ್ಣುವನ್ನೇ ಬೋಧಿಸುತ್ತವೆ. ಇದರಿಂದ ಪ್ರಪಂಚಕ್ಕೂ ಪರಬ್ರಹ್ಮನಿಗೂ ಶರೀರ-ಶರೀರಿ ಭಾವಸಂಬಂಧವನ್ನು ಹೇಳಿದಂತಾಯಿತು.

ಮೇಲಿನ ವಿಷ್ಣುಪುರಾಣದ ಪದ್ಯದಲ್ಲಿ 'ವಿಷ್ಣೋಃ' ಎಂಬುದಕ್ಕೆ "ಪರಬ್ರಹ್ಮಸ್ವರೂಪಸ್ಯ" ಎಂಬ ವಿಶೇಷಣವಿದೆ. ಈ ವಿಶೇಷಣದಿಂದ ವಿಷ್ಣುವೇ ಪರಬ್ರಹ್ಮನೆಂದು ಪರಾಶರರ ಅಭಿಪ್ರಾಯವು. ಆದರೆ ಕೆಲವು ಕಡೆ ಶ್ರುತಿಗಳಲ್ಲಿ "ಹಿರಣ್ಯಗರ್ಭಸ್ಸಮವರ್ತತಾಗ್ರೇ" ಮೊತ್ತಮೊದಲು ಹಿರಣ್ಯಗರ್ಭನೆಂಬುವನು ಇದ್ದನು. "ನ ಸನ್ನ ಚಾಸೀಚ್ಛಿವ ಏವ ಕೇವಲಃ" ಸತ್ತೂ ಇರಲಿಲ್ಲ, ಅಸತ್ತೂ ಇರಲಿಲ್ಲ. ಶಿವನು ಮಾತ್ರವೇ ಇದ್ದನು. ಇತ್ಯಾದಿ ಶ್ರುತಿವಾಕ್ಯಗಳಿಂದ ಚತುರ್ಮುಖಬ್ರಹ್ಮನೂ, ರುದ್ರನೂ ಸಹ ಜಗತ್ಕಾರಣರಾಗಿ ಪರಬ್ರಹ್ಮವೆಂದು ತೋರಿಬರುತ್ತದಲ್ಲ ಎಂದು ಶಂಕಿಸಿದರೆ ಸಮಾಧಾನವು ಹೇಗೆಂದರೆ—ಅದೇ ಶ್ರುತಿ ಮತ್ತೊಂದು ಕಡೆ "ಏಕೋ ಹ ವೈ ನಾರಾಯಣ ಆಸೀತ್" ಎಂದೂ "ನಾರಾಯಣಾದ್ಬ್ರಹ್ಮಾ ಜಾಯತೇ, ನಾರಾಯಣಾದ್ರುದ್ರೋ ಜಾಯತೇ" ಎಂಬ ಪ್ರಮಾಣಗಳಿರುವುದರಿಂದ ನಾರಾಯಣದಿಂದ ಬ್ರಹ್ಮನೂ, ಶಿವನೂ ಹುಟ್ಟಿದರೆಂದು ಸ್ಪಷ್ಟವಾಗಿ ಹೇಳಿರುವುದರಿಂದ ಚತುರ್ಮುಖರುದ್ರರೂ ನಾರಾಯಣನ ಸೃಷ್ಟಿಗೆ ಸೇರಿದವರೆಂದು ವ್ಯಕ್ತವಾಗುತ್ತದೆ. ಆದ್ದರಿಂದ ಹಿರಣ್ಯಗರ್ಭ-ಶಿವಶಬ್ದಗಳಿಗೆ ಯೋಗರೀತಿಯಲ್ಲಿ ಅರ್ಥ ಹೇಳಬೇಕೆಂದು ನಿರ್ಣಯವಾಯಿತು. ಹಿರಣ್ಯಗರ್ಭನೆಂದರೆ ಕನಕದಂತೆ ಪ್ರಕಾಶಮಾನವಾದ ಪರಮಪದದಲ್ಲಿ ನೆಲಸಿರುವವನೆಂರ್ಥವು. ಶಿವನೆಂದರೆ ಮಂಗಳಕರನೆಂದರ್ಥ. ಶಂಭುಶಬ್ದಕ್ಕೂ ಮಂಗಳಕರನೆಂತಲೇ ಅರ್ಥವು. ಘಟಕಶ್ರುತಿಯು ನಾರಾಯಣನೊಬ್ಬನಿದ್ದ ಎಂದರ್ಥ ಹೇಳುವಾಗ "ನ ಬ್ರಹ್ಮಾ, ನೇಶಾನಃ, ನೇಮೇ ದ್ಯಾವಾಪೃಥಿವೀ" ಅಚೇತನವಾದ ಭೂಮ್ಯಾಕಾಶಗಳನ್ನು ವಿರೋಧಿಸುವಂತೆ ನಾರಾಯಣನೊಬ್ಬನಿದ್ದಾಗ್ಯೆ ಚತುರ್ಮುಖರುದ್ರರಿರಲಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದೆ. ಜಗತ್ಕಾರಣನಾದ ಪರಬ್ರಹ್ಮನನ್ನು ನಿರ್ಣಯಿಸಬೇಕಾದರೆ ಪ್ರಳಯಕಾಲದಲ್ಲಿ ಯಾವನೊಬ್ಬನು ಉಳಿದಿರುತ್ತಾನೋ ಅವನೇ ಪರಬ್ರಹ್ಮನೆಂದು ವ್ಯಾಸಭಗವಾನ್ ರವರು ಭಾರತ ಶಾಂತಿಪರ್ವದಲ್ಲಿ ನಿರ್ಣಯಿಸಿರುತ್ತಾರೆ. ಯಥಾ :

"ಅಭೂತ ಸಂಪ್ಲವೇ ಪ್ರಾಪ್ತೇ ಪ್ರಲೀನೇ ಪ್ರಕೃತೌ ಮಹಾನ್ ।
ಏಕಸ್ತಿಷ್ಠತಿ ವಿಶ್ವಾತ್ಮಾ ಸ ತು ನಾರಾಯಣಃ ಪ್ರಭುಃ ॥"

ಅಂದರೆ ಪಂಚಭೂತಗಳು ಮೊದಲುಗೊಂಡು ಎಲ್ಲವೂ ಪ್ರಳಯ ಸಂಭವಿಸಲು, ಮಹತ್ತತ್ವವು ಪ್ರಕೃತಿಯಲ್ಲಿ ಅಡಗಲು ವಿಶ್ವಾತ್ಮನಾದ ಒಬ್ಬನೇ ಉಳಿಯುತ್ತಾನೆ. ಆವನೇ ನಾರಾಯಣನೆಂದು.

ಪುರುಷಸೂಕ್ತವೂ ಸಹ ಪರತತ್ವವನ್ನು ನಿರ್ಣಯಿಸಿರುವುದು ಅದ್ಭುತವಾಗಿದೆ. ವೇದದಲ್ಲಿ ಪುರುಷಸೂತ್ರಕ್ಕೆ ವಿಶಿಷ್ಟವಾದ ಸ್ಥಾನವಿದೆ. ಛಾಂದೋಗ್ಯದಲ್ಲಿ ಹೇಳಿರುನಂತೆ "ಏಷ ವೈಷ್ಣವೀ ನಾಮ ಸಂಹಿತಾ ಏತಾಂ ಪ್ರಯುಂಜನ್ ವಿಷ್ಣುಂ ಪ್ರೀಣಾತಿ" ಎಂದೂ, ಮತ್ತು ಪಾದ್ಮಪುರಾಣದಲ್ಲಿ,

"ವೇದೇಷು ಪೌರುಷಂ ಸೂಕ್ತಂ ಧರ್ಮಶಾಸ್ತ್ರೇಷು ಮಾನವಂ ।
ಭಾರತೇ ಭಗವದ್ಗೀತಾ ಪುರಾಣೇಷು ಚ ವೈಷ್ಣವಂ ॥
ಶ್ರುತಿಷು ಪ್ರಬಲಾ ಮಂತ್ರಾಸ್ತೇಷ್ವಪ್ಯಥ್ವಾತ್ಮವಾದಿನಃ ।
ತತ್ರಾಪಿ ಪೌರುಷಂ ಸೂಕ್ತಂ ನ ತಸ್ಮಾದ್ವಿದ್ಯತೇ ಪರಂ ॥"

ಎಂದೂ, ಮೋಕ್ಷಧರ್ಮದಲ್ಲೂ

"ಏತತ್ಪುರುಷಸೂಕ್ತಂ ಹಿ ಸರ್ವವೇದೇಷು ಪಠ್ಯತೇ ।
ಆತಶ್ಶ್ರುತಿಭ್ಯಸ್ಸರ್ವಾಭ್ಯೋ ಬಲವತ್ಸಮುದೀರಿತಂ ॥"

ಎಂದೂ ಇದರ ವೈಭವವು ಸಾರಲ್ಪಟ್ಟಿದೆ. ಈ ಸೂತ್ರದಲ್ಲಿ ವಿರಾಡ್ರೂಪಿಯಾದ ಪರಮಪುರುಷನ ಮಹಿಮೆಯನ್ನು ವಿವರಿಸಿ, ಈ ಪುರುಷನು ಯಾರೆಂದು ಕೇಳಲು ಆ ಸೂಕ್ತದ ಉತ್ತರಾನುಪಾತವು "ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ" ಶ್ರೀದೇವಿ ಮತ್ತು ಭೂದೇವಿಯರು ಈ ಪುರುಷನ ಭಾರ್ಯೆಯರೆಂದು ಹೇಳಿ ಶ್ರಿಯಃಪತಿಯೇ ಪರತತ್ವವೆಂದು ನಿರ್ಣಯಿಸಿರುತ್ತೆ.

ವ್ಯಾಸಮುನೀಶ್ವರರೂ ಸಹ ಶಾಸ್ತ್ರಗಳೆಲ್ಲವನ್ನೂ ಆಮೂಲಾಗ್ರವಾಗಿ ಪರಿಶೀಲಿಸಿ ಕಿಕ್ಕಿರಿದು ತುಂಬಿದ ವಿದ್ವತ್ಸಭೆಯಲ್ಲಿ ಕೇಶವನೆಂದು ಕರೆಸಿಕೊಳ್ಳುವ ನಾರಾಯಣನೇ ಪರತತ್ವವೆಂದು ಘೋಷಿಸಿದರು—

"ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃಪುನಃ
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಸ್ಸದಾ ॥
ಸತ್ಯಂ ಸತ್ಯಂ ಪುನಸ್ಸತ್ಯಂ ಉದ್ಧೃತ್ಯ ಭುಜಮುಚ್ಯತೇ ।
ವೇದಶಾಸ್ತ್ರಾತ್ಪರಂ ನಾಸ್ತಿ ನ ದೈವಂ ಕೇಶವಾತ್ಪರಂ ॥"

ಎಂದು ಅನೇಕ ಪ್ರಮಾಣಗಳನ್ನನುಸರಿಸಿ ಶ್ರೀ ಪರಾಶರರು ತಮ್ಮ ಪುರಾಣ ರತ್ನದಲ್ಲಿ ವಿಷ್ಣುವೇ ಪರಬ್ರಹ್ಮನೆಂದು ಸ್ಥಾಪಿಸಿರುತ್ತಾರೆ. ಇವನೇ ವಾಸುದೇವನು, ಇವನೇ ನಾರಾಯಣನು. ನಾರಾಯಣನಿಂದಲೇ ಎಲ್ಲವೂ. ನಾರಾಯಣಾದ್ಬ್ರಹ್ಮಾ ಜಾಯತೇ, ನಾರಾಯಣಾದ್ರುದ್ರೋ ಜಾಯತೇ, ನಾರಾಯಣಾದಿಂದ್ರೋ ಜಾಯತೇ, ನಾರಾಯಣ ಏವೇದಗಂ ಸರ್ವಂ" ಎಂದು ವೇದಪುರುಷನು ನಿರ್ಣಯಿಸಿರುವನೇ ಹೊರತು "ನಾರಾಯಣಾದ್ವಿಷ್ಣುರ್ಜಾಯತೇ" ಎಂದು ಎಲ್ಲಿಯೂ ಹೇಳಿಲ್ಲ. ಆದರೆ ಇಲ್ಲಿ ಮತ್ತೊಂದು ಆಕ್ಷೇಪವು ಬರಬಹುದು. ಅದೇನೆಂದರೆ, "ವಿಷ್ಣುವೇ ಪರತತ್ವವೆಂದು ನಂಬಿದವರು ಮಾತ್ರ ಈ ಪುರಾಣರತ್ನವನ್ನು ಶ್ರೇಷ್ಠವೆಂದು ಹೇಳುತ್ತಾರೆ. ಇದು ಉಪಾದೇಯವೆಂತಲೂ ಹೇಳುತ್ತಾರೆ" ಎಂದು. ಆದರೆ ಈ ಸಂದರ್ಭದಲ್ಲಿ ಶ್ರೀ ರಾಮಾನುಜರು ಈ ರೀತಿ ವಿವರಣೆ ಕೊಟ್ಟಿರುತ್ತಾರೆ: "ಪ್ರಾಚ್ಯೋದೀಚ್ಯ ದಾಕ್ಷಿಣಾತ್ಯ ಪಾಶ್ಚಾತ್ಯ ಸರ್ವಶಿಷ್ಟೈಃ ಸರ್ವಧರ್ಮ ಸರ್ವತತ್ವ ವ್ಯವಸ್ಥಾಯಾಂ ಇದಮೇವ ಪರ್ಯಾಪ್ತಮಿತಿ ಅವಿಗಾನಪರಿಗೃಹೀತಂ ವೈಷ್ಣವಂ ಚ ಪುರಾಣಂ" ಅಂದರೆ ಸರ್ವದಿಕ್ಕಿನಲ್ಲಿ ವಾಸಿಸುತ್ತಿರುವ ಜ್ಞಾನಿಗಳೆಲ್ಲರೂ ಧರ್ಮ ಮತ್ತು ತತ್ವವ್ಯವಸ್ಥೆಗೆ ಈ ಪುರಾಣವೊಂದೇ ಸಾಕೆಂದು ಒಪ್ಪಿರುತ್ತಾರೆ." ಅಲ್ಲಿಗೆ ಶ್ರೀರಾಮಾನುಜರ ಕಾಲದವರೆಗೆ ವಿಷ್ಣುಪಾರಮ್ಯದಲ್ಲಿ ಭಿನ್ನಾಭಿಪ್ರಾಯವಿರಲಿಲ್ಲವೆಂದು ಕಾಣುತ್ತೆ. ಶ್ರೀಶಂಕರಭಗವತ್ಪಾದರೂ ಸಹ ತಮ್ಮ ಸೂತ್ರಭಾಷ್ಯದಲ್ಲಿ ಪುರಾಣರತ್ನದ ಪದ್ಯಗಳನ್ನೇ ಉದಾಹರಿಸಿರುತ್ತಾರೆ.

ಬ್ರಹ್ಮಸೂತ್ರಕಾರರು "ಜನ್ಮಾದ್ಯಸ್ಯ ಯತಃ" (೧-೧-೨) ಎಂಬ ಸೂತ್ರದಲ್ಲಿ ಬ್ರಹ್ಮವಸ್ತುವು ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ ಮಾತ್ರವೇ ಕಾರಣವೆಂದು ಹೇಳಿರುತ್ತಾರೆ ಹಾಗಾದರೆ ಈ ಬ್ರಹ್ಮವು ಯಾವುದು ? ಇದರ ಸ್ವರೂಪವೇನು? ಇದು ನಿರ್ಗುಣವೆ? ಸಗುಣವೆ? ಸಾಕಾರವೆ? ನಿರಾಕಾರವೆ? ಎಂಬುವುದನ್ನೇ ಗುರಿಯಾಗಿಟ್ಟುಕೊಂಡು ಈ ಪುರಾಣವು ವಿವರಿಸಲು ಹೊರಟಿದೆ.

ಪುರಾಣದ ಪ್ರಾರಂಭದಲ್ಲೇ ಮೈತ್ರೇಯರು ಈ ರೀತಿ ಪ್ರಶ್ನಿಸುತ್ತಾರೆ :

"ಸೋಽಹಮಿಚ್ಛಾಮಿ ಧರ್ಮಜ್ಞ ಶ್ರೋತುಂ ತ್ವತ್ತೋ ಯಥಾ ಜಗತ್ ।
ಬಭೂವ ಭೂಯಶ್ಚ ಯಥಾ ಮಹಾಭಾಗ ಭವಿಷ್ಯತಿ ॥"

ವಿ.ಪು. ೧-೧-೪

"ಯನ್ಮಯಂ ಚ ಜಗದ್ಬ್ರಹ್ಮನ್ ಯತಶ್ಚೈತಚ್ಚರಾಚರಂ ।
ಲೀನಮಾಸೀದ್ಯಥಾ ಯತ್ರ ಲಯಮೇಷ್ಯತಿ ಯತ್ರ ಚ ॥"

ವಿ.ಪು. ೧-೧-೫

ಧರ್ಮಜ್ಞರೇ ! ಈ ಜಗತ್ತು ಹೇಗೆ ಸೃಷ್ಟವಾಯಿತು ? ಇದಕ್ಕೆ ಕಾರಣಾರು ? ಇದರ ರಕ್ಷಕರು ಯಾರು? ಯಾರಲ್ಲಿ ಲಯ ಹೊಂದುತ್ತದೆ? ಮುಂದೆ ಹೇಗಾಗುತ್ತೆ? ಹಿಂದೆ ಹೇಗೆ ಲಯವಾಗಿತ್ತು ? ಎಂದು ಮೇಲಿನ ಬ್ರಹ್ಮ ಸೂತ್ರವು ಯಾವ ವಿಷಯವಾಗಿ ಹೇಳಲು ಹೊರಟಿತೊ, ಅದೇ ವಿಷಯಕ ವಾದ ಪ್ರಶ್ನೆಯು ಇಲ್ಲಿ ಪ್ರಾರಂಭವಾಗಿದೆ. ಇದಕ್ಕೆ ಉತ್ತರವಾಗಿ ಶ್ರೀ ಪರಾಶರರು

"ವಿಷ್ಣೋಸ್ಸಕಾಶಾದುದ್ಭೂತಂ ಜಗತ್ತತ್ರೈವ ಚ ಸ್ಥಿತಂ ।
ಸ್ಥಿತಿಸಂಯಮಕರ್ತಾಸೌ ಜಗತೋಸ್ಯ ಜಗಚ್ಚ ಸಃ ॥"

ವಿ.ಪು. ೧-೧-೧

ಅಂದರೆ, ಈ ಜಗತ್ತು ವಿಷ್ಣುವಿನ ಸಂಕಲ್ಪದಿಂದಲೇ ಉಂಟಾಯಿತು. ಈ ಜಗತ್ತಿನ ಸ್ಥಿತಿ-ಸಂಹಾರಕ್ಕೆ ಅವನೇ ಕಾರಣ. ಅವನ ಆಶ್ರಯದಿಂದಲೇ ಜಗತ್ತು ನಿಂತಿದೆ. ಈ ಜಗತ್ತು ಮತ್ತು ವಿಷ್ಣುವು ಬೇರೆಯಲ್ಲ. ಶ್ರುತಿಯೂ "ಯತೋ ವಾ ಇಮಾನಿ ಜಾಯಂತೇ, ಯೇನ ಜಾತಾನಿ ಜೀವಂತಿ. ಸ ಐಕ್ಷತ ಲೋಕಾನ್ನುಸೃಜಾ ಇತಿ, ತದೈಕ್ಷತ ಬಹುಸ್ಯಾಂ" ವಿಷ್ಣುವಿನ ಸಂಕಲ್ಪ ದಿಂದಲೇ ಜಗತ್ತು ಸೃಷ್ಟವಾಗಿರುವುದಾಗಿ ಹೇಳಿರುತ್ತದೆ. ಆದ್ದರಿಂದಲೇ "ಕಾರಣಂ ತು ಧ್ಯೇಯಃ" ಜಗತ್ಕಾರಣವಾದ ವಸ್ತುವೇ ಜಿಜ್ಞಾಸ್ಯವೆಂದು ವ್ಯಾಸರು ನಿರೂಪಿಸಿರುತ್ತಾರೆ. ವಿಷ್ಣುವೇ ಸರ್ವಪುರಾಣಗಳ ತತ್ವವೆಂದು ಆರನೇ ಅಂಶದಲ್ಲಿ :

"ಪ್ರಕೃತಿರ್ಯಾ ಮಯಾಖ್ಯಾತಾ ವ್ಯಕ್ತಾವ್ಯಕ್ತಸ್ವರೂಪಿಣೀ ।
ಪುರುಷಶ್ಚಾಪ್ಯುಭಾವೇತೌ ಲೀಯೇತೇ ಪರಮಾತ್ಮನಿ ॥" ವಿ.ಪು. ೬-೪-೩೯
"ಪರಮಾತ್ಮಾ ಚ ಸರ್ವೇಷಾಮಾಧಾರಃ ಪರಮೇಶ್ವರಃ ।
ವಿಷ್ಣುನಾಮಾ ಸ ವೇದೇಷು ವೇದಾಂತೇಷು ಚ ಗೀಯತೇ ॥"

ವಿ.ಪು. ೬-೪-೪೦

ವ್ಯಕ್ತ-ಅವ್ಯಕ್ತಸ್ವರೂಪಿಣಿಯಾದ ಪ್ರಕೃತಿ, ಇದಕ್ಕಿಂತ ಮೇಲ್ಪಟ್ಟ ಪುರುಷ ತತ್ವ ಇವೆರಡೂ ಪರಮಾತ್ಮನಲ್ಲಿ ಲಯಹೊಂದುತ್ತದೆ. ಈ ವಿಷಯವನ್ನು ಶ್ರುತಿಯು "ಅವ್ಯಕ್ತಮಕ್ಷರೇ ಲೀಯತೇ, ಅಕ್ಷರಂ ತಮಸಿ ಲೀಯತೇ,

ತಮಃ ಪರೇ ದೇವೇ ಏಕೀಭವತಿ" ಎಂದು ನಿರ್ಣಯಿಸಿರುತ್ತದೆ. ಆದ್ದರಿಂದ ವಿಷ್ಣುವೇ ಎಲ್ಲಕ್ಕೂ ಆಧಾರ. ವಿಷ್ಣುವೇ ವೇದಗಳಲ್ಲಿಯೂ, ವೇದಾಂತಗಳಲ್ಲಿಯೂ ಪರತತ್ವವೆಂದು ಕೀರ್ತಿತನಾಗಿದ್ದಾನೆ. ಇವನಿಗೆ ವೇದಗಳಲ್ಲಿ 'ಸತ್' 'ಬ್ರಹ್ಮ' ಎಂಬ ನಾಮಾಂತರಗಳೂ ಇವೆ. ವೇದದಲ್ಲಿ ವಿಷ್ಣುವಿನ ವೈಭವವು ಈ ರೀತಿ ಇದೆ: "ಯಃ ಪೂರ್ವ್ಯಾಯ ವೇಧಸೇ ನ ವೀಯಸೇ, ಸುಮಜ್ಜಾನಯೋ ವಿಷ್ಣವೇ ದದಾಶತಿ....ಬೃಹತ್ತೇ ವಿಷ್ಣೋ ಸುಮತಿಂ ಭಜಾಮಹೇ" ಅಂದರೆ "ಇವನೇ ಮೊತ್ತಮೊದಲನೆಯ ಪರಬ್ರಹ್ಮ. ಇವನ ನಾಮಸಂಕೀರ್ತನ ಶ್ರೇಯಸ್ಕರ. ಸಾಂಸಾರಿಕ ಕ್ಲೇಶಗಳನ್ನು ಪರಿಹರಿಸುತ್ತೆ. ಸರ್ವಜ್ಞನೂ ಸತ್ಯಸಂಕಲ್ಪನೂ ಆದ ವಿಷ್ಣುವನ್ನು ಭಜಿಸೋಣ" ಎಂದು. ಋಗ್ವೇದದಲ್ಲೂ "ಪ್ರಸಃ ಪಾಂತ ಮಂಧಸೋ ಧಿಯಾಯ ತೇ ಮಹೇ ಶೂರಾಯ ವಿಷ್ಣವೇ ಚಾರ್ಚತ" ಮಹಾತ್ಮನಾದ ಮತ್ತು ಬ್ರಹ್ಮಾಂಡಗಳನ್ನು ಧರಿಸಿ ಶೂರನೆಂದು ಖ್ಯಾತಿಪಡೆದ ವಿಷ್ಣುವನ್ನು ಅರ್ಚಿಸಿರಿ ಎಂದು ಹೇಳಿರುತ್ತದೆ. ವ್ಯಾಸರೂ ಸಹ

"ನ ವಿಷ್ಣ್ವಾರಾಧನಾತ್ಪುಣ್ಯಂ ವಿದ್ಯತೇ ಕರ್ಮವೈದಿಕಂ |
ತಸ್ಮಾದನಾದಿಮಧ್ಯಾಂತಂ ನಿತ್ಯಮಾರಾಧಯೇದ್ಧರಿಂ ||"

ವೇದದಲ್ಲಿ ವಿಷ್ಣ್ವಾರಾಧನೆಗಿಂತ ಮಿಗಿಲಾದ ಕರ್ಮವು ಮತ್ತೊಂದಿಲ್ಲ. ಅಂದರೆ ನಾಲ್ಕು ವೇದಗಳಲ್ಲೂ ವಿಷ್ಣುವಿನ ಅರ್ಚನೆ-ಕೀರ್ತನೆಗಳೇ ಚೇತನೋದ್ಧಾರಕ್ಕೆ ಸುಗಮವಾದ ದಾರಿಯೆಂದು ಹೇಳಿದೆ. ಆದ್ದರಿಂದ ಆದಿ, ಮಧ್ಯ, ಅಂತರಹಿತನಾದ ಹರಿಯನ್ನೇ ನಿತ್ಯವೂ ಆರಾಧಿಸಬೇಕೆಂದು.

ಮಂತ್ರರಾಜಪದಸ್ತೋತ್ರದಲ್ಲಿ ವಿಷ್ಣುವನ್ನು ಕುರಿತು ಶಂಕರನು ಹೇಳುತ್ತಾನೆ—

"ದಾಸಭೂತಾಸ್ಸ್ವತಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ |
ಅತೋಽಹಮಪಿ ತೇ ದಾಸ ಇತಿ ಮತ್ವಾ ನಮಾಮ್ಯಹಂ ||"

ಸಕಲ ಆತ್ಮವರ್ಗಗಳೂ ಪರಮಾತ್ಮನಿಗೆ ದಾಸಭೂತರು. ಆದ್ದರಿಂದ ನಾನೂ ವಿಷ್ಣುವಿನ ದಾಸನು ಎಂದು ತಿಳಿದು ಶಂಕರನು ವಿಷ್ಣುವಿಗೆ ನಮಸ್ಕರಿಸುತ್ತಾನೆ. ಅಲ್ಲದೆ ಈ ಪುರಾಣದ (೨-೧೨-೩೮) "ಜ್ಯೋತೀಂಷಿ ವಿಷ್ಣುರ್ಭುವನಾನಿ ವಿಷ್ಣುರ್ವನಾನಿ ವಿಷ್ಣುರ್ಗಿರಯೋ ದಿಶಶ್ಚ | ನದ್ಯಸ್ಸಮುದ್ರಾಶ್ಚ ಸ ಏವ ಸರ್ವಂ ಯದಸ್ತಿ ಯನ್ನಾಸ್ತಿ ಚ ವಿಪ್ರವರ್ಯ ||" "ಜ್ಯೋತಿಸ್ಸುಗಳೂ, ಲೋಕಗಳೂ, ವನಗಳೂ, ಗಿರಿಗಳೂ, ದಿಕ್ಕುಗಳೂ

ಚಿತ್ತು ಮತ್ತು ಅಚಿತ್ತು ಇವೆಲ್ಲವೂ ಶ್ರೀಮಹಾವಿಷ್ಣುವೇ" ಎಂದು ಮೇಲಿನ ಪದ್ಯದ ತಾತ್ಪರ್ಯವು. ವಿಷ್ಣುವು ನಿಸ್ಸಮಾಭ್ಯಧಿಕನು. ಅಂದರೆ ಅವನಿಗೆ ಸಮನೂ, ಅಧಿಕನೂ ಇಲ್ಲವು. ಯಥಾ "ನ ವಿಷ್ಣೋಃ ಪರಮೋ ದೇವೋ ವಿದ್ಯತೇ ನೃಪಸತ್ತಮ" ಭಾರತ ಭೀಷ್ಮಪರ್ವದಲ್ಲಿ,

"ಪರಂ ಹಿ ಪುಂಡರೀಕಾಕ್ಷಾತ್ ನ ಭೂತಂ ನ ಭವಿಷ್ಯತಿ"
"ನ ವಾಸುದೇವಾತ್ಪರಮಸ್ತಿ ದೈವತಂ"
"ನ ದೈವಂ ಕೇಶವಾತ್ಪರಂ"

ಇತ್ಯಾದಿ ಪರಶ್ಶತ ಪ್ರಮಾಣಗಳು ವಿಷ್ಣುವಿನ ಪಾರಮ್ಯವನ್ನು ಘೋಷಿಸಿರುತ್ತವೆ.

ಭಾರತ-ಶಾಂತಿಪರ್ವದಲ್ಲಿ—ಈ ಚೇತನವನ್ನು ಜಾಯಮಾನದೆಶೆಯಲ್ಲಿ ವಿಷ್ಣುವು ಕಟಾಕ್ಷಿಸಿದ್ದೇ ಆದರೆ, ಅವನು ಸಾತ್ವಿಕನಾಗಿ ಮೋಕ್ಷಚಿಂತನೆಗೆ ಪ್ರಯತ್ನಿಸಿ ಫಲವನ್ನು ಹೊಂದುತ್ತಾನೆ. ಅದೇ ಜಾಯಮಾನದೆಶೆಯಲ್ಲಿ ಬ್ರಹ್ಮರುದ್ರರು ಕಟಾಕ್ಷಿಸಿದ್ದೇ ಆದರೆ ಆ ಚೇತನನು ರಾಜಸಿಯೂ, ತಾಮಸಿಯೂ ಆಗಿ ಉತ್ತಮಫಲದಿಂದ ವಂಚಿತನಾಗುತ್ತಾನೆಂದು ಹೇಳಿದೆ. ಆ ಪದ್ಯಗಳು ಯಾವುವೆಂದರೆ—

"ಜಾಯಮಾನಂ ಪುರುಷಂ ಯಂ ಪಶ್ಯೇನ್ಮಧುಸೂದನಃ ।
ಸಾತ್ತ್ವಿಕಸ್ಸತು ವಿಜ್ಞೇಯಸ್ಸವೈ ಮೋಕ್ಷಾರ್ಥಚಿಂತಕಃ ॥
ಪಶ್ಯತ್ಯೇನಂ ಜಾಯಮಾನಂ ಬ್ರಹ್ಮಾರುದ್ರೋಽಥವಾ ಪುನಃ ।
ರಜಸಾ ತಮಸಾ ಚೈವ ಮಾನಸಂ ಸಮಭಿಪ್ಲುತಂ ॥"

ಅಲ್ಲದೆ ಬ್ರಹ್ಮ-ರುದ್ರಾದಿಗಳಿಗೆ ದಿವ್ಯಮಂಗಳ ವಿಗ್ರಹವಿಲ್ಲವು. ಈ ವಿಷಯವನ್ನು ಪುರಾಣರತ್ನದ ಮೇಲಣ ಪದ್ಯವು (ವಿ.ಪು. ೬-೭-೫೬) ಸಮರ್ಥಿಸಿರುತ್ತದೆ. ಇವರೆಲ್ಲರೂ ಕರ್ಮದಿಂದಾದ ಜನ್ಮವನ್ನು ಪಡೆದವರು. ಆದ್ದರಿಂದ ಇವರೆಲ್ಲರೂ "ಅಶುದ್ಧಾಸ್ತೇ ಸಮಸ್ತಾಸ್ತು" (ವಿ.ಪು. ೬-೭-೭೭) ಎಂದು ಇವರೆಲ್ಲಾ ಪರಿಶುದ್ಧರಲ್ಲ ಎಂದು ಹಿಂದೆಯೇ ತಿಳಿಸಿರುತ್ತೆ. ಆದ್ದರಿಂದ ವಿಷ್ಣುವೇ ಪರಬ್ರಹ್ಮನು. ಇವನೇ ನಾರಾಯಣನು ಮತ್ತು ವಾಸುದೇವನು. ಇವನ ಶಕ್ತಿಯಿಂದಲೇ ಚರಾಚರಾತ್ಮಕವಾದ ಜಗತ್ತು ಸ್ಥಿತಿಯನ್ನು ಪಡೆದಿದೆ. ಈ ತತ್ವನಿರೂಪಣೆಯೇ ಪುರಾಣರತ್ನದ ಪ್ರಧಾನಾಂಶವು. ಶ್ರೀಪರಾಶರರು ಅಷ್ಟಾದಶಪುರಾಣಗಳಲ್ಲಿ ಅಲ್ಲಲ್ಲಿ ಹೇಳಿರುವ ಹರಿತತ್ವದ ಸಾರವನ್ನು ಸಂಗ್ರಹಿಸಿ

ವಿಷ್ಣುತತ್ವದ ವೈಭವವನ್ನು ಪುರಾಣರತ್ನದಲ್ಲಿ ವಿಸ್ತಾರವಾಗಿ ಮೈತ್ರೇಯರಿಗೆ ಉಪದೇಶಿಸುತ್ತಾರೆ :

"ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ
ತನ್ನೋ ವಿಷ್ಣುಃ ಪ್ರಚೋದಯಾತ್ ॥"

ಸೂ : ವಿಷ್ಣುತತ್ವದ ಹಿರಿಮೆಯನ್ನು ತಿಳಿಯಲಿಚ್ಛಿಸುವವರು ಶ್ರೀಮಾನ್ ಪ್ರೊ. ಕೆ. ಎಸ್. ನಾರಾಯಣಾಚಾರ್ಯರ "ಶ್ರೀಮಹಾವಿಷ್ಣು", ವೇದ ಸಂಸ್ಕೃತಿ ಪರಿಚಯ. ಸಂಪುಟ ೮ನ್ನು ಪರಾಂಬರಿಸಬಹುದಾಗಿ ಪ್ರಾರ್ಥನೆ.

List of Donations received from the following Institutions and individuals for printing the II Edition of Sri Vishnupurana (Kannada)

(As on 24th Feb. 1984)

ಸಂಘಸಂಸ್ಥೆಗಳು	Rs.
ಶ್ರೀಯುತರುಗಳಾದ	
1. ಬಿ. ಕೆ. ಗರುಡಾಚಾರ್ಯರ ಟ್ರಸ್ಟ್, ಮಲ್ಲೇಶ್ವರಂ, ಬೆಂಗಳೂರು	10,000-00
2. ತಿರುಪತಿ ತಿರುಮಲೈ ದೇವಸ್ಥಾನ, ತಿರುಪತಿ	5,000-00
3. ಹೆಬ್ಬಾರ್ ಶ್ರೀವೈಷ್ಣವ ಸಭಾ, ಬೆಂಗಳೂರು	3,000-00
4. ಹೆಬ್ಬಾರ್ ಶ್ರೀವೈಷ್ಣವ ಉಪಸಭಾ, ಮೈಸೂರು	(Promised)
ಮಹನೀಯರುಗಳು	
1. ಬಿ. ಕೆ. ರತ್ನಮ್ಮ C/o ಬಿ. ಕೆ. ಎಸ್. ರಾಘವನ್ ಲ್ಯಾಷ್‌ರ್ ಟೆಕ್ಸ್‌ಟೈಲ್ಸ್, ತಿರಪ್ಪೂರು-3	101-00
2. ಎನ್. ಶ್ಯಾಮಪ್ರಸಾದ್, 615, ಎರಡನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10	101-00
3. ಎ. ಶ್ರೀನಿವಾಸ್ಯೆಂಗಾರ್, ಅಪ್ಪರ್ ಪೈಪ್ ಲೈನ್ಸ್, ಶೇಷಾದ್ರಿಪುರಂ, ಬೆಂಗಳೂರು	101-00
4. ಎ. ಆರ್. ಕೆ. ಐಯಂಗಾರ್, ಮಂಗಳೂರು	101-00
5. ಎಸ್. ವಿ. ಯೋಗಾನರಸಿಂಹ, 31, 6ನೇ ಕ್ರಾಸ್ ಈಜುವ ಕೊಳ ಬಡಾವಣೆ, ಬೆಂಗಳೂರು–3	101-00
6. ಡಾ|| ಎಚ್. ಎನ್. ಕಸ್ತೂರಿರಂಗಯ್ಯಂಗಾರ್, 1595, ನಾಗಪ್ಪ ಬ್ಲಾಕ್, ಬೆಂಗಳೂರು–21	101-00
7. ಆರ್. ಶೇಷಗಿರಿ, ಆಡಿಟರ್, ರವೀಂದ್ರನಗರ, ಹಾಸನ	101-00
8. ಬಿ. ವಿ. ಶೇಷಾದ್ರಿ, ಹಿರೇಮಗಳೂರು	101-00

9.	ಎಸ್. ಡಿ. ಪದ್ಮ, 1945–46, 11ನೇ ಮೇನ್, 'ಎ' ಬ್ಲಾಕ್, ರಾಜಾಜಿನಗರ, ಎರಡನೇ ಹಂತ, ಬೆಂಗಳೂರು–10	101-00
10.	ಸಿ. ಆರ್. ರಂಗಸ್ವಾಮಯ್ಯಂಗಾರ್ರ ಮಕ್ಕಳು. ಚಿಕ್ಕೇನಹಳ್ಳಿ, ಹಾಸನ	101-00
11.	ಶಂಖಂ ಸೀತಾರಾಮಯ್ಯಂಗಾರ್, 1945–46, ಹನ್ನೊಂದನೇ ಮೇನ್, 'ಎ' ಬ್ಲಾಕ್, ರಾಜಾಜಿನಗರ ಎರಡನೇ ಹಂತ, ಬೆಂಗಳೂರು–10	101-00
12.	ಜಿ. ವೈ. ಪಾದುಕಾಚಾರ್, ಭಕ್ತಾಲಯ, ಕೃಷ್ಣರಾಜಪುರಂ, ಹಾಸನ	101–00
13.	ಜಯಲಕ್ಷಮ್ಮ C/o ತಿರುಮಲಾಚಾರ್, ಕೊಡಿಗೆ (ಕೊಡಗು ಜಿಲ್ಲಾ)	101-00
14.	ಎಸ್. ವೈ. ವೇದಾಂತಕೃಷ್ಣಮಾಚಾರ್, 1294, ನಾಲ್ಕನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು	101-00
15.	ಎ. ಆರ್. ಕೃಷ್ಣಯ್ಯಂಗಾರ್, ಎಂ.ಬಿ.ಬಿ.ಎಸ., 87, ಮೊದಲನೇ ಕ್ರಾಸ್, ಎಲ್.ಐ.ಸಿ. ಕಾಲೋನಿ, ವೆಸ್ಟ್ ಆಫ್ ಕಾರ್ಡ್ ರೋಡು, ಬೆಂಗಳೂರು–86	101-00
16.	ಡಾ॥ ಟಿ. ಕೆ. ದಯಾಳು, ಬೆಂಗಳೂರು ನರ್ಸಿಂಗ್ ಹೋಂ, ಬೆಂಗಳೂರು	101-00
17.	ಬಿ. ಆರ್. ಶ್ರೀನಿವಾಸ ಗೋಪಾಲ್, 66, ಏಳನೇ ಕ್ರಾಸ್, ಮಲ್ಲೇಶ್ವರಂ. ಬೆಂಗಳೂರು–3	101-00
18.	ಜಿ. ವೈ. ಕಸ್ತೂರಿ ರಂಗಾಚಾರ್, ಆ್ಯಪರ್ ಟೆಕ್ಸ್‌ಟೈಲ್ಸ್, ತಿಪ್ಪೂರು	101-00
19.	ಎಸ್. ವೈ. ಶಲ್ಲಪಿಳ್ಳೈಯ್ಯಂಗಾರ್, ಡಿ.ಡಿ.ಪಿ.ಐ., ಶಂಕರಿಪುರಂ, ಹಾಸನ	101-00
20.	ಹೆಚ್. ಪಿ. ಮೈಥಿಲಿ ಕುಪ್ಪಸ್ವಾಮಿ, ಕೆ. ಆರ್. ವನಂ, ಮೈಸೂರು.	101-00

ಪೀಠಿಕೆ

ಪುಟ	ಸಾಲು	ಅಶುದ್ಧ	ಶುದ್ಧ
46	2	ಮಂತ್ರೋಕ್ತಮಂ	ಮಂತ್ರೋಕ್ತಮಂ
46	2	ವೇಂದಾಃ	ವೇದಾಃ
47	11	ನಾಲ್ಕು	ಮೂರು
49	2	ಕಾರ್ಮ್ಯಂ	ಕೌರ್ಮ್ಯಂ
50	17	ಕಚ್ಛ	ತಚ್ಛ
50	21	ದಶಾಕಪ್ಷ್ಯ	ದಶಾಪ್ಸ್ವ
15	25	ಪತ್ನೀರು	ಪತ್ನಿಯರು

ಅನುಬಂಧ

ಪುಟ	ಸಾಲು	ಅಶುದ್ಧ	ಶುದ್ಧ
317	12	ಪಠಾನ್	ಪರಾನ್
317	12	ಕರ್ಕೈಃ	ತರ್ಕೈಃ
317	19	ದೆಂದ	ದೆಂದು
318	15	ಯಥಾಂಖೇ	ಯಥಾಖೇ
319	17	ಬೇವೇತ್	ವೇದ
319	27	ಎನ್ರು	ಎನ್ರು
322	21	ಅಪಿಕಾರಾಯ	ಅವಿಕಾರಾಯ
326	9	ಮನುಪೇತ್ಯ	ಮಾಮುಪೇತ್ಯ
326	15	ಧೀಮತಿ	ಧೀಮಹಿ
327	21	ನೋಪಾತ್ವ	ನೋಪಾಯತ್ವ
329	5	ಕೊಲು	ಕೋಲು
329	9	ಕಣ್	ತಣ್
330	17	ನವೋ	ನಮೋ
332	27	ಭವಂತೀಶ್ಯತಃ	ಭವಂತೀತ್ಯತಃ
333	27	ಪರಂಪರೆಯೂ	ಪರಂಪರೆಯಿಂದ
334	11	ಸುತ್ವತೇ	ಸ್ತುತ್ವತೋ
334	23	ವೇಶಾ	ವೇತಾ
334	30	ಮುಕ್ತಿಭ್ಯಃ	ಮುಕ್ತೇಭ್ಯಃ
335	13	ಪೇನೇದಂ	ಯೇನೇದಂ
336	16	ಎಲ್ಲವು	ಇಲ್ಲವು

3	6	ಸ್ವಿಭೂತಿ	ದ್ವಿಭೂತಿ
	8	ಖಾತೆ	ಖತೇ
	4	ಶೂತೇಷಾ	ಭೂರೇಷಾ
	12	ಕಥಂ ಹಿ	ತಥಾ ಹಿ
	13	ಪ್ರಾಜ್ಞಂಬೂ	ಸ್ರಾಜ್ಞಂಬೂ
	25	ಅಚಾರ್	ಅಚಾರ್
	2	ಆಷ್ಕ್ಯಾಮೇ	ಅಷ್ಟಾಮೇ
	17	ತದಧ	ತದಧಿ
34	18	ಕಾನ್ಯಹ	ತಾನ್ಯಹ
35	13	ಶ್ರೇಯಕೇ	ಶ್ರೇಯಸೇ
35	18	ಯದ್ನ	ಯಜ್ಞ
	22	ಪ್ರಮಾಯೇತ	ಪ್ರದೂಯೇತ
7	10	ತವ	ತದ
47	13	ಯಶಃ	ಯತಃ
347	26	ಅಂಡ	ಅಂದರೆ
350	5	ತಮು	ಸಮು
350	14	ಕರ್ಮಾಧನ	ಕರ್ಮಾಧೀನ
351	25	ಯೋಗ್ಯಥಾ	ಯೋನ್ಯಥಾ
352	24	ಧೀಭ್ಯೋಗ್ಯೋನನ್ನ	ಧೀಭ್ಯೋನ್ಯೋನನ್ಯ
357	20	ಧುಕಾ	ಧುಕ್
358	9	ಸ್ಯಂತಃ	ಸ್ನಂತಃ
358	10	ತೇಃಶ್ವಘಂ	ತೇತ್ವಘಂ
358	20	ದ್ವಿಧೇವ	ದ್ವಿಧೇಮು
362	19	ಯಾಗ್ನಾಹ	ಯಾನ್ನಾಹ
362	20	ಮುಷ್ವ	ಮುಷ್ಟ
364	3	ಚಾಷ್ಯ	ಚಾಷ್ಟ
366	2	ಮೋಕ್ಷಸ್ಯ	ಮೋಕ್ಷಸ್ಯ
366	23	ತತ	ತತ್
366	23	ಗೃಪತೇ	ನೃಪತೇ
367	14	ಆಸೀಕ	ಆಸೀತ್
368	13	ಕಿತಾರ್	ಕತಾರ್
371	11	ಸಖಲು	ನಖಲು
373	22	ರಾಧ್ಯತ್ತೆ	ರಾಧ್ಯತೇ
374	16	ಯಾವಜ್ಜರೀತ	ಯಾವಜ್ಜೀವ

Page	Line	Wrong	Correct
		ಜರೇತ್	ಚರೇತ್
375	7	ಶಕ್ತ್ರಂ	ನಕ್ತ್ರಂ
375	8	ಶಕ್ತಿಕೋಃ	ಶಕ್ತಿತೋಃ
375	13	ಸತ್ಯಜೇಃ	ನತ್ಯಜೇಃ
382	2	ನ್ನಚ್ಛೇಃ	ನ ಗಚ್ಛೇಃ
382	2	ಶ್ರಾದ್ಧ್ಯತಾ	ಶ್ರಾದ್ಧ್ಯದಾ
386	21	ದಲಿದ	ಜಲದ
393	18	ತತ್ರೈ	ತತ್ರೈವ
396	2	ತತ್ರಾಕುಲ	[illegible]
396	15	ಘುಂತೋಃ	ಘ್ನಂತೋಃ
397	22	ಡಶಭಿ	ದಶಭಿ
398	10	ವೃವೋಃ	ಭವೋಃ
407	9	ಮುತ್ಯೋಃ	ಮುತ್ಯೋರ್ಃ
408	26	ನಿತ್ಬಾಧಂ	ನಿರ್ಬಾಧಂ
410	11	ಕೂಗಿ	ತೂಗಿ
411	1	ರವೋ	ರವು
412	6	ಮಿತ್ಸೇವ	ಮಿತ್ಯೇವ
416	27		

3